ಕಾಲಕ್ರಮ

'ಹೊಸ ಮನುಷ್ಯ' ಪತ್ರಿಕೆಯ ಮುಖ್ಯ ಸಂಪಾದಕೀಯ ಬರಹಗಳ ಸಂಗ್ರಹ

ಡಿ. ಎಸ್. ನಾಗಭೂಷಣ



ಕಾಲಕ್ರಮ

('ಹೊಸ ಮನುಷ್ಯ' ಪತ್ರಿಕೆಯ ಸಂಪಾದಕೀಯ ಬರಹಗಳು)

ಡಿ.ಎಸ್.ನಾಗಭೂಷಣ

ರೂಪ
ಪ್ರಕಾಶನ
ಮೈಸೂರು

KAALAKRAMA

(Editorial Writeups of 'Hosa Manushya' Magzine)

Written by : D.S.Nagabushana
HIG-5, 'Nudi', Kalahalli badavane,
Vinobha Nagar, Shivamoga-577204 Ph: 94492 42284

Published by : Roopa Prakashana, No. 2406,2407/K-1,
1st Cross, Hosabandikeri K.R.Mohalla, Mysore - 570 004,
Mob: 93422 74331 roopaprakashana@gmail.com

Inner Pages: Maplitho
Size: 1/8th Demmy
First Impression : 2016
Pages: 480+iv=484 Price : ₹ 370

ISBN: 978-93-81885-46-8

ಕಾಲಕ್ರಮ

ಮೊದಲನೇ ಮುದ್ರಣ: ೨೦೧೬
ಪುಟಗಳು: ೪೮೦+೪=೪೮೪
ಬೆಲೆ: ₹ ೩೭೦
ಮುಖಪುಟ ವಿನ್ಯಾಸ : ಮಂಜುನಾಥ್‌ಲತಾ
ಪ್ರಕಾಶನ: ರೂಪ ಪ್ರಕಾಶನ
ನಂ.೨೪೦೬, ೨೪೦೭/ಕೆ-೧, ೧ನೇ ಕ್ರಾಸ್, ಹೊಸಬಂಡಿಕೇರಿ
ಕೆ.ಆರ್.ಮೊಹಲ್ಲಾ, ಮೈಸೂರು - ೫೭೦ ೦೦೪
ಮೊಬೈಲ್: ೯೩೪೨೨ ೭೪೩೩೧

ಮುದ್ರಣ: ರಾಘವೇಂದ್ರ ಪ್ರಿಂಟರ್ಸ್, ಮೈಸೂರು

ಅರ್ಪಣೆ

ಮೈಸೂರಿನ ಮಿತ್ರ
ರಾಮು
ಅವರಿಗೆ
ಪ್ರೀತಿಪೂರ್ವಕವಾಗಿ

ಲೇಖಕರ ಮಾತು

೨೦೧೧ರ ಆಗಸ್ಟ್‌ನಿಂದ ಇತ್ತೀಚಿನವರೆಗೆ ನಾನು ಸಂಪಾದಿಸಿ ಪ್ರಕಟಿಸುತ್ತಿದ್ದ 'ಹೊಸ ಮನುಷ್ಯ' ಎಂಬ ಸಮಾಜವಾದಿ ಮಾಸ ಪತ್ರಿಕೆಯಲ್ಲಿ ನಾನು ಬರೆದ ಮುಖಪುಟ ಸಂಪಾದಕೀಯಗಳನ್ನೂ ಮತ್ತು ಪ್ರಚಲಿತ ಸಂಗತಿಗಳನ್ನು ಕುರಿತು ಚರ್ಚೆಗಳಿಗಾಗಿ ಮೀಸಲಿಟ್ಟಿದ್ದ 'ಸಮಕಾಲೀನ' ಅಂಕಣಕ್ಕಾಗಿ ಬರೆದ ಸಂಪಾದಕೀಯ ಟಿಪ್ಪಣಿಗಳನ್ನೂ ಇಲ್ಲಿ ಒಟ್ಟಾಗಿ ಸಂಗ್ರಹಿಸಿ ನೀಡುತ್ತಿದ್ದೇನೆ. ಇವುಗಳ ಜೊತೆಗೇ, ಇವುಗಳಿಗೆ ಪೂರಕವೆನಿಸಿದ ಮತ್ತು ಸಂದರ್ಭಕ್ಕೆ ಮುಖ್ಯವೆನ್ನಿಸಿದ ನಾಲ್ಕಾರು ಅನುವಾದಿತ ಬರಹಗಳನ್ನೂ, ಮೂಲ ಲೇಖಕರ ಮತ್ತು ಅನುವಾದಕರ ಕೃಪೆ ಕೋರಿ ಇಲ್ಲಿ ಸೇರಿಸಿದ್ದೇನೆ. ಅಲ್ಲದೆ ಸಮಾಜವಾದಿ ಇತಿಹಾಸದ ಕೆಲವು ಅಪರೂಪದ ದಾಖಲೆಗಳನ್ನೂ ಇಲ್ಲಿ ಸೇರಿಸಲಾಗಿದೆ. ಇನ್ನು ಈ ಪತ್ರಿಕೆಯಲ್ಲಿ ನಾನು ಬರೆದ ಸಾಹಿತ್ಯಿಕ-ಸಾಂಸ್ಕೃತಿಕ ಟಿಪ್ಪಣಿಗಳ ಸಂಪುಟವೂ 'ನೀರೆಲ್ಲವೂ ತೀರ್ಥ' ಎಂಬ ಶೀರ್ಷಿಕೆಯಲ್ಲಿ ಸಿದ್ಧವಾಗುತ್ತಿದ್ದು, ಅದೂ ಇಷ್ಟರಲ್ಲೇ ಓದುಗರಿಗೆ ದೊರೆಯಲಿದೆ ಎಂಬುದನ್ನೂ ಇಲ್ಲಿ ತಿಳಿಸಬಯಸುವೆ. 'ಹೊಸ ಮನುಷ್ಯ', ಅಧಿಕೃತ ನೋಂದಣಿಗೆ ಮುನ್ನ ಒಂದು ವರ್ಷ 'ನವ ಮಾನವ' ಎಂಬ ಹೆಸರಿನಲ್ಲಿ ಖಾಸಗಿ ಪ್ರಸಾರದ ಪತ್ರಿಕೆಯಾಗಿ ಚಲಾವಣೆಯಲ್ಲಿತ್ತು ಎಂಬುದನ್ನೂ ಇಲ್ಲಿ ಹೇಳಬೇಕು.

'ಹೊಸ ಮನುಷ್ಯ' ಸಮಾಜವಾದಿ ವಿಚಾರಗಳ ಪ್ರಸ್ತುತಿ, ಚರ್ಚೆ, ಪರಾಮರ್ಶೆಗೆಂದೇ ಆರಂಭವಾದ ಪತ್ರಿಕೆಯಾದ್ದರಿಂದ, ಮುಖಪುಟ ಸಂಪಾದಕೀಯಗಳಲ್ಲಿ ಅಂದಂದಿನ ರಾಜಕೀಯ ಬೆಳವಣಿಗೆಗಳ ಪ್ರಸ್ತಾಪ, ವಿಶ್ಲೇಷಣೆ ಮತ್ತು ವಿಮರ್ಶೆಗಳೇ ಹೆಚ್ಚು. ಈ ಅರ್ಥದಲ್ಲಿ ಈ ಸಂಪಾದಕೀಯಗಳು ತನ್ನ ಅವಧಿಯ ರಾಜಕೀಯ ಇತಿಹಾಸವನ್ನು ಸಮಾಜವಾದಿ ದೃಷ್ಟಿಕೋನದಿಂದ ಕಟ್ಟುವ ಅಥವಾ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಮುರಿದು ಕಟ್ಟುವ ಉದ್ದೇಶದಿಂದ ಬರೆಯಲ್ಪಟ್ಟಿವೆ ಎಂದೇ ಹೇಳಬಹುದು. ಏಕೆಂದರೆ, ಪತ್ರಿಕೆಯು ಸಮಾಜವಾದಿ ವಿಚಾರಧಾರೆಯನ್ನೂ ಇತಿಹಾಸದ ಪಾಠಗಳ ಹಿನ್ನೆಲೆಯಲ್ಲಿ ಮತ್ತು ಕಾಲದ ಸವಾಲುಗಳಿಗೆ ಎದುರಾಗಿ ಮುರಿದು ಕಟ್ಟುವ ಉದ್ದೇಶಕ್ಕೇ ಬದ್ಧವಾದುದು. ಹಾಗೆ ನೋಡಿದರೆ, ಈ ಸಂಪಾದಕೀಯ ಬರಹಗಳಲ್ಲಿ ಈ ಎರಡೂ ಪ್ರಕ್ರಿಯೆಗಳೂ

ಜೊತೆ ಜೊತೆಯಾಗಿ–ಒಟ್ಟಿಗೆ ಕೈಹಿಡಿದು–ನಡೆದಿವೆ ಎಂದು ನಾನು ಭಾವಿಸುತ್ತೇನೆ. ಈ ದೃಷ್ಟಿಯಿಂದ ಈ ಬರಹಗಳು ಸಮಾಜವಾದಿ ಅಧ್ಯಯನಗಳಲ್ಲಿ ತೊಡಗಿರುವವರಿಗೆ ಮತ್ತು ಪ್ರಸಕ್ತ ರಾಜಕಾರಣದಿಂದ ಬೇಸತ್ತು ಹೊಸ ನೆಲೆಯ ರಾಜಕಾರಣದ ಸಾಧ್ಯತೆಗಳನ್ನು ಹುಡುಕುತ್ತಿರುವ ಆಸಕ್ತರಿಗೆ ಕುತೂಹಲಕಾರಿಯಾಗಿ ಕಾಣಬಹುದು.

ಇನ್ನು ಪತ್ರಿಕೆಯ ಪ್ರಾಣ ಶಕ್ತಿಯೇ ಆಗಿದ್ದ 'ಸಮಕಾಲೀನ' ಪುಟಗಳಿಗಾಗಿ ಬರೆದ ಪ್ರಸ್ತಾವನಾ ಟಿಪ್ಪಣಿಗಳು ಒಂದು ರೀತಿಯಲ್ಲಿ ಇಲ್ಲಿನ ಮುಖಪುಟ ಸಂಪಾದಕೀಯ ಬರಹಗಳ ಹಿಂದಿನ ತಾತ್ವಿಕ ಹುಡುಕಾಟದ ವಿಸ್ತರಣೆಗಳೇ ಆಗಿವೆ ಎಂದು ಹೇಳಬಹುದು. ಸಮಕಾಲೀನ ಬದುಕಿನ ಮುಖ್ಯ ಪ್ರಶ್ನೆಗಳು, ಚರ್ಚೆಗಳನ್ನು ಕುರಿತ ಪರಿಣತರ ಬರಹಗಳನ್ನು ಒಳಗೊಳ್ಳುತ್ತಿದ್ದ ಈ ವಿಶೇಷ ಪುಟಗಳಿಗೆ ಪೀಠಿಕೆಯಾಗಿ ಬರೆದ ಈ ಮಾತುಗಳು ಸಹಜವಾಗಿಯೇ ನನ್ನ ಇತ್ತೀಚಿನ ಕಾಳಜಿಗಳಾದ, ಜಾಗತೀಕರಣದ ಹೆಸರಿನಲ್ಲಿ ಹೊಸ ಮತ್ತು ವಿಕ್ಷಿಪ್ತ ಅರ್ಥಗಳನ್ನು ಪಡೆದು ನಮಗೆ ಎದುರಾಗಿರುವ ಆಧುನಿಕತೆ ಮತ್ತು ಅಭಿವೃದ್ಧಿ ಕುರಿತ ವಿಚಾರ–ವಿಮರ್ಶೆಗಳಿಗೆ ಸಂಬಂಧಪಟ್ಟಂತೇ ಇವೆ. ಮುಖ್ಯವಾಗಿ, ಪರಿಸರ, ವಿಜ್ಞಾನ–ತಂತ್ರಜ್ಞಾನ, ಅಭಿವೃದ್ಧಿಯ ಅರ್ಥ ಮತ್ತು ಮಾದರಿಗಳು, ನಮ್ಮ ಕೃಷಿ ಬಿಕ್ಕಟ್ಟು, ಆಡಳಿತ ವಿಕೇಂದ್ರೀಕರಣ, ಗಾಂಧಿಯವರ 'ಸ್ವರಾಜ್ಯ' ಕಲ್ಪನೆಯ ಇಂದಿನ ಪ್ರಸ್ತುತತೆ, ನಮ್ಮ ಸಂವಿಧಾನ, ನ್ಯಾಯಾಂಗ, ಸೆಕ್ಯುಲರಿಸಂ, ಹಿಂದೂ ಮುಸ್ಲಿಂ ಸಂಬಂಧಗಳು, ಸಾಮಾಜಿಕ ನ್ಯಾಯ, ಗಾಂಧಿ–ಅಂಬೇಡ್ಕರ್ ವಾಗ್ವಾದಗಳು, ಲೈಂಗಿಕ ಅತ್ಯಾಚಾರಗಳ ಹೆಚ್ಚಳದ ಹಿಂದಿನ ರಾಜಕಾರಣ, ಕನ್ನಡ ಭಾಷೆ, ಶಿಕ್ಷಣ, ಮಾಧ್ಯಮ ಪ್ರಪಂಚ ಇತ್ಯಾದಿ ಜ್ವಲಂತ ವಿಷಯಗಳ ಬಗ್ಗೆ. ಈ ವಿಚಾರ–ವಿಮರ್ಶೆಗಳು (ಕೆಲವೊಮ್ಮೆ ಮತ್ತೆ ಮತ್ತೆ) ನಡೆದಿರುವುದು, ಗಾಂಧಿ–ಲೋಹಿಯಾ–ಅಂಬೇಡ್ಕರ್‌ರ ವಿಚಾರ ಧಾರೆಗಳ ತ್ರಿಮುಖ ಮುಖಾಮುಖಿಯ ನನ್ನದೇ ಮೌಲ್ಯಮಾಪನದ ಪರಿಪ್ರೇಕ್ಷ್ಯದಲ್ಲಿ ಎಂದೂ ಇಲ್ಲಿ ಹೇಳಬೇಕು. ಮೌಲ್ಯಮಾಪನ ಎಂದರೆ ಅದರಲ್ಲಿ ಅರಿವು, ವಿಸ್ತರಣೆ ಮತ್ತು ದಾಟುವಿಕೆಗಳೂ ಒಳಗೊಂಡಿವೆ ಎಂದೂ ಅರ್ಥ ತಾನೆ? ಈ ಮೂರನ್ನೂ ನಾನು ಈ ಬರಹಗಳಲ್ಲಿ ಪ್ರಯತ್ನಿಸಿದ್ದೇನೆ. ಅದರ ಫಲಾಫಲಗಳನ್ನು ಓದುಗರೇ ಹೇಳಬೇಕು.

ನನ್ನ ಈ ಎಲ್ಲ ಬರಹಗಳಿಗೆ ಕಾರಣವಾದ 'ಹೊಸ ಮನುಷ್ಯ' ಪತ್ರಿಕೆಯನ್ನು ಐದೂವರೆ ವರ್ಷಗಳ ಕಾಲ ನಡೆಸಿ ನಿಲ್ಲಿಸಿದ್ದೇಕೆ ಎಂಬುದನ್ನು ೨೦೧೬ರ ಜುಲೈ ಸಂಚಿಕೆಯ ಸಂಪಾದಕೀಯದಲ್ಲಿ ವಿವರಿಸಿ ಬರೆದಿರುವೆ. ಹಾಗೇ, ಅಲ್ಲಿ ನೀಡಿರುವ ಕಾರಣಗಳು ನನ್ನನ್ನು ಕಾಡುವುದನ್ನು ನಿಲ್ಲಿಸಿದ ನಂತರ ಮತ್ತೆ ಪತ್ರಿಕೆಯನ್ನು ಆರಂಭಿಸುವ ಆಸೆಯೂ ಇದೆ. ಏಕೆಂದರೆ ದಿನೇ ದಿನೇ ರಾಜ್ಯ ಮತ್ತು ರಾಷ್ಟ್ರದ ರಾಜಕಾರಣ ಯಾರನ್ನಾದರೂ ಕಂಗೆಡಿಸುವ ಮಟ್ಟಿಗೆ ಪ್ರಜಾಸತ್ತಾತ್ಮಕತೆಯಿಂದ ದೂರ ಸರಿದು, ಪ್ರಜೆಗಳನ್ನು ನಾಗರಿಕ ಹಕ್ಕುದಾರರಂತೆ ನೋಡದೆ, ಆಳುವ ವ್ಯವಸ್ಥೆಯ ದಾಕ್ಷಿಣ್ಯದಲ್ಲಿರುವ 'ದಾಸಯ್ಯ'ಗಳು ಎಂಬಂತೆ ನೋಡುವ ಪ್ರವೃತ್ತಿ ಬೆಳೆಯುತ್ತಿದೆ. ರಾಷ್ಟ್ರದ ಸಮೂಹ

ಮಾಧ್ಯಮಗಳು ಮತ್ತು ಅವುಗಳಲ್ಲಿ ಕೆಲಸ ಮಾಡುವ ಪತ್ರಕರ್ತರ ಮೇಲೆ ನಿಗಾ ಇಟ್ಟು 'ನಿಯಂತ್ರಿಸಲು' ಸಾಧ್ಯವಿರುವಂತಹ ವ್ಯವಸ್ಥೆಯೊಂದನ್ನೂ ಈ ಸರ್ಕಾರ ರೂಪಿಸಿದೆ ಎಂದು ಹೇಳಲಾಗುತ್ತಿದೆ. ಇದರ ಜೊತೆಗೇ, ರಾಷ್ಟ್ರ ಹಿಡಿದಿರುವ ಅಭಿವೃದ್ಧಿಯ ಹಾದಿಯ ಲಾಂಛನದಂತಾಗಿ ಹೋಗಿರುವ 'ಆಧಾರ್ ಕಾರ್ಡ್' ಇಂದು ಎಲ್ಲ ದಿಕ್ಕುಗಳಿಂದಲೂ ನಮ್ಮ ಕುತ್ತಿಗೆಯನ್ನು ನೇಣಿನಂತೆ ಬಿಗಿಯಲಾರಂಭಿಸಿದೆ. ಹಾಗಾಗಿ ಪ್ರಜೆ ಈಗ ಹೊಸ ರೀತಿಯ–ರಾಷ್ಟ್ರದ ಸಾರ್ವಭೌಮತ್ವವನ್ನು ಬಲಗೊಳಿಸುವ ರಾಜಕಾರಣದ ಭಾಗವಾಗಿ ಪ್ರಜೆಯೊಬ್ಬನ ಆಜನ್ಮಸಿದ್ಧ ಹಕ್ಕಾದ ತನ್ನ ವೈಯಕ್ತಿಕತೆಯ, ಖಾಸಗಿತನದ ಸಾರ್ವಭೌಮತ್ವದ ಹಕ್ಕನ್ನು ಕಳೆದುಕೊಳ್ಳುತ್ತಿರುವ ಅಪಾಯದ–ಅರಿವಿಗೆ ಎಚ್ಚರಗೊಳ್ಳಬೇಕಾದ ಕಾಲ ಬಂದಿದೆ. ಅದಕ್ಕಾಗಿಯಾದರೂ ಪತ್ರಿಕೆ ಆದಷ್ಟು ಬೇಗ ಪುನರಾರಂಭವಾಬೇಕೇನೋ. ಆದರೆ ಎಷ್ಟು ಬೇಗ ಎಂಬುದನ್ನು–ಮೇಲೆ ತಿಳಿಸಿದ ಕಾರಣಗಳ ಹಿನ್ನೆಲೆಯಲ್ಲಿ–ಸದ್ಯಕ್ಕೆ ಹೇಳಲಾರೆ.

ಪತ್ರಿಕೆ ತಾನು ಚಲಾವಣೆಯಲ್ಲಿದ್ದಷ್ಟು ಕಾಲವೂ ತಾನು ನಂಬಿದ ಸಮಾಜವಾದಿ ತತ್ವದ ಬೆಳಕಿನಲ್ಲಿ ಪಕ್ಷಬೇಧವಿಲ್ಲದೆ ಕೇಂದ್ರ ಮತ್ತು ರಾಜ್ಯಸರ್ಕಾರಗಳ ನಡಾವಳಿಗಳನ್ನು ಚರ್ಚಿಸಿದೆ, ವಿಮರ್ಶಿಸಿದೆ, ಟೀಕಿಸಿದೆ. ಜನರಂತೆಯೇ ಪತ್ರಿಕೆಯೂ ಭರವಸೆ ಇಟ್ಟಿದ್ದ ಸಿದ್ಧರಾಮಯ್ಯನವರ ಕಾಂಗ್ರೆಸ್ ಸರ್ಕಾರ ಮತ್ತು ಹೊಸದಾಗಿ ಹುಟ್ಟಿದ ಆಂ ಆದ್ಮಿ ಪಕ್ಷ ನಿರಾಸೆಯನ್ನು ಹುಟ್ಟಿಸಿದ್ದನ್ನೂ ಪತ್ರಿಕೆ ಕಂಡಿದೆ; ಮತ್ತು ಅದನ್ನು ವಸ್ತುನಿಷ್ಠವಾಗಿ ದಾಖಲಿಸಿದೆ ಕೂಡ. ಈಚಿನ ವಿಧಾನಸಭಾ ಚುನಾವಣೆಗಳು ಸೂಚಿಸುತ್ತಿರುವಂತೆ, ರಾಷ್ಟ್ರದಲ್ಲಿ ಬಲಪಂಥೀಯ ಹಿಂದೂ ಕೋಮುವಾದಿ ರಾಜಕಾರಣ ತಹಬಂದಿಗೇ ಸಿಗದೆ ಅದರ ಹಿಡಿತ ಕ್ರಮೇಣ ವಿಸ್ತರಿಸುತ್ತಿದ್ದಂತೆ ಈ ನಿರಾಶೆ ಹತಾಶೆಯಾಗಿ ಪರಿವರ್ತಿತವಾಗುತ್ತಿದೆ. ಪತ್ರಿಕೆಯ ಸಂಪಾದಕೀಯ ಮತ್ತು ಇತರ ಬರಹಗಳಲ್ಲಿ ಇದು ಪ್ರತಿಬಿಂಬಿತವಾಗಿರುವುದು ಸಹಜವೇ ಆಗಿದೆ.

ಹಾಗಾಗಿ, ಹೀಗೇಕಾಗುತ್ತಿದೆ, ಇದಕ್ಕೆ ಕಾರಣಗಳೇನು? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಈಗಾಗಲೇ ಶೋಧಿಸಲಾಗಿರುವ ನೆಲೆಗಳಿಗಿಂತ ಭಿನ್ನವಾದ ನೆಲೆಗಳಲ್ಲಿ ಶೋಧಿಸಬೇಕಾಗಿದೆ ಎಂದು ನನಗನ್ನಿಸುತ್ತಿದೆ. ಈ ಪುಸ್ತಕದಲ್ಲಿನ ಬರಹಗಳು ಮತ್ತೆ ಮತ್ತೆ ಕಂಡುಕೊಂಡಿರುವಂತೆ ಗಾಂಧಿಯನ್ನು ನಮ್ಮ ಕಾಲದ ಬಿಕ್ಕಟ್ಟು ಮತ್ತು ಸವಾಲುಗಳ ಎದುರಲ್ಲಿ ಪುನರನ್ವೇಷಿಸಿಕೊಳ್ಳುವ ದಾರಿಯ ಹೊರತಾಗಿ ನಮಗೀಗ ಬೇರೆ ದಾರಿಯಿಲ್ಲ ಎಂದೇ ನನಗೆ ಈ ಸಂದರ್ಭದಲ್ಲಿ ತೀವ್ರವಾಗಿ ಅನಿಸುತ್ತಿದೆ. ಇಂತಹ ಗಾಂಧಿಯೊಳಗೆ ಅಂಬೇಡ್ಕರ್‌ರೂ ಇರುತ್ತಾರೆ, ಲೋಹಿಯಾರೂ ಇರುತ್ತಾರೆ. ಜೊತೆಗೆ ನಾವು ಇಂದು ಎಡಪಂಥೀಯ ಅಥವಾ ಮಾರ್ಕ್ಸ್‌ವಾದಿ ಎನ್ನುವ ಎಲ್ಲ ಚಿಂತನೆಗಳೂ ಸ್ಥಳೀಯತೆಯಲ್ಲಿ ಹದಗೊಂಡು ಅಲ್ಲಿ ಸಮಾವೇಶಗೊಂಡಿರುತ್ತವೆ ಎಂದು ನಾನು ಭಾವಿಸಿದ್ದೇನೆ. ಆಗ ನಮ್ಮ ಮುಂದೆ ಮೂಡುವ ಗಾಂಧಿ ಈವರೆಗೆ ನಾವು ಕಂಡುಕೊಂಡಿರದ ಗಾಂಧಿಯೇ ಆಗಿರುತ್ತಾರೆ ಎಂದೂ ಗೊತ್ತಾಗುತ್ತದೆ. ಆಗ, ತನ್ನ ಸಾಂಸ್ಕೃತಿಕ ಅಸ್ಮಿತೆಯನ್ನು ಎಲ್ಲೆಲ್ಲೋ

ದಿಕ್ಕು ತಪ್ಪಿದ ಹುಡುಕಾಟದಲ್ಲಿ ಸ್ಪಷ್ಟವಾಗಿ ಕಾಣದೆ ವ್ಯಗ್ರತೆಗೆ ಈಡಾಗಿರುವ ಹಿಂದೂ ಕೋಮುವಾದಿ ಎಂದು ನಾವಿಂದು ಕರೆಯುತ್ತಿರುವ ರಾಜಕಾರಣವು ಅದನ್ನು 'ನಿತ್ಯ ನೂತನತೆ' ಎಂಬ ಸೃಜನಶೀಲ ಅರ್ಥದ ಸನಾತನ ಧರ್ಮದ ರೂಪದಲ್ಲಿ ಗಾಂಧಿ ಕುರಿತ ಈ ಹೊಸ ಅನ್ವೇಷಣೆಯ ಪ್ರಯತ್ನದಲ್ಲಿ ಕಾಣುವಂತಾಗಬಹುದು. ಇದರಲ್ಲಿ ಸೆಕ್ಯುಲರಿಸಂ ಎಂಬುದು ಕೂಡ ಕುವೆಂಪು ಹೇಳುವ ಅರ್ಥದಲ್ಲಿ 'ಸರ್ವಧರ್ಮ ಸಮಭಾವ'ದ ರೂಪದಲ್ಲಿ ಅಂತರ್ಗತವಾಗಿರುತ್ತದೆ ಎಂದು ನಾನು ನಂಬಿದ್ದೇನೆ.

ಇದು ಸೈದ್ಧಾಂತಿಕ ಮತ್ತು ವಾಸ್ತವ ನೆಲೆಗಳೆರಡೂ ಸ್ತರದ ಒಂದು ದೊಡ್ಡ ರಾಜಕೀಯ ಸಾಹಸವೇ ಹೌದು.. ಅದಕ್ಕೆ, ಎಲ್ಲಕ್ಕಿಂತ ಮೊದಲು ದೊಡ್ಡ ಮನಸ್ಸುಗಳು ಸಿದ್ಧವಾಗಬೇಕು. ಅವು ನಮ್ಮ ಸಿದ್ಧಾಂತ ಮೂಲವಾದ ಅಹಂಕಾರ ಮತ್ತು ಪೂರ್ವಾಗ್ರಹಗಳಿಂದ ಮುಕ್ತವಾಗಬೇಕು. ಮುಕ್ತ ರಾಜಕೀಯ ಸಂವಾದದ ಹೊಸ ಮಹಾಸಂಸ್ಕೃತಿಯೊಂದು ಆರಂಭವಾಗಬೇಕು. ಇದು ಸದ್ಯಕ್ಕೆ ಸಂಭವಿಸಬಲ್ಲುದೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಇದಲ್ಲದೆ ಭಾರತಕ್ಕೆ ಭವಿಷ್ಯದ ಬೇರೆ ಮಾರ್ಗವಿರಲಾರದೇನೋ! ಹಾಗಾಗಿ ಈ ದಾರಿಯನ್ನು ಭಾರತ ಸವೆಸಲೇಬೇಕಾಗಿದೆ. ಎರಡೂ ಕಡೆ ದೊಡ್ಡ ಮನಸ್ಸುಗಳು ಸೃಷ್ಟಿಯಾಗುವುದಾದರೆ ಇದು ದೀರ್ಘಕಾಲಿಕ ರಾಜಕೀಯ ಸಂಘರ್ಷದಲ್ಲಿ ಹುಟ್ಟುವ ಅನಗತ್ಯ ಅಶಾಂತಿ–ಹಿಂಸೆಗಳನ್ನು ತಡೆಯಬಹುದು. ಮೇಲೆ ತಿಳಿಸಿದ 'ಸಮಕಾಲೀನ' ಅಂಕಣದಡಿಯ ಬರಹಗಳನ್ನು ಈ ದೃಷ್ಟಿಯಿಂದ ಓದಿ ಅರ್ಥ ಮಾಡಿಕೊಂಡರೆ ನನ್ನ ಈ ಪ್ರಯತ್ನ ಸಾರ್ಥಕವಾದೀತೆಂದು ನಾನು ಭಾವಿಸುವೆ

ಈ ಪುಸ್ತಕವನ್ನು ನನ್ನ ಈ ಹಿಂದಿನ ಎರಡು ಪುಸ್ತಕಗಳ ಪ್ರಕಾಶಕರಾದ ರೂಪ ಪ್ರಕಾಶನದ ಕಿರಿಯ ಮಿತ್ರ ಯು.ಎಸ್. ಮಹೇಶ್ ಅವರೇ ಪ್ರಕಟಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಪುಸ್ತಕವನ್ನು ಸದಾ ನನ್ನ ಬರಹಗಳ ಮೇಲೆ ಕಣ್ಣಿಟ್ಟು ಗಮನಿಸುತ್ತಾ ಉತ್ತೇಜಿಸುತ್ತಿರುವ ಮೈಸೂರಿನ ಗೆಳೆಯ ರಾಮು (ಟಿ.ಎಸ್. ರಾಮಸ್ವಾಮಿ) ಅವರಿಗೆ ಅರ್ಪಿಸಿದ್ದೇನೆ. ನನ್ನ ಎಲ್ಲ ಪುಸ್ತಕಗಳನ್ನೂ ಕೊಂಡು ಓದಿ ಪ್ರೋತ್ಸಾಹಿಸಿದಂತೆಯೇ ಈ ಪುಸ್ತಕವನ್ನೂ ಓದುಗರು ಕೊಂಡು ಪ್ರೋತ್ಸಾಹಿಸುವರೆಂದು ಭಾವಿಸುವೆ.

ಶಿವಮೊಗ್ಗ **– ಡಿ.ಎಸ್. ನಾಗಭೂಷಣ**

ಆಗಸ್ಟ್ ೨೦೧೧

ಹೊಸ ಸಮಾಜವಾದಕ್ಕಾಗಿ ಒಂದು ಪುಟ್ಟ ವೇದಿಕೆ

ಪ್ರಿಯ ಓದುಗರೇ,

ಸಮಾಜವಾದ ಎಂಬ ಶಬ್ದವೇ ನಮ್ಮ ರಾಜಕೀಯ ಚರ್ಚೆಗಳಿಂದ ಕಾಣೆಯಾಗುತ್ತಿರುವ ದಿನಗಳಲ್ಲಿ ನಾವು 'ಮಾನವ' ಪತ್ರಿಕೆಯನ್ನು ಪುನರಾರಂಭಿಸುವ ಸಾಹಸಕ್ಕೆ ಕೈಹಾಕಿದ್ದೇವೆ. ಈ 'ಮಾನವ' ಎಪ್ಪತ್ತರ ದಶಕದಲ್ಲಿ ಕ್ರಿಯಾಶೀಲವಾಗಿದ್ದ ಸಮಾಜವಾದಿ ಚಳವಳಿಯ, ವಿಶೇಷವಾಗಿ ಸಮಾಜವಾದಿ ಯುವಜನ ಸಭಾದ ಮುಖವಾಣಿಯಾಗಿತ್ತು. ಹಾಗೆ ಮುಖವಾಣಿ ಎಂದರೆ ತಪ್ಪಾಗುತ್ತದೇನೋ. ಲೋಹಿಯಾ ಅವರು ಇಂಗ್ಲಿಷ್‌ನಲ್ಲಿ ಆರಂಭಿಸಿದ್ದ 'Mankind'ನಂತೆ ಈ ಪತ್ರಿಕೆಯೂ ಮಾನವನ ಪೂರ್ಣತೆಯ ಅನ್ವೇಷಣೆಯ ಪ್ರಯತ್ನದಲ್ಲಿ, ವೈವಿಧ್ಯಮಯ ಆಸಕ್ತಿಗಳ ಬಗೆಗಿನ ಲೇಖನ-ವರದಿ-ವಿಶ್ಲೇಷಣೆಗಳನ್ನು ಒಳಗೊಂಡಿರುತ್ತಿತ್ತು. ಜೆಪಿ ಚಳುವಳಿಯ ಅಂತಿಮ ಪರಿಣಾಮವಾಗಿ ಸಮಾಜವಾದಿ ಚಳುವಳಿ ಹಿನ್ನೆಲೆಗೆ ಸರಿಯುತ್ತಿದ್ದಂತೆ, ಈ ಪತ್ರಿಕೆಯೂ ಕಣ್ಮರೆಯಾಯಿತು. ಆದರೆ ಎಪ್ಪತ್ತರ ದಶಕದ ಕೊನೆಯ ಹೊತ್ತಿಗೆ ನಾವು ಕೆಲವು ಗೆಳೆಯರು-ನಾನು, ನೆಲಮನೆ ದೇವೇಗೌಡ, ದೇವನೂರ ಮಹದೇವ ಮುಂತಾದವರು-ಈ ಪತ್ರಿಕೆಯನ್ನು ಪುನಃಶ್ಚೇತನಗೊಳಿಸುವ ಪ್ರಯತ್ನ ಮಾಡಿದ್ದೆವು. ನಾನೇ ಅದರ ಸಂಪಾದಕನಾಗಿದ್ದೆ. ಹೆಚ್ಚೂಕಡಿಮೆ ಒಂದು ವರ್ಷ ನಡೆದ ಈ ಮಾಸಿಕವನ್ನು 'ಲಂಕೇಶ್ ಪತ್ರಿಕೆ' ಆರಂಭವಾಗುತ್ತಿದ್ದಂತೆ, ಅದೇ ಸಮಾಜವಾದಿ ರಾಜಕಾರಣದ ವೈಚಾರಿಕ ವೇದಿಕೆಯಾಗಲಿದೆ ಎಂಬ ನಂಬಿಕೆಯಲ್ಲಿ ನಿಲ್ಲಿಸಲಾಯಿತು!

ಈಗ ಕಾಲ ಬದಲಾಗಿದೆ. ಸಮಾಜವಾದವೆಂಬ ಶಬ್ದವೇ ನಮ್ಮ ರಾಜಕೀಯ ಚರ್ಚೆಗಳ ಶಬ್ದಕೋಶದಿಂದ ಕಣ್ಮರೆಯಾಗತೊಡಗಿದೆ. ಇಂತಹ ಸಂದರ್ಭದಲ್ಲಿ 'ಮಾನವ'ದ ಪುನರುಜ್ಜೀವನ ಏಕೆ ಎಂಬ ಪ್ರಶ್ನೆ ಏಳಬಹುದು. ಆದರೆ ಸಮಾಜವಾದವನ್ನು

ಹೀಗಳೆದು-ಅದಕ್ಕೆ ಲೋಹಿಯೋತ್ತರ ಸಮಾಜವಾದ ಮತ್ತು ಸಮಾಜವಾದಿಗಳ ಜಡತೆಯೂ ಆಸ್ಪದ ನೀಡಿತು ಎಂಬುದು ನಿಜವಾದರೂ-ಬಂದ ಮುಕ್ತ ಮಾರುಕಟ್ಟೆ ಆರ್ಥಿಕತೆ, ಕಳೆದ ಇಪ್ಪತ್ತು ವರ್ಷಗಳ ತನ್ನ ಆಟಾಟೋಪದಲ್ಲಿ ಸೃಷ್ಟಿಸಿರುವ ಜೀವನ ಕ್ರಮವನ್ನು ನೋಡಿದರೆ, ಕಾಲ ಮತ್ತೆ ಬದಲಾಗುವ; ಅಷ್ಟೇ ಅಲ್ಲ, ಬದಲಾಗಲೇ ಬೇಕಾದ ಅನಿವಾರ್ಯತೆ ಸನ್ನಿಹಿತವಾದಂತೆ ಕಾಣುತ್ತದೆ. ಈ ಮುಕ್ತ ಮಾರುಕಟ್ಟೆ ನೀತಿ, ದೇಶ ಕನಸಿನಲ್ಲಿಯೂ ನಿರೀಕ್ಷಿಸದಿದ್ದಂತಹ ಪ್ರಮಾಣ ಮತ್ತು ವೇಗದಲ್ಲಿ ಸಂಪತ್ತನ್ನು ಸೃಷ್ಟಿಸಿದೆಯಾದರೂ, ಅದರ ಗುಣಾತ್ಮಕತೆಯ ಪರಿಣಾಮಗಳನ್ನು ನಾವಿಂದು ಗಾಬರಿಯಿಂದ ನೋಡುವಂತಾಗಿದೆ.

ಬಡತನ ನೀಗುವ ಅದರ ಘೋಷಿತ ಗುರಿ, ಎಂದೂ ಮುಗಿಯಲಾರದ ಬಡತನದ ಕಲ್ಪನೆಯನ್ನು ಬಡವ-ಶ್ರೀಮಂತರೆನ್ನದೆ ಜನಸಾಮಾನ್ಯರಲ್ಲಿ ಬಿತ್ತಿ ತನ್ನ ಆಟ ಮುಂದುವರೆಸಿದೆ. ಈ ಆಟ ಅದು ಸೃಷ್ಟಿಸುತ್ತಿರುವ ಸಂಪತ್ತಿನ ಪ್ರಮಾಣದಷ್ಟೇ ಅಸಮಾನತೆ, ದಾಹ ಮತ್ತು ಇವುಗಳ ಫಲವಾಗಿ ಎಂದೂ ಕಾಣದಂತಹ ವೈವಿಧ್ಯಮಯ ಭ್ರಷ್ಟಾಚಾರ, ಹಿಂಸಾಚಾರ, ಆತ್ಮಹತ್ಯೆಗಳ ಸರಣಿಯನ್ನೇ ಸೃಷ್ಟಿಸಿ ಅಂತಿಮವಾಗಿ ಇಲ್ಲಿನ ಬದುಕಿನ ಅಧ್ಯಾತ್ಮಿಕತೆಯನ್ನೂ ವಿಕ್ಷಿಪ್ತ ಗೊಳಿಸಿಬಿಟ್ಟಿದೆ. ಈ ದೇಶ ತನ್ನ ಪಾರಂಪರಿಕ ವಿವೇಕದ ಮೂಲಕ ಕಂಡುಕೊಂಡಿದ್ದ ಮಿತಿಗಳುಳ್ಳ ಬದುಕಿನ ಮೂಲ ನಂಬಿಕೆ, ಮೌಲ್ಯ ಮತ್ತು ಆದ್ಯತೆಗಳನ್ನೇ ಬುಡಮೇಲುಗೊಳಿಸಿದೆ. ಆಧುನಿಕತೆ ಕಟ್ಟಿಕೊಟ್ಟ ಹೊಸ ಸಮಾನತೆಯ ಮತ್ತು ಘನತೆಯ ಕನಸು ಇಂದು ದುಃಸ್ವಪ್ನವಾಗಿ ಪರಿವರ್ತಿತವಾಗಿದೆ. ಇದಕ್ಕೇನು ಉತ್ತರ? Back to basics ಎಂಬುದೇ ಉತ್ತರ! ಈ ಸರಕು ಕೇಂದ್ರಿತ ಆರ್ಥಿಕತೆಗೆ ಆದಷ್ಟು ಬೇಗ ವಿದಾಯ ಹೇಳಿ, ಮನುಷ್ಯ ಕೇಂದ್ರಿತ ಆರ್ಥಿಕತೆಗೆ ಮರಳುವುದೊಂದೇ ಉತ್ತರ. ಅಂದರೆ ವಿಶ್ವಾಸಾರ್ಹತೆ ಕಳೆದುಕೊಂಡಿರುವ ಹಳೆಯ ಸಮಾಜವಾದದ ಮೂಲಾಧಾರಗಳನ್ನು ಪುನಾರಚಿಸಿ, ಕಾಲದ ಹೊಸ ಸವಾಲುಗಳನ್ನು ಎದುರಿಸಲು ಸಜ್ಜಾದ ಹೊಸ ಸಮಾಜವಾದದ ಅನ್ವೇಷಣೆಯನ್ನು ನಾವಿಂದು ಮಾಡಬೇಕಿದೆ.

ಅದಕ್ಕೊಂದು ಪುಟ್ಟ ವೇದಿಕೆ ಒದಗಿಸುವ ಪ್ರಯತ್ನವಾಗಿ ಈ 'ಮಾನವ'ದ ಪುನರುಜ್ಜೀವನಕ್ಕೆ ನಾವು ಕೆಲವು ಗೆಳೆಯರು ಕೈಹಾಕಿದ್ದೇವೆ. ಹಳೆಯ ಸಮಾಜವಾದಿ ಗೆಳೆಯರು. ಹಾಗೂ ಹಲವು ಎಳೆಯ ಉತ್ಸಾಹಿ ಗೆಳೆಯರೂ ನಮ್ಮೊಂದಿಗೆ ಕೈಜೋಡಿಸಲು ಮುಂದಾಗಿದ್ದಾರೆ. ನೀವೂ ಕೈಜೋಡಿಸುವಂತಾದರೆ, ನಿಮ್ಮ ಕೈಲಾದ ಹಣಕಾಸು ಮತ್ತು ವಿಚಾರ-ಚರ್ಚೆಗಳ ರೂಪದ ನೆರವು ನೀಡುವುದಾದರೆ, ನಮ್ಮ ಈ ಪ್ರಯತ್ನ ಸಾರ್ಥಕವಾದೀತು. ಈ ಸಂಚಿಕೆಯನ್ನು, ಮಾಡಬೇಕೆನಿಸಿದ್ದನ್ನು ಕೂಡಲೇ ಮಾಡಿಬಿಡುವ ಈ ಸಂಪಾದಕನ (ಸುಟ್ಟರೂ ಹೋಗದ)ಹುಟ್ಟು ಗುಣಕ್ಕನುಸಾರವಾಗಿ, ಹದಿನೈದು ದಿನಗಳಲ್ಲಿ ಸಿದ್ಧಪಡಿಸಲಾಗಿದೆ. ಇದಕ್ಕೆ ಪೂರಕವಾಗಿ, ಎಷ್ಟೋ ವರ್ಷಗಳ ನಂತರ ಶಿವಮೊಗ್ಗದಲ್ಲಿ ಆಯೋಜಿಸಲಾಗಿದ್ದ 'ಜಾತಿ ವಿರೋಧಿ ಸಮ್ಮೇಳನ'ದ ನಡಾವಳಿಯೂ ನೆರವಿಗೆ ಬಂದು, ಈ ಅವಸರದಲ್ಲಿಯೂ ನಮ್ಮ ಘೋಷಿತ ಉದ್ದೇಶ ಸ್ವಲ್ಪಮಟ್ಟಿಗಾದರೂ

ಈಡೇರಿದೆಯೆಂದು ಭಾವಿಸುವೆ. ಜೊತೆಗೆ ಇನ್ನಷ್ಟು ವಿಷಯ ವೈವಿಧ್ಯ ನಿಮ್ಮ ಸಹಕಾರದಿಂದ ಮುಂದಿನ ಸಂಚಿಕೆಗಳಲ್ಲಿ ಕಾಣಿಸಿಕೊಳ್ಳುವುದು ಎಂದು ಆಶಿಸುವೆ. ಈ ಸಂಚಿಕೆಯಲ್ಲಿ ಚಿಂತನೆಗೆ ಮತ್ತು ಚರ್ಚೆಗೆ ಸಾಕಷ್ಟು ಆಹಾರವಿದೆ. ವಿಶೇಷವಾಗಿ ಸಾಮಾಜಿಕ ನ್ಯಾಯದ ಕಲ್ಪನೆ ಮತ್ತು ಭ್ರಷ್ಟಾಚಾರ ವಿರೋಧಿ ಆಂದೋಲನದ ಸ್ವರೂಪದ ಬಗ್ಗೆ. ನಿಮ್ಮ ಟೀಕೆ-ಟಿಪ್ಪಣಿಸಲಹ-ಸೂಚನೆಗಳನ್ನು ಎದುರು ನೋಡುತ್ತೇನೆ.

<u>ಸಮಕಾಲೀನ</u>

ಜಾತಿ ವಿರೋಧಿ ಸಮ್ಮೇಳನ: ಒಂದು ವರದಿ

ಇದೇ ಜೂನ್ ೧೯ರಂದು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ, ವಿವಿಧ ಸಮಾನ ಮನಸ್ಕ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಶಿವಮೊಗ್ಗದ ಕರ್ನಾಟಕ ಸಂಘ ಭವನದಲ್ಲಿ 'ಜಾತಿ ವಿರೋಧಿ ಸಮ್ಮೇಳನ' ಹಾಗೂ ಅದರ ಅಂಗವಾಗಿ 'ಅಂತರ್ಜಾತಿ ವಿವಾಹಿತರ ಸಮಾವೇಶ'ವೊಂದನ್ನು ಆಯೋಜಿಸಿತ್ತು. ಕರ್ನಾಟಕದ ರಾಜಕಾರಣ ದಿನೇ ದಿನೇ ಜಾತಿ ಕೇಂದ್ರಿತವಾಗುತ್ತಿದ್ದು, ರಾಜಕೀಯ ಭ್ರಷ್ಟಾಚಾರವು ಜಾತಿ ಶಕ್ತಿಗಳ ರಕ್ಷಣೆ ಪಡೆಯುವ ಹಂತ ತಲುಪಿದೆ. ಹೀಗಾಗಿ ರಾಜಕಾರಣ ತನ್ನೆಲ್ಲ ತಾತ್ವಿಕ ಬೇರುಗಳನ್ನು ಕಳೆದುಕೊಂಡು ಒಂದು ಸ್ಪರ್ಧಾತ್ಮಕ ಹಣಕಾಸಿನ ದಂಧೆಯಾಗಿ ಹೋಗಿದ್ದು ಸಾರ್ವಜನಿಕ ಜೀವನ ಎಲ್ಲ ಘನತೆಯನ್ನೂ ಕಳೆದುಕೊಂಡಿದೆ. ಈ ಪ್ರವೃತ್ತಿಯ ವಿರುದ್ಧ ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಒಂದು ಸಣ್ಣ ಪ್ರಯತ್ನವಾಗಿ ಈ ಸಮ್ಮೇಳನವನ್ನು ಸದ್ಯದ ಇಂತಹ ರಾಜಕಾರಣದ ರಾಜಧಾನಿ ಎನಿಸಿರುವ ಶಿವಮೊಗ್ಗದಲ್ಲಿ ಆಯೋಜಿಸಿರುವುದಾಗಿ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ ಹೇಳಿದರು.

ಕನ್ನಡದ ಖ್ಯಾತ ಲೇಖಕ ದಿ. ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಪತ್ನಿ ಶ್ರೀಮತಿ ರಾಜೇಶ್ವರಿ ತೇಜಸ್ವಿಯವರು ಸಮ್ಮೇಳನವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಅವರು ಸುಮಾರು ಐವತ್ತು ವರ್ಷಗಳ ಹಿಂದೆ ತಮ್ಮ ಮತ್ತು ತೇಜಸ್ವಿಯವರ ಮದುವೆಗಾಗಿ ಕುವೆಂಪು ಅವರು ರೂಪಿಸಿದ 'ಮಂತ್ರ ಮಾಂಗಲ್ಯ'ವು ಹೇಗೆ ಒಂದು ವರದಕ್ಷಿಣೆ ವಿರೋಧಿ ಸರಳ ವಿವಾಹದ ಆಂದೋಲನಕ್ಕೇ ಕಾರಣವಾಯಿತೆಂಬುದನ್ನು ಆ ಸಂದರ್ಭದ ಕುವೆಂಪು ಅವರ ಕೆಲವು ಮಾತುಗಳನ್ನು ಉಲ್ಲೇಖಿಸಿ ವಿವರಿಸಿದರು. ಹಾಗೇ ಕಳೆದ ೬೦-೭೦ರ ದಶಕಗಳಲ್ಲಿ ಸಮಾಜವಾದಿ ಯುವ ಜನ ಸಭಾದ ಗೆಳೆಯರು ನಡೆಸಿದ 'ಜಾತಿ ವಿನಾಶ' ಸಮ್ಮೇಳನ ಮತ್ತು ಕಾರ್ಯಕ್ರಮಗಳು ಹಾಗೂ ಅವುಗಳ ರಚನಾತ್ಮಕ ಪರಿಣಾಮಗಳನ್ನು ನೆನಪು ಮಾಡಿಕೊಟ್ಟರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ದೆಹಲಿಯ ಸಾಮಾಜಿಕ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ವಿದ್ವಾಂಸ ಹಾಗೂ ಖ್ಯಾತ ಸಮಾಜವಾದಿ ಚಿಂತಕ ಯೋಗೇಂದ್ರ ಯಾದವ್ ಅವರು, ಬದಲಾದ ಸಂದರ್ಭದಲ್ಲಿ ಜಾತಿ ವಿರೋಧಿ ಕಾರ್ಯಕ್ರಮಗಳೂ ಬದಲಾಗಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ, ಕಾರ್ಮಿಕ ಮುಖಂಡ ಹಾಗೂ ಹಿರಿಯ ಸಮಾಜವಾದಿ ಎಸ್.ಕೆ. ಕಾಂತಾ ಅವರು, ಇಂದು ರಾಜ್ಯದಲ್ಲಿ ಭ್ರಷ್ಟ ರಾಜಕಾರಣದ ಹಿಂದೆ ಜಾತಿ ರಾಜಕಾರಣದ ಕರಾಳ ಛಾಯೆಯಿದ್ದು, ಜಾತಿ ವ್ಯವಸ್ಥೆ ವಿರುದ್ಧ ಹೋರಾಡದ ಹೊರತು ರಾಜಕೀಯ ಸ್ವಚ್ಛೀಕರಣ ಸಾಧ್ಯವಾಗದು ಎಂದರು.

ನಂತರ ನಡೆದ 'ಜಾತಿ ವ್ಯವಸ್ಥೆ: ಏಕೆ ಬೇಡ?' ಗೋಷ್ಠಿಯಲ್ಲಿ ಡಿ.ಎಸ್.ನಾಗಭೂಷಣ, ಕೆ.ಪಿ.ನಟರಾಜ್, ಸ.ಉಷಾ ಮತ್ತು ಮಹೇಶ್ ಹರವೆ ಮಾತನಾಡಿ, ಜಾತಿ ಪದ್ಧತಿಯ ಹುಟ್ಟು, ಬೆಳವಣಿಗೆ, ಅದು ತಳೆದ ರೂಪಾಂತರಗಳು, ಅದರ ವಿರುದ್ಧ ಇತಿಹಾಸದುದ್ದಕ್ಕೂ ನಡೆದ ಆಂದೋಲನಗಳು ಮತ್ತು ಅದರ ಇತಿಮಿತಿಗಳ ಪರಿಚಯ ಮಾಡಿಕೊಟ್ಟರು. ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಡಾ. ರಾಜೇಂದ್ರ ಚೆನ್ನಿಯವರು, ಇಂದು ಭಾರತದಲ್ಲಿ ಕಟ್ಟಲ್ಪಡುತ್ತಿರುವ ಫ್ಯಾಸಿಸ್ಟ್ ರಾಜಕಾರಣಕ್ಕೂ ಜಾತಿ ವ್ಯವಸ್ಥೆಗೂ ಇರುವ ಸಂಬಂಧವನ್ನು ವಿಶ್ಲೇಷಿಸುತ್ತಾ, ಭವಿಷ್ಯ ಭಾರತವನ್ನು ನಿರ್ಮಿಸುವ ವಿಶ್ವವಿದ್ಯಾಲಯಗಳಲ್ಲಿ ಇಂದು ಹೇಗೆ ಜಾತಿ ಕುರಿತ ಚರ್ಚೆಯನ್ನು ಶೈಕ್ಷಣಿಕ ನಿಯಮಾವಳಿ ಮತ್ತು ಪಠ್ಯಕ್ರಮಗಳ ಮೂಲಕ ನಿಷೇಧಿಸಲಾಗುತ್ತಿದೆ ಎಂಬುದನ್ನು ವಿವರಿಸಿದರು.

ಮಧ್ಯಾಹ್ನ ಊಟದ ನಂತರ 'ಒಲವು-ಗೆಲುವು' ಎಂಬ ಅಂತರ್ಜಾತಿ ವಿವಾಹಿತರ ಅನುಭವ ಕಥನ ಗೋಷ್ಠಿಯಲ್ಲಿ ಅಂತರ್ಜಾತಿ ಮತ್ತು ಅಂತರ್ಮತೀಯ ವಿವಾಹವಾದ ೧೩ ಜೋಡಿಗಳು ತಮ್ಮ ಪ್ರೇಮ, ವಿವಾಹ ಮತ್ತು ವಿವಾಹೋತ್ತರ ಬದುಕಿನ ಕಷ್ಟ-ಸುಖಗಳ ರೋಮಾಂಚನದ ಕ್ಷಣಗಳನ್ನು ಸ್ವಾರಸ್ಯಕರ ಶೈಲಿಗಳಲ್ಲಿ ನಿರೂಪಿಸುತ್ತಾ, ಸಭಿಕರಲ್ಲಿ ಹೊಸ ಸಂಚಲನವನ್ನೇ ಉಂಟುಮಾಡಿದರು. ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಇಂದಿರಾ ಬಿ.ಕೃಷ್ಣಪ್ಪ ರಾಜ್ಯದಲ್ಲಿ ಜಾತಿ ವಿರೋಧಿ ಆಂದೋಲನದ ದೀರ್ಘ ಪರಂಪರೆಯನ್ನು ನೆನೆಯುತ್ತಾ, ಇದರಿಂದಾಗಿಯೇ 'ಮಾಯಾದಾ ಹತ್ಯೆ'ಯಂತಹ ಹೀನ ಕೃತ್ಯಗಳು ಇಲ್ಲಿ ನಡೆಯಲಾರವು ಎಂದು ಅಭಿಪ್ರಾಯಪಟ್ಟರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಹಿರಿಯ ನ್ಯಾಯವಾದಿ ಹಾಗೂ ಸಮಾಜವಾದಿ ಪ್ರೊ. ರವಿವರ್ಮ ಕುಮಾರ್ ಅವರು, ಸತ್ಯ ಸಾಯಿಬಾಬಾ ಆಶ್ರಮದ ಹಣ-ಆಸ್ತಿಗಳಿಗೆ ಸಂಬಂಧಿಸಿದಂತೆ ಬಹಿರಂಗವಾಗುತ್ತಿರುವ ವ್ಯವಹಾರಗಳ ಜುಂಗು ಹಿಡಿದು ಮಾತನಾಡುತ್ತಾ, ಇಂದು ರಾಜ್ಯದಲ್ಲಿ ಉನ್ನತ ಶಿಕ್ಷಣವನ್ನು ಒಂದು ದಂಧೆಯನ್ನಾಗಿ ಪರಿವರ್ತಿಸಿರುವ ಮಠಗಳೇ ಸ್ಥಳೀಯ ಸ್ವಿಸ್ ಬ್ಯಾಂಕುಗಳಂತೆ ಅಪಾರ ಕಪ್ಪು ಹಣದ ಕೇಂದ್ರಗಳಾಗಿದ್ದು, ಮೊದಲು ಅವುಗಳ ಆಸ್ತಿಯನ್ನು ಮುಟ್ಟುಗೋಲು

ಹಾಕಿಕೊಂಡು ಅವನ್ನು ರಾಷ್ಟ್ರೀಕರಿಸಬೇಕೆಂದು ಕರೆಕೊಟ್ಟರು. ಅಧ್ಯಕ್ಷತೆ ವಹಿಸಿದ್ದ ರೈತ ನಾಯಕ ಹಾಗೂ ಹಿರಿಯ ಸಮಾಜವಾದಿ ಕಡಿದಾಳು ಶಾಮಣ್ಣನವರು, ಆಣೆ-ಪ್ರಮಾಣದ ರಾಜಕಾರಣವು ಇಂದು ರಾಜಕಾರಣದ ಅವನತಿಯ ಯಾವ ಘಟ್ಟಕ್ಕೆ ಬಂದು ಮುಟ್ಟಿದೆ ಎಂಬುದರ ದ್ಯೋತಕವಾಗಿದೆ; ಇದರ ವಿರುದ್ಧ ಹೋರಾಡಲು ಈ ಸಮ್ಮೇಳನ ಸ್ಫೂರ್ತಿ ನೀಡಲಿ ಎಂದು ಹಾರೈಸಿದರು.

ಸಮ್ಮೇಳನದ ಸಂಘಟಕರಲ್ಲಿ ಒಬ್ಬರಾದ ಪ್ರೊ. ಎಂ.ಬಿ.ನಟರಾಜ್ ಜಾತಿರಹಿತ ಸಮಾಜ ನಿರ್ಮಾಣಕ್ಕೆ ಒತ್ತಾಸೆಯಾಗುವ ಹತ್ತು ನಿರ್ಣಯಗಳನ್ನು ಮಂಡಿಸಿದರು. ಸಮ್ಮೇಳನ ಕರತಾಡನದ ಮೂಲಕ ಅವನ್ನು ಅಂಗೀಕರಿಸಿತು. ಸಮ್ಮೇಳನದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ೩೫೦ಕ್ಕೂ ಹೆಚ್ಚು ಜನ ಪ್ರತಿನಿಧಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಲೋಹಿಯಾ ಪ್ರತಿಷ್ಠಾನದ ಪದಾಧಿಕಾರಿಗಳಲ್ಲದೆ ನಿಸಾರ್ ಅಹಮದ್, ಎಂ.ರಾಜು, ಮಂಜುಳಾ ಎಂ.ರಾಜು ಮತ್ತಿತರರು ಸಮ್ಮೇಳನದ ಯಶಸ್ಸಿಗಾಗಿ ಶ್ರಮಿಸಿದರು.

(ವರದಿ: **ಸವಿತಾ ನಾಗಭೂಷಣ**)

"ಜಾತಿವಿರೋಧಿ ಸಮ್ಮೇಳನ"ದಲ್ಲಿ ಅಂಗೀಕರಿಸಿದ ನಿರ್ಣಯಗಳು

೧. ಜಾತಿ ರಹಿತ ಸಮಾಜ ನಿರ್ಮಾಣ ತನ್ನ ಮೂಲ ಉದ್ದೇಶಗಳಲ್ಲಿ ಒಂದು ಎಂದು ಸ್ಪಷ್ಟವಾಗಿ ಹಾಗೂ ಪ್ರತ್ಯೇಕವಾಗಿ ಘೋಷಣೆ ಆಗುವಂತೆ ಸಂವಿಧಾನವನ್ನು ತಿದ್ದುಪಡಿ ಮಾಡಲು ಈ ಸಮ್ಮೇಳನ ಜನ ಪ್ರತಿನಿಧಿಗಳಿಗೆ ಕರೆ ಕೊಡುತ್ತದೆ.

೨. ಒಂದೇ ಜಾತಿಯ ಪದಾಧಿಕಾರಿಗಳನ್ನು ಹೊಂದಿದ ಜಾತಿ ಆಧಾರಿತ ಸಂಘ ಸಂಸ್ಥೆಗಳಿಗೆ, ಸರ್ಕಾರದ ನೆರವು ಪಡೆಯಲು ಅವಕಾಶವಿರುವಂತಹ ಅಧಿಕೃತ ಮಾನ್ಯತೆ ಮತ್ತು ನೋಂದಣಿಯ ಸೌಲಭ್ಯವನ್ನು ಸರ್ಕಾರ ರದ್ದುಪಡಿಸಬೇಕು.

೩. ಅಸ್ಪೃಶ್ಯತೆ, ಜಾತಿ ನಿಂದನೆ ಮತ್ತು ಜಾತಿ ಬಹಿಷ್ಕಾರಗಳಂತಹ ಆಚರಣೆಗಳ ಬಗ್ಗೆ ಕ್ಷಿಪ್ರ ವಿಚಾರಣೆ ನಡೆಸಿ ಅಂತಹ ಅಪರಾಧಗಳಿಗೆ ಕಠಿಣ ಶಿಕ್ಷೆ ವಿಧಿಸುವುದಕ್ಕೆ ಅವಕಾಶ ಮಾಡಿಕೊಡುವ ಕಾನೂನನ್ನು ರಚಿಸಬೇಕು.

೪. ರಾಜ್ಯದ ಜನಸಂಖ್ಯೆಯ ಶೇಕಡಾ ಅರ್ಧಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಜಾತಿ-ಬುಡಕಟ್ಟುಗಳ ಪಟ್ಟಿ ತಯಾರಿಸಿ, ಅವುಗಳಲ್ಲಿ ಸೂಕ್ತ ಸಾರ್ವಜನಿಕ ಪ್ರಾತಿನಿಧ್ಯವಿಲ್ಲದ ಜಾತಿ ಬುಡಕಟ್ಟುಗಳಿಗೆ ವಿಶೇಷ ಪ್ರೋತ್ಸಾಹದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಈ ಸಮ್ಮೇಳನ ಕರೆ ಕೊಡುತ್ತದೆ.

೫. ಯಾವುದೇ ಜಾತಿ ಅಥವಾ ಬುಡಕಟ್ಟುಗಳ ಸಂಘಟನಾ ಸಮಾವೇಶಗಳಲ್ಲಿ ಸಚಿವರೂ ಸೇರಿದಂತೆ ಜನಪ್ರತಿನಿಧಿಗಳು ಮತ್ತು ಸರ್ಕಾರಿ ನೌಕರರು ಭಾಗವಹಿಸುವುದನ್ನು ಕಾನೂನಿನ ಮೂಲಕ ನಿಷೇಧಿಸಬೇಕು.

೭. ಜಾತಿ ಮತ್ತು ಮತ ಮೂಲವಾದ ಮಠ–ಮಂದಿರಗಳು ಮತ್ತು ಸಂಸ್ಥೆಗಳಿಗೆ ಸರ್ಕಾರ ಅನುದಾನ ಅಥವಾ ಯಾವುದೇ ರೀತಿಯ ಸಹಾಯ ನೀಡುವುದನ್ನು ಈ ಸಮ್ಮೇಳನ ಖಂಡಿಸುತ್ತದೆ ಹಾಗೂ ಇದನ್ನು ನಿಷೇಧಿಸಲು ಸೂಕ್ತ ಕಾನೂನನ್ನು ರಚಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತದೆ.

೭. ಅಂತರ್ಜಾತಿ ಮತ್ತು ಅಂತರ್ಮತೀಯ ವಿವಾಹಗಳನ್ನು ಕಾನೂನಿನ ಪರಿಭಾಷೆಯಲ್ಲಿ ಸ್ಪಷ್ಟವಾಗಿ ನಿರೂಪಿಸಿ, ಅಂತಹವುಗಳನ್ನು ಸಾಮಾಜಿಕ ಅಭಿವ ೃದ್ಧಿಯ ಕಾರ್ಯಕ್ರಮವೆಂದು ಪರಿಗಣಿಬೇಕು. ಹಾಗೂ ಅವುಗಳಿಗೆ ವಿಶೇಷ ಮಾನ್ಯತೆ ಮತ್ತು ಪ್ರೋತ್ಸಾಹ ನೀಡುವ ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸಬೇಕು.

೮. ಅಂತರ್ಜಾತಿ ಮತ್ತು ಅಂತರ್ಮತೀಯ ವಿವಾಹವಾದವರ ಮೇಲೆ ನಡೆಯಬಹುದಾದ ಎಲ್ಲ ರೀತಿಯ ಹಿಂಸೆ ಮತ್ತು ದೌರ್ಜನ್ಯಗಳನ್ನು ತಡೆಗಟ್ಟುವ ವಿಶೇಷ ಕಾಯಿದೆಯೊಂದನ್ನು ರಚಿಸಬೇಕು.

೯. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳು ಅಂತರ್ಜಾತೀಯ ಮತ್ತು ಅಂತರ್ಮತೀಯ ವಿವಾಹಗಳನ್ನು ಸಾಮೂಹಿಕವಾಗಿ ಸಂಘಟಿಸಲು ಮುಂದೆ ಬರಬೇಕೆಂದು ಈ ಸಮ್ಮೇಳನ ಕರೆ ಕೊಡುತ್ತದೆ.

೧೦. ಸರ್ಕಾರಿ ಅರ್ಜಿ ನಮೂನೆಗಳಲ್ಲಿ ಜಾತಿ ಮತ್ತು ಮತದ ಕಾಲಂನಲ್ಲಿ ಇಚ್ಛೆಪಟ್ಟವರು ಜಾತಿ ರಹಿತ ಅಥವಾ ಜಾತಿ ಇಲ್ಲ ಮತ್ತು ಮತಾತೀತ ಅಥವಾ ಮತ ಇಲ್ಲ ಎಂದು ನಮೂದಿಸಲು ಅಧಿಕೃತವಾಗಿ ಅವಕಾಶ ಮಾಡಿಕೊಡುವ ಕಾನೂನೊಂದನ್ನು ಜಾರಿಗೆ ತರಬೇಕು.

'ಒಲವು–ಗೆಲವು

ಅಂತರ್ಜಾತಿ ವಿವಾಹಿತರ ಅನುಭವ ಕಥನಗಳಿಂದ ಆಯ್ದ ಭಾಗಗಳು...

ಕೊಂಕಣಿ ಜನಾಂಗಕ್ಕೆ ಸೇರಿದ ನಾನು ಒಕ್ಕಲಿಗ ಜನಾಂಗಕ್ಕೆ ಸೇರಿದ ಹುಡುಗನನ್ನು ಮದುವೆಯಾದಾಗ ನನ್ನ ಹಳ್ಳಿಯಲ್ಲಿ ಒಂದು ಬಾಂಬ್ ಬಿದ್ದ ಹಾಗಾಗಿತ್ತು. ನನ್ನ ಮೈದುನ ಬಂದೂಕು ಹಿಡಿದು ಓಡಾಡುತ್ತಿದ್ದ. ಆದರೆ ಇಂದು ನಮ್ಮ ಕುಟುಂಬ ಚೆನ್ನಾಗಿ ಬಾಳಿ ಬದುಕುತ್ತಿದೆ. ನಮ್ಮ ಮಕ್ಕಳು ಜಾತ್ಯತೀತವಾಗಿ ಬೆಳೆದು ವಿಶ್ವಮಾನವರಂತೆ ಬದುಕುತ್ತಿದ್ದಾರೆ. ಅದೇ ನನ್ನ ಬದುಕಿನ ದೊಡ್ಡ ಸಂತೋಷ.

ಅಂತರ್ಜಾತಿ ಮದುವೆಗಳು ಬೇಗ ಕುಸಿದು ಬೀಳ್ತವೆ ಅಂತ ಹೇಳ್ತಾರೆ. ಹಾಗೇನಿಲ್ಲ. ಎಷ್ಟೊಂದು ಜನ ಇಲ್ಲಿ ಸೇರಿ ಸಂತೋಷ ಸಂಭ್ರಮ ಪಡ್ತಿದ್ದೀವಿ! ಆದ್ರೆ ಒಂದು ಮಾತು: ಪರಸ್ಪರ ತಿಳುವಳಿಕೆಗೆ ಅವಕಾಶ ಮಾಡಿಕೊಳ್ಳದೆ ಮತ್ತು ಆರ್ಥಿಕ ಸದೃಢತೆ ಬಗ್ಗೆ ಯೋಚಿಸದೇ ಮದುವೆ ಆಗಬಾರದು.

– **ಶೈಲಾಕುಮಾರಿ,** ಹುಂಚದಕಟ್ಟೆ

ನಾನು ಸಂಪ್ರದಾಯಸ್ಥ ವಿಶ್ವಕರ್ಮ ಕುಟುಂಬದಿಂದ ಬಂದವನು. ಆದರೆ ಕುವೆಂಪು ವಿಚಾರಗಳಿಗೆ ಒಲಿದವನು. ನಮ್ಮ ಮೇಷ್ಟ್ರು ಶ್ರೀಕಂಠ ಕೂಡಿಗೆಯವರು ಪಾಠಗಳ ಜೊತೆ ಹೇಳುತ್ತಿದ್ದ ಬಂಡಾಯದ ಆದರ್ಶಗಳಿಂದ ಪ್ರೇರಿತನಾಗಿ ನಾನು ಅಂತರ್ಜಾತಿಯಷ್ಟೇ ಅಲ್ಲ, ಲಿಂಗಾಯ್ತ ಜಾತಿಗೆ ಸೇರಿದ ವಿಧವೆಯನ್ನು ಮದುವೆ ಆದೆ. ಇದರಿಂದ ನನ್ನ ಮನೆಯಲ್ಲಿ ಕೆಲವು ಕಿರಿಕಿರಿಗಳಾದವು. ಆದರೆ ಈಗ ಎಲ್ಲವನ್ನೂ ಸುಧಾರಿಸಿಕೊಂಡು ಸಂತೋಷದ ಬದುಕು ನಡೆಸುತ್ತಿರುವೆವು.

– **ಡಾ.ಬಿ.ಜಿ. ಚನ್ನೇಶ್,** ಹೊನ್ನಾಳಿ

ಕುಂಚಿಟಿಗ ಜಾತಿಗೆ ಸೇರಿದ ನಾನು ದಲಿತರ ಹುಡುಗನನ್ನು ಮದುವೆಯಾಗಿ ಕಷ್ಟ ಸುಖ ಎರಡನ್ನೂ ಅನುಭವಿಸಿದ್ದೀನಿ. ನನಗೆ ಮೊದಲ ಮಗುವಾದ ಮೇಲೂ ನನ್ನ ಗಂಡನ ಕಡೆಯವರು ಅವರಿಗೆ ಎರಡನೇ ಮದುವೆ ಮಾಡುವ ಮಾತನ್ನಾಡುತ್ತಿದ್ದರು! ನನ್ನಪ್ಪ ೧೮ವರ್ಷಗಳ ನಂತರ ನನ್ನ ಮನೆ ಗೆ ಬಂದರು... ಇದನ್ನೆಲ್ಲ ನಾನು ಸಹಿಸಿ ಗೆದ್ದಿರುವುದೇ ನನಗೊಂದು ಸಂತೋಷ ಮತ್ತು ಹೆಮ್ಮೆ. ಅದಕ್ಕೆ ನನ್ನ ಗಂಡ, ಮಕ್ಕಳ ಪ್ರೀತಿ ಮತ್ತು ನ ಮ್ಮ ಸ್ನೇಹಿತರ ಬೆಂಬಲ ಕಾರಣ. ನಾನು ಮೊದಲು ಗರ್ಭಿಣಿಯಾದಾಗ ನಮ್ಮೆಲ್ಲ ಸ್ನೇಹಿತರೂ ಜಾತಿ ಬೇಧವಿಲ್ಲದೆ ಸೇರಿ ನನ್ನ 'ಸೀಮಂತ' ಮಾಡಿದರು. ಇದಕ್ಕಿಂತ ಸಂತೋಷ ಇನ್ನಾವುದಿದೆ?

– **ಮಲ್ಲಿಕಾ ಡಾ.ಬಸವರಾಜು,** ತುಮಕೂರು

ಚಿಕ್ಕಂದಿನಿಂದಲೇ ನಾನು ಸ್ವಾಭಾವಿಕವಾಗಿ ಬದುಕಬೇಕು ಎನ್ನುವ ಸಂಕಲ್ಪ ಮಾಡಿದವನು. ಎಲ್ಲ ರೀತಿಯ ಅಸ್ವಾಭಾವಿಕತೆಯನ್ನೂ ವಿರೋಧಿಸುತ್ತಾ ಉಲ್ಲಂಘಿಸುತ್ತಾ ಬಂದವನು. ಮದುವೆಯೂ ಈ ಉಲ್ಲಂಘನೆಯ ಒಂದು ಭಾಗವೇ. ಹಂದಿ ಜೋಗಿ ಜಾತಿಯಲ್ಲಿ ಹುಟ್ಟಿದ ನಾನು ಮಾದಿಗರ ಹುಡುಗಿಯನ್ನು ಮದುವೆಯಾಗಿ ಬೌದ್ಧ ಧರ್ಮವನ್ನು ಒಪ್ಪಿಕೊಂಡು ಬದುಕು ನಡೆ ಸುತ್ತಿರುವೆ. ನಾನು ಆರಿಸಿಕೊಂಡಿರುವ ಬದುಕಿನ ಮಾದರಿ ಬಗ್ಗೆ ನನಗೆ ಹೆಮ್ಮೆಯಿದೆ. ನಿಜ, ನಮ್ಮಂತಹವರ ಮುಂದೆ ಕೆಲವು ಪ್ರಶ್ನೆಗಳಿವೆ. ಅವನ್ನು ಎದುರಿಸುವ ವಿಶ್ವಾಸ ನನಗಿದೆ.

– **ಡಾ. ಆರ್.ಬಿ.ರಂಗಸ್ವಾಮಿ,** ತುಮಕೂರು

ನಾನು ಸುಮಾರು ಮುವ್ವತ್ತೈದು ವರ್ಷಗಳ ಹಿಂದೆ ಸಮಾಜವಾದಿ ಚಳುವಳಿ, ಸಿದ್ಧಾಂತಗಳಿಂದ ಪ್ರಭಾವಿತಳಾಗಿ ಅಂತಹ ಹೋರಾಟಗಳಲ್ಲಿ ತೊಡಗಿದ್ದ ನಿಸಾರ್ ಅಹಮದ್‌ರನ್ನು ಇಷ್ಟಪಟ್ಟು ಮದುವೆ ಆದವಳು. ಅದು ತೇಜಸ್ವಿ, ಎಂಡಿಎನ್, ಎನ್.ಡಿ. ಸುಂದರೇಶ್, ಕಡಿದಾಳು ಶಾಮಣ್ಣ ಇತ್ಯಾದಿ ಹಿರಿಯ ಸಮಾಜವಾದಿಗಳ ಸಮ್ಮುಖದಲ್ಲಿ ನಡೆದ ಸರಳ ಮಂತ್ರ ಮಾಂಗಲ್ಯ ವಿವಾಹ. ಅದರಲ್ಲಿ ನಾವು ಯಾವ ಜಾತಿ-ಧರ್ಮಗಳ ಸಂಕೋಲೆಗಳಿಲ್ಲದೆ ಬದುಕ್ತೀವಿ ಅಂತ ಪ್ರತಿಜ್ಞೆ ಮಾಡಿದೆವು. ಹಾಗೇ ಈಗಲೂ ಬದುಕ್ತಾ ಇದೀವಿ. ಈ ಆದರ್ಶದ ಬದುಕೇ ನಮಗೊಂದು ಸಂತೋಷ

ತಂದುಕೊಟ್ಟಿದೆ. ಒಂದೇ ಬೇಸರವೆಂದರೆ, ಈ ಕಾಲದ ಯುವಜನ ಸಾಹಿತ್ಯ ಓದುವುದನ್ನು ನಿಲ್ಲಿಸಿ, ಆದರ್ಶಗಳನ್ನು ಕೈಬಿಟ್ಟಿರುವುದು.

– **ಮನೋರಮಾ ನಿಸಾರ್ ಅಹಮದ್**, ಶಿವಮೊಗ್ಗ

ನಮ್ಮೂರಲ್ಲಿ ಶ್ರೀನಿವಾಸ ಕುಮಾರ್ ಅನ್ನೋರು ನಮ್ಮನ್ನೆಲ್ಲ ಸೇರಿಸ್ಕೊಂಡು ಸಮಾಜವಾದಿ ಅಧ್ಯಯನ ಕೇಂದ್ರ ಶುರು ಮಾಡಿ ವಿಚಾರಕ್ಕೆ ಹಚ್ಚಾಗ ನಾನು ಬೇರೆ ಜಾತೀಲಿ ಮದುವೆ ಆಗಿ ಈ ಜಾತಿಗೀತಿನೆಲ್ಲ ಒಂದೇ ಸಲಕ್ಕೆ ಯಾಕೆ ಕಿತ್ತಾಂಕಬಾರ್ದು ಅನ್ನಿಸಿ ಕಾಯ್ತಾ ಇದ್ದೆ. ಸಾಹಿತ್ಯ ನನ್ನ ನೆರವಿಗೆ ಬಂತು. ಆಕಾಶವಾಣೀಲಿ ಕಥೆ ಓದಿದ್ದು, ನಮ್ಮ ಅಧ್ಯಯನ ಕೇಂದ್ರದ ವೇದಿಕೆಯಿಂದ ಕುವೆಂಪು ಬಗ್ಗೆ ಮಾತನಾಡಿದ್ದು, ಲಿಂಗಾಯ್ತರ ಹುಡುಗಿಯೊಬ್ಬಳಲ್ಲಿ ಕುತೂಹಲ ಮತ್ತು ಪ್ರೇಮ ಹುಟ್ಟಿಸ್ತು. ಸ್ನೇಹಿತರ ಸಹಾಯದಿಂದ ಹೇಗೋ ಅವಳ ಅಪ್ಪ ಅಮ್ಮನ ಕಣ್ಣು ತಪ್ಪಿ ಮದುವೆ ಆದ್ವಿ. ಆದರೆ ನಾನು ಕುರುಬನಾದ್ರಿಂದ ಊರಲ್ಲಿ ಗಲಾಟೆ ಆಗಿ ಮನೆಗಳಿಗೆ ಬೆಂಕಿ ಹಚ್ಚೋವರ್ಗೆ ಪರಿಸ್ಥಿತಿ ಕೈಮೀರಿ ಹೋಗಿ, ಮೀಸಲು ಪೋಲೀಸ್ ಬರಬೇಕಾಯ್ತು.

ಆದರೆ ನಾವು ಬೆಂಗಳೂರಿಗೆ ಬಂದು ಐದು ವರ್ಷ ಚೆನ್ನಾಗಿ ಬದುಕಿ ಬಾಳಿ ತೋರಿಸಿದ ನಂತರ ಎಲ್ಲಾ ಈಗ ಸರಿ ಹೋಗಿದೆ. ನಮ್ಮ ಮದುವೆಯನ್ನ ಕಟುವಾಗಿ ವಿರೋಧಿಸಿದ್ದ ನಮ್ಮತ್ತೆಗೆ ಈಗ ನಮ್ಮ ಮದುವೆಯನ್ನು ಈಗಲೂ ವಿರೋಧಿಸುತ್ತಿರುವ ತಮ್ಮ ನೆಂಟರಿಗೆ ನನಗೆ ನನ್ನ ಮಗಳು–ಅಳಿಯ ಮುಖ್ಯ, ನಿಮ್ಮ ಜಾತಿ ಅಲ್ಲ ಅಂತ ಹೇಳುವ ಧೈರ್ಯ ಬಂದಿದೆ. 'ಸಂಬಂಧ ಅನ್ನೋದು ದೊಡ್ಡದು ಕನಾ!' ಅನ್ನೋ ದೇವನೂರರ ಮಾತು ನಮ್ಮ ಬಾಳಿನಲ್ಲಿ ನಿಜ ಆಗಿದೆ.

– **ಆರ್.ರವಿಚಂದ್ರನ್**, ಚಾಮರಾಜನಗರ

ನಾನು ಬಂಟರ ಹುಡುಗಿ. ಬ್ರಾಹ್ಮಣ ಹುಡುಗನನ್ನು ಮದುವೆಯಾದೆ. ಆಶ್ಚರ್ಯ ಅಂದ್ರೆ ಈ ಮದುವೆಗೆ ವಿದ್ಯೆ ಅಷ್ಟೇನೂ ಇಲ್ಲದ ನನ್ನ ತಂದೆ ತಾಯಿಗಳಿಂದಾಗಲೀ ಅಥವಾಅವರ ತಾಯಿಯಿಂದಾಗಲೀ ಬರಲಿಲ್ಲ. ಬಂದದ್ದು ವಿದ್ಯಾವಂತನಾದ ನನ್ನ ಭಾವನಿಂದ! ಆತ ನಾನು ಒಂಬತ್ತು ತಿಂಗಳು ಗರ್ಭಿಣಿಯಾಗಿ ನನ್ನ ತಾಯಿಯ ಮನೆಯಲ್ಲಿದ್ದಾಗ, ನನ್ನನ್ನು ಹೊರ ಕಳಿಸಿದರೆ ಮಾತ್ರ ಒಳಗೆ ಬರುವೆನೆಂದು ನನ್ನ ತಾಯಿಗೆ ಹೇಳಿದ ಭೂಪ! ಇನ್ನು ಅಂತರ್ಜಾತಿ ವಿವಾಹವಾದ ನನ್ನ ದಲಿತ ಪ್ರಾಧ್ಯಾಪಕರೊಬ್ಬರು ನಾನು ನನ್ನ ಹೆಸರಿನ ಜೊತೆ ಗಂಡನ ಹೆಸರು ಹಾಕಿಕೊಳ್ಳದಿರುವುದನ್ನು ಟೀಕಿಸಿ, ಅದಕ್ಕೆ ಸ್ತ್ರೀವಾದವೇ ಕಾರಣ ಎಂದು ದೂರುತ್ತಾರೆ. ಈಗ ಹೇಳಿ ಇದು ಎಂತಹ ವಿದ್ಯೆ, ಎಂತಹ ಅರಿವು?

– **ಡಾ.ಸಬಿತಾ ಬನ್ನಾಡಿ**, ಭದ್ರಾವತಿ

ನಾನು ಮದುವೆ ಆಗಬಾರದು; ಆಗುವುದಿದ್ದರೆ ಒಬ್ಬ ವಿಧವೆಯನ್ನೋ ಅಥವಾ ಕಟ್ಟ ಕಡೆಯ ಜಾತಿಗೆ ಸೇರಿದ ಹುಡುಗಿಯನ್ನೋ ಮದುವೆ ಆಗಬೇಕೆಂದಿದ್ದೆ. ಇದು

ನಮ್ಮ ತಂದೆಗೂ ತಿಳಿದು ಇವನು ಹೇಗೂ ಕೈತಪ್ಪಿಹೋದವನು ಎಂದು ನನ್ನ ಚಿಂತೆ ಬಿಟ್ಟಿದ್ದರು. ನಾನು ತುಮಕೂರಿನ ಎಚ್‌ಎಂಟಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾ, ನನ್ನ ಸ್ನೇಹಿತನ ಕೊಠಡಿಯಲ್ಲಿ ವಾಸ ಮಾಡುತ್ತಿದ್ದಾಗ, ಎದುರು ಮನೆಯ ಹುಡುಗಿಯನ್ನು ಇಷ್ಟಪಟ್ಟೆ. ಅವಳು ಮೇಲ್ಜಾತಿಯ ಹುಡುಗಿಯಾದರೂ ಅಪ್ಪ ಅಮ್ಮ ಇಲ್ಲದವಳೆಂದು ತಿಳಿದು ಮದುವೆಯಾಗಲು ನಿಶ್ಚಯಿಸಿದೆ. ದೇವಸ್ಥಾನದಲ್ಲಿ ಮದುವೆಯಾಯಿತು. ಯಾರೂ ಅಡ್ಡಿ ಬರಲಿಲ್ಲ ಈಗ ನಾವು ಸುಖವಾಗಿದ್ದೇವೆ.

– ನಾಗಾರ್ಜುನ, ಸಾಗ್ಗೆರೆ

ಇವೊತ್ತಿಗ್ತೆ ನಮ್ಮ ತಂದೆ ಕೆ.ರಾಮದಾಸ್ ನಮ್ಮನ್ನಗಲಿ ನಾಲ್ಕು ವರ್ಷವಾಗ್ತಾ ಇದೆ. ಈ ಸಂದರ್ಭದಲ್ಲಿ ಇಂತಹ ಸಮ್ಮೇಳನ ನಡೆತಿರೋದು ಮತ್ತು ಈ ಗೋಷ್ಠಿಯಲ್ಲಿ ನಾನು ಭಾಗವಹಿಸ್ತಾ ಇರೋದು ಅವರ ನೆನಪಿಗೆ ಸಲ್ಲುವ ನಿಜವಾದ ಶ್ರದ್ಧಾಂಜಲಿ ಅಂತ ನಾನು ಭಾವಿಸ್ತೇನೆ. ನನ್ನನ್ನ ನಮ್ಮ ತಂದೆ ಜಾತ್ಯತೀತ ವಾತಾವರಣದಲ್ಲೇ ಬೆಳೆಸಿದ್ದರಿಂದ, ನನಗೆ ಕಾಲೇಜು ಸೇರುವವರಿಗೆ ಜಾತಿ ಅನ್ನೋದು ನಮ್ಮ ಸಮಾಜದಲ್ಲಿ ಇಷ್ಟು ಸಂಕೀರ್ಣವಾಗಿ ಕೆಲಸ ಮಾಡಿ ಸಮಸ್ಯೆಗಳನ್ನು ಉಂಟು ಮಾಡುತ್ತೆ ಅನ್ನುವ ಅನುಭವವೇ ಆಗಿರಲಿಲ್ಲ. ಮದುವೆ ಮಾಡಿಕೊಳ್ಳಬೇಕಾದಾಗಲೂ ಕೂಡಾ ಜಾತಿ ಸಮಸ್ಯೆಯಾಗಲಿಲ್ಲ. ಸಮಸ್ಯೆ ಆಗಿದ್ದು ಅಂದ್ರೆ ನಮ್ಮ ತಂದೆಯ ಉಗ್ರ ಕೋಪಿಷ್ಠತನವನ್ನ ಎದುರಿಸುವಂತಹ ಹುಡುಗ ಸಿಕ್ತಾನಾ ಅನ್ನೋದು!

ಅಂತಹ ಓಂಕಾರ್ ಸಿಕ್ರು, ಮದುವೆಯಾದೆ. ಈಗ ನಮ್ಮ ಮುಂದಿರುವ ನಿಜವಾದ ಸವಾಲು ಅಂದ್ರೆ, ಜಾತಿವಾದ ಉಲ್ಬಣಗೊಂಡಿರುವ ಇಂದಿನ ಪರಿಸ್ಥಿತಿಯಲ್ಲಿ ನನ್ನ ಮಗಳನ್ನ ನಮ್ಮ ತಂದೆ ನನ್ನನ್ನ ಬೆಳೆಸಿದ ಹಾಗೆ ಹೇಗೆ ಜಾತ್ಯಾತೀತವಾಗಿ ಬೆಳೆಸುವುದು ಅನ್ನುವುದು. ಈ ಸಮ್ಮೇಳನ ಈ ದಿಶೆಯಲ್ಲಿ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಹಾಗೇ ನಿಮ್ಮೆಲ್ಲರ ಸಹಕಾರದಿಂದ ಇದರಲ್ಲಿ ಯಶಸ್ವಿಯಾಗುವೆ ಎಂಬ ನಂಬಿಕೆ ಹುಟ್ಟಿದೆ.

– ಎನ್. ಆರ್. ಸ್ನೇಹಾ ಓಂಕಾರ್, ಮೈಸೂರು

ನಾನು ಮತ್ತು ಭಾರತಿ ಒಂದು ಸಮಾರಂಭದಲ್ಲಿ ಭೇಟಿಯಾಗಿ ಮನಸ್ಸಿಗೆ ಮನಸ್ಸು ಕೊಟ್ವಿ, ಅಂದೇ ನಾವು ಗಂಡ ಹೆಂಡತಿ ಅಂದುಕೊಂಡ್ವಿ, ಆಗ ಪ್ರಕಟವಾದ ನನ್ನ ಕವನ ಸಂಕಲನದ ಹಕ್ಕುಗಳನ್ನು ಅವಳ ಹೆಸರಲ್ಲಿ ನಮೂದಿಸಿದಾಗ, ನನ್ನ ಕವನಗಳಿಗಿಂತ ಹೆಚ್ಚಾಗಿ ಇದರ ಬಗ್ಗೆಯೇ ಚರ್ಚೆಯಾಗಿ, ನನ್ನ ಎಡಪಂಥೀಯ ಮತ್ತು ಸಾಹಿತಿ ಗೆಳೆಯರು ನನ್ನನ್ನು ದೂರ ಮಾಡಿದರು. ಕಾರಣ, ಇವರ ಅರ್ಥದಲ್ಲಿ ನಾನು ಮದುವೆ ಆಗಿಲ್ಲ ಅಂಬೂದು! ಜೊತೆಗೆ ಮನೆ ಕಡೆಯವರಿಂದ ಅಗಸರು–ಹೊಲೆಯರು ಅಣ್ಣ ತಮ್ಮಂದಿರಾದ್ದರಿಂದ ಮದುವೆ ಆಗಂಗಿಲ್ಲ ಎನ್ನುವ ಸಾಂಪ್ರದಾಯಿಕ ನಂಬಿಕೆಯ ಅಡ್ಡಿ.

ಇದನ್ನೆಲ್ಲ ಪರಿಹರಿಸಿಕೊಳ್ಳಲು ನಾವು 'ಮಾನವ ಮಂಟಪ'ದವರ ಬಳಿ ಹೋಗಿ ಮದುವೆ ಆದ್ವಿ. ಆದರೂ ಎರಡೂ ಕಡೆಯ ಜಾತ್ಯಸ್ಥರು ಮತ್ತು ಪ್ರಗತಿಪರ ಗೆಳೆಯರು ನಮ್ಮ ಬೆನ್ನು ಬಿಡಲಿಲ್ಲ;ಬಿಟ್ಟಿಲ್ಲ! ಅದಕ್ಕೆ ಕಾರಣ, ಪ್ರಗತಿಪರ ಲೇಖಕಿ ಎಂದು ಹೇಳಿಕೊಳ್ಳುವ ನನ್ನ ಹೆಂಡತಿಯ ಅಕ್ಕ ಎಂದರೆ ನಿಮಗೆ ಆಶ್ಚರ್ಯವಾಗಬಹುದು! ಜಾತಿ ಲೆಕ್ಕಿಸದೆ ಪ್ರೀತಿಸಿ ಮದುವೆ ಆಗುವವರಿಗೆ ಅವರಿಗೆ ನೈತಿಕ ಬೆಂಬಲದ ನಾಲ್ಕು ಮಾತು ಆಡಿ ಸ್ಥೈರ್ಯ ತುಂಬಲ್ಲ ಒಂದು ಬಳಗ ರೂಪುಗೊಳ್ಳದಿದ್ದರೆ, ನಮ್ಮ ಜಿಲ್ಲೆಯಲ್ಲಿ ಗೋಕಾಕ್ ಜಲಪಾತಕ್ಕೆ ಬಿದ್ದು ಸಾಯುವ ಮುಗ್ಧ ಜೋಡಿಗಳ ಸಂಖ್ಯೆ ಹೆಚ್ಚಾಗಲಿದೆ ಎಂದು ಇಲ್ಲಿ ತಿಳಿಸಬಯಸುವೆ.

– **ವೀರಣ್ಣ ಮಡಿವಾಳರ,** ಕೇರೂರು, ಚಿಕ್ಕೋಡಿ

ಮಂಡ್ಯ ಜಿಲ್ಲೆಯ ಗೌಡರಿಗೆ ಶ ಸ ಷ ವ್ಯತ್ಯಾಸ ಗೊತ್ತಿಲ್ಲ, ಪ್ರೇಮ, ಪ್ರೀತಿ ಬೆಲೆ ತಿಳಿದಿಲ್ಲ, ಪ್ರೇಮಿಸಿದವರ ಕಣ್ಣು ಕಿತ್ತಾಕ್ತಾರೆ ಅನ್ನುವ ಪ್ರಚಲಿತ ಅಭಿಪ್ರಾಯ ಸುಳ್ಳು ಅನ್ನೋದಕ್ಕೆ ನಾನೇ ಉದಾಹರಣೆ. ನನಗೆ ಸರಿಯಾಗಿ ಕೆಲಸವಿಲ್ಲದಾಗ, ನನ್ನ ಕಪ್ಪು ಬಣ್ಣದ ಬಗ್ಗೆ ಕೀಳರಿಮೆ ಇದ್ದಾಗ ಕೆಲಸದಲ್ಲಿದ್ದ ಹಾವೇರಿ ಕಡೆಯ ತಳವಾರ ಜಾತಿಯ ಬಿಳಿ ಹುಡುಗಿಯನ್ನು ಅಳುಕಿನಿಂದಲೇ ಪ್ರೇಮಿಸಿದೆ. ಅವಳೂ ಬಣ್ಣ ಲೆಕ್ಕಿಸದೆ ಒಪ್ಪಿದಳು! ಕೆಲಸ ಸಿಕ್ಕ ಮೇಲೆ ಎರಡೂ ಕಡೆಯ ಹಿರಿಯರಿಗೆ ತಿಳಿಸಿ ಮದುವೆಯಾದೆ. ಒಂದೇ ಬೇಜಾರೆಂದರೆ ನನ್ನ ಮದುವೆಗೆ ಈ ಹಿರಿಯರು ಮುಕ್ತ ಮನಸ್ಸಿನಿಂದ ಒಪ್ಪಿದರೆ, ವಿರೋಧ, ಅಸಮಾಧಾನ ಎದುರಾದದ್ದು ಕಿರಿಯ ವಯಸ್ಸಿನ ವಿದ್ಯಾವಂತರಿಂದ. ಶಿಕ್ಷಣ ಸಚಿವರು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯಲು ಹೊರಟ ಮತ್ತು ಅರಣ್ಯ ಸಚಿವರು ಮರ ಕಡಿಯುವವರ ಪರ ಮಾತನಾಡತೊಡಗಿರುವ ಈ ಕಾಲದಲ್ಲಿ ಇನ್ನೇನು ಆಗಲು ಸಾಧ್ಯ?

– **ಕೆ. ರೋಹಿತ್,** ಮಡಿಕೇರಿ

ಸೈದ್ಧಾಂತಿಕ ಶ್ರೇಷ್ಠತೆಯ ಅಪಾಯಗಳು

ಪ್ರಿಯ ಓದುಗರೇ,

ಸದ್ಯದ ಅಣ್ಣಾ ಹಜಾರೆ ಆಂದೋಲನ ಏನನ್ನೇ ಸಾಧಿಸಲಿ, ಬಿಡಲಿ; ಅದು ಒಂದು ಸತ್ಯವನ್ನಂತೂ ದೇಶದ ಮುಂದೆ ತೆರೆದಿಟ್ಟಿದೆ. ಈ ದೇಶದ ಆತ್ಮಸಾಕ್ಷಿಯನ್ನು ಈಗಲೂ ಒಬ್ಬ ಹಳ್ಳಿಗ, ಅದೂ ಸಾಮಾನ್ಯ ಹಳ್ಳಿಗನೊಬ್ಬ ಮಾತ್ರ ಜಾಗೃತಗೊಳಿಸಬಲ್ಲ ಎಂಬುದೇ ಆ ಸತ್ಯ. ಈ ದೇಶ ಅಭಿರುಚಿ ಮತ್ತು ಆದ್ಯತೆಗಳಲ್ಲಿ ಪಾಶ್ಚಿಮಾತ್ಯ ನಾಗರೀಕತೆಯ ಮೌಲ್ಯಗಳನ್ನು ಒಪ್ಪಿಕೊಳ್ಳುತ್ತಾ ಶರವೇಗದಲ್ಲಿ ಬದಲಾಗುತ್ತಿದೆ ಎಂಬ ವ್ಯಾಪಕ ಆತಂಕದ ನಡುವೆಯೂ, ಅದರ ಆತ್ಮ ಇನ್ನೂ ಭಾರತದ ಹಳ್ಳಿಗಾಡಿನ ಹಿರಿಯನೊಬ್ಬನ ಮನದಾಳದ ಮಾತುಗಳನ್ನು-ಅವೆಷ್ಟೇ ಅಸ್ಪಷ್ಟ ಮತ್ತು ಅವಿಷದವಾಗಿದ್ದರೂ-ಕೇಳುವಷ್ಟು ಸೂಕ್ಷ್ಮತೆಯನ್ನು ಉಳಿಸಿಕೊಂಡಿದೆ ಎಂಬುದು ಇಂದು ಭವಿಷ್ಯದ ಬಗ್ಗೆ ಸ್ವಲ್ಪವಾದರೂ ಭರವಸೆ ಹುಟ್ಟಿಸುವ ಸಂಗತಿಯಾಗಿದೆ.

ಜೆಪಿಯವರೊಂದಿಗೇ ದೇಶ ತನ್ನ ರಾಷ್ಟ್ರೀಯ ಹೋರಾಟದ ಪರಂಪರೆಯೊಂದಿಗೆ ಕೊನೆಯ ಕೊಂಡಿ ಕಳಚಿಕೊಂಡಿರಬಹುದು ಎನ್ನಿಸುತ್ತಿರುವ ಹೊತ್ತಿನಲ್ಲೇ ಈ ಅಣ್ಣಾ ರಾಷ್ಟ್ರ ವೇದಿಕೆ ಹತ್ತಿದ್ದಾರೆ. ತಾತ್ವಿಕ ಪರಿಭಾಷೆಯ ನೆಲೆಯಲ್ಲಿ ಗಾಂಧಿವಾದಿ ಎಂದೆನಿಸದಿದ್ದರೂ, ಗಾಂಧಿ ಸಮಾಧಿ ಮುಂದೆ ಧ್ಯಾನಕ್ಕೆ ಕೂತು ಶಕ್ತಿ ಸಂಚಯ ಮಾಡಿಕೊಂಡು ಭ್ರಷ್ಟ ವ್ಯವಸ್ಥೆಯ ವಿರುದ್ಧ ದೊಡ್ಡ ಸವಾಲೆಸೆಯಲು ಅಣಿಯಾದ ಈ ಅಣ್ಣಾ, ಆನಂತರ ಮಾತನಾಡತೊಡಗಿದ ಭಾಷೆ ನಿಜ ಗಾಂಧಿವಾದಿಗಳಲ್ಲಿ ಹೊಸ ಹುರುಪು ಹುಟ್ಟಿಸುವಂತಿದೆ. ಗಾಂಧಿಗಿಂತ ಸ್ವಲ್ಪ ಹೆಚ್ಚು ಮೈ ಮುಚ್ಚಿಕೊಂಡಿರುವ ಅಣ್ಣಾ, ಗಾಂಧಿಗಿಂತ ಹೆಚ್ಚು ಬಾಯಿ ಬಿಚ್ಚುತ್ತಾ ಸ್ವಲ್ಪ ಆತುರಗಾರರಂತೆ ಕಾಣುತ್ತಾರೆ; ಹಾಗೇ ಹಠಮಾರಿಯಾಗಿ ಕೂಡ. ಇದಕ್ಕೆ ಇವರು ಗಾಂಧಿಯಂತೆ ಒಳಗಿನ ಅಗ್ನಿದಿವ್ಯದ ಮೂಲಕ ತಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಂಡವರಲ್ಲ. ಹೊರಗಿನ ಶಕ್ತಿಗಳಿಂದ ಪ್ರಭಾವಿತರಾಗಿ

ಒಳಗಿನ ಬೆಂಕಿ ಹತ್ತಿಸಿಕೊಂಡವರು. ಆದರೆ ಈ ಮಿತಿಗಳ ನಡುವೆಯೇ, ಮನಮೋಹನ ಸಿಂಗ್-ರಾಹುಲ್ ಗಾಂಧಿ-ಗಡ್ಕರಿ-ಮಾಯಾವತಿ-ಕರುಣಾನಿಧಿ-ಯಡಿಯುರಪ್ಪನವರು ಒಟ್ಟಾಗಿ ಸೇರಿ ಸೃಷ್ಟಿಸಿರುವ ನವ ವಸಾಹತುಶಾಹಿ ರಾಜಕಾರಣದ ವಿರುದ್ಧ ಹೋರಾಡಲು ಈ ಗಾಂಧಿಯಾದರೂ ಸಿಕ್ಕರಲ್ಲ ಎಂದು ನಾವು ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಿರುವವರು.

ಅಣ್ಣಾ ಗಾಂಧಿಯಲ್ಲದಿರಬಹುದು; ಆದರೆ ಇಂದಿನ ಸಂಕೀರ್ಣ ಸಂದರ್ಭದಲ್ಲಿ-ರಾಷ್ಟ್ರ ಪ್ರಗತಿಯ ಹಾದಿಯಲ್ಲಿದೆ ಎಂದು ವ್ಯವಸ್ಥೆ ಎಲ್ಲರನ್ನೂ ನಂಬಿಸುತ್ತಿರುವಾಗ-ರಾಷ್ಟ ಅವನತಿಯ ಹಾದಿಯಲ್ಲಿದೆ ಎಂದು ಎಚ್ಚರಿಸಬಲ್ಲ ವಿವೇಕ ಮತ್ತು ಸ್ಥೈರ್ಯಗಳನ್ನು ಪ್ರದರ್ಶಿಸಿರುವ ಮೂಲಕ ಅವರು ಗಾಂಧಿಯನ್ನು ಮತ್ತೆ ರಾಷ್ಟ್ರಜೀವನದ ಮುಖ್ಯ ವೇದಿಕಗೆ ತಂದಿರುವರು. ಜೊತೆಗೆ, ಗಾಂಧಿ ಮಾರ್ಗವೊಂದೇ ಈ ದಾರಿಯಿಂದ ನಮ್ಮನ್ನು ಪಾರು ಮಾಡಬಹುದೆಂದು ಬಹು ತಾತ್ವಿಕ ಸ್ಪಷ್ಟತೆಯೊಂದಿಗಲ್ಲದಿದ್ದರೂ, ಭಾವನಾತ್ಮಕ ನೆಲೆಯಲ್ಲಿ ಅರಿತು ರಾಷ್ಟ್ರೀಯ ವೇದಿಕೆಯನ್ನು ಹತ್ತಿರುವರು. ಅವರು ತಮ್ಮ ಹಳ್ಳಿ ರಾಳೇಗಾಂವ್ ಸಿದ್ಧಿ ಮತ್ತು ಅದರ ಸುತ್ತಮುತ್ತಲ ಹಳ್ಳಿಗಾಡಿನಲ್ಲಿ ಮಾಡಿರುವ ಪರಿವರ್ತನೆಯ ಕೆಲಸದಿಂದ ಪಡೆದ ಅನುಭವ ಮತ್ತು ಭವಿಷ್ಯ ಕುರಿತ ಭರವಸೆಯ ಸ್ಫೂರ್ತಿಯೊಂದಿಗೇ ಇಂದು ಈ ವೇದಿಕೆಯಿಂದ ರಾಷ್ಟ್ರ ಪುರ್ನನಿರ್ಮಾಣದ ಮಾತುಗಳನ್ನಾಡುವ ಧೈರ್ಯ ತೋರಿರುವುದು.

ಇದು ಬಲಪಂಥೀಯರೆದುರು ಜನಸಂಘಟನೆಯ ವಿಷಯದಲ್ಲಿ ಸಂಪೂರ್ಣ ಸೋತಿರುವ ಎಡಪಂಥೀಯರೆಂದು ತಮ್ಮನ್ನು ಕರೆದುಕೊಳ್ಳುವವರು ಆಳವಾಗಿ ಯೋಚಿಸಬೇಕಾದ ಸಂದರ್ಭ. ಅಣ್ಣಾ ಇಂದು ಭ್ರಷ್ಟಾಚಾರದ ವಿರುದ್ಧ ಹಾಕಿರುವ ಮತ್ತು ದೇಶದ ತುಂಬಾ ಅನುರಣಿಸುತ್ತಿರುವ ಕೂಗು ಗ್ರಾಮ ಭಾರತ, ರೈತ ಭಾರತದ ಒಡಲಾಳದ ಕೂಗು ಎಂಬುದನ್ನು ಮುಖ್ಯವಾಗಿ ಗಮನಿಸಬೇಕು. ಹಾಗಾಗಿ ಅದರ ಹಿಂದೆ ಕೇವಲ ಲಂಚ-ಶುರುವತ್ತುಗಳಿಗೆ ಸೀಮಿತವಾದ ಭ್ರಷ್ಟಾಚಾರದ

ವಿರುದ್ಧ ಮಾತ್ರವಾದ ಆಕ್ರೋಶ ಇರಲಾರದು. ಇದನ್ನು ಬುದ್ಧಿವಂತರೆಂದು ಕರೆದುಕೊಳ್ಳುವ ಎಡಪಂಥೀಯರು ಅರ್ಥ ಮಾಡಿಕೊಂಡು ಅದನ್ನು ವಿವರಿಸಿ ಹೇಳುವ ಮತ್ತು ಅ ಮೂಲಕ ಈ ಆಂದೋಲನಕ್ಕೆ ಹೊಸ ವಿಸ್ತರಣೆ ನೀಡಿ ಅದನ್ನು ಅದರ ತಾರ್ಕಿಕ ಅಂತ್ಯಕ್ಕೆ ಮುಟ್ಟಿಸುವ ಹೊಣೆ ಹೊರಬೇಕು. ಇಂದಿನ ಅಭಿವೃದ್ಧಿ ರಾಜಕಾರಣ ಹರಿಸಿರುವ ಹಡಬೆ ಹಣ ಹುಟ್ಟು ಹಾಕಿರುವ ವೈವಿಧ್ಯಮಯ ಹಿಂಸೆಗೆ ಕೊನೆ ಹಾಡುವ ಪ್ರಯತ್ನಕ್ಕೆ ಮುಂದಾಗಬೇಕು. ಇದರ ಬದಲಿಗೆ, ಅವರ ಹಿಂದೆ ಅಂತಹ ಜನ ಇದ್ದಾರೆ ಇಂತಹ ಜನ ಇದ್ದಾರೆ ಎಂದು ಆರೋಪಿಸುತ್ತಾ ಇವರು ಹೊಣೆರಹಿತ ಪ್ರತಿಕ್ರಿಯೆ ನೀಡುತ್ತಿರುವುದು ವಿಷಾದಕರ.

ತಮ್ಮ ಸೈದ್ಧಾಂತಿಕ ಶ್ರೇಷ್ಠತೆಯ ಅಹಂಕಾರದಿಂದ ಎಡಪಂಥೀಯರು ಸಮಾಜವಾದಿಗಳು ಮತ್ತು ಪ್ರಗತಿಪರರೆನಿಸಿಕೊಂಡವರು ಇತಿಹಾಸದುದ್ದಕ್ಕೂ ಇಂತಹ

ತಪ್ಪುಗಳನ್ನು ಮಾಡುತ್ತಲೇ ಬಂದಿದ್ದಾರೆ. ಅದರ ಪರಿಣಾಮವಾಗಿ ರಾಷ್ಟ್ರ ರಾಜಕಾರಣದ ಪರಿಧಿಯಲ್ಲೇ ಉಳಿದು ಸಿನಿಕತೆಗೆ ಈಡಾಗಿ ಜನ ರಿಂದ ದೂರವಾಗಿ ಹೋಗಿದ್ದಾರೆ. ಆದುದರಿಂದ ಈಗಲಾದರೂ ಇವರು ತಮ್ಮ ಹೊಣೆಯರಿತು; ಬರೀ ಬುದ್ಧಿವಂತಿಕೆಯ ಮಾತಿನ ರಾಜಕಾರಣ ಮಾಡದೆ, ಅಣ್ಣಾ ಹಿಂದೆ ಎಲ್ಲ ತರದ ಜನರಿರುವುದನ್ನು ಒಂದು ಅವಕಾಶವೆಂದೇ ಪರಿಗಣಿಸಿ, ತಮ್ಮ ವಿಚಾರ-ವ್ಯವಹಾರಗಳಿಂದ ಅವರನ್ನು ಗೆಲ್ಲುವ ಶ್ರಮದ ರಾಜಕಾರಣ ಮಾಡುವತ್ತ ಮನಸ್ಸು ಕೊಡಲಿ. ಅಣ್ಣಾ ಮತ್ತು ಅವರ ಆಂದೋಲನದಲ್ಲಿ ಅನೇಕ ದೋಷ ಮತ್ತು ಮಿತಿಗಳಿಲ್ಲದಿಲ್ಲ. ಆ ದೋಷ ಮತ್ತು ಮಿತಿಗಳೇ ಅವರೊಂದಿಗೆ ಕೈಜೋಡಿಸಬೇಕಾದುದಕ್ಕೆ ಕಾರಣಗಳಾಗಬೇಕು. ಈ ರಚನಾತ್ಮಕ ದೃಷ್ಟಿಕೋನವನ್ನು ಅಳವಡಿಸಿಕೊಳ್ಳದ ಹೊರತು ಇವರಿಗೆ ಜನರ ಹೃದಯದೊಳಕ್ಕೆ ಪ್ರವೇಶವಿಲ್ಲ.

ಸಮಕಾಲೀನ

ಮಠಾಧಿಪತಿಗಳು ನೀರು, ಭೂಮಿ, ಗಾಳಿ, ಬೆಳಕಿನಂತಿರಬೇಕು: ತೋಂಟದಾರ್ಯ ಸ್ವಾಮೀಜಿ

ತನ್ನ ಮುಕ್ತ ಮಾರುಕಟ್ಟೆ ಆರ್ಥಿಕತೆಯನ್ನು ಜಾರಿಗೆ ತರುವ ರಭಸದಲ್ಲಿ ಸರ್ಕಾರಗಳು ವಿಶ್ವ ಬ್ಯಾಂಕಿನ ನಿರ್ದೇಶನಗಳ ಮೇರೆಗೆ ಕೈಗೊಂಡ ಆರ್ಥಿಕ 'ಸುಧಾರಣಾ' ಕ್ರಮಗಳು ನಮ್ಮ ರೈತರನ್ನು ಒಂದೇ ಸಮನೆ ಆತ್ಮಹತ್ಯೆಗೆ ದೂಡುತ್ತಲೇ ಇವೆ. ಈಗಾಗಲೇ ರಾಷ್ಟ್ರಾದ್ಯಂತ ಮೂರು ಲಕ್ಷಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಇದರಿಂದ ತೃಪ್ತವಾಗದ ಸರ್ಕಾರ, ರೈತ ಸಮುದಾಯ ಹೀಗೆ ಸಂಪೂರ್ಣ ನಾಶವಾಗಲು ಬಹುಕಾಲ ಬೇಕಾಗುತ್ತದೆಯೆಂದು ಲೆಕ್ಕಹಾಕಿಯೇನೋ ಈಗ ಎಲ್ಲಡೆ ಎರಡಂಕಿ ದರದ 'ಅಭಿವೃದ್ಧಿ'ಯ ಸಮೂಹ ಸನ್ನಿ ಸೃಷ್ಟಿಸಿ ಯುದ್ಧೋಪಾದಿಯಲ್ಲಿ ರೈತರ ಭೂ ಸ್ವಾಧೀನ ಆರಂಭಿಸಿದೆ. ಇದು ಸಿಂಗ್ರೂರಿನಲ್ಲಿ ಆರಂಭವಾದಂತೆ ರಾಷ್ಟ್ರಾದ್ಯಂತ ದೊಡ್ಡ ಪ್ರಮಾಣದ ಅಶಾಂತಿಗೆ ಕಾರಣವಾಗಿದೆ. ಇತ್ತೀಚೆಗೆ ಕರ್ನಾಟಕದ ಉಡುಪಿ ಮತ್ತು ಗದಗದ ಬಳಿ ಬಹುರಾಷ್ಟ್ರೀಯ ಕಂಪನಿಗಳ ಕೈಗಾರಿಕಾ ಯೋಜನೆಗಳಿಗಾಗಿ ರಾಜ್ಯ ಸರ್ಕಾರ ಆರಂಭಿಸಿದ ಇಂತಹ ಭೂಸ್ವಾಧೀನದ ವಿರುದ್ಧ ರೈತರು ಸಿಡಿದೆದ್ದು ನಿಂತರು. ಉಡುಪಿಯಲ್ಲಿ ಪೇಜಾವರ ಸ್ವಾಮಿಗಳ ಉಪವಾಸಕ್ಕೆ ಬೆದರಿದ ಸರ್ಕಾರ ಭೂಸ್ವಾಧೀನವನ್ನು ಕೈಬಿಟ್ಟರೆ, ಗದಗದಲ್ಲಿ ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಗಳು ರೈತ ಪ್ರತಿಭಟನೆಯ ನೇತೃತ್ವ ವಹಿಸಿ ಜನ ಜಾಗೃತಿ ಕಾರ್ಯಕ್ರಮ ಹಾಕಿಕೊಳ್ಳುವವರೆಗೆ ತನ್ನ ಕಾರ್ಯಾಚರಣೆಯನ್ನು ಮುಂದುವರೆಸಿಯೇ ಇತ್ತು. ಅಲ್ಲಿ ಉಕ್ಕು ಸ್ಥಾವರ ಸ್ಥಾಪಿಸಲು ಬಂದಿದ್ದ ಪೋಸ್ಕೋ ಕಂಪನಿಯ ಏಜೆಂಟನಂತೆ ವರ್ತಿಸಿದ ನಮ್ಮ ಕೈಗಾರಿಕಾ ಮಂತ್ರಿ ಕೊನೇ ಕ್ಷಣದವರೆಗೂ ಸ್ವಾಮೀಜಿಯನ್ನು ಮಣಿಸಲು ನೋಡಿ ಕೊನೆಗೆ ಹತಾಶರಾಗಿ ಕಾರ್ಯಾಚರಣೆಯಿಂದ ಹಿಂದೆ ಸರಿದರು.

ಈ ಹಿನ್ನೆಲೆಯಲ್ಲಿ ತೋಂಟದಾರ್ಯ ಸ್ವಾಮೀಜಿಯವರನ್ನು 'ನವ ಮಾನವ' ಐದು ಪ್ರಶ್ನೆಗಳನ್ನು ಕೇಳಿತು. ಅದಕ್ಕೆ ಅವರು ಕೊಟ್ಟ ಉತ್ತರಗಳು ಇಲ್ಲಿವೆ:

ಭೂಸ್ವಾಧೀನ ವಿರೋಧಿ ಚಳುವಳಿಯ ನೇತೃತ್ವ ವಹಿಸಿಕೊಳ್ಳಲು ನೀವು ಕಂಡುಕೊಂಡ ಕಾರಣಗಳೇನು? ಇದ ಮಠಾಧೀಶರ ಕರ್ತವ್ಯ ವ್ಯಾಪ್ತಿಯ ಎಲ್ಲೆಗಳನ್ನು ಮೀರಿದ್ದು ಎಂದು ನಿಮಗನ್ನಿಸಲಿಲ್ಲವೇ?

ಅನ್ನದಾತನ ಜೀವನಾಧಾರವಾದ ಅವನ ಭೂಮಿಯ ಅಸ್ತಿತ್ವಕ್ಕೆ ಧಕ್ಕೆ ಬಂದಾಗ, ಅಶಿಕ್ಷಿತರೂ, ಅಸಂಘಟಿತರೂ, ಅಸಹಾಯಕರೂ ಆದ ರೈತರ ನೆರವಿಗೆ ಹೋಗುವುದು ನಮ್ಮ ಕರ್ತವ್ಯ. ಮಠಾಧಿಪತಿಗಳು ನೀರು, ಭೂಮಿ, ಗಾಳಿ, ಬೆಳಕಿನಂತೆ ಇರಬೇಕು. ಎಲ್ಲರ ಹಿತ ಕಾಯಬೇಕು. ಭಾರತೀಯ ತತ್ವಜ್ಞಾನದಲ್ಲಿ ಇಹಕ್ಕಿಂತ ಪರಕ್ಕೆ ಲಕ್ಷ್ಯ ಕೊಟ್ಟವರೇ ಬಹಳ. ಪರದಷ್ಟೇ ಇಹಕ್ಕೂ ಬೆಲೆ ಕೊಟ್ಟವರು ಬಸವಣ್ಣ ನವರು. ಆ ಬಸವ ಪರಂಪರೆಯ ವ್ಯಾಪ್ತಿಯಲ್ಲಿಯೇ ನಮ್ಮ ಮಠ ಬರುವುದರಿಂದ ಈ ಚಳುವಳಿಯಲ್ಲಿ ಭಾಗವಹಿಸಬೇಕಾಯ್ತು.

ಕೃಷಿ ಲಾಭದಾಯಕವಾಗಿಲ್ಲ ಎಂದು ಹೇಳಲಾಗುತ್ತಿರುವ ಈ ದಿನಗಳಲ್ಲಿ ಸಣ್ಣ ರೈತರಾದರೂ, ಸರ್ಕಾರದ ಕೈಗಾರಿಕೀರಣ ಯೋಜನೆಯ ಜೊತೆ ಕೈಜೋಡಿಸುವ ಮೂಲಕ ಒಂದು ನೆಮ್ಮದಿಯ ಹೊಸ ಬದುಕನ್ನು ಕಂಡುಕೊಳ್ಳುವ ಸಾಧ್ಯತೆ ಇದೆಯಲ್ಲವೇ?

ಕೃಷಿ ಆಧಾರಿತ ಕೈಗಾರಿಕೆಗಳಿಂದಲೇ ರೈತರು ನೆಮ್ಮದಿಯ ಬದುಕನ್ನು ಬದುಕಲು ಸಾಧ್ಯವಿದೆ. ಒಂದು ಕಾಲಕ್ಕೆ ಗದಗ ಜಿನ್ನಿಂಗ್, ಪ್ರೆಸ್ಸಿಂಗ್, ಎಣ್ಣೆ ಮಿಲ್ಲುಗಳಿಗಾಗಿ ಕರ್ನಾಟಕದಲ್ಲಿಯೇ ಉದ್ಯಮ ನಗರವೆಂದು ಪ್ರಸಿದ್ಧವಾಗಿತ್ತು. ದುರಂತವೆಂದರೆ, ವಿಜ್ಞಾನ ಬೆಳೆದಂತೆ ಗದಗಿನ ಈ ಉದ್ಯಮಗಳಲ್ಲಿ ಆಧುನಿಕತೆ ಬರಲೇ ಇಲ್ಲ. ಅದೇ ರೀತಿ, ಗೋವಿನ ಜೋಳ, ಗೋಧಿ, ಹತ್ತಿ ಇವುಗಳ ತಜ್ಜನ್ಯ ಪದಾರ್ಥಗಳಿಂದ ರೈತ ಪರಿಸರ ಸ್ನೇಹಿಯಾದ ನೂರೆಂಟು ಉದ್ಯಮಗಳನ್ನು ಮಾಡಬಹುದು.

ಸರ್ಕಾರ(ಗಳು) ಜಾಗತೀಕರಣದ ಅಡಿಯಲ್ಲಿ ಅನುಸರಿಸುತ್ತಿರುವ 'ಅಭಿವೃದ್ಧಿ' ಮಾದರಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಸೂರತ್‌ನಲ್ಲಿ ಮೊಗಲರ ಕಾಲಕ್ಕೆ ಒಂದು ವ್ಯಾಪಾರ ಮಳಿಗೆಯಾಗಿ ಬಂದ ಈಸ್ಟ್ ಇಂಡಿಯಾ ಕಂಪನಿ ಭಾರತವನ್ನು ಇನ್ನೂರು ವರ್ಷ ಶೋಷಿಸಿದ್ದು ಇತಿಹಾಸ. ಅಭಿವೃದ್ಧಿಯ ಹೆಸರಿನಲ್ಲಿ ಜಾಗತಿಕ ಬಂಡವಾಳಶಾಹಿಗಳು ಕರ್ನಾಟಕದ ನೆಲ, ನೀರು, ವಿದ್ಯುತ್, ಖನಿಜಗಳನ್ನು ಬಳಸಿಕೊಂಡು ಲಾಭಾಂಶವನ್ನು ತಮ್ಮ ದೇಶಕ್ಕೆ ಒಯ್ಯುವರು. ಪೋಸ್ಕೋ ತೊಡಗಿಸಬೇಕೆಂದಿರುವ ಬಂಡವಾಳ ಡಾ. ನಂಜುಂಡಪ್ಪ ವರದಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಖರ್ಚು ಮಾಡಬೇಕೆಂದು ಸೂಚಿಸಿದ್ದ ಮೊತ್ತದಷ್ಟೇ ಆಗುವುದು! ಈ ದಿಸೆಯಲ್ಲಿ ದೇಶೀ ಸರ್ಕಾರಗಳೇ ಉದ್ಯಮದಲ್ಲಿ ತೊಡಗಿಸಿ ಕೊಳ್ಳಬೇಕು. ಅಭಿವೃದ್ಧಿಯ ಹರಿಕಾರರಾಗಬೇಕು.

ಭೂಸ್ವಾಧೀನ ವಿರೋಧಿ ಚಳುವಳಿಯಲ್ಲಿ ಭಾಗವಹಿಸುವ ಮೂಲಕ ಧರ್ಮ ಕುರಿತ ನಿಮ್ಮ ಅರಿವಿಗೆ ಹೊಸ ಆಯಾಮವೇನಾದರೂ ದೊರಕಿದೆ ಎಂದು ನಿಮಗೆ ಅನ್ನಿಸಿದೆಯೇ?

ಮಠಾಧಿಪತಿಗಳ ಕಾರ್ಯ ಬರೀ ಪೂಜೆ, ಬೋಧೆಯಲ್ಲ. ಜನಗಳ ನೋವಿಗೆ ಸ್ಪಂದಿಸುವುದೂ, ಪಾಲ್ಗೊಳ್ಳುವುದೂ ಆಗಿದೆ.

ಗದಗ ಜಿಲ್ಲೆಯಲ್ಲಿ ಸರ್ಕಾರ ಭೂಬ್ಯಾಂಕಿನ ಹೆಸರಿನಲ್ಲಿ ಮತ್ತೆ ಭೂಸ್ವಾಧೀನಕ್ಕೆ ತೊಡಗಿದೆ ಎಂಬ ಸುದ್ದಿಯಿದೆ. ಇದು ನಿಜವಾಗಿದ್ದಲ್ಲಿ, ನೀವು ಮತ್ತೆ ಚಳುವಳಿಗೆ ಧುಮುಕುವಿರಾ?

ಗದಗ ಜಿಲ್ಲೆಯಲ್ಲಿ ಭೂ-ಬ್ಯಾಂಕಿನ ಹೆಸರಿನಲ್ಲಿ ಭೂಸ್ವಾಧೀನಕ್ಕೆ ತೊಡಗಿರುವ ಸುದ್ದಿ ನಿಜ. ಇದು ನೆಲದ ಮಕ್ಕಳ ಪರವಾಗಿದ್ದರೆ ನಮ್ಮ ಸಹಕಾರವಿದೆ.

<u>ದಾಖಲೆ</u>

ಜಯಪ್ರಕಾಶರಿಗೆ ಲೋಹಿಯಾ ಬರೆದ ಒಂದು ಪತ್ರ

ಕಾಂಗ್ರೆಸ್ಸಿನೊಳಗೇ ಒಂದು ಉಪ ಪಕ್ಷವಾಗಿ ಹುಟ್ಟಿ, ಗಾಂಧೀಜಿ ಸಾವಿನ ನಂತರ ಕಾಂಗ್ರೆಸ್ ಸಹವಾಸ ತೊರೆಯಬೇಕಾಗಿ ಬಂದ ಸಮಾಜವಾದಿ ಪಕ್ಷ; ಆ ನಂತರವೂ ಕಾಂಗ್ರೆಸ್ ಬಗೆಗಿನ ತನ್ನ ಸಂಬಂಧ ಸಮೀಕರಣಗಳನ್ನು ಸ್ಪಷ್ಟಗೊಳಿಸಿಕೊಳ್ಳದೆ ತನ್ನ ಆರಂಭದ ದಿನಗಳಿಂದಲೇ ಹೇಗೆ ಬಳಲತೊಡಗಿತು ಎಂಬುದರ ಸೂಚನೆಯನ್ನು ಈ ಪತ್ರ ಒದಗಿಸುತ್ತದೆ. ಸಮಾಜವಾದಿ ಪಕ್ಷದೊಳಗೂ ಕೈವಾಡ ನಡೆಸಲು ಪ್ರಧಾನಿ ನೆಹ್ರೂಗೆ ಅವಕಾಶ ನೀಡುತ್ತಿದ್ದ ತಮ್ಮ ಸಮಾಜವಾದಿ ಮಿತ್ರರ ಬಗೆಗಿನ ಜಿಗುಪ್ಸೆಯಲ್ಲಿ ಲೋಹಿಯಾ ಬರೆದಿರುವ ಈ ಪತ್ರ, ಮುಂದೆ ಸಮಾಜವಾದಿ ಪಕ್ಷ ಏಕೆ ಒಡೆಯಿತು ಮತ್ತು ಒಡೆಯುತ್ತಲೇ ಹೋಯಿತು ಎಂಬುದರ ಸೂಚನೆ ನೀಡುತ್ತದೆ. ಜೊತೆಗೆ, ಮುಂದೆ ಬಹು ವಿವಾದಾಸ್ಪದವೆನಿಸಿದ ನೆಹ್ರೂ ಕುರಿತ ಲೋಹಿಯಾ ಅವರ ಟೀಕೆಗಳಿಗೆ ಒಂದು ಹಿನ್ನೆಲೆಯನ್ನೂ ಒದಗಿಸುವಂತಿದೆ.–ಸಂ.

ನನ್ನ ಪ್ರೀತಿಯ ಜಯಪ್ರಕಾಶ್,

ನೀವು ನನ್ನ ಗಮನಕ್ಕೆ ತಂದ ಪ್ರಧಾನ ಮಂತ್ರಿಯವರ ಪತ್ರವನ್ನು ಎರಡು ಬಾರಿ ಓದಿದೆ. ನಾನು ಇಲ್ಲಿ ಏನನ್ನೂ ಯಾವುದೇ ಸಂಚಾರಿ ಭಾವದ ಕಿರಿಕಿರಿಯಿಂದ ಬರೆಯುತ್ತಿಲ್ಲ. ನಾನು ಎಂದೂ ಯಾವುದೇ ರೀತಿಯ 'ನೋವನ್ನುಂಟು ಮಾಡುವ ಅಥವಾ ವೈಯುಕ್ತಿಕ'ವೆನ್ನಿಸುವುದನ್ನು ಬರೆದಿದದ್ದು ನನಗೆ ನೆನಪಿಲ್ಲ. ಆದರೆ ರಾಜನ ಭಯದಿಂದಾಗಿ ರಾಜಸೇವಾಸಕ್ತರಲ್ಲಿ ತಳಮಳವನ್ನುಂಟುಮಾಡಿರಬಹುದಾದ ಕೆಲವು ವಿಷಯಗಳನ್ನು ನಾನಿಲ್ಲಿ ದಾಖಲಿಸುತ್ತಿದ್ದೇನೆ.

೧. ಈ ಮಹಾಶಯರು ಮಹಾತ್ಮ ಗಾಂಧಿಯವರ ಶವಯಾತ್ರೆಯ ಸಮಯದಲ್ಲಿ ಶವ ವಾಹನವನ್ನೇರಿ ನಿಂತದ್ದು ರಾಷ್ಟ್ರವೊಂದು ಎಂದೂ ಅನುಭವಿಸಬಾರದ ಅಪಮಾನದ ಸಂಗತಿಯಾಗಿದೆ. ಇದು ಆಕಸ್ಮಿಕವಾದ ತಿಕ್ಕಲುತನವಾಗಿದ್ದರೆ, ಅದಕ್ಕಾಗಿ ಅವರು ಪಶ್ಚಾತ್ತಾಪ ಮತ್ತು ಕ್ಷಮಾಪಣೆಗಳ ಮೂಲಕ ತಮ್ಮನ್ನು ತಾವು ಸ್ಪಷ್ಟಪಡಿಸಿಕೊಳ್ಳಬೇಕಿತ್ತು. ನಾನು ಇಂತಹ ಮಾತುಗಳನ್ನೆಲ್ಲ ಒಂದೋ ಅಥವಾ ಎರಡೋ ಸಭೆಗಳಲ್ಲಿ ಅನಿವಾರ್ಯವಾದಾಗ ಮಾತ್ರ ಆಡಿದ್ದೇನೆ.

೨. ಸಂಪತ್ತು ಸೃಷ್ಟಿಸಲು ಕಷ್ಟ ಪಟ್ಟು ಕೆಲಸಮಾಡಬೇಕೆನ್ನುವ ಘೋಷಣೆ ಮತ್ತು ಮಂತ್ರ ಸಾಕಷ್ಟು ಉಪಕರಣಗಳು ಮತ್ತು ಯಂತ್ರಗಳ ಪೂರೈಕೆಯ ಬೆಂಬಲವಿಲ್ಲದ ಸಂದರ್ಭದಲ್ಲಿ ಬರೀ ಹುಸಿ ಮತ್ತು ಬರಡು ಎನ್ನಿಸಿಕೊಳ್ಳುತ್ತದೆ. ಈ ಸಂಬಂಧವಾಗಿ ನಾನು, ಈಗಾಗಲೇ ಜನ ಎಷ್ಟು ಕಷ್ಟಪಟ್ಟು ದುಡಿಮೆ ಮಾಡುತ್ತಿದ್ದಾರೆ ಎಂಬುದನ್ನು ಪ್ರಧಾನ ಮಂತ್ರಿ ಒಂದು ವಾರ ರಿಕ್ಷಾ ಎಳೆದು ತಿಳಿದುಕೊಳ್ಳಬೇಕೆಂದು ಸಲಹೆ ಮಾಡಿದ್ದೇನೆ.

೩. ಪ್ರಧಾನ ಮಂತ್ರಿ ಮತ್ತು ಅವರ ಸರ್ಕಾರ ಬರಗಾಲದ ಹೊಣೆ ಹೊರಬೇಕಾಗಿದೆ ಮತ್ತು ಇದಕ್ಕಾಗಿ ಮಳೆ, ಮೋಡ ಇತ್ಯಾದಿಗಳನ್ನು ದೂಷಿಸುವುದನ್ನು ನಿಲ್ಲಿಸಬೇಕಾಗಿದೆ. ಏಕೆಂದರೆ ಅಧಿಕಾರ ವಹಿಸಿಕೊಂಡ ನಂತರ ಪ್ರಧಾನಿ ಯಾವುದೇ ಕಾರಣಕ್ಕಾಗಿ ರೈತರನ್ನು ಒಕ್ಕಲೆಬ್ಬಿಸುವುದನ್ನು ನಿಷೇಧಿಸಲು ನಿರಾಕರಿಸುವ ಮೂಲಕ ವಾರ್ಷಿಕವಾಗಿ ಕನಿಷ್ಠ ೨೦ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳ ಕೊರತೆಗೆ ಕಾರಣರಾಗಿದ್ದಾರೆ. ಹಾಗೇ ಬೀಳು ಬಿದ್ದ ಭೂಮಿಯಲ್ಲಿ ಉಳುಮೆ ಮಾಡಲು ಆಹಾರ ಸೇನೆಯೊಂದನ್ನು ರಚಿಸಲು ನಿರಾಕರಿಸುವ ಮೂಲಕ ಇನ್ನೂ ೨೦ ಲಕ್ಷ ಟನ್ನುಗಳಷ್ಟು ಮತ್ತು ಭೂಮಿಯನ್ನು ಪುನರ್‌ವಿತರಿಸಿ ಸಣ್ಣ ನೀರಾವರಿ ಯೋಜನೆಗಳಿಗಾಗಿ ಸ್ವಯಂಪ್ರೇರಿತ ಶ್ರಮದಾನವನ್ನು ಪ್ರೋತ್ಸಾಹಿಸಲು ನಿರಾಕರಿಸುವ ಮೂಲಕ ಮತ್ತೆ ೪೦ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳ ಕೊರತೆಗೆ ಕಾರಣರಾಗಿದ್ದಾರೆ.

೪. ಲಕ್ಷಾಂತರ ರೂಪಾಯಿಗಳಷ್ಟು ದೊಡ್ಡದಾಗಿರುವ ಪ್ರಧಾನಮಂತ್ರಿಯವರ ಪರಿಹಾರ ನಿಧಿಯನ್ನು ಸರ್ಕಾರದ ಅಥವಾ ಸಂಸತ್ತಿನ ಲೆಕ್ಕಪತ್ರ ಪರಿಶೋಧನೆಗೆ ಒಳಪಡಿಸಬೇಕು ಮತ್ತು ಅದರ ಖರ್ಚು ವೆಚ್ಚಗಳನ್ನು ಈಗಿರುವಂತೆ ಅವರ ವೈಯುಕ್ತಿಕ ವಿವೇಚನಾಧಿಕಾರಕ್ಕೆ ಬಿಡಬಾರದು. ಈ ನಿಧಿಯನ್ನು ಪ್ರಧಾನ ಮಂತ್ರಿಯ ವೈಯುಕ್ತಿಕ ವರ್ಚಸ್ಸನ್ನು ಬೆಳಸಲು ಬಳಸಲಾಗುತ್ತಿದೆ ಎಂಬ ಅನುಮಾನ ಯಾರಿಗೂ ಬಾರದಂತೆ ನೋಡಿಕೊಳ್ಳಬೇಕು.

ಈ ವಿಷಯಗಳಲ್ಲಿ ಏನಾದರೂ ನಿರ್ಧಾರ ಆಗಬಹುದು ಎಂದು ನಿರೀಕ್ಷಿಸುತ್ತಾ ಈ ಮಾತುಗಳನ್ನು ನಾನು ಬಹಳ ಬಾರಿ ಆಡಿಲ್ಲ. ಪ್ರಧಾನ ಮಂತ್ರಿಗಳ ಟೀಕಾಕಾರರ ಪೈಕಿ, ಬಹುಶಃ ನಾನು ಅವರನ್ನು ವೈಯುಕ್ತಿಕ ನೆಲೆಯಲ್ಲಿ ಅತಿ ಕಡಿಮೆ ಟೀಕಿಸಿದವನಿರಬೇಕು; ಹಾಗೇ ಒರಟಾಗಿ, ಆದರೆ ಸಕಾರಣವಾಗಿ ಅತಿ ಹೆಚ್ಚು ಟೀಕಿಸುತ್ತಿರುವವನೂ ನಾನೇ ಎಂಬುದು ನನಗೆ ಗೊತ್ತಿದೆ. ಪ್ರಧಾನ ಮಂತ್ರಿ ಸಾರ್ವಜನಿಕವಾಗಿ ಮಾಡದ ಯಾವುದೇ ಕೆಲಸದ ಬಗ್ಗೆ ನಾನು ಎಂದೂ ಮಾತಾಡಿಲ್ಲ. ಅವರ ಬಂಧುವೊಬ್ಬರು ಖಾಸಗಿ ಸಂಭಾಷಣೆಯೊಂದರಲ್ಲಿ ಇಂತಹ ಮಾತು ಶುರು ಮಾಡಿದಾಗ ನಾನೇ ಅವರಿಗೆ ಮುಂದೆ ಮಾತಾಡದಂತೆ ಅಂತಿಮ ಎಚ್ಚರಿಕೆ ನೀಡಿದ್ದೇನೆ. ಆದರೆ ಇದೇ ಮಾತನ್ನು ಪ್ರಧಾನ ಮಂತ್ರಿ ಮತ್ತು ವಿಶೇಷವಾಗಿ ಅವರ ಪರಿವಾರದವರ ಬಗ್ಗೆ ಹೇಳಬಹುದೆಂದು ನನಗನ್ನಿಸುತ್ತಿಲ್ಲ. ಈ ಪರಿವಾರದವರು ಅಗ್ಗದ ವದಂತಿ ಮತ್ತು ವ್ಯಂಗ್ಯ-ಕಟಕಿಗಳನ್ನು ಚಲಾವಣೆಗೆ ತರುವುದರಲ್ಲಿ ನಿಸ್ಸೀಮರಾಗಿದ್ದಾರೆ. ಸಾರ್ವಜನಿಕ ನೀತಿ ಸಂಬಂಧವಾದ

ಸಾರ್ವತ್ರಿಕ ನಡೆ ನುಡಿಗಳಲ್ಲಿ ಪ್ರಧಾನಿ ಅಮೂರ್ತ ಮತ್ತು ಸ್ಥೂಲವಾಗಿದ್ದುಕೊಂಡು, ಕಾರಣ ವಿಲ್ಲದೆ ಇತರರನ್ನು ದೂಷಿಸುವ ಪರಿಪಾಠ ಬೆಳೆಸಿಕೊಂಡಿದ್ದಾರೆ. ಅವರು ಸಮಯ ಸಿಕ್ಕಾಗಲೆಲ್ಲ ನನ್ನನ್ನು ಖಂಡಿಸುವ ಮತ್ತು ನಿಮ್ಮನ್ನು ಮತ್ತು ಇತರರನ್ನು ಹೊಗಳುವ ಅಸಭ್ಯ ನಡೆಯನ್ನು ಪ್ರದರ್ಶಿಸುತ್ತಿದ್ದಾರೆ.

ನಾನು ವಿದೇಶ ಪ್ರವಾಸದಲ್ಲಿದ್ದಾಗ ತಮ್ಮನ್ನು ಮತ್ತು ತಮ್ಮ ಸರ್ಕಾರವನ್ನು ಟೀಕಿಸುವುದರ ಹೊರತಾಗಿ ನನಗೆ ಬೇರೆ ಕೆಲಸವಿಲ್ಲವೆಂದು ಪ್ರಧಾನಮಂತ್ರಿ ಭಾವಿಸಿದಂತಿದೆ. ಇದು ಸಂಪೂರ್ಣ ಅಸತ್ಯ. ಏಕೆಂದರೆ ಅವರಿಗಾಗಲೀ, ಅವರ ಸರ್ಕಾರಕ್ಕಾಗಲೀ ನಾನು ಅಷ್ಟು ಮಹತ್ವ ನೀಡಿಲ್ಲ. ನನ್ನ ಭಾಷಣಗಳು ಮಾತ್ರವಲ್ಲ, ಖಾಸಗಿ ಮಾತುಕತೆಗಳ ದಾಖಲೆಗಳು ಲಭ್ಯವಿವೆ. ಸಾರ್ವಜನಿಕ ಮತ್ತು ಖಾಸಗಿ ಮಾತುಕತೆಗಳ ಒಟ್ಟು ಸಮಯದಲ್ಲಿ, ಭಾರತ ಸರ್ಕಾರ ಮತ್ತು ಪ್ರಧಾನ ಮಂತ್ರಿಯ ಬಗ್ಗೆ ಮಾತಾಡಲು ನನ್ನನ್ನು ಒತ್ತಾಯಿಸಲಾಗುತ್ತದೆಯಾದರೂ, ನಾನು ಅದಕ್ಕೆ ಶೇ. ೫ಕ್ಕಿಂತ ಹೆಚ್ಚು ಭಾಗವನ್ನು ನೀಡಿಲ್ಲ. ಎರಡು ವರ್ಷಗಳ ಹಿಂದೆ ನಾನು ವಿಭಿನ್ನ ನೀತಿಯೊಂದನ್ನು ಅಳವಡಿಸಿಕೊಂಡಿದ್ದೆನಾದರೂ, ಸಮಾಜವಾದ ಮತ್ತು ವಿಶ್ವ ಸರ್ಕಾರದಲ್ಲಿ ನಂಬಿಕೆ ಇಟ್ಟಿರುವ ನನಗೆ, ಪ್ರಧಾನಮಂತ್ರಿಗಳು ಬಯಸುತ್ತಿರುವಂತೆ ಸ್ವದೇಶ ಮತ್ತು ವಿದೇಶ ಭಾಷಣಗಳ ನಡುವೆ ಅಂತಹ ಯಾವುದೇ ಗೆರೆ ಎಳೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಪ್ರಧಾನಮಂತ್ರಿ ಮತ್ತು ಅವರ ವಿದೇಶಿ ರಾಯಭಾರ ಕಛೇರಿಗಳು ನನ್ನ ಬಗ್ಗೆ ಅಪಪ್ರಚಾರದ ಎಷ್ಟೇ ಪ್ರಯತ್ನ ಮಾಡಿದರೂ, ನಾನು ಕುಗ್ಗಿ ಅವರಿಂದ ಕನಿಷ್ಠ ಸೌಜನ್ಯ-ಸೌಹಾರ್ದ ವರ್ತನೆಯನ್ನು ಬಯಸುತ್ತಾ ಅವರ ಕಛೇರಿಗಳ ಬಾಗಿಲ ಬಳಿ ಎಂದೂ ಸುಳಿಯಲಾರೆ. ನಾವು ಒಬ್ಬರನ್ನೊಬ್ಬರು ಅವರವರ ಪಾಡಿಗೆ ಇರಲು ಬಿಟ್ಟುಬಿಡಬೇಕು ಅಥವಾ ಅವರು ಅಧಿಕೃತ ರಾಯಭಾರ ಔಪಚಾರಿಕತೆಗಳನ್ನು ಪಾಲಿಸುವುದನ್ನು ಕಲಿಯಬೇಕು.

ಇನ್ನಷ್ಟು ಸಂಗತಿಗಳನ್ನು ಹೇಳುವುದಾದರೆ, ಅಮೆರಿಕಾದ ರಾಯಭಾರಿ ನಾರ್ಮನ್ ಕಸಿನ್ಸ್ ಅವರು ಮೆಕಾರ್ಥಿಯಂತೆ ವರ್ತಿಸುತ್ತಾ, ನಾನು ಜಪಾನ್ ಪರ ಎಂದು ಅಮೆರಿಕನ್ ವ್ಯವಸ್ಥೆಗೆ ಸಾಬೀತು ಪಡಿಸಲು, ೧೯೪೨ರಲ್ಲಿ 'ಹರಿಜನ'ದಲ್ಲಿ ನಾನು ಬರೆದ ಯಾವುದೋ ಒಂದು ಲೇಖನವನ್ನು ಹುಡುಕಿ ಸಾಗಿಸಿ ಕಳಿಸುತ್ತಾರೆಂದರೆ, ಇದರ ಮಾಹಿತಿಯನ್ನು ಅವರಿಗೆ ಯಾರು ನೀಡಿರಬಹುದೆಂದು ಊಹಿಸಲಾಗದಷ್ಟು ದಡ್ಡ ನಾನಲ್ಲ. ಈ ರಾಯಭಾರಿಯು ನನ್ನ ಅಮೆರಿಕಾ ಪ್ರವಾಸದ ಎರಡು ವಾರಗಳ ಮುನ್ನವೇ ಚಿಕಾಗೋದಲ್ಲಿನ ಭಾರತೀಯ ವಿದ್ಯಾರ್ಥಿಗಳ ಸಭೆಯಲ್ಲಿ ಅದರ ಪ್ರಸ್ತಾಪ ಮಾಡಿ, ನನ್ನನ್ನು ಯಾವಾಗಲೂ ಭಾರತದ ಉತ್ಕರ್ಷಕ್ಕೆ ವಿರುದ್ಧವಾಗಿ ಮಾತಾಡುವ ಮತ್ತು ಕೆಲಸ ಮಾಡುವ ಕೆಂಪು ಗಾಡಿಯ ಪ್ರಯಾಣಿಕ ಎಂದು ಪರಿಚಯಿಸುವ ಸೌಜನ್ಯವನ್ನು ಮೆರೆದಿದ್ದರು!

ದೇಶದ ಸಂಘಟಿತ ಅಭಿಪ್ರಾಯ, ಪತ್ರಿಕೆಗಳು, ವಾಣಿಜ್ಯ ಮಂಡಳಿಗಳು, ರಾಜಕೀಯ ಪಕ್ಷಗಳು ಇತ್ಯಾದಿಗಳ ಮೇಲೆ ಪ್ರಧಾನಮಂತ್ರಿಯವರು ಎಂತಹ ಕಪಿಮುಷ್ಠಿಯನ್ನು

ಹೊಂದಿದ್ದಾರೆಂದು ನಾನು ಸುಲಭವಾಗಿ ಅರ್ಥ ಮಾಡಿಕೊಳ್ಳಬಲ್ಲೆ. ವ್ಯಕ್ತಿಯೊಬ್ಬನ ಮೇಲೆ ವೈಯುಕ್ತಿಕ ಅವಹೇಳನದ ಕಾರ್ಯಕ್ರಮವನ್ನು ಚಾಲೂ ಮಾಡಿ, ಆತನ ವಿಚಾರಗಳು ಚರ್ಚೆಯಾಗದಂತ ನೋಡಿಕೊಳ್ಳಲಾಗುತ್ತಿದೆ. ಬಂಡವಾಳಶಾಹಿ ಮತ್ತು ಕಮ್ಯುನಿಸಂಗಳಾಚೆಗೆ, ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳಾಚೆಗೆ, ಅಮೆರಿಕಾ ಮತ್ತು ರಷ್ಯಾಗಳಾಚೆಗೆ ಹೆಜ್ಜೆ ಹಾಕುವುದೆಂದರೆ ಕತ್ತಿಯಲಗಿನ ಮೇಲೆ ನಡೆದಂತೆ ಮತ್ತು ಪ್ರಧಾನ ಮಂತ್ರಿಯ ಪರಿವಾರ ಮತ್ತು ಕಮ್ಯುನಿಸ್ಟರಿಬ್ಬರಿಂದಲೂ ಅವಹೇಳನಕ್ಕೀಡಾಗಲು ಸಿದ್ಧವಾಗುವುದೆಂದೇ ಅರ್ಥ ಎಂದು ನನಗೆ ಗೊತ್ತು. ಆದರೆ ಇದೆಲ್ಲ ನನಗೆ ಸಾಕಾಗಿ, ಇದರಾಚೆ ಬರಲು ನಾನು ಕಾತುರನಾಗಿದ್ದೇನೆ.

ನಿಮ್ಮ ಪ್ರೀತಿಯ

(ಸಹಿ)

ರಾಮಮನೋಹರ

೧, ಮಾರ್ಚ್ ೯, ೧೯೫೨, ಕಲ್ಕತ್ತ

(ಕನ್ನಡಕ್ಕೆ: ಡಿಎಸ್ಸೆನ್)

ಅಕ್ಟೋಬರ್, ೨೦೧೧

ಹೊಸ ಅಭಿವೃದ್ಧಿ ಮಾದರಿ ಹಾಗೂ ಹೊಸ ನೈತಿಕ ಬಿಕ್ಕಟ್ಟು

ಪ್ರಿಯ ಓದುಗರೇ,

೨ಜಿ ಹಗರಣದ ತನಿಖೆ ಮುಂದುವರೆದಂತೆ ಅದು ಪ್ರಸಕ್ತ ಸರ್ಕಾರದ ಹಿರಿಯ ತಲೆಗಳನ್ನೆಲ್ಲ ಸುತ್ತುವರೆಯುತ್ತಿರುವಂತೆ ಕಾಣುತ್ತಿದೆ. ಈಗಾಗಲೇ ಸೆರೆಮನೆಯಲ್ಲಿರುವ ಮಾಜಿ ಟೆಲಿಕಾಂ ಮಂತ್ರಿ ಎ. ರಾಜಾ ಪ್ರಧಾನಮಂತ್ರಿ ಮತ್ತು ಈ ಹಿಂದಿನ ಹಣಕಾಸು ಮಂತ್ರಿ ಹಾಗೂ ಸದ್ಯದ ಗೃಹಮಂತ್ರಿ ಪಿ. ಚಿದಂಬರಂ ಅವರನ್ನೂ ಸಾಕ್ಷಿಗಳನ್ನಾಗಿ ನ್ಯಾಯಾಲಯದ ಕಟಕಟೆಗೆ ಕರೆಯಬೇಕೆಂದು ವಿಚಾರಣಾ ಸಂದರ್ಭದಲ್ಲಿ ಆಗ್ರಹಿಸಿದ್ದಾರೆ. ಈಗ ಅದಕ್ಕೆ ಪೂರಕವಾಗಿ, ಸದ್ಯದ ಹಣಕಾಸು ಮಂತ್ರಿ ಪ್ರಣವ್ ಮುಖರ್ಜಿ ಆಗ ಹಣಕಾಸು ಮಂತ್ರಿಯಾಗಿದ್ದ ಚಿದಂಬರಂ ೨ಜಿ ತರಂಗಾಂತರ ಮಾರಾಟ ದರಗಳ ವಿಷಯದಲ್ಲಿ ಸೂಕ್ತ ನಿರ್ಧಾರ ಕೈಗೊಂಡಂತಿಲ್ಲವೆಂದು ಸೂಚಿಸಿ ಪ್ರಧಾನಮಂತ್ರಿಯವರಿಗೆ ಬರೆದಿರುವ ಟಿಪ್ಪಣಿಯೊಂದು ಬಹಿರಂಗಗೊಂಡು ಅವರ ರಾಜೀನಾಮೆ ಅನಿವಾರ್ಯ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಆ ಮೂಲಕ ಇಡೀ ಸರ್ಕಾರದ ನೈತಿಕ ಬುಡವೇ ಅಲ್ಲಾಡಿ ಹೋಗುವಂತಾಗಿದೆ. ಹಾಗೆ ನೋಡಿದರೆ, ಇಡೀ ೨ಜಿ ಹಗರಣ ಹೊಸ ಕಾಲದ 'ಅಭಿವೃದ್ಧಿ'ಯ ಸ್ವರೂಪದ ಬಗ್ಗೆ ನಮಗೆ ಅನೇಕ ಹೊಳಹುಗಳನ್ನು ನೀಡಬಲ್ಲುದಾಗಿದೆ. ಸಂಬಂಧಪಟ್ಟ ಎಲ್ಲ ಸಚಿವರು, ಅಧಿಕಾರಿಗಳಿರಲಿ, ಈ ಹಗರಣದ ತನಿಖೆ ನಡೆಸುತ್ತಿರುವ ಪೋಲೀಸರು ಮತ್ತು ವಿಚಾರಣೆ ನಡೆಸುತ್ತಿರುವ ನ್ಯಾಯಾಧೀಶರುಗಳಿಗೂ ಈ 'ಅಭಿವೃದ್ಧಿ ಕಾರ್ಯಕ್ರಮ'; ತನ್ನ ತಾಂತ್ರಿಕ ಜಟಿಲತೆಗಳು ಮತ್ತು ಅದು ಸೃಷ್ಟಿಸಿರುವ ಆಡಳಿತದ ಚಕ್ರವ್ಯೂಹದಿಂದಾಗಿ ಸುಲಭವಾಗಿ, ಸರಳವಾಗಿ ಮತ್ತು ನೇರವಾಗಿ ನಿರ್ವಹಿಸಲಾಗದ ವಿದ್ಯಮಾನವಾಗಿಬಿಟ್ಟಿದೆ! ಹಾಗಾಗಿಯೇ ಈ ವ್ಯವಹಾರದಲ್ಲಿ ಸರ್ಕಾರಕ್ಕೆ ಲಕ್ಷ ಕೋಟಿ ರೂಪಾಯಿಗಳ ನಷ್ಟ ಉಂಟಾಗಿದೆ ಎಂದು ಮಹಾಲೇಖಪಾಲರ ವರದಿ ಹೇಳುತ್ತಿದ್ದರೂ, ತಮ್ಮ ಉಭಯವಾದ ಪ್ರಾವೀಣ್ಯದಿಂದಾಗಿ

ಖ್ಯಾತ ವಕೀಲರೆನಿಸಿರುವ ಸಚಿವ ಕಪಿಲ್ ಸಿಬ್ಬಲ್ ಇದರಲ್ಲಿ ಒಂದು ಪೈಸೆಯೂ ನಷ್ಟವಾಗಿಲ್ಲ ಎಂದು ವಾದಿಸಬಲ್ಲ ಲೆಕ್ಕ ಹಾಕಿ ತೋರಿಸಲು ಸಾಧ್ಯವಾಗಿರುವುದು!

ಭ್ರಷ್ಟಾಚಾರವೆಂಬುದು ಆಡಳಿತ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಿಂದೆಯೂ ಇತ್ತು. ಆದರೆ ಅದು ಸಮಾಜದಿಂದ 'ಕೆಟ್ಟದು' ಎಂದೇ ಪರಿಗಣಿತವಾಗಿ, ನೈತಿಕವಾಗಿ ಮತ್ತು ಕಾನೂನಾತ್ಮಕವಾಗಿ ಎದುರಿಸಲು ಸಾಧ್ಯವೆನ್ನಿಸುವಷ್ಟರಮಟ್ಟಿಗೆ ಇತ್ತು. ಆದರೆ ಇಂದು ಅದು ಮನುಷ್ಯರನ್ನೇ ಇಡಿಯಾಗಿ ತಿಂದು ಹಾಕುವಷ್ಟು ಮತ್ತು ಆ ಮೂಲಕ ಎಲ್ಲ ಕಾನೂನುಗಳ ಹಿಂದಿರುವ ವೈಯುಕ್ತಿಕ ಮತ್ತು ಸಾಮಾಜಿಕ ನೀತಿ ಸಂಹಿತೆಯನ್ನೇ ಬುಡಮೇಲು ಮಾಡುವಷ್ಟು ಪ್ರಮಾಣದಲ್ಲಿ ಬೆಳೆದು ನಿಂತಿದೆ. ಇದರ ಹಿಂದಿರುವುದು ನಮ್ಮ 'ಅಭಿವೃದ್ಧಿ' ಕಲ್ಪನೆಯ ಸ್ವರೂಪ ಮತ್ತು ಉದ್ದೇಶಗಳನ್ನೇ ಪಲ್ಲಟಗೊಳಿಸಿರುವ ಮುಕ್ತ ಮಾರುಕಟ್ಟೆ ನೀತಿ ಆಧಾರಿತವಾದ ಜಾಗತೀಕರಣ ನೀತಿ. ಈ ಹೊಸ 'ಅಭಿವೃದ್ಧಿ' ಇದ್ದಕ್ಕಿದ್ದಂತೆ ಈ ದೇಶದ ಸಾಮೂಹಿಕವಾಗಿ ಜನತೆಯ ಮತ್ತು ವೈಯಕ್ತಿಕವಾಗಿ ಪ್ರತಿ ಭಾರತೀಯ ಪ್ರಜೆಯ 'ಸಾಂಸ್ಕೃತಿಕ ಅಸ್ಮಿತೆ'ಯ ಆಧಾರಗಳನ್ನೇ ಅಲುಗಾಡಿಸತೊಡಗುವಷ್ಟು ಅಪಾರ ಪ್ರಮಾಣದ ಹಣವನ್ನು ಈ ದೇಶದೊಳಕ್ಕೆ ಹರಿಸಿದೆ. ನವೋದಿತ ಭಾರತದ ಸಾಮಾನ್ಯ ಪ್ರಜೆಯ ನ್ಯಾಯಯುತ ಆಸೆ-ಆಕಾಂಕ್ಷೆಗಳು ಈಗ ಹೊಸ ಅಭಿವೃದ್ಧಿ ಮಾದರಿಯ ಪ್ರಭಾವದಲ್ಲಿ ನ್ಯಾಯಾನ್ಯಾಯದ ಪ್ರಶ್ನೆಯನ್ನೇ ಅಪ್ರಸ್ತುತಗೊಳಿಸಿ ಎಂದೂ ತೀರದ 'ದಾಹ'ವಾಗಿ ಮಾರ್ಪಟ್ಟು, ರಾಷ್ಟ್ರದ 'ಶೀಲ'ವನ್ನೇ ಪ್ರಶ್ನಾರ್ಹಗೊಳಿಸಿದೆ.

ಹಾಗಾಗಿಯೇ ಇಂದು ಭ್ರಷ್ಟಾಚಾರದ ವಿರುದ್ಧ ನೈತಿಕ ನೆಲೆಯ ಗೊಣಗಾಟಕ್ಕೆ ಮಾತ್ರ ಅವಕಾಶವಿದೆಯೇ ಹೊರತು, ಯಾರಾದರೂ ಈ ಸಂಬಂಧ ದೊಡ್ಡ ಧ್ವನಿ ಎತ್ತಿದೊಡನೆ ಅವರ ವಿಶ್ವಾಸಾರ್ಹತೆಯನ್ನೇ ಹಾಳು ಮಾಡುವ ಪ್ರಯತ್ನ ಮಾಡಲಾಗುವುದು ಅಥವಾ ಇತ್ತೀಚಿನ ಕೆಲವು ಮಾಹಿತಿ ಚಳುವಳಿಕಾರರ ಕೊಲೆಗಳು ಸಾಬೀತುಪಡಿಸುವಂತೆ ಅವರ ಹುಟ್ಟಡಗಿಸಲಾಗುವುದು. ಹಾಗೇ ಇಂದು ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಲು ಎಂತಹ ಪರಿಪೂರ್ಣ ಪರಿಶುದ್ಧತೆಯ ಮಾನದಂಡಗಳನ್ನು ಈ ಸಮಾಜ ನಿರ್ಮಾಣ ಮಾಡತೊಡಗಿದೆ ಎಂದರೆ ಮೊನ್ನೆ ನ್ಯಾ॥ ಶಿವರಾಜಪಾಟೀಲರು ತಮ್ಮ ಪತ್ನಿಯ ಒಂದು ಜುಜುಬಿ ನಿವೇಶನ ಖರೀದಿ ಸಂಬಂಧವಾಗಿ ಲೋಕಾಯುಕ್ತ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾದ ಸಂದರ್ಭವೇ ಸಾಕ್ಷಿ. ಕಾಸಿಗಾಗಿ ಸುದ್ದಿ ಮಾರಿಕೊಂಡ ಮಾಧ್ಯಮದವರೇ ಮತ್ತು ಅವರ ಹಿಂದಿನ ಉದ್ಯಮಪತಿಗಳೇ ಇಂದು ಭ್ರಷ್ಟಾಚಾರ ವಿರೋಧಿ ಆಂದೋಲನದ ಕಾರ್ಯಕರ್ತರೂ, ಪ್ರಾಯೋಜಕರೂ ಆಗಿಬಿಟ್ಟಿದ್ದಾರೆ!

ಇಂತಹ ಸಾಮಾಜಿಕ ವಿಕ್ಷಿಪ್ತತೆಯ ವಾತಾವರಣದಲ್ಲಿ ಸಹಜವಾಗಿಯೇ, ಕಳೆದ ಇಪ್ಪತ್ತು ವರ್ಷಗಳಲ್ಲಿ ದೇಶಾದ್ಯಂತ ನಡೆದಿರುವ ಲಕ್ಷಾಂತರ ಜನ ರೈತರ ಆತ್ಮಹತ್ಯೆಗೂ, ದಿನ ದಿನವೂ ಹೊಸ ರೂಪ ತಾಳುತ್ತಿರುವ ಹಿಂಸಾಚಾರಗಳಿಗೂ, ಹೊಸ ಹೊಸ ನೆಲೆಯ ಆತ್ಮಹತ್ಯೆಗಳಿಗೂ, ಪೋಲೀಸರ ಅಮಾನುಷವೆನ್ನಿಸುವ ಕಾರ್ಯಾಚರಣೆಯನ್ನೂ,

ಲೆಕ್ಕಿಸದೆ ಗ್ರಾಮೀಣ ಜನತೆ ದೇಶಾದ್ಯಂತ ನಡೆಸುತ್ತಿರುವ ಭೂಸ್ವಾಧೀನ ಮತ್ತು ಅಣುವಿದ್ಯುತ್ ವಿರೋಧಿ ಚಳುವಳಿಗಳಿಗೂ, ಹೊಸ ಅಭಿವೃದ್ಧಿ ರಾಜಕಾರಣಕ್ಕೂ ಏನಾದರೂ ಸಂಬಂಧವಿದೆಯೇ ಎಂಬುದರ ಪರಿಶೀಲನೆಯ ಗಂಭೀರ ಪ್ರಯತ್ನವೇ ಆರಂಭವಾಗಿಲ್ಲ. ಹಾಗಾಗಿಯೇ ನಾವು ಹಳೆಯ ಶೇರು ಹಗರಣ, ಬ್ಯಾಂಕ್ ಹಗರಣ, ಯು.ಟಿ.ಐ. ಹಗರಣಗಳನ್ನೆಲ್ಲ ಸುಲಭವಾಗಿ ಮರೆತು ಈಗ ೨ಜಿ ಹಗರಣ, ಕಾಮನ್‌ವೆಲ್ತ್ ಕ್ರೀಡಾ ಹಗರಣಗಳನ್ನು ಮಾಧ್ಯಮಗಳ ಮುಖೇನ ದಿನ ನಿತ್ಯದ ರೋಚಕ ಸುದ್ದಿಗಳಂತೆ ಚರ್ಚಿಸಿ ದಣಿದು ಹೊಸ ಹೊಸ ಮನರಂಜನಾ ಮತ್ತು ಹುಸಿ ಅಧ್ಯಾತ್ಮಿಕ ಕೇಂದ್ರಗಳತ್ತ ಧಾವಿಸುತ್ತಿದ್ದೇವೆಯೇ ಹೊರತು, ಇವೆಲ್ಲ ನಮ್ಮನ್ನು ಮನುಷ್ಯರಾಗಿ ಎಲ್ಲಿಗೆ ಕರೆದುತಂದು ನಿಲ್ಲಿಸಿವೆ ಎಂಬುದರ ಬಗೆಗಿನ ಆತ್ಮಶೋಧನೆಯನ್ನು ಆರಂಭಿಸಲಾಗಿಲ್ಲ.

ಇದು ಮೂಲತಃ, ಅದರ ಸ್ವಯಂಚಾಲನಾ ಗುಣದಿಂದಾಗಿಯೇ, ಹಿಂಸೆಯ ಅಭಿವೃದ್ಧಿ. ಇದು ಒಳಗಣ ಮತ್ತು ಹೊರಗಣ ಹಿಂಸೆ ಎರಡಕ್ಕೂ ಸಂಬಂಧಿಸಿದ್ದು ಎಂಬುದರ ಅರಿವೇ ನಮಗಾಗಿಲ್ಲ. ಹಾಗಾಗಿಯೇ ನಮ್ಮ ನವೋದಿತ ಮಧ್ಯಮ ವರ್ಗ ಮತ್ತು ಅದರ ಜೊತೆಗಾರನಾಗಿಬಿಟ್ಟಿರುವ ನಮ್ಮ ಬುದ್ಧಿಜೀವಿ ವರ್ಗ ಈ ಅಭಿವೃದ್ಧಿಯ ಎಲ್ಲ ಫಲಗಳನ್ನೂ ಮುಗುಮ್ಮಾಗಿ ಸ್ವೀಕರಿಸಿ ಸವಿಯುತ್ತಿರುವಾಗಲೇ ಅದರ ವಿರುದ್ಧ ಗುಟುರು ಹಾಕುವ ಆತ್ಮದ್ರೋಹಿತನವನ್ನೂ ಪ್ರದರ್ಶಿಸುತ್ತಿದೆ. ಹಲವು ಬಾರಿ ಈ ಗುಟುರುಗಳು ಈ ಅಭಿವೃದ್ಧಿ ಫಲಗಳ ಅಜೀರ್ಣದಿಂದ ಉಂಟಾದ ಕಮರು ತೇಗುಗಳಂತೆಯೂ ಕೇಳಿಸುವುದುಂಟು!

<u>ದಾಖಲೆ</u>

ಸಮಾಜವಾದಿಗಳೊಡನೆ ಮಹಾತ್ಮ ಗಾಂಧಿಯವರ ಮಾತುಕತೆ

(ಭಾಗ-೧)

ಕಾಂಗ್ರೆಸ್ ನಾಯಕರು ರಾಷ್ಟ್ರ ವಿಭಜನೆಗೆ ಒಪ್ಪಿಗೆ ನೀಡಲು ಸಿದ್ಧರಾಗಿದ್ದಾರೆ ಎಂದು ಅರಿವಾದೊಡನೆ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಅಶೋಕ ಮೆಹ್ತಾ , ಅರುಣಾ ಅಸಿಫ್ ಆಲಿ, ಅಚ್ಯುತ ಪಟವರ್ಧನ್, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದ ಸುಮಾರು ಹನ್ನೆರಡು ಮಂದಿ ಗಂಡು-ಹೆಣ್ಣು ಸಹ ವರ್ತಿಗಳಿಂದೊಡಗೂಡಿದ ತಂಡವೊಂದು ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಗಾಂಧೀಜಿಯನ್ನು ಭೇಟಿ ಮಾಡಿ ಕಾಂಗ್ರೆಸ್ ಪಕ್ಷದ ನಾಯಕತ್ವದ ನಿಲುವಿನ ಬಗ್ಗೆ ತನ್ನ ಆತಂಕವನ್ನು ವ್ಯಕ್ತಪಡಿಸಿತು. ಅಲ್ಲದೆ ಕಾಂಗ್ರೆಸ್ ಸಹವಾಸ ತೊರೆದು, ತಮ್ಮ ಪಕ್ಷದ ನೇತೃತ್ವ ವಹಿಸುವಂತೆ ಗಾಂಧೀಜಿಯನ್ನು ಕೋರಿತು. ೧೯೪೭ರ ಮೇ ೨೭ರ ಮಧ್ಯಾಹ್ನ ೨ರಿಂದ ೪ ಘಂಟೆಯವರೆಗೆ ನಡೆದ ಈ ಮಾತುಕತೆಯಲ್ಲಿ ಗಾಂಧಿ ಆಡಿದ ಮಾತುಗಳು ಈ ಮೊದಲ ಭಾಗದಲ್ಲಿವೆ. ಮುಂದಿನ ಭಾಗದಲ್ಲಿ ಅವರು ಸಮಾಜವಾದಿಗಳ ಪ್ರಶ್ನೆಗಳಿಗೆ ನೀಡಿದ ಉತ್ತರಗಳನ್ನು ಪ್ರಕಟಿಸಲಾಗುವುದು.

ಇಲ್ಲಿನ ಗಾಂಧೀಜಿ ಮಾತುಗಳನ್ನು ಅಂದಿನ ರಾಜಕೀಯ ಸಂದರ್ಭದಲ್ಲಿಟ್ಟು ಮತ್ತು ಒಂದು ವರ್ಷದ ನಂತರದಲ್ಲೇ ಅಂದಿನ ಕಾಂಗ್ರೆಸ್ ಆಡಳಿತ ಕುರಿತಂತೆ ಲೋಹಿಯಾ ಅವರೊಂದಿಗೆ ಆಡಿದ ವಿಷಾದಪೂರ್ಣ ಮಾತುಗಳೊಂದಿಗೆ ಅರ್ಥಮಾಡಿಕೊಂಡರೆ ಇಂದಿನ ನಮಗೆ -ಸಮಾಜವಾದದಲ್ಲಿ ಇನ್ನೂ ನಂಬಿಕೆ ಇಟ್ಟವರಿಗೆ-

ಆಲೋಚನೆಯ ಹೊಸ ದಿಕ್ಕುಗಳು ತೆರೆದಾವು. ಜೊತೆಗೆ ಭಾರತದ ಸಮಾಜವಾದ ಗಾಂಧಿ ನಂತರದ ದಿನಗಳಲ್ಲಿ ದಾರಿ ತಪ್ಪಿದ್ದರೆ, ಅದಕ್ಕೆ ಕಾರಣಗಳೇನು ಎಂಬುದನ್ನು ಇಲ್ಲಿನ ಗಾಂಧೀಜಿಯ ಮಾತುಗಳಲ್ಲೇ ಗುರುತಿಸಬಹುದು.

ಈ ಮಾತುಕತೆಯನ್ನು ಗುಜರಾತಿಯಿಂದ ಇಂಗ್ಲಿಷಿಗೆ ತಂದವರು ಹಿರಿಯ ಸಮಾಜವಾದಿ ಕುರ್ಬಾನ್ ಅಲಿಯವರು. ಕೃಪೆ: 'ಜನತಾ' ಪತ್ರಿಕೆ –ಸಂ

ದೇಶವನ್ನು ಇಬ್ಭಾಗ ಮಾಡುವ ಯೋಚನೆಯೇ ದಿಗಿಲುಮೂಡಿಸುವಂತಹದ್ದು. ಏನಾದರೂ ಮಾಡಿ ಶಾಂತಿಯ ಮೂಲಕವೇ ವಿಭಜನೆಯನ್ನು ನಿಲ್ಲಿಸುವುದು ಮತ್ತು ಬ್ರಿಟಿಶರನ್ನು ಇಲ್ಲಿಂದ ಹೊರಗೋಡಿಸುವುದು ನಮ್ಮ ಉದ್ದೇಶವಾಗಿತ್ತು. ಒಂದು ಪಕ್ಷ ವಿಭಜನೆ ಆಗಿದ್ದೇ ಆದರೂ, ಅದು ಬ್ರಿಟಿಷರಿಂದ ಆಗುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಅಣ್ಣತಮ್ಮಂದಿರ ಜಗಳವನ್ನು ಬಗೆಹರಿಸಲು ಮೂರನೆಯವರೊಬ್ಬರು ಯಾಕೆ ಬರಬೇಕು? ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸಾಮರ್ಥ್ಯ ನಮಗೆ ಇಲ್ಲವೆ? ಅದಕ್ಕಾಗಿಯೇ ನಾನು ಪ್ರತಿಪಾದಿಸುತ್ತಿರುವ ಅಹಿಂಸೆ ಬಲಶಾಲಿಗಳ ಅಸ್ತ್ರವಲ್ಲ; ಅದು ಬೇರೆಯೇ ಆಗಿದೆ ಎಂದು ನನಗೆ ಅನಿಸುತ್ತದೆ. ಆದರೆ ದೇವರು ನನಗೆ ಕಣ್ಣು ತೆರೆಯುವಂತೆ ಮಾಡಿದ. ಅಣ್ಣತಮ್ಮಂದಿರ ನಡುವಿನ ಜಗಳವನ್ನು ಬಗೆಹರಿಸಲು ನಾವು ಬ್ರಿಟಿಷರನ್ನು ಮಧ್ಯವರ್ತಿಗಳಾಗಿ ಕರೆದರೆ ಅದು ನಮ್ಮ ಉಜ್ವಲ ಚರಿತ್ರೆಗೆ ಅಪಚಾರ ಮಾಡಿದ ಹಾಗೆ. ಆದ್ದರಿಂದಲೇ ನಾನು ಇಂದಿನ ಪ್ರಾರ್ಥನಾ ಸಭೆಯಲ್ಲಿ ಹೇಳಿದೆ: ನಾವು ಇನ್ನು ಮುಂದೆ ಅನ್ಯೋನ್ಯವಾಗಿ ಬಾಳಲು ಆಗದಿದ್ದರೆ ಪರಸ್ಪರ ಮಾತುಕತೆ–ಒಪ್ಪಂದಗಳ ಮೂಲಕ ಇದನ್ನು ಬಗೆಹರಿಸಿಕೊಳ್ಳಬೇಕೇ ಹೊರತು ಮೂರನೆಯವರ ಮಧ್ಯಸ್ತಿಕೆಯಿಂದಲ್ಲ. ಅದನ್ನೇ ನಾನು ಇಂದು ವೈಸರಾಯ್‌ರಿಗೆ ತಿಳಿಸುತ್ತೇನೆ.ಈ ವೈಸ್‌ರಾಯ್ ಸಹ ಬಹಳ ಬುದ್ಧಿವಂತ ವ್ಯಕ್ತಿ. ಆತ ಯಾರಿಗೂ ನೋವು ಉಂಟುಮಾಡದಿದ್ದರೂ, ತನ್ನ ಮಾತು ಮಾತ್ರ ತಪ್ಪದೇ ನಡೆಯುವ ಹಾಗೆ ನೋಡಿಕೊಳ್ಳಬಲ್ಲ ಚಾಣಾಕ್ಷ. ಇದು ನಮಗೆ ಇರುವ ನಿಜವಾದ ಸವಾಲು. ಇದೇ ಹೊತ್ತಿನಲ್ಲಿ ಲಾರ್ಡ್‌ಮೌಂಟ್‌ಬ್ಯಾಟನ್ ಅವರು ನಮ್ಮ ಧೈರ್ಯ–ಚಾಣಾಕ್ಷತನದ ಪ್ರಮಾಣವನ್ನೂ ಪರೀಕ್ಷೆಗೆ ಒಳಪಡಿಸುತ್ತಿದ್ದಾರೆ ಎಂಬುದು ನೆನಪಿರಲಿ! ಅದಕ್ಕಾಗಿಯೇ ಗೊತ್ತಿಲ್ಲದಿರುವ ಗೆಳೆಯನಿಗಿಂತ, ಗೊತ್ತಿರುವ ವೈರಿಯೇ ಲೇಸು ಎಂಬ ಗಾದೆ ಇಲ್ಲಿ ನೆನಪಾಗುತ್ತಿದೆ. ಲಾರ್ಡ್ ಲಿನ್‌ಲಿತ್‌ಗೋ ಅಥವಾ ಲಾರ್ಡ್ ವೇವೆಲ್ ಎಂಥವರು ಎಂದು ನಮಗೆ ಗೊತ್ತು. ಯಾಕೆಂದರೆ ಅವರ ರೀತಿನೀತಿಗಳೇನು ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ಸಮಾಜದ ಜನಜೀವನದಲ್ಲಿ ಸಮಾನತೆ ತರಬೇಕೆನ್ನುವ ನಿಮ್ಮ ಹಂಬಲ ನೋಡಿದರೆ ನನಗೆ ಸಂತೋಷವಾಗುತ್ತದೆ. ನನಗೆ ಬೇಕಾಗಿರುವುದೂ ಅದೇ. ಆದರೆ ಅದಕ್ಕಿಂತ ಮೊದಲು–ಏನು ಮಾಡಿದರೆ ಈ ದೇಶಕ್ಕೆ ಒಳ್ಳೆಯದಾಗಬಹುದು ಮತ್ತು ಇಲ್ಲಿಯ ಜನರನ್ನು ರಚನಾತ್ಮಕವಾದ ಕೆಲಸವೊಂದರಲ್ಲಿ ತೊಡಗಿಸಿಕೊಳ್ಳುವ ರೀತಿ ಯಾವುದು– ಎಂಬ ಬಗ್ಗೆ ಯೋಚಿಸಬೇಕಾಗಿದೆ. ನಮ್ಮ ಜನ ಕಳೆದ ೧೫೦ ವರ್ಷಗಳಿಂದ ಗುಲಾಮರಾಗಿ ಜೀವನ ನಡೆಸುತ್ತಿದ್ದಾರೆ. ಅವರಿಗೆ ಹೊಸದಾದ ಜೀವನ

ಕ್ರಮವೊಂದನ್ನು ಕಲಿಸಿಕೊಡಬೇಕಾಗಿದೆ. ಇದು ಸಾಧ್ಯವಾಗುವುದು ನಮ್ಮ ಬಳಿ ಅಧಿಕಾರವಿದ್ದಾಗ ಮಾತ್ರ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ನಮಗೆ ಅಧಿಕಾರದ ಹಸ್ತಾಂತರವಾದ ನಂತರ ನಮ್ಮ ಹಲವಾರು ಸಮಸ್ಯೆಗಳು ಇಲ್ಲವಾಗುತ್ತವೆ ಎಂಬ ಮಾತು ಬೇರೆ. ಆದರೆ ಅದಕ್ಕಿಂತ ಮುಂಚೆ ನಾವು ಜನರ ಮಧ್ಯೆ ಹೋಗಿ ಬಹಳ ಮುಖ್ಯವಾದ ಕೆಲಸಗಳನ್ನು ಮಾಡಬೇಕಾಗಿದೆ.

ನೀವು ನನ್ನನ್ನು ಒಬ್ಬ ಮಾರ್ಗದರ್ಶಕ ಎಂದು ಭಾವಿಸಿರುವುದರಿಂದ ಹಾಗೂ ಇಂಥ ವಿಷಯಗಳಲ್ಲಿ ನಾನು ನಿಮಗೆ ಧಾರಾಳವಾಗಿ ಸಲಹೆಕೊಡಬಹುದೆಂಬ ಸಲಿಗೆಯಿಂದ ಹೇಳುತ್ತಿದ್ದೇನೆ: ಸಮಾಜವಾದವನ್ನು ನೆಲೆಗೊಳಿಸಬೇಕೆಂಬುದೇ ನಿಮ್ಮ ಗುರಿಯಾದರೆ ಅದಕ್ಕಿರುವುದು ಒಂದೇ ದಾರಿ: ಹೋಗಿ ಹಳ್ಳಿಗಾಡಿನ ಬಡವರ ಜೊತೆ ಬದುಕುವುದು. ಅವರೊಳಗೆ ಒಂದಾಗಿ ದಿನಕ್ಕೆ ಎಂಟು ಗಂಟೆ ಹೊಲಗದ್ದೆಗಳಲ್ಲಿ ದುಡಿಯುತ್ತ, ಹಳ್ಳಿಯಲ್ಲಿ ಸಿಗುವ ವಸ್ತುಗಳನ್ನೇ ದಿನನಿತ್ಯದ ಜೀವನದಲ್ಲಿ ಬಳಸುತ್ತ, ಅಲ್ಲಿರುವ ಅನಕ್ಷರತೆ, ಅಸ್ಪೃಶ್ಯತೆಯನ್ನು ನಿವಾರಿಸಲು ಪ್ರಯತ್ನಮಾಡುತ್ತ, ಅಲ್ಲಿನ ಹೆಣ್ಣುಮಕ್ಕಳ ಸಮಾನತೆಗಾಗಿ ಹೋರಾಡುತ್ತ, ಅವರ ಹಾಗೆಯೇ ಇದ್ದುಬಿಡುವುದು. ಅವರೊಂದಿಗೆ ನಮ್ಮ ಸಂಬಂಧ ಎಷ್ಟು ಆಳವಾಗಿ ನೆಲೆಯೂರಬೇಕೆಂದರೆ: ನಿಮ್ಮಲ್ಲಿ ಯಾರಾದರೂ ಮದುವೆಯಾಗದವರಿದ್ದರೆ ಅವರು ಮದುವೆಯಾಗುವ ಹೊತ್ತಿನಲ್ಲಿ ಆ ಹಳ್ಳಿಗಾಡಿನ ಹುಡುಗನೋ ಹುಡುಗಿಯನ್ನೋ ಮದುವೆಯಾಗಬೇಕು. ನಿಮ್ಮನ್ನು ಯಾರಾದರೂ ಇಂಥ ವಿಷಯಗಳ ಬಗ್ಗೆ ಸಲಹೆ ಕೇಳಿದರೆ ಅವರಿಗೂ ಇದೇ ಮಾತನ್ನು ನೀವು ಹೇಳಬೇಕು. ನಿಮ್ಮ ಜೀವನವನ್ನೇ ಬೇರೆಯವರ ಪಾಲಿಗೆ ಒಂದು ಆದರ್ಶದಂತೆ ರೂಪಿಸಬೇಕು. ನಿಮ್ಮ ಜೀವನದ ಎಲ್ಲ ನಡೆನುಡಿಗಳು ಪಾರದರ್ಶಕವಾಗಿದ್ದಾಗ ಮಾತ್ರ ಅದರ ಪ್ರಭಾವ ನೀವು ವಾಸಿಸುವ ದೇಶದ ಜನಜೀವನದ ಮೇಲೆ ಉಂಟಾಗಿ ಅದರಿಂದ ಹೊಸದೊಂದು ಚೇತನ ಜಾಗೃತವಾಗಬಹುದು.

ಬಹಳ ಬೇಗ ಕಾಂಗ್ರೆಸ್ಸಿನ ಕೈಗೆ ಅಧಿಕಾರ ದೊರಕಬಹುದು. ಆದರೆ ಕಾಂಗ್ರೆಸ್ ಎಂಬುದು ಅಂತಿಮವಾಗಿ ಯಾವುದೋ ಒಂದು ಪಕ್ಷಕ್ಕೆ, ಒಂದು ವಿಚಾರಧಾರೆಗೆ ಸೀಮಿತವಾದದ್ದೇನಲ್ಲ. ಎಲ್ಲ ಬಗೆಯ ಅಭಿಪ್ರಾಯ–ಮತಭೇದಗಳನ್ನು ಒಳಗೊಳ್ಳಬೇಕೆನ್ನುವುದು ಅದರ ತತ್ವವಾಗಿದೆ. ಆದರೆ, ಆಗಿಂದಾಗ್ಗೆ ಅದನ್ನು ಜಾರಿಗೊಳಿಸುವಾಗ ಆ ತತ್ವಕ್ಕೆ ಭಂಗಬಂದಿದೆ ಎಂಬುದೂ ನಿಜ. ಆದರೆ ನಾನು ನಿಮಗೆ ಈ ಬಗ್ಗೆ ಕೊಡುವ ಭರವಸೆಯೇನೆಂದರೆ– ನಿಮ್ಮ ಕಾರ್ಯಕರ್ತರು ಹಳ್ಳಿಗಳ ಉದ್ಧಾರಕ್ಕಾಗಿ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದು ಅದನ್ನು ನೆರವೇರಿಸಲಾಗದೆ ಅದು ಬರೀ ಕಾಗದದ ಮೇಲೆ ಉಳಿಯುವಂತಾಗಿದ್ದರೆ, ಆಗ ಅಧಿಕಾರದಲ್ಲಿರುವ ಕಾಂಗ್ರೆಸ್ ನಾಯಕರು ಆ ಕೆಲಸವನ್ನು ನೆರವೇರಿಸಲು ಖಂಡಿತಾ ಸಹಾಯ ಮಾಡಬಲ್ಲರು. ಜವಾಹರಲಾಲ್ ನೆಹರೂರವರು ಇದಕ್ಕಾಗಿ ನಿಮ್ಮನ್ನು ಮನಸಾರೆ ಅಭಿನಂದಿಸುವರು. ಇಂಥ ಕೆಲಸವನ್ನು ಮಾಡುವ ಪ್ರಯತ್ನ ಮಾಡದೆ, ನೀವು ಜನರನ್ನು ಕೆರಳಿಸುವ ಹಾಗೆ

ಅವರು ಮುಷ್ಕರಕ್ಕೆ ಬರುವ ಹಾಗೆ ಪ್ರಚೋದಿಸುವುದನ್ನು ನೋಡಿ ನನಗೆ ನೋವಾಗಿದೆ. ಇದರ ನಡುವೆಯೇ ಕೋಮುವಾದಿ ಹಿಂಸೆಯ ಘಟನೆಗಳು ಸಹ ನಡೆಯುತ್ತಿವೆ.

ನೀವೆಲ್ಲರೂ ವಿದ್ಯೆ ಬುದ್ಧಿ ಇರುವ ಪ್ರಜ್ಞಾವಂತರು. ನೀವು ಮಾಡುತ್ತಿರುವ ಕೆಲಸದಿಂದ ಯಾರಿಗೆ ಹಾನಿಯಾಗುತ್ತಿದೆ ಎಂಬುದು ಯಾಕೆ ನಿಮ್ಮ ಅರಿವಿಗೆ ಬರುತ್ತಿಲ್ಲ? ಇಂಥ ಹೋರಾಟ ಬ್ರಿಟಿಷರ ವಿರುದ್ಧ ಮಾಡುವುದಾದರೆ ಅದು ಸರಿ. ಯಾಕೆಂದರೆ ಅವರು ಹೋಗುವುದು ನಮಗೆ ಬೇಕಾಗಿತ್ತು. ಆದರೆ ನೀವು ಈಗ ಯಾರನ್ನು ಹೊರಗೋಡಿಸಬೇಕೆಂದು ಯೋಚಿಸುತ್ತಿದ್ದೀರಿ? ನಿಮ್ಮ ದೇಶದವರ ವಿರುದ್ಧವೇ ಹೋರಾಡಿ ನೀವು ಏನನ್ನು ಸಾಧಿಸಬಲ್ಲಿರಿ? ನೀವೆಲ್ಲ ಉದಾರ ಮನಸ್ಸಿನವರಾಗಿ ದೇಶದ ಏಳಿಗೆಗಾಗಿ ನಿಮ್ಮ ಸಹಕಾರ ನೀಡುವ ಸಮಯ ಬಂದಿದೆ. ಅಧಿಕಾರದಲ್ಲಿರುವವರು ತಪ್ಪು ಮಾಡಿದರೆ ಅದನ್ನು ನಿಮ್ಮ ರಚನಾತ್ಮಕ ಕೆಲಸದ ಮೂಲಕ ತೋರಿಸಿ; ಬರೀ ಭಾಷಣ, ವಿಮರ್ಶೆ, ಮುಷ್ಕರಗಳಿಂದಲ್ಲ. ಹಳ್ಳಿಯ ಜನರಿಗೆ ನಿಮ್ಮ ಜ್ಞಾನ, ಕೌಶಲ್ಯ, ಒಳನೋಟ, ಚಿಂತನೆ, ರಚನಾತ್ಮಕ ತಿಳುವಳಿಕೆ ಮತ್ತು ದೇಶಭಕ್ತಿಯ ಪ್ರಯೋಜನ ಮಾಡಿಕೊಡಿ. ಜನರಿಗೆ ನಿಮ್ಮ ಬದುಕನ್ನೇ ಉದಾಹರಣೆಯನ್ನಾಗಿಸಿ ಅದರ ಮೂಲಕ ನಿಜವಾದ ಶಿಕ್ಷಣ ನೀಡಿ. ನಿಮ್ಮ ಎಲ್ಲ ಕೆಲಸಗಳು ಇಂಥ ಜನರ ಏಳಿಗೆಗೆ ಮೀಸಲಾಗಿರಲಿ.

ಇದನ್ನು ಮಾಡಲಾಗದಿದ್ದರೆ, ಜನರು ತಾಳ್ಮೆ ಕಳೆದುಕೊಂಡರೆ ನಮ್ಮ ಸ್ಥಿತಿ ಈಗಿರುವ ಗುಲಾಗಿರಿಯ ಅವಸ್ಥೆಗಿಂತ ಅನಾಹುತಕಾರಿಯಾಗಿರುತ್ತದೆ. ಜನ ವಿನಾಶಕಾರಿ ಮಾರ್ಗದತ್ತ ಹೋಗದೆ ಇರುವ ಹಾಗೆ ಮಾಡಬೇಕೆಂದರೆ, ಅವರಿಗಾಗಿ ನಾವು ರಚನಾತ್ಮಕವಾದ, ಬದುಕಿಗೆ ಹತ್ತಿರವಾದ ದಾರಿಯೊಂದನ್ನು ತೋರಿಸಬೇಕು. ಈ ಸಲಹೆಯನ್ನು ನಾನು ನಿಮಗೆ ಮಾತ್ರ ನೀಡುತ್ತಿಲ್ಲ. ಇದನ್ನೆಲ್ಲ ನಾನು ನಿಮಗೆ ಯಾಕೆ ವಿವರವಾಗಿ ಹೇಳುತ್ತಿದ್ದೇನೆಂದರೆ ನೀವು ನನ್ನ ಸಲಹೆಗಳನ್ನು ಕೇಳಲಿಕ್ಕಾಗಿಯೇ ಬಂದಿದ್ದೀರಿ. ಇಲ್ಲ ನಾನು ಹೇಳಿರುವುದು ಕಾಂಗ್ರೆಸ್ಸಿಗರಿಗೂ ಅನ್ವಯವಾಗುತ್ತದೆ ಎಂಬುದನ್ನು ಮತ್ತೊಮ್ಮೆ ಹೇಳಬೇಕಾಗಿಲ್ಲ. ಆದ್ದರಿಂದ ಎಲ್ಲ ಸಾಮಾಜಿಕ ಕಾರ್ಯಕರ್ತರು, ಸರ್ಕಾರಿ ಅಧಿಕಾರಿಗಳು ತಮ್ಮ ಜಗಳ, ಸೈದ್ಧಾಂತಿಕ ಮತಭೇದಗಳನ್ನು ಮರೆತು ನೂಲುವುದರಲ್ಲಿ, ಖಾದಿ ನೇಯುವುದರಲ್ಲಿ ಮತ್ತು ಗ್ರಾಮಕೈಗಾರಿಕೆಗಳಲ್ಲಿ ತೊಡಗಿಕೊಳ್ಳಬೇಕು. ಬ್ರಿಟಿಷರು ಇಲ್ಲಿಂದ ಹೋಗಿ, ಇಲ್ಲಿನ ಜನರಿಗೆ ನಾನು ಇಲ್ಲಿಯವರೆಗೆ ಹೇಳಿದ ಮಾದರಿಯ ಶಿಕ್ಷಣ ದೊರೆಯುವುದಾದರೆ, ಇನ್ನು ಐದು ವರ್ಷಗಳಲ್ಲಿ ಭಾರತವು ಏಶ್ಯಾದ ಬೇರೆಲ್ಲ ದೇಶಗಳ ಹೋಲಿಕೆಯಲ್ಲಿ ಮಂಚೂಣಿಯಲ್ಲಿ ನಿಂತಿರುತ್ತದೆ ಎಂಬ ಬಗ್ಗೆ ನನಗೇನೂ ಅನುಮಾನವಿಲ್ಲ.

(ಆಕರ: **ದಿ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮಾ ಗಾಂಧಿ**)

(ಇಂಗ್ಲಿಷ್‌ನಿಂದ ಕನ್ನಡಕ್ಕೆ: **ಎಸ್. ಸಿರಾಜ್ ಅಹಮದ್**)

ನವೆಂಬರ್, ೨೦೧೧

ಉಳ್ಳವರ ಪ್ರಜಾಪ್ರಭುತ್ವದತ್ತ...

ಪ್ರಿಯ ಓದುಗರೇ,

ಅಂತೂ ಯಡಿಯೂರಪ್ಪ ಜೈಲು ಸೇರಿದ್ದಾರೆ. ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿರಲೂಬಹುದು. ಆದರೆ ಕರ್ನಾಟಕದಲ್ಲಿ ಮುಖ್ಯಮಂತ್ರಿಯೊಬ್ಬರು ಸ್ವಲಾಭಕ್ಕಾಗಿ ಅಧಿಕಾರ ದುರುಪಯೋಗ ಮತ್ತು ಸ್ವಜನ ಪಕ್ಷಪಾತಗಳ ಪ್ರಬಲ ಆರೋಪಗಳನ್ನು ಹೊತ್ತು ಜೈಲು ಅನುಭವಿಸಬೇಕಾದ ದಾಖಲೆಯನ್ನು ನಿರ್ಮಿಸಿರುವುದು, ತಾನು ಇತರ ಪಕ್ಷಗಳಿಗಿಂತ ಭಿನ್ನ ಎಂದು ಹೇಳಿ ಜನತೆಯನ್ನು ನಂಬಿಸಿದ ಪಕ್ಷವೊಂದರ ನಾಯಕ ಎನ್ನುವುವದು ಇಂದಿನ ರಾಜಕಾರಣದ ದೊಡ್ಡ ವ್ಯಂಗ್ಯವೇ ಆಗಿದೆ. ಹಾಗೇ, ದಿನ ಬೆಳಗಾದರೆ ಕಂಡ ಕಂಡ ದೇವರುಗಳಿಗೆ ಕೈಮುಗಿದು, ಕಂಡ ಕಂಡ ಧರ್ಮಗುರುಗಳ ಕಾಲಿಗೆರಗಿ ಅವರ ಪಾಲಿಗೆ ಕೊಡುಗೈ ದಾನಿಯೆನಿಸಿದ್ದ ಈ ನಾಯಕ ಜೈಲು ಕಾಣಬೇಕಾದ ಪ್ರಸಂಗ ಇಂದಿನ ರಾಜಕಾರಣ ದೇವರು-ಧರ್ಮಗಳನ್ನೂ ಹೇಗೆ ನುಂಗಿ ನೊಣೆಯಲು ಸಿದ್ಧವಾಗಿದೆ ಎಂಬುದರ ಸ್ಪಷ್ಟ ಸೂಚನೆಯೂ ಆಗಿದೆ.

ಯಡಿಯೂರಪ್ಪನವರ ಮೇಲಿನ ಆರೋಪಗಳು ಇನ್ನೂ ಸಾಬೀತಾಗಿಲ್ಲ ಎಂದು ಅವರ ಬೆಂಬಲಿಗರು ಹೇಳುತ್ತಿದ್ದಾರೆ. ಆದರೆ, ಮಾದರಿಗಾಗಿ, ಶಿವಮೊಗ್ಗ ಮತ್ತು ಶಿಕಾರಿಪುರಗಳಿಗೆ ಭೇಟಿ ನೀಡಿ ಅವರ ಕುಟುಂಬದವರು ಕಳೆದ ಮೂರು ವರ್ಷಗಳಲ್ಲಿ ಬೇರೆ ಬೇರೆ ಉದ್ದೇಶಗಳಿಗಾಗಿ ಎಕರೆಗಟ್ಟಲೆ ಪ್ರದೇಶದಲ್ಲಿ ನಿರ್ಮಿಸಿರುವ ಮತ್ತು ನಿರ್ಮಿಸುತ್ತಿರುವ ಭವ್ಯ ಕಟ್ಟಡಗಳ ಗಾತ್ರ, ವೈಭವಗಳನ್ನು ನೋಡಿದರೇ ಅವರ ಮೇಲಿನ ಆರೋಪಗಳು ಸಾಮಾನ್ಯ ನೋಟಕ್ಕೇ ಸಾಬೀತಾಗುವಷ್ಟು ಕಣ್ಣು ಕುಕ್ಕುವಂತಿವೆ ಎಂಬುದು ಗೊತ್ತಾಗುತ್ತದೆ. ಈಗ ಯಡಿಯೂರಪ್ಪನವರೊಂದಿಗೆ ವಿಚಾರಣೆ ಎದುರಿಸುತ್ತಿರುವ

ಅವರ ಮಗ ರಾಘವೇಂದ್ರ ಹಿಂದೊಮ್ಮೆ ಈ ಬಗ್ಗೆ ಮಾತನಾಡುತ್ತಾ, 'ನಾವೇನೂ ಸನ್ಯಾಸಿಗಳಲ್ಲ. ನಾವು ಬ್ಯುಸಿನೆಸ್ ಮಾಡುತ್ತೇವೆ' ಎಂದು ಹೇಳಿದ್ದರು. ಈಗ 'ಬ್ಯುಸಿನೆಸ್' ಎಂದರೆ ಏನು? ದಗಾಖೋರತನವೇ, ಜನತೆ ಇಟ್ಟ ನಂಬಿಕೆಗೆ ಮಾಡಲಾಗುವ ಮಹಾ ದ್ರೋಹವೇ?' ಎಂದು ಅವರನ್ನು ಕೇಳುವಂತಾಗಿದೆ. ಯಡಿಯೂರಪ್ಪನವರಿಗಿಂತ ಮುಂಚೆ, ಅವರ ಜೊತೆಯಲ್ಲಿ ಜೈಲು ಸೇರಿದ ಮತ್ತು ಈಗ ಜೈಲು ಸೇರುವ ಸರತಿ ಸಾಲಿನಲ್ಲಿರುವ ರಾಜಕಾರಣಿಗಳ ಚಹರೆ ನೋಡಿದರೇ, ರಾಜಕಾರಣವೆಂಬುದು ಹೇಗೆ ಇಂದು ಕೇವಲ ಇಂತಹ 'ಬ್ಯುಸಿನೆಸ್' ವ್ಯವಹಾರಗಳ ಮುಖವಾಡವಾಗಿ ಹೋಗಿದೆ ಎಂಬುದರ ಸ್ಪಷ್ಟ ಸೂಚನೆ ಸಿಗುತ್ತದೆ. ಹಾಗಾಗಿಯೇ ಕಣ್ಣಿಗೆ ಕಾಣುವ ರಾಜಕಾರಣದಲ್ಲಿ ಇವರ ಸಂಬಂಧಗಳು ಹೇಗೇ ಇರಲಿ, ಕಣ್ಣಿಗೆ ಕಾಣದ ಬ್ಯುಸಿನೆಸ್ ವಿಷಯದಲ್ಲಿ ಇವರೆಲ್ಲ ಆಪ್ತ ಮಿತ್ರರೇ ಆಗಿದ್ದಾರೆ. ಉದಾಹರಣೆಗೆ ಗಣಿ ವ್ಯವಹಾರದಲ್ಲಿ ಆರೋಪಿಯಾಗಿರುವ ಧರ್ಮಸಿಂಗ್ ಅವರನ್ನು ಇಡೀ ವ್ಯವಸ್ಥೆ ಒಂದಾಗಿ ರಕ್ಷಿಸುತ್ತಿರುವ ವೈಖರಿ ನೋಡಿರಿ. ಬಿಜೆಪಿ ವಿರುದ್ಧ ಗಂಟಲು ಹರಿಯುವಂತೆ ಅಬ್ಬರಿಸುವ ಕಾಂಗ್ರೆಸ್ ನಾಯಕರು ಈ ಬಗ್ಗೆಯಾಗಲೀ, ಇನ್ನೋರ್ವ ಗಣಿ ಅಕ್ರಮಗಳ ಆರೋಪಿ ಅನಿಲ್ ಲಾಡ್ ಬಗ್ಗೆಯಾಗಲೀ ಮುಗುಮ್ಮಾಗಿರುವ ಮರ್ಮವನ್ನರಿಯಿರಿ.

ಯಡಿಯೂರಪ್ಪನವರೆಂದರೆ ಆಜನ್ಮ ಶತ್ರುವೆಂಬಂತೆ ಉರಿದುಬಿದ್ದು ಅವರ ವಿರುದ್ಧ ದಾಖಲೆಗಳ ಸರಮಾಲೆಯನ್ನೇ ಬಿಡುಗಡೆ ಮಾಡಿದ ಕುಮಾರಸ್ವಾಮಿಯವರು ಈಗ ಅವರ ಬಗ್ಗೆ ವ್ಯಕ್ತಪಡಿಸುತ್ತಿರುವ ಸಹಾನುಭೂತಿಯ ವೈಖರಿಯನ್ನು ಗಮನಿಸಿರಿ! ಹಾಗೇ ಈಗ ಇವರು ಮಾಜಿ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ವಿರುದ್ಧ ದಾಖಲೆ ಬಿಡುಗಡೆ ಮಾಡುವುದಾಗಿ ಹೆದರಿಸುತ್ತಿರುವ ಪರಿ ನೋಡಿರಿ! ಇನ್ನು ನ್ಯಾಯಾಂಗದ ಮುಂದೆ ತನಿಖೆಗೆ ಬಂದಿರುವ ಪ್ರಕರಣಗಳನ್ನು ರಾಜಕೀಯ ಪಿತೂರಿಯೆಂದು ಬಣ್ಣಿಸುತ್ತಿರುವ ರಾಜಕಾರಣಿಗಳ ದಂಡಿನ ಹುನ್ನಾರವೇನೆಂದು ಅರಿಯಿರಿ!

ಇವರೆಲ್ಲರ ವಕ್ತಾರ ರೇಣುಕಾಚಾರ್ಯ ಎಂಬ ಅನುಮಾನಾಸ್ಪದ ಆಸಾಮಿ ಎಂಬುದೇ ಇಂದು ಯಡಿಯೂರಪ್ಪ ಪ್ರತಿನಿಧಿಸುತ್ತಿರುವ ರಾಜಕಾರಣದ ಮಟ್ಟ ಯಾವುದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಹುನ್ನಾರ ಯಡಿಯೂರಪ್ಪನವರ ಭ್ರಷ್ಟಾಚಾರಕ್ಕಿಂತ ಹೆಚ್ಚು ಅಪಾಯಕಾರಿ ಎಂಬುದನ್ನು ನಾವು ಅರಿಯಬೇಕಿದೆ. ಈಶ್ವರಪ್ಪನವರ ಪ್ರಕಾರ ದ್ವಿಪತ್ನಿತ್ವ ಅಂತಹ ಅಪರಾಧವೇನಲ್ಲವಂತೆ! ಅಂತಹ ಎಂದರೆ ಎಂತಹ ಎಂಬುದನ್ನು ಮಾತ್ರ ಅವರು ಹೇಳಿಲ್ಲ! ಅವರ ಪ್ರಕಾರ ಇದು 'ಅಂತಹ' ಅಪರಾಧವೇನಲ್ಲದಿರಬಹುದು. ಆದರೆ ಈ ಮೂಲಕ ತಾವು ಸಾರ್ವಜನಿಕ ಜೀವನದ ಪರಿಶುದ್ಧತೆಯ ದೃಷ್ಟಿಯಿಂದ ರೂಪಿಸಲಾಗಿರುವ ಕಾನೂನಿನ ಪಾವಿತ್ರ್ಯವನ್ನೇ ಜನರ ಕಣ್ಣಲ್ಲಿ ಅನುಮಾನಾಸ್ಪದಗೊಳಿಸುತ್ತಿದ್ದೇನೆ ಎಂಬ ಅರಿವನ್ನೇ ಅವರು–ಅದೂ ಭಾರತೀಯ ಕುಟುಂಬ ವ್ಯವಸ್ಥೆಯ ಪಾವಿತ್ರ್ಯವನ್ನು

ಆರಾಧಿಸುವುದಾಗಿ ಹೇಳಿಕೊಳ್ಳುವ ಪಕ್ಷವೊಂದರ ಅಧ್ಯಕ್ಷರು–ಕಳೆದುಕೊಂಡಿರುವುದಾದರೂ ಏಕೆ? ಈ ಎಲ್ಲರ ಉದ್ದೇಶ ಒಂದೇ: ಜನತೆಯ ಪರವಾಗಿ ತಮ್ಮ ವಿರುದ್ಧ ಸಕ್ರಿಯವಾಗಿರುವ ನ್ಯಾಯಾಂಗದ ವಿಶ್ವಾಸಾರ್ಹತೆಯನ್ನೇ, ಅದರ ಬಗೆಗಿನ ಗೌರವವನ್ನೇ ನಿಧಾನವಾಗಿ ನಾಶ ಮಾಡುವುದು. ಆನಂತರ ಇವರನ್ನು ಕೇಳುವವರೇ ಯಾರೂ ಇಲ್ಲವಾಗಿ, ಪ್ರಜಾಪ್ರಭುತ್ವವೆಂಬುದು ಮುಂಡಾಮೋಚಿಕೊಂಡು ಹೋಗಿರುತ್ತದೆ.

ಬಹುಶಃ ಇವರ ಗುರಿ ಅದೇ ಆಗಿರಬಹುದು. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಎಲ್ಲ ಸಮಾಜ ವಿರೋಧಿ ಶಕ್ತಿಗಳ ಪರವಾಗಿ ಹಡಬೆ ಹಣದ ಹೊಳೆಯನ್ನೇ ಹರಿಸುತ್ತಿರುವ ಮುಕ್ತ ಮಾರುಕಟ್ಟೆ ಆರ್ಥಿಕತೆ ಆಧಾರಿತ ಪ್ರಜಾಪ್ರಭುತ್ವದ ಗುರಿಯೂ ಇದೇ ಆಗಿರಬಹುದು: ಉಳ್ಳವರ 'ಪ್ರಜಾಪ್ರಭುತ್ವ' ಸ್ಥಾಪಿಸುವುದು! ಕೇಂದ್ರ ಮಟ್ಟದಲ್ಲಿ ನಡೆದಿರುವ ಹಗರಣಗಳು, ಆ ಸಂಬಂಧ ಜೈಲು ಸೇರಿರುವ ಉನ್ನತ ಮಟ್ಟದ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಪರವಾಗಿ ಮಂಡಿಸಲಾಗುತ್ತಿರುವ ವಾದಗಳನ್ನು ಮತ್ತು ಆ ಬಗ್ಗೆ ಕೇಂದ್ರ ಸರ್ಕಾರ ತಳೆಯುತ್ತಿರುವ ನಿಲುವುಗಳನ್ನು ನೋಡಿದರೆ ಈ ಆತಂಕ ಇನ್ನಷ್ಟು ಹೆಚ್ಚಾಗುತ್ತದೆ. ಅಣ್ಣಾ ಹಜಾರೆ ತಂಡದ ಸದಸ್ಯರ ವಿರುದ್ಧ ಅರಂಭಿಸಿರುವ ಪ್ರತ್ಯಕ್ಷ ದೈಹಿಕ ದಾಳಿ ಮತ್ತು ಪರೋಕ್ಷ ಮಾನಸಿಕ ದಾಳಿಯಾದರೂ ಏನನ್ನು ಸೂಚಿಸುತ್ತದೆ? ಯಾರಾದರೂ ನನ್ನ ಸುದ್ದಿಗೆ ಬಂದೀರಿ ಎಚ್ಚರಿಕೆ! ಎಂದು ವ್ಯವಸ್ಥೆ ಹೇಳುತ್ತಿದೆ!!

ಇದು ಪ್ರಜಾಪ್ರಭುತ್ವದ ಅಗ್ನಿಪರೀಕ್ಷೆಯ ಕಾಲ. ಇರಾಕ್‌ನಿಂದ ಹಿಡಿದು ಈಜಿಪ್ಟ್, ಟುನೀಸಿಯಾ, ಈಗ ಲಿಬ್ಯಾದವರೆಗೆ ಅನೇಕ ಮುಸ್ಲಿಂ ರಾಷ್ಟ್ರಗಳಲ್ಲಿನ ಸರ್ವಾಧಿಕಾರಿ ವ್ಯವಸ್ಥೆಗಳ ವಿರುದ್ಧ ಅಮೆರಿಕಾದ ಪ್ರಾಯೋಜಕತ್ವದಲ್ಲಿ ಯಶಸ್ವಿಯಾಗಿ ನಡೆದಿರುವ ಪ್ರಜಾಪ್ರಭುತ್ವ ಚಳುವಳಿ, ಈಗ ಅಮೆರಿಕಾದಲ್ಲೇ ಹೊಸ ಅರಿವನ್ನು ಪಡೆದಂತೆ, ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯ ವಿರುದ್ಧ ಸಮರವನ್ನೇ ಸಾರಿದೆ! ಮುಕ್ತ ಮಾರುಕಟ್ಟೆ ನೀತಿಯ ಹೆಸರಿನಲ್ಲಿ ತಮ್ಮ ದೇಶದ ಬ್ಯಾಂಕುಗಳು ಮತ್ತು ಇತರೆ ಹಣಕಾಸು ಸಂಸ್ಥೆಗಳು ನಡೆಸಿದ ಹಗಲು ದರೋಡೆ ತಮ್ಮ ಪಾಲಿನ ಬದುಕನ್ನು ಈಗ ಹೇಗೆ ದುಸ್ತರಗೊಳಿಸಿವೆ ಎಂಬುದನ್ನು ಕೊನೆಗೂ ಮನವರಿಕೆ ಮಾಡಿಕೊಂಡಿರುವ ಅಮೆರಿಕಾದ ಜನತೆ ಈ ಬ್ಯಾಂಕುಗಳು ಮತ್ತು ಸಂಸ್ಥೆಗಳಿರುವ ವಾಲ್ ಸ್ಟ್ರೀಟ್‌ಗೆ ಮುತ್ತಿಗೆ ಹಾಕಿದೆ. ಕಪಟಾಚಾರಕ್ಕೆ ಇನ್ನೊಂದು ಹೆಸರಿನಂತಾಗಿಬಿಟ್ಟಿರುವ ಬಂಡವಾಳಶಾಹಿಗೆ ಪರ್ಯಾಯವಿದೆ ಎಂದು ಅದು ಹೇಳತೊಡಗಿದೆ. ಹೊಸ ನೈತಿಕತೆಯ ಮಾತನಾಡತೊಡಗಿದೆ. ಅಮೆರಿಕಾದಂತೆಯೇ ಆರ್ಥಿಕ ಹಿಂಜರಿತದಿಂದ ತತ್ತರಿಸಿರುವ ಯೂರೋಪ್ ಕೂಡಾ ಈಗ ಈ ಚಳುವಳಿಯತ್ತ ಕಣ್ಣರಳಿಸಿ ನೋಡತೊಡಗಿದೆ. ಕಳೆದ ಮುವ್ವತ್ತು ವರ್ಷಗಳಲ್ಲಿ ಜಾಗತೀಕರಣದ ಹೆಸರಿನಲ್ಲಿ ಜಗತ್ತಿನಾದ್ಯಂತ ವಿಕೃತವಾಗುತ್ತಾ ಹೋದ ಪ್ರಜಾಪ್ರಭುತ್ವದ ಕಲ್ಪನೆ ಈ ಚಳುವಳಿಯಿಂದಲಾದರೂ ತನ್ನ ಮೂಲ ಭಾವನೆಯತ್ತ ಹೊರಳಬಲ್ಲದೇನೂ ಕಾದು ನೋಡಬೇಕಿದೆ.

ಕನ್ನಡ ಶಿಕ್ಷಣದ ಬಿಕ್ಕಟ್ಟು : ಒಂದು ವಿವೇಚನೆ

ಕನ್ನಡ ಶಿಕ್ಷಣ ಇಂದು ದೊಡ್ಡ ಬಿಕ್ಕಟ್ಟಿನಲ್ಲಿದೆ. ಮಕ್ಕಳ ಸಂಖ್ಯೆ ತೀರಾ ಕಡಿಮೆಯಾಯಿತೆಂದು ಈ ವರ್ಷ ಸರ್ಕಾರ ರಾಜ್ಯಾದ್ಯಂತ ಮೂರು ಸಾವಿರ ಕನ್ನಡ ಶಾಲೆಗಳನ್ನು ಮುಚ್ಚುವ ಸೂಚನೆ ನೀಡಿದೆ. ಅಷ್ಟೇ ಅಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯುವ ಸಾಧ್ಯತೆಗಳನ್ನು ಪರಿಶೀಲಿಸುತ್ತಿರುವುದಾಗಿ ಹೇಳಿದೆ. ಇಂಗ್ಲಿಷ್ ಶಾಲೆಗಳ ವ್ಯಾಮೋಹ ಮತ್ತು ಹಾವಳಿ ಇಂದು ನಿನ್ನೆಯದಲ್ಲವಾದರೂ, ಹಲವಾರು ವರ್ಷಗಳಿಂದ ಅಸ್ತಿತ್ವದಲ್ಲಿದ್ದ ಕನ್ನಡ ಶಾಲೆಗಳ ಬುಡವನ್ನು ಅವು ಇತ್ತೀಚಿನವರೆಗೆ ಅಲುಗಾಡಿಸಿರಲಿಲ್ಲ. ಆದರೆ ಕಳೆದ ನಾಲ್ಕೈದು ವರ್ಷಗಳಿಂದ ಕನ್ನಡ ಶಾಲೆಗಳು ಸತತವಾಗಿ ಮುಚ್ಚುತ್ತಾ ಬರುತ್ತಿವೆ. ಈ ವರ್ಷ ಅದು ಉತ್ತುಂಗ ಮುಟ್ಟಿದೆ. ಮೂರ್ನಾಲ್ಕು ವರ್ಷಗಳ ಹಿಂದೆ ಕನ್ನಡ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಮಕ್ಕಳಿಗೆ ಇಂಗ್ಲಿಷ್ ಕಲಿಸಲು ಮುಂದಾದ ಸರ್ಕಾರದ ಕ್ರಮವನ್ನು ನಾವು ಕೆಲವರು ವಿರೋಧಿಸಿದಾಗ ಅದನ್ನು ಜಾತಿ-ವರ್ಗಗಳನ್ನು ನೆಪವಾಗಿಟ್ಟುಕೊಂಡು ಕೊಂಕು ಮಾತುಗಳಿಂದ ಟೀಕಿಸಿದವರು ಹಲವರಾದರೆ, ಕನ್ನಡ ಶಾಲೆಗಳ ಉಳಿವಿನ ದೃಷ್ಟಿಯಿಂದಲೇ ಇದು ಒಳ್ಳೆಯ ಕ್ರಮ ಎಂದು ನಮಗೆ ಬುದ್ಧಿ ಹೇಳಲು ಬಂದವರು ಇನ್ನು ಕೆಲವರು. ಆ ಕೆಲವರು ಈಗ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಲಾರಂಭಿಸಿದ ಈ ಮೂರು-ನಾಲ್ಕು ವರ್ಷಗಳಿಂದೀಚೆಗೆ ಕನ್ನಡ ಶಿಕ್ಷಣ ವ್ಯವಸ್ಥೆಯೇ ನಿರ್ಣಾಯಕವಾಗಿ ಕುಸಿದು ಬೀಳುತ್ತಿರುವ ದುರಂತವನ್ನು ನೋಡಿ ದಂಗಾಗಿ ಕೂತಿರಬಹುದು! ಅಥವಾ ಹಾಗೇನಿಲ್ಲದಿರಲೂಬಹುದು. ಏಕೆಂದರೆ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಸರ್ಕಾರದ ನಿರ್ಧಾರ, ಶೈಕ್ಷಣಿಕ ಪರಿಗಣನೆಯಿಂದ ಕೈಗೊಂಡ ನಿರ್ಧಾರವಾಗಿರಲಿಲ್ಲ. ಬದಲಾಗಿ ಅದು, ಬಹುರಾಷ್ಟ್ರೀಯ ಕಂಪನಿಗಳು-ನಮ್ಮವೂ ಸೇರಿದಂತೆ-ತಮ್ಮ ಸಂಸ್ಥೆಗಳಲ್ಲಿನ ಕೆಳಮಟ್ಟದ ನೌಕರರ ತಾಂತ್ರಿಕ ನೇಮಕಾತಿ ಸೌಲಭ್ಯಕ್ಕಾಗಿ ಮತ್ತು ಅದಕ್ಕಿಂತ ಹೆಚ್ಚಾಗಿ ಕೊಳ್ಳುಬಾಕ ಗ್ರಾಹಕ ಸಮಾಜ ಸೃಷ್ಟಿಸುವ ಸುಲಭ ಸಾಧನವಾಗಿ ಶಿಕ್ಷಣ ಕ್ರಮದಲ್ಲಿ ಭಾರತೀಯ ಭಾಷೆಗಳ ಜಾಗದಲ್ಲಿ ಕಡ್ಡಾಯವೆಂಬಂತೆ ಇಂಗ್ಲಿಷನ್ನು ಸ್ಥಾಪಿಸಲು ವಿಶ್ವಬ್ಯಾಂಕ್ ಮೂಲಕ ನಮ್ಮ ಸರ್ಕಾರಗಳ ಮೇಲೆ ಹೇರಿದ ಸುಯೋಜಿತ ಒತ್ತಡದ ಪರಿಣಾಮವಾಗಿತ್ತು. ಇದು ಬರಿ ಊಹೆಯಾಗಿರದೆ, ಇದಕ್ಕೆ ಆಗಲೇ ಹಲವು ಸಾಕ್ಷ್ಯಗಳನ್ನೂ, ದಾಖಲೆಗಳನ್ನೂ ಒದಗಿಸಲಾಗಿತ್ತು.

ಅದೇನೇ ಇರಲಿ, ಇದಕ್ಕೆ ಪೂರಕವಾಗಿ ಬೆಂಗಳೂರು ಕೇಂದ್ರಿತವಾದ ನಮ್ಮ ಕೆಲವು ಲೇಖಕ-ಬುದ್ಧಿಜೀವಿಗಳು 'ಸಾಮಾಜಿಕ ನ್ಯಾಯ'ದ ಕಲ್ಪನೆಯನ್ನೇ ವಿಕ್ಷಿಪ್ತಗೊಳಿಸಿ, ಅದರ ಹೆಸರಿನಲ್ಲಿ ಸರ್ಕಾರ ಮತ್ತು ಖಾಸಗಿ ಹಿತಾಸಕ್ತಿಗಳ (ಎನ್.ಜಿ.ಓ.ಗಳೂ ಸೇರಿದಂತೆ) ಪ್ರಾಯೋಜಕತ್ವದಲ್ಲಿ ನಡೆಸಿದ 'ಚಳುವಳಿ' ಕನ್ನಡ ಮಕ್ಕಳಿಗೆ ತಾವು ಆಶಿಸಿದಂತೆ ಬುಡದಿಂದಲೇ ಇಂಗ್ಲಿಷ್ ಕಲಿಸಲು ಯಶಸ್ವಿಯಾಗದಿದ್ದರೂ, ಸಾರ್ವಜನಿಕರ ಸಾರ್ವತ್ರಿಕ

ಗ್ರಹಿಕೆಯಲ್ಲಿ ಕನ್ನಡದ ಪ್ರಾಥಮಿಕತೆಯನ್ನು ನಿರ್ಣಾಯಕವಾಗಿ ಹಿನ್ನೆಲೆಗೆ ಸರಿಸುವಲ್ಲಿ ಯಶಸ್ವಿಯಾಯಿತು. ಅದರ ಪರಿಣಾಮವೇ ಕನ್ನಡ ಶಾಲೆಗಳ ಇಂದಿನ ಶೀಘ್ರಗತಿಯ ನಿರ್ನಾಮದ ಆರಂಭ. ಹಾಗಾಗಿಯೇ, ಈ ಚಳುವಳಿಯ ಬೌದ್ಧಿಕ ನೇತೃತ್ವ ವಹಿಸಿದ್ದ ಬುದ್ಧಿಜೀವಿಯೊಬ್ಬರು ಇತ್ತೀಚೆಗೆ ಹಠಾತ್ ನಿಧನರಾದಾಗ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಬಂದ ಮೊದಲಿಗರಲ್ಲಿ, ನ್ಯಾಯಾಲಯದಲ್ಲಿ ಕನ್ನಡ ಮಾಧ್ಯಮದ ವಿರುದ್ಧ ಇಂಗ್ಲಿಷ್ ಮಾಧ್ಯಮಗಳ ಶಾಲೆಗಳ ಪರವಾಗಿ ಹೋರಾಡಿದ್ದ ವಿಧಾನ ಪರಿಷತ್ ಸದಸ್ಯರೊಬ್ಬರು ಪ್ರಮುಖವಾಗಿ ಕಾಣಿಸಿಕೊಂಡದ್ದು ಆಕಸ್ಮಿಕವೇನಲ್ಲ! ಹಾಗೇ ಈ ಚಳುವಳಿಯ ಬಗ್ಗೆ ಎಂದಿನಂತೆ ದ್ವಂದ್ವ ನಿಲುವು ತಳೆದ ಹಿರಿಯ ಸಂಸ್ಕೃತಿ ಚಿಂತಕರೊಬ್ಬರ ನಿರ್ದೇಶಕತ್ವದಲ್ಲಿ ನಡೆಯುವ ಬಹು ಸುಪ್ರಸಿದ್ಧ ವಾರ್ಷಿಕ 'ಸಂಸ್ಕೃತಿ ಶಿಬಿರ'ಕ್ಕೆ, ನಮ್ಮ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜಾಗದಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಕಡ್ಡಾಯವಾಗಿ ಜಾರಿ ಮಾಡುವಂತೆ ಈ ಹಿಂದೆಯೇ ಸರ್ಕಾರಕ್ಕೆ ಕಿವಿ ಮಾತು ಹೇಳಿದ್ದ ಸುಪ್ರಸಿದ್ಧ ಉದ್ಯಮಪತಿಯೊಬ್ಬರನ್ನು ಈ ವರ್ಷ ಪ್ರತಿಷ್ಠಿತ ಅತಿಥಿಯಾಗಿ ಕರೆದು ಅವರಿಂದ ಸಂಸ್ಕೃತಿಯ ಪುನರ್‌ವ್ಯಾಖ್ಯಾನ ಮಾಡಿಸುವ ಪ್ರಯತ್ನ ಮಾಡಿದ್ದೂ ಯಾರಲ್ಲೂ ಅಂತಹ ಆಶ್ಚರ್ಯವನ್ನೇನೂ ಉಂಟುಮಾಡಲಾರದು! ಇನ್ನು ಈಗ ಜ್ಞಾನಪೀಠ ಪುರಸ್ಕೃತರಾದ ಮೇಲೆ ಹೋದೆಡೆಯಲ್ಲೆಲ್ಲ ಕನ್ನಡ ಮಾಧ್ಯಮದ ಬಗ್ಗೆ ಮಾತನಾಡುತ್ತಿರುವ ಚಂದ್ರಶೇಖರ ಕಂಬಾರರು ತಾವು ವಿಧಾನಪರಿಷತ್ತಿನ ಸದಸ್ಯರಾಗಿರುವವರೆಗೂ ಅಲ್ಲಿ ಸರ್ಕಾರದ ದಾಕ್ಷಿಣ್ಯಕ್ಕೆ ಸಿಕ್ಕಿಯೋ ಏನೋ ಒಮ್ಮೆಯೂ 'ಇಂಗ್ಲಿಷ್ ಕಲಿಕೆ' ಚಳುವಳಿಯ ಬಗ್ಗೆಯಾಗಲೀ, ಕನ್ನಡ ಮಾಧ್ಯಮದ ಬಗ್ಗೆಯಾಗಲೀ ಮಾತನಾಡುವ ಗೋಜಿಗೆ ಹೋಗಲಿಲ್ಲ! ಅವರು ವಿಧಾನ ಪರಿಷತ್ ಸದಸ್ಯರಾಗಿದ್ದಾಗ 'ಹೋರಾಡಿ'ದ್ದು ತಮ್ಮ ಜಾತಿಯವರಿಗೆ ಪರಿಶಿಷ್ಟ ಜಾತಿ ಪಟ್ಟ ಕೊಡಿಸಲು!!

ಕನ್ನಡ ಶಿಕ್ಷಣ ಎಂದರೆ ಮೂಲತಃ ಏನು ಎಂಬುದರ ಪರಿವೆಯೇ ಇಲ್ಲದಂತೆ ವರ್ತಿಸುವ ಮೂಲಕ ಹೀಗೆ ಕನ್ನಡ ಶಿಕ್ಷಣದ ನಿರ್ನಾಮಕ್ಕೆ ತಮ್ಮದೇ ಕೊಡುಗೆ ಸಲ್ಲಿಸುತ್ತಿರುವ ಈ ಸಂಸ್ಕೃತಿ ಚಿಂತಕರು, ಲೇಖಕ-ಬುದ್ಧಿಜೀವಿಗಳು, ಸಾಮಾಜಿಕ ನ್ಯಾಯವಾದಿಗಳು ತಮ್ಮ ಮಕ್ಕಳು ಮರಿಗಳಿಗಾಗಿ ಎಂತಹ ಸಮಾಜದ ಕನಸು ಕಂಡಿದ್ದಾರೋ ತಿಳಿಯದಾಗಿದೆ! ಅಂತಹ ಸಮಾಜ ನಮ್ಮ ಕಣ್ಮುಂದೆಯೇ ಮೂಡುತ್ತಿರುವ ಪರಿಯನ್ನು ಕಾಣಲಾಗದಷ್ಟು ಅವರು ಈಗಲೂ ಕುರುಡರಾಗಿರುವುದರಿಂದಲೇ ಕನ್ನಡ ಶಾಲೆಗಳ ಈ ನಿರ್ನಾಮ ಪ್ರಕ್ರಿಯೆ ಅವರಲ್ಲಿ ಯಾವ ಸಂಚಲನವನ್ನೂ ಉಂಟುಮಾಡದೇ ಹೋಗಿದೆ. ಬದಲಿಗೆ, ಅವರು ಕನ್ನಡ ಶಿಕ್ಷಣ ಎಂದ ಕೂಡಲೇ ಬಹುತ್ವದ, ವಲಸೆ ಸಂದರ್ಭದ ಶಿಕ್ಷಣ, ಏಕರೂಪದ ಶಿಕ್ಷಣ, ಕನ್ನಡ ಜನರ ಹಿತ ರಕ್ಷಣೆಯ ಶಿಕ್ಷಣ ಇತ್ಯಾದಿ ನೆಪಗಳನ್ನು ಮುಂದೊಡ್ಡಿ ಅಪಸ್ವರದ ಆಲಾಪನೆಗಳನ್ನು ಮಾಡುತ್ತಾ ತಮ್ಮದೇ ಜಾಣ ಬೌದ್ಧಿಕ ಕಸರತ್ತುಗಳಲ್ಲಿ ತೊಡಗಿಕೊಂಡಿದ್ದಾರೆ.

ಇದರಿಂದಾಗಿ ಇಂದು ಬೆಂಗಳೂರಿನಲ್ಲಿರಲಿ, ಒಂದು ಸಣ್ಣ ತಾಲ್ಲೂಕು ಕೇಂದ್ರದಲ್ಲೂ, ಕನ್ನಡ ಮಾಧ್ಯಮದಲ್ಲಿ ತಮ್ಮ ಮಕ್ಕಳಿಗೆ ಶಾಲಾ ಶಿಕ್ಷಣ ಕೊಡಿಸಬಯಸುವ ತಂದೆತಾಯಿಗಳಿಗೆ ಒಂದು ಒಳ್ಳೆಯ ಶಾಲೆ ಕಾಣದಂತಹ ಪರಿಸ್ಥಿತಿ ಉಂಟಾಗಿದೆ. ಇರಲಿ, ಮುಂದೇನು? ಒಂದು ಕ್ಷಣ ನಿಂತು ದೀರ್ಘ ಉಸಿರೆಳೆದುಕೊಂಡು ಯೋಚಿಸಬೇಕಾದ ಸಂದರ್ಭವಿದು. ಈ ಹಿನ್ನೆಲೆಯಲ್ಲಿ ಈ ಬಗ್ಗೆ ತಲಸ್ಪರ್ಶಿಯಾಗಿ ಆಲೋಚಿಸಬಲ್ಲವರೆನಿಸಿದ ಐವರ ಅಭಿಪ್ರಾಯಗಳನ್ನು ಇಲ್ಲಿ ನೀಡಲಾಗಿದೆ.–ಸಂ.

<u>ದಾಖಲೆ</u>

ಗಾಂಧೀಜಿಯೊಂದಿಗೆ ಸಮಾಜವಾದಿಗಳ ಪ್ರಶ್ನೋತ್ತರ (ಭಾಗ–೨)

ಕಳೆದ ಸಂಚಿಕೆಯಲ್ಲಿ ಅರಂಭಿಸಿದ್ದ 'ದಾಖಲೆ'ಯ ಎರಡನೆಯ ಭಾಗವಿದು. ಮೊದಲ ಭಾಗದಲ್ಲಿ ಕಾಂಗ್ರೆಸ್ ರಾಷ್ಟ್ರ ವಿಭಜನೆಯನ್ನು ಒಪ್ಪಿಕೊಳ್ಳುವುದು ಖಚಿತವೆನಿಸಿದಾಗ ಸಮಾಜವಾದಿಗಳ ಗುಂಪೊಂದು ಗಾಂಧೀಜಿಯಲ್ಲಿ ತಮ್ಮ ಆತಂಕವನ್ನು ನಿವೇದಿಸಿಕೊಳ್ಳಲು ಹೋದ ಸಂದರ್ಭದಲ್ಲಿ ಗಾಂಧೀಜಿ ಅವರನ್ನು ಉದ್ದೇಶಿಸಿ ಆಡಿದ ಮಾತುಗಳನ್ನು ಪ್ರಕಟಿಸಲಾಗಿತ್ತು. ಈ ಎರಡನೇ ಮತ್ತು ಕೊನೆಯ ಭಾಗದಲ್ಲಿ ಸಮಾಜವಾದಿಗಳ ಪ್ರಶ್ನೆಗಳಿಗೆ ಗಾಂಧೀಜಿ ನೀಡಿದ ಉತ್ತರಗಳಿವೆ. ಅವುಗಳನ್ನು ಅಕ್ಷರಶಃ ಅರ್ಥ ಮಾಡಿಕೊಳ್ಳದೆ, ಆಧುನಿಕ ನಾಗರೀಕತೆ ಕುರಿತ ಅವರ ವಿಮರ್ಶೆಯ ಭಾಗವಾಗಿ ಗ್ರಹಿಸುವುದಾದರೆ ಅವುಗಳಿಂದ ಇಂದಿನ ಸಂದರ್ಭಕ್ಕೆ ಅಗತ್ಯವಾದ ಅಮೂಲ್ಯ ಹೊಳಹುಗಳನ್ನು ಪಡೆಯಬಹುದು. ಜೊತೆಗೆ ಸಮಾಜವಾದಿಗಳ ಬಗೆಗಿನ ಗಾಂಧೀಜಿಯ ನಿರೀಕ್ಷೆ–ನಿರಾಶೆಗಳನ್ನೂ ಇಲ್ಲಿ ಗುರುತಿಸಬಹುದು.–ಸಂ.

ಪ್ರಶ್ನೆ: ನೀವು ನಮ್ಮ ದೇಶದ ಕೈಗಾರಿಕೆಗಳು, ಯಂತ್ರಗಳ ಮೂಲಕ ಅಭಿವೃದ್ಧಿ ಹೊಂದುವುದನ್ನು ಯಾಕೆ ವಿರೋಧಿಸುತ್ತೀರಿ?

ನೀವು ಕಾರು, ಬಸ್ಸು, ಏರೋಪ್ಲೇನ್, ಎಂಜಿನ್ನುಗಳು ಮುಂತಾದವನ್ನು ತಯಾರಿಸಲು ಯಂತ್ರಗಳನ್ನು ಬಳಸುವುದಾದರೆ ಅದರ ಬಗ್ಗೆ ನನಗೇನೂ ತಕರಾರಿಲ್ಲ. ಆದರೆ ಕಾಳುಗಳನ್ನು ಬೀಸುವುದಕ್ಕೆ, ಬಟ್ಟೆ ನೇಯುವುದಕ್ಕೆ, ಭೂಮಿಯನ್ನು ಉಳುವುದಕ್ಕೆ ಯಂತ್ರಗಳನ್ನು ಬಳಸುವುದಾದರೆ ಅದಕ್ಕೆ ನನ್ನ ತೀವ್ರ ವಿರೋಧವಿದೆ. ಯಂತ್ರಗಳಿಂದ ಬೀಸಿ ತಯಾರಾದ ಹಿಟ್ಟು, ಎಲ್ಲ ಸತ್ವವನ್ನು ಕಳೆದುಕೊಂಡು ಅದರಲ್ಲಿರುವ ಎಲ್ಲ ವಿಟಮಿನ್ನುಗಳನ್ನು ನಾಶಮಾಡುತ್ತದೆ. ಹಿಂದಿನ ಕಾಲದಲ್ಲಿ ಕಾಥೇವಾರದಲ್ಲಿ ಎಲ್ಲಿಯೂ ನಲ್ಲಿನೀರು ಸಿಗುತ್ತಿರಲಿಲ್ಲ. ಹೆಂಗಸರು ಹತ್ತಿರದ ನದಿ, ಕೆರೆಗಳಿಂದ ಹೊಳೆಯುವ ಬಿಂದಿಗೆಗಳಲ್ಲಿ ನೀರನ್ನು ತುಂಬಿಕೊಂಡು ಬೆಳಗಿನ ಬಿಸಿಲಿನಲ್ಲಿ ತಲೆಯ ಮೇಲೆ ಹೊತ್ತುಕೊಂಡು ಬರುತ್ತಾ ಸೂರ್ಯಸ್ನಾನ ಮಾಡುತ್ತ ಆರೋಗ್ಯವಂತರಾಗಿದ್ದರು.

ಬೆಳಗಿನ ಜಾವದಲ್ಲಿ ಅವರು ಕಾಳು ಬೀಸುತ್ತ ಭಜನೆಗಳನ್ನು ಹಾಡುತ್ತ ದೇವರಿಗೆ ತಮ್ಮ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಜೀವನಕ್ಕೆ ಬೇಕಾದ ನೀತಿಪಾಠಗಳನ್ನು ಒಳಗೊಂಡ ಅವರ ಸರಳ ಹಾಡುಗಳು ಅವರಿಗೆ ಏಕಕಾಲಕ್ಕೆ ಸಂಗೀತದ ಅಭಿರುಚಿಯನ್ನು, ದೇಹಕ್ಕೆ ಬೇಕಾದ ವ್ಯಾಯಾಮವನ್ನು ನೀಡುತ್ತಿದ್ದವು. ಇದಾದ ಮೇಲೆ ಕುಟುಂಬದ ಎಲ್ಲರೂ ಸೇರಿ ಹೊಲಗದ್ದೆಗಳಿಗೆ ಕೆಲಸ ಮಾಡಲು ಹೋಗುತ್ತಿದ್ದರು. ಇದರಿಂದ ಅವರಿಗೆ ರೋಗಗಳು ಬರುವುದಿರಲಿ, ಈಗ ಎಲ್ಲ ಕಡೆ ಹರಡಿರುವ ನೂರಾರು ರೋಗಗಳ ಹೆಸರೂ ಸಹ ಗೊತ್ತಿರಲಿಲ್ಲ. ಇಷ್ಟೊಂದು ಜನ ಸಂಪನ್ಮೂಲವಿರುವ ನಮ್ಮಂಥ ದೊಡ್ಡ ದೇಶ ಅಥವಾ ಕುಟುಂಬದಲ್ಲಿ ಯಂತ್ರಗಳ ಅಗತ್ಯವೇನು ಎಂಬ ಪ್ರಶ್ನೆ ನನ್ನನ್ನು ಕಾಡುತ್ತದೆ. ಯಂತ್ರಗಳು ಮನುಷ್ಯರು ಮಾಡುವ ಕೆಲಸವನ್ನು ಬಹಳ ಬೇಗ ಮಾಡಿ ಮುಗಿಸುವುದರಿಂದ ಜನರ ದೇಹಾರೋಗ್ಯಕ್ಕೆ, ದೇಶದ ಆರ್ಥಿಕತೆಗೆ ದೊಡ್ಡ ಅಪಾಯವುಂಟಾಗುತ್ತದೆ. ಇದೆಲ್ಲದರ ಪರಿಣಾಮವಾಗಿ ಜನರಿಗೆ ಭಾರೀ ವಿರಾಮ ದೊರೆತು ಏನು ಮಾಡಬೇಕೆಂಬುದೇ ತೋಚದಾಗಿ, ಅವರ ಮನಸ್ಸು ಎಲ್ಲ ದುಷ್ಟ ಯೋಚನೆಗಳ ಕಾರ್ಖಾನೆಯಾಗಿ ಬಿಡುತ್ತದೆ. ಅವರಲ್ಲಿ ಅನೇಕರು ಸಿನೆಮಾ-ನಾಟಕಗಳಲ್ಲಿ ಕಳೆದುಹೋಗುತ್ತಿದ್ದಾರೆ. ಬಹಳ ಜನ ಸಿನಿಮಾಗಳಲ್ಲಿ ಸಮಾಜವನ್ನು ಸರಿದಾರಿಗೆ ತರುವ ನೈತಿಕ ಗುಣವಿದೆ ಎಂದು ನನ್ನನ್ನು ಒಪ್ಪಿಸಲು ನೋಡುತ್ತಾರೆ. ಆದರೆ ಅವರ ಮಾತು ನನಗೇನೋ ಹಿಡಿಸುವುದಿಲ್ಲ. ನನಗೆ ಎಲ್ಲ ಬಾಗಿಲನ್ನು ಮುಚ್ಚಿದ ಥಿಯೇಟರ್‌ಗಳಿಗೆ ಹೋದರೆ ಉಸಿರು ಕಟ್ಟಿದಂತಾಗುತ್ತದೆ. ನಾನು ಸಣ್ಣವನಾಗಿದ್ದಾಗ ನಾನು ಇಂಥ ಥಿಯೇಟರ್‌ಗೆ ಒಂದು ಸಲ ಹೋಗಿದ್ದೆ. ನನಗೆ ಸಾಧ್ಯವಿದ್ದರೆ ದೇಶದ ಎಲ್ಲಾ ಥಿಯೇಟರ್‌ಗಳು ಹಾಗೂ ಸಿನೇಮಾ ಹಾಲ್‌ಗಳನ್ನು ನೂಲು ತಯಾರಿಸುವ, ಕರಕುಶಲ ಕೆಲಸಮಾಡುವ ಜಾಗಗಳನ್ನಾಗಿ ಮಾಡಿಬಿಡುತ್ತಿದ್ದೆ. ಈಚಿನ ದಿನಗಳಲ್ಲಿ ಜಾಹಿರಾತಿನ ನೆಪವನ್ನು ಮುಂದಿಟ್ಟುಕೊಂಡು ಎಷ್ಟು ಅಶ್ಲೀಲವಾದ ಗಂಡು-ಹೆಣ್ಣಿನ ಚಿತ್ರಗಳನ್ನು ಅಚ್ಚು ಹಾಕುತ್ತಾರೆ ಎಂಬುದೇ ನನಗೆ ಸೋಜಿಗದ ಸಂಗತಿಯಾಗಿ ಕಾಣುತ್ತದೆ. ಅಷ್ಟಕ್ಕೂ ಈ ನಟ-ನಟಿಯರು ನಮ್ಮ ಅಣ್ಣ ತಮ್ಮಂದಿರಲ್ಲದೆ ಬೇರೆ ಯಾರೂ ಅಲ್ಲ. ಇದರಿಂದ ನಾವು ನಮ್ಮ ಹಣವನ್ನು ಹಾಳು ಮಾಡಿಕೊಳ್ಳುವುದಲ್ಲದೆ, ನಮ್ಮ ಸುತ್ತಲಿನ ಸಮಾಜವನ್ನೂ ಸಹ ನಾಶ ಪಡಿಸುತ್ತೇವೆ.

ನಾನೇನಾದರೂ ಪ್ರಧಾನಮಂತ್ರಿಯಾದರೆ ಎಲ್ಲ ಯಂತ್ರಚಾಲಿತ ಹಿಟ್ಟಿನ ಗಿರಣಿಗಳು ಹಾಗೂ ಎಣ್ಣೆ ಗಿರಣಿಗಳನ್ನು ನಿಲ್ಲಿಸಿ ಅವುಗಳ ಜಾಗದಲ್ಲಿ ದೇಶೀಯ ರೀತಿಯಲ್ಲಿ ಕೆಲಸಮಾಡುವ ಗಿರಣಿಗಳನ್ನು ಸ್ಥಾಪಿಸಿಬಿಡುತ್ತಿದ್ದೆ. ಜೊತೆಗೆ, ಇರುವ ಬಟ್ಟೆ ಗಿರಣಿಗಳನ್ನು ನಾಶಮಾಡುವುದಕ್ಕಾಗದಿದ್ದರೂ ಹೊಸ ಗಿರಣಿಗಳನ್ನು ಶುರುಮಾಡುವುದನ್ನಂತೂ ಖಂಡಿತಾ ತಡೆಯುತ್ತಿದ್ದೆ. ಈಗ ನಡೆಯುತ್ತಿರುವ ಎಲ್ಲ ಸಿನೆಮಾ, ಥಿಯೇಟರ್‌ಗಳನ್ನು ಮುಚ್ಚಿಸಿ, ಅಲ್ಲಿ ಪ್ರಕೃತಿ ಸೌಂದರ್ಯದ ಸಿನೆಮಾಗಳನ್ನು ಮಾತ್ರ ತೋರಿಸುವಂತೆ ಮಾಡುತ್ತಿದ್ದೆ. ಜೊತೆಗೆ ಹಾಡು, ನೃತ್ಯಗಳನ್ನಂತೂ ಸಂಪೂರ್ಣ ನಿಲ್ಲಿಸುತ್ತಿದ್ದೆ. ಹಾಗೆ

ನೋಡಿದರೆ ನನಗೆ ಸಂಗೀತ, ನೃತ್ಯಗಳ ಬಗ್ಗೆ ಬಹಳ ಆಸಕ್ತಿ ಇದೆ. ಸಂಗೀತದಲ್ಲಿ ನನಗೆ ಯಾವುದು ಒಳ್ಳೆಯದು-ಯಾವುದು ಅಲ್ಲ ಎಂಬ ತರತಮ ಜ್ಞಾನವೂ ಇದೆ. ಆದರೂ ಯುವಜನರ ಮನಸ್ಸನ್ನು ಹಾಳುಮಾಡುವ ಸಂಗೀತ-ನೃತ್ಯವನ್ನು ನಾನು ಖಂಡಿತಾ ನಿಲ್ಲಿಸಿಬಿಡುತ್ತಿದ್ದೆ. ಎಲ್ಲ ಕಡೆ ಸುಲಭವಾಗಿ ಬಿಕರಿಯಾಗುವ ಗ್ರಾಮಾಫೋನ್ ರೆಕಾರ್ಡ್‌ಗಳನ್ನು ನಿಲ್ಲಿಸುತ್ತಿದ್ದೆ. ಜೊತೆಗೆ ಇಂಥ ಜೀವಘಾತುಕ ಚಟುವಟಿಕೆಗಳಿಗೆ ಸರ್ಕಾರ ಅತಿ ಹೆಚ್ಚು ತೆರಿಗೆ ವಿಧಿಸುವಂತೆ ಶಿಫಾರಸು ಮಾಡುತ್ತಿದ್ದೆ. ಇದೇ ರೀತಿಯಲ್ಲಿ ಜನರ ಆರೋಗ್ಯಕ್ಕೆ ಹಾನಿಯುಂಟುಮಾಡುವ ಮದ್ಯ, ತಂಬಾಕು ಮತ್ತು ಟೀ ಉತ್ಪನ್ನಗಳಿಗೆ ಅತಿ ಹೆಚ್ಚು ತೆರಿಗೆ ವಿಧಿಸುವಂತೆ ಮಾಡಿ ಅವುಗಳ ಬಳಕೆ ಕಡಿಮೆಯಾಗುವಂತೆ ನೋಡಿಕೊಳ್ಳುತ್ತಿದ್ದೆ.

ಯಾವ ಹಳ್ಳಿಗಳಲ್ಲಿ ಒಂದೇ ಒಂದು ಹಿಟ್ಟಿನ ಯಂತ್ರವಿಲ್ಲದೇ, ತಮಗೆ ಬೇಕಾದಷ್ಟು ಹತ್ತಿಯನ್ನು ತಾವೇ ಬೆಳೆದು-ತಮ್ಮ ಬಟ್ಟೆಯನ್ನು ತಾವೇ ತಯಾರಿಸಿಕೊಳ್ಳುವ ಸ್ವಯಂಪೂರ್ಣ ಚಟುವಟಿಕೆಗಳು ನಡೆಯುತ್ತಿವೆಯೋ ಅಂಥ ಹಳ್ಳಿಗಳನ್ನು ಗುರುತಿಸಿ ಅವುಗಳಿಗೆ ವಿಶೇಷ ಬಹುಮಾನಗಳು, ತೆರಿಗೆ ವಿನಾಯಿತಿಯ ಸೌಲಭ್ಯಗಳು ದೊರಕುವಂತೆ ಮಾಡುತ್ತಿದ್ದೆ. ಅಂಥ ಆದರ್ಶಪೂರ್ಣ ಹಳ್ಳಿಗಳಲ್ಲಿ ಪ್ರತಿಯೊಬ್ಬ ಪ್ರಜೆಯೂ ತನಗೇ ತಾನೇ ಒಬ್ಬ ಪೊಲೀಸನಾಗಿ, ತನಗೆ ತಾನೇ ಒಬ್ಬ ವೈದ್ಯನಾಗಿ, ಸಮಾಜದ ಕಾವಲುಗಾರನಾಗಿ ರೂಪುಗೊಳ್ಳುವಂತೆ ಮಾಡಿ ಅಲ್ಲಿ ಪರಸ್ಪರ ಕಲಹ-ವೈಮನಸ್ಸುಗಳು ಇಲ್ಲದ ಹಾಗೆ ಮಾಡುತ್ತಿದ್ದೆ. ನೋಡಿ, ಇಷ್ಟು ಹೊತ್ತು ನಿಮ್ಮೊಂದಿಗೆ ಮಾತಾಡುತ್ತ ನನ್ನ ಕನಸಿನ ದೇಶ ಹೇಗಿರಬೇಕು ಎಂಬುದನ್ನು ವಿವರಿಸಿದ್ದೇನೆ. ಈ ಮಾತುಗಳನ್ನು ಆಡುವಾಗ ನನ್ನ ಹೃದಯ ತುಂಬಿ ಬಂದು ನನ್ನ ಎಲ್ಲ ಆಲೋಚನೆಗಳನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ. ಆದರೂ ಇಲ್ಲಿಯವರೆಗೆ ನಾನು ಪ್ರಸ್ತಾಪಿಸಿರುವ ಸಂಗತಿಗಳು ನಿಜವಾಗುವ ಯಾವುದೇ ಸೂಚನೆಗಳಿಲ್ಲ ಎಂಬುದು ನನಗೆ ಗೊತ್ತಿದೆ. ಹಾಗಿದ್ದರೂ ನಾನು ಇಂಥ ಕನಸುಗಳನ್ನು ಕಾಣದೆ ಇರಲಾರೆ. ಅಲ್ಲದೆ ನಿಮ್ಮಂಥವರು ಬಂದು ಇಂಥ ವಿಚಾರಗಳ ಬಗ್ಗೆ ಕೇಳಿದಾಗ ನನ್ನ ಆಲೋಚನೆಗಳನ್ನು ಅದುಮಿಟ್ಟುಕೊಳ್ಳದೆ ಎಲ್ಲವನ್ನೂ ಹೇಳಿಬಿಟ್ಟಿದ್ದೇನೆ.

ಪ್ರಶ್ನೆ: ಆದರೆ ಬಾಪು, ನೀವು ಪ್ರಧಾನಿಯಾಗುವ ಸಾಧ್ಯತೆಯನ್ನು ತಡೆಯುವವರು ಯಾರಾದರೂ ಇದ್ದಾರಾ?

ಎಲ್ಲ ಬಗೆಯ ಹೊಣೆಗಾರಿಕೆಯನ್ನು ಹೊರಲು ಸಿದ್ಧವಾಗಿದ್ದರೆ, ಯಾರೊಬ್ಬರೂ ಈ ಸಾಧ್ಯತೆಯನ್ನು ತಿರಸ್ಕರಿಸುತ್ತಾರೆ ಎಂದು ನನಗೆ ಅನಿಸುವುದಿಲ್ಲ. ಹಾಗೆ ನೋಡಿದರೆ ನನ್ನ ಎದುರಾಳಿಗಳು ನೀವೇ. ಯಾಕೆಂದು ನೀವು ಕೇಳಬಹುದು. ನೀವು ನಾನು ಹೇಳಿದ ಮಾರ್ಗದಲ್ಲಿ ನಡೆದರೆ ನನ್ನ ಆಶಯಗಳೆಲ್ಲ ನಿಜವಾಗಿ ನನ್ನ ಕನಸುಗಳೆಲ್ಲ ಸಾಕಾರಗೊಳ್ಳುತ್ತವೆ. ನೀವು ಹೇಳುವ ಆರ್ಥಿಕ ಸಮಾನತೆಯನ್ನು ಸಾಧಿಸಬೇಕೆಂದರೆ

ನನ್ನ ಹಾದಿಯಲ್ಲಿ ನೀವು ನಡೆಯಲೇಬೇಕು. ನನ್ನ ಮಾತುಗಳು ಬಹುಶಃ ಇವತ್ತು ನಿಮಗೆ ಅರ್ಥವಾಗುವುದಿಲ್ಲ. ಆದರೆ ನಿಮಗೆ ನೆನೆಪಿರಲಿ: ನಾನು ತೀರಿಹೋದ ಎಷ್ಟೋ ದಿನದ ಮೇಲೆ, ಒಂದು ದಿನ–ಈ ಎಪ್ಪತ್ತೈದು ವರ್ಷದ ಮುದುಕ ಹೇಳಿದ್ದು ಸರಿ ಎಂದು ನಿಮಗೆ ಅನಿಸುತ್ತದೆ. ಇದನ್ನು ನಾನು ನಿಮಗೆ ಭವಿಷ್ಯವಾಣಿಯಾಗಿ ಹೇಳುತ್ತಿಲ್ಲ, ಬದಲಾಗಿ ನನ್ನ ಜೀವನದ ಅನುಭವದಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ.

ಮುಂದೊಂದು ದಿನ ಯಾರೂ ಸಹ ನಿಮ್ಮ ದೊಡ್ಡ ದೊಡ್ಡ ಭಾಷಣಗಳನ್ನು ಕೇಳುವುದಿಲ್ಲ. ಭಾಷಣ ಕೇಳುವುದಿರಲಿ ಜನ ನಿಮ್ಮ ಸಭೆಗಳಿಗೆ ಬರುವುದೇ ಇಲ್ಲ, ಏಕೆಂದರೆ ಬರೀ ಬಾಯಿ ಮಾತಿನಲ್ಲಿ ಆದರ್ಶಗಳನ್ನು ಹೇಳುತ್ತ ಅವುಗಳನ್ನು ಜೀವನದಲ್ಲಿ ಪಾಲಿಸದೆ ಹೋದರೆ ನಿಮ್ಮ ಮಾತುಗಳನ್ನು ಯಾರೂ ಕೇಳುವುದಿಲ್ಲ. ನಿಮ್ಮ ಮಾತನ್ನು ಕೇಳುವ ಮೊದಲು, ನೀವು ಹೇಳುವ ಆದರ್ಶಗಳನ್ನು ಕಾರ್ಯಗತಗೊಳಿಸಲು ನೀವೇನು ಮಾಡಿದ್ದೀರಿ ಎಂಬ ಪ್ರಶ್ನೆಯನ್ನು ಅವರು ಕೇಳುತ್ತಾರೆ. ಹಿಂದೂ–ಮುಸ್ಲಿಂ ಸಹಬಾಳ್ವೆಯನ್ನು ಸಾಕಾರಗೊಳಿಸಬೇಕಾದರೆ ಅದನ್ನು ನೀವು ಮೊದಲು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಲ್ಲಿಯವರೆಗೆ ನಾವು ಕುರುಡರ ಹಾಗೆ ಬ್ರಿಟಿಷರನ್ನು ಅನುಸರಿಸುತ್ತ ಕಾಲ ಕಳೆದಿದ್ದೇವೆ. ಈಗ ನಾವು ಕಣ್ತೆರೆದು ನಮ್ಮ ದಾರಿಯನ್ನು ನಾವು ಹುಡುಕಿಕೊಳ್ಳಬೇಕಾಗಿದೆ. ಈಗಲಾದರೂ ನೀವು ನಿಮ್ಮ ಹೆಜ್ಜೆಗಳನ್ನು ಸರಿಪಡಿಸಿಕೊಂಡು, ಸರಿಯಾದ ದಾರಿಯಲ್ಲಿ ನಡೆಯದಿದ್ದರೆ ಆಳವಾದ ಗುಂಡಿಯೊಳಗೆ ಬೀಳುವುದಂತೂ ಖಚಿತ. ಈಗ ನೀವು ಹೊರಡಿ. ನಾನೀಗ ವೈಸ್‌ರಾಯ್‌ರನ್ನು ಕಾಣಲು ಹೊರಡಬೇಕು.

(ಆಕರ: **ದಿ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮಾ ಗಾಂಧಿ**)

(ಇಂಗ್ಲಿಷ್‌ನಿಂದ ಕನ್ನಡಕ್ಕೆ: **ಎಸ್. ಸಿರಾಜ್ ಅಹಮದ್**)

ಡಿಸೆಂಬರ್, ೨೦೧೧

ಭ್ರಷ್ಟ ರಾಜಕಾರಣವೂ, ದುಷ್ಟ ಮಾಧ್ಯಮಗಳೂ...

ಪ್ರಿಯ ಓದುಗರೇ,

ಕರ್ನಾಟಕದ ರಾಜಕಾರಣ ಅಧೋಗತಿ ತಲುಪಿದೆ. ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಉಪಚುನಾವಣೆಯ ಸಂದರ್ಭದಲ್ಲಿ ಇದು ಎದ್ದು ಕಂಡಿದೆ. ಲೋಕಾಯುಕ್ತ ವರದಿಯ ಪರಿಣಾಮವಾಗಿ ಸಂಪುಟದಿಂದ ತನ್ನ ಇತರ ಗೆಣೆಕಾರರೊಂದಿಗೆ ಹೊರಹಾಕಲ್ಪಟ್ಟ ಶ್ರೀರಾಮುಲು ಮತ್ತೆ ಸಂಪುಟ ಸೇರಲು ಎಲ್ಲ ಸಾಧ್ಯ ಕಸರತ್ತು ಮಾಡಿ, ಕೊನೆಯ ಅಸ್ತ್ರವಾಗಿ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದಾಗ ಅದನ್ನು ಬಹುಕಾಲ ಅಂಗೀಕರಿಸದೆ ನಮ್ಮ ವಿಧಾನಸಭಾಧ್ಯಕ್ಷರು ತೋರಿದ ವರ್ತನೆ ನಮ್ಮ ಪ್ರಜಾಪ್ರಭುತ್ವದ ಗರ್ಭಗುಡಿಯಲ್ಲೇ ಎಲ್ಲೋ ಬಿರುಕು ಮೂಡಿರುವ ಆತಂಕವನ್ನು ಸೃಷ್ಟಿಸಿದೆ. ಇನ್ನು ಅನಿವಾರ್ಯವೆಂಬಂತೆ ಆ ರಾಜೀನಾಮೆಯನ್ನು ವಿಧಾನಸಭಾಧ್ಯಕ್ಷರು ಅಂಗೀಕರಿಸಬೇಕಾಗಿ ಬಂದ ಪರಿಣಾಮವಾಗಿ ಉಂಟಾದ ಈ ಉಪಚುನಾವಣೆಯಲ್ಲಿ ಬಿಜೆಪಿ ತನ್ನ ಪಕ್ಷದ ಟಿಕೆಟ್ಟನ್ನು ಅದೇ ಶ್ರೀರಾಮುಲುಗೆ ನೀಡಲು ಕೊನೆವರೆಗೆ ಅವರನ್ನು ಅಂಗಲಾಚಿದ ರೀತಿ ಮತ್ತು ತನ್ನ ಈ ಪ್ರಯತ್ನ ವಿಫಲವಾದ ನಂತರ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಮತ್ತೆ ಅದೇ ಶ್ರೀರಾಮುಲು ವಿರುದ್ಧ ಮಾಡಿದ ಆರೋಪಗಳನ್ನು ಗಮನಿಸಿದಾಗ ಈ ಪಕ್ಷ ಮುಟ್ಟಿರುವ ನಿರ್ಲಜ್ಜೆ ಮತ್ತು ಆತ್ಮವಂಚನೆಯ ಮಟ್ಟವನ್ನು ಕಂಡು ಯಾರಿಗಾದರೂ ಗಾಬರಿಯಾಗುತ್ತದೆ.

ಬಳ್ಳಾರಿಯಲ್ಲಿ ಅಭಿವೃದ್ಧಿ ಆಗಿಲ್ಲವಂತೆ! ಶ್ರೀರಾಮುಲುದು ಗೂಂಡಾಗಿರಿ ಸಂಸ್ಕೃತಿಯಂತೆ! ಇದೆಲ್ಲ ಈ ಪಕ್ಷಕ್ಕೆ ಈಗ ಅರಿವಾಗಿದೆಯೇ? ಪಕ್ಷಕ್ಕೆ ಕೈಕೊಟ್ಟ ಶ್ರೀರಾಮುಲು ಮಾಡಿದ್ದು ಮಾತೃದ್ರೋಹವಂತೆ! ಸ್ವತಃ ತಾನು ಇತರ ಪಕ್ಷಗಳ/ಶಾಸಕರ ಮೇಲೆ ನಡೆಸಿದ 'ಆಪರೇಷನ್ ಕಮಲ'ದ ಮೂಲಕ ಎಷ್ಟು ಜನರಿಂದ ಇಂತಹ ಮಾತೃದ್ರೋಹ ಮಾಡಿಸಿರುವೆ ಎಂಬುದು ಈ ಪಕ್ಷಕ್ಕೇನಾದರೂ ನೆನಪಿದೆಯಾ? ಇನ್ನು ಈ ಚುನಾವಣೆಯಲ್ಲಿ ಶ್ರೀರಾಮುಲು ಪರ ನಿಂತ ತಮ್ಮ ಪಕ್ಷದ ಶಾಸಕರು ಮತ್ತು ಸಂಸದರನ್ನು

ಕೊನೆ ಘಳಿಗೆಯವರೆಗೆ ಕಾದು ಪಕ್ಷದಿಂದ ಅಮಾನತು ಮಾಡಿರುವ ಬಿಜೆಪಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಮತ್ತೆ ಮಾತೃದ್ರೋಹದ ರಾಜಕಾರಣಕ್ಕೇ ಕೈಹಾಕದೆ ಬೇರೆ ಮಾರ್ಗವಿಲ್ಲದಂತೆ ತೋರುತ್ತಿದೆ. ಬಿಜೆಪಿ ತಾನು ಮಾಡಿದ ಪಾಪ ತನ್ನನ್ನೇ ಸುತ್ತುವರೆಯುತ್ತಿರುವ ಈ ವಿದ್ಯಮಾನದ ನಂತರವಾದರೂ ನೈತಿಕತೆಯ ಪರಿಭಾಷೆಯಲ್ಲಿ ಮಾತನಾಡುವುದನ್ನು ನಿಲ್ಲಿಸಿದರೆ ಒಳ್ಳೆಯದು!

ಇನ್ನು ಈ ಚುನಾವಣೆ ಶ್ರೀರಾಮುಲು ಅಕ್ರಮ ಗಣಿಗಾರಿಕೆಯ ಭ್ರಷ್ಟಾಚಾರದ ಕಳಂಕವನ್ನು ಮರುಚುನಾವಣೆಯನ್ನು ಗೆಲ್ಲುವ ಮೂಲಕ ತೊಡೆದುಕೊಳ್ಳಲು ಯತ್ನಿಸುತ್ತಿರುವ ಪರಿಯೇ ಪ್ರಜಾಪ್ರಭುತ್ವದ ಬಹಿರಂಗ ಅಣಕದಂತಿದೆ. ನಮ್ಮ ಸಂವಿಧಾನದ ಪ್ರಕಾರ ಭ್ರಷ್ಟಾಚಾರದ ಆಪಾದನೆಯನ್ನು ಎದುರಿಸಬೇಕಾದದ್ದು ನ್ಯಾಯಾಂಗದ ನೆಲೆಯಲ್ಲಿ. ಆದರೆ ನ್ಯಾಯಾಂಗವನ್ನೇ ಹೀಗೆ 'ಬೈಪಾಸ್' ಮಾಡಲು ಯತ್ನಿಸುವ ಮೂಲಕ ಒಂದು ಅಪಾಯಕಾರಿ ಸಂಪ್ರದಾಯವನ್ನು ಶುರು ಮಾಡಲು ಹೊರಟಿರುವ ಶ್ರೀರಾಮುಲುವನ್ನು ಈ ನೆಲೆಯಲ್ಲಿ ಪ್ರಶ್ನಿಸಿ ಎದುರಿಸಲು ಯಾವ ಪಕ್ಷವೂ ಮುಂದಾಗದಿರುವುದು ನಮ್ಮೆಲ್ಲ ರಾಜಕೀಯ ಪಕ್ಷಗಳ ತಾತ್ವಿಕ ದಿವಾಳಿತನವನ್ನು ತೋರುತ್ತದೆ. ಜೆಡಿಎಸ್ ಎಂಬ ಪಕ್ಷವಂತೂ ತನಗೆ ಯಾವ ತತ್ವ-ಸಿದ್ಧಾಂತವೂ ಇಲ್ಲ, ಸಮಯ ಸಾಧಕತನವೇ ತನ್ನ ಕಾರ್ಯಕ್ರಮವೆಂಬುದನ್ನು ಮತ್ತೆ ಸಾಬೀತುಪಡಿಸಿದೆ. ಅದು ಈ ಚುನಾವಣೆಯಲ್ಲಿ ಜಾತಿ ಲೆಕ್ಕಾಚಾರ ಮಾಡಿ, ರಾಜ್ಯ ರಾಜಕಾರಣದ ಖಳನಾಯಕ ಯಾರೆಂದು ತಾನು ಈವರೆಗೆ ಬೊಬ್ಬರಿದಿತ್ತೋ ಆ ರೆಡ್ಡಿ ಸೋದರರ ಬಲಗೈ ಬಂಟ ಶ್ರೀರಾಮುಲುವನ್ನು ತನ್ನೆಡೆಗೆ ಸೆಳೆಯುವ ವಿಫಲ ಪ್ರಯತ್ನ ಮಾಡಿ ಕೊನೆಗೆ ಆತನನ್ನೇ ಬೆಂಬಲಿಸುವುದಾಗಿ ಪ್ರಕಟಿಸಿದೆ. ಇನ್ನು ಕಾಂಗ್ರೆಸ್ ಅಕ್ರಮ ಗಣಿಗಾರಿಕೆಯಿಂದ ಕಳಂಕಿತರಾದ ಶ್ರೀರಾಮುಲು ವಿರುದ್ಧ ಪ್ರಚಾರ ಮಾಡಲು ಅದೇ ಅಕ್ರಮ ಗಣಿಗಾರಿಕೆಯ ಕಳಂಕ ಹೊತ್ತ ಅನಿಲ್ ಲಾಡ್ ಎಂಬ ಸಂಶಯಾಸ್ಪದ ಆಸಾಮಿಯನ್ನು ಮುಂದಿಟ್ಟುಕೊಂಡು ಹೊರಟು ಲೋಕಾಯುಕ್ತ ವರದಿ ಕುರಿತ ತನ್ನ ನಿಜ ನಿಲುವೇನೆಂಬುದನ್ನು ಪರೋಕ್ಷವಾಗಿ ಸೂಚಿಸಿದೆ. ಹಾಗೇ ಅದು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ನಾಯಕರ ಮಾನ ಉಳಿಸಿಕೊಳ್ಳಲು ಈಗ ಸಾರ್ವತ್ರಿಕವಾಗಿ ಲೋಕಾಯುಕ್ತದ ವಿರುದ್ಧ ಮತ್ತು ನಿರ್ದಿಷ್ಟವಾಗಿ ನ್ಯಾ. ಸಂತೋಷ್ ಹೆಗ್ಡೆಯವರ ವಿರುದ್ಧ ಆರಂಭಿಸಿರುವ ಅಪಪ್ರಚಾರವನ್ನು ಒಮ್ಮನದಿಂದ ಮತ್ತು ಸಮರ್ಥವಾಗಿ ಎದುರಿಸಲು ವಿಫಲವಾಗಿರುವುದು ಎದ್ದು ಕಾಣುತ್ತಿದೆ.

ಹೀಗೆ ಭ್ರಷ್ಟಾಚಾರದ ವಿರುದ್ಧ ಲೋಕಾಯುಕ್ತ ಸಂಸ್ಥೆ ತನ್ನ ದಿಟ್ಟ ಮತ್ತು ಪ್ರಾಮಾಣಿಕ ಕಾರ್ಯಾಚರಣೆಯ ಮೂಲಕ ಆರಂಭಿಸಿರುವ ಕಾನೂನಾತ್ಮಕ ಸಮರದ ವಿಶ್ವಾಸಾರ್ಹತೆಯನ್ನೇ ಹಾಳು ಮಾಡಲು ರಾಜ್ಯದ ಇಡೀ ರಾಜಕೀಯ ಕುಲವೇ ಒಂದಲ್ಲ ಒಂದು ರೀತಿಯಲ್ಲಿ ಯತ್ನಿಸುತ್ತಿದೆ. ಇಂತಹ ಸಂದರ್ಭದಲ್ಲಿ, ಇದರ ವಿರುದ್ಧ ದನಿಯೆತ್ತಬೇಕಾದ ನಮ್ಮ ಮಾಧ್ಯಮದ ಒಂದು ಭಾಗ ಭ್ರಷ್ಟ ರಾಜಕಾರಣಿಗಳ ಜೊತೆ ಕೈಜೋಡಿಸಲು ಹವಣಿಸುತ್ತಿರುವ ರೀತಿ ಆಘಾತಕಾರಿಯಾಗಿದೆ. ಕನ್ನಡದ

ದಿನಪತ್ರಿಕೆಯೊಂದು, ಇದರ ಸಿಬ್ಬಂದಿಯೊಬ್ಬರು ಈ ಹಿಂದೆ ಲೋಕಾಯುಕ್ತದ ಮಾಜಿ ಅಧಿಕಾರಿಯೊಬ್ಬರೊಡನೆ ಲೋಕಾಭಿರಾಮವಾಗಿ ನಡೆಸಿದ್ದ ಮಾತುಕತೆಯನ್ನೇ ಈಗ ಲೋಕಾಯುಕ್ತ ಸಂಸ್ಥೆಯೇ ಭ್ರಷ್ಟಾಚಾರದಿಂದ ತುಂಬಿದೆ ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಮೂಲಕ ಜನತೆಗೆ ದ್ರೋಹ ಬಗೆದಿದೆ. ಈ ಪತ್ರಿಕೆಯ ಸಂಪಾದಕ ತಾನು ಈ ಮೊದಲು ಸಂಪಾದಕನಾಗಿದ್ದ ಪತ್ರಿಕೆಯನ್ನೂ ಹೀಗೇ ರಾಜ್ಯ ರಾಜಕಾರಣದಲ್ಲಿ ತನ್ನ ವೈಯುಕ್ತಿಕ ಹಿತಾಸಕ್ತಿಗಳಿಗನುಗುಣವಾಗಿ ಸಕ್ರಿಯ ಪಾತ್ರಧಾರಿಯನ್ನಾಗಿ ಮಾಡುತ್ತಾ ಬಂದಿದ್ದನೆಂದೂ, ಆ ಕಾರಣದಿಂದಾಗಿ ಮತ್ತು ಈತನ ಮೇಲಿದ್ದ ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರಗಳ ಆರೋಪಗಳ ತನಿಖೆ ನಡೆಸಿ ಅದರ ಪ್ರಕಾಶಕರು ಈತನನ್ನು ಅಲ್ಲಿಂದ ಹೊರದೂಡಿದರೆಂದೂ ಹೇಳಲಾಗುತ್ತಿದೆ. ಈ ಸಂಪಾದಕ ಅಕ್ರಮ ಗಣಿಗಾರಿಕೆ ಲೂಟಿಯಷ್ಟೇ ಅಲ್ಲ, ಕುಪ್ರಸಿದ್ಧ 'ಸುದ್ದಿಗಾಗಿ ಕಾಸು' ಕಾರ್ಯಕ್ರಮದ ಫಲಾನುಭವಿ ಕೂಡ ಎಂಬ ಸುದ್ದಿಯೂ ಪ್ರಚಲಿತದಲ್ಲಿದೆ..

ಒಂದೆಡೆ ಸಾರ್ವಜನಿಕ ಜೀವನದ ಬಗ್ಗೆ ಸದಾ ನೀತಿ ಪಾಠ ಹೇಳುತ್ತಾ, ಇನ್ನೊಂದೆಡೆ ಮಾಧ್ಯಮದ ಸ್ವಾತಂತ್ರ್ಯದ ಹೆಸರಿನಲ್ಲಿ ತನ್ನ ಮೇಲೆ ಯಾವ ಬಾಹ್ಯ ನಿಯಂತ್ರಣವೂ ಇರಬಾರದೆಂದು ವಾದಿಸುತ್ತಾ ಪತ್ರಿಕಾ ಮಂಡಳಿಯ ಅಧ್ಯಕ್ಷ ಮಾರ್ಕಂಡೇಯ ಕಟ್ಜು ಅವರ ವಿರುದ್ಧ ಸಮರ ಸಾರಿರುವ ನಮ್ಮ ಮಾಧ್ಯಮ ಮಿತ್ರರು ಈ ಪ್ರಕರಣದ ತ್ವರಿತ ತನಿಖೆಗಾಗಿ ಏಕೆ ಆಗ್ರಹಿಸುತ್ತಿಲ್ಲವೋ ತಿಳಿಯದಾಗಿದೆ. ಈ ಎಲ್ಲ ಹಿನ್ನೆಲೆಯಲ್ಲಿ, ರಾಜಕಾರಣಿಗಳಂತೆಯೇ ಪತ್ರಕರ್ತರೂ ಸ್ವಯಂಪ್ರೇರಿತರಾಗಿ ಪ್ರತಿ ವರ್ಷ ತಮ್ಮ ಆಸ್ತಿಯನ್ನು ಬಹಿರಂಗವಾಗಿ ಏಕೆ ಘೋಷಿಸಿಕೊಳ್ಳಬಾರದೆಂದು ಯಾರಿಗಾದರೂ ಅನ್ನಿಸಿದರೆ ಆಶ್ಚರ್ಯವಿಲ್ಲ. ಸಾಂವಿಧಾನಿಕ ಆಡಳಿತ ಮುರಿದು ಬಿದ್ದು ಪ್ರಜಾಪ್ರಭುತ್ವವೆಂಬುದು ಲೂಟಿಕೋರರ ಪ್ರಭುತ್ವವಾಗಿ ಮಾರ್ಪಾಡಾಗುತ್ತಿರುವ ಇವೊತ್ತಿನ ಆತಂಕಕಾರಿ ಪರಿಸ್ಥಿತಿಯಲ್ಲಿ ಭ್ರಷ್ಟ ರಾಜಕಾರಣಿಗಳ ಜೊತೆ ಭ್ರಷ್ಟ ಮಾಧ್ಯಮವೂ ಸೇರಿಕೊಂಡರೆ ಗತಿ ಏನು? ಜವಾಬ್ದಾರಿಯುತ ಮಾಧ್ಯಮ ಮಿತ್ರರು ಮತ್ತು ಜನತೆ ಯೋಚಿಸಬೇಕು.

ಸಮಕಾಲೀನ

ವಾಲ್‌ಸ್ಟ್ರೀಟ್ ಮುತ್ತಿಗೆ:
ಬಂಡವಾಳಶಾಹಿಗೊಂದು ಪರ್ಯಾಯದ ಹುಡುಕಾಟ

ಮುಸ್ಲಿಂ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವವಾದಿ ಚಳುವಳಿಗಳನ್ನು ಪ್ರಾಯೋಜಿಸುತ್ತಿರುವ ಅಮೆರಿಕಾದಲ್ಲೇ ಈಗ ನಿಜ ಪ್ರಜಾಪ್ರಭುತ್ವಕ್ಕಾಗಿ ಒಂದು ದೊಡ್ಡ ಚಳುವಳಿ ಆರಂಭವಾಗಿದೆ! 'ವಾಲ್ ಸ್ಟೀಟ್' ಮುತ್ತಿಗೆ' ಎಂಬ ಹೆಸರಿನಿಂದ ಈಗ ಜಗತ್ತಿನ ಗಮನ ಸೆಳೆದಿರುವ ಈ ಚಳುವಳಿ ಅಲ್ಲಿನ ಬಂಡವಾಳಶಾಹಿ ಅರ್ಥ ವ್ಯವಸ್ಥೆ ಸೃಷ್ಟಿಸಿರುವ ಸಾಮಾಜಿಕ ಅಸ್ತವ್ಯಸ್ತತೆಗಳ

ಪರಿಣಾಮವಾಗಿ ಆರಂಭವಾಯಿತಾದರೂ, ಅದೀಗ 'ಪರ್ಯಾಯ ಜಗತ್ತು ಸಾಧ್ಯ' ಎಂಬ ಜಾಗತಿಕ ರಾಜಕಾರಣವನ್ನು ಹೊಸ ದಿಕ್ಕಿನತ್ತ ಕೊಂಡೊಯ್ಯುಬಯಸುವ ಚಳುವಳಿಯಾಗಿ ಮಾರ್ಪಾಡಾಗಿದೆ. ತನ್ನನ್ನು ತಾನು 'ಶೇ.೯೯'ರ ಚಳುವಳಿ ಎಂದು ಕರೆದುಕೊಳ್ಳುವ ಈ ಮುತ್ತಿಗೆ ಕಾರ್ಯಕ್ರಮ ಜಾಗತೀಕರಣದ ಮೂಲಕ ಈಗ ಮುಕ್ತ ಮಾರುಕಟ್ಟೆ ಆರ್ಥಿಕತೆಯ ರೂಪ ಪಡೆದಿರುವ ಕಾರ್ಪೋರೇಟ್ ಬಂಡವಾಳಶಾಹಿಯು ಶೇ೧ರಷ್ಟು ಜನರ ಪ್ರಜಾಪ್ರಭುತ್ವವನ್ನು ಸೃಷ್ಟಿಸಿ ಪ್ರಜಾಪ್ರಭುತ್ವದ ಮೂಲ ಕಲ್ಪನೆಯನ್ನೇ ವಿಕೃತಗೊಳಿಸಿದೆ ಎಂದು ಹೇಳುತ್ತದೆ.

ಅಮೆರಿಕಾ ತನ್ನ ಬಂಡವಾಳಶಾಹಿಯ ಜಾಗತೀಕರಣದ ಮೂಲಕ ತಾನು ಕೆಟ್ಟಿರುವುದಲ್ಲದೆ ತನ್ನೊಡನೆ ಆರ್ಥಿಕ ವ್ಯವಹಾರ ನಡೆಸುವ ಯೂರೋಪಿನ ಅನೇಕ ದೇಶಗಳ ಆರ್ಥಿಕತೆಯನ್ನೂ ಅಸ್ತವ್ಯಸ್ತಗೊಳಿಸಿದೆ. ಉದ್ಯೋಗ ಅಭದ್ರತೆ, ಸಂಬಳ ಕಡಿತ, ಸಾರ್ವಜನಿಕ ಆರೋಗ್ಯ, ನೀರು, ರಸ್ತೆ, ವಿದ್ಯುತ್, ಶಿಕ್ಷಣ ಇತ್ಯಾದಿ ಸಾಮಾಜಿಕ ಸೇವೆಗಳಿಗೆ ಹಣದ ಕೊರತೆ ಇತ್ಯಾದಿ ಸಮಸ್ಯೆಗಳನ್ನು ಈ ಆರ್ಥಿಕತೆಗಳು, ವಿಶೇಷವಾಗಿ ಅಮೆರಿಕಾದ ಆರ್ಥಿಕತೆ ಎದುರಿಸುತ್ತಿದೆ. ಇದಕ್ಕೆಲ್ಲ ಮೂಲ ಕಾರಣ ಅಮೆರಿಕಾದ ಬ್ಯಾಂಕಿಂಗ್ ಕ್ಷೇತ್ರ ಆರ್ಥಿಕ ನೈತಿಕತೆಯನ್ನು ಬುಡಮೇಲುಗೊಳಿಸಿ ಕೊನೆಗೆ ತಾನೇ ದಿವಾಳಿ ಎದ್ದಿರುವುದು. ಹಾಗಾಗಿಯೇ ಅಮೆರಿಕಾದ ಜನರು ಈ ಬ್ಯಾಂಕುಗಳ ಮುಖ್ಯ ಕಛೇರಿಗಳಿರುವ ನ್ಯೂಯಾರ್ಕಿನ ವಾಲ್ ಸ್ಟ್ರೀಟ್‌ಗೆ ಕಳೆದ ಎರಡು ತಿಂಗಳುಗಳಿಗೂ ಹೆಚ್ಚಿನ ಕಾಲದಿಂದ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರಿ ಮುತ್ತಿಗೆ ಹಾಕಿ ತಮ್ಮ ಪ್ರತಿಭಟನೆ ಮತ್ತು ಖಂಡನೆಯನ್ನು ದಾಖಲಿಸುತ್ತಿದ್ದಾರೆ. ಇವರು ಪಕ್ಕದ ಝುಕ್ಕೋಟಿ ಉದ್ಯಾನವನದಲ್ಲಿ ಗುಡಾರಗಳನ್ನು ಹಾಕಿಕೊಂಡು ಅಲ್ಲಿಯೇ ಬದುಕುತ್ತಾ ಈ ಚಳುವಳಿಯನ್ನು ಮುಂದುವರೆಸಿದ್ದಾರೆ. ನ್ಯೂಯಾರ್ಕಿನಲ್ಲಿ ಮಾತ್ರವಲ್ಲ, ಅಮೆರಿಕಾ ಮತ್ತು ಯೂರೋಪಿನ ೩೦ಕ್ಕೂ ಹೆಚ್ಚು ನಗರಗಳಲ್ಲಿ ಇಂತಹ ಮುತ್ತಿಗೆ-ಪ್ರತಿಭಟನೆಗಳು ನಡೆದಿವೆ, ಈ ಎಲ್ಲ ದೇಶಗಳ ಭಿನ್ನಮತೀಯ ಚಿಂತಕರು, ಆರ್ಥಿಕ ತಜ್ಞರು, ಹೋರಾಟಗಾರರು ಈ ಪ್ರತಿಭಟನಾ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಜನಸ್ತೋಮವನ್ನು ಉದ್ದೇಶಿಸಿ ಮಾತನಾಡಿ ಅವರಲ್ಲಿ ಸ್ಫೂರ್ತಿ ತುಂಬುತ್ತಿದ್ದಾರೆ. ಇದು ಸದ್ಯಕ್ಕೆ ನಿಲ್ಲದ ಚಳುವಳಿಯಾಗಿ ಹಬ್ಬತೊಡಗಿದೆ.

ಬಂಡವಾಳಶಾಹಿಯು ತನ್ನ ವಸಾಹತುಶಾಹಿ ಹುಟ್ಟುಗುಣದಿಂದಾಗಿಯೇ, ಜಗತ್ತನ್ನು ಅಲ್ಪಸಂಖ್ಯಾತ ಉಳ್ಳವರ ಮತ್ತು ಬಹುಸಂಖ್ಯಾತ ವಂಚಿತರ ಎರಡು ಪ್ರತ್ಯೇಕ ಜಗತ್ತುಗಳನ್ನಾಗಿ ಒಡೆಯುತ್ತದೆ ಎಂದು ಲೋಹಿಯಾ ಸೇರಿದಂತೆ ಹಲವು ಸಮಾಜವಾದಿ ಚಿಂತಕರು ಸಾರಿ ಹೇಳಿದ್ದರು. ಈ ಹಳೆಯ ಸತ್ಯವನ್ನು ಅಮೆರಿಕಾದ ಮತ್ತು ಯೂರೋಪಿನ ಅರ್ಥಶಾಸ್ತ್ರಜ್ಞರು ಈಗ ಹೊಸದಾಗಿ ಸಂಶೋಧನೆ ಮಾಡಿಕಂಡುಕೊಳ್ಳುತ್ತಿದ್ದಾರೆ! ಹಾಗೇ, ಅಮೆರಿಕನ್ ಸಮಾಜದ ತುತ್ತ ತುದಿಯ ಶೇ.೧ರಷ್ಟು ಜನರ ಒಟ್ಟು ಸಂಪತ್ತು ತಳಗಿನ ಶೇ. ೯೦ರಷ್ಟು ಜನರ ಒಟ್ಟು ಸಂಪತ್ತಿಗಿಂತ ಹೆಚ್ಚಿದೆ ಎಂಬ ಸಂಗತಿಯ ಆಧಾರದ ಮೇಲೆ ಈಗ ಅವರು ಇನ್ನೊಂದು ಸಂಶೋಧನೆ ಮಾಡಿ ದೇಶದಲ್ಲಿ ಅಸಮತೆಯ

ಪ್ರಮಾಣ ಹೆಚ್ಚುತ್ತಿದ್ದಂತೆ ಆ ದೇಶದ ಬೆಳವಣಿಗೆಯೂ ಕುಂಠಿತಗೊಳ್ಳುತ್ತದೆ ಎಂಬ ಇನ್ನೊಂದು ಹಳೆಯ ಸಮಾಜವಾದಿ ಸತ್ಯವನ್ನು ಕಂಡುಕೊಂಡಿದ್ದಾರೆ! ೨೦೦೮ರ ಆರ್ಥಿಕ ಕುಸಿತದ ಸಂದರ್ಭದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮೆರಿಕನ್ ಅರ್ಥ ಶಾಸ್ತ್ರಜ್ಞ ಜೋಸೆಫ್ ಸ್ಟಿಗ್ಲಿಟ್ಜ್ ಹೇಳಿದ್ದ 'ನಾವೀಗ ಈ ಬಿಕ್ಕಟ್ಟಿನ ಪರಿಹಾರ ಕುರಿತ ಹೊಸ ಹೊಳಹುಗಳಿಗಾಗಿ ಸಮಾಜವಾದಿ ಅರ್ಥಶಾಸ್ತ್ರದ ಕಡೆ ಕಣ್ಣು ಹಾಯಿಸಬೇಕಿದೆ' ಎಂಬ ಮಾತು ಈ ವಾಲ್‌ಸ್ಟ್ರೀಟ್ ಮುತ್ತಿಗೆ ಚಳುವಳಿಯ ಘೋಷಣೆಗಳ ತುಂಬಾ ಅನುರಣಿಸುತ್ತಿರುವುದನ್ನು ನಾವು ಗಮನಿಸಬಹುದು. ಅವರೀಗ ಕೂಗಿ ಹೇಳುತ್ತಿದ್ದಾರೆ: ನೀವು ನಮ್ಮನ್ನು ಇಲ್ಲಿಂದ ಹೊರದೂಡಲಾರಿರಿ. ಏಕೆಂದರೆ ನಮಗೆ ಜ್ಞಾನೋದಯವಾಗಿದೆ; ಹೊಸ ವಿಚಾರ ಸಿಕ್ಕಿದೆ! ನಾವು ಇನ್ನೊಂದು ಜಗತ್ತು ಕಟ್ಟಬೇಕಿದೆ! ಅದಕ್ಕಾಗಿ ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ಹಾಕಿ! ಬಡವರ ಎಲ್ಲ ಸಾಲಗಳನ್ನೂ ಮನ್ನಾ ಮಾಡಿ! ಕಾರ್ಪೋರೇಟ್ ಬಂಡವಾಳಶಾಹಿ ವ್ಯವಹಾರಗಳನ್ನು ಸರ್ಕಾರಿ ವ್ಯವಹಾರಗಳಿಂದ ಬೇರ್ಪಡಿಸಿ! ಪೆಟ್ರೋಲ್ ಆಧಾರಿತ ಆರ್ಥಿಕತೆಗೆ ಕಡಿವಾಣ ಹಾಕಿ; ಪರ್ಯಾಯ ಇಂಧನಕ್ಕಾಗಿ ಹುಡುಕಾಟ ನಡೆಸಿ. ನಮ್ಮ ಜೀವ ಪರಿಸರವನ್ನು ಸಂರಕ್ಷಿಸಿ!

ಈ ಘೋಷಣೆಗಳನ್ನು ಕೇವಲ ಅಮೆರಿಕಾ ಮತ್ತು ಯೂರೋಪಿನ ಆಡಳಿತಗಾರರು ಮಾತ್ರವಲ್ಲ ಮುಕ್ತ ಮಾರುಕಟ್ಟೆ ಆರ್ಥಿಕತೆಯ ಆರಾಧಕರಾದ ನಮ್ಮ ದೇಶದ ಆಡಳಿತಗಾರರೂ–ವಿಶೇಷವಾಗಿ ಮನಮೋಹನ ಸಿಂಗ್ ಮತ್ತು ಅಹ್ಲೂವಾಲಿಯಾಗಳು–ಕೇಳಿಸಿಕೊಳ್ಳಬೇಕು! ಜೊತೆಗೆ ಹೊಸ ಅಭಿವೃದ್ಧಿ ವೇಗದ ರೋಚಕತೆಯಲ್ಲಿ, ಅದರ ಸುಪುಷ್ಟ ಫಲಗಳನ್ನು ಅನುಭವಿಸುತ್ತಾ ಮೈಮರೆತಿರುವ ಮಧ್ಯಮ ವರ್ಗದ ನಾವೂ! ಆದರೆ ಕೇಂದ್ರ ಸರ್ಕಾರ ತನ್ನ ಒಳಗಿನ ಮತ್ತು ಹೊರಗಿನ ಪ್ರಬಲ ವಿರೋಧದ ನಡುವೆಯೂ, ಮೊನ್ನೆ ಚಿಲ್ಲರೆ ವ್ಯಾಪಾರದ ವಲಯದಲ್ಲೂ ನೇರ ವಿದೇಶೀ ಬಂಡವಾಳದ ಹೂಡಿಕೆಗೆ ಅನುಮೋದನೆ ನೀಡಿ ತನ್ನ ರಾಜಕೀಯ ಅಸೂಕ್ಷ್ಮತೆಯನ್ನು ಮೆರೆದಿದೆ, ಪ್ರಜಾಪ್ರಭುತ್ವದ ತಿರುಳನ್ನು ಧಿಕ್ಕರಿಸಿದೆ. ಅದು ಜನರಿಂದ ಪಾಠ ಕಲಿಯುವ ದಿನಗಳು ದೂರವಿಲ್ಲವೆಂದು ತೋರುತ್ತದೆ. ಅದೇನೇ ಇರಲಿ, ಈ ಸಂಚಿಕೆಯಲ್ಲಿ ಈ ಬಗ್ಗೆ ಎರಡು ಲೇಖನಗಳನ್ನು ನೀಡುತ್ತಿದ್ದೇವೆ.–ಸಂ.

<u>ದಾಖಲೆ</u>

ಲೋಹಿಯಾರ ಕೊನೆಯ ಸಂದರ್ಶನ...

೧೯೬೭ರ ಜುಲೈ ೩೧ ಹಾಗೂ ಆಗಸ್ಟ್ ೫ರಂದು ಎರಡು ಭಾಗಗಳಲ್ಲಿ ಲೋಹಿಯಾರೊಂದಿಗೆ ಪ್ರೊ. ಬ್ರಾಸ್ ಎಂಬ ವಿದೇಶಿ ಪತ್ರಕರ್ತರೊಬ್ಬರು ನಡೆಸಿದ ಈ ಸಂದರ್ಶನ ಬಹುಶಃ ಅವರು ತಮ್ಮ ಜೀವಿತದಲ್ಲಿ ನೀಡಿದ ಕೊನೆಯ ಸಂದರ್ಶನವಿರಬಹುದು. ಲೋಹಿಯಾರ 'ಕಾಂಗ್ರೆಸ್ಸೇತರವಾದ' ಎಂಬ ಕಾರ್ಯಕ್ರಮದ ಪರಿಣಾಮವಾಗಿ ೧೯೬೭ರ ಸಾರ್ವತ್ರಿಕ ಚುನಾವಣೆಗಳಲ್ಲಿ ರಾಷ್ಟ್ರದಲ್ಲಿ ಮೊದಲ ಬಾರಿಗೆ ಹಲವು ರಾಜ್ಯಗಳಲ್ಲಿ

ಕಾಂಗ್ರೆಸ್ ಅಧಿಕಾರದಿಂದ ಪದಚ್ಯುತಗೊಂಡು ಕೇಂದ್ರದಲ್ಲೂ ಅದು ತನ್ನ ಬಲವನ್ನು ಗಣನೀಯವಾಗಿ ಕಳೆದುಕೊಂಡು ಆಂತರಿಕ ತಳಮಳವನ್ನು ಎದುರಿಸುತ್ತಿದ್ದ ಸಂದರ್ಭವದು. ಲೋಹಿಯಾ ಆಗ ಮೊದಲ ಬಾರಿಗೆ ರಾಷ್ಟ್ರದ ಅಧಿಕಾರ ರಾಜಕಾರಣದ ಕೇಂದ್ರ ಬಿಂದುವಿಗೆ ಬಂದು ಎಲ್ಲ ರಾಜಕೀಯ ವೀಕ್ಷಕರ ಗಮನ ಸೆಳೆದಿದ್ದರು. ಕೇಂದ್ರದಲ್ಲಿ ಮೊದಲ ಬಾರಿಗೆ ಸಮ್ಮಿಶ್ರ ಸರ್ಕಾರದ ಸಾಧ್ಯತೆ ಮೂಡಿ ರಾಜಕೀಯ ದೃಷ್ಟಿಯಿಂದ ಕುತೂಹಲಕಾರಿಯೆನ್ನಿಸುವ ಹಲವು ಪ್ರಶ್ನೆಗಳು ಮುಂಚೂಣಿಗೆ ಬಂದಿದ್ದವು. ಇಂತಹ ಕೆಲವು ಪ್ರಶ್ನೆಗಳಿಗೆ ಲೋಹಿಯಾ ಇಲ್ಲಿ ಉತ್ತರಿಸಿದ್ದಾರೆ. 'ಜನತಾ' ಪತ್ರಿಕೆ ಹೊರತಂದ ಲೋಹಿಯಾ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿರುವ ಈ ಸಂದರ್ಶನದ

ಧ್ವನಿಮುದ್ರಣದಲ್ಲಿ ಹಲವು ದೀರ್ಘ ಅಡಚಣೆಗಳಿದ್ದು, ಅದರಲ್ಲಿ ಇಂದಿನ ಸಂದರ್ಭಕ್ಕೆ ಕುತೂಹಲಕಾರಿಯೆನಿಸುವ ಒಂದೆರಡು ಪ್ರಶ್ನೋತ್ತರಗಳನ್ನಷ್ಟೇ ಆಯ್ದು ಇಲ್ಲಿ ನೀಡಲಾಗಿದೆ.–ಸಂ.

ಪ್ರೊ. ಬ್ರಾಸ್: ನಾನು ನಿಮ್ಮಿಂದ ಭಾರತೀಯ ಸಮಾಜವಾದಿ ಚರಿತ್ರೆಯ ಇತಿಹಾಸ ಕುರಿತಂತೆ ನಿಮ್ಮ ಅಭಿಪ್ರಾಯಗಳನ್ನು ಮತ್ತು ಜಯಪ್ರಕಾಶ್(ನಾರಾಯಣ), ಅರುಣಾ(ಅಸೀಫ್ ಅಲಿ), ಆಚಾರ್ಯ ನರೇಂದ್ರದೇವ, ಅಶೋಕ ಮೆಹ್ತಾ ಹಾಗೂ ನಿಮ್ಮ ನಡುವಣ ಸಂಬಂಧಗಳ ಬಗ್ಗೆ ಕೇಳಬಯಸುತ್ತೇನೆ. ಹೇಳಿ, ನೀವು ನಿಮ್ಮ ಕೆಲವು ಗೆಳೆಯರು ಹೇಳುವ ಹಾಗೆ ಓರ್ವ ಜಗಳಗಂಟರೋ ಅಥವಾ ಅಲ್ಲವೋ?

ಲೋಹಿಯಾ: ಹೌದು, ಹಾಗಂತ ಹೇಳುವವರು ಇದ್ದಾರೆ. ಆದರೆ ವಿಚಿತ್ರ ಎಂದರೆ, ಈ ಗೆಳೆಯರಲ್ಲಿ ಯಾರೊಬ್ಬರೊಂದಿಗೂ ಯಾವುದೇ ವಿಷಯದ ಬಗೆಗೂ ಜಗಳವಾಡದ ಏಕೈಕ ವ್ಯಕ್ತಿ ಎಂದರೆ ನಾನೇ. ಅವರು ಸುಳ್ಳು ಹೇಳುವುದಿಲ್ಲವಾದರೆ, ಅವರೆಲ್ಲರೂ ಈ ಮಾತನ್ನು ಒಪ್ಪಲೇಬೇಕು. ಜಯಪ್ರಕಾಶ್, ಅರುಣಾ, ಅಚ್ಯುತ್(ಪಟವರ್ಧನ್) ಎಲ್ಲರೂ ಒಂದಲ್ಲ ಒಂದು ವಿಷಯದ ಮೇಲೆ ಪರಸ್ಪರ ಜಗಳ ಆಡುತ್ತಲೇ ಇರುತ್ತಿದ್ದರು. ಆದರೆ ನಾನೆಂದೂ ಆಡಿಲ್ಲ. ಅಶೋಕ ಮತ್ತು ಜಯಪ್ರಕಾಶರ ನಡುವೆ ಮಾರಾಮಾರಿಯೇ ನಡೆದು ಹೋಗಿದೆ.

ಆದರೆ, ನನ್ನಲ್ಲೇನೋ ದೋಷವಿರಬೇಕು ಅಥವಾ ನನ್ನ ದುರದೃಷ್ಟವಿರಬೇಕು, ಅದಕ್ಕೇ ಈ ಎಲ್ಲ ನಿಂದನೆ. ನೀನು ನಮ್ಮೊಂದಿಗೆ ಎಂದೂ ಜಗಳ ಆಡಲಾಗದಿರುವ ಕಾರಣದಿಂದಲೇ ನಿನ್ನೊಂದಿಗೆ ಸಂಬಂಧಗಳು ಕಷ್ಟ ಎಂದು ಒಮ್ಮೆ ಜಯಪ್ರಕಾಶ್ ನನಗೆ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದೇನೋ. ಜಯಪ್ರಕಾಶ್ ಪ್ರಕಾರ, ಜಗಳ ಆಡುವುದರ ಮೂಲಕವೇ ನಾವು ಒಂದಲ್ಲ ಒಂದು ವಿಷಯದ ಬಗ್ಗೆ ಒಂದುಗೂಡಬಹುದು. ಆದರೆ ರಾಜಕಾರಣದಲ್ಲಿ ಜಗಳಗಳು ಎಂತಹ ವಿಷಯಗಳ ಬಗ್ಗೆ ನಡೆಯುವುವು ಎಂಬುದು ಎಲ್ಲರಿಗೂ ಗೊತ್ತು... ಅವು ಆತ್ಯಂತಿಕವಾಗಿ ತಾತ್ವಿಕ ವಿಷಯಗಳ ಬಗೆಗಿನ ಜಗಳಗಳಲ್ಲ... (ಅಡಚಣೆ)

ಪ್ರೊ. ಬ್ರಾಸ್: ನೀವು ಡಿ.ಎಂ.ಕೆ. ಜೊತೆ ಕೆಲಸ ಮಾಡಬಲ್ಲಿರಾ? ನೀವೇ ಹೇಳಿದಂತೆ, ಶ್ರೀಮತಿ ಗಾಂಧಿ ಮತ್ತು ಅವರ ಜೊತೆ ಕಾಂಗ್ರೆಸ್ ಇನ್ನೆರಡು ಮೂರು ವರ್ಷಗಳಲ್ಲಿ

ಹೋದರೆ, ನೀವು ಡಿ.ಎಂ.ಕೆ. ಜೊತೆ ಮತ್ತು ಅದರ ಜೊತೆ ಜನಸಂಘ ಕೆಲಸ ಮಾಡಲು ಸಾಧ್ಯ ಅನ್ನಿಸುತ್ತದಾ?

ಲೋಹಿಯಾ: ಜನಸಂಘ–ಡಿ.ಎಂ.ಕೆ ಸಂಬಂಧದ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಒಂದು ವಿಷಯ ನಿಮಗೆ ಹೇಳಬೇಕು. ಕಳೆದ ಚುನಾವಣೆಯಲ್ಲಿ ಜನಸಂಘ ನನ್ನ ವಿರುದ್ಧ ಅಭ್ಯರ್ಥಿ ನಿಲ್ಲಿಸಿತ್ತು. ಇದು ಬಹಳ ಜನಕ್ಕೆ ಗೊತ್ತಿಲ್ಲ. ಎಲ್ಲ ವಿರೋಧ ಪಕ್ಷಗಳನ್ನೂ ಒಗ್ಗೂಡಿಸುವ ನನ್ನ ಕಾರ್ಯತಂತ್ರದಿಂದಾಗಿ ಎಲ್ಲರೂ ನನ್ನ ಬಗ್ಗೆ ಅನುಕೂಲವಾಗಿದ್ದರು ಎಂಬ ಕಲ್ಪನೆಯಲ್ಲಿ ಜನರಿದ್ದಾರೆ. ಆದರೆ ವಾಸ್ತವ ಸ್ಥಿತಿ ಹಾಗೇನೂ ಇಲ್ಲ. ಜನಸಂಘ ನನ್ನ ವಿರುದ್ಧ ಅಭ್ಯರ್ಥಿಯನ್ನು ನಿಲ್ಲಿಸಿದ್ದಷ್ಟೇ ಅಲ್ಲ, ಸ್ಪರ್ಧೆಯನ್ನು ತುಂಬಾ ಕೆಳಮಟ್ಟಕ್ಕೆ ಒಯ್ದಿತು. ಈಗಿರುವ ರಾಜಕೀಯ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಸಬಾರದೆಂದಷ್ಟೇ ಕೆಳಮಟ್ಟದ ಸ್ಪರ್ಧೆ ಎಂಬ ಈ ನಾಗರಿಕ ಭಾಷೆಯನ್ನು ಬಳಸುತ್ತಿದ್ದೇನೆ. ಅವರು ಏನು ಮಾಡಿದರು ಗೊತ್ತೆ? ನಮ್ಮ ಪಕ್ಷದಿಂದಲೇ ಓರ್ವ ಮುಸ್ಲಿಂ ಕಾರ್ಯಕರ್ತನನ್ನು ಸೆಳೆದುಕೊಂಡು ಹೋದರು. ಮುಸ್ಲಿಂ ಮತದಾರರು ಹೆಚ್ಚಿರುವ ಹಳ್ಳಿಗಳಲ್ಲಿ ಈ ಜನಸಂಘಿಯ ಅಂದರೆ ಈ ಮುಸ್ಲಿಂ ಜನಸಂಘಿಯ ಬಾಯಲ್ಲಿ–ಆತ ಕಳೆದ ಚುನಾವಣೆಯಲ್ಲಿ ನನ್ನ ಚುನಾವಣಾ ಏಜೆಂಟನಾಗಿದ್ದ–ಲೋಹಿಯಾ ಇಸ್ಲಾಂನ ಶತ್ರು ಮತ್ತು ಕುರಾನ್‌ನ ಉಪದೇಶಗಳ ವಿರೋಧಿ ಎಂದು ಹೇಳಿಸತೊಡಗಿದರು...

ಪ್ರೊ. ಬಾಸ್: ಬಹುಶಃ ನೀವು ಆಗ ಸಮಾನ ನಾಗರಿಕ ಸಂಹಿತೆ ಪರವಾಗಿ...

ಲೋಹಿಯಾ: ಹೌದು ನಾನು ಸಮಾನ ನಾಗರಿಕ ಸಂಹಿತೆ ಅಗತ್ಯವೆಂದು ಹೇಳಿದ್ದೆ. ಆದರೆ ಅದು ಜನಸಂಘದ ಬಾಯಲ್ಲಿ ಈ ಬಣ್ಣ ಪಡೆದು ಹೊಮ್ಮುವುದೆಂದರೆ...

ಪ್ರೊ. ಬ್ರಾಸ್: ನೀವು ಅದರ ಪರ ಇದ್ದಿರಲ್ಲವೆ?

ಲೋಹಿಯಾ: ಹೌದು, ನಾನು ಈಗಲೂ ಸಮಾನ ನಾಗರಿಕ ಸಂಹಿತೆಯ ಪರವಾಗಿರುವೆ. ಆದರೆ ಜನಸಂಘವೂ ಅದರ ಪರವಾಗಿತ್ತು. ಆದರೆ ಈ ಜನಸಂಘ ನನ್ನನ್ನು ಸೋಲಿಸಲು ತನ್ನ ಈ ಘೋಷಿತ ಕಾರ್ಯಕ್ರಮಕ್ಕೇ ವಿದಾಯ ಹೇಳಿ, ನಾನು ಕುರಾನ್ ನಿಯಮಗಳ ವಿರೋಧಿಯಾಗಿದ್ದು, ಒಂದು ಸಮಾನ ನಾಗರಿಕ ಸಂಹಿತೆ ಬೇಕೆಂದು ಪ್ರತಿಪಾದಿಸುತ್ತಿರುವವನೆಂದು ಮುಸ್ಲಿಂ ಮತದಾರರಿಗೆ ಹೇಳಲು ನನ್ನ ಪಕ್ಷದಿಂದಲೇ ಓರ್ವ ಮುಸ್ಲಿಂ ಪಕ್ಷಾಂತರಿಯನ್ನು ಬಳಸಿಕೊಂಡಿತು. ಹಾಗಾಗಿ ನೀವು ದಯವಿಟ್ಟು ಈಗ ಜನಸಂಘ ಮತ್ತು ನನ್ನ ಸಂಬಂಧ ಕುರಿತ ವಿಷಯವನ್ನು ಹೆಚ್ಚು ಕೆದಕಲು ಹೋಗಬೇಡಿ... ನನ್ನ ದೇಶದಲ್ಲಿ ರಾಜಕಾರಣವೆಂಬುದು ತಾತ್ವಿಕ ನೆಲೆ ತಲುಪಲು

ಇನ್ನೂ ಬಹು ದೀರ್ಘ ದಾರಿ ಕ್ರಮಿಸಬೇಕಿದೆ.

ಪ್ರೊ. ಬ್ರಾಸ್: ಆಯಿತು, ಅದನ್ನು ಅಲ್ಲಿಗೇ ಬಿಡೋಣ. ನೀವು ಕೇಂದ್ರ ಸರ್ಕಾರದಲ್ಲಿ ಡಿ.ಎಂ.ಕೆ.ಯೊಂದಿಗೆ ಕೆಲಸ ಮಾಡಬಲ್ಲಿರಾ?

ಲೋಹಿಯಾ: ಅಂತಹ ಸಮಯ ಬಂದರೆ ಜನಸಂಘದೊಂದಿಗೂ ಕೆಲಸ ಮಾಡಬಲ್ಲೆ...

ಪ್ರೊ. ಬ್ರಾಸ್: ನೀವು ಕೆಲಸ ಮಾಡಬಲ್ಲಿರಿ ಎಂದು ನನಗೆ ಗೊತ್ತು....

ಲೋಹಿಯಾ: ಹೌದು, ಇಷ್ಟೆಲ್ಲ ಪಡಿಪಾಟಲುಗಳ ಹೊರತಾಗಿಯೂ... ಏಕೆಂದರೆ ರಾಜಕಾರಣ ನನಗೆಂದೂ ವೈಯುಕ್ತಿಕ ನೆಲೆಯ ವ್ಯವಹಾರವಾಗಿಲ್ಲ. ನಿಜ, ಇಂಥದೆಲ್ಲ ನನಗೆ ನೋವನ್ನುಂಟು ಮಾಡುತ್ತದೆ. ಯಾರಿಗೆ ನೋವಾಗುವುದಿಲ್ಲ ಹೇಳಿ? ನಾನೇನೂ ದೇವ ಮಾನವನಲ್ಲವಲ್ಲ! ನನಗೆ ನೋವಾಗುತ್ತದೆ, ನೋವಾಗಿದೆ... ಆದರೂ ನಾನು ಜನಸಂಘದೊಂದಿಗೆ ಕೆಲಸ ಮಾಡುವೆ. ಡಿ.ಎಂ.ಕೆ. ಬಗ್ಗೆ ಹೇಳುವುದಾದರೆ, ತಮ್ಮ ಪಕ್ಷಕ್ಕೆ ಅತಿ ಹತ್ತಿರವಾದ ಪಕ್ಷವೊಂದೇನಾದರೂ ಈ ದೇಶದಲ್ಲಿದ್ದರೆ ಅದು ನನ್ನ ಪಕ್ಷ ಎಂದು ಈಗಾಗಲೇ ಅಧಿಕೃತವಾಗಿಯೇ ಅದರ ನಾಯಕರು ಹೇಳಿದ್ದಾರೆ. ಅಷ್ಟೇ ಅಲ್ಲ, ನನ್ನ ಭಾಷಾ ನೀತಿ ಬಗ್ಗೆ ಅವರ ಭಿನ್ನಾಭಿಪ್ರಾಯವಿದ್ದರೂ ಅವರು ನಿರ್ದಿಷ್ಟವಾಗಿ ಹೆಸರನ್ನು ಉಲ್ಲೇಖಿಸಿದ್ದಾರೆ...

ಪ್ರೊ. ಬ್ರಾಸ್: ಹಾಗಿದ್ದಲ್ಲಿ ಮುಂದೆ ಅಂತಹ ಯಾವುದೇ ನಿರ್ಣಾಯಕ ಘರ್ಷಣೆ ಇರುವುದಿಲ್ಲವೆಂದು ನೀವು ಹೇಳುತ್ತಿದ್ದೀರಿ...

ಲೋಹಿಯಾ: ಅಲ್ಲ, ಅಲ್ಲ, ಖಂಡಿತ ಹಾಗಲ್ಲ. ಅಂತಹ ನಿರ್ಣಯಕ್ಕೆ ಓಡಬೇಡಿ. ಅದು ಬಹಳ ಅವಸರದ ನಿರ್ಣಯವಾದೀತು!

(ಕನ್ನಡಕ್ಕೆ: **ಡಿಎಸ್ಸೆನ್**)

ಜನವರಿ, ೨೦೧೨

ಭ್ರಷ್ಟಾಚಾರಕ್ಕೆ ಸಾಮಾಜಿಕ ನ್ಯಾಯದ ರಕ್ಷಣೆ!

ಭಾರತದ ಅತ್ಯಂತ ಹಿರಿಯ ಪಕ್ಷವೆನಿಸಿರುವ, ಹಾಗಾಗಿ ಅತ್ಯಂತ ಪ್ರಬುದ್ಧ ಪಕ್ಷವೂ ಆಗಿರಬೇಕಾದ ಕಾಂಗ್ರೆಸ್ ಪಕ್ಷ ದಿನೇ ದಿನೇ ಅತಿ ಕ್ಷುದ್ರ ಮತ್ತು ಸಂಕುಚಿತ ಬುದ್ಧಿಯ ಪಕ್ಷವಾಗಿ ಪರಿವರ್ತಿವಾಗುತ್ತಿರುವುದನ್ನು ರಾಷ್ಟ್ರದ ಪ್ರಜ್ಞಾವಂತ ಜನತೆ ವಿಷಾದದಿಂದ ಗಮನಿಸುತ್ತಿದೆ. ಇತ್ತೀಚೆಗೆ ಅದರ ನೇತೃತ್ವದ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿದ ಲೋಕಪಾಲ ಮಸೂದೆಗೆ ಸಂಬಂಧಪಟ್ಟಂತೆ ಅಲ್ಪಸಂಖ್ಯಾತರಿಗೆಂದು (ಅಂದರೆ ವಾಸ್ತವವಾಗಿ ಮುಸ್ಲಿಮರಿಗೆ) ಶೇ. ೪.೫ರಷ್ಟು ಮೀಸಲಾತಿಯನ್ನು ಸೂಚಿಸುವ ಮೂಲಕ ಈ ಮಸೂದೆಯ ಭವಿಷ್ಯವನ್ನೇ ಡೋಲಾಯಮಾನಗೊಳಿಸಿದೆ. ಈ ಮಸೂದೆಯ ಬಗ್ಗೆ, ಮುಖ್ಯವಾಗಿ ಸಿ.ಬಿ.ಐ. ಸಂಸ್ಥೆಗೆ ಯಾವ ಸ್ವರೂಪದ ಸ್ವಾಯತ್ತತೆ ನೀಡಬೇಕೆಂಬ ಹಾಗೂ ಇನ್ನಿತರ ಕೆಲವು ಅಂಶಗಳ ಬಗ್ಗೆ ಬಹುಪಾಲು ವಿರೋಧ ಪಕ್ಷಗಳಲ್ಲದೆ, ಆಡಳಿತ ಪಕ್ಷದ ಕೆಲ ಸದಸ್ಯರೂ ಮತ್ತು ಅದರ ಕೆಲ ಮಿತ್ರ ಪಕ್ಷಗಳೂ ಭಿನ್ನಾಭಿಪ್ರಾಯ ವ್ಯಕ್ತಪಡಿಸಿವೆ. ಆ ಕಾರಣಗಳಿಂದಾಗಿಯೇ ಮಸೂದೆಯ ಅನುಮೋದನೆ

ಸಂಕಷ್ಟಕ್ಕೀಡಾಗಿರುವ ಸಂದರ್ಭದಲ್ಲಿ, ಕೊನೇ ಘಳಿಗೆಯಲ್ಲಿ–ಮೊದಲು ಸೂಚಿಸಿ, ನಂತರ ಹಿಂಪಡೆದು; ನಂತರ ಐದು ರಾಜ್ಯಗಳಲ್ಲಿನ ಚುನಾವಣೆಗಳ ಅಧಿಕೃತ ಘೋಷಣೆಯ ಕೆಲವೇ ದಿನಗಳ ಮುನ್ನ ತರಾತುರಿಯಲ್ಲಿ–ಈ ಮೀಸಲಾತಿಯನ್ನು ತಿದ್ದುಪಡಿಯಾಗಿ ಸೂಚಿಸುವ ಮೂಲಕ ಕಾಂಗ್ರೆಸ್ ಪಕ್ಷ ತನ್ನ ರಾಜಕೀಯ ಘನತೆಯನ್ನು ಸಂಪೂರ್ಣ ಹಾಳು ಮಾಡಿಕೊಂಡಿದೆ.

ಪತ್ರಿಕೆಯ ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಲೋಕಪಾಲ ಮಸೂದೆಯ ಭವಿಷ್ಯ ನಿರ್ಧಾರವಾಗಿರಬಹುದು. ಒಂದು ಪಕ್ಷ ಅದು ಸಂಸತ್ತಿನಿಂದ ಅನುಮೋದಿತವಾಗಿದ್ದರೂ, ಅದರಲ್ಲಿ ಈ ಮೀಸಲಾತಿಯ ಸೂಚನೆ ಇದ್ದಲ್ಲಿ ಅದಕ್ಕೆ ನ್ಯಾಯಾಂಗದ ರಾಜ್ಯಾಂಗೀಯ ಮುದ್ರೆ ದೊರಕುವುದು ಕಷ್ಟವೇ ಎಂದು ಸಂವಿಧಾನ

ತಜ್ಞರನೇಕರು ಹೇಳುತ್ತಿದ್ದಾರೆ. ಕಾರಣ, ಮತೀಯ ಅಲ್ಪಸಂಖ್ಯಾತತೆಯ ಆಧಾರದ ಮೇಲೆ ಯಾವುದೇ ಮೀಸಲಾತಿಗೆ ರಾಜ್ಯಾಂಗದಲ್ಲಿ ಅವಕಾಶವಿಲ್ಲ. ಅಷ್ಟೇ ಅಲ್ಲ, ಲೋಕಪಾಲದಲ್ಲಿ ಇತರೆ ಹಿಂದುಳಿದ ವರ್ಗಗಳಿಗೂ ಸೂಚಿಸಲಾಗಿರುವ ಮೀಸಲಾತಿಯ ರಾಜ್ಯಾಂಗ ಬದ್ಧತೆಯ ಬಗೆಗೂ ಅನುಮಾನಗಳಿವೆ. ಏಕೆಂದರೆ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಮತ್ತು ಶೈಕಣಿಕ ಉನ್ನತಿಗೆ ವಿಶೇಷ ಅವಕಾಶಗಳನ್ನು ನೀಡುವ ಮೂಲಕ ಅವಕಾಶಗಳ ಸಮಾನತೆಯನ್ನು ಸಾಧಿಸುವುದು ಮೀಸಲಾತಿಯ ಉದ್ದೇಶ. ಆದರೆ ಲೋಕಪಾಲದಲ್ಲಿನ ಸದರಿ ಮೀಸಲಾತಿಗೂ, ಈ ಉದ್ದೇಶಕ್ಕೂ ಏನು ಸಂಬಂಧವೋ ತಿಳಿಯದಾಗಿದೆ! ಭ್ರಷ್ಟಾಚಾರ ನಿರ್ಮೂಲನೆಯ ಭಾಗವಾಗಿ ನಡೆಯುವ ಈ ನ್ಯಾಯಾನ್ಯಾಯ ಪರಿಶೀಲನಾ ವ್ಯವಸ್ಥೆಯಲ್ಲೂ ಜಾತಿ ಪರಿಗಣನೆಗೆ ಅವಕಾಶವಿದೆ ಎಂದು ಭಾವಿಸುವುದಾದರೆ, ನಾವು ಎಂದೂ ಸಾಮಾಜಿಕ ನ್ಯಾಯದ ಗುರಿ ಮುಟ್ಟಲಾಗುವುದಿಲ್ಲ ಎಂದು ಹೇಳಲೇಬೇಕಾಗುತ್ತದೆ. ಯಾವ ಪದ್ಧತಿಯ ಕಾರಣ, ಸಹಜ ಸಾಮಾಜಿಕ ನ್ಯಾಯಕ್ಕೆ ಧಕ್ಕೆ ಒದಗಿದೆಯೋ ಆ ಜಾತಿ ಪದ್ಧತಿಯನ್ನೇ ಎಲ್ಲ ಕ್ಷೇತ್ರಗಳಿಗೂ ಆಧಾರ ಮಾಡಿಕೊಂಡು ನಾವು ಹೀಗೆ ಮುಂದುವರೆಯುವುದಾದರೆ, ನಮ್ಮ ಸಾಮಾಜಿಕ ನ್ಯಾಯ ಆಂದೋಲನದ ಉದ್ದೇಶವೇ ಅನುಮಾನಾಸ್ಪದವೆನಿತೊಡಗುತ್ತದೆ. ಮೀಸಲಾತಿಯನ್ನು ಯಾವ ಉದ್ದೇಶಕ್ಕಾಗಿ ರೂಪಿಸಲಾಯಿತೋ ಆ ಉದ್ದೇಶವನ್ನೇ ಅಸಂಗತಗೊಳಿಸುವ ಅವಿವೇಕವಿದು. ಅವಪ್ರಗತಿಯ ಹೆಜ್ಜೆಯಿದು.

ಅಲ್ಪ ಸಂಖ್ಯಾತರಿಗೆ, ಅಂದರೆ ಮುಖ್ಯವಾಗಿ ಮುಸ್ಲಿಮರಿಗೆ ಅವರ ಸಾಮಾಜಿಕ–ಶೈಕ್ಷಣಿಕ ಹಿಂದುಳಿದಿರುವಿಕೆಯ ಆಧಾರದ ಮೇಲೆ ಮೀಸಲಾತಿ ನೀಡಬಾರದೆಂದು ಯಾರೂ ಹೇಳುತ್ತಿಲ್ಲ. ಮೂರ್ನಾಲ್ಕು ರಾಜ್ಯಗಳಲ್ಲಿ ಅವರಿಗೆ ಈ ಆಧಾರದ ಮೇಲೆ ಈಗಾಗಲೇ ಈ ಸೌಲಭ್ಯವನ್ನು ನೀಡಲಾಗಿದೆ. ರಂಗನಾಥ ಮಿಶ್ರ ಸಮಿತಿ ಮತ್ತು ಇತ್ತೀಚಿನ ಸಚಾರ್ ಸಮಿತಿಯ ವರದಿಗಳು ಇದರ ರಾಷ್ಟ್ರೀಯ ಅನ್ವಯದ ಅಗತ್ಯವನ್ನು ಒತ್ತಿ ಹೇಳಿವೆ. ಆದರೆ, ಮುಸ್ಲಿಮರ ಬರೀ ಹಿಂದುಳಿದಿರುವಿಕೆಯಲ್ಲ, ಆ ಸಮಾಜದ ದಾರುಣ ದುಃಸ್ಥಿತಿಯನ್ನು ತಮ್ಮ ಸಮೀಕ್ಷಾ ವರದಿಯಲ್ಲಿ ಕಣ್ಣಿಗೆ ಕಟ್ಟಿದಂತೆ ನಿರೂಪಿಸಿರುವ ಸ್ವತಃ ನ್ಯಾ॥ ಸಚಾರ್ ಅವರೇ ತಮ್ಮ ಶಿಫಾರ್ಸುಗಳನ್ನು ಜಾರಿಗೆ ತರಲು ಸದರಿ ಸರ್ಕಾರ ಸಾಂವಿಧಾನಿಕ ರಾಜಮಾರ್ಗದ ಬದಲು ಲೋಕಪಾಲದ ಮರೆಯಲ್ಲಿ ಅನುಮಾನಾಸ್ಪದ ಮಾರ್ಗ ಹಿಡಿದಿರುವುದರ ಉದ್ದೇಶದ ಬಗ್ಗೆ ಖೇದ ವ್ಯಕ್ತಪಡಿಸಿದ್ದಾರೆ.

ಇದು ಮುಖ್ಯವಾಗಿ ಉತ್ತರ ಪ್ರದೇಶ ಚುನಾವಣೆಗಳ ಮೇಲೆ ಕಣ್ಣಿಟ್ಟು, ಇತರ ಪಕ್ಷಗಳನ್ನು ಇಕ್ಕಟ್ಟಿಗೆ ಸಿಲುಕಿಸುವ ರಾಜಕೀಯ ಸಮಯಸಾಧಕತನವಲ್ಲದೆ ಮತ್ತೇನಲ್ಲ. ರಾಷ್ಟ್ರ ಕಟ್ಟುವ ಸಂಕಲ್ಪದೊಡನೆ ಸ್ಥಾಪಿಸಲ್ಪಟ್ಟ ಈ ಪಕ್ಷ ಕ್ರಮೇಣ ಸಂಪೂರ್ಣ ಅವನತಿಯ ಹಾದಿ ಹಿಡಿದು ಈಗ ತನ್ನ ಮತ್ತು ತನ್ನ ಅನುವಂಶೀಯ ನಾಯಕತ್ವದ ಉಳಿವಿಗಾಗಿ

ರಾಷ್ಟ್ರವನ್ನು ಶಾಶ್ವತವಾಗಿ ಜಾತಿ-ಮತಗಳ ಆಧಾರದ ಮೇಲೆ ಒಡೆದಿಡಲು ಹೊರಟಿರುವುದು ಒಂದು ದೊಡ್ಡ ವಿಪರ್ಯಾಸ ಮಾತ್ರವಲ್ಲ, ದುರಂತವೇ ಸರಿ. ಇದರ ಹಿಂದೆ ರಾಷ್ಟ್ರದ ಜನತೆ ಇತ್ತೀಚಿನ ವರ್ಷಗಳಲ್ಲಿ ಅಣ್ಣಾ ಹಜಾರೆ ನೇತೃತ್ವದಲ್ಲಿ ಅನಿರೀಕ್ಷಿತವೆನ್ನಿಸುವ ಅದ್ಭುತ ರೀತಿಯಲ್ಲಿ ಸಂಘಟಿತಗೊಂಡು, ಸಂಸತ್ತಿನ ಮುಂದೆ ಮಂಡಿಸಲ್ಪಡುವಂತೆ ಮಾಡಿದ ಲೋಕಪಾಲ ಮಸೂದೆಯನ್ನು ಸದ್ಯಕ್ಕಾದರೂ ಕಾನೂನಾಗದಂತೆ ತಡೆಯುವ ಉದ್ದೇಶವಿದ್ದರೂ ಆಶ್ಚರ್ಯವಿಲ್ಲ.

ಆದರೆ ಅಣ್ಣಾ ಮತ್ತು ಅವರ ಹಿಂದಿರುವ ವಿಶಾಲ ಜನಸ್ತೋಮದ ಸಂಕಲ್ಪ ಶಕ್ತಿ ಸರ್ಕಾರದ ಈ ಉದ್ದೇಶವನ್ನು ವಿಫಲಗೊಳಿಸಲು ಸಿದ್ಧವಾಗಿರುವಂತೆ ತೋರುತ್ತದೆ. ಆದರೆ ಒಂದು ಮಾತು: ಅಣ್ಣಾ ಈ ನಿರ್ಣಾಯಕ ಸಮಯದಲ್ಲಿ ಸ್ವಲ್ಪ ಸಾವಧಾನದಿಂದ ವರ್ತಿಸಬೇಕು. ಗಾಂಧಿಯಾಗದೆ, ಗಾಂಧಿಯಂತೆ ವರ್ತಿಸಲು ಹೋಗಬಾರದು. ಬರೀ ಪ್ರತಿಭಟನೆಯಿಂದಾಗಲೀ ಅಥವಾ ಎಷ್ಟೇ ಸಶಕ್ತವಾದ ಲೋಕಪಾಲ ರಚನೆಯಿಂದಾಗಲೀ ಭ್ರಷ್ಟಾಚಾರವನ್ನು ಅದರೆಲ್ಲ ರೂಪ ಮತ್ತು ಪರಿಣಾಮಗಳಲ್ಲಿ ತೊಲಗಿಸಲಾಗದು ಎಂಬುದನ್ನು ಅವರು ಅರಿಯಬೇಕು. ಹಾಗಾಗಿ ಅವರು ನಿಜವಾಗಿ ಗಾಂಧಿ ಅನುಯಾಯಿ ಆಗಿದ್ದಲ್ಲಿ, ಆಗಬೇಕಿದ್ದಲ್ಲಿ, ಗಾಂಧೀಜಿಯಂತೆ ಪ್ರತಿಭಟನೆಯ ಜೊತೆಗೇ ಜನತೆಯ ವೈಯುಕ್ತಿಕ ಶೀಲ ಪರಿವರ್ತನೆಯ ರಚನಾತ್ಮಕ ಕೆಲಸಗಳ ಆಂದೋಲನವನ್ನೂ ರಾಷ್ಟ್ರವ್ಯಾಪಿಯಾಗಿ ಆರಂಭಿಸಬೇಕು. ರಾಜಕೀಯ ಪರಿಭಾಷೆಯಲ್ಲಿ ಮಾತನಾಡುವುದನ್ನು ನಿಲ್ಲಿಸಿ ರಾಷ್ಟ್ರ ಪುನರ್ನಿರ್ಮಾಣದ ಸಂಕಲ್ಪ ಶಕ್ತಿಯ ಪ್ರತೀಕ ಮಾತ್ರವಾಗಿ ತಮ್ಮನ್ನು ತಾವು ಪ್ರಸ್ತುತಗೊಳಿಸಿಕೊಳ್ಳಬೇಕು. ತಮ್ಮ ಹೋರಾಟದ ದಿಕ್ಕು ದೆಸೆಗಳು ದೇಶವನ್ನು ರಾಜಕೀಯವಾಗಿ ಬೆಂಕಿಯಿಂದ ಬಾಣಲೆಗೆ ಒಡ್ಡೀತು ಎಂಬ ಎಚ್ಚರ ವಹಿಸಬೇಕು. ಹಾಗೇ ತಮ್ಮ ಸಹಚರರೊಂದಿಗೆ ಒಡಗೂಡಿ ತಮ್ಮನ್ನು ತಾವೇ ಸದಾ ಅಳೆದುಕೊಳ್ಳುತ್ತಾ ರಾಷ್ಟ್ರದ ಜನತೆಯ ಹೆಜ್ಜೆ ಜೊತೆಗೆ ಹೆಜ್ಜೆ ಹಾಕುವ ವಿನಯವನ್ನೂ ಪ್ರದರ್ಶಿಸಬೇಕು. ಅಣ್ಣಾ ಮತ್ತು ಅವರ ತಂಡದಿಂದ ರಾಷ್ಟ್ರ ಇದನ್ನು ಈಗ ನಿರೀಕ್ಷಿಸುತ್ತಿದೆ.

ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು!

<u>ಸಮಕಾಲೀನ</u>

ಅರೇಬಿಯಾದಲ್ಲಿ ವಸಂತೋದಯ!

ಸರ್ವಾಧಿಕಾರಗಳಿಗೇ ಕುಪ್ರಸಿದ್ಧವಾದ ಅರೇಬಿಯಾದ ರಾಷ್ಟ್ರಗಳಲ್ಲಿ ಕಳೆದ ಒಂದು ವರ್ಷದಿಂದ ಪ್ರಜಾಪ್ರಭುತ್ವವಾದಿ ಎಂದು ಕರೆಯಬಹುದಾದ ದೊಡ್ಡ ಆಂದೋಲವೊಂದು ಶುರುವಾಗಿದೆ. ಇದನ್ನು ಜಾಗತಿಕವಾಗಿ 'ಅರಬ್ ಸ್ಪ್ರಿಂಗ್', ಅಂದರೆ 'ಅರಬ್ ವಸಂತ' ಎಂದು ವರ್ಣಿಸಲಾಗುತ್ತಿದೆ. ೨೦೧೦ರ ಡಿಸೆಂಬರ್‌ನಲ್ಲಿ ಪುಟ್ಟ ರಾಷ್ಟ್ರ ಟುನಿಸಿಯಾದಲ್ಲಿ

ಸಣ್ಣ ಹಣ್ಣಿನ ವ್ಯಾಪಾರಿ ಹುಡುಗನೊಬ್ಬ ತನ್ನ ಹಣ್ಣಿನ ಪುಟ್ಟಿಯನ್ನು ಕಸಿದುಕೊಂಡ ಪೋಲೀಸ್ ದಬ್ಬಾಳಿಕೆಯನ್ನು ಸಹಿಸಲಾರದೆ ತನ್ನ ಮೈಗೆ ಬೆಂಕಿ ಇಟ್ಟುಕೊಂಡು ಸತ್ತ ಘಟನೆಯೇ ನೆಪವಾಗಿ ಒಂದಾದ ಮೇಲೆ ಒಂದರಂತೆ ಸರಣಿ ಪರಿಣಾಮದಂತೆ ಅರಬ್ ರಾಷ್ಟ್ರಗಳಲ್ಲಿ ಅಲ್ಲಿ ಪುರಾತನ ಕಾಲದಿಂದಲೂ ವಿವಿಧ ಹೆಸರುಗಳಲ್ಲಿ ನೆಲೆಸಿಬಿಟ್ಟಿರುವ ಸರ್ವಾಧಿಕಾರಿ ಪ್ರಭುತ್ವಗಳ ವಿರುದ್ಧ ವಿವಿಧ ರೂಪಗಳ ಬಂಡಾಯ ಶುರುವಾಗಿದೆ. ಕೆಲವೆಡೆ ಅದು ನಾಗರಿಕ ಕಾನೂನು ಭಂಗ, ಪ್ರತಿರೋಧಗಳ ರೂಪದಲ್ಲಿದ್ದರೆ, ಇನ್ನು ಕೆಲವೆಡೆ ಸಶಸ್ತ್ರ ಹೋರಾಟ ಕ್ರಾಂತಿಗಳೇ ನಡೆದುಹೋಗಿವೆ. ಇದರ ಜೊತೆಗೆ ಮಾಹಿತಿ ತಂತ್ರಜ್ಞಾನದ ಫಲವಾದ ಸಾಮಾಜಿಕ ಸಂಪರ್ಕ ಜಾಲಗಳನ್ನೂ ಬಳಸಿ ಈ ಆಂದೋಲನಗಳನ್ನು ಸಂಘಟಿಸಿ ಬಲಪಡಿಸಲಾಗುತ್ತಿದೆ.

ಇದಕ್ಕೆಲ್ಲ ದಮನಕಾರಿ ಪ್ರಭುತ್ವ, ಮಾನವ ಹಕ್ಕುಗಳ ಉಲ್ಲಂಘನೆ, ಭ್ರಷ್ಟಾಚಾರ, ಅತಿ ಬಡತನ, ನಿರುದ್ಯೋಗ, ಹಣದುಬ್ಬರ, ಧಾರ್ಮಿಕ ಒಳಪಂಗಡಗಳ ಪರಸ್ಪರ ಸಂಘರ್ಷ ಇತ್ಯಾದಿಗಳು ಕಾರಣವೆಂದು ಹೇಳಲಾಗುತ್ತಿದೆ. ಈ ಆಂದೋಲನ ಪ್ರಜಾಪ್ರಭುತ್ವ, ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣಾ ವ್ಯವಸ್ಥೆ, ಮಾನವ ಹಕ್ಕುಗಳ ಮಾನ್ಯತೆ, ಆಳ್ವಿಕೆಗಳ ಬದಲಾವಣೆ ಇತ್ಯಾದಿ ಬೇಡಿಕೆಗಳ ಮೇಲೆ ಸಂಘಟಿತಗೊಂದು ಬೆಳೆಯುತ್ತಿದೆ. ಇದೆಲ್ಲದರ ಫಲವಾಗಿ ಟುನೀಸಿಯಾ, ಈಜಿಪ್ಟ್, ಲಿಬ್ಯಾ, ಯೆಮೆನ್‌ಗಳಲ್ಲಿ ಪ್ರಭುತ್ವಗಳು ಉರುಳಿದ್ದರೆ, ಸಿರಿಯಾ, ಬಹರೈನ್‌ಗಳಲ್ಲಿ ಸರ್ಕಾರಗಳು ಬದಲಾಗಿದ್ದರೂ ಜನ ತೃಪ್ತರಾಗದೆ ಪ್ರತಿಭಟನೆಗಳನ್ನು ಮುಂದುವರೆಸಿದ್ದಾರೆ. ಕುವೈತ್, ಲೆಬನಾನ್ ಮತ್ತು ಒಮಾನ್‌ಗಳಲ್ಲಿ ಪ್ರತಿಭಟನೆಗಳ ಒತ್ತಡದಿಂದಾಗಿ ಸರ್ಕಾರಿ ವ್ಯವಸ್ಥೆಯಲ್ಲಿ ಉದಾರವಾದಿ ಬದಲಾವಣೆಗಳನ್ನು ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಮೊರಾಕ್ಕೋ, ಜೋರ್ಡಾನ್‌ಗಳಲ್ಲಿ ಸಾಂವಿಧಾನಿಕ ಸುಧಾರಣೆಗಳು ಆರಂಭವಾಗಿವೆ. ಆಲ್ಜೀರಿಯಾ, ಕುವೈತ್, ಇರಾಕ್‌ಗಳಲ್ಲಿ ಪ್ರತಿಭಟನೆಗಳು ಮುಂದುವರೆದಿವೆ. ಇದೆಲ್ಲದರ ಬಿಸಿ ಸೌದಿ ಅರೇಬಿಯಾದ ಅರಸೊತ್ತಿಗೆಯನ್ನು ಮುಟ್ಟಿ ಅಲ್ಲಿಯೂ ತಲ್ಲಣಗಳು ಆರಂಭವಾಗಿವೆ. ಒಮ್ಮೆಗೇ ಈ ಎಲ್ಲ ರಾಷ್ಟ್ರಗಳಲ್ಲಿ ಇಂತಹ ಆಂದೋಲನ ಆರಂಭವಾಗಿರುವುದರ ಹಿಂದಿನ ಸ್ಫೂರ್ತಿ ಆಧುನಿಕತೆ ಮತ್ತು ನವ ಆಧುನಿಕತೆಗಳು ಈ ಸಮಾಜಗಳ ಕೆಲವು ವರ್ಗಗಳಲ್ಲಾದರೂ ಹುಟ್ಟಿಸಿರುವ ಹೊಸ ಆಸೆ, ಭರವಸೆಗಳು ಎಂದು ವಿಶ್ಲೇಷಿಸಲಾಗುತ್ತಿದ್ದು, ಇದರ ಹಿನ್ನೆಲೆಯಲ್ಲೇ ಇಸ್ಲಾಂ ಮತ್ತು ಆಧುನಿಕ ಪ್ರಜಾಪ್ರಭುತ್ವ ಪದ್ಧತಿಗಳ ಸಂಬಂಧದ ಬಗ್ಗೆಯೂ ಗಂಭೀರ ಚರ್ಚೆ ಆರಂಭವಾಗಿವೆ.

ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಪತ್ರಿಕೆಯು ಇಲ್ಲಿ ಮೂರು ಲೇಖನಗಳನ್ನು ಪ್ರಸ್ತುತಪಡಿಸುತ್ತಿದೆ ಈ ಮೂರೂ ಲೇಖನಗಳು ಒಟ್ಟಾಗಿ ಸೇರಿ 'ಅರಬ್ ವಸಂತ'ದ ಬಗ್ಗೆ ನಮ್ಮ ಓದುಗರಿಗೆ ಒಂದು ಸಮಗ್ರ ನೋಟ ನೀಡುವುದೆಂದು ಭಾವಿಸುತ್ತೇವೆ–**ಸಂ.**

ದಾಖಲೆ

ಸಾದತ್ ಹಸನ್ ಮಾಂಟೋ ನೆಹರೂಗೆ ಬರೆದ ಪತ್ರ!

ಭಾರತೀಯ ಸಾಹಿತ್ಯಕ್ಕೆ ತೋಬಾ ತೇಕ್‌ಸಿಂಗ್‌ನಂತಹ ಅನನ್ಯ-ಅದ್ಭುತ ಪಾತ್ರವನ್ನು ನೀಡಿದ ಮಾಂಟೋನನ್ನು ಯಾರು ಮರೆತಾರು? ಸಾದಾತ್ ಹಸನ್ ಮಾಂಟೋ ರಾಷ್ಟ್ರ ವಿಭಜನೆಯ ದಳ್ಳುರಿಯಲ್ಲಿ 'ಪುಟ'ಗೊಂಡ ಮೂಲತಃ ಭಾರತೀಯನಾದ, ಆದರೆ ಅನಿವಾರ್ಯವಾಗಿ ಪಾಕಿಸ್ತಾಕ್ಕೆ ಹೋದ ವಿಚಿತ್ರ ಪ್ರತಿಭೆಯ ಲೇಖಕ. ಆತನ ಕಥೆಗಳು ಭಾರತ-ಪಾಕಿಸ್ತಾನಗಳಲ್ಲಿ ಮಾತ್ರವಲ್ಲ, ಜಗತ್ತಿನಾದ್ಯಂತ ಅವುಗಳಲ್ಲಿನ ವಿಷಾದ-ವಿಕ್ಷಿಪ್ತತೆಗಳ ವಿಶಿಷ್ಟ ಸಂಯೋಜನೆಗಾಗಿ ಓದಲ್ಪಡುತ್ತಿವೆ. ಮಾಂಟೋ ಸಾಯುವ ಕೆಲವೇ ತಿಂಗಳುಗಳ ಮುನ್ನ, ಅಂದರೆ ೧೯೫೪ರಲ್ಲಿ, ಅಂದಿನ ಭಾರತದ ಪ್ರಧಾನಿ ನೆಹರೂಗೆ ಬರೆದ ಈ ಪತ್ರ ರಾಷ್ಟ್ರ ವಿಭಜನೆ ಓರ್ವ ಸೂಕ್ಷ್ಮ ಸೃಜನಶೀಲ ಲೇಖಕನಲ್ಲಿ ಹುಟ್ಟಿಸಬಹುದಾದ ದುಃಖ-ಹತಾಶೆ-ಆರ್ದ್ರತೆಗಳಿಗೆ ಸಾಕ್ಷಿಯಂತಿದೆ. ಜೊತೆಗೆ ಭಾರತ-ಪಾಕಿಸ್ತಾನಗಳ ಸಂಬಂಧ ಕುರಿತ ಆ ಕಡೆಯ ವಿಶಿಷ್ಟ ನೋಟವೊಂದನ್ನೂ ನೀಡುತ್ತದೆ.

ಮೂಲತಃ ಉರ್ದುವಿನಲ್ಲಿ ಬರೆಯಲ್ಪಟ್ಟ ಈ ಪತ್ರವನ್ನು ಎಂ. ಅಸಾದುದ್ದೀನ್ ಎಂಬುವವರು ಹಿಂದಿಯಿಂದ ಇಂಗ್ಲಿಷ್‌ಗೆ ಅನುವಾಸಿದ್ದರ ಸಂಪಾದಿತ ರೂಪದ ಕನ್ನಡಾನುವಾದವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.-ಸಂ.

ಪಂಡಿತ್‌ಜೀ ಅವರೇ,

ಅಸ್ಸಲಾಮ್ ಅಲೈಕುಮ್ !

ಇದು ನಾನು ನಿಮಗೆ ಬರೆಯುತ್ತಿರುವ ಮೊದಲ ಕಾಗದ. ದೇವರ ಕೃಪೆ ನಿಮ್ಮ ಮೇಲೆ ಹೆಚ್ಚಾಗಿಯೇ ಇರುವುದರಿಂದ ಅಮೇರಿಕನ್ನರೂ ನಿಮ್ಮನ್ನು ಸುರಸುಂದರಾಂಗನೆಂದು ಹೊಗಳುತ್ತಿದ್ದಾರೆ. ಹಾಗಂತ ನಾನೇನು ಕುರೂಪಿಯಲ್ಲ. ಒಂದು ಪಕ್ಷ ನಾನೇನಾದರೂ ಅಮೇರಿಕಾಕ್ಕೆ ಹೋದರೆ ನಿಮಗೆ ಸಿಕ್ಕ ಬಿರುದಾವಳಿಯೇ ನನಗೂ ಸಿಗಬಹುದು. ಆದರೆ, ನೀವೋ ಭಾರತ ದೇಶದ ಪ್ರಧಾನಮಂತ್ರಿಗಳು, ಆದರೆ ನಾನು ಪಾಕಿಸ್ತಾನದಲ್ಲಿರುವ ಒಬ್ಬ ಖ್ಯಾತ ಲೇಖಕ. ನಮ್ಮಿಬ್ಬರ ನಡುವೆ ದೊಡ್ಡ ಕಂದಕವೇ ಇದೆ ಬಿಡಿ. ಹಾಗಿದ್ದರೂ ಸಾಮ್ಯತೆಯಲ್ಲಿ ನಾವಿಬ್ಬರೂ ಕಾಶ್ಮೀರಿಗಳೇ. ಆದರೂ ನೀವು ನೆಹರೂ... ನಾನು ಮಾಂಟೋ. ಕಾಶ್ಮೀರಿಗಳು ಎಂದರೆ ಸುರಸುಂದರಾಂಗರು ಎಂದು ಹೇಳಿದಂತೆ... ಹಾಗೇ ಸುರಸುಂದರಾಂಗರಾಗಿರುವುದು ಅಂದರೆ ಏನು.....? ನನಗಂತೂ ಗೊತ್ತಿಲ್ಲ.

ಬಹಳ ದಿನಗಳಿಂದ ನನಗೊಂದು ಆಸೆ ಇದೆ. ನಮ್ಮ ದೇಶದ ವಯಸ್ಸಾದ ಮುದುಕರೆಲ್ಲ ನಿಮ್ಮಲ್ಲಿಗೆ ಬಂದು ಅವರಿಗೆ ಬೇಕಾದವರನ್ನೆಲ್ಲ ಮಾತಾಡಿಸಿ ಬರುತ್ತಾರೆ. ಆದರೆ ಅಂಥ ಸೌಭಾಗ್ಯ ನನಗಿನ್ನೂ ಸಿಕ್ಕಿಲ್ಲ. ನೋವಿನ ಮಾತೆಂದರೆ ಇದುವರೆಗೂ ನಿಮ್ಮನ್ನು ಕಣ್ಣಾರೆ ನೋಡಿಯೇ ಇಲ್ಲ. ಒಂದು ಸಾರಿ ಮಾತ್ರ ನೀವು ಮಾತಾಡುವುದನ್ನು

ರೇಡಿಯೋದಲ್ಲಿ ಕೇಳಿಸಿಕೊಂಡಿದ್ದೇನೆ. ಆವತ್ತಿನಿಂದ ನಿಮ್ಮನ್ನು ನೋಡಬೇಕೆಂಬ ಆಸೆ ಬಲವಾಗುತ್ತಲೇ ಇದೆ. ನಾವಿಬ್ಬರೂ ಕಾಶ್ಮೀರಿಗಳಾಗಿರುವುದರಿಂದ ಎಲ್ಲಿಯೇ ಇರಲಿ ನಾವಿಬ್ಬರೂ ಒಂದೇ. ಆದರೆ ನಾವಿಬ್ಬರೂ ಸೇರಲು ಇನ್ನೂ ಯಾವ ಅನಿವಾರ್ಯಗಳು ಘಟಿಸಬೇಕಾಗಿವೆಯೋ? ಒಬ್ಬ ಕಾಶ್ಮೀರಿ ಇನ್ನೊಬ್ಬ ಕಾಶ್ಮೀರಿಯನ್ನು ಯಾವ ಯಾವ ಓಣಿಗಳಲ್ಲಿ, ಎಂಥೆಂಥ ಕವಲುದಾರಿಗಳಲ್ಲಿ ಭೇಟಿಯಾಗಬೇಕಾಗಿದೆಯೋ?

ನಿಮ್ಮ ವಂಶಜರು ನದಿಯ(ನಹ್ರ್) ದಂಡೆಯ ಮೇಲೊಂದರ ಮೇಲೆ ನೆಲೆಸಿದ್ದರಿಂದ ನಿಮಗೂ ನೆಹರೂ ಎಂಬ ಹೆಸರು ಅಂಟಿಕೊಂಡಿತು. ನನ್ನ ಹೆಸರು ಯಾವ ಕಾರಣಕ್ಕೆ ಮಾಂಟೋ ಎಂದು ಬಿತ್ತೋ ನನಗೂ ಗೊತ್ತಿಲ್ಲ. ಒಬ್ಬ ಕಾಶ್ಮೀರಿಯಾಗಿ, ನೀವು ಕಾಶ್ಮೀರಕ್ಕೆ ಲೆಕ್ಕವಿಲ್ಲದಷ್ಟು ಸಲ ಭೇಟಿನೀಡಿರಬೇಕು. ನನ್ನ ಗೆಳೆಯರು ಮಾಂಟೋ ಎನ್ನುವ ಹೆಸರು ಕಾಶ್ಮೀರಿ ಭಾಷೆಯ 'ಮಾಂಟ್' ಎಂಬ ಪದದಿಂದ ಬಂದಿರಬೇಕು ಎನ್ನತ್ತಾರೆ. ಹಾಗೆಂದರೆ ಒಂದೂವರೆ ಸೇರಿನ ತೂಕವಿರುವ ಅಳತೆಯ ಕಲ್ಲು ಎಂದು ಅರ್ಥವಂತೆ. ಇಷ್ಟು ಕಾಶ್ಮೀರಿ ಭಾಷೆ ನಿಮಗೂ ಬಂದೇ ಬರುತ್ತೆ ಎಂದು ನನ್ನ ಊಹೆ. ನಿಮಗೇನಾದರೂ ನನ್ನ ಪತ್ರಕ್ಕೆ ಉತ್ತರ ಬರೆಯಬೇಕು ಅನಿಸಿದಲ್ಲಿ 'ಮಾಂಟೋ' ಎಂಬ ಹೆಸರಿನ ಹಿಂದೆ ಇನ್ನೇನು ಅರ್ಥಗಳು ಇವೆಯೋ ನನಗೂ ಸ್ವಲ್ಪ ತಿಳಿಸಿ.

ರಾಜಕೀಯದಲ್ಲಿ ನಿಮ್ಮ ಹೆಸರನ್ನು ನಾನು ಬಹಳ ಹೆಮ್ಮೆಯಿಂದ ಯಾಕೆ ಉಲ್ಲೇಖಿಸುತ್ತೇನೆ ಎಂದರೆ, ನಿಮ್ಮ ಮಾತಿಗೆ ಪೂರ್ಣ ಎದುರಾಡುವುದು ನಿಮಗೆ ಬಿಟ್ಟರೆ ಇನ್ನಾರಿಗೆ ಬರುತ್ತೆ ನೀವೇ ಹೇಳಿ ನೋಡೋಣ? ಇವತ್ತಿಗೂ ಕಾಶ್ಮೀರಿಗಳನ್ನು ಜಂಗೀಕುಸ್ತಿಯಲ್ಲಿ ಸೋಲಿಸಲು ಬೇರೆ ಯಾರಿಗಾದರೂ ಸಾಧ್ಯವೆ? ಕಾವ್ಯದಲ್ಲಿ ನಮ್ಮನ್ನು ಮೀರಿಸುವವರು ಯಾರಾದರೂ ಇದ್ದಾರಾ? ಆದರೆ ನಮ್ಮ ದೇಶದುದ್ದಕ್ಕೂ ಹರಿಯುವ ನದಿಗಳನ್ನು ನೀವು ನಿಲ್ಲಿಸಲು ಹೊರಟಿದ್ದೀರೆಂದು ತಿಳಿದು ಬಹಳ ಆಶ್ಚರ್ಯವಾಯಿತು. ಪಂಡಿತ್‌ಜೀ..., ನಿಮ್ಮ ಹೆಸರೇ ನೆಹರೂ ಎಂಬುದು ನಿಮಗೆ ಮರೆತು ಹೋಯಿತೆ? ನಾನೋ ಕೇವಲ ಒಂದೂವರೆ ಸೇರಿನ ತೂಕವಿರುವ ಕಲ್ಲು. ನಾನೇನಾದರೂ ಮೂವತ್ತು-ನಲವತ್ತು ಸಾವಿರ ಸೇರಿನ ತೂಕವಿರುವ ಸಣ್ಣ ಗುಡ್ಡವೇನಾದರೂ ಆಗಿದ್ದಿದ್ದರೆ ನೀವು ನಿಲ್ಲಿಸಬೇಕೆಂದಿರುವ ನದಿಗೆ ಅಡ್ಡಲಾಗಿ ಬಿದ್ದುಬಿಡುತ್ತಿದ್ದೆ. ಆಗ, ಇದನ್ನು ಹೇಗಪ್ಪಾ ಹೊರಗೆ ತೆಗೆಯುವುದು ಎಂದು ಇಂಜಿನಿಯರುಗಳ ಜೊತೆ ಕೂತು ತಲೆಕೆಡಿಸಿಕೊಳ್ಳಬೇಕಾದ ಉಸಾಬರಿ ನಿಮಗೆ ಬರುತ್ತಿತ್ತು.

ಪಂಡಿತ್‌ಜೀ, ನೀವು ಬಹಳ ದೊಡ್ಡ ಮನುಷ್ಯ ಎಂಬುದರಲ್ಲಿ ಅನುಮಾನವಿಲ್ಲ. ನೀವು ಭಾರತ ದೇಶದ ಪ್ರಧಾನಿ ಕೂಡ ಆಗಿದ್ದೀರಿ. ನೀವು ಈಗ ಆಡಳಿತ ನಡೆಸುತ್ತಿರುವ ದೇಶ ಮೊದಲು ನನ್ನದೂ ಆಗಿತ್ತು ಎಂಬುದು ನಿಮಗೆ ತಿಳಿದಿರಲಿ. ಇಲ್ಲಿ ನಿಮ್ಮಷ್ಟು ಪ್ರಭಾವಶಾಲಿ ವ್ಯಕ್ತಿ ಇನ್ನೊಬ್ಬರು ಯಾರೂ ಇಲ್ಲ. ಆದರೆ ನನ್ನಂಥ ಸಾಮಾನ್ಯ ವ್ಯಕ್ತಿಗಾಗಿ ನೀವು ಏನೂ ಮಾಡಲಿಲ್ಲ ಎಂದು ನಾನು ಹೇಳಿದರೆ ನೀವು ಕೋಪಿಸಿಕೊಳ್ಳಬಾರದು.

ನಿಮಗೆ ನನ್ನ ಪ್ರಾಣ ಬೇಕಾದರೆ..... ದೇವರಾಣೆ... ಕೊಡಲು ಸಿದ್ಧ. ಕಾಶ್ಮೀರದಲ್ಲಿ ಹುಟ್ಟಿದ ನಿಮಗೆ, ಈ ನೆಲದ ಬಗ್ಗೆ ಎಲ್ಲಿಲ್ಲದ ಪ್ರೀತಿ-ಅಭಿಮಾನ ಇದೆ ಎಂದು ನನಗೆ ಖಂಡಿತ ಗೊತ್ತಿದೆ. ಪ್ರತಿಯೊಬ್ಬ ಕಾಶ್ಮೀರಿಯೂ ಜೀವನದಲ್ಲಿ ಒಮ್ಮೆಯೂ ಕಾಶ್ಮೀರವನ್ನು ನೋಡದೆ ಇದ್ದರೂ ಇದೇ ರೀತಿ ಭಾವಿಸುತ್ತಾನೆಂದು ನನಗೆ ಗೊತ್ತಿದೆ.

ನಾನು ನಿಮಗೆ ಹೇಳಿದ ಹಾಗೆ ನಾನು ಬನೀಹಾಲ್‌ಅನ್ನು ಮಾತ್ರ ನೋಡಿದ್ದೇನೆ. ಕುದ್, ಬತೌತ್ ಮತ್ತು ಕಶ್ತ್ವಾರ್‌ಗಳನ್ನೂ ಸಹ ನೋಡಿದ್ದೇನೆ. ಆ ಪ್ರದೇಶಗಳಲ್ಲಿ ಇರುವ ಅಪಾರ ಸೌಂದರ್ಯ ಮತ್ತು ಅಪಾರ ಬಡತನ ಎರಡನ್ನೂ ನೋಡಿದ್ದೇನೆ. ನಿಮಗೆ ಇಲ್ಲಿನ ಬಡತನವನ್ನು ನಿವಾರಿಸಲು ಸಾಧ್ಯ ಎನ್ನುವುದಾದರೆ ಕಾಶ್ಮೀರವನ್ನು ನೀವೇ ಇಟ್ಟುಕೊಳ್ಳಿ. ಆದರೆ ಇದು ನಿಮಗೆ ಸಾಧ್ಯವಿಲ್ಲ. ಯಾಕೆಂದರೆ ಕಾಶ್ಮೀರದಲ್ಲಿ ಹುಟ್ಟಿಯೂ ಅದಕ್ಕಾಗಿ ಏನಾದರೂ ಮಾಡಲು ನಿಮಗೆ ಸಮಯವೇ ಇಲ್ಲ ಎಂದು ನನಗೆ ಗೊತ್ತಿದೆ.

ನಿಜವಾಗಿ ಹೇಳಿ: ನೀವು ನನ್ನ ಪುಸ್ತಕಗಳನ್ನು ಯಾಕೆ ಓದುವುದಿಲ್ಲ? ಒಂದು ಪಕ್ಷ ನೀವು ಅವುಗಳನ್ನು ಓದಿದ್ದರೂ ನೀವು ಅವುಗಳ ಬಗ್ಗೆ ಏನೂ ಹೇಳಿಲ್ಲ. ನೀವು ಒಬ್ಬ ಲೇಖಕರಾಗಿ ನನ್ನ ಪುಸ್ತಕಗಳನ್ನು ಓದಿಲ್ಲ ಅಂದರೆ, ಅದಕ್ಕಿಂತ ವಿಷಾದದ ವಿಚಾರ ಬೇರೆ ಯಾವುದೂ ಇಲ್ಲ. ನಿಮ್ಮ ಬಗ್ಗೆ ನನಗೆ ಇನ್ನೊಂದು ದೂರಿದೆ. ನೀವು ನಮ್ಮ ದೇಶದಲ್ಲಿ ಹರಿಯುವ ನದಿಗಳನ್ನು ನಿಲ್ಲಿಸಬೇಕು ಎಂದು ಪ್ರಯತ್ನಮಾಡುತ್ತಿರುವಾಗ, ನಿಮ್ಮ ದೇಶದ ಪ್ರಕಾಶಕರು ನನ್ನ ಅನುಮತಿಯನ್ನೂ ಪಡೆಯದೆ ನನ್ನ ಪುಸ್ತಕಗಳನ್ನು ಅಚ್ಚು ಹಾಕುತ್ತಿದ್ದಾರೆ. ಇದು ಸರಿಯೇ? ನಿಮ್ಮಂಥವರು ದೇಶದ ಆಡಳಿತ ಹಿಡಿದಿರುವಾಗ ಇಂಥ ಮೋಸ ನಡೆಯುವುದುಂಟೆ? ಬೇಕಾದರೆ ದೆಹಲಿ, ಲಕ್ನೋ ಮತ್ತು ಜಲಂಧರಗಳಲ್ಲಿರುವ ಹಲವಾರು ಪ್ರಕಾಶಕರು ನನ್ನ ಪುಸ್ತಕಗಳನ್ನು ಹೇಗೆ ಕದ್ದು ಪ್ರಕಟಿಸಿ ಲಾಭ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ನೀವೇ ನೋಡಿ.

ನನ್ನ ಬರಹಗಳು ಅಶ್ಲೀಲವಾಗಿವೆಯೆಂದು ನನ್ನ ವಿರುದ್ಧ ಈಗಾಗಲೇ ಹಲವಾರು ದೂರುಗಳು ದಾಖಲಾಗಿವೆ. ನನ್ನ ದುರಾದೃಷ್ಟ ಎಂತಹದು ಎಂದರೆ, ನಿಮ್ಮ ಮೂಗಿನ ಕೆಳಗೇ ಇರುವ ದೆಹಲಿಯಲ್ಲಿ ಪ್ರಕಾಶಕನೊಬ್ಬ ನನ್ನ ಕತೆಗಳ ಪುಸ್ತಕವನ್ನು 'ಮಾಂಟೋನ ಅಶ್ಲೀಲ ಕತೆಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿ ಲಾಭ ಮಾಡಿಕೊಳ್ಳುತ್ತಾನೆ. ನಾನು 'ಗಂಜಾ ಫರಿಷ್ತಾ' ಎಂಬ ಹೆಸರಿನ ಪುಸ್ತಕವನ್ನು ಬರೆದಿದ್ದರೆ ಭಾರತದ ಪ್ರಕಾಶಕನೊಬ್ಬ ಅದನ್ನು 'ಪರದೆಯ ಹಿಂದೆ...' ಎಂಬ ಹೆಸರಿನಲ್ಲಿ ಅಚ್ಚು ಹಾಕಿಸುತ್ತಾನೆ. ಈಗ ನೀವೇ ಹೇಳಿ ನಾನು ಏನು ಮಾಡಲಿ?

ಸದ್ಯ ನಾನು ಇನ್ನೊಂದು ಪುಸ್ತಕವನ್ನು ಬರೆದಿದ್ದೇನೆ. ಆ ಪುಸ್ತಕದ ಮುನ್ನುಡಿಯ ಭಾಗವಾಗಿಯೇ ಈ ಪತ್ರವನ್ನು ನಿಮಗೆ ಬರೆಯುತ್ತಿದ್ದೇನೆ. ಈ ಪುಸ್ತಕವೂ ಕಳ್ಳ ಪ್ರಕಾಶಕರ ಕೈ ಸೇರಿ ಅಚ್ಚಾಗಿಬಿಟ್ಟರೆ ದೇವರಾಣೆ ಹೇಳುತ್ತಿದ್ದೇನೆ... ದೆಹಲಿಗೆ ಬಂದು

ನಾನು ನಿಮ್ಮ ಕೊರಳಪಟ್ಟಿ ಹಿಡಿದು, ಇಂಥದ್ದನ್ನೆಲ್ಲ ಸರಿಪಡಿಸುವವರೆಗೂ ನಿಮ್ಮನ್ನು ಬಿಡುವುದಿಲ್ಲ. ನನ್ನ ಕೈಗೆ ನೀವು ಸಿಕ್ಕಿದ್ದೇ ಆದರೆ ಜೀವಮಾನ ಪೂರ್ತಿ ನೀವು ನನ್ನನ್ನು ಮರೆಯಲಾರಿರಿ...... ಪುಸ್ತಕ ಅಚ್ಚಾದ ತಕ್ಷಣ ನಿಮಗೆ ಕಳಿಸುತ್ತೇನೆ. ಈಗಲಾದರೂ ಓದಿ ನಿಮ್ಮ ಅಭಿಪ್ರಾಯ ಹೇಳುತ್ತೀರೆಂಬ ನಂಬಿಕೆ ನನಗಿದೆ.

ನನ್ನ ಪತ್ರದಿಂದ ನಿಮಗೆ ಈಗಾಗಲೇ ಸುಟ್ಟ ಮಾಂಸದ ವಾಸನೆ ಬರಲು ಶುರುವಾಗಿದೆಯೆಂದು ನನಗೆ ಗೊತ್ತು. ಕಾಶ್ಮೀರದಲ್ಲಿ 'ಘನಿ ಕಾಶ್ಮೀರಿ' ಎಂದು ಹೆಸರಾದ ಕವಿಯೊಬ್ಬನಿದ್ದ ಎಂಬ ಸಂಗತಿ ನಿಮಗೂ ಗೊತ್ತಿರಬಹುದು. ಅವನನ್ನು ಭೇಟಿ ಮಾಡಲು ಇರಾನಿನಿಂದ ಕವಿಯೊಬ್ಬ ಬಂದ. ನೋಡಿದರೆ ಅವನ ಮನೆಯ ಬಾಗಿಲುಗಳು ತೆರೆದೇ ಇದ್ದವು. ಅವನು ಹೇಳುತ್ತಿದ್ದ– ಬಾಗಿಲು ಹಾಕಿಕೊಂಡು ಒಳಗೆ ಬಚ್ಚಿಟ್ಟುಕೊಳ್ಳುವಂತಹದ್ದು ನನ್ನ ಮನೆಯಲ್ಲೇನಿದೆ? ನಾನು ಬಾಗಿಲು ಹಾಕಿಕೊಳ್ಳುವುದು ನಾನೇ ಸ್ವತಃ ಒಳಗೆ ಇದ್ದಾಗ ಮಾತ್ರ. ಯಾಕೆಂದರೆ ನನ್ನ ಮನೆಯಲ್ಲಿ ನನಗಿಂತ ಅನರ್ಘ್ಯ ವಸ್ತು ಬೇರೇನೂ ಇಲ್ಲ. ಹೀಗೆ ಬಟಾಬಯಲಾಗಿದ್ದ ಮನೆಯಲ್ಲಿ ಇರಾನಿನಿಂದ ಬಂದ ಕವಿ ತನ್ನ ಕವಿತೆಗಳ ಪುಟ್ಟ ಟಿಪ್ಪಣಿ ಪುಸ್ತಕವನ್ನು ಬಿಟ್ಟು ಹೋದ. ಅದರಲ್ಲಿನ ಒಂದು ಕವಿತೆಯ ದ್ವಿಪದಿ ಪೂರ್ತಿಯಾಗಿರಲಿಲ್ಲ. ಎರಡನೆಯ ಸಾಲನ್ನು ಬರೆದಿದ್ದರೂ ಮೊದಲಿನ ಸಾಲು ಅಪೂರ್ಣವಾಗಿತ್ತು. ಎರಡನೆಯ ಸಾಲು ಹೀಗಿತ್ತು: 'ಸುಟ್ಟ ಕಬಾಬಿನ ವಾಸನೆ ನಿನ್ನ ಬಟ್ಟೆಗಳಿಂದ ನಿಧಾನಕ್ಕೆ ಈಗ ಎಲ್ಲ ಕಡೆ ಆವರಿಸುತ್ತಿದೆ'. ಘನಿಯ ಮನೆಗೆ ಮತ್ತೊಮ್ಮೆ ಆ ಇರಾನಿ ಕವಿ ಬಂದು ನೋಡಿದರೆ ಅವನ ಕವಿತೆಯ ಮೊದಲ ಸಾಲು ಹೀಗೆ ಪೂರ್ತಿಯಾಗಿತ್ತು: 'ವಿನಾಶದ ಯಾವುದೋ ಕೈಯೊಂದು ನಿನ್ನ ಮುಂಗೈಬಟ್ಟೆಯ ಅಂಚನ್ನು ಯಾವಾಗ ಮುಟ್ಟಿತು?'

ಪಂಡಿತ್‌ಜೀ, ನಾನೂ ಸಹ ಹೀಗೆಯೇ ನಾಶಗೊಂಡಿರುವ ಒಂದು ಜೀವ. ಇಂಥ ವಿಷಯಗಳೆಲ್ಲ ನಿಮಗೆ ತಿಳಿಯಲಿ ಎಂಬುದಕ್ಕಾಗಿಯೇ ನಾನು ನಿಮಗೆ ಈ ಪುಸ್ತಕವನ್ನು ಅರ್ಪಿಸುತ್ತಿದ್ದೇನೆ.

ಸಾದತ್ ಹಸನ್ ಮಾಂಟೋ

೨೭, ಆಗಸ್ಟ್ ೧೯೫೪

(ಕನ್ನಡಕ್ಕೆ: ಎಸ್. ಸಿರಾಜ್ ಅಹಮದ್)

ಫೆಬ್ರುವರಿ, ೨೦೧೨

ತನ್ನನ್ನು ತಾನೇ ಕೊಂದುಕೊಳ್ಳುತ್ತಿರುವ ಸೆಕ್ಯುಲರಿಸಂ

ಪ್ರಿಯ ಓದುಗರೇ,

ನಮ್ಮದು ಸಂವಿಧಾನದ ಪ್ರಕಾರ 'ಸೆಕ್ಯುಲರ್' ದೇಶ. ಆದರೆ 'ಸೆಕ್ಯುಲರ್' ಅಂದರೆ ನಿಜವಾಗಿ ಏನರ್ಥ ಎಂದು ಯಾರೂ ಈವರೆಗೆ ನಿಖರವಾಗಿ ಹೇಳಲಾಗಿಲ್ಲ. ಹಾಗೇ ಸಂವಿಧಾನ ಜಾರಿಯಾಗಿರುವ ಈ ಅರವತ್ತು ವರ್ಷಗಳ ಸಾರ್ವಜನಿಕ ಜೀವನವಾಗಲೀ, ರಾಜಕಾರಣವಾಗಲೀ ಇದರ ಬಗ್ಗೆ ಸ್ಪಷ್ಟನೆಯ ಬದಲಾಗಿ ಗೊಂದಲವನ್ನುಂಟು ಮಾಡಿರುವುದೇ ಹೆಚ್ಚು. ಆದರೂ ಕಳೆದ ೨೦ ವರ್ಷಗಳಲ್ಲಿ–ರಾಮಜನ್ಮಭೂಮಿ ರಾಜಕಾರಣ ಆರಂಭವಾದಾಗಿನಿಂದ–ಈ ಸೆಕ್ಯುಲರಿಸಂ ಎಂಬುದೇ ನಮ್ಮ ರಾಜಕಾರಣವನ್ನೂ, ಅದರ ಸುತ್ತಲಿನ ಎಲ್ಲ ರಾಜಕೀಯ ಸಂಕಥನಗಳನ್ನೂ ನಿರ್ದೇಶಿಸುವ ದೊಡ್ಡ ಶಕ್ತಿಯಾಗಿಬಿಟ್ಟಿರುವುದು ಮಾತ್ರ ಒಂದು ದೊಡ್ಡ ವಿಪರ್ಯಾಸವಾಗಿದೆ! ಆದರೆ ನಿರ್ದಿಷ್ಟ ಪ್ರಕರಣಗಳಿಗೆ ಬಂದಾಗ ಮಾತ್ರ ಪ್ರತಿ ರಾಜಕೀಯ ಪಕ್ಷವೂ, ಅಭಿಪ್ರಾಯ ಗುಂಪುಗಳೂ ಪ್ರತಿ ಪ್ರಕರಣದ ಸಂದರ್ಭದಲ್ಲೂ ತದ್ವಿರುದ್ಧ ನಿಲುವುಗಳನ್ನು ತಳೆಯುತ್ತ ಬಂದು ರಾಜಕಾರಣವನ್ನೂ, ಸಾರ್ವಜನಿಕ ಜೀವನವನ್ನೂ ರಾಡಿ ಮಾಡಿಬಿಟ್ಟಿವೆ. ಸಲ್ಮಾನ್ ಸಲ್ಮಾನ್ ರಶ್ದಿ, ಷಾ ಬಾನು, 'ವಾಟರ್' ಸಿನಿಮಾ ಚಿತ್ರೀಕರಣ, ಬಾಬ್ರಿ ಮಸೀದಿ ಪತನ, ತಸ್ಲಿಮಾ ನಸ್ರೀನ್, ಎಂ.ಎಫ್.ಹುಸೇನ್, ಶಿವಾಜಿ ಇತಿಹಾಸದ ಪುಸ್ತಕ, ರಾಮಾನುಜನ್‌ರ ಬಹುರಾಮಾಯಣಗಳ ಪುಸ್ತಕ ಹೀಗೆ ಹಲವು ಹತ್ತು ಪ್ರಕರಣಗಳನ್ನು ಉದಾಹರಿಸುತ್ತಾ ಹೋಗಬಹುದು.

ಈಗ ರಶ್ದಿ ಪ್ರಕರಣ ಜೈಪುರ ಸಾಹಿತ್ಯೋತ್ಸವದ ಸಂದರ್ಭದಲ್ಲಿ ಮತ್ತೆ 'ಜೀವ' ಪಡೆದುಕೊಂಡಿದೆ. ೨೧ನೇ ಶತಮಾನದ ಪ್ರಗತಿಪರ ರಾಜಕಾರಣದ ಹರಿಕಾರ ಎಂದು ಬಿಂಬಿಸಲಾದ ರಾಜೀವ್ ಗಾಂಧಿ ಎಂಬ ಪ್ರಧಾನಿ ರಶ್ದಿಯ ಪುಸ್ತಕವನ್ನು ನಿಷೇಧಿಸಿದ್ದರಿಂದ ಹಿಡಿದು ಈಗ ಜಾಗತೀಕರಣದ ಹರಿಕಾರರೆಂದು ಹೇಳಿಕೊಳ್ಳುವ ಮನಮೋಹನ ಸಿಂಗ್ ಎಂಬ ಪ್ರಧಾನ ಮಂತ್ರಿಯ ಸರ್ಕಾರ ಅದೇ ರಶ್ದಿ ಈ ಸಾಹಿತ್ಯೋತ್ಸವಕ್ಕೆ ಬರದಂತೆ 'ಏರ್ಪಾಡು' ಮಾಡಿರುವವರೆಗೆ ನಮ್ಮ ಆತ್ಮದ್ರೋಹಿ ಸೆಕ್ಯುಲರ್ ರಾಜಕಾರಣದ ಆಧುನಿಕ

ಇತಿಹಾಸ ವ್ಯಾಪಿಸಿದೆ. ಸದ್ಯ ಇದರ ಹಿನ್ನೆಲೆಯಲ್ಲಿರುವುದು ಐದು ರಾಜ್ಯಗಳಲ್ಲಿ ನಡೆಯುತ್ತಿರುವ ಚುನಾವಣೆಗಳು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಹಾಗಾಗಿಯೇ, ಹುಸಿ ಸೆಕ್ಯುಲರ್, ನಿಜ ಸೆಕ್ಯುಲರ್, ಪ್ರಗತಿಪರ, ಎಡಪಂಥೀಯ, ಕ್ರಾಂತಿಕಾರಿ ಎಂದೆಲ್ಲ ಕರೆದುಕೊಳ್ಳುವ ಯಾವ ಪಕ್ಷವೂ ಇದರ ಬಗ್ಗೆ ಸ್ಪಷ್ಟವಾಗಿ ಮಾತನ್ನಾಡುವ 'ದುಸ್ಸಾಹಸ'ವನ್ನೇ ಮಾಡುತ್ತಿಲ್ಲ. ಇದು ಸಮಕಾಲೀನ ರಾಜಕಾರಣದ ಸಾಂಸ್ಕೃತಿಕ ದಿವಾಳಿಕೋರತನದ ಪ್ರತೀಕವಷ್ಟೆ.. ಇಂತಹ ರಾಜಕಾರಣ ರಾಷ್ಟವನ್ನು ಜಾಗತಿಕ ಶಕ್ತಿಯಾಗಿ ಕಟ್ಟಹೊರಟಿದೆ ಎಂದರೆ ಆ ರಾಷ್ಟ್ರಕ್ಕೆ, ಅದರ ಜನತೆಗೆ ಏನೋ ಒಂದು ದೊಡ್ಡ ದುರಂತ ಕಾದಿದೆ ಎಂದೇ ಅರ್ಥ. ಇದೆಲ್ಲದರ ಮಧ್ಯೆಯೇ ಜೈಪುರ ಸಾಹಿತ್ಯೋತ್ಸವದಲ್ಲಿ ನಾಲ್ಕು ಜನ ಲೇಖಕರಾದರೂ, ಪ್ರಭುತ್ವದ ಆತ್ಮದ್ರೋಹವನ್ನು ಪ್ರತಿಭಟಿಸುವ ದ್ಯೋತಕವಾಗಿ ರಶ್ದಿಯವರ ನಿಷೇಧಿತ ಪುಸ್ತಕದಿಂದ ಕೆಲವು ಭಾಗಗಳನ್ನು ಓದುವ ಸಾಹಸ ಮಾಡಿರುವುದು ವ್ಯವಸ್ಥೆಯಲ್ಲಿ ಇನ್ನೂ ಎಲ್ಲವೂ ಕೆಟ್ಟಿಲ್ಲ ಎಂಬ ಭರವಸೆಯನ್ನು ಹುಟ್ಟಿಸುವಂತಿದೆ.

ಸೆಕ್ಯುಲರ್ ಎಂದೆನ್ನಲಾಗುವ ರಾಜಕಾರಣದ ಸಂಬಂಧವಾಗಿ ಈಗ ಎದ್ದು ಕಾಣುತ್ತಿರುವ ಇನ್ನೊಂದು ದೊಡ್ಡ ಮತ್ತು ಭಯಾನಕ ವಿದ್ಯಮಾನವೆಂದರೆ, ಜಾತಿ ಪದ್ಧತಿ ಪಡೆದುಕೊಳ್ಳುತ್ತಿರುವ ಹೊಸ ಮಾನ್ಯತೆ ಮತ್ತು 'ಅಧಿಕೃತ'ವೆನ್ನಿಸುವ ಮನ್ನಣೆ. ನಮ್ಮ ರಾಜಕಾರಣ ಜಾತಿ ಕೇಂದ್ರಿತವಾಗಿ ಎಷ್ಟೋ ದಿನಗಳಾಗಿವೆ. ಆದರೆ ಇದನ್ನು ಇಷ್ಟು ಕಾಲ ಖಂಡಿಸುತ್ತಾ, ವಿರೋಧಿಸುತ್ತಾ ಬಂದ ಗುಂಪುಗಳೂ ಈಗ ಯಾವುದೇ ಎಗ್ಗಿಲ್ಲದೆ ಜಾತಿಯನ್ನು ಅಪ್ಪುತ್ತಿರುವ ದೃಶ್ಯಗಳು ಜಿಗುಪ್ಸೆ ಹುಟ್ಟಿಸುವಂತಿವೆ. ಇದು ಸೆಕ್ಯುಲರಿಸಂ ತನ್ನನ್ನು ತಾನೇ ಕೊಂದುಕೊಳ್ಳುತ್ತಿರುವ ಭಯಾನಕ ದೃಶ್ಯ ನಮ್ಮ ದೇಶದ, ಸಮಾಜದ ಅವನತಿಯ ಇತಿಹಾಸದ ಹಿಂದೆ ಜಾತಿ ಪದ್ಧತಿಯ ವಾಸ್ತವ ದುರಂತವಿದೆ ಎಂದು ವಿಶ್ಲೇಷಿಸಿದ್ದ ಸಮಾಜವಾದಿ ಚಿಂತಕ ಲೋಹಿಯಾ, ತಮ್ಮ ಸಮಾಜವಾದಿ ರಾಜಕಾರಣದ ಅವಿಭಾಜ್ಯ ಅಂಗವಾಗಿ ಜಾತಿ ವಿರೋಧಿ ಮತ್ತು ವಿನಾಶದ ದೊಡ್ಡ ಆಂದೋಲವನ್ನೇ ಆರಂಭಿಸಿದ್ದರು. ಇದರಿಂದ ಆಳವಾದ ಪ್ರಭಾವಕ್ಕೆ ಒಳಗಾಗಿದ್ದ ನಮ್ಮ ಮುಖ್ಯ ಲೇಖಕರಲ್ಲೊಬ್ಬರಾದ ತೇಜಸ್ವಿ, ನಮ್ಮ ಜನ ಜಾತಿ ಕುರಿತ ಪ್ರಸ್ತಾಪ ಮಾಡುತ್ತಿದ್ದಂತೆ ವಿದ್ಯುತಂತಿ ಮುಟ್ಟಿದವರಂತೆ ಹೌಹಾರುವವುದರ ಹಿಂದೆ ಜಾತಿ ಎನ್ನುವುದು ಹೇಗೆ ನಮ್ಮ ಮನಸ್ಸಿನ ಮರ್ಮ ಸ್ಥಾನದಲ್ಲಿ ನೆಲೆಗೊಂಡು ನಮ್ಮ ಸಾಮಾಜಿಕ ವರ್ತನೆ, ಅಭಿವ್ಯಕ್ತಿ ಹಾಗೂ ಲೌಕಿಕ ಆಯ್ಕೆಗಳನ್ನು ನಿರ್ಧರಿಸುತ್ತದೆ ಎಂಬುದನ್ನು ವಿವರಿಸಿದ್ದರು. ಹಾಗಾಗಿ ನಿಜವಾಗಿ ಜಾತ್ಯತೀತನಾಗದ ಲೇಖಕ, ಚಿಂತಕ, ಶಿಕ್ಷಕ, ಬುದ್ಧಿಜೀವಿ ಆಧುನಿಕ ಅರ್ಥದಲ್ಲಿ, ಅಂದರೆ ಸಮಾನತೆಯ ನೆಲೆಯಲ್ಲಿ, ಸಮಾಜ ವಿರೋಧಿಯೇ ಆಗಿರುತ್ತಾನೆ ಎಂದು ಹೇಳಬಹುದು.

ಆದರೆ ಇಂದು ನಮ್ಮ ಲೇಖಕರು, ಬುದ್ಧಿಜೀವಿಗಳು ಮತ್ತು ಇತ್ತೀಚೆಗೆ ಅವರನ್ನು 'ತಯಾರಿಸುವ' ಗುತ್ತೇದಾರಿ ಸ್ವಾಮ್ಯವನ್ನು ಪಡೆದಿರುವ ಶಾಲಾ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಎಷ್ಟು ಜಾತಿ ರೋಗಗ್ರಸ್ತವಾಗಿವೆಯೆಂದರೆ, ಜಾಗತೀಕರಣದ

ಹಡಬೆ ಹಣ, ಅದು ಈ ಶ್ರೇಣಿಗಳಲ್ಲಿ ಸೃಷ್ಟಿಸಿರುವ ಬೃಹತ್ ಪ್ರಮಾಣದ ಸಂಬಳ ಸವಲತ್ತುಗಳು, ಸಂಪಾದನೆ ಮತ್ತು ಸುಲಭ ಮಾನ್ಯತೆಯ ವೈವಿಧ್ಯಮಯ ಅವಕಾಶಗಳು ಎಲ್ಲ ಸಾಮಾಜಿಕ ಸೂಕ್ಷ್ಮಗಳನ್ನೂ ಮೊಂಡುಗೊಳಿಸಿಬಿಟ್ಟು, ಸಾಹಿತ್ಯ ಸಂಸ್ಕೃತಿಗಳು ಕೇವಲ ಪ್ರದರ್ಶಕ ಕಲೆಗಳಾಗಿ ಮಾರ್ಪಟ್ಟಿವೆ. ಅವಕ್ಕೂ ನಿಜ ಜೀವನಕ್ಕೂ ಸಾವಯವ ಸಂಬಂಧದ ಅಗತ್ಯವಿಲ್ಲದಂತಹ ಸಾಮಾಜಿಕ ವಿಕ್ಷಿಪ್ತತೆ ಸೃಷ್ಟಿಯಾಗಿದೆ. ಹಾಗಾಗಿಯೇ ಇಂದು ಒಂದೇ ಜಾತಿಯ-ಉಪಜಾತಿಯ ಲೇಖಕರು ಸಾರ್ವಜನಿಕವಾಗಿ ಮತ್ತು ವೇದಿಕೆಗಳ ಮೇಲೆ ಹಲವು ಸಂಘಟಿತ ರೂಪಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಹೆಸರಿನಲ್ಲಿಯೇ ಒಟ್ಟಾಗಿ ಕಾಣಿಸಿಕೊಳ್ಳಲು ಕೊಂಚವೂ ನಾಚಿಕೆಪಡದಂತಹ 'ಮುಕ್ತ', 'ಉದಾರವಾದಿ', 'ಖಾಸಗಿ' ಸಂದರ್ಭಗಳನ್ನು ಮತ್ತೆ ಮತ್ತೆ ನೋಡುತ್ತಿದ್ದೇವೆ. ಪುಸ್ತಕ ಪ್ರಕಾಶಕರೂ, ಮಾರಾಟಗಾರರೂ ತಮ್ಮದೇ ಜಾತಿಯ ಲೇಖಕರನ್ನು ಪೋಷಿಸಿ, ಪ್ರೋತ್ಸಾಹಿಸುವ 'ದಿಟ್ಟತನ' ತೋರುತ್ತಿದ್ದಾರೆ. ಇದು ಹಿಂದಿನಂತೆ ಯಾವುದೇ ಒಂದು ನಿರ್ದಿಷ್ಟ ಜಾತಿ ಅಥವಾ ಜಾತಿಗಳಿಗೆ ಸಂಬಂಧಿಸಿದ ವಿದ್ಯಮಾನವಾಗಿಲ್ಲ ಎಂಬುದು ಭವಿಷ್ಯದ ಭೀಕರತೆಯನ್ನು ಹೇಳುತ್ತದೆ. ಜಾತಿ ವ್ಯವಸ್ಥೆ ಎಂಬುದೇ ಒಂದು ವಸಾಹತುಶಾಹಿ ರಾಜಕಾರಣದ ಕಲ್ಪನೆಯಾಗಿದ್ದು, ಅದರಲ್ಲಿನ ಶ್ರೇಣೀಕರಣ, ಶೋಷಣೆ ಎಂಬುದೇ ಒಂದು ಹಸಿಸುಳ್ಳು ಎಂದು ಪ್ರತಿಪಾದಿಸುವ ಬೃಹತ್ ಪ್ರಮಾಣದ ವಿದೇಶಿ ಹಣದಿಂದ ಪ್ರಾಯೋಜಿತವಾದ ಅಧ್ಯಯನವೊಂದು ನಮ್ಮ ವಿಶ್ವವಿದ್ಯಾಲಯಗಳಲ್ಲೇ ಅದೂ ಸಂಸ್ಕೃತಿ ಅಧ್ಯಯನದ ಹೆಸರಲ್ಲಿ ಆರಂಭವಾಗಿದ್ದು, ಅದರಿಂದ ನಮ್ಮ 'ಪ್ರತಿಭಾವಂತ'ರೆನಿಸಿಕೊಂಡ ಹಲವು ವಿದ್ವಾಂಸರು 'ಆಕರ್ಷಿತ'ರಾಗಿ ಅತ್ತ 'ಗುಳೆ' ಹೋಗಿದ್ದಾರೆಂದೆಂದ ಮೇಲೆ ಇನ್ನೇನು ಹೇಳುವುದು?

ಈ ಸಂಚಿಕೆ ಈ ಸಮಕಾಲೀನ ವಿದ್ಯಾಮಾನವನ್ನು ಇದಕ್ಕೆ ಸಂಬಂಧಿಸಿದ ಇತ್ತೀಚಿನ ಹಲವು ಬೆಳವಣಿಗೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಿದೆ. ನಮ್ಮ ಈ ಪ್ರಯತ್ನದ ಬಗ್ಗೆ ದಯವಿಟ್ಟು ಬರೆಯಿರಿ.

<u>ದಾಖಲೆ</u>

ಕಟ್ಟಾ ಸಂಪ್ರದಾಯಸ್ಥರೊಬ್ಬರಿಗೆ ವಿವೇಕಾನಂದರು ಬರೆದ ಒಂದು ಪತ್ರ

ಇದು ಸ್ವಾಮಿ ವಿವೇಕಾನಂದರ ೧೫೦ನೇ ಹುಟ್ಟುಹಬ್ಬದ ವರ್ಷ. ವಿವೇಕನಂದರನ್ನು ವೀರ ಸನ್ಯಾಸಿ, ವಿಶ್ವ ವಿಜೇತ, ಹಿಂದೂ ಧರ್ಮ ಉದ್ಧಾರಕ ಎಂದಷ್ಟೇ ಬುರುಗು ಮಾತುಗಳಲ್ಲಿ ಈವರೆಗೆ ಕೆಲವು ಪಟ್ಟಭದ್ರ ಹಿತಾಸಕ್ತ ಶಕ್ತಿಗಳು ಕಟ್ಟಿಕೊಟ್ಟಿರುವ ಚಿತ್ರವನ್ನು ಅವರು ಮರುಪರಿಶೀಲಿಸಬೇಕಾದ ಸಂದರ್ಭವಿದು. ವಿವೇಕಾನಂದರು ಪರಮಹಂಸರ ಪರಮ ಶಿಷ್ಯರಾಗಿ ಕಂಡುಕೊಂಡದ್ದು ಧರ್ಮದ ಹೆಸರಲ್ಲಿ ಕರ್ಮಠರು ಆಚರಿಸುತ್ತಿದ್ದ

ಮೌಢ್ಯ ಮತ್ತು ಅನಾಗರಿಕವೆನ್ನಿಸುವ ತಾರತಮ್ಯಗಳ ಆಚರಣೆಗಳ ಪಾಷಂಡಿತನದ ಮೂಲಕ ಹಿಂದೂ ಧರ್ಮವೆಂಬುದು ಮುಟ್ಟಿದ್ದ ಅಧೋಗತಿಯನ್ನು. ಹಾಗಾಗಿ ಅವರು ತಮ್ಮ ಗುರುವರ್ಯರ ವೈಚಾರಿಕ ಮತ್ತು ಅನುಭಾವಿಕ ಸ್ಫೂರ್ತಿಯೊಂದಿಗೆ ಧರ್ಮ ಎಂಬ ಪರಿಕಲ್ಪನೆಯ ಆಳಕ್ಕೆ ಹೋಗಿ ಹಿಂದೂ ಧರ್ಮವನ್ನು ಆಧುನಿಕ ಕಾಲಕ್ಕೆ ತಕ್ಕಂತೆ ಪುನಾರಚಿಸುವ, ಅದನ್ನು ವಿಶಾಲ ಹೃದಯದ ವಿಶ್ವಧರ್ಮವನ್ನಾಗಿ ಪ್ರಸ್ತುತಪಡಿಸುವ ಮಹಾ ಸಾಹಸ ಕೈಗೊಂಡು ಯುಗಪುರುಷರೆನಿಸಿಕೊಂಡರು. ಭಾರತದ ನವೋದಯಕ್ಕೆ ಅಸ್ತಿವಾರ ಹಾಕಿದರು. ಆದರೆ ಅದನ್ನು ಈಗ ಹಿನ್ನೆಲೆಗೆ ಸರಿಸಿ ಮಧ್ಯಯುಗೀನ ಹಿಂದೂತ್ವದ ಪ್ರತೀಕವನ್ನಾಗಿ ಪರಿವರ್ತಿಸುವ ಪ್ರಯತ್ನಗಳು ಅಲ್ಲಲ್ಲಿ ನಡೆದಿವೆ. ಇದನ್ನು ವಿರೋಧಿಸತೊಡಗಿರುವವರೆ ಹಲ್ಲೆಯ ಬೆದರಿಕೆಗಳನ್ನು ಒಡ್ಡುವ ಪ್ರಯತ್ನಗಳು ಆರಂಭವಾಗಿವೆ.

ದುರದೃಷ್ಟಕರ ಸಂಗತಿಯೆಂದರೆ, ಇದರ ಜೊತೆಗೇ, ಈಗ ಈ ಹಿಂದುತ್ವವಾದಿಗಳಿಂದ ವಿವೇಕಾನಂದರನ್ನು 'ವಿಮೋಚನೆ'ಗೊಳಿಸುವ ಮಾತನಾಡುತ್ತಿರುವ ಎಡಪಂಥೀಯ ಕ್ರಾಂತಿಕಾರಿಗಳಿಗೆ ವಿವೇಕಾನಂದರು ಈವರೆಗೆ ವೈಚಾರಿಕವಾಗಿ ಅಲರ್ಜಿಯಾಗಿಯೇ ಉಳಿದಿದ್ದಾರೆ! ವಿವೇಕಾನಂದರನ್ನರಿಯದೆ ಈ ದೇಶದ ಬಹುಸಂಖ್ಯಾತ ಜನರ ಮಾನಸಿಕತೆಯ ಲಂಗರುಗಳನ್ನು ಗುರುತಿಸಲಾದು ಎಂಬ ಪ್ರಾಥಮಿಕ ರಾಜಕೀಯ ಅರಿವಿಗೇ ಎರವಾಗಿರುವ ಈ ಕ್ರಾಂತಿಕಾರಿಗಳು ಬಲಪಂಥೀಯರಿಂದ ಅವರ ವಿಮೋಚನೆಯ ನೆಪದಲ್ಲಾದರೂ ಈಗ ವಿವೇಕಾನಂದರನ್ನು ಸಮಗ್ರವಾಗಿ ಓದಿ ಚರ್ಚಿಸುವಂತಾಗಲಿ ಎಂದು ನವ ಮಾನವ ಆಶಿಸುತ್ತದೆ.

ವಿವೇಕಾನಂದರು ಪ್ರಮೋದ್‌ದಾಸ್ ಮಿತ್ರ ಎಂಬ ಕಟ್ಟಾ ಸಂಪ್ರದಾಯವಾದಿ ಗೆಳೆಯರೊಬ್ಬರಿಗೆ ಬರೆದ ಈ ಕೊನೆಯ ಪತ್ರ ಧರ್ಮ ಕುರಿತ ಅವರ ಕ್ರಾಂತಿಕಾರಿ ವಿಚಾರಗಳನ್ನು ಮಾತ್ರವಲ್ಲ, ಅಂದಿನ ಧಾರ್ಮಿಕ ಸಮಾಜವನ್ನು ಕುರಿತ ಅವರ ಸಿಟ್ಟು, ವಿಷಾದ, ಭರ್ತ್ಸನೆ, ವ್ಯಂಗ್ಯಗಳಿಂದ ತುಂಬಿದ್ದ ಅವರ ವ್ಯಕ್ತಿತ್ವವನ್ನು ಬಿಂಬಿಸುತ್ತದೆ ಎಂಬ ಕಾರಣಕ್ಕಾಗಿ ಇಲ್ಲಿ ನೀಡುತ್ತಿದ್ದೇವೆ–**ಸಂ.**

'ನಾನು ಶೂದ್ರ, ನಾನು ಮ್ಲೇಚ್ಛ... ನನಗೆ ಜಾತಿ ನಿಯಮಗಳ ತಾಪತ್ರಯವಿಲ್ಲ!'

ಅಲ್ಮೋರಾ

೩೦ನೇ ಮೇ, ೧೮೯೭

ಪ್ರಿಯ ಮಹಾಶಯರೇ,

ಅನಿವಾರ್ಯವಾದ ಯಾವುದೋ ಸಾಂಸಾರಿಕ ಸಂಕಟ ನಿಮಗೆ ಎದುರಾಗಿದೆ ಎಂದು ತಿಳಿದುಬಂತು. ನಿಮ್ಮಂತಹ ಜ್ಞಾನಿಗಳನ್ನು ಈ ಸಂಕಟ ಏನು ಮಾಡಬಲ್ಲುದು?

ಆದರೂ ವ್ಯಾವಹಾರಿಕ ಜಗತ್ತಿನ ಪರಸ್ಪರ ವಿಶ್ವಾಸ ಭಾವನೆಯು ಇದನ್ನು ಪ್ರಸ್ತಾಪಿಸುವಂತೆ ಮಾಡಿದೆ. ಅದೇನೇ ಇರಲಿ, ಅಂತಹ ಸಂಕಷ್ಟದ ಸಂದರ್ಭ ಅನೇಕ ವೇಳೆ ಉತ್ತಮವಾದ ಅಧ್ಯಾತ್ಮಿಕ ಕಾಣ್ಕೆಗಳನ್ನು ಒದಗಿಸುವವವು. ಮೋಡ ಸ್ವಲ್ಪ ಕಾಲ ಮರೆಯಾಗಿ ಸತ್ಯ ಸೂರ್ಯನು ಪ್ರಕಾಶಿಸುತ್ತಾನೆ. ಕೆಲವರಿಗೆ ಇದರಿಂದಾಗಿ ಅರ್ಧ ಬಂಧನ ಕಳಚಿದಂತೆ ಆಗುವುದು. ಎಲ್ಲ ಬಂಧನಗಳಿಗಿಂತಲೂ ಸ್ಥಾನಮಾನದ ಬಂಧನ ಬಹಳ ಬಲವಾದದ್ದು. ತನ್ನ ಗೌರವದ ಅಂಜಿಕೆ ಸಾವಿನ ಭಯಕ್ಕಿಂತ ಬಲವಾದುದು. ಈ ಬಂಧನ ಕೂಡ ಆಗಾಗ್ಗೆ ಸಡಿಲವಾದಂತೆ ತೋರುವುದು. ಅಂತರ್ಯಾಮಿಯಾದ ಭಗವಂತನ ಕರೆಯನ್ನು ಕೇಳುವುದು ಜನರ ಅಭಿಪ್ರಾಯಗಳಿಗೆ ಮನ್ನಣೆ ನೀಡುವುದಕ್ಕಿಂತ ಮೇಲೆಂದು ಮನಸ್ಸಿಗೆ ಕೆಲವು ಕಾಲ ತೋರುವುದು. ಆದರೆ ಮತ್ತೆ ಮೋಡಗಳು ಆವರಿಸುವುವು. ಇದನ್ನೇ ಮಾಯೆಯೆಂದು ಕರೆಯುವುದು.

ಬಹು ಕಾಲದವರೆಗೂ ನಿಮ್ಮೊಂದಿಗೆ ನೇರ ಪತ್ರ ವ್ಯವಹಾರ ಇಲ್ಲವಾದರೂ, ಅನ್ಯ ಮೂಲಗಳಿಂದ ನಿಮಗೆ ಸಂಬಂಧಿಸಿದಂತೆ ಹಲವು ಸಂಗತಿಗಳು ನನ್ನನ್ನು ತಲುಪುತ್ತಿದ್ದವು. ಕೆಲ ಕಾಲದ ಹಿಂದೆ ಗೀತೆಯ ಒಂದು ಅನುವಾದಿತ ಪ್ರತಿಯನ್ನು ನೀವು ನನಗಾಗಿ ಇಂಗ್ಲೆಂಡಿಗೆ ಕಳಿಸಿದ್ದಿರಿ. ಪುಸ್ತಕದ ರಕ್ಷಾಪುಟದ ಮೇಲೆ ಮಾತ್ರ ನಿಮ್ಮ ಹಸ್ತಾಕ್ಷರಗಳ ಒಂದು ಸಾಲು ಇತ್ತು. ಈ ಕೊಡುಗೆ ಬಂದು ತಲುಪಿದುದಕ್ಕಾಗಿ ನಾನು ಕೆಲವೇ ಶಬ್ದಗಳಲ್ಲಿ ಉತ್ತರಿಸಿದ್ದೆ.. ಇದು ನಿಮ್ಮ ಮೇಲಿನ ನನ್ನ ಪ್ರೀತಿ ಮುಂದುವರೆದಿರುವ ಬಗ್ಗೆ ನಿಮ್ಮಲ್ಲಿ ಸಂದೇಹವನ್ನು ಹುಟ್ಟಿಸಿತೆಂದು ಗೊತ್ತಾಯಿತು.

ದಯವಿಟ್ಟು ಈ ಸಂದೇಹ ನಿರಾಧಾರವಾದುದೆಂದು ನೀವು ತಿಳಿಯಿರಿ. ನನ್ನ ಸಂಕ್ಷಿಪ್ತ ಉತ್ತರಕ್ಕೆ ಕಾರಣ, ನಾಲ್ಕೈದು ವರ್ಷಗಳಲ್ಲಿ ನೀವು ನನಗೆ ಬರೆದಿದ್ದುದು, ನೀವು ಕಳಿಸಿದ ಇಂಗ್ಲಿಷ್ ಗೀತೆಯ ಮೇಲೆ ಇದ್ದ ಒಂದು ಸಾಲು ಮಾತ್ರ. ಇದರಿಂದಾಗಿ, ನಿಮಗೆ ಹೆಚ್ಚು ಬರೆಯಲೇ ಸಮಯವಿಲ್ಲದಾಗ ಓದಲೆಲ್ಲಿ ಸಮಯವಿರುತ್ತದೆಂದು ನಾನು ಭಾವಿಸಿದೆ. ಎರಡನೆಯದಾಗಿ ನೀವು ಹಿಂದೂ ಧರ್ಮದ ಬಿಳಿಚರ್ಮದ ಧರ್ಮ ಬೋಧಕರು ಬಹು ಆತ್ಮೀಯರೆಂದೂ. ನಿಮಗೆ ಸ್ಥಳೀಯ ವರ್ಣೀಯರ ಬಗ್ಗೆ ಸಹಾನುಭೂತಿಯಿಲ್ಲವೆಂದೂ ತಿಳಿಯಿತು. ಈ ವಿಷಯವಾಗಿ ನನಗೆ ಈ ಮುಂಚೆಯೂ ಸ್ವಲ್ಪ ಸೂಚನೆ ಸಿಕ್ಕಿತ್ತು. ಮೂರನೆಯದಾಗಿ ನಾನು ಮ್ಲೇಚ್ಛ, ಶೂದ್ರ, ಏನನ್ನು ಬೇಕಾದರೂ, ಯಾರ ಜೊತೆಯಲ್ಲಾದರೂ–ಅದರಲ್ಲೂ ಬಹಿರಂಗವಾಗಿ–ಭಾರತದಲ್ಲಿ ಮತ್ತು ಹೊರದೇಶಗಳಲ್ಲಿ–ತಿನ್ನುವವನು. ಅಷ್ಟೇ ಅಲ್ಲದೆ, ನನ್ನನ್ನು ಕುರಿತಂತೆ ಎಷ್ಟೋ ವಿಕೃತ ಭಾವನೆಗಳು ಪ್ರಚಾರದಲ್ಲಿವೆ. ಒಬ್ಬ ಗುಣಾತೀತನಾದ ಆನಂದಮಯನಾದ ಬ್ರಹ್ಮನನ್ನು ನಾನು ಮಾನ್ಯ ಮಾಡುವೆ ಮತ್ತು ಕೆಲವು ವ್ಯಕ್ತಿಗಳಲ್ಲಿ ಆ ಬ್ರಹ್ಮದ ವಿಶಿಷ್ಟ ಪ್ರಕಾಶವನ್ನು ಕಾಣುತ್ತೇನೆ. ಅಂತಹ ಕೆಲವರನ್ನು ಯಾರಾದರೂ ದೇವರೆಂದು ಕರೆದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇದೆಲ್ಲದರ ಹೊರಗೆ, ಸೃಷ್ಟಿಕರ್ತನಿರುವನು ಮುಂತಾದ ಬೌದ್ಧಿಕ ವಾದವಿವಾದಗಳು ನನಗೆ ಅಷ್ಟಾಗಿ ರುಚಿಸದು, ಇತ್ಯಾದಿ.

ಆದರೆ, ನನ್ನ ಜೀವನದಲ್ಲಿ ಅಂತಹ ದೇವರನ್ನು ನೋಡಿರುವೆನು. ಅತನ ಆಜ್ಞೆಯನ್ನು ನೆರವೇರಿಸುವುದಕ್ಕೇ ನಾನು ಜೀವಿಸಿರುವೆನು. ಸ್ಮೃತಿ-ಪುರಾಣಗಳೆಲ್ಲ ಅಲ್ಪ ಮತಿಗಳಿಂದ ರಚಿಸಲ್ಪಟ್ಟವು. ಅವುಗಳಲ್ಲಿ ಬೇಕಾದಷ್ಟು ತಪ್ಪುಗಳಿವೆ, ಜಾತಿ ಕುಲಗಳ ಹೆಮ್ಮೆ-ಅಸೂಯೆಗಳಿವೆ. ಅವುಗಳಲ್ಲಿ ಹೃದಯ ವೈಶಾಲ್ಯ ಮತ್ತು ಪ್ರೀತಿಯನ್ನು ಬೋಧಿಸುವ ಕೆಲವು ಭಾಗಗಳು ಮಾತ್ರ ಸ್ವೀಕಾರಕ್ಕೆ ಯೋಗ್ಯ. ಉಳಿದವುಗಳನ್ನು ತಿರಸ್ಕರಿಸಬೇಕಾಗುತ್ತದೆ. ಉಪನಿಷತ್ತುಗಳು ಮತ್ತು ಗೀತೆ ಇವುಗಳು ಮಾತ್ರ ನಿಜವಾದ ಶಾಸ್ತ್ರಗಳು. ರಾಮ, ಕೃಷ್ಣ, ಬುದ್ಧ, ಚೈತನ್ಯ, ನಾನಕ್, ಕಬೀರ್ ಮುಂತಾದವರು ಅವತಾರಗಳು. ಏಕೆಂದರೆ, ಅವರ ಹೃದಯ ಆಕಾಶದಷ್ಟು ವಿಶಾಲವಾಗಿತ್ತು. ಇವರೆಲ್ಲರಿಗಿಂತ ಹೆಚ್ಚು ಶ್ರೀರಾಮಕೃಷ್ಣರು. ರಾಮಾನುಜ ಮತ್ತು ಶಂಕರ ಮುಂತಾದವರು ಹೆಚ್ಚು ಹೃದಯಸಂಕುಚಿತರಾದ ಪಂಡಿತರಂತೆ ತೋರುವವರು. ಆ ಪ್ರೇಮವೆಲ್ಲಿ, ಮತ್ತೊಬ್ಬರ ದುಃಖಕ್ಕೆ ಮರುಗುವ ಹೃದಯವೆಲ್ಲಿ? ಪಂಡಿತನ ನಿಸ್ಸಾರ ವಿದ್ಯೆಯ ವಾಗ್ವೈಖರಿ, ತಾವು ಒಬ್ಬರೇ ಮುಕ್ತಿಯನ್ನು ಗಳಿಸಬೇಕೆಂಬ ತವಕದ ಭಾವನೆ ಎಲ್ಲಿ? ಆದರೆ ಇದು ನಿಜವಾಗಿ ಸಾಧ್ಯವೇ? ಹಾಗೆ ಎಂದಾದರೂ ಇತ್ತೆ? ಅಥವಾ ಮುಂದೆ ಎಂದಾದರೂ ಇರುವುದೋ? 'ನಾನು' ಎಂಬುವ ಅಹಂಕಾರ ಉಳಿಯುವ ತನಕ ಏನನ್ನಾದರೂ ಸಾಧಿಸಬಹುದೇ?

ಇನ್ನೊಂದು ದೊಡ್ಡ ತಪ್ಪು ಏನೆಂದರೆ, ಜಾತಿ ಭಾವನೆಯೇ ಪರಸ್ಪರ ಭೇದಬುದ್ಧಿಯನ್ನು ಕಲ್ಪಿಸುವುದಕ್ಕೆ ಮುಖ್ಯ ಕಾರಣ. ಮತ್ತು ಅದೇ ಮಾಯೆಯ ಮೂಲ-ಎಲ್ಲ ಜಾತಿಯೂ, ಅದು ಜನನದ ಮೇಲಿರಲಿ ಅಥವಾ ಯೋಗ್ಯತೆಯ ಮೇಲಿರಲಿ, ಬಂಧನವೇ ಎಂಬ ನಿರ್ಧಾರವು ಕ್ರಮೇಣ ನನ್ನ ಮನಸ್ಸಿನಲ್ಲಿ ದೃಢವಾಗುತ್ತಿದೆ. ಕೆಲವು ಸ್ನೇಹಿತರು ಹೀಗೆಂದು ಬುದ್ಧಿವಾದ ಹೇಳುವರು: 'ನಿಜ, ಅದೆಲ್ಲವನ್ನೂ ನಿನ್ನ ಮನಸ್ಸಲ್ಲಿಟ್ಟುಕೊಂಡಿರು. ಆದರೆ, ಹೊರಗೆ ವ್ಯಾವಹಾರಿಕ ಪ್ರಪಂಚದಲ್ಲಿ ಜಾತಿಯಂತಹ ಬೇಧಗಳನ್ನು ಇಟ್ಟುಕೊಂಡಿರಲೇಬೇಕಾಗುತ್ತದೆ'. ಅಂತರಾಳದಲ್ಲಿ ಐಕ್ಯತೆಯ ಭಾವ, ಹೊರಗೆ ಪೈಶಾಚಿಕ ನರಕಸದೃಶ ಅನ್ಯಾಯ ಮತ್ತು ಕ್ರೂರತನ... ಹೇ ದೀನರಿಗೆ ಸಾವನ್ನು ತರುವವರೇ! ಆದರೆ ಪಂಚಮನೇನಾದರೂ ಧನಿಕನಾದರೆ, 'ಓ ಇವನೇ ಧರ್ಮೋದ್ಧಾರಕ!'

ಇದೆಲ್ಲ ಆದ ಮೇಲೆ ನನ್ನ ಅಧ್ಯಯನದ ಮೂಲಕ ತಿಳಿಯುವುದೆಂದರೆ, ಧಾರ್ಮಿಕ ನಿಯಮಗಳು ಶೂದ್ರರಿಗಲ್ಲ; ಅವರೇನಾದರೂ ಆಹಾರದ ವಿಷಯದಲ್ಲಿ, ಪರದೇಶಕ್ಕೆ ಪ್ರಯಾಣ ಮಾಡುವ ವಿಚಾರದಲ್ಲಿ ಔಚಿತ್ಯ-ಅನೌಚಿತ್ಯಗಳನ್ನು ಅನುಸರಿಸಿದರೆ, ಅವೆಲ್ಲ ಅವನ ಪಾಲಿಗೆ ಅರ್ಥಹೀನ, ಅಸಂಗತ. ನಾನೊಬ್ಬ ಶೂದ್ರ, ನಾನೊಬ್ಬ ಮ್ಲೇಚ್ಛ. ಆದ್ದರಿಂದ ಆ ತಾಪತ್ರಯಗಳ ತಂಟೆಯೇ ನನಗಿಲ್ಲ. ನನಗೆ ಮ್ಲೇಚ್ಛರ ಆಹಾರವಾದರೇನು? ಅಸ್ಪೃಶ್ಯನ ಆಹಾರವಾದರೇನು?

ಪುರೋಹಿತರು ಬರೆದ ಪುಸ್ತಕಗಳಲ್ಲಿ ಮಾತ್ರ ಜಾತಿ ಎಂಬ ಹುಚ್ಚಾಟ ಕಾಣುವುದು. ಈಶ್ವರ ಸಾಕ್ಷಾತ್ಕಾರವಾದವರ ಪುಸ್ತಕಗಳಲ್ಲಿ ಇವೆಲ್ಲ ಇಲ್ಲ. ಪುರೋಹಿತರು ತಮ್ಮ

ಪೂರ್ವಜರು ಗಳಿಸಿದ ಮಹತ್ ಕೀರ್ತಿ-ಅನುಕೂಲಗಳನ್ನು ಅನುಭವಿಸಲಿ. ನಾನಾದರೋ ದೇವರ ವಾಣಿಯನ್ನು ಅನುಸರಿಸುವ. ಏಕೆಂದರೆ ನನ್ನ ಒಳಿತು ಅಲ್ಲಿರುವುದು. ನನಗೆ ತೋರಿದ ಮತ್ತೊಂದು ಸತ್ಯ ಎಂದರೆ, ಪರೋಪಕಾರವೊಂದೇ ಧರ್ಮ. ಉಳಿದ ಬಾಹ್ಯ ಸಂಸ್ಕಾರ ವಿಧಿ-ನಿಷೇಧಗಳೆಲ್ಲ ಹುಚ್ಚಾಟಗಳಷ್ಟೆ. ತನ್ನ ವೈಕ್ತಿಕ ಮೋಕ್ಷಕ್ಕೋಸ್ಕರ ಆಶಿಸುವುದು ಕೂಡ ತಪ್ಪು. ಪರರಿಗೆ ಸರ್ವಸ್ವವನ್ನೂ ಯಾರು ತ್ಯಾಗ ಮಾಡುವನೋ ಅವನಿಗೆ ಮಾತ್ರ ಮುಕ್ತಿ. ಅದಲ್ಲದೆ, ಯಾರು ಹಗಲು ರಾತ್ರಿ 'ನನ್ನ ಮೋಕ್ಷ ನನ್ನ ಮೋಕ್ಷ' ಎಂಬ ಪಲ್ಲವಿಯನ್ನು ಹಾಡುತ್ತಾ ತಮ್ಮ ಬುದ್ಧಿವಂತಿಕೆಯನ್ನೆಲ್ಲ ಖರ್ಚು ಮಾಡುವರೋ ಅವರು ಇಂದಿನ ಮತ್ತು ನಾಳೆಯ ಆತ್ಮೋದ್ಧಾರದ ಸಾಧ್ಯತೆಗಳನ್ನು ನೀಗಿಕೊಂಡು ಅಲೆದಾಡುವರು. ಇದನ್ನು ನಾನು ಹಲವು ಬಾರಿ ನನ್ನ ಕಣ್ಣುಗಳಿಂದಲೇ ನೋಡಿರುವೆ. ಈ ಹಲವು ಬಗೆಯ ಸಂಗತಿಗಳನ್ನು ಕುರಿತು ಆಲೋಚಿಸುತ್ತಾ ನಿಮಗೆ ಕಾಗದ ಬರೆಯುವುದಕ್ಕೆ ನನಗೆ ಮನಸ್ಸಿರಲಿಲ್ಲ. ಈ ನಿರ್ಣಾಯಕ ಭಿನ್ನಾಭಿಪ್ರಾಯಗಳಿದ್ದರೂ ಕೂಡ ನಿಮಗೆ ನನ್ನ ಮೇಲಿರುವ ವಿಶ್ವಾಸವು ಕಡಿಮೆಯಾಗದೆ ಇದ್ದರೆ ನಿಜವಾಗಿ ಅದು ನನಗೆ ಸಂತೋಷಕರ ಸುದ್ದಿಯೇ ಹೌದು.

ನಿಮ್ಮ

ವಿವೇಕಾನಂದ

(ಮೂಲ: ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ: ಸಂಪುಟ: ೫, ಶ್ರೀರಾಮಕೃಷ್ಣಾಶ್ರಮ, ಮೈಸೂರು)

ಮಾರ್ಚ್, ೨೦೧೨

ಹೊರ ಪ್ರಪಂಚದ ಸಂಭ್ರಮವೂ ಒಳ ಪ್ರಪಂಚದ ಗೆದ್ದಲೂ...

ಪ್ರಿಯ ಓದುಗರೇ,

'ಅತ್ತ ದರಿ ಇತ್ತ ಪುಲಿ'. ಇದು ರಾಷ್ಟ್ರ ಮತ್ತು ರಾಜ್ಯದ ಜನತೆ ಈಗ ರಾಜಕೀಯ ಆಯ್ಕೆಯ ವಿಷಯದಲ್ಲಿ ಎದುರಿಸುತ್ತಿರುವ ದೊಡ್ಡ ಸಂಕಟವಾಗಿದೆ. ಅತ್ತ ಕೇಂದ್ರ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳ ಬೊಕ್ಕಸದ ಹಣವನ್ನು ಖಾಸಗಿ ವ್ಯಕ್ತಿ ಮತ್ತು ಸಂಸ್ಥೆಗಳು ಲೂಟಿ ಮಾಡಲು ಅವಕಾಶ ಮಾಡಿಕೊಟ್ಟ ಹಲವು ಭ್ರಷ್ಟಾಚಾರದ ಹಗರಣಗಳ ಸರಮಾಲೆಯನ್ನು ತನ್ನ ಕುತ್ತಿಗೆಗೆ ಹಾಕಿಕೊಂಡಿರುವುದು ದಿನೇ ದಿನೇ ನ್ಯಾಯಾಲಯಗಳಲ್ಲಿನ ವಿಚಾರಣೆಗಳ ಸಂದರ್ಭದಲ್ಲಿ ಬೆಳಕಿಗೆ ಬರುತ್ತಿದೆ. ಅಣ್ಣಾ ಹಜಾರೆಯವರ ನೇತೃತ್ವದ ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ಸಂವಿಧಾನ ವಿರೋಧಿಯೆಂದು ಬೊಬ್ಬೆ ಹಾಕುತ್ತಾ, ಅದು ಸಂಸತ್ತಿನ ಪರಮಾಧಿಕಾರವನ್ನು ಪ್ರಶ್ನಿಸುತ್ತಿದೆ ಎಂದು ವಾದಿಸತ್ತಾ ಮತ್ತು ತನ್ನ ಭ್ರಷ್ಟಾಚಾರ ವಿರೋಧಿ ಬದ್ಧತೆಯನ್ನು ಪದೇ ಪದೇ ಘೋಷಿಸಿಕೊಂಡಿದ್ದ ಈ ಸರ್ಕಾರ ಕೊನೆಗೆ ಲೋಕಪಾಲ ಮಸೂದೆಗೆ ಮಾಡಿದ್ದಾದರೂ ಏನು? ಸಂಸತ್ತನ್ನೇ ವಂಚಿಸುವ ಹುನ್ನಾರ ರೂಪಿಸಿ ಮಸೂದೆ ಸದ್ಯಕ್ಕೆ ಸಂಸತ್ತಿನಿಂದ ಅನುಮೋದಿತವಾಗದಂತೆ ನೋಡಿಕೊಂಡದ್ದು!

ಇದಕ್ಕಾಗಿ ಕಾಂಗ್ರೆಸ್ ಪಕ್ಷವೊಂದನ್ನೇ ದೂರುವ ಕಾರಣವಿಲ್ಲ. ಏಕೆಂದರೆ ಈಗ ನಾಲ್ಕು ರಾಜ್ಯಗಳಲ್ಲಿ ನಡೆಯುತ್ತಿರುವ ಚುನಾವಣೆಗಳಿಗಾಗಿ ವಿವಿಧ ಪಕ್ಷಗಳು ಟಿಕೆಟ್ ಹಂಚಿರುವ ರೀತಿ ಭ್ರಷ್ಟಚಾರದ ವಿರುದ್ಧ ಇವು ಘೋಷಿಸುವ ಬದ್ಧತೆ ಬರೀ ಭಾಷಣದ ಬೊಗಳೆ ಎಂಬುದನ್ನು ಸಾಬೀತುಪಡಿಸುತ್ತದೆ. ಪ್ರತಿಯೊಂದು ಪಕ್ಷದಲ್ಲೂ ಅಪರಾಧ ಹಿನ್ನೆಲೆಯುಳ್ಳವರು ಟಿಕೆಟ್ ಪಡೆದಿರುವ ಪ್ರಮಾಣ ಕನಿಷ್ಠ ಶೇ.೩೦ರಷ್ಟಿದೆ! ಎಲ್ಲ ಪಕ್ಷಗಳಲ್ಲೂ, ಕೆಲವು ಬೆರಳೆಣಿಕೆಯ ಅಪವಾದಗಳ ಹೊರತಾಗಿ, ಪ್ರತಿ ಅಭ್ಯರ್ಥಿಯ ಸರಾಸರಿ ಕನಿಷ್ಠ

ವಾರ್ಷಿಕ ಆದಾಯ ಒಂದು ಕೋಟಿ ರೂಪಾಯಿಗಳು! ಇದು, ಭ್ರಷ್ಟಚಾರ ವಿರೋಧಿ ರಾಜಕಾರಣವೂ ಸೇರಿದಂತೆ, ಇಡಿಯಾಗಿ ಭ್ರಷ್ಟರ ರಾಜಕಾರಣ. ಈ ಚಿತ್ರದ ಮಧ್ಯೆ ಅಣ್ಣಾ ಹಜಾರೆ ಸದ್ಯಕ್ಕಾದರೂ ಕಾಣೆಯಾಗಿರುವುದು ಸಹಜವೇ.

ಇನ್ನು ಇತ್ತ ನಮ್ಮ ರಾಜ್ಯದಲ್ಲಿನ ಬಿಜೆಪಿ ಸರ್ಕಾರ ಈಗಾಗಲೇ ಬಹಿರಂಗೊಂಡಿರುವ ಅದರ ವೈವಿಧ್ಯಮಯ ವ್ಯಾವಹಾರಿಕ ಭ್ರಷಾಚಾರದ ಪ್ರಕರಣಗಳು ವಿಚಾರಣೆಯ ಹಂತದಲ್ಲಿರುವಾಗಲೇ, ಆ ಪಕ್ಷದ ಮೂಲ ಚಾಲೂ-ಚಹರೆಗಳನ್ನೇ ಪ್ರಶ್ನಿಸುವಂತಹ ಮತ್ತು ಈ ಸರ್ಕಾರ ಭ್ರಷ್ಟವಷ್ಟೇ ಅಲ್ಲ, ದುಷ್ಟವೂ ಹೌದೆಂಬುದನ್ನು ಸೂಚಿಸುವ ಪ್ರಕರಣಗಳು ಒಂದಾದರಮೇಲೊಂದರಂತೆ ನಡೆಯುತ್ತಲೇ ಇವೆ. ಸರ್ವೋಚ್ಚ ನ್ಯಾಯಾಲಯದ 'ಛೀಮಾರಿ'ಯ ನಂತರವೂ ವಿಧಾನಸಭಾಧ್ಯಕ್ಷರು ತಮ್ಮ ಪಕ್ಷ ನಿಷ್ಠೆಯನ್ನು ಮೆರೆಯುತ್ತಾ, ಸರ್ಕಾರವನ್ನು ರಕ್ಷಿಸುವ ಪ್ರಯತ್ನಗಳನ್ನು ಮುಂದುವರೆಸಿದ್ದಾರೆ. ಇದರಿಂದ ಉತ್ತೇಜಿತಗೊಂಡಂತಿರುವ ಸರ್ಕಾರ ತನ್ನ ಗುಪ್ತ ಕಾರ್ಯಕ್ರಮ ಸೂಚಿಯನ್ನು ಬಹಿರಂಗವಾಗಿಯೇ ಜಾರಿಗೆ ತರಲು ಆರಂಭಿಸಿದೆ. ಬಹುಪಾಲು ಧಾರ್ಮಿಕ ಮಠಗಳನ್ನು ಬೃಹತ್ ಸರ್ಕಾರಿ ದೇಣಿಗೆಗಳ ಮೂಲಕ ಪಥಭ್ರಷ್ಟಗೊಳಿಸಿದ ಈ ಸರ್ಕಾರ ಈಗ ಪಠ್ಯಪುಸ್ತಕಗಳ ಕೋಮುವಾದಿಕರಣದ ಪ್ರಯತ್ನಗಳ ಮೂಲಕ ನಮ್ಮ ಮಕ್ಕಳ ಮನಸ್ಸನ್ನೇ ಭ್ರಷ್ಟಗೊಳಿಸುವ ಪ್ರಯತ್ನಕ್ಕೆ ಕೈಹಾಕಿದೆ.

ರಾಜ್ಯದಲ್ಲಿನ ಇಂತಹ ಭ್ರಷ್ಟ ಮತ್ತು ದುಷ್ಟ ರಾಜಕೀಯ ವಾತಾವಾರಣದ ಕಾರಣದಿಂದ ಸ್ಫೂರ್ತಿ ಪಡೆದಂತೆ ಸಾರ್ವಜನಿಕ ಜೀವನದಲ್ಲಿ ಮೌಢ್ಯಾಚರಣೆಗಳ ಪ್ರಕರಣಗಳು ಜಿಗುಪ್ಸೆ ಹುಟ್ಟಿಸುವ ಮಟ್ಟ ಮುಟ್ಟಿವೆ. ಸಾಮೂಹಿಕ ಪ್ರಾಣಿಬಲಿ ಎಗ್ಗಿಲ್ಲದೆ ನಡೆದಿದೆ. ಧರ್ಮ ಸಂಸ್ಕೃತಿಗಳ ಹೆಸರಿನಲ್ಲಿ ಹೊಸ ಹೊಸ ಹಬ್ಬಗಳು, ವ್ರತಗಳು, ಹರಕೆಗಳು, ಸಂಕಷ್ಟಿಗಳು ಹುಟ್ಟಿಕೊಂಡು ಪುರೋಹಿತಶಾಹಿ ಮತ್ತೆ ಕೊಬ್ಬತೊಡಗಿದೆ. ರಾಜ್ಯದ ಇತಿಹಾಸದಲ್ಲೇ ಕೇಳದ, ಅಂತರ್ಜಾತಿ ವಿವಾಹ ವಿರೋಧಿಯಾದ 'ಮರ್ಯಾದಾ ಹತ್ಯೆ' ಈಗ ವರದಿಯಾಗಿದೆ. ಮರೆಯಾಗಿದ್ದ 'ನರಬಲಿ' ಮತ್ತೆ ಕಾಣಿಸಿಕೊಂಡಿದೆ. ಈ ಎರಡೂ ಪ್ರಕರಣಗಳಲ್ಲಿ 'ಬಲಿ'ಯಾದವರು ದಲಿತ ಸಮುದಾಯಕ್ಕೆ ಸೇರಿದವರು ಎಂಬ ಸಂಗತಿ ಈ ಬೆಳವಣಿಗೆಯ ಇನ್ನೊಂದು ಕ್ರೂರ ಮುಖವನ್ನು ತೋರಿಸುವಂತಿದೆ. ಈ ಹಿನ್ನೆಲೆಯಲ್ಲಿ ರಾಜಕೀಯ ನಾಯಕತ್ವದ ಪೈಪೋಟಿಯಲ್ಲಿ ಈಗ ರಾಜ್ಯಾದ್ಯಂತ ಮೊಳಗುತ್ತಿರುವ ಜಾತಿ ಐಕ್ಯತೆಯ ಕೂಗು-ಅದೂ ಪ್ರಬಲ ಜಾತಿಗಳ ಕಡೆಯಿಂದ-ಪ್ರಜಾಪ್ರಭುತ್ವ ಕ್ರಮೇಣ ಜಾತಿಪ್ರಭುತ್ವವಾಗಿ ಮನ್ನಣೆ ಪಡೆಯುವ ದುರಂತದ ಸೂಚನೆ ನೀಡುವಂತಿದೆ.

ಇದು ಕೈಬೆರಳೆಣಿಕೆಯಷ್ಟು ಜನರ ಹೊರತಾಗಿ ಇನ್ನಾರಲ್ಲೂ ತಲ್ಲಣ ಉಂಟುಮಾಡದಿರುವುದು, ಒಂದು ಸಣ್ಣ ರಾಜಕೀಯ ಹೋಗಲಿ, ಸಾಮಾಜಿಕ ಸಂಚಲನವನ್ನೂ ಉಂಟು ಮಾಡದಿರುವುದು ಜಾಗತೀಕರಣದ 'ಸುಖ-ಸಂಭ್ರಮಗಳು' ನಮಗೆ-ನಮ್ಮ ಸಮಾಜಕ್ಕೆ-ನಿಜವಾಗಿ ಮಾಡಿರುವುದು ಏನು; ಅದು ನಮ್ಮ

ಒಳಪ್ರಪಂಚವನ್ನೇ ಹೇಗೆ ಗೆದ್ದಲು ಹಿಡಿಸಿದೆ ಎಂಬುದನ್ನು ಸ್ಪಷ್ಟವಾಗಿ ಸಾರುತ್ತಿದೆ. ಒಳಪ್ರಪಂಚವನ್ನು-ಅಂತರಂಗವನ್ನು-ಕಳೆದುಕೊಂಡ ಸಮಾಜಕ್ಕೆ ಕಳೆದುಕೊಳ್ಳಲು ಉಳಿಯುವುದಾರೂ ಏನು?

ಇದರಿಂದ ಹೊರದಾರಿ ಇಲ್ಲವೇ? ಇದೆಲ್ಲ ಕೆಟ್ಟದು ಎನ್ನಿಸಬಲ್ಲ ಮನಸ್ಸಿಗೆ ಹೊರದಾರಿ ಕಾಣಲೇಬೇಕು. ಆದರೆ ಅದಕ್ಕೆ ಒಳ್ಳೆಯದು ಎಂದರೆ ಏನು, ಯಾವುದು ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆಯಷ್ಟೇ ಅಲ್ಲ, ಅದರ ಬಗ್ಗೆ ಆಳವಾದ ಬದ್ಧತೆಯೂ ಇರಬೇಕು. ಇವೆರಡನ್ನೂ ಆಯ್ದ ಕೆಲವರಲ್ಲಾದರೂ ರೂಢಿಸಬಲ್ಲ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಹೊರದಾರಿಯ ಹೊಸ ಕಾಣ್ಕೆಗಾಗಿ ನಾವು ಬಹುಶಃ ಅದರಿಂದಲೇ ಸ್ಫೂರ್ತಿ ಪಡೆಯಬೇಕಾದೀತು. ಅಂತಹ ಪರಂಪರೆಗೆ ಸೇರಿದ ಸಮಾಜವಾದಿ ಚಿಂತಕ ಮತ್ತು ಹೋರಾಟಗಾರ ರಾಮಮನೋಹರ ಲೋಹಿಯಾ ಅವರ ಹುಟ್ಟುಹಬ್ಬ ಇಂತಹ ಸ್ಫೂರ್ತಿಗೆ ಒಂದು ಸಂದರ್ಭವಾದೀತು. ಮಾರ್ಚ್ ೨೩ ಅವರ ೧೦೨ನೇ ಹುಟ್ಟುಹಬ್ಬ. ಹಾಗಾಗಿಯೇ ಈ ಸಂಚಿಕೆ ಅವರ ನೆನಪಿಗೆ ಸಮರ್ಪಿತವಾಗಿದೆ.

ಅದರೆ ಈ ಸಂದರ್ಭದಲ್ಲಿ ರಾಜ್ಯದ ಹಿರಿಯ ಸಮಾಜವಾದಿ ಚಿಂತಕರೆನಿಸಿಕೊಂಡಿರುವ ಬಾಪು ಹೆದ್ದೂರಶೆಟ್ಟಿಯವರು ಲೋಹಿಯಾ ಬಗ್ಗೆ ಬರೆದು ಪ್ರಕಟಿಸಿರುವ ಅವಹೇಳನಕಾರಿ ಪುಸ್ತಕ 'ನವ ಮಾನವ' ಮಾಸಿಕದ ಬಳಗಕ್ಕೆ ತೀವ್ರ ಜಿಗುಪ್ಸೆಯನ್ನುಂಟು ಮಾಡಿದೆ ಎಂದೇ ಹೇಳಬೇಕು. ಅವರು ತಮ್ಮ ಕುತರ್ಕ ಮತ್ತು ಕುತ್ಸಿತ ಶೈಲಿಯ ಈ ಬರಹದ ಮೂಲಕ ಲೋಹಿಯಾರನ್ನು ಕಳೆದ ಶತಮಾನ ಕಂಡ ಒಂದು ಅದ್ಭುತ ಸೃಜನಶೀಲ ಮನಸ್ಸು ಎಂದು ಗುರುತಿಸಿ ಗೌರವಿಸಿದ ಈ ರಾಜ್ಯದ ಮಾತ್ರವಲ್ಲ, ಈ ರಾಷ್ಟ್ರದ ಅತ್ಯುತ್ತಮ ಮನಸ್ಸುಗಳನ್ನು ಅಪಮಾನಿಸಿದ್ದಾರಷ್ಟೇ ಅಲ್ಲ, ಘಾಸಿಗೊಳಿಸಿದ್ದಾರೆ ಕೂಡ. ಹಾಗೇ ಯಾವ ಪರೋಕ್ಷ ಉದ್ದೇಶದಿಂದ ಅವರು ಈ ಪುಸ್ತಕ ಬರೆದಿರಬಹುದೋ ಆ ಸಮಾಜವಾದಿ ಆಂದೋಲನದ ಪುನರುಜ್ಜೀವನದ ಪ್ರಯತ್ನಕ್ಕೆ ಮಾರಕವೆನಿಸುವ ಆಘಾತ ಉಂಟುಮಾಡಿದ್ದಾರೆ.

<u>ದಾಖಲೆ</u>

ಲೋಹಿಯಾ ಬಿಹಾರ ಸರ್ಕಾರಕ್ಕೆ ಬರೆದ ಒಂದು ನೋವಿನ ಪತ್ರ

೧೯೬೭ರ ಚುನಾವಣೆಗಳಲ್ಲಿ ಲೋಹಿಯಾ ರೂಪಿಸಿದ 'ಕಾಂಗ್ರೆಸ್ಸೇತರವಾದ'ದ ಪರಿಣಾಮವಾಗಿ ಹಲವು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ 'ಸಂಯುಕ್ತ ವಿಧಾಯಕ ದಳ'ಗಳ ಸರ್ಕಾರಗಳಲ್ಲಿ ಒಂದಾದ ಬಿಹಾರದ ಸಂಯುಕ್ತ ಸಮಾಜವಾದಿ ಪಕ್ಷದ ನೇತೃತ್ವದ ಸರ್ಕಾರದ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಮತ್ತು ಪಕ್ಷದ ಹಿರಿಯ ಮುಖಂಡ ರಮಾನಂದ ತಿವಾರಿಯವರಿಗೆ ಲೋಹಿಯಾ ಪಕ್ಷದ ಕಾರ್ಯಕ್ರಮಗಳನ್ನು

ಜಾರಿಗೆ ತರುವಂತೆ ಆಗ್ರಹಿಸಿ ಬರೆದ ಪತ್ರವಿದು. ತಾವು ಕಟ್ಟಿದ ಪಕ್ಷದ ನೇತೃತ್ವದ ಸರ್ಕಾರವೇ ಅಧಿಕಾರಕ್ಕೆ ಬಂದರೂ, ಪಕ್ಷದ ಘೋಷಿತ ತತ್ವಗಳನ್ನು ಜಾರಿಗೆ ತರಲಾಗದಂತಹ ಇಕ್ಕಟ್ಟಿನ ಅವರ ಆತಂಕ-ಅಸಹಾಯಕತೆಗಳನ್ನೂ ಇಲ್ಲಿ ಗಮನಿಸಬಹುದಾಗಿದೆ.-ಸಂ.

೭, ಗುರುದ್ವಾರ ರಕಬ್ ಗಂಜ್

ನವದೆಹಲಿ-೧

೧೧, ಮಾರ್ಚ್ ೧೯೬೭

ಪ್ರೀತಿಯ ಶ್ರೀ ತಿವಾರಿಜಿ ಮತ್ತು ಶ್ರೀ ಕರ್ಪೂರಿಜಿ,

ನಿಮ್ಮ ನಡವಳಿಕೆಗಳು ನನಗೆ ಇಷ್ಟವಾಗದಿದ್ದಾಗಲೆಲ್ಲ ನಿಮಗೆ ಬರೆದು ತಿಳಿಸಬೇಕೆಂದು ನೀವಿಬ್ಬರೂ ನನಗೆ ಹಲವಾರು ಬಾರಿ ಹೇಳಿರುವಿರಿ.

ಸಂಪುಟ ರಚನೆಯಾಗಿ ಈಗಾಗಲೇ ಹದಿನೈದು ದಿನಗಳು ಕಳೆದುಹೋಗಿವೆ- ಅಂದರೆ, ನಿಗದಿತ ಕಾಲಾವಧಿಯ ಹನ್ನೆರಡನೇ ಒಂದು ಭಾಗ ಕಳೆದುಹೋಗಿದೆ. ನೀವು ಎಚ್ಚರದಿಂದಿರದಿದ್ದರೆ ಮಿಕ್ಕ ಅವಧಿಯೂ ಹಾಗೇ ಕಳೆದುಹೋಗುತ್ತದೆ.

ಭೂ ಕಂದಾಯ ರದ್ದತಿ ಬಗ್ಗೆ ನೀವಿನ್ನು ಯಾವುದೇ ನಿರ್ಧಾರಕ್ಕೆ ಬಂದಿಲ್ಲ ಎಂಬ ಭಾವನೆ ನನ್ನಲ್ಲುಂಟಾಗಿದೆ. ಶ್ರೀ ಕರ್ಪೂರಿ ಠಾಕೂರ್, ಸಂಪುಟದಲ್ಲಿನ ವಿವಿಧ ಪಕ್ಷಗಳಲ್ಲಿ ವಿಭಿನ್ನ ಅಭಿಪಾಯಗಳಿವೆಯೆಂದು ಸುದ್ದಿಗಾರರಿಗೆ ತಿಳಿಸಿದ್ದಾರೆಂಬ ವರದಿ ನನ್ನ ಈ ಭಾವನೆಯನ್ನು ಪುಷ್ಟಿಗೊಳಿಸುತ್ತದೆ. ಒಂದು ನಿರ್ಧಾರಕ್ಕೆ ಬಂದವರು ಸಂಪುಟದ ಭಿನ್ನಾಭಿಪ್ರಾಯಗಳ ಬಗ್ಗೆ ಹೀಗೆ ಮಾತನಾಡುವುದಿಲ್ಲ. ಸಿಪಿಐನ ಶ್ರೀ ಇಂದ್ರದೀಪ್ ಸಿನ್ಹಾ ಸದರಿ ಪ್ರಸ್ತಾವನೆಯ ಬಗ್ಗೆ ಯೋಚಿಸಲು ಸಾಕಷ್ಟು ಕಾಲ ತೆಗೆದುಕೊಂಡಿದ್ದಾರೆ. ನೀವು ಮತ್ತಷ್ಟು ಕಾಲವ್ಯಯ ಮಾಡದೆ ಒಂದು ನಿರ್ದಿಷ್ಟ ಕರಡನ್ನು ಮುಂದಿಟ್ಟು ಚರ್ಚಿಸಿ ಆ ಬಗ್ಗೆ ಒಂದು ಗಟ್ಟಿ ನಿರ್ಧಾರಕ್ಕೆ ಬರಬೇಕು. ಹೀಗೆ ಮಾಡಿದಲ್ಲಿ ಮಾತ್ರ ನಿಮ್ಮ ತತ್ವ-ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸಾಧ್ಯ.

ಈವರೆಗೆ ನೀವು ಸಂಪುಟಕ್ಕೆ ಹದಿನೈದು ಮಂತ್ರಿಗಳನ್ನು ತೆಗೆದುಕೊಂಡಿದ್ದೀರಿ. ಇವರಲ್ಲಿ ನಾಲ್ವರು ಮಾತ್ರ ಹಿಂದುಳಿದ ವರ್ಗಗಳಿಗೆ ಸೇರಿದವರು. ಈ ನಾಲ್ವರಲ್ಲಿ ಮೂವರು ಸಂಯುಕ್ತ ಸಮಾಜವಾದಿ ಪಕ್ಷಕ್ಕೆ ಸೇರಿದವರು ಎಂದು ಹೇಳಿ ನೀವು ನಿಮ್ಮ ಬದ್ಧತೆಯಿಂದ ತಪ್ಪಿಸಿಕೊಳ್ಳಲಾರಿರಿ. ಬಿಹಾರದಲ್ಲಿ ಇಡೀ ಸಂಪುಟದ ಸಾಧನೆ-ಸೋಲುಗಳೆಲ್ಲವಕ್ಕೂ ಸಂಯುಕ್ತ ಸಮಾಜವಾದಿ ಪಕ್ಷವೇ ಹೊಣೆಯಾಗಬೇಕಿದೆ. ಅಧಿಕಾರ ಬಿಟ್ಟು ಹೋದ ಕಾಂಗ್ರೆಸ್ ಸರ್ಕಾರದ ಹನ್ನೊಂದು ಮಂತ್ರಿಗಳಲ್ಲಿ ಏಳು ಜನ ಹಿಂದುಳಿದವರಿದ್ದರು. ಇಂತಹ ಹೋಲಿಕೆ ಬಹುಬೇಗನೆ ಜನಮನದ ಗಮನ ಸೆಳೆಯಬಲ್ಲುದು. ಅದು ಕಾಂಗ್ರೆಸ್ಸಿಗೆ ಹಿಂದುಳಿದ ಸಮುದಾಯಗಳನ್ನು ತನ್ನ ವಶಕ್ಕೆ

ತೆಗೆದುಕೊಳ್ಳಲು ನಾವೇ ಅವಕಾಶ ಮಾಡಿಕೊಟ್ಟು, ಅವರು ನಮ್ಮ ಉಪದೇಶವನ್ನು ನಮಗೇ ತಿರುಗಿಹೇಳುವಂತಹ ಸನ್ನಿವೇಶ ಸೃಷ್ಟಿಯಾಗುತ್ತದೆ. ನೀವು ಇದನ್ನೆಲ್ಲ ಹೇಗೆ ಸರಿ ಮಾಡುವಿರೋ ನನಗೆ ತಿಳಿಯದು; ಆದರೆ ಹರಿಜನರ, ಆದಿವಾಸಿಗಳ, ಮಹಿಳೆಯರ, ಮುಸ್ಲಿಮರ ಮತ್ತು ಇತರ ಹಿಂದುಳಿದ ಗುಂಪುಗಳ ಪ್ರತನಿಧಿಗಳನ್ನು ಸಂಪುಟ ಒಳಗೊಳ್ಳಲೇಬೇಕು. ಕಮ್ಯೂನಿಸ್ಟರು, ಪಿಎಸ್ಪಿಗಳು ಮತ್ತು ಜನಕ್ರಾಂತಿ ಪಕ್ಷಗಳು ತಮಗೆ ಜಾತಿ ಎಂಬುದಿಲ್ಲ ಎಂದು ಹೇಳಿದರೆ, ಅದು ನಿಜವೆಂದು ನಂಬಲು ನಾನು ತಯಾರಿದ್ದೇನೆ. ಆದರೆ ನಮ್ಮ ತಂದೆ-ತಾಯಿಗಳು ಮತ್ತು ಅಜ್ಜಿ-ತಾತಂದಿರಿಗೆ ಜಾತಿಗಳಿದ್ದವು. ಇದರ ಪರಿಣಾಮವಾಗಿ ನಮಗೆ ಕೆಲವು ಜವಾಬ್ದಾರಿಗಳಿವೆ. (ಧನಬಾದ್) ಗೋಲೀಬಾರಿನ ವಿಚಾರಣಾ ಆಯೋಗ ಕುರಿತಂತೆ ಆರಂಭದಲ್ಲಿ ನೀವು ದೃಢ ನಿರ್ಧಾರ ತೆಗೆದುಕೊಂಡಿರಿ. ಹಾಗಾಗಿ ನಾನು ನನ್ನ ಪಾಟ್ನಾ ಭಾಷಣದಲ್ಲಿ ಅದರ ಬಗ್ಗೆ ಹೆಚ್ಚು ಒತ್ತು ಕೊಟ್ಟು ಮಾತನಾಡಲಿಲ್ಲ. ಈಗ ನೋಡಿದರೆ ನೀವು ಅದರ ಬಗ್ಗೆ ಉದಾಸೀನರಾಗಿದ್ದಂತೆ ತೋರುತ್ತಿದೆ.

ಪತ್ರ ಬರೆಯುವುದು ನನಗೆ ಅಷ್ಟೇನೂ ಇಷ್ಟದ ಕೆಲಸವಲ್ಲ. ಆದರೂ ಇದನ್ನು ಏಕೆ ಮಾಡುತ್ತಿರುವೆ ಎಂಬುದು ನಿಮಗೆ ಅರ್ಥವಾಗುತ್ತದೆ ಎಂದು ಭಾವಿಸುವೆ.

ನಿಮ್ಮ

ರಾಮಮನೋಹರ ಲೋಹಿಯಾ

(ಕನ್ನಡಕ್ಕೆ: **ಡಿಎಸ್ಸೆನ್**)

ಏಪ್ರಿಲ್, ೨೦೧೨

ಹಿಂದುತ್ವವೂ ಪಕ್ಷಾತೀತ ಜಾತೀಯತೆಯೂ

ಪ್ರಿಯ ಓದುಗರೇ,

ಅಂತೂ ಕರ್ನಾಟಕದಲ್ಲಿ ಕಾಂಗ್ರೆಸ್ ಜಯದ ಮುಖ ಕಂಡಿದೆ. ಚಿಕ್ಕಮಗಳೂರು ಲೋಕಸಭಾ ಉಪಚುನಾವಣೆಯಲ್ಲಿ ಅದು ಭರ್ಜರಿ ಜಯ ಸಾಧಿಸಿದೆ. ಇದು–ಕನಿಷ್ಠ, ಈ ಭರ್ಜರಿ ಜಯ–ಕಾಂಗ್ರೆಸ್ಸಿಗೆ ಅನಿರೀಕ್ಷಿತ. ಹಾಗೇ ಬಿಜೆಪಿಗೂ. ಆದರೆ ವಾಸ್ತವವಾಗಿ ಇದನ್ನು ಬಿಜೆಪಿಯ ಸೋಲೆಂದು ಕರೆಯಬಹುದೇ ಹೊರತು, ಕಾಂಗ್ರೆಸ್ಸಿನ ಜಯವೆಂದಲ್ಲ. ಏಕೆಂದರೆ, ಕಳೆದ ಉಪಚುನಾವಣೆ ಮತ್ತು ಈ ಉಪಚುನಾವಣೆಯ ಮಧ್ಯೆ ಕಾಂಗ್ರೆಸ್ ಒಂದು ರಾಜಕೀಯ ಸಂಘಟನೆಯಾಗಿ ಮತ್ತು ವಿರೋಧ ಪಕ್ಷವಾಗಿ ಏನೂ ಬದಲಾವಣೆ ಕಂಡಿಲ್ಲ; ಯಾವ ಗಮನಾರ್ಹ ಸಾಧನೆಯನ್ನೂ ಮಾಡಿಲ್ಲ. ಆದರೆ ಇಲ್ಲಿ ಬಿಜೆಪಿಯ ಸೋಲು ನಿಜವಾದ ಸೋಲು. ಈ ಪಕ್ಷ ಕಳೆದ ಬಳ್ಳಾರಿ ಉಪಚುನಾವಣೆಯಲ್ಲಿ ಸೋತಿತ್ತಾದರೂ, ಅದು ಬಹು ಹಿಂದೆಯೇ ಆ ಕ್ಷೇತ್ರವನ್ನೇಕೆ, ಇಡೀ ಬಳ್ಳಾರಿ ಜಿಲ್ಲೆಯನ್ನೇ ರೆಡ್ಡಿ–ಶ್ರೀರಾಮುಲುರ ಜಹಗೀರಿಗೆ ಬಿಟ್ಟುಕೊಟ್ಟು ತನ್ನ ರಾಜಕೀಯ ಅವನತಿಗೆ ನಾಂದಿ ಹಾಡಿಕೊಂಡಿತ್ತು. ಆದರೆ ಈ ಸೋಲು ಆಗಿರುವುದು ಅದರ ಮುಖ್ಯಮಂತ್ರಿಯ (ಸದಾನಂದ ಗೌಡರ) ಕ್ಷೇತ್ರದಲ್ಲಿ; ಅದೂ ಪಕ್ಷದ–ಹಿಂದುತ್ವ ರಾಜಕಾರಣದ–ಭದ್ರ ಕೋಟೆಯಲ್ಲಿ!

ಹಾಗೆ ನೋಡಿದರೆ, ಈ ಚುನಾವಣೆ ಎರಡೂ ಪಕ್ಷಗಳಿಗೆ ಪಾಠ ಕಲಿಸಬೇಕಿದೆ. ಬಿಜೆಪಿಯ ಭ್ರಷ್ಟ ಮತ್ತು ಅಧಿಕಾರದಾಹಿ ರಾಜಕೀಯ ನಾಯಕರ ಅಸಹ್ಯಕರವೆನ್ನಿಸುವ ಬಹಿರಂಗ ಜಗಳಗಳಿಂದ ಕೊನೆಗೂ ಹೇಸಿ, ಜನ ಬಿಜೆಪಿ ವಿರುದ್ಧ ಮತ ಹಾಕಿದ್ದಾರೆ. ಜನರಿಗೆ ತಡವಾಗಿಯಾದರೂ ಹಿಂದುತ್ವದ ಈ ಮುಖವೂ–ಪರಮ ಜಾತೀಯತೆಯ–ಪರಿಚಯವಾಗಿದೆ. ಇದು ಒಳ್ಳೆಯದಕ್ಕೇ. ಆದರೆ ಬಿಜೆಪಿಯವರು ಪಾಠ ಕಲಿಯಲು ನಿರಾಕರಿಸಿರುವಂತಿದೆ. ಹಿಂದುತ್ವದ ಒಳತಿರುಳೇ (ಜಾತಿ ಪದ್ಧತಿಯನ್ನು ಮಾನ್ಯ ಮಾಡುವ) ಜಾತೀಯತೆಯಾಗಿರುವುದರಿಂದ ಮತ್ತು ಅದು ಸಾರತಃ ಅಧಿಕಾರದ ಮೇಲಾಟದ

ರಾಜಕಾರಣವೇ ಆಗಿರುವುದರಿಂದ ಅದರಿಂದ ಅದು ಹೊರಬರಲು ಅಸಾಧ್ಯವಾಗಿರುವಂತೆ ತೋರುತ್ತಿದೆ. ಯಡಿಯೂರಪ್ಪನವರ ಅಭ್ಯರ್ಥಿಯಾಗಿದ್ದ ಸದಾನಂದಗೌಡರು ಈಗ ಒಕ್ಕಲಿಗ ರಾಜಕಾರಣದ ಕೇಂದ್ರಬಿಂದುವಾಗಿದ್ದಾರೆ. ಹಾಗಾಗಿಯೇ ಒಕ್ಕಲಿಗ ಮಠಾಧೀಶರು ಬಹಿರಂಗವಾಗಿಯೂ, ಅವರ ಹಿಂದೆ ಪಕ್ಷಭೇದ ಮರೆತು ಒಕ್ಕಲಿಗ ನಾಯಕರು–ಮುಖ್ಯವಾಗಿ ದೇವೇಗೌಡರ ಕುಟುಂಬದವರು–ತೆರೆಮರೆಯಲ್ಲೂ ಸದಾನಂದಗೌಡರ ಬೆಂಬಲಕ್ಕೆ ನಿಂತಿದ್ದಾರೆ.

ಇದರಿಂದಾಗಿ ಆತಂಕಗೊಂಡಿರುವ; ಯಡಿಯೂರಪ್ಪನವರ ಋಣದಲ್ಲಿ ಸಿಕ್ಕಿಹಾಕಿಕೊಂಡಿರುವ ವೀರಶೈವ ಮಠಾಧೀಶರು ತಮ್ಮ ಸಹಜ ಧರ್ಮವೆಂಬಂತೆ ಅವರ ಬಹಿರಂಗ ಬೆಂಬಲಕ್ಕೆ ನಿಂತಿದ್ದಾರೆ. ಈ ಮಧ್ಯೆ ಲೋಕಾಯುಕ್ತ, ಸಿ.ಬಿ.ಐ. ವಿಚಾರಣೆಗಳ ನೇಣು ತಮ್ಮ ಕುತ್ತಿಗೆಗೆಲ್ಲಿ ಸುತ್ತಿಕೊಳ್ಳುವುದೇ ಎಂಬ ಭಯದಲ್ಲಿ ಯಡಿಯೂರಪ್ಪ ಊರಾದ ಮೇಲೆ ಊರೊಂದರಂತೆ ಹುಟ್ಟುಹಬ್ಬದ ಏರ್ಪಾಡು ಮಾಡಿಕೊಂಡು, ಅಭಿನಂದನೆ ಸ್ವೀಕರಿಸಿಕೊಂಡು ಮತ್ತೆ ಅಧಿಕಾರದ ಹಕ್ಕು ಸ್ಥಾಪಿಸಿಕೊಳ್ಳಲು ಜಾತಿ ಬಲಪ್ರದರ್ಶನಕ್ಕೆ ಇಳಿದಿದ್ದಾರೆ. ಇದರಿಂದ ಇನ್ನಷ್ಟು ಇಕ್ಕಟ್ಟಿಗೆ ಸಿಲುಕಿದಂತಿರುವ ಸದಾನಂದಗೌಡರು, ಯಡಿಯೂರಪ್ಪ ಅನುದಾನ ನೀಡಿ ಭ್ರಷ್ಟಗೊಳಿಸದ ಜಾತಿ ಸಂಘ–ಸಂಸ್ಥೆಗಳನ್ನು ದುರ್ಬೀನು ಹಾಕಿ ಹುಡುಕಿ ಅವಕ್ಕೆ ತಮ್ಮ ಮುಂಗಡಪತ್ರದಲ್ಲಿ ಕೋಟ್ಯಾಂತರ ರೂಪಾಯಿಗಳ ಅನುದಾನ ಪ್ರಕಟಿಸಿ ತಮ್ಮ ಅಧಿಕಾರ ರಕ್ಷಣೆಗಾಗಿ ಅಸಹ್ಯಕರ ಜಾತಿಸಂಘಟನೆಯಲ್ಲಿ ತೊಡಗಿದ್ದಾರೆ. ಹಿಂದುತ್ವ ಎಂದರೆ ಮೂಲತಃ ಏನೆಂದು ಗೊತ್ತಾಯಿತೇ?

ಆದರೆ ಕಾಂಗ್ರೆಸ್ ಏನು ಮಾಡುತ್ತಿದೆ? ಯಾವ ಪಾಠ ಕಲಿತಿದೆ? ಅದರ ಅಧ್ಯಕ್ಷ ಮಹಾಶಯರ ಪ್ರಕಾರ ಪ್ರಿಯಾಂಕ ಗಾಂಧಿ ಕರ್ನಾಟಕಕ್ಕೆ ಬಂದರೆ ಚುನಾವಣೆಗಳಲ್ಲಿ ಗೆಲ್ಲಿಸಿಕೊಡುತ್ತಾರಂತೆ! ಇದೆಲ್ಲ ಯಾವ ಪುರುಷಾರ್ಥಕ್ಕಾಗಿ? ಇನ್ನು ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯನವರು ಜಾತಿ–ಮಠಗಳಿಗೆ ಅನುದಾನ ನೀಡುವುದನ್ನು ಖಂಡಿಸುತ್ತಿದ್ದರೆ, ಅವರ ಉಪನಾಯಕ ಟಿ.ಬಿ. ಜಯಚಂದ್ರ ತಮ್ಮ ಜಾತಿ ಮಠದ ಆವರಣದಲ್ಲಿ ನಿಂತು ಮಠಗಳಿಗೆ ಅನುದಾನ ನೀಡುವುದರಲ್ಲಿ ತಪ್ಪೇನು ಎಂದು ಪ್ರಶ್ನಿಸಿದ್ದಾರೆ. ಈ ಸ್ಥಿತಿಯಲ್ಲಿರುವ ಈ ಪಕ್ಷ ಉಪಚುನಾವಣೆಯ ಅಪರೂಪದ ಗೆಲುವಿನಿಂದ ಮೈಮರೆಯಬಲ್ಲುದೇ ಹೊರತು ಅದರಿಂದ ಪಾಠ ಕಲಿಯುವ ಸೂಕ್ಷ್ಮತೆಯನ್ನು ನಿರೀಕ್ಷಿಸಬಹುದೇ? ತಾನು ಗೆದ್ದಿರುವುದು ಮುಖ್ಯವಾಗಿ ಬಿಜೆಪಿಯ ತಾರಕ ಮುಟ್ಟಿದ ಭ್ರಷ್ಟತೆ ಮತ್ತು ಒಳಜಗಳಿಂದ ಹೇಸಿ ಹೋದ ಜನರ ಸಿಟ್ಟಿನಿಂದಾಗಿ ಮತ್ತು ಸ್ವಲ್ಪಮಟ್ಟಿಗೆ ತನ್ನ ಅಭ್ಯರ್ಥಿಯ ಸ್ವಚ್ಛ ಚಾರಿತ್ರ್ಯದಿಂದಾಗಿ ಹಾಗೂ ಇದರ ಫಲವಾಗಿ ನಾಯಕ ಗಣದಲ್ಲಿ ಮೂಡಿದ ಅಪರೂಪದ ಸಾಮರಸ್ಯದಿಂದಾಗಿ ಎಂಬುದನ್ನು ಅರಿಯಲಾಗದಷ್ಟು ಸ್ಥೂಲದೇಹಿಯವಾಗಿರುವ ಈ ಪಕ್ಷ, ಸಹಜವಾಗಿಯೇ ಈ ಗೆಲುವನ್ನು ಸೋನಿಯಾಗಾಂಧಿಯವರಿಗೆ ಅರ್ಪಿಸಿ ಕೃತಾರ್ಥವಾಗಿದೆ!

ಕಾಂಗ್ರೆಸ್‌ಗೆ ಗೊತ್ತಿರಲಿ, ಈ ಚುನಾವಣಾ ಫಲಿತಾಂಶದಿಂದ ತಾನು ಪಾಠ ಕಲಿಯದೇ ಹೋದಲ್ಲಿ ಮತ್ತು ಬಿಜೆಪಿ ನಿಧಾನವಾಗಿಯಾದರೂ ಕಲಿತಲ್ಲಿ, ಮುಂಬರುವ ಚುನಾವಣೆಗಳಲ್ಲಿ ತನಗೆ ಸೋಲು ಕಟ್ಟಿಟ್ಟ ಬುತ್ತಿ ಎಂದು. ಪಕ್ಷ ಮೊದಲು ದೆಹಲಿ ನಾಯಕರ ಗುಲಾಮಗಿರಿ ಮಾಡುವುದನ್ನು ನಿಲ್ಲಿಸಿ ಸ್ವಲ್ಪ ಆತ್ಮಗೌರವ ಮತ್ತು ಕರ್ನಾಟಕದ ಅಸ್ಮಿತೆಯ ಕಡೆ ಗಮನ ಹರಿಸಬೇಕು. ರಾಜ್ಯದ ಇನ್ನೂ ಭ್ರಷ್ಟಗೊಳ್ಳದ ಲೇಖಕ–ಬುದ್ಧಿಜೀವಿಗಳನ್ನು ಪಕ್ಷದ ಸಂಪರ್ಕಕ್ಕೆ ತಂದುಕೊಂಡು ಒಂದು ಬೌದ್ಧಿಕ ಘನತೆಯನ್ನೂ ಪಡೆದುಕೊಳ್ಳಬೇಕು. ಅದಿಲ್ಲದೆ ಬರೀ ರಿಯಲ್ ಎಸ್ಟೇಟ್ ಮತ್ತು ಗಣಿಗಾರಿಕೆ ಖದೀಮರ, ಪುಡಿ ರೌಡಿಗಳ, ಎಲ್ಲೂ ಸಲ್ಲದ ಅಬ್ಬೇಪಾರಿಗಳ ಹಾಗೂ ಸದಾ ಮಂಕು ಕವಿದಂತಿರುವ ಜೋಭದ್ರಗೇಡಿ ನಾಯಕರ ಪಕ್ಷವಾಗಿಯೇ ಉಳಿದಲ್ಲಿ, ಬಿಜೆಪಿಯ ಸದಾ ಕ್ರಿಯಾಶೀಲವಾಗಿರುವ 'ಚಿಂತಕರ ಚಾವಡಿ'ಯ ಸಕಾಲಿಕ ಮತ್ತು ಜಾಣ ರಾಜಕೀಯ ತಂತ್ರಗಳ ಮುಂದೆ ಅದಕ್ಕೆ ಭವಿಷ್ಯವಿಲ್ಲವೆಂದೇ ಹೇಳಬೇಕು. ಅದೂ, ತನ್ನದೇ ನಾಯಕತ್ವದ ಕೇಂದ್ರ ಸರ್ಕಾರವನ್ನು ಎಡಬಿಡದೆ ಸುತ್ತಿಕೊಳ್ಳುತ್ತಿರುವ ಬೃಹತ್ ಭ್ರಷ್ಟಾಚಾರದ ಹಗರಣಗಳ ಮತ್ತು ಅವುಗಳ ಹಿಂದೆ ಕ್ರಿಯಾಶೀಲವಾಗಿರುವ ಆರ್ಥಿಕ ನೀತಿಯ ಹಿನ್ನೆಲೆಯಲ್ಲಿ.

ಮನಮೋಹನ ಸಿಂಗ್–ಅಹ್ಲೂವಾಲಿಯಾ ಜೋಡಿ ಪ್ರಕಾರ ಹಳ್ಳಿಯಲ್ಲಿ ದಿನಕ್ಕೆ ೨೨ ರೂ ಮತ್ತು ಪಟ್ಟಣದಲ್ಲಿ ೨೯ ರೂಪಾಯಿ ಗಳಿಸಬಲ್ಲವನು ಇನ್ನು ಬಡವನಲ್ಲ; ಅವನಿಗೆ ಬಡವರಿಗೆ ಸಿಗುವ ಸಾಮಾನ್ಯ ಸರ್ಕಾರಿ ಸೌಲಭ್ಯಗಳು ಲಭ್ಯವಿಲ್ಲ! ಈ ಹೊಸ ಬಡತನ ರೇಖೆಯ ನಿರ್ಣಯದಿಂದಾಗಿ ದೇಶದಲ್ಲಿ ಕಳೆದ ಐದು ವರ್ಷಗಳಲ್ಲಿ ಬಡತನ ಶೇ. ಏಳರಷ್ಟು ಕಡಿಮೆಯಾಗಿದೆಯಂತೆ! ಇದಕ್ಕಿಂತ ನಿರ್ಲಜ್ಜವಾದ ಆರ್ಥಿಕ ಮಂಡನೆ ಇನ್ನೊಂದಿರಲಾರದು. ಜಗತ್ತಿನ ಅತಿ ಶ್ರೀಮಂತರ ಪಟ್ಟಿಯಲ್ಲಿ ಭಾರತೀಯರ ಸಂಖ್ಯೆಯನ್ನು ದಾಖಲೆ ಮಟ್ಟದಲ್ಲಿ ಏರಿಸಿ ದೇಶದ ಬಡತನ ರೇಖೆಯನ್ನು ಇಷ್ಟು ಅಮಾನವೀಯ ಮಟ್ಟಕ್ಕೆ ನಿಗದಿ ಮಾಡಬಲ್ಲ ಈ ಆರ್ಥಿಕ ನೀತಿಯ ನಿರ್ಲಜ್ಜೆಯನ್ನು ಕ್ರಿಯಾಶೀಲವಾಗಿ ಪ್ರಶ್ನಿಸುವವರಾದರೂ ಯಾರು? ಪ್ರಶ್ನಿಸುತ್ತಿದ್ದವರಿಗೆ ಸಾಕಷ್ಟು ಮೇವು ಹಾಕಿ ತೃಪ್ತರನ್ನಾಗಿ ಮಾಡಲಾಗಿದೆ. ಪ್ರಶ್ನಿಸಬೇಕಾದವರಲ್ಲಿ ಅರ್ಧ ಜನಕ್ಕೆ ಪ್ರಶ್ನಿಸುವ ತಾಕತ್ತೇ ಇಲ್ಲ; ಇನ್ನರ್ಧ ಜನವನ್ನು ಪ್ರಭುತ್ವದ ಹಿಂಸೆಯ ಮೂಲಕ ದಮನ ಮಾಡಲಾಗಿದೆ.

ಓ ಭಾರತವೇ ನೀನೆತ್ತ ಸಾಗಿರುವೆ?

<u>ಸಮಕಾಲೀನ</u>

ಅಂಬೇಡ್ಕರ್ ಅವರ ನೆನಪು...

ಏಪ್ರಿಲ್ ೧೪ ಅಂಬೇಡ್ಕರ್ ಜಯಂತಿ. ಮೂರು ದಶಕಗಳ ಹಿಂದಿನವರೆಗೆ ದಲಿತರೂ ಸೇರಿದಂತೆ ಬಹುಪಾಲು ಭಾರತೀಯರಿಗೆ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿ ಮಾತ್ರ ಪರಿಚಿತರಾಗಿದ್ದ ಅಂಬೇಡ್ಕರ್, ಮಹಾರಾಷ್ಟ್ರದಲ್ಲಿನ ಕಳೆದ ಎಪ್ಪತ್ತರ ದಶಕದ 'ದಲಿತ್ ಪ್ಯಾಂಥರ್ಸ್' ಚಳುವಳಿಯ ಮೂಲಕ ದಲಿತ ಸಮುದಾಯದ ಬಹುದೊಡ್ಡ

ಸ್ಫೂರ್ತಿ ಕೇಂದ್ರವಾಗಿ, ತಾತ್ವಿಕ ಮಾರ್ಗದರ್ಶಿಯಾಗಿ ಹೊರಹೊಮ್ಮಿದರು. ಆನಂತರ ಕರ್ನಾಟಕದ ದಲಿತ ಚಳುವಳಿಯ ಮೂಲಕ ನಮ್ಮ ಜಾತಿ ಸಮಾಜದ ಆತ್ಮಸಾಕ್ಷಿಯನ್ನು ಕೆಣಕಿದ ಅಂಬೇಡ್ಕರ್, ಇತ್ತೀಚಿನ ವರ್ಷಗಳಲ್ಲಿ ಕಾನ್ಶೀರಾಂ–ಮಾಯಾವತಿ ರಾಜಕಾರಣಕ್ಕೂ ಪ್ರೇರಣೆಯಾಗಿ ರಾಷ್ಟ್ರಮಟ್ಟದಲ್ಲಿ ದಲಿತ ಸಂಘಟನೆಯ ಹಿಂದಿನ ಶಕ್ತಿಯಾಗಿಯೂ ಕಾಣಿಸಿಕೊಂಡು ಇಂದು ಅನೇಕ–ಸಾಮಾಜಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ–ನೆಲೆಗಳಲ್ಲಿನ ಚರ್ಚೆಗಳ, ಅಧ್ಯಯನದ ಕೇಂದ್ರ ಬಿಂದುವಾಗಿದ್ದಾರೆ.

ಈ ಹಿನ್ನೆಲೆಯಲ್ಲಿ, ಗಾಂಧಿಯುಗ ಮುಗಿದು ಅಂಬೇಡ್ಕರ್ ಯುಗ ಆರಂಭವಾಗಿದೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಇಷ್ಟೆಲ್ಲ ಆದರೂ ಅಂಬೇಡ್ಕರ್ ಅವರ ಅಳಲು ಮತ್ತು ತಾತ್ವಿಕತೆ ದಲಿತ ಸಮುದಾಯಗಳ ಆಚೆಗೆ ಇಡೀ ಸಮಾಜವನ್ನು ಮುಟ್ಟಲು ವಿಫಲವಾಗಿದೆ ಎಂಬುದು ವಾಸ್ತವ ಸಂಗತಿಯಾಗಿದೆ. ಇದಕ್ಕೆ ಸಮಾಜದ ಜಾತಿ ಮನಸ್ಸು ಎಷ್ಟು ಕಾರಣವೋ ಅಂಬೇಡ್ಕರರ ತಾತ್ವಿಕತೆಯ ಸೀಮಿತತೆಗಳು ಹಾಗೂ ಅವರ ಅನುಯಾಯಿಗಳ ಕಾರ್ಯಾಚರಣೆಯ ಶೈಲಿಯೂ ಕಾರಣವಾಗಿರಬಹುದು. ಆದರೆ ಎಲ್ಲ ರೀತಿಯ ಅಸಮಾನತೆಗಳ ವಿರುದ್ಧದ ಎಲ್ಲ ಸಿದ್ಧಾಂತಗಳೂ, ಹೋರಾಟಗಳೂ ಇಂದು ಜಾಗತೀಕರಣದ ಶಕ್ತಿಗಳಿಂದ ಪಳಗಿಸಲ್ಪಡುತ್ತಿರುವ ಈ ದಿನಗಳಲ್ಲಿ ನಮ್ಮ ದಲಿತ ಚಳುವಳಿ ಮತ್ತು ರಾಜಕಾರಣ ಈ ಬಗ್ಗೆ ಗಂಭೀರ ಆಲೋಚನೆಯಲ್ಲಿ ತೊಡಗಿದ ಯಾವ ಲಕ್ಷಣಗಳೂ ಕಾಣದಿರುವುದು ಆಶ್ಚರ್ಯವನ್ನುಂಟು ಮಾಡುತ್ತಿದೆ. ಕೂಗುಮಾರಿಗಳು ಹಳೇ ಘೋಷಣೆಗಳಲ್ಲೇ ಮೈಮರೆತಿದ್ದರೆ ನಮ್ಮ ನಡುವಿನ ಸೂಕ್ಷ್ಮ ಚಿಂತಕರೆನಿಸಿಕೊಂಡವರು ಮೌನಕ್ಕೆ ಶರಣಾಗಿ ಗಾಬರಿ ಹುಟ್ಟಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಪತ್ರಿಕೆಯ ಈ ಸಂಚಿಕೆಯಲ್ಲಿ ದಲಿತ ಚಳುವಳಿ ಮತ್ತು ರಾಜಕಾರಣ ಕುರಿತು ವಿಶೇಷ ಪುಟಗಳನ್ನು ಪ್ರಕಟಿಸುತ್ತಿದೆ. ಇದರಲ್ಲಿ ಅಂಬೇಡ್ಕರರನ್ನು ಕುರಿತ ಎರಡು ವಿಭಿನ್ನ ಮತ್ತು ಕುತೂಹಲಕಾರಿ ನೋಟಗಳನ್ನು ಕೊಡುವ (ಗೋಪಾಲಕೃಷ್ಣ ಅಡಿಗ ಮತ್ತು ಸಿದ್ದಲಿಂಗಯ್ಯ ಅವರ) ಎರಡು ಹಳೆಯ ಕವಿತೆಗಳನ್ನೂ, ನಮ್ಮ ದಲಿತ ಚಳುವಳಿಯ ಇಂದಿನ ಸ್ಥಿತಿಗತಿಗಳನ್ನು ಕುರಿತು (ಆರು ಜನರನ್ನು ಕೇಳಿದ್ದಕ್ಕೆ ಪ್ರತಿಕ್ರಿಯಿಸಿದ) ಮೂವ್ವರು ಹಾಲಿ/ಮಾಜಿ ನಾಯಕರ ಅಭಿಪ್ರಾಯಗಳನ್ನೂ, ರಾಜ್ಯದಲ್ಲಿನ ದಲಿತ ಚಳುವಳಿಯ ಪಿತಾಮಹರಲ್ಲೊಬ್ಬರಾದ ಬಿ.ಕೃಷ್ಣಪ್ಪನವರೊಡನೆಯ ಒಂದು (ಹಳೆಯ) ಸಾಂದರ್ಭಿಕ ಸಂದರ್ಶನವನ್ನೂ ಮತ್ತು ಇತ್ತೀಚೆಗೆ ಪ್ರದರ್ಶನಕ್ಕೆ ಲಭ್ಯವಾಗಿರುವ ನಮ್ಮ ಸಮಾಜವಾದಿ ಕುಟುಂಬದ ಆನಂದ್ ಪಟವರ್ಧನ್‌ರ ದಲಿತ ಹೋರಾಟ ಕುರಿತ ಅದ್ಭುತ ಸಾಕ್ಷ್ಯಚಿತ್ರ 'ಜೈಭೀಮ್ ಕಾಮ್ರೇಡ್' ಬಗೆಗಿನ ಒಂದು ವಿಮರ್ಶೆಯನ್ನೂ ಒಳಗೊಂಡಿದೆ. ಓದುಗರು ಪ್ರತಿಕ್ರಿಯಿಸುವರೆಂದು ನಂಬಿರುವೆ.–ಸಂ.

ಮೇ, ೨೦೧೨

ಒಕ್ಕೂಟ ತತ್ವ: ಬದಲಾಗಬೇಕಾದ ರಾಷ್ಟ್ರ ಕಲ್ಪನೆ

ಪ್ರಿಯ ಓದುಗರೇ,

ಇತ್ತೀಚಿನ ದಿನಗಳಲ್ಲಿ ರಾಷ್ಟ್ರ ರಾಜಕಾರಣದಲ್ಲಿ ಚರ್ಚೆಯಾಗುತ್ತಿರುವ ಮುಖ್ಯ ವಿಷಯವೆಂದರೆ ಒಕ್ಕೂಟ ತತ್ವ, ಏಕೆಂದರೆ ಇಂದು ಭಾರತವನ್ನು ಒಂದು ಕೇಂದ್ರದಿಂದ, ಒಂದು ರಾಜಕೀಯ ತಾತ್ವಿಕತೆಯಿಂದ ಆಳಲು ಕಷ್ಟವಾಗುತ್ತಿದೆ. ಇಂದು ಕನಿಷ್ಟ ಆರು ಪ್ರಬಲ ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯತೆಯನ್ನು ಕುರಿತ ತಮ್ಮದೇ ಕಲ್ಪನೆಗಳೊಡನೆ ವಿವಿಧ ರಾಜ್ಯಗಳನ್ನು ಆಳುತ್ತಿರುವವಲ್ಲದೆ, ರಾಷ್ಟ್ರೀಯತೆಯನ್ನು ಕುರಿತ ತಮ್ಮ ಕಲ್ಪನೆಗಳಿಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ, ಒಗ್ಗಿಸುವ ಪ್ರಯತ್ನಗಳನ್ನೂ ನಡೆಸಿವೆ. ಅಧಿಕೃತ ಲೋಕಪಾಲ ಮಸೂದೆಯಲ್ಲಿನ ಕೆಲವು ಅಂಶಗಳು ಮತ್ತು ಪ್ರಸ್ತಾವಿತ ರಾಷ್ಟ್ರೀಯ ಭಯೋತ್ಪಾದನಾ ಪ್ರತಿರೋಧ ಕೇಂದ್ರಗಳ ಸ್ಥಾಪನೆಯ ವಿಷಯವಾಗಿ ಕೇಂದ್ರ ಸರ್ಕಾರವನ್ನು ಮುಖಾಮುಖಿ ಮಾಡಿಕೊಂಡಿರುವ ಹತ್ತು ರಾಜ್ಯಗಳ ವಿವಿಧ ತಾತ್ವಿಕ ಹಿನ್ನೆಲೆಗಳ ಮುಖ್ಯಮಂತ್ರಿಗಳು ರಾಜ್ಯಗಳ ಸ್ವಾಯತ್ತತೆಯನ್ನು ಕುರಿತಂತೆ ಎತ್ತಿರುವ ಪ್ರಶ್ನೆಗಳು ಇಂದು ರಾಜಕೀಯ ಚರ್ಚೆಯ ಮುನ್ನೆಲೆಗೆ ಬಂದಿವೆ. ಇದಕ್ಕೆ ಈ ಅರವತ್ತು ವರ್ಷಗಳಲ್ಲಿ ರಾಷ್ಟ್ರದ ರಾಜಕೀಯ ಆಡಳಿತ ನಮಗೆ ಕಟ್ಟಿಕೊಟ್ಟಿರುವ ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಪರಿಕಲ್ಪನೆಗಳು ಜನತೆಯಲ್ಲಿ ಹುಟ್ಟಿಸಿರುವ ಹತಾಶೆಯೇ ಕಾರಣವಾಗಿದೆ. ಈ ರಾಷ್ಟ್ರೀಯತೆ ಈ ದೇಶದ ಐತಿಹಾಸಿಕ ಸಾಂಸ್ಕೃತಿಕ ವೈವಿಧ್ಯತೆ ಪ್ರದರ್ಶನಕ್ಕೆ, ಮಾತ್ರ ಯೋಗ್ಯವೆಂದು ಪರಿಗಣಿಸಿ ಅದರಲ್ಲಿ ಜೀವಿಸುವ ಜನರ ಅಗತ್ಯ–ಆಶೋತ್ತರಗಳನ್ನು ನಿರ್ವಹಿಸಬಲ್ಲ ರಾಜಕಾರಣಕ್ಕೆ ಅವಕಾಶವನ್ನೇ ಮಾಡಿಕೊಡದೆ ಹೋಗಿದೆ.

ಇದಕ್ಕೆಲ್ಲ ಕಾರಣವೆಂದರೆ, ರಾಷ್ಟ್ರೀಯತೆಯೆಂಬುದು ಒಂದು ಭಾವ ಸಂಬಂಧವಾಗಿ ಮಾತ್ರ ಉಳಿಯದೆ, ಕೆಲವು ಪಟ್ಟಭದ್ರ ಹಿತಾಸಕ್ತಿಗಳು ರಾಷ್ಟ್ರದ ಸಂಪತ್ತನ್ನು ಲೂಟಿ ಹೊಡೆಯಲು ಒಂದು ಅನುಕೂಲಕರ ರಾಜಕೀಯ ರಕ್ಷಣಾ ಸಾಧನವಾಗಿ

ಮಾರ್ಪಾಟಾಗಿರುವುದು. ಇದರಿಂದಾಗಿ ಇಡೀ ರಾಷ್ಟ್ರೀಯ ರಾಜಕಾರಣವೆಂಬುದೇ ಅದನ್ನು ಪೋಷಿಸುವ ಸಾಮಾಜಿಕ-ಸಾಂಸ್ಕೃತಿಕ ಗುತ್ತೇದಾರರ ಹಿಡಿತಕ್ಕೆ ಸಿಕ್ಕಿದೆ. ಅಂದ ಮಾತ್ರಕ್ಕೆ ಪ್ರಾದೇಶಿಕ ಪಕ್ಷಗಳ ರಾಜಕಾರಣ ವ್ಯಾಪಾರೀಕರಣಗೊಂಡಿಲ್ಲ ಎಂದಲ್ಲ. ಆದರೆ ಅವುಗಳ ವ್ಯಾಪಾರೀಕರಣ ರಾಜ್ಯ ರಾಜಕಾರಣದ ವ್ಯಾಪ್ತಿಗಷ್ಟೇ ಸೀಮಿತವಾಗಿವೆ. ಇದನ್ನು ಅಖಿಲ ಭಾರತ ರಾಷ್ಟ್ರೀಯತೆ ಸೃಷ್ಟಿಸಿರುವ ಜನವಿರೋಧಿ ರಾಜಕಾರಣವನ್ನು ಎದುರಿಸುವ ದೃಷ್ಟಿಯಿಂದ ಸದ್ಯಕ್ಕಾದರೂ ಸಹಿಸಿಕೊಳ್ಳಬಹುದಾಗಿದೆ.

ಇಂದು ಭ್ರಷ್ಟಾಚಾರ ಬೃಹದಾಕಾರವಾಗಿ ಬೆಳೆದು, ಅದು ನಿಯಂತ್ರಣಕ್ಕೇ ಸಿಕ್ಕದಂತಾಗಿದೆ. ಇದಕ್ಕೆ, ಈ ಅಖಿಲ ಭಾರತ ರಾಷ್ಟ್ರೀಯತೆಗೆ ಆಧಾರವಾಗಿರುವ ಏಕಾತ್ಮಕ ರಾಷ್ಟ್ರ ಸ್ವರೂಪವು ಸೃಷ್ಟಿಸಿರುವ ಅಭಿವೃದ್ಧಿಯ ಕಲ್ಪನೆ, ಮಾದರಿ, ಗಾತ್ರ, ಅದಕ್ಕೆ ಬೇಕಾದ ಬಂಡವಾಳದ ಮೂಲಗಳು, ಅವುಗಳ ಹಿಂದಿನ ರಾಜಕೀಯ ಹಿತಾಸಕ್ತಿಗಳ ಸ್ವರೂಪ ಇತ್ಯಾದಿಗಳು ಕಾರಣವಾಗಿವೆ. ಜೊತೆಗೆ ಇವೆಲ್ಲ ಸೇರಿ ಒತ್ತಾಯಿಸುವ ಅವುಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆಯ ಆಡಳಿತ ಜಾಲದ ಜಟಿಲತೆಗಳೂ ಮುಖ್ಯ ಕಾರಣಗಳಾಗಿವೆ. ಹಾಗೇ ಇದೆಲ್ಲದರ ನ್ಯಾಯಾನ್ಯಾಯಗಳ ಬಗ್ಗೆ ಯೋಚಿಸಿ, ಚರ್ಚಿಸಿ ಪ್ರತಿಸ್ಪಂದಿಸಬೇಕಾದ ಈ ವ್ಯವಸ್ಥೆಯ ನಿಜವಾದ ವಾರಸುದಾರರಾದ ಸಾಮಾನ್ಯ ಜನತೆಗೆ ಇವೆಲ್ಲ ಎಷ್ಟೇ ಕಷ್ಟಪಟ್ಟರೂ ಅಸ್ಪಷ್ಟವಾಗಿ, ಗೊಂದಲಮಯವಾಗಿ ಮಾತ್ರ ಕಂಡು ಇದರ ಉಸಾಬರಿ ಬೇಡವೆಂದು ಔದಾಸೀನ್ಯ ತಾಳುವಷ್ಟು ಮಾನಸಿಕವಷ್ಟೇ ಅಲ್ಲ, ಭೌತಿಕ ದೂರಗಳನ್ನೂ ಈ ಏಕಾತ್ಮಕ ರಾಷ್ಟ್ರ ಕಲ್ಪನೆಯ ರಾಜಕಾರಣ ಸೃಷ್ಟಿಸಿದೆ. ಇದರ ಕಾನೂನುಗಳು, ಅದರ ಹಿಂದಿನ ಪರಿಕಲ್ಪನೆಗಳು, ಅದರ ಭಾಷೆ ಮತ್ತು ಬೇಡುವ ಖರ್ಚುಗಳೂ ಸಾಮಾನ್ಯ ಜನತೆ ದಕ್ಕಿಸಿಕೊಳ್ಳಲಾಗದಂತಹವು.

ಆದರೆ ವಿಪರ್ಯಾಸವೆಂದರೆ ಇದೆಲ್ಲವನ್ನೂ ಮಾಡಲಾಗಿರುವುದು ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಎಂದು ಹೇಳಲಾಗುತ್ತಿದೆ. ಈ ದುರಂತಮಯ ವಿಪರ್ಯಾಸದ ಮೂಲ ಇರುವುದು ನಾವು ಒಪ್ಪಿಕೊಂಡಿರುವ ಪ್ರಾತಿನಿಧಿಕ ಪ್ರಜಾಪ್ರಭುತ್ವವೆಂಬುದು ವಾಸ್ತವದಲ್ಲಿ ನಿಜವಾಗಿ ಪ್ರಾತಿನಿಧಿಕವಾಗಿಲ್ಲದಿರುವುದರಲ್ಲಿ. ಈ ವ್ಯವಸ್ಥೆಯಲ್ಲಿ ಸಾಮಾನ್ಯ ಜನತೆಗೆ ತನ್ನ ಹಕ್ಕಿನ ಪ್ರತಿಪಾದನೆಗೆ, ಅವನಿಗೆ ಎಟುಕಬಲ್ಲ ವೇದಿಕೆಗಳನ್ನೇ ಕಲ್ಪಿಸಿಲ್ಲ. ಇತ್ತೀಚೆಗೆ ಕಲ್ಪಿಸಲಾಗಿದೆಯೆಂದು ಹೇಳಲಾಗುವ ಪಂಚಾಯತ್ ರಾಜ್ ಸಂಸ್ಥೆಗಳನ್ನು ಎಲ್ಲ ನೆಲೆಗಳಲ್ಲೂ ಏಕಾತ್ಮಕ ರಾಷ್ಟ್ರ ರಾಜಕಾರಣದ ಬಾಲಂಗೋಚಿಗಳಂತೆ ವಿನ್ಯಾಸಗೊಳಿಸಲಾಗಿದ್ದು, ಅದರ ಪರಿಣಾಮವಾಗಿ ಅದರೆಲ್ಲ ದುಷ್ಟತನಗಳು ಇವಕ್ಕೂ ಸಾಗಿ ಬಂದು ಇವನ್ನು ಇದ್ದೂ ಇಲ್ಲದಂತೆ ಮಾಡಿಬಿಟ್ಟಿವೆ. ಇದೆಲ್ಲದರಿಂದಾಗಿ ಸಾಮಾನ್ಯ ಪ್ರಜೆಯೆಂಬುವನು ಸುಸ್ತಾಗಿ, ಸಮುದಾಯದ ಕಲ್ಪನೆಗೇ ಮುಖ ತಿರುಗಿಸಿ ತನ್ನ ಸ್ವಾರ್ಥವನ್ನಷ್ಟೇ ನೋಡಿಕೊಳ್ಳುವ ಅನಿವಾರ್ಯತೆಗೆ ಈಡಾಗಿದ್ದಾನೆ. ಆ ಮೂಲಕ ಅವನು ಪ್ರಜಾಪ್ರಭುತ್ವ ಮತ್ತು ರಾಷ್ಟ್ರ ಕಲ್ಪನೆಗಳ ಬಗೆಗೇ ಜಿಗುಪ್ಸೆಗೊಂಡಂತಾಗಿದ್ದಾನೆ..

ತಾನು ಬದುಕಿ ಬಾಳಿ ತನ್ನ ಬದುಕಿನ ಸಾರ್ಥಕ್ಯ ಕಂಡುಕೊಳ್ಳುವ ತನ್ನ 'ನೆರೆಹೊರೆ'ಯಲ್ಲಿನ ಸಂಪನ್ಮೂಲಗಳು, ಪರಿಸರ ಮತ್ತು ಅಗತ್ಯಗಳ ಆದ್ಯತೆಗಳ ವಿಷಯದಲ್ಲಿ ತನ್ನ ಅಭಿಪ್ರಾಯಕ್ಕೆ ಅವಕಾಶವೇ ಇಲ್ಲದ ಮೇಲೆ ಅವನು ತಾನೇ ಏನು ಮಾಡಿಯಾನು? ಇದರಿಂದಾಗಿಯೇ ಪ್ರಜಾಪ್ರಭುತ್ವದ ಮೂಲಾಧಾರವೆಂದು ಹೇಳಲಾಗುವ ಅವನ ಮತದ ಉದ್ದೇಶವೇ ಅಪ್ರಸ್ತುತಗೊಂಡು ಅದು ಸ್ಪರ್ಧಾತ್ಮಕ ಬೆಲೆಗೆ ಬಿಕರಿಯಾಗುತ್ತಿದೆ. ಇದರ ಪರಿಣಾಮವಾಗಿ ಅವನ ನೆರೆಹೊರೆಯ ಸಂಪನ್ಮೂಲಗಳು, ಪರಿಸರ ಮತ್ತು ಆಡಳಿತ ಯಾರ್ಯಾರೋ ಅಪರಿಚಿತರಿಗೆ ಸ್ಪರ್ಧಾತ್ಮಕ ಬೆಲೆಗಳಿಗೆ ಬಿಕರಿಯಾಗತೊಡಗಿವೆ. ಇದರಿಂದಾಗಿ ಒಮ್ಮೊಮ್ಮೆ ಅವನಲ್ಲಿ ಉದ್ಭವವಾಗುವ ತಪ್ಪಿತಸ್ಥ ಭಾವನೆಯೇ ಅವನನ್ನು ನಕ್ಸಲೀಯನೋ, ನಕ್ಸಲೀಯ ಬೆಂಬಲಿಗನನ್ನಾಗಿಯೋ ಮಾಡಿದ್ದರೆ ಆಶ್ಚರ್ಯವಿಲ್ಲ.

ಹಾಗಾಗಿ ಭಾರತವನ್ನು ಪ್ರಜೆಗಳ ಕಣ್ಣಲ್ಲಿ ಒಂದು ವಿಶ್ವಾಸಾರ್ಹ ರಾಷ್ಟ್ರವಾಗಿ ಉಳಿಸಿ, ಬೆಳಸಲು ತುರ್ತಾಗಿ ಮಾಡಬೇಕಾಗಿರುವ ಕೆಲಸವೆಂದರೆ, ಇಂದು ರಾಷ್ಟ್ರೀಯ ಚರ್ಚೆಯ ಮುನ್ನೆಲೆಗೆ ಬಂದಿರುವ ಒಕ್ಕೂಟ ತತ್ವವನ್ನು ಪೋಷಿಸುವುದೇ ಆಗಿದೆ. ಹಾಗೇ, ಅದು ರಾಜ್ಯಗಳ ಒಕ್ಕೂಟ ತತ್ವವಾಗಿ ಮಾತ್ರ ಉಳಿಯದೆ, ಸಾಮಾನ್ಯ ಪ್ರಜೆಯೂ ರಾಷ್ಟ್ರ ಕಟ್ಟುವ ಪ್ರಕ್ರಿಯೆಯಲ್ಲಿ ತನ್ನ ದನಿಯನ್ನು ದಾಖಲಿಸಲು, ತನ್ನ ಹಕ್ಕುಗಳನ್ನು ಪ್ರತಿಪಾದಿಸಲು ಅವಕಾಶವಿರುವಷ್ಟು ಪ್ರಾತಿನಿಧಿಕ ಶಕ್ತಿಯುಳ್ಳ ಸ್ಥಳೀಯ ರಾಜಕೀಯ ವೇದಿಕೆಗಳನ್ನು ಸೃಷ್ಟಿಸಬಲ್ಲ ಶಾಸನಾತ್ಮಕ ನಿರ್ಧಾರಗಳನ್ನು ಕೈಗೊಳ್ಳಬೇಕಿದೆ. ಆ ಮೂಲಕ ರಾಷ್ಟ್ರವನ್ನು ಕೆಳಹಂತದಿಂದ ಕಟ್ಟುವ ಪ್ರಕ್ರಿಯೆಗೆ ಚಾಲನೆ ನೀಡಿ, ರಾಷ್ಟ್ರದ ಕಲ್ಪನೆಯನ್ನೇ ಮೂಲಭೂತವಾಗಿ ಬದಲಿಸುವ ರಾಜಕಾರಣವನ್ನು ರೂಪಿಸಬೇಕಿದೆ.

<u>ಸಮಕಾಲೀನ</u>

ಬುದ್ಧ ಮತ್ತು ಬಾಂಬ್...

ಮೇಲಿನ ಎರಡು ಮುಖ್ಯ ಚಿತ್ರಗಳ (ಬುದ್ಧನ ಪ್ರತಿಮೆ ಹಾಗೂ ಅಣುಸ್ಫೋಟ) ನಡುವಿನ ಚಿತ್ರವನ್ನು ಒಮ್ಮೆ ದಿಟ್ಟಿಸಿ ನೋಡಿ. ಅದು ಚೆರ್ನೋಬೈಲ್ ಅಣು ದುರಂತದಲ್ಲಿ ಬದುಕನ್ನು ನರಕವಾಗಿಸಿಕೊಂಡ ಲಕ್ಷಾಂತರ ಜನರ ಮಧ್ಯದಿಂದ ನಮ್ಮನ್ನು ಆಳವಾಗಿ ಇರಿಯಬಲ್ಲ ಒಂದು ದೀನ ನೋಟ: ಕ್ಯಾನ್ಸರ್ ಪೀಡಿತ ತಮ್ಮನನ್ನು ಅವುಚಿ ಹಿಡಿದುಕೊಂಡಿರುವ ಕ್ಯಾನ್ಸರ್ ಪೀಡಿತ ಅಣ್ಣನ ಚಿತ್ರವದು. ಆದರೆ ಬರಿ ನೋಟಗಳಿಂದ ಕಾಡಿಸಿಕೊಳ್ಳುವ ಸ್ಥಿತಿಯನ್ನು ನಾವು 'ಮೀರಿ' ಹೋಗಿದ್ದೇವೇನೋ... ಏಕೆಂದರೆ, ನಮಗೆ 'ಅಭಿವೃದ್ಧಿ' ಕೊಡುವ ಸುಖಗಳ ಪಿಶಾಚಿ ಹಿಡಿದುಕೊಂಡಿದೆ. ಏಕೆಂದರೆ, ಈ ಚಿತ್ರದ ಹಿಂದಿನ ಸಂದೇಶದಿಂದ ಜಗತ್ತೇ ಬುದ್ಧಿ ಕಲಿತಿದೆ; ಕನಿಷ್ಠ ಕಲಿತಂತೆ ತೋರುತ್ತಿದೆ. ಆದರೆ ಭಾರತವೊಂದನ್ನು ಬಿಟ್ಟು! ಜಗತ್ತಿನ ಎಲ್ಲ ಅಣುಶಕ್ತ ರಾಷ್ಟ್ರಗಳೂ ತಮ್ಮ ಅಣುವಿದ್ಯುತ್

ಯೋಜನೆಗಳನ್ನು ಕೈಬಿಟ್ಟು, ಇರುವ ಅಣು ಸ್ಥಾವರಗಳನ್ನು ಕ್ರಮೇಣ ಸ್ಥಗಿತಗೊಳಿಸುವ ತೀರ್ಮಾನಗಳನ್ನು ಕೈಗೊಳ್ಳುತ್ತಿದ್ದರೆ ನಮ್ಮ ದೇಶ ಅವನ್ನು ಸ್ಥಾಪಿಸುತ್ತಿರುವ ಹಠ-ಆವೇಶಗಳನ್ನು ನೋಡಿ. ಭಾರತ-ಅಮೆರಿಕಾ ಅಣು ಒಪ್ಪಂದದ ಉಳಿವಿಗಾಗಿ ನಮ್ಮ ಪ್ರಧಾನ ಮಂತ್ರಿಗಳು ತಮ್ಮ ಸರ್ಕಾರವನ್ನೇ ಪಣ ಒಡ್ಡಿದ ರೀತಿ ನೋಡಿ. ಅದರಲ್ಲಿ ಅವರು ಗೆದ್ದೂ ಗೆದ್ದರು! ಏಕೆಂದರೆ ದೇಶಕ್ಕೆ ಎರಡಂಕಿ ಪ್ರಗತಿ ದರದ 'ಅಭಿವೃದ್ಧಿ'ಯ ರುಚಿ ಹತ್ತಿಸಲಾಗಿದೆ. ಇದರ ಫಲವಾದ ಕೆಲವರ ಅಪರಿಮಿತ ಸುಖ ಸಂಪತ್ತುಗಳನ್ನು ಪ್ರದರ್ಶನಕ್ಕಿಡಲಾಗಿದೆ. ಆ ಮೂಲಕ ಉಳಿದವರ ಆಸೆಗಳನ್ನು ಕೆರಳಿಸಿಬಿಡಲಾಗಿದೆ.

ಎಷ್ಟಾದರೂ ಇದು, ಜಗತ್‌ವಿನಾಶಕವೆಂದು ಸಾಬೀತಾಗಿರುವ ಅಣುಬಾಂಬನ್ನು ತಯಾರಿಸುವ ತಂತ್ರಜ್ಞಾನವನ್ನು ಸಾಧಿಸಲು ನಡೆಸಿದ ಅಣುಸ್ಫೋಟ ಕಾರ್ಯಕ್ರಮಕ್ಕೆ 'ಬುದ್ಧ ನಸುನಕ್ಕ' ಎಂದು ಹೆಸರಿಟ್ಟು ವಿಕಟ ಸಂತೋಷ-ಸಂಭ್ರಮಗಳನ್ನು ಆಚರಿಸಿಕೊಳ್ಳಬಲ್ಲ ಕೇಡಿಗಳಿರುವ ದೇಶ. ಆದರೆ ಈ ಕೇಡಿತನ ಬರಿ ಧಾರ್ಮಿಕ-ರಾಜಕೀಯ ನೆಲೆಯದ್ದಲ್ಲ ಎಂಬುದನ್ನು ಮುಂದೆ ಬಂದ ಕೇಡಿಗಳು ಸಾಬೀತುಪಡಿಸಿದ್ದಾರೆ. ಇವರು ಕಲಿತಿರುವ ಪಶ್ಚಿಮದ ವಿಶ್ವವಿದ್ಯಾಲಯಗಳ ಜ್ಞಾನಕಾಂಡದ ಪ್ರಕಾರ ಮನುಷ್ಯನ, ಕನಿಷ್ಠ ಭಾರತೀಯನ ದುಃಖದ ಮೂಲ ಕಾರಣ, ತಲಾ ತಿಂಗಳ ಆದಾಯದ ರೂಪಾಯಿ ಲೆಕ್ಕದಲ್ಲಿ ಅಳೆಯಬಹುದಾದ ಬಡತನ! ಇದರ ಮೂಲೋತ್ಪಾಟನೆಯನ್ನು ಆದಷ್ಟು ಶೀಘ್ರ ಮಾಡಲು ವಿದ್ಯುತ್‌ಚಾಲಿತ ಯಂತ್ರ-ತಂತ್ರಗಳು ಬೇಕಾಗಿವೆ. ಇದೇ ಬಡತನದ ವಿರುದ್ಧ ರಾಮಬಾಣ! ಹೀಗೆ ಯೋಚಿಸುವಂತೆ ಮಾಡಿರುವ ಈ ಯಾಂತ್ರಿಕ ಹೃದಯಿಗಳ ಆತ್ಮಗಳಲ್ಲಿ ನಮ್ಮ ದೇಶದ 'ಅಭಿವೃದ್ಧಿ' ಅಗತ್ಯವಾದ ಎಲ್ಲ ಕಬ್ಬಿಣದ ದಾಸ್ತಾನೂ ತುಂಬಿರಲು ಸಾಕು. ಹಾಗಾಗಿಯೇ ಶೇಕಡಾ ನಲವತ್ತರ (ಕಮೀಷನ್) ಈ ಖಳರು, ಮೇಲಿನ ಆ ಚಿಕ್ಕ ಚಿತ್ರದಲ್ಲಿನ ನಿಜ ದುಃಖಕ್ಕಾಗಲೀ ಅಥವಾ ಆ ನಿಜ ದುಃಖದ ಶಾಶ್ವತ ಮತ್ತು ಸದ್ಯದ ಮೂಲಗಳ ಬಗ್ಗೆ ಹೇಳುವ, ಅದರ ಅಕ್ಕಪಕ್ಕದ ದೊಡ್ಡ ಚಿತ್ರಗಳ ಸಂದೇಶಗಳಿಗಾಗಲೀ- ಔಪಚಾರಿಕ ನೋಟದ ಹೊರತಾಗಿ- ಯಾವುದೇ ಜೀವಂತ ಸ್ಪಂದನ ಸಾಧ್ಯವಾಗದಷ್ಟು ಜಡವಾಗಿ ಹೋಗಿರುವರು.

ಇದು, ಬುದ್ಧ ಜಗತ್ತಿನ ಮೂಲಸ್ರೋತವೆಂದು ಕಂಡುಹಿಡಿದುಕೊಂಡ 'ಕರುಣಾ'ದ ಅರಿವನ್ನು ಕಳೆದುಕೊಳ್ಳುತ್ತಿರುವ ಜಗತ್ತಿನ ದುರಂತ. ಈ 'ಕರುಣಾ' ಅಂದರೆ, ಕಬ್ಬಿಣದ ಜ್ಞಾನ ಅಥವಾ ಯಾವುದನ್ನು ನಾವು ಇಂದು ವಿ-ಜ್ಞಾನವೆಂದು ಕರೆಯುತ್ತಿರುವೆವೋ ಅದು ಈ ಜಗತ್ತಿನಲ್ಲಿ ಜಡ-ಜೀವಂತವೆಂಬ ವಿಭಜನೆಯಿಂದ ಮೊದಲ್ಗೊಂಡು ಉಂಟುಮಾಡಿರುವ ವೈವಿಧ್ಯಮಯ ಶ್ರೇಣೀಕರಣಗಳಲ್ಲಿ, ಮೇಲಿನ ಶ್ರೇಣಿಯು ತನ್ನ ಅಹಂಕಾರ ಪ್ರದರ್ಶನವಾಗಿ ಕೆಳಗಿನ ಶ್ರೇಣಿಗೆ ತೋರಿಸುವ 'ಕರುಣೆ'ಯಲ್ಲ. ಜಗತ್ತಿನ ಸಮರಸತೆ ಮತ್ತು ಸಮತೋಲನಕ್ಕೆ ಕಾರಣವಾಗಿರುವ 'ನೀನೆಂಬುದಿಲ್ಲದಿದ್ದರೆ ನಾನೆಂಬುದೂ ಇಲ್ಲ'ವೆಂಬ ಸೃಷ್ಟಿಯಲ್ಲೇ ಅಂತರ್ಗತವಾಗಿರುವ ಪರಸ್ಪರ ಕರುಣೆ. ಇದೇ ಜಗತ್ತಿನ ಧಾರಣ ಶಕ್ತಿ ಕೂಡ. ನಮ್ಮ ಇರವಿನ ಈ ಆದಿಮ ಅರಿವಿನ್ನು

ಕಳೆದುಕೊಂಡಿರುವುದೇ ಮನುಷ್ಯನ ಮೂಲ ದುಃಖ. ಇದೇ ಎಲ್ಲ ದುಃಖಗಳ ತಾಯಿ. ಅಂದರೆ 'ದುಃಖವಿಲ್ಲದ ಸ್ಥಿತಿ' ಎಂಬ ಅರ್ಥದಲ್ಲಷ್ಟೇ ಅಸ್ತಿತ್ವ ಪಡೆದಿರುವ ಜಗತ್ತಿನ ಸುಖದ ಮೂಲ ನೆಲೆ ಇರುವುದು ಅದರ ಸಮಗ್ರತೆಯಲ್ಲಿ; ಅದರ ಅವಿಭಾಜ್ಯತೆಯ ಅರಿವಿನಲ್ಲಿ. ಯಾವುದೇ ಜ್ಞಾನವು ಪ್ರಜ್ಞೆ ಎನ್ನಿಸಿಕೊಳ್ಳುವುದು ಅದರ ಈ ಸಮಗ್ರತೆಯಲ್ಲೇ. ಹಾಗಾಗಿಯೇ ಬುದ್ಧನ ಪ್ರಕಾರ 'ಪ್ರಜ್ಞಾ ಪಾರಮಿತ' (ಪರಿಪೂರ್ಣತೆ)ವೇ ನಿಜವಾದ ಜ್ಞಾನ. ನಿಜವಾದ ಬಿಡುಗಡೆ; ಶೂನ್ಯತೆಯ ನಿಜಾನುಭವ.

ಆದರೆ ಇಂದು, ಆಧುನಿಕವೆಂದು ಕರೆಯಲಾಗುವ ಈ ಜ್ಞಾನಯುಗದ ಉತ್ತುಂಗ ಸಾಧನೆಯೆಂದು ಹೇಳಲಾಗುವ–ಜಗತ್ತಿನ ರಹಸ್ಯವನ್ನು ಭೇದಿಸಿತೆಂದೂ ಹೇಳಲಾಗುವ– ಅಣು ವಿಭಜನೆ ಮನುಷ್ಯನ ಇರವಿನ ಈ ಸಮಗ್ರತೆಯನ್ನೇ, ತನ್ನ ಆತ್ಮದೊಳಗೆ ತುಂಬಿಕೊಂಡಿರುವ ಕಬ್ಬಿಣದಿಂದ ಹುಟ್ಟಿದ ಜ್ಞಾನದ ಹಮ್ಮಿನಲ್ಲಿ, ಭಂಗಗೊಳಿಸಿದೆ. ಭೌತಿಕ ನೆಲೆಯ ಮೂಲಕ ಅಂತರಂಗದ ನೆಲೆಯಲ್ಲೂ. ಇದನ್ನು ಸಾಧ್ಯಮಾಡಿದ್ದನ್ನು ನಿಜವಾಗಿ ಜ್ಞಾನವೆಂದು ಕರೆಯಲಾಗದು. ಅದು ಜ್ಞಾನವು ಪ್ರಜ್ಞೆಯಾಗುವುದನ್ನು ತಡೆಯುವ ಶಕ್ತಿಗಳನ್ನು ತನ್ನ ಹುಟ್ಟಿನಲ್ಲೇ ಅಂತರ್ಗತಗೊಳಿಸಿಕೊಂಡಿರುವ ಜಡಲೋಕದೊಂದಿಗೆ ಮಾತ್ರ ವ್ಯವಹರಿಸುವ ವಿ–ಜ್ಞಾನ. ವಿಜ್ಞಾನ ತಂತ್ರಜ್ಞಾನಕ್ಕೆ ದಾರಿ ಮಾಡಿಕೊಟ್ಟಿರುವುದಕ್ಕೂ ಇದೇ ಕಾರಣ. ಇದು ಅಂತರಂಗವಿಲ್ಲದ, ಬರೀ ಬಹಿರಂಗದ ಜ್ಞಾನ. ಮೂಲದಲ್ಲೇ ಅದು ಅಸಮಗ್ರ; ಪ್ರಜ್ಞಾಹೀನ. ಹಾಗಾಗಿಯೇ ಅದು ಸುಖವನ್ನು ಸುಲಭವಾಗಿ ಮತ್ತು ದುಃಖದಿಂದ ಪ್ರತ್ಯೇಕಿಸಿ ವ್ಯಾಖ್ಯಾನ ಮಾಡಿ, ಸದಾ ಹೆಚ್ಚುತ್ತಾ ಹೋಗುವ ಸುಖದ ಕಲ್ಪನೆಯನ್ನು ಆಧರಿಸಿ ಆಧುನಿಕ ನಾಗರೀಕತೆಯನ್ನು ಕಟ್ಟಿದೆ. ಈ ಅಪರಿಮಿತ ಸುಖವೆನ್ನುವುದು ಈಗ ಆಧುನಿಕ ಮನುಷ್ಯನ ಹಕ್ಕೇ ಆಗಿಬಿಟ್ಟಿದೆ!

ಮಹಾತ್ಮ ಗಾಂಧಿಯನ್ನು ರಾಷ್ಟ್ರಪಿತನೆಂದು ಘೋಷಿಸಿಕೊಂಡಿರುವ ಭಾರತ ಯಾವುದೇ ಅಪರಾಧ ಭಾವವಿಲ್ಲದೆ ಸ್ವಯಂರಕ್ಷಣೆಯ ಹೆಸರಿನಲ್ಲಿ ಅಣು ಬಾಂಬುಗಳನ್ನೂ, ಅವನ್ನು ಹೊತ್ತೊಯ್ದು ಹಾಕುವ ಕ್ಷಿಪಣಿಗಳನ್ನೂ ಹೆಮ್ಮೆಯಿಂದ ಅಭಿವೃದ್ಧಿಪಡಿಸುತ್ತಿರುವುದು ಇಂತಹ ಅಜ್ಞಾನದ ಫಲವಾಗಿಯೇ. ಪಕ್ಕದ ರಾಷ್ಟ್ರಗಳೂ ಅಣ್ವಸ್ತ್ರ ಸನ್ನದ್ಧವಾಗಿದ್ದು, ನಮ್ಮ ಅಣು ಕಾರ್ಯಕ್ರಮ ನಿಲ್ಲದ ಅಣುಸ್ಪರ್ಧೆಯನ್ನು ಮಾರಕ ಪರಿಣಾಮಕ್ಕೆ ಕೊಂಡೊಯ್ಯಬಹುದಷ್ಟೆ. ಈ ಹಿನ್ನೆಲೆಯಲ್ಲಿ, ಪ್ರಜ್ಞೆ ಕಳೆದುಕೊಂಡಿರುವ (ವಿ)ಜ್ಞಾನಿಗಳ ಮತ್ತು ತಂತ್ರಜ್ಞರ ಅಜ್ಞಾನ ಮತ್ತು ಮೂರ್ಖತನವನ್ನು ಹಲವು ನೆಲೆಗಳಿಂದ ವಿವರಿಸುವ ನಮ್ಮ ಕೂಡಂಕುಳಂ ಅಣು ಸ್ಥಾವರದ ಸ್ಥಾಪನೆಯ ಮಾರಕ ಪರಿಣಾಮಗಳನ್ನು ವಿವರಿಸುವ ಲೇಖನಗಳ ಅನುವಾದಗಳನ್ನು ಬುದ್ಧ ಜಯಂತಿಯ ಈ ಸಂದರ್ಭದಲ್ಲಿ ಇಲ್ಲಿ ನೀಡುತ್ತಿದ್ದೇವೆ. ಹಾಗೇ ಈ ಜಗತ್ತಿನ ಸಮಗ್ರತೆ ಮತ್ತು ಅವಿಭಾಜ್ಯತೆಗೆ ಎರವಾಗದ ವಿಜ್ಞಾನ ಮತ್ತು ತಂತ್ರಜ್ಞಾನದ ಸಾಧ್ಯತೆಗಳನ್ನು ಪರಿಶೀಲಿಸುವ ಪ್ರಯತ್ನಗಳು ಆರಂಭವಾಗಲಿ ಎಂದು ಆಶಿಸುತ್ತಿದ್ದೇವೆ.–ಸಂ.

ಜೂನ್, ೨೦೧೨

ಕೂಗುಮಾರಿಗಳ ಪಾಲಾಗಿರುವ ದಲಿತ ರಾಜಕಾರಣ

ಪ್ರಿಯ ಓದುಗರೇ,

ಸಂಸತ್ತಿನ ಬೇಸಿಗೆ ಅಧಿವೇಶನವೂ ಲೋಕಪಾಲ ಮಸೂದೆಯನ್ನು ಅಂಗೀಕರಿಸದೆ ಮುಗಿದಿದೆ. ಹೋದ ಅಧಿವೇಶನದಲ್ಲಿ ನಡೆದ ನಾಟಕದ ಮರುಕಳಿಕೆಯಂತೆ ಈ ಬಾರಿಯೂ ಅಧಿವೇಶನದ ಕೊನೆಯ ದಿನ ಸರ್ಕಾರ ರಾಜ್ಯಸಭೆಯಲ್ಲಿ ಮಸೂದೆಯನ್ನು ಪರಿಶೀಲನಾ ಸಮಿತಿಯೊಂದಕ್ಕೆ ಕಳಿಸುವ ಪ್ರಸ್ತಾವವನ್ನಿಟ್ಟು, ಅದಕ್ಕೆ ಒಪ್ಪಿಗೆ ಪಡೆದು ನಿರಾಳವಾಗಿದೆ. ವಿರೋಧ ಪಕ್ಷಗಳ ಬೆಂಬಲವಿಲ್ಲದೆ ಇದು ಸಾಧ್ಯವಿಲ್ಲ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇದು ಸಂಸತ್ತು ಲೋಕಪಾಲ ಮಸೂದೆಗೆ ಕಳೆದ ೪೨ ವರ್ಷಗಳಿಂದಲೂ ಬಗೆಯುತ್ತಾ ಬಂದಿರುವ ದ್ರೋಹದ ಮುಂದುವರಿಕೆಯೇ ಆಗಿದೆ. ಆದರೂ ಸಂಸತ್ತಿನ ಸಾರ್ವಭೌಮತೆಯ ಹೆಸರಿನಲ್ಲಿ, ಭ್ರಷ್ಟಾಚಾರದ ವಿರುದ್ಧ ಜನಾಭಿಪ್ರಾಯ ಸಂಘಟಿಸಲು ಹೊರಟ ಅಣ್ಣಾ ಹಜಾರೆ ತಂಡದ ವಿರುದ್ಧ ಆರೋಪ ಪಟ್ಟಿಯ ಮೇಲೆ ಆರೋಪ ಪಟ್ಟಿ ಸಲ್ಲಿಸುತ್ತಾ ಅದರ ವಿಶ್ವಾಸಾರ್ಹತೆಯನ್ನೇ ಹಾಳುಗೆಡುಹುತ್ತಾ ಬಂದಿರುವ ನಮ್ಮ ಕೆಲವು ಬುದ್ಧಿಜೀವಿಗಳು ಮತ್ತು ಹೋರಾಟಗಾರರು ಈಗಲಾದರೂ ತಮ್ಮ ನಿಲುವಿನ ಬಗ್ಗೆ ಪುನರಾಲೋಚಿಸಬೇಕಿದೆ.

ಏಕೆಂದರೆ ಈ ಸಂಸತ್ತು ನಿಜವಾಗಿ ಹೇಗೆ ಸಾರ್ವಭೌಮವಾಗಿದೆ ಎಂಬುದನ್ನು ಇತ್ತೀಚೆಗೆ ತಾನೇ ನೋಡಿದ್ದೇವೆ. ಪಠ್ಯಪುಸ್ತಕವೊಂದರಲ್ಲಿನ ಅಂಬೇಡ್ಕರ್ ಕುರಿತ ವ್ಯಂಗ್ಯಚಿತ್ರದ ಪ್ರಕರಣವನ್ನು ಈ ಸಂಸತ್ತು ನಿರ್ವಹಿಸಿದ ರೀತಿ ಆಘಾತಕಾರಿಯಾಗಿತ್ತೆಂದೇ ಹೇಳಬೇಕು. ಹೆಸರು ಕೇಳದ ತಮಿಳ್ನಾಡಿನ ದಲಿತ ಪಕ್ಷವೊಂದರ ಏಕೈಕ ಸದಸ್ಯರು ಇದ್ದಕ್ಕಿದ್ದಂತೆ ಎತ್ತರದ ಗಂಟಲಿನಲ್ಲಿ ಈ ಬಗ್ಗೆ ಅರಚಾಡತೊಡಗಿದ ಕ್ಷಣವೇ ರಾಷ್ಟ್ರಕ್ಕೇ

ಸಿಡಿಲು ಬಡಿದಂತೆ ಸಂಸತ್ತಿನ ಎಲ್ಲ ಕಾರ್ಯ ಕಲಾಪಗಳು ಸ್ಥಗಿತಗೊಂಡವು. ಆ ವ್ಯಂಗ್ಯಚಿತ್ರವನ್ನು ನೋಡದವರೂ, ನೋಡಿದರೂ ಅದು ಪಠ್ಯಪುಸ್ತಕದಲ್ಲಿ ಸೇರಿದ್ದರ ಶೈಕ್ಷಣಿಕ ಹಿನ್ನಲೆ ಗೊತ್ತಿಲ್ಲದವರೂ ಎಲ್ಲರೂ-ಯಾರೊಬ್ಬರ ಭಿನ್ನ ಧ್ವನಿಯೂ ಇಲ್ಲದೆ-ಈ ಪ್ರಕರಣದ ಸಾರಾಸಗಟು ಖಂಡನೆ ಆರಂಭವಾಯಿತು. ಆ ವ್ಯಂಗ್ಯ ಚಿತ್ರವನ್ನು ಪಠ್ಯಪುಸ್ತಕದಿಂದ ತೆಗೆಯುವ ಮತ್ತು ಇದಕ್ಕೆ ಕಾರಣರಾದವರ ವಿರುದ್ಧ ಪ್ರಕರಣ ದಾಖಲು ಮಾಡುವ ನಿರ್ಧಾರದೊಂದಿಗೆ ಸದನದ ದಿನದ ಕಾರ್ಯಕಲಾಪ ಮುಗಿಯಿತು! ಇದು ಈ ಸಂಸತ್ತಿನ ಸದಸ್ಯರ ಸಂಸದೀಯ ಪಟುತ್ವ, ಬುದ್ಧಿಮತ್ತೆ, ಬೌದ್ಧಿಕ ಧೈರ್ಯ ಮತ್ತು ಪ್ರಾಮಾಣಿಕತೆ, ಸಾಮಾನ್ಯ ಪರಿಜ್ಞಾನ. ಎಲ್ಲಕ್ಕಿಂತ ಹೆಚ್ಚಾಗಿ ಇದು ಇವರಲ್ಲಿನ ಶೈಕ್ಷಣಿಕ ವಿಷಯವೊಂದರ ಬಗ್ಗೆ ತೋರಬೇಕಾದ ವ್ಯವಧಾನ ಪ್ರಜ್ಞೆಯ ಪೂರ್ಣ ಕೊರತೆಗಳನ್ನು ಎತ್ತಿ ತೋರಿಸಿತಷ್ಟೆ. ಒಮ್ಮೆ ರಾಷ್ಟ್ರ ಯಾರನ್ನೇ ಆಗಲಿ, ಯಾವುದೇ ಸಂದರ್ಭದಲ್ಲಿ ಟೀಕಾತೀತ ಅಥವಾ ವಿಮರ್ಶಾತೀತ ಎಂದು ಒಪ್ಪಿಕೊಂಡಲ್ಲಿ ಮತ್ತು ಅದಕ್ಕಿಂತ ಹೆಚ್ಚಾಗಿ ಒಪ್ಪಿಕೊಳ್ಳಬೇಕೆಂಬ ಯಾರದೇ ಆಗ್ರಹ ಯಶಸ್ವಿಯಾದಲ್ಲಿ ಆ ರಾಷ್ಟ್ರದ ಬೌದ್ಧಿಕ ಪಯಣ ಸ್ಥಗಿತಗೊಂಡಂತೆಯೇ. ಇಂತಹುದೆಲ್ಲ ಅಂಬೇಡ್ಕರರಂತಹ ಮಹಾಮೇಧಾವಿ ಮತ್ತು ಪ್ರಜಾಪ್ರಭುತ್ವವಾದಿಯ ಹೆಸರಲ್ಲಿ ಆಗುತ್ತಿರುವುದಂತೂ ದೊಡ್ಡ ವಿಪರ್ಯಾಸ.

ಇಲ್ಲಿ ಖೇದಕರವೆನಿಸುವಂತೆ ಎದ್ದುಕಂಡ ಎರಡು ಅಂಶಗಳೆಂದರೆ: ಒಂದು, ರಾಷ್ಟ್ರದ ಶ್ರೇಷ್ಠ ವ್ಯಂಗ್ಯಚಿತ್ರ ಕಲಾವಿದರೊಬ್ಬರು ಬರೆದ ಆ ವ್ಯಂಗ್ಯ ಚಿತ್ರದ ಐತಿಹಾಸಿಕ ಹಿನ್ನೆಲೆ ಮತ್ತು ಅದು ಪಠ್ಯಕ್ರಮದಲ್ಲಿ ಅಳವಾಡಿಕೆಯಾದ ಶೈಕ್ಷಣಿಕ ಉದ್ದೇಶ ಮತ್ತು ಇದಕ್ಕೆ ಕಾರಣರಾದ ತಜ್ಞರ ತಾತ್ವಿಕ ಹಿನ್ನೆಲೆಗಳ ಬಗೆಗೆ ಗೊತ್ತಿದ್ದವರೂ, ಗೊತ್ತಿಲ್ಲದವರಂತೆ ಮೌನದಿಂದಿದ್ದುದು. ಎರಡು, ಪ್ರಕಾಶ್ ಅಂಬೇಡ್ಕರರಂತಹ ದಲಿತ ನಾಯಕರೂ ಈ ಹುಯ್ಲಿನಲ್ಲಿ ಸೇರಿಕೊಂಡದ್ದು ಮತ್ತು ಸಮಚಿತ್ತರೆಂದು ನಾವು ಭಾವಿಸಿದ್ದ-ಕರ್ನಾಟಕದವರೂ ಸೇರಿದಂತೆ-ನಮ್ಮ ದಲಿತ ಚಿಂತಕರು ಏನೂ ಆಗದಂತೆ (ಅಥವಾ ಮೌನ ಸಮ್ಮತಿ ಸೂಚಿಸುವಂತೆ?) ಬಾಯಿಬಿಡದೆ ಜಾಣ ಮೌನ ವಹಿಸಿದ್ದು. ಅಂಬೇಡ್ಕರ್ ಹೆಸರಿನಲ್ಲಿ ಕಟ್ಟಲಾಗುತ್ತಿರುವ 'ಶೋಷಣೆ ಮತ್ತು ಅನ್ಯಾಯ'ಗಳನ್ನಾಧರಿಸಿದ ರಾಜಕಾರಣ ಅಪಾಯದ ಅಂಚನ್ನು ಮುಟ್ಟುತ್ತಿರುವಂತಿದೆ. ಸೂಕ್ಷ್ಮ, ಸಂಕೀರ್ಣ ವಿಷಯಗಳು ಪೂರ್ಣವಾಗಿ ಬೀದಿ ಬದಿಯ ಕೂಗುಮಾರಿಗಳ ಕೈವಶವಾದಂತಿದೆ.

ಇದೇ ಸಂದರ್ಭದಲ್ಲಿ ಕರ್ನಾಟಕದ ಶ್ರೇಷ್ಠ ಚಿಂತಕರಲ್ಲೊಬ್ಬರೆಂದು ಗುರುತಿಸಲ್ಪಟ್ಟಿರುವ ದೇವನೂರ ಮಹಾದೇವ ಅವರು ಸಂಪಾದಿಸಿದ 'ಪ್ರಜಾವಾಣಿ'ಯ ಅಂಬೇಡ್ಕರ್ ಸಂಚಿಕೆಯ ಬಗ್ಗೆಯೂ ಪ್ರಸ್ತಾಪಿಸಬೇಕು. ಏಕೆಂದರೆ, ಇದು ಕಳೆದ ಕನಿಷ್ಠ ಮೂರು ದಶಕಗಳಲ್ಲಿನ ದಲಿತ ರಾಜಕಾರಣವನ್ನು ಸೂಕ್ಷ್ಮವಾಗಿ ಗಮನಿಸುವುದನ್ನು ನಿರಾಕರಿಸುತ್ತಾ ಆಶ್ಚರ್ಯ ಹುಟ್ಟಿಸುವಷ್ಟು ಜಡವಾಗಿದೆ. ಇಲ್ಲಿನ ಬಹುತೇಕ ಬರಹಗಳು-ಮಹಾದೇವರ

ಸಂಪಾದಕೀಯವೂ ಸೇರಿದಂತೆ–ಹೊರನೋಟಗಳಾಗಿ ಮಾತ್ರ ಪ್ರಸ್ತುತಗೊಂಡು ತಾರತಮ್ಯ, ಶೋಷಣೆ, ಅವಮಾನಗಳ ವಿರುದ್ಧ ಅದೇ ವಿಷಾದ, ನೋವು, ಪ್ರತಿಭಟನೆ, ಖಂಡನೆಯ ಧ್ವನಿಗಳಿಂದ ತುಂಬಿಕೊಂಡಿವೆ. ಇವರ ಪ್ರಕಾರ ದಿನಗಳೆದಂತೆ ದಲಿತರಿಗೆ ಸಂಬಂಧಿಸಿದಂತೆ ಶೋಷಣೆ, ಅವಮಾನ ಮತ್ತು ದೌರ್ಜನ್ಯಗಳು ಹೆಚ್ಚಿದ್ದರೆ, ಅದಕ್ಕೆ ಪೂರ್ಣವಾಗಿ ತಥಾಕಥಿತ ಸವರ್ಣೀಯರಷ್ಟೇ ಕಾರಣರೋ ಅಥವಾ ದಲಿತ ರಾಜಕಾರಣದಲ್ಲಿ ಕ್ರಮೇಣ ಉಂಟಾದ ವಕ್ರತೆಗಳೂ ಕಾರಣವೋ? ಇದರಲ್ಲಿ ದಲಿತ ನಾಯಕತ್ವದ ಬೌದ್ಧಿಕ ಮತ್ತು ಸಂಘಟನಾತ್ಮಕ ವೈಫಲ್ಯದ ಪ್ರಶ್ನೆಯೂ ಒಳಗೊಂಡಿದೆಯಲ್ಲವೇ? ಈ ಪ್ರಶ್ನೆಗಳನ್ನು ಕೇಳಿಕೊಳ್ಳದ ಯಾವುದೇ ದಲಿತ ಚಿಂತನೆ ಮತ್ತು ಆತ್ಮಸಾಕ್ಷಿಯ ಧ್ವನಿಗೆ ಕಿವಿಗೊಟ್ಟು ತನ್ನ ಜನಪ್ರಿಯತೆ ಅಥವಾ ಸಾರ್ವಜನಿಕ ಬಿಂಬದ ವಿಶ್ವಾಸಾರ್ಹತೆಯನ್ನು ಪಣಕ್ಕೊಡ್ಡಬಲ್ಲ ನಾಯಕನನ್ನು ರೂಪಿಸಿಕೊಳ್ಳಲಾಗದ ಯಾವುದೇ ದಲಿತ ರಾಜಕಾರಣ ಒಟ್ಟು ಸಮಾಜವನ್ನು ಇನ್ನಷ್ಟು ವಿಕ್ಷಿಪ್ತ ಅಲೋಚನೆಗಳಿಗೆ ದೂಡಬಲ್ಲುದಷ್ಟೆ. ನಮ್ಮ ದಲಿತ ಚಿಂತಕರು ಮತ್ತು ನಾಯಕರು ಯೋಚಿಸಬೇಕು.

ಫ್ರಾನ್ಸ್‌ಗೆ ಸಮಾಜವಾದಿ ಅಧ್ಯಕ್ಷ

ಇದೆಲ್ಲದರ ಮಧ್ಯೆ ಒಂದು ಆಶ್ಚರ್ಯದ ಮತ್ತು ಸಂತೋಷದ ಸುದ್ದಿ: ಜಗತ್ತಿನ ಶ್ರೀಮಂತ ದೇಶಗಳಲ್ಲೊಂದಾದ ಫ್ರಾನ್ಸ್ ಸಮಾಜವಾದಿ ಅಧ್ಯಕ್ಷರನ್ನು ಆಯ್ಕೆ ಮಾಡಿದೆ! ಮೂರು ಅವಧಿಗಳ ಕಾಲ ಆಧಿಕಾರದಲ್ಲಿದ್ದು, ಜಾಗತೀಕರಣದ ಅಲೆ ಆರಂಭವಾದಾಗ ನಿರ್ಗಮಿಸಿದ ರಾಜಕೀಯ ಮುತ್ಸದ್ದಿ ಎನಿಸಿದ್ದ ಮಿತ್ತೆರಾಂವ್ ಅವರ ನಂತರ ಎರಡು ಅವಧಿಗಳ ಸಂಪ್ರದಾಯವಾದಿ ನಾಯಕರ ಆಳ್ವಿಕೆಯನ್ನು ಕಂಡಿದ್ದ ಫ್ರಾನ್ಸ್, ಜಾಗತೀಕರಣದ ಬಲೆಯಿಂದ ಬಿಡುಗಡೆ ಬಯಸಿದಂತೆ ಮತ್ತೆ ಈಗ ಸಮಾಜವಾದಿ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಂಡಿದೆ. ಹೊಸದಾಗಿ ಆಯ್ಕೆಯಾಗಿರುವ ಹಾಲೆನ್ ಹೊಸ ಕಾಲದ ಸವಾಲುಗಳಿಗೆ ಸ್ಪಂದಿಸಬಲ್ಲ ಹೊಸ ಸಮಾಜವಾದವನ್ನೇನಾದರೂ ರೂಪಿಸಿ ನೀಡುವರೋ ಕಾದು ನೋಡಬೇಕು.

<u>ಸಮಕಾಲೀನ</u>

ಬೇಸಾಯ : ನೀ ಸಾಯ... ನಾ ಸಾಯ...

ಈ ಮೇಲಿನ ಮಾತನ್ನು ನಾನು ಐವತ್ತು ವರ್ಷಗಳ ಹಿಂದೆ ನನ್ನ ಬಾಲ್ಯದಲ್ಲಿ 'ಹಸಿರು ಕ್ರಾಂತಿ' ಆರಂಭವಾದ ದಿನಗಳಿಂದಲೂ ಕೇಳುತ್ತಿದ್ದೇನೆ. 'ಹಸಿರು ಕ್ರಾಂತಿ' ಬಂದು ಹೋದ ಮೇಲೂ ಕೇಳುತ್ತಲೇ ಬಂದಿದ್ದೇನೆ. ಮತ್ತೊಂದು 'ಹಸಿರು ಕ್ರಾಂತಿ'ಯ

ಮಾತುಗಳನ್ನಾಡುತ್ತಿರುವ ಈ ದಿನಗಳಲ್ಲೂ ಕೇಳುತ್ತಿದ್ದೇನೆ. ಆದರೆ ಆಘಾತಕಾರಿ ವ್ಯತ್ಯಾಸವೆಂದರೆ, ಆಗ 'ಸಾಯ!' ಎಂಬ ಶಬ್ದದ ಒತ್ತಿನ ಹಿಂದೆ ತಿಳಿಹಾಸ್ಯವಿರುತ್ತಿತ್ತು ; ಹೆಚ್ಚೆಂದರೆ ಬೆವರಿನ ವಾಸನೆ, ಆಯಾಸದ ನಿಟ್ಟುಸಿರಿರುತ್ತಿತ್ತು. ಹತಾಶೆಯ ಸುಳಿವು ಎಳ್ಳಷ್ಟೂ ಇರುತ್ತಿರಲಿಲ್ಲ. ಆದರೀಗ ಆ ಸರಳ ವ್ಯಂಗ್ಯದ ಮಾತು ಕಟು ವಾಸ್ತವವಾಗಿ ಹೋಗಿ, ರೈತರು ಇಂದು ನಿಜವಾಗಿ ಸಾಯತೊಡಗಿದ್ದಾರೆ. ಹೀಗೆ ಸಾಯತೊಡಗಿ ೨೦ ವರ್ಷಗಳೇ ಆಗಿವೆ. ಈ ಸಾವಿನ ಸಂಖ್ಯೆ ರಾಷ್ಟ್ರದಲ್ಲಿ ಈಗ ಎರಡು ಲಕ್ಷವನ್ನು ಮೀರಿದೆ. ಅಂದರೆ ರಾಷ್ಟ್ರದ ಸರಾಸರಿ ಹನ್ನೆರಡು ತಾಸಿಗೊಂದು ರೈತನ ಆತ್ಮಹತ್ಯೆ! ಇದು ವ್ಯಾಪಕವಾಗಿರುವುದು ಕೃಷಿಯಲ್ಲಿ ತುಲನಾತ್ಮಕವಾಗಿ ಆಧುನಿಕತೆಯನ್ನು ಸಾಧಿಸಿದ ರಾಜ್ಯಗಳಲ್ಲೇ. ಉದಾಹರಣೆಗೆ ಪಂಜಾಬ್, ಮಹಾರಾಷ್ಟ್ರ, ಆಂಧ್ರ, ಕರ್ನಾಟಕ, ಕೇರಳ ಮತ್ತು ತಮಿಳ್ನಾಡುಗಳಲ್ಲಿ. ಇಂತಹ ದೊಡ್ಡ ದುರಂತ ಸಂಭವಿಸಿದ್ದರೂ, ಇದನ್ನು ಒಂದು ರಾಷ್ಟ್ರೀಯ ಪಿಡುಗೆಂದು ಗುರುತಿಸಿ ಅದರ ಪರಿಹಾರಕ್ಕೆಂದು ಒಂದು ಸಮಗ್ರ ಕಾರ್ಯಕ್ರಮ–ನೀತಿಯನ್ನು ರೂಪಿಸದ ಸರ್ಕಾರವೇಕೆ ಒಂದಿಷ್ಟು ಸಾಲ ಪರಿಹಾರ, ನಗದು ಪರಿಹಾರ, ರಿಯಾಯ್ತಿ ದರದ ಬೀಜ, ಗೊಬ್ಬರಗಳ ಪೂರೈಕೆ ಯೋಜನೆಗಳನ್ನು ಪ್ರಕಟಿಸಿ ಕೈತೊಳೆದುಕೊಳ್ಳಲು ಯತ್ನಿಸುತ್ತಿದೆ?

ಇದಕ್ಕೊಂದು ಕಾರಣವಿದೆ. ರೈತರ ಆತ್ಮಹತ್ಯೆ ರಾಷ್ಟ್ರದ ಒಂದು ತಾತ್ವಿಕ ಸಂದಿಗ್ಧತೆಯನ್ನು ಪ್ರತಿನಿಧಿಸುತ್ತಿದೆ. ರೈತರ ಆತ್ಮಹತ್ಯೆ ಆಕಸ್ಮಿಕವಾಗಿಯೋ, ಸಹಜ ಪರಿಣಾಮವಾಗಿಯೋ ಆರಂಭವಾದದ್ದು, ದೇಶ ತನ್ನ ಅಭಿವೃದ್ಧಿಯ ಕಲ್ಪನೆ ಮತ್ತು ದಿಕ್ಕನ್ನು ನಿರ್ಣಾಯಕವಾಗಿ ಬದಲಿಸಿಕೊಳ್ಳತೊಡಗಿದ ಕಳೆದ ತೊಂಭತ್ತರ ದಶಕದ ಉತ್ತರಾರ್ಧದಲ್ಲಿ. ಅದು ಶಿಖರ ಸ್ಥಿತಿ ಮುಟ್ಟಿದ್ದು, ಈ ದಿಕ್ಕು ಬದಲಾವಣೆ ಆಯ್ದ ಕೆಲವು ವರ್ಗಗಳಿಗೆ ಶಿಖರ ಸಮೃದ್ಧಿ ತಂದುಕೊಟ್ಟು ಜಗತ್ತಿನ ಅತಿ ಶ್ರೀಮಂತರ ಸಂಖ್ಯೆಯ ಪಟ್ಟಿಯಲ್ಲಿ ದೇಶ ಅಗ್ರ ಸ್ಥಾನಕ್ಕೇರಲು ಸಾಧ್ಯವಾದ ಕಳೆದ ದಶಕದ ಉತ್ತರಾರ್ಧದಲ್ಲಿ! ಇದು ಆಕಸ್ಮಿಕವೇನಲ್ಲ ಎಂದು ನಂತರ ನಡೆದ ಹಲವು ಅಧಿಕೃತ ಮತ್ತು ಖಾಸಗಿ ಸಮೀಕ್ಷೆಗಳು ಸಾಬೀತುಪಡಿಸಿವೆ. ಪ್ರಭುತ್ವವು ಗ್ರಾಮ ಸಮಾಜವನ್ನು ರಿಪೇರಿ ಮಾಡಲಾಗದ ವಲಯವೆಂದು ತೀರ್ಮಾನಿಸಿ, ಇಡೀ ರಾಷ್ಟ್ರವನ್ನು ಪೂರ್ಣ ನಗರ ಸಮಾಜವನ್ನಾಗಿ ಮಾಡುವುದೇ ಇದಕ್ಕೊಂದು ಪರಿಹಾರವೆಂದು ಭಾವಿಸಿ ಕೈಗೊಂಡ ನಿರ್ಣಾಯಕ ನೀತಿ ನಿರ್ಧಾರಗಳೇ, ಅರ್ಥಾತ್ ಮುಕ್ತ ಮಾರುಕಟ್ಟೆ ಆರ್ಥಿಕತೆಯ ಅಂಗೀಕಾರವೇ, ಅದರ ಭಾಗವಾಗಿ ಮಾಡಿಕೊಂಡ ಜಾಗತಿಕ ಒಪ್ಪಂದಗಳೇ ಇದಕ್ಕೆ ಕಾರಣವೆಂದು ಅವು ಹೇಳುತ್ತಿವೆ. ಆದರೆ ಈ ನೀತಿ–ನಿರ್ಧಾರಗಳ ಜಾರಿಯ ಆರಂಭಿಕ ವರ್ಷಗಳಲ್ಲಿ ಕೆಲವು ವರ್ಗಗಳು ಪಡೆದ ಅತಿ ಸಮೃದ್ಧಿಯ ವೇಗ, ಮಾರ್ಗ, ಪ್ರಮಾಣ ಮತ್ತು ಇವೆಲ್ಲ ಸೇರಿ ತೆರೆದ ಸುಖ ವೈವಿಧ್ಯವು ಇಡೀ ರಾಷ್ಟ್ರಕ್ಕೆ ಮತ್ತೇರಿಸಿಬಿಟ್ಟು ಅದನ್ನು ಹಿಂದೆಂದೂ ಇಲ್ಲದಷ್ಟು ಆಳವಾಗಿ ಒಡೆದಿಟ್ಟುಬಿಟ್ಟಿದೆ. ಇದು ರಾಷ್ಟ್ರದ ಇಂದಿನ ನಿಜವಾದ ದುರಂತ.

ಹಾಗಾಗಿಯೇ ನಮ್ಮ ಆಳುವವರೂ ಸೇರಿದಂತೆ ರೈತರ ಆತ್ಮಹತ್ಯೆ ಯಾರ ಎದೆಯನ್ನೂ ಒಡೆಯದೇ ಹೋಗಿದೆ... ಅಷ್ಟೇ ಅಲ್ಲ, ಅದು ಈ ರಾಷ್ಟ್ರದ ಅತ್ಯಂತ ಪ್ರಾಚೀನ ಕಾಯಕ ಸಂಸ್ಕೃತಿಯೊಂದು ಮತ್ತು ಅದರ ಹಿಂದಿನ ಒಂದು ಪಾರಂಪರಿಕ ವಿವೇಕ ಏನು ಹೇಳುತ್ತಿದೆ ಎಂಬುದನ್ನು ಕೇಳಲೂ ಆಗದಷ್ಟು ಸುಖ ಮತ್ತು ಸುಖ ನಿರೀಕ್ಷೆಯಲ್ಲಿ ಮೈಮರೆತಿದೆ. ಆ ಮೈಮರೆವಿನಲ್ಲಿ ಸಹಜವಾಗಿಯೇ ಎರಡಂಕಿ ಪ್ರಗತಿಯ ಕಾಲ ಮುಗಿದು ಹೋಗಿದೆ, ರಾಷ್ಟ್ರಕ್ಕೆ ಮತ್ತೇರಿಸಿದ ಹೊಸ ಅಭಿವೃದ್ಧಿಯ ಅಶಾಂತಿಯ ಪರ್ವ ಆರಂಭವಾಗುತ್ತಲಿದೆ ಎಂಬ ಪರಿವೆಯೇ ಇಲ್ಲದೇ ಹೋಗಿದೆ. ಹಾಗಾಗಿಯೇ ಅದಕ್ಕೆ ಆಹಾರ ಸ್ವಾವಲಂಬನೆಯ ಹೆಸರಿನಲ್ಲಿ ಆರಂಭವಾದ 'ಹಸಿರು ಕ್ರಾಂತಿ'ಯೇ ಇಂದು ನಮ್ಮನ್ನು ಆಹಾರ ಭದ್ರತೆ ಸಂಬಂಧಿತವಾದ ಆತಂಕಕ್ಕೀಡುಮಾಡಿದೆ ಎಂಬುದು ಅರ್ಥವಾಗದೇ ಹೋಗಿದೆ. ಹಸಿರು ಕ್ರಾಂತಿಯ ದೀರ್ಘಕಾಲಿಕ ಮತ್ತು ಸಾರ್ವತ್ರಿಕ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳುವ ಮುನ್ನವೇ, ಅದು ಬಿತ್ತಿ ಹೋದ ಲೋಕದೃಷ್ಟಿಯ ಮುಂದುವರಿಕೆಯಾಗಿ ಅವಸರದಲ್ಲಿ ಅಂಗೀಕರಿಸಿದ ಜಾಗತೀಕರಣ ನೀತಿಯೇ ಇದಕ್ಕೆಲ್ಲ ಕಾರಣವೆಂದು ನಂಬಲೂ ಅದಕ್ಕೆ ಅಸಾಧ್ಯವಾಗಿದೆ. ಭೂಪರಿಮಿತಿ, ಭೂ ಪರಭಾರೆ ಮತ್ತು ಭೂಸ್ವಾಧೀನ ಕಾಯಿದೆಗಳಲ್ಲಿನ ಮೂಲಭೂತ ಬದಲಾವಣೆಗಳು, ನೆಲ–ನದಿ–ಬೆಟ್ಟ–ಕಣಿವೆ–ಕೆರೆ–ಕಟ್ಟೆ–ತೋಪುಗಳ ನಾಶ ಇವೆಲ್ಲ ಈ ಲೋಕದೃಷ್ಟಿಯ ಒಂದು ಸರಣಿ ಪರಿಣಾಮ ಎಂಬ ಸಂಯೋಜಿತ ಅರಿವೇ ಕಾಣೆಯಾಗಿದೆ. ಇನ್ನು ಇದೆಲ್ಲದರ ಹಿಂದಿನ ಜಾಗತಿಕ (ಮಾರುಕಟ್ಟೆ) ರಾಜಕಾರಣವಂತೂ ಅದರ ಗ್ರಹಿಕೆಯಿಂದ ದೂರವೇ ಉಳಿಯಿತು. ನಮ್ಮ ಎಲ್ಲ ರೈತ ಸಂಘಟನೆಗಳ ವಿವಿಧ ಅವತಾರಗಳಿಗೂ, ಅವುಗಳ ಅಸ್ಥಿರತೆಗಳಿಗೂ ಇದೇ ಕಾರಣ.

ಇದೆಲ್ಲದರ ಒಟ್ಟು ಪರಿಣಾಮವಾಗಿ ಸಂಭವಿಸುತ್ತಿರುವ ರೈತರ ಸರಣಿ ಆತ್ಮಹತ್ಯೆ ರಾಷ್ಟ್ರ ಸಾಗಿರುವ ದಾರಿ ಮತ್ತು ದಿಕ್ಕು ಸರಿಯಿಲ್ಲವೆಂದೂ, ಒಳಗೆ ಏನೋ ಕೊಳೆಯತೊಡಗಿದೆ ಎಂದೂ ಕೂಗಿ ಹೇಳುತ್ತಿದೆ; ಹೊಸ ಅಭಿವೃದ್ಧಿ ನೀತಿಗೆ ಧಿಕ್ಕಾರ ಹೇಳುತ್ತಿದೆ. ಆದರೆ ಅದು ಕೊಲೆ, ಸುಲಿಗೆ, ದರೋಡೆ, ವ್ಯಭಿಚಾರ, ಭ್ರಷ್ಟಾಚಾರಗಳ ಸುದ್ದಿಗಳ ಜೊತೆಗೇ ಶಿಕ್ಷಣ, ಧರ್ಮ, ಸಂಸ್ಕೃತಿ, ಕ್ರೀಡೆ, ರಾಜಕಾರಣ ಎಲ್ಲವನ್ನೂ ರುಚಿಕಟ್ಟಾದ ಮಸಾಲೆ ಮನರಂಜನೆಯ ಸರಕಾಗಿ ಮಾಡಿ ೨೪ ತಾಸೂ ೧೨೪ ವಾಹಿನಿಗಳಲ್ಲಿ ಬಡಿಸಲಾಗುತ್ತಿರುವ ಹಂದಿಯೂಟವನ್ನು ನಿಶ್ಚಿಂತೆಯಿಂದ ಉಂಡು ಮಲಗುತ್ತಿರುವ ನಮಗೆ ಕೇಳದೇ ಹೋಗಿದೆ!

ಆದರೆ ಕೇಳುವ ಕಾಲ ಹತ್ತಿರ ಬರುತ್ತಿರುವಂತಿದೆ. ಎರಡಂಕಿ ಪ್ರಗತಿ ದರದ ಕಾಲ ಮುಗಿದಂತಿದೆ. ಅವಪ್ರಗತಿಯ ಮೊದಲ ಸೂಚನೆಗಳು ಕಾಣತೊಡಗಿವೆ. ರೂಪಾಯಿಯ ಬೆಲೆ ದಾರುಣ ಗತಿಯಲ್ಲಿ ಕುಸಿಯುತ್ತಿದ್ದು, ಅರವತ್ತರ ದಶಕದ ಕುಸಿತ ಸೃಷ್ಟಿಸಿದ್ದ ಬಿಕ್ಕಟ್ಟನ್ನೂ ಮೀರಿದ ಆರ್ಥಿಕ ಬಿಕ್ಕಟ್ಟಿನ ಆತಂಕ ಶುರುವಾಗಿದೆ. ರಾಷ್ಟ್ರ ಜಾಗತೀಕರಣ

ನೀತಿಯನ್ನು ಅಂಗೀಕರಿಸಲು ಯಾವ ಬಿಕ್ಕಟ್ಟು ಕಾರಣವಾಯಿತೆಂದು ಹೇಳಲಾಗುತ್ತದೆಯೋ, ಈಗ ಆ ತೊಂಭತ್ತರ ದಶಕದ–ದೇಶದ ತನ್ನ ಚಿನ್ನವನ್ನು ಒತ್ತೆಯಿಟ್ಟು ಉಳಿದುಕೊಳ್ಳುವಂಥ–ಬಿಕ್ಕಟ್ಟಿನ ಮಾತುಗಳನ್ನಾಡಲಾಗುತ್ತಿದೆ.

ಹೌದು, ಗೊಂದಲ ಬೇಡ. ಇದು ಜಾಗತೀಕರಣ ನೀತಿಯ ಬಿಕ್ಕಟ್ಟೇ ಹೌದು. ಏಕೆಂದರೆ, ನಮ್ಮದು ಮೂರು ವರ್ಷಗಳ ಹಿಂದಿನ ಅಮೆರಿಕಾದ ಆರ್ಥಿಕ ಹಿಂಜರಿತದಿಂದ ಪ್ರಭಾವಿತವಾಗದಷ್ಟು ಸುಭದ್ರ ಆರ್ಥಿಕತೆಯೆಂದು ಹೇಳಿಕೊಳ್ಳುತ್ತಿದ್ದ ನಮ್ಮ ಆರ್ಥಿಕ ಆಡಳಿತಗಾರರು ಈಗ ಇಂದಿನ ಬಿಕ್ಕಟ್ಟಿಗೆ ಗ್ರೀಸ್‌ನ ಆರ್ಥಿಕ ಕುಸಿತ ಎಂದು ಹೇಳತೊಡಗಿದ್ದಾರೆ! ಇದು ತಮಾಷೆಯಾಗಿ ಕಂಡರೂ, ಅದರ ಪರಿಣಾಮ ಮಾತ್ರ ಭಯಾನಕವಾಗಿರುವಂತಿದೆ. ಏಕೆಂದರೆ, ಈಗ ರಾಷ್ಟ್ರದಲ್ಲಿ ಪ್ರತಿ ೨೭ ಜನ ರೈತರಿಗೆ ಪ್ರತಿಯಾಗಿ ೧೭ ಜನ ರೈತೇತರರೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂಬ ಅಂಕಿ–ಅಂಶ ನಮ್ಮ ಮುಂದಿದೆ. ಹಾಗಾಗಿ ಈಗ ಒಂದು ಸುತ್ತು ಮುಗಿಸಿ ಹೊರಟಲ್ಲಿಗೇ ಬಂದು ಮುಟ್ಟಿರುವ ಈ ಹೊಸ ಆಭಿವೃದ್ಧಿಯ ಆರ್ಥಿಕತೆ ಆತ್ಮಹತ್ಯೆಯ ಆರ್ಥಿಕತೆಯೇ ಆಗಿದೆ ಎಂದು ಈಗಲಾದರೂ ನಮಗೆ ಅರಿವಾಗಬೇಕಿದೆ.

ಈ ಒಂದು ವಿಶಾಲ ಭಿತ್ತಿಯ ಹಿನ್ನೆಲೆಯಲ್ಲಿ ಇಂದಿನ ಕೃಷಿ ಬಿಕ್ಕಟ್ಟನ್ನು ವಿವಿಧ ದೃಷ್ಟಿಕೋನಗಳಿಂದ ನೋಡುವ ಮತ್ತು ಬದುಕನ್ನು ಕುರಿತ ಪರ್ಯಾಯ ದೃಷ್ಟಿಕೋನವೊಂದರ ಹೊಳಹು ನೀಡುವ ಸಣ್ಣ ಪ್ರಯತ್ನವೊಂದನ್ನು ಈ ಸಂಚಿಕೆಯಲ್ಲಿ ಮಾಡಲಾಗಿದೆ.–**ಸಂ.**

ಜುಲೈ, ೨೦೧೨

ಪ್ರಗತಿಯೆಂಬ ಹುಚ್ಚು ಓಟದ ಸ್ಪರ್ಧೆ!

ಪ್ರಿಯ ಓದುಗರೇ,

ನಮ್ಮ ಪ್ರಧಾನಿ ಮನಮೋಹನ ಸಿಂಗ್ ಅವರು ಅಂತೂ 'ಸ್ವದೇಶ'ಕ್ಕೆ ವಾಪಸ್ಸಾಗಿದ್ದಾರೆ, ಅವರು ಜಿ-೨೦ ಮತ್ತು ರಯೋ +೨೦ ಎಂಬ ಜಾಗತಿಕ ಯಜಮಾನಿಕೆಯ ಸಮ್ಮೇಳನಗಳಿಂದ ಭಾರತಕ್ಕೆ ವಾಪಸ್ಸಾಗಿದ್ದಾರೆ ಎಂಬರ್ಥದಲ್ಲಲ್ಲ! ಅವರು ಈ ಪ್ರವಾಸದಿಂದ ವಾಪಸು ಬರುವಾಗ ಇಂದಿನ ದೇಶದ ಆರ್ಥಿಕ ಬಿಕ್ಕಟ್ಟಿಗೆ 'ಸ್ವದೇಶಿ' ಪರಿಹಾರವನ್ನು ಕಂಡುಕೊಳ್ಳಲಾಗುವುದು ಎಂದು ಹೇಳಿದ್ದಾರೆ ಎಂಬರ್ಥದಲ್ಲಿ...

ಏಕೆಂದರೆ, ಆರಂಭದ ವರ್ಷಗಳಲ್ಲಿ ಎರಡಂಕಿ ಮುಟ್ಟಿ ಹಲವರಲ್ಲಿ ರೋಮಾಂಚನ ಮೂಡಿಸಿದ ಇವರ ಹೊಸ ಆರ್ಥಿಕತೆಯ ಬೆಳವಣಿಗೆಯ ದರ ಈಗ ಶೇ. ೬ಕ್ಕಿಂತ ಕಡಿಮೆ ಮಟ್ಟ ಮುಟ್ಟಿದೆ. ಇವರ ಆರ್ಥಿಕ ನೀತಿಯ ಮೂಲಾಧಾರವಾದ ಕೈಗಾರಿಕೀಕರಣದ ಪ್ರಗತಿ ದರ ಈಗ ಶೇ.೧ಕ್ಕಿಂತಲೂ ಕಡಿಮೆಯಾಗಿದೆ. ಆರಂಭದ ವರ್ಷಗಳಲ್ಲಿ ಪ್ರಗತಿ ದರದ ದಿಢೀರ್ ಏರಿಕೆಗೆ ಕಾರಣವಾಗಿದ್ದ ನಮ್ಮ ದೇಶದ ನೈಸರ್ಗಿಕ ಮತ್ತು ಬೌದ್ಧಿಕ ಸಂಪತ್ತನ್ನು ಎಗ್ಗಿಲ್ಲದೆ ದೋಚಲು ಕಾರಣವಾದ ಗಣಿಗಾರಿಕೆ ಮತ್ತು ಸೇವಾ ಕ್ಷೇತ್ರಗಳ ಬೆಳವಣಿಗೆ ಇಂದು ತಳ ಮುಟ್ಟಿದೆ. ಇದೆಲ್ಲದರ ಒಟ್ಟಾರೆ ಪರಿಣಾಮವಾಗಿ ರೂಪಾಯಿ ದರ ವಿಶ್ವ ಮಾರುಕಟ್ಟೆಯಲ್ಲಿ ನೆಲ ಕಚ್ಚಿದೆ. ಹಣದುಬ್ಬರ ಎಷ್ಟು ಕಾಲವಾದರೂ ನಿಯಂತ್ರಣಕ್ಕೆ ಬಾರದೆ, ಇವರ ಮುಕ್ತ ಸ್ಪರ್ಧೆಯ ನೀತಿಯಿಂದಾಗಿ ಸಮಾಜದ ಅಂಚಿಗೆ ತಳ್ಳಲ್ಪಟ್ಟಿರುವ ಜನವರ್ಗಗಳ ಬದುಕು ಇಂದು ಅಯೋಮಯವಾಗಿದೆ. ಒಂದೇ ವ್ಯತ್ಯಾಸವೆಂದರೆ, ಈ ಜನವರ್ಗ ಈಗ ಭೌತಿಕವಾಗಿ ಕೂಡಾ ಬದುಕಿನ ಅಂಚುಗಳಿಗೆ ತಳ್ಳಲ್ಪಟ್ಟಿದ್ದು, ಅವರಿಗಾಗಿ ಮರುಗುವ ಜನ ಈಗ ಯಾರೂ ಇಲ್ಲವಾಗಿದ್ದಾರೆ. ನಮ್ಮ ಸಮಾಜ ಅಷ್ಟು ಸಂವೇದನಾಹೀನವಾಗಿದೆ. ಭಾವನಾತ್ಮಕವಾಗಿಯಷ್ಟೇ ಅಲ್ಲ, ಭೌತಿಕ ದೂರಗಳ ನೆಲೆಯಲ್ಲೂ ಒಡೆದುಹೋಗಿ, ಪರಿಸ್ಥಿತಿ ಒಂದು ರಾಷ್ಟ್ರೀಯ ಅನಾಹುತದೆಡೆಗೆ ಸಾಗುತ್ತಿರುವ ಸೂಚನೆಗಳು ಹಲವು ರೂಪಗಳಲ್ಲಿ ಕಾಣತೊಡಗಿವೆ.

ಇದನ್ನೆಲ್ಲ ಒಂದೇ ಸುಲಭ ಉತ್ತರದ ಮೂಲಕ ತಳ್ಳಿಹಾಕುವ ಪ್ರಯತ್ನಗಳೂ ನಡೆದಿವೆ. ಅದೆಂದರೆ, ಜಾಗತಿಕ ಆರ್ಥಿಕತೆ ಕೂಡಾ ಅಧೋಗತಿ ಮುಟ್ಟಿದೆ ಎಂಬುದು. ಆದರೆ ಆ ಉತ್ತರ ಮುಂದಿನ ಈ ಪ್ರಶ್ನೆಗೆ ಉತ್ತರಕೊಟ್ಟೇ ಮುಂದೆ ಸಾಗಬೇಕು: ಜಾಗತಿಕ ಆರ್ಥಿಕತೆಯೊಂದಿಗೆ ತಳಕು ಹಾಕಿಕೊಳ್ಳುವ ನಿರ್ಧಾರ ಯಾರು, ಹೇಗೆ, ಏಕೆ ಮಾಡಿದರು? ಇದಕ್ಕೆ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಅಗತ್ಯವಾಗಿದ್ದ ಜನಾದೇಶವಂತೂ ಇರಲಿಲ್ಲವಲ್ಲ? ಹೋಗಲಿ, ಈ ನಿಮ್ಮ ನೀತಿ ನಿರ್ಧಾರ ನಿಮ್ಮ ಟೀಕಾಕಾರರ ಬಾಯಿ ಮುಚ್ಚಿಸುವಂತಹ 'ಫಲ'ಗಳನ್ನು ಕೊಡುತ್ತಿದ್ದಾಗ ಅದನ್ನು ಅದರ ಆಧಾರದ ಮೇಲೆ ಸಮರ್ಥಿಸಿಕೊಂಡಿದ್ದ ನೀವು ಈಗೇಕೆ ಅದರ ವೈಫಲ್ಯಗಳ ಹಿನ್ನೆಲೆಯಲ್ಲಿ ಆ ನೀತಿಯ ಸಮಗ್ರ ವಿಮರ್ಶೆ-ವಿಶ್ಲೇಷಣೆಗೆ ಮುಂದಾಗುತ್ತಿಲ್ಲ? ಬದಲಿಗೆ, ಈ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಿವಾರಣೆಗೆ ನಿಮ್ಮಿಂದ ೫೬ ಸಾವಿರ ಕೋಟಿ ರೂಪಾಯಿಗಳ ನೆರವಿನ ಘೋಷಣೆ! ಬಡವನ ಬಡಿವಾರವೆಂದರೆ ಇದು!

ಈ ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಸಿಕ್ಕಿರುವ (ಸಿಗದ ಹಲವು ದೇಶಗಳೂ ಇವೆ ಎಂಬುದನ್ನೂ ಗಮನಿಸಬೇಕು.) ದೇಶಗಳು ನಮ್ಮ ಪ್ರಧಾನಿ ಈಗ ಮನಗಾಣುತ್ತಿರುವಂತೆ ತೋರುತ್ತಿರುವ-ತಂತಮ್ಮ ದೇಶಗಳ ಇತಿಹಾಸ, ಸಂಸ್ಕೃತಿ, ಭೌಗೋಳಿಕತೆ ಮತ್ತು ಸಂಪನ್ಮೂಲಗಳ ವೈವಿಧ್ಯಕ್ಕೆ ತಕ್ಕಂತೆ-ದೇಸೀ ಪರಿಹಾರಗಳನ್ನು ಕಂಡುಕೊಳ್ಳುವಂತಾದರೆ ಸಂತೋಷವೇ. ಅದು ಆತ್ಯಂತಿಕವಾಗಿ 'ಸಮಾನತೆ-ಸಮತೆ'ಯ ಅರ್ಥಶಾಸ್ತ್ರವೇ ಆಗಿರುತ್ತದೆ. ಲೌಕಿಕ ಬದುಕಿಗೊಂದು ಮಿತಿ ಇದೆ ಎಂಬ ಅರಿವನ್ನು ಆಧರಿಸಿದ ಅರ್ಥಶಾಸ್ತ್ರವದು. ಜಗತ್ತು ಆಧುನಿಕತೆಯ ಹೆಸರಿನಲ್ಲಿ ಮಿತಿಯಿಲ್ಲದ ಸ್ವರ್ಗ ಸುಖದ ಕಲ್ಪನೆಯಲ್ಲಿ ಮುಳುಗಿದ್ದಾಗ ಇದರ ದುರಂತವನ್ನು ಮುನ್ನೋಡಬಲ್ಲವರಾಗಿದ್ದ ಗಾಂಧಿ ಸರಕು ಅರ್ಥಶಾಸ್ತ್ರಕ್ಕೆ ಪ್ರತಿಯಾಗಿ ಪ್ರತಿಪಾದಿಸಿದ ಜನತೆಯ ಅರ್ಥಶಾಸ್ತ್ರವಿದು. ಆದರೆ ಆ ಪರಂಪರೆಗೇ ವಿರುದ್ಧವಾಗಿರುವ ಜಾಗತಿಕ 'ಸೂಪರ್ ಪವರ್' ರಾಜಕಾರಣದ ಭಾರತದ ಪ್ರತಿನಿಧಿಯಾಗಿ ಹೊರಹೊಮ್ಮಿರುವ ಮನಮೋಹನ ಸಿಂಗ್, ಈ ದೇಶದ ಜನತೆಯ ನೇರ ಪ್ರತಿನಿಧಿಯಾಗಿ, ಜನನಾಯಕರಾಗಿ ಬೆಳೆಯದೇ, ದೇಶದ ಇಡೀ ಭವಿಷ್ಯವನ್ನು ನಿರ್ಧರಿಸತೊಡಗಿದ್ದಾರೆ. ಇದೇ ಇಂದಿನ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ನಿಜವಾದ ದುರಂತ. ಹಾಗೆ ನೋಡಿದರೆ, ಈ ದೇಶಕ್ಕೆ ಈಗ ಜನ ನಾಯಕರೆಂಬುವವರೇ ಇಲ್ಲವಾಗಿದ್ದಾರೆ! ಹಾಗಾಗಿಯೇ ಭಾರತವೆಂಬುದು ಇಂದು ದೇಶವಾಗಿ ಕಾಣುತ್ತಿದೆಯೇ ಹೊರತು ರಾಷ್ಟ್ರವಾಗಿ ಅಲ್ಲ.

ಏಕೆಂದರೆ ರಾಷ್ಟ್ರ ಈಗ ತನಗೊಂದು ಆತ್ಮವಿಲ್ಲ ಎಂಬುದನ್ನು, ತನ್ನ ಆತ್ಮಸಾಕ್ಷಿಯನ್ನೇ ಕಳೆದುಕೊಳ್ಳುವ ಮೂಲಕ ಸಾಬೀತುಪಡಿಸಿದೆ. ಅದು ಜಾತಿ-ಮತ-ಅಧಿಕಾರ-ಸಂಪತ್ತು-ಸುಖಗಳ ತಣಿಯದ ಸ್ಪರ್ಧೆಗೆ ಸಿಕ್ಕು ಎಲ್ಲ ರೀತಿಯ-ಲೌಕಿಕ ಮತ್ತು ಪಾರಮಾರ್ಥಿಕ-ಪಾಪಗಳನ್ನು ಕ್ಷಮಾರ್ಹಗೊಳಿಸತೊಡಗಿದೆ. ದೇವರು-ಧರ್ಮಗಳನ್ನೂ, ಅವುಗಳ ಲೌಕಿಕ

ರೂಪವೆನಿಸಿದ 'ನ್ಯಾಯ'ವನ್ನೂ ಅವುಗಳ ಏಜೆಂಟರುಗಳ ಮೂಲಕ ಭ್ರಷ್ಟಗೊಳಿಸಿದ ಮೇಲೆ ಇನ್ನೇನು ಉಳಿಯಿತು? ನಮ್ಮ ಇತಿಹಾಸ-ಸಂಸ್ಕೃತಿಗಳ ಮತ್ತು ಅವು ನಮ್ಮ ವ್ಯಕ್ತಿತ್ವ ಸಂಪನ್ನತೆಗಾಗಿ ಕಟ್ಟಿಕೊಟ್ಟ ಧಾರಣಾ ಶಕ್ತಿ ಮತ್ತು 'ಶೀಲ'ಗಳ ನೆನಪಾದರೂ ಹೇಗಿರಲು ಸಾಧ್ಯ? ನೆನಪು ಈಗ ನಿಶಿದ್ಧ! ರಾಷ್ಟ್ರ ಪ್ರಗತಿಯ ಓಟದಲ್ಲಿ ನಿರತವಾಗಿದೆ! ಓಡು ಓಡು ಓಡು, ಎತ್ತ ಓಡುತ್ತಿದ್ದೇನೆ, ಏಕೆ ಓಡುತ್ತಿದ್ದೇನೆ ಎಂಬುದನ್ನು ಮರೆತು ಓಡು! ಮರೆಯದಿದ್ದರೆ ಓಟದಲ್ಲಿ ಜಯವಿಲ್ಲ, ಹುಷಾರ್! ಹೀಗೆ ಎಲ್ಲ ಮರೆತು ಓಡುವ ಕೆಟ್ಟ ವಿವಶತೆಯಲ್ಲಿ ನಾವು ನಮ್ಮನ್ನು ಮನುಷ್ಯರಾಗಿ, ಸಮಾಜವಾಗಿ, ರಾಷ್ಟ್ರವಾಗಿ ಕಟ್ಟಿದ ನಮ್ಮ ಬದುಕಿನ ಮೂಲ ಒರತೆಗಳು ಬತ್ತಿ ಹೋಗುತ್ತಿರುವುದನ್ನು ನಾವು ಗಮನಿಸದೇ ಹೋಗುತ್ತಿದ್ದೇವೆ.

ಹಾಗಾಗಿಯೇ, ನಮ್ಮ ಭಾಷೆ ನಮಗೆ ಇಂದು ಒಂದು ಭಾರವಾಗಿ ಕಾಣತೊಡಗಿದೆ. ಅದನ್ನು ಒಮ್ಮೆಗೇ ಎಸೆದು ಬಿಡಲು ಇನ್ನೂ ಅಲ್ಪಸ್ವಲ್ಪ ಉಳಿದಿರುವ ಸಂಕೋಚದಿಂದಾಗಿ ಕ್ರಮ ಕ್ರಮವಾಗಿ ನಿರ್ನಾಮ ಮಾಡತೊಡಗಿದ್ದೇವೆ. ಇದಕ್ಕೆ ಎಂತೆಂತಹ ವಿಕ್ಷಿಪ್ತ ತರ್ಕಗಳನ್ನು ಕಂಡುಕೊಳ್ಳುತ್ತಿದ್ದೇವೆ ಎಂದರೆ; ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ, ಮೊನ್ನೆ ವಿಶ್ವವಿದ್ಯಾಲಯದ ಮಾಜಿ ಕುಲಪತಿಯೊಬ್ಬರು ಇಂಗ್ಲಿಷ್ ಮಾಧ್ಯಮ ಶಾಲೆಗಳ ಅಗತ್ಯದ ಪರವಾಗಿ ಪತ್ರಿಕೆಯೊಂದರ ತಮ್ಮ ಲೇಖನದಲ್ಲಿ ವಾದಿಸುತ್ತಾ, ಮನುಷ್ಯ ಜನ್ಮದ ಉನ್ನತ ಗುರಿ ವಿಶ್ವಾತ್ಮರಾಗುವುದೆಂದೂ, ಹಾಗಾಗಿ ಸಹಜವಾಗಿಯೇ ಅದನ್ನು ವಿಶ್ವಭಾಷೆಯೆನಿಸಿದ ಇಂಗ್ಲಿಷ್‌ನಲ್ಲಿ ಶಿಕ್ಷಣ ಪಡೆದೇ ಸಾಧಿಸಬೇಕಾಗಿದೆಯೆಂದು ಅಪ್ಪಣೆ ಕೊಡಿಸಿದ್ದಾರೆ! ಇದು ಇಂಗ್ಲಿಷ್ ರೋಗ ಹುಟ್ಟಿಸಿರುವ ಅಪ್ಪಟ ಕೇಡಿತನವೋ, ಬುದ್ಧಿಮಾಂದ್ಯವೋ ತಿಳಿಯದಾಗಿದೆ!

ಸಮಕಾಲೀನ

ಪಠ್ಯಪುಸ್ತಕಗಳ ರಾಜಕೀಯೀಕರಣ

ಸಾಮಾಜಿಕವಾಗಿ ಬಹು ಸೀಮಿತವಾಗಿದ್ದ ನಮ್ಮ ಪಾರಂಪರಿಕ ಶಿಕ್ಷಣ ಪದ್ಧತಿ ಇಂಗ್ಲಿಷರ ಕಾಲದಲ್ಲಿ ಕ್ರಮೇಣ ಮುಕ್ತವಾಗಿ, ಸಾರ್ವಜನಿಕ ಶಿಕ್ಷಣ ಪದ್ಧತಿಯಾಗಿ ಮಾರ್ಪಾಡಾದಾಗಿನಿಂದ ಪಠ್ಯಪುಸ್ತಕಗಳ ಬಗ್ಗೆ ವಿವಾದ ಒಂದಲ್ಲ ಒಂದು ಸ್ತರದಲ್ಲಿ ನಡೆದೇ ಇದೆ. ಸಾರ್ವಜನಿಕ ಶಿಕ್ಷಣ ಪದ್ಧತಿಯ ಹಿಂದಿನ ಉದಾತ್ತ ಸಾಮಾಜಿಕ ಆಶಯಗಳು ಶಿಕ್ಷಣ ಕ್ಷೇತ್ರದ ಎಲ್ಲ ಸ್ತರಗಳಲ್ಲಿ ಜೀವಂತಾಗಿರುವವರೆಗೆ ಈ ವಿವಾದ ಸಾರ್ವಜನಿಕ ರೂಪ ತಾಳಿರಲಿಲ್ಲ. ಆದರೆ ಸ್ವಾತಂತ್ರ್ಯಾನಂತರ ಬಹುಕಾಲ ಜಾರಿಯಲ್ಲಿದ್ದ ಏಕಪಕ್ಷ ಆಡಳಿತ ಮತ್ತು ಅದರ ವಿಚಾರಧಾರೆಗೆ ತುಕ್ಕು ಹಿಡಿದ ಪರಿಣಾಮವಾಗಿಯೇನೋ, ಈ ವಿಚಾರಧಾರೆಗೆ ತದ್ವಿರುದ್ಧವಾದ ಮೌಲ್ಯಗಳಲ್ಲಿ ನಂಬಿಕೆಯಿಟ್ಟಿದ್ದ ಪಕ್ಷಗಳು ಜನಮನ್ನಣೆ

ಪಡೆಯುತ್ತಾ ಒಮ್ಮೆ ಕೇಂದ್ರದಲ್ಲಿ ಅಧಿಕಾರನ್ನೂ ಹಿಡಿಯುವಂತಾದಾಗ ಅನೇಕ ಇತರ ವಿಷಯಗಳ ಜೊತೆಗೆ ಪಠ್ಯಪುಸ್ತಕಗಳನ್ನು ಕುರಿತ ವಿವಾದವೂ ಸಾರ್ವಜನಿಕ ಚರ್ಚೆಯ ಭಾಗವಾಗತೊಡಗಿತು. ಇದೆಲ್ಲದರ ಪರಿಣಾಮವಾಗಿ ಸಾಮಾಜಿಕ ನ್ಯಾಯ ಆಂದೋಲನದ ಭಾಗವಾಗಿ 'ಅಸ್ಮಿತೆಯ ರಾಜಕಾರಣ'ಕ್ಕೆ ಮಾನ್ಯತೆ ಸಿಕ್ಕ ಮೇಲಂತೂ ಪಠ್ಯಪುಸ್ತಕಗಳ, ವಿಶೇಷವಾಗಿ ಇತಿಹಾಸ, ಸಮಾಜಶಾಸ್ತ್ರ ಮತ್ತು ರಾಜಕೀಯ ಶಾಸ್ತ್ರಗಳ ಪುಸ್ತಕಗಳ ಬಗ್ಗೆ ಪದೇ ಪದೇ ವಿವಾದಗಳು ತಲೆದೋರತೊಡಗಿದವು. ಉದಾಹರಣೆಗೆ, ನಮ್ಮದೇ ಮಹಾಚೈತ್ರ, ಧರ್ಮಕಾರಣ, ಗಾಂಧಿ ಬಂದ ಮತ್ತು ರಾಷ್ಟ್ರ ಮಟ್ಟದಲ್ಲಿ ರಾಮನುಜನ್‌ರ ಬಹು ರಾಮಯಾಣ ಮುಂತಾದ ಪುಸ್ತಕಗಳ ವಿವಾದ.

ಮುಖ್ಯವಾಗಿ ಕಳೆದ ತೊಂಭತ್ತರ ದಶಕದ ಮಧ್ಯಭಾಗದಲ್ಲಿ ಅಧಿಕಾರಕ್ಕೆ ಬಂದ ಬಲಪಂಥೀಯ ಎಂದು ಕರೆಯಬಹುದಾದ ಪಕ್ಷವೊಂದರ ನಾಯಕತ್ವ ಸರ್ಕಾರದ ಶಿಕ್ಷಣ ಮಂತ್ರಿ ಡಾ॥ ಮುರುಳೀ ಮನೋಹರ ಜೋಷಿಯವರು ತಮ್ಮ ಪಕ್ಷದ ರಾಜಕೀಯ ಬದ್ಧತೆಯ ಭಾಗವಾಗಿ ರಾಷ್ಟ್ರದ ಸಾಂಸ್ಕೃತಿಕ ಪುನರುತ್ಥಾನದ ಹೆಸರಿನಲ್ಲಿ ರಾಷ್ಟ್ರೀಯ ಪಠ್ಯಕ್ರಮದ 'ಶೀಲ'ವನ್ನೇ ಬದಲಾಯಿಸಹೊರಟು, ಎಲ್ಲ ಶಾಲಾ ಶಿಕ್ಷಣದ ಪಠ್ಯಪುಸ್ತಕಗಳನ್ನು ಕುರುಡಾಗಿ 'ಹಿಂದೂ'ಕರಿಸಲು ಯತ್ನಿಸಿ 'ಕೇಸರೀಕರಣ'ದ ರಾಜಕೀಯ ಆಪಾದನೆಗೆ ಒಳಗಾದರು. ಆಗಿನಿಂದ ಆರಂಭವಾದಂತೆ ಈ ವಿವಾದ ಇಂದು ಉಚಿತ-ಅನುಚಿತಗಳ ಎಲ್ಲೆ ಮೀರಿ ಎಲ್ಲರ ಬಾಯಿಗಳ ತಾಂಬೂಲವಾಗಿ ತನ್ನ ಕೇಂದ್ರವನ್ನೇ ಕಳೆದುಕೊಂಡಿದೆ. ರಾಷ್ಟ್ರದ ಶಿಕ್ಷಣ ನೀತಿಯ ಪ್ರಶ್ನೆ ಈಗ ಜಿಗುಪ್ಸೆಕರವಾದ ರಾಜಕೀಯ ರಾಡಿಯಲ್ಲಿ ಸಿಕ್ಕಿಕೊಂಡಿದೆ..

ಜೋಷಿಯವರ ಪಕ್ಷದ ನೇತೃತ್ವದ ಸರ್ಕಾರ ಅಧಿಕಾರ ಕಳೆದುಕೊಂಡಾದ ನಂತರ ಆಳಲು ಬಂದ ಉದಾರವಾದಿಯೆಂದು ಕರೆಯಲಾಗುವ ಸರ್ಕಾರ ಈ ರಾಡಿಯನ್ನು ತಿಳಿಗೊಳಿಸುವ ಕ್ರಮವಾಗಿ ೨೦೦೫ರಲ್ಲಿ ಹಲವು ಕ್ಷೇತ್ರಗಳ ಪರಿಣತರ ಮತ್ತು ಶಿಕ್ಷಣ ತಜ್ಞರ ನಿರ್ದೇಶನದಲ್ಲಿ ಸರ್ವಸಮ್ಮತವಾದ ಒಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ರೂಪಿಸಿತು. ಈ ಚೌಕಟ್ಟಿನಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಹಾಗೂ ತರಬೇತಿ ಮಂಡಳಿ(NCERT)ಯ ಉಸ್ತುವಾರಿಯಲ್ಲಿ ಶಾಲಾ ಪಠ್ಯಪುಸ್ತಕಗಳ ರಚನೆಯ ಪ್ರಕ್ರಿಯೆಗೆ ಚಾಲನೆ ನೀಡಿತು. ಈ ಪ್ರಕ್ರಿಯೆಯಲ್ಲಿ ವಿವಿಧ ಪಠ್ಯ ವಿಷಯಗಳಿಗೆ ಸಂಬಂಧಿಸಿದಂತೆ ರಾಷ್ಟ್ರಾದ್ಯಂತ ಇರುವ ನೂರಾರು ಮಂದಿ ಪರಿಣತರೊಂದಿಗೆ ಹಲವು ಸುತ್ತಿನ ಚರ್ಚೆಗಳನ್ನು ನಡೆಸಿ, ೨೦೦೬ರ ಹೊತ್ತಿಗೆ ಹೊಸ ಪಠ್ಯಪುಸ್ತಕಗಳ ಕರಡುಗಳನ್ನು ಸಿದ್ಧಪಡಿಸಿ ವಿವಿಧ ಸಾಮಾಜಿಕ ಮತ್ತು ಶೈಕ್ಷಣಿಕ ಹಿನ್ನೆಲೆಗಳುಳ್ಳ ಪರಿಣತರ ಪರಿಶೀಲನೆಗೆ ಒಳಪಡಿಸಿ, ನಂತರವಷ್ಟೇ ಬೋಧನೆಗೆ ಬಿಡುಗಡೆ ಮಾಡಲಾಯಿತು ಶಿಕ್ಷಣ ಕ್ಷೇತ್ರದ ಹೊಸ ಸಂಶೋಧನೆ ಮತ್ತು ಕಾಣ್ಕೆಗಳನ್ನು ಗಮನದಲ್ಲಿಟ್ಟುಕೊಂಡು, ಪಠ್ಯವು ಏಕಮುಖವಾಗಿರದೆ ವಿದ್ಯಾರ್ಥಿಗಳ ಗ್ರಹಿಕೆಯನ್ನು ಬಹುಮುಖವಾಗಿ, ವಿಮರ್ಶಾತ್ಮಕವಾಗಿ ಬೆಳೆಸುವ ಉದ್ದೇಶಗಳೊಂದಿಗೆ

ಈ ಪಠ್ಯಪುಸ್ತಕಗಳನ್ನು ಹೊಸ ರೀತಿಯ ಶೈಕ್ಷಣಿಕ ಸಾಮಗ್ರಿಗಳೊಂದಿಗೆ ಸಿದ್ಧಪಡಿಸಲಾಗಿದೆ ಎಂದು ಹೇಳಲಾಗಿದೆ.

ಅದರೆ ೨೦೦೬ರಿಂದ ಸುಗಮವಾಗಿ ಬೋಧಿಸಲ್ಪಡುತ್ತಿದ್ದ ಈ ಪಠ್ಯಪುಸ್ತಕಗಳು ಈಗ ೯ನೇ ತರಗತಿಯ ರಾಜಕೀಯಶಾಸ್ತ್ರ ಪುಸ್ತಕದಲ್ಲಿನ ಸಂವಿಧಾನ ಕುರಿತ ಅಧ್ಯಾಯದಲ್ಲಿ ಅಳವಡಿಸಲಾಗಿರುವ ಅಂಬೇಡ್ಕರ್ ಇರುವ ವ್ಯಂಗ್ಯಚಿತ್ರದ ಬಗ್ಗೆ ವಿವಾದವೆದ್ದು, ಬಿಕ್ಕಟ್ಟಿಗೆ ಸಿಕ್ಕಿವೆ. ಸದರಿ ವ್ಯಂಗ್ಯಚಿತ್ರದಲ್ಲಿ ಅಂಬೇಡ್ಕರ್‌ರನ್ನು ಚಿತ್ರಿಸಿರುವ ರೀತಿ ತಮ್ಮ ಈ ನಾಯಕನಿಗೆ ಅವಮಾನ ಮಾಡುವಂತಿದೆಯೆಂದು ತಮಿಳ್ನಾಡಿನಲ್ಲಿ ದಲಿತರ ಗುಂಪೊಂದು ಎಬ್ಬಿಸಿದ ಕೂಗು ಹೋದ ತಿಂಗಳು ಸಂಸತ್ತಿನಲ್ಲಿ ಬಿರುಗಾಳಿಯಾಗಿ ಮಾರ್ಪಟ್ಟದ್ದನ್ನು ಎಲ್ಲರೂ ಬಲ್ಲರು. ಒತ್ತಡಕ್ಕೆ ಸಿಕ್ಕಿದ ಸರ್ಕಾರ ಈ ವ್ಯಂಗ್ಯಚಿತ್ರ ಮಾತ್ರವಲ್ಲ ಇಡೀ ಪುಸ್ತಕವನ್ನೇ ಹಿಂತೆಗೆದುಕೊಳ್ಳುವ ಮತ್ತು ಎಲ್ಲ ಪುಸ್ತಕಗಳಲ್ಲಿನ ಸಾಧ್ಯ ವಿವಾದಾತ್ಮಕ ಸಾಮಗ್ರಿಯ ಪರಿಶೀಲನೆಗಾಗಿ ಶಿಕ್ಷಣ ತಜ್ಞ ಪ್ರೊ॥ ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ಒಂದು ಪುನರ್‌ಪರಿಶೀಲನಾ ಸಮಿತಿಯನ್ನು ನೇಮಿಸಿದೆ. ಇದರಿಂದ ನೊಂದ NCERTಯ ಪ್ರಧಾನ ಸಲಹಾಕಾರರು ಇದನ್ನು ಪ್ರತಿಭಟಿಸಿ ರಾಜೀನಾಮೆ ನೀಡಿದ್ದಾರೆ.

ಹಾಗೇ ಸರ್ಕಾರದ ನಿರ್ಧಾರವನ್ನು, ಶಿಕ್ಷಣ ಕೇತ್ರಕ್ಕೆ ಸಂಬಂಧಿಸಿದ ಅವಸರದ ನಿರ್ಧಾರವಾಗಿದ್ದು, ಇಂತಹ ರಾಜಕೀಯ ಒತ್ತಡಗಳಿಗೆ ಹೀಗೆ ಸುಲಭವಾಗಿ ಮಣಿದರೆ, ಶಿಕ್ಷಣದ ಉದ್ದೇಶ ಮತ್ತು ಘನತೆಗಳಿಗೇ ಕುಂದುಂಟಾಗಿ ನಮ್ಮ ಸಮಾಜ ಮತ್ತು ರಾಷ್ಟ್ರ ಹಲವು ದೀರ್ಘಕಾಲಿಕ ಬಿಕ್ಕಟ್ಟುಗಳಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ ಎಂದು ಶಿಕ್ಷಣ ತಜ್ಞರೂ ಸೇರಿದಂತೆ ಹಲವು ಕ್ಷೇತ್ರಗಳ ಪರಿಣತರು ಎಚ್ಚರಿಸುತ್ತಿದ್ದಾರೆ. ಆದರೆ ಇದಕ್ಕೆ ವಿರುದ್ಧವಾಗಿ, ಮುಖ್ಯವಾಗಿ ಕೆಲವು ದಲಿತ ಚಿಂತಕರು, ಲೇಖಕರು ಮತ್ತು ದಲಿತೇತರರಾದ ಅವರ ಬೆಂಬಲಿಗರು ಸಾಮಾಜಿಕ ನ್ಯಾಯದ ಸೂಕ್ಷ್ಮಗಳನ್ನು ಬಿಡಿಸಿಡುತ್ತಾ, ಈ ವ್ಯಂಗ್ಯಚಿತ್ರ ಶಿಕ್ಷಣ ಕ್ಷೇತ್ರದಲ್ಲಿನ ಜಾತಿ ಪೂರ್ವಾಗ್ರಹದ ಒಂದು ಸಂಕೇತ ಮಾತ್ರವಾಗಿದ್ದು, ಶಿಕ್ಷಣ ಕೇತ್ರವನ್ನು ಜಾತಿ ಪೂರ್ವಾಗ್ರಹಗಳಿಂದ ಮುಕ್ತವಾಗಿಸಲು ಈ ವಿವಾದ ಆರಂಭ ಬಿಂದುವಾಗಬೇಕೆಂದು ವಾದಿಸುತ್ತಿದ್ದಾರೆ. ಅದರೆ ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಇನ್ನೋರ್ವ ದಲಿತ ಚಿಂತಕ ಪ್ರೊ॥ ಗೋಪಾಲ್ ಗುರು ಅವರು 'ಇದು, ಯಾವುದೇ ಬೌದ್ಧಿಕ ಚರ್ಚೆಯಲ್ಲಿ ಸಮಾನರಾಗಿ ಭಾಗವಹಿಸಲು ನಿರಾಕರಿಸುವಂತೆ ಮಾಡಿರುವ ನಮ್ಮ ಬ್ರಾಹ್ಮಣೀಕೃತ ರಾಜಕೀಯ ವ್ಯವಸ್ಥೆಗೆ ದಲಿತ ಸಮುದಾಯ ಬಲಿಯಾಗಿರುವುದರ ದುರಂತ ಫಲ' ಎಂದು ವಿಶ್ಲೇಷಿದ್ದಾರೆಂಬುದನ್ನೂ ಇಲ್ಲಿ ದಾಖಲಿಸುವುದು ಉಚಿತ..

ಓೀಗಾಗಿ ಪಠ್ಯಪುಸ್ತಕಗಳ ವಿವಾದ ಸರಣಿ ಇಲ್ಲಿಗೇ, ಇಷ್ಟಕ್ಕೇ ಮುಗಿಯುವಂತೆ ಕಾಣುತ್ತಿಲ್ಲ. ಹಾಗೇ ಇದು ಬೇರೆ ನೆಲೆಗಳಿಗೆ ಹಬ್ಬಿ ಶೈಕ್ಷಣಿಕ ಕ್ಷೇತ್ರದಲ್ಲಿ ಮತ್ತಷ್ಟು ಗೊಂದಲಗಳನ್ನುಂಟು ಮಾಡುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಏಕೆಂದರೆ

ಇದರ ಮೂಲ ಪಠ್ಯಪುಸ್ತಕ ರಚನೆಯಲ್ಲಿರದೆ, ಸಾಮಾಜಿಕ ನ್ಯಾಯ ಆಂದೋಲನದ ಭಾಗವಾಗಿ ಅಸ್ಮಿತೆಯ ರಾಜಕಾರಣ ಅನಿಯಂತ್ರಿತವಾಗಿ ಬೆಳೆದು ನಿಂತಿರುವ ಬಗೆಯಲ್ಲಿದೆ. ಅಸ್ಮಿತೆ ಎನ್ನುವುದು ರಚನಾತ್ಮಕ ಅನುಸಂಧಾನದ ಒಂದು ಘನವಾದ ಆಧಾರ ಮೌಲ್ಯವಾಗದೆ, ಜಾತಿ-ಮತಗಳನ್ನು ಕುರಿತ ಮಧ್ಯಕಾಲೀನ ನಂಬಿಕೆಗಳನ್ನು ಪೋಷಿಸುವ ಕೇವಲ ಸ್ವಾರ್ಥಸಾಧನೆಯ ವಿಭಜನಾತ್ಮಕ ಯುಕ್ತಿಯಾಗಿ ಅವನತಿಗೊಳ್ಳುತ್ತಿರುವುದೇ ಇದಕ್ಕೆ ಕಾರಣವಾಗಿದೆ. ಇದನ್ನು, ಈ ಕುರಿತಂತೆ ಇಲ್ಲಿ ಪ್ರಕಟಿಸಿರುವ ಎಲ್ಲ ದೃಷ್ಟಿಕೋನಗಳನ್ನೂ ಪ್ರತಿನಿಧಿಸುವ ಬರಹಗಳ ಒಟ್ಟು ಓದು ನಿಮಗೆ ಮನಗಾಣಿಸುವುದಾದರೆ ನಮ್ಮ ಪ್ರಯತ್ನ ಸಾರ್ಥಕವೆನಿಸುತ್ತದೆ.

ಮೊದಲಿಗೆ ನಿರ್ದಿಷ್ಟವಾಗಿ ಅಂಬೇಡ್ಕರ್ ವ್ಯಂಗ್ಯಚಿತ್ರ ವಿವಾದ ಕುರಿತ ಚರ್ಚೆಯನ್ನು ದಾಖಲಿಸಿ, ನಂತರ ಇದರ ಹಿಂದಿನ ಸಾರ್ವತ್ರಿಕ ವಿವಾದ ಕುರಿತಂತೆ ವಿವಿಧ ಹಿನ್ನೆಲೆಗಳ ರಾಜ್ಯದ ಮೂವರು ಚಿಂತಕರ ಅಭಿಪ್ರಾಯಗಳನ್ನು ನೀಡುತ್ತಿದ್ದೇವೆ. -ಸಂ.

ಆಗಸ್ಟ್, ೨೦೧೨

ಸಮಾನತೆಯ ಹೊಸ ಅರ್ಥ

ಪ್ರಿಯ ಓದುಗರೇ,

ಪತ್ರಿಕೆಯ ಪ್ರಥಮ ವಾರ್ಷಿಕ ವಿಶೇಷಾಂಕವನ್ನು ಈ ಮೂಲಕ ನಿಮ್ಮ ಕೈಗಿಡುತ್ತಿದ್ದೇವೆ. ನಾವು ಪತ್ರಿಕೆ ಶುರು ಮಾಡಿ ಒಂದು ವರ್ಷವಾಗಿ ಹೋಯಿತೇ ಎಂದು ಆಶ್ಚರ್ಯ ಪಡುತ್ತಿರುವ ಈ ಕ್ಷಣ ಧನ್ಯತಾ ಭಾವದ ಕ್ಷಣವೂ ಆಗಿದೆ. ಬಹುಶಃ ನನಗೊಬ್ಬನಿಗೇ ಅಲ್ಲ. ಈ ಪತ್ರಿಕೆಯನ್ನು ಓದಿ, ತಿದ್ದಿ ರೂಪಿಸುತ್ತಿರುವ ಗೆಳೆಯರಿಗೆ; ಪ್ರತಿ ಸಂಚಿಕೆಗೂ, ಕೇಳಿದ ಲೇಖನಗಳನ್ನು ಬರೆದುಕೊಟ್ಟು ಸಹಕರಿಸಿರುವ ಲೇಖಕ ಮಿತ್ರರಿಗೆ ಸಹ. ಎಲ್ಲರಿಗಿಂತ ಹೆಚ್ಚಾಗಿ, ಇದು ತಮ್ಮದೇ ಪತ್ರಿಕೆಯೆಂಬ ಆಪ್ತ ಭಾವದಲ್ಲಿ ಪತ್ರಿಕೆಗೆ ಗಣನೀಯ ಸಂಖ್ಯೆಯಲ್ಲಿ ತಮ್ಮ ಗೆಳೆಯರನ್ನು ಚಂದಾದಾರನ್ನಾಗಿ ಮಾಡಿಕೊಟ್ಟು ಪತ್ರಿಕೆಗೆ ಒಂದು ಸುಭದ್ರ ತಳಹದಿ ಒದಗಿಸಿದ ದೂರದೂರುಗಳ ಹತ್ತಾರು ಮಿತ್ರರಿಗೆ ಕೂಡ. ಇವರೊಂದಿಗೆ ಇದೇ ಸಂದರ್ಭದಲ್ಲಿ ನೆನೆಯಬೇಕಾದವರು, ಈ ಪುಟ್ಟ ವಿಶೇಷ ಸಂಚಿಕೆಗಾಗಿ ತಮ್ಮ ಶಕ್ತ್ಯಾನುಸಾರ ಹಣದ ಸಹಾಯ ಮತ್ತು ಜಾಹೀರಾತುಗಳನ್ನು ಒದಗಿಸಿದ ಪತ್ರಿಕೆಯ ಹಿತೈಷಿಗಳು ಮತ್ತು ಈ ಸಂಚಿಕೆಯ ಕಲಾವಿದರಾದ ಡಾ. ಸಿ. ರವೀಂದ್ರನಾಥ್ ಮತ್ತು ರವಿ ಪ್ರಸಾದ್ ಎಚ್. ಆರ್.

ಪತ್ರಿಕೆಯ ಓದುಗರಲ್ಲಿ ಹೆಚ್ಚಿನವರು ಹೊಸ ತಲೆಮಾರಿನವರು. ಇದೊಂದು ಸಂತೋಷದ ಸಂಗತಿ. ಏಕೆಂದರೆ ಸಮಾಜವಾದ ಕುರಿತ ನಿಶ್ಚಿತ ಕಲ್ಪನೆಯಿಲ್ಲದ ಹೊಸ ತಲೆಮಾರಿನ ಜನರ ಮುಕ್ತ ಅಭಿಪ್ರಾಯ-ಅನಿಸಿಕೆಗಳ ಪ್ರಯೋಜನ ಪತ್ರಿಕೆಗೆ ಆಗುತ್ತಿದೆ. ನಿಜ, ಇವರಲ್ಲಿ ಕೆಲವರು, ಪತ್ರಿಕೆ ಹೆಚ್ಚು ರಾಜಕೀಯವಾಗಿದೆ ಎಂಬ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆದರೆ ಪತ್ರಿಕೆ ರಾಜಕೀಯವನ್ನು ಕೇವಲ ವ್ಯಾವಹಾರಿಕ ರಾಜಕಾರಣವಾಗಿ ಅಲ್ಲ; ನಮ್ಮ ಬದುಕಿನ ಬಗ್ಗೆ ಒಂದು ಹೊಸ ಮತ್ತು ಸಮಗ್ರ ದೃಷ್ಟಿಕೋನವನ್ನು ರೂಪಿಸುವ ತತ್ವ ಜ್ಞಾನದ ಸ್ತರದಲ್ಲಿ ಪ್ರಸ್ತುತಪಡಿಸುವ ಪ್ರಯತ್ನದಲ್ಲಿ ತೊಡಗಿದೆ ಎಂಬುದನ್ನು ಗಮನಿಸಬೇಕೆಂದು ಇಂತಹರನ್ನು ಕೇಳಿಕೊಳ್ಳುವೆ.

ಇತ್ತೀಚಿನ ವರ್ಷಗಳಲ್ಲಿ ಈ ದೇಶದ ಒಟ್ಟಾರೆ ಆದಾಯ ಹೆಚ್ಚಿದಷ್ಟೂ–ಋಣ ಬಾಧ್ಯತೆಗಳು ಏನೇ ಇರಲಿ–ದೇಶ ಏಕೆ ಹೆಚ್ಚೆಚ್ಚು ಅಶಾಂತವಾಗುತ್ತಿದೆ, ಹಿಂಸಾತ್ಮಕವಾಗುತ್ತಿದೆ, ಮನುಷ್ಯ ಸ್ಪರ್ಶವನ್ನೇ ಕಳೆದುಕೊಳ್ಳುತ್ತಿದೆ, ಆತ್ಮಹತ್ಯೆಗಳ ಕಡೆ ತುಡಿಯುತ್ತಿದೆ ಎಂಬುದನ್ನು ಯೋಚಿಸಿದಾಗ, ಇದನ್ನು ಪುಷ್ಟೀಕರಿಸುವ–ಹೆಚ್ಚು ವಿವರಣೆಯ ಅಗತ್ಯವೇ ಇಲ್ಲದಷ್ಟು ಕಣ್ಣಿಗೆ ರಾಚುವಂತಿರುವ–ಇತ್ತೀಚಿನ ಬೆಳವಣಿಗೆ ಮತ್ತು ಘಟನೆಗಳ ಆಳಕ್ಕೆ ಹೋಗಿ ಅರ್ಥ ಮಾಡಿಕೊಳ್ಳತೊಡಗಿದಾಗ, ಇವೆಲ್ಲ ಈ ದೇಶ ತನ್ನ ಚರ್ಮದಾಚೆಗೆ ಜಿಗಿಯುವ ಅಸಹಜ 'ಸಾಹಸ'ದ ಪರಿಣಾಮಗಳು ಎಂಬುದು ಗೊತ್ತಾಗುತ್ತದೆ. ಅಂದರೆ ದೇಶ ಆಧುನಿಕ ಪರಿವೇಷದಲ್ಲಿ ತ್ಯಾಜ್ಯವೆಂದು ಕಂಡುಕೊಂಡಿರುವ ತನ್ನ ಹಳೆಯ ಗುಗುತನ್ನೇ, ಸಂಸ್ಕಾರವನ್ನೇ, ಸಾಮುದಾಯಿಕ ನೆನಪುಗಳನ್ನೇ, ಮೂಲ ನಂಬಿಕೆಗಳನ್ನೇ ಅಳಿಸಿಕೊಂಡು ತನ್ನನ್ನು ತಾನೇ ನಿರಾಕರಿಸಿಕೊಳ್ಳುವ ಹವಣಿಕೆಯಲ್ಲಿರುವಂತೆ ತೋರುತ್ತಿದೆ. ಪಶ್ಚಿಮದ ಆಧುನಿಕತೆಯ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಂಡು ಬಹುಕಾಲ ಕೀಳರಿಮೆಯಿಂದ ನರಳಿದ್ದ ಈ ದೇಶ ಈಗ 'ಹೊಸ ಆರ್ಥಿಕ ನೀತಿ'ಯ ಹೆಸರಿನಲ್ಲಿ ತಾನು 'ಅದಾ'ಗುವ ದಿಢೀರ್ ಸುವರ್ಣಾಕಾಶ ಸಿಕ್ಕಂತೆ 'ಹೊಸ ಮತಾಂತರಿ'ಯ ಆವೇಶದಲ್ಲಿ ಮೆರೆಯತೊಡಗಿದೆ; ಮೊರೆಯತೊಡಗಿದೆ. ಈ ಮೊರೆತ ಎಂತಹ ಹುಚ್ಚಿಡಿಸುವ ತಾರಕವನ್ನು ಮುಟ್ಟಿದೆಯೆಂದರೆ, ಅದು ಈವರೆಗೂ ಮುಟ್ಟದ ವಲಯಗಳನ್ನೆಲ್ಲ ಆವರಿಸಿ, ನಮ್ಮ ಬಹುಸಂಖ್ಯಾತ 'ದಲಿತ' ಮತ್ತು 'ಹಿಂದುಳಿದ' ನಾಮಾಂಕಿತ ವರ್ಗಗಳಲ್ಲೂ ತಳಮಳವನ್ನು ಸೃಷ್ಟಿಸಿವೆ; ಅವು ಹೊಸ ಹೊಸ 'ಅಸ್ಮಿತೆ'ಗಳನ್ನು ಹುಡುಕಿಕೊಂಡು ಹೊರಟಿವೆ. ಹಾಗಾಗಿ ಅವುಗಳಿಗೆ ನಮ್ಮ ಪಾರಂಪರಿಕ ಅಸ್ಮಿತೆಯ ಮೂಲಾಧಾರವಾದ ನಮ್ಮ ಭಾಷೆ ಎಂಬುದು 'ಅನ್ಯ'ವೆನಿಸಿ; ಹೊರೆಯಾಗಿ, ಸಲ್ಲದ ಬಾಧ್ಯತೆಯಾಗಿ ಕಾಣತೊಡಗಿದೆ.

ಇಂತಹ ಹೊಸ 'ನೋಟ'ಗಳು ಸೃಷ್ಟಿಸುತ್ತಿರುವ ಹಿಂಸೆ ಸಾಮಾಜಿಕವಾಗಿ ಸಮಗ್ರವೆನಿಸುವ ಹೊಸ 'ಅಸ್ಮಿತೆ'ಯೊಂದನ್ನು ರೂಪಿಸುವ ಆಶಯ ಹೊಂದಿದ್ದ ಈವರೆಗಿನ ಎಲ್ಲ ಅನುಸಂಧಾನಾತ್ಮಕ ರಾಜಕೀಯ ಪ್ರಯತ್ನಗಳನ್ನೂ ವಿಫಲಗೊಳಿಸಿದೆ. ಸಮಾಜವಾದದ ಇಂದಿನ ನಿಜವಾದ ಬಿಕ್ಕಟ್ಟು ಇಲ್ಲಿದೆ ಎಂದು ನಾನು ಭಾವಿಸಿದ್ದೇನೆ. ನಿಜ, ಈ ಪತ್ರಿಕೆ ಮುಖ್ಯವಾಗಿ ಡಾ. ರಾಮಮನೋಹರ ಲೋಹಿಯಾ ಪ್ರತಿಪಾದಿಸಿದ ಸಮಾಜವಾದಿ ವಿಚಾರಧಾರೆಯನ್ನು ತನ್ನ ಮೂಲ ನಂಬಿಕೆಯನ್ನಾಗಿರಿಸಿಕೊಂಡಿದೆ. ಆದರೆ ಲೋಹಿಯಾ ಸಾಮಾನ್ಯ ಅರ್ಥದ ಸಮಾಜವಾದಿಯಲ್ಲ; ಆತನೊಬ್ಬ ಅಲೆಮಾರಿ ಅವಧೂತರ ವಿಶಿಷ್ಟ ಭಾರತೀಯ ಪರಂಪರೆಯ ಬಳುವಳಿ ಎಂಬುದನ್ನು ಗಮನಿಸಿಯೇ ಪತ್ರಿಕೆ ಅವರ ವಿಚಾರಗಳನ್ನು ಆಳವಾಗಿ ಶೋಧಿಸುವ, ವಿಸ್ತರಿಸುವ ಪ್ರಯತ್ನ ಮಾಡುತ್ತಿದೆ ಎಂಬುದನ್ನೂ ಓದುಗರು ಗಮನಿಸುವರು ಎಂದು ಭಾವಿಸುತ್ತೇನೆ. ಇದರ ಪರಿಣಾಮವಾಗಿಯೇ, ಈ ಸಂಚಿಕೆಯಲ್ಲಿ ಕಿರಿಯ ಗೆಳೆಯ ಕೆ.ಪಿ. ನಟರಾಜ್ ಗುರುತಿಸಿರುವಂತೆ, ಈ ಪತ್ರಿಕೆ ತನ್ನೆಲ್ಲ ಬರಹಗಳ ಮೂಲಕ ತನ್ನ ಮಿತಿಗಳಲ್ಲೇ ಹೊಸ 'ಸೌಂದರ್ಯ ಶಾಸ್ತ್ರ'ವನ್ನು ಶೋಧಿಸುವ ನಮ್ಮ ಪ್ರಯತ್ನದಲ್ಲಿ ತೊಡಗಿದೆ.

ಮನುಷ್ಯನ ಮೂಲ ತಹತಹಿಕೆ, ದಾಹ, ಗುರಿ, ತನ್ನ ಇಂದ್ರಿಯಗಳ ಮೂಲಕ ಸದಾ ಸಾಧಿಸಿಕೊಳ್ಳಲೆತ್ನಿಸುವ ಇಂದ್ರಿಯಾತೀತ ಅನುಭವದ ಪರಿಪೂರ್ಣತೆಯದೇ ಆಗಿದೆ. ಇದೇ ಸೌಂದರ್ಯಾನುಭೂತಿ. ಇದರ ಮೂಲ ಧಾತುಗಳು ಆಹಾರ, ಬಟ್ಟೆ, ವಸತಿ, ಒಡನಾಟ, ಲೈಂಗಿಕತೆಗಳೇ ಮುಂತಾದ 'ಲೌಕಿಕ' ಅಸ್ತಿತ್ವದ ಆಧಾರಗಳೇ ಆಗಿವೆ. ಆದರೆ ಇವನ್ನು ಇಂದು ಯಾವುದೇ ಮಿತಿಯಿಲ್ಲದ ಪ್ರಮಾಣ ಅಥವಾ ಗಾತ್ರದ ಮಾನದಲ್ಲಿ ಪ್ರಸ್ತುತಪಡಿಸುತ್ತಿರುವುದೇ ಸೌಂದಾರ್ಯಾನುಭೂತಿಯ ಅಶ್ಲೀಲೀಕರಣಕ್ಕೂ ಕಾರಣವಾಗಿದೆ. ಇದೇ ಮೇಲೆ ಪ್ರಸ್ತಾಪಿಸಿದ ಯಾರಿಗಾದರೂ ಹುಚ್ಚೆಡಿಸುವಂತಹ ಮೊರೆತವನ್ನು ಸೃಷ್ಟಿಸಿದೆ. 'ಅಭಿವೃದ್ಧಿ' ಎಂಬ ಹಾಹಾಕಾರವನ್ನೂ ಸೃಷ್ಟಿಸಿದೆ.

ಇದು ಪಶ್ಚಿಮದ ಆಧುನಿಕತೆಯ ಕೊಡುಗೆಯಾಗಿ ಬಂದ 'ಸಮಾನತೆ' ಎಂಬ ಪರಿಕಲ್ಪನೆಯ ಪರಿಣಾಮ ಮತ್ತು ಈ 'ಸಮಾನತೆ' ಸಮಾಜವಾದದ ಕೇಂದ್ರ ತತ್ವ ಎಂಬುದು ನಿಜ. ಅದರೆ ಲೋಹಿಯಾ ಗಾಂಧೀಜಿಯಿಂದ ಪಡೆದ ಹೊಸ ಕಾಣ್ಕೆಯ ಸ್ಫೂರ್ತಿಯಲ್ಲಿ ಇಂತಹ ಸಮಾನತೆಯಲ್ಲಿನ ಅಪಾಯ ಅರಿತಿದ್ದರು. ಹಾಗಾಗಿ ಅವರು ಅದಕ್ಕೆ 'ಸಮತೋಲನ' ಎಂಬರ್ಥದಲ್ಲಿ 'ಸಮತೆ' ಎಂಬ ಹೊಸ ವ್ಯಾಖ್ಯಾನ ನೀಡಿ ಸಮಾಜವಾದಕ್ಕೆ ಒಂದು ಹೊಸ ಸೌಂದಾರ್ಯಾತ್ಮಕತೆಯನ್ನೂ ಒದಗಿಸಿದರು. ಇದೇ ಮಿತಿಗಳುಳ್ಳ ಸರಳ ಸಭ್ಯ ಬದುಕಿನ ಮೂಲಕ ಸಾಧಿಸಬಹುದಾದ ಹೊಸ ಸಮಾನತೆಯ, ಹೊಸ ಸೌಂದಾರ್ಯಾನುಭೂತಿಯ ಲೋಹಿಯಾ ದರ್ಶನ. ಇಲ್ಲಿ ಸಮಾನತೆಯು ಲೌಕಿಕ ಮೌಲ್ಯ ಹೇಗೋ ಹಾಗೇ ಅಧ್ಯಾತ್ಮಿಕ ಮೌಲ್ಯವೂ ಹೌದು, ಇದೇ ಅವರ ನವ ನಾಗರೀಕತೆ ಮತ್ತು ನವ ಮಾನವನ ಕನಸಿನ ತಾತ್ವಿಕ ಆಧಾರ.

ಪತ್ರಿಕೆ ಈ ಅಮೂರ್ತ ಸತ್ಯವನ್ನು ಮೂರ್ತಗೊಳಿಸಬಲ್ಲ ರಾಜಕಾರಣದ ಪರಿಶೋಧದಲ್ಲಿದೆ. ಈ ಸಂಚಿಕೆ ಇಂತಹ ವಿಶೇಷ ಪರಿಶೋಧವೊಂದರ ಪುಟ್ಟ ಪ್ರತೀಕವಷ್ಟೆ ಸಹಜವಾಗಿಯೇ 'ಅಭಿವೃದ್ಧಿ ಮೀಮಾಂಸೆ' ಈ ಸಂಚಿಕೆಯ ಕೇಂದ್ರ ಕಾಳಜಿಯಾಗಿದೆ. ಮಿಕ್ಕೆಲ್ಲ ಬರಹಗಳೂ ಇದಕ್ಕೆ ಪೂರಕವೆನ್ನಿಸುವಂತೆ ಇವೆ. ನಿಮಗೇನನ್ನಿಸುತ್ತದೋ ದಯವಿಟ್ಟು ತಿಳಿಸಿ.

<u>ಸಮಕಾಲೀನ</u>

ನೆಹರೂ ಅವರ ಆಧುನಿಕ ಭಾರತದ ಭವ್ಯ ದೇಗುಲಗಳ ತಳಗೆ...

ಮೂಲ : **ಚಿತ್ರಾ ಪದ್ಮನಾಭನ್**

ಕನ್ನಡಕ್ಕೆ **ಎಮ್. ಆರ್. ರಾಮಶೇಷ**

ದೇಶದ ವಿಸ್ತಾರವನ್ನು ಕಚ್ಚಾ ಸಾಮಗ್ರಿಯಾಗಿ ಕಾಣುವ ಚಾಳಿ ಹೆಚ್ಚಿದಷ್ಟೂ ಅಲ್ಲಿನ ಜನ ಸಮುದಾಯ ಹಾಗೂ ಅವರ ಸಂಸ್ಕೃತಿಗಳು ಈ ನೆಹರೂ ಕನಸಿನ ಪ್ರಗತಿಗೆ ಅಡ್ಡಗಾಲು ಹಾಕುವುದೂ ಹೆಚ್ಚಾಗಿದೆ. ಕಚ್ಚಾ ಸಾಮಗ್ರಿಯ ದೃಶ್ಯದ ಜೊತೆಜೊತೆಯಲ್ಲಿಯೇ ಇದರ ಸೂರೆಗೆ ಎಲ್ಲೆಡೆಯಲ್ಲಿಯೂ ಜನ ಸಾಮಾನ್ಯರು ಸೆಡ್ಡು

ಹೊಡೆದು ನಿಲ್ಲುತ್ತಿರುವುದು ಢಾಳಾಗಿ ಕಾಣಹತ್ತಿದೆ. ಮುಂಚಿನಷ್ಟೇ ಸರಳವಾಗಿ ಬಿಡಿಸಿಕೊಳ್ಳಲಾಗದಂತಹ ತೊಡಕುಗಳನ್ನು ಅವರು ಒಡ್ಡುತ್ತಿದ್ದಾರೆ. ಬಾಕ್ಸೈಟ್ ಅದಿರಿನ ಕಣಜದಂತೆ ಕಾಣುವ ಬೆಟ್ಟದಲ್ಲೇ ಆದಿವಾಸಿಗಳ ದೈವಮೂಲಗಳಷ್ಟೇ ಅಲ್ಲ, ಅಲ್ಲಿರುವ ಔಷಧೀಯ ಸಸ್ಯ ಸಂಪತ್ತು ಹಾಗೂ ಅದರ ಬಗೆಗೆ ಅಲ್ಲಿನ ಮೂಲ ನಿವಾಸಿಗಳಿಗಿರುವ ಅಮೂಲ್ಯ ಜ್ಞಾನ ಕೂಡ ನಮ್ಮ ಧಾವಂತಕ್ಕೆ ಕಡಿವಾಣ ಹಾಕುತ್ತಿವೆ. ತಾಳ್ಮೆಯ ಪಾಠವನ್ನು ನಮಗೆ ಕಲಿಸುತ್ತಿವೆ. ಜನ ಸಮುದಾಯ, ತಾನು ಇದ್ದೆಡೆಯೆಲ್ಲಾ ತಮ್ಮ ತಮ್ಮ ಅನುಭವವೆಂಬ ವೃಕ್ಷದ ಬೇರನ್ನು ಅಲ್ಲಿನ ನೆಲದಲ್ಲಿ ಊರಿ, ಹರಡಿ ಅಲ್ಲಿನ ಜಲ–ಹವೆಯೊಂದಿಗೆ ಅದನ್ನು ಬೆಸೆದಿರುತ್ತದೆ. ಪರಿಸರ ಹಾಗೂ ಜನ ಸಮುದಾಯದ ನಡುವೆ ಇರುವ ಈ ಸಾವಯವ ಸಂಬಂಧವನ್ನು ಮರೆತು ಮುಂದುವರೆಯುವುದು ಅಸಾಧ್ಯವಷ್ಟೇ ಅಲ್ಲ, ಅಸಾಧು ಕೂಡ. ಇದನ್ನು ನಾವು ಪರಿಗಣನೆಗೆ ತೆಗೆದುಕೊಳ್ಳಲೇಬೇಕಾದ ಅನಿವಾರ್ಯ ಇಂದು ಸೃಷ್ಟಿಯಾಗಿದೆ ಎಂಬುದು ಬುಧ್ನಿಯ ಕಥಾನಕದಿಂದ ನಾನು ಪಡೆದ ತಿಳುವಳಿಕೆ.

ನನ್ನ ಬಾಲ್ಯದ ಗೆಳತಿಯೊಬ್ಬಳ ತಾಯಿ ಸುರ್‌ಜಿತ್ ಕೌರ್ ಎಂಬಾಕೆಗೆ ಬರವಣಿಗೆಯ ಗೀಳು ಹತ್ತಿದೆ. ಸರಿ ಸುಮಾರು ೮೦ ವರ್ಷ ಪ್ರಾಯದ ಆಕೆ ತನ್ನ ಜೀವಮಾನದ ಅನೇಕ ಅನುಭವಗಳನ್ನು ಕಾಗದದ ಮೇಲೆ ದಾಖಲಿಸುವ ಕಾಯಕದಲ್ಲಿ ತೊಡಗಿದ್ದಾರೆ. ೧೯೫೭ರಲ್ಲಿ ಯುವ ಶಿಕ್ಷಕಿಯಾಗಿ ಅವರು ಕೈಗೊಂಡ ಶೈಕ್ಷಣಿಕ ಪ್ರವಾಸ ಅವರ ಅತ್ಯಂತ ಆಪ್ತ ಅನುಭವಗಳಲ್ಲೊಂದು. ತನ್ನ ೨೫ನೇ ವಯಸ್ಸಿನಲ್ಲಿ ಅವರು ಪ್ರವಾಸ ಕೈಗೊಂಡಾಗ ಸ್ವತಂತ್ರ ಭಾರತಕ್ಕೆ ಕೇವಲ ೧೦ ವರ್ಷಗಳ ಬಾಲ್ಯ. ತನ್ನ ಅಂದಿನ ಅನುಭವಗಳ ಬಗ್ಗೆ ಆಕೆ ಉತ್ಸಾಹದಿಂದ ಹೇಳುತ್ತಿದ್ದಾಗ ನನಗೆ ಆಗಿನ ನೆಹರೂ ಕಾಲದ ಭಾರತದ ಜನಸ್ತೋಮ ತನ್ನ ಭವಿಷ್ಯದ ಬಗ್ಗೆ ಕಟ್ಟಿಕೊಂಡಿದ್ದ ಕನಸುಗಳ, ಆಶೋತ್ತರಗಳ ಸಂಕ್ಷಿಪ್ತ ಚಿತ್ರ ಮೂಡಹತ್ತಿತು.

ಸುರ್‌ಜಿತ್ ಕೌರ್ ಅವರ ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರಹಾಗೂ ಪಶ್ಚಿಮ ಬಂಗಾಳ ರಾಜ್ಯಗಳ ಪ್ರವಾಸದಲ್ಲಿ ನಾವು ಸಾಮಾನ್ಯವಾಗಿ ಸೇರಿಸಿಕೊಳ್ಳುವ ಧಾರ್ಮಿಕ, ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ವಾಣಿಜ್ಯಕ ತಾಣಗಳಾದ ಕಾನ್ಪುರ, ವಾರಣಾಸಿ, ಪ್ರಯಾಗ, ಲಖ್ನೋ, ಗ್ವಾಲಿಯರ್, ಕೊಲ್ಕತ್ತಾ ಇತ್ಯಾದಿಗಳ ಜೊತೆಜೊತೆಗೆ ದಾಮೋದರ್ ಕಣಿವೆ ನಿಗಮದವರು ಅಂದಿನ ಬಿಹಾರ(ಇಂದಿನ ಝಾರ್ಖಂಡ್)ದಲ್ಲಿ ಕಟ್ಟತೊಡಗಿದ್ದ ಅಣೆಕಟ್ಟು, ಪಶ್ಚಿಮ ಬಂಗಾಳದ ಚಿತ್ತರಂಜನ್‌ನಲ್ಲಿ ಸ್ಥಾಪಿತವಾಗುತ್ತಿದ್ದ ರೈಲ್ವೇ ಇಂಜಿನ್ ಕಾರ್ಖಾನೆ, ಮಧ್ಯಪ್ರದೇಶದ ಕಾಟ್ನಿಯಲ್ಲಿನ ಸಿಮೆಂಟ್ ಕಾರ್ಖಾನೆಗಳೂ ಸೇರಿದ್ದವು. 'ಅಧುನಿಕ ಭಾರತದ ದೇವಾಲಯಗಳೆಂದು' ನೆಹರು ಹೆಸರಿಸಿದ ಈ ತಾಣಗಳು ಹೊಸ ಭಾರತ ಕಟ್ಟ ಹೊರಟ ನವ ಜನಾಂಗದ ಆಶೋತ್ತರಗಳ ಪ್ರತಿಬಿಂಬವಾಗಿದ್ದವು.

ಅಂದಿನ ಯುವತಿ ಸುರ್ಜಿತ್ ಕೌರ್ ಹಾಗೂ ಅವರಂತಹ ಲಕ್ಷಾಂತರ ಯುವಕ–ಯುವತಿಯರನ್ನೊಳಗೊಂಡ, ಸ್ವತಂತ್ರ ಭಾರತದ ಯುವಜನಾಂಗದ ಕಣ್ಣುಗಳಲ್ಲಿ ಕಂಡುಬರುತ್ತಿದ್ದ ಹೊಳಪು, ಭವಿಷ್ಯದ ಬಗ್ಗೆ ಅವರು ಹೊಂದಿದ್ದ ವಿಶ್ವಾಸ ಹಾಗೂ

ನಂಬಿಕೆ ಇವುಗಳನ್ನು ಪುಷ್ಟೀಕರಿಸುವಲ್ಲಿ ಆಂದಿನ ಬಾಲಿವುಡ್ ಸಿನಿಮಾಗಳೂ ಹಿಂದೆ ಬಿದ್ದಿರಲಿಲ್ಲ. ಅಂದಿನ ಸಿನಿಮಾ ಹಾಡೊಂದು ಇದಕ್ಕೆ ಉತ್ತಮ ಉದಾಹರಣೆ – 'ಛೋಡೋ ಕಲ್ ಕೀ ಬಾತೇ, ಕಲ್ ಕೀ ಬಾತ್ ಪುರಾನಿ, ನಯಿದೌರ್ ಸೆ ಲಿಖೇಂಗೆ, ಮಿಲ್ ಕರ್ ನಯೀ ಕಹಾನೀ ಹಮ್ ಹಿಂದೂಸ್ತಾನಿ, ಹಮ್ ಹಿಂದೂಸ್ತಾನಿ" ('ಬಿಡಿ ನಿನ್ನೆಯ ಮಾತುಗಳನ್ನು, ಆ ಹಳೆಯ ಮಾತುಗಳನ್ನು. ಬರೆಯೋಣ, ಹೊಸ ಕಥೆಯ ನಾವು... ಹಿಂದೂಸ್ತಾನಿಗಳು...ನಾವು ಹಿಂದೂಸ್ತಾನಿಗಳು...) ಹೊಸದಾಗಿ ಕಟ್ಟುತ್ತಿದ್ದ ಅಣೆಕಟ್ಟೊಂದರ ಬಳಿ ಸುನಿಲ್ ದತ್ ನಾಯಕನಾಗಿ ಚಿತ್ರಿತವಾದ 'ಹಮ್ ಹಿಂದೂಸ್ತಾನಿ' ಚಿತ್ರದ ಈ ಜನಪ್ರಿಯ ಹಾಡು ಅಂದಿನ ಜನಾಂಗದ ಕನಸುಗಳಿಗೆ ಹಿಡಿದ ಕನ್ನಡಿಯಂತಿತ್ತು. ಆಧುನಿಕ ವಿಜ್ಞಾನ-ತಂತ್ರಜ್ಞಾನದ ಬಗೆಗೆ ಅಚಲ ಶ್ರದ್ಧೆ, ಅದರ ಶಕ್ತಿಯನ್ನು ವೈಜ್ಞಾನಿಕ ಮನೋಭಾವದೊಡನೆ ಬಳಸಿ ಸಾಧಿಸಬಹುದಾದ ಪ್ರಗತಿ ಹಾಗೂ ತತ್ಫಲವಾಗಿ ಮೂಡಲಿರುವ ಸಮೃದ್ಧಿ –ಇವುಗಳೇ ಆ ನೆಹರೂ ಪ್ರಣೀತ ನವ ಭಾರತದ ಕನಸೆಂಬ ಹೆಮ್ಮರದ ಮೂಲಬೀಜಗಳು.

ರಾಷ್ಟ್ರ ವಿಭಜನೆಯೆಂಬ ಘೋರ ಯಾತನೆಯಿಂದ ಆಗಷ್ಟೇ ಚೇತರಿಸಿಕೊಳ್ಳುತ್ತಿದ್ದ ಸುರ್‌ಜಿತ್ ಕೌರ್ ಪೀಳಿಗೆಗೆ 'ಪ್ರಗತಿಶೀಲ ಆಧುನಿಕ ಭಾರತ'ದ ಈ ಹೊಸ ಕನಸು ಅಪ್ಯಾಯಮಾನವಾಗಿ ಕಂಡಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ನಿವೃತ್ತಿ ಹೊಂದಿ, ಈಗ ವಿಶ್ರಾಂತ ಜೀವನ ನಡೆಸುತ್ತಿರುವ ಸುರ್‌ಜಿತ್ ಕೌರ್, ಇತ್ತೀಚೆಗೆ ತನ್ನ ಕಾಲದ 'ಆಧುನಿಕ ದೇವಾಲಯ'ಗಳ ಬಗ್ಗೆ ನನ್ನನ್ನು ವಿಚಾರಿಸಿ, ಆ ಬಗ್ಗೆ ಆಕೆ ತೋರಿದ ಕಳಕಳಿ, ನನ್ನಲ್ಲಿ ವಿಚಿತ್ರ ಕುತೂಹಲವೊಂದನ್ನು ಹುಟ್ಟಿಸಿತು. ನಮ್ಮ ಹಿರಿಯರ ಶ್ರದ್ಧಾ ಕೇಂದ್ರಗಳಾಗಿದ್ದ, ಅಂದಿನ ತಲೆಮಾರಿನ ಕನಸಿನ ಪ್ರತೀಕಗಳಾಗಿದ್ದ ಈ 'ಪವಿತ್ರ ತಾಣಗಳ' ಇತ್ತೀಚಿನ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಂಗ್ರಹಣೆಯ ಕಾರ್ಯಕ್ಕೆ ನನ್ನನ್ನು ಪ್ರೇರೇಪಿಸಿತು. ಅಷ್ಟೇ ಅಲ್ಲ, ಬುಧ್ನಿ ಮೆಝಾನ್ ಎಂಬ ಸಂತಾಲ ಆದಿವಾಸಿ ಹೆಂಗಸಿನ ಕ(ವ್ಯ)ಥೆಗೂ ನನ್ನನ್ನು ಮುಖಾಮುಖಿಯಾಗಿಸಿತು. ಯಾವ ಬಂಡೆಗಳನ್ನೊಡೆದು ಹೆದ್ದಾರಿಯನ್ನು ನಿರ್ಮಿಸಲಾಯಿತೋ ಆ ಹೆದ್ದಾರಿಯ ಪಕ್ಕದಲ್ಲಿ ಬಿದ್ದಿರುವ ಆ ಬಂಡೆಗಳ ದಿಕ್ಕಿಲ್ಲದ ತುಂಡುಗಳಂತೆ ಇರುವ ಬುಧ್ನಿಯ ಬದುಕು ನಮ್ಮ ಭಾರತದ ೬೫ ವರ್ಷಗಳ 'ಯಶೋಗಾಥೆ'ಯ ಆಳದಲ್ಲಿ ಘನೀಭೂತವಾಗಿರುವ ನೋವಿನ ಕಥೆಯೆಂಬುದು, ನಮ್ಮ ಸ್ವತಂತ್ರ ಭಾರತ ಇಟ್ಟ ಭಾರಿ ಹೆಜ್ಜೆಗಳ, ಆ ಭಾರದ ಹಿಂಸೆ ಸೃಷ್ಟಿಸಿದ ನೋವುಗಳ ರೂಪಕವಾದೀತೆಂದು ನನಗಾಗಲೀ, ಸುರ್‌ಜಿತ್ ಕೌರ್‌ರ ತಲೆಮಾರಿಗಾಗಲೀ ಕಲ್ಪನೆಗೂ ದಕ್ಕದ ಸಂಗತಿ.

ಬುಧ್ನಿ ಮೆಝಾನ್ ಎಂಬ ಸಂತಾಲ ಆದಿವಾಸಿ ಹೆಣ್ಣುಮಗಳ ಹೆಸರು ಅಕಸ್ಮಾತ್ ನನ್ನ ಕಣ್ಣಿಗೆ ಬಿದ್ದದ್ದು, ಸುರ್‌ಜಿತ್ ಕೌರ್ ಅವರ ಪ್ರವಾಸದ ಒಂದು ಮುಖ್ಯ ಅಂಗವಾಗಿದ್ದ ಮೈಥಾನ್ ಆಣೆಕಟ್ಟಿನ ಬಗ್ಗೆ ಮಾಹಿತಿ ಸಂಗ್ರಹ ಮಾಡುತ್ತಿದ್ದಾಗ. ಝಾರ್ಖಂಡ್

ರಾಜ್ಯದ ಧನಬಾದ್ ಜಿಲ್ಲೆಯಂಚಿನಲ್ಲಿ ಪಶ್ಚಿಮ ಬಂಗಾಳ ರಾಜ್ಯಕ್ಕೆ ಹೊಂದಿಕೊಂಡಂತಿರುವ ಈ ಆಣೆಕಟ್ಟು ದಾಮೋದರ್ ನದಿ ಕಣಿವೆಯಲ್ಲಿ ಕಟ್ಟಿದ ಮೂರನೆಯ ಅಣೆಕಟ್ಟು. ಅಮೇರಿಕದ ಟೆನೆಸ್ಸಿ ಕಣಿವೆ ಪ್ರಾಧಿಕಾರದ ಮಾದರಿಯಲ್ಲಿ ೧೯೪೮ರಲ್ಲಿ ರೂಪುಗೊಂಡ ದಾಮೋದರ್ ಕಣಿವೆ ನಿಗಮ (Damodar Valley Corporation - DVC) ಕಟ್ಟಿದ ಈ ಮಹತ್ವಾಕಾಂಕ್ಷಿ ವಿವಿಧೋದ್ದೇಶ ಅಣೆಕಟ್ಟು, ಸರಿ ಸುಮಾರು, ಸುರ್‌ಜಿತ್ ಕೌರ್ ಅವರು ಅಲ್ಲಿ ಪ್ರವಾಸ ನಡೆಸಿದ ಕಾಲದಲ್ಲೇ ರಾಷ್ಟ್ರಕ್ಕೆ 'ಅರ್ಪಿತ'ವಾಗಿತ್ತು. ಈ ಆಣೆಕಟ್ಟಿನ ಬಗ್ಗೆ ವಿಷಯ ಸಂಗ್ರಹಿಸುತ್ತಿದ್ದಾಗ ನನ್ನ ಗಮನ ಅಲ್ಲೇ ಪಕ್ಕದಲ್ಲೇ, ಪಶ್ಚಿಮ ಬಂಗಾಳ ರಾಜ್ಯದ ಪುರೂಲಿಯಾ ಜಿಲ್ಲೆಗೆ ಹೊಂದಿಕೊಂಡಂತಿರುವ ಧನಬಾದ್ ಜಿಲ್ಲೆಯ ಪಾಂಚೆತ್ ಎಂಬಲ್ಲಿ ಕಟ್ಟಲಾದ ನಾಲ್ಕನೆಯ ಅಣೆಕಟ್ಟಿನ ಕಡೆಗೆ ಹರಿಯಿತು. 'ಬಂಗಾಳದ ವ್ಯಥೆ'ಯೆಂದೇ ಪ್ರಖ್ಯಾತವಾಗಿದ್ದ ದಾಮೋದರ್ ನದಿಗೆ ಅಡ್ಡವಾಗಿ ಕಟ್ಟಲಾಗಿರುವ ಈ ಅಣೆಕಟ್ಟು ಅಂದಿನ ಕಾಲಕ್ಕೆ ಅತಿ ದೊಡ್ಡ ಅಣೆಕಟ್ಟಾಗಿತ್ತು; ಅಷ್ಟೇ ಅಲ್ಲ, ಅಂದಿನ ಕಾಲದ ೧೯ ಕೋಟಿ ರೂ ವೆಚ್ಚದಲ್ಲಿ ಕಟ್ಟಲಾದ ಈ ಭಾರಿ ಆಣೆಕಟ್ಟಿನ ಉದ್ಘಾಟನಾ ಸಮಾರಂಭ ೧೯೫೯ರ ಡಿಸೆಂಬರ್ ೬ರಂದು ನಡೆದಾಗ, ಸ್ವತಃ ಪ್ರಧಾನಮಂತ್ರಿ ನೆಹರೂ ಅವರೇ ಸಮಾರಂಭದ ಅಗ್ರಸ್ಥಾನವನ್ನಲಂಕರಿಸಿದ್ದರು.

ಜೊತೆಗೆ ಅವರು ತಮ್ಮದೇ ಆದ ಶೈಲಿಯಲ್ಲಿ ಆ ಸಮಾರಂಭ ನಡೆಯಬೇಕೆಂದು ಒತ್ತಾಯಿಸಿ, ವಿದ್ಯುತ್ ಉತ್ಪಾದನಾ ಕೇಂದ್ರದ ಉದ್ಘಾಟನೆಯ ಗುಂಡಿಯೊತ್ತುವ ಕಾರ್ಯವನ್ನು ಆ ಅಣೆಕಟ್ಟು ಕಟ್ಟಿದ ಕೂಲಿಗಳಲ್ಲೊಬ್ಬಳಾದ ೧೫ ವರ್ಷ ವಯಸ್ಸಿನ ಬುಧ್ನಿ ಮೆಝಾನ್ ಎಂಬ ಸ್ಥಳೀಯ ಆದಿವಾಸಿ ಸಂತಾಲ್ ಕನ್ಯೆಯ "ಹಸ್ತ"ದಿಂದ ನೆರವೇರಿಸಿದ್ದರು. ಬಹಳ ಹುಡುಕಿದ ನಂತರ ಆ ಸಮಾರಂಭದ ಚಿತ್ರ ಕೂಡ ನನಗೆ ನೆಹರೂ ಸ್ಮಾರಕ ಸಂಗ್ರಹಾಲಯದಲ್ಲಿ ಸಿಕ್ಕಿತು. ಆದಿವಾಸಿ ಕನ್ಯೆಯೊಬ್ಬಳ ಮುಗ್ಧತೆ ಮತ್ತು ನೆಹರೂ ಅವರ ಉತ್ಸಾಹವನ್ನು ತೋರಿಸುವ ಈ ಕಪ್ಪು ಬಿಳುಪು ಫೋಟೋ ಕಾಲನ ಮಹಿಮೆಯಿಂದಾಗಿ ಮಾಸಿದೆಯಾದರೂ, ಆ ಚಿತ್ರದಲ್ಲಿ ಕಂಡುಬರುವ ಅಂದಿನ ಹುರುಪು ಮಾಸಿಲ್ಲ.

ಮುಂದಾದ ವಿಶೇಷ ಬಹಳ ಜನರ ಅರಿವಿಗೆ ದಕ್ಕಿಲ್ಲ. ಸಮಾರಂಭದಲ್ಲಿ ನೆಹರೂ ಅವರಿಗೆ ಬುಧ್ನಿ, ಹಾರ ಹಾಕಿದ್ದರಿಂದ ಅವಳು ಸಂತಾಲರಲ್ಲದ ನೆಹರೂ ಅವರ ಪತ್ನಿಸಮಾನಳಾದಳೆಂದು ತಮ್ಮ ಸಂಪ್ರದಾಯದ ಪ್ರಕಾರ ನಿರ್ಧರಿಸಿದ ಕರ್ಬೋನಾ ಹಳ್ಳಿಯ ಸಂತಾಲ್ ಆದಿವಾಸಿ ಸಮುದಾಯ ಅವಳಿಗೆ ಬಹಿಷ್ಕಾರ ಹಾಕಿ ಅವಳನ್ನು ಊರಿಂದ ಹೊರಹಾಕಿತು. ಬದುಕುವುದೇ ಹೀಗೆ ದುಸ್ತರಗೊಂಡ ನಂತರ ಬುಧ್ನಿಗೆ ಆಸರೆ ದೊರೆತದ್ದು ಪಾಂಚೆತ್ ನಿವಾಸಿ ಸುಧೀರ್ ದತ್ತ ಅವರ ಮನೆಯಲ್ಲಿ. ಅವರಿಂದ ಒಂದು ಹೆಣ್ಣುಮಗುವನ್ನೂ ಕೂಡ ಬುಧ್ನಿ ಪಡೆದಳು. ಬಹಿಷ್ಕಾರದ ಜೊತೆಜೊತೆಯಾಗಿಯೇ ಹುಟ್ಟಿ ಆಜೀವ ಪರ್ಯಂತ ಅಜ್ಞಾತವಾಗಿ ಬದುಕಬೇಕಾಗಿದ್ದ

ದೌರ್ಭಾಗ್ಯ ಆ ಮಗುವಿನದಾಗಿತ್ತು. ೧೯೬೨ರಲ್ಲಿ ದಾಮೋದರ್ ಕಣಿವೆ ನಿಗಮದ ನೌಕರಿಯಿಂದ ಹೊರಹಾಕಲ್ಪಟ್ಟ ಬುಧ್ನಿ ಜೀವನ ಸಾಗಿಸಲು ಸಣ್ಣ ಪುಟ್ಟ ಕೂಲಿನಾಲಿ ಕೆಲಸಗಳ ಮೊರೆ ಹೋಗಬೇಕಾಯಿತು. ೧೯೮೦ರಲ್ಲಿ ದಿಲ್ಲಿಗೆ ಹೋದ ಬುಧ್ನಿ ಅಲ್ಲಿ ನೆಹರೂರವರ ಮೊಮ್ಮಗನಾದ ಅಂದಿನ ಪ್ರಧಾನಿ ರಾಜೀವ್‌ಗಾಂಧಿ ಅವರನ್ನು ಭೇಟಿ ಮಾಡಿ ತನಗೆ ದಾಮೋದರ್ ಕಣಿವೆ ನಿಗಮದಲ್ಲಿ ಮತ್ತೆ ನೌಕರಿ ಕೊಡಿಸಬೇಕೆಂಬ ಬೇಡಿಕೆಯನ್ನಿಟ್ಟಳಾದರೂ ಅದು ಫಲಕಾರಿಯಾಗಲಿಲ್ಲ.

ಬುಧ್ನಿ ಬಗೆಗಿನ ಕೊನೆಯ ತಂತು ಸಿಕ್ಕಿದ್ದು, www.ambedkar.org ಎಂಬ ಅಂತರ್ಜಾಲ ತಾಣದಲ್ಲಿ ಪ್ರಕಟಗೊಂಡ ವರದಿಯೊಂದರಲ್ಲಿ. 'ತನ್ನ ಸಮುದಾಯದಿಂದ ಬಹಿಷ್ಕೃತಗೊಂಡ ನೆಹರೂರ ಆದಿವಾಸಿ 'ಪತ್ನಿ' ಬಡತನದಿಂದ ಕಂಗಾಲು' ಎಂಬ ಶೀರ್ಷಿಕೆಯಡಿ ಪ್ರಕಟವಾದ ಈ ಲೇಖನದಲ್ಲಿ ಬುಧ್ನಿಯ ಜೀವನದ ವಿವರಗಳನ್ನು ಉಲ್ಲೇಖಿಸಲಾಗಿತ್ತು. ಅಲ್ಲಿ ತಿಳಿಸಲಾಗಿದ್ದ ಮಾಹಿತಿಯ ಪ್ರಕಾರ, ೫೮ ವರ್ಷದ ಬುಧ್ನಿ ತಾನು ಮತ್ತೆ ಕರ್ಬೋನ ಗ್ರಾಮಕ್ಕೆ ಹಿಂದಿರುಗುವ ಅವಕಾಶ ಸಿಕ್ಕರಷ್ಟೇ ಸಾಕು ಎಂಬ ಅಳಲನ್ನು ವ್ಯಕ್ತಪಡಿಸಿದ್ದಳು. ಇದನ್ನು ಓದಿದ ನನಗೆ ನಂಬಿಕೆಯೇ ಬರಲಿಲ್ಲ. ಬುಧ್ನಿಯನ್ನು ನೇರ ಭೇಟಿ ಮಾಡಿ, ಅವಳೊಡನೆ ಮಾತಾಡಿ ಸತ್ಯ ಅರಿಯುವ ಆಸೆ ಬಲವಾಯಿತು. ನಾನು ನೆಹರೂ ಸಂಗ್ರಹಾಲಯದಿಂದ ಪಡೆದಿದ್ದ ಫೋಟೋದಲ್ಲಿ ಕಂಡ ಬುಧ್ನಿಯ ಸ್ಪಷ್ಟ ಚಿತ್ರ ನನ್ನ ಕಣ್ಣಿಗೆ ಕಟ್ಟಿದಂತಿತ್ತು. ಆಕೆ ಧರಿಸಿದ್ದ ಒಡವೆಗಳು, ಆಕೆಯ ಆರೋಗ್ಯವಂತ ಕಡುಗಪ್ಪು ಕೈಯನ್ನಲಂಕರಿಸಿದ್ದ ಬೆಳ್ಳಿ ಬಳೆಗಳು ನನ್ನ ನೆನಪಲ್ಲಿ ಸ್ಥಿರಗೊಂಡಿತ್ತು. ಎಲ್ಲಕ್ಕಿಂತ ಮಿಗಿಲಾಗಿ, ಅಕೆಯ ಕಣ್ಣಲ್ಲಿ ಮಿಂಚುತ್ತಿದ್ದ, ಮುಖದಲ್ಲಿ ಹೊರಹೊಮ್ಮುತ್ತಿದ್ದ ಅಮಾಯಕ ಮುಗ್ಧತೆ ನನ್ನ ಮನಃಪಟಲದಲ್ಲಿ ಅಚ್ಚಳಿಯದೇ ನಿಂತಿತ್ತು. ಸುರ್‌ಜಿತ್ ಅವರ ಪ್ರವಾಸ ತಾಣಗಳನ್ನು ಕುರಿತ ಮಾಹಿತಿ ಸಂಗ್ರಹಣಾ ಕಾರ್ಯವನ್ನು ಬದಿಗಿಟ್ಟು ಬುಧ್ನಿಯ ಬಗ್ಗೆ ವಿವರಗಳನ್ನು ಕಲೆ ಹಾಕತೊಡಗಿದೆ.

ಪಾಂಚೇತ್ ಅಣೆಕಟ್ಟಿನ ಉದ್ಘಾಟನೆ ಅಂದಿನ ಕಾಲದ ವೃತ್ತಪತ್ರಿಕೆಗಳಲ್ಲಿ, ವಿಶೇಷ ಉತ್ಸಾಹದೊಂದಿಗೆ ವರದಿಯಾಗಿತ್ತು. 'ನ್ಯಾಷನಲ್ ಹೆರಾಲ್ಡ್' ಪತ್ರಿಕೆಯ ವರದಿ "ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವ ಭಾರತ; ಭಾರಿ ಅಣೆಕಟ್ಟುಗಳು ನಮ್ಮ ಧೃಡ ನಿರ್ಧಾರದ ಪ್ರತೀಕ – ನೆಹರೂ" ಎಂಬ ಶೀರ್ಷಿಕೆಯಡಿ ಪ್ರಕಟಗೊಂಡರೆ, 'ಸ್ಟೇಟ್ಸ್‌ಮನ್' ಪತ್ರಿಕೆ ಬುಧ್ನಿಯನ್ನೂ ಒಳಗೊಂಡು "ಡಿವಿಸಿಯ ಭಾರಿ ಅಣೆಕಟ್ಟಿನ ಉದ್ಘಾಟನೆ; ಪಾಂಚೇತ್‌ನಲ್ಲಿ ನಡೆದ ಸಮಾರಂಭದಲ್ಲಿ ಆದಿವಾಸಿ ಹೆಣ್ಣುಮಗಳೊಬ್ಬಳಿಂದ ಚಾಲನೆಗೊಂಡ ವಿದ್ಯುತ್ ಕೇಂದ್ರ" ಎಂಬ ಶೀರ್ಷಿಕೆ ಹೊಂದಿತ್ತು. ಅಂದಿನ ಸಮಾರಂಭದ ಬಗ್ಗೆ ಅತ್ಯುತ್ಸಾಹದಿಂದ ಉಸಿರು ಬಿಗಿಹಿಡಿದು ಬರೆದಂತಿರುವ ಈ ವರದಿಯ ಮಾದರಿ ನೋಡಿ: "ಉದ್ಘಾಟನಾ ಕಾರ್ಯವನ್ನು ಸಂತಾಲ ಕೂಲಿಗಾರ್ತಿ ಶ್ರೀಮತಿ ಮಾಝಿ (ಹೆಸರು ಬರೆಯುವಾಗ ಇರುವ ತಪ್ಪು ಮತ್ತು ಇನ್ನೂ ಮದುವೆಯಾಗದ ಆಕೆಯನ್ನು ಶ್ರೀಮತಿ ಎಂದು

ಸಂಭೋದಿಸುವಲ್ಲಿ ಕಾಣುವ ಉಪೇಕ್ಷೆಯನ್ನು ಗಮನಿಸಿ)ಯವರಿಂದ ನೆರವೇರಿಸಿದ ಮಾನ್ಯ ನೆಹರೂರವರು, ಪ್ರಾಜೆಕ್ಟ್ ಕೆಲಸಗಾರ್ತಿಯೊಬ್ಬರು ಈ ಕೇಂದ್ರವನ್ನು ಉದ್ಘಾಟಿಸುವುದೇ ಸರಿಯಾದ ಕ್ರಮ ಎಂದು ತಿಳಿಸಿದರು. ಇದರಿಂದಾಗಿ ವಿದ್ಯುತ್ ಕೇಂದ್ರವನ್ನು ಉದ್ಘಾಟಿಸಿದ ದೇಶದ ಪ್ರಥಮ ಕೂಲಿ ಹೆಂಗಸೆಂಬ ವಿಶೇಷ ಗೌರವ ಶ್ರೀಮತಿ ಮಾಝಿಯವರಿಗೆ ದೊರಕಿದೆ"

ಇದೇ ವರದಿಗಾರ ಮುಂದುವರೆದು, ೧೩೪ ಅಡಿ ಎತ್ತರದ ಆಣೆಕಟ್ಟನ್ನು, ಆ ಹೆಂಗಸು ಸಂತಾಲಿ ಭಾಷೆಯಲ್ಲಿ ಮಾತನಾಡಿ ರಾಷ್ಟ್ರಕ್ಕೆ ಸಮರ್ಪಿಸಿದಳು ಎಂದೂ ಬರೆದಿದ್ದ. ಕೇವಲ ೧೫ ವರ್ಷದ ಒಬ್ಬ ಆದಿವಾಸಿ ಬಾಲೆ ರಾಷ್ಟ್ರದ ಅಧಿಕೃತ ಭಾಷೆಯ ಸ್ಥಾನವನ್ನೂ ಪಡೆಯದ ಭಾಷೆಯೊಂದರಲ್ಲಿ ಮಾತಾಡಿ, ಅಣೆಕಟ್ಟನ್ನು ರಾಷ್ಟ್ರಕ್ಕೆ ಸಮರ್ಪಿಸಿದ ವಿಪರ್ಯಾಸ ವರದಿಗಾರನ ಗಮನಕ್ಕೇ ಬಂದಿರಲಿಲ್ಲ. (ಸಂತಾಲಿ ಭಾಷೆ ಅಧಿಕೃತ ಭಾಷೆಗಳ ಪಟ್ಟಿಯನ್ನು ಸೇರಿದ್ದು ೨೦೦೩ರಲ್ಲಿ.). ಅಷ್ಟೇಕೆ, "ರಾಷ್ಟ್ರಪತಿ ರಾಜೇಂದ್ರ ಪ್ರಸಾದರಿಂದ ದುರ್ಗಾಪುರ ಉಕ್ಕು ಕಾರ್ಖಾನೆಯ ಉದ್ಘಾಟನೆ, ಅಮೆರಿಕದ ರಾಷ್ಟ್ರಪತಿ ಐಸೆನ್ಹೋವರ್ ಅವರ ಐತಿಹಾಸಿಕ ಭಾರತ ಭೇಟಿ" ಇತ್ಯಾದಿ "ಮಹತ್ತ್ವಪೂರ್ಣ ಸಂಗತಿ"ಗಳನ್ನು ವರದಿ ಮಾಡುವುದರಲ್ಲಿ ನಿರತವಾಗಿದ್ದ ಪತ್ರಿಕೆಗಳಿಗೆ, ನೆಹರೂರವರ ಆಸೆಯ ಈಡೇರಿಕೆಯ ಒಂದು ಕ್ಷಣದ ಕ್ರಮ ಬುಧ್ನಿಯ ಜೀವನವನ್ನು ಶಾಶ್ವತವಾಗಿ ಹಾಳುಗೆಡವಿದ ಸಂಗತಿ ಯಃಕಶ್ಚಿತ್ ವಿಷಯವಾಗಿದ್ದು ಅದು ಅವುಗಳ ಗಮನಕ್ಕೆ ಎಂದೂ ಬರಲೇ ಇಲ್ಲ. ಇದಿಷ್ಟೇ ಸಾಲದೆಂಬಂತೆ "ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭಾರತಕ್ಕೆ ೪೯೦೦೦ ಎಂಜಿನಿಯರುಗಳ ಅವಶ್ಯಕತೆ", "೧೯೬೧ರ ವೇಳೆಗೆ ಉಕ್ಕು ಉತ್ಪಾದನೆಯಲ್ಲಿ ರಾಷ್ಟ್ರದ ಸ್ವಾವಲಂಬನೆಯ ಸಾಧನೆ", "ಭಾಕ್ರಾ ಅಣೆಕಟ್ಟು ಕಾರ್ಯದಲ್ಲಿ ಪ್ರಗತಿ", "ಆಲೂಗೆಡ್ಡೆ ಬೇಳೆಯುವ ಕ್ರಮದಲ್ಲಿ ವೈಜ್ಞಾನಿಕ ಪದ್ಧತಿಯ ಅಳವಡಿಕೆ", ಇತ್ಯಾದಿ ಇತ್ಯಾದಿ ಪ್ರಗತಿಶೀಲ ಭಾರತದ ಸಾಧನೆಯ ಶೀರ್ಷಿಕೆಗಳಿಂದ ಅಂದಿನ ಪತ್ರಿಕೆಗಳು ತುಂಬಿ ಹೋಗಿದ್ದವು. ಬುಧ್ನಿಗೆ ಎದುರಾದ ದುರಂತದ ಬಗ್ಗೆ ಒಂದು ಚಿಕ್ಕ ಸಾಲೂ ಎಲ್ಲೂ ಸಿಕ್ಕಲಿಲ್ಲ. ಡಿವಿಸಿ ಕಟ್ಟಿದ ಪಾಂಚೇತ್ ಆಣೆಕಟ್ಟಿನಲ್ಲಿ ಮುಳುಗಿಹೋದ, ಸಂತಾಲ ಗ್ರಾಮಗಳಂತೆ, ಐತಿಹಾಸಿಕ ದೇಗುಲಗಳಂತೆ ಬುಧ್ನಿಯ ದುರ್ದೈವ ಈ ಎಲ್ಲ ಪ್ರಗತಿಶೀಲ ಭಾರತದ ಕನಸಿನಲ್ಲಿ, ಕನಸುಗಳ ವರದಿಗಳಲ್ಲಿ ಮುಳುಗಿ ಹೋಗಿತ್ತು. ಜಾಗತಿಕ ಅಣೆಕಟ್ಟು ಆಯೋಗ(World Commission on Dams)ಕ್ಕಾಗಿ, ಹರ್ಷ ಮಂದೆರ್, ರವಿ ಹೇಮಾದ್ರಿ ಮತ್ತು ವಿಜಯಾ ನಾಗರಾಜ್ ಅವರು ನಡೆಸಿದ ಅಧ್ಯಯನದ ಫಲವಾಗಿ, ೧೯೯೯ ರಲ್ಲಿ ಪ್ರಕಟವಾದ 'ಭಾರತದ ಅಣೆಕಟ್ಟುಗಳು, ಅದರಿಂದಾಗಿ ನಿರ್ವಸಿತಗೊಂಡವರ ಬಗೆಗಿನ ಭಾರತೀಯ ನೀತಿ ಮತ್ತು ಕಾನೂನು' ಎಂಬ ಲೇಖನದ ಪ್ರಕಾರ ಪಾಂಚೇತ್ ಹಾಗೂ ಮೈಥಾನ್ ಅಣೆಕಟ್ಟಿನಿಂದಾಗಿ ನಿರ್ವಸಿತಗೊಂಡವರಲ್ಲಿ ಶೇ. ೫೪.೬೬ ಜನ ಆದಿವಾಸಿಗಳೆಂಬ ಅಂಶ ಬೆಳಕಿಗೆ ಬಂದಿದೆ. ಕುತೂಹಲಕಾರಿಯಾದ ಇನ್ನೊಂದು ಅಂಶವೆಂದರೆ

೧೯೬೦ರವರೆಗೂ ನಿರ್ವಸಿತ ಜನರ ಪಟ್ಟಿಗೆ ಭಾರತ ಇಭ್ಭಾಗವಾದಾಗ ಬಂದ ಜನರನ್ನು ಮಾತ್ರ ಸೇರಿಸಲಾಗುತ್ತಿತ್ತೇ ವಿನಹಾ ಅಣೆಕಟ್ಟುಗಳಿಂದಾಗಿ ಮನೆಮಠ ಕಳೆದುಕೊಂಡು ನಿರ್ಗತಿಕರಾದವರನ್ನು ಸೇರಿಸುತ್ತಿರಲಿಲ್ಲ.

ಪಾಂಚೇತ್ ಅಣೆಕಟ್ಟಿನ ಬಗ್ಗೆ ಮಾಹಿತಿ ನೀಡುವ ಅಂತರ್ಜಾಲ ತಾಣದಲ್ಲಿ ಸಿಕ್ಕುವ ಹಲವು ಕೊಂಡಿಗಳಲ್ಲಿ ಖ್ಯಾತ ರಾಜ್ಯನೈತಿಕ ಮನಃಶಾಸ್ತ್ರಜ್ಞ ಅಶೀಶ್ ನಂದಿಯವರು ಬರೆದಿರುವ ಆಧುನಿಕ ಭಾರತದ ಪರಿಸರವಾದಿಗಳ ಬಗೆಗಿನ ಲೇಖನವೂ ಒಂದು. ಆದರಲ್ಲಿ ಅಂದಿನ ಪರಿಸರವಾದಿ ಕಪಿಲ್ ಭಟ್ಟಾಚಾರ್ಜಿ ಅವರ ಹೆಸರಿನ ಉಲ್ಲೇಖವಿದೆ. ಆ ಕಾಲದಲ್ಲಿ ಬಹಳ ಜನಪ್ರಿಯವಾಗಿದ್ದ ಡಿವಿಸಿ ಪ್ರಾಜೆಕ್ಟ್ ಬಗ್ಗೆ ಪರಿಸರ ದೃಷ್ಟಿಕೋನದಿಂದ ಅಪಸ್ವರವೆತ್ತಿದ ಭಟ್ಟಾಚಾರ್ಜಿ ಅವರನ್ನು ಒಬ್ಬ ದೇಶದ್ರೋಹಿಯೆಂದು ಅಂದಿನ ಹಲವರು ಭಾವಿಸಿದ್ದೂ ಉಂಟಂತೆ! ಅಂತಹ ಕಪಿಲ್ ಭಟ್ಟಾಚಾರ್ಜಿ ಅವರ ಲೇಖನಗಳಲ್ಲೂ ಸಹ ಅಣೆಕಟ್ಟಿನಿಂದಾಗಿ ನಿರ್ವಸಿತರಾದ ಆದಿವಾಸಿಗಳ ಬಗ್ಗೆ ಸೊಲ್ಲೇ ಇಲ್ಲ. ತನ್ನ ಇಳಿ ವಯಸ್ಸಿನಲ್ಲಿ ಮಾನವ ಹಕ್ಕುಗಳ ಪ್ರತಿಪಾದಕರಾದ ಭಟ್ಟಾಚಾರ್ಜಿ ಅವರ ಲೇಖನಗಳಲ್ಲಿ ಕಾಣುವ ಈ ಕೊರತೆಗೆ ಬಹುಶಃ ಕೈಗಾರಿಕೀಕರಣ ಮತ್ತು ವಿಜ್ಞಾನ-ತಂತ್ರಜ್ಞಾನಾಧಾರಿತ ಪ್ರಗತಿಯ ಬಗ್ಗೆ ಭಟ್ಟಾಚಾರ್ಜಿಯವರಿಗಿದ್ದ ದೃಢ ನಂಬಿಕೆಯೇ ಕಾರಣವಿರಬಹುದು ಎಂಬುದು ಆಶೀಶ್ ನಂದಿಯವರ ಅಭಿಪ್ರಾಯ.

ಇದನ್ನು ಓದಿದ ನನಗೆ ನನ್ನ ಬಾಲ್ಯದ ನೆನಪುಗಳು ಮರುಕಳಿಸಿದವು. ೧೯೭೦ರಲ್ಲಿ ಜನಪ್ರಿಯವಾಗಿದ್ದ 'ಸಾಮಾನ್ಯ ಜ್ಞಾನ' ಅಥವಾ 'ಜನರಲ್ ನಾಲೆಜ್' ಎಂಬ ವಿಷಯ ವಿಶೇಷ ನೆನಪಿಗೆ ಬಂತು. ಎಲ್ಲಾ ಸಂದರ್ಶನ ಹಾಗೂ ಕೆಲಸದ ಪೂರ್ವಭಾವಿ ಲಿಖಿತ ಪರೀಕ್ಷೆಗಳಲ್ಲಿ ಈ ವಿಭಾಗದ ಪ್ರಶ್ನೆಗಳು ಕಡ್ಡಾಯವಾಗಿದ್ದವು. ಅವುಗಳನ್ನು ಉತ್ತರಿಸಲೆಂದು ನಾವುಗಳು, ರಸ್ತೆ ಬದಿಯಲ್ಲಿನ ಪುಸ್ತಕ ವ್ಯಾಪಾರಿಗಳ ಬಳಿ ದೊರೆಯುತ್ತಿದ್ದ, ಕೆಟ್ಟ ಕಾಗದದಲ್ಲಿ ಅಚ್ಚು ಹಾಕಿದ್ದ ಗೈಡುಗಳಿಂದ ವಿಷಯಗಳನ್ನು ಉರು ಹಚ್ಚಿದ್ದು ನೆನಪಾಯಿತು. ನಾವುಗಳು ಉತ್ಸಾಹದಿಂದ ಒದರುತ್ತಿದ್ದ ಪಟ್ಟಿಯಲ್ಲಿ ಹಲವು ಹೆಸರುಗಳು ನಮ್ಮ ನೆನಪಿನ ಭಾಗವಾಗುತ್ತಿದ್ದವು. ಉದಾಹರಣೆಗೆ - ಸಿಂಧ್ರಿ (ರಸಗೊಬ್ಬರ) ಪಿಂಪ್ರಿ (ಪೆನ್ಸಿಲಿನ್), ಚಿತ್ತರಂಜನ್(ರೈಲ್ವೆ ಇಂಜಿನ್), ಪೆರಂಬೂರ್ (ರೈಲ್ವೆ ಬೋಗಿ), ಭಾಕ್ರಾ ನಂಗಲ್, ಹಿರಾಕುಡ್, ದಾಮೋದರ್ ವ್ಯಾಲಿ, ಕೋಸಿ, ತುಂಗಭದ್ರಾ (ವಿವಿಧೋದ್ದೇಶ ಅಣೆಕಟ್ಟುಗಳು) ಅಂಕಲೇಶ್ವರ್ (ಪೆಟ್ರೋಲಿಯಮ್) ನರೋಡಾ (ಭಾರ ಜಲ) ತಾರಾಪುರ (ಅಣು ವಿದ್ಯುತ್ ಕೇಂದ್ರ), ಟ್ರಾಂಬೆ (ಆಣು ಸಂಶೋಧನೆ) ಇತ್ಯಾದಿ ಇತ್ಯಾದಿ. ಇದರ ಜೊತೆಗೆ ಭಾರತದ ಖನಿಜ ನಿಕ್ಷೇಪ ಸ್ಥಳಗಳನ್ನು ಸೂಚಿಸುವ ಚಿತ್ರ ವಿಚಿತ್ರ ಹೆಸರುಗಳು ಮತ್ತು ಭೂಪಟದಲ್ಲಿ ಇವುಗಳ ಸ್ಥಾನದ ಇನ್ನೊಂದು ಪಟ್ಟಿ- ಝರಿಯಾ (ಕಲ್ಲಿದ್ದಲು), ಹಜಾರಿಬಾಗ್ (ಅಭ್ರಕ), ಬೈಲದಿಲ್ಲ, ಗಡ್ಚಿರೋಲಿ (ಕಬ್ಬಿಣದ ಅದಿರು), ನೈವೇಲಿ (ಲಿಗ್ನೈಟ್) .... ಈ ಎಲ್ಲ ಸಂಗತಿಗಳನ್ನು ನಮ್ಮ ತಲೆಗೆ ತುಂಬುತ್ತಿದ್ದ, ಹಾಗೂ ಈ

ಸ್ಥಳಗಳನ್ನು ನೋಡಬೇಕೆಂದು ನಮ್ಮನ್ನು ಪ್ರೇರೇಪಿಸುತ್ತಿದ್ದ ಸುರ್‌ಜಿತ್ ಕೌರ್‌ರಂತಹ ಟೀಚರ್‌ಗಳೂ ನೆನಪಾದರು!!!.

ಮಾಡಲು ಬೇರೇನೂ ಅಮೂಲ್ಯ ಕೆಲಸವಿಲ್ಲದ ನಮ್ಮ ಬಾಲ್ಯ ಕಾಲದಲ್ಲಿ ನಮ್ಮ ತಲೆಗೆ ತುಂಬಿಕೊಂಡ ಈ ಹೆಸರುಗಳು ತನ್ನದೇ ಆದ ಒಂದು ನೆನಪಿನ ಚೌಕಟ್ಟನ್ನು ನಿರ್ಮಿಸಿ ಅದರಲ್ಲಿ ಸುಭದ್ರವಾಗಿ ನೆಲೆ ನಿಲ್ಲುತ್ತಿದ್ದವು. ಹಲವು ವರ್ಷಗಳ ನಂತರವೂ, ಈ ಪಟ್ಟಿಯಲ್ಲಿನ ಒಂದು ಹೆಸರು ಕಿವಿಗೆ ಬಿದ್ದರೆ ಸಾಕು, ಮಗ್ಗಿ ಹೇಳಿದಂತೆ ಉಳಿದವು ತಂತಾನೆ ಬಾಯಿಗೇ ನುಗ್ಗಿ ಬಂದುಬಿಡುತ್ತಿದ್ದವು; ಅಷ್ಟರ ಮಟ್ಟಿಗೆ ಅವು ನಮ್ಮ ತಲೆಯಲ್ಲಿ ಭದ್ರವಾಗಿ ನೆಲೆಯೂರಿದ್ದವು.

ಇವೆಲ್ಲ ನೆನಪುಗಳ ನಡುವೆ ಧುತ್ತನೆ ನನ್ನನ್ನು ಕಾಡಿದ್ದು ಒಂದು ಹೊಚ್ಚ ಹೊಸ ಹೊಳಹು: "ಇವೆಲ್ಲ ಜಾಗಗಳೂ ನಮಗೆ ಬೇಕಾಗುವ ಸಂಪನ್ಮೂಲಗಳ ಆಕರವಾಗಿ, ಮುಂದೆ ಮೂಡಲಿರುವ ಭವ್ಯ ಭಾರತದ ಕನಸಿನ ಕಚ್ಚಾಸಾಮಗ್ರಿಗಳಾಗಿ, ತಮ್ಮ ಇರವನ್ನು ಮೂಡಿಸಿದವೇ ಹೊರತು, ಬಯಕೆ ಭಯಗಳಿಂದ, ಆಸೆ ಅಳವುಗಳಿಂದ, ಕನಸು ಕಳವಳಗಳಿಂದ ಕೂಡಿದ, ಬುದ್ಧಿ-ಮನಸ್ಸು, ರಕ್ತ ಮಾಂಸಭರಿತ ನಮ್ಮಂತಹ ಮನುಷ್ಯರು ಇರುವ ತಾಣಗಳಾಗಿ ಗೋಚರಿಸಲೇ ಇಲ್ಲ. ಈ ಹೊಸ ಹೊಳಹು ನನ್ನನ್ನು ವಿಹ್ವಲಗೊಳಿಸಿದ್ದನ್ನು ನನ್ನ ಗೆಳತಿಯೊಬ್ಬಳ ಬಳಿ ಹಂಚಿಕೊಂಡಾಗ ಅವಳು ನನಗೆ ಸಮಾಜಶಾಸ್ತ್ರಜ್ಞ ಸತೀಶ್ ದೇಶಪಾಂಡೆಯವರ "ಸಮಕಾಲೀನ ಭಾರತ: ಒಂದು ಸಮಾಜಶಾಸ್ತ್ರೀಯ ನೋಟ"(ಪೆಂಗ್ವಿನ್ ೨೦೦೩) ಎಂಬ ಪುಸ್ತಕ ಓದುವಂತೆ ಸಲಹೆ ಇತ್ತಳು. ಆವಳ ಪ್ರಕಾರ ನನ್ನ ಕಳವಳದ ಹಿಂದಿನ ಗೃಹೀತಗಳನ್ನರಿಯಲು ಅದು ತಕ್ಕ ಪುಸ್ತಿಕೆ.

ಅವಳ ಅಂದಾಜು ಸರಿಯಿತ್ತು. ನೆಹರೂರವರ ದೃಷ್ಟಿಯಲ್ಲಿ ದೇಶವೆಂಬುದು ಪ್ರಮುಖವಾಗಿ ಒಂದು ಆರ್ಥಿಕ ಚಟುವಟಿಕೆಗಳ ಆಡುಂಬೊಲವಾಗಿತ್ತೆಂಬುದನ್ನು ದೇಶಪಾಂಡೆಯವರು 'ಒಂದು ಕಲ್ಪಿತ ಅರ್ಥವ್ಯವಸ್ಥೆಯಾಗಿ ರಾಷ್ಟ್ರದ ಪರಿಕಲ್ಪನೆ.' ಎಂಬ ತಮ್ಮ ಪ್ರಬಂಧದಲ್ಲಿ ನಿರೂಪಿಸಿದ್ದರು. ಶಾಲೆಗಳ ಹಾಗೂ ಮಾಧ್ಯಮಗಳ ಮೂಲಕ ಪ್ರಚುರಗೊಂಡ ಈ ಪರಿಕಲ್ಪನೆಯಿಂದಾಗಿ ದೇಶವೆಂದರೆ ಆರ್ಥಿಕ ಸಂಬಂಧಗಳಿಂದ ರೂಪುಗೊಂಡ ಉತ್ಪಾದನಾವಕಾಶಗಳ ಕ್ಷೇತ್ರ ಎಂಬುದು ಅಂದಿನ ವಿದ್ಯಾವಂತರೆಲ್ಲರ ನಂಬಿಕೆಯಾಗಿಬಿಟ್ಟಿತ್ತು. ಹೀಗಾಗಿ ಪ್ರಗತಿಯೆಂದರೆ ದೇಶದ ಎಲ್ಲ ಸಂಪನ್ಮೂಲಗಳನ್ನು ಕಚ್ಚಾ ಸಾಮಗ್ರಿಯಾಗಿ ಬಳಸಿ ಯೋಜನೆಗಳ ಮೂಲಕ ಸಾಧಿಸಬೇಕಾದ ಗುರಿಗಳು ಎಂಬ ಪ್ರಚ್ಛನ್ನ ಪರಿಕಲ್ಪನೆ ಸ್ಫುಟವಾಗಿ ನನಗೆ ಕಾಣತೊಡಗಿತು.

ಇದೇಕೆ ಹೀಗೆ ಎಂಬುದಕ್ಕೂ ದೇಶಪಾಂಡೆಯವರಲ್ಲಿ ಉತ್ತರವಿತ್ತು. ಅವರ ಪ್ರಕಾರ – ಅರ್ಥವ್ಯವಸ್ಥೆಯನ್ನೇ ಅಡಿಪಾಯವಾಗಿ ಬಳಸಿ ಕಟ್ಟಿದ ರಾಷ್ಟ್ರ, ಕೇಂದ್ರೀಕೃತ ಸಮುದಾಯವಾಗಿ ರೂಪುಗೊಂಡ ರಾಷ್ಟ್ರವಾಗುತ್ತದೆಂಬ ಪರಿಕಲ್ಪನೆ ನಮ್ಮ ಮಾಜಿ

ಪ್ರಧಾನಿ ನೆಹರೂರವರು ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ನೀಡಿದ ವಿಶಿಷ್ಟ ವೈಯುಕ್ತಿಕ ಕೊಡುಗೆ. ಈ ಪರಿಕಲ್ಪನೆಯೇ ಜಾತಿ, ಧರ್ಮ, ಭಾಷೆ, ಸಂಸ್ಕೃತಿ, ಇತ್ಯಾದಿ ವಿಭಿನ್ನ ಸೆಳೆತಗಳು ಮೂಡಿಸುವ ವಿಕೇಂದ್ರೀಕರಣದ ಒತ್ತಡವನ್ನು ದಮನಗೊಳಿಸಿ ಕೇಂದ್ರೀಕೃತ ಏಕರೂಪಿ ರಾಷ್ಟ್ರವನ್ನು ಸ್ಥಾಪಿಸುವ ಬ್ರಹ್ಮಾಸ್ತ್ರವಾದದ್ದು.

ಹುಡುಗರಾಗಿದ್ದಾಗ 'ಪ್ರಗತಿ ಎಂಬ ಈ ಸಿದ್ಧ ಪರಿಕಲ್ಪನೆ ನಮಗೆ ಏಕೆ ಅಷ್ಟು ರೋಚಕವಾಗಿ ಕಂಡಿತ್ತೆಂಬ ನನ್ನ ಸಮಸ್ಯೆಗೂ ದೇಶಪಾಂಡೆಯವರ ಬಳಿ ಉತ್ತರವಿತ್ತು. ಪ್ರಗತಿಯ ಗುರಿಸಾಧನೆಗೆ ಬಳಕೆಯಾದ ಎರಡು ಪರಿಕರಗಳಲ್ಲಿ (ಒಂದು ತಂತ್ರಜ್ಞಾನವಾದರೆ. ಇನ್ನೊಂದು ಈ ತಂತ್ರಜ್ಞಾನವನ್ನು ಎಲ್ಲಿ ಹೇಗೆ ಬಳಸಬೇಕೆಂಬುದನ್ನು ನಿರ್ಧರಿಸುವ ಯೋಜನೆಗಳು) ಒಂದಾದ ಯೋಜನಾಕ್ರಮದ ಹೃದಯದಲ್ಲೇ ಅಡಗಿರುವ ಮೂಲದೋಷ. ಅಂಕಿಅಂಶಗಳನ್ನು ಜೊತೆ ನಮ್ಮ ತರ್ಕ ಕ್ರಮವನ್ನು ಬಳಸಿ ಸಿದ್ಧಗೊಳ್ಳುವ ಯೋಜನಾಕ್ರಮದಲ್ಲಿ ಮಾನವಿಕ ಅಂಶಗಳ ಸ್ಥಾನ ಕಟ್ಟ ಕಡೆಯದು; ಇಲ್ಲಿ ಗುರಿ ಹಾಗೂ ಕ್ರಮಗಳೆರಡೂ ಮಾನವೀಯ ಭಾವನೆಗಳ ಅಂಶಗಳನ್ನು ಬದಿಗಿಡುತ್ತವೆ. ಯೋಜನೆಯ ಅಂತಿಮ ಫಲಾನುಭವಿಯಾಗಿ ಮಾತ್ರ ಮನುಷ್ಯನಿಗೆ ಅಲ್ಲಿ ಸ್ಥಾನ. ಇಷ್ಟಿದ್ದರೂ ಇಂತಹ ಕ್ರಮಗಳು ಅತ್ಯಂತ ಮಾನವೀಯ ಮುಖವಾಡಗಳನ್ನು ತಂತಾನೇ ಗಳಿಸಿಕೊಡುಬಿಡುತ್ತವೆ. ಇದರಿಂದಾಗಿ ಇವುಗಳ ಸಫಲತೆ ಇಡೀ ಸಮುದಾಯಕ್ಕೆ ವರದಂತೆ ಗೋಚರಿಸಿ, ಇವುಗಳು ಅಧುನಿಕ ದೇವತೆಗಳ ಸ್ಥಾನ ಪಡೆದುಬಿಡುತ್ತವೆ. ಹೀಗಿರುವುದರಿಂದ ತಾನೆ, ಮಾನ್ಯ ನೆಹರೂಗೆ ಭಕ್ರಾ ನಂಗಲ್ ಬಳಿ ನಿಂತು "ಇದಕ್ಕಿಂತ ಪವಿತ್ರವಾದ ಸ್ಥಳ ಭಾರತದಲ್ಲಿ ಇರಲು ಸಾಧ್ಯವೇ!" ಎಂದು ಉದ್ಗರಿಸಲು, ಹಾಗೂ ಆ ಉದ್ಗಾರವನ್ನು ಕೇಳಿ ಆಧುನಿಕರು ಪುಳಕಿತರಾಗಲು ಸಾಧ್ಯವಾದದ್ದು! ನಮ್ಮ ರಾಷ್ಟ್ರ ಹಾಗೂ ಅದರ ಪ್ರಗತಿಯ ಪರಿಕಲ್ಪನೆ ಭಾರಿ ಕೈಗಾರಿಕೆಗಳ, ಅಣೆಕಟ್ಟುಗಳ ಭಾರದಡಿ ಸಿಕ್ಕಿ ನಲುಗಿಹೋಗಿತ್ತು. ಅಷ್ಟೇಕೆ; ೧೯೫೪ರ ಡಿಸೆಂಬರ್ ೨೮ರಂದು ಖರಗ್ಪುರ ಐಐಟಿಯಲ್ಲಿ ನಡೆದ ಘಟಿಕೋತ್ಸವದಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಭಾಷಣವನ್ನು ಸ್ಟೇಟ್ಸ್‌ಮನ್ ಪತ್ರಿಕೆ ಮಾಡಿದ ವರದಿಯ "ಜನರ (ಮಾನವ) ಹಕ್ಕುಗಳ ಬಗ್ಗೆ ಅತಿ ಒತ್ತು ಕೊಡುವುದು ಖಂಡನೀಯ, ಬದಲಿಗೆ ನಮ್ಮ ಕರ್ತವ್ಯದ ಬಗ್ಗೆ ಗಮನಹರಿಸಿ: ರಾಷ್ಟ್ರಪತಿಯವರ ಕರೆ" ಎಂಬ ಶೀರ್ಷಿಕೆ ನಮ್ಮ ಪ್ರಗತಿ ಸಾಧನೆಯ ಗುರಿ ಮತ್ತು ಕ್ರಮದ ಹಿಂದಿನ ನಂಬಿಕೆಗಳನ್ನು ಎತ್ತಿ ತೋರಿಸುತ್ತದೆ. (೧೯೯೯ರಲ್ಲಿ ಯೋಜನಾ ಆಯೋಗದ ಕಾರ್ಯದರ್ಶಿಯಗಿದ್ದ ಎನ್. ಸಿ. ಸಕ್ಸೇನಾ ಅವರ ಪ್ರಕಾರ ನಮ್ಮ ೫೦ ವರ್ಷಗಳ ಭಾರಿ ಯೋಜನೆಗಳ ಫಲವಾಗಿ ಮನೆಮಠ ಕಳೆದುಕೊಂಡು ನಿರಾಶ್ರಿತರಾದವರ ಸಂಖ್ಯೆ ಸರಿಸುಮಾರು ೫ ಕೋಟಿ. (ನೋಡಿ: Dams, Displacement, Policy and Law in India', 1999 by N.C.Saxena)

ಈ ನಮ್ಮ 'ಪ್ರಗತಿಯ ಪ್ರತೀಕ'ಗಳನ್ನು ಜನ ಸಾಮಾನ್ಯರು ಬೆರಗಿನಿಂದ, ಮೆಚ್ಚುಗೆಯಿಂದ ನೋಡುವಂತೆ ಪ್ರಚೋದಿಸಲಾಯಿತೇ ವಿನಹಾ, ಅವುಗಳ ಬಗ್ಗೆ ನೇರ ಮತ್ತು ನಿರ್ವಿಕಾರವಾದ ಗಮನ ಹರಿಸಲು ಅಸಾಧ್ಯವಾದಂತಹ ವಾತಾವರಣವೊಂದು ಸೃಷ್ಟಿಯಾಗಿತ್ತು. ಸುರ್‌ಜಿತ್ ಅವರ ಉತ್ಸಾಹ, ಬುಧ್ನಿಯ ಹುರುಪು ಹಾಗೂ 'ಜನರಲ್ ನಾಲೆಜ್' ಬಗೆಗಿನ ನನ್ನ ಭಕ್ತಿ, ಇವೆಲ್ಲ ಸಾಧ್ಯವಾದದ್ದು ಸ್ವತಂತ್ರ ಭಾರತದ ಅಧ್ವರ್ಯುಗಳು ನಿರ್ಮಾಣ ಮಾಡಿದ ಇಂತಹ ವಾತಾವರಣದಿಂದಾಗಿಯೇ!

ಚಾರಿತ್ರಿಕ ಸಂಧಿಕಾಲವೊಂದು ಒಬ್ಬ ಶಿಕ್ಷಕಿಯನ್ನೂ ಮತ್ತು ಒಬ್ಬ ಸಂತಾಲ ಕೂಲಿ ಕೆಲಸದವಳನ್ನೂ ಒಂದೆಡೆ ಒಗ್ಗೂಡಿಸಿದೆ; ಅಂದಿನ ಭಾರತದ ಒಟ್ಟಾರೆ ಸಮಾಜದ ಎರಡು ತುದಿಯಲ್ಲಿರುವ ಇವರಿಬ್ಬರೂ ನೆಹರೂರವರ ಕನಸಿನಲ್ಲಿ ಸಿಕ್ಕಿಬಿದ್ದಿದ್ದಾರೆ. ದೇಶಪಾಂಡೆಯವರು ಹೇಳುವಂತೆ, ತನ್ನ ಪರಂಪರಾಗತ ನೆನಪುಗಳನ್ನು ಧಿಕ್ಕರಿಸಿ ದೂರತಳ್ಳಿ, ಆಧುನಿಕ ಅರ್ಥವ್ಯವಸ್ಥೆ ಹಾಗೂ ಚಿಂತನೆಯ ಅಡಿಪಾಯದ ಮೇಲೆ ಕಟ್ಟಿರುವ ನೆಹರೂರವರ ಭಾರತದ ಕಲ್ಪನೆಯಲ್ಲಿ ಬುಧ್ನಿಯಂತಹ ಅತಿ ಸಾಮಾನ್ಯರ ವಾಸ್ತವ ಪ್ರಪಂಚದ ಸೋಂಕೂ ಇರಲಿಲ್ಲ. ಅಂದಿನ ಸಮಾಜದ ಅಧ್ವರ್ಯುಗಳಿಗಾಗಲೀ, ಸುರ್‌ಜಿತ್ ಕೌರ್ ಅವರಿಗಾಗಲೀ, ನನಗಾಗಲೀ ಬುಧ್ನಿಯ ಹಾಗೂ ಅವಳಂತಹವರ ಇರವಿನ ಅರಿವೇ ಇರಲಿಲ್ಲ. ಸುರ್‌ಜಿತ್ ಕೌರ್ ಅವರಿಂದ ಪ್ರೇರಿತಳಾಗಿ ೫೦ ವರ್ಷಗಳ 'ಪ್ರಗತಿ ಸಾಧನೆ'ಯ ಮಾಹಿತಿ ಸಂಗ್ರಹ ಕಾರ್ಯಕ್ಕೆ ಹೊರಟದ್ದು ಒಂದು ರೀತಿ ಒಳ್ಳೆಯದೇ ಆಯಿತು. 'ಪ್ರಗತಿ ಸಾಧನೆಯೇ ಒಂದು ಮಹಾನ್ 'ಪುರುಷಾರ್ಥ'ವೆಂದು ಬಗೆದು ಈ ಪಥದಲ್ಲಿ ಸಾಗಿದ ಸುರ್‌ಜಿತ್ ಕೌರ್ ಹಾಗೂ ನನ್ನಂಥಹವರಿಗೆ, ಈ ಎಲ್ಲ ಸಂಭ್ರಮಗಳಿಗೆ ಹೊರತಾಗಿ, ಹೆದ್ದಾರಿ ಬದಿ ಬೇರು ಸಮೇತ ಕಿತ್ತು ಬಿಸುಟ ಗಿಡಗಳಂತೆ ಗಮನಕ್ಕೆ ಬಾರದೇ ಉಳಿದು ಬದುಕಿದ ಭುಧ್ನಿಯಂತಹ ಹುಲು ಮಾನವರ ಬಗ್ಗೆ ಅರಿವು ಹಾಗೂ ಸಹಾನುಭೂತಿ ಮೂಡುವಂತಾದದ್ದು ಒಳ್ಳೆಯದೇ.

ನೆಹರೂ ಕಾಲದ ಕನಸುಗಳು ಇಂದು ಮಾಸಿವೆಯಾದರೂ ದೇಶದ ಭಾಗಗಳನ್ನು ಸಂಪನ್ಮೂಲ ಭರಿತ ಪ್ರದೇಶಗಳೆಂದು ಗುರುತಿಸುವ ಚಾಳಿ ಇನ್ನೂ ಹಾಗೇ ಉಳಿದುಬಿಟ್ಟಿದೆ. ಉದಾಹರಣೆಗೆ, ಇತ್ತೀಚೆಗೆ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಛತ್ತೀಸ್‌ಗಡ್ ಪ್ರದರ್ಶಿಸಿದ್ದ ಸ್ತಬ್ಧ ಚಿತ್ರದಲ್ಲಿ ಮೋಹಕ ಕೊತ್ಮುಸಾರ್ ಗುಹೆಗಳಲ್ಲಿರುವ ಹೇರಳ ಸುಣ್ಣಕಲ್ಲಿನ ಚಿತ್ರಣವಿತ್ತೇ ಹೊರತು ಅಲ್ಲಿನ ಬಸ್ತರ್ ಆದಿವಾಸಿಗಳ ಸುಳುಹೂ ಇರಲಿಲ್ಲ. ಆರ್ಥಿಕಾಭಿವೃದ್ಧಿ ಹಾಗೂ ಖಾಸಗಿ ಉದ್ಯಮಶೀಲತೆಯ ಮೋಡಿಗೊಳಗಾಗಿರುವ ಇಂದಿನ ಜಾಗತೀಕರಣಗೊಂಡ ಪ್ರಪಂಚದಲ್ಲಿ ಈ ಚಾಳಿ ಇನ್ನೂ ಹೆಚ್ಚು ಬಲಗೊಳ್ಳುತ್ತಿದೆ.

ದೇಶದ ಪೌರತ್ವದ ಬಗೆಗಿನ ತಿಳುವಳಿಕೆಯ ಬದಲು ಗ್ರಾಹಕತ್ವದ ಪರಿಚಯವನ್ನು ಮಾಡಿಕೊಡುತ್ತಿರುವ ಶಿಕ್ಷಣ ಕ್ರಮದಿಂದಾಗಿ ಜನರಿಗೆ ದೇಶದ ನೆಲ-ಜಲ ಆಷ್ಟೇ ಏಕೆ, ಸಹಪೌರರೂ ಸಹ ಮಾರಾಟದ ಸರಕಾಗಿ, ಲಾಭ ಗಳಿಸಲು ಉಪಯುಕ್ತವಾದ ಕಚ್ಚಾ

ಸಾಮಗ್ರಿಯಾಗಿ ಕಾಣಿಸಿದರೆ ಆಶ್ಚರ್ಯವೇನಿಲ್ಲ. ಆದರೆ ಒಂದು ಮುಖ್ಯ ಬದಲಾವಣೆಯೂ ಈ ವಿದ್ಯಮಾನದಲ್ಲೇ ಅಡಗಿರುವುದನ್ನು ನಾವು ಗಮನಿಸಬೇಕಾಗಿದೆ. ದೇಶದ ವಿಸ್ತಾರವನ್ನು ಕಚ್ಚಾ ಸಾಮಗ್ರಿಯಾಗಿ ಕಾಣುವ ಚಾಳಿ ಹೆಚ್ಚಿದಷ್ಟೂ ಅಲ್ಲಿನ ಜನ ಸಮುದಾಯ ಹಾಗೂ ಅವರ ಸಂಸ್ಕೃತಿಗಳು ಈ ನೆಹರೂ ಕನಸಿನ ಪ್ರಗತಿಗೆ ಅಡ್ಡಗಾಲು ಹಾಕುವುದೂ ಹೆಚ್ಚಾಗಿದೆ. ಕಚ್ಚಾ ಸಾಮಗ್ರಿಯ ದೃಶ್ಯದ ಜೊತೆಜೊತೆಯಲ್ಲಿಯೇ ಇದರ ಸೂರೆಗೆ ಎಲ್ಲೆಡೆಯಲ್ಲಿಯೂ ಜನ ಸಾಮಾನ್ಯರು ಸೆಡ್ಡು ಹೊಡೆದು ನಿಲ್ಲುತ್ತಿರುವುದು ಢಾಳಾಗಿ ಕಾಣಹತ್ತಿದೆ. ಮುಂಚಿನಷ್ಟೇ ಸರಳವಾಗಿ ಬಿಡಿಸಿಕೊಳ್ಳಲಾಗದಂತಹ ತೊಡಕುಗಳನ್ನು ಅವರು ಒಡ್ಡುತ್ತಿದ್ದಾರೆ. ಬಾಕ್ಸೈಟ್ ಅದಿರಿನ ಕಣಜದಂತೆ ಕಾಣುವ ಬೆಟ್ಟದಲ್ಲೇ ಆದಿವಾಸಿಗಳ ದೈವಮೂಲಗಳಷ್ಟೇ ಅಲ್ಲ, ಅಲ್ಲಿರುವ ಔಷಧೀಯಯ ಸಸ್ಯ ಸಂಪತ್ತು ಹಾಗೂ ಅದರ ಬಗೆಗೆ ಅಲ್ಲಿನ ಮೂಲ ನಿವಾಸಿಗಳಿಗಿರುವ ಅಮೂಲ್ಯ ಜ್ಞಾನ ಕೂಡ ನಮ್ಮ ಧಾವಂತಕ್ಕೆ ಕಡಿವಾಣ ಹಾಕುತ್ತಿವೆ. ತಾಳ್ಮೆಯ ಪಾಠವನ್ನು ನಮಗೆ ಕಲಿಸುತ್ತಿವೆ. ಜನ ಸಮುದಾಯ, ತಾನು ಇದ್ದೆಡೆಯೆಲ್ಲಾ ತಮ್ಮ ತಮ್ಮ ಅನುಭವವೆಂಬ ವೃಕ್ಷದ ಬೇರನ್ನು ಅಲ್ಲಿನ ನೆಲದಲ್ಲಿ ಊರಿ, ಹರಡಿ ಅಲ್ಲಿನ ಜಲ-ಹವೆಯೊಂದಿಗೆ ಅದನ್ನು ಬೆಸೆದಿರುತ್ತದೆ. ಪರಿಸರ ಹಾಗೂ ಜನ ಸಮುದಾಯದ ನಡುವೆ ಇರುವ ಈ ಸಾವಯವ ಸಂಬಂಧವನ್ನು ಮರೆತು ಮುಂದುವರೆಯುವುದು ಅಸಾಧ್ಯವಷ್ಟೇ ಅಲ್ಲ, ಅಸಾಧು ಕೂಡ. ಇದನ್ನು ನಾವು ಪರಿಗಣನೆಗೆ ತೆಗೆದುಕೊಳ್ಳಲೇಬೇಕಾದ ಅನಿವಾರ್ಯತೆ ಇಂದು ಸೃಷ್ಟಿಯಾಗಿದೆ ಎಂಬುದು ಬುಧ್ನಿಯ ಕಥಾನಕದಿಂದ ನಾನು ಪಡೆದ ತಿಳುವಳಿಕೆ.

ಇಂತೆಲ್ಲಾ ನಾನು ಬುಧ್ನಿಯ ಬಗ್ಗೆ ಚಿಂತನೆ ನಡೆಸುತ್ತಿದ್ದಾಗಲೇ, ಕೊನೆವರೆಗೂ ದೈನೇಸಿ ಬದುಕನ್ನೇ ನಡೆಸಿದ ಬುಧ್ನಿ ಕಳೆದ ವರ್ಷ ತನ್ನ ೭೦ನೆಯ ವಯಸ್ಸಿನ ಆಸುಪಾಸಿನಲ್ಲಿ ಕೊನೆಯುಸಿರೆಳೆದಳೆಂಬ ಸುದ್ದಿ ನನ್ನ ರಾಂಚಿಯ ಮಿತ್ರರೊಬ್ಬರಿಂದ ದಕ್ಕಿತು.

ಬುಧ್ನಿ ಉದ್ಘಾಟಿಸಿದ ಪಾಂಚೇತ್ ಅಣೆಕಟ್ಟು ಸಹ ತನ್ನದೇ ಆದ ವಯೋಸಹಜ ಮುದಿತನವನ್ನು ಕಂಡಿದೆ. ಆಣೆಕಟ್ಟಿನ ಬಗ್ಗೆ ಮಾಹಿತಿ ಕಲೆಹಾಕುವ ಕಾರ್ಯದಲ್ಲಿ ಮುಳುಗಿದ್ದ ನನಗೆ ಬೂಲೂ ಇಮಾಮ್‌ರವರು The Indian National Trust for Art and Cultural Heritage (Hazaribagh chapter)ಗಾಗಿ ೨೦೦೬-೦೭ರಲ್ಲಿ ಅಂತಾರಾಷ್ಟ್ರೀಯ ಸ್ಮಾರಕಗಳು ಹಾಗೂ ನಿವೇಶನಗಳ ಬಗ್ಗೆ ತಯಾರಿಸಿದ ವರದಿಯೂ ಕಣ್ಣಿಗೆ ಬಿತ್ತು. ಪಾಂಚೇತ್ ಅಣೆಕಟ್ಟಿನಲ್ಲಿ ತುಂಬಿದ ಹೂಳಿನಿಂದಾಗಿ ನೀರಿನ ಸಂಗ್ರಹ ಕಡಿಮೆಯಾಗಿ, ಅಣೆಕಟ್ಟಿನ ನೀರಲ್ಲಿ ಮುಳುಗಿಹೋಗಿದ್ದ ತೇಲ್ಕುಪಿ ದೇವಸ್ಥಾನ ಹೇಗೆ ಮತ್ತೆ ಮೇಲೆದ್ದು ಕಾಣತೊಡಗಿದೆ ಎಂಬುದನ್ನು ಇಮಾಂರವರು ತಮ್ಮ ವರದಿಯಲ್ಲಿ ವಿವರಿಸಿದ್ದರು.

ಸುರ್‌ಜಿತ್ ಕೌರ್ ಅವರ ಕೋರಿಕೆಯಿಂದಾಗಿ ಶುರುವಾದ ನನ್ನ ಪಯಣ, ಬುಧ್ನಿಯ ದುರಂತದೊಂದಿಗೆ ಮುಂದುವರೆದು, ಮತ್ತೆ ನೀರಿನಿಂದ ಮೇಲೆದ್ದಿರುವ, ಈ ದೇಶದ ಸಾಂಸ್ಕೃತಿಕ ಪ್ರತೀಕವಾದ ದೇಗುಲದವರೆಗೆ ಸಾಗಿದ್ದು, ಈ ಪಯಣದಲ್ಲಿ ಕಂಡು ಪರಿಭಾವಿಸಿದ ಚಿತ್ರಗಳೆಲ್ಲವೂ ನನ್ನ ಮನಸ್ಸಿನಲ್ಲಿ ಮತ್ತೆ ಮತ್ತೆ ಪರಿಭ್ರಮಿಸುತ್ತಿವೆ. ಇವು ನಮ್ಮ ಇಡೀ ಪ್ರಸಕ್ತ ಸನ್ನಿವೇಶಕ್ಕೆ ಹೊಸ 'ಸಾಮಾನ್ಯ ಜ್ಞಾನ' (ಜನರಲ್ ನಾಲೆಜ್)ದ ಒಂದು ದೊಡ್ಡ ಪ್ರತೀಕವಾಗಿ, ನಮ್ಮ ಇಂದಿನ ಹಾಗೂ ಭವಿತವ್ಯದ ಕಡೆಗೆ ತೋರುಬೆರಳೆನಿಸುವ ರೂಪಕಗಳಾಗಿ, ಇಲ್ಲಿನ ನೆಲ ಹಾಗು ಅಲ್ಲಿ ನೆಲೆ ಕಂಡುಕೊಂಡ ಜನಕ್ಕೆ ನಾವು ಈವರೆಗೆ ತೋರಿದ ಅನಾದರದ ಬಗೆಗಿನ ಎಚ್ಚರಿಕೆ ಘಂಟೆಯಾಗಿ, ನಮ್ಮ ಹಮ್ಮನ್ನು ಅಣಕಿಸುತ್ತಾ, ನಮ್ರತೆ, ವಿನಯದ ಪಾಠ ಹೇಳುವ ಗುರುಸದೃಶವಾಗಿ ಕಾಣುತ್ತಿವೆ.

ಈ ನನ್ನ ಲೇಖನ ಸುರ್‌ಜಿತ್ ಕೌರ್ ಅವರನ್ನು ಯಾವ ರೀತಿ ತಟ್ಟುತ್ತದೆ ಎಂಬುದು ನನ್ನ ಕುತೂಹಲ. ಅವರು ವಹಿಸಿದ ಕಾರ್ಯವನ್ನು ಇನ್ನೂ ಮುಗಿಸದೆ ಕುಳಿತಿರುವ ನನಗೆ ಅವರನ್ನು ಮುಖತಃ ಭೇಟಿ ಮಾಡುವಷ್ಟು ಧೈರ್ಯವಿಲ್ಲ. ಆದರೂ ನಾನು ಸಂಗ್ರಹಿಸಿದ ಮಾಹಿತಿಯನ್ನು ಗಮನಿಸಿದ ಅವರು ಮತ್ತೊಮ್ಮೆ ಆ ಹಳೆಯ ಸ್ಥಳಗಳ ಪ್ರವಾಸ ಕೈಗೊಳ್ಳುವ ಮನಸ್ಸು ಮಾಡಿಯೇ ಮಾಡುತ್ತಾರೆಂಬ ನಂಬಿಕೆ ನನ್ನದು. ಹಾಗೆ ಅವರು ಹೊರಟಾಗ, ನಾನಂತೂ ಮರೆಯದೆ ಅವರ ಜೊತೆ ಹೊರಡುತ್ತೇನೆ ಎಂಬುದಂತೂ ಖಂಡಿತಾ ನಿಜ!

ನೆಹರೂರವರ 'ಆಧುನಿಕ ಭಾರತದ ದೇವಾಲಯ'ಗಳನ್ನು ಉದ್ಘಾಟಿಸಿ ಅವರ ಕನಸಿನಲ್ಲಿ ಸಿಕ್ಕಿ ನರಳಿದ ಸಂತಾಲ ಹೆಣ್ಣು ನಮ್ಮ ಭಾರತದ ರಾಷ್ಟ್ರೀಯ ಚರಿತ್ರೆಯ ಪುಟಗಳಲ್ಲಿ ಸ್ಥಾಪಿತಗೊಳ್ಳಲಿ; ನಮ್ಮೆಲ್ಲರ ಸಾಮುದಾಯಿಕ ನೆನೆಪಿನಲ್ಲಿ ಆಕೆ ಭದ್ರವಾಗಿ ಉಳಿದು, ಇಲ್ಲಿನ ಮಣ್ಣನ್ನು, ಮಣ್ಣಿನ ಮಕ್ಕಳಿಂದ ಬೇರೆಯಾಗಿಸಿಯೇ ಪರಿಭಾವಿಸುವ ಚಾಳಿಯಿಂದಾಗುವ ಘನಘೋರ ದುರಂತಗಳನ್ನು ನಮಗೆ ಸರ್ವದಾ ನೆನೆಪಿಸುತ್ತಿರಲಿ.)

('ದ ಹಿಂದೂ' ವೃತ್ತಪತ್ರಿಕೆಯ ಜೂನ್ ೨, ೨೦೧೨ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನ – Recovering Budhni Mejhan from the the silted landscape of modern India–ದ ಕನ್ನಡಾನುವಾದ)

ಸೆಪ್ಟಂಬರ್, ೨೦೧೨

‘ರಾಷ್ಟ್ರ! ಹಾಗೆಂದರೇನು?’

ಪ್ರಿಯ ಓದುಗರೇ,

ನಮ್ಮ ಶಾಸಕಾಂಗ ಮತ್ತು ಕಾರ್ಯಾಂಗಗಳು ಚುನಾವಣೆ, ಪ್ರತಿಭಟನೆ, ಚಳುವಳಿ ಮುಂತಾದ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳ ಮೂಲಕ ಸರಿಪಡಿಸಲಾಗದಷ್ಟು ಭ್ರಷ್ಟ ಮತ್ತು ದುಷ್ಟಗೊಂಡಿವೆ ಎಂಬುದು ಈಗಾಗಲೇ ಸಾಬೀತಾಗಿರುವ ಸಂಗತಿಯಾಗಿದೆ. ಇಂತಹ ಸಂದರ್ಭದಲ್ಲಿ ಜನತೆಯ ಪರವಾಗಿ ದನಿ ಎತ್ತಬೇಕಾದ ಜವಾಬ್ದಾರಿ ಹೊಂದಿದ್ದ ಮಾಧ್ಯಮ ರಂಗ, ವಿಶೇಷವಾಗಿ ಟಿ.ವಿ. ವಾಹಿನಿಗಳು ನಾಯಿಕೊಡೆಗಳಂತೆ ಹಬ್ಬಿಕೊಂಡಾದ ಮೇಲೆ, ಅದೂ ಈ ಅವನತಿಯ ಲಾಭದಲ್ಲಿ ಪಾಲುದಾರನಾಗಿ ಸಮಾಜ ವಿರೋಧಿ ಎನಿಸುವಷ್ಟು ಕೆಟ್ಟು ಕೆರ ಹಿಡಿದು ಹೋಗಿದೆ. ಇನ್ನು ಸಂಸದೀಯ ಪ್ರಜಾಪ್ರಭುತ್ವದ ಜೀವಾಳವಾದ ಸಾಂವಿಧಾನಿಕ ಆಡಳಿತವನ್ನು ಖಚಿತಗೊಳಿಸುವ ಅಂತಿಮ ಜವಾಬ್ದಾರಿ ಹೊಂದಿರುವ ನ್ಯಾಯಾಂಗವೂ ಇತ್ತೀಚಿನ ದಿನಗಳಲ್ಲಿ ನಿಧಾನವಾಗಿ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿರುವುದು ನಿಜವಾಗಿಯೂ ಆಘಾತಕಾರಿ ಸಂಗತಿಯೇ ಆಗಿದೆ.

ನ್ಯಾಯಾಲಯಗಳಲ್ಲಿ ‘ಗೆದ್ದವನು ಸೋತ; ಸೋತವನು ಸತ್ತ’ ಎಂಬ ನಾಣ್ನುಡಿಯೇ ಆಗಿ ಹೋಗಿರುವ ಮಾತು ನಮ್ಮ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಜನತೆ ನೀಡಿರುವ ತೀರ್ಪೇ ಆಗಿದೆ. ಇದು ‘ನ್ಯಾಯ’ ಎಂಬ ಮನುಷ್ಯ ನಾಗರೀಕತೆಯ ಬಹು ಮೂಲಭೂತವಾದ ಮತ್ತು ಸುಸ್ಥಿರ ಸಮಾಜದ ದೃಷ್ಟಿಯಿಂದ ಅಮೂಲ್ಯ ಪಾವಿತ್ರ್ಯದ ಪರಿಕಲ್ಪನೆಯು ಹೇಗೆ ಆಧುನಿಕ ಕಾನೂನುಗಳೆಂಬ ಶಬ್ದಜಾಲದ ಬಲೆಯೊಳಗೆ ಸಿಕ್ಕಿ ಅರ್ಥ ಮತ್ತು ಉದ್ದೇಶಗಳನ್ನೇ ಕಳೆದುಕೊಳ್ಳುತ್ತಿದೆ ಎಂಬುದರ ವಿಷದೀಕರಣವೇ ಆಗಿದೆ. ಹಾಗೇ ಇಂದು ಎಲ್ಲ ಹೋರಾಟ–ಪ್ರತಿಭಟನೆಗಳಲ್ಲಿ ಸಾಮಾನ್ಯವಾಗಿಬಿಟ್ಟಿರುವ– ಅವು ಎಷ್ಟು ಸಮರ್ಥನೀಯವೋ ಅಲ್ಲವೂ ಎಂಬುದು ಬೇರೆಯೇ ವಿಷಯವಾದರೂ–

‘ಬೇಕೇ ಬೇಕು, ನ್ಯಾಯ ಬೇಕು’ ಎಂಬ ಘೋಷವಾಕ್ಯ ನಮ್ಮ ‘ನ್ಯಾಯ ದಾನ’ ವ್ಯವಸ್ಥೆ ಕುಲಗೆಟ್ಟು ಹೋಗಿರುವುದರ ಸ್ಪಷ್ಟ ಸೂಚನೆಯೇ ಆಗಿದೆ.

೧೯೯೬ರಲ್ಲಿ ಗೋಣಿ ಚೀಲಗಳಲ್ಲಿ ಕಟ್ಟಿಟ್ಟಿದ್ದ ಕೋಟ್ಯಾಂತರ ರೂಪಾಯಿಗಳ ಲಂಚದ ಹಣದೊಂದಿಗೆ ನೇರವಾಗಿ ಸಿಕ್ಕಿಹಾಕಿಕೊಂಡ ಅಂದಿನ ಟೆಲಿಕಾಂ ಮಂತ್ರಿಗೆ ಶಿಕ್ಷೆ ಘೋಷಿಸಲು ನಮ್ಮ ನ್ಯಾಯಾಂಗಕ್ಕೆ ೨೦೧೧ರವರೆಗೆ–ಅಂದರೆ ೧೫ ವರ್ಷಗಳವರೆಗೆ–ಸಾಧ್ಯವಾಗಲಿಲ್ಲ. ಈಗ ಅಪರಾಧಿ ತಾನು ಹಲವು ಕಾಯಿಲೆಗಳಿಂದ ನರಳುತ್ತಿರುವ ಮುದುಕನಾದ್ದರಿಂದ ತನಗೆ ಶಿಕ್ಷೆಯಿಂದ ವಿನಾಯ್ತಿ ನೀಡಬೇಕೆಂದು ಕೋರಿದ್ದು, ಅದರ ವಿಚಾರಣೆ ನಡೆಯುತ್ತಿದೆ! ಇದಕ್ಕಾಗಿ ಯಾರನ್ನು ದೂರುವುದು? ಯಾರನ್ನೂ ದೂರುವಂತಿಲ್ಲ ಎನ್ನುತ್ತದೆ ಸ್ವತಃ ನ್ಯಾಯಾಂಗ! ಮೊನ್ನೆ ತಾನೇ ಸರ್ವೋಚ್ಚ ನ್ಯಾಯಾಲಯದಲ್ಲಿ ೧೯೭೮ರಲ್ಲಿ ದಾಖಲಾದ ಕುಪ್ರಸಿದ್ಧ ಎಲ್.ಎನ್. ಮಿಶ್ರ ಕೊಲೆ ಮೊಕದ್ದಮೆಯ ಆಪಾದಿತರು ‘ಈ ದೀರ್ಘ ವಿಚಾರಣಾ ವಿಳಂಬದಿಂದಲೇ ನಮಗೆ ಸಾಕಷ್ಟು ಶಿಕ್ಷೆಯಾಗಿದ್ದು ನಮ್ಮನ್ನು ಬಿಡುಗಡೆ ಮಾಡಿ ಪುಣ್ಯ ಕಟ್ಟಿಕೊಳ್ಳಿ’ ಎಂದು ಮನವಿ ಮಾಡಿಕೊಂಡಿದ್ದಾರೆ. ಅದಕ್ಕೆ ನ್ಯಾಯಾಧೀಶರು ಈ ವಿಳಂಬ ವ್ಯವಸ್ಥೆಯ ದೋಷದಿಂದಾಗದೆ ಸಕಾರಣವಾಗಿಯೇ ಆಗಿದೆ ಎಂದು ಹೇಳಿ ಅವರ ಮನವಿಯನ್ನು ತಿರಸ್ಕರಿಸುತ್ತಾ, ವಿಚಾರಣೆಯನ್ನು ಮುಂದಿನ ತಿಂಗಳಿಗೆ ಮುಂದೂಡಿದ್ದಾರೆ...

ಇನ್ನು ೧೯೯೬ರಲ್ಲಿ ವಿನೋದಶರ್ಮ ಎಂಬ ಕೇಂದ್ರ ಸಚಿವರ ಮಗ ಮನು ಶರ್ಮ ದೆಹಲಿಯ ಕ್ಲಬ್ಬೊಂದರಲ್ಲಿ ವೇಳೆ ಮೀರಿತೆಂದು ಮದ್ಯ ವಿತರಿಸಲು ನಿರಾಕರಿಸಿದ ಜೆಸ್ಸಿಕಾ ಲಾಲ್ ಎಂಬ ಯುವತಿಯನ್ನು ತನ್ನ ಪುಂಡ ಸ್ನೇಹಿತರೊಡನೆ ಹಲವರ ಕಣ್ಣೆದುರಿಗೇ ಗುಂಡಿಟ್ಟು ಕೊಲ್ಲುತ್ತಾನೆ. ಮೊಕದ್ದಮೆ ದಾಖಲಾಗುವುದಕ್ಕೇ ಹಲವು ತಿಂಗಳುಗಲಾಗುತ್ತವೆ. ಕೊನೆಗೆ ಸಾರ್ವಜನಿಕರ ಮತ್ತು ಮಾದ್ಯಮಗಳ ಒತ್ತಡದ ಮೇರೆಗೆ ಮೊಕದ್ದಮೆ ಹೂಡಲಾಗುವುದಾದರೂ ಅದು ಸಾಕ್ಷಿಗಳ ಅಸಹಕಾರದಿಂದಾಗಿ ಬಿದ್ದು ಹೋಗುತ್ತದೆ. ಮತ್ತೆ ಮಾಧ್ಯಮಗಳ ಪ್ರಚಾರದ ಒತ್ತಡಕ್ಕೆ ಸಿಕ್ಕಿ, ಸರ್ವೋಚ್ಚ ನ್ಯಾಯಾಲಯದ ಮಧ್ಯ ಪ್ರವೇಶದಿಂದಾಗಿ ಇದು ದೆಹಲಿ ಹೈಕೋರ್ಟಿನಲ್ಲಿ ಮರು ವಿಚಾರಣಗೆ ಒಳಗಾಗಿ ಅಪರಾಧಿಗೆ ಜೀವಾವಧಿ ಶಿಕ್ಷೆಯಾಗಲು ಏಳು ವರ್ಷ ಬೇಕಾಗುತ್ತದೆ. ಆದರೂ ಆಪಾದಿತ ತನ್ನ ವಿಸ್ತಾರವಾದ ರಾಜಕೀಯ ಪ್ರಭಾವ ಬಳಸಿ(ದೆಹಲಿಯ ಮುಖ್ಯ ಮಂತ್ರಿಯ ಸಹಕಾರ ಸೇರಿದಂತೆ) ‘ಮಾನವೀಯ’ ಕಾರಣಗಳ ಮೇಲೆ ದೀರ್ಘ ಕಾಲದ ಪರೋಲ್ ಪಡೆದು ‘ಮಜ’ವಾಗಿ ಕಾಲ ಕಳೆಯಲು ಸಾಧ್ಯವಾಗುತ್ತದೆ.

ಇಂತಹುದೇ ಇನ್ನೊಂದು ಉದಾಹರಣೆ (ಐ.ಎ.ಎಸ್ ಅಧಿಕಾರಿಯಾಗಿದ್ದವರೊಬ್ಬರ ಮಗ) ನಿತೀಶ್ ಕಟಾರಿಯಾ ಎಂಬ ಯುವಕನ ಕೊಲೆ ಮೊಕದ್ದಮೆ. ವಿಕಾಸ ಯಾದವ್ ಎಂಬ ಗೂಂಡಾ ರಾಜಕಾರಣಿಯ ಮಗ (ಈತ ಜೆಸ್ಸಿಕಾ ಲಾಲ್ ಕೊಲೆ ಮೊಕದ್ದಮೆಯಲ್ಲೂ ಆಪಾದಿತರಲ್ಲೊಬ್ಬ) ತನ್ನ ಸೋದರಿ ಭಾರತಿ ಯಾದವ್‌ಳನ್ನು

ಪ್ರೀತಿಸಿದ ಕಾರಣದ ಮೇಲೆ ನಿತೀಶ್ ಕಠಾರಿಯಾನನ್ನು ತನ್ನ ಸ್ನೇಹಿತರ ಜೊತೆ ಸೇರಿ ೨೦೦೨ರಲ್ಲಿ ಕೊಲೆ ಮಾಡುತ್ತಾನೆ. ಕೊಲೆಗಾರನ ಹಣ ಬಲ ಮತ್ತು ರಾಜಕೀಯ ಬಲದಿಂದ ಮುಚ್ಚೇ ಹೋಗಿದ್ದ ಈ ಕೊಲೆ, ಕೊಲೆಯಾದ ಹುಡುಗನ ತಾಯಿಯ (ನೀಲಂ ಕಠಾರಿಯಾ) ಹಠ, ಸತತ ಪ್ರಯತ್ನ, ಕಾನೂನು ಶಿಕ್ಷಣದ ಹಿನ್ನೆಲೆ, ಆರ್ಥಿಕ ಅನುಕೂಲಗಳಿಂದಾಗಿ ಎಲ್ಲ ಹಂತಗಳಲ್ಲಿ ಹೋರಾಟ ನಡೆಸಿ ಆರು ವರ್ಷಗಳ ನಂತರ ವಿಕಾಸ ಯಾದವ್ ಮತ್ತು ಅವನ ಸ್ನೇಹಿತರನ್ನು ಜೈಲಿಗೆ ತಳ್ಳಲು ಸಾಧ್ಯವಾಗುತ್ತದೆ. ಆದರೆ ಮತ್ತೆ ಹಲವು ರೀತಿಯ 'ಮಾನವೀಯ' ಪರಿಗಣನೆಗಳ ಮೇಲೆ ಪದೇ ಪದೇ ಜೈಲಿನ ಹೊರಗಿನ ಬದುಕಿನ ಖುಷಿಗಳನ್ನು ಅನುಭವಿಸುತ್ತಿರುವ ಆತನನ್ನು ಜೈಲಿನಲ್ಲೇ ಇರಿಸಲು ತಾವು ನಿರಂತರವಾಗಿ ಹರಸಾಹಸ ಮಾಡಬೇಕಾಗಿದೆಯೆಂದು ಇತ್ತೀಚಿನ ಎಲ್ಲ 'ಪ್ರತಿಷ್ಠಿತ' ಅಪರಾಧಗಳ ವಿರುದ್ಧ ನೈತಿಕ ಸಮರ ಸಾರಿರುವ ನೀಲಂ ಹೇಳುತ್ತಾರೆ.

ಹರ್ಯಾಣಾದ ಹಿರಿಯ ಪೋಲೀಸ್ ಅಧಿಕಾರಿ ರಾಥೋಡ್‌ನ ರುಚಿಕಾ ಗಿರ್ಹೋತ್ರಾ ಎಂಬ ಹದಿಹರೆಯದ ಬಾಲೆಯೊಡನೆಯ ಲೈಂಗಿಕ ದುರ್ವರ್ತನೆಯ ೧೯೯೦ರ ಮೊಕದ್ದಮೆ ಯಾರ ಹೃದಯವನ್ನಾದರೂ ಕಲಕಬಲ್ಲಂತಹದ್ದು. ಈಗಾಗಲೇ ಆ ಬಾಲೆ ಮತ್ತು ಆಕೆಯ ಸೋದರನನ್ನು ಆತ್ಮಹತ್ಯೆಯ ರೂಪದಲ್ಲಿ ಬಲಿ ತೆಗೆದುಕೊಂಡಿರುವ ಈ ಮೊಕದ್ದಮೆ ಹಲವು ಸುತ್ತುಗಳ ವಿಚಾರಣೆ, ತೀರ್ಪು ಹಾದು ಇನ್ನೂ ಅಂತಿಮ(?) ತೀರ್ಪಿನ ಹಂತ ಮುಟ್ಟಬೇಕಾಗಿದೆ. ಈ ಮೊಕದ್ದಮೆ ನಮ್ಮ ಸಂವಿಧಾನದ ಮೂರೂ ಅಂಗಗಳು ಒಂದಲ್ಲ ಒಂದು ಹಂತದಲ್ಲಿ ಎಷ್ಟು ನಾಚಿಕೆಗೆಟ್ಟು ಹೇಗೆ ಶಾಮೀಲಾಗಿ ಒಂದು ಕುಟುಂಬದ ದುರಂತಕ್ಕೆ ಮತ್ತು ನ್ಯಾಯಾಂಗದ ಮೇಲಿನ ಸಮಾಜದ ನಂಬಿಕೆಯನ್ನು ನಿರ್ಣಾಯಕವಾಗಿ ಭಂಗಗೊಳಿಸಬಲ್ಲುದು ಎಂಬುದಕ್ಕೆ ಸಾಕ್ಷಿಯಂತಿದೆ. ಇದರ ದಾರುಣ ವಿವರಗಳನ್ನು ಇಡಿಯಾಗಿ ನೀಡದಿದ್ದರೆ ಈ ನನ್ನ ಮಾತುಗಳು ನಿಮಗೆ ಮನದಟ್ಟಾಗಲಾರವು. ಆದರೆ ಇದಕ್ಕೆ ಇಲ್ಲಿ ಈಗ ಸ್ಥಳಾವಕಾಶವಿಲ್ಲ. ಬಹುಶಃ ಮುಂದಿನ ಸಂಚಿಕೆಯಲ್ಲಿ ಇದರ ಸಂಪೂರ್ಣ ವಿವರಗಳನ್ನು ನೀಡುವೆ. ಸದ್ಯಕ್ಕೆ ಇಷ್ಟು ಹೇಳಬಹುದು: ಅಪರಾಧಿ ತನ್ನ ವಕಾಲತ್ತು ವಹಿಸಿಕೊಡಿರುವ ಹೆಂಡತಿಗೆ ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವ ಒಂದು ಬಂಗಲೆಯನ್ನೂ, ಜಗತ್ತಿನ ಅತಿ ವೈಭೋಗದ ಕಾರೊಂದನ್ನೂ ಕಾಣಿಕೆಯಗಿ ನೀಡಿದ್ದಾನೆ.

ಇವೆಲ್ಲಕ್ಕೆ ಕಿರೀಟಪ್ರಾಯವಾಗಿರುವ ಮತ್ತು ನಮ್ಮ ನ್ಯಾಯದಾನ ವ್ಯವಸ್ಥೆ ಪದ್ಧತಿಯ ವಿಕಾಸದೊಂದಿಗೇ ಬೆಳೆದುಬಂದಿರುವ ವರ್ಗ ಪೂರ್ವಾಗ್ರಹಕ್ಕೆ ಸಾಕ್ಷಿಯಂತಿದೆ, ಸಂಜೀವ ನಂದಾನ ಪ್ರಕರಣ. ಈತ ನಮ್ಮ ನೌಕಾಪಡೆಯ ನಿವೃತ್ತ ಅಡ್ಮಿರಲ್ ಮತ್ತು ಹಾಲಿ ಅಂತಾರಾಷ್ಟ್ರೀಯ ಶಸ್ತ್ರಾಸ್ತ್ರ ಪೂರೈಕೆ ವ್ಯಾಪಾರದಲಿದ್ದು ಈಗ ಹಲವು ಅವ್ಯವಹಾರಗಳ ಆರೋಪ ಎದುರಿಸುತ್ತಿರುವ ನಂದಾರ ಮೊಮ್ಮಗ. ೧೯೯೯ರ ಜನವರಿಯಲ್ಲಿ ಇವನು ಕುಡಿದ ಅಮಲಿನಲ್ಲಿ ತನ್ನ ವೈಭವೋಪೇತ ಬಿ.ಎಂ.ಡಬ್ಲ್ಯೂ. ಕಾರನ್ನು ಕರ್ತವ್ಯ ನಿರತರಾಗಿದ್ದ

ಮೂವರು ಪೋಲೀಸರೂ ಸೇರಿದಂತೆ ರಸ್ತೆ ಪಕ್ಕದಲ್ಲಿ ಮಲಗಿದ್ದ ಆರು ಜನರ ಮೇಲೆ ಓಡಿಸಿ ಕೊಂದಿದ್ದ. ಈ 'ಅಪಘಾತ'ದಲ್ಲಿ ಒಬ್ಬನ ಅರೆಜೀವ ಸ್ಥಿತಿಯಲ್ಲಿದ್ದ ದೇಹ ಕಾರಿನ ಮುಂಭಾಗಕ್ಕೆ ಸಿಕ್ಕಿಹಾಕಿಕೊಂಡಿದ್ದರೂ ಜೀವವಿದ್ದ ಆ ದೇಹದ ಮೇಲೆ ಕಾರನ್ನು ಓಡಿಸಿಕೊಂಡು ಹೋಗಲಾಯಿತು. ನಂದಾ ಕುಟುಂಬ ತನ್ನೆಲ್ಲ ಹಣ ಬಲ ಮತ್ತು ಸಂಪರ್ಕ ಪ್ರಭಾವ ಬಳಸಿ ಈ ಮೊಕದ್ದಮೆಯಲ್ಲಿ ಅಪರಾಧಿಯನ್ನು ಕಾಪಾಡಲು ಎಲ್ಲ ಕಸರತ್ತು ಮಾಡಿ ಮೊದಲ ಹಂತದ ನ್ಯಾಯಲಯ ವಿಚಾರಣೆಯಲ್ಲಿ ಜಯ ಸಾಧಿಸಿಯೇ ಬಿಟ್ಟಿತು. ಆದರೆ, ಇದರಿಂದ ಸಿಟ್ಟಿಗೆದ್ದ ರಾಷ್ಟ್ರದ ಅಭಿಪ್ರಾಯ ಮುಖಂಡರ ಮತ್ತು ಕ್ರಿಯಾಶೀಲವಾದ ಮಾಧ್ಯಮದ ಒತ್ತಡಗಳಿಂದಾಗಿ ಸಿ.ಬಿ.ಐ.ಗೆ ಒಪ್ಪಿಸಲ್ಪಟ್ಟ ಮೊಕದ್ದಮೆಯ ಮರುವಿಚಾರಣೆ ಆರಂಭವಾಗಿ ಸಂಜೀವ್ ನಂದಾನಿಗೆ ೨೦೦೮ರ ಹೊತ್ತಿಗೆ ಐದು ವರ್ಷಗಳ ಸೆರೆಮನೆಯ ಶಿಕ್ಷೆಯಾಯಿತು. ಆದರೆ ಛಲ ಬಿಡದ ಅವನ ಪೋಷಕರು ಮತ್ತೆ ತಮ್ಮ ಹಣ ಬಳಸಿ 'ಚಾಣಾಕ್ಷ' ವಕೀಲರ ನೆರವು ಪಡೆದು ಉಚ್ಚ ನ್ಯಾಯಾಲಯದಿಂದ ಶಿಕ್ಷೆಯನ್ನು ಎರಡು ವರ್ಷಗಳಿಗೆ ಇಳಿಸಿಕೊಂಡಿತು. ಇದರ ವಿರುದ್ಧ ಕಾರಿಗೆ ಸಿಕ್ಕಿ ಕೊಲ್ಲಲ್ಪಟ್ಟ ಕುಟುಂಬದವರು ಮತ್ತು ಸಿ.ಬಿ.ಐ. ಸಲ್ಲಿಸಿದ್ದ ಮೇಲ್ಮನವಿಯನ್ನು ನಮ್ಮ ಸರ್ವೋಚ್ಚ ನ್ಯಾಯಾಲಯ ವಜಾ ಮಾಡಿ, ಅಪರಾಧಿ ಸೆರೆಮನೆ ವಾಸಕ್ಕೆ ಬದಲಾಗಿ ರಸ್ತೆ ಅಪಘಾತ ಪರಿಹಾರ ನಿಧಿಗೆ ೫೦ ಲಕ್ಷ ರೂಪಾಯಿ ಕಾಣಿಕೆ ಕೊಟ್ಟು ಎರಡು ವರ್ಷ ಸಮಾಜಸೇವೆ ಮಾಡಲಿ ಎಂದು ಆದೇಶಿಸಿದೆ!

ಈ ನಂದಾ ಸೆರೆಮನೆ ವಾಸದ ಮಧ್ಯೆ ಜಾಮೀನು ಪಡೆದು ಅತ್ಯಂತ ಶ್ರೀಮಂತ ಮನೆತನದ ಹೆಣ್ಣೊಬ್ಬಳನ್ನು ಪಂಚತಾರ ಹೋಟೆಲೊಂದರಲ್ಲಿ ಅತ್ಯಂತ ವೈಭವೋಪೇತ ಶೈಲಿಯಲ್ಲಿ ಆದ ಮದುವೆಯ ವ್ಯವಸ್ಥೆಯನ್ನು ರಾಷ್ಟ್ರದ ಅತ್ಯಂತ ಸುಪ್ರಸಿದ್ಧ ಮತ್ತು ದುಬಾರಿ ಫ್ಯಾಶನ್ ವಿನ್ಯಾಸಕಾರ ತೆಹಲಾನಿ ಎಂಬ ತಲೆಹೋಕನೊಬ್ಬ ವಿನ್ಯಾಸ ಮಾಡಿದ್ದ ಮತ್ತು ದೇಶದ ವಾಣಿಜ್ಯ ವಲಯದ ಅನೇಕ ಗಣ್ಯರು ಇದರಲ್ಲಿ ಭಾಗವಹಿಸಿದ್ದರು ಎಂಬ ಕಟು ವಾಸ್ತವವನ್ನೂ ಇಲ್ಲಿ ದಾಖಲಿಸಬೇಕು. ಇದು ಆಳದಲ್ಲೇ ನೈತಿಕವಾಗಿ ಕೊಳತು ಹೋಗಿರುವ ಸಮಾಜ...

ಇದೆಲ್ಲ ಈಗ ಆಗಿ ಹೋದದ್ದು ಆಗಿದ್ದರೆ, ಇವಾವುದೂ ಯಾರ ಮೇಲೂ, ಯಾವುದೇ ಸಾಂವಿಧಾನಿಕ ಅಂಗದ ಮೇಲೂ ಎಂತಹುದೇ ಪ್ರಭಾವ ಬೀರಿಲ್ಲ ಎಂಬುದರ ಸಾಕ್ಷಿಯಂತಿದೆ, ಇತ್ತೀಚಿನ ಎರಡು ಪ್ರಕರಣಗಳು. ಕಳೆದ ಮೇನಲ್ಲಿ ದೆಹಲಿಯ ಸಮೀಪದ ಗುಡಗಾಂವ್‌ನಲ್ಲಿ ಇಂತಹುದೇ ಬಿ.ಎಂ.ಡಬ್ಲ್ಯೂ. ಕಾರ್‌ನಲ್ಲಿ ಕುಡಿದು ಬಂದ ಶ್ರೀಮಂತ ಉದ್ಯಮಿಯೊಬ್ಬನ ಮಗ ಗರ್ಭಿಣಿ ಹೆಂಗಸೊಬ್ಬಳನ್ನು ಕೊಂದು ಆಕೆಯೊಡನಿದ್ದ ಆತನ ಗಂಡ, ಅತ್ತೆ–ಮಾವರನ್ನು ತೀವ್ರವಾಗಿ ಗಾಯಗೊಳಿಸಿದ ಅಪಘಾತ ಮಾಡಿದ್ದಾನೆ. ಅಪರಾಧಿಯ ರಕ್ಷಣೆಗೆ· ಎಲ್ಲ ಕಸರತ್ತುಗಳು ನಡೆದಿವೆ. ಹಲವು ಔಪಚಾರಿಕತೆಗಳ ನೆಪದಲ್ಲಿ ಮೊಕದ್ದಮೆ ಇನ್ನೂ ನ್ಯಾಯಾಲಯವನ್ನೇ ಪ್ರವೇಶಿಸಿಲ್ಲ! ಇನ್ನೊಂದು ಪ್ರಕರಣ,

ಹೋದ ವಾರದ ಗೋಪಾಲ ಕಾಂಡ ಎಂಬ ಹರ್ಯಾಣಾದ ಗೃಹ ಸಚಿವನ ಮೇಲಿನ ಪ್ರೇಮಕಾಂಡದ ಕಥೆ. ಗಗನಸಖಿಯಾಗಿದ್ದ ಯುವತಿಯೊಬ್ಬಳು ತನ್ನ ಆತ್ಮಹತ್ಯೆ ಪತ್ರದಲ್ಲಿ ತನ್ನ ಈ ಸಾವಿಗೆ ಕಾಂಡನ ದುರ್ವರ್ತನೆಯೇ ಕಾರಣವೆಂದು ಬರೆದಿಟ್ಟಿದ್ದರೂ, ಒಂದು ವಾರದ ಕಾಲ ಆತನನ್ನು ಬಂಧಿಸದೆ ಹೋದ ಪೋಲೀಸರು, ಆತ ಕಣ್ಮರೆಯಾದ ಕೂಡಲೇ ಆತನನ್ನು ಹುಡುಕುವ ನಾಟಕ ಶುರುವಿಟ್ಟುಕೊಂಡರು. ಈಗ ಆತ ಎಲ್ಲ ಸಾಕ್ಷ್ಯಗಳನ್ನೂ ದಾಖಲೆಗಳನ್ನೂ 'ಸರಿ' ಮಾಡಿ, ಸ್ವತಃ ತಾನೇ ನ್ಯಾಯಾಲಯಕ್ಕೆ ಶರಣಾಗಿದ್ದಾನೆ.

ನಿಜ, ಇವೆಲ್ಲ ಆಯ್ದ ಪ್ರತಿಷ್ಠಿತ ಮೊಕದ್ದಮೆಗಳು. ಹೀಗೆ ಪ್ರತಿಷ್ಠಿತವಾಗದೆ, ಹಣದ, ಪ್ರಭಾವದ, ಪ್ರಚಾರದ ಬೆಂಬಲವಿಲ್ಲದೆ, ಹಾಗಾಗಿ ಹೋರಾಡುವ ತ್ರಾಣವಿಲ್ಲದೇ ಅರ್ಧದಲ್ಲೇ ಮುರುಟಿ ಹೋಗಿರುವ, ನ್ಯಾಯ ಸಿಗದೆ ಬೀದಿ ಪಾಲಾದವರ, ಸತ್ತೇ ಹೋದವರ ಅದೆಷ್ಟು ಮೊಕದ್ದಮೆಗಳಿವೆಯೋ? ಇವುಗಳ ಜೊತೆಗೆ ನಮ್ಮ ಕಣ್ಮುಂದಿನ ಚುನಾವಣಾ ತಕರಾರುಗಳ ಮೊಕದ್ದಮೆಗಳು, ಚಿಕ್ಕ–ದೊಡ್ಡ ಭ್ರಷ್ಟಾಚಾರದ ಮೊಕದ್ದಮೆಗಳು ಇತ್ಯಾದಿ ರಾಷ್ಟ್ರ ಜೀವನದ ಹಲವು ನೆಲೆಗಳ ಪ್ರಕರಣಗಳನ್ನು ಸೇರಿಸುತ್ತಾ ಹೋಗಬಹುದು. ನಾಗರೀಕ ಆಡಳಿತ ಭ್ರಷ್ಟತೆಯಿದ ಕುಸಿದು, ಜನ ಮರ್ಯಾದೆಯಿಂದ ಬಾಳಲು ಅಗತ್ಯವಾದ ಕನಿಷ್ಟ ಅಗತ್ಯಗಳನ್ನು ಪೂರೈಸಬೇಕಾದ ಪ್ರಾಥಮಿಕ ಸೇವೆಗಳೂ ಅವರಿಗೆ ನಿರಾಕರಿಸಲ್ಪಟ್ಟು ಸಕಲವೂ ನ್ಯಾಯಾಂಗದ ಕಟಕಟೆಯನ್ನು ಏರುವಂತೆ ಸೃಷ್ಟಿಯಾಗಿರುವ ಸಂದರ್ಭವಿದು. ಇಂತಹ ಸ್ಫೋಟಕ ಸಂದರ್ಭದಲ್ಲಿ ನ್ಯಾಯದಾನ ವ್ಯವಸ್ಥೆ ಜನಕ್ಕೆ ಇಷ್ಟು ಜಟಿಲ, ದುಬಾರಿ, ಜನರನ್ನು ಹತಾಶೆಯ ಅಂಚಿಗೆ ದೂಡಬಲ್ಲಷ್ಟು ಸುಸ್ತು ಮಾಡುವ ಪರಿಸ್ಥಿತಿ ತಲುಪಿದರೆ ಮುಂದಿನ ಪರಿಣಾಮಗಳಾದರೂ ಏನು? ಜನ, ಯಾರಿಗಾಗಿ, ಯಾತಕ್ಕಾಗಿ ನಡೆಯುತ್ತಿದೆ ಈ ದೇಶ? ಎಂಬ ಪ್ರಶ್ನೆ ಕೇಳಿಕೊಳ್ಳಲಾರಂಭಿಸಿದರೆ ಪರಿಸ್ಥಿತಿ ಎಲ್ಲಿಗೆ ಹೋಗಿ ಮುಟ್ಟಬಹುದು? ಶಾಂತರಾಗಿ, ಹಿಂಸೆಗೆ ಇಳಿಯಬೇಡಿ ಎಂದರೆ ಜನ ಎಷ್ಟು ದಿನ ಸುಮ್ಮನಿರಬಲ್ಲರು?

ಈ ದೇಶದ ಅಧಿಕಾರ ಸೂತ್ರ ಹಿಡಿದಿರುವ ಯಾವ ವಲಯವನ್ನೂ, ಯಾರನ್ನೂ ಇದು ಅಲುಗಾಡಿಸಿಲ್ಲವೇ? ಹೋಗಲಿ, ಯಾವ ರಾಷ್ಟ್ರ ಚಿಂತಕನನ್ನೂ ಯಾಕೆ ಹೀಗಾಗುತ್ತಿದೆ ಎಂಬ ಯೋಚನೆಗೆ ದೂಡಿಲ್ಲವೇ?

**** ***** *****

ಈ ಸಂದರ್ಭದಲ್ಲಿ ನನಗೆ ತಕ್ಷಣ ನೆನಪಿಗೆ ಬರುವುದು, ಗಾಂಧೀಜಿಯ 'ಹಿಂದ್ ಸ್ವರಾಜ್.' ಈ ದೇಶ ಪ್ರಜಾಪ್ರಭುತ್ವದ ಹೆಸರಿನಲ್ಲೇ ಆದರೂ, ಒಂದು ಏಕಾಧಿಕಾರದ ಬೃಹತ್ ರಾಷ್ಟ್ರ ಆಗಬಾರದೆಂದು ಗಾಂಧೀಜಿ ಬಯಸಿದ್ದರು. ಹಾಗಾಗಿಯೇ ಅವರು ಈ ಕೃತಿಯಲ್ಲಿ 'ರಾಷ್ಟ್ರಕ್ಕೆ ನಿಮ್ಮ ಸಂದೇಶವೇನು?' ಎಂಬ ಪ್ರಶ್ನೆಗೆ 'ರಾಷ್ಟ್ರ! ಹಾಗೆಂದರೇನು?'

ಎಂದು ಮರು ಪ್ರಶ್ನೆ ಹಾಕಿ, ಈ ದೇಶ ಒಂದು ನಾಗರೀಕತೆಯಾಗಿ ಹಳ್ಳಿ ಎಂಬ ಸಣ್ಣ ಸ್ವಯಂ ಆಡಳಿತದ ಘಟಕಗಳ ಒಂದು ಒಕ್ಕೂಟದ ರೂಪದಲ್ಲಿ ಮಾತ್ರ ನೆಮ್ಮದಿಯಿಂದ ಉಳಿಯಬಲ್ಲುದು ಎಂದು ಸೂಚಿಸಿದ್ದರು. ಅವರ ಇದೇ ಕೃತಿಯಲ್ಲಿ ಇದೇ ಮುನ್ನೋಟದ ಭಾಗವಾಗಿ ಆಧುನಿಕ ನ್ಯಾಯಾಂಗ ವ್ಯವಸ್ಥೆಯನ್ನೇ ವಿರೋಧಿಸಿದ್ದರು. ಇವೆಲ್ಲ ಬಹು ಅಮೂಲ್ಯವಾದ ವ್ಯಕ್ತಿಸ್ವಾಯತ್ತತೆಯನ್ನು ನಾಶಮಾಡುವ ಆಧುನಿಕ ಸಾಮ್ರಾಜ್ಯಗಳನ್ನು ನಿರ್ಮಿಸಲು ಪಶ್ಚಿಮದ ಮನಸ್ಸು ರೂಪಿಸಿಕೊಂಡ ಮತ್ತು ನಾವು ಕುರುಡಾಗಿ ಬಳಸಲಾರಂಭಿಸಿರುವ ಸ್ವಯಂನಾಶದ ಹತಾರಗಳು. ಅವರು ಹೇಳುತ್ತಾರೆ: ಇಬ್ಬರ ಜಗಳವನ್ನು ಅದರ ಮೂಲಚೂಲಗಳಿಗೇ ಅಪರಿಚಿತರಾದ ಮೂರನೆಯವನು (ಹಾಗೂ ನಾಲ್ಕನೆಯವನು ಐದನೆಯ ಅಪರಿಚಿತನ ಮುಂದೆ) ಬಗೆಹರಿಸುವ ವ್ಯವಸ್ಥೆಯೇ ಮೂರ್ಖತನದ್ದು..

ಆಧುನಿಕ ನ್ಯಾಯಾಂಗ ಕುರಿತ ಗಾಂಧೀಜಿಯ ಈ ಅಪೂರ್ವ ಹೊಳಹು ನಮ್ಮ ಈ ನ್ಯಾಯಾಂಗದ ಜೊತೆಗಾರರಾದ ಶಾಸಕಾಂಗ ಮತ್ತು ಕಾರ್ಯಾಂಗಗಳ ಮಿತಿಗಳನ್ನು ಕುರಿತ ಹೊಳಹೂ ಆಗಿದೆ ಎಂಬುದನ್ನು ನಾವು ಅರಿಯಬೇಕು. ಏಕೆಂದರೆ ಅವು ಆಧುನಿಕ ಸಾಮ್ರಾಜ್ಯವೆಂಬ ಬೃಹತ್ ಯಂತ್ರ ವಿನ್ಯಾಸದ ಅವಿಭಾಜ್ಯ ಅಂಗಗಳು. ಈ ಬೃಹತ್ ವಿನ್ಯಾಸದಲ್ಲಿ ಅದರ ಬಿಡಿಭಾಗವಾಗುವ ವ್ಯಕ್ತಿ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡು ಕೊನೆಗೆ ತಾನೇ ಕಳೆದುಹೋಗುತ್ತಾನೆ. ಉಳಿಯುವುದು ಆ ಯಂತ್ರ ಮತ್ತು ಅದರ ಶ್ರೀಮಂತ ಗುಲಾಮರು ಮಾತ್ರ.. ಅವರೇ ನಮ್ಮ ಇಂದಿನ ನಾಯಕರೆನಿಸಿಕೊಂಡವರು. ಇದು ವಿಪರ್ಯಾಸ.

ಗಾಂಧೀಜಿ ಪ್ರಕಾರ ಹಳ್ಳಿಯೆಂದರೆ ವಾಸದ ಘಟಕ ಮಾತ್ರವಲ್ಲ. ಅದು ಮನುಷ್ಯನನ್ನು ಅರೆ ಹುಚ್ಚನನ್ನಾಗಿ ಮಾಡ ಹೊರಟಿದ್ದ ಆಧುನಿಕ ನಾಗರೀಕತೆ ಎಂಬ ರಾಕ್ಷಸನ ಎದುರಿನಲ್ಲಿ ಬದುಕಿಗೆ ಅದರ ಎಲ್ಲ ನೆಲೆಗಳಲ್ಲೂ ಮಿತಿ ಹಾಕಿಕೊಂಡು ನೆಮ್ಮದಿಯ ಬಾಳುವೆ ಮಾಡುವ ವಿವೇಕಪೂರ್ಣ ಆಯ್ಕೆಯ ಪ್ರತೀಕವೂ ಆಗಿತ್ತು. ಆದರೆ ನಾವು ಕಳೆದ ೬೦ ವರ್ಷಗಳಲ್ಲಿ ಸಾಮಾನ್ಯ ಮನುಷ್ಯನೊಬ್ಬನ ನೋಟದ ತೆಕ್ಕೆಗೆ ಸಿಗದಷ್ಟು ವಿಸ್ತಾರ ವೈವಿಧ್ಯದ, ಅವನ ಆಸೆ ಆಕಾಂಕ್ಷೆಗಳೂ, ದುಃಖ ದುಮ್ಮಾನಗಳೂ ಮುಟ್ಟಲಾಗದಷ್ಟು ಅವನ ಸಾಮಾನ್ಯ ಗ್ರಹಿಕೆಗೆ ಸಿಗದಷ್ಟು ಜಡ ಪಾರಿಭಾಷಿಕವಾಗಿರುವ ಸಂವಿಧಾನವೆಂಬ ದಾಖಲೆಯಲ್ಲಿ ಮಾತ್ರ ಮೂರ್ತಗೊಳ್ಳುವ ಮತ್ತು ಭ್ರಷ್ಟ ಹಾಗೂ ದುಷ್ಟ ಶಕ್ತಿಗಳು ಮಾತ್ರ ರೂಢಿಸಿಕೊಳ್ಳಬಲ್ಲ ವಾಮ ತಂತ್ರಗಳಿಗಷ್ಟೇ ಸ್ಪಂದಿಸಬಲ್ಲಂತಹ ಪೆಡಂಭೂತ ರೂಪದ ರಾಷ್ಟ್ರ ವ್ಯವಸ್ಥೆಯನ್ನು ನಿರ್ಮಿಸಿಕೊಂಡಿದ್ದೇವೆ. ಹಾಗೇ, ಬದಲೀ ಮಾರ್ಗವೇ ಕಾಣದಂತೆ ಮಾಡಿರುವ ಅನಂತ ಆಸೆಗಳ ಕತ್ತಲಲ್ಲಿ ಅದರೊಡನೆಯೇ ಹೇಗೋ ಹೊಂದಿಕೊಂಡು ಹೋಗುವ ದುರ್ಗತಿಗೆ ಈಡಾಗಿದ್ದೇವೆ.

ಸರಳ ನೆಮ್ಮದಿಯ ಸುಂದರ ಬದುಕಿನ ಕಲ್ಪನೆಯೇ ನಮ್ಮ ಮನಸ್ಸಿನಿಂದ ಹಾರಿ ಹೋಗಿದೆ. ಇಲ್ಲಿಯೇ ನಮ್ಮ ಇಂದಿನ ಎಲ್ಲ ಬಿಕ್ಕಟ್ಟುಗಳ–ಅದು ವಿವಿಧ ಭ್ರಷ್ಟಾಚಾರಗಳ ಪ್ರಕರಣಗಳಿರಬಹುದು, ಅಸ್ಸಾಂ ಸಮಸ್ಯೆ ಇರಬಹುದು, ನಕ್ಸಲ್ ಸಮಸ್ಯೆ ಇರಬಹುದು, ಕಾಶ್ಮೀರದ ಸಮಸ್ಯೆ ಇರಬಹುದು–ಮೂಲವಿದೆ; ಮದ್ದೂ ಇದೆ. ಇದು ಗ್ರಾಮಕ್ಕೆ ಹಿಂದಿರುಗುವ ಸಲಹೆಯಲ್ಲ. ಹಿಂತಿರುಗಲು ಗ್ರಾಮಗಳಾದರೂ ಎಲ್ಲಿವೆ ಇಂದು? ಆದರೆ ರಾಜಕೀಯ ಅಧಿಕಾರದ ಪುನರ್‌ಹಂಚಿಕೆಯ ಪ್ರಾಮಾಣಿಕ ಪ್ರಯತ್ನವನ್ನು ಆರಂಭಿಸಬಹುದಲ್ಲ? ಇಂದು ಸಾಮಾನ್ಯ ಜನರೆಲ್ಲರ ಅನುಭವಕ್ಕೆ ಬರುತ್ತಿರುವ ಭಾರತವೆಂಬ ಭಾರವನ್ನು ಹಗುರಗೊಳಿಸಿಕೊಂಡು, ಅದನ್ನು ಯಾವ ಉದ್ದೇಶದಿಂದ ರೂಪಿಸಲಾಗಿತ್ತೋ ಆ ಉದ್ದೇಶ ವಿಫಲವಾಗುವ ದುರಂತವನ್ನು ತಪ್ಪಿಸಬಹುದಲ್ಲವೆ? ಭಾರತದ ಪ್ರಜೆಯ ಶ್ರೇಯಸ್ಸೇ ಭಾರತವೆಂಬ ರಾಷ್ಟ್ರದ ಪರಿಕಲ್ಪನೆಯ ಮೂಲಾಧಾರವಾಗಿದ್ದರೆ, ಇದು ಆದಷ್ಟೂ ಬೇಗ ಆರಂಭವಾಗಬೇಕಿದೆ. ದೂರ ದೃಷ್ಟಿಯಲ್ಲಿ ಇದೇ ಉದ್ದೇಶದಿಂದ ಆರಂಭವಾಗಿದ್ದ, ಮೂಲತಃ 'ಗ್ರಾಮ ಸ್ವರಾಜ್ಯ' ಆಂದೋಲನವೆಂದೇ ಗುರುತಿಸಲ್ಪಟ್ಟಿದ್ದ ಅಣ್ಣಾ ಹಜಾರೆಯವರ ಆಂದೋಲನ ಸ್ವಲ್ಪ ಎಚ್ಚರತಪ್ಪಿ ಭಾರತವೆಂಬ ಈ ಬೃಹತ್ ಯಂತ್ರದ ಹಲ್ಲುಗಳಿಗೆ ಸಿಕ್ಕಿ ಸತ್ತಿಲ್ಲವಾದರೂ ಆಘಾತಗೊಂಡಿದೆ. ಅದು ಬೇಗ ಚೇತರಿಸಿಕೊಂಡು, ಈ ಪ್ರಯತ್ನಕ್ಕೆ ಚಾಲನೆ ನೀಡಲಿ ಎಂದಷ್ಟೇ ಸದ್ಯಕ್ಕೆ ನಾವು ಹಾರೈಸಬಹುದೇನೋ!

<u>ಸಮಕಾಲೀನ</u>

ಈ ಭೂಮಿಯ ಅಳಿವು–ಉಳಿವು

ಭೂಮಿಯ ತಾಪಮಾನ ಹೆಚ್ಚುತ್ತಿರುವ, ಅದರಿಂದಾಗಿ ಈ ಭೂಮಿಯ ಮೇಲಿನ ಸಕಲ ಜೀವರಾಶಿಗೂ ಬಂದೊದಗಿರುವ ಕುತ್ತು ಎಂಬುದು ನಿನ್ನೆ ಮೊನ್ನೆಯ ಆತಂಕವಲ್ಲ. ಆಧುನಿಕ ನಾಗರೀಕತೆ ಎಂಬುದು ಕಣ್ಣಿಗೆ ಕಾಣುವುದು ಮಾತ್ರ ಸತ್ಯ ಎಂಬ 'ವೈಜ್ಞಾನಿಕ' ನಂಬಿಕೆಯ ಹಮ್ಮಿನಲ್ಲಿ ಭೂಮಿಯನ್ನು ಒಂದು ಜಡ ಗ್ರಾಹಕ ವಸ್ತುವಿನಂತೆ ಬಳಸಿ ಮನುಷ್ಯನ ಮನಸ್ಸಿಗೆ ಕೊನೆಯಿಲ್ಲದ ಸುಖದ ಕನಸಿನ ಕೊಳ್ಳಿ ಹಚ್ಚಿಟ್ಟ ಕ್ಷಣದಿಂದಲೂ ಈ ಭೂಮಿ ಕ್ಷಯಿಸುತ್ತಿದೆ. ಆಧುನಿಕ ಮನುಷ್ಯ ಭೂಮಿಯ ಒಡಲಿನಿಂದಲೇ ತೆಗೆದು ಉರುವಲಾಗಿ ಉರಿಸಿಟ್ಟ ಈ ಕೊಳ್ಳಿ, ಈಗಾಗಲೇ ಸೃಷ್ಟಿಯ ಹಲವು ಸ್ತರಗಳನ್ನು–ಸಸ್ಯಗಳೂ ಸೇರಿದಂತೆ ಸಾವಿರಾರು ಜೀವ ಪ್ರಬೇಧಗಳನ್ನು, ಅವುಗಳ ತಾವುಗಳನ್ನೂ–ನಾಶ ಮಾಡುವ ಮೂಲಕ ಕಣ್ಣಿಗೆ ಕಾಣದ ಸೃಷ್ಟಿಯ ಸೂಕ್ಷ್ಮ ಸಂಯೋಜನೆಯ ಹಲವು ನೆಲೆಗಳನ್ನು ಸುಟ್ಟು ಕರಕಲಾಗಿಸಿದೆ. ಇದರಿಂದಾಗಿ ಈಗ ಸಂಪೂರ್ಣ ನಾಶದ ದುಃಸ್ವಪ್ನಕ್ಕೆ ಈಡಾರುವ ಮನುಷ್ಯ ಪರಿಸರ ಪ್ರಜ್ಞೆ, ಹವಾಮಾನ ಮಾತುಕತೆ, ಭೂಮಿ

ಶೃಂಗ ಸಭೆ, ಸುಸ್ಥಿರ ಅಭಿವವೃದ್ಧಿ ಎಂಬೆಲ್ಲ ಶಬ್ದಗಳನ್ನು ಬಡಬಡಿಸುತ್ತಾ ಎಲ್ಲವನ್ನೂ ಮತ್ತೆ ಸರಿ ಮಾಡುವ ಪವಾಡ ಸದೃಶವೆನ್ನಬಹುದಾದ ಮಹಾ ಸಾಹಸಕ್ಕೆ ಕೈ ಹಚ್ಚಿದ್ದಾನೆ.

ಆದರೆ ಅವನು ನಂಬಿದ್ದ 'ವೈಜ್ಞಾನಿಕ' ನಂಬಿಕೆಯೇ ಅವನಿಗೆ ಇಲ್ಲಿ ಕೈಕೊಡುತ್ತಿದೆ! ಇದು ಪ್ರಚೋದಿಸಿದ ಅಂತ್ಯವಿಲ್ಲದ ಸುಖದ ಐಲು ಜಗತ್ತಿನ ಜನತೆಯ ಆತ್ಮವನ್ನೇ ನಾಶ ಮಾಡಿ, ಭೂಮಿಯ ಈ ಪುನರುಜ್ಜೀವನದ ಈ ಸಾಹಸಕ್ಕೆ ಹಲವು ಸ್ತರದ ಮಾನಸಿಕ ಮತ್ತು ತಾಂತ್ರಿಕ ಎಡರು ತೊಡರುಗಳನ್ನು ಸೃಷ್ಟಿಸುತ್ತಿದೆ: ಯಾವಾವುದೋ ಕಾರಣಗಳ ಮೇಲೆ ಸಾಮೂಹಿಕ ಸಂಕಲ್ಪ ಸಂಧಾನಗಳ ಪ್ರಯತ್ನಗಳು ವಿಫಲವಾಗುತ್ತಿವೆ. ಹಾಗಾಗಿ ಇಂದು ಈ ಹವಾಮಾನ ಮತುಕತೆ ಎಂಬ ವಿದ್ಯಮಾನ ನಮ್ಮೆಲ್ಲರ ಅಳಿವು ಉಳಿವಿನ ಆತ್ಯಂತಿಕ ಪ್ರಶ್ನೆಯಾಗದೆ, ನಮ್ಮ ಬಡತನ, ನಿಮ್ಮ ಶ್ರೀಮಂತಿಕೆ, ಎಲ್ಲರ ಸಮಾನ ಅಭಿವೃದ್ಧಿ ಇತ್ಯಾದಿ ಸ್ಪರ್ಧಾತ್ಮಕ ಸ್ವಾರ್ಥದ ರಾಜಕೀಯ ಪರಿಭಾಷೆಯ ಹುದಲಲ್ಲಿ ಸಿಕ್ಕಿಹಾಕಿಕೊಂಡಿದೆ. ಇದು ಈ ಹೊಸ ವೈಜ್ಞಾನಿಕತೆ ಹುಟ್ಟಿಸಿದ ಆಧುನಿಕ ಮೌಢ್ಯ-ಅವಿವೇಕಗಳ ಬಾಹುಗಳು ಇಂದು ನಮ್ಮ ಪ್ರಜ್ಞೆಯ ಎಷ್ಟು ಆಳದವರೆಗೆ ಹರಡಿಕೊಂಡಿವೆ ಎಂಬುದರ ಸೂಚನೆ ನೀಡುತ್ತಿದೆ.

ಇದರ ಒಂದು ಜಾಗತಿಕ ಮತ್ತು ಒಂದು ಸ್ಥಳೀಯ ಚಿತ್ರಗಳನ್ನು ನೀಡುವ ಎರಡು ಲೇಖನಗಳನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ.–ಸಂ.

ಅಕ್ಟೋಬರ್, ೨೦೧೨

ಜನ ನಾಯಕನಲ್ಲದವನ ಫಜೀತಿಗಳು

ಪ್ರಿಯ ಓದುಗರೇ,

ಅಂತೂ ನಮ್ಮ ಪ್ರಧಾನಮಂತ್ರಿಯವರು ತಮ್ಮದು ಧೀರ ನೀತಿ, ಧೀರ ರಾಜಕಾರಣ ಎಂದು ರಾಷ್ಟ್ರಕ್ಕೆ ಮನವರಿಕೆ ಮಾಡುವ ಗಂಭೀರ ಪ್ರಯತ್ನವೊಂದನ್ನು ಮಾಡಿದ್ದಾರೆ. ತಾವು ರಾತ್ರೋರಾತ್ರಿ ಇದ್ದಕ್ಕಿದ್ದಂತೆ ಪ್ರಕಟಿಸಿದ ಡೀಸಲ್ ಬೆಲೆ ಏರಿಕೆ, ಸಬ್ಸಿಡಿ ಆಧಾರಿತ ಅಡುಗೆ ಅನಿಲ ಸಿಲಿಂಡರುಗಳ ಪೂರೈಕೆ ಮೇಲಿನ ಮಿತಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬಹು ಮುದ್ರೆ ಚಿಲ್ಲರೆ ಮಾರಾಟದಲ್ಲಿ ಶೇ.೫೧ರವರೆಗೆ ನೇರ ಬಂಡವಾಳ ಹೂಡಿಕೆಗೆ ಅನುಮತಿ ನೀಡುವ ಕಾರ್ಯಕ್ರಮವನ್ನು ಘೋಷಿಸಿದ್ದಾರೆ. ಇದರ ವಿರುದ್ಧ ವಿರೋಧ ಪಕ್ಷಗಳು ನಡೆಸಿರುವ ಚಳುವಳಿಯಿಂದ ಅತಂಕಿತರಾದವರಂತೆ, ರಾಷ್ಟ್ರವನ್ನುದ್ದೇಶಿಸಿ ಪ್ರಸಾರ ಭಾಷಣವೊಂದನ್ನು ಯೋಜಿಸಿಕೊಂಡು ತಮ್ಮ ಈ ಕಾರ್ಯಕ್ರಮದ ಅನಿವಾರ್ಯತೆ ಮತ್ತು ಪ್ರಯೋಜನಗಳನ್ನು ಜನತೆಗೆ ವಿವರಿಸಿದ್ದಾರೆ.

ಅವರ ಈ ಭಾಷಣದಲ್ಲಿ ಈವರೆಗೆ ಈ ಬಗ್ಗೆ ಕೇಳಿರಲಾರದ ಯಾವುದೇ ಹೊಸ ಮಾತು ಇರಲಿಲ್ಲವಾದರೂ, ಇವೊತ್ತಿನ ರಾಜಕಾರಣದ ಸಂದರ್ಭದಲ್ಲಿ ಮಹತ್ವದ್ದು ಎನ್ನಿಸುವ ಒಂದು ಮಾತು ಇತ್ತು. ಅದು ಅವರ ಈ ಭಾಷಣದ ಕೇಂದ್ರ ಮಾತೂ ಹೌದು. ಅದೇಂದರೆ, 'ಹಣ ಗಿಡದಲ್ಲಿ ಹುಟ್ಟುವುದಿಲ್ಲ' ಎಂಬುದು. ಇದು ಅಸಾಮಾನ್ಯ ಮಾತೇನೂ ಅಲ್ಲವಾದರೂ, ಮನಮೋಹನ ಸಿಂಗರ ಅರ್ಥಶಾಸ್ತ್ರ ಮತ್ತು ಅದನ್ನಾಧರಿಸಿದ ರಾಜಕಾರಣದ ಸಂದರ್ಭದಲ್ಲಿ ಬಹು ಮುಖ್ಯ ಮಾತು ಎಂದು ನನಗನ್ನಿಸುತ್ತದೆ. ಏಕೆಂದರೆ ಈ ಮಾತಿನ ಮೂಲಕ ಅವರು ತಮ್ಮ ಅರ್ಥಶಾಸ್ತ್ರ ಮತ್ತು ರಾಜಕಾರಣದ ಚಾಲಕ ಶಕ್ತಿ ಹಣ ಎಂದು ಅವರು ನೇರವಾಗಿ ಹೇಳುತ್ತಿದ್ದಾರೆ. ಹೌದು ಇಂದಿನ ಆಧುನಿಕ ಜಗತ್ತಿನಲ್ಲಿ ಒಬ್ಬ ಮನುಷ್ಯ ಅಥವಾ ಒಂದು ರಾಷ್ಟ್ರ ಬದುಕಲು ಹಣ ಅಗತ್ಯವಷ್ಟೇ ಅಲ್ಲ, ಮುಖ್ಯ ಕೂಡ. ಇದರ ಬಗ್ಗೆ ಎರಡು ಮಾತಿಲ್ಲ. ಆದರೆ ಈ

ಮಾತಿನ ಜೊತೆಗೇ, ಈ ಹಣ ಎಷ್ಟು ಬೇಕು, ಏಕೆ ಬೇಕು ಮತ್ತು ಎಷ್ಟು ಮುಖ್ಯ, ಹೇಗ ಮುಖ್ಯ ಎಂಬ ಪ್ರಶ್ನೆಗಳನ್ನೂ ಕೇಳಿಕೊಳ್ಳದೇ ಹೋದರೆ ಈ ಹಣವೇ ಬದುಕಿನ ಚಾಲಕ ಶಕ್ತಿಯಾಗಿ ಮನುಷ್ಯ ಕ್ರೂರಿಯೂ, ರಾಷ್ಟ್ರವು ಹಿಂಸಕವೂ ಆಗುತ್ತಾ ಹೋಗುತ್ತದ ಈ ಸತ್ಯವನ್ನು ನಾವಿಂದು ಮನುಷ್ಯ ಮತ್ತು ರಾಷ್ಟ್ರಗಳೆರಡೂ ನೆಲೆಗಳಲ್ಲಿ ನೋಡುತ್ತಿದ್ದೇವೆ ನಮ್ಮ ರಾಷ್ಟ್ರ ಜೀವನವನ್ನು ಒಮ್ಮೆ ಅವಲೋಕಿಸಿದರೆ ಯಾರಿಗಾದರೂ ಹೀಗನ್ನಿಸುವುದಿಲ್ಲವೇ?

ಇದರ ವಿವರಣೆಗೆ ಆಮೇಲೆ ಬರೋಣ. ಮೊದಲು ಮನಮೋಹನ ಸಿಂಗರಿ ಹಣ ಏಕೆ ಬೇಕಾಗಿದೆ ನೋಡೋಣ. ಅವರಿಗೆ ಹಣ ಈಗ ಮುಖ್ಯವಾಗಿ ಬೇಕಾಗಿರುವುದು ತಮ್ಮ ಮಹತ್ವಾಕಾಂಕ್ಷೆಯ ಮುಂಗಡ ಪತ್ರದಲ್ಲಿನ ಕೊರತೆಯನ್ನು ತುಂಬಿಕೊಳ್ಳಲು ಇದು ಎರಡು ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ. ಒಂದು, ಮೊದಲಾಗಿ ಈ ಕೊರತ ಸೃಷ್ಟಿಯಾದದ್ದು ಹೇಗೆ, ಏಕೆ? ಎರಡು, ಈ ಕೊರತೆಯನ್ನು ತುಂಬಿಕೊಳ್ಳುವ ತುತು ಈಗಲೇ ಏಕೆ ಉಂಟಾಯಿತು? ಒಂದು ರಾಷ್ಟ್ರದ ಹಣಕಾಸು ಕೊರತೆಯ ಸೃ ಎಂದರೆ, ನಿರೀಕ್ಷಿತ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುವ ಆಡಳಿತ ಎಂದರ್ಥ ಅಂದರೆ ಅನುತ್ಪಾದಕ ವೆಚ್ಚದ ಮತ್ತು ಆದಾಯ ಸೋರಿಕೆಯ ಮೇಲಿನ ನಿಯಂತ್ರ ತಪ್ಪಿದ ಅದಕ್ಷ ಆಡಳಿತ.

ಬಡತನ ನಿವಾರಣೆಗಾಗಿ ಈ ಸರ್ಕಾರ ಹೂಡಿರುವ ಕೋಟಿ ಕೋಟಿ ರೂಪಾಯಿಗ ವೆಚ್ಚದ ಕಾರ್ಯಕ್ರಮಗಳ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಕೈಗೊಂಡಿರುವ ಯೋಜನೆಗ ನಿರ್ವಹಣೆಯಲ್ಲಿ ಈ ಮನಮೋಹನ ಸಿಂಗರ ಸರ್ಕಾರ ಮುಕ್ತ ಮತ್ತು ವೈವಿಧ್ಯಮಯ ಭ್ರಷ್ಟಾಚಾರಕ್ಕೆ ಅವಕಾಶ ಕೊಟ್ಟಿದೆ. ಲಕ್ಷ ಲಕ್ಷ ಕೋಟಿ ರೂಪಾಯಿಗಳ ಈ ಭ್ರಷ್ಟಾಚಾರ ಹಗರಣಗಳು ಈಗ ಒಂದೊಂದಾಗಿ ಬಯಲಾಗುತ್ತಿದ್ದಂತೆ 'ಬಜೆಟ್ ಕೊರತೆ ನೀಗಿಸು ಅರ್ಥಶಾಸ್ತ್ರೀಯ ಪರಿಭಾಷೆಯ ಮೋಡಿ ಹಾಕುವ ಮೂಲಕ ಈ ಹಗರಣಗಳನ ಸಾರ್ವಜನಿಕ ಚರ್ಚೆಯಿಂದ ದೂರ ಸರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಹಾಗೇ ಭ್ರಷ್ಟಾಚಾರದ ಪಿಡುಗನ್ನು ನೇರ ಎದುರಿಸಿ, ಇದು ದೋಚಿಕೊಂಡು ಹೋಗಿರು ಜನರ ಹಣವನ್ನು ಸರ್ಕಾರಕ್ಕೆ ಹಿಂದಿರುಗಿಸಿಕೊಳ್ಳುವ ರಾಜಕೀಯ ಇಚ್ಛಾಶಕ್ತಿ ಕೊರತೆಯನ್ನು ಒಪ್ಪಿಕೊಂಡಿದ್ದಾರೆ. ಹಾಗೆಂದೇ ಅವರನ್ನು ಎಲ್ಲರೂ ದುರ್ಬಲ ಪ್ರಧಾ ಎಂದು ಕರೆಯುತ್ತಿರುವುದು.

ಈ ದೌರ್ಬಲ್ಯದ ಎರಡು ಮೂಲಗಳೆಂದರೆ ಅವರು ಜನತೆಯ ನೇ ಪ್ರತಿನಿಧಿಯಾಗದೆ ರಾಷ್ಟ್ರದ ರಾಜಕೀಯ ನಾಯಕ ಸ್ಥಾನವಾದ ಪ್ರಧಾನಿ ಪಟ್ಟವೇರಿರುವುದು. ಇನ್ನೊಂದು, ಅವರು ನಂಬಿರುವ ಮುಕ್ತವೆಂದು ಕರೆಯಲಾಗು ಆರ್ಥಿಕ ನೀತಿಯೇ ಮೂಲತಃ ಭ್ರಷ್ಟಾಚಾರದ ಆಧಾರದ ಮೇಲೇ ನಿಂತಿರುವುದ ಮುಕ್ತ ಹೂಡಿಕೆಗಳಲ್ಲಿ ಅದರ ಮುಕ್ತತೆಯ ಕಾರಣದಿಂದಾಗಿಯೇ ಅದರ ಒಂ

ಭಾಗ ಮಧ್ಯವರ್ತಿಗಳ ಪಾಲಾಗಿ ಕಪ್ಪು ಹಣ ಸೃಷ್ಟಿಯಾಗುವುದು ಸಹಜ ಮತ್ತು ಇದೆಲ್ಲ ಇಂತಹ ಆರ್ಥಿಕತೆಯ ಅವಿಭಾಜ್ಯ ಅಂಗ ಎಂದು ಅದರ ರಾಜಕಾರಣ ನಂಬಿದೆ. ಹಾಗಾಗಿಯೇ, 2ಜಿ, ಕಾಮನ್‌ವೆಲ್ತ್ ಕ್ರೀಡೆ, ದೆಹಲಿ ವಿಮಾನ ನಿಲ್ದಾಣ, ಏರ್ ಇಂಡಿಯಾ, ಕಲ್ಲಿದ್ದಲು ಗಣಿ ಗುತ್ತಿಗೆ ಇತ್ಯಾದಿ ಬೃಹತ್ ಹಗರಣಗಳು ನಡೆಯುತ್ತಿದ್ದರೂ, ಈ ಬಗ್ಗೆ ಹಲವು ನೆಲೆಗಳಿಂದ ಎಚ್ಚರಿಕೆ ಬಂದಿದ್ದರೂ, ಮನಮೋಹನ ಸಿಂಗ್ ಮತ್ತು ಅವರ ಸಹಚರರು ಅದನ್ನು ನೋಡಿಯೂ ನೋಡದಂತಿದ್ದುದು. ಇದಕ್ಕೆ ಪ್ರತಿಯಾಗಿ ಮನಮೋಹನ್ ಶುದ್ಧ ಹಸ್ತದ ಮನುಷ್ಯ ಎಂಬುದು ವಿವಾದಾತೀತ ಸಂಗತಿಯಲ್ಲವೇ ಎಂದು ಕೇಳುವವರಿದ್ದಾರೆ. ಆದರೆ ಭ್ರಷ್ಟ ಬಂಡವಾಳವಾದ ತಮ್ಮ ಕಾರುಬಾರು ನಡೆಸಲಾರಂಭಿಸುವುದೇ ಇಂತಹ ಶುದ್ಧ ಹಸ್ತದ ಮುಖವಾಡಗಳನ್ನು ಬಳಸಿಯೇ. ಇದನ್ನು ಆಧುನಿಕ ಬಂಡವಾಳವಾದದ ಸಾಧನವಾದ ವಾಣಿಜ್ಯ ವ್ಯವಸ್ಥಾಪನಾ ಶಾಸ್ತ್ರ ಪ್ರತಿಪಾದಿಸುವ ತಂತ್ರಗಳನ್ನು ಬಲ್ಲ ಯಾರಿಗೂ ಹೇಳುವ ಅಗತ್ಯವಿಲ್ಲ. ರಾಜಕಾರಣದ ಹಿನ್ನೆಲೆಯೇ ಇಲ್ಲದ ಮನಮೋಹನರು ಭಾರತದ ರಾಜಕಾರಣವನ್ನು ಪ್ರವೇಶಿಸಿದ್ದೇ ಅವಸರವಸರದಲ್ಲಿ ರಾಜ್ಯ ಸಭೆ ಎಂಬ ಹಿಂಬಾಗಿಲಿನಿಂದ; ಅದೂ ಅವರು ಅಸ್ಸಾಂ ರಾಜ್ಯದ ಗೌಹಾತಿ ನಗರದ ಬಹುಕಾಲದ ನಿವಾಸಿ ಎಂದು ನಮ್ಮ ಸಂವಿಧಾನಕ್ಕೆ ಹಸಿ ಸುಳ್ಳು ಹೇಳುವ ಮೂಲಕ. ಇದೆಂತಹ ನೈತಿಕ ರಾಜಕಾರಣ? ಯಾಕೆ ಇದು ಆಗ ಅಗತ್ಯವಾಯಿತು? ಯೋಚಿಸಬೇಕು.

ಇನ್ನು ಈ ಕೊರತೆಯನ್ನು ನೀಗಿಸುವ ತುರ್ತು ಈಗಲೇ ಏಕೆ ಉಂಟಾಯಿತು ಎಂಬ ಪ್ರಶ್ನೆ. ಈ ತುರ್ತಿಗೆ ಕಾರಣ, ಮೇಲೆ ಹೇಳಿದಂತಹ ಅಧ್ಯಕ್ಷ ಆರ್ಥಿಕ ಆಡಳಿತದ ಪರಿಣಾಮವಾಗಿ, ಹಣದುಬ್ಬರ ಇನ್ನೂ ಹೆಚ್ಚಾಗುತ್ತಾ ಹೋಗಿ, ಅದು ನಮ್ಮ ಆರ್ಥಿಕತೆಯನ್ನು ಒಳಗಿಂದಲೇ ಕೊರೆದುಹಾಕುವುದರ ಪರಿಣಾಮವಾಗಿ ನಮ್ಮ ಆರ್ಥಿಕತೆಯ ಅಂತಾರಾಷ್ಟ್ರೀಯ ವಿಶ್ವಾಸಾರ್ಹತೆ ತೀರಾ ಕೆಳಗಿಳಿದು ಹಣವಂತ ರಾಷ್ಟ್ರಗಳಿಂದ ಮತ್ತು ಸಂಸ್ಥೆಗಳಿಂದ ಸಾಲ/ಹೂಡಿಕೆ ದೊರೆಯದೇ ಹೋಗುವ ಭೀತಿ ಸನ್ನಿಹಿತವಾದುದರಿಂದ. ನಮ್ಮ ಆರ್ಥಿಕತೆ ಅಷ್ಟರಮಟ್ಟಿಗೆ 'ಹೊರಗುತ್ತಿಗೆ' ವ್ಯವಸ್ಥೆಯಲ್ಲಿ ಇಂದು ಸಿಕ್ಕಿಹಾಕಿಕೊಂಡಿದೆ. ಎಷ್ಟರ ಮಟ್ಟಿಗೆ ಎಂದರೆ, ತೊಂಭತ್ತರ ದಶಕದಲ್ಲಿ ನಾವು ನಮ್ಮ ರಾಷ್ಟ್ರದ ಚಿನ್ನವನ್ನೆಲ್ಲ ವಿಶ್ವಬ್ಯಾಂಕಿನಲ್ಲಿ ಅಡವಿಟ್ಟು ಬದುಕಿಕೊಂಡೆವೆಂದು ಹೇಳುತ್ತಾರಲ್ಲಾ, ಆ ಸ್ಥಿತಿಗೆ ನಾವು ಇಂದು ಬಂದು ಮುಟ್ಟಿದ್ದೇವೆಂದು ಮನಮೋಹನ ಸಿಂಗ್ ಎಚ್ಚರಿಸಿದ್ದಾರೆ!

ಆದರೆ ಇದು ಎಂತಹ ವಿಚಿತ್ರ ವಿಪರ್ಯಾಸವೆಂದರೆ, ಆ ಬಿಕ್ಕಟ್ಟನ್ನು ತಮ್ಮ ಮುಕ್ತ ಆರ್ಥಿಕ ನೀತಿಯ ಮೂಲಕ ಪರಿಹರಿಸಿದ್ದಾಗಿ ಹೇಳಿಕೊಳ್ಳುವ ಮನಮೋಹನಸಿಂಗರೇ ಈ ಮೂಲಕ ಪರೋಕ್ಷವಾಗಿ ತಮ್ಮ ಈ ಪರಿಹಾರವೇ ಇಂದು ಸಮಸ್ಯೆಯಾಗಿದೆ ಎಂದು ಹೇಳಿಕೊಳ್ಳುವ ಸ್ಥಿತಿ ತಲುಪಿದ್ದಾರೆ! ಪಶ್ಚಿಮದ ಸಮೃದ್ಧಿಯ ಹೆಸರಿನಲ್ಲಿ, ಎರಡಂಕಿ ಪ್ರಗತಿಯ ಹೆಸರಿನಲ್ಲಿ, ಅಭಿವೃದ್ಧಿಯ ಹೆಸರಿನಲ್ಲಿ ಈ ಇಪ್ಪತ್ತು ವರ್ಷಗಳಲ್ಲಿ

ರಾಷ್ಟ್ರ ಜೀವನದಲ್ಲಿ ಸಲ್ಲದ ಆಸೆಗಳನ್ನು ಕೆರಳಿಸಿಬಿಟ್ಟು, ಈಗ ಅದನ್ನು ಪೂರೈಸಲಾಗದ ರಾಜಕೀಯ ಬಿಕ್ಕಟ್ಟಿಗೆ ಸಿಲುಕಿಕೊಂಡಿರುವ ಈ ಮನಮೋಹನ ಸಿಂಗ್, ಜನರೀಗ ಒಂದಿಷ್ಟು ತ್ಯಾಗ ಮಾಡದಿದ್ದರೆ ಪಶ್ಚಿಮದ ರಾಷ್ಟ್ರಗಳ ಗತಿ ನಮಗೂ ಆದೀತು ಎಂದು ಎಚ್ಚರಿಸುತ್ತಿರುವುದು ಒಂದು 'ಕಾಮಿಡಿ' ನಾಟಕದ ದೃಶ್ಯದಂತೆ ಮಾತ್ರ ಕಾಣುತ್ತಿದೆ!

ಇದು ನಮ್ಮನ್ನು ಮೊದಲ ಪ್ರಶ್ನೆಗೆ ಕೊಂಡೊಯ್ಯುತ್ತದೆ: ಹಣ ಬೇಕು ನಿಜ. ಆದರೆ ಏಕೆ, ಎಷ್ಟು ಬೇಕು? 'ಹಣ ಗಿಡದಲ್ಲಿ ಬೆಳೆಯುವುದಿಲ್ಲ'

ಎಂಬ ಜನಜನಿತ ನಾಣ್ನುಡಿಯ ಉಲ್ಲೇಖದ ಮೂಲಕ ರಾಷ್ಟ್ರಕ್ಕೆ ವಿವೇಕ ಹೇಳಿದ ಮನಮೋಹನಸಿಂಗ್‌ರಿಗೆ ಈ ಸಂದರ್ಭದಲ್ಲಿ ಇಷ್ಟೇ ಜನಜನಿತವಾದ 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಸರಳ ನಾಣ್ನುಡಿಯ ಮೂಲಕ ಯಾರಾದರೂ ವಿವೇಕ ಹೇಳಬೇಕಿದೆ. ಏಕೆಂದರೆ ಈ ಪ್ರಶ್ನೆಗಳನ್ನು ಕೇಳಿಕೊಳ್ಳದ ವಿವೇಕಹೀನ ಆರ್ಥಿಕ ನೀತಿಯನ್ನು, ಆ ಮೂಲಕ ರಾಷ್ಟ್ರ ಜೀವನದಲ್ಲಿ ಎಂದೂ ತಣಿಯದ ಒಟ್ಟಾರೆ ದಾಹವನ್ನೂ ಸೃಷ್ಟಿಸಿ ದೇಶದ ತುಂಬಾ ವಿವಿಧ ನೆಲೆಗಳಲ್ಲಿ ಮತ್ತು ಸ್ತರಗಳಲ್ಲಿ ಅಶಾಂತಿಯ, ಅಭದ್ರತೆಯ ವಾತಾವರಣವನ್ನು ಸೃಷ್ಟಿಸಿದ್ದಾರೆ. ದೇಶದ ಸಾಮಾನ್ಯ ಪ್ರಜೆಗಳ ಮೇಲೆ ದೇಶ ದ್ರೋಹದ ಮೊಕದ್ದಮೆಗಳನ್ನು ಒಂದಾದಮೇಲೊಂದರಂತೆ ಹೂಡುವ ಪರಿಸ್ಥಿತಿ ಉಂಟಾಗಿದೆ ಎಂದಮೇಲೆ ನಾವಿಂದು ಒಂದು ರಾಷ್ಟ್ರವಾಗಿ, ಒಂದು ಪ್ರಜಾಪ್ರಭುತ್ವವಾಗಿ ಎಂತಹ ಅಸ್ಥಿರತೆಯ ಪರಿಸ್ಥಿತಿಯಲ್ಲಿದ್ದೇವೆ ಎಂಬುದು ಗೊತ್ತಾಗುತ್ತದೆ. ಇದರರ್ಥ ಇಷ್ಟೇ: ಹಳೆಯ ಆರ್ಥಿಕ ನೀತಿಯ ವಿಫಲತೆಗೆ ನೀತಿಯಷ್ಟೇ ಕಾರಣವೇ ಅಥವಾ ಬೇರೇನಾದರೂ ಕಾರಣಗಳಿವೆಯೇ ಎಂಬುದರ ಅಧ್ಯಯನದ ಗೋಜಿಗೂ ಹೋಗದೆ, ಅದರ ಸ್ಥಗಿತತೆಯನ್ನೇ ನೆಪವಾಗಿಸಿಕೊಂಡು, ನಮ್ಮ ಆಂತರಿಕ ಸಾಮರ್ಥ್ಯವನ್ನು ಮೀರಿದ ಪ್ರಗತಿಯ ಗುರಿ ಇಟ್ಟುಕೊಂಡ ಆರ್ಥಿಕ ನೀತಿಗೆ ಬಹು ನಾಟಕೀಯವಾಗಿ ಬಲಿ ಬಿದ್ದುದರ ಹಿಂದಿನ ರಾಜಕಾರಣ ನಮಗಿನ್ನೂ ಪೂರ್ತಿ ಅರ್ಥವಾಗಬೇಕಿದೆ.

ಒಂದು ಮುಂಗಡ ಪತ್ರದಲ್ಲಿನ ಕೊರತೆಯನ್ನು ನೀಗುವುದಿರಲಿ, ಪೂರ್ತಾ ಮೂರ್ನಾಲ್ಕು ಮುಂಗಡ ಪತ್ರಗಳಿಗೆ ಸಾಕಾಗುವಷ್ಟು ವಿದೇಶಿ ಬ್ಯಾಂಕುಗಳಲ್ಲಿರುವ ಬೃಹತ್ ಮೊತ್ತದ ಕಪ್ಪು ಹಣವನ್ನು ವಾಪಸ್ ತರಲು ಸರ್ಕಾರ ಅನುಮಾನಾಸ್ಪದವಾದ ರೀತಿಯಲ್ಲಿ ತಡಮಾಡುತ್ತಿರುವುದಾದರೂ ಏಕೆ? ಕಳೆದ ವರ್ಷ ಆರ್ಥಿಕ ಹಿಂಜರಿತದ ಕಾರಣದ ಮೇಲೆ ಕಾರ್ಪೊರೇಟ್ ಸಂಸ್ಥೆಗಳಿಗೆ ನೀಡಿದ ೫ ಲಕ್ಷ ಕೋಟಿ ರೂಪಾಯಿಗಳ ಪರಿಹಾರದ ಮುಂದೆ ಡೀಸಲ್ ಮತ್ತು ಅಡುಗೆ ಸಿಲಿಂಡರುಗಳ ಮೇಲೆ ನೀಡುವ ಸಬ್ಸಿಡಿ ಎಲ್ಲಿ ನಿಲ್ಲುತ್ತದೆ? ಡೀಸಲ್ ಶ್ರೀಮಂತರ ಇಂಧನ ಮತ್ತು ಬಡವರು ವರ್ಷದಲ್ಲಿ ಆರು ಅಡುಗೆ ಸಿಲಿಂಡರುಗಳಿಗಿಂತ ಹೆಚ್ಚು ಬಳಸುವುದಿಲ್ಲ ಎಂಬ ಹಸಿ ಸುಳ್ಳುಗಳನ್ನು ಏಕೆ ಹೇಳುವಿರಿ? ಕೃಷಿ ಕ್ಷೇತ್ರದಲ್ಲಿ, ನಿರ್ದಿಷ್ಟವಾಗಿ ಗ್ರಾಮಾಂತರ ಪ್ರದೇಶಗಳಲ್ಲಿನ ಶೀತಲೀಕರಣ ಕೇಂದ್ರಗಳ ಸ್ಥಾಪನೆಯ ಮೇಲಿನ ಹೂಡಿಕೆಯನ್ನು ಬೇಕೆಂದೇ ಕಡಿಮೆ

ವಮಾಡಿ ಈಗ ನೇರ ವಿದೇಶಿ ಬಂಡವಾಳ ಹೂಡಿಕೆಯಿಂದ ರೈತರಿಗೆ ಪ್ರಯೋಜನವಾಗುವುದು, ಶೀತಲೀಕರಣ ಕೇಂದ್ರಗಳ ಸ್ಥಾಪನೆಗೆ ಬಂಡವಾಳ ಲಭ್ಯವಾಗುವುದು ಎಂಬ ಆತ್ಮದ್ರೋಹದ ಮಾತುಗಳನ್ನೇಕೆ ಆಡುತ್ತಿರುವಿರಿ? ಈ ರಾಜಕಾರಣ ಯಾವ ಮಟ್ಟಕ್ಕೆ ಬಂದು ಮುಟ್ಟಿದೆಯೆಂದರೆ, ಈ ರಾಜಕಾರಣವನ್ನು ರಾಷ್ಟ್ರಬಾಯಿ ಮುಚ್ಚಿಕೊಂಡು ಒಪ್ಪಿಕೊಳ್ಳದಿದ್ದಲ್ಲಿ, ಕೋಮುವಾದಿ ಸರ್ಕಾರ ಬಂದುಬಿಡುತ್ತದೆ ಎಂಬ ಗುಮ್ಮನನ್ನು ಕರೆಯುವ ವಿದೂಷಕತನಕ್ಕೂ ಕೆಲವರು ಇಳಿದಿದ್ದಾರೆ! ಪ್ರಜಾಪ್ರಭುತ್ವವೆಂದರೆ ಅದಕ್ಷತೆ, ಭ್ರಷ್ಟಾಚಾರ ಮತ್ತು ಕೋಮುವಾದಗಳ ನಡುವಿನ ಆಯ್ಕೆಯ ಆಟವಷ್ಟೇ ಎಂದು ಇವರು ತಿಳಿದಿರುವಂತಿದೆ.

ಆದರೆ ಇದು ಡೀಸಲಿನ ಬೆಲೆ ಏರಿಕೆ, ಸಿಲಿಂಡರುಗಳ ಸಬ್ಸಿಡಿ, ವಿದೇಶಿ ನೇರ ಬಂಡವಾಳದ ಅಗತ್ಯವನ್ನು ಕುರಿತ ಇಂದು ರಾಷ್ಟ್ರದಲ್ಲಿ ನಡೆದಿರುವ ಬೇಕು–ಬೇಡಗಳ ಚರ್ಚಾಸ್ಪರ್ಧೆಯನ್ನು ಮೀರಿದ ರಾಷ್ಟ್ರದ ಇಡಿಯಾದ ಬದುಕಿನ ಒಟ್ಟಾರೆ ಸಂತೋಷ, ನೆಮ್ಮದಿ, ಆರೋಗ್ಯ ಮತ್ತು ಸುಸ್ಥಿರತೆಯ ಪ್ರಶ್ನೆ. ಬಹು ದೊಡ್ಡ ಪ್ರಶ್ನೆ. ಗಾಂಧಿಗೆ ಜನ್ಮ ಕೊಟ್ಟ ನಾಡು ಈ ಪ್ರಶ್ನೆಯ ಕಡೆ ಮುಖ ಕೂಡ ತಿರುಗಿಸದಂತಹ ಸ್ಥಿತಿ ತಲುಪಿದೆ ಎಂದರೆ, ಮುಂದೆ ಮಾತೇ ಹೊರಡದು.

<u>ಸಮಕಾಲೀನ</u>

ಸದ್ದು! ವಿಚಾರಣೆ ನಡೆಯುತ್ತಿದೆ!!

ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ನ್ಯಾಯಾಂಗದ ಇಂದಿನ ಪರಿಸ್ಥಿತಿಯ ಬಗ್ಗೆ ಬರೆಯುತ್ತಾ, ಅದನ್ನು ರಾಷ್ಟ್ರ ಕಲ್ಪನೆಯ ಚರ್ಚೆಗೆ ತಂದು ನಿಲ್ಲಿಸಿದ್ದೀರಿ, ಅದು ಅರ್ಥವಾಗುತ್ತಿಲ್ಲ ಎಂದು ಕೆಲವು ಓದುಗರು ತಿಳಿಸಿದ್ದಾರೆ. ಅನ್ಯಾಯ ಸಂಭವಿಸುವುದು ಒಂದು ಸಂದರ್ಭದಲ್ಲಿ, ಒಂದು ಸ್ಥಳದಲ್ಲಿ. ಒಂದು ಕಾಲದಲ್ಲಿ. ಅದರ ಪರಿಶೀಲನೆ ಮತ್ತು ಇತ್ಯರ್ಥದ ಕೆಲಸವನ್ನು ಆ ಸಂದರ್ಭ, ಸ್ಥಳ ಮತ್ತು ಕಾಲಗಳಿಂದ ದೂರ ದೂರಕ್ಕೆ ಒಯ್ದಷ್ಟೂ ಅದು ಅಸ್ಪಷ್ಟತೆ, ಜಟಿಲತೆ, ತಂತ್ರ–ಕುತಂತ್ರಗಳಿಗೆ ಈಡಾಗುತ್ತಾ ಹೋಗುತ್ತದೆ. ಇಂದು ನಾವು ಅಳವಡಿಸಿಕೊಂಡಿರುವ ವ್ಯಾಜ್ಯ ಪರಿಹಾರ ವಿಧಾನ ಅಥವಾ ಆಧುನಿಕ ನ್ಯಾಯಾಂಗ ಪದ್ಧತಿ ಈ ಅಪಾಯಗಳಲ್ಲೇ ಹುಟ್ಟಿದುದಾಗಿದೆ. ಕಾರಣ ಬ್ರಿಟಿಷರು ತಮ್ಮ ಸಾಮ್ರಾಜ್ಯ ವಿಸ್ತರಣಾ ನೀತಿಯ ಮೂಲಕ ಕಟ್ಟಿಕೊಟ್ಟ ಏಕ ಕೇಂದ್ರಿತ ರಾಷ್ಟ್ರ ಕಲ್ಪನೆ ಮತ್ತು ಅದಕ್ಕೆ ಅಗತ್ಯವಾಗಿ ಅವರು ರೂಪಿಸಿಕೊಂಡ ಆಡಳಿತ ವಿಧಾನ ಮತ್ತು ಅದು ಒತ್ತಾಯಿಸುವ ಏಕ ರೂಪದ ಅಂದರೆ ಏಕ ಪರಿಭಾಷೆಯ ನ್ಯಾಯ ಪರಿಹಾರ ವಿಧಾನ. ನಮ್ಮ ಸಂವಿಧಾನದ ಮೂಲಸ್ಫೂರ್ತಿ ಬ್ರಿಟಿಷ್ ಪ್ರಭುತ್ವದ ೧೯೩೫ರ ಭಾರತ ರಕ್ಷಣಾ ಕಾಯಿದೆ ಎಂಬುದನ್ನು ಅರಿತರೆ, ಎಲ್ಲವೂ ಸ್ಪಷ್ಟವಾದೀತು. ಸ್ಪಷ್ಟವಾಗದಿದ್ದರೆ, ಹೋದ ಸಂಚಿಕೆಯಲ್ಲಿ ತಿಳಿಸಿದಂತೆ ದುಚಿಕಾ ಗಿರ್ಡ್ಹೋತ್ರಾ ಮೊಕದ್ದಮೆಯ ವಿವರಗಳನ್ನು ಇಲ್ಲಿ ನೀಡಲಾಗುತ್ತಿದೆ. ದಯವಿಟ್ಟು ಓದಿ ತಿಳಿದುಕೊಳ್ಳಿರಿ.–

ಸಂ

ರುಚಿಕಾ ಗಿರೋತ್ರಾ ಪ್ರಕರಣವೂ, ಕಾನೂನುಬದ್ಧ ಆಡಳಿತವೂ..

ಚಂಡೀಗಢದ ಸೇಕ್ರೆಡ್ ಹಾರ್ಟ್ ಶಾಲೆಯ ೯ನೇ ತರಗತಿಯ ವಿದ್ಯಾರ್ಥಿನಿಯಾಗಿದ್ದ ೧೪ ವರ್ಷಗಳ ಬಾಲೆ ರುಚಿಕಾ ಗಿರ್ಹೋತ್ರಾ ೧೯೯೦ರ ಆಗಸ್ಟ್‌ನಲ್ಲಿ ಅದೇ ನಗರದ ಟೆನ್ನಿಸ್ ಕ್ಲಬ್‌ನಲ್ಲಿ ತನ್ನ ಗೆಳತಿ ಆರಾಧನಾಳೊಂದಿಗೆ ಟೆನ್ನಿಸ್ ತರಬೇತಿಗೆ ಹೋದ ಒಂದು ಸಂಜೆ ಆ ಕ್ಲಬ್ಬಿನ ಮುಖ್ಯಸ್ಥನೂ, ಹರ್ಯಾಣದ ಐ.ಜಿ.ಪಿ.ಯೂ ಅಗಿದ್ದ ಶಂಭುಪ್ರಸಾದ್ ರಾಥೋಡ್‌ನಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಾಳೆ. ಈ ಕಿರುಕುಳವನ್ನು ಅವಳು ಪ್ರತಿಭಟಿಸಿ, ಅದರಿಂದಾಗಿ ಅದು ನಿಲ್ಲುವುದೆಂದು ನಿರೀಕ್ಷಿಸಿದಳಾದರೂ, ನಿರೀಕ್ಷೆ ಸುಳ್ಳಾದ ಕೂಡಲೇ ಅದನ್ನು ಗೆಳತಿಯೊಂದಿಗೆ ಚರ್ಚಿಸಿ ಬ್ಯಾಂಕ್ ಮ್ಯಾನೇಜರ್ ಆಗಿದ್ದ ತನ್ನ ತಂದೆ ಸುಭಾಷ್ ಗಿರ್ಹೋತ್ರಾ ಮತ್ತು ಎಂಜಿನಿಯರ್ ಆಗಿದ್ದ ಆರಾಧನಾಳ ತಂದೆ ಆನಂದ ಪ್ರಕಾಶ್‌ಗೆ ತಿಳಿಸುತ್ತಾಳೆ. ಈ ಸುದ್ದಿ ಆ ಟೆನ್ನಿಸ್ ಕ್ಲಬ್ಬಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದ ಇತರ ಕುಟುಂಬಗಳಿಗೆ ಹರಡಿ ಅವರೆಲ್ಲ ಸಭೆ ಸೇರಿ ಈ ಬಗ್ಗೆ ದೂರು ದಾಖಲಿಸಬೇಕೆಂದು ಈ ಇಬ್ಬರು ಹಿರಿಯರನ್ನೂ ಒತ್ತಾಯಿಸುತ್ತಾರೆ.

ಆರೋಪಿ ಹಿರಿಯ ಪೋಲೀಸ್ ಆಧಿಕಾರಿಯಾದುದರಿಂದ ಈ ಇಬ್ಬರೂ ರಾಜ್ಯದ ಗೃಹ ಕಾರ್ಯದರ್ಶಿಯನ್ನು ಭೇಟಿ ಮಾಡಿ ದೂರು ಸಲ್ಲಿಸುತ್ತಾರೆ. ಇದರ ವಾಸನೆ ಹಿಡಿದ ರಾಥೋಡ್ ತನ್ನ ಜಾತಿಯ ರಾಜಕೀಯ ಪುಢಾರಿಯೊಬ್ಬನ ಸಹಾಯ ಪಡೆದು ಗಿರ್ಹೋತ್ರಾ ಮನೆ ಮುಂದೆ ಗಲಾಟೆ ಮಾಡಿಸುವುದಲ್ಲದೆ, ಕೆಳ ಅಧಿಕಾರಿಗಳಿಗೆ ಹೇಳಿ ಸುಭಾಷ್ ಮತ್ತು ಆನಂದ ಪ್ರಕಾಶ್ ವಿರುದ್ಧ ಕಳ್ಳತನ, ಕೊಲೆ ಸೇರಿದಂತೆ ಹಲವು ಸುಳ್ಳು ಕೇಸುಗಳನ್ನು ಹಾಕಿ ಹೆದರಿಸುವ ಪ್ರಯತ್ನ ಮಾಡುತ್ತಾರೆ. ಹಾಗೇ ಸುಭಾಷ್ ಗಿರ್ಹೋತ್ರಾರ ವರ್ಗಾವಣೆಯ ಸರಣಿ ಆರಂಭವಾಗುತ್ತದೆ.

ಈ ಮಧ್ಯೆ ರಾಜ್ಯದ ಡಿಜಿಪಿಯವರಿಂದ ನಡೆದ ದೂರಿನ ವಿಚಾರಣೆ ಸೆಪ್ಟಂಬರ್‌ನಲ್ಲಿ ರಾಥೋಡರನ್ನು ಅಪರಾಧಿಯೆಂದು ಸೂಚಿಸುತ್ತದೆ. ಇದರಿಂದ ಕೆರಳಿದ ರಾಥೋಡ್ ರುಚಿಕಾಳ ಶಾಲೆಯ ಮೇಲೆ ಒತ್ತಡ ತಂದು ಅವಳನ್ನು ಶಾಲೆಯಿಂದ ಹೊರಹಾಕಿಸುತ್ತಾನೆ. ಆದರೆ ಜಿಲ್ಲಾಧಿಕಾರಿ ತನಿಖೆ ನಡೆಸಿ ಶಾಲೆಯ ತೀರ್ಮಾನವನ್ನು ರದ್ದುಗೊಳಿಸಿದಾಗ ಅವಳ ವಿರುದ್ಧ ಬೀದಿ ರೌಡಿಗಳನ್ನು ಬಿಟ್ಟು ಹಿಂಸೆ ನೀಡುವ ಪರಿಪಾಠ ಆರಂಭವಾಗುತ್ತದೆ. ಗೆಳತಿ ಆರಾಧನಾ ಮೇಲೆಯೂ ವಿವಿಧ ಮೊಕದ್ದಮೆಗಳನ್ನು ದಾಖಲಿಸಲಾಗುತ್ತದೆ. ಸಾಲದೆಂಬಂತೆ ರುಚಿಕಾಳ ೧೩ ವರ್ಷಳ ತಮ್ಮ ಆಶುವಿನ ಮೇಲೆ ಕಾರು ಕಳ್ಳತನ ಸೇರಿದಂತೆ ಐದು ಕಳ್ಳತನದ ಕೇಸುಗಳನ್ನು ದಾಖಲಿಸಲಾಗುತ್ತದೆ,

ಇದ್ದಕ್ಕಿದ್ದಂತೆ ಒಂದು ದಿನ ಆಶುವನ್ನೂ, ಅವನ ಅಕ್ಕ ರುಚಿಕಾಳನ್ನೂ ಬೀದಿ ಬದಿಯಿಂದ ಜೀಪಿನಲ್ಲಿ ಹಾರಿಸಿಕೊಂಡು ಹೋದ ಅಪರಾಧ ವಿಭಾಗದ ಪೋಲೀಸರು ಅವರಿಬ್ಬರನ್ನೂ ಠಾಣೆಯಲ್ಲಿರಿಸಿ ಆಶುಗೆ ಚಿತ್ರಹಿಂಸೆ ನೀಡಿ ಆತನಿಂದ ತಾನು ೧೧ ಕಾರುಗಳನ್ನು ಕದ್ದಿರುವುದಾಗಿ ಬರೆದುಕೊಡಲು ಒತ್ತಾಯಿಸುತ್ತಾರೆ. ರುಚಿಕಾಳನ್ನು ದೂರು

ಹಿಂಪಡೆಯದಿದ್ದರೆ ಅವಳ ಮನೆಯವರಿಗೆಲ್ಲ ಇದೇ ಗತಿಯುಂಟಾಗುವುದೆಂದು ಹೆದರಿಸಿ ಮನೆಗೆ ಕಳಿಸುತ್ತಾರೆ. ನಂತರ ಆ ಬಾಲಕನ ಕೈಗಳಿಗೆ ಕೋಳ ತೊಡಿಸಿ ಅವನ ಮನೆಯ ಬೀದಿಯಲ್ಲಿ ಮೆರವಣಿಗೆ ಮಾಡುತ್ತಾರೆ. ಕೆಲವೇ ದಿನಗಳಲ್ಲಿ ರುಚಿಕಾ ತನ್ನ ಮನೆಯರಿಗೆ ಆಗುತ್ತಿದ್ದ ಈ ಹಿಂಸೆಯನ್ನು ಸಹಿಸಲಾರದೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ರುಚಿಕಾಳ ಶವಪರೀಕ್ಷೆಯ ವಿಷಯದಲ್ಲೂ ತಲೆ ಹಾಕಿದ ರಾಥೋಡ್, ರುಚಿಕಾಳ ಹೆಸರನ್ನು ಬಾಲ್ಯದ ಅವಳ ಮುದ್ದು ಹೆಸರಾದ ರೂಬಿ ಎಂದು ಬದಲಿಸಿ ಬರೆಯುವಂತೆ ಪ್ರಭಾವ ಬೀರಿ ಅದರ ವರದಿಯನ್ನೇ ತಿದ್ದಿಸಿ ಬಚಾವಾಗುತ್ತಾನೆ.

೧೯೯೪ರಲ್ಲಿ ಚೌಟಾಲ ಸರ್ಕಾರ ರಾಥೋಡ್‌ಗೆ ಡಿಜಿಪಿಯಾಗಿ ಬಡ್ತಿ ನೀಡುವುದಲ್ಲದೆ ಆತನಿಗೆ ರಾಷ್ಟ್ರಪತಿ ಪದಕಕ್ಕಾಗಿ ಶಿಫಾರ್ಸೂ ಮಡುತ್ತದೆ! ಮಾಧ್ಯಮಗಳ ಗಲಾಟೆಯಿಂದ ಅದು ಅಲ್ಲೇ ನಿಲ್ಲುತ್ತದೆಯಷ್ಟೆ.

ಈ ನಡುವೆ ಆಶುವಿನ ಮೇಲೇ ಹೊರಿಸಲಾಗಿದ್ದ ಎಲ್ಲ ಮೊಕದ್ದಮೆಗಳೂ ಅಪ್ಪಟ ಸುಳ್ಳೆಂದು ನ್ಯಾಯಾಲಯ ತೀರ್ಪು ನೀಡಿ ರಾಥೋಡ್‌ನ ಕೈಗೊಂಬೆಯಾಗಿ ವರ್ತಿಸುವ ಮೂಲಕ ಈ ಬಾಲಕನ ಮೇಲಿನ ಈ ಹಿಂಸಾಕಾಂಡದ ರೂವಾರಿಯಾದ ಅಪರಾಧ ವಿಭಾಗದ ಪೋಲೀಸ್ ವರಿಷ್ಠಾಧಿಕಾರಿಗೆ ಛೀಮಾರಿ ಹಾಕುತ್ತದೆ. ಆದರೆ ಆತನಿಗೆ ರಾಜ್ಯ ಸರ್ಕಾರ ನಂತರವೇ 'ಪರಿಹಾರ'ವಾಗಿ ರಾಜ್ಯದ ಐ.ಜಿ.ಪಿ.ಯಾಗಿ ಬಡ್ತಿ ನೀಡುತ್ತದೆ!

ರಾಥೋಡ್ ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಹುಕುಂಸಿಂಗ್, ಭಜನ್‌ಲಾಲ್ ಮತ್ತು ಚೌಟಾಲರನ್ನು ತನ್ನ ಸಂಪರ್ಕಗಳ ಮೂಲಕ ಪ್ರಭಾವಿಸಿ, ತನ್ನ ವಿರುದ್ಧದ ವರದಿಯ ಬಗ್ಗೆ ಸರ್ಕಾರ ಏನೂ ಕ್ರಮ ಕೈಗೊಳ್ಳದಂತೆ ಏಳು ವರ್ಷಗಳ ಕಾಲ ಯಶಸ್ವಿಯಾಗಿ ನೋಡಿಕೊಳ್ಳುತ್ತಾನೆ. ಆ ಮೂಲಕ ರುಚಿಕಾಳ ಕುಟುಂಬ ಸಂಪೂರ್ಣ ಹಾಳಾಗಿ ಸುಸ್ತಾಗಿ ಕೂರುವಂತೆ ಮಾಡಿರುತ್ತಾನೆ. ಆದರೆ ಮಗಳು ಅರಾಧನಾಳನ್ನು ಆಸ್ಟ್ರೇಲಿಯಾಗೆ ಮದುವೆ ಮಾಡಿ ಕಳಿಸಿದ ನಂತರ ಆನಂದ ಪ್ರಕಾಶ್ ಚುರುಕಾಗುತ್ತಾರೆ. ಅವರು ಮೂರು ವರ್ಷಗಳ ಕಾಲ ಎಡಬಿಡದೆ ಹೋರಾಡಿ, ೧೯೯೭ರಲ್ಲಿ ರಾಥೋಡ್‌ನ ವಿರುದ್ಧದ ವರದಿಯ ಒಂದು ಪ್ರತಿಯನ್ನು ಪಡೆದು ಹೈಕೋರ್ಟಿನ ಮುಂದೆ ಹಾಜರುಪಡಿಸಿ ರಾಥೋಡ್ ವಿರುದ್ಧ ಕ್ರಮಕ್ಕೆ ಅರ್ಜಿ ಹಾಕುತ್ತಾರೆ. ಇಡೀ ಪ್ರಕರಣದ ವಿವರ ತಿಳಿದಿದ್ದ ಪಂಕಜ್ ಭಾರದ್ವಾಜ್ ಎಂಬ ಸಾರ್ವಜನಿಕ ಹಿತಾಸಕ್ತಿಯ ವಕೀಲರೊಬ್ಬರು ಇವರ ಪರ ಉಚಿತವಾಗಿ ವಕಾಲತ್ತು ವಹಿಸಿಕೊಳ್ಳಲು ಮುಂದೆ ಬರುತ್ತಾರೆ. ಇದರ ಫಲವಾಗಿ ೧೯೯೮ರಲ್ಲಿ ಪಂಜಾಬ್ ಮತ್ತು ಹರ್ಯಾಣಾ ಹೈಕೋರ್ಟು ಇಡೀ ಪ್ರಕರಣವನ್ನು ಸಿ.ಬಿ.ಐ.ಗೆ ತನಿಖೆಗಾಗಿ ಒಪ್ಪಿಸುತ್ತದೆ.

ಇದರಿಂದ ಕೆರಳಿದ ರಾಥೋಡ್ ಪ್ರತೀಕಾರವಾಗಿ ರಾಜ್ಯದ ರಾಜಕಾರಣಿಗಳು ಮತ್ತು ಅಧಿಕಾರಗಳ ಮೇಲಿನ ತನ್ನ 'ಪ್ರಭಾವ'ದ ಮೂಲಕ ಆನಂದ್ ಪ್ರಕಾಶ್ ವಿರುದ್ಧ ಕಾರ್ಯಾಚರಣೆ ನಡೆಸಿ ಅವರ ಹಿಂಬಡ್ತಿ, ಅಮಾನತ್ತು, ಕೊನೆಗೆ ಕಡ್ಡಾಯ ನಿವೃತ್ತಿಗೆ

ಕಾರಣನಾಗುತ್ತಾನೆ. ಆದರೆ ಆನಂದಪ್ರಕಾಶ್ ಇದರ ವಿರುದ್ಧ ಹೋರಾಡಿ ಅರ್ಹ ಪರಿಹಾರ ಪಡೆಯುತ್ತಾರೆ. ಕೋರ್ಟು ಆರು ತಿಂಗಳಲ್ಲಿ ತನಿಖೆ ಪೂರೈಸಿ ಆರೋಪ ಪಟ್ಟಿ ದಾಖಲಿಸಬೇಕೆಂದೂ ಸೂಚಿಸಿತ್ತಾದರೂ, ರಾಥೋಡ್ ದೆಹಲಿಯ ಸಿ.ಬಿ.ಐ. ಕಛೇರಿಯ ಸಿಬ್ಬಂದಿಯ ಮೇಲೂ ಹಲವು ಹಂತಗಳಲ್ಲಿ ಪ್ರಭಾವ ಬೀರುವ ಪ್ರಯತ್ನಗಳನ್ನು ಮಾಡುತ್ತಾ, ತನಿಖೆ ಕ್ಷಿಪ್ರ ಗತಿಯಲ್ಲಿ ಮುಂದುವರೆಯದಂತೆ ಕಾನೂನಿನ ಅಡೆತಡೆಗಳನ್ನು ಒಡ್ಡುತ್ತಾ ಹೋದ ಪರಿಣಾಮವಾಗಿ ಎರಡು ವರ್ಷಗಳ ನಂತರ, ೨೦೦೦ರಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗುತ್ತದೆ. ಆದರೆ ಇದರಲ್ಲಿ ರುಚಿಕಾಳ ಆತ್ಮಹತ್ಯೆಗೆ ಪ್ರಚೋದಿಸಿದ ಆರೋಪ ಸೇರಿರದಿದ್ದ ಕಾರಣ ಎರಡು ವರ್ಷಗಳ ಕಾಲ ಮತ್ತೆ ಎರಡೂ ಕಡೆ ವಾದಗಳು ನಡೆದು, ಸಿ.ಬಿ.ಐ. ವಿಶೇಷ ಕೋರ್ಟಿನ ನ್ಯಾಯಾಧೀಶ ಜಗದೇವ ಸಿಂಗ ಧಂಜಾಲ್ ಸಿ.ಬಿ.ಐ.ನ್ನು ಕಟುವಾಗಿ ಟೀಕಿಸಿ, ಆತ್ಮಹತ್ಯೆ ಪ್ರಚೋದನೆಯ ಅರೋಪವನ್ನು ಸೇರಿಸುವಂತೆ ಆದೇಶಿಸುತ್ತಾರೆ.

ಆದರೆ ಇದರ ವಿರುದ್ಧ ರಾಥೋಡ್ ಮೇಲ್ಮನವಿ ಸಲ್ಲಿಸದಾಗ ಅದು ಮತ್ತೆ ಒಂದು ವರ್ಷ ವಿಚಾರಣೆ ನಡೆದು, ಪಂಜಾಬ್ ಹೈಕೋರ್ಟಿನ ನ್ಯಾ॥ ಕೆ.ಸಿ. ಕಥೂರಿಯಾ ರಾಥೋಡ್ ಪರವಾಗಿ ತೀರ್ಪು ನೀಡುತ್ತಾರೆ. ಇದೇಕೆಂದು ಮಾಧ್ಯಮಗಳು ಕೆದಕಿ ನೋಡಿದಾಗ, ಈ ನ್ಯಾ॥ ಕಥೂರಿಯಾ, ಗಿರ್ಹೋತ್ರಾರ ಮನೆಯ ಪಕ್ಕದ ಮನೆಯ ನಿವಾಸಿಯಾಗಿದ್ದು, ಇಬ್ಬರ ನಡುವೆ ಆಸ್ತಿಯೊಂದಕ್ಕೆ ಸಂಬಂಧಿಸಿದಂತೆ ಜಟಾಪಟಿ ನಡೆದಿತ್ತು ಮತ್ತು ಈತನ ಹತ್ತಿರದ ಸಂಬಂಧಿಯಾದ ಓ.ಪಿ. ಕಥೂರಿಯಾ, ರಾಥೋಡ್ ಅಧ್ಯಕ್ಷನಾಗಿದ್ದ ಟೆನ್ನಿಸ್ ಕ್ಲಬ್ಬಿನ ಪ್ರತಿಷ್ಠಿತ ಪದಾಧಿಕಾರಿಗಳಲ್ಲೊಬ್ಬ ಎಂದು ಗೊತ್ತಾಗುತ್ತದೆ! ಅಷ್ಟೇ ಅಲ್ಲ, ರಾಥೋಡ್ ವಿರುದ್ಧ ತೀರ್ಪು ನೀಡಿದ ನ್ಯಾ॥ ಧಂಜಾಲ್ ಎರಡು ವರ್ಷಗಳ ನಂತರ ಕಡ್ಡಾಯ ನಿವೃತ್ತಿಗೆ ಒಳಗಾಗುತ್ತಾರೆ ಮತ್ತು ನ್ಯಾ॥ ಕಥೂರಿಯಾ ಸೇವಾ ನಿವೃತ್ತಿಯ ನಂತರ ಹರ್ಯಾಣಾದ ಗ್ರಾಹಕ ವಿವಾದ ಆಯೋಗದ ಅಧ್ಯಕ್ಷರಾಗಿ ನೇಮಕಗೊಳ್ಳುತ್ತಾನೆ!

ಅದೇನೇ ಇರಲಿ, ಲೈಂಗಿಕ ದುರ್ವರ್ತನೆಯ ಮೊಕದ್ದಮೆಯ ವಿಚಾರಣೆಯನ್ನು ರಾಥೋಡ್ ಕಾನೂನುಗಳಲ್ಲಿನ ದೌರ್ಬಲ್ಯಗಳನ್ನು ಬಳಸಿಕೊಂಡು ವಿಚಾರಣೆಯನ್ನು ಮತ್ತೆ ಏಳು ವರ್ಷಗಳ ಕಾಲ ಎಳೆಯುವುದರಲ್ಲಿ ಯಶಸ್ವಿಯಾಗುತ್ತಾನೆ. ಮೊಕದ್ದಮೆ ಕೋರ್ಟಿನಿಂದ ಕೋರ್ಟಿಗೆ ವರ್ಗಾವಣೆಯಾಗುತ್ತಾ, ಅಂತಿಮವಾಗಿ ೪೦ ಮುಂದೂಡಿಕೆಗಳು ಮತ್ತು ೪೦೦ಕ್ಕೂ ಹೆಚ್ಚು ಆಲಿಕೆಗಳ ನಂತರ ಚಂಡೀಗಢದ ಸಿ.ಬಿ.ಐ. ಕೋರ್ಟು ರಾಥೋಡ್ ಅಪರಾಧಿಯೆಂದು ಘೋಷಿಸಿ, ಆರು ತಿಂಗಳ ಸೆರೆವಾಸ ಮತ್ತು ಒಂದು ಸಾವಿರ ರೂಪಾಯಿಗಳ ದಂಡ ಪಾವತಿಯ ಶಿಕ್ಷೆ ಪ್ರಕಟಿಸುತ್ತದೆ. ಇದು ಆಗುವುದು ಅಪರಾಧ ನಡೆದ ೧೯ ವರ್ಷಗಳ ನಂತರ! ಆಯಿತು, ಇಷ್ಟಾದರೂ ಆಯಿತಲ್ಲಾ ಎಂದು ಯಾರಾದರೂ ಸಮಾಧಾನ ಪಟ್ಟುಕೊಳ್ಳುವವರು ಬೆಚ್ಚಿ ಬೀಳುವಂತೆ,

ಹತ್ತೇ ನಿಮಿಷಗಳಲ್ಲಿ ರಾಥೋಡ್ ನ್ಯಾಯಾಲಯದಿಂದ ಹತ್ತು ಸಾವಿರ ರೂಪಾಯಿಗಳ ಭದ್ರತೆ ಒದಗಿಸಿ ಜಾಮೀನು ಪಡೆದು ನಿರಾಳನಾಗುತ್ತಾನೆ! ಸಾರ್ವಜನಿಕರ ಹಾಹಾಕಾರ ಮತ್ತು ಮಾಧ್ಯಮಗಳ ಒತ್ತಡದಿಂದಾಗಿ ಶಿಕ್ಷೆ ಹೆಚ್ಚಿಸುವಂತೆ ಸಿ.ಬಿ.ಐ. ಮೇಲ್ಮನವಿ ಸಲ್ಲಿಸುತ್ತದೆ. ಇದರ ಪರಿಣಾಮವಾಗಿ ಒಂದು ವರ್ಷದ ಕಾಲ ವಿಚಾರಣೆ ನಡೆದು ರಾಥೋಡ್‌ನ ಶಿಕ್ಷೆಯ ಪ್ರಮಾಣ ಒಂದೂವರೆ ವರ್ಷಗಳ ಸಶ್ರಮ ಸೆರೆವಾಸಕ್ಕೆ ಹೆಚ್ಚುತ್ತದೆ. ಆತನನ್ನು ಸೆರೆಮನೆಗೆ ದೂಡಲಾಗುತ್ತದೆ.

ಆದರೆ ಕೆಲವೇ ದಿನಗಳಲ್ಲಿ ರಾಥೋಡ್ ಸರ್ವೋಚ್ಚ ನ್ಯಾಯಾಲಯದಲ್ಲಿ ಇದರ ವಿರುದ್ಧ ಮೇಲ್ಮನವಿ ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿ ವಿಜಯದ ನಗೆ ಬೀರುತ್ತಾನೆ. ಅಷ್ಟೇ ಅಲ್ಲ, ಈತನ ನಿವೃತ್ತಿ ವೇತನ ಪಾವತಿಯನ್ನು ಸ್ಥಗಿತಗೊಳಿಸಿದ್ದ ಕೇಂದ್ರ ಸರ್ಕಾರದ ಆದೇಶವನ್ನು ಕೇಂದ್ರ ಆಡಳಿತ ನ್ಯಾಯ ಮಂಡಳಿ ೨೦೧೧ರಲ್ಲಿ ರದ್ದುಪಡಿಸುತ್ತದೆ. ೨೦೧೨ರಲ್ಲಿ ಸರ್ವೋಚ್ಚ ನ್ಯಾಯಾಲಯ, ವಿಚಾರಣೆ ಇನ್ನೂ ಪೂರ್ಣಗೊಂಡಿಲ್ಲದ ಕಾರಣ ನೀಡಿ ನ್ಯಾಯ ಮಂಡಳಿಯ ಈ ಆದೇಶವನ್ನು ಎತ್ತಿ ಹಿಡಿಯುತ್ತದೆ!

ರಾಥೋಡ್‌ಗೆ ಈಗ ೭೦ ವರ್ಷ. ಈತನ ಪರವಾಗಿ ಕಾನೂನು ಹೋರಾಟವನ್ನು–ಅದನ್ನು ಹೋರಾಟವೆಂದು ಕರೆಯುವುದೇ ಆದರೆ–ನಡೆಸಿದವರು ಆತನ ವಕೀಲ ಪತ್ನಿ ಅಭಾ. ಆಕೆಗೆ ಈ 'ವಿಜಯೋತ್ಸವ' ಸಂದರ್ಭದ ಉಡುಗೊರೆಯಾಗಿ ರಾಥೋಡ್ ಎರಡೂವರೆ ಕೋಟಿ ರೂಪಾಯಿಗಳ ಬೆಲೆಯ ಒಂದು ಬಂಗಲೆ ಹಾಗೂ ಮರ್ಸಿಡೀಸ್ ಕಾರನ್ನು ನೀಡಿದ್ದಾನೆ. ಆ ಕಾರಿಗೆ ಆಕೆ ೯ ಲಕ್ಷ ರೂಪಾಯಿ ಹರಾಜು ಕೂಗಿ ೦೦೦೧ ಎಂಬ ವಿಶೇಷ ನೋಂದಣಿ ಸಂಖ್ಯೆಯನ್ನು ಪಡೆದುಕೊಂಡಿದ್ದಾಳೆ.

ಆದರೆ ಆ ಕಡೆ ರಾಥೋಡ್ ವಿರುದ್ಧ ನ್ಯಾಯಕ್ಕಾಗಿ ಹೋರಾಟ ಮಾಡಿದವರಿಗೂ ವಯಸ್ಸಾಗಿ, ಅವರು ಬದುಕಿನಲ್ಲಿ ನೆಮ್ಮದಿ ಸೇರಿದಂತೆ ಎಲ್ಲವನ್ನೂ ಕಳೆದುಕೊಂಡು ಇನ್ನು ಹೋರಾಟ ಮುಂದುವರೆಸಲು ತಮ್ಮಿಂದಾಗದು ಎಂದು ಘೋಷಿಸಿದ್ದಾರೆ. ನ್ಯಾಯಾಂಗ, ರಾಷ್ಟ್ರ ಜೀವನದಲ್ಲಿ ಕಾನೂನಿನ ಆಡಳಿತವನ್ನು ಖಚಿತಪಡಿಸಿಕೊಳ್ಳಲು ಈ ಎಲ್ಲವನ್ನೂ ತನ್ನ ಎಂದಿನ ಕಾನೂನಾತ್ಮಕ ಘನ ಗಾಂಭೀರ್ಯದಿಂದ ನೋಡುತ್ತಿದೆ...

ಇನ್ನು ಇಲ್ಲಿ ಯಡ್ಯೂರಪ್ಪ, ಮತ್ತವರ ಕುಟುಂಬ ಕಟ್ಟಾ, ಮತ್ತವರ ಕುಟುಂಬ, ಕುಮಾರಸ್ವಾಮಿ ಮತ್ತವರ ಸೋದರ ಮುಂತಾದವರ ವಿರುದ್ಧ ಸಾರ್ವಜನಿಕ ಹಿತಾಸಕ್ತಿಯ ಖಟ್ಲೆಗಳು ಯಾವಾಗ ಎಲ್ಲಿಗೆ ಮುಟ್ಟಬಹುದೆಂದು ಯೋಚಿಸಿ!

– ಡಿ.ಎಸ್. ನಾಗಭೂಷಣ

ನವೆಂಬರ್, ೨೦೧೨

ಕೇಜ್ರಿವಾಲ್ ತಂಡಕ್ಕೆ ಸುಸ್ವಾಗತ!

ಪ್ರಿಯ ಓದುಗರೇ,

ಕಳೆದೊಂದು ತಿಂಗಳಿಂದ ಸುದ್ದಿಯಲ್ಲಿರುವವವರು ಅರವಿಂದ ಕೇಜ್ರಿವಾಲ್. ಅಣ್ಣಾ ಹಜ಼ಾರೆ ನೇತೃತ್ವದ ಭ್ರಷ್ಟಾಚಾರ ವಿರೋಧಿ ಆಂದೋಲನದ ಆಧಾರ ಸ್ತಂಭಗಳಲ್ಲಿ ಒಬ್ಬರಾಗಿದ್ದ ಕೇಜ್ರಿವಾಲ್, ಇತ್ತೀಚೆಗೆ ಅಣ್ಣಾ ತಂಡದಿಂದ ತಮ್ಮ ಕೆಲವು ಸಹ ಮನಸ್ಕ ಗೆಳೆಯರೊಂದಿಗೆ ಹೊರಬಿದ್ದು ಪರ್ಯಾಯ ರಾಜಕೀಯ ಪಕ್ಷವೊಂದನ್ನು ಆರಂಭಿಸುವ ಸನ್ನಾಹದಲ್ಲಿದ್ದಾರೆ. ಅಂದಮಾತ್ರಕ್ಕೆ ಅವರಿಗೆ ಅಣ್ಣಾರ ಬೆಂಬಲವಿಲ್ಲವೆಂದಲ್ಲ. ಏಕೆಂದರೆ ಕಳೆದ ಭ್ರಷ್ಟಾಚಾರ ವಿರೋಧಿ ನಿರಶನದ ಸಂದರ್ಭದಲ್ಲಿ ಸ್ವತಃ ಅಣ್ಣಾ ಅವರೇ, ರಾಜಕೀಯ ಪರ್ಯಾಯದ ಅನಿವಾರ್ಯತೆಯ ಬಗ್ಗೆ ಮಾತನಾಡಿದ್ದರು. ಆದರೆ ಈ ಕುರಿತ ತಮ್ಮ ತಂಡದೊಳಗಿನ ಭಿನ್ನಾಭಿಪ್ರಾಯಗಳನ್ನು ಗಮನಿಸಿಯೋ ಅಥವಾ ಸರ್ಕಾರದ ವಿಭಜನಾ ತಂತ್ರಕ್ಕೆ ಸಿಕ್ಕಿಯೋ ಏನೋ, ಕೇಜ್ರಿವಾಲಾರ ರಾಜಕೀಯ ಸಾಹಸದಿಂದ ದೂರ ಉಳಿಯಲು ನಿರ್ಧರಿಸಿದ್ದಾರೆ. ಆದರೆ ಕೇಜ್ರಿವಾಲರ ಒಳ್ಳೆಯ ಕೆಲಸಗಳಿಗೆ ತಮ್ಮ ಆಶೀರ್ವಾದವದೆಯೆಂದೂ ಅವರು ಸ್ಪಷ್ಟಪಡಿಸಿದ್ದಾರೆ. ಅಣ್ಣಾರ ಇಂತಹ ನಿಗಾ ಒಳ್ಳೆಯದಕ್ಕೇ.

ಅರವಿಂದ ಕೇಜ್ರಿವಾಲ್, ಭ್ರಷ್ಟಾಚಾರ ವಿರೋಧಿ ಆಂದೋಲನದ ಸಂದರ್ಭದಲ್ಲಿ ಸರ್ಕಾರದ ಅಧಿಪತಿಗಳು ಪದೇ ಪದೇ ಹಾಕುತ್ತಿದ್ದ 'ತಾಕತ್ತಿದ್ದರೆ ರಾಜಕೀಯ ಪ್ರವೇಶಿಸಿ ನಮ್ಮನ್ನು ಎದುರಿಸಿ' ಎಂಬ ಸವಾಲನ್ನು ಸ್ವೀಕರಿಸಿದ್ದಾರೆ. ಅವರ ಜೊತೆ ಈಗ ಶಾಂತಿಭೂಷಣ್, ಪ್ರಶಾಂತ್ ಭೂಷಣ್, ಮನೀಶ್ ಸಿಸೋಡಿಯಾ, ಯೋಗೇಂದ್ರ ಯಾದವ್, ಶಾಜಿಯಾ ಇಲ್ಮಿ, ಪ್ರೊ. ಆನಂದಕುಮಾರ್, ಮಯಾಂಕ್ ಗಾಂಧಿ, ಕುಮಾರ್ ವಿಶ್ವಾಸ್‌ರಂತಹ ದೀರ್ಘ ಹೋರಾಟಗಳ ಹಿನ್ನೆಲೆಯಿರುವ ಹಲವು ಹಿರಿಯರು ಮತ್ತು ಯುವ ಚಿಂತಕರೂ ಸೇರಿಕೊಂಡಿದ್ದಾರೆ. ಇವೊತ್ತಿನ ದುಷ್ಟ ಮತ್ತು ಭ್ರಷ್ಟ ರಾಜಕೀಯ

ವ್ಯವಸ್ಥೆಗೊಂದು ಪರ್ಯಾಯ ರೂಪಿಸುವ ಅನಿವಾರ್ಯತೆಯನ್ನು ಮನಗಂಡಿರುವ ಈ ತಂಡ ಈಗ ತನ್ನ ಪ್ರಯತ್ನದ ಮೊದಲ ಭಾಗವಾಗಿ ಈ ರಾಜಕೀಯ ವ್ಯವಸ್ಥೆಯ ಪಕ್ಷಾತೀತ ಭ್ರಷ್ಟತೆ ಮತ್ತು ಅವುಗಳ ನಡುವಣ ಪರಸ್ಪರ ಸಹಕಾರ ಮತ್ತು ರಕ್ಷಣೆಯ ರೀತಿ ನೀತಿಗಳನ್ನು ಬಯಲುಗೊಳಿಸುವಂತಹ ಹಗರಣಗಳನ್ನು ವಿಶ್ವಾಸಾರ್ಹ ಸಾಕ್ಷ್ಯಗಳೊಂದಿಗೆ ರಾಷ್ಟ್ರದ ಮುಂದಿಡುತ್ತಿದೆ.

ಈ ಮೊದಲೇ ಈ ತಂಡ ಪ್ರಧಾನಮಂತ್ರಿಯೂ ಸೇರಿದಂತೆ ಕೇಂದ್ರದ ಹದಿನೈದು ಸಚಿವರ ವಿರುದ್ಧ ಆರೋಪ ಪಟ್ಟಿಯನ್ನು ಪ್ರಕಟಿಸಿ ಇವುಗಳ ಬಗ್ಗೆ 'ವಿಶೇಷ ತನಿಖಾ ದಳ'ದ ಮೂಲಕ ತನಿಖೆ ನಡೆಸುವಂತೆ ಆಗ್ರಹಿಸಿತ್ತು. ಆದರೆ ಸರ್ಕಾರ ಇದಕ್ಕೆ ಸೊಪ್ಪು ಹಾಕದ ಕಾರಣ ಅದೀಗ ತನ್ನ ಕಾರ್ಯಾಚರಣೆಯನ್ನು ತೀವ್ರಗೊಳಿಸಿ, ದಿನವಹಿ ಕಾರ್ಯಕ್ರಮದಂತೆ ದೆಹಲಿ ಮುಖ್ಯಮಂತ್ರಿ ಶೀಲಾ ದೀಕ್ಷಿತ್, ಸೋನಿಯಾ ಗಾಂಧಿಯವರ ಅಳಿಯ ರಾಬರ್ಟ್ ವಾಡ್ರಾ, ಕೇಂದ್ರ ಕಾನೂನು ಸಚಿವ ಸಲ್ಮಾನ್ ಖುರ್ಷೀದ್ ಮತ್ತು ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ಅವರಿಗೆ ಸಂಬಂಧಿಸಿದ ಭ್ರಷ್ಟಾಚಾರದ ಹಗರಣಗಳನ್ನು ಸವಿವರವಾಗಿ ಬಹಿರಂಗಗೊಳಿಸುತ್ತಾ ಹೋಗುತ್ತಿದೆ. ಈ ವಿವರಗಳು ನಮ್ಮ ರಾಜಕೀಯ ನಾಯಕರು ಮತ್ತು ಅವರ ಆಪ್ತರು ಎಷ್ಟು ನಿರ್ಲಜ್ಜೆ ಮತ್ತು ನಿರ್ಭಯವಾಗಿ ಸಾರ್ವಜನಿಕ ಹಣ ಮತ್ತು ಆಸ್ತಿಪಾಸ್ತಿಯನ್ನು ಲೂಟಿ ಮಾಡತೊಡಗಿದ್ದಾರೆ ಎಂಬುದನ್ನು ಕ್ರಮೇಣ ಜನರಿಗೆ ಮನವರಿಕೆ ಮಾಡಿಕೊಡುತ್ತಿವೆ. ಇದು ರಾಷ್ಟ್ರದ ಎರಡು ಪ್ರಮುಖ ಪಕ್ಷಗಳನ್ನು ಬುಡಸಮೇತ ಅಲುಗಾಡಿಸಿದೆಯಷ್ಟೇ ಅಲ್ಲ, ಮಿಕ್ಕ ಪಕ್ಷಗಳೂ ಗಾಬರಿಯಿಂದ ಎದ್ದು ಕೂಡುವಂತೆ ಮಾಡಿದೆ.

ಸಹಜವಾಗಿಯೇ ಇಡೀ ರಾಜಕೀಯ ವ್ಯವಸ್ಥೆ, ನಿರ್ದಿಷ್ಟವಾಗಿ ರಾಷ್ಟ್ರದ ಎರಡು ಪ್ರಮುಖ ಪಕ್ಷಗಳು ಕೇಜ್ರಿವಾಲ್ ತಂಡದ ವಿರುದ್ಧ ಹಲವು ನೆಲೆಗಳ ದಾಳಿ ಆರಂಭಿಸಿವೆ. ಕೇಜ್ರಿವಾಲಾ ತಂಡ ಇದೆಲ್ಲಕ್ಕೂ ಸಿದ್ಧವಾಗಿಯೇ ಇದ್ದಂತಿದೆ. ಏಕೆಂದರೆ ಈ ತಂಡದ ವಿರುದ್ಧ ಮಾಡಲಾಗುತ್ತಿರುವ ಆರೋಪಗಳಲ್ಲಿ ಹೊಸದೆನ್ನುವುದು ಏನೂ ಇಲ್ಲ. ಇವಕ್ಕೆ ಉತ್ತರಗಳನ್ನು ಈಗಾಗಲೇ ಕೊಡಲಾಗಿದೆ. (ನೋಡಿ: 'ನವ ಮಾನವ': ಅಕ್ಟೋಬರ್, ೨೦೧೧) ಇನ್ನೂ ಅನುಮಾನಗಳಿದ್ದರೆ ಎಲ್ಲ ಅಧಿಕಾರವಿರುವ ಸರ್ಕಾರವೇ ಆ ಬಗ್ಗೆ ತನಿಖೆ ಮಾಡಲಿ ಎಂದೂ ತಂಡ ಸವಾಲೆಸೆದಿದೆ. ಈ ಸವಾಲನ್ನು ಸರ್ಕಾರ ಸ್ವೀಕರಿಸಲು ಏಕೋ ಹಿಂಜರಿಯುತ್ತಿದೆ. ಬದಲಿಗೆ ಜನರ ಮನಸ್ಸಿನಲ್ಲಿ ಈ ತಂಡದ ಬಗ್ಗೆ ಗೊಂದಲ ಸೃಷ್ಟಿಸಲು, ತನ್ನ ಅದಕ್ಷ ಮತ್ತು ಅದಕ್ಷ ಆಡಳಿತದಿಂದಾಗಿ ಹತ್ತು ವರ್ಷಗಳ ಹಿಂದೆಯೇ ಮಧ್ಯಪ್ರದೇಶದಲ್ಲಿ ಬಿಜೆಪಿಗೆ ಅಧಿಕಾರವನ್ನು ತಟ್ಟೆಯಲ್ಲಿಟ್ಟುಕೊಟ್ಟು ಬಂದ ದಿಗ್ವಿಜಯ ಸಿಂಗ್ ಎಂಬ ನೆಹ್ರೂ ಕುಟುಂಬದ ಆಸ್ಥಾನ ವಿದೂಷಕನ ಮೂಲಕ ಈ ತಂಡದ ಮೇಲೆ ಪದೇ ಪದೇ ಹಣಕಾಸಿನ ದುರ್ವ್ಯವಹಾರ ಮತ್ತು ಬಿಜೆಪಿಯ ಒಳ ರಾಜಕಾರಣದ ಭಾಗವಾಗಿರುವ ಆರೋಪಗಳನ್ನು ಹೊರಿಸುತ್ತಲೇ ಇದೆ.

ಈ ಅರವಿಂದ ಕೇಜ್ರಿವಾಲ್ ಎಲ್ಲಿಂದಲೋ ಇದ್ದಕ್ಕಿದ್ದಂತೆ ರಾಜಕೀಯ ಹೋರಾಟ ಕ್ಷೇತ್ರವನ್ನು ಪ್ರವೇಶಿಸಿದವರಲ್ಲ. ಅವರು ಭಾರತೀಯ ಕಂದಾಯ ಸೇವೆಯಲ್ಲಿ ಹಿರಿಯ ಅಧಿಕಾರಿಯಾಗಿದ್ದವರು. ಆದರೆ ರಾಷ್ಟ್ರ ಜೀವನವನ್ನು ಆವರಿಸುತ್ತಿದ್ದ ಬೃಹತ್ ಭ್ರಷ್ಟಾಚಾರವನ್ನು ಕಂಡು ಗಾಬರಿಯಾಗಿ ಸೇವೆಯಿಂದ ನಿವೃತ್ತಿ ಪಡೆದವರು. ಭ್ರಷ್ಟಾಚಾರ ವಿರೋಧಿ ಹೋರಾಟದ ಮೊದಲ ಹಂತವಾಗಿ ಮಾಹಿತಿ ಹಕ್ಕು ಕಾಯಿದೆ ರಚನೆ ಮತ್ತು ಜಾರಿಗಾಗಿ ಜನಾಂದೋಲನವನ್ನು ರೂಪಿಸಿದವರು. ಅದಕ್ಕಾಗಿ ಏಷ್ಯಾದ ನೊಬೆಲ್ ಎಂದೆನಿಸಿರುವ ಮ್ಯಾಗ್ಸೆಸೆ ಪ್ರಶಸ್ತಿ ಪಡೆದವರು. ಈ ಪ್ರಶಸ್ತಿಯ ಹಣವನ್ನು 'ಭಾರತ್ ಸ್ವರಾಜ್ ಆಂದೋಲನ'ದಲ್ಲಿ ಹೂಡಿದವರು. ನಂತರವಷ್ಟೇ ಅವರು ಅಣ್ಣಾ ಹಜಾರೆ ತಂಡ ಸೇರಿ 'ಭ್ರಷ್ಟಾಚಾರ ವಿರೋಧಿ ಭಾರತ' ಎಂಬ ವೇದಿಕೆಯನ್ನು ಸ್ಥಾಪಿಸಿದ್ದು. ಅವರ ತಂಡ ಈಗ ಒಂದು ಕಡೆ ಪ್ರಸಕ್ತ ರಾಜಕೀಯ ವ್ಯವಸ್ಥೆಯ ಕೊಳಕನ್ನು ಜನಸಾಮಾನ್ಯರ ಗಮನಕ್ಕೆ ತರುವ ಹಗರಣಗಳನ್ನು ಬಯಲು ಮಾಡುವ ಕೆಲಸದಲ್ಲಿ ತೊಡಗಿರುವಂತೆಯೇ, ಇನ್ನೊಂದೆಡೆ ಈ ವ್ಯವಸ್ಥೆಗೆ ಪರ್ಯಾಯವಾದ ರಾಜಕೀಯ ವ್ಯವಸ್ಥೆಯೊಂದನ್ನು ರೂಪಿಸುವ ರಚನಾತ್ಮಕ ಕೆಲಸದಲ್ಲೂ ತೊಡಗಿದೆ. ಅದು ತನ್ನ ರಾಜಕೀಯ ಪ್ರಣಾಳಿಕೆಯೊಂದನ್ನು ಕರಡು ರೂಪದಲ್ಲಿ ಸಿದ್ಧಪಡಿಸಿ ಸಾರ್ವಜನಿಕರ ಅಭಿಪ್ರಾಯಗಳಿಗಾಗಿ ಜನರ ಮುಂದಿರಿಸಿದೆ. (ವಿವರಗಳಿಗಾಗಿ India against corruptionನ ಜಾಲತಾಣ ನೋಡಬಹುದು) ಆದರೆ ಏನು ಸಿಕ್ಕರೂ ಅದನ್ನೆಲ್ಲ ಮಸಾಲೆ ಮಾಡಿಯೇ ಮಾರುವ ನಮ್ಮ ಮಾಧ್ಯಮಗಳು ಕೇಜ್ರಿವಾಲರ ತಂಡ ಈಗ ಬಯಲುಗೊಳಿಸುತ್ತಿರುವ ಹಗರಣಗಳನ್ನು ಕುರಿತು ರೋಚಕ ಚರ್ಚೆಗಳನ್ನು ಏರ್ಪಡಿಸುತ್ತಾ ತಮ್ಮ ಜಾಹೀರಾತು ಆದಾಯವನ್ನು ಹೆಚ್ಚಿಸಿಕೊಳ್ಳುತ್ತಿವೆಯೇ ಹೊರತು, ಈ ಪರ್ಯಾಯ ರಾಜಕೀಯ ಪ್ರಣಾಳಿಕೆಯ ಬಗ್ಗೆ ಚರ್ಚೆಯಿರಲಿ, ಎಲ್ಲಿಯೂ ಒಂದು ಪ್ರಸ್ತಾಪವನ್ನೂ ಮಾಡಲು ಹೋಗಿಲ್ಲ! ಹಾಗಾಗಿ ಈ ಮಾಧ್ಯಮಗಳೂ ಪ್ರಸಕ್ತ ರಾಜಕೀಯ ವ್ಯವಸ್ಥೆಯ ಭಾಗವಾಗಿಯೇ ಇದ್ದು ಇಂತಹ ಮಾಧ್ಯಮಗಳನ್ನು ನಂಬಿ ಹೊಸ ರಾಜಕೀಯ ಸಂಸ್ಕೃತಿಯನ್ನು ಬೆಳೆಸಲಾಗುವುದಿಲ್ಲ ಎಂಬುದನ್ನು ಕೇಜ್ರಿವಾಲ್ ತಂಡ ಆದಷ್ಟೂ ಬೇಗ ಅರಿಯಬೇಕಿದೆ.

ಈ ಕರಡು ಪ್ರಣಾಳಿಕೆ ಮೊದಲ ನೋಟಕ್ಕೆ ಗಾಂಧೀಜಿಯ 'ಹಿಂದ್ ಸ್ವರಾಜ್'ನಿಂದ ತನ್ನ ತಾತ್ವಿಕ ಸ್ಫೂರ್ತಿ ಪಡೆದಂತೆ ತೋರುತ್ತಾ ಆಸೆ ಹುಟ್ಟಿಸುತ್ತದೆ. ಅದು ಭಾರತದ ಇಡೀ ರಾಜಕಾರಣವನ್ನು ಅತಿ ಕೆಳ ಹಂತದಿಂದ ಪುನಾರಚಿಸುವ ಆಶಯವನ್ನು ವ್ಯಕ್ತಪಡಿಸುತ್ತದೆ. ಎಲ್ಲ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ನಿರ್ಧಾರಗಳೂ ಸ್ಥಳೀಯ ಗುಂಪು ಮತ್ತು ಸಮುದಾಯಗಳ ಹಂತದಿಂದ ಮೂಡಬೇಕು ಎಂದು ಅದು ಸೂಚಿಸುತ್ತದೆ. ಎಲ್ಲ ರಾಷ್ಟ್ರೀಯ ಅಗತ್ಯಗಳು ಜನರ ಅಗತ್ಯಗಳಾಗಿ ಅವರ ಮಧ್ಯದಿಂದ ಮೂಡಬೇಕು ಎಂದು ಅದು ತನ್ನ ಅರ್ಥಶಾಸ್ತ್ರೀಯ ಚಿಂತನೆಯನ್ನು ಪ್ರಸ್ತುತಪಡಿಸಿದೆ. ಇದೆಲ್ಲದರ ಹಿಂದೆ ಸಮುದಾಯಗಳ ನಾಶವೇ ಭಾರತದ ನಾಶಕ್ಕೆ

ಕಾರಣ ಎಂಬ ಅರಿವು ಇದ್ದಂತಿದೆ. ಹಾಗಾಗಿ ವಿಕೇಂದ್ರೀಕರಣ ಈ ಪ್ರಣಾಳಿಕೆಯ ಕೇಂದ್ರ ಕಾಳಜಿಯಾಗಿದೆ. ಸಾಮಜಿಕ ಮತ್ತು ಆರ್ಥಿಕ ಸಮಾನತೆಯ ಸಾಧನೆಯ ಮಾರ್ಗವಾಗಿ ದಲಿತ, ಅಲ್ಪಸಂಖ್ಯಾತ, ಆದಿವಾಸಿ ಮತ್ತು ಇತರೆ ದುರ್ಬಲ ವರ್ಗಗಳಿಗೆ ವಿಶೇಷ ಪ್ರೋತ್ಸಾಹದ ಅಗತ್ಯವನ್ನು ಪುನರುಚ್ಚರಿಸಿರುವ ಪ್ರಣಾಳಿಕೆ ತನ್ನ ಸಂಘಟನೆ ಮತ್ತು ಚುನಾವಣಾ ಅಭ್ಯರ್ಥಿಗಳ ಆಯ್ಕೆಯಲ್ಲಿ, ಮಹಿಳೆಯರಿಗೆ ಶೇ. ೩೦ರ ಮೀಸಲಾತಿಯನ್ನು ಪ್ರಕಟಿಸಿದೆ. ಈ ಎಲ್ಲ ದೃಷ್ಟಿಯಿಂದ ಇದು ಗಾಂಧಿ-ಲೋಹಿಯಾ ಸಮಾಜವಾದಿ ಚಿಂತನೆಯನ್ನು ಹೋಲುವಂತಿದ್ದು, ಒಟ್ಟಾರೆಯಾಗಿ ಜೆಪಿಯವರ 'ಸಂಪೂರ್ಣ ಕ್ರಾಂತಿ' ಪರಿಕಲ್ಪನೆಯ ಪುನಾರಚಿತ ಕಾರ್ಯಕ್ರಮ ರೂಪವೇ ಆಗಿದೆ. ಈ ಹಿನ್ನೆಲೆಯಲ್ಲಿ, ಈ ತಂಡದ ಯೋಗೇಂದ್ರ ಯಾದವ್ ಮತ್ತು ಪ್ರೊ॥ ಆನಂದ ಕುಮಾರ್ ಲೋಹಿಯಾ ಸಮಾಜವಾದಿಗಳೇ ಆಗಿದ್ದು ಅವರು ಜೆಪಿ ಚಳುವಳಿಯ ಉತ್ಪನ್ನಗಳೂ ಆಗಿದ್ದಾರೆ ಎಂಬುದನ್ನೂ ನಾವು ಗಮನಿಸಬಹುದು.

ಆದರೆ ಪ್ರಣಾಳಿಕೆ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ಮಾದರಿಗಳ ಬಗ್ಗೆ ಸಂಕ್ಷಿಪ್ತವಾಗಿಯಾದರೂ ಏನನ್ನೂ ಹೇಳಿಲ್ಲ. ಹಾಗೇ, ಬಹು ಮುಖ್ಯವಾದ ಜನರಿಗೇ ನೇರ ಆಡಳಿತದ ಹೊಣೆ ಒದಗಿಸುವ ವ್ಯವಸ್ಥೆಗಾಗಿ ಮತ್ತು ಚುನಾವಣಾ, ಪೋಲೀಸ್ ಹಾಗೂ ನ್ಯಾಯಾಂಗ ಸುಧಾರಣೆಗಳಿಗಾಗಿ ಕಾನೂನು ಮತ್ತು ಸಂವಿಧಾನಗಳ ನೆಲೆಯಲ್ಲಿ ಅಗತ್ಯವಾದ ಬದಲಾವಣೆಗಳ ಬಗ್ಗೆ ಈ ಕರಡು ಪ್ರಣಾಳಿಕೆ ಮೌನವಾಗಿದೆ. ನಿಜ, ಅದರ ಘೋಷಿತ ರಾಜಕೀಯ ಆಶಯಗಳು ಮತ್ತು ಕಾರ್ಯಕ್ರಮಗಳನ್ನು ಸಮಗ್ರವಾಗಿ ನೋಡಿದಾಗ ಈ ಬದಲಾವಣೆಗಳ ಅನಿವಾರ್ಯತೆ ಅದರಲ್ಲಿ ಪರೋಕ್ಷವಾಗಿ ಸೂಚಿತವಾದಂತಿವೆ. ಆದರೆ ಅವುಗಳ ಬಗೆಗಿನ ಸ್ಪಷ್ಟ ಬದ್ಧತೆ ಮತ್ತು ಮಾರ್ಗಸೂಚಿಯನ್ನು ಇದೇ ನವೆಂಬರ್ ೨೬ರಂದು ಘೋಷಿತವಾಗಲಿದೆಯೆಂದು ಹೇಳಲಾಗಿರುವ ಪ್ರಣಾಳಿಕೆಯ ಅಂತಿಮ ರೂಪದಲ್ಲಾದರೂ ನಿರೂಪಿಸಬೇಕಿದೆ. ಜೊತೆಗೆ ಹೊಸ ಪಕ್ಷ ಕಟ್ಟುವ ಮತ್ತು ಅದನ್ನು ಜನರ ಕಣ್ಣಿನಲ್ಲಿ ಒಂದು ವಿಶ್ವಾಸಾರ್ಹ ಹಾಗೂ ವ್ಯಾವಹಾರಿಕ ವಿದ್ಯಮಾನ ಎನ್ನುವಂತೆ ಮಾಡುವ ಬೇರುಮಟ್ಟದ ಕೆಲಸವನ್ನು ಶೀಘ್ರ ಗತಿಯಲ್ಲಿ ಆರಂಭಿಸಬೇಕಿದೆ. ಈ ತಂಡ ಇಂಗ್ಲಿಷ್ ಬಲ್ಲ ವಿದ್ಯಾವಂತರೂ ಮತ್ತು ಬುದ್ಧಿವಂತರಿಂದಲೂ ಕೂಡಿದೆ. ಅದರೆ ಇದು ಅದರ ಶಕ್ತಿಯಾಗಿರುವಂತೆಯೇ, ತನ್ನ ನಾಯಕತ್ವವನ್ನು ಜನಸಾಮಾನ್ಯರ ಮಧ್ಯೆಯೂ ವಿಸ್ತರಿಸದೇ ಹೋದರೆ ದೊಡ್ಡ ದೌರ್ಬಲ್ಯವೂ ಆಗಿಬಿಡಬಹುದು. ಈ ಎಚ್ಚರ ತಂಡಕ್ಕೆ ಆದಷ್ಟೂ ಬೇಗ ಮೂಡಬೇಕಿದೆ. ಅದರ ತಕ್ಷಣದ ಗಮನ ದೆಹಲಿ ರಾಜ್ಯ ವಿಧಾನ ಸಭೆಯ ಚುನಾವಣೆಗಳಾದರೂ, ಅದು ಆದಷ್ಟೂ ಬೇಗ ರಾಷ್ಟ್ರಾದ್ಯಂತ ತನ್ನ ಇರವನ್ನು ಸ್ಥಾಪಿಸಬೇಕಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಅದರ ದಾತರು ಯಾರು ಎಂಬುದನ್ನು ಹುಡುಕಾಡುವ ಪರಿಸ್ಥಿತಿ ಇದೆ!

ಜನ ಸದ್ಯದ ರಾಜಕೀಯ ಸಂಸ್ಕೃತಿಯೊಂದಿಗೆ ಹೊಂದಿಕೊಂಡುಹೋಗುವ ಅನಿವಾರ್ಯತೆಗೆ ಸಿಕ್ಕಿ ಬಳಲಿದ್ದಾರೆ. ಅವರಿಗೆ ನಿಜವಾದ ರಾಜಕೀಯ

ಪರ್ಯಾಯವೊಂದು ಮೂಡುತ್ತಿದೆ ಎಂಬ ನಂಬಿಕೆ ಉಂಟಾದಲ್ಲಿ ಖಂಡಿತ ಅದನ್ನು ಸ್ವಾಗತಿಸಲಿದ್ದಾರಷ್ಟೇ ಅಲ್ಲ, ಬೆಂಬಲಿಸುತ್ತಾರೆ ಕೂಡ. ಹಾಗೆ ತನ್ನ ನಿಜತ್ವ ಮತ್ತು ವಿಶ್ವಾಸಾರ್ಹತೆಯನ್ನು ಸ್ಥಾಪಿಸುವುದು ಕೇಜ್ರಿವಾಲ್ ತಂಡದ ತುರ್ತು ಕೆಲಸವಾಗಿದೆ. ಇಲ್ಲವಾದರೆ ಈ ಹೋರಾಟ ನಮ್ಮ ಈವರೆಗಿನ ಎಲ್ಲ ಪರ್ಯಾಯ ರಾಜಕಾರಣದ ಪ್ರಯತ್ನಗಳಂತೆಯೇ ಹಾರಾಟವಾಗಿ ಮಾತ್ರ ಪರ್ಯಾವಸನಗೊಳ್ಳಲಿದೆ. ಈ ಎಚ್ಚರಿಕೆಯೊಂದಿಗೆ, ಈ ತಂಡಕ್ಕೆ, ಅದರ ಪ್ರಯತ್ನಕ್ಕೆ 'ನವ ಮಾನವ ಮಾಸಿಕ'ದ ಶುಭಾಶಯಗಳು!

ಶ್ರದ್ಧಾಂಜಲಿ

ನಮ್ಮ ಹಾಲಪ್ಪ ಇನ್ನಿಲ್ಲ...

'ಬಹುಮತ'ದ ಹಾಲಪ್ಪ ಎಂದೇ ಶಿವಮೊಗ್ಗ ಸೀಮೆಯಲ್ಲಿ ಹೆಸರಾಗಿದ್ದ ಎಚ್. ಹಾಲಪ್ಪ ಇನ್ನಿಲ್ಲ ಎಂದರೆ ಅವರ ಗೆಳೆಯರಿಗೆ ನಂಬುವುದು ಕಷ್ಟ. ಏಕೆಂದರೆ, ಅವರು ತಮ್ಮ ಬದುಕಿನ ಕೊನೆಯ ದಿನಗಳವರೆಗೂ ಅಷ್ಟು ಜೀವಂತವಿದ್ದರು. ಹಲವು ವರ್ಷಗಳ ಅನಾರೋಗ್ಯದಿಂದ ದೇಹ ಶಿಥಿಲವಾಗಿದ್ದರೂ, ಅದನ್ನು ಲೆಕ್ಕಿಸದೆ ಅವರು ಶಿವಮೊಗ್ಗ ಸುತ್ತಮುತ್ತಲ ಎಲ್ಲ 'ಪ್ರಗತಿಪರ' ಚಟುವಟಿಕೆಗಳಿಗೆ ತಮ್ಮ ಬೈಕನ್ನೇರಿ ಬಂದೇ ಬಿಡುತ್ತಿದ್ದರು.

ಮೂಲತಃ ಹೊನ್ನಾಳಿ ಬಳಿಯ ಸಾಸ್ವೆಹಳ್ಳಿಯವರಾದ ಹಾಲಪ್ಪ ಜಮೀನ್ದಾರ ಜಾತಿಯಲ್ಲಿ ಹುಟ್ಟಿದವರಾದರೂ, ಕಡುಬಡತನದಲ್ಲಿ ಬೆಳೆದವರಾದ್ದರಿಂದ ಬಡವರನ್ನು ಕುರಿತಂತೆ ಬಾಲ್ಯದಿಂದಲೇ ಅನುಕಂಪ ಬೆಳೆಸಿಕೊಂಡು ಬಂದವರು. ಹಾಗಾಗಿಯೇ ಅವರು ಭದ್ರಾವತಿಯ ಬಿ. ಕೃಷ್ಣಪ್ಪನವರೊಂದಿಗೆ ಸಮಾಜವಾದಿ ಯುವಜನಾ ಸಭಾದಲ್ಲಿ ತಮ್ಮ ಹೋರಾಟದ ಬದುಕನ್ನು ಅರಂಭಿಸಿ, ನಂತರ ಅವರ ಜೊತೆಗೇ ದಲಿತ ಸಂಘರ್ಷ ಸಮಿತಿಯ ಹೋರಾಟಗಳಲ್ಲಿ ಭಾಗವಹಿಸಿದರು. ನಂತರದ ದಿನಗಳಲ್ಲಿ ಮೇಲ್ಜಾತಿಗಳಿಗೆ ಪಾರಂಪರಿಕ ರಕ್ಷಣೆ ಇದೆ; ಪರಿಶಿಷ್ಟ ಜಾತಿಗಳಿಗೆ ಸಂವಿಧಾನದ ರಕ್ಷಣೆ ಇದೆ; ಆದರೆ ಹಿಂದುಳಿದ ಜಾತಿಗಳು ತಬ್ಬಲಿಗಳಾಗಿವೆ ಎಂಬುದನ್ನು ಮನಗಂಡ ಅವರು ಹಿಂದುಳಿದ ಜಾತಿಗಳ ಚಳುವಳಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದರು.

ಬಟ್ಟೆ ವ್ಯಾಪಾರ ಮಾಡಿ ಕೈ ಸುಟ್ಟುಕೊಂಡಿದ್ದ ಹಾಲಪ್ಪ ರೈತರಾಗಿ ದುಡಿದ ಒಂದಷ್ಟು ಹಣದಲ್ಲೇ ಪ್ರತಿವರ್ಷ ಶಿವಮೊಗ್ಗದಲ್ಲಿ ಸಹಮನಸ್ಕ ಗೆಳೆಯರೊಂದಿಗೆ ಪ್ರತಿವರ್ಷ ದೇವರಾಜ ಅರಸರ ಹುಟ್ಟುಹಬ್ಬ ಆಚರಿಸುತ್ತಿದ್ದರು. ಒಂದಷ್ಟು ವರ್ಷ ಹಿಂದುಳಿದ ವರ್ಗಗಳ ಶಿಕ್ಷಣಕ್ಕಾಗಿ 'ಬಹುಮತ' ಎಂಬ ವಾರಪತ್ರಿಕೆಯನ್ನೂ ನಡೆಸಿದ್ದರು. ಹಿಂದುಳಿದ ವರ್ಗಗಳ ಆಯೋಗಕ್ಕೆ ಮುನ್ನವೇ ಸ್ಥಳೀಯವಾಗಿ ಹಿಂದುಳಿದ ಜಾತಿಗಳ ಜನಗಣತಿಯನ್ನು ಸ್ವತಃ ತಾವೇ ಆರಂಭಿಸಿದ್ದ ಸಾಹಸಿಗರು ಇವರು!

ದಣಿವರಿಯದ ಈ ಹೋರಾಟಗಾರನಿಗೆ ನಮ್ಮ ನಮನಗಳು.

ಕನ್ನಡ ಕರ್ನಾಟಕ : ೨೦೧೨

ಮತ್ತೆ ನವೆಂಬರ್ ಬಂದಿದೆ. ಕನ್ನಡಮ್ಮನ ಭಜನೆ, ಉತ್ಸವಗಳು ಇನ್ನೊಂದು ತಿಂಗಳು ಎಡೆಬಿಡದೆ ಭರ್ಜರಿಯಾಗಿ ನಡೆಯಲಿವೆ. ಈ ಹಿಂದೆ ಸಹಜ ಸಂಭ್ರಮದಂತೆ ಕಾಣುತ್ತಿದ್ದ ಈ ಆಚರಣೆಗಳು ಈಗ ಶುದ್ಧ ಅಣಕಗಳಂತೆ ಕಾಣತೊಡಗಿವೆ. ಕಾರಣ, ಇದೆಲ್ಲ ಶಕ್ತಿ ಪ್ರತಿಮೆಯೇ ಇಲ್ಲದ ಗುಡಿ ಮುಂದಿನ ಭಜನೆಯಾಗಿಬಿಟ್ಟಿದೆ. ಕರ್ನಾಟಕದಲ್ಲಿ ಕನ್ನಡ ಕಾಣೆಯಾಗತೊಡಗಿದೆ. ಇದು ಹುಸಿ ಕೂಗು; ಕನ್ನಡ ಎಂಬುದು ಬದಲಾಗುತ್ತಿದೆಯಷ್ಟೆ ಎನ್ನುವವರಿದ್ದಾರೆ. ಆದರೆ ಇದು ಅತ್ಯಾಚಾರ ಅನಿವಾರ್ಯವಾದಾಗ ಒಪ್ಪಿಕೊಂಡು ಹೊಂದಿಕೊಂಡು ಹೋಗಬೇಕೆನ್ನುವ ನಿರ್ಲಜ್ಜರ ಜಾಣ ಮಾತಿಗೆ ಸಮವಷ್ಟೆ.

ಕನ್ನಡ ತನ್ನ ದೀರ್ಘ ಇತಿಹಾಸ-ಪರಂಪರೆಯುದ್ದಕ್ಕೂ ಹೊಸ ಕಾಲ ಮತ್ತು ಸಾವಾಲುಗಳಿಗೆ ತನ್ನನ್ನು ದಿಟ್ಟವಾಗಿ ಒಡ್ಡಿಕೊಳ್ಳುತ್ತಲೇ ಬಂದಿದೆ. ಆ ಮೂಲಕ ಹೊಸ ಸತ್ವ ಮತ್ತು ಚೆಲುವುಗಳನ್ನು ಪಡೆದುಕೊಳ್ಳುತ್ತಾ ತನ್ನ ಬೇರುಗಳನ್ನು ಗಟ್ಟಿ ಮಾಡಿಕೊಳ್ಳುವ ವಿವೇಕ-ಜಾಣ್ಮೆಗಳನ್ನು ತೋರುತ್ತಾ ಬಂದಿದೆ. ಆದರೆ ಈಗ ಜಾಗತೀಕರಣವೆಂಬ ಮೋಹಿನಿಯ ವಯ್ಯಾರ-ಲಾವಣ್ಯಗಳ ಎದುರು ಅದು ತನ್ನ ಬೇರುಗಳನ್ನೇ ಸಡಿಲಿಸಿಕೊಳ್ಳುವಂತಹ ಶೀಲಹರಣದ ಅಪಾಯಕ್ಕೆ ಸಿಕ್ಕಿದೆ. ಎಂದೂ ಕಾಣದಂತಹ ಸುಖ-ಸಂಪತ್ತುಗಳು ಸುಲಭವಾಗಿ ಬೇಕೆಂದರೆ ನಿನ್ನ ಭಾಷೆಯನ್ನು ಬಿಟ್ಟು ಬಾ ಎಂದು ನೇರ ಮತ್ತು ಮುಕ್ತ ಆಹ್ವಾನ ನೀಡುತ್ತಿರುವ ಈ ಮೋಹಿನಿಯ ಮಾಯೆಗೆ ಸಿಕ್ಕಿದ್ದಾನೆ ಕನ್ನಡಿಗ ಇಂದು. ತನ್ನ ಭಾಷೆಯನ್ನು ಕಳೆದುಕೊಂಡ ಮನುಷ್ಯ ಅಂತಿಮವಾಗಿ ಏನಾಗುತ್ತಾನೆ, ಆ ಸುಖ-ಸಂಪತ್ತುಗಳ ಅನುಭೋಗ ಯಾವ ಗುಣಮಟ್ಟದ್ದಾಗಿರುತ್ತದೆ ಮತ್ತು ಇದರಿಂದುಂಟಾಗುವ ಅನಾಹುತಗಳ ವೈಯುಕ್ತಿಕ ಮತ್ತು ಸಾಮುದಾಯಿಕ ನೆಲೆಗಳಲ್ಲಿನ ಪರಿಣಾಮಗಳಾದರೂ ಏನು? ಈ ಪರಿವೆಯಿಲ್ಲದೆ ಈತ 'ವಿಶ್ವ ಪ್ರಜೆ'ಯಾಗುವ ಉನ್ನತ ಮತ್ತು ಉದಾತ್ತವೆಂದು ಹೇಳಲಾಗುವ ಗುರಿಯತ್ತ ಧಾವಿಸುತ್ತಿದ್ದಾನೆ. ಆದರೆ ನೆಲ ಮತ್ತು ಅದರ ಬೇರು ಕಳೆದುಕೊಂಡ 'ವಿಶ್ವ ಪ್ರಜೆತನ' ಎಂದರೆ ಗಾಳಿ ಬಂದೆಡೆ ತೂರಿ ಹೋಗುವ ಕಸದ ತುಂಡಷ್ಟೇ ಎಂಬುದು ಅವನಿಗೆ ಗೊತ್ತಿಲ್ಲವೆ?

ಇದೆಲ್ಲ ಬೆಂಗಳೂರಿನಂತಹ ನಗರಗಳನ್ನು ನೋಡಿ ಆಡುವ ಮಾತು; ಗ್ರಾಮಾಂತರ ಪ್ರದೇಶತ್ತ ಒಮ್ಮೆ ನೋಡಿ ಎನ್ನುವವರೂ ಇದ್ದಾರೆ. ಕರ್ನಾಟಕದ ಮೂರನೇ ಒಂದು ಭಾಗ ಇಂದು ಬೆಂಗಳೂರಿನಲ್ಲಿದೆ ಮತ್ತು ಅದು ಕರ್ನಾಟಕದ ಹೃದಯ ಭಾಗ ಎಂಬುದನ್ನು ನಾವು ಮರೆಯಬಾರದು. ಅದಕ್ಕಿಂತ ಮುಖ್ಯವಾಗಿ ಇಂದು ಗ್ರಾಮಾಂತರ ಎಂಬುದೂ ಏನಾಗಿದೆ, ಎತ್ತ ಮುಖ ಮಾಡಿದೆ ಎಂಬುದನ್ನು ನೋಡಬೇಕು. ಇದರ ಸೂಚಕವಾಗಿ ಅಲ್ಲಿನ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳು ಏನಾಗಿವೆ ನೋಡಿ. ನಗರಗಳಲ್ಲಿ ಆರಂಭವಾದ ಈ ಕನ್ನಡ ಶಾಲೆಗಳ ನಿರ್ನಾಮ ಈಗ ಗ್ರಾಮಾಂತರದಲ್ಲೂ

ಆರಂಭವಾಗಿದೆ. ಪ್ರಾಥಮಿಕ ಕಲಿಕೆಯ ಹಂತದಲ್ಲಿ ಬೇಡವಾದ ಭಾಷೆ ಲೋಕ ಗ್ರಹಿಕೆಯ ಭಾಷೆಯಾಗಿ ಬೇಡವಾದ ಭಾಷೆಯಾಗಿ ಕೊನೆಗೆ ಇಂದ್ರಿಯಗಳನ್ನು ಕಳೆದುಕೊಂಡ ಭಾಷೆಯಾಗುತ್ತದೆ. ಇಂದು ಕನ್ನಡ ಅಂಗವಿಕಲ ಭಾಷೆಯಾಗಿ ನಮ್ಮ ಆಧುನಿಕ ಮಾಧ್ಯಮಗಳಲ್ಲಿ, ನಮ್ಮ ಮಕ್ಕಳ ಬಾಯಲ್ಲಿ ಬಳಕೆಯಾಗುತ್ತಿರುವ ರೀತಿಗಳನ್ನು ನಾವು ನಿರ್ವಣ್ಣರಾಗಿ ನೋಡುತ್ತಿದ್ದೇವೆ. ಇದನ್ನೇ ನಮ್ಮ 'ಜಾಗತಿಕ'ಗೊಂಡ ಜಾಣ ಭಾಷಾ ತಜ್ಞರು 'ಕನ್ನಡ ಎಲ್ಲೂ ಹೋಗಿಲ್ಲ; ಬದಲಾಗಿದೆ ಅಷ್ಟೇ!' ಎಂದು ಹೇಳುತ್ತಿರುವುದು. ಅಂಗವಿಕಲತೆಯನ್ನೇ ಒಂದು ಹೊಸ ಸೌಂದರ್ಯವನ್ನಾಗಿ ನೋಡಬಲ್ಲ ಹೊಸ ಸೌಂದರ್ಯ ಮೀಮಾಂಸಕರಿವರು!

ಆದರೆ ನಮ್ಮ ಮಕ್ಕಳು ಇಂಗ್ಲಿಷ್ ಊರುಗೋಲುಗಳಲ್ಲಿ ಅದೇ ಸಹಜ ನಡಿಗೆಯೆಂಬಂತೆ ಸಂಭ್ರಮದಿಂದ ಓಡಾಡುತ್ತಿರುವುದನ್ನು ನೋಡುವುದು ಒಂದು ದಯನೀಯ ದೃಶ್ಯವೇ ಆಗಿದೆ. ಆದರೆ ಇದು ಕೆಲವರಿಗೆ ಹೆಮ್ಮೆಯ ವಿಷಯವೇ ಆಗಿಬಿಟ್ಟಿದೆ. ಅದೇ ಇಂದಿನ ದುರಂತವಾಗಿದೆ. ಹಳೆಯ ವಸಾಹತುಶಾಹಿ ಸೃಷ್ಟಿಸಿದ ವಿಸ್ಮೃತಿಗಿಂತ ಈ ನವ ವಸಾಹತುಶಾಹಿ ಸೃಷ್ಟಿಸಿರುವ ಈ ವಿಸ್ಮೃತಿ ಭೀಕರವಾಗಿದೆ. ಏಕೆಂದರೆ ಇದು ಜನಸಾಮಾನ್ಯರನ್ನಷ್ಟೇ ಅಲ್ಲ, ನಮ್ಮ ಬಹುತೇಕ ಬುದ್ಧಿಜೀವಿ-ಚಿಂತಕರನ್ನೂ ಮರಳುಗೊಳಿಸಿದೆ. ಕಳೆದ ಐದು ವರ್ಷಗಳಲ್ಲಿ ಪ್ರಾಥಮಿಕ ಶಾಲಾ ಹಂತದಲ್ಲೇ ಇಂಗ್ಲಿಷ್ ಕಲಿಸುವ ಆಳುವ ವ್ಯವಸ್ಥೆಯ ಹುನ್ನಾರಕ್ಕೆ ಇವರು ಬಲಿಬಿದ್ದ ಪರಿಯೇ ಇದಕ್ಕೆ ಸಾಕ್ಷಿ. ಇದರ ಪರಿಣಾಮವಾಗಿ ಇಂದು ಹೋಬಳಿ ಮಟ್ಟದಲ್ಲೂ, ಯಾರಾದರೂ ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳಿಸಲಿಚ್ಛಿಸಿದರೂ, ಒಂದು ಒಳ್ಳೆಯ ಕನ್ನಡ ಶಾಲೆ ಕಾಣದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ದೃಷ್ಟಿಯಿಂದ ಇಂದು ಕನ್ನಡಪರ ಹೋರಾಟ ಎನ್ನುವುದೇ ಒಂದು ಹುಸಿ ಹೋರಾಟವೆನಿಸಿಬಿಟ್ಟಿದೆ. ಅದು, ಅಣಕು ಹೋರಾಟದಂತೆ ಕಾಣುತ್ತಾ ಕೆಲವರಲ್ಲಿ ಮರುಕವನ್ನೂ ಇನ್ನು ಕೆಲವರಲ್ಲಿ ನಗೆಯನ್ನೂ ಹುಟ್ಟಿಸುವಂತಾಗಿದೆ. ಕನ್ನಡ ಶಾಲೆಗಳ ನಿರ್ನಾಮವನ್ನು ಕುರುಡರಂತೆ ನೋಡುತ್ತಾ ಕೂತ ಹೋರಾಟಗಾರರು ಕನ್ನಡಪರ ಹೋರಾಟಗಾರರು ಹೇಗಾದಾರು? ಸದಾ ಅನ್ಯ ಭಾಷಾ ಸಮುದಾಯಗಳಲ್ಲೇ ಕನ್ನಡ ವಿರೋಧಿ ಪಿತೂರಿಗಳನ್ನು ಕಾಣುತ್ತಾ ಕೆಚ್ಚು ಹುಟ್ಟಿಸಿಕೊಳ್ಳುವ ಈ ವೃತ್ತಿಪರ ಹೋರಾಟಗಾರರಿಗೆ ತಮ್ಮ ಹೃದಯದಾಳದಲ್ಲೆ ಕನ್ನಡ ಚೈತನ್ಯ ಬತ್ತಿ ಹೋಗುತ್ತಿರುವುದು ಅನುಭವಕ್ಕೆ ಬರುವುದಾದರೂ ಹೇಗೆ? ಬರೀ ಹೊರನೋಟ ಒಳನೋಟವನ್ನೇ ಬತ್ತಿಸಿಬಿಡಬಲ್ಲುದು.

ಈ ಹೋರಾಟಗಾರರು ಮತ್ತು ಇವರನ್ನು ಎತ್ತಿಕಟ್ಟಿರುವ ಪುಢಾರಿಗಳು ನಡೆಸಿರುವ ಕಾವೇರಿ ಹೋರಾಟವನ್ನೇ ನೋಡಿ. ನಾವು ಒಂದು ಸಾಂವಿಧಾನಿಕ ಒಕ್ಕೂಟ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂಬುದರ ಪರಿವೆಯೇ ಇಲ್ಲದಂತೆ ತೋರುವ ಇವರಿಗೆ ಒಕ್ಕೂಟ

ಮಟ್ಟದ ನ್ಯಾಯ ವೇದಿಕೆಗಳಲ್ಲಿ ನಮ್ಮ ವಾದವನ್ನು ರಾಜ್ಯದ ಹಿತಕ್ಕೆ ಕಟಿಬದ್ಧವಾಗಿ ಮಂಡಿಸಬಲ್ಲರೆಂಬ ನಂಬಿಕೆ ಹುಟ್ಟಿಸಬಲ್ಲ ಕನ್ನಡ ಅಧಿಕಾರಿ ಮತ್ತು ವಕೀಲ ವೃಂದವೊಂದನ್ನು ಕನ್ನಡ ರಾಜಕಾರಣ ಸೃಷ್ಟಿಸಲಾಗಿಲ್ಲವೇಕೆ ಎಂದು ಒಳನೋಡಿಕೊಳ್ಳುವ ವಿವೇಕವಾಗಲೀ, ವ್ಯವಧಾನವಾಗಲೀ ಇಲ್ಲದೇ ಹೋಗಿದೆ. ಬದಲಿಗೆ ಈ ಹತಾಶೆ ಅಸಹಾಯಕತೆಗಳ ಬಹಿರಂಗ ಪ್ರದರ್ಶನವಾಗಿ ತಮ್ಮ ರಾಜ್ಯದ ವಾದವನ್ನು ಸಮರ್ಥವಾಗಿ ಮಂಡಿಸಿ ನ್ಯಾಯ ಪಡೆದಿರುವ ತಮಿಳ್ನಾಡಿನ ಅಪ್ಪಟ ತಮಿಳು ರಾಜಕಾರಣದ ಪ್ರತೀಕವೆನಿಸಿರುವ ಆ ರಾಜ್ಯದ ಮುಖ್ಯಮಂತ್ರಿ ಪ್ರತಿಕೃತಿಯನ್ನು ದಹಿಸುತ್ತಿದ್ದಾರೆ. ಇಂತಹ ಆವಾಹಿತ ಆವೇಶದ ಭರದಲ್ಲಿ ಈ ವಿವಾದದ ಮೂಲದಲ್ಲಿರುವ ಮೂಲ ಸಮಸ್ಯೆಯೇ ಅರಿವಿಗೆ ಬಾರದೇ ಹೋಗಿದೆ: ನಮ್ಮ ಕಾವೇರಿ ಕೊಳ್ಳದಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಳೆಯೇಕೆ ಕ್ರಮ ತಪ್ಪಿ ಅಸ್ತವ್ಯಸ್ತವಾಗಿದೆ ಎಂಬ ಪ್ರಶ್ನೆಯನ್ನೇ ಕೇಳಿಕೊಳ್ಳುವ ತಿಳುವಳಿಕೆಯೇ ಕನ್ನಡದ ಸಾಮುದಾಯಿಕ ಪ್ರಜ್ಞೆಯಲ್ಲಿ ಮೂಡಲಾಗದಂತಹ ಗರ ಕನ್ನಡ ಸಮಾಜಕ್ಕೆ ಬಡದಿದೆ. ಇದಕ್ಕೆ ಕನ್ನಡ ಸರ್ಕಾರ, ಕನ್ನಡ ಸಾಹಿತ್ಯ ಸಂಘ–ಸಂಸ್ಥೆ–ಪರಿಷತ್ತುಗಳು ಮತ್ತು ಬಿಟ್ಟಿ ಕೂಳು ತಿನ್ನುತ್ತಿರುವ ವಿವಿಧ ಪ್ರಾಧಿಕಾರ–ಅಕಾಡೆಮಿಗಳ ಹೊಣೆಗೇಡಿತನಗಳೂ ಕಾರಣವಾಗಿದೆ.

ಈ ದುರಂತಮಯ ಸನ್ನಿವೇಶದ ಹಿಂದಿರುವುದು ಕನ್ನಡ ಭಾಷೆಯ ಸೂಕ್ಷ್ಮತೆಗಳ ಮತ್ತು ಆ ಮೂಲಕ ಕನ್ನಡ ವ್ಯಕ್ತಿತ್ವ ಮತ್ತು ಪ್ರಜ್ಞೆಯ ಸೂಕ್ಷ್ಮತೆಗಳ ನಾಶದ ಪ್ರಶ್ನೆಗಳು. ಇವನ್ನು ನಮ್ಮ ಈ ಸಂಚಿಕೆಯಲ್ಲಿ ಕನ್ನಡ ಶಾಲೆ, ಶಿಕ್ಷಣಗಳ ಅವನತಿಯ ಪ್ರಶ್ನೆಯ ಮೇಲೆ .... ಬೆಳಕು ಚೆಲ್ಲುವಂತಹ ಲೇಖನಗಳ ಮೂಲಕ ಚರ್ಚೆಗೆ ತೆರೆದಿಡುವ ಪ್ರಯತ್ನ ಮಾಡಲಾಗಿದೆ. ನಿಮ್ಮ ಅಭಿಪ್ರಾಯ ತಿಳಿಸಿ–**ಸಂ.**

ಡಿಸೆಂಬರ್, ೨೦೧೨

ಭಯ–ಭಕ್ತಿಗಳ ಸುಪರ್ದಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ!

ಪ್ರಿಯ ಓದುಗರೇ,

ಪತ್ರಿಕೆ ಹಲವು ಸಾಧಕ–ಬಾಧಕಗಳ ಪರಿಗಣನೆ ಮತ್ತು ಕಳೆದೊಂದು ತಿಂಗಳಿನಲ್ಲಿ ಮತ್ತೆ ನಿಮ್ಮಲ್ಲಿ ಹಲವಾರು ಜನ ತಿಳಿಸಿದ ಅಭಿಪ್ರಾಯಗಳಿಗೆ ಅನುಸಾರವಾಗಿ ಈ ಸಂಚಿಕೆಯಿಂದ 'ಹೊಸ ಮನುಷ್ಯ' ಎಂಬ ಶೀರ್ಷಿಕೆಯೊಂದಿಗೆ ಹೊರಬರುತ್ತಿದೆ. ಓದುಗರೊಬ್ಬರು ಸೂಚಿಸಿರುವಂತೆ, ಈ ಹಿಂದಿನ ಮತ್ತು ಈ ಶೀರ್ಷಿಕೆಗಳ ಅರ್ಥ–ಉದ್ದೇಶಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲದಿರುವುದರಿಂದ ನೀವು ಪತ್ರಿಕೆಯನ್ನು ಇನ್ನು ಮುಂದೆಯೂ ಈ ಹಿಂದಿನ ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸುವಿರೆಂದು ನಂಬುತ್ತೇನೆ.

* * *

ನಿರಂತರ ವಿವಾದಗಳ ಮೂಲಕವೇ ಸುದ್ದಿಯಲ್ಲಿರುತ್ತಿದ್ದ ಬಾಳ ಠಾಕ್ರೆ ತಮ್ಮ ಸಾವಿನಲ್ಲೂ ಸುದ್ದಿಯ ಧೂಳು ಎಬ್ಬಿಸಿ ಹೋಗಿದ್ದಾರೆ. ಮೂಲತಃ ಮುಂಬೈನಲ್ಲಿ ಮರಾಠಿ ಭಾಷಿಕರ ಲೌಕಿಕ ಹಿತ ಮತ್ತು ಸಂಸ್ಕೃತಿಯನ್ನು ಕಾಪಾಡುವ; ಮೇಲ್ನೋಟಕ್ಕೆ ನ್ಯಾಯಯುತವಾಗಿಯೇ ಕಾಣುವ ಆದರ್ಶದೊಂದಿಗೆ ಅರವತ್ತರ ದಶಕದಲ್ಲಿ ಅವರು ಶಿವಸೇನೆಯನ್ನು ಸ್ಥಾಪಿಸಿದರು. ಆದರೆ ಅದು ಕ್ರಮೇಣ ದುಂಡಾವರ್ತಿಯ ಸೇನೆಯಾಗಿ ಮಾರ್ಪಟ್ಟಿತು. ಅದೀಗ ಹಿಂದುತ್ವ ಪ್ರತಿಪಾದನೆಯ ಕಠೋರತೆಯಲ್ಲಿ ಈ ತತ್ವದ ಮೂಲ ಸಂಘಟನೆಗಳನ್ನೇ ಹಿಂದಿಕ್ಕಿ ಒಂದು ಗಣನೀಯ ರಾಜಕೀಯ ಶಕ್ತಿಯಾಗಿ ಬೆಳೆದು ನಿಂತಿದೆ. ಭಾಷೆ ಮತ್ತು ಸಂಸ್ಕೃತಿಯ ಅಭಿಮಾನವು ಹೀಗೆ ನಿಧಾನವಾಗಿ ಅನ್ಯ ಭಾಷೆ ಮತ್ತು ಸಂಸ್ಕೃತಿಗಳನ್ನು ಕುರಿತ ಅಸಹನೆಯಾಗಿ, ಕೊನೆಗೆ ವಿಕ್ಷಿಪ್ತ ಮತೀಯತೆಯಾಗಿ ರೂಪಾಂತರಗೊಂಡದ್ದರ ಹಿಂದೆ ಕಳೆದ ಕಾಲು ಶತಮಾನದ ಅವಧಿಯಲ್ಲಿ 'ಸೆಕ್ಯೂಲರಿಸಂ'ನ ಹೆಸರಿನಲ್ಲಿ ಹಿಂದೂ ಮತ್ತು ಮುಸ್ಲಿಂ ಮತೀಯತೆಯನ್ನು ಸರದಿಯ

ಮೇಲೆ ಓಲೈಸುತ್ತಾ ನಡೆದ ಭಾರತದ ಮುಖ್ಯ ವಾಹಿನಿ ರಾಜಕಾರಣದ ಆತ್ಮದ್ರೋಹಿ ಕಥೆಯೂ ಇದೆ ಎಂಬುದನ್ನೂ ನಾವು ಗಮನಿಸದಿರಲಾಗದು. ಇದರಿಂದಾಗಿ ದೇಶದ ಮಾನಸಿಕತೆ ಇಂದು ಎಷ್ಟು ವಕ್ರಗೊಂಡಿದೆ ಎಂದರೆ, ಭಯೋತ್ಪಾದಕ ಅಜ್ಮಲ್ ಕಸಬ್‌ನನ್ನು ಗಲ್ಲಿಗೇರಿಸಿದ್ದನ್ನು ಒಂದು ಕಡೆ ವಿಜಯೋತ್ಸವವಾಗಿ ಆಚರಿಸುವ ಧರ್ಮ ದುರಂಧರರಿದ್ದರೆ ಇನ್ನೊಂದೆಡೆ ಅವನಿಗಾಗಿ ಕಾವ್ಯ ಕಂಬನಿ ಮಿಡಿವ ಒಕ್ಕಣ್ಣಿನ ಸೆಕ್ಯುಲರಿಸ್ಟ್ ಸಹೃದಯರೂ ಇದ್ದಾರೆ!

ಇಂತಹ ಮನೋಭೂಮಿಕೆಯ ಪರಿಣಾಮವಾಗಿಯೋ ಎಂಬಂತೆ ಇಂದು ಬಾಳ ಠಾಕ್ರೆ ಸಾವು ನಮ್ಮ ಎಲ್ಲ ಮಾಧ್ಯಮಗಳಲ್ಲಿ ಒಂದು ರಾಷ್ಟ್ರೀಯ ಸುದ್ದಿಯಾಗಿ ವಿಜೃಂಭಿಸಿದೆ. ಕೆಲವುಗಳಲ್ಲಂತೂ ಆತನನ್ನು ಓರ್ವ ರಾಷ್ಟ್ರೀಯ ನಾಯಕನಂತೆ ಆತನ ರಾಜಕೀಯ ಚರಿತ್ರೆಯನ್ನು ನಿರೂಪಿಸಲಾಗಿದೆ. ಯಾವುದೇ ವ್ಯಕ್ತಿಯ ಸಾವಿನ ಸಂದರ್ಭದಲ್ಲಿ ಆತನ ಬಗ್ಗೆ ಕಟುವಾಗಿ ಮಾತನಾಡುವುದು ಸದಭಿರುಚಿಯ ವರ್ತನೆಯಗಲಾರದು, ನಿಜ. ಆದರೆ ಆತನಲ್ಲಿ ಆವರೆಗೆ ಕಾಣಲಾಗದಿದ್ದ 'ಸದ್ಗುಣ'ಗಳನ್ನೆಲ್ಲ ಈಗ ಕಂಡು ಹಿಡಿದು ಚರಿತ್ರೆಯ ತಿಪ್ಪೆ ಸಾರಿಸುವುದು ಕೂಡಾ ಸದಭಿರುಚಿಯ ನಡಾವಳಿ ಎನಿಸುವುದಿಲ್ಲ. ನಮ್ಮ ಕೆಲವು ಮಾಧ್ಯಮಗಳು ಮಾಡಿದ್ದು ಇದನ್ನೇ. ಹುಲಿ ಘರ್ಜಿಸುವುದನ್ನು ನಿಲ್ಲಿಸಿದೆಯಂತೆ! ಚರಿತ್ರೆಯನ್ನು ಇದಕ್ಕಿಂತ ಅಗ್ಗ ಮಾಡಲಾಗದೇನೋ!

ಇಂತಹ ಅಗ್ಗದ ಮಸಾಲೆ ಮಾಧ್ಯಮ ಪ್ರಚಾರದ ಹಿನ್ನೆಲೆಯೇ, ಬಾಳ ಠಾಕ್ರೆ ಎಂಬ ಈ ವ್ಯಕ್ತಿ ಸಹಜ ಸಾವನ್ನಪ್ಪಿದರೆ ಮುಂಬೈ ನಗರವೇಕೆ ಬಂದ್ ಆಗಿ ಜನಜೀವನ ಅಸ್ತವ್ಯಸ್ತವಾಗಬೇಕು ಎಂದು ತಮ್ಮ 'ಫೇಸ್‌ಬುಕ್'ನಲ್ಲಿ ಹಸಿಮುಗ್ಧತೆಯಲ್ಲಿ ಬರೆದ ಮತ್ತು ಅದನ್ನೋದಿ ಮೆಚ್ಚಿ ಇನ್ನೊಬ್ಬರಿಗೆ ಕಳಿಸಿದ ಮಹಾರಾಷ್ಟ್ರದ ಇಬ್ಬರು ಎಳೆ ಬಾಲೆಯರನ್ನು ಶಿವಸೇನೆ ಕಾರ್ಯಕರ್ತರ ದೂರಿನನ್ವಯ ರಾಜ್ಯ ಪೋಲೀಸರು ರಾತ್ರೋರಾತ್ರಿ ಬಂಧಿಸಿ ಮೊಕದ್ದಮೆ ಹೂಡುವಂತಹ ಅಸಂಬದ್ಧ ಮತ್ತು ಭಯೋತ್ಪಾದನೆಯ ವಾತಾವರಣವನ್ನು ಸೃಷ್ಟಿಸಿರುವುದು. ಈ ಬಾಲೆಯರು ತಮ್ಮ ಖಾಸಗಿ ಫೇಸ್‌ಬುಕ್ ಖಾತೆಯಲ್ಲಿ ವಿನಿಮಯ ಮಾಡಿಕೊಂಡ ಅವರ ವ್ಯಕ್ತಿಗತ ಅಭಿಪ್ರಾಯ ಠಾಕ್ರೆ ಅಭಿಮಾನಿಗಳ ಮನಸ್ಸನ್ನು ಘಾಸಿಗೊಳಿಸಿ ಸಾರ್ವಜನಿಕ ಅಶಾಂತಿಗೆ ಕಾರಣವಾಗಬಲ್ಲುದಾಗಿತ್ತಂತೆ!

ಇದು ಕಾಂಗ್ರೆಸ್ ನೇತೃತ್ವದ ಸರ್ಕಾರ ಇರುವ ಮಹಾರಾಷ್ಟ್ರ ಪೋಲೀಸರ ವ್ಯಾಖ್ಯಾನ ಮತ್ತು ಕಾರ್ಯಾಚರಣೆ ಎಂಬುದೂ ಇಲ್ಲಿ ಮುಖ್ಯ. ಏಕೆಂದರೆ ಬಾಳ ಠಾಕ್ರೆ ಬೆಳೆಸಿ ಪ್ರತಿನಿಧಿಸಿದ್ದ ರಾಜಕಾರಣ ಅವರ ಪಕ್ಷಕ್ಕಷ್ಟೇ ಸೀಮಿತವಾಗದೆ ಇಂದಿನ ತೀವ್ರ ಸ್ಪರ್ಧಾತ್ಮಕ ರಾಜಕಾರಣದ ಒತ್ತಡಗಳಲ್ಲಿ ಸಾರ್ವತ್ರಿಕ ರಾಜಕೀಯ ಸಂಸ್ಕೃತಿಯಾಗಿ ಹೇಗೆ ಇತರೆಲ್ಲ ಪಕ್ಷಗಳಿಗೂ ಹಬ್ಬಿದೆ ಎಂಬುದನ್ನು ಇದು ಸೂಚಿಸುತ್ತದೆ. ಭಾರತದ ರಾಜಕಾರಣ ಪಕ್ಷಭೇಧವಿಲ್ಲದೇ ದಿನೇ ದಿನೇ ಅಧಿಕಾರ ಮತ್ತು ಆ ಮೂಲಕ ಸುಲಭ ಸಂಪತ್ತು ಗಳಿಕೆಯ ಸಾಧನವಾಗುವ ಹಾದಿಯಲ್ಲಿ ಪ್ರಜಾಪ್ರಭುತ್ವದ ಎಲ್ಲ ನಾಗರೀಕ ಸಲ್ಲಕ್ಷಣಗಳನ್ನೂ

ಕೊಡವಿ ಬಿಸಾಡುತ್ತಾ ಪ್ರಜಾಪೀಡಕ ಶಕ್ತಿಯಾಗುತ್ತಿರುವ ವಿದ್ಯಮಾನವನ್ನು ನಾವಿಂದು ತೀವ್ರವಾಗಿ ಗಮನಿಸಬೇಕಾಗುತ್ತದೆ.

ಹೌದು, ಕೆಲವು ಮಾಧ್ಯಮಗಳ ಸಕ್ರಿಯ ಹಸ್ತಕ್ಷೇಪದಿಂದಾಗಿ ಈ ಪ್ರಕರಣ ವ್ಯಾಪಕ ಸಾರ್ವಜನಿಕ ಚರ್ಚೆಗೆ ಒಳಗಾಗಿ ಸಾರ್ವತ್ರಿಕ ಖಂಡನೆಗೆ ಗುರಿಯಾಗಿದೆ. ಇದರಿಂದ ಒತ್ತಡಕ್ಕೆ ಸಿಕ್ಕಿದ ಮಹಾರಾಷ್ಟ್ರ ಸರ್ಕಾರ ಮುಖ ಉಳಿಸಿಕೊಳ್ಳುವ ತಂತ್ರವಾಗಿ ಈ ಬಗ್ಗೆ ತನಿಖೆಗಾಗಿ ಆದೇಶಿಸಿದೆ. ಕೇಂದ್ರದ ಕಾಂಗ್ರೆಸ್ ಮಂತ್ರಿಗಳು ಪೋಲೀಸರ ಕ್ರಮವನ್ನು ಅಸಾಧು ಎಂದು ಟೀಕಿಸಿದ್ದಾರೆ. ಈ ಸಂಚಿಕೆ ನಿಮ್ಮ ಕೈ ಸೇರುವ ವೇಳೆಗೆ ಈ ಪ್ರಕರಣ ಬಾಲೆಯರ ವಿರುದ್ಧದ ಮೊಕದ್ದಮೆಗಳ ವಾಪಸಾತಿ ಮತ್ತು ಸಂಬಂಧಿತ ಪೋಲೀಸರ ಮೇಲೆ ಶಿಸ್ತು ಕ್ರಮಗಳ ಪ್ರಕಟಣೆಯ ಮೂಲಕ–ಕಾಂಗ್ರೆಸ್ ವಕ್ತಾರ ಮನು ಸಿಂಘ್ವಿ ಹೇಳಿದ ಹಾಗೆ–'ಸುಖಾಂತ್ಯ' ಕಂಡಿರಬಹುದು. ಆದರೆ ಇದು ನಮ್ಮ ರಾಜಕೀಯ ಪಕ್ಷಗಳು ಸಾರ್ವಜನಿಕ ನಿಗಾ ಇಲ್ಲದಿದ್ದಲ್ಲಿ ಹೇಗೆ ಸಾಮಾನ್ಯ ಪ್ರಜೆಗಳ ನಾಗರಿಕ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ದಮನ ಮಾಡಬಲ್ಲ ರಾಕ್ಷಸ ಶಕ್ತಿಗಳಾಗಬಲ್ಲವುಬೆಂಬುದರ ಒಂದು ದರ್ಶನ ಮಾಡಿಸಿದೆ.

ಏಕೆಂದರೆ, ಇದೇ ಸಿಂಘ್ವಿ ಪ್ರಕಾರ ಮಹಾರಾಷ್ಟ್ರದ ಪೋಲೀಸರ ಕ್ರಮ ಸರಿಯೋ ತಪ್ಪೋ ಎಂಬುದು ತನಿಖೆಯ ನಂತರ ಗೊತ್ತಾಗಬೇಕಂತೆ! ಆದರೆ ಈ ಕಾಂಗ್ರೆಸ್ಸಿಗರಿಗೆ ಹಣಕಾಸು ಮಂತ್ರಿ ಚಿದಂಬರಂರ ಮಗ ಕಾರ್ತಿಕನ ಆಸ್ತಿ ಬಗ್ಗೆ ಟ್ವೀಟ್ ಮಾಡಿದ ವ್ಯಕ್ತಿಯನ್ನು ತನಿಖೆ ಇಲ್ಲದೆ ಬಂಧಿಸಿದ್ದು ಸರಿಯಾಗಿ ಕಂಡಿದೆ; ಆದರೆ, ಬಂಗಾಳದಲ್ಲಿ ಮಮತಾ ತಮ್ಮನ್ನು ಕುರಿತ ವ್ಯಂಗ್ಯಚಿತ್ರ ಬರೆದ ಪ್ರಾಧ್ಯಾಪಕರನ್ನು ಮತ್ತು ತಮ್ಮನ್ನು ಸಾರ್ವಜನಿಕವಾಗಿ ಪ್ರಶ್ನಿಸಿದ ರೈತನನ್ನು ಸೆರೆಮನೆಗೆ ದೂಡಿದ್ದು ನಾಗರಿಕ ಹಕ್ಕುಗಳ ಉಲ್ಲಂಘನೆಯಾಗಿ ಕಾಣುತ್ತದೆ! ಇನ್ನು ಶಿವಸೇನೆಯ ಮಿತ್ರ ಪಕ್ಷ ಬಿಜೆಪಿ ಶಿವಸೇನೆ ಕಾರ್ಯಕರ್ತರು ಬಾಲೆಯರ ಮೇಲೆ ಬಾಲಿಷವಾದ ದೂರು ನೀಡಿದ್ದಲ್ಲದೆ, ಆ ಬಾಲೆಯೊಬ್ಬಳ ಚಿಕ್ಕಪ್ಪ ನಡೆಸುತ್ತಿದ್ದ ಚಿಕಿತ್ಸಾಲಯದ ಮೇಲೆ ನಡೆಸಿದ ದಾಳಿಯನ್ನು ಖಂಡಿಸಲು, ಅದು ತಪ್ಪೆಂದು ಹೇಳಲು ನಿರಾಕರಿಸುತ್ತಾ ಬರೀ ಮಹಾರಾಷ್ಟ್ರ ಪೋಲೀಸರ ಕ್ರಮವನ್ನಷ್ಟೇ ಸಾರ್ವಜನಿಕವಾಗಿ ವೀರಾವೇಶದಿಂದ ಖಂಡಿಸುವ ಕ್ಷುಲ್ಲಕ ಮತ್ತು ಸಂಕುಚಿತ ರಾಜಕಾರಣವನ್ನು ಪ್ರದರ್ಶಿಸುತ್ತಿದೆ. ಶಿವಸೇನೆಯಂತೂ ತನ್ನ ಕಾರ್ಯಕರ್ತರ ಪುಂಡಾಟಿಕೆಯನ್ನು ಪರೋಕ್ಷವಾಗಿ ಸಮರ್ಥಿಸಿಕೊಳ್ಳುತ್ತಾ, ಆ ಬಾಲೆಯರು ಹೆದರಿ ಕ್ಷಮೆ ಕೋರಬೇಕಾದಂತಹ ವಾತಾವರಣವನ್ನು ಸೃಷ್ಟಿಸಿ, ಈಗವರು ಕ್ಷಮೆ ಕೇಳಿರುವುದರಿಂದ ಅವರಿನ್ನು ಭಯಪಡುವ ಅಗತ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಆ ಮೂಲಕ ಅಭಿಪ್ರಾಯ ಸ್ವಾತಂತ್ರ್ಯ ಎನ್ನುವುದು ಆಳುವ ವರ್ಗಕ್ಕೆ ತೋರಬೇಕಾದ ಭಯ–ಭಕ್ತಿಗಳಿಗೆ ಬದ್ಧವಾಗಿರತಕ್ಕಂಥದ್ದು ಎಂಬ ಎಚ್ಚರಿಕೆಯನ್ನು ರಾಷ್ಟ್ರಕ್ಕೆ ರವಾನಿಸಿದ್ದಾರೆ.

ಇನ್ನು ನಮ್ಮದೇ ರಾಜ್ಯದಲ್ಲಿ ಮಂಗಳೂರಿನ ಹೋಂಸ್ಟೇಯೊಂದರಲ್ಲಿ ಸ್ವಯಂಘೋಷಿತ ಸಂಸ್ಕೃತಿ ರಕ್ಷಕರು ನಡೆಸಿದ ಪುಂಡಾಟಿಕೆಯನ್ನೂ ಹಾಗೂ ಅದಕ್ಕೆ ಸಂಬಂಧಿಸಿದ ಪೋಲಿಸ್ ನಿಷ್ಕ್ರಿಯತೆಯನ್ನೂ ಸಾರ್ವಜನಿಕವಾಗಿ ಬಹಿರಂಗಗೊಳಿಸಿದ

ಮಾಧ್ಯಮ ಪ್ರತಿನಿಧಿಯನ್ನು ಬಂಧಿಸಿದ್ದಲ್ಲದೆ, ಕೈಕೋಳ ತೊಡಿಸಿ ವಿಚಾರಣೆಗೆ ಕರೆತರುವ ಭಂಡ ಧೈರ್ಯವನ್ನು ಸರ್ಕಾರ ಪ್ರದರ್ಶಿಸಿದೆ.

ಇದೆಲ್ಲವೂ ಬರಲಿರುವ ದಿನಗಳು ಪ್ರಜೆಗಳ ಪಾಲಿಗೆ ಭೀಕರವಾಗಲಿವೆ ಎಂಬುದನ್ನು ಸೂಚಿಸುತ್ತದೆ. ಸದ್ಯದ ಈ ರಾಜಕೀಯ ಸಂಸ್ಕೃತಿ ಭ್ರಷ್ಟವಷ್ಟೇ ಅಲ್ಲ, ಬಲು ದುಷ್ಟವೂ ಆಗಿದೆ. ಆ ದುಷ್ಟತನ ವಿವೇಕಕ್ಕಿರಲಿ, ಸರಳ ತರ್ಕಕ್ಕೂ ಸಿಗದಷ್ಟು ಭಂಡವಾಗಿದೆ ಎಂಬುದು ಈ ಎಲ್ಲ ಪಕ್ಷಗಳು ಆತ್ಮಸಾಕ್ಷಿಯನ್ನೇ ಕಳೆದುಕೊಂಡಂತೆ ಮಾಡುತ್ತಿರುವ ವಾದಗಳ ವೈಖರಿಯನ್ನು ಗಮನಿಸಿದರೆ ತಿಳಿಯುತ್ತದೆ. ಹಾಗಾಗಿಯೇ ಇದನ್ನು ಕಾನೂನುಗಳ ತರ್ಕದ ಮೂಲಕ ಎದುರಿಸಲು ಸಾಧ್ಯವಾಗದಾಗಿದೆ. ಏಕೆಂದರೆ ಕಾನೂನುಗಳಿಗೆ ಆತ್ಮಸಾಕ್ಷಿಯ ದರ್ದಿಲ್ಲ. ಅಂತೆಯೇ ಎಲ್ಲ ಪಕ್ಷಗಳೂ ತಮ್ಮ ಬಿಕ್ಕಟ್ಟಿನ ಸಂದರ್ಭಗಳಲ್ಲೆಲ್ಲ ತನಿಖೆಯ ಮತ್ತು ನ್ಯಾಯಾಲಯಗಳ ಮಾತನಾಡುವುದು. ಏಕೆಂದರೆ ಅವಕ್ಕೆ ಗೊತ್ತು, ಈ ಎರಡೂ ಏನನ್ನೂ ಅಂತಿಮವಾಗಿ ಇತ್ಯರ್ಥಪಡಿಸುವುದಿಲ್ಲ ಎಂದು.

ಹಾಗಾದರೆ ಆತ್ಮಸಾಕ್ಷಿಯಂತೆ ಬದುಕ ಬಯಸುವ ಜನ ಏನು ಮಾಡಬೇಕು? ಮೊದಲು ನಮ್ಮ ಬದುಕನ್ನು ಇತ್ತೀಚಿನ ದಿನಗಳಲ್ಲಿ ಎಲ್ಲ ಮೌಲ್ಯಗಳಿಂದ ಮುಕ್ತಗೊಳಿಸಿ ಪೂರ್ಣವಾಗಿ ಹಣ ಮತ್ತು ಸಂಪತ್ತಿನ ಆಟವನ್ನಾಗಿ ಪರಿವರ್ತಿಸುತ್ತಿರುವ ಸದ್ಯದ ಅಶ್ಲೀಲ ಆರ್ಥಿಕ ನೀತಿಯನ್ನು ಪ್ರಜ್ಞಾಪೂರ್ವಕವಾಗಿ ವಿರೋಧಿಸುತ್ತಾ, ಅದನ್ನು ಆಧರಿಸಿ ಬೆಳೆದಿರುವ ಇಂದಿನ ಈ ರಾಜಕೀಯ ಸಂಸ್ಕೃತಿಯನ್ನು ಸಾರಾಸಗಟಾಗಿ ತಿರಸ್ಕರಿಸಬೇಕು. ಪರ್ಯಾಯ ರಾಜಕೀಯ ಸಂಸ್ಕೃತಿಯನ್ನು ಪ್ರತಿಪಾದಿಸುತ್ತಿರುವ ವಿವಿಧ ಗುಂಪು, ಪಕ್ಷ, ಚಳುವಳಿಗಳೊಂದಿಗೆ ಗುರುತಿಸಿಕೊಂಡು ಅವನ್ನು ವಿಮರ್ಶಾತ್ಮಕವಾಗಿ ಬೆಳೆಸುವ ಜವಾಬ್ದಾರಿ ಪ್ರದರ್ಶಿಸಬೇಕು.

ಇಂತಹ ಜವಾಬ್ದಾರಿ ಇಲ್ಲದ/ಒಲ್ಲದ ಸಮಾಜ ಅಂತಿಮವಾಗಿ ಪಶು ಸಮಾನ ಬದುಕಿಗೆ ಮಾತ್ರ ಅರ್ಹವಾದೀತು. ಇದು ಇತಿಹಾಸ ಕೊಡುತ್ತಿರುವ ಎಚ್ಚರಿಕೆ!

<u>ಸಮಕಾಲೀನ</u>

ಕವಲು ದಾರಿಯಲ್ಲಿರುವ ಮುಸ್ಲಿಂ ಸಮಾಜ

ಇಸ್ಲಾಂ ಭಾರತಕ್ಕೆ ಎರಡು ಮಾರ್ಗಗಳ ಮೂಲಕ ಬಂದಿತೆಂದು ಹೇಳಲಾಗುತ್ತದೆ. ಮೊದಲು ವ್ಯಾಪಾರೋದ್ದೇಶದಿಂದ ಕಡಲು ಮಾರ್ಗವಾಗಿ, ದಕ್ಷಿಣ ಭಾರತಕ್ಕೆ. ನಂತರ ವಾಯುವ್ಯ ಗಡಿ ಮಾರ್ಗವಾಗಿ ಆಕ್ರಮಣಶೀಲವಾಗಿ ಉತ್ತರ ಭಾರತಕ್ಕೆ. ತಮ್ಮ ಉದ್ದೇಶಗಳಿಗನುಗುಣವಾಗಿ ಎರಡು ವಿಭಿನ್ನ ರೂಪಗಳಲ್ಲಿ ಬಂದ ಈ ಮತ ಕಳೆದ ಐದು ಶತಮಾನಗಳಲ್ಲಿ ಪೂರ್ಣವಾಗಲ್ಲದಿದ್ದರೂ ವಿಭಿನ್ನ ನೆಲೆಗಳಲ್ಲಿ ಪರಸ್ಪರವಾಗಿ ಮತ್ತು ಇಲ್ಲಿನ ಮತ- ಸಂಸ್ಕೃತಿಗಳೊಂದಿಗೆ ಮುಖಾಮುಖಿಯಾಗಿ ಭಾರತೀಯ ಎನ್ನಬಹುದಾದ ಇಸ್ಲಾಂನ ಒಂದು ವಿಶಿಷ್ಟ ಆವೃತ್ತಿ ರೂಪುಗೊಂಡಿದೆ ಎಂದೂ

ಹೇಳಲಾಗುತ್ತದೆ. ನಮ್ಮ ವಾಸ್ತುಶಿಲ್ಪ, ಸಂಗೀತ, ಭಾಷೆ, ಆಹಾರ ಪದ್ಧತಿ, ದೈವಾರಾಧನೆ ಮತ್ತು ವಸ್ತ್ರವಿನ್ಯಾಸಗಳ ವಿಕಾಸ ಕ್ರಮದಲ್ಲಿ ಇದು ಎದ್ದು ಕಾಣುತ್ತದೆ. ಹಾಗಾಗಿ ಇಸ್ಲಾಂ ಭಾರತಕ್ಕೆ ಅನ್ಯ ಧರ್ಮವಾಗಿ ಉಳಿದಿಲ್ಲ. ಲೋಹಿಯಾ ಹೇಳಿದ ಹಾಗೆ, ಘಜ್ನಿ, ಘೋರಿ, ಬಾಬರ್‌ಗಳು ಹೊರಗಿನವರಿರಬಹುದು; ಆದರೆ ಅಕ್ಬರ್, ರಜಿಯಾ, ಷೇರ್ ಷಾ ಮುಂತಾದವರು ವಿಕ್ರಮಾದಿತ್ಯ, ಅಶೋಕ, ಹೇಮು, ರಾಣಾ ಪ್ರತಾಪ ಸಿಂಹರಂತೆಯೇ ನಮ್ಮವರು.

ಆದರೆ ಮತೀಯ ಆಧಾರದ ಮೇಲೆ ನಡೆದ ರಾಷ್ಟ್ರ ವಿಭಜನೆಯ ವಿಚ್ಛಿದ್ರಕಾರಿ ರಾಜಕಾರಣ, ಅದರಿಂದ ಸೃಷ್ಟಿಯಾದ ಪಾಕಿಸ್ತಾನವು ಸೋದರ ರಾಷ್ಟ್ರವಾಗದೆ ಮತೀಯ ಶತ್ರು ರಾಷ್ಟ್ರವಾಗಿ ಮೂಡಿತು. ಜೊತೆಗೀಗ ಇತ್ತೀಚಿನ ವರ್ಷಗಳಲ್ಲಿ ಅಂತಾರಾಷ್ಟ್ರೀಯ ರಾಜಕಾರಣದ ಪರಿಣಾಮವಾಗಿ ಇಸ್ಲಾಂನ್ನು 'ಶುದ್ಧೀಕರಿಸುವ' ಜಾಗತಿಕ ಆಂದೋಲನವೊಂದು ಆರಂಭವಾಗಿದ್ದು, ಅದು ಭಯೋತ್ಪಾದನೆಯ ರಾಜಕಾರಣದೊಂದಿಗೆ ತಳಕು ಹಾಕಿಕೊಂಡು ಭಾರತೀಯ ಸಮಾಜದಲ್ಲಿ ಹಲವು ತಲ್ಲಣ ಮತ್ತು ಆತಂಕಗಳನ್ನು ಸೃಷ್ಟಿಸಿದೆ. ಮುಖ್ಯವಾಗಿ ತನ್ನ ಬಹುರೂಪದಿಂದಾಗಿ ಭಾರತದ ಸಂಸ್ಕೃತಿ, ಬದುಕುಗಳಲ್ಲಿ ಒಂದಾಗಿ ಹೋಗಿದ್ದ ಮುಸ್ಲಿಂ ಸಮಾಜ ಈಗ ಈ 'ಶುದ್ಧೀಕರಣ'ದ ಪ್ರಯತ್ನದಿಂದಾಗಿ ತನ್ನ ದೇಸೀ ಬೇರುಗಳನ್ನು ಕಳಚಿಕೊಂಡು ಜಾಗತಿಕ ಏಕರೂಪೀಕರಣಕ್ಕೆ ಒಳಪಡುತ್ತಾ ಕ್ರಮೇಣ 'ಅನ್ಯತೆ'ಯೆಡೆಗೆ ಧಾವಿಸುತ್ತಿರುವ ಹೊರ ಲಕ್ಷಣಗಳು ಕಾಣತೊಡಗಿವೆ. ಇದರಿಂದಾಗಿ ಹಲವು ಅನುಮಾನ–ಆತಂಕಗಳನ್ನು ಸೃಷ್ಟಿಸಿ ವಿಭಿನ್ನ ರೀತಿಯ ಸಾಮಾಜಿಕ ಬಿಗುವುಗಳಿಗೆ ಕಾರಣವಾಗುತ್ತಿದೆ. ಇದು ಭಾರತದ ಒಟ್ಟು ಸಮಾಜದಲ್ಲಿ ಮಾತ್ರವಲ್ಲ, ಮುಸ್ಲಿಂ ಸಮಾಜದ ಪ್ರಜ್ಞಾವಂತರನ್ನೂ ಚಿಂತೆಗೆ ಹಚ್ಚಿ, ಸಣ್ಣ ಪ್ರಮಾಣದಲ್ಲಾದರೂ ಈ ಬೆಳವಣಿಗೆಯ ವಿರುದ್ಧ ಧ್ವನಿಗಳು ಕೇಳಿಬರುತ್ತಿವೆ.

ಇಂತಹ ಧ್ವನಿಗಳಲ್ಲಿ ಪ್ರಮುಖವಾದದ್ದು ಹಿರಿಯ ಸಮಾಜವಾದಿ ಚಿಂತಕ ಅಸ್ಘರ್ ಅಲಿ ಇಂಜಿನಿಯರ್ ಅವರದ್ದು. ಈ ಸಂಚಿಕೆಯಲ್ಲಿನ ಎರಡು ಪ್ರಮುಖ ಲೇಖನಗಳಲ್ಲಿ ಅವರು ಭಾರತದಲ್ಲಿ ಇಸ್ಲಾಂ ತನ್ನೊಳಗೇ ಎದುರಿಸುತ್ತಿರುವ ತಾತ್ವಿಕ ಸಂಘರ್ಷವನ್ನು ಪರಿಚಯಿಸುತ್ತಾ ಅದರ ರಾಜಕೀಯ ಮತ್ತು ಸಾಮಾಜಿಕ ಸ್ವರೂಪ ಮತ್ತು ಪರಿಣಾಮಗಳನ್ನು ಚರ್ಚಿಸಿದ್ದಾರೆ. ಜ಼ಹುರ್ ಜೈದಿಯಾರ್‌ರ ಇನ್ನೊಂದು ಲೇಖನ ಇನ್ನೋರ್ವ ಪ್ರಜ್ಞಾವಂತ ಮುಸ್ಲಿಂ ಲೇಖಕನ ಸ್ಪಂದನಶೀಲವಾದ ಒಳತೋಟಿಯೊಂದನ್ನು ನಮ್ಮ ಮುಂದೆ ಪ್ರಸ್ತುತಪಡಿಸುತ್ತದೆ. ಹಾಗೆ ನೋಡಿದರೆ ಮುಸ್ಲಿಂ ಸಮಾಜವನ್ನು ಹೊರಗಿಂದ ವಿಮರ್ಶೆ ಮಾಡುವ ಜನ ಅದನ್ನು ಕಟ್ಟಿರುವ ಇಸ್ಲಾಂನ ತಾತ್ವಿಕತೆ ಮತ್ತು ರಾಜಕೀಯ ಇತಿಹಾಸವನ್ನು ಅರಿಯುವ ಗೋಜಿಗೇ ಹೋಗಿಲ್ಲ. ಆದರೆ ಅದನ್ನು ಮತ್ತು ಅವು ಸೃಷ್ಟಿಸಿರುವ ಒಳ ತಳಮಳಗಳನ್ನು ಅರಿಯದ ವಿಮರ್ಶೆ ಅಪೂರ್ಣವಷ್ಟೇ ಅಲ್ಲ, ಅಪಾಯಕಾರಿ ಕೂಡ. ಈ ದೃಷ್ಟಿಯಿಂದ ನಮ್ಮ ಓದುಗರು ಈ ಲೇಖನಗಳನ್ನು ಸ್ವಲ್ಪ ಸಹನೆಯಿಂದ ಓದಿ ಒಂದು ಚರ್ಚೆಗೆ ದಾರಿ ಮಾಡಿಕೊಡುವರೆಂದು ಆಶಿಸುತ್ತೇನೆ.–**ಸಂ.**

ಜನವರಿ, ೨೦೧೩

ಬರೀ ಸುಖ, ಮಜಾಗಳ ರುಚಿಗೆ ಬಿದ್ದು...

ಪ್ರಿಯ ಓದುಗರೇ,

ಮೊದಲು ಹೇಳಬೇಕಾದದ್ದು ಮೊದಲಿಗೆ:

ಅಮೆರಿಕಾದಲ್ಲಿ ೨೦ ವರ್ಷದ ಹುಡುಗನೊಬ್ಬ ತನ್ನ ತಾಯಿಯ ಬಳಿಯಲ್ಲಿದ್ದ ಬಂದೂಕು ಬಳಸಿ ಸನೊಹದ ಶಾಲೆಯೊಂದರಲ್ಲಿ ಐದರಿಂದ ಏಳು ವರ್ಷಗಳ ೨೦ ಜನ ಪುಟ್ಟ ಮಕ್ಕಳೂ ಸೇರಿದಂತೆ ೨೭ ಜನರನ್ನು ಕೊಂದು ತನ್ನನ್ನೂ ಕೊಂದುಕೊಂಡಿದ್ದಾನೆ. ಇದು ಆ ದೇಶದಲ್ಲಿ ನಡೆದ ಈ ರೀತಿಯ ಮೊದಲ ಘಟನೆಯೇನೂ ಅಲ್ಲ.

ಈ ಸುದ್ದಿ ಇಲ್ಲಿ ತಲ್ಲಣಗಳನ್ನು ಹುಟ್ಟಿಸುತ್ತಿದ್ದ ಸಮಯದಲ್ಲೇ ದೆಹಲಿಯಲ್ಲಿ ರಾತ್ರಿ ಒಂಭತ್ತಕ್ಕೆ ನಗರದ ಖಾಸಗಿ ಸಾರಿಗೆ ಬಸ್ ಹತ್ತಿದ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬಳ ಮೇಲೆ ಆ ಬಸ್ಸಿನ ಚಾಲಕ ಮತ್ತು ನಿರ್ವಾಹಕ ಸೇರಿದಂತೆ ಐದಾರು ಜನ ಸಾಮೂಹಿಕ ಅತ್ಯಾಚಾರವೆಸಗಿ, ಪ್ರತಿರೋಧಿಸಿದ ಆಕೆ ಮತ್ತು ಆಕೆಯ ಗೆಳೆಯನ ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿ ಅವರನ್ನು ಊರ ಹೊರಗಿನ ನಿರ್ಜನ ಪ್ರದೇಶವೊಂದರಲ್ಲೆ ಎಸೆದು ಹೋಗಿರುವ ಘಟನೆ ವರದಿಯಾಗಿದೆ. ಇದು ಈ ದೇಶದಲ್ಲಿ ಇತ್ತೀಚೆಗೆ ನಡೆದ ಈ ರೀತಿಯ ಮೊದಲ ಘಟನೆಯೇನೂ ಅಲ್ಲ. ಆದರೂ ದೇಶ ಅರೆ ಕ್ಷಣ ಬೆಚ್ಚಿ ಕೂತು ಈಗ ಅಳತೊಡಗಿದೆ; ಕಿರುಚಡತೊಡಗಿದೆ. ಆದರೆ ಬುದ್ಧಿಮಾಂದ್ಯ ಮಗುವಿನಂತೆ.

ಮೇಲಿನ ಈ ಎರಡೂ ಎಂತಹ ಕೃತ್ಯಗಳೆಂದರೆ ಅವನ್ನು ಬಣ್ಣಿಸಲು ಭಾಷೆಯೇ ಸೋತು ಹೋಗುವಂತಿದೆ. ಭೀಕರ, ಘೋರ, ಅಮಾನವೀಯ, ಮೃಗೀಯ ಇತ್ಯಾದಿ ಶಬ್ದಗಳು ಸವಕಲುಗಳಾಗಿ ಕಾಣತೊಡಗಿವೆ. ಈ ಎರಡೂ ಘಟನೆಗಳನ್ನು ಇಲ್ಲಿ ಒಟ್ಟಿಗೆ ಜೋಡಿಸಿ ಹೇಳಲು ಇವೆರಡೂ ಒಂದೇ ಹೊತ್ತಿಗೆ ನಡೆದಿವೆ ಎಂಬುದಷ್ಟೇ ಕಾರಣವಲ್ಲ. ಇವೆರಡೂ ಒಂದೇ ಮನಃಸ್ಥಿತಿಯ ಎರಡು ಮುಖಗಳು ಎಂಬುದೂ ಕೂಡ. ಇವೆರಡೂ

ವಕ್ರವಾಗಿ ಬೆಳೆದು ವಿಕ್ಷಿಪ್ತಗೊಂಡಿರುವ ಮತ್ತು ವಿಕ್ಷಿಪ್ತಗೊಳ್ಳುತ್ತಿರುವ ಎರಡು ಸಮಾಜಗಳ ಭಯಂಕರ ರೋಗ ಲಕ್ಷಣಗಳು. ಅಮೆರಿಕಾದ ಸಮಾಜ ಒಳಗೆ ಏನಾಗಿದೆ ಎಂಬುದರ ಅರಿವಿಲ್ಲದೆ ಅದನ್ನು ಕುರುಡಾಗಿ ಅನುಕರಿಸುತ್ತಿರುವ ಭಾರತದ ಸಮಾಜ ಪ್ರಾಣಾಂತಿಕವಾಗಿ ಎಚ್ಚರ ತಪ್ಪುತ್ತಿರುವ ಸೂಚನೆಯಿದು. ಇದು ಇಲ್ಲಿ ಮುಕ್ತ ಆರ್ಥಿಕ ನೀತಿಯ ರೂಪದಲ್ಲಿ ವ್ಯಕ್ತವಾಗುತ್ತಿದ್ದು ದುಡಿಮೆಯ ಅರ್ಥವೇ ಬದಲಾಗಿ ಹೋಗಿದೆ. ಸುಲಭ ಮಾರ್ಗಗಳಲ್ಲಿ ಹಣ ಮತ್ತು ಅಧಿಕಾರ ಅಯೋಗ್ಯರ, ದುಷ್ಟರ ಪಾಲಾಗುತ್ತಾ ಸಮಾಜ ಹೆಚ್ಚೆಚ್ಚು ವಕ್ರವೂ, ವಿಕ್ಷಿಪ್ತವೂ ಆಗತೊಡಗಿದೆ. ಹಿಂಸೆಯ ಭೀಕರತೆ ಮತ್ತು ವೈವಿಧ್ಯ ಎರಡೂ ಹೆಚ್ಚುತ್ತಿದೆ. ವಿಶೇಷವಾಗಿ ಇಲ್ಲಿ ಮಹಿಳೆ, ಮಕ್ಕಳು ಮತ್ತು ದಲಿತರ ಮೇಲೆ. ಇದಕ್ಕೆ ಅಂಕಿ ಅಂಶಗಳ ಅಗತ್ಯವಿರಲಾರದು. ಈ ಸಾಮೂಹಿಕ ಲೈಂಗಿಕ ಅತ್ಯಾಚಾರ ದೇಶದ ಅಸಹಾಯಕ ಜನತೆ ದಿನ ನಿತ್ಯ ಎದುರಿಸುತ್ತಿರುವ ಇನ್ನೊಂದು ವಿಶಾಲ ಅರ್ಥದ ಸಾಮೂಹಿಕ ಸಾಮಾಜಿಕ ಅತ್ಯಾಚಾರದ ಒಂದು ಸ್ಫೋಟಕ ಅಭಿವ್ಯಕ್ತಿ ರೂಪವಷ್ಟೆ. ಸಮಾಜದಲ್ಲಿನ ಸುಪ್ತ ಕೋಪ ಮತ್ತು ಅಸಮಧಾನಗಳು ಇಂದು ಊಹಿಸಲೂ ಅಸಾಧ್ಯವಾಗುವಂತಹ ಭಯಂಕರ ರೂಪ ತಾಳುತ್ತಿವೆ. ಆದರೆ ಇದನ್ನು ಯಾರಿಗೆ ಹೇಳುವುದು?

ಈ ಎರಡೂ ಕಡೆ ನೋಡಿ. ಬರೀ ಕಾನೂನುಗಳನ್ನು ಬಿಗಿಗೊಳಿಸುವ ಮಾತುಗಳನ್ನಾಡಲಾಗುತ್ತಿದೆ. ಮತ್ತೆ ಅದೇ ಹೊರನೋಟ. ಏಕೆಂದರೆ ಈ ಸಮಾಜಕ್ಕೆ ಸುಲಭ ಸುಖ ಮತ್ತು ಮಜಾಗಳ ರುಚಿ ಹತ್ತಿಬಿಟ್ಟಿದೆ. ಸಮಸ್ಯೆಯ ಮೂಲಕ್ಕೆ ಹೋಗಲು ಅದರ ಬುದ್ಧಿಮಾಂದ್ಯತೆ. ನಿರಾಕರಿಸುತ್ತಿದೆ.

*****

ಗುಜರಾತ್‌ನಲ್ಲಿ ಮತ್ತೆ ಕಾಂಗ್ರೆಸ್ಸಿಗರು, ಮಾನವ ಹಕ್ಕು ಹೋರಾಟಗಾರರು, ಸ್ವಯಂ ಘೋಷಿತ ಸೆಕ್ಯುಲರಿಸ್ಟರೂ ಸೇರಿದಂತೆ ಎಲ್ಲರ ನಿರೀಕ್ಷೆಯಂತೆ ಮೋದಿ ಗೆದ್ದಿದ್ದಾರೆ. ಆದರೆ ಇದು ಗುಜರಾತ್ ಜನತೆಯ ಒಂದು–ಶೇ.೪೦ರಷ್ಟು–ಭಾಗವೂ ಸೇರಿದಂತೆ ಎಲ್ಲರ ಅಪೇಕ್ಷೆಯಂತೂ ಆಗಿರಲಿಲ್ಲ. ನರೇಂದ್ರ ಮೋದಿಯವರ ಚರಿತ್ರೆ ಮತ್ತು ಆಡಳಿತ ಶೈಲಿಯನ್ನು ಗಮನಿಸಿದವರಾರೂ ಇದನ್ನು ಅಪೇಕ್ಷಿಸಿರಲಾರರು. ಆದರೂ ಅವರು ಗೆದ್ದಿದ್ದಾರೆ. ಏಕೆ ಎಂದು ಯೋಚಿಸಲಾಗದ ಅವರ ವಿರೋಧಿಗಳ ದೌರ್ಬಲ್ಯವೇ ಮತ್ತೆ ಮತ್ತೆ ಮೋದಿಯವರ ವಿಜಯಕ್ಕೆ ಕಾರಣವಾಗುತ್ತಿದೆ ಎಂದರೆ ತಪ್ಪಾಗಲಾರದು.

ಕಣ್ಣು ಕುಕ್ಕುವಂತಹ 'ಅಭಿವೃದ್ಧಿ', ಅದನ್ನು ಸಾಧ್ಯ ಮಾಡಿದ ದಕ್ಷತೆ, ಸ್ವಚ್ಛ ಆಡಳಿತ ಮೋದಿಯವರ ಸತತ ವಿಜಯಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಆದರೆ ಬಡತನ ನಿವಾರಣೆ, ಆರೋಗ್ಯ, ಪೌಷ್ಠಿಕತೆ, ಲಿಂಗ ಸಮಾನತೆಯ ಸೂಚ್ಯಂಕಗಳಲ್ಲದೆ, ಹೊಸ ಅಭಿವೃದ್ಧಿಯ ಸೂಚ್ಯಂಕವಾದ ವಿದೇಶಿ ಬಂಡವಾಳ ಹೂಡಿಕೆಯ ವಿಷಯದಲ್ಲೂ ಗುಜರಾತ್ ಹಲವು ರಾಜ್ಯಗಳಿಗಿಂತ ಹಿಂದಿದೆ ಎಂದು ಅಂಕಿ ಅಂಶಗಳು ಹೇಳುತ್ತಿವೆ.

ಹಾಗಾಗಿ ಈ ವಿಜಯದ ಮುಖ್ಯ ಕಾರಣ, ಮೋದಿ ವಿರೋಧಿಗಳ ವಿಶ್ವಾಸಾರ್ಹತೆ, ಅಂದರೆ ಅವರು ಪ್ರತಿಪಾದಿಸುವ ಅಭಿವೃದ್ಧಿ ಶೈಲಿ, ಸೆಕ್ಯುಲರಿಸಂ, ಸ್ವಚ್ಛ ಮತ್ತು ದಕ್ಷ ಆಡಳಿತಗಳ ಬಗೆಗಿನ ಸಾರ್ವಜನಿಕ ನಂಬಿಕೆ ಎಷ್ಟು ಕಡಿಮೆ ಇದೆಯೆಂದರೆ, ಮೋದಿಯ ಅಭಿವೃದ್ಧಿ ಕಲ್ಪನೆಯ ವ್ಯಾಪ್ತಿಗೆ ಒಳಪಡದ ಜನಸಮುದಾಯಗಳೂ ಇವರನ್ನು ನಂಬದಷ್ಟು!

ಅಲ್ಲಿನ 'ಸೆಕ್ಯುಲರ್' ಕಾಂಗ್ರೆಸ್ಸಿನ ಸ್ಥಿತಿ ನೋಡಿ. ಶಂಕರಸಿಂಗ್ ವಘೇಲ ಎಂಬ ಮಾಜಿ ಆರೆಸ್ಸೆಸ್ ನಾಯಕನೇ ಅದರ ಅಗ್ರ ನಾಯಕ! ಇನ್ನು ಈ ಚುನಾವಣೆಗಳಲ್ಲಿ ಟಿಕೆಟ್ ಸಿಗಲಿಲ್ಲವೆಂದು ಮುನಿಸಿಕೊಂಡು ಬಿಜೆಪಿ ಸೇರಿ ಮೋದಿಯನ್ನು ಪ್ರಧಾನಮಂತ್ರಿ ಮಾಡುವುದೇ ನನ್ನ ಮುಂದಿನ ಜೀವನದ ಗುರಿ ಎಂದೂ ಘೋಷಿಸಿದ ನರಹರಿ ಅಮೀನ್ ಎಂಬಾತ ಇತ್ತೀಚಿನವರೆಗೆ ಈ ಪಕ್ಷದ ಹಿರಿಯ ಉಪಾಧ್ಯಕ್ಷನಾಗಿ ಈ ಬಾರಿಯ ಮುಖ್ಯಮಂತ್ರಿ ಅಭ್ಯರ್ಥಿಗಳಲ್ಲೊಬ್ಬರೆಂದು ಬಿಂಬಿಸಲ್ಪಟ್ಟಿದ್ದವ! ಹೀಗೆ ನೈತಿಕವಾಗಿ ದಿವಾಳಿಯೆದ್ದು ಹೋಗಿರುವ ಈ ಪಕ್ಷ ಕೋಮುವಾದದ ಸುದ್ದಿ ಎತ್ತಿದರೆ ಹಿಂದೂ ಮತಗಳು ಬೀಳಲಾರವು ಎಂಬ ಭಯದ ಲೆಕ್ಕಾಚಾರದಲ್ಲಿ ಈ ಬಾರಿ ಅದರ ಸುದ್ದಿಗೇ ಹೋಗಲಿಲ್ಲ! ನರೇಂದ್ರ ಮೋದಿ ಪ್ರಧಾನಿಯಾಗುವ ಸಂಭವನೀಯತೆ ಈ ಫಲಿತಾಂಶದಿಂದ ಹೆಚ್ಚಿದೆ ಎಂದು ಈಗಲೇ ಆತಂಕಿತರಾಗಿ ಹುಯಿಲೆಬ್ಬಿಸುತ್ತಿರುವ ನಮ್ಮ 'ಸೆಕ್ಯುಲರಿಸ್ಟ್'ರು ಇದನ್ನು ಗಮನಿಸಬೇಕು.

ನರೇಂದ್ರ ಮೋದಿ ಪ್ರಧಾನಿಯಾದರೆ ದೇಶದಲ್ಲಿ ಶಾಂತಿ–ಸುಭಿಕ್ಷ ನೆಲೆಸುವುದೆಂದು ನಂಬಿರುವವರೆಲ್ಲಾ ಕೋಮುವಾದಿಗಳೇನಲ್ಲ. ಅವರಲ್ಲಿ ಬಹಳಷ್ಟು ಜನ ಕಾಂಗ್ರೆಸ್–ಬಿಜೆಪಿ ಈ ಎರಡೂ ಸೇರಿದಂತೆ ಈಗಿನ ರಾಜಕೀಯ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಂಡಿರುವವರು. ಆದುದರಿಂದ ನರೇಂದ್ರ ಮೋದಿಯ ಎದುರು ನಿಜವಾದ ರಾಜಕಾರಣ ಎಂದರೆ, ಈ ರಾಜಕೀಯ ವ್ಯವಸ್ಥೆಗೆ ಪರ್ಯಾಯವೊಂದನ್ನು ರೂಪಿಸುವುದೇ ಆಗಿದೆ.

<u>ಸಮಕಾಲೀನ</u>

ಸೆಕ್ಯುಲರಿಸ್ಟೊಬ್ಬನ ತಲ್ಲಣ, ಮನದ ಮಾತು

ಮೂಲ ಇಂಗ್ಲಿಷ್: **ಶಿವ ವಿಶ್ವನಾಥನ್**

ಕನ್ನಡಕ್ಕೆ: **ಎಸ್. ರಘುನಂದನ**

(ಇದು ಸೆಕ್ಯುಲರಿಸಮ್ ಮತ್ತು ಭಾರತದ ಮುಸ್ಲಿಮರನ್ನು ಕುರಿತ ಪ್ರಬಂಧ. ಮೊದಲಿಗೇ ಹೇಳಿಬಿಡುತ್ತೇನೆ, ಈಚಿನ ಕೆಲವು ಆಗುಹೋಗುಗಳಿಂದಾಗಿ ಈ ಲೇಖನವನ್ನು ಬರೆಯುವುದು ನಿಜಕ್ಕೂ ಕಷ್ಟವಾಗುತ್ತಿದೆ.–ಲೇಖಕ)

ಶುರುವಿನಿಂದ ಸುರು ಮಾಡುತ್ತೇನೆ. ನಾನು ಹುಟ್ಟಿದ್ದು ಜಮಶೆದ್‌ಪುರದಲ್ಲಿ. ಅಲ್ಲಿನ ಪೇಟೆ, ಗಲ್ಲಿಗಳಲ್ಲಿ ಮೇಲಿಂದಮೇಲೆ ಗಲಭೆಯಾಗುವುದನ್ನು ಕಂಡಿದ್ದೇನೆ. ನನ್ನ ಸಹಪಾಠಿ ಒಬೈದುಲ್ ಇಸ್ಲಾಮ್ ಕಡೆಯ ಸಲ ಶಾಲೆಗೆ ಬಂದ ಆ ದಿನ ನನಗಿನ್ನೂ ನೆನಪಿದೆ. ಮನೆಮಂದಿ ಯೊಡನೆ ಪಾಕಿಸ್ತಾನಕ್ಕೆ ವಲಸೆ ಹೋಗುತ್ತಿದ್ದೇನೆ ಅನ್ನುತ್ತ ನನ್ನ ಬಳಿ ಅಲವತ್ತುಕೊಂಡ ಅವನು. ನೂರು ಮೀಟರ್ ಓಟದ ಮಿನುಗು ತಾರೆಯಾಗಿದ್ದ ಆ ನನ್ನ ಒಬೈದುಲ್‌ನನ್ನು ಹಿಂದಿಕ್ಕೋಣವೆಂದು ಈಗಲೂ ನೋಡುತ್ತೇನೆ; ಆಗುತ್ತಿಲ್ಲ.

ವಯಸ್ಸಾಗುತ್ತ ಆಗುತ್ತ ೧೯೯೨ರ ಮುಂಬೈ ಗಲಭೆಗಳನ್ನು ಕಂಡೆ; ೨೦೦೨ರ ಗುಜರಾತ್ ನರಮೇಧ ಕಂಡೆ; ನಮ್ಮ ಬಹುಸಂಖ್ಯಾತ ಮತಧರ್ಮದ ಜನರು, "ಪ್ರಜಾಪ್ರಭುತ್ವವೆಂದರೆ ಹರಳೆಣ್ಣೆ ಕುಡಿದಂತೆ; ಆರೋಗ್ಯಕ್ಕೆ ಒಳ್ಳೆಯದೇನೋ ಹೌದು, ಆದರೆ ಹೇಗಪ್ಪ ಅದನ್ನು ಕುಡಿಯೋದು" ಎಂಬಂತೆ ಆಡುವುದನ್ನು ಕಂಡೆ; ವಿಷಣ್ಣನಾದೆ. ಗುಜರಾತ್ ಹಿಂಸಾಕಾಂಡದ ಹಿಂದುಮುಂದುಗಳ ಅಧ್ಯಯನಮಾಡುವಾಗ, ಆ ಹಿಂಸಾಚಾರಕ್ಕೆ ತುತ್ತಾಗಿ ಅಳಿದುಳಿದ ಮುಸ್ಲಿಮ್ ಸಮುದಾಯವು ಕಾನೂನಿನ ಪರಿಪಾಲನೆಯನ್ನು ನೆಚ್ಚಿಕೊಂಡು ಹೊಸದೊಂದು ನಾಗರಿಕ ಜೀವನ ಕಟ್ಟಿಕೊಂಡದ್ದನ್ನು ಕಂಡೆ. ಬರೋಡಾ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕರಾಗಿದ್ದ ಶ್ರೀ ಬಂದೂಕ್‌ವಾಲಾ ಅವರು, ಹಿಂದೂಗಳನ್ನು ಉದ್ದೇಶಿಸಿ, 'ನೀವಾಗಿ ಕ್ಷಮೆ ಕೇಳದಿದ್ದರೂ ಪರವಾಗಿಲ್ಲ. ನಾನು ನಿಮ್ಮನ್ನು ಕ್ಷಮಿಸಿದ್ದೇನೆ" ಎಂದದ್ದನ್ನು ಕೇಳಿ, ಅರೇ ಹಾಗಾದರೆ ಸೆಕ್ಯುಲರಿಸಮ್ ಎಂದರೆ ಏನು ಎಂಬ ಚಿಂತೆಗೊಳಗಾದೆ.

ನನ್ನ ಸೆಕ್ಯುಲರ್ ಸ್ನೇಹಿತರೋ, ವಿಲಕ್ಷಣ ಜಾತಿವಾದವೊಂದರ ಹಾದಿ ಹಿಡಿದಿದ್ದರು. ಗಲಭೆಗಳು ನಿಂತಮೇಲೆ, ಅವರು, ಮುಸ್ಲಿಮರನ್ನು ಮಾತ್ರ ಮಾತನಾಡಿಸುತ್ತಿದ್ದರು. ಮುಸ್ಲಿಮರಂತೆಯೇ ಹಿಂಸೆಗೊಳಗಾದ ಹಿಂದೂಗಳು ಅವರ ಕಣ್ಣಿಗೆ ಬೀಳದೇಹೋದರು. ಸೆಕ್ಯುಲರಿಸಮ್ ಅನ್ನುವುದು ತಾನೇ ಒಂದು ಥರದ ಜಾತಿಕೇರಿ ಆಗುತ್ತಿದೆಯೆಂದು ತೋರಿತು. ಆ ಕೇರಿಯ ಜನರಿಗೆ, ಒಂದು ಸಮುದಾಯದ ಜನರ ದುಕ್ಕದುಮ್ಮಾನ ದೊಡ್ಡದೆನ್ನಿಸುತ್ತದೆ, ಮತ್ತೊಬ್ಬರದು ಸಣ್ಣದನ್ನಿಸುತ್ತದೆ ಎಂದು ತೋರಿತು. ಇನ್ನೂ ಬೇಸರದ ವಿಷಯುವೆಂದರೆ, ಸೆಕ್ಯುಲರಿಸವ್ ಅನ್ನುವುದು ಬರಿದೇ ಬುಡುಬುಡಿಕೆಯಾಟವಾಗಿದೆ, ತನಗಿಂತ ಬೇರೆಯಾದುದರೊಂದಿಗೆ ಮಾತುಕತೆ ನಡೆಸಲು ಒಲ್ಲದಾಗಿದೆ ಅನ್ನಿಸತೊಡಗಿತು. ವಿಶಾಲ ತತ್ತ್ವದರ್ಶನವಿಲ್ಲದ ಯಂತ್ರತಂತ್ರಗಳ ಶಾಸ್ತ್ರವಿಧಿಯಾಗಿದೆ ಅದು, ರಾಜಕೀಯ ಮಡಿವಂತಿಕೆಯ ಒಂದು ಬಗೆಯಾಗಿದೆ; ಅಲ್ಲಿನ ಹರಕೆ ಹಾರೈಕೆಯ ಪದವೆಲ್ಲ ಅಲ್ಪಸಂಖ್ಯಾತರ ಮಕ್ಕಳ ಒಳಿತಿಗಾಗಿ ಮೀಸಲು; ಸತ್ಯ ಅನ್ನುವುದು ಅಲ್ಲಿ ಬೇಡವೇ ಆಗಿ, ಎತ್ತಲೋ ಹಾರಿಹೋಗಿದೆ ಅನ್ನಿಸತೊಡಗಿತು.

ಈ ಸೆಕ್ಯುಲರಿಸಮ್ ಅನ್ನುವುದು ವಿಜ್ಞಾನಕ್ಕೂ ಆಸ್ತಿಕ ಮತಧರ್ಮಕ್ಕೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳಲಾರದೆ ಎಡವಿದೆ. ಕಡೇಪಕ್ಷ ಅವೊಂದು

ವಿಷಯದಲ್ಲಿಯಾದರೂ, ಸೆಕ್ಯುಲರಿಸಮ್ ಅನ್ನುವುದು ಇತಿಹಾಸವನ್ನು ಕುರಿತಾದ ತೀರ ತಪ್ಪು ತಿಳಿವಳಿಕೆಯ ಮೇಲೆ ನಿಂತಿದೆ. ಅದರಿಂದಾಗಿ, ವಿಜ್ಞಾನ ಮತ್ತು ಆಸ್ತಿಕ ಮತಧರ್ಮಗಳನ್ನು ಸುಳ್ಳುಸುಳ್ಳೇ ಎದುರು ಬದುರು ನಿಲ್ಲಿಸಿ, ಸುಖಾಸುಮ್ಮನೆ ಅವುಗಳ ನಡುವೆ ಕಾದಾಟದ ಕಿಡಿ ಹಚ್ಚಲಾಗಿದೆ. ವಿಜ್ಞಾನ ಮತ್ತು ಆಸ್ತಿಕ ಮತಧರ್ಮದ ನಡುವೆ ಜಗಳವಿದೆ, ಇರಬೇಕು ಎಂದು ಹೇಳುವ ಬರಹಗಳು ಬರಲು ಸುರುಮಾಡಿದ್ದು ಆಧುನಿಕ ವಿಶ್ವವಿದ್ಯಾಲಯಗಳ ಮೇಲೆ ಅಧಿಕಾರ ಸಂಪಾದಿಸಲು ವಿಜ್ಞಾನಿಗಳು ಮತ್ತು ದೇವತಾಶಾಸ್ತ್ರಜ್ಞರ ನಡುವೆ ನಡೆದ ಪೈಪೋಟಿಯಿಂದ. ಈ ಇಬ್ಬಣದವರೂ ಇತಿಹಾಸವನ್ನು ಬರೆದದ್ದು ತಾವು ತಾವು ಹೇಳುತ್ತಿರುವುದೇ ಸರಿ ಎಂದು ಸಾಬೀತು ಮಾಡಲು. ಅದರಿಂದಾಗಿ, ವಿಜ್ಞಾನ ಮತ್ತು ಆಸ್ತಿಕ ಮತಧರ್ಮಗಳೆರಡೂ ಒಂದಕ್ಕೊಂದು ಪೂರಕವಾಗಿರುತ್ತ, ಸೃಜನಶೀಲವಾದ್ದನ್ನು ಮಾಡುತ್ತ ಬಂದಿವೆ ಅನ್ನುವ ತಿಳಿವಳಿಕೆಯೇ ನಾಶವಾಗಿಬಿಟ್ಟಿದೆ.

ನನಗನ್ನಿಸುವಂತೆ, ಭಾರತೀಯ ಸೆಕ್ಯುಲರಿಸಮ್ ಅನ್ನುವುದು ಆಸ್ತಿಕ ಮತಧರ್ಮದವನ್ನು ಹಗೆತನದಿಂದ ಕಾಣಬಾರದು; ಬದಲಾಗಿ, ಅದರೊಡನೆ ಒಗೆತನವಿರಿಸಿಕೊಳ್ಳಬೇಕು ಅದು, ಅದರೊಡನೆ ಮಾತುಕತೆಯಲ್ಲಿ ತೊಡಗಬೇಕು. ನನಗೆ ಹಳೆಯ ಚಲನಚಿತ್ರವೊಂದರ ನೆನಪಾಗುತಿದೆ. 'ಇನ್‌ಹೆರಿಟ್ ದ ವಿಂಡ್' ಎಂಬ ಚಲನಚಿತ್ರದಲ್ಲಿ ಅದರ ಕಥಾನಾಯಕ ಕ್ಲ್ಯಾರೆನ್ಸ್ ಡ್ಯಾರೋ ಅನ್ನುವವನು (ಕ್ಲ್ಯಾರೆನ್ಸ್ ಡ್ಯಾರೋ ಎಂಬ ಅಸಲಿ ವ್ಯಕ್ತಿಯ ಬದುಕನ್ನು ಆಧರಿಸಿ ಸೃಷ್ಟಿಸಲಾದ, ಆ ಚಲನಚಿತ್ರದ, ಪಾತ್ರದ ಹೆಸರು ಹೆನ್ರಿ ಡ್ರಮ್ಮಾಂಡ್. ಪಾತ್ರವನ್ನು ವಹಿಸಿದ ನಟನ ಹೆಸರು ಸ್ಪೆನ್ಸರ್ ಟ್ರೇಸೀ – ಅನುವಾದಕ.) ಛಾರ್ಲ್ಸ್ ಡಾರ್ವಿನ್ನನ ದಿ ಆರಿಜಿನ್ ಆಫ್ ದಿ ಸ್ಪೀಸೀಸ್ ಪುಸ್ತಕವನ್ನೂ ಬೈಬಲ್ ಪುಸ್ತಕವನ್ನೂ ಕೈಗೆತ್ತಿಕೊಂಡು ಅವೆರಡೂ ಅದ್ಭುತವಾದ ಪುಸ್ತಕಗಳೇ ಅನ್ನುತ್ತಾನೆ; ಅವುಗಳಲ್ಲಿ, ಒಂದು ಪುಸ್ತಕಕ್ಕೆ ಸ್ಫೂರ್ತಿಯಾದುದು ಒಂದು ಬಗೆಯ, ಒಂದು ನೆಲೆಯ ಸತ್ಯವಾದರೆ, ಮತ್ತೊಂದು ಪುಸ್ತಕಕ್ಕೆ ಸ್ಫೂರ್ತಿಯಾದುದು ಮತ್ತೊಂದೇ ಬಗೆ ಹಾಗೂ ನೆಲೆಯ ಸತ್ಯ ಅನ್ನುತ್ತಾನೆ.

ಸೆಕ್ಯುಲರಿಸಮ್ ಅನ್ನುವುದು ಒಗೆತನದ ಮಾತುಕತೆ ಅನ್ನುವುದಾದರೆ, ಅಂಥ ಮಾತುಕತೆಯಲ್ಲಿ ಟೀಕೆಗೆ, ವಿಮರ್ಶೆಗೆ ತಾವಿರಬೇಕು. ಈಗ ನಾನು ಅಂಥ ಟೀಕೆ, ವಿಮರ್ಶೆ ಮಾಡುವವನಿದ್ದೇನೆ.

ಮುಂಬೈಯಲ್ಲಿ ಮೊನ್ನೆ ಆದುದು, ಮತ್ತು ಈಗಲೂ ಆಗುತ್ತಿರುವುದು, ಹೇಸಿಗೆ ಹುಟ್ಟಿಸುತ್ತದೆ. ಮುಸ್ಲಿಮರು ಕೂಡ ಬಾಳಾ ಠಾಕ್ರೆಯಂತೆ ಇಲ್ಲವೇ ರಾಜ್ ಠಾಕ್ರೆಯಂತೆ ಮತಾಂಧರಾಗಿ ಹುಚ್ಚುಹುಚ್ಚಾಗಿ ಆಡುತ್ತಿದ್ದಾರೆ ಅನ್ನಿಸಿದರೆ, ಆಗ ನನ್ನಂಥವನು ಹಾಗೆಂದು ಹೇಳಲೇಬೇಕಾಗುತ್ತದೆ. ಮುಸ್ಲಿಮರು ತಾವು ಮಾತನಾಡುವುದು ಮುಸ್ಲಿಮರ ಪರವಾಗಿ ಮಾತ್ರವೇ, ಬೋಡೋ ಜನರ ದುಮ್ಮಾನವನ್ನು ತಾವು ಗುರುತಿಸುವುದಿಲ್ಲ ಅನ್ನುವುದಾದರೆ,

ಆಗ ಅವರು ತಮ್ಮಾಚೆಗಿನ ಏನನ್ನೂ ಕಾಣಲೊಲ್ಲದವರು, ಸೆಕ್ಯುಲರ್ ಮೌಲ್ಯಗಳನ್ನು ಪಾಲಿಸದವರು ಅನ್ನಬೇಕಾಗುತ್ತದೆ, ಅಷ್ಟೇ. ಹತ್ತು ಲಕ್ಷ ಜನ ಬೊಡೋಗಳು ಮನೆಮಠ ಕಳಕೊಂಡಿದ್ದಾರೆ ಅನ್ನುವುದನ್ನು ಮುಸ್ಲಿಮರು ತಮ್ಮ ಮನಸ್ಸಿಗೆ ತಂದುಕೊಳ್ಳದಿದ್ದರೆ, ಮೂವತ್ತು ಲಕ್ಷ ಮುಸ್ಲಿಮರು ಮನೆಮಠ ಕಳಕೊಂಡಿದ್ದಾರೆ ಅನ್ನುವುದನ್ನು ಮನಸ್ಸಿಗೆ ತಂದುಕೊಳ್ಳುವುದು ಕಷ್ಟವಾಗುತ್ತದೆ. ಒಬ್ಬರ ದುಕ್ಕದುಮ್ಮಾನಗಳನ್ನು ಕಂಡು ಮತ್ತೊಬ್ಬರು ಹಾಲು ಕುಡಿಯುವಂತಾಗಬಾರದು. ಇದು ಸೆಕ್ಯುಲರಿಸಮ್ಮಿನ ದಾರಿಯಲ್ಲ, ನೀತಿಯಲ್ಲ.

ನಾವು, ನಮ್ಮ ಸಮಾಜದಮಟ್ಟಿಗೆ, ಸೆಕ್ಯುಲರಿಸಮ್ಮನ್ನು ಹೊಸ ರೀತಿಯಲ್ಲಿ ಅರ್ಥವಿಸಿಕೊಳ್ಳಬೇಕು. ನಮ್ಮಲ್ಲಿ, ಸೆಕ್ಯುಲರಿಸಮ್ ಅಂದರೆ ಆಸ್ತಿಕ ಮತಧರ್ಮ ಮತ್ತು ವಿಜ್ಞಾನಗಳ ನಡುವಿನ ಕಾದಾಟವೇ ಎಂದಾಗಬಾರದು. ಹಾಗೆಯೇ, ಸೆಕ್ಯುಲರಿಸಮ್ ಅಂದರೆ ಪ್ರಭುತ್ವ-ಸರಕಾರ ಮತ್ತು ಆಸ್ತಿಕ ಮತಧರ್ಮಗಳು ಸಂಪೂರ್ಣವಾಗಿ ಬೇರೆಬೇರೆಯೇ ಆಗಿರುವ ವ್ಯವಸ್ಥೆ ಎಂದು ನಾವು ಹಠ ಹಿಡಿಯುವುದು ಕೂಡ ಸಲ್ಲ. ನಿಜವಾಗಿ ನೋಡಿದರೆ, ನಮ್ಮಂತೆ ಇಲ್ಲದಿರುವವರನ್ನು, ಹೆರವರನ್ನು ನಾವು ಆದರದಿಂದ ಕಾಣುವುದೇ ಸೆಕ್ಯುಲರಿಸಮ್. ನಮ್ಮಂತಲ್ಲದ, ನಮ್ಮಂತಿಲ್ಲದಿರುವ ಹೆರವರಿಂದಾಗಿಯಲ್ಲವೇ ನಮಗೆ ನಮ್ಮತನದ ಗುರುತು ಹತ್ತುವುದು?!

ಸೆಕ್ಯುಲರಿಸಮ್ಮಿನ ಮೊದಲ ನಿಯಮ ಅಂದರೆ ಇದೇ, ಆದರ ಅನ್ನುವುದೇ, ಆಗಬೇಕು. ನಮ್ಮಂತಿಲ್ಲದಿರುವವರನ್ನು ಅವರು ನಮ್ಮಂತಿಲ್ಲ, ನಮ್ಮಂತಲ್ಲ ಎಂಬುದಕ್ಕಾಗಿಯೇ ನಾವು ಸತ್ಕರಿಸಬೇಕು. ಆ ಹೆರವರು ಎಂದು ಕರೆಯಿಸಿಕೊಳ್ಳುವವರು, “ನಾವು ಯಾರೂ ನಾವೇ ನಾವಾಗಿ ಶುದ್ಧ ಸತ್ಯದ ಗಟ್ಟಿಗಳಲ್ಲ; ನಾವೂ ಅವರೂ ಅದು ಯಾವುದೋ ದೊಡ್ಡದೊಂದರ ತುಣುಕುಗಳು ಮಾತ್ರ; ತುಣುಕಿಗೆ ತುಣುಕು, ಹನಿಗೆ ಹನಿಗೆ ಬೇಕು; ನಾವು ಒಬ್ಬರಿಗೊಬ್ಬರು ಬೇಕಾದವರು” ಅನ್ನುವುದನ್ನು ನಮಗೆ ನೆನಪು ಮಾಡಿಕೊಡುತ್ತಾರೆ.

ಸೆಕ್ಯುಲರಿಸಮ್ಮಿನ ಎರಡನೆಯ ನಿಯಮವನ್ನು ದಲೈಲಾಮಾ ಅವರು ಆಡಿದ ಮಾತೊಂದರ ಮೇಲೆ ಕಟ್ಟಿಕೊಳ್ಳಬಹುದು. ಜಾರ್ಜ್ ಬುಷ್‌ನ ನಡವಳಿಕೆಯು “ನನ್ನೊಳಗಿನ ಮುಸ್ಲಿಮನನ್ನು ಬಡಿದೆಬ್ಬಿಸುತ್ತದೆ” ಅಂದರಂತೆ ಅವರು. ಹಾಗೇನೆ, ಗುಜರಾತಿನ ನರಮೇಧದಿಂದಾಗಿ, ನರೇಂದ್ರ ಮೋದಿಯು ನನ್ನೊಳಗಿನ ಮುಸ್ಲಿಮನನ್ನು ಬಡಿದೆಬ್ಬಿಸಿದ್ದಾರೆ. ನಮ್ಮಂತಲ್ಲದ, ನಮ್ಮಂತಿಲ್ಲದ ಹೆರವರ ಸಂಕಟದ ಗಳಿಗೆಯಲ್ಲಿ ಅವರೇ ನಾವು-ನಾವೇ ಅವರು ಅನ್ನುವ ಭಾವ ನಮಗಿದ್ದರೆ, ಆಗ ನಾವು ಈ ಸೆಕ್ಯುಲರ್ ಎಂಬ ನೆಲೆಗೊಂದು ಸಾರ್ಥಕತೆಯನ್ನು ಒದಗಿಸಿದಂತಾಗುತ್ತದೆ.

ಇಷ್ಟಾದರೂ, ಸೆಕ್ಯುಲರಿಸಮ್ಮಿನ ಬಾಳಿನಲ್ಲಿ ಪಂಗಡ ಪಂಗಡದ ನಡುವೆ ಮೋಟುಗೋಡೆಗಳೂ ಇದ್ದರೆ ಒಳ್ಳೆಯದು. ಯಾಕೆಂದರೆ, ನಾನು ನೀನೆಂಬ ಗುರುತುಗಳು ಒಂದಕ್ಕೊಂದು ತೀರ ಹತ್ತಿರವಾಗಿ, ತೀರ ಮಸುಕಾಗಿ, ಕಲೆಸಿ ಹೋಗಲು ಸುರುಮಾಡಿದರೆ, ನಾನು ನೀನುಗಳ ನಡುವಿನ ದೂರಗಳನ್ನು ನಾವು ತಕ್ಕಮಟ್ಟಿಗೆ ಕಾಯ್ದುಕೊಳ್ಳದಿದ್ದರೆ,

ಆಗಲೂ ಹಿಂಸೆಯ ಭುಗಿಲು ಏಳಬಹುದು ಅನ್ನುವುದನ್ನು ನಾವು ಅರಿಯಬೇಕು. ನಮ್ಮ ನಮ್ಮ ನಡುವಿನ ವ್ಯತ್ಯಾಸ ಮತ್ತು ದೂರಗಳನ್ನು ನಮ್ಮ ಸೆಕ್ಯುಲರಿಸಮ್ಮು ಸೃಜನಶೀಲವಾಗಿ ಅರ್ಥವಿಸಿಕೊಳ್ಳಬೇಕು, ಯಾಕೆಂದರೆ ನಮ್ಮಲ್ಲಿ ಸೆಕ್ಯುಲರಿಸಮ್ ಅನ್ನುವುದು ಬಹುತ್ವದ ದರ್ಶನ ಮತ್ತು ಸಿದ್ಧಾಂತವಾಗಿದೆಯೇ ಹೊರತು ಎಲ್ಲ ಬಹುತ್ವ, ಎಲ್ಲ ಬಹುರೂಪತೆಯನ್ನು ಬಲವಂತವಾಗಿ ಸಾರಿಸಿ, ಸಪಾಟು ಮಾಡಿಬಿಡುವ ಏಕರೂಪತ್ವದ ದರ್ಶನ ಮತ್ತು ಸಿದ್ಧಾಂತವಾಗಿಲ್ಲ; ಆಗಬಾರದು ಕೂಡ.

ಮಾನವ ಹಕ್ಕುಗಳ ಪರ ನಿಂತು ಹೋರಾಡುವವನಾಗಿ, ನಾನು ಸೆಕ್ಯುಲರಿಸ್ಟನಲ್ಲದೇ ಮತ್ತೊಂದಾಗಿರಲು ಸಾಧ್ಯವೇ ಇಲ್ಲ. ನಾನು ಹಿಂದೂ, ಹಾಗಾಗಿ ಹಿಂದೂಗಳ ಪರವಾಗಿ ಮಾತ್ರ ಹೋರಾಡುತ್ತೇನೆ ಅನ್ನುವುದು ಸಲ್ಲ; ಬದಲಾಗಿ, ನಾನು ಮುಸ್ಲಿಮರ ಪರವಾಗಿ ಹೋರಾಡುತ್ತೇನೆ, ಯಾಕೆಂದರೆ ನಾನು ಹಿಂದೂ ಅನ್ನುವುದು ಚಂದ. ನನ್ನ ಜಾತಿ–ಸಮುದಾಯದ ನೆಲೆಯಿಂ ಆಚೆಗೂ ನಾನು ಪಾಲಿಸಬೇಕಾದ ಕರ್ತವ್ಯಗಳಿವೆ, ಯಾಕೆಂದರೆ ನನಗೆ ದಕ್ಕಿರುವ ಹಕ್ಕುಗಳು ಕೂಡ ಆ ನೆಲೆಯ ಆಚೆಗಿವೆ. ನನ್ನ ಸೆಕ್ಯುಲರಿಸಮ್ಮಿಗೆ ಇಂಥ ಸಂವಾದದ ಸ್ವಭಾವ–ಸ್ವರೂಪವಿರುವುದರಿಂದಲೇ ನಾನು ಮುಸ್ಲಿಮ್ ಮೂಲಭೂತವಾದವನ್ನೂ ಹಿಂದೂ ಮತಾಂಧತೆಯನ್ನೂ ಒಟ್ಟೊಟ್ಟಿಗೇ ಎದುರು ಹಾಕಿ ಕೊಳ್ಳಬೇಕಾಗುತ್ತದೆ.

ಇವತ್ತು ನಮ್ಮ ಸಮಾಜದ ಪರಿಸ್ಥಿತಿ ಏನನ್ನೂ ಹೇಳಲು ಬಾರದಂತೆ ನಾಜೂಕಾಗಿದೆ, ಯಾಕೆಂದರೆ ಮುಸ್ಲಿಮರು ಉಳಿದವರಿಂದ ಕಾಯ್ದುಕೊಂಡಿರುವ ದೂರವು ಅವರಿಂದ – ಮುಸ್ಲಿಮರಿಂದ – ಆಗುವ ಹಿಂಸೆಯ ಕೆಲಸಗಳನ್ನು ಇನ್ನಷ್ಟು ಸಮಸ್ಯಾತ್ಮಕಗೊಳಿಸಿದೆ. ಮುಸ್ಲಿಮರನ್ನು ಹೀಗೆ ಟೀಕಿಸುತ್ತಿದ್ದೇನೆ ಅಂದಾಗ, ಆ ಸಮುದಾಯವೇ ಒಂದು ಪಿಡುಗಾಗಿದೆ, ಪೆಡಂಭೂತವಾಗಿದೆ ಎಂದು ಹೇಳಿದಂತಾಗುವುದಿಲ್ಲ. ಈ ಸಮಾಜದ ಪ್ರಜೆಗಳಾಗಿ ನಾವು ಒಬ್ಬರಿಗೊಬ್ಬರು ಕನ್ನಡಿ ಹಿಡಿಯಬೇಕಾದ್ದು ಕೇವಲ ನಮ್ಮ ಕರ್ತವ್ಯ, ಅಷ್ಟೇ. ಈಗಾಗುತ್ತಿರುವಂಥವೇ ಇನ್ನು ಕೆಲವು ಗಲಭೆಗಳಾಗಿಬಿಟ್ಟರೆ, ನಮ್ಮ ರಾಜಕಾರಣದ ಸ್ವಭಾವವೇ ಬದಲಾಗಿಬಿಡಬಹುದು ಎಂಬ ಅರಿವು ನಮಗೆ ಈಗಲಾದರೂ ಬರಬೇಕು.

ನಮ್ಮ ಪ್ರಜಾಪ್ರಭುತ್ವದ ಭವಿಷ್ಯವನ್ನು ಕುರಿತ ಚಿಂತೆಯಿಂದಾಗಿ ಹೀಗೆ ಬರೆಯುತ್ತಿದ್ದೇನೆ. ಪರಿಸ್ಥಿತಿ ಬಿಗಿಯಾಗಿದೆ. ಭಾರತದಲ್ಲಿ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿರುವ ರಾಜ್ಯಗಳಲ್ಲಿ ಅಸ್ಸಾಮಿಗೆ ಎರಡನೆಯ ಸ್ಥಾನವಿದೆ, ಮರೆಯದಿರೋಣ. ಬಹುಸಂಖ್ಯಾತರ ಮಾತು ಮಾತ್ರ ನಡೆಯಬೇಕು ಅನ್ನುವ ದೊಣ್ಣೆನಾಯಕತನದ ದಬ್ಬಾಳಿಕೆಯಂತೆಯೇ, ನಡೆಯತಕ್ಕದ್ದು ಅಲ್ಪಸಂಖ್ಯಾತರ ಮಾತೊಂದೇ ಅನ್ನುವ ದುಂಡಾವರ್ತಿಯೂ ಕೊಳಕು ಮನಸ್ಸಿನ ನಾತ ಬೀರುತ್ತದೆ ಅನ್ನುವುದನ್ನು ನಾವು ತಿಳಿಯ ಬೇಕಾಗಿದೆ.

ಮುಸ್ಲಿಮ್ ಮೂಲಭೂತವಾದಿಗಳು, ಹಿಂದೂ ಮತಾಂಧರು, ಇಬ್ಬರೂ ಪ್ರಜಾಪ್ರಭುತ್ವಕ್ಕೆ ಮುಳುವಾಗಿದ್ದಾರೆ. ನಾವು ಇಬ್ಬರನ್ನೂ ಎದುರಿಸಬೇಕು. ಅದಕ್ಕಾಗಿ ನಾವು ನಿಜವಾದ, ಛಿದ್ರವಿಲ್ಲದ ಪ್ರಜಾಪ್ರಭುತ್ವದ ಹಾದಿ ಹಿಡಿದು ನಡೆಯಬೇಕು, ನುಡಿಯಬೇಕು. ರಾಜ್

ಠಾಕ್ರೆಯಂಥವರಿಗಿಂತ ಮೌಲಾನಾ ಅಬ್ದುಲ್ ಖಾದಿರ್ ಅಲ್ವಿಯಂಥವರು ಮೇಲು ಅನ್ನುವುದು ತಪ್ಪು. ಅಲ್ವಿಯಂಥವರು, ಏನಿದ್ದರೂ, ಮುಸ್ಲಿಮ್ ಪೋಷಾಕು ತೊಟ್ಟ ನರೇಂದ್ರ ಮೋದಿಗಳು, ಅಷ್ಟೇ ಬೇರೆಯಲ್ಲ.

ಭಯ, ಭೀತಿ, ದ್ವೇಷ ತುಂಬಿದ ವಾತಾವರಣವನ್ನು ಉಂಟುಮಾಡಲು, ಮೋದಿಯಂಥ ರಾಜಕಾರಣಿಯನ್ನು ಅಧಿಕಾರಕ್ಕೆ ತರಲು ಇನ್ನು ಕೆಲವು ಗಲಭೆಗಳು ಸಾಕು. ಅಂಥ ಅಪಾಯದ ಪರಿಸ್ಥಿತಿಯಲ್ಲಿದ್ದೇವೆ ನಾವು. ಅಂಥ ಇತಿಹಾಸವು ನಮ್ಮದಾಗುವುದನ್ನು ತಪ್ಪಿಸಲು ಎಲ್ಲ ಸೆಕ್ಯುಲರಿಸ್ಟರೂ ಹವಣಿಸಬೇಕು. ಸೆಕ್ಯುಲರಿಸಮ್ಮಿಗೆ ಈಗ ಇರುವುದು ತೀರ ತೆಳುವಾದ, ಬಡವಾದ ಅರ್ಥ. ನಾವು ಬದುಕಲು ಬಯಸುವ ಲೋಕಗಳನ್ನು ಅರ್ಥವಿಸಿಕೊಳ್ಳುವ ಸಲುವಾಗಿ ನಾವು ನಮ್ಮ ಮಾತುಗಳಿಗೆ ಹೊಸರೂಪ, ಹೊಸ ಅರ್ಥ, ಹೊಸ ಹರಹು ಕೊಟ್ಟುಕೊಳ್ಳಬೇಕಾಗಿದೆ. ಈಗ ನಾವು ಹೊಸ ಬಗೆಯ ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ತೊಡಗಬೇಕಾಗಿದೆ. ಅಂಥಲ್ಲಿ, ಪ್ರಭುತ್ವಗಳ ಅಂಕೆ, ಆರೈಕೆಯಲ್ಲಿ ಬಾಳುವ ಪಾಶ್ಚಾತ್ಯ ಮೂಲದ ಬಡಕಲು ಸೆಕ್ಯುಲರಿಸಮ್ಮಿನ ಒಣಗ್ಯೆರತ್ತು ಸುತರಾಂ ಕೆಲಸಕ್ಕೆ ಬರುವುದಿಲ್ಲ.

ಫೆಬ್ರುವರಿ, ೨೦೧೩

ಭರವಸೆಯ ಒಂದು ಯುವಜನ ಶಿಬಿರ

ಪ್ರಿಯ ಓದುಗರೇ,

ಕಳೆದ ತಿಂಗಳು ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ ಹಾಸನದಲ್ಲಿ 'ಹೊಸ ಮನುಷ್ಯನ ಹುಡುಕಾಟದಲ್ಲಿ' ಎಂಬ ವಿಷಯ ಕುರಿತು ಎರಡು ದಿನಗಳ ಅಧ್ಯಯನ ಶಿಬಿರ ಏರ್ಪಡಿಸಿತ್ತು. ಅದರ ಸಂಕ್ಷಿಪ್ತ ವರದಿಯೊಂದು ಈ ಸಂಚಿಕೆಯಲ್ಲಿ ಪ್ರಕಟವಾಗಿರುವುದರಿಂದ ಅದರ ಒಳವಿವರಗಳನ್ನು ಇಲ್ಲಿ ಹೇಳುವ ಅಗತ್ಯವಿಲ್ಲ. ಆದರೆ ಈ ಶಿಬಿರ ನಿದೇಶಕನಾಗಿ ಗೋಷ್ಠಿಗಳನ್ನು ನಿರ್ವಹಿಸುತ್ತಿದ್ದಾಗ ನನ್ನ ಮನಸ್ಸಿನಲ್ಲಿ ಹಾದುಹೋದ ಕೆಲವು ಸಂಗತಿಗಳನ್ನು ಇಲ್ಲಿ ಹೇಳಲೇಬೇಕು.

ಹಾಸನ ಎಂದರೆ ಏನು ಎಂಬುದು ಆ ಊರಿನ ಸಜ್ಜನರೂ ಸೇರಿದಂತೆ ಎಲ್ಲರಿಗೂ ಗೊತ್ತಿರುವ ಕಾರಣದಿಂದಾಗಿ ಈ ಶಿಬಿರವನ್ನು ಆಯೋಜಿಸುವ ಉತ್ಸಾಹ ತೋರಿದ, ಅಲ್ಲಿ ಬಹಳ ವರ್ಷಗಳಿಂದ 'ವಿವೇಕ ಬ್ಯೂರೋ'ದ ಹೆಸರಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ನನ್ನ ಕಿರಿಯ ಗೆಳೆಯ ಬಿ.ಶಿವಕುಮಾರ್‌ರನ್ನು ನಾನು ಪ್ರೋತ್ಸಾಹಿಸಲಿಲ್ಲ. ಆದರೆ ಅವರು ಹಠ ಬಿಡದೆ ಸತತವಾಗಿ ಒತ್ತಾಯಿಸಿದ್ದರಿಂದ, ತಮ್ಮ ಕೇಂದ್ರದ ವಿದ್ಯಾರ್ಥಿಗಳ ಭವಿಷ್ಯದ ಬದುಕಿನ ದೃಷ್ಟಿಯಿಂದ ಈ ಶಿಬಿರ ಅಗತ್ಯವೆಂದು ನನಗೆ ಮನಗಾಣಿಸಿದ್ದರಿಂದ ಶಿಬಿರವನ್ನು ಆಯೋಜಿಸಲಾಗಿತ್ತು.

ನಿರೀಕ್ಷೆಯಂತೆ, ಶಿವಕುಮಾರರ ವಿದ್ಯಾರ್ಥಿಗಳ ಹೊರತಾಗಿ ಸ್ಥಳೀಯರು ಬಂದದ್ದು ಒಬ್ಬರೋ ಇಬ್ಬರೋ. ಬಂದ ಆ ಇಬ್ಬರೂ ಮೊದಲ ದಿನದ ನಡಾವಳಿಯನ್ನು ಗಮನಿಸಿ ಇದು ತಮಗೆ ಸಲ್ಲತಕ್ಕದ್ದಲ್ಲ ಎಂದು ಭಾವಿಸಿಯೇನೋ ಎರಡನೇ ದಿನ ಅಲ್ಲಿಗೆ ಕಾಲಿಡಲಿಲ್ಲ. ಆದರೆ ಅಲ್ಲಿ ನಿಜವಾಗಿ ನನ್ನ ಗಮನ ಸೆಳೆದದ್ದು ಆರಂಭದಲ್ಲಿ ಶಿಬಿರದ ಗೋಷ್ಠಿಗಳ ವಿಷಯಗಳು ಭಾರವೆಂತೆನ್ನಿಸಿ, ಇವಕ್ಕೂ ತಾವು ಸಿದ್ಧತೆ

ಮಾಡಿಕೊಳ್ಳುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಲೀ, ತಮ್ಮ ಭವಿಷ್ಯದ ವೃತ್ತಿ ಬದುಕಿನ ಹುಡುಕಾಟಕ್ಕಾಗಲೀ ಯಾವುದೇ ಸಂಬಂಧವಿಲ್ಲವೆಂದೆನಿಸಿ ಅಷ್ಟೇನೂ ಉತ್ಸಾಹ-ಆಸಕ್ತಿಗಳನ್ನು ತೋರದ ಯುವ ಶಿಬಿರಾರ್ಥಿಗಳು ಒಂದಾದಮೇಲೊಂದರಂತೆ ಗೋಷ್ಠಿಗಳಲ್ಲಿ ವಿಷಯಗಳು ನಿಧಾನವಾಗಿ ಬಿಚ್ಚಿಕೊಳ್ಳುತ್ತಾ ಚರ್ಚೆ ಆರಂಭವಾಗುತ್ತಿದ್ದಂತೆ ಚುರುಕಾದ ಬಗೆ. ಅವರ ದೇಹ ಭಾಷೆ ಬದಲಾಯಿತು. ಹಾಗೇ ಮನಸ್ಸಿನ ಭಾಷೆಯೂ. ಚರ್ಚೆಯಲ್ಲಿ ಮೂಡಿದ ಹಲವು ವಿಷಯಗಳು, ಒಳನೋಟಗಳು ಅವರ ನಿರೀಕ್ಷೆಯನ್ನು ಮೀರಿ ಅವರ ವ್ಯಕ್ತಿತ್ವದ ಆಳದಲ್ಲಿದ್ದ ಅವ್ಯಕ್ತ ಅನ್ನಿಸಿಕೆಗಳನ್ನು ಮುಟ್ಟುತ್ತಿದ್ದಂತೆಯೇ ಅವರು ಎಚ್ಚೆತ್ತರು. ಗೋಷ್ಠಿಗಳನ್ನು ಏಕಾಗ್ರತೆಯಿಂದ ಕೇಳಲಾರಂಭಿಸಿದರು; ನಿಧಾನವಾಗಿ ಪ್ರಶ್ನೆಗಳನ್ನೂ ಕೇಳಲಾರಂಭಿಸಿದರು.

ಇದರ ಪರಿಣಾಮವಾಗಿ ಶಿಬಿರದ ಕೊನೆಯ ಹೊತ್ತಿಗೆ, ತಾವಿರುವ ವ್ಯವಸ್ಥೆ ಮತ್ತು ಅದು ರೂಪಿಸುತ್ತಿರುವ ತಮ್ಮ ವ್ಯಕ್ತಿತ್ವಗಳೆರಡೂ ಹುಸಿಯಿರಬಹುದೇ ಎಂಬ ಅನುಮಾನ, ಅವರಲ್ಲಿ ಎಲ್ಲರಲ್ಲದಿದ್ದರೂ ಬಹಳಷ್ಟು ಜನರಲ್ಲಿ ಆರಂಭವಾದಂತಿತ್ತು. ಇದಕ್ಕೆ ಶಿಬಿರದ ಸಂಪನ್ಮೂಲ ವ್ಯಕ್ತಿಗಳ ಪ್ರತಿಭೆ ಮತ್ತು ನಾವು ತೋರಿಸಿದ 'ನಿಷ್ಠುರ ಸತ್ಯ' ಎಂಬ ಸಾಕ್ಷ್ಯ ಚಿತ್ರದ ಪರಿಣಾಮಶೀಲತೆಯೂ ಕಾರಣವಾಗಿತ್ತು ಎಂಬುದನ್ನೂ ಇಲ್ಲಿ ದಾಖಲಿಸಬೇಕು. ಅದೇನೇ ಇರಲಿ, ಈ ಅನುಮಾನದ ಆರಂಭವೇ ಹೊಸ ಮನುಷ್ಯನ ಹುಡುಕಾಟದ ಆರಂಭದ ಹೆಜ್ಜೆಯಲ್ಲವೇ? ಶಿಬಿರದ ಸಮಾರೋಪದಲ್ಲಿ ಶಿಬಿರಾರ್ಥಿಗಳು ಶಿಬಿರದ ಉಪಯುಕ್ತತೆ ಬಗ್ಗೆ ಆಡಿದ ಮಾತುಗಳನ್ನು ಕೇಳುತ್ತಿದ್ದಂತೆ, ಕುಸಿಯುತ್ತಿರುವಂತೆ ತೋರುತ್ತಿರುವ ಇಂದಿನ ವ್ಯವಸ್ಥೆ ಬಗ್ಗೆ ಸಾಮಾನ್ಯವಾಗಿ ಮತ್ತು ನಿರಾಳವಾಗಿ ಕೇಳಿ ಬರುವ, ಇದು ಸಂಪೂರ್ಣ ಕುಸಿದು ಕೊಳೆತಾಗಲೇ ಹೊಸ ವ್ಯವಸ್ಥೆ ಬರಲು ಸಾಧ್ಯ ಎಂಬ ಹತಾಶೆಯ ಸಿನಿಕ ಮಾತುಗಳಿಗೆ ಒಮ್ಮೊಮ್ಮೆ ನಾನೂ ವ್ಯಕ್ತಪಡಿಸುವ ಸಹಮತ ತಪ್ಪೆಂದೂ, ಇಂತಹ ಮಾತು ಮೂಡುವುದು ನಮ್ಮ ಕರ್ತವ್ಯಗಳನ್ನು ಮಾಡಲಾಗದ ನಮ್ಮ ಅನ್ಯಮನಸ್ಕತೆಯಿಂದಾಗಿ ಎಂಬುದೂ ನನಗೆ ಅರಿವಾಗತೊಡಗಿತು. ನಾವು ನಮ್ಮ ಮಕ್ಕಳನ್ನು ಇಂದಿಗೆ ಜೋಪಾನ ಮಾಡುವ ನಮ್ಮ ಎಚ್ಚರಿಕೆಯಲ್ಲಿ ನಾಳೆಯ ಬಗ್ಗೆ ಸೂಕ್ಷ್ಮವಾಗಿ ಚಿಂತಿಸದಿರುವಂತೆ ಅವರನ್ನು ನಾವು ಜಡಗೊಳಿಸಿಬಿಟ್ಟಿದ್ದೇವೇಯೇನೋ!

ಈ ವ್ಯವಸ್ಥೆಯನ್ನು ಹಾಳು ಮಾಡುವುದರಲ್ಲಿ ಭಾಗಿಯಾಗಿ (ಉದಾ: ಸ್ಪರ್ಧಾತ್ಮಕ ಸುಖ-ಸಂತೋಷಗಳಿಗಾಗಿ ಮಾರುಕಟ್ಟೆಗೆ ಬರುವ ಸಕಲ ವಸ್ತುಗಳನ್ನೂ ಮನೆ ತುಂಬಾ ತುಂಬಿಕೊಂಡು, ಮಕ್ಕಳ ಮೇಲೆ ಶೈಶವದಿಂದಲೇ ಇಂಗ್ಲಿಷ್ ಮಾಧ್ಯಮವನ್ನು ಹೇರಿ) ಅಥವಾ ಅದು ಹಾಳಾಗುತ್ತಿರುವುದನ್ನು ಸಂಬಂಧವಿಲ್ಲದಂತೆ ಮೌನವಾಗಿ ನೋಡುತ್ತಾ ಕೂತು ನಾವು ತಪ್ಪು ಮಾಡುತ್ತಿದ್ದೇವೆ. ಇದಕ್ಕೆ ಪ್ರಾಯಶ್ಚಿತ್ತವಾಗಿಯಾದರೂ ನಾವು ಯಾರ ಹಿತಕ್ಕಾಗಿ ಹೀಗೆ ಮಾಡಲಾಯಿತು ಎಂದು ಹೇಳಿಕೊಳ್ಳುತ್ತಿದ್ದೇವೆಯೋ ಆ

ಮಕ್ಕಳು ಮೊಮ್ಮಕ್ಕಳ ಬದುಕೇ ಮೂಲ ನೆಮ್ಮದಿಯನ್ನು ಕಳೆದುಕೊಳ್ಳುತ್ತಿರುವ ಆತಂಕದ ಸೂಚನೆಗಳು ಬರುತ್ತಿವೆ. ಈಗಲಾದರೂ ಇದನ್ನು ಸರಿಪಡಿಸಲು, ಹೊಸ ದಾರಿ ಹುಡುಕಲು ಯತ್ನಿಸಬೇಕು ಎಂಬ ಎಚ್ಚರ, ಬದ್ಧತೆಗಳನ್ನು ಪ್ರದರ್ಶಿಸದಿದ್ದಲ್ಲಿ ನಾವು ಎಳೆಯರನ್ನಾದರೂ ಏಕೆ ದೂಷಿಸಬೇಕು? ಬರೀ ಸುಮ್ಮನೆ ಮಾತನಾಡುತ್ತಾ, ಜಗತ್ತನ್ನು ಶಪಿಸುತ್ತಾ ಕಾಲ ಕಳೆಯುವವರು ಒಂದಿಷ್ಟು ರಚನಾತ್ಮಕ ಕೆಲಸವನ್ನೂ ಶುರು ಮಾಡಿದರೆ ಎಳೆಯರೂ ನಮ್ಮನ್ನು ಕೂಡಿಕೊಂಡಾರು ಎಂಬ ಭರವಸೆ ಸ್ವಲ್ಪ ಪ್ರಮಾಣದಲ್ಲಾದರೂ ಇಲ್ಲಿ ನನಗೆ ದೊರಕಿತು ಎಂದು ಇಲ್ಲಿ ಹೇಳಲೇಬೇಕು.

ಶಿಬಿರದಲ್ಲಿ ಕೆಲವು ಬೇಸರದ, ನಿರಾಶೆಯ ಕ್ಷಣಗಳೂ ಇಲ್ಲದಿರಲಿಲ್ಲ. ಉದಾ: ಐ.ಎ.ಎಸ್. ಕೆ.ಎ.ಎಸ್., ಬ್ಯಾಂಕ್ ಅಧಿಕಾರಿಗಳಾಗಲು ತರಬೇತಿ ಪಡೆಯುತ್ತಿದ್ದ ಹಲವರು ದಿನ ನಿತ್ಯದ ಪತ್ರಿಕೆಗಳನ್ನೂ ಓದುತ್ತಿಲ್ಲವೆಂಬುದು ತಿಳಿದು ಬಂತು. ದೆಹಲಿ ಅತ್ಯಾಚಾರದ ಪ್ರಕರಣ ಅಲ್ಲಿದ್ದ ಹುಡುಗಿಯರಲ್ಲಿ ಅರ್ಧ ಜನಕ್ಕೆ ಗೊತ್ತೇ ಇರಲಿಲ್ಲ. ಆದರೆ ಹೆಚ್ಚೂಕಡಿಮೆ ಎಲ್ಲ ಹುಡುಗರಿಗೂ ಗೊತ್ತಿತ್ತು! ಕುವೆಂಪು ವಿಶ್ವವಿದ್ಯಾಲಯದಿಂದ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿರುವ ಒಬ್ಬ ಶಿಬಿರಾರ್ಥಿಯ ಪ್ರಕಾರ ಭಗತ್‌ಸಿಂಗ್ ಸಾವಿಗೆ, ಸುಭಾಷರ ಕಣ್ಮರೆಗೆ ಮತ್ತು ರಾಷ್ಟ್ರ ವಿಭಜನೆಗೆ ಗಾಂಧಿಯೇ ಕಾರಣವಾಗಿದ್ದರು.

ಇದಕ್ಕೆಲ್ಲ ನಾವು ಈ ಎಳೆಯರನ್ನು ದೂಷಿಸಬೇಕಾಗಿದೆಯೋ ಅಥವಾ ಅವರ ತಂದೆ-ತಾಯಿಗಳು ಮತ್ತು ಅಧ್ಯಾಪಕರೂ ಇದಕ್ಕೆ ಹೊಣೆಗಾರರಾಗಿರುವರೋ? ನಾವೆಲ್ಲ ಯೋಚಿಸಬೇಕಿದೆ.

ಒಳನೋಟ

ಹೊಸ ಆರ್ಥಿಕ ನೀತಿಯೂ,
ಮಹಿಳೆಯರ ಮೇಲಿನ ಹಿಂಸಾಚಾರವೂ...

–ವಂದನಾ ಶಿವ

ದೆಹಲಿಯಲ್ಲಿ ಸಾಮೂಹಿಕ ಅತ್ಯಾಚಾರಕ್ಕೊಳಗಾಗಿದ್ದ ದಿಟ್ಟ ಮತ್ತು ಧೀರ ಹುಡುಗಿ ಕೊನೆಯುಸಿರೆಳೆದಿದ್ದಾಳೆ. ಅವಳಿಗೆ ಮತ್ತು ಮಹಿಳೆಯ ಮೇಲಿನ ಹಿಂಸಾಚಾರಕ್ಕೆ ಬಲಿಯಾದ ಎಲ್ಲರಿಗೆ ಶ್ರದ್ಧಾಂಜಲಿಯಗಿ ಈ ಲೇಖನವನ್ನು ಬರೆಯುತ್ತಿರುವೆ. ಮಹಿಳೆ ಮೇಲಿನ ದೌರ್ಜನ್ಯ ಪಿತೃಪ್ರಧಾನ ವ್ಯವಸ್ಥೆಯಷ್ಟೇ ಹಳೆಯದು. ಇತ್ತೀಚಿನ ವರ್ಷಗಳಲ್ಲಿ ಇದು ದೆಹಲಿಯಲ್ಲಿ ಅತ್ಯಾಚಾರಕ್ಕೊಳಗಾದ ಹುಡುಗಿಯ ಬರ್ಬರ ಕೊಲೆ ಮತ್ತು ಚಂಡೀಗಢದ ೧೭ ವರ್ಷಗಳಳ ಹುಡುಗಿಯ ಅಸಹಾಯಕ ಆತ್ಮಹತ್ಯೆಯಂತೆ ಹೆಚ್ಚು

ಕ್ರೂರವೂ, ವ್ಯಾಪಕವೂ ಆಗುತ್ತಿದೆ. ಅತ್ಯಾಚಾರದ ಪ್ರಕರಣಗಳು ಈ ದೇಶದಲ್ಲಿ, ಅಪರಾಧ ದಾಖಲೆಗಳ ರಾಷ್ಟ್ರೀಯ ಮಂಡಳಿಯ ಅಂಕಿ ಅಂಶಗಳ ಪ್ರಕಾರ– ಅದು ಸ್ಥಾಪಿತವಾದ ೧೯೭೧ರಿಂದ ಪರಿಗಣಿಸಿದರೆ– ಈವರೆಗೆ ಶೇ.೮೭೩ರಷ್ಟು ಏರಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಅದರ ಏರಿಕೆಯ ಪ್ರಮಾಣ ಶೇ.೨೪೦ರಷ್ಟು ಮುಟ್ಟಿದೆ. ಈ ಅಪಾರ ಹೆಚ್ಚಳದ ಮೂಲವನ್ನು ಶೋಧಿಸ ಹೊರಟಾಗ ಎದ್ದು ಕಾಣುವ ಅಂಶವೆಂದರೆ ಇಪ್ಪತ್ತು ವರ್ಷಗಳ ಹಿಂದೆ ಹೊಸ ಆರ್ಥಿಕ ನೀತಿಯನ್ನು ಜಾರಿಗೊಳಿಸಲಾಯಿತು ಎಂಬುದು. ಹಾಗಾದರೆ, ಇಪ್ಪತ್ತು ವರ್ಷಗಳಿಂದ ಬೆಳೆಯುತ್ತಿರುವ, ಅಪ್ರಜಾಸತ್ತಾತ್ಮಕವಾಗಿ ಹೇರಲ್ಪಟ್ಟಿರುವ ಅನ್ಯಾಯದ ಮತ್ತು ಅನುಚಿತವಾದ ಈ ಹಿಂಸಾತ್ಮಕ ಆರ್ಥಿಕ ನೀತಿಗೂ ಮಹಿಳೆ ಮೇಲಿನ ದೌರ್ಜನ್ಯದ ಈ ಅಪಾರ ಹೆಚ್ಚಳಕ್ಕೂ ಏನಾದರೂ ಸಂಬಂಧವಿದೆಯೇ?. ನನಗನ್ನಿಸುವಂತೆ ಸಂಬಂಧವಿದೆ.

ಮೊದಲ ಅಂಶ ಎಂದರೆ, 'ಅಭಿವೃದ್ಧಿ'ಯ ಸುತ್ತ ಕುರುಡಾಗಿ ಕಟ್ಟಲ್ಪಟ್ಟಿರುವ ಈ ಆರ್ಥಿಕ ಮಾದರಿಯು ಆರ್ಥಿಕತೆಗೆ ಮಹಿಳೆಯರ ಕೊಡುಗೆಯನ್ನು ನಿರಾಕರಿಸುವ ಮೂಲಕ ಅವರ ಮೇಲಿನ ದೌರ್ಜನ್ಯಕ್ಕೆ ಅಡಿಪಾಯ ಹಾಕಿದೆ. ಸರ್ಕಾರ ಹೆಚ್ಚೆಚ್ಚು 'ಒಳಗೊಳ್ಳುವ ಅಭಿವೃದ್ಧಿ' ಮತ್ತು 'ಒಳಗೊಳ್ಳುವ ಹಣಕಾಸಿನ ವ್ಯವಸ್ಥೆ'ಯ ಬಗ್ಗೆ ಮಾತಾಡಿದಷ್ಟೂ ಆರ್ಥಿಕತೆ ಮತ್ತು ಸಮಾಜಕ್ಕೆ ಮಹಿಳೆಯರು ನೀಡುವ ಕೊಡುಗೆಯನ್ನು ಹೆಚ್ಚೆಚ್ಚು ಹೊರಗಿಡಲಾಗುತ್ತಿದೆ. ಪಿತೃಪ್ರಧಾನ ಆರ್ಥಿಕ ಮಾದರಿಯ ಪ್ರಕಾರ ಬದುಕಲು ಮಾಡಲಾಗುವ ಉತ್ಪಾದನೆಯನ್ನು ಅನುತ್ಪಾದಕ ಎಂದು ಪರಿಗಣಿಸಲಾಗುತ್ತದೆ. ಮೌಲ್ಯವನ್ನು ನಿರ್ಮೌಲ್ಯವನ್ನಾಗಿ ದುಡಿಮೆಯನ್ನು ದುಡಿಮೆಯಲ್ಲದ್ದನ್ನಾಗಿ, ಜ್ಞಾನವನ್ನು ಜ್ಞಾನವಲ್ಲದ್ದನ್ನಾಗಿ ಪರಿವರ್ತಿಸಲಾಗುತ್ತಿರುವುದು, 'ಒಟ್ಟಾರೆ ರಾಷ್ಟ್ರೀಯ ಉತ್ಪನ್ನ'(ಜಿಡಿಪಿ) ಎಂಬ ನಮ್ಮ ರಾಷ್ಟ್ರೀಯ ಬದುಕನ್ನು ಆಳುತ್ತಿರುವ ಪಿತೃಪ್ರಧಾನ ರಚನೆಯಾದ ಬಹು ಶಕ್ತಿಶಾಲಿ ಸಂಖ್ಯೆ. ಈ ಜಿಡಿಪಿ ಲೆಕ್ಕಾಚಾರಿಗಳ ಪ್ರಕಾರ ಉತ್ಪಾದಕರು ತಾವು ಉತ್ಪಾದಿಸಿದುದನ್ನು ಬಳಕೆ ಮಾಡಿದರೆ ಅದು ಉತ್ಪಾದನೆ ಎನಿಸಿಕೊಳ್ಳುವುದಿಲ್ಲ. ಏಕೆಂದರೆ ಅವರ ಶಾಸ್ತ್ರದ ಪ್ರಕಾರ ಅದು ಉತ್ಪಾದನೆಯ ವ್ಯಾಖ್ಯೆಯ ಹೊರಗಿದೆ. ಹಾಗಾಗಿ ಮಹಿಳೆಯರು ತಮ್ಮ ಕುಟುಂಬಗಳಿಗಾಗಿ, ಮಕ್ಕಳಿಗಾಗಿ, ಸಮುದಾಯಕ್ಕಾಗಿ, ಸಮಾಜಕ್ಕಾಗಿ ಮಾಡುವ ಉತ್ಪಾದನೆಯನ್ನು ಅನುತ್ಪಾದಕ ಮತ್ತು ಆರ್ಥಿಕವಾಗಿ ನಿಷ್ಕ್ರಿಯ ಎಂದು ಪರಿಗಣಿಸಲಾಗುತ್ತದೆ. ಜಗತ್ತಿನ ದಕ್ಷಿಣ ಭಾಗದ ದೇಶಗಳಲ್ಲಿನ ಬದುಕುವುದಕ್ಕಾಗಿ ಮಾಡುವ ದುಡಿಮೆಯ ಆರ್ಥಿಕತೆಗಳಲ್ಲಿನ ಮಹಿಳೆಯರ ದುಡಿಮೆಯ ಅಪಮೌಲ್ಯೀಕರಣವು ಇಂತಹ ಬಂಡವಾಳಶಾಹಿ ಪಿತೃಪ್ರಧಾನ ವ್ಯವಸ್ಥೆಯ ಸಹಜ ಫಲವಾಗಿದೆ.'

ಗಂಡುಗುಣದ ಬಂಡವಾಳಶಾಹಿ ವ್ಯವಸ್ಥೆಯ ನಿರ್ದೇಶನದಂತೆ ತನ್ನನ್ನು ಮಾರುಕಟ್ಟೆ ಆರ್ಥಿಕತೆಯ ಮೌಲ್ಯಗಳಿಗಷ್ಟೇ ಸೀಮಿತಗೊಳಿಸಿಕೊಂಡಿರುವುದರಿಂದ ಉತ್ಪಾದನೆಯ ಪರಿಕಲ್ಪನೆಯು ಪರಿಸರ ಮತ್ತು ಮಾನವನ ಉಳಿವಿಗೆ ಅಗತ್ಯವಾದ ಎರಡು ಮುಖ್ಯ

ಆರ್ಥಿಕತೆಗಳನ್ನು ನಿರ್ಲಕ್ಷಿಸುತ್ತದೆ. ಅವು ನಿಸರ್ಗದ ಮತ್ತು ಉಳಿವಿನ ಆರ್ಥಿಕತೆಗಳು. ಈ ಆರ್ಥಿಕತೆಗಳಲ್ಲಿ ಭೂಮಿಯ ಬದುಕು ಮತ್ತು ಮಾನವ ಬದುಕುಗಳನ್ನು ಹೇಗೆ ಸಂರಕ್ಷಿಸಲಾಗುತ್ತಿದೆ ಎಂಬುದರ ಗಣನೆಯ ಅಂಶಗಳೇ ಆರ್ಥಿಕ ಮೌಲ್ಯಗಳೆನಿಸಿಕೊಳ್ಳುತ್ತವೆ. ಅದರ

ನಾಣ್ಯಗಳೆಂದರೆ ನಗದು ಅಥವಾ ಮಾರುಕಟ್ಟೆ ವ್ಯವಹಾರವಲ್ಲ; ಜೀವದಾಯಿಯಾದ ಕೆಲಸ–ಕಾರ್ಯಗಳು. ಎರಡನೆಯ ಅಂಶವೆಂದರೆ ಮಹಿಳೆಯರು ಮಾಡುವ ದುಡಿಮೆ ಮತ್ತು ಸಂಪದಭಿವೃದ್ಧಿಯನ್ನು ತನ್ನ ಮನಸ್ಸಿನಿಂದ ಹೊರಗಿಟ್ಟಿರುವ ಬಂಡವಾಳಶಾಹಿ ಗಂಡು ವ್ಯವಸ್ಥೆ ಮಹಿಳೆಯರನ್ನು ತಮ್ಮ ಬದುಕಿನ ಕ್ರಮಗಳಿಂದ ಮತ್ತು ತಮ್ಮ ಈ ಬದುಕಿನ ಕ್ರಮಕ್ಕಾಗಿ ಅವಲಂಬಿಸಿರುವ ಅವರ ಭೂಮಿ, ಕಾಡು, ನೀರು, ಅವರ ಬೀಜ ಮತ್ತು ಜೀವ ವೈವಿಧ್ಯಗಳಿಂದ ದೂರ ಮಾಡುವ ಮೂಲಕ ಹಿಂಸೆಯನ್ನು ಆಳಗೊಳಿಸುತ್ತದೆ. ಮಿತಿಯಿರುವ ಜಗತ್ತಿನಲ್ಲಿ ಮಿತಿಯಿಲ್ಲದ ಬೆಳವಣಿಗೆಯನ್ನು ಪ್ರತಿಪಾದಿಸುವ ಆರ್ಥಿಕ ಸುಧಾರಣೆಗಳನ್ನು ದುರ್ಬಲರ ಸಂಪನ್ಮೂಲಗಳನ್ನು ಬಲಶಾಲಿಗಳು ಲೂಟಿ ಮಾಡಲು ಅವಕಾಶಮಾಡಿಕೊಡುವುದರಿಂದಷ್ಟೇ ಪೋಷಿಸಬಹುದು. 'ಅಭಿವೃದ್ಧಿ'ಗೆ ಅಗತ್ಯವಾದ ಸಂಪನ್ಮೂಲಗಳ ಲೂಟಿ ಅತ್ಯಾಚಾರದ ಸಂಸ್ಕೃತಿಯನ್ನು ಸೃಷ್ಟಿಸುತ್ತದೆ: ಭೂಮಿ ಮೇಲಿನ ಅತ್ಯಾಚಾರ, ಸ್ಥಳೀಯ ಸ್ವಾವಲಂಬಿ ಆರ್ಥಿಕತೆಗಳ ಮೇಲಿನ ಅತ್ಯಾಚಾರ ಮತ್ತು ಅದರ ಕೇಂದ್ರದಲ್ಲಿರುವ ಮಹಿಳೆಯರ ಮೇಲಿನ ಅತ್ಯಾಚಾರ...

ಭೂಮಿಯ ಮೇಲಿನ ಅತ್ಯಾಚಾರಕ್ಕೂ ಹೆಣ್ಣಿನ ಮೇಲಿನ ಅತ್ಯಾರಕ್ಕೂ– ರೂಪಕಾತ್ಮಕ ನೆಲೆಯಲ್ಲಿ ಲೋಕ ದೃಷ್ಟಿಯನ್ನು ರೂಪಿಸುವಲ್ಲಿ ಮತ್ತು ವಾಸ್ತವಿಕ ನೆಲೆಯಲ್ಲಿ ಮಹಿಳೆಯರ ದಿನನಿತ್ಯದ ಬದುಕನ್ನು ರೂಪಿಸುವಲ್ಲಿ– ಆಳದ ಸಂಬಂದವಿದೆಯೆಂದು ನಾನು ಹೇಳುತ್ತಲೇ ಬಂದಿದ್ದೇನೆ. ಮಹಿಳೆಯ ಆರ್ಥಿಕತೆಯ ದುರ್ಬಲೀಕರಣ ಅವಳನ್ನು ಲೈಂಗಿಕ ಆಕ್ರಮಣವೂ ಸೇರಿದಂತೆ ಎಲ್ಲ ರೀತಿಯ ದೌರ್ಜನ್ಯಗಳಿಗೂ ದಾರಿ ಮಾಡಿಕೊಡುತ್ತದೆ. ಇತ್ತೀಚೆಗೆ ರಾಷ್ಟ್ರೀಯ ಮಹಿಳಾ ಆಯೋಗವು ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರಶಾಸ್ತ್ರ ಸಂಶೋಧನಾ ಪಂಚಿತಿ?೦□~□' ಜಂಟಿಯಾಗಿ ಆಯೋಜಿಸಿದ್ದ 'ಆರ್ಥಿಕ ಸುಧಾರಣೆಗಳು ಮಹಿಳೆಯರ ಮೇಲೆ ಮಾಡಿರುವ ಪ್ರಭಾವ' ಕುರಿತ ಸಾರ್ವಜನಿಕ ಸಾಕ್ಷ್ಯ ಸಭೆಗಳಲ್ಲಿ ನಿರೂಪಿಸಲ್ಪಟ್ಟ ಎಲ್ಲ ಅನುಭವಗಳೂ ಇದನ್ನು ಪುಷ್ಟೀಕರಿಸುತ್ತವೆ.

ದೆಹಲಿ ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾದ ಹುಡುಗಿ ಒಂದು ಸಾಮಾಜಿಕ ಕ್ರಾಂತಿಯನ್ನೇ ಹುಟ್ಟು ಹಾಕಿದ್ದಾಳೆ. ಅದನ್ನು ನಾವು ಪೋಷಿಸಿ, ಆಳಗೊಳಿಸಿ, ವಿಸ್ತರಿಸಬೇಕು. ಮಹಿಳೆಯರ ಮೇಲೆ ದೌರ್ಜನ್ಯವೆಸಗುವವರಿಗೆ ಶಿಕ್ಷೆಯಾಗುವುದನ್ನು ಖಚಿತಗೊಳಿಸುವಂತಹ ಕಾನೂನುಗಳಿಗಾಗಿ ನಾವು ಹೋರಾಡಬೇಕು. ಇದನ್ನೆಲ್ಲ ಮಾಡುತ್ತಿರುವಾಗಲೇ, ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಕಾರಣವಾಗುತ್ತಿರುವ

ಈ 'ಅಭಿವೃದ್ಧಿ' ಎಂಬ ಹೆಸರನಲ್ಲಿ ನಮ್ಮ ಮೇಲೆ ಹೇರಲಾಗಿರುವ ಈ ಆಳುತ್ತಿರುವ ಸೂತ್ರವನ್ನು ಬದಲಿಸಬೇಕಾದ ಅಗತ್ಯವನ್ನೂ ನಾವು ಮನಗಾಣಬೇಕಿದೆ. ಹೆಣ್ಣಿನ ಮೇಲಿನ ಹಿಂಸಾಚಾರವನ್ನು ಕೊನೆಗಳಿಸುವುದು ಎಂದರೆ ಬಂಡವಾಳಶಾಗಿ ಪಿತೃಪ್ರಧಾನ ವ್ಯವಸ್ಥೆ ರೂಪಿಸಿರುವ ಹಿಂಸಾತ್ಮಕ ಆರ್ಥಿಕತೆಯ ಗಡಿ ದಾಟಿ ಹೆಣ್ಣಿಗೆ ಮತ್ತು ಭೂಮಿಗೆ ಗೌರವ ನೀಡುವಂತಹ ಅಹಿಂಸಾತ್ಮಕ, ಶಾಂತಿಯುತ ಆರ್ಥಿಕತೆಗಳೆಡೆಗೆ ಚಲಿಸುವುದೇ ಆಗಿದೆ.

(ಕನ್ನಡ ಭಾವಾನುವಾದ: **ಡಿಎಸ್ಸೆಸ್**)

<u>ಸಮಕಾಲೀನ</u>

ಕಾಶ್ಮೀರ : ಇತಿಹಾಸದ ಒಂದು ಇಣುಕು ನೋಟ

ಕಾಶ್ಮೀರ ಸ್ವತಂತ್ರ ಭಾರತದ ನಿರಂತರ ತಲೆನೋವಾಗಿ ಪರಿಣಮಿಸಿದೆ. ೧೯೪೭ರಲ್ಲಿ ಈ ಮುಸ್ಲಿಂ ಬಹುಸಂಖ್ಯಾತ ರಾಜ್ಯದ ಹಿಂದೂ ದೊರೆ ಹರಿಸಿಂಗ್‌ರಿಂದ ಕೆಲವು ಷರತ್ತುಗಳ ಮೇಲೆ ಭಾರತದ ಒಕ್ಕೂಟಕ್ಕೆ ಸೇರಿಕೊಂಡ ಕಾಶ್ಮೀರ ತನ್ನದೇ ವಿಶಿಷ್ಟ ಧಾರ್ಮಿಕ, ಸಾಂಸ್ಕೃತಿಕ ವೈವಿಧ್ಯಗಳ ಕಾರಣದಿಂದಾಗಿ ಈ ೬೫ ವರ್ಷಗಳಲ್ಲಿ ಭಾರತದೊಳಕ್ಕೆ ರಾಜಕೀಯವಾಗಿ ಸಂಪೂರ್ಣ ವಿಲೀನಗೊಳ್ಳಲು ನಿರಾಕರಿಸುತ್ತಾ ಈ ಉಪಖಂಡದ ನಿರಂತರ ಅಶಾಂತಿಗೆ ಕಾರಣವಾಗಿದೆ. ಸ್ವತಃ ಕಾಶ್ಮೀರದೊಳಗಿನ ಅಶಾಂತಿ, ಸಾವು ನೋವುಗಳಲ್ಲದೆ ಕಾಶ್ಮೀರ ಸಮಸ್ಯೆಯನ್ನು ಉಲ್ಬಣಗೊಳಿಸುತ್ತಿರುವ ನೆರೆಯ ಪಾಕಿಸ್ತಾನದೊಡನೆ ಯಾವಾಗ ಬೇಕಾದರೂ ಯುದ್ಧ ಸಂಭವಿಸುವ ಸಾಧ್ಯತೆಗಳನ್ನು ಸದಾ ನಮ್ಮ ಮುಂದೆ ತೆರೆದಿಟ್ಟಿದೆ. ನಿನ್ನೆ ಮೊನ್ನೆ ಗಡಿ ನಿಯಂತ್ರಣ ರೇಖೆಯ ಬಳಿ ಸಂಭವಿಸಿದ ಘರ್ಷಣೆ ಮತ್ತು ಭಾರತೀಯ ಸೈನಿಕನೊಬ್ಬನ ಶಿರಚ್ಛೇದದ ಘಟನೆ ಇಂತಹದೊಂದು ಸಾಧ್ಯತೆಯನ್ನು ಪ್ರಚೋದಿಸಿತ್ತು ಮತ್ತು ಎರಡೂ ಕಡೆ ಕೆಲವರು ಇದಕ್ಕೆ ಸಾಕಷ್ಟು ಪ್ರೋತ್ಸಾಹದ ಬೀಜಗಳನ್ನು ಬಿತ್ತಲೆತ್ನಿಸಿದ್ದನ್ನು ಓದುಗರು ಗಮನಿಸಿರಬಹುದು. ಈಗಾಗಲೇ ಈ ಎರಡೂ ದೇಶಗಳ ನಡುವೆ ಎರಡು ಯುದ್ಧಗಳು ನಡೆದು ಎರಡೂ ದೇಶಗಳು ಅಪಾರ ಪ್ರಮಾಣದ ಜೀವ ಮತ್ತು ಆಸ್ತಿಪಾಸ್ತಿ ಮತ್ತು ಆರ್ಥಿಕ ನಷ್ಟವನ್ನನುಭವಿಸಿವೆ.

ರಾಷ್ಟ್ರ ವಿಭಜನೆ ಮತೀಯ ಆಧಾರದ ಮೇಲೆ ನಡೆದ ದುರಂತ ಸಂಭವಿಸಿದಾಗ ಈ ದುರಂತದ ಸರಳ ತರ್ಕಕ್ಕೆ ತಕ್ಕಂತೆ ಪಾಕಿಸ್ತಾನಕ್ಕೆ ಸೇರಬೇಕಿದ್ದ ಕಾಶ್ಮೀರ ಹಿಂದೂ ರಾಜನೊಬ್ಬನ ಆಳ್ವಿಕೆಯಲ್ಲಿದ್ದ ಕಾರಣದಿಂದಾಗಿ ಮತ್ತು ಅದಕ್ಕಿಂತ ಹೆಚ್ಚಾಗಿ ಅದರ ವಿಶಿಷ್ಟ ಪಾರಂಪರಿಕ ಸಾಂಸ್ಕೃತಿಕ ಅಸ್ಮಿತೆಗನುಗುಣವಾಗಿ ಭಾರತಕ್ಕೆ ಸೇರಿ, ಈ ರಾಷ್ಟ್ರ ನಂಬಿರುವ ಧರ್ಮನಿರಪೇಕ್ಷತೆಯ ತತ್ವಕ್ಕೆ ಉಜ್ವಲ ಸಾಕ್ಷಿಯಾಗಿ ಉಳಿದಿದೆ. ಆದರೆ ಈ

ವಿದ್ಯಮಾನದ ಸಾಂದರ್ಭಿಕ ಸಂಕೀರ್ಣತೆಯನ್ನರಿಯದ ಭಾರತ ಮತ್ತು ಪಾಕಿಸ್ತಾನಗಳೆರಡರ ರಾಜಕಾರಣಿಗಳೂ–ರಾಜಕೀಯ ಮುತ್ಸದ್ದಿ ಎಂದು ಹೆಸರಾದ ನಮ್ಮ ಮೊದಲ ಪ್ರಧಾನಿ ನೆಹ್ರೂ ಕೂಡಾ ಸೇರಿದಂತೆ–ಅದನ್ನು ತಮ್ಮದೇ ರಾಜಕೀಯ ಕಾರಣಗಳಿಗಾಗಿ ವಿವಾದದ ವಿಷಯವನ್ನಾಗಿಸಿದರು. ಪಾಕಿಸ್ತಾನ ಮತೀಯ ದೃಷ್ಟಿಯಿಂದಲೇ ಆಲೋಚಿಸಿ ಅದು ತನ್ನ ರಾಷ್ಟ್ರದ ಭಾಗ ಎಂದು ವಾದಿಸುತ್ತಿದ್ದರೆ, ನೆಹ್ರೂ ಅದನ್ನು ವಿಶ್ವಸಂಸ್ಥೆಯ ವೇದಿಕೆಗೆ ಒಯ್ದು ಜನಮತ ಗಣನೆಯ ಪ್ರಸ್ತಾಪ ಮಾಡಿ ಅದನ್ನು ಅಂತಾರಾಷ್ಟ್ರೀಯ ವಿವಾದವನ್ನಾಗಿ ಮಾಡಿದರು. ಅದನ್ನೇ ಪಟ್ಟಾಗಿ ಹಿಡಿದು ಕೂತಿರುವ ಪಾಕಿಸ್ತಾನ, ಭಾರತದ ಸೇನಾ ಬೆಂಬಲದಿಂದಲೇ ತಾನು ಪೂರ್ವ ಪಾಕಿಸ್ತಾನವನ್ನು ಕಳೆದುಕೊಂಡೆನೆಂಬ ಸಂಕಟ ಮತ್ತು ಅದರಿಂದ ಹುಟ್ಟಿದ ಸೇಡಿನಲ್ಲಿ ಇಸ್ಲಾಮಿ ಭಯೋತ್ಪಾದನೆಗೆ ಕುಮ್ಮಕ್ಕು ಕೊಟ್ಟು ಕಾಶ್ಮೀರದಲ್ಲಿ ಸತತವಾಗಿ ರಕ್ತ ಚೆಲ್ಲಾಡುತ್ತಾ ಭಾರತವನ್ನು ನಿರಂತರ ಕಿರುಕುಳಕ್ಕೆ ಈಡುಮಾಡಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಕಾಶ್ಮೀರವೆನ್ನುವುದು ಜಗತ್ತಿನ ಅತ್ಯಂತ ಅಭದ್ರತೆಯ, ಅಶಾಂತಿಯ ಮತ್ತು ಅಪಾಯದ ಸ್ಥಳವೆನ್ನಿಸಿದೆ. ಭಾರತಕ್ಕೆ ನೆತ್ತಿಯ ಹುಣ್ಣೆನಿಸಿದೆ. ಇದರೆಲ್ಲ ದುಃಖ–ಸಂಕಷ್ಟ–ಹಿಂಸೆಗಳನ್ನು ಅನುಭವಿಸುತ್ತಿರುವವರು ಮಾತ್ರ ಕಾಶ್ಮೀರದ ಜನ. ಭಾರತದ ಏಳು ಲಕ್ಷ ಜನ ಸೈನಿಕರು, ಒಂದು ಕಾಲದಲ್ಲಿ ಭೂಮಿಯ ಮೇಲಿನ ಸ್ವರ್ಗವೆನಿಸಿದ್ದ ಕಾಶ್ಮೀರದಲ್ಲಿ ಈ ನಿರಂತರ ದುಃಖ–ಸಂಕಷ್ಟಗಳಿಗೆ ಪರಿಹಾರ ಕಾಣದ ಹತಾಶೆಯಲ್ಲಿ ಸಿಡಿದೆದ್ದಿರುವ ಸ್ಥಳೀಯ ಬಂಡಾಯಗಾರರಿಂದ ಮತ್ತು ಅವರಿಗೆ ಹೊರಗಿಂದ ಬೆಂಬಲ ನೀಡುತ್ತಿರುವ ಪಾಕಿಸ್ತಾನಿ ಪ್ರಚೋದಕರಿಂದ ಅದನ್ನು 'ರಕ್ಷಿಸಲು' ಕಳೆದ ಸುಮಾರು ಇಪ್ಪತ್ತೈದು ವರ್ಷಗಳಿಂದ ನಿರಂತರ ಕಾವಲು ಕಾಯುತ್ತಿದ್ದಾರೆ. ಅಪಾರ ಸಾವು ನೋವುಗಳಿಗೂ ಕಾರಣರಾಗಿದ್ದಾರೆ. ನಾಗರಿಕ ಪ್ರಜಾಪ್ರಭುತ್ವವೆನಿಸಿದ ಭಾರತದ ಮಟ್ಟಿಗೆ ಇದೊಂದು ವಿಪರ್ಯಾಸದ ಮತ್ತು ಮುಜುಗರದ ಸಂಗತಿಯಾಗಿದೆ. ಒಂದು ಕಾಲದಲ್ಲಿ ಹಿಂದೂ–ಮುಸ್ಲಿಂ–ಬೌದ್ಧ ಮನಸ್ಸುಗಳ ಸುಮಧುರ ಸಂಗಮವೆನಿಸಿದ್ದ ಕಾಶ್ಮೀರ ಇಂದು ಮತೀಯತೆಯ ಬಾಹುಗಳಲ್ಲಿ ಸಿಕ್ಕಿಹಾಕಿಕೊಂಡಿದೆ. ಹೀಗಾಗಿ ಅದರ ಸ್ವಾಯತತ್ತೆಯ ಕೂಗು ರಾಜಕೀಯವಾಗಿ ಅನುಮಾನಾಸ್ಪದವೆನಿಸಿ, ಅಗ್ಗದ ದೇಶಭಕ್ತರ ಗಂಟಲು ಶಕ್ತಿಯನ್ನು ಹೆಚ್ಚಿಸಿದೆ. ಕಾಶ್ಮೀರದ ಜನತೆಯ ಧ್ವನಿಯನ್ನು ದಮನಗೊಳಿಸಿ ಯಾವ ಷರತ್ತುಗಳ ಮೇಲೆ ಅದು ಭಾರತಕ್ಕೆ ಸೇರಲು ಒಪ್ಪಿಕೊಂಡಿತ್ತೋ ಆ ಷರತ್ತುಗಳನ್ನು ರದ್ದುಗೊಳಿಸಿ ಅದನ್ನು ಬಲಪ್ರಯೋಗದ ಮೂಲಕ ಭಾರತದೊಳಕ್ಕೆ ರಾಜಕೀಯವಾಗಿ ಸಂಪೂರ್ಣ ವಿಲೀನಗೊಳಿಸಬೇಕೆಂಬ ಕೂಗು ಬಲ ಪಡೆಯುತ್ತಿದೆ. ಇದು, ಸಮಸ್ಯೆಯ ಇನ್ನಷ್ಟು ಜಟಿಲತೆಗೆ ಮತ್ತು ಹಿಂಸೆಗೆ ದಾರಿಯೇ ಸರಿ.

ಕಾಶ್ಮೀರದ ಸಮಸ್ಯೆ ಯುದ್ಧಗಳಿಂದಾಗಲೀ, ಸಂಧಾನಗಳ ಮೂಲಕವಾಗಲೀ ಪರಿಹಾರವಾಗದೆ ದಿನೇ ದಿನೇ ಹೊಸ ಹೊಸ ಜಟಿಲತೆಗಳನ್ನು ಆಹ್ವಾನಿಸಿಕೊಂಡು

ಹೆಚ್ಚೆಚ್ಚು ಅಪರಿಹಾರ್ಯವೆನ್ನಿಸತೊಡಗಿದೆ. ಎರಡೂ ರಾಷ್ಟ್ರಗಳು ರಾಷ್ಟ್ರ ವಿಭಜನೆಯ ಕಹಿಯಲ್ಲಿ ಕಟ್ಟಿಕೊಂಡ ತಂತಮ್ಮ ರಾಷ್ಟ್ರೀಯ ಅಹಂಕಾರಗಳಲ್ಲಿ ಕಾಶ್ಮೀರವನ್ನು ಒಂದು ಭೂಭಾಗ ಮಾತ್ರವಾಗಿ ನೋಡಿ, ಅದು ಐದು ಸಾವಿರ ವರ್ಷಗಳ ಕಾಲದ ಒಂದು ಇತಿಹಾಸ ಕಮ್ಮಟದಲ್ಲಿ ಸಂಯೋಜಿತವಾದ ಒಂದು ಅತಿ ವಿಶಿಷ್ಟ ಜೀವನಕ್ರಮದಲ್ಲಿ ಮೂಡಿದ ಒಂದು ಜೀವಂತ ಸಮುದಾಯ ಎಂಬುದನ್ನು ಮರೆತಿರುವುದೇ ಇದಕ್ಕೆ ಕಾರಣವೇ? ಅದರ ಇತಿಹಾಸದ ಒಂದು ಇಣಕು ನೋಟ ಇರಬಹುದು ಎಂದು ಹೇಳುತ್ತದೆ. ಕಾಶ್ಮೀರವನ್ನು ಇಂದು ದಿನ ಬೆಳಗಾದರೆ ದೇಶಭಕ್ತಿಯ ಆವೇಶದಲ್ಲಿ ಚರ್ಚಿಸುವ ವಿವಿಧ ರಂಗಗಳ ಜನ ಕಾಶ್ಮೀರ ಸಂಸ್ಕೃತಿಯಲ್ಲಿ ಮಿಂದು ಬೆಳೆದ ರಾಜಕೀಯ ಕಾರ್ಯಕರ್ತ ಮತ್ತು ವಿಶ್ಲೇಷಕ ಬಲರಾಜ ಪುರಿಯವರು ಒದಗಿಸಿರುವ ಈ ಇಣುಕು ನೋಟವನ್ನೊಮ್ಮೆ ಗಮನಿಸಬೇಕಿದೆ. ಆಗ ಕಾಶ್ಮೀರ ಸಮಸ್ಯೆ ಬೇರೆಯೇ ಪರಿಪ್ರೇಕ್ಷ್ಯದಲ್ಲಿ ಕಾಣಿಸಿಕೊಳ್ಳತೊಡಗುತ್ತದೆ.–ಸಂ.

ಮಾರ್ಚ್, ೨೦೧೩

ಅಫ್ಜಲ್‌ಗೆ ಗಲ್ಲು: ಸಮಯಸಾಧಕ ರಾಜಕಾರಣ

ಪ್ರಿಯ ಓದುಗರೇ,

ಹೈದರಾಬಾದ್‌ನಲ್ಲಿ ರಜಾಕಾರರ ಉತ್ತರಾಧಿಕಾರಿಗಳ ಓವೈಸಿ ಕುಟುಂಬದ ಕಿರಿಯ ಓವೈಸಿ ತಲೆಕೆಟ್ಟವನಂತೆ ರಾಷ್ಟ್ರ, ಧರ್ಮ ಇತ್ಯಾದಿಗಳ ಬಗ್ಗೆ ಅಪಾಯಕಾರಿ ಮಾತುಗಳನ್ನಾಡಿ ಗುಲ್ಲೆಬ್ಬಿಸಿದ್ದಾನೆ. ಇದಕ್ಕೆ ಪ್ರತಿಕ್ರಿಯೆಯೆಂಬಂತೆ ಈ ದೇಶದಲ್ಲಿ ಇನ್ನೂ ಉಳಿದಿರುವ ಗಾಂಧಿ ಹತ್ಯೆ ಹಿಂದಿನ ತಾತ್ವಿಕತೆಯ ಸದ್ಯದ ವಕ್ತಾರ ತೊಗಾಡಿಯಾ ಇನ್ನಷ್ಟು ಅಪಾಯಕಾರಿಯಾಗಿ ಮಾತಾಡಿ ಪರಿಸ್ಥಿತಿಯ ಕಾವೇರಿಸಿದ್ದಾನೆ. ಅದಾದ ಕೆಲವೇ ದಿನಗಳಲ್ಲಿ ಸರ್ಕಾರ ಅಫ್ಜಲ್ ಗುರುವನ್ನು ಗುಟ್ಟಾಗಿ ಗಲ್ಲಿಗೇರಿಸಿದೆ. ಇನ್ನು ಇದಾದ ಹದಿನೈದು ದಿನಗಳಲ್ಲಿ ಹೈದಾರಾಬಾದ್‌ನಲ್ಲಿ ಬಾಂಬ್ ಸ್ಫೋಟಿಸಿ ೧೬ ಜನ ಅಸು ನೀಗಿದ್ದಾರೆ. ಘಟನೆಗಳ ಚಕ್ರ ಇಲ್ಲಿಗೆ ಪೂರ್ಣವಾದಂತೆ ತೋರುತ್ತಿದ್ದರೂ ಅವು ತಿರುಗಿಸಿ ಬಿಟ್ಟಿರುವ ಹಿಂಸೆಯ ಚಕ್ರ ಇಲ್ಲಿಗೇ ನಿಲ್ಲುವುದೋ ಇಲ್ಲವೋ ತಿಳಿಯದಾಗಿದೆ.

ಮಿಕ್ಕವರು ಬಿಡಿ; ಅವರು ವ್ಯಕ್ತಿಗಳು. ರಾಷ್ಟ್ರೀಯ ಜವಾಬ್ದಾರಿ ಇಲ್ಲದ ಅಯೋಗ್ಯರು. ಆದರೆ ಈ ಅಯೋಗ್ಯರನ್ನು ನಿಯಂತ್ರಿಸಲಾಗದ, ಬಗ್ಗು ಬಡಿಯಲಾಗದ ಅಸಮರ್ಥ ಸರ್ಕಾರ ತನ್ನ ಈ ಪರಮ ಹೇಡಿತನವನ್ನು ಮುಚ್ಚಿಕೊಳ್ಳುವ ಅಪಾಯಕಾರಿ ರಾಜಕೀಯ ಆಟ ಆರಂಭಿಸಿದರೆ ಈ ಹಿಂಸೆಯ ಚಕ್ರ ನಿಲ್ಲುವುದಾದರೂ ಹೇಗೆ? ಒಂಭತ್ತು ವರ್ಷಗಳ ಕಾಲ ಯಾವುದೇ ನಿರ್ದಿಷ್ಟ ಕಾರಣಗಳಿಲ್ಲದೆ ಮೀನ ಮೇಷ ಎಣಿಸುತ್ತಾ ನಿಷ್ಕ್ರಿಯವಾಗಿದ್ದ ಸರ್ಕಾರ ಇದ್ದಕ್ಕಿದ್ದಂತೆ ರಾಷ್ಟ್ರಪತಿಗಳ ಮೇಜಿನ ಮೇಲೆ ಕೊಳೆಯುತ್ತಿದ್ದ ಅಫ್ಜಲ್‌ನ ಕ್ಷಮಾದಾನ ಪತ್ರವನ್ನು ನಿಕಾಲೆ ಮಾಡಿಸಿ ಒಂದು ಬೆಳಿಗ್ಗೆ ಗುಟ್ಟಾಗಿ ಅವನನ್ನು ನೇಣಿಗೇರಿಸುವ ದರ್ದಾದರೂ ಏನಿತ್ತು?

ನಿಜ, ಅಫ್ಜಲ್ ರಾಷ್ಟ್ರದ ಪರಮೋಚ್ಚ ಅಧಿಕಾರ ಕೇಂದ್ರವಾದ ಸಂಸತ್ತಿನ ಮೇಲೆ ಉಗ್ರಗಾಮಿಗಳಿಂದ ನಡೆದ ವಿಫಲ ದಾಳಿಯ ಆಯೋಜನೆಯಲ್ಲಿ ಸಹಾಯಕನಾಗಿ

ಪಾತ್ರ ವಹಿಸಿದ್ದ ಎಂದು ಸರ್ವೋಚ್ಚ ನ್ಯಾಯಾಲಯ ಆತನಿಗೆ ಮರಣ ದಂಡನೆಯ ಶಿಕ್ಷೆ ವಿಧಿಸಿ ತೀರ್ಪಿತ್ತಿತ್ತು. ಆದರೆ ಅಂತಹ ಶಿಕ್ಷೆಯ ತೀರ್ಪು ಪಡೆದಿರುವ ಅನೇಕರು ಹಲವು ನೆಲೆಗಳಲ್ಲಿನ ಪರಿಹಾರದ ನಿರೀಕ್ಷೆಯಲ್ಲಿ ಇನ್ನೂ ಗಲ್ಲಿಗೇರದೆ ಪ್ರಾಣ ಉಳಿಸಿಕೊಂಡು ನಮ್ಮ ಜೈಲುಗಳಲ್ಲಿದ್ದಾರೆ. ಉದಾಹರಣೆಗೆ ಅಫ್ಜಲ್‌ನಿಗಿಂತ ಬಹುಮುನ್ನ ಗಲ್ಲು ಶಿಕ್ಷೆಗೆ ಒಳಗಾದ ರಾಜೀವ್ ಗಾಂಧಿ ಹತ್ಯೆಯ ಆರೋಪಿಗಳು. ಹಾಗೆ ನೋಡಿದರೆ ಅಫ್ಜಲ್ ಗುರುವಿನ ಪ್ರಕರಣ ನಮ್ಮ ಸಂವಿಧಾನದ ಪ್ರಕಾರ ಇನ್ನೂ ಲಭ್ಯವಿದ್ದ ವಿಶೇಷ ಪುನರ್ಪರಿಶೀಲನೆಗೆ ಅರ್ಹತೆ ಪಡೆದಿತ್ತು ಎಂದು ದೇಶದ ಹಲವು ಶ್ರೇಷ್ಠ ನ್ಯಾಯವೇತ್ತರು ಮತ್ತು ಪ್ರಮುಖ ಮಾನವ ಹಕ್ಕುಗಳ ವಕ್ತಾರರು ಹೇಳುತ್ತಿದ್ದಾರೆ. ಇನ್ನಷ್ಟು ಸಮರ್ಥ ವಕೀಲರು ಅವನಿಗೆ ಲಭ್ಯವಾಗಿದ್ದಿದ್ದರೆ, ಸಹ ಆರೋಪಿಯಾಗಿದ್ದ ಗಿಲಾನಿಯಂತೆ ಈತ ಕೂಡಾ ಕನಿಷ್ಠ ಗಲ್ಲು ಶಿಕ್ಷೆಯಿಂದಲಾದರೂ ಪಾರಾಗುವ ಸಾಧ್ಯತೆಗಳಿದ್ದವು ಎಂದು ಇವರು ಹೇಳುತ್ತಾರೆ. ಆದರೆ ಸರ್ಕಾರ ಇದಾವುದಕ್ಕೂ ಅವಕಾಶ ಸಿಗದಂತೆ, ಆತನ ಮರಣ ದಂಡನೆಯ ಅನುಷ್ಠಾನ ಕುರಿತ ಮಾಹಿತಿ ಆತನ ಕುಟುಂಬಕ್ಕೆ ದೊರೆತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಭ್ಯತೆಯನ್ನೂ ತೋರದೆ ಅತ್ಯಂತ ಹೇಯ ಅವಸರದಲ್ಲಿ ಆತನ ಪ್ರಾಣ ತೆಗೆದುಕೊಂಡಿದೆ. ಇದು ತನ್ನನ್ನು ಆಧುನಿಕ, ನಾಗರಿಕ ಎಂದು ಕರೆದುಕೊಳ್ಳುವ ಯಾವುದೇ ಸರ್ಕಾರಕ್ಕೆ ಸಲ್ಲದ ನಡೆ.

ಈ ವಿಷಯಕ್ಕೆ ಇನ್ನೊಂದು ಆಯಾಮವೂ ಇದೆ. ಅಫ್ಜಲ್ ಗುರು ಕಾಶ್ಮೀರದ ನಾಗರಿಕ. ಅದರ ಸ್ವಾಯತ್ತತೆಯ ಪ್ರತಿಪಾದಕನಾಗಿದ್ದವ. ನಮ್ಮ ದೇಶಭಕ್ತಿಯ ಉತ್ಕಟತೆಯಲ್ಲಿ ನಾವು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದು ಘೋಷಿಸಿಕೊಂಡಿದ್ದೇವೆ. ಆದರೆ ಅದು ಅಂತಾರಾಷ್ಟ್ರೀಯವಾಗಿ ಬಗೆಹರಿಯದ ಸಮಸ್ಯೆಯೇ ಆಗಿ ಉಳಿದಿದೆ ಎಂಬುದು ವಾಸ್ತವಾಂಶ. ಹೀಗಾಗಿ ಅಫ್ಜಲ್ ಗುರುವಿನ ಅಪರಾಧವನ್ನು–ಅದು ನೂರಕ್ಕೆ ನೂರರಷ್ಟು ಸಾಬೀತಾಗಲು ಅವಕಾಶವಿದ್ದ ಅಪರಾಧವೇ ಆಗಿದ್ದಲ್ಲಿ–ಕಾಶ್ಮೀರ ಸಮಸ್ಯೆಯನ್ನು ೬೫ ವರ್ಷಗಳ ನಂತರವೂ ಪರಿಹರಿಸಿಕೊಳ್ಳಲಾಗದ ನಮ್ಮ ಸಮಸ್ಯೆಯ ಭಾಗವಾಗಿಯೇ ಭಾರತ ಸರ್ಕಾರ ನೋಡಬೇಕಿತ್ತು.

ಅಫ್ಜಲ್‌ನಿಗೆ ನ್ಯಾಯಾಲಯದಿಂದ ಮರಣ ದಂಡನೆ ಖಚಿತವಾದ ಮೇಲೂ ಒಂಭತ್ತು ವರ್ಷಗಳ ಕಾಲ ಆತನನ್ನು ಏಕೆ ಜೈಲಿನಲ್ಲಿ ಇಟ್ಟುಕೊಳ್ಳಲಾಗಿತ್ತು? ಕಾಶ್ಮೀರದಲ್ಲಿ ಅಶಾಂತಿ ಭುಗಿಲೇಳುತ್ತದೆ ಎಂಬ ಆತಂಕದಲ್ಲಲ್ಲವೇ? ಆದರೆ ಈಗೇಕೆ ಸರ್ಕಾರ ಇದ್ದಕ್ಕಿದ್ದಂತೆ ಅವನನ್ನು ಗಲ್ಲಿಗೇರಿಸಿ ಕಾಶ್ಮೀರದಿಂದ ಸರ್ಕಾರಿ ಸುದ್ದಿಯ ಹೊರತಾಗಿ ಇನ್ನಾವ ಸುದ್ದಿಯೂ ಹೊರಬರದಂತೆ ಪ್ರತಿಬಂಧಗಳನ್ನು ಹೇರಿ ಕಾನೂನು ಪಾಲಿಸುವ ನಾಟಕವಾಡಿತು? ಚುನಾವಣೆಗಳು ಹತ್ತಿರ ಬಂದಿದ್ದು, ಅಫ್ಜಲ್ ಗುರುವಿನ ಪ್ರಾಣಕ್ಕಾಗಿ ಹಾತೊರೆಯುತ್ತಾ ರಾಷ್ಟ್ರೀಯತೆಯ ಮೇಲಿನ ತನ್ನ ಗುತ್ತೇದಾರಿಕೆಯನ್ನು ಸ್ಥಾಪಿಸಲು ಯತ್ನಿಸುತ್ತಿದ್ದ ಬಿಜೆಪಿಯ ಒಂದು ಚುನಾವಣಾ ವಿಷಯವನ್ನು ತಣ್ಣಗಾಗಿಸಲಿಕ್ಕೇ ಅಲ್ಲವೇ?

ತನ್ನ ಕೊರಳನ್ನು ಬಿಗಿಯಾಗಿ ಸುತ್ತಿಕೊಳ್ಳುತ್ತಿರುವ ಹಲವಾರು ಬೃಹತ್ ಭ್ರಷ್ಟಾಚಾರದ ಹಗರಣಗಳ ಮಧ್ಯೆ ಸ್ವಲ್ಪ ಉಸಿರಾಡಲು ಅವಕಾಶ ಮಾಡಿಕೊಳ್ಳಲು ಅಲ್ಲವೇ?

ಇದು ಕ್ಷುಲ್ಲಕ ರಾಜಕಾರಣ; ಅಗ್ಗದ ರಾಜಕಾರಣ. ಇದರಿಂದ ಪಾರಾಗಲು, ಬೇರೆ ಆಯ್ಕೆಯೇ ಇಲ್ಲದಂತೆ ನಮ್ಮನ್ನು ಸುತ್ತುವರೆದುಕೊಂಡಿರುವ ಸಂಪೂರ್ಣ ಕುಲಗೆಟ್ಟು ಹೋಗಿರುವ ಈ ಕಾಂಗ್ರೆಸ್-ಬಿಜೆಪಿ ಯುಗಳ ರಾಜಕಾರಣದಿಂದ ದೇಶವನ್ನು ಮುಕ್ತಗೊಳಿಸುವುದೊಂದೇ ದಾರಿ ಎಂದು ಕಾಣುತ್ತದೆ.

ಯಾರಿಗಾದರೂ ಈ ಬಗ್ಗೆ ಅನುಮಾನವಿದ್ದರೆ ಇಂದಿನ ಕರ್ನಾಟಕದ ರಾಜಕಾರಣ ಮುಟ್ಟಿರುವ ಸ್ಥಿತಿಯನ್ನು ನೋಡಬಹುದು. ಈ ಎರಡೂ ಪಕ್ಷಗಳ ನಡುವೆ (ಅಥವಾ ಇವುಗಳ ಟಿಸಿಲುಗಳಂತಿರುವ ಇತರ ಯಾವುದೇ ಪಕ್ಷಗಳ ನಡುವೆ) ಏನಾದರೂ ವ್ಯತ್ಯಾಸ ಕಾಣುತ್ತದೆಯೇ? ಯಾರು ಯಾವಾಗಬೇಕಾದರೂ ಯಾವುದೇ ಪಕ್ಷದಲ್ಲಿರಬಹುದು! ಸಂಸದೀಯ ರಾಜಕಾರಣ ಇದಕ್ಕಿಂತ ಲಜ್ಜೆಗೆಡಲು ಸಾಧ್ಯವೇ?

<u>ಸಮಕಾಲೀನ</u>

ಲೋಹಿಯಾ ನೆನಪು

ಮಾರ್ಚ್ ೨೩ ಲೋಹಿಯಾ ಜಯಂತಿ. ಇವರು ಈಗ ಬದುಕಿದ್ದರೆ ೧೦೩ ವರ್ಷ ತುಂಬುತ್ತಿತ್ತು. ಆದರೆ ಅವರು ತಮ್ಮ ೫೭ನೇ ವಯಸ್ಸಿನಲ್ಲೇ ಜನಸಾಮಾನ್ಯರ ಸರ್ಕಾರಿ ಆಸ್ಪತ್ರೆಗೇ ಸೇರಬೇಕೆಂದು ಹಠ ಮಾಡಿ ಬಹಳ ಜನ ಹೇಳುವಂತೆ ತಪ್ಪು ರೋಗ ನಿದಾನ ಮತ್ತು ಹಾಗಾಗಿ ತಪ್ಪು ಚಿಕಿತ್ಸೆಗೆ ಬಲಿಯಾಗಿ ಅಸುನೀಗಿದರು. ಆದರೆ ಆ ಹೊತ್ತಿಗೆ ಅವರು ಭಾರತದ ಭವಿಷ್ಯದ ರಾಜಕಾರಣ ಮತ್ತು ಅದಕ್ಕೆ ಜೀವಸೆಲೆಯಾಗಿರಬೇಕೆಂದು ಅವರು ಬಯಸಿದ ಸಾಂಸ್ಕೃತಿಕ ಕಾರ್ಯಸೂಚಿಯೊಂದನ್ನು ನಿರ್ಧರಿಸಿಬಿಟ್ಟಿದ್ದರು. ಕಾಲದ ಜೊತೆ ಹೆಜ್ಜೆ ಹಾಕುವಾಗ ತಾವು ಒಂದೆರಡು ಹೆಜ್ಜೆ ಮುಂದೆ ಹೋಗಿಬಿಟ್ಟಿದ್ದೇನೋ ಎಂಬ ಆತಂಕ ಅವರನ್ನು ಒಮ್ಮೊಮ್ಮೆ ಕಾಡಿತ್ತಾದರೂ, ಮುಂದೊಂದು ದಿನ ಜನ ತಮ್ಮ ಮಾತು ಕೇಳೇ ಕೇಳಬೇಕಾಗುತ್ತದೆ ಎಂಬ ವಿಶ್ವಾಸ ಅವರಿಗಿತ್ತು.

ಆ ದಿನಗಳು ಇಂದು ಬಂದು ನಮ್ಮ ಎದೆಯ ಬಾಗಿಲು ಬಡಿಯುತ್ತಿವೆ. ಮನುಷ್ಯನ ಆದಿ ತುಡಿತವೆಂದು ಕರೆಯಬಹುದಾದ ಸಮಾನತೆಯ ಪ್ರಶ್ನೆ ಇಂದು ಅವರ ಕಾಲದಲ್ಲಿದ್ದಷ್ಟು ಸರಳವಾಗಿರದೆ ಜಟಿಲಗೊಂಡು, ಅವರ ಕಾಲದ ಸಮಾಜವಾದಿ ರಾಜಕಾರಣವನ್ನು ಇಂದು ತದ್ವತ್ತಾಗಿ ಮುಂದುವರೆಸಿಕೊಂಡು ಹೋಗಲು ಸಾಧ್ಯವಿಲ್ಲ, ನಿಜ. ಆದರೂ, ಅವರು ರಾಜಕಾರಣಕ್ಕೆ ಒದಗಿಸಿದ ಸಾಂಸ್ಕೃತಿಕ ಆಧಾರಗಳು ಅವರ ರಾಜಕಾರಣದ ಮೂಲತತ್ವಗಳು ಇಂದಿನ ಜಾಗತೀಕರಣದ ರಾಜಕಾರಣವನ್ನು ಅರ್ಥಮಾಡಿಕೊಂಡು

ಅದನ್ನು ಎದುರಿಸಿ ನಿಭಾಯಿಸಲು ನಮಗೆ ಸಹಾಯವಾಗಬಹುದು. ಮುಖ್ಯವಾಗಿ ಅವರು ಸಮಾನತೆ ಎಂಬುದನ್ನು ಅದರ ರೂಕ್ಷ ಆದಾಯ ಸಮಾನತೆ ಅಥವಾ ಅದರ ಸುಧಾರಿತ ರೂಪವೆನ್ನಿಸುವ ಅವಕಾಶಗಳ ಸಮಾನತೆ ಎಂಬ ಅರ್ಥಗಳಾಚೆಗೆ ವಿಸ್ತರಿಸಿ ಅದು 'ಬಾಹ್ಯ ಬಂಧುತ್ವ ಆಂತರಿಕ ಪ್ರಶಾಂತಿ' ಎಂದು ನಿರೂಪಿಸಿ ಹೊಸ ಸಮತೋಲನವೊಂದನ್ನು ಆಧರಿಸಿದ ಹೊಸ ನಾಗರೀಕತೆಯೊಂದರ ಹೊಳಹನ್ನು ಬಿಟ್ಟು ಹೋಗಿದ್ದಾರೆ. ಹಾಗೆಂದೇ ಅವರು ಸಮಕಾಲೀನ ರಾಜಕೀಯ ಚರ್ಚೆಗಳಲ್ಲಿ ಸಮಾಜವಾದದ ಆಶಯವನ್ನು ಜನಪ್ರಿಯವೂ ಕ್ಲೀಷೆಯ ಶಬ್ದವೂ ಆಗಿದ್ದ ಸಮಾನತೆಗೆ ಬದಲಾಗಿ ಸಮತೆ ಎಂಬ ಶಬ್ದವನ್ನು ಚಲಾವಣೆಗೆ ತಂದು ಬಳಸುತ್ತಿದ್ದರು.

ಮನುಷ್ಯನ ವಿವೇಕವನ್ನು ಅಂದರೆ ತನ್ನೊಳಗಿನ ಸಂಪತ್ತು ಮತ್ತು ಹೊರಗಿನ ಸಂಪತ್ತುಗಳ ನಡುವಣ ಸಮತೋಲನವನ್ನು ನಿರ್ಧರಿಸುವ 'ತನಗೆಷ್ಟು ಬೇಕು ಮತ್ತು ಎಷ್ಟು ಸಾಕು' ಎಂಬ ಸೂತ್ರದಲ್ಲಿನ 'ಸಾಕು' ಎಂಬ ಪರಿಕಲ್ಪನೆಯನ್ನೇ ಜಾಗತೀಕರಣವೆಂಬುದು ಅಸಂಬದ್ಧಗೊಳಿಸಿ ಅಪ್ರಸ್ತುತಗೊಳಿಸಿದೆ. ಅದು ಬಡವ-ಶ್ರೀಮಂತರೆನ್ನದೆ ಎಲ್ಲರಲ್ಲಿ ಹುಟ್ಟಿಸಿರುವ ಹಪಾಹಪಿಯನ್ನು ಬರೀ ಆರ್ಥಿಕ-ಸಾಮಾಜಿಕ ರಾಜಕಾರಣದಿಂದ ನಿಭಾಯಿಸಲು ಅಸಾಧ್ಯವೆನಿಸತೊಡಗಿದೆ. ಹಿಂಸೆ ಎಂಬುದು ನಮ್ಮ ಸಾರ್ವಜನಿಕ ಮತ್ತು ವೈಯಕ್ತಿಕ ಜೀವನದಲ್ಲಿ ದಿನೇ ದಿನೇ ಪಡೆಯುತ್ತಿರುವ ಹೊಸ ರೂಪ, ತೀವ್ರತೆ ಮತ್ತು ಅನಿವಾರ್ಯವೆನ್ನಿಸುತ್ತಿರುವ ಮಾನ್ಯತೆಗಳ ಮೂಲಕ ಇದು ನಮಗೆ ಗೊತ್ತಾಗತೊಡಗಿದೆ. ಆಧುನಿಕ ನಾಗರೀಕತೆ ಎಂಬುದನ್ನೇ ಅಸಭ್ಯತೆ ಎಂದು ಕರೆದ ಯುಗಪುರುಷ ಗಾಂಧೀಜಿಯ ಸ್ವಘೋಷಿತ ಬಂಡುಕೋರ ಶಿಷ್ಯರಾಗಿದ್ದ ಲೋಹಿಯಾ ತಮ್ಮ ಅಲ್ಪಾಯುಷ್ಯದಲ್ಲೇ ಬಾಳಿ ಹೋದ ತಮ್ಮ ತುಂಬು ವ್ಯಕ್ತಿತ್ವದ ಹಲವು ಕಂಪನಗಳ ಮೂಲಕವೇ ಇಂದಿನ ಈ ಬಿಕ್ಕಟ್ಟನ್ನು ಎದುರಿಸಲು ನಮಗೆ ಕೆಲವು ಹೊಳಹುಗಳನ್ನು ಬಿಟ್ಟು ಹೋಗಿದ್ದಾರೆ. ಅಂತಹ ವ್ಯಕ್ತಿತ್ವದ ಒಂದು ಸೆಳಕು ಇಲ್ಲಿದೆ. ಈ ವ್ಯಕ್ತಿ ಚಿತ್ರದ ಕರ್ತೃ ಲೋಹಿಯಾರ ಹಲವು ಬೌದ್ಧಿಕ ಮತ್ತು ಸಾಂಸ್ಕೃತಿಕ ಒಡನಾಡಿಗಳಲ್ಲೊಬ್ಬರಾಗಿದ್ದ ಆಧುನಿಕ ಮರಾಠಿ ಸಾಹಿತ್ಯದ ಅಧ್ವರ್ಯುಗಳಲ್ಲೊಬ್ಬರೂ, ಜ್ಞಾನಪೀಠ ಪುರಸ್ಕೃತರೂ ಆದ ಪು.ಲ. ದೇಶಪಾಂಡೆಯವರು. ಅವರು ಇದನ್ನು ಬರೆದಿರುವುದು ಲೋಹಿಯಾರ ಒಡನಾಡಿ ಶ್ರೀಮತಿ ಇಂದುಮತಿ ಕೇಳ್ಕರರು ಮರಾಠಿಯಲ್ಲಿ ಬರೆದಿರುವ ಲೋಹಿಯಾ ಜೀವನ ಚರಿತ್ರೆಯ ಮುನ್ನುಡಿಯಾಗಿ.

ಲೋಹಿಯಾ ನೆನಪಿನ ಭಾಗವಾಗಿ ಈ ಸಂಚಿಕೆಯಲ್ಲಿ ಪ್ರಕಟವಾಗುತ್ತಿರುವ ಇನ್ನೊಂದು ಲೇಖನ, ಇಂದು ಜ್ಞಾನಜಿಜ್ಞಾಸಿಕ ನೆಲೆಯಲ್ಲೇ ಮೂಲಭೂತ ಸಂದಿಗ್ಧಗಳನ್ನು ಎದುರಿಸುತ್ತಿರುವ 'ಪ್ರಜಾಪ್ರಭುತ್ವ'ದ ಪರಿಕಲ್ಪನೆ ಕುರಿತ ಲೋಹಿಯಾ ವಿಚಾರಗಳನ್ನು ಕುರಿತ ಒಂದು ಪರಿಶಿಲನೆಯನ್ನು ಕುರಿತಾದ್ದು. ಇದನ್ನು ಬರೆದವರು ಲೋಹಿಯಾ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಡಾ॥ ರಾಜಾರಾಂ ತೋಳ್ಪಾಡಿಯವರು – **ಸಂ.**

ಏಪ್ರಿಲ್, ೨೦೧೩

ಅಸೂಕ್ಷ್ಮವಾಗುತ್ತಿರುವ ಹೆಣ್ಣು ಗಂಡಿನ ಸಂಬಂಧದ ಚರ್ಚೆ

ಪ್ರಿಯ ಓದುಗರೇ,

ಇದು ಅತ್ಯಾಚಾರಗಳ ಮಹಾ ಕಾಲ ಎಂದು ಕಾಣುತ್ತದೆ! ಎಲ್ಲ ರೀತಿಯ–ಲೈಂಗಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಪಾರಿಸರಿಕ ಇತ್ಯಾದಿ–ಅತ್ಯಾಚಾರಗಳ ಕಾಲ. ನನ್ನ ಈ ಹಿಂದಿನ ಟಿಪ್ಪಣಿಯೊಂದರಲ್ಲಿ ಸೂಚಿಸಿದ್ದಂತೆ ಇವೆಲ್ಲ ಒಂದಕ್ಕೊಂದು ಸಂಬಂಧ ಪಡೆದ ಅತ್ಯಾಚಾರಗಳು. ಈ ಹಿಂದಿನ ಸಂಚಿಕೆಯೊಂದರ ಲೇಖನದಲ್ಲಿ ಖ್ಯಾತ ಸ್ತ್ರೀಪರ ಚಿಂತಕಿ ವಂದನಾ ಶಿವ ವಾದಿಸಿದ್ದಂತೆ ಜಾಗತೀಕರಣದ ಆತ್ಯಂತಿಕ ಪರಿಣಾಮದ ಪ್ರತೀಕದಂತೆ ಗೋಚರವಾಗುತ್ತಿರುವ ಭೂಮಿಯ ಮೇಲಿನ ಅತ್ಯಾಚಾರ ತನ್ನ ತಾರ್ಕಿಕ ಅಂತ್ಯವನ್ನು ಹೆಣ್ಣು ಜೀವದ ಮೇಲಿನ ಅತ್ಯಾಚಾರಗಳಲ್ಲಿ ಕಂಡುಕೊಳ್ಳುತ್ತಿದೆ. ಇದನ್ನು ಅರಿಯದ, ಅದಕ್ಕೂ ಮುಖ್ಯವಾಗಿ ಅರಿಯಲು ನಿರಾಕರಿಸುವ ಜಾಗತೀಕರಣದ ನೇರ ಫಲಾನುಭವಿಗಳಾದ ನಮ್ಮ ರಾಜಕೀಯ ಲೋಕ ಮತ್ತು ಅದನ್ನೇ ಅವಲಂಬಿಸಿರುವ ಖಂಡನೆಗೆ ಒಳಗಾಗಿರುವ ಮಾಧ್ಯಮ ಲೋಕ ಲೈಂಗಿಕ ಅತ್ಯಾಚಾರದ ವಿಷಯವನ್ನೇ ಒಂದು ಒಂಟಿ ಜ್ವಲಂತ ಸಮಸ್ಯೆಯಂತೆ ಚರ್ಚಿಸುತ್ತಿವೆ.

ಇತ್ತೀಚೆಗಂತೂ ತಮ್ಮ ಮಾತಿನ ಅಂಗಡಿಗಳಲ್ಲಿ ವ್ಯಾಪಾರ ಮಾಡಲು ರೋಚಕ ರಾಜಕೀಯ ಸರಕಿಲ್ಲದೇ ಹೋದಾಗಲೆಲ್ಲ ನಮ್ಮ ರಾಷ್ಟ್ರೀಯ (ಅಂದರೆ ಇಂಗ್ಲಿಷ್) ಮಾಧ್ಯಮಗಳು–ನಿರ್ದಿಷ್ಟವಾಗಿ ಟಿವಿ ವಾಹಿನಿಗಳು–ಲೈಂಗಿಕ ಅತ್ಯಾಚಾರ ಮತ್ತು ಅದಕ್ಕೆ ಸಂಬಂಧಿಸಿದ ನೈತಿಕ ಮತ್ತು ಕಾನೂನಾತ್ಮಕ ಸಂಗತಿಗಳನ್ನು ಬಹು ಗಂಭೀರವಾಗಿ ಚರ್ಚಿಸತೊಡಗಿರುವುದನ್ನು ನಾವು ನೋಡುತ್ತಿದ್ದೇವೆ. (ನಮ್ಮ ಪ್ರಾದೇಶಿಕ ಮಾಧ್ಯಮಗಳ ಸುದ್ದಿ ಸದ್ಯಕ್ಕೆ ಬೇಡ!) ಈ ವಾಹಿನಿಗಳು ದೆಹಲಿ ಸಾಮೂಹಿಕ ಅತ್ಯಾಚಾರದ ವಿರುದ್ಧ ದಿನಗಟ್ಟಲೆ ನಡೆದ ಪ್ರತಿಭಟನೆಗಳ ನೇರಪ್ರಸಾರ ಮಾಡುತ್ತಿದ್ದ ಹೊತ್ತಿನಲ್ಲೇ ಪ್ರತಿಭಟನಾ ಸ್ಥಳದಿಂದ ಒಂದೂವರೆ ಕಿ.ಮೀ. ದೂರದಲ್ಲಿಯೇ ಬಸ್ಸೊಂದರಲ್ಲಿ ಹುಡುಗಿಯೊಬ್ಬಳ

ಮೇಲೆ ನಡೆದ ಅತ್ಯಾಚಾರದ ಪ್ರಯತ್ನ ವರದಿಯಾಯಿತು! ಜೊತೆಯಲ್ಲೇ ದೇಶಾದ್ಯಂತ ಲೈಂಗಿಕ ಅತ್ಯಾಚಾರದ ಪ್ರಕರಣಗಳು ಎಡಬಿಡದ ರೀತಿಯಲ್ಲಿ ವರದಿಯಾಗತೊಡಗಿದವು. ಇನ್ನು ಇತ್ತೀಚೆಗೆ ಮಹಿಳಾ ದೌರ್ಜನ್ಯ ತಡೆ ಕಾಯಿದೆ ಬಗ್ಗೆ ಮಾಧ್ಯಮಗಳಲ್ಲಿ ಎಳೆ ಎಳೆಯಾಗಿ ಚರ್ಚೆ ನಡೆಯುತ್ತಿರುವಾಗಲೇ ಮಧ್ಯಪ್ರದೇಶದಲ್ಲಿನ ಗ್ರಾಮಾಂತರದಲ್ಲಿ ಸ್ವಿಸ್ ಮಹಿಳೆ ಮೇಲೆ ನಡೆದ ಅತ್ಯಚಾರ ವರದಿಯಾಯಿತು. ಸಂಬಂಧಿತ ಮಸೂದೆ ಸಂಸತ್ತಿನಲ್ಲಿ ಚರ್ಚೆಯಾಗುವ ಹೊತ್ತಿನಲ್ಲೇ ದೆಹಲಿಯ ಹೋಟೆಲೊಂದರಲ್ಲಿ ತಂಗಿದ್ದ ಬ್ರಿಟಿಷ್ ಮಹಿಳೆಯೊಬ್ಬಳು ಹೋಟೆಲ್ ಮಾಲಿಕನ ಲೈಂಗಿಕ ದಾಳಿಯಿಂದ ತಪ್ಪಿಸಿಕೊಳ್ಳಲು ಕಿಟಕಿಯಿಂದ ಹಾರಿ ಗಾಯಗೊಂಡ ಘಟನೆ ನಡೆಯಿತು!

ಇದೆಲ್ಲ ಏನು ಸೂಚಿಸುತ್ತದೆ? ನಮ್ಮ ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು, ಬುದ್ಧಿಜೀವಿಗಳು ನಡೆಸುವ ಇಂತಹ ರಾಷ್ಟ್ರೀಯ ಚರ್ಚೆಗಳಿಗೂ ರಾಷ್ಟ್ರದ ಸಾರ್ವಜನಿಕ ಜೀವನಕ್ಕೂ ಯಾವುದೇ ಸಂಬಂಧವಿಲ್ಲ. ಅಂದರೆ ಪರಸ್ಪರ ಸಂಪರ್ಕ ತಪ್ಪಿ ಹೋಗಿದೆ. ರಾಷ್ಟ್ರದ ಮಾನಸಿಕತೆಯ ಚಲನಶೀಲತೆಯನ್ನು, ಅದರ ಸೂಕ್ಷ್ಮ ಚಾಲೂ-ಚಹರೆಗಳನ್ನು ರಾಷ್ಟ್ರೀಯ ಎಂದು ಹೇಳಿಕೊಳ್ಳುವ ಚರ್ಚೆಗಳು, ಅವನ್ನು ರೂಪಿಸುವ ಸಂಸ್ಥೆಗಳು, ಬೌದ್ಧಿಕ ಪರಿಕರಗಳು ಅರ್ಥಮಾಡಿಕೊಳ್ಳುವಲ್ಲಿ ಸೋಲುತ್ತಿವೆ.

ಹಾಗಾಗಿಯೇ ದೆಹಲಿ ಅತ್ಯಾಚಾರದ ಪ್ರಕರಣದ ಬಗ್ಗೆ ರಾಷ್ಟ್ರೀಯ ಚರ್ಚೆಯೆಂಬುದು ಎಷ್ಟು ಹುಸಿ ತೀವ್ರತೆಯಲ್ಲಿ ನಡೆಯಿತೆಂದರೆ, ಅದನ್ನು ಗಂಭೀರವಾಗಿ, ನಿರಂತರವಾಗಿ ಕೇಳಿದ ಯಾವನೇ ಗಂಡಸು ಪಾಪಪ್ರಜ್ಞೆಯಿಂದ ನರಳಿ ನಪುಂಸಕನೇ ಆಗುವಷ್ಟು! ಸಂಸತ್ತಿನಲ್ಲಿ ಶರದ್ ಯಾದವ್ ಮತ್ತು ಇನ್ನೊಬ್ಬಿಬ್ಬರು ಈ ಮಸೂದೆಯಲ್ಲಿನ ಅಸಹಜತೆ ಮತ್ತು ಅವಿವೇಕಗಳನ್ನು ಸೂಚಿಸುತ್ತಾ, 'ಹರೆಯದಲ್ಲಿ ಹುಡುಗಿಯೊಬ್ಬಳನ್ನು ಹಿಂಬಾಲಿಸದ, ಚುಡಾಯಿಸಿದ ಗಂಡಸು ಯಾರಿದ್ದಾರೆ ಹೇಳಿ!' ಎಂದು ಕೇಳಿ ಇವುಗಳನ್ನು ಶಿಕ್ಷಾರ್ಹ ಅಪರಾಧಗಳನ್ನಾಗಿ ಘೋಷಿಸುವ ಮಸೂದೆಯ ಅಂಶಗಳನ್ನು ವಿರೋಧಿಸಿದ್ದರು. ಇದನ್ನು, ಲೈಂಗಿಕ ಅತ್ಯಾಚಾರ ತಡೆಯುವ ರಾಷ್ಟ್ರದ ದೃಢ ಸಂಕಲ್ಪದ ಪ್ರತೀಕವಾಗಿ ತ್ವರಿತ ಗತಿಯಲ್ಲಿ ರೂಪಿಸಲಾಗಿದೆಯೆಂದು ಹೇಳಲಾದ ಮಹಿಳಾ ದೌರ್ಜನ್ಯ ತಡೆ ಮಸೂದೆ ಬಗ್ಗೆ ಮೊನ್ನೆ ಇಂಗ್ಲಿಷ್ ಟಿವಿ ವಾಹಿನಿಯೊಂದರಲ್ಲಿ ಚರ್ಚೆ ನಡೆಸಿಕೊಟ್ಟ ಮಹಿಳಾ ಮಣಿಯೊಬ್ಬರು ಗಂಡು ಮೃಗತ್ವವೆಂದು ಕರೆದು ಚರ್ಚೆಯನ್ನು ಕಟ್ಟತೊಡಗಿದರು. ಇದು ನಮಗೆ ತಗುಲಿರುವ ಕಾಯಿಲೆ ಎಷ್ಟು ಆಳವಾದದ್ದು, ವಿಕ್ಷಿಪ್ತವಾದದ್ದು ಎಂಬುದನ್ನು ಸೂಚಿಸುವಂತಿದೆ.

ನಿಜ, ಪುರುಷತ್ವ ಎನ್ನುವುದು ಹೆಚ್ಚು ಸ್ಥೂಲವೂ, ರೂಕ್ಷವೂ, ಆಕ್ರಮಣಕಾರಿಯೂ ಆಗುತ್ತಾ ತನ್ನ ವಿವೇಕ-ಸೂಕ್ಷ್ಮತೆಗಳನ್ನು ಕಳೆದುಕೊಳ್ಳುತ್ತಿದೆ. ಆದರೆ ಅದಕ್ಕೆ ಕಾರಣ ಬರೀ ಪುರುಷರಲ್ಲ. ಅದು ಸಾಧ್ಯವೂ ಇಲ್ಲ! ಏಕೆಂದರೆ ಅದು ಕೇವಲ ಜೈವಿಕ ವಿದ್ಯಮಾನವಾಗಿರದೆ, ಒಂದು ಸಾಮಾಜಿಕ-ರಾಜಕೀಯ ವಿದ್ಯಮಾನವೂ ಆಗಿರುತ್ತದೆ.

ಇಡೀ ಸಮಾಜ ಅದರೊಳಗಿನ ಹೆಂಗಸರೂ ಸೇರಿದಂತೆ ಕ್ರಮೇಣ ತನ್ನ ಹೆಣ್ಣು ಗುಣವನ್ನು ಕಳೆದುಕೊಂಡು ಹೆಚ್ಚೆಚ್ಚು ಗಂಡಾಗುತ್ತಿರುವುದರ ಸೂಚನೆ ಇದಷ್ಟೆ. ಅಂದರೆ ಹೆಣ್ಣೂ ಗಂಡಾಗುತ್ತಿರುವ ಮೂಲಭೂತ ಅಸಮತೋಲನದ ದುರಂತ ಚಿತ್ರವಿದು. ಇದು ಮತ್ತೆ ಕೇವಲ ಹೆಣ್ಣಿಗೆ ಸಂಬಂಧಿಸಿದ ಸಂಗತಿಯಲ್ಲ. ಗಂಡು ಗಂಡಾಗಿದ್ದು, ಹೆಣ್ಣು ಹೆಣ್ಣಾಗಿರುವ ಪ್ರಕೃತಿ ಸಹಜ ಸಮತೋಲನದಲ್ಲಿ ನಾಗರೀಕತೆಯ ಹೆಸರಿನಲ್ಲಿ ನಡೆದಿರುವ ಹಸ್ತಕ್ಷೇಪ ಸೃಷ್ಟಿಸಿರುವ ದೊಡ್ಡ ದುರಂತವಿದು. ಈ ದುರಂತದ ಹಿಂದಿರುವ ಶಕ್ತಿಗಳು ಯಾವುವು ಎಂಬುದನ್ನು ನಾವು ಗುರುತಿಸಬೇಕಿದೆ. ಅಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ. ವಂದನಾ ಶಿವ ಅವರು ಸೂಚಿಸಿದಂತೆ, ನವ ಉದಾರೀಕರಣ ನೀತಿ ಜಾರಿಯಾಗುತ್ತಾ ಬಂದ ಕಳೆದ ಇಪ್ಪತ್ತು ವರ್ಷಗಳಲ್ಲಿ ಈ ದೇಶದಲ್ಲಿ ಹೆಣ್ಣಿನ ಮೇಲೆ ಲೈಂಗಿಕ ಅತ್ಯಾಚಾರ ಏಕೆ ಹೆಚ್ಚಿದೆ ಎಂಬುದನ್ನು ಆಳವಾಗಿ ವಿಶ್ಲೇಷಿಸಬೇಕಿದೆ. ಹಾಗೇ ಯಾರನ್ನೂ ಮುಟ್ಟದ ಏನನ್ನೂ ಗ್ರಹಿಸದೆ, ನಮ್ಮನ್ನು ದಾರಿ ತಪ್ಪಿಸುತ್ತಿರುವ ಈ ರಾಷ್ಟ್ರೀಯ ಚರ್ಚೆಗಳ ಮೂಲ ನೆಲೆಗಳನ್ನು ಪ್ರಶ್ನಿಸಬೇಕಿದೆ.

ಸಮಕಾಲೀನ

ಅಂಬೇಡ್ಕರ್ ನೆನಪಲ್ಲಿ...

ಈ ಸಂಚಿಕೆಯಲ್ಲಿ ಏಪ್ರಿಲ್ ೧೪ರಂದು ಹುಟ್ಟಿದ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ವಿಶೇಷವಾಗಿ ನೆನಪಿಸಿಕೊಳ್ಳಲಾಗುತ್ತಿದೆ. ಯುಗಪುರುಷರಾದ ಅಂಬೇಡ್ಕರ್ ಶತಮಾನಗಳ ಕಾಲ ನಾವು ಆಚರಿಸಿಕೊಂಡು ಬಂದಿದ್ದ ಜಾತಿ ಪದ್ಧತಿಯ ಹಿಂದಿದ್ದ ತತ್ವ, ನಂಬಿಕೆ, ಅದರ್ಶಗಳು ಎಷ್ಟು ಹುಸಿ, ಮೋಸ ಮತ್ತು ಕ್ರೌರ್ಯಗಳಿಂದ ಕೂಡಿದ್ದವು ಎಂಬುದನ್ನು ತಮ್ಮ ಬದುಕು ಮತ್ತು ಚಿಂತನೆಗಳ ಮೂಲಕ ಸಾರಿ ತೋರಿದವರು. ಪುಣ್ಯವಶಾತ್, ಭಾರತದ ಆಕಾಶದಲ್ಲಿ ಸ್ವಾತಂತ್ರ್ಯ ಹೋರಾಟದ ಹೊತ್ತಿಗೇ ಮೂಡಿದ ಈ ಧ್ರುವತಾರೆ ಗಾಂಧೀಯವರೊಂದಿಗೆ ಸೇರಿ ಹೊಸ ರಾಷ್ಟ್ರದ ಎರಡು ಕಣ್ಣುಗಳಲ್ಲಿ ಒಂದಾಗಿ ರಾಷ್ಟ್ರದ ಜನತೆಗೆ ಬೆಳಕು ತೋರಿದರು. ನನ್ನ ಪ್ರಕಾರ ಈ ಎರಡು ಕಣ್ಣುಗಳ ಮಧ್ಯೆ ಮೂಡಿದ ಮೂರನೆಯ (ಒಳ)ಗಣ್ಣು ಎಂದರೆ ಲೋಹಿಯಾ.

ಗಾಂಧಿ–ಅಂಬೇಡ್ಕರ್ ಮುಖಾಮುಖಿ ಅಥವಾ ಸಂವಾದ ಈಗ ಸವಕಲು ಮಾತುಗಳ ಜೊತೆಯಾಗಿ ರಾಜಕೀಯ ಹಿತಾಸಕ್ತಿಗಳ ಆಹಾರವಾಗಿಬಿಟ್ಟಿದೆ. ಹಾಗಾಗಿ ಅದನ್ನು ಇಂದಿಗೆ ಬೇಕಾದ ಹಾಗೆ ನಾವು ಪುನರ್‌ರೂಪಿಸಿಕೊಂಡು, ಪುನರ್‌ನಿರೂಪಣೆಗೆ ಒಳಪಡಿಸದಿದ್ದರೆ ಅವೆರಡೂ ಹೆಸರುಗಳನ್ನು ಹೇಳಲು ನಾವು ಅನರ್ಹರಾಗುತ್ತೇವೆ. ಅದಕ್ಕೆ ನೆರವಾಗಬಲ್ಲದ್ದು ಲೋಹಿಯಾ–ಅಂಬೇಡ್ಕರರ ಸಂಕ್ಷಿಪ್ತ; ಆದರೆ ಇಂದಿಗೂ ಅರ್ಥಪೂರ್ಣವೆನಿಸುವ ಪತ್ರ ಸಂವಾದ. ಈ ಸಂಚಿಕೆಯಲ್ಲಿ ಈ ಸಂವಾದಕ್ಕೆ ಸಾಕ್ಷಿಯಾಗಿ

ದಾಖಲಾಗಿರುವ ಪರಸ್ಪರರ ನಡುವಣ ತಲಾ ಎರಡು ಪತ್ರಗಳನ್ನೂ; ಈ ಪತ್ರ ಸಂವಾದ ನಡೆಯುತ್ತಿದ್ದುದರ ಮಧ್ಯೆಯೇ ಅಂಬೇಡ್ಕರ್ ಅನಿರೀಕ್ಷಿತವಾಗಿ ನಿಧನರಾದಾಗ ನಿರ್ದಿಷ್ಟವಾಗಿ ಅಂಬೇಡ್ಕರ್ ಬಗ್ಗೆ ಹಾಗೂ ಸಾರ್ವತ್ರಿಕವಾಗಿ ಆಗ ತಾನೇ ಒಡಮೂಡುತ್ತಿದ್ದ ದಲಿತ ರಾಜಕಾರಣದ ಮಾದರಿಗಳ ಬಗ್ಗೆ ಲೋಹಿಯಾ ತಮ್ಮ ಕಿರಿಯ ಗೆಳೆಯ ಮಧು ಲಿಮಯೆಗೆ ಬರೆದ ಪತ್ರವನ್ನು ಇಲ್ಲಿ ನೀಡುತ್ತಿದ್ದೇವೆ.

ಅದಕ್ಕೆ ಮೊದಲು ಅಂಬೇಡ್ಕರ್ ಮೊಮ್ಮಗ ಪ್ರಕಾಶ್ ಅಂಬೇಡ್ಕರ್‌ರ ಇತ್ತೀಚಿನ ಒಂದು ವಿವಾದಾತ್ಮಕ ಹೇಳಿಕೆಯ ಬಗ್ಗೆ ಅಂಬೇಡ್ಕರ್ ಅಧ್ಯಯನ ಕ್ಷೇತ್ರದಲ್ಲಿ ಇಂದು ಪ್ರತಿಷ್ಠಿತ ಹೆಸರಾದ ಡಾ. ಆನಂದ ತೇಲ್ತುಂಬ್ಡೆ ಅವರು ನೀಡಿರುವ ಒಂದು ವಿಶಿಷ್ಟ ಹಾಗೂ ಚರ್ಚಾರ್ಹವೂ ಅನ್ನಿಸುವ ವಿಶ್ಲೇಷಣೆಯನ್ನು ಅಂಬೇಡ್ಕರ್ ರಾಜಕಾರಣ ಪಡೆಯುತ್ತಿರುವ ಹೊಸ ಚಲನಶೀಲತೆಯ ದೃಷ್ಟಿಯಿಂದ ಗಮನಿಸಬಹುದಾಗಿದೆ.–**ಸಂ.**

ಮೇ, ೨೦೧೩

ಆಯ್ಕೆಯ ಕಷ್ಟಗಳು

ಪ್ರಿಯ ಓದುಗರೇ,

ರಾಜ್ಯ ವಿಧಾನಸಭಾ ಚುನಾವಣೆಗಳು ಮತ್ತೆ ಬಂದಿವೆ. ಕಳೆದ ಐದು ವರ್ಷಗಳಲ್ಲಿ ರಾಜ್ಯ ಕಂಡ ರಾಜಕೀಯ ಗೊಂದಲಗಳು, ಅದಕ್ಕೆ ಕಾರಣವಾದ ರಾಜಕೀಯ ಅನಾಚಾರ ರಾಜ್ಯ ರಾಜಕಾರಣದ ಇತಿಹಾಸದಲ್ಲೇ ಕೇಳರಿಯದಂತಹದು. ಇದರ ಹಿಂದೆ ಇದ್ದುದು ಕಳೆದ ಚುನಾವಣೆಗಳಲ್ಲಿ ಯಾವುದೇ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆಯದೇ ಹೋದದ್ದು. ಹಾಗಾಗಿ ಈ ಬಾರಿ ಜನತೆ ಯಾವುದಾದರೂ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಲು ನಿರ್ಧರಿಸಿದರೆ ಆಶ್ಚರ್ಯವಿಲ್ಲ. ಆದರೆ ಇಂದಿನ ಚುನಾವಣಾಪೂರ್ವ ಪರಿಸ್ಥಿತಿಯನ್ನು ಅವಲೋಕಿಸಿದರೆ, ಅದು ಕಷ್ಟಸಾಧ್ಯ ಮಾತ್ರ ಎನ್ನಿಸುತ್ತಿದೆ. ಬಹಳ ಕಡೆ ಬಹು ತುರುಸಿನ ಚತುಷ್ಕೋನ ಸ್ಪರ್ಧೆ ಇದ್ದಂತಿದೆ. ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶಗಳನ್ನು ನೋಡಿದರೆ ಮತ್ತು ಮೇಲ್ಮೈ ಮಟ್ಟದ ಸಾರ್ವಜನಿಕ ಅಭಿಪ್ರಾಯವನ್ನು ಗಮನಿಸಿದರೆ, ಕಾಂಗ್ರೆಸ್ ಪಕ್ಷಕ್ಕೆ ಅನುಕೂಲವಿದ್ದಂತಿದೆ. ಆದರೆ ಆಳದಲ್ಲಿ, ಸ್ಥಳೀಯ ಮಟ್ಟದಲ್ಲಿ ಮತದಾನದ ಹಿಂದಿನ ದಿನದವರೆಗೆ ನಡೆಯುವ ಬೆಳವಣಿಗೆಗಳು ಮತದಾರರ ಒಲವುಗಳಲ್ಲಿ ಉಂಟು ಮಾಡುವ ಬದಲಾವಣೆಗಳು ಯಾರ ಲೆಕ್ಕಾಚಾರಗಳಿಗೂ ನಿಲುಕದಂತಹವು. ಹಾಗಾಗಿ ಈ ದೇಶದಲ್ಲಿ ಫಲಿತಾಂಶದ ಬಗೆಗಿನ ಎಂತಹ ವೈಜ್ಞಾನಿಕ ಸಮೀಕ್ಷೆಗಳೂ ಸುಳ್ಳಾಗಬಲ್ಲವು. ಹಾಗೆ ಆಗಿದೆ ಕೂಡ!

ಅದೇನೇ ಇರಲಿ, ಮೊನ್ನೆ ನನ್ನ ಗೆಳೆಯರೊಬ್ಬರು (ಅವರು ರಾಜ್ಯ ಸರ್ಕಾರದ ನಿವೃತ್ತ ಅಧಿಕಾರಿಯೂ ಹೌದು) ಬೆಂಗಳೂರಿನಿಂದ ದೂರವಾಣಿ ಕರೆ ಮಾಡಿ, ಅಲ್ಲಿ ಅನಂತಮೂರ್ತಿ, ಕಾರ್ನಾಡ್, ಮರುಳಸಿದ್ಧಪ್ಪ, ಎಸ್.ಜಿ. ಸಿದ್ಧರಾಮಯ್ಯ, ಗೋವಿಂದರಾವ್ ಮುಂತಾದ ರಾಜ್ಯದ ಲೇಖಕ-ಬುದ್ಧಿಜೀವಿಗಳ ಸಭೆ ನಡೆದಿದೆಯೆಂದೂ, ಅವರೆಲ್ಲರೂ ಕಾಂಗ್ರೆಸ್ಸನ್ನು ಬೆಂಬಲಿಸಿ ಕರಪತ್ರವೊಂದನ್ನು ಹೊರಡಿಸುತ್ತಿರುವುದಾಗಿಯೂ ಅದಕ್ಕೆ

ನನ್ನ ಹೆಸರನ್ನೂ ಸೇರಿಸಲು ನನ್ನ ಒಪ್ಪಿಗೆ ಕೇಳಿದರು. ಇಂದಿನ ಪರಿಸ್ಥಿತಿಯಲ್ಲಿ ನಾನು ಹಾಗೆ ಯಾವುದೇ ಒಂದು ಪಕ್ಷಕ್ಕೆ ಸಾರಾ ಸಗಟಾಗಿ ಬೆಂಬಲ ಘೋಷಿಸಲು ಸಾಧ್ಯವಿಲ್ಲ ಎಂದೆ.

ನಿಜ, ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್, ನಿಜವಾದ ಅರ್ಹತೆಯಿಂದಲ್ಲದಿದ್ದರೂ, ಅನಿವಾರ್ಯ ಆಯ್ಕೆಯಾಗಿ ಉತ್ತಮ ಎನಿಸುತ್ತದೆ. ಏಕೆಂದರೆ ಅದು ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿಯಾಗುವ ಸಾಧ್ಯತೆ ಇರುವ ಸಿದ್ಧರಾಮಯ್ಯ, ಪರಮೇಶ್ವರ್ ಮತ್ತು ಖರ್ಗೆ ಇವರಲ್ಲಿ ಪ್ರತಿಯೊಬ್ಬರೂ ಇತರ ಪಕ್ಷಗಳ ಮುಖ್ಯಮಂತ್ರಿ ಅಭ್ಯರ್ಥಿಗಳಿಗಿಂತ ಉತ್ತಮ ಆಡಳಿತ ನೀಡಬಲ್ಲ ದಕ್ಷತೆ ಮತ್ತು ಅನುಭವ ಉಳ್ಳವರು. ಆದರೆ ಈ ಪಕ್ಷವನ್ನು ಸಾರಾಸಗಟಾಗಿ ಬೆಂಬಲಿಸಲು ಇದಷ್ಟೇ ಕಾರಣವಾಗಲಾರದು. ಈ ಪಕ್ಷ ಸಾಕಷ್ಟು ಸಂಖ್ಯೆಯಲ್ಲಿ ಅಯೋಗ್ಯರಿಗೆ, ಭ್ರಷ್ಟರಿಗೆ, ಅಕ್ರಮ ಆಸ್ತಿದಾರರಿಗೆ, ಕುಟುಂಬ ರಾಜಕಾರಣದ ಯಜಮಾನರುಗಳಿಗೆ ಟಿಕೆಟ್ ನೀಡುವ ಮೂಲಕ ತಾನು ಸರ್ಕಾರ ರಚಿಸಿದರೂ ಅದು ಸ್ವಚ್ಛ, ದಕ್ಷ, ಜನಹಿತ ಆಡಳಿತ ನೀಡಬಹುದಾದ ದಾರಿಯಲ್ಲಿ ತಾನೇ ಅಡೆತಡೆಗಳನ್ನು ನಿರ್ಮಿಸಿಕೊಂಡಿದೆ. ಈ ಪಕ್ಷ ಕಳೆದ ಚುನಾವಣೆಗಳ ಸೋಲಿನ ಇತಿಹಾಸದಿಂದ ಯಾವುದೇ ಪಾಠ ಕಲಿತಂತಿಲ್ಲ. ಜನತೆಗೆ ಈ ಬಾರಿ ತಮ್ಮ ಪಕ್ಷ ಅನಿವಾರ್ಯ ಆಯ್ಕೆಯಾಗಿದೆ ಎಂದು ಭಾವಿಸಿ ಜನತೆಯ ರಾಜಕೀಯ ಅಸಹಾಯಕತೆಯ ಲಾಭ ಪಡೆಯಲು ಅದು ಹೊರಟಂತಿದೆ. ಹಾಗಾಗಿ ಈ ಪಕ್ಷ ಪ್ರಜ್ಞಾವಂತ ಜನತೆಯ ಸಾರಾಸಗಟು ಬೆಂಬಲಕ್ಕೆ ಅರ್ಹವೇನೂ ಅಲ್ಲ.

ಅಧಿಕಾರ ಪಡೆಯಲು ಕಾಂಗ್ರೆಸ್ ಇದ್ದುದರಲ್ಲಿ ಆಯ್ಕೆಗೆ ಹೆಚ್ಚು ಅರ್ಹ (ರಾಜ್ಯದಲ್ಲಿ ಮಾತ್ರ; ಕೇಂದ್ರದಲ್ಲಿ ಅಲ್ಲ.) ಎಂದು ಹೇಳಿಯೂ ಈ ಮೇಲಿನ ಮಾತುಗಳನ್ನಾಡುತ್ತಿರುವೆ. ಹಾಗೆ ನೋಡಿದರೆ ಇತರ–ಬಿಜೆಪಿ, ಜೆಡಿಎಸ್, ಕೆಜೆಪಿ–ಪಕ್ಷಗಳು ಶುದ್ಧ ಅಯೋಗ್ಯರಿಗೆ, ಭ್ರಷ್ಟರಿಗೆ ಟಿಕೆಟ್ ಕೊಟ್ಟಿಲ್ಲವೆಂದಲ್ಲ. ಈ ವಿಷಯದಲ್ಲಿ ಜೆಡಿಎಸ್ ಅತ್ಯಂತ ನಿರ್ಲಜ್ಜ ಪಕ್ಷವಾಗಿ ಹೊರಹೊಮ್ಮಿದೆ. ಮೊದಲಿಂದಲೂ ತತ್ವಹೀನ ಸಮಯಸಾಧಕತೆ, ಜಾತೀಯತೆ ಮತ್ತು ಕುಟುಂಬ ರಾಜಕಾರಣ ಮಾಡಿಕೊಂಡು ಬರುತ್ತಿರುವ ಈ ಪಕ್ಷ ಈ ಚುನಾವಣೆಯ ಹೊತ್ತಿಗೆ ಅಕ್ಷರಶಃ ದೊಡ್ಡ ತಿಪ್ಪೆಗುಂಡಿಯಂತಾಗಿದೆ. ಎಲ್ಲೆಲ್ಲಿಂದಲೋ ಕೋಟಿ ಕೋಟಿ ಹಣ ಹೊಡೆದು ಬಂದವರನ್ನು, ಯಾವುದಾವುದೋ ಪಕ್ಷದಿಂದ ಟಿಕೆಟ್ ಸಿಗದೆ ಹತಾಶರಾಗಿ ಬಂದ ದುಷ್ಟ–ಭ್ರಷ್ಟರಿಗೆಲ್ಲ ಇಲ್ಲಿ ಯಾವುದೇ ಎಗ್ಗಿಲ್ಲದೆ ಟಿಕೆಟ್ ನೀಡಲಾಗಿದೆ. ಈ ಪಕ್ಷವೇನಾದರೂ ಅಧಿಕಾರದಲ್ಲಿ ಪಾಲುದಾರನಾದರೆ (ಏಕಾಂಗಿಯಾಗಂತೂ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ.) ಜನತೆ ಎಂತಹ ಆಡಳಿತವನ್ನು ನಿರೀಕ್ಷಿಸಬಹುದೆಂದು ಯೋಚಿಸಿದರೇ ಆತಂಕವಾಗುತ್ತದೆ. ಈ ಪಕ್ಷಕ್ಕೆ ಒಂದು ಪ್ರಮುಖ ಜಾತಿಯ ಬಹು ದೊಡ್ಡ ಭಾಗ ಬೆಂಬಲವಾಗಿ ನಿಂತಿರುವುದು ಮತ್ತು ರಾಜ್ಯದ ಕೆಲವು ಹಿರಿಯ, ಮರ್ಯಾದಸ್ಥರೆನಿಸಿದ ರಾಜಕಾರಣಿಗಳು ಈ ಪಕ್ಷದಲ್ಲಿರುವುದು ಆಶ್ಚರ್ಯಕರವಷ್ಟೇ ಅಲ್ಲ, ದುರಂತವೂ ಹೌದು.

ಇದೇ ಮಾತುಗಳನ್ನು ಸರಿಸುಮಾರಾಗಿ ಹೊಸ ಕೆಜೆಪಿ ಬಗ್ಗೆಯೂ ಹೇಳಬಹುದು. ಯಡಿಯೂರಪ್ಪನವರ 'ಅಭಿವೃದ್ಧಿ' ಮಂತ್ರವನ್ನೇ ತನ್ನ ತತ್ವ ಪ್ರಣಾಲಿ ಮಾಡಿಕೊಂಡಿರುವ ಈ ಪಕ್ಷಕ್ಕೆ ಯಡಿಯೂರಪ್ಪನವರ ವೈಯುಕ್ತಿಕ ಅಭಿಮಾನಿಗಳು ಮತ್ತು 'ಫಲಾನುಭವಿ'ಗಳಲ್ಲದೆ, ಇತರೆ ಪಕ್ಷಗಳಲ್ಲಿ ಆಯಕಟ್ಟಿನ ಜಾಗ ಗಿಟ್ಟಿಸಿಕೊಳ್ಳಲು ವಿಫಲರಾದ ಎಲ್ಲ ರೀತಿಯ ಪಾಪಿ-ಪರದೇಶಿಗಳೂ ನುಗ್ಗಿ ಬಂದಿದ್ದಾರೆ. ಮತ್ತೆ ಜೆಡಿಎಸ್‌ನಂತೆ ಒಂದು ನಿರ್ದಿಷ್ಟ ಜಾತಿಯ ಗಣನೀಯ ಭಾಗದ ಬೆಂಬಲ ಮತ್ತು ಯಡಿಯೂರಪ್ಪನವರು ಸಾಧಿಸಿದ 'ಅಭಿವೃದ್ಧಿ'ಯ ಹಿಂದೆ ಜಮಾ ಆಗಿರುವ ಹಣದ ರಾಶಿಯನ್ನು ನಂಬಿ ಇವರೆಲ್ಲ ಇಲ್ಲಿ ಜಮಾಯಿಸಿದ್ದಾರೆ. ಇವರಲ್ಲಿ ನಮ್ಮ ಕೆಲವು 'ಸೋಶಲಿಸ್ಟ್' ಖಯಾಲಿಯ ಲೇಖಕರೂ, ರಾಜಕಾರಣಿಗಳೂ ಯಡಿಯೂರಪ್ಪನವರ ಬಿಜೆಪಿ ವಿರೋಧಿ ನಿಲುವನ್ನೂ, ಪ್ರಾದೇಶಿಕ ಪಕ್ಷದ ಕಲ್ಪನೆಯನ್ನೂ ಬೆಂಬಲಿಸಿ ಅಲ್ಲಿಗೆ ಹೋಗಿರುವುದಾಗಿ ಹೇಳಿಕೊಳ್ಳುತ್ತಿದ್ದಾರೆ. ಇವರ 'ಸೋಶಲಿಸಂ'ಗೆ ಇವುಗಳ ಹೊರತಾಗಿ ಇನ್ನಾವ ಕಾಳಜಿಗಳೂ ಇಲ್ಲದಷ್ಟು ತತ್ವದರಿದ್ರವಾಗಿದ್ದರೆ ಅವರು ಅಲ್ಲಿಗೆ ಹೋಗಿದ್ದೇ ಒಳ್ಳೆಯದು ಎಂದು ಹೇಳಬೇಕಾಗುತ್ತದೆ. ಹಾಗೇ ಯಡಿಯೂರಪ್ಪ ಎಂದೂ, ಹೇಳಿದ ಯಾವ ತತ್ವಕ್ಕೂ, ಆಡಿದ ಯಾವ ಮಾತಿಗೂ ಬದ್ಧರಾದವರಲ್ಲ, ಅವರು ಮುಂದೊಂದು ದಿನ ಬಿಜೆಪಿಗೆ ಮರಳುವ ಎಲ್ಲ ಸಾಧ್ಯತೆಗಳಿವೆ ಎಂಬ ಸಾಮಾನ್ಯ ವಿವೇಕವೂ ಇವರಲ್ಲಿ ಕಾಣೆಯಾಗಿದೆ ಎಂದರೆ ಇವರ ರಾಜಕೀಯ ಆಕಾಂಕ್ಷೆ ಯಾವ ಹತಾಶ ಹಂತ ತಲುಪಿರಬಹುದು ಎಂದು ಯೋಚಿಸಿ ಇವರು ಮಾಡಬಹುದಾದ ರಾಜಕಾರಣದ ಬಗ್ಗೆ ಭಯವಾಗುತ್ತದೆ.

ಇನ್ನು ಬಿಜೆಪಿ ಈಗ ರಾಜ್ಯದಲ್ಲಿ ಎಲ್ಲ ರಾಜಕೀಯ ನಂಬಿಕೆ ಕಳೆದುಕೊಂಡು ಅನಾಥವಾಗಿರುವ ಪಕ್ಷ. ಸದ್ಯಕ್ಕೆ ಅಧಿಕಾರದಲ್ಲಿದ್ದೂ ಈ ಚುನಾವಣೆಗಳಲ್ಲಿ ಹಲವು ಕ್ಷೇತ್ರಗಳಲ್ಲಿ ಅದಕ್ಕೆ ಸೂಕ್ತ ಅಭ್ಯರ್ಥಿಗಳೇ ದೊರಕದೇ ಪರದಾಡಬೇಕಾದ ಪರಿಸ್ಥಿತಿ ಬಂದಿತೆಂದರೆ, ಆ ಪಕ್ಷ ಮುಟ್ಟಿರುವ ಹೀನ ಸ್ಥಿತಿಯ ಪರಿಚಯವಾದೀತು. ಸಕಲ ಸದ್ಗುಣ ಸಂಪನ್ನತೆಯ ಸ್ವಯಂ ಘೋಷಣೆಯಲ್ಲಿ ಮೆರೆದು ಹಾಳಾದ ಈ ಪಕ್ಷಕ್ಕೆ ಇರುವ ಏಕೈಕ ಶ್ರೀರಕ್ಷೆ ಎಂದರೆ ಅದರ ಮೂಲ ನಿಷ್ಠಾವಂತ ಕಾರ್ಯಕರ್ತರ ಪಡೆ. ಅದು ತತ್ಕಾಲೀನ ಸೋಲು ಗೆಲುವುಗಳಿಂದ ವಿಚಲಿತವಾಗದೆ ದೀರ್ಘಕಾಲೀನ ದೃಷ್ಟಿಯಿಟ್ಟುಕೊಂಡು ದೃಢ ಮನಸ್ಸಿನಿಂದ ಮುನ್ನಡೆಯುವ ಪಡೆ. ಮತ್ತು ಅದು ಅಧಿಕಾರಾವಧಿಯಲ್ಲಿ ಸಂಗ್ರಹಿಸಿರುವ ಅಪಾರ ಹಣ ಹಾಗೂ ಕೆಲವು ಜಾತಿ ಮಠಗಳ ಗುಪ್ತ ಬೆಂಬಲ ಈ ಬಾರಿ ಈ ಪಕ್ಷದ ಕನಿಷ್ಠ ಮರ್ಯಾದೆಯನ್ನು ಕಾಪಾಡಬಹುದು.

ಕೊನೆಯದಾಗಿ, ಬಿಜೆಪಿಯ ಅಕ್ರಮ ಸಂತಾನವೆನಿಸಿರುವ ಬಿ.ಎಸ್.ಆರ್. ಕಾಂಗ್ರೆಸ್ ಬಗ್ಗೆ. ಏಳೆಂಟು ಕ್ಷೇತ್ರಗಳ ಹೊರತಾಗಿ ರಾಜ್ಯದಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲಂದಂತಹ ಪಕ್ಷವಿದು. ಇದರ ಬಗ್ಗೆ ಹೆಚ್ಚು ಬರೆದಷ್ಟೂ ನನ್ನ ನಿಮ್ಮ ಇಬ್ಬರ ಮನಸ್ಸೂ ಹಾಳಾಗುವ ಸಂಭವವಿದೆ.

ಹಾಗಾಗಿ, ಈ ಎಲ್ಲ ಹಿನ್ನೆಲೆಯಲ್ಲಿ ಕಾಂಗ್ರೆಸ್ ಈ ಬಾರಿ ಇದ್ದುದರಲ್ಲಿ ಉತ್ತಮ ಆಯ್ಕೆ ಆಗಬಹುದು ಎಂದರೂ, ಅದಕ್ಕೆ ಸಗಟು ಬೆಂಬಲ ನೀಡಬಾರದೆಂದೂ ಹೇಳಲು

ಇನ್ನೊಂದು ಕಾರಣವಿದೆ. ಅದೆಂದರೆ, ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ಸಿನವರಿಗಿಂತ ಒಳ್ಳೆಯ ಅಭ್ಯರ್ಥಿಗಳಿದ್ದಾರೆ. ಅವರಿಗೆ ಅನ್ಯಾಯವಾಗಬಾರದು. ಅವರು ಶಾಸನಸಭೆಗೆ ಆರಿಸಿ ಬಂದು ಜನಹಿತ ಆಡಳಿತವನ್ನು ಖಚಿತಪಡಿಸಬೇಕಾಗಿದೆ. ಇನ್ನು ಸರ್ವೋದಯ ಕರ್ನಾಟಕ, ರೈತ ಸಂಘ, ಲೋಕಸತ್ತಾ ಪಕ್ಷಗಳ ಅಭ್ಯರ್ಥಿಗಳು ಎಂದೂ ಇತರ ಪಕ್ಷಗಳ ಅಭ್ಯರ್ಥಿಗಳಿಗಿಂತ ಖಂಡಿತ ಹೆಚ್ಚು ವಿಶ್ವಾಸಾರ್ಹರು. ಹಾಗಾಗಿ ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಬಾರಿ ಬಹು ಎಚ್ಚರಿಕೆಯಿಂದ ಮತದಾನ ಮಾಡುವ ಹೊಣೆ ನಮ್ಮದಾಗಿದೆ.

<u>ಸಮಕಾಲೀನ</u>

ರಾಷ್ಟ್ರ ಮರೆತೇಹೋದ ಸಿಖ್ ಹತ್ಯಾಕಾಂಡ...

೧೯೮೪ರ ಸಿಖ್ ಹತ್ಯಾಕಾಂಡದ ವಿಚಾರಣೆಗೆ ಮರುಜೀವ ಬಂದಿದೆ. ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ವಿರುದ್ಧ ಮರು ವಿಚಾರಣೆಗೆ ಕೆಳ ನ್ಯಾಯಾಲಯವೊಂದು ಈಗ ಆದೇಶಿಸಿದೆ. ಈ ದೇಶ ಆತ್ಮಸಾಕ್ಷಿಯೆಂಬುದನ್ನು ಕಳೆದುಕೊಂಡಿದೆ ಎಂಬುದನ್ನು ಪದೇ ಪದೇ ನೆನಪಿಸುವ ಹತ್ಯಾಕಾಂಡವಿದು. ೩೦ ವರ್ಷಗಳ ಹಿಂದೆ ದೆಹಲಿಯ ಬೀದಿ-ಮನೆಗಳಲ್ಲಿ ಸಾವಿರಾರು ಜನ ಸಿಖ್ಖರ ಬರ್ಬರ ಕೊಲೆಗೆ ಕಾರಣವಾದ-೨೦೦೨ರ ಗುಜರಾತ್ ಹತ್ಯಾಕಾಂಡದಂತೆಯೇ-ಈ ವ್ಯವಸ್ಥಿತ ಘೋರ ಅಪರಾಧವನ್ನು ರಾಷ್ಟ್ರ ಮರೆತೇಬಿಟ್ಟಿದೆ.

ಈ ಸಂದರ್ಭದಲ್ಲಿಯೇ ನನಗೆ ನಮ್ಮ ಉಗ್ರ ಎಡಪಂಥೀಯ ಗೆಳೆಯರ ಕೋಮುವಾದ ವಿರೋಧಿ ಅಥವಾ ಕೋಮು ಸೌಹಾರ್ದ ರಾಜಕಾರಣದ ಉದ್ದೇಶಗಳ ಬಗ್ಗೆ ಅನುಮಾನ ಶುರುವಾಗುವುದು. ಸಂಘ ಪರಿವಾರದ ಪ್ರಭಾವ ಬೆಳೆದರೆ ತಮ್ಮ ರಾಜಕಾರಣದ ಮೂಲೋತ್ಪಾಟನೆಯಾದೀತು ಎಂಬ ಭಯವೇ ಇವರ ಕೋಮುವಾದ ವಿರೋಧಿ ಕಾರ್ಯಕ್ರಮದ ಉದ್ದೇಶವಾಗಿರಬಹುದೇ ಹೊರತು ಅಲ್ಪ ಸಂಖ್ಯಾತರನ್ನು ಕುರಿತ ಕಾಳಜಿಯಾಗಲೀ, ಸಂವಿಧಾನದ ಮೂಲ ಸೆಕ್ಯುಲರ್ ಲಕ್ಷಣವನ್ನು ಕಾಪಾಡುವುದಾಗಲೀ ಅಲ್ಲವೇನೋ ಎಂದು ಅನಿಸತೊಡಗುವುದು. ಗುಜರಾತ್ ಹತ್ಯಾಕಾಂಡದ ಬಗ್ಗೆ ಸಕಾರಣವಾಗಿಯೇ ಪದೇ ಪದೇ ಉಗ್ರವಾಗಿ ಮಾತನಾಡುವ ಇವರು ಸಿಖ್ ಹತ್ಯಾಕಾಂಡಕ್ಕೆ ಬಲಿಯಾದ ಕುಟುಂಬಗಳು ನ್ಯಾಯದಾನದಿಂದ ವಂಚಿತವಾಗಿರುವುದನ್ನು ಏಕೆ ಅಷ್ಟೇ ಉಗ್ರವಾಗಿ ಪ್ರಶ್ನಿಸುತ್ತಿಲ್ಲ?

ಗುಜರಾತ್ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ ಹಲವು ಹಂತದ ವಿಚಾರಣೆಗಳು ನಡೆಯುತ್ತಿದ್ದು, ಈಗಾಗಲೇ ನೂರಾರು ಜನ ವಿವಿಧ ಅವಧಿಗಳ ಸೆರೆಮನೆ ವಾಸದ

ಶಿಕ್ಷೆಗೆ ಒಳಗಾಗಿದ್ದಾರೆ. ಆದರೆ ಸಿಖ್ ಹತ್ಯಾಕಾಂಡದ ಮೂಲ ಹೊಣೆಗಾರರನ್ನು ಹುಡುಕಿ ಶಿಕ್ಷೆಗೆ ಗುರಿ ಮಾಡುವ ವಿಚಾರಣೆಗಳನ್ನು, ಕಾಂಗ್ರೆಸ್ ಸರ್ಕಾರ ಏಕೆ ಪದೇ ಪದೇ ಸ್ಥಗಿತಗೊಳಿಸುತ್ತಾ ಸಾಕ್ಷ್ಯ ನಾಶಕ್ಕೆ ಕಾರಣವಾಗುತ್ತಿದೆ? ಆದರೆ ಇದರಿಂದ ಸಂತ್ರಸ್ತ ಸಿಖ್ ಕುಟುಂಬಗಳ ಛಲ ಮಾತ್ರ ಕುಂದಿಲ್ಲ. ಅವರಿಗೆ ಶುಭವಾಗಲಿ!

ಅರೇಬಿಯಾದ ಸಕಲ ಪರಿಮಳಗಳಲ್ಲಿ ಮಿಂದು ಬಂದರೂ......

ಗುಜರಾತ್ 'ಅಭಿವೃದ್ಧಿ'ಯ ವಿಷಯದಲ್ಲಿ ದಾಪುಗಾಲಿಟ್ಟು ಮುನ್ನಡೆಯುತ್ತಿದ್ದು ಅಲ್ಲಿ ಸುಖ-ಸಂಪತ್ತುಗಳ ಹಾಲಿನ ಹೊಳೆಯೇ ಹರಿಯುತ್ತಿದೆ ಎಂದು ಬಿಜೆಪಿ ಢಾಣಾ ಡಂಗೂರ ಹೊಡೆಯುತ್ತಾ ಆ ರಾಜ್ಯದ ಮುಖ್ಯಮಂತ್ರಿ ನರೇಂದ್ರ ಮೋದಿಯವರನ್ನು ರಾಷ್ಟ್ರದ ಮುಂದಿನ ಅತ್ಯುತ್ತಮ ಪ್ರಧಾನಮಂತ್ರಿ ಅಭ್ಯರ್ಥಿ ಎಂದು ಪ್ರಸ್ತುತಪಡಿಸುವ ಪ್ರಯತ್ನಗಳನ್ನು ಮಾಡುತ್ತಿದೆ. ಇದಕ್ಕೆ ಬಿಜೆಪಿಯೊಳಗೇ ವಿರೋಧ ಹೊಗೆಯಾಡುತ್ತಿದೆಯಾದರೂ, ನರೇಂದ್ರ ಮೋದಿ ಅಭ್ಯರ್ಥಿತನನವನ್ನು ನೇರವಾಗಿ, ಬಹಿರಂಗವಾಗಿ ಮತ್ತು ತಾತ್ವಿಕ ನೆಲೆಯಲ್ಲಿ ವಿರೋಧಿಸುತ್ತಿರುವ ದಿಟ್ಟ ಧ್ವನಿಯೆಂದರೆ, ಜೆಡಿ(ಯು) ಪಕ್ಷದ್ದು. ಇದು ಮಾಜಿ ಸಮಾಜವಾದಿಗಳ ಪಕ್ಷವಾಗಿದ್ದು, ಅದರ ನಾಯಕರೂ ಮತ್ತು ಬಿಹಾರದ ಮುಖ್ಯಮಂತ್ರಿಯೂ ಆಗಿರುವ ನಿತೀಶ್ ಕುಮಾರ್, ಪ್ರಧಾನ ಮಂತ್ರಿ ಹುದ್ದೆ ರಾಷ್ಟ್ರೀಯ ಹೊಣೆಗಾರಿಕೆಯ ಹುದ್ದೆಯಾಗಿದ್ದು, ಅದಕ್ಕೆ ಅಭ್ಯರ್ಥಿಯಾಗಲು ರಾಷ್ಟ್ರದ ಸಕಲ ಜನ ಸಮುದಾಯಗಳಿಗೆ ಒಪ್ಪಿಗೆಯಾಗುವ ಅರ್ಹತೆ ಪಡೆದಿರಬೇಕೆಂದೂ, ಕೋಮು ಹತ್ಯಾಕಾಂಡವೊಂದರ ಕಳಂಕ ಹೊತ್ತ ವ್ಯಕ್ತಿ ಆ ಸ್ಥಾನಕ್ಕೆ ಅರ್ಹರಲ್ಲವೆಂದೂ ಮಿತ್ರ ಪಕ್ಷ ಬಿಜೆಪಿಗೆ ಎಚ್ಚರಿಕೆ ನೀಡಿದ್ದಾರೆ. ಆ ಮೂಲಕ ಮೋದಿ ರಥದ ಮುನ್ನಡೆಗೆ ದೊಡ್ಡ ತಡೆಯೊಡ್ಡಿ ರಾಷ್ಟ್ರದ ಎಲ್ಲ ಜಾತ್ಯತೀತ ಶಕ್ತಿಗಳ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಹಾಗೆ ನೋಡಿದರೆ, ನಿತೀಶ್‌ಗೆ ಮೋದಿಯವರ ಅಭ್ಯರ್ಥಿತನವನ್ನು ವಿರೋಧಿಸುವ ಎಲ್ಲ ಅರ್ಹತೆಗಳಿವೆ. ಪಾರಂಪರಿಕವಾಗಿ ರಾಷ್ಟ್ರದ ಅತ್ಯಂತ ಜಾತಿಗ್ರಸ್ತ ಮತ್ತು ಆ ಕಾರಣದಿಂದಾಗಿಯೇ ಅತಿ ಹಿಂದುಳಿದ ರಾಜ್ಯವಾಗಿದ್ದ ಬಿಹಾರವನ್ನು ಇಂದು ಅತ್ಯಂತ ಪ್ರಗತಿಪರವಾದ ರಾಜ್ಯವನ್ನಾಗಿ ಅವರು ಮುನ್ನಡೆಸಿದ್ದಾರೆ. ನಿಜ ಸಂಗತಿಯೆಂದರೆ ಅವರ ನೇತೃತ್ವದಲ್ಲಿ ಬಿಹಾರ ಪ್ರಗತಿಯಲ್ಲಿ ಈಗ ಗುಜರಾತನ್ನೂ ಹಿಂದಿಕ್ಕಿದೆ ಎಂದು ಅಧಿಕೃತ ಅಂಕಿ ಅಂಶಗಳೇ ಹೇಳುತ್ತಿವೆ. ಕಳೆದ ವರ್ಷ ಗುಜರಾತ್‌ನ ಪ್ರಗತಿ ದರ ಶೇ.೯.೩ ಆಗಿದ್ದರೆ, ಬಿಹಾರದ್ದು ಶೇ. ೧೦.೭. ಗುಜರಾತ್ ಹಸಿವಿನ ಸೂಚ್ಯಂಕ ಶ್ರೇಣಿಯಲ್ಲಿ ೧೫ನೇ ಸ್ಥಾನದಲ್ಲಿದ್ದರೆ ಬಿಹಾರ ೧೩ನೇ ಸ್ಥಾನದಲ್ಲಿದ್ದು, ಎರಡು ಸ್ಥಾನಗಳಷ್ಟು ಮೇಲಿದೆ. ಇದಕ್ಕಿಂತ ಮುಖ್ಯವಾಗಿ ಗುಜರಾತ್‌ನ ಪಾರಂಪರಿಕ ಸಂಪದಭಿವೃದ್ಧಿಯ ಪ್ರಜಾಸತ್ತಾತ್ಮಕ ಗುಣಮಟ್ಟವನ್ನು ನಾವು ನೋಡಿದರೆ ಗಾಬರಿಯಾಗುತ್ತದೆ. ಅಲ್ಲಿನ ಶೇ.

೯೦ರಷ್ಟು ದೇವಾಲಯಗಳಿಗೆ ಅಸ್ಪೃಶ್ಯರಿಗಿನ್ನೂ ಪ್ರವೇಶಾವಕಾಶ ಸಾಧ್ಯವಾಗಿಲ್ಲ. ಅ ರಾಜ್ಯದ ಶೇ. ೬೬ ಹಳ್ಳಿಗಳಲ್ಲಿ ಅಸ್ಪೃಶ್ಯತೆಯ ಬಹಿರಂಗ ಆಚರಣೆ ಜಾರಿಯಲ್ಲಿದೆ. ಶೇ. ೫೫ರಷ್ಟು ಶಾಲೆಗಳಲ್ಲಿ ಅಸ್ಪೃಶ್ಯ ಮಕ್ಕಳನ್ನು ಪ್ರತ್ಯೇಕ ಕೂರಿಸಿ ಮಧ್ಯಾಹ್ನದ ಊಟ ಕೊಡುವರು. ಇದು ಮೋದಿಯವರ 'ಅಭಿವೃದ್ಧಿ'ಯ ಇನ್ನೊಂದು ಮುಖ!

ನಿತೀಶ್ ಕುಮಾರ್ ಮತ್ತು ಅವರ ಸಮಾಜವಾದಿ ಗೆಳೆಯರನ್ನು ಬಿಜೆಪಿಯೊಂದಿಗಿನ ಮೈತ್ರಿಗಾಗಿ ದೂಷಿಸುವ 'ಪ್ರಗತಿಪರ'ರಿದ್ದಾರೆ. ಆದರೆ ನಿತೀಶರನ್ನು ಈ ಮೈತ್ರಿಗೆ ತಳ್ಳಿದ ರಾಜಕೀಯ ಪರಿಸ್ಥಿತಿಗಳನ್ನೂ ನಾವು ಅರ್ಥಮಾಡಿಕೊಳ್ಳಬೇಕಿದೆ. ಕಾಂಗ್ರೆಸ್ಸಿನ ಸಮಯಸಾಧಕ ಕೋಮುವಾದಿ ರಾಜಕಾರಣ ಮತ್ತು ಪರಮ ಭ್ರಷ್ಟತೆ ಮತ್ತು ಲಾಲೂ ಹಾಗೂ ಮುಲಾಯಂರ ಪರಮ ಜಾತೀಯತೆ, ಕುಟುಂಬ ರಾಜಕಾರಣ ಹಾಗೂ ಭ್ರಷ್ಟತೆಗಳು ಈ ಸಮಾಜವಾದಿಗಳನ್ನು ಬಿಜೆಪಿಯ ಕೋಮುವಾದವನ್ನು ಹತೋಟಿಯಲ್ಲಿಟ್ಟುಕೊಂಡು ಅವರೊಂದಿಗೆ ರಾಜಕಾರಣ ಮಾಡುವುದೇ ಲೇಸೆಂಬ ತೀರ್ಮಾನಕ್ಕೆ ದೂಡಿರಬಹುದು. ಅದು ಬಿಹಾರದಲ್ಲಿ ಯಶಸ್ವಿಯಾಗಿ ಪ್ರಯೋಗವಾಗಿದ್ದು, ಇದೀಗ ರಾಷ್ಟ್ರ ಮಟ್ಟದ ಪ್ರಯೋಗಕ್ಕೆ ಪ್ರಯತ್ನಗಳು ನಡೆದಿವೆ.

ಅದೇನೇ ಇರಲಿ. ನಿರ್ಭಿಡೆ, ನಿರ್ಭೀತ ಮತ್ತು ವಸ್ತುನಿಷ್ಠ ನುಡಿಗಳಿಗೆ ಹೆಸರಾದ ಈಗ ಭಾರತದ ಪತ್ರಿಕಾ ಮಂಡಳಿಯ ಅಧ್ಯಕ್ಷರೂ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳೂ ಆದ ಮಾರ್ಕಂಡೇಯ ಕಟ್ಜು ಅವರು ನರೇಂದ್ರ ಮೋದಿಯವರ ಪ್ರಧಾನಮಂತ್ರಿ ಅಭ್ಯರ್ಥಿತನದ ಅಪಾಯಗಳ ಬಗ್ಗೆ ಬರೆದಿರುವ ಲೇಖನವೊಂದನ್ನು ಇಲ್ಲಿ ನಿಮ್ಮ ಅವಗಾಹನೆಗಾಗಿ ನೀಡುತ್ತಿದ್ದೇವೆ. ಬಿಡಿ ಅಭಿಪ್ರಾಯ ಬರೆಯಿರಿ–ಸಂ.

ಜೂನ್, ೨೦೧೩

ಸಿದ್ಧರಾಮಯ್ಯನವರಿಗೆ ಸುಸ್ವಾಗತ!

ಪ್ರಿಯ ಓದುಗರೇ,

ರಾಜ್ಯ ವಿಧಾನಸಭಾ ಚುನಾವಣೆಗಳು ಮುಗಿದಿವೆ. ಬಹುಜನರ ನಿರೀಕ್ಷೆಯಂತೆಯೇ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆದು ಕಳೆದ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ಧರಾಮಯ್ಯ ಈಗ ಮುಖ್ಯಮಂತ್ರಿಯಾಗಿ ತಮ್ಮ ಸಚಿವ ಸಂಪುಟವನ್ನೂ ರಚಿಸಿದ್ದಾಗಿದೆ. ಸಿದ್ಧರಾಮಯ್ಯನವರ ನೇತೃತ್ವದ ಈ ಸರ್ಕಾರಕ್ಕೆ ಪತ್ರಿಕೆಯ ಎಲ್ಲ ಓದುಗರ ಪರವಾಗಿ ಈ ಮೂಲಕ ಶುಭ ಹಾರೈಕೆಗಳು!

ಈ ಬಾರಿಯ ವಿಧಾನಸಭಾ ಚುನಾವಣೆ ಹಲವು ರೀತಿಯಲ್ಲಿ ವಿಶಿಷ್ಟವೆನ್ನಿಸಿದೆ. ಮುಖ್ಯವಾಗಿ, ಜನತೆ ಮನಸ್ಸು ಮಾಡಿದರೆ ಜಾತಿ, ಹಣ ಮತ್ತು ತೋಳ್ಬಲಗಳನ್ನು ಮೆಟ್ಟಿ ನಿಲ್ಲಬಹುದು ಎಂಬುದರ ಸೂಚನೆಗಳನ್ನು ಈ ಚುನಾವಣೆ ನೀಡಿದೆ. ಆ ಮೂಲಕ ಸಂಸದೀಯ ಪ್ರಜಾಪ್ರಭುತ್ವದಲ್ಲೇ ಕಳೆದು ಹೋಗುತ್ತಿದ್ದ ಜನರ ನಂಬಿಕೆ ಸ್ವಲ್ಪಮಟ್ಟಿಗಾದರೂ ಪುನರ್‌ಸ್ಥಾಪಿತವಾಗಿದೆ ಎಂದು ಹೇಳಬಹುದು. ಇಂತಹ ನಿರ್ಣಾಯಕ ಮತದಾನಕ್ಕೆ ತಕ್ಕುನಾದ ಪರಿಸ್ಥಿತಿಯನ್ನು ಬಿಜೆಪಿ ತನ್ನ ಐದು ವರ್ಷಗಳ ಭ್ರಷ್ಟ ಮತ್ತು ದುಷ್ಟ ರಾಜಕಾರಣದ ಮೂಲಕ ನಿರ್ಮಿಸಿತ್ತೆಂಬುದೂ ನಿಜವೇ. ಅದರ ಪರೋಕ್ಷ ಫಲ ಕಾಂಗ್ರೆಸ್ಸಿಗೆ ಸಿಕ್ಕಿದೆ.

ಮುಖ್ಯವಾಗಿ ಯಡಿಯೂರಪ್ಪನವರ ಸಮಯಸಾಧಕ ಮತ್ತು ವೈಯಕ್ತಿಕ ಶೈಲಿಯ ರಾಜಕಾರಣಕ್ಕೆ, ಜಾತ್ಯತೀತ ಜನತಾದಳವೆಂಬ ಅಪದ್ಧ ಹೆಸರಿನ ಅಪ್ಪ-ಮಕ್ಕಳ ಊಳಿಗಮಾನ್ಯಶಾಹಿ ರಾಜಕೀಯ ಪಕ್ಷಕ್ಕೆ ಮತ್ತು ಬಿಜೆಪಿಯ ಭಂಡ ನೈತಿಕತೆಯ ಘೋಷಣೆಗಳಿಗೆ ರಾಜ್ಯದ ಜನತೆ ನೀಡಿರುವ ಪೆಟ್ಟು ಕಾಂಗ್ರೆಸ್ ಕೂಡ ಒಮ್ಮೆ ಮುಟ್ಟಿ ನೋಡಿಕೊಳ್ಳುವಂತಹುದಾಗಿದೆ. ಏಕೆಂದರೆ ಕಾಂಗ್ರೆಸ್ಸಿಗೆ ಸಿಕ್ಕಿರುವ ಇಂದಿನ ಜಯ ಅದರ ಸ್ವಂತ ವರ್ಚಸ್ಸಿನಿಂದಲ್ಲ ಎಂಬುದು ಅದಕ್ಕೆ ಆದಷ್ಟು ಬೇಗ ಗೊತ್ತಾಗಬೇಕಿದೆ. ಜನತೆ ಬೇರೆ ಪರ್ಯಾಯವಿಲ್ಲದೆ, ಮತ್ತೊಂದು ಅವಕಾಶವನ್ನು ಅದಕ್ಕೆ ನೀಡಿದೆ ಅಷ್ಟೆ

ಈ ಬಾರಿಯ ಚುನಾವಣೆಗಳಲ್ಲಿ ಜನತೆ ಎಲ್ಲ ಜಾತಿ ಮತ್ತು ಹಣಬಲಗಳೆದುರು ಕಿಮ್ಮನೆ ರತ್ನಾಕರ, ಪ್ರಸನ್ನ ಕುಮಾರ್, ವೈ.ಎಸ್.ವಿ. ದತ್ತ, ಕೆ.ಎಸ್. ಪುಟ್ಟಣ್ಣಯ್ಯನವರಂತಹವರನ್ನು ಗೆಲ್ಲಿಸಿರುವುದೂ, ಈಶ್ವರಪ್ಪ, ಉದಾಸಿ, ಅನಿತಾ ಕುಮಾರಸ್ವಾಮಿ, ರೇಣುಕಾಚಾರ್ಯರಂತಹವರನ್ನು ಸೋಲಿಸಿರುವುದೂ ನಮ್ಮ ಪ್ರಜಾಪ್ರಭುತ್ವದ ಒಳತಿರುಳು ನಿಜವಾದ ಸತ್ವ ಗಳಿಸಿಕೊಳ್ಳುತ್ತಿರುವುದರ ಶುಭ ಸೂಚನೆಯಾಗಿದೆ. ಹಾಗೇ ಯೋಗೀಶ್ವರ, ಕೆ.ಜಿ. ಬೋಪಯ್ಯ, ಡಿ.ಕೆ.ಶಿವಕುಮಾರ್, ಅನಿಲ್ ಲಾಡ್ ಮುಂತಾದವರ ಗೆಲವೂ ಪ್ರಜಾಪ್ರಭುತ್ವದ ನೆಲ ಸಂಪೂರ್ಣ ಹದಗೊಳ್ಳಲು ಜನತೆ ಕಲಿಯಬೇಕಾದ ಪಾಠಗಳು ಇನ್ನೂ ಇವೆ ಎಂಬುದನ್ನೂ ಸೂಚಿಸುತ್ತಿದೆ.

ಹಾಗೆ ನೋಡಿದರೆ ಇದೆಲ್ಲವೂ ಸಿದ್ಧರಾಮಯ್ಯನವರು ರಾಜ್ಯದಲ್ಲಿ ಹೊಸ ರಾಜಕೀಯ ಸಂಸ್ಕೃತಿಯೊಂದನ್ನು ಬೆಳೆಸಲು ಸೂಕ್ತ ಪರಿಸ್ಥಿತಿಯನ್ನು ನಿರ್ಮಿಸಿಕೊಟ್ಟಿದೆ ಎಂದೇ ಹೇಳಬೇಕು.

ಸಿದ್ಧರಾಮಯ್ಯ ತಮ್ಮನ್ನು ತಾವು ರಾಜಕೀಯವಾಗಿ ಸಮಾಜವಾದಿ ಎಂದು ಕರೆದುಕೊಳ್ಳಬಯಸುವವರು. ಅದರಲ್ಲೂ ಲೋಹಿಯಾ ಸಮಾಜವಾದಿ ಎಂದು ಗುರುತಿಸಿಕೊಳ್ಳಲು ಅವರಿಗೆ ಹೆಚ್ಚಿನ ಹೆಮ್ಮೆ. ಇದು ಅವರನ್ನು ಮುಖ್ಯಮಂತ್ರಿಯಾಗಿಸಲು ದೆಹಲಿ ಹೈಕಮಾಂಡ್ ವಲಯದಲ್ಲಿ ಸಹಾಯ ಮಾಡಿರದಿದ್ದರೂ, ಅವರು ಕಳೆದ ಮೂವತ್ತು ವರ್ಷಗಳಲ್ಲಿ ರಾಜಕೀಯವಾಗಿ ಮೇಲೇರಲು ಮತ್ತು ಈಗ ಜನತೆ ಮತ್ತು ಶಾಸಕಾಂಗದ ಸ್ತರಗಳಲ್ಲಿ ಹೆಚ್ಚಿನ ಮಾನ್ಯತೆ ಗಳಿಸಿಕೊಳ್ಳಲು ಸಹಾಯ ಮಾಡಿರಬಹುದು. ಸಮಾಜವಾದಿ ಹಿನ್ನೆಲೆಯಿಂದ ಬಂದ ಈ ಹಿಂದಿನ ಮುಖ್ಯಮಂತ್ರಿಗಳಾದ ಎಸ್. ಬಂಗಾರಪ್ಪ ಎಸ್.ಎಂ. ಕೃಷ್ಣ ಮತ್ತು ಜೆ.ಎಚ್.ಪಟೇಲರು ಸಮಾಜವಾದಕ್ಕೆ ವಿಶೇಷ ಮರ್ಯಾದೆ ತರುವಂತಹ ಕೆಲಸವನ್ನೇನೂ ಮಾಡದಿದ್ದರೂ, ಸಿದ್ಧರಾಮಯ್ಯ ಅಂತಹ ಕೆಲಸ ಮಾಡುವರೆಂಬ ಆಸೆ ಜನತೆಯಲ್ಲಿದ್ದರೆ ಅದಕ್ಕೆ ಕಾರಣ ಅವರು ಸಮಾಜವಾದಿ ಪಕ್ಷ ರಾಜಕಾರಣದ ಹಿನ್ನೆಲೆಯಿಂದ ಬರದೆ, ಅದರ ತತ್ವ ರಾಜಕಾರಣದ ಹಿನ್ನೆಲೆಯಿಂದ ಬಂದವರು ಎಂಬುದೇ ಆಗಿದೆ.

ಸಿದ್ಧರಾಮಯ್ಯ ಕಳೆದ ಮೂವತ್ತು–ಮೂವತ್ತೈದು ವರ್ಷಗಳಿಂದ ನನಗೆ ಪರಿಚಿತರು. ನಾವು ಕೆಲವರು–ಮುಖ್ಯವಾಗಿ ಪ್ರೊ. ನಂಜುಂಡಸ್ವಾಮಿ, ಕೆ. ರಾಮದಾಸ್, ಬಿ.ಎನ್.ಶ್ರೀರಾಂ, ಟಿ.ಎನ್. ನಾಗರಾಜ್, ಪ. ಮಲ್ಲೇಶ್, ದೇವನೂರ ಮಹಾದೇವ, ನೆಲೆಮನೆ ದೇವೇಗೌಡ, ರಾಜಶೇಖರ ಕೋಟಿ, ಎಚ್. ಗೋವಿಂದಯ್ಯ, ಶಿವರಾಮು ಕಾಡನಕುಪ್ಪೆ, ವೈ. ಮಹೇಶ್ ಮುಂತಾದವರು–ಸಮಾಜವಾದಿ ಯುವಜನಾ ಸಭಾದ ಅಡಿಯಲ್ಲಿ ಮೈಸೂರಿನ ಕನ್ನೇಗೌಡನ ಕೊಪ್ಪಲಿನ ನೆಲೆಮನೆ ಪ್ರಕಾಶನದ ಬಾಡಿಗೆ ಮನೆಯಲ್ಲಿ ಆಗಾಗ್ಗೆ ಸೇರಿ ಸಮಾಜವಾದಿ ಚರ್ಚೆಗಳನ್ನು ನಡೆಸುತ್ತಿದ್ದಾಗ ಆಗ ಕಿರಿಯ ವಕೀಲರಾಗಿದ್ದ ಯುವ ಸಿದ್ಧರಾಮಯ್ಯ ಒಂದೆರಡು ಬಾರಿ ಬಂದು ಹಣುಕಿ ಹೋಗಿದ್ದು ನೆನಪಿದೆ. ಆದರೆ ನನಗೆ ವೈಯಕ್ತಿಕವಾಗಿ ಪರಿಚಯವಾದದ್ದು ೧೯೮೦ರಲ್ಲಿ ಅವರು

ಲೋಕಸಭಾ ಚುನಾವಣೆಗಳಲ್ಲಿ ಈ ಎಲ್ಲ ಸಮಾಜವಾದಿಗಳ ಬೆಂಬಲದೊಂದಿಗೇ ಲೋಕದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿದಾಗ, ಆಗ ನಾನು ಸಂಪಾದಿಸುತ್ತಿದ್ದ 'ಮಾನವ' ಪತ್ರಿಕೆಗೆ ನೂರು ರೂಪಾಯಿಗಳನ್ನು ಕೊಟ್ಟು ಜಾಹೀರಾತು ನೀಡುವ ಮೂಲಕ.

ಅಲ್ಲಿಂದಾಚೆಗೆ ಅವರನ್ನು ನಾನು ಹಲವು ಬಾರಿ ಭೇಟಿಯಾಗಿದ್ದೇನೆ. ನಾನಾಗಿ, ವೈಯಕ್ತಿಕವಾಗಿ ಅಲ್ಲ. ಸ್ನೇಹಿತರೊಂದಿಗೆ ಇಲ್ಲವೇ ಆಹ್ವಾನಿತನಾಗಿ, ಸಮಾರಂಭಗಳಲ್ಲಿ. ಅವರು ೨೦೦೪ರಲ್ಲಿ ಜೆಡಿಎಸ್‌ನಲ್ಲಿದ್ದು, ಕಾಂಗ್ರೆಸ್ಸಿನೊಂದಿಗೆ ಅವರ ಪಕ್ಷ ಸಮ್ಮಿಶ್ರ ಸರ್ಕಾರ ರಚಿಸುವ ಸಂದರ್ಭದಲ್ಲಿ ಅವರ ಮತ್ತು ನನ್ನ ಆಪ್ತ ಗೆಳೆಯರ ಸಲಹೆಯ ಮೇರೆಗೆ ನಾನು 'ನೀವು ಮುಖ್ಯಮಂತ್ರಿಯಾಗುವುದಿದ್ದರೆ ಮಾತ್ರ ಸರ್ಕಾರದಲ್ಲಿ ಭಾಗವಹಿಸಿ' ಎಂದು ಸೂಚಿಸಿದ್ದೆ. ಅವರೂ ತಮ್ಮ ನಿಲುವೂ ಅದೇ ಆಗಿದೆ ಎಂದು ಹೇಳಿದ್ದರು. ಏಕೆಂದರೆ, ಆ ಹೊತ್ತಿಗಾಗಲೇ ಸಿದ್ಧರಾಮಯ್ಯ ರಾಜಕೀಯವನ್ನು ಪ್ರವೇಶಿಸಿದ ಮತ್ತು ಅದರಲ್ಲಿ ಅವರು ಯಾವುದೇ ಹೆಚ್ಚಿನ ಸವಾಲಿಲ್ಲದೆ ಸರಸರನೆ ಬೆಳೆಯಲು ನೆರವಾದ ಅಂದಿನ ರಾಜಕಾರಣದ ಬಹುಮುಖ್ಯ ಅಂಗಶಕ್ತಿಯಾಗಿದ್ದ ಸಾಮಾಜಿಕ ನ್ಯಾಯ ರಾಜಕಾರಣ ಅವರಲ್ಲಿ ಮುಖ್ಯಮಂತ್ರಿಯ ಕನಸನ್ನು ಚಿಗುರಿಸಿತ್ತು.

ಆದರೆ ಅವರು ಆಗ ಉಪಮುಖ್ಯಮಂತ್ರಿ ಸ್ಥಾನವನ್ನು ಒಪ್ಪಿಕೊಳ್ಳಬೇಕಾಗಿ ಬಂದು, ನಂತರ ಪಡಬಾರದ ಪಾಡುಪಟ್ಟು, ಕೊನೆಗೆ ಪಕ್ಷ ತೊರೆಯಬೇಕಾಗಿ ಬಂತು. ಆಗಲೂ ಕೂಡ ನಾವು ಕೆಲವು ಗೆಳೆಯರು ಅವರಿಗೆ ತಾವು ನಂಬಿರುವ ಸಮಾಜವಾದಿ ತತ್ವದ ಆಧಾರದ ಮೇಲೆ ಹೊಸ ಪಕ್ಷ ಕಟ್ಟಲು ಸೂಚಿಸಿದೆವು. ಅವರು ಆ ಸಂದರ್ಭದಲ್ಲಿ ಸಂಘಟಿಸಿದ್ದ 'ಅಹಿಂದ' ಸಮಾವೇಶಕ್ಕೆ ನಾನೂ ಆಹ್ವಾನಿತನಾಗಿ ಹೋಗಿ, ಲೋಹಿಯಾ ಪ್ರತಿಪಾದಿಸಿದಂತೆ ಸಾಮಾಜಿಕ ನ್ಯಾಯ ರಾಜಕಾರಣವೆಂಬುದು ಹೇಗೆ ಜಾತಿ ರಾಜಕಾರಣವನ್ನು ಮೀರಿದ ಒಂದು ದೊಡ್ಡ ಗುರಿಯುಳ್ಳ ಸಂಕೀರ್ಣ ರಾಜಕಾರಣವಾಗಿದೆ ಹಾಗೂ ಅದು ಜಾತಿ ನ್ಯಾಯ ರಾಜಕಾರಣ ಮಾತ್ರವಾಗಿ ಕುಬ್ಜಗೊಂಡರೆ ಎಂತಹ ಅಪಾಯಕಾರಿ ರಾಜಕಾರಣಕ್ಕೆ ದಾರಿ ಮಾಡಿಕೊಡಬಹುದು ಎಂಬುದನ್ನು ವಿವರಿಸಿದ್ದೆ.

ಆದರೆ ಆ ಹೊತ್ತಿಗೆ ಕಾಂಗ್ರೆಸ್‌ಗೆ ನಿಜವಾದ ಜನ ನಾಯಕನೇ ಇಲ್ಲವಾಗಿ ಅದು ಸಿದ್ಧರಾಮಯ್ಯನವರಿಗೆ ಅವರ ಸ್ವಜಾತಿ ಬಂಧುಗಳಾದ ಎಚ್.ವಿಶ್ವನಾಥ್ ಮತ್ತು ಎಚ್.ಎಂ.ರೇವಣ್ಣನವರ ಮೂಲಕ ಬಲೆ ಬೀಸಿತ್ತು. ಅವರು ಮುಖ್ಯಮಂತ್ರಿಯಾಗುವ ಅವರ ಕನಸು ಕಾಂಗ್ರೆಸ್ ಮೂಲಕ ಮಾತ್ರ ನನಸಾಗಲು ಸಾಧ್ಯ ಎಂಬ ನಂಬಿಕೆಯನ್ನು ಅವರ ಮನಸ್ಸಿನಲ್ಲಿ ಬಿತ್ತಿಬಿಟ್ಟಿದ್ದರು. ಹಾಗಾಗಿ ಸಿದ್ಧರಾಮಯ್ಯ ತಮ್ಮ ಸ್ವಂತ ಬಲದ ಮೇಲೆ ಪಕ್ಷ ಕಟ್ಟುವ ಆತ್ಮವಿಶ್ವಾಸ ತೋರಲಿಲ್ಲ. ಗೆಳೆಯ ದೇವನೂರ ಮಹಾದೇವ ಅವರೂ ಅದೇ ಹೊತ್ತಿಗೆ 'ಸರ್ವೋದಯ ಕರ್ನಾಟಕ ಪಕ್ಷ' ರಚಿಸಿ ಸಿದ್ಧರಾಮಯ್ಯ ಅವರನ್ನು ಸೆಳೆಯುವ ಪ್ರಯತ್ನ ಮಾಡಿದರಾದರೂ, ನಮ್ಮ ಹಾಗೆ ಬರೀ ತತ್ವ ರಾಜಕಾರಣದಲ್ಲೇ ಮುಳುಗದೆ ವ್ಯಾವಹಾರಿಕ ರಾಜಕಾರಣದ ಪಟ್ಟುಗಳನ್ನು ಅರಿತಿದ್ದ ಸಿದ್ಧರಾಮಯ್ಯ ಅರೆ ಮನಸ್ಸಿನಲ್ಲೇ ಕಾಂಗ್ರೆಸ್ ಸೇರಿದರು. ಆಗೊಮ್ಮೆ ನಾನು ಅವರನ್ನು

ಕಾಂಗ್ರೆಸ್ಸಿನಲ್ಲಿ ಹೊಸ್ತಿಲು ಪೂಜೆ ಯಶಸ್ವಿಯಾಗಿ ನಡೆಯಿತೇ? ಎಂದು ಕೇಳಿದ್ದೆ. ಅವರು ನಕ್ಕು 'ಒಳಗೆ ಹೋಗಿಯಾಗಿದೆ. ಕಾದು ನೋಡಬೇಕು' ಎಂದಿದ್ದರು.

ಸಿದ್ಧರಾಮಯ್ಯನವರ ಸ್ವಾಭಿಮಾನಿ ವ್ಯಕ್ತಿತ್ವವನ್ನು ಬಲ್ಲ ನಾವು ಕೆಲವರು ಕಾಂಗ್ರೆಸ್ಸಿನಲ್ಲಿ ಅವರ ಗತಿ ಏನೋ ಎಂತೋ ಎಂದು ಆತಂಕಪಟ್ಟಿದ್ದೆವು. ಆದರೆ ಅವರು ಎಲ್ಲರ ಆತಂಕಗಳನ್ನು ಮೀರಿ ಆ ಪಕ್ಷದಲ್ಲಿ ತಮ್ಮನ್ನು ತಾವು ನಾಯಕರಾಗಿ ಯಶಸ್ವಿಯಾಗಿ ಸ್ಥಾಪಿಸಿಕೊಂಡರು. ಹಾಗೇ ತಮ್ಮ ಸ್ವಂತ ರಾಜಕೀಯ ಬಿಂಬ ಸ್ವಲ್ಪವೂ ಮಸುಕಾಗದಂತೆ ಕೂಡ ಎಚ್ಚರ ವಹಿಸಿದರು. ಅದು ಅವರ ನಿಜವಾದ ಸಾಧನೆ. ಅದೇ ಅವರನ್ನು ಅವರ ಜೀವನದ ಮಹದೋದ್ದೇಶವಾದ ರಾಜ್ಯದ ಮುಖ್ಯಮಂತ್ರಿಯಾಗುವ ಗುರಿಗೂ ತಲುಪಿಸಿರುವುದು. ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗ ಕೆಲವೆಡೆ ನಡೆದ ಪ್ರತಿಭಟನೆಗಳಾದರೂ ಅವರಿಗೆ ಸಾಮಾಜಿಕ ನ್ಯಾಯ ರಾಜಕಾರಣದ ಸ್ಖಲಿತೆಯ ಪರಿಣಾಮಗಳ ಪರಿಚಯ ಮಾಡಿಕೊಟ್ಟಿರಬೇಕು. ಅದು ಅವರಿಗೆ, ತಮ್ಮ ಜೀವನದ ಮಹದೋದ್ದೇಶ ಈಡೇರುವುದಷ್ಟೇ ಅಲ್ಲ. ಅದು ಸಾರ್ಥಕವೂ ಆಗಬೇಕಾದರೆ ಮಾಡಬೇಕಾದ ರಾಜಕಾರಣ ದಿಟ್ಟ, ನೇರ ಮಾತ್ರವಲ್ಲ, ಎಷ್ಟು ಆಳವೂ ಆಗಿರಬೇಕೆಂಬುದನ್ನು ಕಲಿಸಿರಬೇಕು.

ಸಿದ್ಧರಾಮಯ್ಯ ಅವರು ಈಗ ರಚಿಸಿರುವ ಮಂತ್ರಿಮಂಡಲ ಮತ್ತು ಆ ಮಂತ್ರಿಮಂಡಲಕ್ಕೆ ಅವರು ನೀಡಿರುವ ಆರಂಭಿಕ ಸೂಚನೆಗಳು ಇಂತಹ ರಾಜಕಾರಣದ ಒಂದು ಒಳ್ಳೆಯ ಆರಂಭದಂತೆಯೇ ಕಾಣುತ್ತದೆ. ಆದರೆ, ಚಿಂಚನಸೂರು, ತಂಗಡಗಿಗಳಂತಹ ಅನುಮಾನಾಸ್ಪದ ವ್ಯಕ್ತಿಗಳನ್ನು ಮತ್ತು ರಾಮಲಿಂಗಾರೆಡ್ಡಿ, ದೇಶಪಾಂಡೆಯವರಂತಹ ತಿಮಿಂಗಿಲಗಳನ್ನು ದೂರವಿಡುವ ಧೈರ್ಯ ಮಾಡಿದ್ದರೆ ಚೆನ್ನಿರುತ್ತಿತ್ತು ಎಂದೂ ಅನ್ನಿಸದಿರದು. ಹಾಗೇ ಅವರು ಮುಖ್ಯಮಂತ್ರಿಯಾದ ಕೂಡಲೇ ಮಾಡಿದ ರೂಪಾಯಿಗೆ ಕೇಜಿ ಅಕ್ಕಿ ಮತ್ತು ಕೆಲವು ವರ್ಗಗಳ ಸಾಲ ಮನ್ನಾದಂತಹ ಕಾರ್ಯಕ್ರಮಗಳ ಘೋಷಣೆ ಖಂಡಿತ ಶೈಲಿಯಲ್ಲಾಗಲೀ, ಸತ್ವದಲ್ಲಾಗಲೀ ಸಮಾಜವಾದಿ ಕಾರ್ಯಕ್ರಮಗಳಲ್ಲ ಎಂಬುದನ್ನು ಯಾರಾದರೂ ಅವರಿಗೆ ಹೇಳಬೇಕಿದೆ.

ಅದೇನೇ ಇರಲಿ, ಸಿದ್ಧರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಮಾಡಲೇಬೇಕೆಂದು ಅವರ ಸಮಾಜವಾದಿ ಮಿತ್ರರು ಆಗ್ರಹಿಸುವ ಮೂರು ಮುಖ್ಯ ಕೆಲಸಗಳೆಂದರೆ:

೧. ರಾಜ್ಯದ ಜನಜೀವನದ ಮೂಲ ಮೌಲ್ಯಗಳನ್ನೇ ಬುಡಮೇಲುಗೊಳಿಸಿರುವ ಗಣಿಗಾರಿಕೆ ಮತ್ತು ಭೂ ವ್ಯವಹಾರಗಳ ದಂಧೆಗಳನ್ನು ಮಟ್ಟ ಹಾಕುವುದು ಮತ್ತು ಈ ದಂಧೆಗೆ ಕಾರಣರಾಗಿರುವ ಆರೋಪಿಗಳ ಮೇಲಿನ ಮೊಕದ್ದಮೆಗಳನ್ನು ಬಲಗೊಳಿಸಿ ಅವರಿಗೆ ಶಿಕ್ಷೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು.

೨. ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರಗಳನ್ನು ನಾಗರಿಕ ಮೂಲ ಸೌಲಭ್ಯ ಕ್ಷೇತ್ರಗಳಷ್ಟೇ ಮುಖ್ಯ ಮತ್ತು ನಿರ್ಣಾಯಕ ಕ್ಷೇತ್ರಗಳೆಂದು ಪರಿಗಣಿಸಿ, ಅಲ್ಲಿ ಹಲವು ನೆಲೆಗಳಲ್ಲಾಗಿರುವ

ಅವುಗಳ ಅಪಮೌಲ್ಯೀಕರಣವನ್ನು, ಪ್ರಜ್ಞಾವಂತರ ನೆರವು ಪಡೆದು ಆದ್ಯತೆಯ ಮೇಲೆ ಸರಿಪಡಿಸುವುದು.

೬.ಸಮಾಜವಾದದ ಆಧಾರ ತತ್ವವಾದ ಸರ್ವವ್ಯಾಪಕವಾದ ವಿಕೇಂದ್ರೀಕರಣವನ್ನು ಸಾಧಿಸಲು, ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪುನರ್‌ಸಂಘಟಿಸಿ ಅದನ್ನು ಬಲಪಡಿಸಲು ಕ್ರಮಗಳನ್ನು ಕೈಗೊಳ್ಳುವುದು.

ಸಮಕಾಲೀನ

ಪಶ್ಚಿಮ ಘಟ್ಟಗಳ ಜೀವ ಪರಿಸರ ಸಂರಕ್ಷಣಾ ವರದಿ ವಿವಾದ

ಕಸ್ತೂರಿ ರಂಗನ್‌ಗೆ ಮಾಧವ ಗಾಡ್ಗೀಳರ ಬಹಿರಂಗ ಪತ್ರ

(ಯುನೆಸ್ಕೋ ಸೂಚನೆಯ ಮೇರೆಗೆ ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಕಾರ್ಯ ಯೋಜನೆಗಾಗಿ ಹಿರಿಯ ಪರಿಸರ ತಜ್ಞ ಡಾ. ಮಾಧವ ಗಾಡ್ಗೀಳ್‌ರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿ ಸಲ್ಲಿಸಿದ ವರದಿಗೆ ವ್ಯಕ್ತವಾದ ಕೆಲ ಪಟ್ಟಭದ್ರ ಹಿತಾಸಕ್ತಿಗಳ ವಿರೋಧ–ಒತ್ತಡಗಳಿಗೆ ಮಣೀದ ಸರ್ಕಾರ ಬಾಹ್ಯಾಕಾಶ ವಿಜ್ಞಾನಿ ಕಸ್ತೂರಿ ರಂಗನ್ ನೇತೃತ್ವದ ಮತ್ತೊಂದು ಸಮಿತಿ ನೇಮಿಸಿತು. ಅದು ಗಾಡ್ಗೀಳ್ ವರದಿಯನ್ನು ಅತಿ ದುರ್ಬಲಗೊಳಿಸಿ ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಕುತ್ತು ತಂದಿದೆ ಎಂದು ರಾಷ್ಟ್ರದ ಹಲವು ಪರಿಸರವಾದಿಗಳು ಅಭಿಪ್ರಾಯಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಪತ್ರ–ಸಂ.)

ಪ್ರಿಯ ಡಾ. ಕಸ್ತೂರಿ ರಂಗನ್,

೧೯ನೇ ಶತಮಾನದ ವಿಜ್ಞಾನಿ ಮತ್ತು ಮಾನವತಾವಾದಿ ಜೆ.ಬಿ.ಎಸ್. ಹಾಲ್ಡೇನ್ ಬಗ್ಗೆ ನಿಮಗೆ ಗೊತ್ತಿರಬೇಕು. ಅವರು ಸೂಯೆಜ್‌ನ ಸಾಮ್ರಾಜ್ಯಶಾಹಿ ಆಕ್ರಮಣದ ವಿರುದ್ಧ ಪ್ರತಿಭಟನೆಯಾಗಿ ಇಂಗ್ಲೆಂಡನ್ನು ತ್ಯಜಿಸಿ ಭಾರತದ ಪ್ರಜೆತನವನ್ನು ಪಡೆದವರು ಅವರು ಸತ್ಯವು ನಾವು ಅಂದುಕೊಳ್ಳುವುದಕ್ಕಿಂತ ಅಷ್ಟೇ ಅಲ್ಲ, ಅಂದುಕೊಳ್ಳಬಲ್ಲುದದಕ್ಕಿಂತ ಹೆಚ್ಚು ಅಪರಿಚಿತವಾಗಿರುತ್ತದೆ ಎಂದಿದ್ದರು! ಪಶ್ಚಿಮ ಘಟ್ಟಗಳನ್ನು ಕುರಿತ ಉನ್ನತ ಹಂತದ ಕಾರ್ಯತಂಡ ನೀಡಿರುವ ಇತ್ತೀಚಿನ ವರದಿಯಲ್ಲಿ ನಿಮ್ಮಂತಹವರು ಪಾಲುದಾರರಾಗಿರುತ್ತೀರಿ ಎಂದು ನಾನಂದುಕೊಂಡಿರಲಿಲ್ಲ. ಆದರೆ ಹೌದಲ್ಲ, ಸತ್ಯ ನಾವು ಅಂದುಕೊಳ್ಳಬಲ್ಲುದುದಕ್ಕಿಂತ ಅಪರಿಚಿತವಾಗಿರುತ್ತದೆ!

ನಾವು ವಿಸ್ತಾರವಾದ ಚರ್ಚೆ ಮತ್ತು ಕ್ಷೇತ್ರ ಕಾರ್ಯಗಳ ನಂತರ ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮತೆಯ ಸಂರಕ್ಷಣೆಗಾಗಿ ನೆಲಮಟ್ಟದ ಮಾಹಿತಿಯನ್ನಾಧರಿಸಿದ ಶ್ರೇಣೀಕೃತ ವಿಧಾನವೊಂದನ್ನು ಪರಿಸರ ಮತ್ತು ಅರಣ್ಯ ಖಾತೆಗೆ ಸಲ್ಲಿಸಿದ ನಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿದ್ದೆವು. ಆದರೆ ನೀವು ಅದನ್ನು ತಿರಸ್ಕರಿಸಿ, ಪಶ್ಚಿಮ ಘಟ್ಟಗಳನ್ನು

ಎರಡು ವಿಭಾಗಗಳನ್ನಾಗಿ ಮಾಡಿ, ಹೆಚ್ಚೂ ಕಡಿಮೆ ಮೂರನೇ ಒಂದು ಭಾಗವನ್ನು ಬಂದೂಕುಗಳ ಮೂಲಕ ರಕ್ಷಿಸಬೇಕಾದ ನೈಸರ್ಗಿಕ ಭೂವಲಯವೆಂದೂ, ಉಳಿದ ಮೂರನೇ ಎರಡು ಭಾಗವನ್ನು ಈಗ ಗೋವಾದಲ್ಲಿ ಮೂವತ್ತೈದು ಸಾವಿರ ಕೋಟಿ ರೂಪಾಯಿಗಳ ಹಗರಣವನ್ನು ಸೃಷ್ಟಿಸಿರುವ ಗಣಿಗಾರಿಕೆಯಂತಹ ಅಭಿವೃದ್ಧಿ ಚಟುವಟಿಕೆಗಳಿಗೆ ತೆರೆದಿಡಬಹುದಾದ ಸಾಂಸ್ಕೃತಿಕ ಭೂವಲಯವೆಂದು ವಿಂಗಡಿಸಿ ನೀಡಿದ್ದೀರಿ. ಇದು ಪರಿಸರ ವಿನಾಶದ ಮರುಭೂಮಿಯಲ್ಲಿ ಜೀವ ವೈವಿಧ್ಯತೆಯ ಓಯಸಿಸ್‌ಗಳನ್ನು ಕಾಪಾಡುವಂತಹ ಪ್ರಯತ್ನ ಮಾತ್ರವಾಗುತ್ತದೆ. ಏಕೆಂದರೆ, ಇಂತಹ ವಿಭಾಗೀಕರಣ ಬಹು ಬೇಗ ಓಯಸಿಸ್‌ಗಳನ್ನು ಮರುಭೂಮಿ ಆಕ್ರಮಿಸಿಕೊಳ್ಳುವಂತೆ ಮಾಡುತ್ತದೆ ಎಂದು ಪರಿಸರ ವಿಜ್ಞಾನದ ಪಾಠ ಹೇಳುತ್ತದೆ. ಸಮೃದ್ಧ ಜೀವ ವೈವಿಧ್ಯತೆಯ ಪ್ರದೇಶಗಳ ದೀರ್ಘಕಾಲಿಕ ಸಂರಕ್ಷಣೆಗಾಗಿ ಸ್ವಾಭಾವಿಕ ಜೀವ ನೆಲೆಗಳ ಅವಿಚ್ಛಿನ್ನತೆಯನ್ನು ಕಾಪಾಡುವುದು ಮತ್ತು ಪಾರಿಸರಿಕ ಹಾಗೂ ಸಾಮಾಜಿಕ ಸ್ನೇಹಿಯಾದ ಅಂಶಗಳ ಸಂಯೋಜಿತ ನೀತಿಯನ್ನು ಅನುಸರಿಸುವುದು ಮುಖ್ಯವೆಂಬುದು ನಮ್ಮ ವರದಿಯ ಸೂಚನೆಯಾಗಿತ್ತು. ಹೆಚ್ಚಿನ ಆತಂಕ ಅರಣ್ಯ ಜೀವ ವೈವಿಧ್ಯತೆಗಿಂತ ನೈಸರ್ಗಿಕ ಜಲಮೂಲ ಸಂಬಂಧಿತವಾದ ಜೀವ ವೈವಿಧ್ಯತೆಗಿದ್ದು, ಅದು ನೀವು ಯಾವುದನ್ನು ಸಾಂಸ್ಕೃತಿಕ ಭೂವಲಯವೆಂದು ವಿಂಗಡಿಸಿದ್ದೀರೋ ಅಲ್ಲಿಯೇ ಹೆಚ್ಚಾಗಿರುವುದು. ಅಲ್ಲದೆ, ನಮ್ಮ ಜನಸಮುದಾಯಗಳ ಬಹುಭಾಗದ ಬದುಕು ಮತ್ತು ಪೌಷ್ಟಿಕತೆಗಳ ದೃಷ್ಟಿಯಿಂದಲೂ ನೈಸರ್ಗಿಕ ಜಲಮೂಲಗಳ ರಕ್ಷಣೆ ಬಹು ಮುಖ್ಯವೆನಿಸುತ್ತದೆ. ಹಾಗಾಗಿಯೇ ನಾವು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಲೋಟ್ ಕೆಮಿಕಲ್ಸ್ ಕೈಗಾರಿಕಾ ಸಂಕೀರ್ಣವನ್ನೇ ಪ್ರತ್ಯೇಕವಾಗಿ ಅಧ್ಯಯನ ಮಾಡಿ, ಆ ಕೈಗಾರಿಕೆ ಹೇಗೆ ಕೇವಲ ೧೧ ಸಾವಿರ ಜನರಿಗೆ ಕೈಗಾರಿಕಾ ಉದ್ಯೋಗ ಒದಗಿಸಿದ್ದರ ಮರೆಯಲ್ಲಿ ಕಾನೂನುಗಳನ್ನೆಲ್ಲ ನಿರ್ಲಕ್ಷಿಸಿ ಸ್ಥಳೀಯ ಮೀನುಗಾರಿಕೆಯನ್ನು ಧ್ವಂಸಗೊಳಿಸಿ ೨೦ ಸಾವಿರ ಜನರ ಜೀವನೋಪಾಯವನ್ನೇ ನಾಶ ಮಾಡಿದೆ ಎಂಬುದನ್ನು ವಿಷಾದೀಕರಿಸಿದ್ದೆವು. ಆದರೂ ಸರ್ಕಾರ ಅಲ್ಲಿ ಮತ್ತಷ್ಟು ಪರಿಸರ ಮಾಲಿನ್ಯದ ಕೈಗಾರಿಕೆಗಳನ್ನು ಸ್ಥಾಪಿಸಬಯಸಿದೆ ಮತ್ತು ಅದಕ್ಕಾಗಿ ತಾನೇ ರಚಿಸಿದ ಕೈಗಾರಿಕಾ ವಲಯದ ನಕ್ಷೆಯನ್ನೇ ಅಸಿಂಧುಗೊಳಿಸುವ ಪ್ರಯತ್ನ ಮಾಡುತ್ತಿದೆ.

ನಿಮ್ಮ ವರದಿ ಆರ್ಥಿಕ ನೀತಿ–ನಿರ್ಧಾರಗಳ ವಿಷಯದಲ್ಲಿ ಸ್ಥಳೀಯ ಸಮುದಾಯಗಳು ಯಾವುದೇ ಪಾತ್ರ ವಹಿಸುವಂತಿಲ್ಲ ಎಂದು ಸೂಚಿಸುವ ಮೂಲಕ ಸಂವಿಧಾನ ದತ್ತವಾದ ಸ್ಥಳೀಯ ಜನತೆಯ ಮೂಲ ಅಧಿಕಾರಗಳನ್ನೇ ಮೊಟಕುಗೊಳಿಸುವ ಯತ್ನ ಮಾಡಿದೆ. ಹಾಗಾಗಿಯೇ, ನಿಮ್ಮ ವರದಿ ಲೋಟ್ ಸಂಸ್ಥೆ ಕಾನೂನು ಮೀರಿ ನಡೆಸಿರುವ ಪರಿಸರ ಮಾಲಿನ್ಯದ ವಿರುದ್ಧ ಯಾವುದೇ ಕ್ರಮ ಸೂಚಿಸದೆ ಅದರ ವಿರುದ್ಧ ಅಲ್ಲಿನ ಜನ ೧೮೦ ದಿನ ಕಾನೂನುಬದ್ಧವಾಗಿಯೇ ನಡೆಸಿದ ಶಾಂತಿಯುತ ಪ್ರತಿಭಟನೆಗಳನ್ನು ದಮನ ಮಾಡಲು ಪೋಲೀಸ್ ಬಲವನ್ನು ಬಳಸಿತೆಂದು ನಮ್ಮ ವರದಿ ನೀಡಿರುವ ಮಾಹಿತಿಯನ್ನು ನಿರ್ಲಕ್ಷಿಸಿರುವುದು ನಮಗೆ ಆಶ್ಚರ್ಯವನ್ನೇನೂ ಉಂಟುಮಾಡಿಲ್ಲ.

ಭಾರತದ ಸಾಂಸ್ಕೃತಿಕ ಲೋಕದಿಂದಾಗಿಯೇ ಜೀವ ವೈವಿಧ್ಯತೆಯ ಹಲವು ಮೌಲಿಕ ತಳಿಗಳು ಇಂದೂ ಉಳಿದಿವೆ. ಪಶ್ಚಿಮ ಘಟ್ಟಗಳಲ್ಲಿ ಮಾತ್ರ ಇರುವ ಸಿಂಹ ಬಾಲದ ಕಪಿ ಜಾತಿಯೊಂದು ಶೇ. ೭೫ರಷ್ಟು ಈ ಸಾಂಸ್ಕೃತಿಕ ಭೂವಲಯದ ಚಹಾ ತೋಟಗಳಲ್ಲಿಯೇ ವಾಸಿಸುವುದು. ನಾನು ವಾಸ ಮಾಡುತ್ತಿರುವ ಪುಣೆ ನಗರ ಆಧುನಿಕ ಜೀವ ಪರಿಸರಶಾಸ್ತ್ರದಲ್ಲಿ 'ಶ್ರೀಮಾತೆ'ಯೆಂದೇ ಕರೆಯಲಾಗುವ ಮತ್ತು ವ್ಯಾಪಕ ಜೀವ ವೈವಿಧ್ಯವನ್ನು ಪೋಷಿಸುವುದೆಂದು ಹೇಳಲಾಗುವ ಆಲ, ಅರಳಿ ಮತ್ತು ಗುಲಾರ್ ಜಾತಿಯ ಅನೇಕ ಮರಗಳಿಂದ ತುಂಬಿದೆ. ಇಲ್ಲಿ ರಾತ್ರಿಯಿಡೀ ನವಿಲುಗಳ ಕೂಗು ಕೇಳಿಸುತ್ತಿರುತ್ತದೆ. ಮನೆಗಳ ಛಾವಣಿಗಳ ಮೇಲೆ ಹೋದರೆ ಅವು ಮುಕ್ತವಾಗಿ ನರ್ತಿಸುತ್ತಿರುವುದನ್ನು ಕಾಣಬಹುದು. ಭಾರತದ ಆಳವಾದ ಸಾಂಸ್ಕೃತಿಕ ಪರಂಪರೆಯಲ್ಲಿ ಬೇರುಬಿಟ್ಟಿರುವ ನಮ್ಮ ಸಾಮಾನ್ಯ ಜನತೆಯ ಬದುಕು ನಿಸರ್ಗದ ಬಗ್ಗೆ ಅಪಾರ ಗೌರವವನ್ನಿಟ್ಟುಕೊಂಡು ಪವಿತ್ರ ಮತ್ತು ದೈವಸ್ವರೂಪಿಯೆಂದು ಮರ, ಕೋತಿ ಮತ್ತು ನವಿಲುಗಳನ್ನು ರಕ್ಷಿಸಿದೆ. ಈಗ ಇದೆಲ್ಲದರ ನಾಶ ಆರಂಭವಾದಂತಿದೆ ಭಾರತದ ಕಾಡು–ತೋಪುಗಳೆಲ್ಲವೂ ಈಸ್ಟ್ ಇಂಡಿಯಾ ಕಂಪನಿಯು ತನ್ನ ಕಾನೂನುಬದ್ಧ ಆಸ್ತಿಯನ್ನು ಸಂಪಾದಿಸಿಕೊಳ್ಳಲು ಇರುವ ಮಾಯಾವಿ ಅಡೆತಡೆಗಳಷ್ಟೆ ಎಂದು ೧೮೦೧ರಲ್ಲಿ ಬರೆದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕುಪ್ರಸಿದ್ಧ ಏಜೆಂಟನಾಗಿದ್ದ ಫ್ರಾನ್ಸಿಸ್ ಬುಚನನ್‌ನ ಮಾತುಗಳು. ಈಗ ನನಗೆ ನೆನಪಿಗೆ ಬರುತ್ತಿವೆ. ಹಾಗಾಗಿ ನಾವೀಗ ಬ್ರಿಟಿಷರಿಗಿಂತ ಹೆಚ್ಚು ಬ್ರಿಟಿಷರಾಗಲು ಹೊರಟಿರುವಂತೆ ಕಾಣುತ್ತದೆ. ನಮ್ಮ ಸಾಂಸ್ಕೃತಿಕ ವಲಯದಲ್ಲಿನ ನಿಸರ್ಗ ಸ್ನೇಹಿಯಾದ ಆಚರಣೆಗಳು ಈ ದೇಶದ ಹಾಗೂ ಈಗ ಗೋಳೀಕರಣಗೊಂಡಿರುವ ಈ ಜಗತ್ತಿನ ಶ್ರೀಮಂತ ಮತ್ತು ಬಲಾಢ್ಯ ವರ್ಗಗಳು ಕಾನೂನುರಹಿತ ಮತ್ತು ಉದ್ಯೋಗರಹಿತ ಆರ್ಥಿಕ ಪ್ರಗತಿ ಸಾಧಿಸಲು ಎಲ್ಲ ಭೂಮಿ ಮತ್ತು ನೀರಿನ ಒಡೆತನ ಗಳಿಸಿ ತಮ್ಮ ಸುಖ ಮತ್ತು ಲಾಭೋದ್ದೇಶಗಳಿಗಾಗಿ ಅವನ್ನು ಲೂಟಿ ಹೊಡೆದು ಮಲಿನಗೊಳಿಸುವ ಕಾರ್ಯಕ್ರಮಕ್ಕೆ ಒಡ್ಡಲಾಗುತ್ತಿರುವ ತಡೆಗೋಡೆಯಂತೆ ಕಾಣುತ್ತಿದೆ.

ನಿಮ್ಮ ವರದಿ ಇಂತಹ ಕಾರ್ಯಕ್ರಮವನ್ನು ಅನುಮೋದಿಸುತ್ತದೆ ಎಂಬುದು ನನ್ನನ್ನು ಆಘಾತಕ್ಕೀಡು ಮಾಡಿದೆ. ನಿಜ, ಸತ್ಯ ಎನ್ನುವುದು ನಾವು ಅಂದುಕೊಳ್ಳಬಲ್ಲದ್ದನ್ನೂ ಮೀರಿ ಅಪರಿಚಿತವಾಗಿರಬಲ್ಲದು!

ಆತ್ಮೀಯ ವೈಯಕ್ತಿಕ ವಂದನೆಗಳೊಂದಿಗೆ,

ನಿಮ್ಮ

ಮಾಧವ್

(**ಕನ್ನಡಕ್ಕೆ: ಡಿಎಸ್ಸೆನ್**)

ಜುಲೈ ೨೦೧೩

ಉತ್ತರಾಖಂಡದ ಜಲಪ್ರಳಯ: ಆಧುನಿಕತೆ–ಅಭಿವೃದ್ಧಿಗಳ ಕಣ್ಣ ಮುಂದಿನ ದುರಂತ

ಪ್ರಿಯ ಓದುಗರೇ,

ನಾನು ಮತ್ತು ನನ್ನ ಪತ್ನಿ ಸವಿತಾ ಕಳೆದ ಜೂನ್ ೪ರಿಂದ ೨೦ರವರೆಗೆ ಬ್ರಿಟನ್, ಫ್ರಾನ್ಸ್, ಜರ್ಮನಿ, ಬೆಲ್ಜಿಯಂ, ನೆದರ್‌ಲ್ಯಾಂಡ್, ಆಸ್ಟ್ರಿಯಾ, ಸ್ವಿಟ್ಜರ್‌ಲ್ಯಾಂಡ್, ಇಟಲಿ ಇತ್ಯಾದಿಯಾಗಿ ಒಂಭತ್ತು ದೇಶಗಳ ಯೂರೋಪ್ ಪ್ರವಾಸಕ್ಕೆ ಹೋಗಿದ್ದೆವು. ಥಾಮಸ್–ಕುಕ್ ಪ್ರವಾಸಿ ಸಂಸ್ಥೆ ಏರ್ಪಡಿಸಿದ್ದ ಈ ಪ್ರವಾಸವನ್ನು ಪೂರ್ಣವಾಗಿ ದೇಸಿ ಪ್ರವಾಸವನ್ನಾಗಿ ಪರಿವರ್ತಿಸಿದವರು ಚಿತ್ರದುರ್ಗದ ಮುರುಘಾಮಠದ ಸ್ವಾಮೀಜಿಯವರು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಸುಮಾರು ೪೮ ಜನರ ತಂಡದಲ್ಲಿ ಅವರ ಭಕ್ತರೇ ಹೆಚ್ಚು. ಅನುಭವಿಗಳೆನಿಸಿಕೊಂಡವರು ನಾನು, ನನ್ನ ಪತ್ನಿ ಮತ್ತು ಬಹುಶಃ ಇನ್ನೊಂದಿಬ್ಬರು ಮಾತ್ರ! ಒಟ್ಟು ಸುಮಾರು ಹದಿನೈದು ಸಾವಿರ ಕಿ.ಮೀ.ಗಳ ಈ ವಿಮಾನ ಮತ್ತು ರಸ್ತೆ ಪ್ರಯಾಣವನ್ನೊಳಗೊಂಡಿದ್ದ ೧೫ ದಿವಸಗಳ ಈ ದೀರ್ಘ ಪ್ರವಾಸ. ಪ್ರಯಾಸವೆನ್ನಿಸದೆ ಒಂದು ಸುಂದರ–ಸುಖಾನುಭವವೆನ್ನಿಸಿದ್ದರೆ ಅದಕ್ಕೆ ಈ ತಂಡದಲ್ಲಿದ್ದ ಪರಸ್ಪರ ಸೌಹಾರ್ದತೆ ಮತ್ತು ಏಳೆಂಟು ಸಾವಿರ ಕಿ.ಮೀ.ಗಳ ರಸ್ತೆ ಪ್ರಯಾಣದ ಬಹುಭಾಗದ ಅವಧಿಯಲ್ಲಿ ವಿವಿಧ ವಿಷಯಗಳ ಬಗ್ಗೆ ನಡೆದ ಅನೌಪಚಾರಿಕ ಚರ್ಚೆ–ಮಾತುಕತೆಗಳೇ ಕಾರಣವೆಂದರೆ ತಪ್ಪಾಗಲಾರದು.

ಯೂರೋಪ್ ಬಗ್ಗೆ, ಅದರ ಪ್ರವಾಸದ ಬಗ್ಗೆ ಈಗಾಗಲೇ ಸಾಕಷ್ಟು ಜನ ಬರೆದಿದ್ದಾರೆ. ನಾನು ಬರೆಯಲೂ ಬಹಳಷ್ಟಿದೆ. ಇದನ್ನೆಲ್ಲ ಒಂದೇ ಮಾತಿನಲ್ಲಿ ಹೇಳುವುದಾದರೆ, ದುಡ್ಡಿದ್ದೂ ಒಮ್ಮೆ ಯೂರೋಪ್ ನೋಡದವರು ಪಾಪಿಗಳೇ ಸರಿ! ಭೂಮಿಯ ಮೇಲಿನ ಸ್ವರ್ಗವದು. ಆದರೆ ಮಾನವರಿರುವ ಸ್ವರ್ಗವಷ್ಟೆ! ಭವ್ಯ, ದಿವ್ಯ, ರುದ್ರ

ರಮಣೀಯ ಪ್ರಾಕೃತಿಕ ಸೌಂದರ್ಯವಷ್ಟೇ ಅಲ್ಲ, ಮನುಷ್ಯ ನಾಗರೀಕನಾಗಿ ತನ್ನ ಸಾಮಾಜಿಕ ಬದುಕನ್ನು ಪರಿಸರದೊಂದಿಗೆ ಸಮರಸವಾಗಿ ಹೇಗೆ ಶಿಸ್ತಿನಿಂದ, ಬುದ್ಧಿವಂತಿಕೆಯಿಂದ ಸುವ್ಯವಸ್ಥಿತವಾಗಿ ಕಟ್ಟಿಕೊಂಡು ನಿಜವಾದ ನೆಮ್ಮದಿಯೊಡನೆ ಬದುಕಬಹುದು ಎಂಬ ಒಂದು ಜೀವನ ದೃಷ್ಟಿ ಮತ್ತು ಬದುಕಿನ ರೀತಿಯ ಪಾಠವನ್ನು ನಾವು ಅಲ್ಲಿಂದ ಕಲಿತು ಬರಬಹುದು. ಆದರೆ ಹೆಚ್ಚಿನ ಭಾರತೀಯ ಪ್ರವಾಸಿಗಳು (ನಮ್ಮೊಂದಿಗೆ ಹಲವು ಭಾರತೀಯ ಪ್ರವಾಸಿ ತಂಡಗಳೂ ಅಲ್ಲಿದ್ದವು. ಜಗತ್ತಿನ ಪ್ರವಾಸಿಗರಲ್ಲಿ ಈಗ ಶೇ.೮೦ರಷ್ಟು ಭಾರತೀಯರು ಮತ್ತು ಚೀನೀಯರಂತೆ. ಏಕೆಂದರೆ ಈಗ ಹೆಚ್ಚುವರಿಯಾದ ಹಣವಿರುವುದು ಅವರ ಬಳಿಯೇ ಅಂತೆ!) ಈ ದೇಶಗಳ ಶ್ರೀಮಂತಿಕೆಯನ್ನು ನೋಡಿ ದಿಗ್ಭ್ರಮೆಗೊಂಡು ನಮ್ಮ ದೇಶದ ಸ್ಥಿತಿ-ಗತಿಗಳ ಬಗ್ಗೆ ಕೀಳರಿಮೆ ಬೆಳೆಸಿಕೊಳ್ಳುವ ಅಪಾಯಕ್ಕೆ ಈಡಾಗುವುದೇ ಹೆಚ್ಚೆಂದು ಕಾಣುತ್ತದೆ. ನಮ್ಮ ಪ್ರವಾಸದಲ್ಲೂ ಅದರ ಸೂಚನೆಗಳು ದೊರೆತು ನನಗಂತೂ ವಿಷಾದವೆನಿಸಿತು.

ಸ್ವಾಮೀಜಿ (ಇವರ ಜೊತೆ ಬೇಬಿ ಮಠ ಮತ್ತು ವಾಲ್ಮೀಕಿ ಮಠದ ಸ್ವಾಮೀಜಿಗಳೂ ಪ್ರವಾಸದಲ್ಲಿದ್ದರು) ತಮಗೆ ತೋಚಿದಂತೆ ಧರ್ಮ-ಆಧ್ಯಾತ್ಮಗಳ ಬಗ್ಗೆ ಕೆಲವು ಮಾತುಗಳನ್ನಾಡಿ, ಲೌಕಿಕ ವಿಷಯಗಳ ಕಡೆಗೂ ಸಹ ಪ್ರಯಾಣಿಕರ ಗಮನ ಸೆಳೆದು ಮಾತಾಡಲು ಪ್ರೇರೇಪಿಸುತ್ತಿದ್ದರು. ಹಾಗೆ ಪ್ರೇರಣೆಗೊಂಡು ಮಾತನಾಡಿದ ಬಹುತೇಕ ಮಂದಿ ನಮ್ಮ ದೇಶ ಬಹು ಹಿಂದುಳಿದಿದೆಯೆಂದೂ, ಹಾಗೆ ಹಿಂದುಳಿಯಲು ರಾಜಕಾರಣಿಗಳು, ಅವರ ಭ್ರಷ್ಟಾಚಾರ ಮತ್ತು ಜಾತೀಯತೆಗಳೇ ಕಾರಣವೆಂದು ದೂಷಿಸಿದರು. ಇದು, ನಮ್ಮ ದೇಶವನ್ನು ಯೂರೋಪ್‌ನಂತೆ 'ಅಭಿವೃದ್ಧಿ' ಪಡಿಸಲು ಏನು ಮಾಡಬೇಕೆಂಬ ಚರ್ಚೆಗೆ ಕಾರಣವಾಯಿತು. ಬಹಳ ಜನ ಇಂದಿನ ರಾಜಕಾರಣವನ್ನು ಶುದ್ಧೀಕರಿಸಿ, ನರೇಂದ್ರ ಮೋದಿಯಂಥಹವರನ್ನು ರಾಷ್ಟ್ರ ನಾಯಕರನ್ನಾಗಿ ಮಾಡಿದರೆ ಇದು ಸಾಧ್ಯವಾಗಬಹುದೆಂದು ಅಭಿಪ್ರಾಯಪಟ್ಟರು. ಸ್ವಾಮೀಜಿಯೇನೋ ತಮ್ಮ ಆಯ್ಕೆ ನಿತೀಶ್ ಕುಮಾರ್ ಎಂದರಾದರೂ, ಅವರ ಭಕ್ತರಲ್ಲಿ ಬಹು ಭಾಗ ಮೋದಿಯಿಂದ ಮರುಳಾದಂತಿದ್ದರು.

ಈ ಸಂದರ್ಭದಲ್ಲಿ ಅನಿವಾರ್ಯವಾಗಿ ನಾನು ಮಾತನಾಡಬೇಕಾಯಿತು. ಆವರೆಗೆ ನಡೆದಿದ್ದ ಚರ್ಚೆಯನ್ನು ಸಮೀಕ್ಷಿಸುತ್ತಾ, ಧರ್ಮ-ವಿಜ್ಞಾನಗಳ ಸಂಬಂಧದ ಬಗ್ಗೆ ಮಾತು ಆರಂಭಿಸಿ, ವಿಜ್ಞಾನ-ತಂತ್ರಜ್ಞಾನಗಳ ಮಿತಿಗಳನ್ನು ಹೇಳಿದೆ. ನಂತರ ಇವೆರಡೂ 'ಅಭಿವೃದ್ಧಿ' ಎಂಬ ಮಾಯಾಜಿಂಕೆಯನ್ನು ಸೃಷ್ಟಿಸಿ ಅದರ ಹಿನ್ನೆಲೆಯಲ್ಲಿ ತಪ್ಪು ಕಾರಣಗಳ ಮೇಲೆ ನಮ್ಮನ್ನು ನಾವು ಹೀಗಳೆದುಕೊಳ್ಳಲು ಹೇಗೆ ದಾರಿ ಮಾಡಿಕೊಂಡಿದ್ದೇವೆ ಎಂಬುದನ್ನು ವಿವರಿಸಿದೆ. ಈ ವಿವರಣೆಯ ಭಾಗವಾಗಿ ಭಾರತದ ಪಾರಂಪರಿಕ ಜೀವನ ದೃಷ್ಟಿ, ಸಂಸ್ಕೃತಿ, ನಾಗರೀಕತೆ, ವಸಾಹತುಶಾಹಿ ಇತಿಹಾಸ, ಭೌಗೋಳಿಕತೆ, ಹವಾಮಾನ, ಜನಸಾಂದ್ರತೆ ಇತ್ಯಾದಿ ದೇಶ-ಕಾಲ ವಿಶಿಷ್ಟ ಅಂಶಗಳನ್ನು ಗಮನಿಸಿ

ನಾವು ಸಾಧಿಸಿಕೊಳ್ಳಬೇಕಾದ ಅಭಿವೃದ್ಧಿಯ ರೀತಿ-ನೀತಿಗಳೇ ಬೇರೆ ಎಂದು ಸೂಚಿಸಿದೆ. ಅದು ಪಶ್ಚಿಮದ ಸದಾ ಏರುತ್ತಾ ಹೋಗುವ ಜೀವನ ಮಟ್ಟದಿಂದ ಪ್ರೇರೇಪಿತವಾದ ಸರಕು ಅರ್ಥಶಾಸ್ತ್ರದ ಅಭಿವೃದ್ಧಿ ಮಾದರಿಯಾಗಿರದೆ, ಸರ್ವರಿಗೂ ಸಾಧ್ಯವಾಗುವ ಸರಳ ಸಭ್ಯ ಜೀವನ ಮಟ್ಟದೆಡೆಗೆ ತುಡಿಯುವ ಜನತಾ ಅರ್ಥಶಾಸ್ತ್ರವನ್ನಾಧರಿಸಿದ ಅಭಿವೃದ್ಧಿ ಮಾದರಿಯಾಗಿರಬೇಕು ಎಂದು ಹೇಳಿದೆ. ನಮ್ಮ ದೇಶ ಯೂರೋಪ್ ಅಥವಾ ಅಮೆರಿಕಾದಂತಾಗಬೇಕಾದರೆ ಇನ್ನೂ ಒಂದೆರಡು ಭೂಮಿಗಳು ಬೇಕಾಗುತ್ತವೆ ಎಂದು ಸೂಚಿಸಿದೆ. ನನ್ನ ಈ ಮಾತುಗಳನ್ನು ಕೇಳಿ ಕೆಲವರು ಬೌದ್ಧಿಕವಾಗಿ ತಲೆದೂಗಿ ಮೆಚ್ಚುಗೆ ವ್ಯಕ್ತಪಡಿಸಿದರಾದರೂ, ಯೂರೋಪಿನ 'ಭವ್ಯ'ತೆಗೆ ಮಾರುಹೋಗಿದ್ದಂತೆ ಕಂಡ ಬಹಳ ಜನಕ್ಕೆ ಈ 'ಸಮಾಜವಾದಿ ಪುರಾಣ' ಶ್ರವಣ ಸುಖಕ್ಕೆ ಮಾತ್ರ ಅರ್ಹವಾಗಿ ಕಂಡಿತೆಂದೇ ನನ್ನ ಅನುಮಾನ.

ಆದರೆ ೨೦ರ ನಸುಕಿನಲ್ಲಿ ನಾನು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಬಂದಿಳಿದ ಸ್ವಲ್ಪ ಹೊತ್ತಿನಲ್ಲೇ ಕಿವಿಗೆ ಬಿದ್ದ ಸುದ್ದಿ 'ಅಭಿವೃದ್ಧಿ' ಕುರಿತ ನನ್ನ ಈ ಮಾತುಗಳನ್ನು ದುರಂತಮಯ ರೀತಿಯಲ್ಲಿ ಸಾಬೀತು ಪಡಿಸುತ್ತಿರುವುದನ್ನು ತಿಳಿದು ಗಾಬರಿಗೊಂಡೆ. ನನ್ನ ಮಾಜಿ ಸಹ ಪ್ರಯಾಣಿಕರಲ್ಲಿ ಎಷ್ಟು ಜನಕ್ಕೆ ಈ ಸುದ್ದಿ ಆಘಾತವುಂಟು ಮಾಡಿ ನನ್ನ ಮಾತುಗಳನ್ನು ಮತ್ತೆ ಮೆಲುಕು ಹಾಕಲು ಪ್ರೇರೇಪಿಸಿದೆಯೋ ನಾನು ತಿಳಿಯೆ! ಅವರಿಗೆ ಉತ್ತರಾಖಂಡದ ದುರಂತ ಈ ದರಿದ್ರ ರಾಷ್ಟ್ರದ ದಿನ ನಿತ್ಯದ ಒಂದು ಗೋಳಿನ ಸುದ್ದಿಯಾಗಿ ಕಂಡು ಮರೆತುಹೋಗಬಹುದು. ತಮ್ಮ ಬಂಧು ಬಳಗದವಾರಾರೂ ಈ ದುರಂತಕ್ಕೆ ಸಿಕ್ಕಿಲ್ಲದಿದ್ದಲ್ಲಿ ಅವರು ತಮ್ಮ ಮನೆಯ ಟಿವಿಗಳಲ್ಲಿ ಸಿನಿಮಾ-ಧಾರಾವಾಹಿಗಳನ್ನು ನೋಡಿಕೊಂಡು ಮತ್ತೆ 'ಸುಖ'ಕ್ಕೆ ಮರಳಿರಬಹುದು. ಇವರು ಯೂರೋಪ್ ಪ್ರವಾಸದುದ್ದಕ್ಕೂ ಏಕಾಗ್ರ ಚಿತ್ತದೊಡನೆ ಮಾಡಿದ ವೈವಿಧ್ಯಮಯ ಸರಕುಗಳ ಖರೀದಿಯ ಪ್ರಮಾಣ ಮತ್ತು ಉತ್ಸಾಹವನ್ನು ಗಮನಿಸಿಯಷ್ಟೇ ನಾನು ಈ ಮಾತುಗಳನ್ನಾಡುತ್ತಿರುವೆ.

-೨-

ಉತ್ತರ ಖಂಡದಲ್ಲಿ ಆಗಿರುವುದಾದರೂ ಏನು? ಅಲ್ಲಿ ಇತ್ತೀಚಿನ ಇತಿಹಾಸದಲ್ಲಿ ಕಂಡು ಕೇಳಿರದಂತಹ ಜಲಪ್ರಳಯವೇ ಸಂಭವಿಸಿದೆ! ಇಡೀ ಊರೂರುಗಳೇ ಬೆಟ್ಟಗಳ ಮೇಲಿಂದ ಜಾರಿ ದಡ ಮೀರಿ ತುಂಬಿ ಹರಿಯುತ್ತಿದ್ದ ನದಿಗಳಿಗೆ ಕುಸಿದುಬಿದ್ದಿವೆ. ಈ ಹಿಮಾಲಯ ಶ್ರೇಣಿಯಲ್ಲಿರುವ ನೂರಾರು ಯಾತ್ರಾ ಮತ್ತು ಪ್ರೇಕ್ಷಣೀಯ ಸ್ಥಳಗಳಿಗೆ ತೆರಳಿದ್ದ ಭಾರತದ ವಿವಿಧ ಭಾಗಗಳ ಲಕ್ಷಾಂತರ ಜನ ಭಕ್ತರು, ಪ್ರವಾಸಿಗರು ಸ್ಥಳೀಯರೊಂದಿಗೆ ಜಲಪ್ರಳಯಕ್ಕೆ ಸಿಕ್ಕಿ ತತ್ತರಿಸಿದ್ದಾರೆ. ಇವರಲ್ಲಿ ಹಲವರು ಅನಾಮಿಕರಾಗಿ ಸತ್ತಿದ್ದರೆ, ಸಾವಿರಾರು ಜನ ಹೆಂಗಸರು-ಮಕ್ಕಳೆನ್ನದೆ ದೂರದ ದುರ್ಗಮ ಗಿರಿ-ಕಂದರ-ಕಣಿವೆಗಳಲ್ಲಿ ಸಿಕ್ಕಿ ಹಾಕಿಕೊಂಡು, ಸಂಪರ್ಕ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ.

ನಮ್ಮ ಹೆಮ್ಮೆಯ ಸೇನೆ ಅದ್ಭುತವೆನ್ನಿಸುವ ರೀತಿಯಲ್ಲಿ ಮತ್ತು ಪ್ರಮಾಣದಲ್ಲಿ ತನ್ನೆಲ್ಲ ಶಕ್ತಿ-ಸಾಮರ್ಥ್ಯ ಮತ್ತು ಸಾಧನ-ಸಲಕರಣೆಗಳನ್ನು ಬಳಸಿಕೊಂಡು ಹಗಲಿರುಳೆನ್ನದೆ, ಚಳಿ-ಮಳೆ-ಗಾಳಿಯೆನ್ನದೆ ದೇಶವಾಸಿಗಳ ಪ್ರಾಣ ರಕ್ಷಣೆ ಮತ್ತು ಪರಿಹಾರ ಕಾರ್ಯಗಳನ್ನು ಕೈಗೊಂಡಿದೆ. ಹೆದರಬೇಡಿ, ಬದುಕುಳಿದಿರುವ ಕೊನೆಯ ವ್ಯಕ್ತಿಯನ್ನು ರಕ್ಷಿಸಿಕೊಂಡು ಬರುವವರೆಗೂ ನಮ್ಮ ಕಾರ್ಯಾಚರಣೆ ನಿಲ್ಲುವುದಿಲ್ಲ ಎಂದು ಅದು ಅಭಯ ನೀಡಿದೆ.

ಜನ ಇನ್ನೂ ಸಂಕಷ್ಟದಿಂದ ಪಾರಾಗಿಲ್ಲ. ಬಹುಶಃ ಅದಕ್ಕಿನ್ನೂ ಕೆಲವು ದಿನಗಳು ಬೇಕು. ಸತ್ತವರೆಷ್ಟು, ಅವರ್‍ಯಾರು ಎಂದು ಇನ್ನೂ ಎಣಿಸಲು, ಗುರುತಿಸಲು ಸಾಧ್ಯವಾಗುತ್ತಿಲ್ಲ. ಸತ್ತವರ ಸಂಖ್ಯೆ ಒಂದೇ ಸಮನೆ ಏರುತ್ತಿದ್ದು, ಅದು ಸಾವಿರಾರು ಆಗುವ ಎಲ್ಲ ಸಾಧ್ಯತೆಗಳಿದ್ದಂತಿವೆ. ಇದೊಂದು, ನಿಜವಾಗಿಯೂ ಸಂಭವಿಸಿರುವ ಒಂದು ರಾಷ್ಟ್ರೀಯ ವಿಪತ್ತು. ಈ ವಿಪತ್ತಿನಲ್ಲಿ ಬಂಧು ಬಳಗವನ್ನು ಕಳೆದುಕೊಂಡು ದುಃಖಕ್ಕೀಡಾದವರಿಗೆ ಸಹಾನುಭೂತಿ ವ್ಯಕ್ತಪಡಿಸುವ, ನಿರಾಶ್ರಿತರಾದವರಿಗೆ ಆದಷ್ಟು ಬೇಗ ಆಶ್ರಯ-ಪರಿಹಾರ ಸಿಗಲಿ ಎಂದು ಪ್ರಾರ್ಥಿಸುವ ಹೊತ್ತಿನಲ್ಲೇ ಇದು ಹೇಗಾಯಿತು? ಏಕಾಯಿತು? ಎಂದು ನಾವು ವ್ಯವಧಾನದಲ್ಲಿ ಯೋಚಿಸಬೇಕಿದೆ.

ಈ ಅನಾಹುತಕ್ಕೆ ಅಕಾಲಿಕವಾದ ಭಾರಿ ಮಳೆ, ಅದರಿಂದುಂಟಾದ ಭೂ ಕುಸಿತ ಕಾರಣ ಎನ್ನಲಾಗುತ್ತಿದೆ. ಆದರೆ ಈ ಅಕಾಲಿಕ ಮಳೆಗೆ ಮತ್ತು ಕಟ್ಟಡ ಕಟ್ಟಡಗಳೇ, ಊರೂರುಗಳೇ ಕುಸಿದು ಕೊಚ್ಚಿಹೋಗುವಂತಹ ಭೂಕುಸಿತಗಳಿಗೆ ಕಾರಣವೇನು? ನಾವು ಈಗ ವಿಜ್ಞಾನವನ್ನು ತಂತ್ರಜಾನ ರೂಪದಲ್ಲಿ ಮಾತ್ರ ಗ್ರಹಿಸಿ ಬಳಸುತ್ತಿದ್ದೇವೆ. ತಂತ್ರಜ್ಞಾನವೆಂದರೆ ನನ್ನ ಪ್ರಕಾರ ಧರ್ಮ-ಕರ್ಮಗಳ ಪ್ರಜ್ಞೆಯೇ ಇಲ್ಲದ ವಿಜ್ಞಾನವೇ ಆಗಿದೆ. ವಿಜ್ಞಾನವನ್ನು ನಮಗೆ ಬೇಕಾದಂತೆ ಜಗತ್ತನ್ನು ಪುನರ್‌ರೂಪಿಸಿಕೊಳ್ಳಲು ಬಳಸುವ ಮುನ್ನ ಈ ಜಗತ್ತನ್ನು ಪೂರ್ಣವಾಗಿ ಅರ್ಥ ಮಾಡಿಕೊಂಡು ಬಳಸುವುದನ್ನು ಮರೆತಿದ್ದೇವೆ. ಹಾಗೇ ಅರ್ಥ ಮಾಡಿಕೊಂಡಾಗ ಬಹುಶಃ ನಮಗೆ ಗೊತ್ತಾಗುತ್ತದೆ, ಈ ಜಗತ್ತನ್ನು ನಮಗೆ ಬೇಕಾದಂತೆ ಬದಲಾಯಿಸಿಕೊಳ್ಳಲಾರೆವೆಂದು; ಅದಕ್ಕೆ ಕೆಲವು ಮಿತಿಗಳಿವೆ ಎಂದು. ಏಕೆಂದರೆ ಅದನ್ನು ಸೃಷ್ಟಿಸಿದವರು ನಾವಲ್ಲ ಮತ್ತು ಅದು ಸೃಷ್ಟಿಯಾದ ಬಗೆ ನಮಗೆ ಗೊತ್ತಿಲ್ಲ. ಈ ಅರಿವಿನಲ್ಲೇ ನಿಜವಾದ ಧರ್ಮ-ವಿಜ್ಞಾನಗಳು ಸಮನ್ವಯಿಸುವುದು.

-೩-

ಅದಿರಲಿ, ಈಗ ದುರಂತ ಸಂಭವಿಸಿರುವ ಹಿಮಾಲಯ ಶ್ರೇಣಿಯನ್ನೇ ನೋಡಿ. ಅದು ಜಗತ್ತಿನ ಅತ್ಯಂತ ಎಳೆಯ ಪರ್ವತ ಶ್ರೇಣಿ. ಅದು ಆಗಿರುವುದು ಪುಸುಕಲು ಪುಸುಕಲು ಆದ ಕಲ್ಲು-ಮಣ್ಣುಗಳಿಂದ. ಸಹಜವಾಗಿಯೇ ಅದಕ್ಕೆ ತಕ್ಕಂತೆ ಅಲ್ಲಿ ಜೀವ ವಿಕಾಸವಾಗಿದೆ. ಆ ಸೂಕ್ಷ್ಮತೆಗೆ ತಕ್ಕಂತೆ ನಮ್ಮ ಪೂರ್ವಿಕರು ಅಲ್ಲಿ ಜೀವನ ಕ್ರಮವೊಂದನ್ನು ರೂಪಿಸಿಕೊಟ್ಟಿದ್ದಾರೆ. ಆದರೆ ವಿಜ್ಞಾನ-ತಂತ್ರಜ್ಞಾನ-ಆಧುನಿಕತೆ-ಅಭಿವೃದ್ಧಿ ಎಂದೆಲ್ಲ ಅಲ್ಲಿ ನಾವೇನು ಮಾಡಿದೆವು? ಅದು ಹೊರಲಾಗದಂತಹ ಮೂರ್ತ-ಅಮೂರ್ತ

ಭಾರಗಳನ್ನು ಅದರ ಮೇಲೆ ನಾವು ಹೇರಿದೆವು. ಜೊತೆಗೆ ಅದರ ಭಾರ ಹೊರುವ ಶಕ್ತಿ-ಸಾಮರ್ಥ್ಯಗಳನ್ನೂ ಕುಂದಿಸುತ್ತಾ ಹೋದೆವು. ನಮ್ಮ ಸುಖ-ಸಂತೋಷಗಳ ಅನ್ವೇಷಣೆಯು ನಮಗೆ ಗೊತ್ತಿಲ್ಲದಂತೆಯೇ 'ಮಜಾ' ಸಂಸ್ಕೃತಿಯಾಗಿ ಪರಿವರ್ತನೆಗೊಂಡು ಅಲ್ಲಿ ದೊಡ್ಡ ದೊಡ್ಡ ಕಟ್ಟಡಗಳು ಎದ್ದವು. ಎಲ್ಲೆಲ್ಲಿಗೂ ರಸ್ತೆಗಳು ನಿರ್ಮಾಣವಾದವು. ಪ್ರವಾಸ, ಮನರಂಜನೆ, ಭೋಗ, ಭೂ-ವ್ಯವಹಾರ, ಕೈಗಾರಿಕೆ, ಉದ್ಯಮ, ಗಣಿಗಾರಿಕೆ ಎಂದೆಲ್ಲ 'ಅಭಿವೃದ್ಧಿ' ಚಟುವಟಿಕೆಗಳು ಶುರುವಾದವು. ಹೊರಗಿಂದ ಜನ ಪ್ರವಾಸೋಪಾದಿಯಲ್ಲಿ ಬರಲಾರಂಭಿಸಿದರು.

ನಮ್ಮ ಧರ್ಮ ದುರಂಧರರೇನೂ ಹಿಂದೆ ಬೀಳಲಿಲ್ಲ. ಅವರು ಧರ್ಮವನ್ನು ಜಾಹೀರಾತುಗಳ ಮೂಲಕ ಮಾರಾಟಕ್ಕಿಟ್ಟು, ಹಿಂದೆ ವಿರಾಗಿಗಳು ಮತ್ತು ಸಾಧಕರು ಮಾತ್ರ ಕಷ್ಟಪಟ್ಟು ವ್ಯವಧಾನದಲ್ಲಿ ಕಾಲು ನಡಿಗೆಯಲ್ಲೋ, ಪ್ರಾಣಿಗಳ ಮೇಲೋ ಹೋಗುತ್ತಿದ್ದ ದೂರದ, ಆಳದ ದುರ್ಗಮ ಪವಿತ್ರ ತಾಣಗಳಿಗೆ ದುಡ್ಡಿಗೆ ದೊರೆಯುವ ಸಕಲ ವೇಗ ವಾಹನ ಸೌಲಭ್ಯಗಳೊಂದಿಗೆ ಜನಸಮೂಹವನ್ನು ನುಗ್ಗಿಸತೊಡಗಿದರು. ದೇವ ಪ್ರಯಾಗದಾಚೆ ದೇವಲೋಕವೇ ಇದೆ. ಆದರೆ ಆ ದೇವಲೋಕದಲ್ಲಿ ಇದ್ದಕ್ಕಿದ್ದಂತೆ ಜನರ ಜಾಗತಿಕ ಸಂತೆಯೇ ನಿತ್ಯ ನೆರೆಯತೊಡಗಿದರೆ? ದೇವತೆಗಳಿಗೆ ನಿಜವಾಗಿಯೂ ತಲೆ ಕೆಟ್ಟಂತಾಗಿರಬೇಕು! ತನ್ನಲ್ಲಿರುವ ರುದ್ರ ಪ್ರಯಾಗವೆಂದರೇನೆಂದು ಹೇಳುವ ಬಯಕೆಯಾಗಿರಬೇಕು ಆ ಲೋಕಕ್ಕೆ!

-೪-

ಈ ವಿಪತ್ತು ಇದ್ದಕ್ಕಿದ್ದಂತೆ ಸಂಭವಿಸಿದ್ದಲ್ಲ. ಹಿಮಾಲಯ ತಜ್ಞ ಪ್ರಸೂನ್ ಜೋಷಿ ಹೇಳಿದಂತೆ ಪ್ರಕೃತಿ ಕಿವಿ ಮಾತುಗಳಿಗೆ ಕಿವುಡಾದವರಿಗೆ ಈಗ ಘರ್ಜಿಸಿ ಎಚ್ಚರಿಕೆ ನೀಡಿದೆ. ನಾವು ಕೆಲವರು ೨೦ ವರ್ಷಗಳ ಹಿಂದೆ ಉತ್ತರಕಾಶಿಯಿಂದ ಗಂಗೋತ್ರಿಯೆಡೆಗೆ ಪಯಣಿಸುತ್ತಿದ್ದಾಗ ನಮ್ಮ ವಾಹನದ ಮುಂದೆ ಒಬ್ಬರು ಸದಾ ಚಲಿಸುತ್ತಾ ಪರ್ವತಗಳ ಮೇಲಿಂದ ಜಾರಿ ಬರುತ್ತಿದ್ದ ಸಣ್ಣ-ಪುಟ್ಟ ಹೆಂಟೆ ಮತ್ತು ಬಂಡೆಗಳನ್ನು ರಸ್ತೆಯ ಇಕ್ಕೆಲಗಳಿಗೆ ಸರಿಸುತ್ತಲೇ ನಾವು ಮುಂದೆ ಹೋಗಬೇಕಿತ್ತು. ಹಿಮಾಲಯ ಬೂದಿ ಪರ್ವತ. ಹಾಗಾಗಿ ಅಲ್ಲಿರುವನೆಂದು ಹೇಳಲಾದ ಶಿವ ಬೂದಿ ಬಡುಕ. ಹಾಗೇ, ಸ್ಮಶಾನವಾಸಿಯೂ! ಆಗ ನಮಗೆ ಅಪರೂಪಕ್ಕೊಮ್ಮೆ ಎದುರಾಗುತ್ತಿದ್ದವರು ಸಾಮಾನ್ಯ ಯಾತ್ರಿಕರಿಗಿಂತ ಹೆಚ್ಚಾಗಿ ವಿವಿಧ ವೇಷಗಳ ಸನ್ಯಾಸಿಗಳೇ! ಆದರೆ ಇಂದು? ಆಗಿನ್ನೂ ಜಾಗತೀಕರಣದ ಸಂತೆ ಆರಂಭವಾಗಿರಲಿಲ್ಲ. ಹಣವೆಂಬುದು ಸಿಕ್ಕವರಿಗೆ ಸೀರುಂಡೆಯಾಗಿರಲಿಲ್ಲ. ಈಗ ಹಿಮಾಲಯಕ್ಕೆ ನುಗ್ಗಿರುವ ಜನವನ್ನೊಮ್ಮೆ ನೋಡಿ. ಒಂದು ಕೋಟಿ ಜನಸಂಖ್ಯೆಯ ಈ ರಾಜ್ಯದಲ್ಲಿ ಸೇರುವ ಪ್ರವಾಸಿಗರ ಸಂಖ್ಯೆ ಇನ್ನೆರಡು ಕೋಟಿ! ಹಾಗೇ ಸದಾ ಬಿಸಿಲಿನಲ್ಲೋ-ಮಂಜಿನಲ್ಲೋ ಸ್ಫಟಿಕ ಶುದ್ಧವಾಗಿ ಬೆಳಗುತ್ತಿದ್ದ ಕೇದಾರ-ಬದರಿ-ಗೋವಿಂದಘಾಟ್-ಉತ್ತರಕಾಶಿಗಳಿಗೆ ಒದಗಿರುವ ಗತಿಯನ್ನೂ ನೋಡಿ. ಕೊಚ್ಚೆ-ಕೆಸರು-ಮಣ್ಣು-ಕಲ್ಲು-ಹೆಣಗಳ ಮಧ್ಯೆ ಅವು

ಸಿಕ್ಕಿಹಾಕಿಕೊಂಡಿವೆ. ಅವೆಲ್ಲ ಇನ್ನು 'ಸರಿ' ಹೋಗಲು ಬಹುಶಃ ಈ ದೇಶದ ಬುದ್ಧಿ ಮತ್ತು ಮನಸ್ಸುಗಳು ಮೊದಲು 'ಸರಿ' ಹೋಗಬೇಕಿದೆ.

ಈ ಬುದ್ಧಿ-ಮನಸ್ಸುಗಳು 'ಸರಿ' ಹೋಗುವುದೆಂದರೇನು? ಹಾಗೆಂದರೆ, ಬುದ್ಧಿ ಮತ್ತು ಮನಸ್ಸುಗಳಿಲ್ಲದವೆಂದು ಅಥವಾ ಅವು ಜಡಕ್ಕೆ ಹತ್ತಿರವಾದ ಕೆಳಹಂತದವೆಂದೂ ನಾವು ನಂಬಿರುವ ಈ ಜಗತ್ತು, ಈ ಭೂಮಿ, ಈ ನೆಲ-ನೀರು- ಆಕಾಶ-ಸಸ್ಯ-ಪ್ರಾಣಿಗಳು ಉಸುರುವ ಸಂದೇಶ-ಸೂಚನೆಗಳನ್ನು, ಅವುಗಳ ಸಂತೋಷ-ಸಂಕಟಗಳನ್ನು ಗ್ರಹಿಸುವ, ಅರಿಯುವ ಸೂಕ್ಷ್ಮತೆಯನ್ನು ಗಳಿಸಿಕೊಳ್ಳುವುದು ಎಂದರ್ಥ. ಅದನ್ನೇನೂ ಹೊಸದಾಗಿ ಸಂಪಾದಿಸಿಕೊಳ್ಳಬೇಕಿಲ್ಲ. ನಾವೂ ಪ್ರಕೃತಿಯ ಶಿಶುಗಳೇ. ಹಾಗಾಗಿ ಅವು ನಮ್ಮಲ್ಲಿ ಅಂತರ್ಗತವಾಗಿವೆ. ಆದರೆ ಆ ಶಿಶುತ್ವವನ್ನು ಮೀರಿ ವಿಜ್ಞಾನ-ತಂತ್ರಜ್ಞಾನಗಳೆಂಬುವನ್ನು ಬಿಲ್ಲು ಬಾಣಗಳನ್ನಾಗಿ ಮಾಡಿಕೊಂಡು ನಾವು ಮಾತ್ರ ಹಂತಕರಾಗಹೊರಟುಬಿಟ್ಟಿದ್ದೇವೆ. ನಮ್ಮ (ದೇಶ-ಸಮಾಜದ) ಶಕ್ತಿ-ಸಾಮರ್ಥ್ಯಗಳಿಗೆ ಮೀರಿದ ಸುಖ-ಭೋಗಗಳ ಅನ್ವೇಷಣೆಯಲ್ಲಿ ಆ ಅನ್ವೇಷಣೆಯ ಗುಂಗು-ಮರುಳು-ಸೊಕ್ಕಿನಲ್ಲಿ ಆ ಶಕ್ತಿ ಕಳೆದುಕೊಂಡಿದ್ದೇವೆ. ಹಾಗಾಗಿ ನಾವೀಗ ಕಳೆದುಹೋಗಿರುವ ನಮ್ಮ ನಿಜವಾದ ಕಿವಿ-ಮೂಗು-ಕಣ್ಣು-ಚರ್ಮಗಳನ್ನು ಪಡೆಯಬೇಕಿದೆ.

-೫-

ಹಿಮಾಲಯದಲ್ಲಿ ಅಸಂಖ್ಯಾತ ರೀತಿಯ ಜಲಮೂಲಗಳಿವೆ. ಆದರೆ ಅವುಗಳಲ್ಲಿ ಬಹಳಷ್ಟು ಈಗ ಬತ್ತಿ ಹೋಗಿವೆ. ಇದರಿಂದಾಗಿಯೇ ಅನೇಕ ಸಸ್ಯ ಪ್ರಭೇಧಗಳು, ಹಣ್ಣು ಹಂಪಲು-ಹೂಗಳು-ಕ್ರಿಮಿ-ಕೀಟ-ಪಕ್ಷಿ-ಪ್ರಾಣಿಗಳ ಸಂತತಿ ನಾಶವಾಗಿವೆ. ಇದರಿಂದಾಗಿ ಅಲ್ಲಿನ ಹವಾಮಾನ-ಭೌಗೋಳಿಕತೆಗಳೇ ಅಲ್ಲೋಲಕಲ್ಲೋಲಕ್ಕೀಡಾಗಿವೆ. ಇದರ ಪರಣಾಮವಾಗಿ, ಅಲ್ಲಿನ ಮೂಲ ಸಹಜ ಸೌಂದರ್ಯ ನಾಶವಾಗಿ ಹೋಗಿದೆ. ಆದರೆ ಮೂಲ ಸಹಜ ಸೌಂದರ್ಯದ ಸೊಬಗನ್ನು ಸವಿಯುವ ಶಕ್ತಿಯನ್ನೇ ಕಳೆದುಕೊಂಡಿರುವ ನಾವು ಅಲ್ಲಿ ಮಾನವ ನಿರ್ಮಿತವಾದ ವಾಸ್ತು-ವಿನ್ಯಾಸಗಳ, ಬಣ್ಣ ಬಣ್ಣಗಳ ಕಟ್ಟಡ, ಈಜುಕೊಳ, ಗಾಜಿನ ಮನೆಗಳು, ಪ್ರಾಣಿ ಸಂಗ್ರಹಾಲಯ, ತೋಟ, ನೆಡು ತೋಪುಗಳನ್ನು ನಿರ್ಮಿಸಿ ಪ್ರತಿ-ಸೌಂದರ್ಯವೊಂದನ್ನು ಸೃಷ್ಟಿಸಿಕೊಂಡು ಮೈಮರೆತಿದ್ದೇವೆ. ಈ ವಿನಾಶಕಾರಿ ಜಲಪ್ರಳಯ ನಮ್ಮನ್ನು ಈ ಮೈಮರೆವಿನಿಂದ ಎಚ್ಚರಿಸಬೇಕಿದೆ.

ಹಿಮಾಲಯದಲ್ಲಿ ಸುಮಾರು ೨೫ ತರಹದ ಪರಿಮಳಗಳು ಕಳೆದುಹೋಗಿವೆ ಎಂದು ಪರಿಸರ ತಜ್ಞರು ಹೇಳುತ್ತಿದ್ದಾರೆ. ಆ ಪರಿಮಳಗಳ ನಾಶದ ಸಂದೇಶ ನಮ್ಮಲ್ಲಿ ಎಷ್ಟು ಜನರಿಗೆ ಅರ್ಥವಾದೀತು? ಇಂದು ಪರಿಸರವಾದಿಗಳೆಂದರೆ ಜನರ(ಇವರಲ್ಲಿ ರಾಜಕಾರಣಿಗಳು, ಆಡಳಿತಗಾರರು, ಅಭಿವೃದ್ಧಿವಾದಿ ವಿಜ್ಞಾನಿಗಳು, ತಂತ್ರಜ್ಞರು, ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು ಎಲ್ಲರೂ ಸೇರುತ್ತಾರೆ) ಸಿಟ್ಟು ನೆತ್ತಿಗೇರುತ್ತದೆ.

ಏಕೆಂದರೆ ಅವರು 'ಅಭಿವೃದ್ಧಿ' ವಿರೋಧಿಗಳು! ಅವರು ಒಂದು ಕಟ್ಟಡ ಕಟ್ಟಲು ಬಿಡುವುದಿಲ್ಲ, ಒಂದು ಮರ ಕಡಿಯಲು ಬಿಡುವುದಿಲ್ಲ, ಒಂದು ರಸ್ತೆ ಮಾಡಲು ಬಿಡುವುದಿಲ್ಲ, ಒಂದು ಕೈಗಾರಿಕೆ ತೆರೆಯಲು ಬಿಡುವುದಿಲ್ಲ, ಒಂದು ಅಣೆಕಟ್ಟೆ ನಿರ್ಮಿಸಲು ಬಿಡುವುದಿಲ್ಲ, ಒಂದು ಅಣುಶಕ್ತಿ ಕೇಂದ್ರ ಸ್ಥಾಪಿಸಲು ಬಿಡುವುದಿಲ್ಲ! ಪ್ರಗತಿಯ ಹಾದಿಗೆ ಅಡ್ಡ ನಿಲ್ಲುವ ಶನಿಗಳು ಇವರು! ಅಲ್ಲಾ, ಪುಣ್ಯ ಮಾಡಿ ಮಾನವ ಜನ್ಮ ಪಡೆದಿರುವುದಾದರೂ ಏತಕ್ಕೆ, ಸುಖದ ಅಮಲೇ ಇಲ್ಲದಾದರೆ? ಆದರೆ ಇಲ್ಲಿ ನಾವು ಮಾಡುವ ನಿರ್ಣಾಯಕ ತಪ್ಪೆಂದರೆ ಜನ ಎಂದೊಡನೆ ಇತರರ ಕಡೆಯಷ್ಟೇ ನೋಡುವುದು! ಏಕೆಂದರೆ ಈ ರಾಜಕಾರಣಿಗಳು, ಆಡಳಿತಗಾರರು, ವಿಜ್ಞಾನಿ-ತಂತ್ರಜ್ಞಾನಿಗಳು, ಕೈಗಾರಿಕೋದ್ಯಮಿಗಳಾದರೂ ಏನು ಮಾಡುತ್ತಾರೆ? ಅವರು ಮಾಡುವುದೆಲ್ಲ ಜನರ ಹೆಸರಿನಲ್ಲೇ, ಜನರಿಗಾಗಿಯೇ. ಆದರೆ ನಾವೇನು ಮಾಡುತ್ತಿದ್ದೇವೆ? ಏನೂ ಮಾಡುತ್ತಿಲ್ಲವಾದರೆ, ಅದಕ್ಕೆ ಕಾರಣ, ನಾವೂ ಒಳಗೆ ಮರಿ ರಾಜಕಾರಣಿಗಳೇ! ಅವರ ಆಸೆ ನಮ್ಮ ಆಸೆ ಒಂದೇ ಆಗಿದೆ. ಆದರೆ ಅವರು ನಮ್ಮ ಆಸೆಗಳಿಂದ ಲಾಭ ಮಾಡಿಕೊಂಡು ತಮ್ಮ ಆಸೆಗಳನ್ನು ತೀರಿಸಿಕೊಳ್ಳುತ್ತಿದ್ದಾರಷ್ಟೆ! ಜನ ಆತ್ಮಶೋಧನೆ ಮಾಡಿಕೊಳ್ಳುವ ಕಾಲ ಇದೀಗ ಬಂದಿದೆ ಎನಿಸುತ್ತಿದೆ. ಇಂದು ಹಿಮಾಲಯಕ್ಕೆ ಸಂಭವಿಸಿದ್ದು ನಾಳೆ ಎಲ್ಲಾದರೂ ಸಂಭವಿಸಬಹುದಾಗಿದೆ, ಕಾಣಬಲ್ಲವರಿಗೆ, ಕೇಳಬಲ್ಲವರಿಗೆ ಈಗಾಗಲೇ ಸಂಭವಿಸಲಾರಂಭಿಸಿವೆ... ಇನ್ನಾವುದೋ ರೂಪದಲ್ಲಿ... ಏಕೆಂದರೆ ಇಲ್ಲಿಯ ಪ್ರಶ್ನೆ, ನಾವು ಹಿಡಿದಿರುವ ಹಾದಿಯದು.

–೬–

ಇದು ನೈತಿಕ ಉಪದೇಶದ ಮಾತಲ್ಲ ಅಥವಾ ಧರ್ಮೋಪದೇಶವೂ ಅಲ್ಲ. ಇದನ್ನು ಪರಿಸರ ತಜ್ಞರು ಹೇಳುತ್ತಿದ್ದಾರೆ, ಹೇಳುತ್ತಲೇ ಬಂದಿದ್ದಾರೆ. ನಮಗೆ ಈಗ ಅರಿವಾಗಬೇಕಾದ ಮೊದಲ ಮತ್ತು ಮುಖ್ಯ ಸಂಗತಿಯೆಂದರೆ, ಇಂದು ವಿಜ್ಞಾನವೆಂದರೆ, ಇಂದಿನ ಅದರ ಶಿಖರ ಮತ್ತು ಪೂರ್ಣ ರೂಪ ಎಂದರೆ ಪರಿಸರ ವಿಜ್ಞಾನ. ಅದು ಇಂದಿನ ವಿಜ್ಞಾನವೂ ಹೌದು, ಧರ್ಮವೂ ಹೌದು. ಅದರದ್ದೇ ಕೊನೆಯ ಮಾತು. ಹಿಮಾಲಯದ ಬಗ್ಗೆ ಅವರು ಕಳೆದ ೩೫ ವರ್ಷಗಳಿಂದ ಎಚ್ಚರಿಕೆ ಕೊಡುತ್ತಲೇ ಬಂದಿದ್ದಾರೆ. ಹಿಮಾಲಯ ಶ್ರೇಣಿಯಲ್ಲಿ ಭಾಗೀರಥೀ-ಅಲಕನಂದಾ-ಯಮುನಾ-ಗಂಡಕಿ ಇತ್ಯಾದಿ ನದಿಗಳ ಮೇಲೆ ಸುಮಾರು ೩೦೦ ಜಲವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗುತ್ತಿದೆ. ಇದಕ್ಕೆ ಏನೆಲ್ಲ ಕಾಮಗಾರಿಗಳು ನಡೆದಿವೆ! ಪರಿಸರ ತಜ್ಞರು ಇದೆಲ್ಲ ಬೇಡವೆಂದರು. ಹಿಮಾಲಯದ ಒಂದು ಭಾಗವನ್ನು ಸೂಕ್ಷ್ಮ ಪರಿಸರ ಭಾಗವೆಂದು ಇವರು ಗುರುತಿಸಿ, ಇಲ್ಲಿ ಯಾವ ಅಭಿವೃದ್ಧಿ ಚಟುವಟಿಕೆಗಳು ಉಚಿತವಲ್ಲವೆಂದರು. ಆದರೆ ಪ್ರಧಾನಮಂತ್ರಿ ಕಾರ್ಯಾಲಯದಿಂದ ಹಿಡಿದು ಉತ್ತರಾಖಂಡದ ವಿವಿಧ ಪಕ್ಷಗಳ ಮುಖ್ಯಮಂತ್ರಿಗಳವರೆಗೆ ಎಲ್ಲರೂ ಇದನ್ನು ಕಡತಗಳ ಮರೆಯಲ್ಲಿಡಲು ಯತ್ನಿಸಿದರು.

ಏಕೆಂದರೆ, ಎಲ್ಲರಿಗೂ ಅಭಿವೃದ್ಧಿ ಬೇಕಿದೆ. ಅದರಲ್ಲಿ ಸಾಮಾನ್ಯ ಜನತೆಯೂ ಸೇರಿದಂತೆ ಎಲ್ಲರಿಗೆ ಲಾಭದ ಪಾಲಿದೆ. (ಲಾಭದ ಪ್ರಮಾಣದ ಬಗ್ಗೆಯಷ್ಟೇ ಕಿತ್ತಾಟ, ಜಗಳ, ಸೈದ್ಧಾಂತಿಕ ಭಿನ್ನಾಭಿಪ್ರಾಯ!) ಅದಕ್ಕಾಗಿ ವಿದ್ಯುತ್ ಬೇಕಿದೆ. ಹೆಚ್ಚೆಚ್ಚು ವಿದ್ಯುತ್ ಏಕೆ ಬೇಕು? ಹೆಚ್ಚೆಚ್ಚು ವೈಭವೋಪೇತ ಕಾರುಗಳು, ಹವಾ ನಿಯಂತ್ರಕಗಳು, ಹೊಸ ಹೊಸ ರೀತಿಯ ಮೊಬೈಲುಗಳು, ಕ್ಯಾಮರಾಗಳು, ಕಂಪ್ಯೂಟರುಗಳು, ಮರ ಕಡಿಯುವ, ಬೆಟ್ಟ ಉರುಳಿಸುವ, ಮರಳು ಬಾಚುವ, ರಸ್ತೆ ನಿರ್ಮಿಸುವ ಹೆಮ್ಮಾರಿ ಜೆಸಿಬಿ ಯಂತ್ರಗಳು, ಅತ್ಯಾಧುನಿಕ ಸುಖಸಾಧನ ಸಲಕರಣೆಗಳು ಮತ್ತು ಅವನ್ನು ಬಳಸಿ ಆರೋಗ್ಯ ಕೆಡಿಸಿಕೊಂಡರೆ ಬೇಕಾಗುವ ಅತ್ಯಾಧುನಿಕ ವೈದ್ಯಕೀಯ ಸಾಧನ ಸಲಕರಣೆಗಳ ಉತ್ಪಾದನೆಗೆ ಹೆಚ್ಚೆಚ್ಚು–ಉತ್ಪಾದಿಸಿದಷ್ಟೂ ಸಾಲದಾಗುವಷ್ಟು–ವಿದ್ಯುತ್ ಬೇಡವೇ? ಪ್ರಗತಿ ಎಂದರೆ ಆರ್ಥಿಕತೆಯ ಉತ್ಪಾದನೆ–ಬಳಕೆಯ ಚಕ್ರ ಸದಾ ತಿರುಗುತ್ತಲೇ ಇರಬೇಕಲ್ಲವೇ? ಹಾಗಿದ್ದರೆ ಇಂತಹ ಇನ್ನಷ್ಟು ಅನಾಹುತಗಳಿಗೆ ಸಿದ್ಧವಾಗಿ ಎನ್ನುತ್ತಿದೆ, ಕೂಗಿ ಹೇಳುತ್ತಿದೆ ಪ್ರಕೃತಿ.

–೨–

ಜನ ನಿರ್ಧರಿಸಬೇಕಿದೆ. ಆದರೆ ಇಂತಹ 'ಅಭಿವೃದ್ಧಿ'ಯ ಅತ್ಯುತ್ತಮ ಪ್ರತೀಕವೆಂದು ಪ್ರಸಿದ್ಧರಾಗಿರುವ ಮೋದಿ ಆಗಲೇ ನಿರ್ಧರಿಸಿಯಾಗಿದೆ! ತಮ್ಮ ರಾಜ್ಯದ ಯಾತ್ರಿಕರನ್ನಷ್ಟೇ ರಕ್ಷಿಸಿಕೊಂಡು ಹೋಗಲು ಉತ್ತರಾಖಂಡಕ್ಕೆ ಧಾವಿಸಿದ ಅವರು ಅದೋ, ಕೇದಾರನಾಥ ದೇವಾಲಯಕ್ಕೆ ಒದಗಿರುವ ದುರ್ಗತಿಯ ಬಗ್ಗೆ ಕಣ್ಣೀರು ಸುರಿಸುತ್ತಿದ್ದಾರೆ. ಅದನ್ನು ತಾವು ಮತ್ತೆ ಭವ್ಯವಾಗಿ ಕಟ್ಟುವ ಘೋಷಣೆ ಮಾಡಿದ್ದಾರೆ. ಸಂಘ ಪರಿವಾರದ ಗೆಳೆಯರೇ, ಎಲ್ಲಿದೆ ಹಿಂದೂ ಕೋಮುವಾದ ಎಂದು ಕೇಳುತ್ತಿದ್ದಿರಲ್ಲಾ, ಇಲ್ಲಿದೆ ನೋಡಿ ಅತಿ ಅಗ್ಗದ ಕೋಮುವಾದಿ ರಾಜಕಾರಣ. ಅಲ್ಲಾ, ಇದು ಈ ಸಂದರ್ಭದಲ್ಲಿ ಮಾಡುವಂತಹ ಘೋಷಣೆಯೇ? ಇದೇ ರೀತಿ ಧೀರ ಘೋಷಣೆ ಮಾಡಿದ್ದಂತೆ ಬಯಲು ಸೀಮೆಯ ರಾಮ ಮಂದಿರವನ್ನು ಇಂದಿನವರೆಗೂ ಕಟ್ಟಲಾಗದಿರುವ ಈ ಮಾತಿನ ವೀರರಿಗೆ, ಈ 'ಅಭಿವೃದ್ಧಿ ಶೂರ'ನಿಗೆ ಯಾರಾದರೂ ಹೇಳಬೇಕಿದೆ: ಕೇದಾರವೆಂಬುದು ನಮ್ಮ ಪೂರ್ವಿಕರಿಗೂ ಅಂತಿಮ ಗಮ್ಯವಾಗಿದ್ದ ಸ್ಥಳ. ಅದು ಸ್ವರ್ಗಾರೋಹಣದ ಜಾಗ. ಮೊದಲು ಅಲ್ಲಿಗೆ ಹೋಗುವ ದುರ್ಗಮ ದಾರಿಯ ಗುಂಟ ಆಗಿರುವ ಅನಾಹುತವನ್ನು ಗಮನಿಸಿ, ಇದೆಲ್ಲ ಏಕಾಯಿತೆಂದು, ಹೇಗಾಯಿತೆಂದು ಗ್ರಹಿಸಿ ಅದನ್ನು ಮರಳಿ ಪೂರ್ವಸ್ಥಿತಿಗೆ ತನ್ನಿರಿ. ಆಮೇಲೆ ನೋಡೋಣ, ಕಟ್ಟೋಣ ಕೇದಾರವನ್ನು!

ಆಗಸ್ಟ್, ೨೦೧೩

'ಅನ್ನ ಭಾಗ್ಯ'ದ ಹಿಂದಿರುವ ಹಸಿವು

ಪ್ರಿಯ ಓದಿಗರೇ,

ನಿಮ್ಮ ಪ್ರೀತಿಯ 'ಹೊಸ ಮನುಷ್ಯ'ದ ಮೂರನೇ ವರ್ಷದ ಈ ಮೊದಲ ಸಂಚಿಕೆಯನ್ನು ವಿಶೇಷ ಸಂಚಿಕೆಯಾಗಿ ನಿಮ್ಮ ಕೈಗಿಡುತ್ತಿದ್ದೇವೆ. ಹಳೇ ತಲೆಮಾರುಗಳು ಮರೆತೇ ಹೋಗುತ್ತಿರುವ ಮತ್ತು ಹೊಸ ತಲೆಮಾರುಗಳು ಕೇಳದೇ ಹೋಗಿರುವ 'ಸಮಾಜವಾದ' ಎಂಬ ವಿಚಾರಧಾರೆಗೆ ಬದ್ಧವಾದ, ಆದರೆ ಅದನ್ನು ಒಂದು ಸಿದ್ಧವಾದ ವಸ್ತುವಿನಂತೆ ನೋಡದೆ, ಅದರ ಸಾಧ್ಯತೆಗಳನ್ನೆಲ್ಲ ಸೃಜನಾತ್ಮಕವಾಗಿ ಪರಿಶೀಲಿಸಲು ಪ್ರಯತ್ನಿಸುತ್ತಿರುವ ವೈಯುಕ್ತಿಕ ಸಾಹಸದ ಪತ್ರಿಕೆಯೊಂದು ಎರಡು ವರ್ಷಗಳನ್ನು ಪೂರೈಸಿ ಆಯಾಸಗೊಳ್ಳದೆ ಮುಂದುವರೆದಿರುವುದು ಸಾಮಾನ್ಯ ಸಂಗತಿಯೇನೂ ಅಲ್ಲ ಎಂದು ನಾನು ಭಾವಿಸಿರುವೆ. ಇದಕ್ಕೆ ಮುಖ್ಯ ಕಾರಣ, ಪತ್ರಿಕೆ ಒಂದು ವೈಯುಕ್ತಿಕ ಸಾಹಸವಾಗಿ ಆರಂಭವಾದರೂ, ಅದು ಕ್ರಮೇಣ ಒಂದು ಚಿಕ್ಕದಾದರೂ ಸಾಮೂಹಿಕ ನೆಲೆಯನ್ನು ಕಂಡುಕೊಂಡು ಬೆಳೆಯುತ್ತಿರುವುದು. ಬೆಳೆಯುವುದು ಎಂದರೆ, ಪ್ರಮಾಣದಲ್ಲಿ ಮಾತ್ರವಲ್ಲ; ಗುಣಾತ್ಮಕವಾಗಿ ಕೂಡ. ಇದಕ್ಕೆ ಈ ವಿಶೇಷಾಂಕಕ್ಕಾಗಿ ಬರೆದಿರುವ ಲೇಖಕ ಸಮೂಹದ ಹರಹು ಮತ್ತು ವೈವಿಧ್ಯವೇ ಸಾಕ್ಷಿ. ಹಾಗೇ ಜಾಹೀರಾತುಗಳನ್ನು ನೀಡಿದ ಮತ್ತು ಅದರ ವ್ಯವಸ್ಥೆ ಮಾಡಿ ಬೆಂಬಲಿಸಿದ ಸಮೂಹ ಕೂಡ.

ಈ ಸಂಬಂಧ ಪತ್ರಿಕೆಯ ಈ ಮೂರನೇ ವರ್ಷದ ಹೊಸ್ತಿಲಲ್ಲಿ ನಿಂತು ನೆನೆಯಬೇಕಾದ ಒಂದು ಸಮೂಹವೇ ಇದೆ. ಬಹು ಮುಖ್ಯವಾಗಿ ಹೆಸರಿಸಬೇಕೆಂದರೆ, ಚಾಮರಾಜನಗರದ ಅಪೂರ್ವ ಡಿ.ಸಿಲ್ವ, ಮೈಸೂರಿನ ಬಿ. ರಾಜೇಶ್, ತುಮಕೂರಿನ ಕೆ.ಪಿ. ನಟರಾಜ, ದಾವಣಗೆರೆಯ ಡಿ.ಜಿ. ಪುಟ್ಟರಾಜು, ಧಾರವಾಡದ ಬಿ.ವಿ. ಸುರೇಂದ್ರ, ಹಾಸನದ ಆರ್. ಪಿ. ವೆಂಕಟೇಶಮೂರ್ತಿ ಮತ್ತು ಬಿ.ಶಿವಕುಮಾರ್, ಮಡಿಕೇರಿಯ ರೋಹಿತ್, ರಾಮದುರ್ಗದ ಹಸನ್ ನಯೀಂ ಸುರಕೋಡ, ಗೋಕಾಕದ ಅಜ್ಜಪ್ಪ ಬಿರಡಿ, ಹೆಗ್ಗೋಡಿನ ಎಂ.ಎನ್ ಕುಲಕರ್ಣಿ, ಸಾಗರದ ಎಂ. ರಾಘವೇಂದ್ರ ಹಾಗೂ ಚಿತ್ರದುರ್ಗದ ಪ್ರೊ.

ಬಿ.ಪಿ. ವೀರೇಂದ್ರಕುಮಾರ್ ಇವರನ್ನು ನೆನೆಯಲೇಬೇಕು. ಈ ನನ್ನ ಗೆಳೆಯರು ಸಮಾಜವಾದದ ಹೊಸ ಅನ್ವೇಷಣೆಯ ಈ ಸಾಹಸದಲ್ಲಿ ನನ್ನೊಂದಿಗೆ ಸಹಕರಿಸಿ ತಂತಮ್ಮ ಊರುಗಳಲ್ಲಿ ಈ ಪತ್ರಿಕೆಯನ್ನು ನೆಲೆಯೂರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಇಲ್ಲವೇ ಪತ್ರಿಕೆಗೆ ಪರೋಕ್ಷ ಸಹಾಯ ಒದಗಿಸಿದ್ದಾರೆ. ಇವರಿಗೆಲ್ಲ ನನ್ನ ವೈಯುಕ್ತಿಕ ಕೃತಜ್ಞತೆಗಳು.

ಸಮಾಜವಾದಕ್ಕೆ ಅಷ್ಟೇನೂ ಪೂರಕವಲ್ಲದ ಇಂದಿನ ಜಾಗತಿಕ ರಾಜಕೀಯ ಸಂದರ್ಭದಲ್ಲಿ ಪತ್ರಿಕೆಯು ಸಮಾಜವಾದದ ಬಗ್ಗೆ ಮಾತನಾಡುತ್ತಿರುವುದೇ ಹಲವರಿಗೆ ಅಸಂಬದ್ಧವಾಗಿ; ಇನ್ನೂ ಕೆಲವರಿಗೆ ಹಾಸ್ಯಾಸ್ಪದವಾಗಿಯೂ ಕಾಣುತ್ತಿದೆ. ಅದಕ್ಕಾಗಿ ಅವರನ್ನು ದೂಷಿಸುವುದೂ ಉಚಿತವಲ್ಲ ಎಂಬುದು ಪತ್ರಿಕೆಗೆ ಗೊತ್ತಿದೆ. ಏಕೆಂದರೆ, ಹಾಗೆ ಕಾಣಿಸುತ್ತಿರುವವರಿಗೆ ಈ ಕಾಲದ ಅನಾಹುತಗಳು, ಅದರ ಹಿಂದಿರುವ ವೈರುಧ್ಯಗಳು ಕಾಣಿಸುತ್ತಿಲ್ಲವೆಂದಲ್ಲ. ಆದರೆ ಅವರ ಪ್ರಕಾರ ಇವೆಲ್ಲವೂ ಎಲ್ಲ ಕಾಲದಲ್ಲೂ ಇದ್ದದ್ದೇ. ಹಾಗಾಗಿ ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ, ನಮ್ಮ ಪಾಡಿಗೆ ನಾವು ನಂಬಿದಂತೆ ಬದುಕುವುದು ಒಳ್ಳೆಯದು. ಆದರೆ ಇಲ್ಲಿ ಮುಖ್ಯ ಪ್ರಶ್ನೆ: ಇದು ನಿಜವಾಗಿ ಸಾಧ್ಯವಾಗುವಂತಹುದೆ? ಈ ನಾವು ಎಂದರೆ ಯಾರು, ಏನು? ಬದುಕು ಇವರು ಹೇಳುವಷ್ಟು ವೈಯುಕ್ತಿಕವಾಗಿ ಇರಲು ಸಾಧ್ಯವೇ? ಮನುಷ್ಯನ ಸಂಘಜೀವಿತ್ವಕ್ಕೆ ಹೊರತಾಗಿ ಅವನಿಗೆ ಬೇರೆ ಜೀವಿತ್ವ ಇರಬಲ್ಲುದೇ? ಇದೆಯೆಂದು ನಂಬುವವರು ಇಂದಿನ ನಿಜ ವಾಸ್ತವದಲ್ಲಿ ಅದು ಇದೆಯೇ ಎಂಬುದನ್ನೊಮ್ಮೆ ಪ್ರಮಾಣಿಕವಾಗಿ ಪರಿಶೀಲಿಸಿಕೊಳ್ಳಬೇಕು. ಅಥವಾ ಜಾಗತೀಕರಣ ಸೃಷ್ಟಿಸುತ್ತಿರುವ ಅನಾಹುತ ಮತ್ತು ದುರಂತಗಳ ವಿರುದ್ಧ ಬೇರೆ ಏನಾದರೂ ಪರಿಹಾರ ಮಾರ್ಗಗಳಿವೆಯೇ ಎಂಬುದನ್ನಾದರೂ ಅವರು ಹೇಳಬೇಕು. ಮೊದಲೇ ಹೇಳಿದಂತೆ ನಾವು ಸಮಾಜವಾದವನ್ನು ಒಂದು ಸಿದ್ಧ ವಸ್ತುವಿನಂತೆ ಭಾವಿಸಿ ಅದನ್ನು ಚರ್ಚಿಸುತ್ತಿಲ್ಲ. 'ಹಿಂದ್ ಸ್ವರಾಜ್' ಮೂಲಕ ಗಾಂಧಿ ಹೇಳಿದ ಸತ್ಯ, ಅದನ್ನು ಕುರಿತಂತೆ ಲೋಹಿಯಾ ಮಾಡಿದ ವಿಮರ್ಶೆ; ಹಾಗೇ ಅಂಬೇಡ್ಕರ್ ಎಚ್ಚರಗೊಳಿಸಿದ ಆತ್ಮಸಾಕ್ಷಿ –ಇವುಗಳ ಸೂಲು ಹಿಡಿದು ನಾವು ಮುಂದೆ ಹೆಜ್ಜೆ ಹಾಕಿದ್ದೇವೆ. ಅದು ನಮ್ಮ, ನಮ್ಮದೇ ದಾರಿ. ನಮ್ಮ ಈ ವಾರ್ಷಿಕ ವಿಶೇಷ ಸಂಚಿಕೆ ಈ ಪ್ರಕ್ರಿಯೆಯ ಒಂದು ದಾಖಲೆ ಕೂಡ ಎಂಬುದನ್ನು ಓದುಗರು ಗಮನಿಸಬಹುದು. ಈ ದಾರಿಯಲ್ಲಿ ನಮ್ಮ ಜೊತೆ ಬಂದು ಮುಂದಿನ ಹೆಜ್ಜೆ ಗುರುತಿಸಬಯಸುವ ಎಲ್ಲರನ್ನೂ 'ಹೊಸ ಮನುಷ್ಯ' ಸ್ವಾಗತಿಸುತ್ತದೆ.

ಹಾಗೆ ನೋಡಿದರೆ ಈಗಾಗಲೇ ಕೆಲವರು ಈ ಸಂಬಂಧ ಕೆಲ ಸಲಹೆಗಳನ್ನು ನೀಡಿದ್ದಾರೆ. ಪತ್ರಿಕೆಯನ್ನು ಯುವಜನ ಓದುವಂತೆ ಮಾಡಬೇಕೆಂದು ಒಬ್ಬರು ಸೂಚಿಸಿದರೆ, ಇನ್ನೊಬ್ಬರು ಇದನ್ನು 'ಕ್ಯಾಂಪಸ್ ಪತ್ರಿಕೆ' ಮಾಡುವುದೊಳಿತು ಎಂದಿದ್ದಾರೆ. ಆದರೆ ಇದನ್ನೆಲ್ಲ ಮಾಡಬೇಕಾದವರು ಯಾರು? ಪತ್ರಿಕೆ ಶುರು ಮಾಡಿದ ನಾನೊಬ್ಬನೇ? ಪ್ರತಿ ತಿಂಗಳೂ ಕೈಸೇರುವ ಈ ಪತ್ರಿಕೆಯ ಹಿಂದೆ ಕೆಲಸ ಮಾಡುತ್ತಿರುವ ಕೈಗಳು ಎಷ್ಟು ಎಂದು ನಿಮಗೆ ಗೊತ್ತಾದರೆ ನೀವು ಗಾಬರಿಯಾಗಬಹುದು. ನಮ್ಮ ಸಮಾಜವಾದಿ

ಗೆಳೆಯರು ತಮ್ಮ ಮತ್ತು ತಮ್ಮ ಆಪ್ತರ ಮಕ್ಕಳಿಂದ ಈ ಪತ್ರಿಕೆಯನ್ನು ಓದಿಸಲು ಆರಂಭಿಸಿದರೆ ಅದೇ ಈ ದಿಸೆಯಲ್ಲಿ ಮೊದಲ ಹೆಜ್ಜೆಯಾದೀತು. ಪತ್ರಿಕೆಯ ಸೋದರ ಸಂಸ್ಥೆಯಾದ 'ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಪ್ರತಿ ಅಕ್ಟೋಬರ್‌ನಲ್ಲಿ ಕುಪ್ಪಳಿಯಲ್ಲಿ ನಡೆಸುತ್ತಿರುವ ಎರಡು ದಿನಗಳ ಸಮಾಜವಾದಿ ಅಧ್ಯಯನ ಶಿಬಿರಕ್ಕೆ ಇವರು ತಮ್ಮ ಮಕ್ಕಳೊಂದಿಗೆ ಬರಲು ಬಿಡುವು ಮಾಡಿಕೊಂಡರೆ ಅದು ಎರಡನೆಯ ಹೆಜ್ಜೆಯಾದೀತು. ನಮ್ಮ ಬಹುತೇಕ ಸಮಾಜವಾದಿಗಳ ಬಳಿ ಇಂದು ಹಣವಿದೆ. ಅದನ್ನು ಅಲ್ಪಸ್ವಲ್ಪವಾದರೂ ಕೊಟ್ಟಾರು. ಆದರೆ ಅವರ ಬಳಿ ಇಂತಹ ಕೆಲಸಗಳಿಗೆ ಬಿಲ್‌ಕುಲ್ ಸಮಯವಿಲ್ಲ!

ಸಮಾಜವಾದದ ಹೊಸ ಅನ್ವೇಷಣೆ ಎಂದೆ. ಅದೇನೂ ಒಂದು ದೊಡ್ಡ ಬೌದ್ಧಿಕ ಸಾಹಸವೇ ಆಗಬೇಕಿಲ್ಲ. ಕಲಿತ ಸಿದ್ಧಾಂತದ ಭಾರಗಳಿಂದೀಚೆಗೆ ಬಂದು, ನಮ್ಮ ಆ ಕಲಿಕೆಯ ಕಾಲದಿಂದೀಚೆಗೆ ಬದಲಾದ ಜನ ಮತ್ತು ಸಂದರ್ಭವನ್ನು ಒಮ್ಮೆ ಕಣ್ಣರಳಿಸಿ ನೋಡತೊಡಗಿದರೆ ಎಲ್ಲವೂ ಹೊಳೆಯುತೊಡಗುತ್ತದೆ. ಉದಾಹರಣೆಗೆ ಸಿದ್ಧರಾಮಯ್ಯನವರ ಸರ್ಕಾರ ಆರಂಭಿಸಿರುವ 'ಅನ್ನ ಭಾಗ್ಯ' ಯೋಜನೆ ಕುರಿತು ನಡೆದಿರುವ ಬಿಸಿ ಬಿಸಿ ಚರ್ಚೆಯನ್ನೇ ಗಮನಿಸಿ. ಎರಡೂ ಬದಿಯ ವಾದಗಳು ತಮ್ಮದೇ ನೆಲೆಗಳಲ್ಲಿ ಭಾವನಾತ್ಮಕ ಅತಿಗಳಿಗೆ ಹೋಗಿ, ಅದರ ವಸ್ತುನಿಷ್ಠ ನೋಟ ಮತ್ತು ಅದರಿಂದ ಹೊಮ್ಮಬಹುದಾದ ಹೊಸ ಸತ್ಯಗಳಿಗೆ ಎರವಾಗಿ ಹೋಗಿವೆ. ಈ ದೇಶ ಸ್ವಾತಂತ್ರ್ಯ ಗಳಿಸಿದ ಈ ೬೫ ವರ್ಷಗಳಲ್ಲಿ ಮತ್ತು ನಿರ್ದಿಷ್ಟವಾಗಿ ಈ ದೇಶಕ್ಕೆ ಹೊಸ 'ಸಮೃದ್ಧಿ' ತಂದಿದೆ ಎಂದು ಹೇಳಲಾಗುವ ಕಳೆದ ೨೦ ವರ್ಷಗಳ ಜಾಗತೀಕರಣ ಮತ್ತು ಅದು ಎತ್ತಿ ಹಿಡಿಯುವ ಮುಕ್ತ ಮಾರುಕಟ್ಟೆ ನೀತಿಯಿಂದಾಗಿ ನಮ್ಮ ಜನರ ಹಸಿವನ್ನು ನೀಗಿಸಲು ಸಾಧ್ಯವೇ ಆಗಿಲ್ಲ. ದೇಶದ ಹೆಚ್ಚೂ ಕಡಿಮೆ ಅರ್ಧದಷ್ಟು ಜನ ಈಗಲೂ ಹೊಟ್ಟೆ ತುಂಬ ಉಣ್ಣುತ್ತಿಲ್ಲ. ಉಂಡವರಲ್ಲಿಯೂ ಅರ್ಧದಷ್ಟು ಜನಕ್ಕೆ ಅಗತ್ಯ ಪೌಷ್ಠಿಕ ಆಹಾರಕ್ಕೆ ಬಾಧ್ಯರಾಗದೆ ಮಾರಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಜಗತ್ತಿನ ಪ್ರತಿ ಮೂರು ಅಪೌಷ್ಠಿಕ ಮಕ್ಕಳಲ್ಲಿ ಒಂದು ಭಾರತೀಯ ಮಗುವಂತೆ. ಆದರೂ ನಾವು 'ಜಾಗತಿಕ ಶಕ್ತಿಯಾಗಿ ಹೊರಹೊಮ್ಮುತ್ತಿದ್ದೇವೆ' ಎಂದು ಘೋಷಿಸಿಕೊಳ್ಳುತ್ತಿದ್ದೇವೆ. ಏಕೆಂದರೆ ಕಳೆದ ೨೦ ವರ್ಷಗಳಲ್ಲಿ ನಮ್ಮ ರಾಷ್ಟ್ರದಲ್ಲಿ ಜಾಗತಿಕ ಮಟ್ಟದ ಶ್ರೀಮಂತರ ಸಂಖ್ಯೆ ಹೆಚ್ಚಾಗಿದ್ದು, 'ಹೊಸ ಸಮೃದ್ಧಿ' ನಮ್ಮ ನಗರಗಳ ಬೀದಿ ಬೀದಿಗಳಲ್ಲಿ ಕಣ್ಣಿಗೆ ರಾಚುತ್ತಿದೆ. ಆದರೆ ಅದೇ ಸಮಯದಲ್ಲಿ ನಮ್ಮಲ್ಲಿ ಬಡವರ ಸಂಖ್ಯೆಯೂ (ನಮ್ಮ ಯೋಜನಾ ಆಯೋಗದ ಹಾಸ್ಯಾಸ್ಪದ ಬಡತನ ರೇಖೆಯ ಕೆಳಗಿನ ಜನರಲ್ಲ!) ಹೆಚ್ಚುತ್ತಿದೆ ಎಂದು ಸರ್ಕಾರಿ ಅಂಕಿ ಅಂಶಗಳೇ ಹೇಳುತ್ತಿವೆ.

ಇದು ವಿರೋಧಾಭಾಸದಂತೆ ಕಾಣುತ್ತದೆ. ಆದರೆ ಹೀಗೆ ವಿರೋಧಾಭಾಸದಂತೆ ಕಾಣಲು, ಕಾಣುವ ಕಣ್ಣುಗಳಿಗೆ ಬಡಿದಿರುವ ಹೊಸ ರಾವೇ ಮೂಲ ಕಾರಣವಾಗಿದೆ. ಹೊಸ ಸಮೃದ್ಧಿಯ ಲಾಭ ಪಡೆದಿರುವ ಅಲ್ಪ ಸಂಖ್ಯಾತ ಜನರು ಈ ಲಾಭದಿಂದ ವಂಚಿತರಾದ ಜನಸಮುದಾಯಗಳೊಂದಿಗೆ ಭಾವನಾತ್ಮಕ ಸಂಬಂಧವನ್ನೇ

ಕಡಿದುಕೊಂಡಿದ್ದಾರೆ. ಅವರೆಲ್ಲ ಕೆಲಸಗಳ್ಳರು, ಸೋಮಾರಿಗಳು, ದಡ್ಡರು, ಕಾಲದೊಂದಿಗೆ ಬದಲಾಗದ ಕರ್ಮಠರು, ಎಂದೂ ಉದ್ಧಾರವಾಗದ 'ನಿತ್ಯ ನಾರಕಿ'ಗಳು ಎಂದು ವರ್ಗೀಕರಿಸಿ ತಮ್ಮ ಕಣ್ಣಳತೆಯಿಂದ ದೂರೀಕರಿಸಿಬಿಟ್ಟಿದ್ದಾರೆ. ಆದರೆ ೨೦ ವರ್ಷಗಳ ಹಿಂದೆ ತಾವು ಕೂಡ ಆ ಹಿಂದಿನ ಕಾಲದ ಶ್ರೀಮಂತರಿಂದ ಹಾಗೇ ವರ್ಗೀಕರಿಸಲ್ಪಟ್ಟು ದೂರೀಕರಿಸಲ್ಪಟ್ಟಿದ್ದೆವು ಎಂಬುದನ್ನು ಇವರು ಮರೆತಿದ್ದಾರೆ. ಇಲ್ಲಿ ಮುಖ್ಯ ಸಂಗತಿ ಎಂದರೆ ಇಂದಿನ ಈ ಮರೆವಿಗೆ ಕಾರಣ, ತಾವೀಗ ಯಾವ ಮತ್ತು ಎಂತಹ ಆರ್ಥಿಕ ನೀತಿಯಿಂದ ಲಾಭ ಪಡೆಯುತ್ತಿದ್ದೇವೆಯೋ ಆ ಆರ್ಥಿಕ ನೀತಿಯಡಿಯಲ್ಲಿ ನಾವು ಸಾಧಿಸುತ್ತಿರುವ 'ಅಭಿವೃದ್ಧಿ' ತನ್ನ ಗುಣದಲ್ಲೇ ಅಮಾನವೀಯವಾಗಿದೆ ಎಂಬುದು ಅವರ ಅರಿವಿಗೇ ಬಂದಿಲ್ಲ ಎನ್ನುವುದು. ನಮ್ಮನ್ನು ಅದು ನಮ್ಮಾಚೆಯ ಇತರರನ್ನು ವ್ಯವಧಾನದಲ್ಲಿ ಸಹಾನುಭೂತಿಯೊಂದಿಗೆ ಗಮನಿಸಲಾಗದಷ್ಟು ಸ್ವ-ವ್ಯಸನಿಗಳನ್ನಾಗಿ ಮಾಡಿದೆ. ಅವರನ್ನು ನಮ್ಮ ಮಾನವ ಲೋಕದಿಂದ ಸಂಪೂರ್ಣ ಹೊರಗಿಟ್ಟು ಬಿಡುವಂತಹ ಪೊರೆಯೊಂದನ್ನು ನಮ್ಮ ಕಣ್ಣಿನಲ್ಲಿ ಬೆಳೆಸಿಬಿಟ್ಟಿದೆ. ಅವರ ಕಷ್ಟ-ನಷ್ಟ-ಕೂಗು-ನೋಟಗಳು ನಮ್ಮ ಲೋಕ ಸ್ಪಂದನೆಯ ವ್ಯಾಪ್ತಿಗೆ ಬರದಂತೆ ಮಾಡಿಬಿಟ್ಟಿದೆ. ನಮ್ಮ ಮಾನವ ಸಂವೇದನೆಯ ಕೋಶದಲ್ಲೇ ಒಂದು ತೂತು ಕೊರೆದುಬಿಟ್ಟಿದೆ. ಬಡವರಿಗೆ ತುತ್ತು ನೀಡುವ ಕಾರ್ಯಕ್ರಮದ ಬಗ್ಗೆ ಬರುತ್ತಿರುವ ಸಾರಾಸಗಟಾದ, ಏಕಮುಖವಾದ ಆ ರಭಸದ ಮಾತುಗಾರಿಕೆಯನ್ನು ಗಮನಿಸಿದವರಿಗೆ ಹೀಗೆ ಅನ್ನಿಸುವುದಿಲ್ಲವೇ?

ಆದರೆ ಇಂತಹ ಅ-ಮಾನವ ಮರೆವು 'ಅನ್ನ ಭಾಗ್ಯ' ಯೋಜನೆಯ ವಿರೋಧಕ್ಕೆ ಕಾರಣವಾಗಿದ್ದಂತೆ, ಅದನ್ನು ಸಾರಾಸಗಟಾಗಿ ಸಮರ್ಥಿಸುವವರ ವಾದವೂ ಅಷ್ಟೇ-ಆದರೆ ಇನ್ನೊಂದು ಅರ್ಥದಲ್ಲಿ-ಅಮಾನವೀಯವಾಗಿದೆ. ಅದು ಒಂದು ದೊಡ್ಡ ಜನವರ್ಗವನ್ನು ಶಾಶ್ವತ ಅರೆ ಭಿಕ್ಷುಕ ವರ್ಗವನ್ನಾಗಿ ಮಾಡುವ ನಿರ್ಧಾರ ಕೈಗೊಂಡಂತಿದೆ. ಅಂದರೆ ಸರ್ಕಾರ ಇಂದು ತಾನು ಅನುಸರಿಸುತ್ತಿರುವ ಅಭಿವೃದ್ಧಿ ನೀತಿ ವ್ಯಾಪ್ತಿಗೆ ಇವರು ಬರುವುದಿಲ್ಲ ಎಂದು ನಿರ್ಧರಿಸಿ ಇವರಿಗಾಗಿ ತನ್ನ ಅಭಿವೃದ್ಧಿ ನೀತಿಯ ಅನುಬಂಧವೆಂಬಂತೆ ಈ 'ಕರುಣೆ'ಯ ಕಾರ್ಯಕ್ರಮವನ್ನು ಹಾಕಿಕೊಂಡಂತಿದೆ. 'ಅನ್ನ ಭಾಗ್ಯ' ಯೋಜನೆಯ ಬಗ್ಗೆ ಟೀಕೆ ಮಾಡುವವರೆಲ್ಲ ಇದರಿಂದ ಬಡವರು ಸೋಮಾರಿಗಳಾಗುತ್ತಾರೆ ಎಂದು ವಾದಿಸುವವರಲ್ಲ. ಏಕೆಂದರೆ ಇವರಲ್ಲಿ ಹಲವರು ಈ ಸ್ಥಿತಿಯಿಂದಲೇ ಮೇಲ್ಮುಖವಾಗಿ ಚಲಿಸಿದವರು. ಆದರೆ, ನಮಗೆ ಸಾಧ್ಯವಾದದ್ದು ಬೇರೆ ಬೇರೆ ಮಟ್ಟಗಳಲ್ಲಾದರೂ ಇತರ ಕುಟುಂಬಗಳಿಗೇಕೆ ಸಾಧ್ಯವಾಗುತ್ತಿಲ್ಲ ಎಂದು ಚಿಂತಿಸುತ್ತಿರುವವರು.

ಹಾಗೇ, ಉಚಿತವಾಗಿ ಅಥವಾ ಸುಲಭವಾಗಿ ಹೊಟ್ಟೆ ತುಂಬುವುದಾದರೆ ಜನ ಸೋಮಾರಿಗಳಾಗುವ ಸಾಧ್ಯತೆಯೇ ಇಲ್ಲ ಎಂದು ನಂಬುವವರು ಇವರಲ್ಲ. ಏಕೆಂದರೆ ಕಣ್ಮುಂದೆಯೇ ಇಂತಹ ಹಲವು ಉದಾಹರಣೆಗಳಿರುವಾಗ ಅವರು ತರ್ಕ, ಸಿದ್ಧಾಂತಗಳ

ಮಾತುಗಳನ್ನೇಕೆ ನಂಬಿಯಾರು? ಹಸಿರು ಚೀಟಿ ಮತ್ತು ಭ್ರಷ್ಟಾಚಾರಕ್ಕೆ ಇನ್ನೊಂದು ಹೆಸರಿನಂತಾಗಿರುವ ಉದ್ಯೋಗ ಖಾತರಿ ಯೋಜನೆ ಜಾರಿಗೆ ಬಂದ ಮೇಲೆ ಶ್ರಮಜೀವಿ ವರ್ಗದ ಗಮನಾರ್ಹ ಭಾಗ ಏನಾಗಿದೆ, ಯಾವ ಮಾನಸಿಕತೆಗೆ ಸಿಕ್ಕಿದೆ ಎಂಬುದನ್ನು ಕಣ್ಣಾರೆ ಕಂಡಿರುವವರಿಗೆ ಎಡಪಂಥೀಯ ಘೋಷಣೆಗಳೆಲ್ಲ ಬರೀ ಭೋಳೆ ಮಾತಾಗಿ ಮಾತ್ರ ಕಾಣುತ್ತದೆ. ಶೋಷಣೆಯ ಘೋಷಣೆಯನ್ನಾಧರಿಸಿದ ಇಂತಹ 'ಪ್ರಗತಿಪರ' ರಾಜಕಾರಣ ಇಂದು ಜನಪ್ರಿಯ ಕರುಣೆಯ ರಾಜಕಾರಣವಾಗಿ ಅಶ್ಲೀಲಗೊಂಡು ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ. ಅದು ವೋಟ್ ಬ್ಯಾಂಕ್ ರಾಜಕಾರಣಕ್ಕೆ ಬಳಕೆಯಾಗುತ್ತಾ ನಮ್ಮ ರಾಜಕಾರಣದ ತಾತ್ವಿಕ ಮತ್ತು ನೈತಿಕ ಅಡಿಪಾಯವನ್ನೇ ನಾಶ ಮಾಡಿದೆ. ಈ ವೋಟ್ ಬ್ಯಾಂಕ್ ರಾಜಕಾರಣ ಶಾಶ್ವತ ಬಡವರ ಒಂದು ಕಳ್ಳ ಪಡೆಯನ್ನೇ ಸೃಷ್ಟಿಸಿದೆ. ಇವೆರಡೂ ಪರಸ್ಪರ ಪೂರಕವಾಗಿರುವುದರಿಂದಲೇ ನಮ್ಮ ಪಡಿತರ ವ್ಯವಸ್ಥೆ ಭ್ರಷ್ಟಗೊಂಡು ಕುಸಿದುಬೀಳುವ ಹಂತ ತಲುಪಿದೆ. ನಿಜವಾದ ಬಡವರಿಗೆ, ದರಿದ್ರರಿಗೆ ಹೋಗಬೇಕಾದ ಆಹಾರ ಧಾನ್ಯ ಇತ್ಯಾದಿ ಸೌಲಭ್ಯಗಳ ಬಹುಭಾಗ ಇತರರ ಪಾಲಾಗುತ್ತಿದೆ. ಈ ವ್ಯವಸ್ಥೆಯನ್ನು ಸರಿಪಡಿಸಲಾಗದ ಸರ್ಕಾರಗಳು ಇಂತಹ ಹೊಸ ಹೊಸ ಯೋಜನೆಗಳ ಮರೆಯಲ್ಲಿ ತನ್ನ ಭ್ರಷ್ಟತೆ, ಅದಕ್ಷತೆಯನ್ನು ಮುಚ್ಚಿಕೊಳ್ಳಲು ಯತ್ನಿಸುತ್ತದೆ.

ಹಾಗಾಗಿ, ನಮ್ಮ ಸಮಾಜವನ್ನು ಲೌಕಿಕವಾಗಿ ಮತ್ತು ಭಾವನಾತ್ಮಕವಾಗಿ ಒಡೆದಿಡುತ್ತಿರುವ ಮತ್ತು ಬಡವರ, ದರಿದ್ರರ ಸಮೂಹವನ್ನು ನಿರಂತರವಾಗಿ ಸೃಷ್ಟಿಸುತ್ತಾ ಹೋಗುತ್ತಿರುವ ಅನಾಹುತಕಾರಿಯಾದ ತನ್ನ ಮೂಲ ಆರ್ಥಿಕ ನೀತಿಯನ್ನು ಬದಲಿಸುವ ಯೋಚನೆ ಮಾಡದೆ, ಬಡವರ ಕಣ್ಣೀರನ್ನು ಒರೆಸ ಹೋಗುವ ನಾಟಕೀಯ ರಾಜಕಾರಣಕ್ಕೆ ಕೈಹಾಕುವುದು ಮೂಲತಃ ಆತ್ಮದ್ರೋಹದ ಕೆಲಸವೇ ಆಗುತ್ತದೆ. ನಿಜ 'ಅನ್ನ ಭಾಗ್ಯ'ದಂತಹ ಕಾರ್ಯಕ್ರಮಗಳು ಚಾರಿತ್ರಿಕ ಅನ್ಯಾಯಗಳಿಂದ ಸಂತ್ರಸ್ತರಾದವರಿಗೆ ತುರ್ತು ಅಗತ್ಯವಾಗಿ ಬೇಕೇ ಬೇಕು. ಆದರೆ ಅಂತಹವರು ಒಂದು ಕಾಲಮಿತಿಯಲ್ಲಿ ತಮ್ಮ ಕಾಲ ಮೇಲೆ ತಾವು ನಿಲ್ಲಬಲ್ಲವರಾಗುವಂತಹ ಸಾರ್ವಜನಿಕ ಆಸ್ತಿ ನಿರ್ಮಾಣದ ಕಾರ್ಯಕ್ರಮಗಳ ಜೊತೆಗೇ ಜಾರಿಯಾಗಿ, ಆ ಕಾಲಮಿತಿಯೊಳಗೆ ಅವು ರದ್ದಾಗುವಂತಿರಬೇಕು. ಬಡವರನ್ನು, ನಿರ್ಗತಿಕರನ್ನು ನಿರಂತರವಾಗಿ ಸೃಷ್ಟಿಸುತ್ತಾ ಹೋಗುತ್ತಾ, ಅವರಿಗೆ ನಿರಂತರವಾಗಿ ಅರೆ ಭಿಕ್ಷೆ ನೀಡುತ್ತಾ ತನ್ನ ಬೇಳೆ ಬೇಯಿಸಿಕೊಳ್ಳುವ ರಾಜಕಾರಣದಿಂದ ಪ್ರಜ್ಞಾವಂತ ಜನ ಬೇಸತ್ತು ಹೋಗಿದೆ. ಚಾರಿತ್ರಿಕ ಅನ್ಯಾಯ, ಶೋಷಣೆ ಇತ್ಯಾದಿ ಶಬ್ದಗಳು ಇಂತಹ ಬೇಜವಾಬ್ದಾರಿ ಮತ್ತು ಲೂಟಿ ರಾಜಕಾರಣಕ್ಕೆ ಭಾವನಾತ್ಮಕ ನೆಪಗಳಾಗಿ ಮಾತ್ರ ಬಳಕೆಯಾಗುತ್ತಿದ್ದು ತಮ್ಮೆಲ್ಲ ಅರ್ಥ, ಘನತೆಗಳನ್ನು ಕಳೆದುಕೊಂಡಿವೆ. ಹಾಗಾಗಿ ಇಂದಿನ ನಿಜವಾದ, ಘನವಾದ ಸಮಾಜವಾದಿ ರಾಜಕಾರಣವೆಂದರೆ, ಅದು ತನ್ನ ಅಭಿವೃದ್ಧಿ ನೀತಿಯನ್ನು ಹೆಚ್ಚೆಚ್ಚು ಆವೃತಗೊಳಿಸಿಕೊಳ್ಳುವ ಮೂಲಕ ಈ ಚಾರಿತ್ರಿಕ ಅನ್ಯಾಯಗಳ ವಿಷವೃತ್ತ ಮತ್ತಷ್ಟು ವಿಸ್ತರಿಸುತ್ತಾ ಹೋಗದಂತೆ ತಡೆದು, 'ಅನ್ನ ಭಾಗ್ಯ'ದಂತಹ ಪರಿಹಾರ ಕಾರ್ಯಕ್ರಮಗಳನ್ನು ಒಂದು ಮಧ್ಯಂತರ ಕಾರ್ಯಕ್ರಮವಾಗಿ ಮಾತ್ರ ರೂಪಿಸಿ ನಿರ್ವಹಿಸುವುದೇ ಆಗಿರುತ್ತದೆ. ಸಮಾಜವಾದಿ ಆಳ್ವಿಕೆಯಲ್ಲಿ ದುಡಿಯದೇ

ತಿನ್ನುವುದು ಪಾಪವೆನ್ನಿಸಿಕೊಳ್ಳಬೇಕು. ಅದಕ್ಕೆ ಮೊದಲು ದುಡಿಯುವ ಕೈಗಳಿಗೆ ಕೆಲಸ ಒದಗಿಸುವುದು ಸಮಾಜವಾದಿ ಸರ್ಕಾರದ ಧರ್ಮವೆನಿಸಿಕೊಳ್ಳಬೇಕು. ಇದು 'ಅನ್ನ ಭಾಗ್ಯ'ದಂತಹ ಯೋಜನೆಯನ್ನು ಮಾತ್ರ ಕುರಿತ ಮಾತಾಗಿರದೆ, ಶಾಶ್ವತವಾಗಿರುವಂತೆ ತೋರುವ ಇಂತಹ ಎಲ್ಲ ಚಾರಿತ್ರಿಕ ಅನ್ಯಾಯ ಪರಿಹಾರ ಕಾರ್ಯಕ್ರಮಗಳಿಗೂ ಅನ್ವಯವಾಗಬಲ್ಲುದಾಗಿದೆ. 'ಅಹಿಂದ' ನಾಯಕರೆನಿಸಿರುವ ಸಿದ್ಧರಾಮಯ್ಯನವರಿಗೆ ಇದು ಅರ್ಥವಾಗದ ಮಾತೇನಲ್ಲ.

ಕನ್ನಡಕ್ಕಾಗಿ ಕೈ ಎತ್ತಿರಿ!

ಇಂತಹ ಸಮಯಸಾಧಕ ಚಾರಿತ್ರಿಕ ಅನ್ಯಾಯ ರಾಜಕಾರಣದ ಇತ್ತೀಚಿನ ಇನ್ನೊಂದು ಬಲಿ ಎಂದರೆ ನಮ್ಮ ಶಿಕ್ಷಣ ಮಾಧ್ಯಮ ನೀತಿ. ಮೊನ್ನೆ ಮೊನ್ನೆಯವರೆಗೆ ಒಂದು 'ಪ್ರತಿಷ್ಠಿತ' ವರ್ಗದ ಹೊರತಾಗಿ, ಶಾಲಾ ಮಟ್ಟದಲ್ಲಾದರೂ ಶಿಕ್ಷಣ ಮಾಧ್ಯಮ ಮಾತೃಭಾಷೆ ಆಗಿರುವುದು ಸಹಜ ಎಂದು ಭಾವಿಸಲಾಗಿತ್ತು. ಈಗ ಜಾಗತೀಕರಣ ನೀತಿಯ ಫಲವಾಗಿ ಶಿಕ್ಷಣ ಮಾಧ್ಯಮ ಮತ್ತು ಭಾಷೆಯ ಪ್ರಶ್ನೆಯನ್ನು ಚಾರಿತ್ರಿಕ ಅನ್ಯಾಯದ (ಅಂದರೆ ಕೆಲವು ವರ್ಗಗಳನ್ನು ಇಂಗ್ಲಿಷ್ ಶಿಕ್ಷಣದಿಂದ ವಂಚಿಸಲಾಗಿದೆ ಎಂಬ ಆರೋಪ) ವ್ಯಾಪ್ತಿಗೆ ಎಳೆ ತಂದು ಮಾತೃ ಭಾಷೆಯನ್ನು ಸಾರ್ವತ್ರಿಕ ಜೀವನದಲ್ಲಿ ಹಿನ್ನೆಲೆಗೆ ಸರಿಸಿ ಅಪ್ರಸ್ತುತಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ. ಇದರ ಫಲವಾಗಿ ನ್ಯಾಯಾಂಗದ ಆವರಣ ಸೇರಿದ ಶಿಕ್ಷಣ ಮಾಧ್ಯಮದ ಪ್ರಶ್ನೆ ಎರಡು ದಶಕಗಳ ನಂತರವೂ ಇತ್ಯರ್ಥವಾಗದಾಗಿದೆ. ಇಪ್ಪತ್ತು ವರ್ಷಗಳ ಹಿಂದೆಯೇ ಸರ್ವೋಚ್ಚ ನ್ಯಾಯಾಲಯ ಶಿಕ್ಷಣ ಮಾಧ್ಯಮದ ಭಾಷೆಯಾಗಿ ಮಾತೃಭಾಷೆಯ ಪ್ರಾಥಮಿಕತೆಯನ್ನು ಎತ್ತಿ ಹಿಡಿದಿದ್ದರೂ, ಶಿಕ್ಷಣವನ್ನು ಒಂದು ಉದ್ಯಮವನ್ನಾಗಿ ಬೆಳೆಸಹೊರಟ ಅಲ್ಪಸಂಖ್ಯಾತ 'ಪ್ರತಿಷ್ಠಿತ' ವರ್ಗವು ಚಾರಿತ್ರಿಕ ಅನ್ಯಾಯವಾದಿಗಳ ಬೆಂಬಲದೊಂದಿಗೆ ಅದನ್ನು ವಿವಾದದ ಪ್ರಶ್ನೆಯನ್ನಾಗಿಸಿ ನಮ್ಮ ಮಕ್ಕಳ ಶಿಕ್ಷಣದ ಗುಣಮಟ್ಟಕ್ಕೇ ಭಂಗ ತಂದಿದೆ.

ಇದರಲ್ಲಿ ನ್ಯಾಯಾಂಗದ ಪಾಲೂ ಇದೆ ಎಂಬುದೇ ಇಲ್ಲಿನ ವಿಷಾದದ ಸಂಗತಿ. ಶಿಕ್ಷಣ ಮಾಧ್ಯಮದ ಪ್ರಶ್ನೆ ಪ್ರಜೆಗಳ ಮೂಲಭೂತ ಹಕ್ಕುಗಳ ಪ್ರಶ್ನೆಯೂ ಆಗಿದೆ ಎಂದು ಘೋಷಿಸಲು ರಾಜ್ಯದ ಶ್ರೇಷ್ಠ ನ್ಯಾಯಾಲಯ ಸುಮಾರು ಒಂದೂವರೆ ದಶಕವನ್ನೇ ತೆಗೆದುಕೊಂಡಿತು. ಇನ್ನು ಆ ಕುರಿತು ರಾಜ್ಯ ಸರ್ಕಾರ ಸಲ್ಲಿಸಿದ ಮೇಲ್ಮನವಿ ಬಗ್ಗೆ ತನ್ನ ಮಧ್ಯಂತರ ನಿಲುವು ಪ್ರಕಟಿಸಲು ನಮ್ಮ ಸರ್ವೋಚ್ಚ ನ್ಯಾಯಾಲಯಕ್ಕೆ ಹೆಚ್ಚೂ ಕಡಿಮೆ ಅರ್ಧ ದಶಕವೇ ಬೇಕಾಯಿತು! ನಮ್ಮ ಮಕ್ಕಳ ಶಿಕ್ಷಣದ ಗುಣಮಟ್ಟ ಮತ್ತು ಸಮತೋಲನದ ಪ್ರಶ್ನೆ ನಮ್ಮ ರಾಷ್ಟ್ರ ಜೀವನದಲ್ಲಿ ಕೊನೆಯ ಆದ್ಯತೆಯ ಪ್ರಶ್ನೆಯಾಗಿದೆ ಎನ್ನುವುದು ನಮ್ಮ ಇಂದಿನ ರಾಷ್ಟ್ರ ಜೀವನದ ಒಟ್ಟಾರೆ ಗುಣಮಟ್ಟವನ್ನು ಸೂಚಿಸುತ್ತದಷ್ಟೆ. ಇದರ ಜವಾಬ್ದಾರಿಯಿಂದ ನಮ್ಮ ನ್ಯಾಯಾಂಗವೂ ಹೊರತಾಗಿಲ್ಲ.

ಅಂತೂ ಕೆಲ ದಿನಗಳ ಹಿಂದೆ ಸರ್ವೋಚ್ಚ ನ್ಯಾಯಾಲಯ ಈ ಸಂಬಂಧದ ತೀರ್ಪಿನ ಆಸೆ ಹುಟ್ಟಿಸಿ, ಕೊನೆಗೊಂದು ತನ್ನ ಮಧ್ಯಂತರ ನಿಲುವನ್ನು ಪ್ರಕಟಿಸಿದೆ. ಶಿಕ್ಷಣ ಮಾಧ್ಯಮದ ಪ್ರಶ್ನೆ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯ ತರ್ಕಿಸಿದಂತೆ ಪೋಷಕರ ಮೂಲಭೂತ ಹಕ್ಕಿನ ಪ್ರಶ್ನೆ ಮಾತ್ರವಾಗಿರುವಷ್ಟು ಸರಳವಾದದ್ದಲ್ಲ ಎಂದು ಅದು ಅಭಿಪ್ರಾಯಪಟ್ಟು ವಿವಾದವನ್ನು ಇನ್ನಷ್ಟು ಆಳವಾದ ವಿಚಾರಣೆಗಾಗಿ ಸಂವಿಧಾನ ಪೀಠಕ್ಕೆ ಒಪ್ಪಿಸಿದೆ. ಹಾಗೆ ನೋಡಿದರೆ ಮಾತೃಭಾಷಾವಾದಿಗಳಿಗೆ ಇದೊಂದು ಆಶಾದಾಯಕ ಬೆಳವಣಿಗೆಯೇ ಆಗಿದೆ. ಏಕೆಂದರೆ ಸಂವಿಧಾನ ಪೀಠ ವಿಚಾರ ಮಾಡಬೇಕಾದ ಮುಖ್ಯ ಸಂಗತಿಗಳಲ್ಲಿ ಮಾತೃಭಾಷೆ ಎಂದರೇನು, ಶಿಕ್ಷಣ ನೀತಿಗೂ ಮೂಲಭೂತ ಹಕ್ಕಿಗೂ ಎಂತಹ ಸಂಬಂಧವಿದೆ ಮತ್ತು ಭಾಷಾವಾರು ಪ್ರಾಂತ್ಯಗಳ ರಚನೆಯ ಸಾಂವಿಧಾನಿಕ ಉದ್ದೇಶವಾದರೂ ಏನು ಎಂಬ ಮುಖ್ಯ ಪ್ರಶ್ನೆಗಳೂ ಸೇರಿವೆ. ತಮ್ಮ ವಾದ ಅಜೇಯ ಎಂದು ಬೀಗುತ್ತಿದ್ದ ಇಂಗ್ಲಿಷ್ ಶಾಲೆಗಳ ಮಾಲೀಕರು ಮತ್ತು ಹುಸಿ ಚಾರಿತ್ರಿಕ ನ್ಯಾಯವಾದಿಗಳಿಗೆ ಇದೊಂದು ಆಘಾತಕಾರಿ ತೀರ್ಮಾನವೇ ಆಗಿರಬಹುದು. ಆದರೆ ಈ ಸಂದರ್ಭದಲ್ಲಿ ಮೂಲ ಮನವಿದಾರನಾದ ರಾಜ್ಯ ಸರ್ಕಾರ ಸರ್ವೋನ್ನತ ನ್ಯಾಯಾಲಯದ ಈ ಮಧ್ಯಂತರ ತೀರ್ಮಾನದ ಬಗ್ಗೆ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದೆ ಬಿಮ್ಮನೆ ಕೂತು ಮಾತೃಭಾಷಾವಾದಿಗಳಿಗೂ ಆಘಾತ ಉಂಟುಮಾಡಿದೆ. ಹಾಗಾಗಿ ಇದು ಮಾತೃಭಾಷಾ ಮಾಧ್ಯಮವಾದಿಗಳಿಗೆ ಸಂದ ಜಯವೆಂದೂ ಬೀಗಲಾದು.

ನಮ್ಮ ರಾಜ್ಯ ಸರ್ಕಾರಕ್ಕೆ ಕನ್ನಡದ ಬಗ್ಗೆ ಅದನ್ನು ನಂಬಿರುವ ಕನ್ನಡ ಜನತೆಯ ಬಗ್ಗೆ ಪ್ರಾಮಾಣಿಕ ಕಳಕಳಿ ಇರುವುದಾದರೆ, ಅದು ಸರ್ವೋನ್ನತ ನ್ಯಾಯಾಲಯ ತನ್ನ ನೀತಿಯನ್ನು ಸಮರ್ಥಿಸಲು ಕಲ್ಪಿಸಿಕೊಟ್ಟಿರುವ ಈ ಮಧ್ಯಂತರ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಸರ್ವ ಸಿದ್ಧತೆಗಳನ್ನೂ ಮಾಡಿಕೊಳ್ಳಬೇಕಿದೆ. ಮಧ್ಯಂತರ ತೀರ್ಮಾನ ಪ್ರಸ್ತಾಪಿಸಿರುವ ಮೂರು ಪ್ರಶ್ನೆಗಳಿಗೆ ಮಾತೃಭಾಷಾ ಪರವಾದ ಉತ್ತರಗಳನ್ನು ರೂಪಿಸುವಂತಹ ಸಮರ್ಥ ಶಿಕ್ಷಣ ತಜ್ಞರ, ಕಾನೂನು ಪಂಡಿತರ ತಂಡವನ್ನು ರಚಿಸಿ ತನ್ನ ವಕೀಲರನ್ನು ಕರ್ನಾಟಕದಲ್ಲಿ ಕನ್ನಡವನ್ನು ಉಳಿಸುವ ಈ ಅಂತಿಮ ಹೋರಾಟಕ್ಕೆ ಸಜ್ಜುಗೊಳಿಸಬೇಕಿದೆ. ಹಾಗೇ ಈ ಸಂಬಂಧ ಆದಷ್ಟು ಬೇಗ ಸಂವಿಧಾನ ಪೀಠ ರಚನೆಯಾಗಿ, ಅದು ವಿಚಾರಣೆಯನ್ನು ತ್ವರಿತವಾಗಿ ನಡೆಸುವಂತೆ ಕ್ರಮವನ್ನು ಕೈಗೊಳ್ಳಬೇಕಿದೆ. ಮಾತೃಭಾಷಾ ಶಿಕ್ಷಣ ಮಾಧ್ಯಮದ ಪರವಾಗಿರುವ ಲೋಹಿಯಾವಾದಿ ಪ್ರೊ. ರವಿವರ್ಮ ಕುಮಾರ್ ಈ ದಿಸೆಯಲ್ಲಿ ಕ್ರಿಯಾಶೀಲರಾಗಬೇಕಿದೆ. ಹಾಗೇ ತಾವೂ ಗೋಪಾಲಗೌಡರ ಪ್ರಭಾವದಲ್ಲಿ ಬೆಳೆದ ಸಮಾಜವಾದಿಯೇ ಎಂದು ಗುರುತಿಸಿಕೊಳ್ಳುವ ನಮ್ಮ ಶಾಲಾ ಶಿಕ್ಷಣ ಮಂತ್ರಿ ಕಿಮ್ಮನೆ ರತ್ನಾಕರ ಅವರು ಈ ದಿಸೆಯಲ್ಲಿ ಸಕ್ರಿಯ ಆಸಕ್ತಿ ವಹಿಸಬೇಕಾಗಿದೆ.

ಸೆಪ್ಟಂಬರ್, ೨೦೧೩

ಸಮಾಜವಾದದ ಬಕಧ್ಯಾನ!

ಪ್ರಿಯ ಓದುಗರೇ,

ನಿಮ್ಮ ಈ ಪತ್ರಿಕೆಯ ವಿಶೇಷಾಂಕಕ್ಕೆ ನೀವು ನೀಡಿರುವ ಸ್ವಾಗತ ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಎಲ್ಲೆಡೆಯಿಂದಲೂ ಮೆಚ್ಚುಗೆಯ ಮಹಾಪೂರವೇ ಹರಿದು ಬಂದಿದೆ. ಕೆಲವರು ಈ ಮೆಚ್ಚುಗೆಯ ದ್ಯೋತಕವಾಗಿ ಪ್ರೋತ್ಸಾಹಕ ಧನವನ್ನೂ ಕಳಿಸಿದ್ದಾರೆ. ಇವರಿಗೆಲ್ಲ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು. ಆದರೆ ಇದರ ಜೊತೆಗೇ ಒಂದು ದುಃಖದ ಸಂಗತಿಯೆಂದರೆ, ಈಗ ಸಂಚಾರಿ ದೂರವಾಣಿಯೆಂಬುದೊಂದು ಬಂದು ಎಲ್ಲವೂ ವೈಯುಕ್ತಿಕ ನೆಲೆಯ ಮಾತುಗಳಲ್ಲೇ ಕಳೆದುಹೋಗುತ್ತಿರುವುದು. ಅಭಿಪ್ರಾಯಗಳನ್ನು ಪತ್ರ ಮುಖೇನ ದಾಖಲಿಸುವುದು ಕಾಲ ವ್ಯಯ, ಶಕ್ತಿ ವ್ಯಯ ಎಂಬ ಜಾಗತೀಕರಣದ ಶಾಪಗಳಿಗೆ ಸಿಕ್ಕು ಸಾಮಾಜಿಕ ಸಂವಾದ ಎಂಬ ಪರಿಕಲ್ಪನೆಯೇ ಬಿಕ್ಕಟ್ಟಿಗೆ ಸಿಕ್ಕಿಕೊಂಡಿರುವುದು. ಆಧುನಿಕ ತಂತ್ರಜ್ಞಾನದ ಸೌಲಭ್ಯಗಳು ಒಂದೆಡೆ, ಒಂದರ್ಥದಲ್ಲಿ ಮಾನವನ ಬದುಕಿಗೆ ಕೆಲವು ಅನುಕೂಲತೆಗಳನ್ನು ಒದಗಿಸಿದೆಯಾದರೂ, ಇನ್ನೊಂದೆಡೆ ಅವನ ಸಾಮಾಜಿಕ ಸಂಬಂಧಗಳನ್ನು ಒಂದು ರೀತಿಯಲ್ಲಿ ಔಪಚಾರಿಕವಾಗಿಸಿದೆ ಅಥವಾ ಜಡಗೊಳಿಸಿದೆ ಎಂದೇ ಹೇಳಬೇಕು. ಪರಸ್ಪರ ಭೇಟಿಗಳ ಮುಖಾಮುಖಿ ಸಂವಾದದ ಜೀವಂತಿಕೆ ಹೋದ ನಂತರ ಸಾಮೂಹಿಕ ಸಂವಾದದ ಸಾಮಾಜಿಕ ಸ್ಪಂದನಶೀಲತೆಯೂ ಕಳೆದು ಹೋಗತೊಡಗಿದೆ. ಅದೂ ಕಾಲ ವ್ಯಯ–ಶಕ್ತಿವ್ಯಯಗಳ ಹೆಸರಿನಲ್ಲಿ! ಇದರ ದೂರಗಾಮಿ ಸಾಮಾಜಿಕ ಪರಿಣಾಮಗಳನ್ನು ಕಲ್ಪಿಸಿಕೊಳ್ಳುವ ಸೂಕ್ಷ್ಮತೆಯನ್ನು ನಾವು ಕಳೆದುಕೊಳ್ಳಲಾರಂಭಿಸಿರುವುದೇ ಇದಕ್ಕೆ ಕಾರಣವಾಗಿದೆ.

ಈ ಪ್ರವೃತ್ತಿ ಎಲ್ಲಿಗೆ ಹೋಗಿದೆಯೆಂದರೆ, ಪತ್ರಿಕೆಯ ಚಂದಾ ತುಂಬುವುದಕ್ಕಾಗಿ ಅಂಚೆ ಕಛೇರಿಗೆ ಅಥವಾ ಬ್ಯಾಂಕಿಗೆ ಹೋಗಲು ಹಲವರಿಗೆ ಪುರುಸೊತ್ತಿಲ್ಲ ಅಥವಾ ಇದೆಲ್ಲ ಆಯಾಸದ ಕೆಲಸ. ಸಿಕ್ಕಾಗ ಕೊಡುವ ಭರವಸೆ! ಇವರು ಕೊಡುವ ಬಗ್ಗೆ

ನನಗೆ ಏನೂ ಅನುಮಾನವಿಲ್ಲ. ಆದರೆ ಇವರ ಬಿಡುವಿಲ್ಲದ ಬದುಕಿನ ಈ ಆದ್ಯತೆಗಳ ರೀತಿ ಮತ್ತು ಮನೋಭಾವ ಹಲವು ಬಾರಿ ನಾನು ಪತ್ರಿಕೆಯನ್ನು ಮಾಡುತ್ತಿರುವುದು ಏತಕ್ಕಾಗಿ ಮತ್ತು ಯಾರಿಗಾಗಿ ಎಂದು ಕೇಳಿಕೊಳ್ಳತೊಡಗುವಂತೆ ಮಾಡಿದೆ. ಇಂತಹವರಿಗೆ ನೀವು ನಮ್ಮ ಪತ್ರಿಕೆಯನ್ನೂ ಓದುವುದೂ ಬೇಡ ನಿಮ್ಮ ಚಂದಾವೂ ಬೇಡ ಎಂದು ಹೇಳಿಬಿಟ್ಟಿದ್ದೇನೆ. ಜನ, ಅದೂ ಯಾರನ್ನು ನಂಬಿ ಈ ಪತ್ರಿಕೆಯನ್ನು ಆರಂಭಿಸಲಾಗಿದೆಯೋ ಆ ಜನವೂ ಇಷ್ಟು ಅಸೂಕ್ಷ್ಮರಾಗಿ, ಸಂವೇದನಾಹೀನರಾಗಿ, ಬಿಡುವೇ ಇಲ್ಲದ ಸಂಪಾದನೆ ಮತ್ತು ಸುಖಗಳ ಸ್ಪರ್ಧಾತ್ಮಕತೆಯಲ್ಲೇ ಮುಳುಗಿ ಹೋಗಿರುವುದಾದರೆ, ಈ ಸಮಾಜವಾದದ ಧ್ಯಾನವಾದರೂ ಏಕೆ ಬೇಕು? ಆಗ ಅದು ಬಕ ಧ್ಯಾನ ಮಾತ್ರವೆನಿಸಿಕೊಂಡೀತು. ಇಂದು ಸಮಾಜವಾದದ ಧ್ಯಾನವೆಂದರೆ, ಒಂದು ಸಾಂಸ್ಕೃತಿಕ ನೆಲೆಯ ಧ್ಯಾನವೇ ಆಗಿರಬೇಕಾಗಿದೆ. ಅದು ಸಾಮಾಜಿಕ ವಿಷಮತೆಗಳಿಗೆ ಕಾರಣವಾಗುತ್ತಿರುವ ಕೆಲವರ ಅತಿ ಶ್ರೀಮಂತಿಕೆಯ ಧಾವಂತಿಕೆಯಿಂದ ದೂರವಾಗಿರುವ ಧ್ಯಾನ; ಅಶ್ಲೀಲವೆನಿಸಿಕೊಳ್ಳತೊಡಗಿರುವ ದುಡಿಮೆ ಎಂಬ ಶಬ್ದಕ್ಕೆ ಹೊಸ ಘನತೆ–ಗೌರವಗಳನ್ನು ಮರಳಿ ತಂದುಕೊಡುವ ಧ್ಯಾನ. ಸಮಾಜವಾದದ ಹೃದಯ ಸ್ಪಂದನವಾದ 'ಸಮತೆ' ಎಂಬುದು ಸಾಧಿತವಾಗುವ ದಾರಿಗಳು ಇವೇ ಅಲ್ಲವೇ? ಲೋಹಿಯಾ ಪ್ರಕಾರ 'ಸಮತೆ' ಎಂದರೆ ಆತ್ಯಂತಿಕ ಪರಿಣಾಮದಲ್ಲಿ ಆಂತರಿಕ ಪ್ರಶಾಂತಿ ಮತ್ತು ಬಾಹ್ಯ ಬಂಧುತ್ವದ ಸಾಧನೆಯೇ ಅಲ್ಲವೇ?

ಇದನ್ನೆಲ್ಲ ಹೇಳುವುದರ ಅಪಾಯವೂ ನನಗೆ ಗೊತ್ತು. ಇದನ್ನು ಓದಿದ ಕೆಲವು ಓದುಗರು ನನ್ನೊಡನೆ ದೂರವಾಣಿ ಸಂಭಾಷಣೆಯನ್ನೂ ನಿಲ್ಲಿಸಿಯಾರು! ಆದರೆ ಹೇಳಬೇಕಾದ್ದನ್ನು ಹೇಳಬೇಕಾದಾಗ ಹೇಳದೇ ಹೋಗಿದ್ದೇ, ಮಾಡಬೇಕಾದ್ದನ್ನು ಮಾಡಬೇಕಾದ ಮಾಡದೇ ಹೋಗಿದ್ದೇ ಇಂದಿನ ಎಲ್ಲ ಸಂಕಟಗಳಿಗೆ–ಅವು ಇವೆ ಎಂದು ಎನಿಸಿರುವವರಿಗಾದರೂ–ಕಾರಣವಾಗಿರುವುದು ಎಂದು ನಾನು ನಂಬಿದ್ದೇನೆ.

ನಿರಾಶೆಗೊಳಿಸುತ್ತಿರುವ ಸಿದ್ಧರಾಮಯ್ಯ

ಇತ್ತ ನಮ್ಮ ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ನೋಡಿ. ಅವರು ಸಮಾಜವಾದಿಯೋ ಅಲ್ಲವೋ; ಆಗಿದ್ದರೆ, ಅವರು ಹಾಗೆ ಉಳಿಯುವವರೋ ಇಲ್ಲವೋ ಅದು ಅವರಿಗೆ ಬಿಟ್ಟ ವಿಷಯ. ಆದರೆ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ರಾಜ್ಯದ ಸಾಮಾನ್ಯ ಜನತೆಯ ಬಹುಭಾಗ, ಇದು ಅತ್ಯುತ್ತಮ ಆಯ್ಕೆ ಎಂದು ಸ್ವಾಗತಿಸಿತ್ತು. ಏಕೆಂದರೆ ಅವರು ಇತರ ನಾಯಕರಿಗೆ ಹೋಲಿಸಿದಂತೆ ವೈಯುಕ್ತಿಕ ಹಾಗೂ ರಾಜಕೀಯ ನೆಲೆಗಳೆರಡರಲ್ಲೂ ಸ್ವಚ್ಛ ಬಿಂಬವನ್ನು ಕಾಪಾಡಿಕೊಂಡಿದ್ದರು. ಅನುಭವಿ, ಸಮರ್ಥ ಆಡಳಿತಗಾರ ಕೂಡ ಎಂದೆನಿಸಿಕೊಂಡಿದ್ದರು. ಅದಕ್ಕೆ ತಕ್ಕಂತೆ ಸರ್ಕಾರ ರಚಿಸಿದಾಗ ಕೆಲವು ತತ್ವಗಳನ್ನು ಎತ್ತಿಹಿಡಿದ ಧೈರ್ಯ ತೋರಿದ್ದರು. ಆದರೆ ಈಗ, ಮೂರು ತಿಂಗಳ ಅಧಿಕಾರದ 'ಮಧುಚಂದ್ರ'ದ ನಂತರದಲ್ಲಿ

ಅವರ ಬಿಂಬ ಮಸುಕಾಗತೊಡಗಿರುವುದು ನಿಜವಾಗಿಯೂ ವಿಷಾದದ ಸಂಗತಿಯೇ ಆಗಿದೆ.

ಯಾರದೇ ಸೋಲು-ಗೆಲುವು ಯಾವುದೇ ರಾಜಕೀಯ ಪರಿಣಾಮಗಳನ್ನೂ ಉಂಟು ಮಾಡದ ಈ ಗುಜರಿ ಲೋಕಸಭಾ ಉಪ ಚುನಾವಣೆಗಳನ್ನು ಅವರು ನಿರ್ವಹಿಸಿದ ರೀತಿಯನ್ನೇ ನೋಡಿ. ಅಲ್ಲಿ ಎರಡೂ ಕ್ಷೇತ್ರಗಳಲ್ಲಿ ಗೆದ್ದಿರಬಹುದು. ಆ ಬಗ್ಗೆ ಅವರೇನೂ ಬೀಗುವಂತಿಲ್ಲ. ಏಕೆಂದರೆ ಈ ಚುನಾವಣೆಗಳನ್ನು ಜನರ ನಿರೀಕ್ಷೆಯಂತೆ ಒಂದು ಸ್ವಚ್ಛ ರಾಜಕೀಯದ ಬುನಾದಿ ಹಾಕುವ ದಿಟ್ಟ ಕೆಲಸಕ್ಕಾಗಿ ಬಳಸಿಕೊಳ್ಳಬಹುದೆಂಬ ಕಲ್ಪನೆಯೇ ಇಲ್ಲದಂತೆ ಸಿದ್ಧರಾಮಯ್ಯ ವರ್ತಿಸಿ ಅವರ ಸಮರ್ಥಕರಿಗೆ ನಿರಾಶೆಯನ್ನೇ ಉಂಟುಮಾಡಿದ್ದಾರೆ. ಎದುರಾಳಿ ಪಕ್ಷದವರು ನಿಲ್ಲಿಸಿದ-ಆ ಇಬ್ಬರೂ ವಿಧಾನಸಭಾ ಚುನಾವಣೆಗಳಲ್ಲಿ ತಿರಸ್ಕರಿಸಲ್ಪಟ್ಟವರೂ, ದೇವೇಗೌಡರ ನಿರ್ಲಜ್ಜ ಕುಟುಂಬ ರಾಜಕಾರಣದ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರತಿನಿಧಿಗಳೂ ಆದ-ಅಭ್ಯರ್ಥಿಗಳಿಗೆ ಸರಿಸಮನಾಗಿ ಪ್ರಜಾತಂತ್ರದ ಪರಿಕಲ್ಪನೆಗೆ ಪರಮ ಅನ್ಯಾಯ ಮಾಡುವಂತಹ ಅಭ್ಯರ್ಥಿಗಳನ್ನೇ ತಮ್ಮ ಪಕ್ಷ ಆರಿಸಲು ಸಿದ್ಧರಾಮಯ್ಯ ಅವಕಾಶ ನೀಡಿದ್ದಾರೆ. ಈ ಡಿ.ಕೆ. ಸುರೇಶ್(ಡಿ.ಕೆ. ಶಿವಕುಮಾರ್‌ರ ಸೋದರ) ಮತ್ತು ರಮ್ಯಾ ಎಂಬುವವರು ಯಾರು, ಇದರ ಪರಿಣಾಮಗಳಾದರೂ ಎಂಬ ಪರಿವೆಯೂ ಇಲ್ಲದೆ ಅವರನ್ನು ಜನರ ಮೇಲೆ ಹೇರಿ ಮೆರೆಸುವ ಕೆಲಸ ನಿಜವಾಗಿಯೂ ಪ್ರಜಾತಂತ್ರ ವಿರೋಧಿ ಕೆಲಸವೇ ಆಗಿದೆ.

ಈ ಉಪ ಚುನಾವಣೆಗಳಲ್ಲಿ ಹಠ ಹಿಡಿದಾದರೂ, ಜೀವ ಕಳೆದುಕೊಳ್ಳುತ್ತಿರುವ ಸಂಸದೀಯ ಪ್ರಜಾಪ್ರಭುತ್ವಕ್ಕೆ ಒಂದಿಷ್ಟು ಉಸಿರು ತುಂಬುವ ಸಾಂಕೇತಿಕ ಪ್ರಯತ್ನವಾಗಿಯಾದರೂ ಒಳ್ಳೆಯ ಅಭ್ಯರ್ಥಿಗಳನ್ನು ನಿಲ್ಲಿಸಿ ಸೋಲು ಕಂಡಿದ್ದರೂ, ಅಂತಹ ರಾಜಕೀಯ ಅನಾಹುತವೇನೂ ಆಗುತ್ತಿರಲಿಲ್ಲ. ಆದರೆ ಜನರಿಗೆ ಒಳ್ಳೆಯ ಆಯ್ಕೆಯೇ ಇಲ್ಲದಂತೆ ಮಾಡುವ ದುಷ್ಟ ಕೆಲಸದಲ್ಲಿ ಸಿದ್ಧರಾಮಯ್ಯನವರೂ ಭಾಗಿಯಾಗಿರುವುದು ನಿಜವಾಗಿ ದುಃಖದ ಸಂಗತಿಯೇ ಆಗಿದೆ. ಈ ಚುನಾವಣೆಗಳ ಜೊತೆಗೇ ವಿಧಾನ ಪರಿಷತ್ತಿನ ಎರಡು ಸ್ಥಾನಗಳಿಗಾಗಿ ನಡೆದ ಚುನಾವಣೆಗಳಲ್ಲಿ ಬಟಾ ಬಹಿರಂಗವಾಗಿ ಮತ್ತು ವ್ಯವಸ್ಥಿತವಾಗಿ ಎರಡೂ ಕಡೆಯಿಂದ ಹರಿದ ಹಣದ ಪ್ರವಾಹ ಇದನ್ನು ಮತ್ತಷ್ಟು ಪುಷ್ಠೀಕರಿಸುವಂತಿದೆ. ಏಕೆಂಬ ಸ್ಪಷ್ಟತೆಯೇ ಇಲ್ಲದೇ ಮುಖ್ಯಮಂತ್ರಿಯಾಗುವುದನ್ನು ತಮ್ಮ ಜೀವನದ ಏಕೈಕ ಗುರಿಯನ್ನಾಗಿಸಿಕೊಂಡು ಅದನ್ನು ಈಗ ಪಡೆದಿರುವ ಸಿದ್ಧರಾಮಯ್ಯನವರಿಗೆ ಅದನ್ನು ಉಳಿಸಿಕೊಂಡು ಹೋಗುವುದಷ್ಟೇ ಈಗಿನ ಅವರ ಜೀವನದ ಏಕೈಕ ಉದ್ದೇಶವಾಗಿರುವಂತಿದೆ. ಹಾಗಾಗಿಯೇ ಅವರಿಗೆ ಜನತೆಯ ನಿರೀಕ್ಷೆಗಿಂತ ಪಕ್ಷದ ಹೈಕಮಾಂಡ್‌ನ ಅಪೇಕ್ಷೆಯನ್ನು ಈಡೇರಿಸುವುದೇ ಮುಖ್ಯವಾಗಿಬಿಟ್ಟಿದೆ. ಮುಖ್ಯಮಂತ್ರಿಯಾದೊಡನೆ ಅವರು ಪೂಜೆ-ಹರಕೆ-ರಾಹುಕಾಲ-ಗುಳಿಕಕಾಲಗಳನ್ನು ನಂಬತೊಡಗಿರುವ ಮರ್ಮವಾದರೂ ಇದೇ ಇರುವಂತೆ ಕಾಣುತ್ತದೆ.

ಒಟ್ಟಿನಲ್ಲಿ, ಯಾವ ನಾಯಕನೇ ಬರಲಿ, ಆತ ಈ ವ್ಯವಸ್ಥೆಯನ್ನು ಬದಲಾಯಿಸುವ ಸಣ್ಣ ಪ್ರಯತ್ನವನ್ನೂ ಮಾಡಲಾಗದ ರಾಜಕೀಯ ಸ್ಥಿತಿಯಲ್ಲಿ ಇಂದು ನಾವಿದ್ದೇವೆ. ಈ ರಾಜಕೀಯ ವ್ಯವಸ್ಥೆಯ ಎಲ್ಲ ಪಾಲುದಾರರೂ ಇದನ್ನೊಂದು ಉದ್ಯಮವನ್ನಾಗಿ ಮಾಡಿಕೊಂಡು ತಂತಮ್ಮ ಪಾಲಿನ ಲಾಭವನ್ನು ಹಿರಿದುಕೊಳ್ಳಲು ಮಾತ್ರ ತಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗುವಂತಹ ವಿದ್ಯಮಾನವನ್ನು ನಾವಿಂದು ನೋಡುತ್ತಿದ್ದೇವೆ.

ಸಂಸತ್ತಿನ ಜನದ್ರೋಹ

ಈ ವಿದ್ಯಮಾನವನ್ನು ಸ್ವಲ್ಪ ಮಟ್ಟಿಗಾದರೂ ನಿಯಂತ್ರಿಸಲು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳ ವಿಚಾರಣೆ ಮೂಲಕ ನಮ್ಮ ಸರ್ವೋನ್ನತ ನ್ಯಾಯಾಲಯ ಮಾಡಿದ ಪ್ರಯತ್ನಗಳನ್ನು ನಿಷ್ಫಲಗೊಳಿಸಲು ನಮ್ಮ ಸಂಸತ್ತು ನಡೆಸಿರುವ ಪ್ರಯತ್ನದ ನಿರ್ಲಜ್ಜತನ ಯಾರನ್ನಾದರೂ ಬೆಚ್ಚಿಬೀಳುಸುವಂತಹುದೇ ಆಗಿದೆ. ಸಾರ್ವಜನಿಕ ರಂಗದ ಎಲ್ಲಕ್ಕೂ, ಎಲ್ಲರಿಗೂ ಅನ್ವಯವಾಗುವ ಮಾಹಿತಿ ಹಕ್ಕು ಕಾಯಿದೆ ರಾಜಕೀಯ ಪಕ್ಷಗಳಿಗೆ ಅನ್ವಯವಾಗದಂತೆ ಸಕಲ ರಾಜಕೀಯ ಪಕ್ಷಗಳ ಬೆಂಬಲದೊಂದಿಗೆ ಸರ್ಕಾರ ಕಾನೂನು ತಿದ್ದುಪಡಿ ತರಲು ಹೊರಟಿದೆ! ಹಾಗೇ, ಕ್ರಿಮಿನಲ್ ಮೊಕದ್ದಮೆಯೊಂದರಲ್ಲಿ ವಿಚಾರಣಾ ನ್ಯಾಯಾಲಯವೊಂದರಿಂದ ಸೆರೆಮನೆ ಶಿಕ್ಷೆಗೆ ಒಳಗಾದ ವ್ಯಕ್ತಿ ಆ ಶಿಕ್ಷೆಯ ಅವಧಿಯಲ್ಲಿ ತನ್ನ ಮೂಲ ಪ್ರಜಾಸತ್ತಾತ್ಮಕ (ಅಂದರೆ ಮತ ಹಾಕುವ ಮತ್ತು ಜನಪ್ರತಿನಿಧಿಯಾಗುವ) ಹಕ್ಕನ್ನು ಕಳೆದುಕೊಳ್ಳುತ್ತಾನೆಂಬ ಸರ್ವರಿಗೂ ಅನ್ವಯವಾಗುವ ಕಾನೂನಿನ ವ್ಯಾಪ್ತಿಯಿಂದ ನಮ್ಮ ಜನ ಪ್ರತಿನಿಧಿಗಳನ್ನೂ ಹೊರಗಿಡುವಂತಹ ಕಾನೂನು ತಿದ್ದುಪಡಿಯ ಪ್ರಯತ್ನ ನಡೆಸಿದೆ. ಮೊಕದ್ದಮೆಯ ಸಂಬಂಧವಾಗಿ ರಾಷ್ಟ್ರದ ಉಚ್ಚ ನ್ಯಾಯಾಲಯದ ತೀರ್ಪು ಬರುವವರೆಗೂ-ಅಂದರೆ, ಈಗ ಹಲವು ಪ್ರಕರಣಗಳಲ್ಲಿ ನಾವು ನೋಡುತ್ತಿರುವಂತೆ ಸಂಬಂಧಪಟ್ಟ ಜನ ಪ್ರತಿನಿಧಿಗಳ ಅಧಿಕಾರಾವಧಿ ಒಂದಲ್ಲ ಹಲವು ಬಾರಿ ಸಂಪೂರ್ಣ ಮುಗಿಯುವವರೆಗೂ-ಅವರ ಅನರ್ಹತೆ ಜಾರಿಯಾಗಬಾರದಂತೆ. ಇದು ನೇರವಾಗಿ ಜನಶಕ್ತಿಯ ಮುಖದ ಮೇಲೆ ಉಗುಳುವ ಕೆಲಸವೇ ಆಗಿದೆ. ಈ ಹಕ್ಕು ಅವರಿಗಿದೆಯಂತೆ! ಏಕೆಂದರೆ ಸಂಸತ್ತು ಜನತಾ ಶಕ್ತಿಯ ಪರಮೋಚ್ಚ ವೇದಿಕೆಯಂತೆ. ಆದರೆ ಪರಮೋಚ್ಚ ಭ್ರಷ್ಟತೆಯ ಮೂಲಕ ಚುನಾವಣಾ ವ್ಯವಸ್ಥೆಯನ್ನೇ ಕುಲಗೆಡಿಸಿ ತನ್ನ ಒಡಲಲ್ಲಿ ಮೂರನೇ ಒಂದರಷ್ಟು ಭಾಗದಷ್ಟು ಪರಮ ಭ್ರಷ್ಟರನ್ನೇ ತುಂಬಿಕೊಂಡಿರುವ ಈ ಸಂಸತ್ತು ನೈತಿಕವಾಗಿಯಾದರೂ ಆ ಹಕ್ಕನ್ನು ಎಂದೋ ಕಳೆದುಕೊಂಡಿವೆ. ಇದನ್ನು ಜನತೆಗೆ ಮನದಟ್ಟು ಮಾಡಲು ಯತ್ನಿಸಿದ ಅಣ್ಣಾ ಹಜಾರೆ ಚಳುವಳಿಯನ್ನು ತನ್ನ ಸಕಲ ಬೇಧೋಪಾಯಗಳ ಮೂಲಕ ದಮನ ಮಾಡಿರುವ ಸರ್ಕಾರವನ್ನು ಜನವೀಗ ನೇರವಾಗಿ ಬೀದಿಗಿಳಿದು ಮುಖಾಮುಖಿಯಾಗುವ ಕಾಲ ಬಂದಿದೆ ಎನಿಸುತ್ತಿದೆ. ಇಲ್ಲದಿದ್ದರೆ ಇಲ್ಲಿ ಪ್ರಜಾಸತ್ತೆಗೆ ಉಳಿಗಾಲವಿದ್ದಂತಿಲ್ಲ.

ಮೋದಿಯನ್ನು ಅನಿವಾರ್ಯಗೊಳಿಸುತ್ತಿರುವ ಕಾಂಗ್ರೆಸ್

ಈ ಬಿಕ್ಕಟ್ಟಿನ ಇನ್ನೊಂದು ಪಕ್ಕವನ್ನೂ ನಾವಿಂದು ಗಂಭೀರವಾಗಿ ಪರಿಗಣಿಸುವ ಕಾಲ ಬಂದಿದೆ ಎನಿಸುತ್ತಿದೆ. ಪ್ರಸಕ್ತ ಕೇಂದ್ರ ಸರ್ಕಾರ ತನ್ನ ಅಪಕ್ವ ಆರ್ಥಿಕ ಮತ್ತು ಆಡಳಿತ ನೀತಿಗಳಿಂದಾಗಿ ಇಂದು ಬೆಳವಣಿಗೆ ದರ, ರೂಪಾಯಿ ಮೌಲ್ಯ, ಹಣದುಬ್ಬರ, ನಿರುದ್ಯೋಗ ಸಮಸ್ಯೆ ಈ ಎಲ್ಲ ಸೂಚ್ಯಂಕಗಳ ನೆಲೆಯಲ್ಲೂ ದೇಶವನ್ನು ದಟ್ಟ ದರಿದ್ರ ಸ್ಥಿತಿಗೆ ತಂದು, ಸಾಮಾನ್ಯ ಜನತೆಯ ಬದುಕನ್ನು ಅತಿ ದಾರುಣಗೊಳಿಸಿ ಅವರ ದೃಷ್ಟಿಯಲ್ಲಿ ಈ ದೇಶಕ್ಕೆ ಮೋದಿಯನ್ನು ಅನಿವಾರ್ಯ ಮಾಡುತ್ತಿದೆಯೇನೋ ಎಂಬ ಆತಂಕ ಎಲ್ಲ ಪ್ರಜಾತಂತ್ರವಾದಿಗಳನ್ನೂ ಕಾಡತೊಡಗಿದೆ. ಈ ಸರ್ಕಾರದ ಸಾವಿರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಹಗರಣಗಳು ಮತ್ತು ಅವುಗಳ ವಿಚಾರಣೆಗೆ ತಡೆಯೊಡ್ಡುತ್ತಿರುವ–ಇತ್ತೀಚಿನ ಉದಾ: ಕಲ್ಲಿದ್ದಲು ಹಂಚಿಕೆ ಹಗರಣದ ಕಡತಗಳ ಕಣ್ಮರೆ–ರೀತಿ ನೀತಿಗಳು ಜನರನ್ನು ಹತಾಶೆಗೆ ದೂಡುತ್ತಿವೆ. ಕೋಮುವಾದದ ಗುಮ್ಮ ಮತ್ತು ಆಹಾರ ಭದ್ರತಾ ಕಾಯ್ದೆ ಎಂಬ ಆಮಿಷದ ಮರೆಯಲ್ಲಿ ಭ್ರಷ್ಟಾಚಾರದ ಹಣದ ಮೂಟೆಗಳನ್ನು ಅಡಗಿಸಿಡುವ ದುಷ್ಟ ಕೆಲಸ ನಡೆಯುತ್ತಿರುವ ಅನುಮಾನ ಜನತೆಯ ಮನಸ್ಸಿನಲ್ಲಿ ಹುಟ್ಟಲಾರಂಭಿಸಿದೆ. ಮೋದಿಯ ಕೈಗೆ ಈ ದೇಶ ಹೋಗುವುದಾದರೆ ಅದರ ಪಾಪವನ್ನು ಕಾಂಗ್ರೆಸ್ಸೇ ಹೊರಬೇಕಾಗುತ್ತದೆ. ಇದು ಈ ಪಕ್ಷ ೧೯೭೫ರಲ್ಲಿ ರಾಷ್ಟ್ರದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿ ಮಾಡಿದ ಪಾಪಕ್ಕಿಂತ ದೊಡ್ಡ ಪಾಪವಾಗುತ್ತದೆ.

ಇತ್ತೀಚಿನ ವಾಡ್ರಾ ಹಗರಣವನ್ನೇ ನೋಡಿ. ಅಧಿಕಾರದಲ್ಲಿರುವ ಕುಟುಂಬಗಳ ಸದಸ್ಯರು ಆ ಅಧಿಕಾರಾವಧಿಯ ಕಾಲದಲ್ಲಾದರೂ ದೊಡ್ಡ ವ್ಯಾಪಾರ–ವ್ಯವಹಾರಗಳಿಂದ ದೂರವುಳಿದಿರಬೇಕು ಎಂಬ ಸಾರ್ವಜನಿಕ ಜೀವನದ ಪ್ರಾಥಮಿಕ ನೀತಿ ಸಂಹಿತೆಯನ್ನು ಅಧಿಕಾರದ ಉನ್ನತ ವಲಯಗಳಲ್ಲೂ ಪಾಲಿಸಲಾಗದಿದ್ದರೆ ಗತಿಯೇನು? ಹಾಗಾಗಿಯೇ ನಮ್ಮ ಡಿ.ಕೆ. ಶಿವಕುಮಾರ್‌ರಂತಹವರು, ರಾಜಕಾರಣಿಗಳಿಗೇನು ಹೊಟ್ಟೆ ಇಲ್ಲವೇ? ಹೊಟ್ಟೆಪಾಡಿಗಾಗಿ ಅವರು ಏನೂ ಮಾಡಬಾರದೆ? ಎಂದು ಕೇಳುವಂತಾಗಿರುವುದು. ಆದರೆ ಇವರ ಹೊಟ್ಟೆಗಳು ಮನುಷ್ಯ ಮಾತ್ರದವರ ಹೊಟ್ಟೆಗಳಾಗಿರಲಾರವು ಎಂಬುದೇ ಜನತೆಯ ಆಶ್ಚರ್ಯ ಮತ್ತು ಆತಂಕವಾಗಿದೆ.

ಶಂಕರ ಬಿದರಿಯವರ ಸಮಾಜವಾದ!

ಈ ಮಧ್ಯೆ ಕೂರಲು ಕಾಂಗ್ರೆಸ್ಸಿನಲ್ಲಿ ಸರಿಯಾದ ಜಾಗ ಸಿಗದೆ ಹತಾಶರಾಗಿದ್ದ ನಮ್ಮ ನಿವೃತ್ತ ಪೋಲೀಸ್ ಅಧಿಕಾರಿ ಶಂಕರ ಬಿದರಿಯವರು ತಮ್ಮ ಉಳಿದಿರುವ ಆಯಸ್ಸಿನಲ್ಲಿ ಸಾರ್ವಜನಿಕ ಸೇವೆ ಮಾಡಲೇಬೇಕೆಂಬ ತುರ್ತಿನಲ್ಲಿ ಮುಲಾಯಂ ಸಿಂಗ್ ಯಾದವರ ಸಮಾಜವಾದಿ ಪಕ್ಷ ಸೇರಿ, ಅದರ ಅಧ್ಯಕ್ಷರೂ ಆಗಿ ಎಲ್ಲರ ಕನಿಕರಕ್ಕೆ ಪಾತ್ರರಾಗಿದ್ದಾರೆ.

ಸಮಾಜವಾದ ಎಂಬ ಶಬ್ದಕ್ಕೇ ಅಪಮಾನ ಮಾಡುವಂತಿರುವ ಈ ದುಷ್ಟ ಮತ್ತು ಭ್ರಷ್ಟ ಲೋಳಗಮಾನ್ಯರಾಪಿ ರಾಜಕಾರಣದ ಪಕ್ಷದಲ್ಲಿ ತಮ್ಮದು ನಿಷ್ಕಳಂಕ ಸರ್ಕಾರಿ ಸೇವೆಯೆಂದು ಹೇಳಿಕೊಳ್ಳುವ ಈ ನಿವೃತ್ತ ಪೋಲೀಸ್ ಅಧಿಕಾರಿ ಯೋಗೀಶ್ವರನೆಂಬ ಅನುಮಾನಾಸ್ಪದ ವ್ಯಕ್ತಿಯು ಪಕ್ಷದಲ್ಲಿ ಎಷ್ಟು ನೆಮ್ಮದಿಯಿಂದ ಕೂತು ಎಂತಹ ಸಾರ್ವಜನಿಕ ಸೇವೆ ಮಾಡುವರೋ ಕಾದು ನೋಡಬೇಕಿದೆ!

<u>ಸಮಕಾಲೀನ</u>

ನಮ್ಮ ಪಂಚಾಯ್ತ್ ರಾಜ್ ಎತ್ತ ಸಾಗಿದೆ?

ಭಾರತದ ವಿವಿಧ ನೆಲೆಗಳ–ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಆಡಳಿತಾತ್ಮಕ ಇತ್ಯಾದಿ–ಸಮಸ್ಯೆಗಳನ್ನು ಸಮಗ್ರವಾಗಿ ಅರಿಯಲು ಯತ್ನಿಸುವವರೆಲ್ಲರೂ ಸಾಮಾನ್ಯವಾಗಿ ಆಡುವ ಒಂದು ಮಾತೆಂದರೆ, ಈ ಸಮಸ್ಯೆಗಳು ಒಂದರೊಳಗೊಂದು ಹಾಸುಹೊಕ್ಕಾಗಿ ಚಿತ್ರ ಎಷ್ಟು ಜಟಿಲವಾಗಿದೆ ಎಂದರೆ, ಪರಿಹಾರದ ಹುಡುಕಾಟವನ್ನು ಎಲ್ಲಿಂದ ಆರಂಭಿಸಬೇಕು ಎಂಬುದರ ಸುಳಿವೂ ಸಿಗದಾಗಿದೆ ಎಂಬುದಾಗಿದೆ. ಆದರೆ ಇದಕ್ಕೆ ಕಾರಣವೇನು ಎಂಬುದರ ಬಗ್ಗೆ ಮಾತ್ರ ಇವರಾರೂ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಏಕೆಂದರೆ ಇವರಾರೂ ಭಾರತವೆಂಬ ಈಗಿರುವ ರಾಷ್ಟ್ರ ವ್ಯವಸ್ಥೆ ಮತ್ತು ಅದನ್ನು ಪೋಷಿಸುತ್ತಿರುವ ಆಡಳಿತ ವಿನ್ಯಾಸದಾಚೆಗೆ ಹೋಗಿ ಯೋಚಿಸಲಾರದವರಾಗಿದ್ದರೆ ಮತ್ತು ಹಾಗೆ ಯೋಚಿಸುವುದು ರಾಷ್ಟ್ರೀಯ ಪಾಪವಾದೀತೆಂದು ನಂಬಿದವರಾಗಿದ್ದಾರೆ. ಆದರೆ ರಾಷ್ಟ್ರ, ರಾಷ್ಟ್ರೀಯತೆಗಳೆಂಬುವು ಮೂಲತಃ ಅಸ್ತಿತ್ವಕ್ಕೆ ಬಂದುದು ಸಂಬಂಧಿತ ಜನ ಸಮುದಾಯಗಳ ಕ್ಷೇಮಾಭಿವೃದ್ಧಿಯ ದೃಷ್ಟಿಯಿಂದಲೇ ಹೊರತು, ಕೆಲವರ ಕೇವಲ ಭಾವನಾತ್ಮಕ ತೃಪ್ತಿಗಾಗಿ ಅಲ್ಲ. ಇದನ್ನು ಅರಿಯಬಲ್ಲವರು ಇದರಾಚೆ ಬಂದು ಯೋಚಿಸಲಾರಂಭಿಸಿದೊಡನೆ ಭಾರತವೆಂಬುದು ಇಂದು ಒಂದು ಜಟಿಲ ಸಮಸ್ಯೆಯಾಗಿ ಕಾಣತೊಡಗಿರುವುದಕ್ಕೆ , ಭಾರತವನ್ನು ಒಂದು ರಾಷ್ಟ್ರವಾಗಿ ರೂಪಿಸಿದ ವಿನ್ಯಾಸದಲ್ಲೇ ಮತ್ತು ಅದನ್ನು ಈ ಅರವತ್ತಾರು ವರ್ಷಗಳುದ್ದಕ್ಕೂ ಪೋಷಿಸಿಕೊಂಡು ಬರುತ್ತಿರುವ ಪ್ರಕ್ರಿಯೆಗಳ ರೀತಿ ನೀತಿಗಳಲ್ಲೇ ಮೂಲ ದೋಷವಿರುವುದೇ ಮುಖ್ಯ ಕಾರಣ ಎಂದು ಗೊತ್ತಾಗುತ್ತದೆ.

ಭಾರತವಿನ್ನೂ ಬ್ರಿಟಿಷರ ಕೈಯಲ್ಲಿದ್ದು, ಅದರ ಬಿಡುಗಡೆಯ ಪ್ರಕ್ರಿಯೆ ನಡೆಯುತ್ತಿದ್ದಾಗ ಭಾರತವೆಂಬುದು ಒಂದು ರಾಷ್ಟ್ರವಾಗಿ ಇಂದಿನ ಸ್ವರೂಪದಲ್ಲಿರಲಿಲ್ಲ. ಭಾರತ ಈ ಸ್ವರೂಪ ಪಡೆದದ್ದು ನಮ್ಮ ಸಂವಿಧಾನ ರಚನೆಯ ಮೂಲಕ. ಇದಕ್ಕೂ ಬಹು ಮೊದಲು ಗಾಂಧಿ, ರಾಷ್ಟ್ರ ಹೀಗೆ ರೂಪುಗೊಂಡು ಈ ಜಟಿಲತೆಯ ಕಠಿಣ ಸಮಸ್ಯೆಯನ್ನು ಎದುರಿಸಬೇಕಾಗುವುದನ್ನು ಮುನ್ನೋಡಿದ್ದರು. ಭಾರತವೆಂಬುದು ತನ್ನ ಪರಂಪರೆಯ ಸತ್ವದಿಂದ ಪುನರುಜ್ಜೀನಗೊಂಡ ಗ್ರಾಮಗಳ ಒಕ್ಕೂಟವಾಗಿ ಒಂದು

ರಾಷ್ಟ್ರವೆನ್ನಿಸಿಕೊಳ್ಳಬೇಕೆಂದು ಸೂಚಿಸಿದ್ದರು. ಅವರ ನೇತೃತ್ವದ ಸ್ವಾತಂತ್ರ್ಯ ಹೋರಾಟದ ಆಶಯ ಮತ್ತು ಅದರ ಜೊತೆಯಲ್ಲಿ ಜೋಡಣೆಗೊಂಡಿದ್ದ ಕಾರ್ಯಕ್ರಮಗಳ ಮೂಲ ಮಾತೃಕೆಗಳೂ ಅದನ್ನೇ ಸೂಚಿಸುತ್ತಿದ್ದವು. ಆದರೆ ಪಶ್ಚಿಮದ ಪ್ರಜಾಪ್ರಭುತ್ವದ ಮಾದರಿಗಳಿಂದ ತಂತಮ್ಮದೇ ಕಾರಣಗಳಿಂದಾಗಿ ಮರುಳಾಗಿದ್ದ ನಮ್ಮ ಸಂವಿಧಾನ ಕರ್ತೃಗಳು, ಗಾಂಧೀಜಿಯ ಮುನ್ನೋಟವನ್ನು 'ಹಿಂದುಳಿದಿರುವಿಕೆ'ಯ ಸಂಕೇತವೆಂದು ತಿರಸ್ಕರಿಸಿ, ಏಕಾತ್ಮಕವಾದ ಮತ್ತು ಇಂದು ನಿಧಾನವಾಗಿ ಗೊತ್ತಾಗುತ್ತಿರುವಂತೆ ಒಂದು ಬಲಿಷ್ಠ ಕೇಂದ್ರದಿಂದ ನಿರ್ವಹಿಸಲಾಗದ ರಾಷ್ಟ್ರವೊಂದನ್ನು ರಚಿಸಿದರು. ಇಂದು ನರೇಂದ್ರ ಮೋದಿಯೆಂಬ ನವೋದಿತ 'ಉಕ್ಕಿನ ಮನುಷ್ಯ' ಮಾತ್ರ ಈ ರಾಷ್ಟ್ರವನ್ನು ಅಧಃಪತನದಿಂದ ಉಳಿಸಬಲ್ಲ ಎಂದು ಕೆಲವು ವಲಯಗಳಿಂದ ಗಟ್ಟಿಯಾಗಿ ಕೇಳಿಬರುತ್ತಿರುವ ಕೂಗಿನ ಹಿಂದೆ ಈ ರಾಷ್ಟ್ರ ರಚನೆಯ ತಪ್ಪು ಎದ್ದು ಕಾಣುತ್ತಿದೆ.

ಆದರೆ ಅಕಸ್ಮಾತ್ ಮೋದಿ ಬಂದರೂ ಅವರು ಎಂತಹ ನಿರ್ದಾಕ್ಷಿಣ್ಯ, ಕಠಿಣ ಮತ್ತು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡರೂ (ಅವು ಈ ದೇಶದಲ್ಲಿ ತಳೆಯುವ ವಿವಿಧ ಸಾಮಾಜಿಕ-ಆರ್ಥಿಕ ರೂಪಗಳ ಪರಿಣಾಮಗಳ ವಿಷಯ ಇಲ್ಲಿ ಬೇಡ.) ಅದು ಈ ದೇಶದ ಸಮಸ್ಯೆಗಳನ್ನು ತಹಬಂದಿಗೆ ತರಲು ಸಾಧ್ಯವೇ ಎಂಬುದರ ಬಗ್ಗೆ ಅನುಮಾನಗಳಿವೆ. ಕಾರಣ, ಅವರು ಕೂಡ ಕೆಲಸ ಮಾಡಬೇಕಾಗಿರುವುದು ಇದೇ ರಾಷ್ಟ್ರ ವ್ಯವಸ್ಥೆಯ ಜಟಿಲ ಸಾಧನ-ಸಲಕರಣೆಗಳ ಮೂಲಕವೇ; ಅವುಗಳ ಜಟಿಲ ವಿನ್ಯಾಸಗಳೊಂದಿಗೇ. ಭಾರತವೆಂಬುದು ಸಾಮಾನ್ಯ ಪ್ರಜೆಯೊಬ್ಬನಿಗೆ ಭಾವನೆಯ ನೆಲೆಯಲ್ಲಿ ಅಮೂರ್ತವಾಗಿ ತನ್ನದೆನ್ನಿಸುವಂತೆ ತನ್ನ ಭೌಗೋಳಿಕ ಗಾತ್ರ ಮತ್ತು ಧರ್ಮ, ಜಾತಿ, ನಂಬಿಕೆ, ಸಂಪ್ರದಾಯ, ಆಹಾರ ಇತ್ಯಾದಿ ವಿಷಯಗಳ ವೈವಿಧ್ಯಗಳಿಂದಾಗಿ ತನ್ನದೆಂಬ ಮೂರ್ತ ಗ್ರಹಿಕೆಗೆ ನಿಲುಕಲಾರದ್ದು. ಈ ಅಮೂರ್ತ ಭಾವನೆ ಮತ್ತು ಮೂರ್ತ ವಾಸ್ತವಗಳ ನಡುವಣ ಕಂದಕ ಮೂಲತಃ ಭೌತಿಕ ಮತ್ತು ಮಾನಸಿಕ ದೂರಗಳಿಗೆ ಸಂಬಂಧಿಸಿದ್ದು ಮತ್ತು ಇಲ್ಲಿ ಮುಖ್ಯವಾದ ಸಂಗತಿಯೆಂದರೆ ಇದು ಮನುಷ್ಯ ಸಹಜವಾದ ಅರಿವಿನ ಮಿತಿಯಾಗಿದೆ ಎಂಬುದು. ಇದನ್ನು ಸರ್ವಾಧಿಕಾರ ಆಡಳಿತ ವಿಧಾನಗಳ ಮೂಲಕ ಮತ್ತು ಅದರ ವಿವಿಧ ಪರಿಣಾಮಗಳಿಗೆ (ಉದಾ: ಎಲ್ಲ ಸಾಂಸ್ಕೃತಿಕ ಮತ್ತು ಧಾರ್ಮಿಕ ವೈವಿಧ್ಯತೆಗಳನ್ನು ಇಸ್ತ್ರಿ ಮಾಡಿ ಭಾರತೀಯತೆಯೆಂಬ ಏಕ ಸಂಸ್ಕೃತಿಯ 'ಮಡಿ' ಸೃಷ್ಟಿ) ಒಳಗಾಗುವ ಮೂಲಕ ಮಾತ್ರ ಪರಿಹರಿಸಿಕೊಳ್ಳಬಹುದೇನೋ; ಅದೂ ತಾತ್ಕಾಲಿಕವಾಗಿ ಮಾತ್ರ. ಮೋದಿಯ ಆಗಮನದ ಬಗೆಗಿನ ಆತಂಕದ ಮೂಲ ಇರುವುದು ಇಲ್ಲೇ.

ಅದೇನೇ ಇರಲಿ, ಇಲ್ಲಿ ಮುಖ್ಯ ಸಂಗತಿ ಎಂದರೆ; ಭಾರತದಂತಹ ಭೌಗೋಳಿಕವಾಗಿ ಬೃಹತ್ತಾದ ದೇಶದಲ್ಲಿನ ಅಷ್ಟೇ ಬೃಹತ್ತಾದ ವೈವಿಧ್ಯತೆಗಳುಳ್ಳ ಬೃಹತ್ ಜನಸಮೂಹವನ್ನು ಒಂದೇ ಆರ್ಥಿಕ ಮತ್ತು ಸಾಮಾಜಿಕ ಎಳೆಯ ದಾರದಿಂದ ಒಂದು ಆಧುನಿಕ ರಾಷ್ಟ್ರದ

ವಿನ್ಯಾಸದಲ್ಲಿ ಹೊಲೆದು ಒಗ್ಗೂಡಿಸಲು ಹೋದರೆ ಅಲ್ಲಿ ಪ್ರಜಾತಂತ್ರ ಕುಸಿದು ಬೀಳತೊಡಗುತ್ತದೆ. ಈ ಸಮಸ್ಯೆಯಯನ್ನೇ ನಾವಿಂದು ಎದುರಿಸುತ್ತಿರುವುದು. ಏಕೆಂದರೆ, ಈ ರಾಷ್ಟ್ರ ವಿನ್ಯಾಸವು ಬೃಹತ್ ಆಡಳಿತ ವಿನ್ಯಾಸಗಳ, ಬೃಹತ್ ಯೋಜನೆಗಳ, ಬೃಹತ್ ತಂತ್ರಜ್ಞಾನಗಳ, ಬೃಹತ್ ಹಣಕಾಸಿನ ರಚನೆಗಳನ್ನು ಒತ್ತಾಯಿಸಿ ಅವು ಮೇಲೆ ಸೂಚಿಸಿದಂತಹ ಭೌತಿಕ ಮತ್ತು ಮಾನಸಿಕ ದೂರಗಳ ಸೃಷ್ಟಿಗೆ ಕಾರಣವಾಗುತ್ತವೆ. ಇದರಿಂದ ಎಲ್ಲವೂ ಯಾಂತ್ರಿಕವೂ, ಸಂವೇದನಾಹೀನವೂ ಆಗಿ ಅದಕ್ಷತೆ ಅಪ್ರಾಮಾಣಿಕತೆ ಮತ್ತು ಭ್ರಷ್ಟಾಚಾರಗಳು (ಮತ್ತು ಅದರ ಪರೋಕ್ಷ ಪರಿಣಾಮಗಳಾದ ಸಾಮಾಜಿಕ ಅನೈತಿಕತೆಯ ಅನೇಕ ಅನಾಚಾರಗಳು) ಬೆಳೆದು, ಈ ರಾಷ್ಟ್ರ ವಿನ್ಯಾಸವೆಂಬುದು ಅಲ್ಲಲ್ಲಿ ಮತ್ತು ಕ್ರಮೇಣ ಎಲ್ಲೆಲ್ಲಿಯೂ ಕುಸಿಯತೊಡಗುತ್ತದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ ಇಂದಿನ ರಾಷ್ಟ್ರ ರಚನೆಯ ವಿನ್ಯಾಸದಲ್ಲೇ ಅಪ್ರಾಮಾಣಿಕತೆ, ಅದಕ್ಷತೆ ಮತ್ತು ಭ್ರಷ್ಟಾಚಾರ ಹಾಗೂ ಇವುಗಳ ಮೂಲದಲ್ಲಿರುವ; ಇದು ನನ್ನದು, ನನ್ನ ಜನಗಳದ್ದು ಎಂಬ ಭಾವನೆಯ ಗೈರು ಹಾಜರಿ ಅಂತರ್ನಿಹಿತವಾಗಿದೆ. ಹಾಗಾಗಿ ಇದೊಂದು ಈಗ ಕಾನೂನು ಕಟ್ಟಲೆ, ನೀತಿ ಸಂಹಿತೆ ಇತ್ಯಾದಿಗಳು ಬರೆಯಲ್ಪಟ್ಟಿರುವ ಸಂವಿಧಾನವೆಂಬ ಕಾಗದ ಪತ್ರದ ಮೇಲೆ ಮಾತ್ರ ಬದುಕುತ್ತಿರುವ–ಭಾವ ಸಂಬಧಗಳ ಕೊಂಡಿಗಳನ್ನೇ ಕಳೆದುಕೊಂಡಿರುವ– ರಾಷ್ಟ್ರ. ಸರಳವಾಗಿ ಹೇಳುವುದಾದರೆ ಇದೊಂದು ಕಾಗದದ ರಾಷ್ಟ್ರ. Paper Tiger ಇದ್ದಂತೆ A Paper Nation. ಅದೀಗ ಹರಿದು ಹೋಗುತ್ತಿದೆ.

ಈ ಸಮಸ್ಯೆಗೆ ಒಂದೇ ಮದ್ದು: ಅದು ಇದಕ್ಕೆಲ್ಲ ಕಾರಣವಾದ ಈ ದೇಶದ ಭೌತಿಕ ಮತ್ತು ಮಾನಸಿಕ ದೂರಗಳನ್ನು ಪರಿಹರಿಸಬಲ್ಲ ಅಧಿಕಾರ ವಿಕೇಂದ್ರೀಕರಣದ ರಾಜಕಾರಣ. ಇಂದಿನ ಪರಿಸ್ಥಿತಿಗೆ ತಕ್ಕ ಹಾಗೂ ಸಾಧ್ಯ ರೂಪಗಳಲ್ಲಿ ಸ್ವಾಯತ್ತತೆಯುಳ್ಳ ಸಣ್ಣ ಸಣ್ಣ ಆಡಳಿತ ಘಟಕಗಳನ್ನು ಆಧರಿಸಿ ರಾಷ್ಟ್ರ ವ್ಯವಸ್ಥೆಯ ಪುರ್ನಸಂಘಟನೆ. ಇಲ್ಲಿ ದೂರಗಳ ಸಮಸ್ಯೆ ಇಲ್ಲದೆ ಎಲ್ಲ ಎದುರಾಬದುರಾ (ಗ್ರಾಮ ಸಭೆ ಅಥವಾ ಬಡಾವಣಾ ಅಥವಾ ಪರಿಸರ ಸಭೆಗಳಲ್ಲಿ) ನಡೆಯಲು ಸಾಧ್ಯವಾಗಿ ಆಡಳಿತವೆಂಬುದು ಸ್ವಯಂ ಆಡಳಿತವಾಗಿ ಎಲ್ಲವೂ ಪಾರದರ್ಶಕವಾಗಲು ಸಾಧ್ಯವಾಗುತ್ತದೆ. ಆಗ ಅಭಿವೃದ್ಧಿ ಎಂಬುದು ಸ್ಥಳೀಯ ಎಲ್ಲೆಗಳಲ್ಲಿ ಮಾತ್ರ ಕಲ್ಪಿತವಾಗಿ, ತಂತ್ರಜ್ಞಾನದ ಹಾವಳಿ ತಹಬಂದಿಗೆ ಬಂದು ಹಣದ ವ್ಯವಹಾರ ಸೀಮಿತ ಚೌಕಟ್ಟಿಗೆ ಒಳಗಾಗುತ್ತದೆ. ಜನರ ನಿರೀಕ್ಷೆಗಳೂ ಸಾಮಾನ್ಯ ಸರಾಸರಿಗೊಳಪಟ್ಟು ವರ್ಗ ವಿಘಟನೆ ಮತ್ತು ಪ್ರತ್ಯೇಕಗೊಂಡ ಹಿತಾಸಕ್ತಿಗಳು, ಅಸಮಾನತೆ ಹಾಗೂ ಇದರ ಪರಿಣಾಮಗಳಾದ ವರ್ಗ ವೈಷಮ್ಯ, ಬಿಗುವು, ಅಶಾಂತಿಗಳು ತಡೆಯಲ್ಪಡುತ್ತವೆ.

ಇದೇ ಗಾಂಧೀಜಿಯ 'ಗ್ರಾಮ ಸ್ವರಾಜ್ಯ'ದ ಹಿಂದಿರುವ ಮೂಲ ಚಿಂತನೆ, ಗುಟ್ಟು, ಮಹತ್ವ. ಆದರೆ ನಮ್ಮ ಸಂವಿಧಾನ ರಚನಾ ಸಭೆ ಆಧುನಿಕ ರಾಷ್ಟ್ರ ಕಟ್ಟುವ ಹುಮ್ಮಸ್ಸಿನಲ್ಲಿ

ಇದನ್ನು ಪರಿಗಣನೆಗೇ ತೆಗೆದುಕೊಳ್ಳದೇ ಮುಕ್ತಾಯಗೊಳ್ಳುತ್ತಿದ್ದಾಗ, ಅದರ ಸದಸ್ಯರಾಗಿದ್ದ ಓರ್ವ ಅನಾಮಿಕ ಗಾಂಧಿವಾದಿ ಇದರ ಪ್ರಸ್ತಾಪವೆತ್ತಿ ಹಠ ಮಾಡಿದಾಗ, ಗಾಂಧಿಯವರ ಈ 'ಸ್ವರಾಜ್ಯ'ದ ಪರಿಕಲ್ಪನೆಯನ್ನು ಪಂಚಾಯತ್ ರಾಜ್ ವ್ಯವಸ್ಥೆಯ ಹೆಸರಿನಲ್ಲಿ ನೆಪಮಾತ್ರಕ್ಕೆ ಸಂವಿಧಾನದಲ್ಲಿ ಅಳವಡಿಸಲಾಯಿತು. ಮುಂದೆ ಸಮಾಜವಾದಿಗಳು ಗ್ರಾಮ ಸ್ವರಾಜ್ಯದ ಅಣಕ ಮಾತ್ರದಂತಿದ್ದ ಈ ಪರಿಕಲ್ಪನೆಯನ್ನು 'ಚತುಸ್ತಂಭ ರಾಷ್ಟ್ರ' ಮುಂತಾದ ಪ್ರಯೋಗಗಳ ಮೂಲಕ ಬಲಗೊಳಿಸಲು ಯತ್ನಿಸಿದರಾದರೂ, ಆಧುನಿಕ ರಾಷ್ಟ್ರ ನಿರ್ಮಾಣದ ಜನಪ್ರಿಯ ಘೋಷಣೆಗಳ ರಾಜಕಾರಣದೆದುರು ಅವರು ಸೋತರು.

ಆದರೆ ರಾಜೀವ್ ಗಾಂಧಿ ಪ್ರಧಾನಿಯಾದಾಗ, ಆರಂಭದ ಹೊಸ ಉತ್ಸಾಹ ಮತ್ತು ಹೊಸ ಆಡಳಿತ ವಿಧಾನಗಳ ಅನ್ವೇಷಣೆಯ ಹಾದಿಯಲ್ಲಿ ಪಂಚಾಯ್ತ್ ರಾಜ್ ಎಂಬ ಈ ಪರಿಕಲ್ಪನೆಯ ಮಹತ್ವವನ್ನು ಗುರುತಿಸಿ, ಇದಕ್ಕೊಂದು ಸಾಂವಿಧಾನಿಕ ಸ್ಥಾನಮಾನ ನೀಡಿದರು. ಕರ್ನಾಟಕದಲ್ಲಿ ಈ ಮೊದಲೇ ರಾಮಕೃಷ್ಣ ಹೆಗಡೆ ಮತ್ತು ನಜೀರ್‌ಸಾಬರ ಆಸಕ್ತಿಯಿಂದಾಗಿ ಈ ವ್ಯವಸ್ಥೆ ಜಾರಿಗೆ ಬಂದಿದ್ದರೂ, ಅದು ಬಲಗೊಂಡು ತಮ್ಮ ಪರಮಾಧಿಕಾರಗಳನ್ನೇ ಮೊಟಕುಗೊಳಿಸುವ ಸಾಧ್ಯತೆಗಳು ಕಂಡುಬಂದಾಗ ಅವರೇ ಅದರ ಬೆಳವಣಿಗೆಯನ್ನು ಸ್ಥಗಿತಗೊಳಿಸಿದ್ದರು. ಈಗ ಸಾಂವಿಧಾನಿಕ ಮಾನ್ಯತೆಯೊಡನೆ ಜಾರಿಯಲ್ಲಿರುವ ಪಂಚಾಯ್ತ್ ರಾಜ್ ವ್ಯವಸ್ಥೆ ಯಾವ ಅರ್ಥದಲ್ಲೂ ಗಾಂಧೀಜಿಯ ಗ್ರಾಮ ಸ್ವರಾಜ್ಯದ ಚಿಂತನೆಯ ಹತ್ತಿರಕ್ಕೆ ಬರುವುದಿಲ್ಲವಾದರೂ, ಅದನ್ನೂ ಈ ವ್ಯವಸ್ಥೆ ತನ್ನ ರಾಜಕೀಯ ಹಸ್ತಕ್ಷೇಪಗಳ ಮೂಲಕ ದುರ್ಬಲಗೊಳಿಸುತ್ತಿದೆ. ಹಾಗಾಗಿ ಪಂಚಾಯ್ತ್ ರಾಜ್ ಸಂಸ್ಥೆಗಳು ರಾಷ್ಟ್ರ ರಾಜಕಾರಣದ ತಾಯಿಬೇರುಗಳಾಗಿ ಬೆಳೆಯದೆ, ರಾಷ್ಟ್ರ ಮತ್ತು ರಾಜ್ಯ ಸರ್ಕಾರಗಳ ಆಶ್ರಯದಲ್ಲಿ ಉಪಜೀವನ ಮಾಡುವಂತಾಗಿದೆ. ಇದರ ಸುಧಾರಣೆಗಾಗಿ ಸದ್ಯದ ರಾಜ್ಯ ಸರ್ಕಾರ ಈ ವ್ಯವಸ್ಥೆಯ ಜೀವನಾಡಿಯಾದ ಗ್ರಾಮಸಭೆಗಳು ಕಡ್ಡಾಯವಾಗಿ ನಡೆಯುವಂತಹ ಕಾನೂನು ಕ್ರಮ ಕೈಗೊಂಡಿದೆಯಾದರೂ, ಅದನ್ನು ರಾಜಕೀಯ ಕಾರಣಗಳಿಗಾಗಿ ವಿವಾದಾಸ್ಪದಗೊಳಿಸಲಾಗಿದೆ.

ಹೀಗೆ, ಇಂದು ಸಮಸ್ಯಾತ್ಮಕವಾಗತೊಡಗಿರುವ ನಮ್ಮ ರಾಷ್ಟ ವ್ಯವಸ್ಥೆಯನ್ನು ಅದು ಯಾರಿಗಾಗಿ ಮತ್ತು ಯಾರಿಂದ ಆಗಿದೆಯೋ ಆ ಜನತೆಯ ಹಿತದೃಷ್ಟಿಯಿಂದ ಪುನರ್ಸಂಘಟಿಸಲು ಸಾಂಕೇತಿಕವಾಗಿಯಾದರೂ ಒಂದು ಆಧಾರವಾಗಬಲ್ಲ ಈ ಪಂಚಾಯ್ತ್‌ರಾಜ್ ವ್ಯವಸ್ಥೆ ಹಲವು ಅಡೆತಡೆಗಳನ್ನೆದುರಿಸುತ್ತಾ ಜೀವಹಿಡಿದುಕೊಂಡು ಮುನ್ನಡೆದಿದೆ. ಈ ಮುನ್ನಡೆ ಎತ್ತ ಸಾಗಿದೆ. ಇದರ ಸಾಧನೆ-ವೈಫಲ್ಯಗಳೇನು, ಏಕೆ ಎಂಬುದರ ಅವಲೋಕನದ ಒಂದು ಸಣ್ಣ ಪ್ರಯತ್ನವನ್ನಿಲ್ಲಿ ನಾವು ಮಾಡಿದ್ದೇವೆ. ನಿಮ್ಮ ಪ್ರತಿಕ್ರಿಯೆಗಳಿಗೆ ಸ್ವಾಗತ.-ಸಂ.

ಅಕ್ಟೋಬರ್, ೨೦೧೩

ಬರಲಿದ್ದಾರೆ ಮೋದಿ!

ಪ್ರಿಯ ಓದುಗರೇ,

ಕೊನೆಗೂ ಬಿಜೆಪಿ ನರೇಂದ್ರ ಮೋದಿಯವರನ್ನು ಮುಂದಿನ ಚುನಾವಣೆಗಳಲ್ಲಿ ತನ್ನ ಪ್ರಧಾನಮಂತ್ರಿ ಅಭ್ಯರ್ಥಿಯೆಂದು ಘೋಷಿಸಿದೆ. ಅಡ್ವಾಣಿ, ಮುರಳಿ ಮನೋಹರ ಜೋಷಿ, ಜಸ್ವಂತ್ ಸಿಂಗ್, ಯಶವಂತ್ ಸಿನ್ಹಾ ಮುಂತಾದ ಹಿರಿಯ ನಾಯಕರ ಅಭಿಪ್ರಾಯಗಳನ್ನು ಲೆಕ್ಕಿಸದೆ ಈ ಚುನಾವಣಾ ಜೂಜಿಗೆ ಮುಂದಾಗಿದೆ. ಇದರ ಹಿಂದೆ, ಪಕ್ಷದ ಕೆಳ ಹಂತದ ಕಾರ್ಯಕರ್ತರ ಒತ್ತಡವಿರುವುದು ನಿಜ. ಆದರೆ ಅದಕ್ಕಿಂತ ಮುಖ್ಯವಾಗಿ ಎದ್ದು ಕಂಡದ್ದು ಆರ್.ಎಸ್.ಎಸ್., ವಿ.ಹೆಚ್.ಪಿ. ಮುಂತಾದ ರಾಜಕೀಯೇತರವೆಂದು ಹೇಳಲಾಗುವ ಶಕ್ತಿಗಳ ಒತ್ತಡ. ಹಿಂದೆ ವಾಜಪೇಯಿಯವರನ್ನು ನಮ್ಮವರೆಂದು ನಂಬಿ ಮೋಸ ಹೋದೆವೆಂದು ಭಾವಿಸಿರುವ ಈ ಹಿಂದುತ್ವ ಶಕ್ತಿಗಳು ತಮ್ಮ ಸಿದ್ಧಾಂತಗಳ ನಿಜವಾದ ವಕ್ತಾರನು ಮೋದಿ ರೂಪದಲ್ಲಿ ಮೂಡಿ ನಿಂತಿದ್ದು; ಇದೇ ಭಾರತದಾದ್ಯಂತ ತಮ್ಮ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಅತ್ಯುತ್ತಮ ಅವಕಾಶ ಎಂದು ಭಾವಿಸಿ ಈ ಅಭ್ಯರ್ಥಿತನವನ್ನು ಆಗ್ರಹಿಸಿ ಪಡೆದಿವೆ. ಈ ದೃಷ್ಟಿಯಿಂದ ಬ್ರಹ್ಮಾಂಡ ಭ್ರಷ್ಟಾಚಾರ ಮತ್ತು ಕೆಟ್ಟ ಆಡಳಿತದ ಭಾರಗಳಿಂದ ಕುಸಿಯುತ್ತಿರುವ ಕಾಂಗ್ರೆಸ್ಸಿಗೆ ಮುಂದಿನ ಚುನಾವಣೆಗಳ ಹೊತ್ತಿಗೆ ಉಸಿರಾಡಲು ಒಂದು ಅವಕಾಶ ದೊರೆತಂತಾಗಿದೆ. ಅದೆಂದರೆ, ಮುಂದಿನ ಚುನಾವಣೆಗಳು ನಡೆಯುವುದು ಸ್ಪಷ್ಟವಾಗಿ ಫ್ಯಾಸಿಸ್ಟ್ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ನಡುವೆ ಎಂದು ಬಿಂಬಿಸುವ ಅವಕಾಶ. ತನ್ನ ದುರಾಡಳಿತದಿಂದ ಬೇಸತ್ತಿರುವ ಕಾರಣದಿಂದಾಗಿಯಷ್ಟೇ ಬಿಜೆಪಿಯತ್ತ ನೋಡುತ್ತಿರುವವರನ್ನು ಅಲ್ಲಿಂದ ಸೆಳೆಯಲು ಅದು ಇದನ್ನೊಂದು ಆಧಾರ ಮಾಡಿಕೊಳ್ಳಬಹುದು. ಸದ್ಯಕ್ಕೆ ಅದು ಅತ್ತ ಇರಲಿ.

ಮೋದಿಯವರ 'ಶೋಭಾ ಯಾತ್ರೆ' ಊರಿಗೆ ಮುನ್ನವೇ ಅಬ್ಬರದಿಂದ ದಾಂಗುಡಿಯಿಟ್ಟು ಮುಂದೆ ಸಾಗುತ್ತಿದೆ; ಅದು ತುದಿ ಮುಟ್ಟುವ ಮುನ್ನವೇ ತನ್ನೆಲ್ಲ ರಭಸ ಕಳೆದುಕೊಂಡು ಮುಗ್ಗರಿಸಿ ಬೀಳುವ ಎಲ್ಲ ಸಾಧ್ಯತೆಗಳೊಂದಿಗೆ. ಮೋದಿ ಪ್ರತಿನಿಧಿಸುತ್ತಿರುವ ರಾಜಕಾರಣವೇ ಅಂತಹದ್ದು. ಅದು ಮಾರಿ ಹಬ್ಬದ ಆವೇಶವನ್ನೇ ನಂಬಿರುವಂತಹದ್ದು. ಮೋದಿ ವಿರೋಧಿ ವೇದಿಕೆಯಲ್ಲಿರುವ ಶಕ್ತಿಗಳು ಇಂದು ರಾಷ್ಟ್ರವನ್ನುದ್ದೇಶಿಸಿ ಮುಖ್ಯವಾಗಿ ಮಾತಾಡಬೇಕಾದದ್ದು ಈ ಬಗ್ಗೆ; ೨೦೦೨ರ ಕೋಮು ಹಿಂಸೆಯ ಬಗ್ಗೆಯಲ್ಲ. ಅದನ್ನು ಮತ್ತು ಇದರಲ್ಲಿ ಮೋದಿಯ ಪಾತ್ರವಿಲ್ಲ ಎಂಬುದು ಈಗಾಗಲೇ ಹಲವು ವಿಚಾರಣೆಗಳಿಂದ ಸ್ಪಷ್ಟವಾಗಿದೆ ಎಂಬ ಬಿಜೆಪಿಯವರ ಪ್ರತಿವಾದವನ್ನು ಕೇಳಿ ಕೇಳಿ ಜನ ರೋಸಿ ಹೋಗಿದ್ದಾರೆ. ಮೋದಿ ಗುಜರಾತ್ ನರಹತ್ಯೆಗೆ ನೇರವಾಗಿ ಕಾರಣರಾಗಿದ್ದರೆ, ಈಗಲೂ ನ್ಯಾಯಾಲಯಗಳ ಮುಂದಿರುವ ಪ್ರಕರಣಗಳಿಂದ ಅದು ಸಾಬೀತಾದಲ್ಲಿ ಆತ ತನ್ನ ಇತರ ಸಹೋದ್ಯೋಗಿಗಳಂತೆ ಸೆರೆಮನೆ ಸೇರುವುದು ನಿಶ್ಚಿತ. ಹಾಗಾಗಿ ಆ ವಿಷಯವನ್ನು ಸದ್ಯಕ್ಕೆ ನ್ಯಾಯಾಂಗದ ಇತ್ಯರ್ಥಕ್ಕೆ ಬಿಟ್ಟು ಮೋದಿಯ ರಾಜಕೀಯ ನಾಯಕತ್ವದ ಹೆಗ್ಗುರುತುಗಳೆಂದು ಹೊಗಳಲಾಗುತ್ತಿರುವ ದೃಢ ಆಡಳಿತ ಶೈಲಿ ಮತ್ತು ಅಭೂತಪೂರ್ವ 'ಅಭಿವೃದ್ಧಿ' ಸ್ವರೂಪಗಳತ್ತ ಗಮನ ಹರಿಸುವುದು ಒಳ್ಳೆಯದು.

ಗುಜರಾತ್ ರಾಜಕಾರಣವನ್ನೇ ನೋಡಿ. ಅಲ್ಲಿ ಮೋದಿಯ ಪಕ್ಷದಲ್ಲಿ ಅವರ ಹೊರತಾಗಿ ಇನ್ನಾವ ನಾಯಕನೂ ಇಲ್ಲದಂತೆ ಅಲ್ಲಿ ಅವರು ನಾಯಕತ್ವವನ್ನು ನಿರ್ನಾಮ ಮಾಡಿದ್ದಾರೆ. ಇದಕ್ಕೆ ಬಳಸಿದ ಮಾರ್ಗಗಳಲ್ಲಿ ಕೆಲವು ಭಯಾನಕವಾಗಿವೆ. ಉದಾಹರಣೆಗೆ ಮೋದಿ ವಿರುದ್ಧ ತಿರುಗಿಬಿದ್ದರೆಂಬ ಶಂಕೆಗಷ್ಟೇ ಒಳಗಾದ ರಾಜ್ಯದ ಆಗಿನ ಗೃಹಮಂತ್ರಿ ಹರೇನ್ ಪಾಂಡ್ಯ ಅವರ ಕೊಲೆಯ ರಹಸ್ಯವನ್ನು ೧೦ ವರ್ಷಗಳ ನಂತರವೂ ಇನ್ನೂ ಭೇದಿಸಲಾಗಿಲ್ಲ. ೨೦೦೨ರ ಹತ್ಯಾಕಾಂಡದಲ್ಲಿ ಭಾಗಿಯಾದವರೆಂದು ಈಗಾಗಲೇ ಸಾಬೀತಾಗಿರುವ ಮೋದಿಯವರ ಮಂತ್ರಿಮಂಡಳದ ಸಹೋದ್ಯೋಗಿಗಳು ಸೇರಿದಂತೆ ಅವರ ಅನೇಕ ಸಹಚರರು ಹಾಗೂ ಯಾವ ರಾಜ್ಯದಲ್ಲೂ ಇಲ್ಲದಷ್ಟು ಸಂಖ್ಯೆಯಲ್ಲಿ (ನಲವತ್ತಕ್ಕೂ ಹೆಚ್ಚು?) ಈ ರಾಜ್ಯದ ಉನ್ನತ ಪೋಲೀಸ್ ಅಧಿಕಾರಿಗಳು ವಿವಿಧ ಕ್ರಿಮಿನಲ್ ಅಪರಾಧಗಳ ಮೇಲೆ ಜೈಲಿನಲ್ಲಿದ್ದಾರೆ. ಇವರಲ್ಲಿ ಒಬ್ಬರು ಈಗಾಗಲೇ ತಮ್ಮ ಮೇಲಿನ ಅಪರಾಧಗಳೆಲ್ಲವೂ ಮೋದಿ ಆಡಳಿತದ ಆದೇಶದಂತೆ ನಡೆದುದವು ಎಂದು ಹೇಳಿ ಸೇವೆಗೆ ರಾಜೀನಾಮೆಯನ್ನು ನೀಡಿದ್ದಾರೆ.

ಮುಸ್ಲಿಮರನ್ನು ಗುರಿಯಾಗಿಟ್ಟುಕೊಂಡ ಹುಸಿ ಗುಂಡಿನ ಕಾಳಗಗಳ ರಾಜಕೀಯ ಆಯೋಜಕನೆಂದೇ ಕುಪ್ರಸಿದ್ಧಿ ಪಡೆದು ಜೈಲು ಸೇರಿದ್ದ ಮಾಜಿ ಸಚಿವ ಅಮಿತ್ ಷಾಗೆ ಜಾಮೀನು ಕೊಡಿಸಿ ಮೋದಿ ಪಕ್ಷದ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷನನ್ನಾಗಿ ಮಾಡಿ ಆತನಿಗೆ ಉತ್ತರ ಪ್ರದೇಶದಲ್ಲಿನ ಚುನಾವಣಾ ಜವಾಬ್ದಾರಿ ವಹಿಸಲಾಗಿದೆ. ಆತ ಉತ್ತರ ಪ್ರದೇಶಕ್ಕೆ ಕಾಲಿಟ್ಟ ಕೆಲವೇ ದಿನಗಳಲ್ಲಿ ಮುಝಾಫರ್ ನಗರದಲ್ಲಿ ಕೋಮು

ಬೆಂಕಿ ಹೊತ್ತಿ ಉರಿದು ಸುಮಾರು ೫೦ ಜನ ಹತರಾಗಿ ಸಾವಿರಾರು ಜನ ನಿರಾಶ್ರಿತರಾಗಿದ್ದಾರೆ. ಈ ಬೆಂಕಿಯಲ್ಲಿ ತನ್ನ ಚುನಾವಣಾ ಮೈ ಕಾಯಿಸಿಕೊಳ್ಳಲು ಹೋದ ಯಾದವ ಅಪ್ಪ-ಮಗ ಮೈಸುಟ್ಟುಕೊಂಡು ಮಾಧ್ಯಮಗಳ ಮುಂದೆ ಮುಲಾಮು ಹಚ್ಚಿಕೊಂಡು ನರಳುತ್ತಿರುವುದು ಬೇರೆಯೇ ವಿಷಯ.

ಮುಸ್ಲಿಮರ ತುಷ್ಟೀಕರಣದ ಬಗ್ಗೆ ಮಿಂಯಾ ಮುಷ್ರಾಫ್, ಮೌಲ್ವಿ ಮುಲಾಯಂ, ಸೆಕ್ಯುಲರಿಸಂನ ಬುರ್ಖಾ ಮುಂತಾದ ಪ್ರಚೋದನಕಾರಿ ಶಬ್ದ ಪ್ರಯೋಗಗಳ ಮೂಲಕ ಕಾಂಗ್ರೆಸ್ಸನ್ನು ಕಿಚಾಯಿಸುತ್ತಿದ್ದ ಮೋದಿ ಈಗ ಗುಜರಾತ್‌ನ ಹೊರಗೆ ಯಶಸ್ವಿಯಾಗಲು ಮುಸ್ಲಿಂ ಮತದಾರರ ಸಹಾನುಭೂತಿ ಅನಿವಾರ್ಯ ಎಂದು ಅರಿತಂತಿದೆ. ಈತ ಈಗ ಗುಜರಾತ್‌ನಲ್ಲಿನ ಕೆಲವು ಮುಸ್ಲಿಂ ಸಮುದಾಯದ ಉದ್ಯಮಿಗಳು ಮತ್ತು ಆಯ್ದ ಕೆಲವು ಪ್ರತಿಷ್ಠಿತರನ್ನು ಓಲೈಸಿಕೊಂಡು ಅವರ ಮೂಲಕ ತನ್ನ ಪ್ರಚಾರ ಸಭೆಗಳಿಗೆ ಮುಸ್ಲಿಮರನ್ನು ಸೇರಿಸುವ ಯತ್ನದಲ್ಲಿದ್ದಾರೆ. ಅಷ್ಟೇ ಅಲ್ಲ, ತನಗೆ ಈಗ ಮುಸ್ಲಿಮರ ಬೆಂಬಲವೂ ದೊರಕತೊಡಗಿದೆ ಎಂಬುದನ್ನು ದೇಶಕ್ಕೆ ತೋರಿಸಲು ಈ ಸಭೆಗಳಿಗೆ ಮುಸ್ಲಿಮರು ತಮ್ಮ ಟೋಪಿ ಮತ್ತು ಬುರ್ಖಾಗಳೊಂದಿಗೆ ಬರುವಂತೆ ಕರೆಕೊಟ್ಟಿದ್ದಾರಲ್ಲದೆ, ತಮ್ಮ ಪಕ್ಷದ ವತಿಯಿಂದ ಸಾವಿರಾರು ಟೋಪಿ, ಬುರ್ಖಾಗಳನ್ನೂ ಹಂಚುವ ವ್ಯವಸ್ಥೆ ಮಾಡಿದ್ದಾರೆ. ಇದು 'ಹುಸಿ ಸೆಕ್ಯಲರಿಸಂ' ವಿರುದ್ಧದ ಇವರ ನಿಜ ಸೆಕ್ಯಲರಿಸಂ ಕಾರ್ಯಾಚರಣೆಯ ವೈಖರಿ!

ಇದಕ್ಕಿಂತ ಅಥವಾ ಇಷ್ಟೇ ಮುಖ್ಯವಾಗಿ ಮೋದಿ ಪರವಾಗಿ ಹೊಡೆಯಲಾಗುತ್ತಿರುವ ಅಭೂತಪೂರ್ವ ಅಭಿವೃದ್ಧಿಯ ಡಂಗುರದ ನಿಜತ್ವದ ಬಗ್ಗೆ ಈಗ ಗಂಭೀರ ಚರ್ಚೆ ಆಗಬೇಕಿದೆ. ದೊಡ್ಡ ಪ್ರಮಾಣದ ದೇಶಿ ಮತ್ತು ವಿದೇಶೀ ಬಂಡವಾಳದ ಸೆಳೆತ, ಅದರಿಂದ ಜನರ ಕೊಳ್ಳುಬಾಕ ಸಂಸ್ಕೃತಿಯನ್ನು ಬೆಳೆಸುವ ವ್ಯಾಪಾರ ವ್ಯವಹಾರೋದ್ಯಮಗಳ ಸ್ಥಾಪನೆ, ಈ ವ್ಯಾಪಾರ ವ್ಯವಹಾರಗಳು ಒತ್ತಾಯಿಸುವ ಮೂಲಭೂತ ಸೌಲಭ್ಯಗಳ ಹೆಸರಿನಲ್ಲಿ ವಿಶಾಲ ರಸ್ತೆಗಳು, ವ್ಯಾಪಾರಿ ಪಾರ್ಕ್‌ಗಳು, ಮಾಲ್‌ಗಳು, ಹೋಟೆಲ್-ಮೋಟೆಲ್-ರೆಸಾರ್ಟುಗಳ ನಿರ್ಮಾಣಕ್ಕೆ ಪ್ರೋತ್ಸಾಹ ಮತ್ತು ಆ ಮೂಲಕ ಉದ್ಯೋಗ ಸೃಷ್ಟಿಯ ಘೋಷಣೆ. ಇಂತಹ ಅಭಿವೃದ್ಧಿಯ ಒಟ್ಟಾರೆ ರಾಷ್ಟ್ರೀಯ ಪರಿಣಾಮಗಳೇನು ಎಂಬುದನ್ನು ವಿವರಿಸಿ ಹೇಳುವ ಅಗತ್ಯವಿಲ್ಲ: ಇದು ದೇಶದ ನಿಸರ್ಗ ಸಂಪತ್ತನ್ನೆಲ್ಲ ಮಾರಿಕೊಂಡು ಸಮಾಜವನ್ನು ನವ ಶ್ರೀಮಂತ ವರ್ಗ ಮತ್ತು ನವ ದರಿದ್ರ ವರ್ಗಗಳನ್ನಾಗಿ ಒಡೆಯುತ್ತಿದೆಯಲ್ಲದೆ, ರಾಷ್ಟ್ರದ ದುಡಿಮೆಯ ಶೀಲ-ಸಂಸ್ಕೃತಿಗಳನ್ನೇ ನಾಶ ಮಾಡುತ್ತಾ ಹಲವು ರೀತಿಯ ಅಶಾಂತಿ ಮತ್ತು ಹಿಂಸಾಚಾರಗಳು ಬೆಳೆಯಲು ಕಾರಣವಾಗಿದೆ.

ಮೋದಿಯ ಬೆಂಬಲಿಗರ ಮುಖಗಳನ್ನೊಮ್ಮೆ ನೋಡಿ. ಅವರು ಹಿಂದುತ್ವವಾದಿಗಳು ಅಥವಾ ಇಂತಹ ಅಭಿವೃದ್ಧಿಯ ಇನ್ನಷ್ಟು ಫಲಗಳಿಗಾಗಿ ಮೊರೆಯುತ್ತಿರುವ ಹಸಿದ

ಹೆಬ್ಬುಲಿಗಳೇ ಆಗಿರುತ್ತಾರೆ. ಅವರನ್ನೊಮ್ಮೆ ಗುಜರಾತ್‌ನ ಮಾನವ ಅಭಿವೃದ್ಧಿ ಸೂಚ್ಯಂಕಗಳ ಪರಿಸ್ಥಿತಿಯೇನು ಎಂದು ಕೇಳಿ. ಸರಾಸರಿ ಒಟ್ಟಾರೆ ಆದಾಯದ ಹೆಚ್ಚಳದ ಬಗ್ಗೆ ಕೊಚ್ಚಿಕೊಳ್ಳಲಾರಂಭಿಸುತ್ತಾರೆಯೇ ಹೊರತು, ಅದರ ನ್ಯಾಯಯುತ ಹಂಚಿಕೆಯನ್ನು ಸಮರ್ಥಿಸುವಂತಹ ಹೆಣ್ಣು ಮಕ್ಕಳೂ ಸೇರಿದಂತೆ ದುರ್ಬಲರಿಗೆ ಪೌಷ್ಟಿಕ ಆಹಾರದ ಪೂರೈಕೆ, ಶೈಕ್ಷಣಿಕ, ಆರೋಗ್ಯ ಇತ್ಯಾದಿ ಸೌಲಭ್ಯಗಳ ಲಭ್ಯತೆಯ ಬಗ್ಗೆ ಮಾತಾಡುವುದಿಲ್ಲ. ಏಕೆಂದರೆ ಅಂತಹ ಅಭಿವೃದ್ಧಿ ಸೂಚ್ಯಂಕಗಳು ಈ ರಾಜ್ಯದಲ್ಲಿ ಇತರ ಹಲವು ರಾಜ್ಯಗಳಿಗಿಂತ ಬಹು ಹಿಂದಿವೆ. ಹಾಗಾಗಿ, ಇಲ್ಲಿ ಕೇಳಬೇಕಾದ ಒಟ್ಟು ಪ್ರಶ್ನೆ: ಯಾತಕ್ಕಾಗಿ ಮತ್ತು ಯಾರಿಗಾಗಿ ಈ ಅಭೂತಪೂರ್ವ 'ಅಭಿವೃದ್ಧಿ'?

ಆದರೂ ಮೋದಿಯನ್ನು ಜನವೇಕೆ ಸತತವಾಗಿ ಮೂರನೇ ಬಾರಿ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದಾರೆ? ಕಾಂಗ್ರೆಸ್ಸಿನ ದಿಗ್ವಿಜಯ್ ಸಿಂಗ್ ಇದಕ್ಕೆ ಸೂಕ್ತ ಉತ್ತರ ಕೊಟ್ಟಿದ್ದಾರೆ. ಬಿಹಾರದ ಜನ ಲಾಲೂರನ್ನೂ ಸತತವಾಗಿ ಮೂರು ಬಾರಿ ಆಯ್ಕೆ ಮಾಡಿದ್ದರು! ಹಾಗೇ, ಇದೇ ತರ್ಕ ಸರಿಯಿದ್ದರೆ ಒರಿಸ್ಸಾದಲ್ಲಿ ಬಿಜೆಪಿಯನ್ನು ದೂರವಿಟ್ಟ ಮೇಲೆ ನವೀನ್ ಪಟ್ನಾಯಕ್‌ರೂ ಸತತವಾಗಿ ಮೂರನೇ ಬಾರಿ ಮುಖ್ಯಮಂತ್ರಿಯಾಗಿದ್ದಾರೆ! ಪ್ರತಿ ರಾಜ್ಯದ ಜನರ ಆಯ್ಕೆಯೂ ಆಯಾ ರಾಜ್ಯದ ಒಟ್ಟಾರೆ ಹಿನ್ನೆಲೆ ಮತ್ತು ಆದ್ಯತೆಗಳ ಮೇಲೆ ನಡೆಯುತ್ತದೆ. ಹಾಗೆ ನೋಡಿದರೆ ಮೋದಿ ಆಗಮನಕ್ಕಿಂತ ಮುಂಚಿನಿಂದಲೂ ಗುಜರಾತ್ ಈ ಮಾದರಿಯ ಅಭಿವೃದ್ಧಿಯಲ್ಲಿ ಮುಂದೆಯೇ ಇತ್ತು. ಹಾಗೇ ಮೋದಿಯನ್ನು ಗುಜರಾತ್‌ನ ಜನತೆ ಒಮ್ಮತದಿಂದೇನೂ ಆಯ್ಕೆ ಮಾಡಿಲ್ಲ. ಪ್ರತಿ ಚುನಾವಣೆಯಲ್ಲೂ ರಾಜ್ಯದ ಶೇ. ೪೫ಕ್ಕಿಂತಲೂ ಹೆಚ್ಚು ಜನ ಮೋದಿ ವಿರುದ್ಧ ಮತ ಹಾಕಿದ್ದಾರೆ. ಇದೇನೂ ಸಣ್ಣ ಸಂಖ್ಯೆಯಲ್ಲ.

ಹಾಗಾಗಿ ಈ ಎಲ್ಲ ನೆಲೆಗಳಲ್ಲಿ ಮೋದಿಯ ನಿರಂಕುಶ ಆಡಳಿತ ಶೈಲಿ ಹಾಗೂ ಅಭಿವೃದ್ಧಿಯ ಮಾದರಿಯ ಅಪಾಯಗಳನ್ನು ಪ್ರಜಾಸತ್ತಾತ್ಮಕ ಶಕ್ತಿಗಳು ಗಂಭೀರವಾಗಿ ವಿಶ್ಲೇಷಿಸಿ ಜನತೆಯ ಮುಂದೆ ಇಡಬೇಕಿದೆ. ಈ ಕೆಲಸವನ್ನು ಇದೇ ಮಾದರಿಯ ಅಭಿವೃದ್ಧಿಗೆ ನಾಂದಿ ಹಾಡಿ ಈಗ ಚುನಾವಣಾ ಉದ್ದೇಶಗಳಿಗಾಗಿ ಮಿಸಳಬಾಜಿ ರಾಜಕಾರಣ ಮಾಡುತ್ತಾ ಎಲ್ಲ ವಿಶ್ವಾಸಾರ್ಹತೆಯನ್ನೂ ಕಳೆದುಕೊಂಡಿರುವ ಕಾಂಗ್ರೆಸ್ಸಿಗೇ ಬಿಟ್ಟಷ್ಟೂ ಮೋದಿಯ ಯಶಸ್ಸಿನ ಸಾಧ್ಯತೆ ಹೆಚ್ಚುತ್ತಾ ಹೋಗಲಿದೆ. ಹಾಗಾಗಿ ರಾಷ್ಟ್ರಕ್ಕೆ ಮೋದಿ ಮತ್ತು ಕಾಂಗ್ರೆಸ್‌ಗೆ ಹೊರತಾದ ಬೇರೆ ಆಯ್ಕೆಯೂ ಸಾಧ್ಯವಿದೆ ಎಂಬ ನಂಬಿಕೆಯಲ್ಲಿ ಅದನ್ನು ಆಗು ಮಾಡುವ ರೀತಿಯ ರಾಜಕಾರಣವನ್ನು ರಾಷ್ಟ್ರದ ಪ್ರಜಾಸತ್ತಾತ್ಮಕ ಶಕ್ತಿಗಳು ರೂಪಿಸಿ ಮಾಡಬೇಕಿದೆ.

ಈ ಹಿನ್ನೆಲೆಯಲ್ಲಿ ನಮ್ಮ ಅನಂತಮೂರ್ತಿಯವರು ದಿನನಿತ್ಯ ಮಾಧ್ಯಮಗಳಲ್ಲಿ ಪ್ರತ್ಯಕ್ಷವಾಗಿ ನಡೆಸುತ್ತಿರುವ ಬೌದ್ಧಿಕ ಗಲಾಟೆ ಜಿಗುಪ್ಸೆ ಹುಟ್ಟಿಸುವಂತಿದೆ. ಈ ಮೂಲಕ ಮೋದಿಯನ್ನು ಕೇಳಬೇಕಾದ ಪ್ರಶ್ನೆಗಳ ಚೂಪನ್ನು ಅವರು ಕಳೆಯುತ್ತಿದ್ದಾರೆ. ಆರೋಗ್ಯ

ಕೈಕೊಡುತ್ತಿರುವ ಈ ಹಿರಿಯ ವಯಸ್ಸಿನಲ್ಲಿ ಉಗ್ರ ಟೀಕೆಯ ಮಾತುಗಳನ್ನು ಸಹಿಸಲಾರೆ ಎಂದು ಹೇಳಿಕೊಳ್ಳುತ್ತಾ ಆತಂಕ ಹುಟ್ಟಿಸುತ್ತಿರುವ ಅನಂತಮೂರ್ತಿಯವರು ತಮ್ಮ ಸುದ್ದಿಶೂರತ್ವವನ್ನು ಈಗಲಾದರೂ ಸ್ವಲ್ಪ ನಿಯಂತ್ರಿಸಿಕೊಳ್ಳಿ.

ಸಮಕಾಲೀನ

ನಾನೂ ಒಬ್ಬ ಗಾಂಧಿವಾದಿ: ಖುಷ್ವಂತ್ ಸಿಂಗ್!

ಅಕ್ಟೋಬರ್ ೨ ಗಾಂಧಿ ಜಯಂತಿಯ ದಿನ. ಅಕ್ಟೋಬರ್ ೧೧ ಹಾಗೂ ೧೨ ಕ್ರಮವಾಗಿ ಅವರ ವಿಶಿಷ್ಟ ಶಿಷ್ಯರಲ್ಲೊಬ್ಬರಾದ ಜಯಪ್ರಕಾಶ ನಾರಾಯಣ್ ಹುಟ್ಟುಹಬ್ಬ ಮತ್ತು ರಾಮಮನೋಹರ ಲೋಹಿಯಾರ ಪುಣ್ಯತಿಥಿಯ ದಿನಗಳೂ ಹೌದು. ಹೀಗೆ ಈ ತಿಂಗಳು ಸಮಾಜವಾದಿ ತತ್ವದಲ್ಲಿ ನಂಬಿಕೆ ಇಟ್ಟವರಿಗೆ ತಮ್ಮ ನಡೆ ನುಡಿಗಳ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳುವ ಮತ್ತು ಈ ದೇಶ ಹಾಗೂ ಸಮಾಜ ತಪ್ಪು ಹಾಗೂ ಅಪಾಯಕಾರಿ ದಿಕ್ಕಿನಲ್ಲಿ ನಡೆಯುತ್ತಿದೆ ಎಂದು ನಮಗನ್ನಿಸುತ್ತಿದ್ದರೆ, ಅದರಲ್ಲಿ ನಮ್ಮ ಪಾತ್ರವೇನೂ ಇಲ್ಲವೇ ಎಂದು ಔಪಚಾರಿಕವಾಗಿಯಾದರೂ ಯೋಚಿಸಬೇಕಾದ ಸಂದರ್ಭಗಳನ್ನೊದಗಿಸುತ್ತದೆ.

ಆಧುನಿಕ ನಾಗರೀಕತೆಯ ವಿಮರ್ಶಕರಾಗಿ ಗಾಂಧಿ ಆ ಬಗ್ಗೆ ಹೇಳಿದ್ದ ಕೆಲವು ಮುಖ್ಯ ಮಾತುಗಳನ್ನಾದರೂ ಇಂದು ನೆನಪಿಸಿಕೊಳ್ಳಬೇಕಿದೆ. ಏಕೆಂದರೆ, ನಮಗೇ ಗೊತ್ತಾಗದಂತೆ ಆಧುನಿಕತೆಯ ಆತ್ಯಂತಿಕ ರೂಪವಾಗಿ ನಮಗೆದುರಾಗಿರುವ ಇಂದಿನ ಜಾಗತೀಕರಣದ ದಿನ ನಿತ್ಯದ ಅನುಭವಗಳ ಹಿನ್ನೆಲೆಯಲ್ಲಿ ಗಾಂಧಿಯ ಆ ಮಾತುಗಳು ಪ್ರವಾದಿಯ ಮಾತುಗಳಂತೆ ಮಾರ್ದನಿಸತೊಡಗಿವೆ. ಗಾಂಧಿ ಆಧುನಿಕ ನಾಗರೀಕತೆಯನ್ನು ಅದೊಂದು ನಾಗರೀಕತೆ ಎಂಬ ಶಬ್ದಕ್ಕೇ ಅನರ್ಹವಾದದ್ದು ಎಂದಿದ್ದರು. ಮೂಲತಃ ಅದೊಂದು (ಕೇವಲ ದೇಹ ಸುಖ ಸಂವರ್ಧನೆಯ) ರೋಗ ಎಂದು ಗುರುತಿಸಿದ್ದರು. ಅದು ತನ್ನ ಮಿತಿ ಮೀರಿದ ಕುತೂಹಲ, ವೇಗ ಹಾಗೂ ರುಚಿಗಳ ಮೂಲಕ ಮನುಷ್ಯನನ್ನು ಯಾಂತ್ರೀಕರಿಸಿ ತನ್ನನ್ನು ತಾನು ಅರಿವ ಅವನ ಮೂಲ ಕರ್ತವ್ಯದಿಂದ ವಿಮುಖನನ್ನಾಗಿ ಮಾಡಿ ಜಗತ್ತನ್ನು ಹಿಂಸೆ ಮತ್ತು ಅಶಾಂತಿಯ ತಾಣವನ್ನಾಗಿ ಮಾಡುತ್ತದೆ ಎಂದಿದ್ದರು. ಮನುಷ್ಯ ತನ್ನ ದೇಹ ವಿಧಿಸಿರುವ ಆಂತರಿಕ ಮತ್ತು ಬಾಹ್ಯ ಪರಿಮಿತಿಗಳನ್ನು ದೈವ/ನಿಸರ್ಗ ನಿಯಾಮಕವೆಂದು ಒಪ್ಪಿಕೊಂಡು ಆ ಪರಿಮಿತಿಗಳನ್ನು ಮೀರದೆ (ಹಾಗೆ ಮೀರುವುದೇ ಹಿಂಸೆಯ ಮೂಲ) ಬಾಳಿದರೆ ಮಾತ್ರ ಪ್ರತಿ ಮನುಷ್ಯನೂ ಶಾಂತಿ–ನೆಮ್ಮದಿಗಳಿಂದರಬಲ್ಲ ಎಂದು ಹೇಳಿದ್ದರು. ಒಂದು ನೆಲೆಯಲ್ಲಿ ಅತಿಗೆ ಹೋಗಿ ಆಡಿದಂತೆ ಕೇಳಿಸುವ ಅವರ ಈ ಮಾತುಗಳನ್ನು ಲೋಹಿಯಾ ಮತ್ತು ಜೆಪಿ ಸಾಂದರ್ಭೀಕರಿಸಿ ನೀಡಿದ ಸಮಾಜವಾದಿ ಕಾರ್ಯಕ್ರಮಗಳನ್ನು ನಾವಿಂದು ಪದೇ ಪದೇ ನೆನಪಿಸಿಕೊಳ್ಳಬೇಕಾದ ಸಂದರ್ಭ ಬಂದಿದೆ ಎನಿಸುತ್ತದೆ. ಇಂದು ಗಾಂಧಿ ನೆನಪು ಎಂದರೆ ಬಹುಶಃ ಇದೇ ಆಗಿರಬಹುದು.

'ಸರಳ ಜೀವನ, ಉನ್ನತ ಚಿಂತನ' ಎಂಬುದು ಗಾಂಧಿ ಬದುಕಿನ ಸಂದೇಶವಾಗಿತ್ತು. ಅರುಚಿ ಎಂಬುದು ಅವರ ಈ ಸರಳ ಜೀವನ ಕಲ್ಪನೆಯ ಮುಖ್ಯ ಮೌಲ್ಯಗಳಲ್ಲಿ ಒಂದಾಗಿತ್ತು. ಆದರೆ ಲೋಕವನ್ನು ರುಚಿಕಟ್ಟಾಗಿ ಅನುಭವಿಸುವುದರಲ್ಲಿ ನಂಬಿಕೆಯಿಟ್ಟ ಅಪಾರ ಸಂಖ್ಯೆಯ ಜನರೂ ಅವರ ಅಭಿಮಾನಿಗಳಾಗಿದ್ದರು. ಅವರು

ತಮ್ಮನ್ನು ಗಾಂಧಿವಾದಿಗಳೆಂದು ಕರೆದುಕೊಳ್ಳಲು ಹಿಂಜರಿಯಲಿಲ್ಲ. ಹಾಗೇ ನೋಡಿದರೆ ಇಂಥವರ ಸಂಖ್ಯೆಯೇ ಹೆಚ್ಚು. ಬಹುಶಃ ಅವರೇ ಪ್ರಾಮಾಣಿಕ ಗಾಂಧಿವಾದಿಗಳೇನೋ! ಮಿಕ್ಕವರು ಲೋಹಿಯಾರ ಮಾತುಗಳಲ್ಲೇ ಹೇಳುವುದಾದರೆ, ಸರ್ಕಾರಿ ಗಾಂಧಿವಾದಿಗಳು ಅಥವಾ ಮಠೀಯ ಗಾಂಧಿವಾದಿಗಳು. ಈ ಹಿನ್ನೆಲೆಯಲ್ಲಿ ನಮ್ಮ 'ರುಚಿ'ಕಟ್ಟಾದ ಲೇಖಕರಲ್ಲೊಬ್ಬರೆನಿಸಿದ ಖುಷ್ವಂತ್ ಸಿಂಗ್ ಗಾಂಧಿ ಬಗ್ಗೆ ಬರೆದಿರುವುದನ್ನು ಇಲ್ಲಿ ನೀಡುತ್ತಿದ್ದೇವೆ. ಇದು ಇತ್ತೀಚೆಗೆ ಬಂದ ಸಿಂಗ್‌ರ 'ಖುಷ್ವಂತ್ ನಾಮ' ಪುಸ್ತಕದಿಂದ ಆಯ್ದ ಭಾಗ.–ಸಂ.

ಇತ್ತೀಚಿನ ದಿನಗಳಲ್ಲಿ, ನನಗೆ ನಾನೇ ಗಾಂಧಿ ಅವರನ್ನು ಕುರಿತು ಯೋಚಿಸುವುದನ್ನು ಕಂಡುಕೊಂಡಿದ್ದೇನೆ. ಅವರನ್ನು ನಾನು ಏಕೆ ಆರಾಧಿಸುತ್ತೇನೆ ಮತ್ತು ನನ್ನನ್ನು ನಾನು ಗಾಂಧಿವಾದಿ ಎಂದು ಏಕೆ ಕರೆದುಕೊಳ್ಳುತ್ತೇನೆ? ಇದಕ್ಕೆ ಮೂರು ಕಾರಣಗಳಿವೆ: ಗಾಂಧಿ ಎಂದೂ ಸುಳ್ಳಾಡದಿದ್ದದ್ದು. ಇನ್ನೊಬ್ಬರಿಗೆ ನೋವಾಗದಂತೆ ನಡೆದುಕೊಳ್ಳಲು ತಮ್ಮೆಲ್ಲ ಶಕ್ತಿಮೀರಿ ಪ್ರಯತ್ನಿಸಿದ್ದು. ತಾವು ನಂಬಿದ ತತ್ವಗಳಿಗಾಗಿ ತಮ್ಮ ಜೀವವನ್ನೇ ಪಣವಾಗಿರಿಸಿದ್ದು ಮತ್ತು ಅದರಲ್ಲಿ ಜಯಶಾಲಿಗಳಾಗಿದ್ದು.

ಅವರು ತಮ್ಮ ಪ್ರಿಯವಾದ ಪ್ರಾರ್ಥನೆಯ ನಾಯಕನ ಪ್ರತೀಕವೇ ಆಗಿದ್ದರು: **ವೈಷ್ಣವ್‌ಜನ್ ತೋ ತೇನೆ ಕಹೀಯೇ, ಜೊ ಪೀಡ್ ಪರಾಯೇ ಜಾನೆ ರೇ** (ನನಗೆ ಗೊತ್ತು ದೇವರ ಮನುಷ್ಯನೆಂದರೆ ಅವನು; ಇನ್ನೊಬ್ಬರ ನೋವಿಗೆ ಸ್ಪಂದಿಸುವವನು)

ಗಾಂಧಿಯನ್ನು ಗುಂಡಿಕ್ಕಿ ಕೊಂದಂದಿನಿಂದ, ಅವರ ಜನ್ಮ ದಿನಾಚರಣೆಯನ್ನು, ಪ್ರತಿ ವರ್ಷವೂ ಆಚರಿಸಲಾಗುತ್ತಿದೆ, ರಾಜ್‌ಘಾಟ್ ಮತ್ತು ಇತರೆಡೆಗಳಲ್ಲಿನ ಆ ಹೂಗುಚ್ಛ ಮತ್ತು ಭಜನೆಗಳ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಟೀವಿ ಪರದೆಯ ಮೇಲೆ ಮತ್ತು ಆ ಸುದ್ದಿಯನ್ನು ದಿನಪತ್ರಿಕೆಗಳಲ್ಲಿ ನೋಡಿ ನೋಡಿ ನಮಗೆ ಸಾಕಾಗಿ ಹೋಗಿದೆ. ಅದೊಂದು ಶಾಸ್ತ್ರಾಚಾರವಾಗಿಬಿಟ್ಟಿದೆ, ಗಾಂಧಿ ತೋರಿದ ಹಾದಿಯಲ್ಲಿ ನಡೆಯುವುದಕ್ಕೆ ನಾವು ಪ್ರಯತ್ನವನ್ನಾದರೂ ಮಾಡಿದೆವೇ, ಎನ್ನುವ ಪ್ರಶ್ನೆ ಕುರಿತಾಗಿ, ಕೆಲವೇ ಕೆಲವು ಜನ ಮಾತ್ರ ಆಲೋಚಿಸುತ್ತಾರೆ.

ನನ್ನನ್ನು ಗಾಂಧಿವಾದಿ ಎಂದು ಕರೆದುಕೊಳ್ಳುವ ನನಗೆ; ಯಾವಾಗಲೂ ನಾನು ಮಾತ್ರ ಸರಿ ಎಂದು ಹೆಮ್ಮೆ ಪಡುವ ನನಗೆ, ಸ್ವಲ್ಪವೇ ಸ್ವಲ್ಪವೂ ಅನುಮಾನ ಇಲ್ಲ: ಒಂದು ವೇಳೆ ನಾನೇನಾದರೂ ಗಾಂಧಿಯವರ ಆಶ್ರಮಕ್ಕೆ ಹೋಗಿ, ಅಲ್ಲಿ ಕೆಲ ದಿನಗಳ ಮಟ್ಟಿಗೆ ಇರಲು ಅನುಮತಿ ಕೋರಿದ್ದರೆ, ಅವರು ನನ್ನ ಮನವಿಯನ್ನು ತಿರಸ್ಕರಿಸಿ, ಅಲ್ಲಿಂದ ತಕ್ಷಣವೇ ಹೊರನಡೆಯಲು ಆದೇಶಿಸುತ್ತಿದ್ದರು. ಅವರು ದೇವರನ್ನು ನಂಬುತ್ತಿದ್ದರು. ನನಗೆ ಆ ನಂಬಿಕೆ ಇಲ್ಲ. ಅವರು ಪಕ್ಕಾ ಸಸ್ಯಾಹಾರಿಗಳಾಗಿದ್ದರು ಮತ್ತು ಅವರು ಲಂಡನ್‌ನಲ್ಲಿ ವಕೀಲರಾಗಲು ಕಾನೂನನ್ನು ಅಭ್ಯಸಿಸುತ್ತಿದ್ದಾಗ, ತಮ್ಮ ಬಿಡುವಿನ ವೇಳೆಯನ್ನು ಸಸ್ಯಾಹಾರದ ಪರ ಪ್ರಚಾರ ಕೈಗೊಂಡರು. ನಾನು ಸಸ್ಯಾಹಾರ ಪ್ರಕೃತಿ ನಿಯಮದ ವಿರುದ್ಧವೆಂದು ನಂಬಿದವನು ಮತ್ತು ಸಂಕೋಚವಿಲ್ಲದೆ ಎಲ್ಲ

ತರಹದ ಮಾಂಸ ತಿನ್ನುವವನು. ಅವರು ಪಾನ ನಿರೋಧ ಪ್ರತಿಪಾದಕರು ಆದರೆ ಒಂದು ಮಿತಿಯಲ್ಲಿ ಕುಡಿಯುವುದು ಒಳ್ಳೆಯದು ಎಂದು ನಂಬುವವನು ನಾನು. ಕುಡಿದು ತೂರಾಡುವುದು ಕೆಟ್ಟದ್ದು. ನಾನು ಯಾವಾಗಲೂ ಒಳ್ಳೆಯ ವೈನು ಮತ್ತು ಸ್ಕಾಚ್ ಸವಿದಿದ್ದೇನೆ. ಗಾಂಧಿ ಇಂದ್ರಿಯ ನಿಗ್ರಹಕ್ಕೆ ಒತ್ತುಕೊಟ್ಟರು. ನನ್ನ ಪ್ರಕಾರ, ಲೈಂಗಿಕತೆ ಮನುಷ್ಯನ ಬದುಕಿನಲ್ಲಿ ಬಹಳ ಮುಖ್ಯವಾದ ಮತ್ತು ಸಂತೋಷ ಒದಗಿಸುವ ಅನುಭವ.

ನಾನು ಜನರಿಗೆ ನೋವುಂಟು ಮಾಡಲಿಚ್ಚಿಸದೆ, ಅವರನ್ನು ಇಕ್ಕಟ್ಟಿನಿಂದ ಪಾರುಮಾಡಲು ಸುಳ್ಳು ಹೇಳುತ್ತೇನೆ. ಗಾಂಧಿ ಸತ್ಯವನ್ನು ಪೂಜಿಸಿದರು. ಸತ್ಯವನ್ನೇ ದೇವರೆಂದು ಕರೆದರು. ದೇವರ ಅಸ್ತಿತ್ವವನ್ನು ಪ್ರಶ್ನಿಸಬಹುದಾದರೂ, ಅದನ್ನು ಸತ್ಯಕ್ಕೆ ಸಮಾನ ಮಾಡಿದಾಗ, ಅದು ಮಾನವ ವರ್ತನೆಯ ಭಾಗವಾಗಿಬಿಡುತ್ತದೆ ಮತ್ತು ಕೊನೆವರೆಗೂ ದಿನನಿತ್ಯ ಅದರ ಸತ್ಯಾಸತ್ಯತೆಯ ಪರೀಕ್ಷೆ ನಡೆಯಬೇಕಾಗುತ್ತದೆ. ಆದ್ದರಿಂದಲೇ ಜಗತ್ತಿನೆಲ್ಲೆಡೆ, ಸಸ್ಯಾಹಾರಕ್ಕೆ, ಮದ್ಯದಿಂದ ದೂರ ಇರುವುದಕ್ಕೆ ಮತ್ತು ಇಂದ್ರಿಯ ನಿಗ್ರಹಕ್ಕೆ (ಸಂತತಿ ಮುಂದುವರಿಕೆಯ ಹೊರತಾಗಿ) ಗಾಂಧಿ ತೋರಿದ ಬದ್ಧತೆಗೆ, ಹೆಚ್ಚು ಆದ್ಯತೆ ನೀಡದ ಕೋಟ್ಯಾಂತರ ಜನರೂ, ಗಾಂಧಿಯವರನ್ನು ಮಹಾತ್ಮ ಎಂದು ನಂಬುತ್ತಾರೆ. ಮಾನವ ಜನಾಂಗಕ್ಕೆ ಹೊಸತೊಂದು ಸಂದೇಶ ನೀಡಬಲ್ಲವರಾಗಿದ್ದ ಮಹಾತ್ಮರ ಅನುಯಾಯಿ ತಾವು ಎಂದು ಭಾವಿಸುವುದಕ್ಕೆ ಹೆಮ್ಮೆ ಪಡುತ್ತಾರೆ.

ಬಾಪು ವಿರುದ್ಧ ನನ್ನ ಕೆಲವು ಗೊಣಗಾಟಗಳೂ ಇವೆ. ಅವರು ತಮ್ಮ ಪತ್ನಿ ಕಸ್ತೂರಬಾ ಅವರನ್ನು ತುಂಬಾ ಕೆಟ್ಟದಾಗಿ ನಡೆಸಿಕೊಂಡರು ಮತ್ತು ಅವರ ಮಕ್ಕಳ ಬಗ್ಗೆ ಉದಾಸೀನ ಮನೋಭಾವ ಹೊಂದಿದ್ದರು. ಅವರಲ್ಲಿ ಇವಲ್ಲದೆ ಇನ್ನೂ ಕೆಲವು ಋಣಾತ್ಮಕ ಗುಣಗಳಿದ್ದವು. ಅವುಗಳಿಗೆ ಸಂಬಂಧಿಸಿ ಹೆಚ್ಚು ಹೇಳುವುದಕ್ಕೆ ಇರಿಸುಮುರಿಸಾಗುತ್ತದೆ. ಆದಾಗ್ಯೂ, ನಾನು ಗಾಂಧಿಯವರನ್ನು ಆರಾಧಿಸುತ್ತೇನೆ ಮತ್ತು ನಾನೊಬ್ಬ ಗಾಂಧಿವಾದಿ ಎಂದು ಸಾರಿ ಸಾರಿ ಹೇಳುತ್ತೇನೆ.

ಗಾಂಧಿ ತಮ್ಮ ಮೌಲ್ಯಗಳನ್ನು ಮತ್ತು ನೀತಿ ಸಂಹಿತೆಯನ್ನು ದಕ್ಷಿಣ ಆಫ್ರಿಕಾದಲ್ಲಿದ್ದಾಗ ರೂಪಿಸಿಕೊಂಡರು. ತನಗಿಂತ ಬಲಶಾಲಿಯಾದ ಎದುರು ಪಕ್ಷದ ವಿರುದ್ಧ ಬಳಸಬಹುದಾದ ಬಹು ಶಕ್ತಿಶಾಲಿ ಅಸ್ತ್ರವೆಂದರೆ ತಾನು ನಂಬಿರುವುದು ಸತ್ಯ ಎಂಬ ಬದ್ಧತೆಯಿಂದ ನಡೆಸುವ ಸವಿನಯ ಕಾನೂನು ಭಂಗ ಎಂಬುದು ಅವರ ಅರಿವಿಗೆ ಬಂತು; ಅಲ್ಲಿಯೇ ಹುಟ್ಟಿದ್ದು ಸತ್ಯದ ಶಕ್ತಿಯನ್ನು ಅವಲಂಬಿಸಿದ ಸತ್ಯಾಗ್ರಹ. ಅದನ್ನು, ಯಾವುದೇ ವೈರತ್ವವಿಲ್ಲದೆ ಮತ್ತು ಎದುರಾಳಿಯು ಶಸ್ತ್ರ ತ್ಯಜಿಸಿ ನಿನ್ನ ದೃಷ್ಟಿಕೋನಕ್ಕೆ ಪರಿವರ್ತಿತನಾಗುತ್ತಾನೆ ಎಂಬ ನಂಬಿಕೆಯಿಂದ ಅದನ್ನು ಬಳಸಬೇಕು. ಆದಾಗ್ಯೂ, ಸತ್ಯಾಗ್ರಹವನ್ನು ಒಂದು ಪ್ರಬಲ ಶಕ್ತಿಯನ್ನಾಗಿಸಲು, ಸತ್ಯಾಗ್ರಹಿ ಭಯದಿಂದ ಮುಕ್ತನಾಗಿರಬೇಕಾಗುತ್ತದೆ, ಅಗತ್ಯಬಿದ್ದರೆ, ಅಪಮಾನದ ದಳ್ಳುರಿಯಲ್ಲಿ ನಲುಗಬೇಕಾಗುತ್ತದೆ,

ದೈಹಿಕ ಹಿಂಸೆಯನ್ನೂ ಸಹಿಸಿಕೊಳ್ಳಬೇಕಾಗುತ್ತದೆ. ಅನೇಕ ಸಲ ಗಾಂಧಿ ಏಟು ತಿನ್ನಬೇಕಾಗಿ ಬಂತು, ಜೈಲಿಗೆ ಹೋಗಬೇಕಾಗಿ ಬಂತು. ಅವರ ಹತ್ಯೆಗೆ ಪ್ರಯತ್ನಗಳು ನಡೆದವು. ಆದರೂ ಅವರೆಂದೂ ಹಿಂಜರಿಯಲಿಲ್ಲ, ಬಲು ಬೇಗ ದಕ್ಷಿಣ ಆಫ್ರಿಕಾದ ಬಿಳಿಯ ಆಳ್ವಿಕೆದಾರರು, ಬ್ರಿಟಿಷ್ ಮತ್ತು ಡಚ್ಚರು ಅವರನ್ನು ಗೌರವಿಸುವುದಕ್ಕೆ ಪ್ರಾರಂಭಿಸಿದರು ಮತ್ತು ಅವರಲ್ಲಿದ್ದ ನೈತಿಕ ಶ್ರೇಷ್ಠತೆಯನ್ನು ಗುರುತಿಸಿದರು. ಅವರನ್ನು ಸಂತನೆಂದು ಮಾನ್ಯ ಮಾಡಿದರು.

ನಾನು ಬಾಪುವನ್ನು ಆರಾಧಿಸುತ್ತೇನೆ ಬೇರೆ ಇನ್ನಾರಿಗಿಂತಲೂ ಹೆಚ್ಚಾಗಿ. ಆಗಿಹೋದ ಎಲ್ಲ ಪ್ರವಾದಿಗಳ ಬಗ್ಗೆ ನಮಗೆ ಗೊತ್ತಿಲ್ಲ– ಅವರ ಬಗ್ಗೆ ನಮಗೆ ಗೊತ್ತಿರುವುದು ಪುರಾಣ ಇಲ್ಲವೆ ಪವಾಡ ಮಾತ್ರ. ಆದರೆ ಗಾಂಧಿಯವರ ವಿಷಯದಲ್ಲಿ, ನಮಗೆಲ್ಲ ಗೊತ್ತು. ಅವರೊಂದು ನಮ್ಮ ಕಣ್ಣ ಮುಂದಿನ ಜೀವಂತ ವಾಸ್ತವ ಎಂದು.

ಯಾವುದಾದರೂ ವಿಷಯದ ಬಗ್ಗೆ ನನಗೆ ಗೊಂದಲವಿದ್ದಾಗ, ನಾನು ಸುಮ್ಮನೆ ಊಹಿಸಿಕೊಳ್ಳುತ್ತೇನೆ, ಅಂತಹ ಸಂದರ್ಭದಲ್ಲಿ ಗಾಂಧಿ ಮಾಡುತ್ತಿದ್ದದ್ದನ್ನು ಮತ್ತು ನಾನೂ ಅದನ್ನೇ ಮಾಡುತ್ತೇನೆ.

(ಕನ್ನಡ ಅನುವಾದ: **ಎಂ.ಎಸ್. ರುದ್ರೇಶ್ವರ ಸ್ವಾಮಿ**)

ನವೆಂಬರ್, ೨೦೧೩

ಅಭಿವೃದ್ಧಿ: ಲೂಟಿಕೋರತನಕ್ಕೆ ಇನ್ನೊಂದು ಹೆಸರು...

ಪ್ರಿಯ ಓದುಗರೇ,

ಕಲ್ಲಿದ್ದಲು ಹಂಚಿಕೆ ಹಗರಣ ದಿನೇ ದಿನೇ ಹೊಸ ಹೊಸ ಮತ್ತು ಕುತೂಹಲಕಾರಿ ತಿರುವುಗಳನ್ನು ಪಡೆದುಕೊಳ್ಳುತ್ತಿದೆ. ಬೆಲೆ ಬಾಳುವ ರಾಷ್ಟ್ರದ ನೈಸರ್ಗಿಕ ಸಂಪತ್ತನ್ನು ಯಾವುದೇ ನಿರ್ದಿಷ್ಟ ನೀತಿಯಿಲ್ಲದೆ ಅಥವಾ ಹರಾಜೂ ಹಾಕದೆ ಬೇಕಾಬಿಟ್ಟಿ ಹಂಚಿ ಸರ್ಕಾರಿ ಖಜಾನೆಗೆ ಸುಮಾರು ಒಂದೂ ಕಾಲು ಲಕ್ಷ ಕೋಟಿ ರೂಪಾಯಿಗಳ ನಷ್ಟ ಉಂಟು ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಈ ಆರೋಪ ಈಗ ಈ ಹಂಚಿಕೆ ಸಮಯದಲ್ಲಿ ಕಲ್ಲಿದ್ದಲು ಖಾತೆಯನ್ನು ನೋಡಿಕೊಳ್ಳುತ್ತಿದ್ದ ಪ್ರಧಾನಮಂತ್ರಿಯವರ ಕಾಲುಬುಡಕ್ಕೇ ಬಂದು ನಿಂತಿದೆ. ಇದರ ಸಂಬಂಧ ಮುಖ್ಯ ಕಡತಗಳು ಕಾಣೆಯಾಗಿವೆ. ಆದರೂ ಸಿ.ಬಿ.ಐ. ಪ್ರಧಾನಮಂತ್ರಿಗಳ ಕಾರ್ಯಾಲಯದಿಂದ ಸಂಬಂಧಪಟ್ಟ ಕಡತಗಳಿಗಾಗಿ ಮನವಿ ಸಲ್ಲಿಸಿದೆ.

ಪ್ರಧಾನ ಮಂತ್ರಿಗಳೇನೋ ತಾವು ಸಿ.ಬಿ.ಐ. ವಿಚಾರಣೆಗೆ ಸಿದ್ಧ ಎಂದಿದ್ದಾರೆ, ಅದು ತಮ್ಮ ಆಯ್ಕೆಗೆ ಬಿಟ್ಟ ವಿಷಯವೆಂಬಂತೆ! ಆದರೆ ಇದಕ್ಕಿಂತ ಹೆಚ್ಚು ಕುತೂಹಲ ಹುಟ್ಟಿಸುವ ಸಂಗತಿಯೆಂದರೆ, ಪ್ರಧಾನಮಂತ್ರಿಯ ಪ್ರಸ್ತಾಪ ಬಂದೊಡನೆ ಕಾಂಗ್ರೆಸ್ ವಕ್ತಾರರು ಹೌಹಾರಿ ಅವರು ನ್ಯಾಯಾಂಗದ ಕಟಕಟೆಗೆ ಬರುವ ಮುನ್ನವೇ ಅವರನ್ನು ಆರೋಪದಿಂದ ಖುಲಾಸೆಗೊಳಿಸುವ ಆತುರ. ಮೊದಲಿಗೆ, ರಾಷ್ಟ್ರದ ಅಮೂಲ್ಯ ಆಸ್ತಿಯೆನಿಸಿರುವ ನೈಸರ್ಗಿಕ ಸಂಪತ್ತನ್ನು ಯಾವುದೇ ನಿರ್ದಿಷ್ಟ ಮಾರ್ಗದರ್ಶನ ಸೂತ್ರಗಳಿಲ್ಲದೆ ಮೊದಲು ಬಂದವರಿಗೆ ಆದ್ಯತೆಯ ಆಧಾರದ ಮೇಲೆ ಹಂಚಿ ಕೈತೊಳೆದುಕೊಳ್ಳುವುದರ ಉದ್ದೇಶವಾದರೂ ಏನು ಎಂಬುದನ್ನು ಈ ವಕ್ತಾರರು ವಿವರಿಸುವ ಗೋಜಿಗೆ ಹೋಗುತ್ತಿಲ್ಲ.

ಈಗ ಸುದ್ದಿ ಮಾಡುತ್ತಿರುವ ಆದಿತ್ಯ ಬಿರ್ಲಾರ ಪ್ರಕರಣವನ್ನೇ ನೋಡಿ. ಅವರಿಗೆ ಈಗ ಮಂಜೂರಾಗಿರುವ ಗಣಿಯನ್ನು, ಅವರು ಈ ಹಿಂದೆ ಮಂಜೂರಾಗಿದ್ದ ಗಣಿಯನ್ನೇ ಪೂರ್ಣವಾಗಿ ಬಳಸಿಕೊಂಡಿಲ್ಲ ಎಂಬ ಸರಿಯಾದ ಕಾರಣದ ಮೇಲೆ ಸರ್ಕಾರಿ

ಸ್ವಾಮ್ಯದ ನೈವೇಲಿ ಲಿಗ್ನೈಟ್ ಕಂಪನಿಗೆ ನೀಡಲಾಗಿತ್ತು. ಈ ನಿರ್ಧಾರವನ್ನು ಕೈಗೊಂಡಿದ್ದುದು ಕಲ್ಲಿದ್ದಲು ಕಾರ್ಯದರ್ಶಿಯಾಗಿದ್ದ ಪಾರೇಖ್ ಅವರ ನೇತೃತ್ವದ ಗಣಿ ಮಂಜೂರು ಪರಿಶೀಲನಾ ಸಮಿತಿ. ಆದರೀಗ ಬಿರ್ಲಾ, ಪ್ರಧಾನಮಂತ್ರಿ ಮತ್ತು ಅದೇ ಕಲ್ಲಿದ್ದಲು ಕಾರ್ಯದರ್ಶಿಯನ್ನು ಭೇಟಿಯಾಗಿ ಮಾತುಕತೆ ನಡೆಸಿದ ನಂತರ ಅದನ್ನು ಸರ್ಕಾರಿ ಕಂಪನಿಯಿಂದ ಕಿತ್ತು ಬರ್ಲಾರಿಗೆ ಮಂಜೂರು ಮಾಡಲಾಗಿದೆ. ಮನಮೋಹನ ಸಿಂಗ್ ಮತ್ತು ಪಾರೇಖ್ ಇಬ್ಬರೂ ಶುದ್ಧ ಹಸ್ತಕ್ಕೆ ಹೆಸರಾದವರೆಂದು ಹೇಳಲಾಗುತ್ತಿದೆ. ಹಾಗಾದರೆ ಬಿರ್ಲಾಗೆ ಗಣಿ ಮರುಮಂಜೂರಾದ್ದದರ ಮರ್ಮವಾದರೂ ಏನು? ಅದನ್ನು ಮಾತ್ರ ಯಾರೂ ಬಿಡಿಸಿ ಹೇಳುತ್ತಿಲ್ಲ. ಪಾರೇಖ್ ಪ್ರಧಾನಮಂತ್ರಿಯದ್ದೇ ಅಂತಿಮ ತೀರ್ಮಾನ ಎನ್ನುತ್ತಿದ್ದರೆ, ಪ್ರಧಾನಮಂತ್ರಿ ನನ್ನ ತೀರ್ಮಾನ ಸರಿಯಾಗಿಯೇ ಇತ್ತು; ನನ್ನನ್ನು ನಂಬಿ ಎನ್ನುತ್ತಿದ್ದಾರೆ!

ಮುಕ್ತ ಮಾರುಕಟ್ಟೆಯ 'ನೀತಿ' ಎಂಬ ಹೆಸರಿನ ಈ (ಬಂಡವಾಳಶಾಹಿ) ವ್ಯವಸ್ಥೆ ಕೆಲಸ ಮಾಡುವುದೇ ಪಾರೇಖ್ ಮತ್ತು ಮನಮೋಹನ ಸಿಂಗ್‌ರಂತಹ ವೈಯುಕ್ತಿಕ ಶುದ್ಧತೆಯ ಏಜೆಂಟರ ಮೂಲಕ. ಶೀಘ್ರ ಗತಿಯ ಮುಕ್ತ ಅಭಿವೃದ್ಧಿ ಬೇಕೇ? ಹಾಗಾದರೆ ಮುಕ್ತವಾಗಿ ಹಣ ಹೂಡಿ ಪ್ರಜಾತಾಂತ್ರಿಕ ನೀತಿ ನಿರ್ಧಾರಗಳೆಂಬ ತರಲೆ-ತಾಪತ್ರಯಗಳಿಲ್ಲದೆ ಮುಕ್ತವಾಗಿ ನಮ್ಮ 'ವ್ಯಾಪಾರ' ಮಾಡಿಕೊಳ್ಳಲು ಅವಕಾಶ ನೀಡಿ ಎನ್ನುತ್ತದೆ ಈ ವ್ಯವಸ್ಥೆ. ಈ ವ್ಯವಸ್ಥೆ ತನ್ನ ಬಗ್ಗೆ ನಂಬಿಕೆ ಹುಟ್ಟಿಸಲು ಶುದ್ಧ ಹಸ್ತಕ್ಕೆ ಪ್ರಸಿದ್ಧರಾದವರನ್ನು ತನ್ನ ಏಜೆಂಟರನ್ನಾಗಿ ಮಾಡಿಕೊಳ್ಳುತ್ತದೆ. ಇಂತಹ ಮುಕ್ತ ಅಭಿವೃದ್ಧಿಯ ಸುಖಗಳಿಗೆ ಜೋತುಬಿದ್ದ ಸಮಾಜ ಈ ವ್ಯವಸ್ಥೆಯೇ ಅತ್ಯುತ್ತಮ ಎಂದು ಭಾವಿಸುತ್ತದೆ. ಆದರೆ ಉದಾಹರಣೆಗೆ, ಈ ಕಲ್ಲಿದ್ದಲು ಹಂಚಿಕೆ ಪ್ರಕರಣವನ್ನೇ ನೋಡಿದರೆ, ಈ ವ್ಯವಸ್ಥೆ ಸಮಾಜದ ಹಿತ ಕಾಪಡುವ ಜವಾಬ್ದಾರಿ ಹೊಂದಿರುವ ರಾಜಕಾರಣವನ್ನು ಭ್ರಷ್ಟಗೊಳಿಸಿರುವ ರೀತಿ ಮತ್ತು ಪ್ರಮಾಣ ಗಾಬರಿ ಹುಟ್ಟಿಸುತ್ತದೆ. ಗಣಿ ಮಂಜೂರಾದವರ ಪಟ್ಟಿಯಲ್ಲಿ ಸರಿ ಸುಮಾರು ಎಲ್ಲ ಪ್ರಮುಖ ರಾಜಕೀಯ ಪಕ್ಷಗಳ ಸದಸ್ಯರು ಮತ್ತು ಅವರ ಗೆಣೆಕಾರರು ತುಂಬಿದ್ದಾರೆ. ಈ ಹಂಚಿಕೆಯಲ್ಲಿ, ೨-ಜಿ ಪ್ರಕರಣದಲ್ಲಾದಂತೆಯೇ ಹಲವಾರು ಮಧ್ಯವರ್ತಿಗಳು ಗಣಿ ಕೊಳ್ಳುವ ಹಣಕಾಸಿನ ಸಾಮರ್ಥ್ಯ ಅಥವಾ ಅದನ್ನು ಬಳಸುವ ಮೂಲ ಸೌಲಭ್ಯಗಳ ಹಿನ್ನೆಲೆಯೂ ಇಲ್ಲದೆ ರಾಜಕಾರಣಿಗಳ ಪ್ರಭಾವ ಬಳಸಿ ಗಣಿಗಳನ್ನು ಕೊಂಡು, ಕೂಡಲೇ ಮಾರಿ ರಾತ್ರೋರಾತ್ರಿ ಕೋಟ್ಯಾಂತರ ರೂಪಾಯಿಗಳ 'ವ್ಯಾಪಾರ' ಮಾಡಿಕೊಂಡಿದ್ದಾರೆ. ಇಂದು ರಾಷ್ಟ್ರದ ಅಭಿವೃದ್ಧಿ ಎಂದರೆ ಮತ್ತೇನಲ್ಲ: ಉದ್ದಿಮೆಗಳ ಹೆಸರಲ್ಲಿ ಇಂತಹ ಲೂಟಿಕೋರ ವ್ಯಾಪಾರಕ್ಕಾಗಿ ಹಣ ಹೂಡುವ ಹೆಸರಲ್ಲಿ ಸ್ಥಾಪಿತವಾಗಿರುವ ರಾಷ್ಟ್ರೀಯ ವೇದಿಕೆಯದು!

ಇಂತಹ ವ್ಯವಸ್ಥೆಯ ರಾಜಕಾರಣ ಭ್ರಷ್ಟರನ್ನು ರಕ್ಷಿಸುವುದು ಅನಿವಾರ್ಯವೇ ಆಗಿರುತ್ತದೆ. ಹಾಗಾಗಿಯೇ ಅದು ಲಾಲೂ ಪ್ರಸಾದ್‌ರಂತಹವರನ್ನು ರಕ್ಷಿಸಲು ಕೋರ್ಟಿನ ತೀರ್ಪನ್ನು ಧಿಕ್ಕರಿಸಲು ಹೋಗಿ ಜನರ ಛೀಮಾರಿಗೆ ಒಳಗಾಗಬೇಕಾಯಿತು. ಈ

ಪ್ರಕರಣದಲ್ಲಿ ಕಾಂಗ್ರೆಸ್ ವರ್ತಿಸಿದ ರೀತಿಯಂತೂ ಜಿಗುಪ್ಸೆ ಹುಟ್ಟಿಸುವಂತಿತ್ತು. ರಾಹುಲ್ 'ಬಂಡಾಯ' ಏಳುವ ಕ್ಷಣದವರೆಗೆ ತನ್ನ ಸರ್ಕಾರದ ಸುಗ್ರೀವಾಜ್ಞೆಯನ್ನು ಸಮರ್ಥಿಸಿಕೊಳ್ಳುತ್ತಿದ್ದ ಈ ಪಕ್ಷ ಮರುಕ್ಷಣವೇ ತನ್ನ ನಿಲುವನ್ನು ಬದಲಾಯಿಸಿಕೊಂಡ ರೀತಿ, ಇದೊಂದು ರಾಜಕೀಯ ಪಕ್ಷವೋ ಅಥವಾ ಊಳಿಗದ ದಂಡೋ ಎಂದು ಜನ ಗಾಬರಿ ಪಡುವಂತಾಗಿದೆ. ಇನ್ನು ರಾಹುಲರ 'ಬಂಡಾಯ'ವಂತೂ ರಾಷ್ಟ್ರಮಟ್ಟದ ರಾಜಕೀಯ ಪಕ್ಷವೊಂದರ ಪ್ರಜಾತಾಂತ್ರಿಕ ಮರ್ಯಾದೆಗಳನ್ನೆಲ್ಲ ಗಾಳಿಗೆ ತೂರಿ ತೋರಿದ ಉದ್ಧಟತನದಂತೆ ಕಂಡಿತು. ಅವರ ಬಂಡಾಯದ ಹಿಂದಿದ್ದಿರಬಹುದಾದ ಸದುದ್ದೇಶವೇ ಭಂಗಗೊಂಡಿದೆ. ಈತ ರಾಷ್ಟ್ರ ರಾಜಕಾರಣದ ಜವಾಬ್ದಾರಿ ಹೊರಲು ಇನ್ನೂ ಸಿದ್ಧವಾಗದಿರುವ 'ಪಪ್ಪು' ಎನಿಸಿಕೊಂಡುಬಿಟ್ಟಿದ್ದಾರೆ. ಹೀಗಾಗಿ ಸದ್ಯಕ್ಕೆ ನರೇಂದ್ರ ಮೋದಿ ನಿರಾಳವಾಗಿ ಮುನ್ನಡೆದಿದ್ದಾರೆ!

ಸದ್ಯದ ಒಂದೇ ಸಂತೋಷದ ಸಂಗತಿಯೆಂದರೆ, ನಮ್ಮ ನ್ಯಾಯಾಂಗವು ಅತಿ ವಿಳಂಬವಾಗಿಯಾದರೂ ಅಧಿಕಾರದ ಉನ್ನತ ಸ್ಥಾನಗಳಲ್ಲಿದ್ದ ಭ್ರಷ್ಟರನ್ನು ಸೆರೆಮನೆಗೆ ದೂಡಲಾರಂಭಿಸಿರುವುದು.

<u>ಸಮಕಾಲೀನ</u>

ಮಾಧ್ಯಮಗಳ ಮಾಯಾಬಜಾರ್

ಇದು ಮಾಧ್ಯಮಗಳ ಯುಗವಂತೆ. ಅಥವಾ ಹಾಗೆಂದು ಮಾಧ್ಯಮದವರೇ ಹೇಳಿಕೊಳ್ಳುತ್ತಿದ್ದಾರೆ. ಇಂದಿನ ಸಾರ್ವಜನಿಕ ಬದುಕೂ ಹಾಗೇ ನಡೆಯುತ್ತಿದೆ. ನಾಗರೀಕತೆಯ ಹೆಸರಿನಲ್ಲಿ ಸಮುದಾಯಗಳು ನಾಶವಾಗತೊಡಗುತ್ತಿದ್ದಂತೆ, ಜನರ ಭಾವನಾತ್ಮಕ ಅಗತ್ಯಗಳನ್ನು ಪೂರೈಸಲು ಹೊರಗಿನ ಶಕ್ತಿಯೊಂದು ಬೆಳೆಯತೊಡಗುವುದು ಸಹಜವೇ ಸರಿ. ಸಮುದಾಯಗಳ ನಾಶ ಹೆಚ್ಚೆಚ್ಚು ನೆಲೆಗಳಿಗೆ ವಿಸ್ತರಿಸತೊಡಗಿದಂತೆ ಈ ಹೊರಗಿನ ಶಕ್ತಿ ಕೂಡ ಜನರ ಬದುಕಿನ ಹೆಚ್ಚೆಚ್ಚು ನೆಲೆಗಳಿಗೆ ವಿಸ್ತರಿಸಿಕೊಂಡು ಕ್ರಿಯಾಶೀಲವಾಗತೊಡಗಿ, ಅಂತಿಮವಾಗಿ ಒಳಗಿನ ಶಕ್ತಿಯೇ ಆಗಿ ರೂಪಾಂತರಗೊಳ್ಳುತ್ತದೆ.

ಇಂದು ಮಾಧ್ಯಮ ನಮ್ಮ ಬದುಕಿನಲ್ಲಿ ಇಷ್ಟೊಂದು ಪ್ರಾಮುಖ್ಯತೆಯನ್ನು ಪಡೆದಿರುವುದು ಈ ಹಾದಿಯಲ್ಲಿ ಕ್ರಮಿಸಿಯೇ. ಸಮುದಾಯಗಳ ನಾಶ ಸೃಷ್ಟಿಸಿದ ದೂರಗಳನ್ನು ತುಂಬಲು ಸುದ್ದಿ ವಾಹಕವಾಗಿ ಆರಂಭವಾದ ಮಾಧ್ಯಮವು ಪತ್ರಿಕೆ, ರೇಡಿಯೋ, ಟೆಲಿವಿಷನ್, ಗಣಕ, ಸಂಚಾರಿ ದೂರವಾಣಿ ಇತ್ಯಾದಿ ತಾಂತ್ರಿಕ ಆವಿಷ್ಕಾರಗಳ ಮೂಲಕ ಇಂದು ನಮ್ಮ ಬದುಕನ್ನೇ ಆಕ್ರಮಿಸಿಕೊಂಡು, ಅದರ ಮೂಲ ಲಂಗರುಗಳನ್ನೇ ಬದಲಾಯಿಸಿ ಅದನ್ನು ಇಡಿಯಾಗಿ ಪುನರ್ರೂಪಿಸುವ ವಿರಾಟ್ ಶಕ್ತಿಯಾಗಿ ಬೆಳೆದಿದೆ. ಪ್ರತಿ ವಾಸ್ತವ, ಪ್ರತಿ ಸತ್ಯ, ಪ್ರತಿ ಬದುಕುಗಳ ಪರಿಕಲ್ಪನೆಗಳನ್ನು ಸೃಷ್ಟಿಸಿ ಈಗ ಈ ಪ್ರತಿ-ಗಳನ್ನೇ ನಿಜಗಳನ್ನಾಗಿಸುವ ಮಾಯಾವಿ ಶಕ್ತಿಯಾಗಿ ಮಾರ್ಪಾಡಾಗಿದೆ.

ಈ ಮಾಯಾವಿ ವಿದ್ಯಮಾನದ ಹಿಂದೆ ಇರುವುದು ಹಣ. ಆ ಹಣ ಹೂಡಿಕೆದಾರರ ಲಾಭಕೋರತನ. ಹೆಚ್ಚೆಚ್ಚು ಲಾಭಕ್ಕಾಗಿ ಹೆಚ್ಚೆಚ್ಚು ಪ್ರತಿ ವಾಸ್ತವ, ಪ್ರತಿ ಸತ್ಯ ಮತ್ತು ಪ್ರತಿ ಬದುಕಿನ ರೂಪಗಳ ನಿರ್ಮಾಣ. ಇವುಗಳ ದಾಳಿಗೆ ಸಿಕ್ಕಿ ನಮ್ಮ ನಿಜ ಬದುಕಿನ ಮೂಲ ಆಧಾರ ಅಥವಾ ಪರಿಕರಗಳಾದ ನಮ್ಮ ಭಾಷೆ, ನಮ್ಮ ಸಂಸ್ಕೃತಿ ಮತ್ತು ನಮ್ಮ ಧರ್ಮಗಳೇ ವಕ್ರ ರೂಪಗಳನ್ನು ತಾಳುತ್ತಾ, ಅವೇ ನಿಜ ರೂಪಗಳಾಗಿ ಮರ್ಪಾಡಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕ್ರಿಕೆಟ್ಟನ್ನೂ 'ಧರ್ಮ' ಎಂದು ಕರೆದು ಸಚಿನ್‌ರನ್ನು ಅದರ ದೇವರನ್ನಾಗಿ ಪ್ರತಿಷ್ಠಾಪಿಸಿ ಇಂದು ಅವರ ನಿವೃತ್ತಿಯನ್ನು ಒಂದು ಬೃಹತ್ ಭಾವೋದ್ವೇಗದ ರಾಷ್ಟ್ರೀಯ ಪ್ರದರ್ಶನದ ಉತ್ಸವವನ್ನಾಗಿ ಪರಿವರ್ತಿಸಿ ಅದು ಸೃಷ್ಟಿಸಿರುವ ಮಾರುಕಟ್ಟೆ ಮತ್ತು ಅದರ ವ್ಯಾಪಾರ ವೈವಿಧ್ಯ ಇದಕ್ಕೊಂದು ಉದಾಹರಣೆಯಷ್ಟೆ.

ಈ ಮಾಧ್ಯಮಗಳ ಮಾಯಾಬಜ಼ಾರ್‌ನ ಕೇಂದ್ರದಲ್ಲಿರುವ ಟೆಲಿವಿಷನ್‌ನ ಪರದೆಯನ್ನೊಮ್ಮೆ ನೋಡಿದರೆ ಸಾಕು, ಇದರ ಮಾಯಾವಿ ಸ್ವರೂಪ ಅಥವಾ ಅದರ ರಾಜಕಾರಣ ಅರ್ಥವಾಗುತ್ತದೆ. ಪುಟ್ಟ ಪರದೆಯ ಮೇಲೆ ಆಯಾ ವಾಹಿನಿಯ ವಾಣಿಜ್ಯ ಸಾಮರ್ಥ್ಯಕ್ಕೆ ತಕ್ಕಂತೆ ಕನಿಷ್ಠ ಮೂರರಿಂದ ಏಳು ವಿದ್ಯಮಾನಗಳು ಒಟ್ಟಿಗೇ ನಡೆಯುತ್ತಿರುತ್ತವೆ. ಇದರ ಹಿಂದೆ ಇರುವುದು ಬರೀ ದುರಾಸೆಯಲ್ಲ. ಒಟ್ಟಿಗೇ ನಡೆಯುತ್ತಿರುವ ಈ ಬಹು ವಿದ್ಯಮಾನಗಳಲ್ಲಿ ಯಾವುದೊಂದನ್ನೂ ಪೂರ್ಣವಾಗಿ, ಸ್ಪಷ್ಟವಾಗಿ, ಖಚಿತವಾಗಿ ತನ್ನ ಗ್ರಹಿಕೆಗೆ ತಂದುಕೊಳ್ಳಲಾಗದ 'ನಾಗರಿಕ ವೀಕ್ಷಕ'ನ ಮನಸ್ಸು ಅಸ್ಥಿರ ಮತ್ತು ಅತೃಪ್ತವಾಗಿಯೇ ಉಳಿದುಬಿಡಬೇಕು. ಹಾಗಾಗಿ ಅವನು/ಅವಳು ಸ್ಥಿರತೆ ಮತ್ತು ತೃಪ್ತಿಯನ್ನು ಅರಸುತ್ತಾ ಆ ಪರದೆಗೆ ನಿರಂತರ ದಾಸನಾಗಿ ಇರುವಂತೆ ಮಾಡಿಕೊಳ್ಳುವ ಭಯಾನಕ ದುರುದ್ದೇಶವೂ ಇದರ ಹಿಂದೆ ಇದ್ದಂತಿದೆ.

೨೪ x ೭ ಟೆಲಿವಿಷನ್ ಎಂದರೆ ಮತ್ತೇನಲ್ಲ. ಅದು ನಿರಂತರ ಹಸಿವಿನ ಭೂತ. ಅದು ಸಿಕ್ಕಿದ್ದನ್ನೆಲ್ಲ ತಿನ್ನುತ್ತಿರುತ್ತದೆ; ಅದೆಲ್ಲವೂ ರುಚಿಯಾಗಿದೆ ಎನ್ನುವಂತೆ ಸದಾ ಚಪ್ಪರಿಸುತ್ತಾ ನಮ್ಮಲ್ಲೂ ನಿರಂತರ ಹುಸಿ ಹಸಿವನ್ನು ಉದ್ರೇಕಿಸುತ್ತಿರುತ್ತದೆ. ಆ ಮೂಲಕ ನಮ್ಮ ರುಚಿ–ಅಭಿರುಚಿಗಳನ್ನೂ, ನಮ್ಮ ನಿಜ ಬದುಕನ್ನೂ ನಾಶ ಮಾಡುತ್ತಿರುತ್ತದೆ. ಇದು ಈಗಾಗಲೇ ರೇಡಿಯೋವನ್ನು ಹೆಚ್ಚೂ ಕಡಿಮೆ ತಿಂದು ಹಾಕಿದೆ. ಪತ್ರಿಕೆಗಳನ್ನು ಅವುಗಳಲ್ಲಿ ಉಳಿವಿನ ಭೀತಿ ಹುಟ್ಟಿಸಿ ಅವುಗಳನ್ನು ತನ್ನ ಅಕ್ಷರ ಆವೃತ್ತಿಯನ್ನಾಗಿ ಮಾಡಿಕೊಂಡು ಅವನತಿಗೊಳಿಸಿದೆ. ಇಂದು ನಮ್ಮ ಎಷ್ಟು ಪತ್ರಿಕೆಗಳಿಗೆ ಮಾಲೀಕೇತರ ಸ್ವತಂತ್ರ ಸಂಪಾದಕರಿದ್ದಾರೆ? ಒಮ್ಮೆ ಎಣಿಸಿ ನೋಡಿ. ಜೊತೆಗೆ ಸಾಮಾಜಿಕ ಮಾಧ್ಯಮಗಳೆಂಬ ತನ್ನ ಮರಿಗಳನ್ನು ಬೇರೆ ಹುಟ್ಟುಹಾಕುತ್ತಾ ತನಗೆ ಸ್ಪರ್ಧೆಯನ್ನು ತಾನೇ ಹುಟ್ಟುಹಾಕಿಕೊಳ್ಳುವ ಅಪಾರ ವೃತ್ತಿ ಜಾಣ್ಮೆಯನ್ನು ಮೆರೆಯುತ್ತಿದೆ!

ಡಿಸೆಂಬರ್, ೨೦೧೩

ಚುನಾವಣೆಯ ವಿವಿಧ ವಿನೋದಾವಳಿ

ಪ್ರಿಯ ಓದುಗರೇ,

ಬಿಜೆಪಿಯ ಪ್ರಧಾನಮಂತ್ರಿ ಅಭ್ಯರ್ಥಿ ನರೇಂದ್ರ ಮೋದಿಯವರು ದೊಡ್ಡ ಸಂಕಷ್ಟಕ್ಕೆ ಸಿಕ್ಕಿಕೊಂಡಂತೆ ಕಾಣುತ್ತಿದೆ. ಬಿಜೆಪಿಯವರು ಯಶಸ್ವಿಯಾಗಿ ಕಟ್ಟತೊಡಗಿದ್ದ ಅವರ ಸ್ವಚ್ಛ, ದಕ್ಷ, ವೀರ 'ಸ್ವಯಂಸೇವಕ' ವ್ಯಕ್ತಿತ್ವದ ಬಿಂಬಕ್ಕೆ ಚ್ಯುತಿಯುನ್ನು ಉಂಟುಮಾಡಬಹುದಾದಂತಹ ಹಳೆಯ ಘಟನೆಯೊಂದು ಈಗ ಹೊರ ಬಿದ್ದಿದೆ. ೨೦೦೯ರಲ್ಲಿ ಗುಜರಾತ್ ಸರ್ಕಾರದ ಗೃಹಮಂತ್ರಿ ಮತ್ತು ಅವರ ಬಲಗೈ ಬಂಟನಾಗಿದ್ದ ಅಮಿತ್ ಷಾ ಯುವತಿಯೊಬ್ಬಳ ಸಕಲ ಚಲನವಲನ, ಮಾತುಕತೆ ಮತ್ತು ದೂರವಾಣಿ ಕರೆಗಳ ಮೇಲೆ ಅಹೋರಾತ್ರಿ ನಿಗಾ ಇಡುವಂತೆ ತಮ್ಮ ನಂಬಿಕಸ್ಥ ಪೋಲೀಸ್ ಅಧಿಕಾರಿಯೊಬ್ಬರಿಗೆ ನಿರಂತರ ಸೂಚನೆಗಳನ್ನು ನೀಡುತ್ತಿದ್ದುದರ ಧ್ವನಿ ಮುದ್ರಿಕೆಯೊಂದನ್ನು ಸಾರ್ವಜನಿಕ ಜಾಗೃತಿ ಸೇವಾ ಸಂಸ್ಥೆಯೊಂದು ಬಿಡುಗಡೆ ಮಾಡಿದೆ. ಷಾ ಅವರ ಸೂಚನೆಗಳಲ್ಲಿನ ಅಪಾಯಕಾರಿ ಅಂಶವೆಂದರೆ, ಅವನ್ನು ತಾವು ತಮ್ಮ 'ಸಾಹೇಬ್'ರ ಪರವಾಗಿ ನೀಡುತ್ತಿರುವುದಾಗಿ ಅವರು ಹೇಳಿರುವುದು.

ಬಿಜೆಪಿ ವಕ್ತಾರರೇನೋ ಆ ಯುವತಿ ಪೋಲೀಸ್ ಅಧಿಕಾರಿಯೊಬ್ಬನಿಂದ ಕಿರುಕುಳದ ಭೀತಿ ಎದುರಿಸುತ್ತಿದ್ದಳೆಂದೂ, ಹಾಗಾಗಿ ಅವಳ ತಂದೆಯ ದೂರಿನನ್ವಯ ಈ ನಿಗಾ ಕ್ರಮ ಕೈಗೊಳ್ಳಲಾಯಿತೆಂದೂ ಸ್ಪಷ್ಟೀಕರಣ ನೀಡಿ ಈ ಘಟನೆಯ ನಿಜತ್ವವನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಆದರೆ ಪೋಲಿಸ್ ಅಧಿಕಾರಿಯ ಕಿರುಕುಳದ ಭೀತಿ ಇದ್ದರೆ, ಆ ಅಧಿಕಾರಿಯ ವಿರುದ್ಧ ದೂರು ಏಕೆ ದಾಖಲಾಗಿಲ್ಲ ಮತ್ತು ಯುವತಿಯ ತಂದೆ ತಾಯಿಗಳ ಚಲನವಲನ, ಮಾತುಕತೆ ಮತ್ತು ದೂರವಾಣಿ ಕರೆಗಳ ಮೇಲೂ ಏಕೆ ನಿಗಾ ಇಡಲಾಗಿತ್ತು? ಮತ್ತೂ ಮುಖ್ಯವಾಗಿ ಷಾ ಅವರ 'ಸಾಹೇಬ್'ರಿಗೇಕೆ ಈ

ವಿಷಯದಲ್ಲಿ ಇಷ್ಟು ವೈಯಕ್ತಿಕ ಆಸಕ್ತಿ? ಎಂಬ ಮುಖ್ಯ ಪ್ರಶ್ನೆಗಳಿಗೆ ಈ ವಕ್ತಾರರು ಈವರೆಗೆ ಸಮರ್ಪಕ ಉತ್ತರ ನೀಡಿಲ್ಲ. ಈ ಪ್ರಕರಣದ ಇನ್ನೊಂದು ಕುತೂಹಲಕಾರಿ ಮತ್ತು ಅಷ್ಟೇ ಭಯಂಕರವಾದ ಅಂಶವೆಂದರೆ, ಗೃಹಮಂತ್ರಿ ತನ್ನ ಸಾಮಾನ್ಯ ಪ್ರಜೆಯೊಬ್ಬರ ಮೇಲೆ ನಿಗಾ ಇಡುವ ಪ್ರಯತ್ನ ಮಾಡುತ್ತಿದ್ದಾಗಲೇ, ಇನ್ನೊಂದೆಡೆಯಿಂದ ಸ್ವತಃ ಅವರ ಮೇಲೆ ನಿಗಾ ಇಡುವ ವ್ಯವಸ್ಥೆಯೂ ಇದೆ ಎಂಬುದು! ಜಗತ್ತಿನ ಅತಿ ದೊಡ್ಡ ಮತ್ತು ಪ್ರಬುದ್ಧವೆಂದು ಹೇಳಿಕೊಳ್ಳಲಾಗುವ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಯಾರ ಖಾಸಗಿ ಬದುಕೂ ಸುರಕ್ಷಿತವಲ್ಲವೆಂದು ಕಾಣುತ್ತದೆ. ಅದೇನೆ ಇರಲಿ, ಮುಂದೆ ಈ ಪ್ರಕರಣ ಯಾವ ಯಾವ ತಿರುವು ತೆಗೆದುಕೊಳ್ಳುವುದೋ ಕಾದು ನೋಡಬೇಕು.

ಆದರೆ ಇದೇ ಸಂದರ್ಭದಲ್ಲಿ, ಈ ಧ್ವನಿ ಮುದ್ರಿಕೆ ಬಯಲಾಗಿರುವುದು, ಪ್ರಜೆಗಳ ಖಾಸಗಿತನದ ಸುರಕ್ಷತೆಯ ಬಗೆಗಿನ ರಾಜಕಾರಣಿಗಳ ಕಳಕಳಿಯಿಂದಲ್ಲ ಎಂಬುದನ್ನೂ ನಾವು ಗಮನಿಸಬೇಕು. ಇದು ಬರಲಿರುವ ಲೋಕಸಭಾ ಚುನಾವಣೆಗಳಿಗಾಗಿ ನಡೆದಿರುವ ಬಿರುಸಿನ ತಯಾರಿಯಲ್ಲಿ ರಾಷ್ಟ್ರದ ಎರಡು ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಗಳು ನಡೆಸಿರುವ ಪರಸ್ಪರ ಕೆಸರೆರಚಾಟದ ಒಂದು ಅಂಕವಷ್ಟೆ. ಈ ಕೆಸರೆರಚಾಟದಲ್ಲಿ, ಆಡಳಿತದ ಅತಿ ದೀರ್ಘ ಅನುಭವ ಹೊಂದಿರುವ ಕಾಂಗ್ರೆಸ್ ಅಪೂರ್ವ ಪರಿಣತಿಯನ್ನೇ ಸಾಧಿಸಿದೆ ಎಂದು ಹೇಳಬೇಕು. ಅದರಲ್ಲೂ ಬರಲಿರುವ ಚುನಾವಣೆಗಳಲ್ಲಿ ಮತ್ತು ಇದಕ್ಕೆ ಪೂರ್ವ ಪೀಠಿಕೆಯಂತೆ ನಡೆದಿರುವ ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳಲ್ಲಿ ಕನಿಷ್ಠ ಮೂರರಲ್ಲಿ ಖಚಿತ ಸೋಲಿನ ಭೀತಿಯಲ್ಲಿರುವ ಈ ಪಕ್ಷ ಹತಾಶೆಯಲ್ಲಿ ಕೈಗೊಳ್ಳುತ್ತಿರುವ ಕುತ್ಸಿತ ಕ್ರಮಗಳನ್ನೇ ನೋಡಿ. ದೆಹಲಿಯಲ್ಲಿ ತನ್ನನ್ನು ಬುಡಮೇಲುಗೊಳಿಸುತ್ತಿರುವ ಆಮ್ ಆದ್ಮಿ ಪಕ್ಷಕ್ಕೆ ವಿದೇಶಗಳಲ್ಲಿರುವ ಭಾರತೀಯ ಪ್ರಜೆಗಳಿಂದ ಬಂದಿರುವ ದೇಣಿಗೆಯ ಬಗ್ಗೆ ವಿಚಾರಣೆಗೆ ಆಜ್ಞೆ ಮಾಡಿದೆ. ಇದನ್ನು, ಆಮ್ ಆದ್ಮಿ ಪಕ್ಷದಿಂದ ಅಷ್ಟೇ ಅಪಾಯ ಎದುರಿಸುತ್ತಿರುವ ಬಿಜೆಪಿ ಕೂಡ ಸಂಭ್ರಮದಿಂದ ಸ್ವಾಗತಿಸಿದೆ. ಆದರೆ ಈ ಎರಡೂ ದೊಡ್ಡ ಪಕ್ಷಗಳ ದೊಡ್ಡ ಗಾತ್ರದ ಚುನಾವಣಾ ನಿಧಿಗಳ ಅತಿ ದೊಡ್ಡ ಭಾಗಗಳ ಮೂಲಗಳ ಬಗ್ಗೆ ಅನೇಕ ಸಾರ್ವಜನಿಕ ದೂರುಗಳು ಬಂದಿದ್ದರೂ ತನಿಖೆ ಅಗತ್ಯವಿಲ್ಲವಂತೆ! ಇನ್ನು ಅಣ್ಣಾ ಹಜಾರೆಯವರ ಇತ್ತೀಚಿನ ಮಾತುಗಳನ್ನು ಗಮನಿಸಿದರೆ ಕಾಂಗ್ರೆಸ್ ಇವರಿಗೂ ಎಲ್ಲೋ 'ಟಿಡಿ' ಹಾಕಿ 'ಸರಿ' ಮಾಡಿಕೊಂಡಿರುವಂತೆ ತೋರುತ್ತಿದೆ. ಇದು ಸಹಜವಾಗಿ ಬಿಜೆಪಿಗೂ ಅಪ್ಯಾಯಮಾನವಾಗಿ ಕಂಡಿದೆ. ಸಮೂಹ ಮಾಧ್ಯಮಗಳ ಮೇಲಾಟದ ಈ ಕಾಲದಲ್ಲಿ ಜನ ಇದೆಲ್ಲವನ್ನೂ ಗಮನಿಸುತ್ತಿರುತ್ತಾರೆ ಎಂಬ ಪರಿವೆಯಾದರೂ ಈ ಪಕ್ಷಗಳಿಗೆ ಬೇಡವೇ?

ಇಲ್ಲಿ ನಮ್ಮ ಸಿದ್ಧರಾಮಯ್ಯನವರನ್ನು ನೋಡಿ. ಎಸ್.ಎಸ್ ಹಿರೇಮಠರ ಸಮಾಜ ಪರಿವರ್ತನಾ ಸಮುದಾಯದ ಲೆಕ್ಕಪತ್ರಗಳಲ್ಲಿ ಜುಜುಬಿ ಎರಡು ಸಾವಿರ ಡಾಲರುಗಳ ಲೆಕ್ಕ ತಪ್ಪಿದೆ (ಹಣದ ದುರುಪಯೋಗ ಅಲ್ಲ) ಎಂದು ಗಣಿ ಉದ್ಯಮಿಯೊಬ್ಬ ಕಳ್ಳನಗೊಂದು ಪಿಳ್ಳೆ ನೆಪ ಎಂಬಂತೆ ನೀಡಿರುವ ದೂರಿನ ಬಗ್ಗೆ ತಕ್ಷಣ ತನಿಖೆಗೆ ಆಜ್ಞೆ

ಮಾಡಿದ್ದಾರೆ. ಇಷ್ಟೇ ರಭಸವಾಗಿ ಗಣಿ ಅಕ್ರಮ, ಕೆಪಿಎಸ್‌ಸಿ ದುರ್ವ್ಯವಹಾರ, ಅಕ್ರಮ ನಿವೇಶನ ಮಂಜೂರಾತಿ, ಸರ್ಕಾರಿ ಜಮೀನು ಕಬಳಿಕೆ ಮುಂತಾದ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳಲ್ಲೂ ನಮ್ಮ ಮುಖ್ಯಮಂತ್ರಿಗಳು ಕ್ರಮ ಕೈಗೊಂಡಿದ್ದರೆ ಅವರು ಈ ಹೊತ್ತಿಗೆ ಜನತೆಯ ಕಣ್ಮಣಿಯಾಗಿ ಕಂಗೊಳಿಸುತ್ತಿದ್ದರು. ಆದರೆ ಇಂದು ಸಿದ್ಧರಾಮಯ್ಯ ತಮ್ಮ ತಪ್ಪು ನಿರ್ಧಾರಗಳು ಮತ್ತು ತಪ್ಪು ಆದ್ಯತೆಗಳಿಂದಾಗಿ ಜನತೆ ತಮ್ಮಲ್ಲಿಟ್ಟಿದ್ದ ಭರವಸೆಯನ್ನು ಭಂಗಗೊಳಿಸಿಕೊಳ್ಳತೊಡಗಿದ್ದಾರೆ. 'ಶಾದಿ ಭಾಗ್ಯ' ಸಾಮಾಜಿಕ ಅವಿವೇಕದ ಕಾರ್ಯಕ್ರಮವಾದರೆ, ಸರ್ಕಾರಿ ಶಾಲೆಗಳಲ್ಲಿನ ಅಹಿಂದ ಮಕ್ಕಳ ಕರ್ನಾಟಕ ದರ್ಶನ ಕಾರ್ಯಕ್ರಮ ಸಾಮಾಜಿಕ ಅಶ್ಲೀಲತೆಯ ಕಾರ್ಯಕ್ರಮವಾಗಿದೆ. ಇನ್ನು ಮೂಢನಂಬಿಕೆ ತಡೆ ಮಸೂದೆಯ ಹಿಂದೆ ತಾತ್ವಿಕ ಪ್ರದರ್ಶನಪ್ರಿಯತೆಯ ಅವಸರವಿದ್ದಂತಿದೆ. ಈ ಮೂರೂ ಈಗ ಸಿದ್ಧರಾಮಯ್ಯನವರ ಮುಖದ ಮೇಲೆ ಸಿಡಿದು ಅವರಿಗೆ ದೊಡ್ಡ ಮುಜುಗರವನ್ನೇ ಉಂಟು ಮಾಡಿದೆ. ಸಿದ್ಧರಾಮಯ್ಯ ತಮ್ಮ ಹಿತದೃಷ್ಟಿಯಿಂದಲೇ ಮೊದಲು ತಮ್ಮ ಆಪ್ತ ರಾಜಕೀಯ ಸಲಹಾಕಾರರ ತಂಡವನ್ನು ಬದಲಿಸಿಕೊಳ್ಳಬೇಕಿದೆ.

ಲೋಹಿಯಾರ ಶಿಷ್ಯರೆಂದು ಹೇಳಿಕೊಳ್ಳುವ ಸಿದ್ಧರಾಮಯ್ಯ ಮೊದಲು ತಿಳಿಯಬೇಕಾದ್ದೇನೆಂದರೆ, ಸಾಮಾಜಿಕ ನ್ಯಾಯವೆಂಬುದು ತಾನಾಗಿ ಒಂದು ನ್ಯಾಯವಲ್ಲ. ಅದನ್ನು ಸಾರ್ವತ್ರಿಕ ನ್ಯಾಯದ ಅವಿಭಾಜ್ಯ ಅಂಗವಾಗಿ ಗ್ರಹಿಸಿದಾಗ ಮಾತ್ರ ಅದು ನ್ಯಾಯವೆನಿಸಿಕೊಳ್ಳುತ್ತದೆ. ಅದು ಮನದಟ್ಟಾಗಲು ಮೊದಲು ಅವರ ಮನಸ್ಸಿನ ಆಳದಲ್ಲಿ ತಾವು ಇಡೀ ರಾಜ್ಯದ ಜನತೆಯ ಮುಖ್ಯಮಂತ್ರಿ ಎಂಬ ಭಾವನೆ ಸ್ಥಾಪಿತವಾಗಬೇಕು. ಅದಾಗಿದ್ದಲ್ಲಿ ಇಂತಹ ಅಗ್ಗದ, ಕ್ಷಣಿಕ ರಾಜಕೀಯ ಲಾಭದ ಸಾಮಾಜಿಕ ಅನ್ಯಾಯದ ಕಾರ್ಯಕ್ರಮಗಳು ಅವರ ರಾಜಕೀಯ ದರ್ಶನದ ಭಾಗವಾಗಿ ಮೂಡಿಬರುತ್ತಿರಲಿಲ್ಲ. ಲೋಹಿಯಾ ತಮ್ಮ ಸಮಾಜವಾದದ ಸಮಾನತೆಯ ತತ್ವವನ್ನು ಇತರ ಸಮಾಜವಾದಿ ದರ್ಶನಗಳಲ್ಲಿನ ಸಮಾನತೆಯ ತತ್ವಕ್ಕಿಂತ ಭಿನ್ನವಾಗಿ ಸಮತೆ ಎಂದು ಅರ್ಥೈಸಿದ್ದರು. ಸಮತೆ ಎಂದರೆ ಒಳಗಿನ ಮತ್ತು ಹೊರಗಿನ ಸಮಾನತೆಗಳೆರಡರ ನಡುವೆ ಸಾಧಿತವಾಗಬೇಕಾದ ಸಮತೋಲನ. ನಮ್ಮ ಮುಖ್ಯಮಂತ್ರಿಗಳು ತಮ್ಮ ಅಧಿಕಾರದ ಅವಧಿಯ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ಅದಕ್ಕೆ ಒಂದು ಸಾಮಾಜಿಕ ಘನತೆ ಒದಗಿಸುವ ಕಡೆ ಗಮನ ಹರಿಸಲಿ. ಅದರಿಂದ ಸರ್ವಜನತೆಯ ವಿಶ್ವಾಸ ದೊರೆತು ಅವರ ಸ್ಥಾನ ಹೆಚ್ಚು ಭದ್ರವಾದೀತು.

ಕನ್ನಡಕ್ಕೆ ಭಾರತ ರತ್ನ!

ಅಂತೂ 'ಕರ್ನಾಟಕ ರತ್ನ' ಸಿ.ಎನ್.ಆರ್. ರಾವ್ ಅವರಿಗೆ ಕೇಂದ್ರ ಸರ್ಕಾರ 'ಭಾರತ ರತ್ನ' ಗೌರವವನ್ನು ದಯಪಾಲಿಸಿದೆ. ನೊಬೆಲ್ ಗೌರವವೊಂದನ್ನು ಬಿಟ್ಟು,

ಅವರ ವಿಜ್ಞಾನ ಕ್ಷೇತ್ರದಲ್ಲಿನ ಎಲ್ಲ ಜಾಗತಿಕ ಪ್ರಶಸ್ತಿ-ಪುರಸ್ಕಾರ-ಗೌರವಗಳಿಗೂ ಭಾಜನರಾಗಿರುವ ಪ್ರೊ. ರಾವ್ ಅವರಿಗೆ ಎಂದೋ ಈ ಗೌರವ ನೀಡಿ ರಾಷ್ಟ್ರ ಕೃತಜ್ಞತೆ ಸಲ್ಲಿಸಬೇಕಿತ್ತು. ಈಗ ಕ್ರಿಕೆಟ್ ತಾರೆ ಸಚಿನ್‌ರ ನಿವೃತ್ತಿ ಸಂದರ್ಭದಲ್ಲಿ ಮಾಧ್ಯಮ ಜಗತ್ತು ತನ್ನ ಮಾರುಕಟ್ಟೆ ಉದ್ದೇಶಗಳಿಗಾಗಿ ಸೃಷ್ಟಿಸಿದ ಜನಪ್ರಿಯತೆಯ ಉಬ್ಬರದ ಒತ್ತಡಕ್ಕೆ ಸಿಕ್ಕಿ ಅವರಿಗೆ 'ಭಾರತ ರತ್ನ' ನೀಡಬೇಕಾಗಿ ಬಂದ ಸಂದರ್ಭದ ತನ್ನ ಪಾಲಿನ ರಾಜಕೀಯ ಲಾಭವನ್ನು ಮರೆಮಾಚಿಕೊಳ್ಳುವ ಪ್ರಯತ್ನವಾಗಷ್ಟೇ ಸರ್ಕಾರ ಪ್ರೊ.ರಾವ್ ಅವರಿಗೆ ಈ ಗೌರವ ನೀಡಿದಂತಿದೆ. ಈ ಸಂದರ್ಭದಲ್ಲಿ ವಿಜ್ಞಾನ ಕ್ಷೇತ್ರವನ್ನು ನಿರ್ಲಕ್ಷಿಸುತ್ತಿರುವ ರಾಜಕಾರಣಿಗಳ ಮೂರ್ಖತನವನ್ನು ಟೀಕಿಸಿರುವ ಮೂಲಕ ಅವರು ಪರೋಕ್ಷವಾಗಿ ಇದನ್ನೇ ಸೂಚಿಸುತ್ತಿರುವಂತಿದೆ.

ಅದೇನೇ ಇರಲಿ, ಪ್ರೊ. ರಾವ್ ಅವರಿಗೆ ತಡವಾಗಿಯಾದರೂ ಈ ಗೌರವ ಸಂದದ್ದು 'ಹೊಸ ಮನುಷ್ಯ'ಕ್ಕೆ ವಿಶೇಷ ಸಂತೋಷ ತಂದಿದೆ. ಕಾರಣ, ನಿಜವಾದ ಅರ್ಥದಲ್ಲಿ ಕನ್ನಡದ ಹೆಮ್ಮೆ. ಕನ್ನಡ ಮಾಧ್ಯಮದಲ್ಲೇ ಶಾಲಾ ಶಿಕ್ಷಣ ಪಡೆದು ಜಗತ್ತಿನ ಅತ್ಯುನ್ನತ ವಿಜ್ಞಾನಿಗಳಲ್ಲೊಬ್ಬರಾಗಿ ಮಾನ್ಯತೆ ಪಡೆದಿರುವ ರಾಯರು ಬಹುಪಾಲು ಜನರಂತೆ ಜಾಗತಿಕ ಇಂಗ್ಲಿಷ್ ಪ್ರತಿಷ್ಠೆಯ ದಂತ ಗೋಪುರ ಸೇರಿಕೊಳ್ಳದೆ ಈಗಲೂ ನಮ್ಮ ಮಕ್ಕಳಿಗೆ ವಿಜ್ಞಾನ ವಿಷಯಗಳೂ ಸೇರಿದಂತೆ ಶಾಲಾ ಶಿಕ್ಷಣವನ್ನಾದರೂ ಕನ್ನಡದಲ್ಲಿ ನೀಡಬೇಕೆಂದು ಆಗ್ರಹಿಸುತ್ತಿದ್ದಾರೆ. ಅಷ್ಟೇ ಅಲ್ಲದೆ, ಸ್ವತಃ ತಾವೇ ರಾಜ್ಯದ ಹಲವೆಡೆ ವಿಜ್ಞಾನವನ್ನು ಕನ್ನಡದಲ್ಲಿ ಬೋಧಿಸುವ ಪ್ರಾತ್ಯಕ್ಷಿಕೆಗಳನ್ನೂ ನಡೆಸುತ್ತಿದ್ದಾರೆ. ಆದರೆ ನಮ್ಮ ತಂದೆ ತಾಯಂದಿರು ಯಾರ ಮತ್ತು ಯಾವ ವಿವೇಕದ ಮಾತುಗಳಿಗೂ ಕಿವಿಗೊಡದೆ ನಮ್ಮ ಮಕ್ಕಳನ್ನು ತಮ್ಮ ಹುಸಿ ಲೌಕಿಕ ಆಸೆ-ಪ್ರತಿಷ್ಠೆಗಳಿಗಾಗಿ ಇಂಗ್ಲಿಷ್ ಮಾಧ್ಯಮಕ್ಕೆ ತಳ್ಳಿ ಮಕ್ಕಳ ನಿಜ ಜ್ಞಾನ ಸಂಪಾದನೆಗೆ ಚ್ಯುತಿ ತರುತ್ತಿದ್ದಾರೆ. ಆ ಮೂಲಕ ಈ ದೇಶವನ್ನು ಕುರುಡು ತಂತ್ರಜ್ಞಾನದ ನರಕವನ್ನಾಗಿಸಲು ಕಾರಣರಾಗುತ್ತಿದ್ದಾರೆ. ಇವರೆಲ್ಲ ಈಗಲಾದರೂ ಎಚ್ಚೆತ್ತುಕೊಳ್ಳುವುದಾದರೆ ಅದೇ ಈ ಮಹಾನ್ ಕನ್ನಡಿಗನಿಗೆ ಕನ್ನಡಿಗರಾಗಿ ನಾವು ಸಲ್ಲಿಸುವ ನಿಜವಾದ ಗೌರವವಾಗುತ್ತದೆ.

ಅಂದ ಮಾತ್ರಕ್ಕೆ ತೆಂಡೂಲ್ಕರ್ ಪ್ರತಿಭಾವಂತ ಆಟಗಾರನಲ್ಲ ಎಂದಲ್ಲ. ಅವರ ಆಟದ ದಾಖಲೆಗಳೇ ಅವರ ಅನುಪಮ ಪ್ರತಿಭೆಯನ್ನು ಹೇಳುತ್ತವೆ. ಆದರೆ ಕ್ರಿಕೆಟ್ಟಿಗಿಂತ ಹೆಚ್ಚು ಜಾಗತಿಕ ಮಾನ್ಯತೆ ಪಡೆದ ಆಟಗಳಲ್ಲಿ ಇಷ್ಟೇ ಪ್ರತಿಭೆ-ಸಾಧನೆ ಪ್ರದರ್ಶಿಸಿರುವ ಆಟಗಾರರನ್ನು ನಿರ್ಲಕ್ಷಿಸುತ್ತಾ ಬಂದಿರುವ ನಮ್ಮ ಸರ್ಕಾರದ ನೀತಿ ಇಲ್ಲಿ ಪ್ರಶ್ನಾರ್ಹವಾಗಿದೆ. ಮೊನ್ನೆ ಜಾಗತಿಕ ಕ್ರಿಕೆಟ್‌ನ ಇನ್ನೊಂದು ದಂತಕಥೆಯೆನಿಸಿರುವ ವಿವಿಯನ್ ರಿಚರ್ಡ್ಸ್ ವರ್ಣಿಸಿದ ಹಾಗೆ, ತೆಂಡೂಲ್ಕರ್ ಪರಿಪೂರ್ಣ 'ವೃತ್ತಿಪರ' ಆಟಗಾರ. ಅಂದರೆ ಸಚಿನ್‌ಗೆ ಕ್ರಿಕೆಟ್ ಒಂದು ವೃತ್ತಿ. ಅದರಲ್ಲಿ ಆತ ಪರಿಪೂರ್ಣತೆಯನ್ನು ಸಾಧಿಸಿದ್ದಾನೆ. ಇದರ ಬಗ್ಗೆ ಯಾರಿಗೂ ತಕರಾರಿರಲಾರದು.

ಸೆಕ್ಯುಲರಿಸಂ ಎಂದರೇನು?: ಆಶೀಶ್ ನಂದಿಯವರ ತಾತ್ವಿಕ ಹುಡುಕಾಟ

ಆಧುನಿಕ ಪ್ರಭುತ್ವ ಸ್ಥಾಪನೆಯ ಹುರುಪಿನಲ್ಲಿ ನಾವು ಪಶ್ಚಿಮದಿಂದ ಆಮದು ಮಾಡಿಕೊಂಡ ಹಲವು ಪರಿಕಲ್ಪನೆಗಳಲ್ಲಿ 'ಸೆಕ್ಯುಲರಿಸಂ' ಕೂಡ ಒಂದು. ಬಹು ಧರ್ಮ ಮತ್ತು ಬಹು ಸಂಸ್ಕೃತಿಗಳಿರುವ ರಾಷ್ಟ್ರವೊಂದು ಗಣರಾಜ್ಯವಾಗಿ ಬೆಳೆಯಲು ಈ 'ಸೆಕ್ಯುಲರಿಸಂ' ಅನಿವಾರ್ಯ ಎಂಬುದು ಒಂದು ಆಧುನಿಕ ನಂಬಿಕೆ. ಹಾಗಾಗಿ ಇದನ್ನು ಆಧುನಿಕ ಭಾರತದ ಸಾರ್ವಜನಿಕ ಬದುಕಿನಲ್ಲಿ, ನಂತರ ನಮ್ಮ ಸಂವಿಧಾನದಲ್ಲೂ ಒಂದು ಮೌಲ್ಯವಾಗಿ, ತತ್ವವಾಗಿ ಬಿತ್ತಲಾಯಿತು. ಆದರೆ ವಿಕಾಸಶೀಲ ಗಣರಾಜ್ಯವೊಂದರಲ್ಲಿ ಬಹು ಧರ್ಮ ಮತ್ತು ಬಹು ಸಂಸ್ಕೃತಿಗಳ ವಿವಿಧ ಕ್ರಿಯಾಶೀಲ ರೂಪಗಳು ಪ್ರಕಟವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಈ ಪರಿಕಲ್ಪನೆ ಹಲವು ಪ್ರಶ್ನೆಗಳನ್ನು ಎದುರಿಸಬೇಕಾಗಿ ಬಂದಿದೆ. ಪ್ರಾಥಮಿಕವಾಗಿ, ಈ 'ಸೆಕ್ಯುಲರಿಸಂ' ಎಂದರೇನು? ಎಂಬ ಪ್ರಶ್ನೆಗೆ ಈವರೆಗೂ ಯಾರೂ ಖಚಿತ ಉತ್ತರ ಕೊಟ್ಟಿಲ್ಲ. ಹಲವು ಪರಸ್ಪರ ಸಮ್ಮತವೆನಿಸದ ವ್ಯಾಖ್ಯಾನಗಳನ್ನು–ಲೌಕಿಕ ಆಡಳಿತ, ಸರ್ವ ಧರ್ಮ ಸಮಭಾವ, ಧರ್ಮ ನಿರಪೇಕ್ಷತೆ ಇತ್ಯಾದಿ–ನೀಡಲಾಗಿದೆಯಷ್ಟೆ. ಹೀಗಾಗಿ ಈ ತತ್ವದ ಬಗ್ಗೆ ನಮ್ಮ ಬೌದ್ಧಿಕ ಲೋಕದಲ್ಲಿ ಒಂದು ಹೊಸ ಚರ್ಚೆ ಆರಂಭವಾಗಿದೆ.

ಮರುಭೂಮಿ ಧರ್ಮಗಳಿಗೆ ಹೊರತಾದ ಧರ್ಮಗಳ ಪ್ರಾಧಾನ್ಯತೆಯಿರುವ ನಿರ್ದಿಷ್ಟವಾಗಿ, ಭಾರತದಂತಹ ದೇಶದಲ್ಲಿ, ಸಾರ್ವತ್ರಿಕವಾಗಿ ದಕ್ಷಿಣ ಏಷಿಯಾದ ದೇಶಗಳಲ್ಲಿ ಸೆಕ್ಯುಲರಿಸಂಅನ್ನು ಹೇಗೆ ಅರ್ಥೈಸಿ ಎದುರುಗೊಳ್ಳುವುದು? ಎಂಬ ಬಗ್ಗೆ ಈಗಾಗಲೇ ಹಲವು ವಾದಗಳನ್ನು ಮಂಡಿಸಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಎದ್ದು ಕಾಣುವುದು ಖ್ಯಾತ ಚಿಂತಕ ಆಶೀಶ್ ನಂದಿ ಅವರದ್ದು. ಇವರ ವಾದದ ಸಾರಾಂಶ ರೂಪವೊಂದನ್ನು ಇಲ್ಲಿ ನೀಡುತ್ತಿದ್ದೇವೆ. ಈ ಮೂಲಕ ನಮ್ಮ ಕನ್ನಡ ಬೌದ್ಧಿಕ ಲೋಕದಿಂದ ಒಂದು ಮುಖ್ಯ ಚರ್ಚೆಯನ್ನು 'ಹೊಸ ಮನುಷ್ಯ' ಆಹ್ವಾನಿಸುತ್ತಿದೆ.

ಈ ಲೇಖನವನ್ನು ನಮ್ಮ ಕೋರಿಕೆಯ ಮೇರೆಗೆ ಅನುವಾದಿಸಿ ನೀಡಿರುವ ಗೆಳೆಯ ಡಾ. ಎಸ್. ಸಿರಾಜ್ ಅಹಮದ್, ಈ ಲೇಖನವನ್ನು ಅನುವಾದ ಮಾಡಿದಾಕ್ಷಣ ಈ ವಾದದ ಎಲ್ಲ ಅಂಶಗಳನ್ನು ತಾನು ಒಪ್ಪುತ್ತೇನೆಂದಲ್ಲ ಎಂದು ನಮಗೆ ಮುನ್ನೆಚ್ಚರಿಕೆ ನೀಡಿದ್ದಾರೆ! ಈ ಗೆಳೆಯರೂ ಸೇರಿದಂತೆ ನಮ್ಮ ಆಸಕ್ತ ಓದುಗರು ಈ ಲೇಖನಕ್ಕೆ ವಿಸ್ತೃತವಾಗಿ ಪ್ರತಿಕ್ರಿಯಿಸಬೇಕೆಂದು ಕೋರುವೆ. ನಮ್ಮ ಈ ಪ್ರಯತ್ನ ಯಶಸ್ವಿಯಾದರೆ, ಮುಂದಿನ ಸಂಚಿಕೆ ಈ ಚರ್ಚೆಗೇ ಮೀಸಲಾಗಿರುವುದು.–ಸಂ.

ಸೆಕ್ಯುಲರಿಸಂ ಎಂದರೆ ಕೋಮುಸೌಹಾರ್ದತೆಯಲ್ಲ; ಅದು ಸೌಹಾರ್ದತೆಯನ್ನು ಸ್ಥಾಪಿಸಲು ಬೇಕಾದ ಒಂದು ದಾರಿ. ಒಂದು ಸಿದ್ಧಾಂತವಾಗಿ ಅದಕ್ಕೆ ೩೦೦ ವರ್ಷಗಳಿಗಿಂತ ದೊಡ್ಡದಾದ ಇತಿಹಾಸವಿಲ್ಲ. ಹಿಂದೂ ರಾಷ್ಟ್ರವಾದ, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಜ್ಯೂಗಳ ಮೂಲಭೂತವಾದಗಳನ್ನು–ಭಾರತ ಮತ್ತು ಪ್ರಪಂಚದಾದ್ಯಂತ–ಹತ್ತಿಕ್ಕುವಲ್ಲಿ ಸೆಕ್ಯುಲರಿಸಂ ನಿರಂತರವಾಗಿ ಸೋಲುತ್ತಿದ್ದರೂ ಅದನ್ನು ಬಿಟ್ಟು ಇನ್ನೊಂದು ಪರ್ಯಾಯವನ್ನು ಯೋಚಿಸುವ ಧೈರ್ಯ ಸಹ ಯಾರಲ್ಲಿಯೂ ಕಾಣುತ್ತಿಲ್ಲ.

ಇತ್ತೀಚಿನ ದಿನಗಳಲ್ಲಿ ನನ್ನ ಗೆಳೆಯರಾದ ಕುಲದೀಪ್ ನಯ್ಯರ್ ಅವರು ನಾನು ಸೆಕ್ಯುಲರಿಸಂ ಅನ್ನು ನಿರಾಕರಿಸುತ್ತಿರುವ ಬಗ್ಗೆ ಮತ್ತು ನನಗೆ ದಕ್ಷಿಣ ಏಶಿಯಾದ ಬಹುಸಂಸ್ಕೃತಿಗಳ ಬಗ್ಗೆ ಇರುವ ನಂಬಿಕೆ ಕಳೆದು ಹೋಗುತ್ತಿರುವ ಬಗ್ಗೆ ವಿಷಾದ ಸೂಚಿಸಿದ್ದಾರೆ. ನಾನು ಮತ್ತು ನಯ್ಯರ್ ಇಬ್ಬರೂ ಸೆಕ್ಯುಲರಿಸಂನ ಹಲವು ಹೋರಾಟಗಳಲ್ಲಿ ಭಾಗವಹಿಸಿದ್ದೇವೆ. ಆದರೆ ಅವರಿಗೆ ನನ್ನನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಸೆಕ್ಯುಲರಿಸಂ ಕುರಿತ ನನ್ನ ಟೀಕೆಯು ಪರಂಪರೆಯ ಗಾಂಧಿವಾದಿ ವ್ಯಾಖ್ಯಾನದ ಪ್ರಬಲ ಸಮರ್ಥನೆ ಮತ್ತು ದಕ್ಷಿಣ ಏಶಿಯಾದ ದೇಶಗಳ ಪ್ರಜಾಪ್ರಭುತ್ವವಾದಿ ರಾಜಕಾರಣದ ಅಗತ್ಯಗಳನ್ನು ಪೂರೈಸಬಲ್ಲಂತಹ ಸೆಕ್ಯುಲರಿಸಮೋತ್ತರ ರಾಜಕೀಯ ರೂಪಗಳ ಹುಡುಕಾಟವೇ ಆಗಿದೆ.

ಯೂರೋಪಿನಲ್ಲಿ ಸೆಕ್ಯುಲರಿಸಂ ಹುಟ್ಟಿದ್ದು ಧಾರ್ಮಿಕ ಕಲಹಗಳು, ಯುದ್ಧ, ಜನಾಂಗೀಯ ಹತ್ಯೆಗಳನ್ನು ತಡೆಯುವಲ್ಲಿ ಶಾಂತಿ–ಸಹಬಾಳ್ವೆಯ ಎಲ್ಲ ಪ್ರಯತ್ನಗಳು ಸೋತು ಅಸಹಾಯಕವಾದಾಗ. ಇಂತಹ ಪರಿಸ್ಥಿತಿ ಭಾರತದಲ್ಲಿ ಇರಲಿ, ಇಡೀ ದಕ್ಷಿಣ ಏಶಿಯಾದಲ್ಲಿ ಉಂಟಾಗಿರಲಿಲ್ಲ. ಒಟ್ಟಾಗಿ ಹೇಳುವುದಾದರೆ, ಭಾರತದಲ್ಲಿ ನಡೆದ ಎಲ್ಲ ದೊಡ್ಡ ಕೋಮುಗಲಭೆಗಳು ಪಟ್ಟಣಗಳಲ್ಲಿ ಮಾತ್ರ ಸಂಭವಿಸಿದ್ದವು. ಹಳ್ಳಿಗಳಲ್ಲಿ ನಡೆದ ಗಲಭೆಗಳು ಮೊದಲು ಪಟ್ಟಣಗಳಲ್ಲಿ ಹುಟ್ಟಿ ಬೇರೆಡೆಗೆ ವ್ಯಾಪಿಸಿದವು. ಆದ್ದರಿಂದಲೇ, ಕಳೆದ ಐವತ್ತು ವರ್ಷಗಳಲ್ಲಿ ದೇಶದ ಶೇಕಡಾ ಎಪ್ಪತ್ತೈದು ಭಾಗ ಜನ ವಾಸಿಸುವ ಹಳ್ಳಿಗಳಲ್ಲಿ ಕೇವಲ ಶೇಕಡಾ ನಾಲ್ಕರಷ್ಟು ಜನ ಕೋಮುಗಲಭೆಗಳಲ್ಲಿ ಬಲಿಯಾಗಿದ್ದರೆ; ಕೇವಲ ಇಪ್ಪತ್ತೈದು ಶೇಕಡಾ ಭಾಗದ ಜನ ವಾಸಿಸುವ ಪಟ್ಟಣಗಳಲ್ಲಿ ಶೇಕಡಾ ತೊಂಭತ್ತಾರರಷ್ಟು ಜನ ಕೋಮುಗಲಭೆಗಳಿಗೆ ಬಲಿಯಾಗಿದ್ದಾರೆ. ಇಂತಹ ಹಳ್ಳಿಗಳಿಗೆ ಹೋಗಿ ಸೆಕ್ಯುಲರಿಸಂನ ಪಾಠ ಹೇಳುವ ದುರಹಂಕಾರದಲ್ಲಿ ನನಗಂತೂ ಭಾಗಿಯಾಗಲು ಇಷ್ಟವಿಲ್ಲ.

ಹಳ್ಳಿಗಳಲ್ಲಿ ವಾಸಿಸುವ ಇಂತಹ ಸಾಮಾನ್ಯ ಜನರ ಸಹಬಾಳ್ವೆಯ ಜೀವನ ಶೈಲಿಯಲ್ಲಿ ಪ್ರಗತಿಪರ ಮನೋಭಾವದ ಆಧುನಿಕ ಸೆಕ್ಯುಲರ್ ಭಾರತೀಯರಿಗೆ ವಿಚಿತ್ರವಾಗಿ ಕಾಣುವ ಧಾರ್ಮಿಕ ನಂಬಿಕೆಗಳು, ಮೂಢನಂಬಿಕೆಗಳು, ಆಚಾರಗಳು ಎಲ್ಲವೂ ಸೇರಿಕೊಂಡಿವೆ. ಆದರೆ ಆಧುನಿಕ ಭಾರತಕ್ಕೆ ಇವತ್ತಿನವರೆಗೂ ಈಗಾಗಲೇ ಸ್ವಲ್ಪ ಮಸುಕಾದಂತೆ ತೋರುವ ಜವಾಹರಲಾಲ್ ನೆಹರೂರನ್ನು ಹೊರತುಪಡಿಸಿ ಸೆಕ್ಯುಲರಿಸಂ ಅನ್ನು ಎತ್ತಿಹಿಡಿಯುವ ಇನ್ನೊಬ್ಬ ನಾಯಕನನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ. ಸೆಕ್ಯುಲರಿಸ್ಟರು ಅಶೋಕ, ಅಕ್ಬರ್, ಕಬೀರ್, ಗಾಂಧಿಯವರ ಹೆಸರುಗಳನ್ನು ಯಾಂತ್ರಿಕವಾಗಿ ಜಪಿಸುತ್ತಿದ್ದರೆ, ದಕ್ಷಿಣ ಏಶಿಯಾದ ಸಾಮಾನ್ಯ ಜನ ಸೆಕ್ಯುಲರಿಸಂ ಎಂದರೇನು ಎಂದು ಗೊತ್ತಿಲ್ಲದೆಯೂ ಈ ಹೆಸರುಗಳನ್ನು ನೆನಪಿಸಿಕೊಳ್ಳಬಲ್ಲರು. ಭವಿಷ್ಯದ ದಿಕ್ಕು ತೋರುವ ಜನನಾಯಕರು, ಪ್ರಪಂಚಕ್ಕೆ ಪಾಠಹೇಳುವ ವಿದ್ವಾಂಸರು, ಚಿತ್ರವಿಚಿತ್ರ ಸಿದ್ಧಾಂತಗಳನ್ನು ಮಾರುವ ಪಂಡಿತರು/ಪತ್ರಕರ್ತರುಗಳೆಲ್ಲ ಸೇರಿ, ಈ ಜನರಿಗೆ ಇನ್ನೊಬ್ಬರ ಧರ್ಮ–ನಂಬಿಕೆಗಳನ್ನು

ಗೌರವಿಸುವುದನ್ನು–ಕೂಡಿಬಾಳುವ ಜೀವನಕ್ರಮವನ್ನು ಕಲಿಸುವ ಅಗತ್ಯವಿಲ್ಲ. ಬಹಳ 'ಸಾಮಾನ್ಯ'ರಾಗಿ ಬದುಕುತ್ತಿರುವ ಈ ಜನಗಳ ನಂಬಿಕೆ–ಜೀವನ ಶೈಲಿಗಳು ಈ ಸಮಾಜವನ್ನು ಇಷ್ಟು ಕಾಲ ಹೇಗೆ ಆರೋಗ್ಯಕರವಾಗಿ ಇಟ್ಟಿದ್ದವು ಎಂಬುದನ್ನು ಅರಿಯುವುದೇ ಈ ಹೊತ್ತಿನ ಜರೂರಾಗಿದೆ.

ನಾವು ಒಪ್ಪಲಿ ಬಿಡಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನ ತಮ್ಮ ಮೌಲ್ಯಗಳನ್ನು ರಾಜಕೀಯದೊಂದಿಗೆ ಬೆರೆಸಿಬಿಡುತ್ತಾರೆ. ಇಂಗ್ಲಿಷ್‌ನ ಗಂಧಗಾಳಿ ತಿಳಿಯದ ಜನರ ಮೇಲೆ ಅವರಿಗೆ ಗೊತ್ತಾಗದ ಸೈದ್ಧಾಂತಿಕ ಪರಿಕಲ್ಪನೆಗಳನ್ನು ಹೇರುವುದು ಎಷ್ಟು ಸರಿ? 'ಧರ್ಮ ನಿರಪೇಕ್ಷತೆ'ಯೆನ್ನುವ ಪದ ನೀತಿಗೆ ಅತೀತ (ನೀತ್ಯಾತೀತತೆ) ಎನ್ನುವ ಅರ್ಥವನ್ನು ಹೊಂದಿದೆ. ಹೀಗಿರುವಾಗ ಸಾವಿರಾರು ವರ್ಷಗಳಿಂದ ಇದೇ ತತ್ವವನ್ನು ಬದುಕಿ ತೋರಿಸಿರುವ ಜನಗಳ ಜೀವನಕ್ರಮದಿಂದಲೇ ಇಂಥದೊಂದು ಸಿದ್ಧಾಂತವನ್ನು ರೂಪಿಸಲು ಸಾಧ್ಯವಿಲ್ಲವೆ? ಸೆಕ್ಯುಲರಿಸಂ ಎಂದರೆ ದಕ್ಷಿಣ ಏಶಿಯಾದ ಸಮಾಜಗಳ ಪಾರಂಪರಿಕ ಸಹಬಾಳ್ವೆ ಎನ್ನುವುದಾದರೆ, ನಮ್ಮ ಸ್ಥಳೀಯ ಸಮುದಾಯಗಳ ಇಂತಹ ಸಹಬಾಳ್ವೆಯನ್ನು ಸೂಚಿಸಲು ಬೇರೊಂದು ಸಂಸ್ಕೃತಿಯಿಂದ ಇಂಥ ಮೌಲ್ಯ/ಪರಿಕಲ್ಪನೆಗಳನ್ನು ಯಾಕೆ ಕಡ ತರಬೇಕು? ಅದರಲ್ಲೂ ಧರ್ಮ, ಜನಾಂಗ, ಸಂಸ್ಕೃತಿ, ಸಮುದಾಯಗಳ ನಡುವೆ ಸಹಬಾಳ್ವೆಯನ್ನು ಸಾಧಿಸುವಲ್ಲಿ ದೊಡ್ಡದೇನನ್ನೂ ಸಾಧಿಸದೇ ಇರುವ ದೇಶಗಳಿಂದ ಇಂಥ ಮೌಲ್ಯಗಳನ್ನು ಆಮದು ಮಾಡಿಕೊಳ್ಳುವ ಅಗತ್ಯವಾದರೂ ಏನು? ಉದಾಹರಣೆಗೆ, ನಿಜವಾದ ಅರ್ಥದಲ್ಲಿ ಕಳೆದ ಒಂದು ಸಾವಿರ ವರ್ಷಗಳಿಂದ ಬಹುಸಂಸ್ಕೃತಿಗಳ ಸಹಬಾಳ್ವೆಗೆ ಹೆಸರಾಗಿರುವ ಮಧ್ಯಯುಗದ ಇಸ್ಲಾಮಿಕ್ ಸ್ಪೇನ್‌ನ 'ದೇಶಕಾಲೀಯತೆ'ಯ ಪರಿಕಲ್ಪನೆಯನ್ನು ಯಾಕೆ ಬಳಸಬಾರದು? ಹಾಗಿದ್ದರೂ, ಇಂಥ ಪ್ರಶ್ನೆಗಳನ್ನು ಎತ್ತುವುದರಲ್ಲಿ ಹೆಚ್ಚಿನ ಅರ್ಥವಿಲ್ಲ ಎಂಬುದು ನನಗೆ ಗೊತ್ತಿದೆ. ಯಜಮಾನಿಕೆ, ವಸಾಹತುಶಾಹಿ ಸಂಸ್ಕೃತಿಯನ್ನ ಪೋಷಿಸುವ ಇಂಡಿಯಾದ ಬೌದ್ಧಿಕ ಕಾರ್ಖಾನೆಗಳಲ್ಲಿ ಇಂಥ ವಿಚಾರಗಳನ್ನು ಬೆಳೆಸುವುದು ಸಾಧ್ಯವಿಲ್ಲ ಎಂದು ನನಗೆ ಗೊತ್ತಿದೆ. ಇಲ್ಲದಿದ್ದರೆ, ಇಲ್ಲಿನ ಎಡಪಂಥೀಯರು ಬಹಳ ಬಲವಾಗಿ ಸೆಕ್ಯುಲರಿಸಂಗೆ ಹೊರತಾಗಿರುವ ಧಾರ್ಮಿಕತೆ–ವಿಮೋಚನೆಯ ತತ್ವವನ್ನು ಪಾಲಿಸುವ ಸಾಂಡಿನಿಸ್ಟರಿಂದ ಒಂದೆರಡಾದರೂ ಪಾಠಗಳನ್ನು ಕಲಿಯುವುದು ಸಾಧ್ಯವಿತ್ತು. ಸೆಕ್ಯುಲರಿಸಂನ ಕಾರಣಕ್ಕಾಗಿ, ಲೆನಿನ್‌ನ ಕಾಲದಲ್ಲಿ ೬.೨ ಕೋಟಿ ಜನರ ಹತ್ಯೆಗೆ ಕಾರಣವಾದ ಸಂಸ್ಕೃತಿಗಳ ಉದಾಹರಣೆಯನ್ನು ಭಾರತ ಅನುಸರಿಸಬೇಕು ಎಂದು ಹೇಳುವುದನ್ನು ಬೌದ್ಧಿಕವಾಗಿ ಎಂದೋ ಸಮಾಧಿಯಾಗಿರುವ ಎಡಪಂಥೀಯರು ಬಿಡಬೇಕು.

ನಾನು ಆಧುನಿಕ ಭಾರತದ ಮೂಸೆಯಲ್ಲಿ ಹುಟ್ಟಿದವನು. ಧಾರ್ಮಿಕತೆಯಲ್ಲಿ ನನಗೇನೂ ನಂಬಿಕೆಯಿಲ್ಲ. ಮಹಾನ್ ಆಧುನಿಕರೂ, ನಗರವಾಸಿಗಳೂ, ಪಾಶ್ಚಿಮಾತ್ಯ ಶಿಕ್ಷಣ ಪಡೆದವರೂ ಆಗಿರುವ ಜನಗಳಿಗೆ ಬದಲಾಗಿ, ಯಾವ ತತ್ವಗಳನ್ನೂ ಸಹ ಘೋಷಿಸುವ

ಗೋಜಿಗೆ ಹೋಗದೆ ತಮ್ಮ ಜೀವನಶೈಲಿಯ ಮೂಲಕವೇ ಸೌಹಾರ್ದತೆಯ ಪಾಠವನ್ನು ಬದುಕಿನಲ್ಲಿ ಅಳವಡಿಸಿಕೊಂಡಿರುವ ಜನರನ್ನು ಗೌರವಿಸುವುದನ್ನು ಕಲಿಯಲು ನನಗೆ ಬಹಳ ದಿನಗಳು ಬೇಕಾದವು. ಇದರಿಂದ ನಾನೇನೂ ಧರ್ಮಪರಿಪಾಲಕನಾಗಿ ಬದಲಾಗಿಲ್ಲ. ಆದರೆ ಇದರ ಪರಿಣಾಮವಾಗಿ ನಾನು ಇದುವರೆಗೆ ೨೦ವರ್ಷಗಳಲ್ಲಿ ಬರೆದ ಕೃತಿಗಳಲ್ಲಿ ಪ್ರತಿಪಾದಿಸಿದ ಸಿದ್ಧಾಂತಗಳನ್ನು ಮರುವಿಮರ್ಶೆಗೆ ಒಡ್ಡುವ ಅನಿವಾರ್ಯತೆ ಒದಗಿಬಂತು. ಇಂಥ ಹೊತ್ತಿನಲ್ಲಿ, ಯಾರು ಧರ್ಮಕ್ಕೂ ರಾಜಕಾರಣಕ್ಕೂ ಸಂಬಂಧವಿಲ್ಲವೆನ್ನುತ್ತಾರೋ ಅವರಿಗೆ ಧರ್ಮವೂ ಗೊತ್ತಿಲ್ಲ, ರಾಜಕೀಯವೂ ಗೊತ್ತಿಲ್ಲ ಎನ್ನುವ ಗಾಂಧಿಯವರ ಮಾತು ನೆನಪಾಗುತ್ತದೆ. ನನ್ನ ಮಾತುಗಳು ಎಷ್ಟು ಅರ್ಥಪೂರ್ಣವೋ, ಎಷ್ಟು ಅರ್ಥಹೀನವೋ ಗೊತ್ತಿಲ್ಲ. ದಕ್ಷಿಣ ಏಶಿಯಾದಲ್ಲಿ ಬದುಕುತ್ತಿರುವ ಮುಂದಿನ ಪೀಳಿಗೆಯ ಜನಾಂಗವೇ ಅದರ ವಿವೇಚನೆಯನ್ನು ಮಾಡಲಿ ಎಂದು ಆಶಿಸುವೆ.

(ಕನ್ನಡಕ್ಕೆ: **ಡಾ.ಎಸ್.ಸಿರಾಜ್ ಅಹಮದ್**)

ಜನತಾ ರಾಜಕಾರಣದ ಮಹಾ ಪ್ರಯೋಗ

ಪ್ರಿಯ ಓದುಗರೇ,

ಕಳೆದ ತಿಂಗಳು ನಾಲ್ಕು ರಾಜ್ಯಗಳ ವಿಧಾನ ಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಕಣ್ಣಿಗೆ ಹೊಡೆಯುವ ಮತ್ತು ದೇಶದ ಸಾಮಾನ್ಯ ಪ್ರಜೆಗಳಲ್ಲಿ ಹೊಸ ಆಸೆ ಹುಟ್ಟಿಸಿರುವ ಫಲಿತಾಂಶವೆಂದರೆ, ದೆಹಲಿ ವಿಧಾನಸಭೆಯದ್ದು. ಅಲ್ಲಿ ಎಲ್ಲರ ನಿರೀಕ್ಷೆಗಳನ್ನೂ ಮೀರಿ, ಆಂ ಆದ್ಮಿ ಪಕ್ಷ ಕಾಂಗ್ರೆಸ್ ಮತ್ತು ಬಿಜೆಪಿಯೆಂಬ ಎರಡು ಬಲಿಷ್ಠ ರಾಷ್ಟ್ರೀಯ ಪಕ್ಷಗಳಿಗೂ ಗಂಭೀರ ಸವಾಲೆಸೆದು ೭೦ ಸ್ಥಾನಗಳ ವಿಧಾನಸಭೆಯಲ್ಲಿ ೨೮ ಸ್ಥಾನಗಳನ್ನು ಪಡೆದು ಎರಡನೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಈಗ ಅದು ಅಲ್ಲಿ ಅಧಿಕಾರದ ಚುಕ್ಕಾಣಿ ಕೂಡ ಹಿಡಿದಿದೆ.

ದೇಶದ ಚುನಾವಣಾ ರಾಜಕಾರಣದ ಇತಿಹಾಸದಲ್ಲೇ ಇದೊಂದು ಕ್ರಾಂತಿ ಎಂದೇ ಹೇಳಬೇಕು. ಏಕೆಂದರೆ ಈ ಪಕ್ಷ ಹುಟ್ಟು ಪಡೆದು ಇನ್ನೂ ಒಂದು ವರ್ಷ ಕೂಡಾ ಆಗಿಲ್ಲ. ಹಾಗೇ ಇದು ಜನತೆಯನ್ನಷ್ಟೇ ನಂಬಿ, ಜನತೆಯ ಹಣವನ್ನಷ್ಟೇ ಆಧರಿಸಿ ಜನತೆಯ ನಡುವೆ, ಜನತೆಯಿಂದಲೇ ಬೆಳೆದ ಒಂದು ಪಕ್ಷ. ಇದರ ಅಭ್ಯರ್ಥಿಗಳೆಂದರೆ, ಬೀದಿ ಬದಿಯ ಮಿಠಾಯಿ ವ್ಯಾಪಾರಿ, ಮೊಹಲ್ಲಾದ ಪೈಲ್ವಾನ್, ಸ್ಪರ್ಧಾತ್ಮಕ ಪರೀಕ್ಷೆ ಕಟ್ಟಲು ಯಾವುದೋ ರಾಜ್ಯದಿಂದ ದೆಹಲಿಗೆ ಬಂದಿದ್ದ ಯುವಕ ಇತ್ಯಾದಿ. ಇವರ ನಾಯಕ ಕೇಜ್ರಿವಾಲ್, ಸತತ ಮೂರು ಬಾರಿ ಮುಖ್ಯಮಂತ್ರಿಯಾಗಿ ಹೆಸರು ಮಾಡಿದ್ದ ಶೀಲಾ ದೀಕ್ಷಿತರನ್ನು ಅವರದೇ ಪ್ರತಿಷ್ಠಿತ ನವದೆಹಲಿ ಕ್ಷೇತ್ರದಲ್ಲಿ ೨೫ ಸಾವಿರ ಮತಗಳ ಭಾರಿ ಅಂತರದಿಂದ ಸೋಲಿಸಿ ಈಗ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅವರು ತಾವು, ತಮ್ಮ ಮಂತ್ರಿ ಮಂಡಲ ಮತ್ತು ಶಾಸಕಾಂಗ ಪಕ್ಷವು ಯಾವುದೇ ವಿಶೇಷ ಸರ್ಕಾರಿ ಸವಲತ್ತುಗಳಿಲ್ಲದೇ ಕಾರ್ಯ ನಿರ್ವಹಿಸುವುದಾಗಿ ಜನತೆಗೆ ವಚನವಿತ್ತಿದ್ದಾರೆ. ಹಾಗೇ ಕಾಲಬದ್ಧ ಕಾರ್ಯಕ್ರಮವಾಗಿ, ಮುಖ್ಯವಾಗಿ ಸುಲಭ ದರಗಳಲ್ಲಿ ನೀರು, ವಿದ್ಯುತ್ ಪೂರೈಕೆ, ಸರ್ಕಾರಿ ಆಸ್ಪತ್ರೆ ಮತ್ತು ಸರ್ಕಾರಿ ಶಾಲೆಗಳ

ಸುಧಾರಣೆಯ ಮತ್ತು ಜನಲೋಕಪಾಲ್ ಕಾನೂನಿನ ಮಾದರಿಯಲ್ಲಿಯೇ ದೆಹಲಿ ರಾಜ್ಯದಲ್ಲಿ ಭ್ರಷ್ಟಾಚಾರ ತಡೆ ಕಾಯಿದೆಯನ್ನು ಜಾರಿಗೆ ತರುವ ಪಕ್ಷದ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ.

ಬಹುಮತಕ್ಕೆ ಎಂಟು ಸ್ಥಾನಗಳನ್ನು ಕಡಿಮೆ ಪಡೆದಿರುವ ಕಾರಣದಿಂದಾಗಿ ಕಾಂಗ್ರೆಸ್ ನೀಡಲು ಮುಂದೆ ಬಂದಿರುವ ಬೆಂಬಲದೊಂದಿಗೆ ಸರ್ಕಾರ ರಚಿಸಿರುವ ಆಂ ಆದ್ಮಿ ಪಕ್ಷ, ತನ್ನ ಹದಿನೆಂಟು ಜನಪರ ಕಾರ್ಯಕ್ರಮಗಳ ಜಾರಿಯಲ್ಲಿ ಕಾಂಗ್ರೆಸ್ ಯಾವುದೇ ತಡೆ ಉಂಟು ಮಾಡಿದಲ್ಲಿ–ಈಗಾಗಲೇ ಅದು ಆ ಸೂಚನೆಗಳನ್ನು ನೀಡತೊಡಗಿದೆ– ಅಂದೇ ಸರ್ಕಾರವನ್ನು ವಿಸರ್ಜಿಸಿ ಜನತೆಯ ಮುಂದೆ ಮುಂದಿನ ಆದೇಶಕ್ಕಾಗಿ ಹೋಗುವುದಾಗಿ ಘೋಷಿಸಿದೆ. ಇನ್ನು, ಸರ್ಕಾರ ರಚನೆ ಮಾಡುವುದಿಲ್ಲವೆಂದು ಹೇಳಿ, ನಂತರ ಆಂ ಆದ್ಮಿ ಪಕ್ಷಕ್ಕೆ ಬೆಂಬಲ ನೀಡುವುದಾಗಿ ಘೋಷಿಸಿದ್ದ ಬಿಜೆಪಿ ಈಗ ಹೊಸ ಸರ್ಕಾರ ರಚನೆಯಾದೊಡನೆ ಜನತೆಗೆ ಮೋಸವಾಗಿದೆ ಎಂದು ಕೂಗಾಡತೊಡಗಿದೆ! ಆದರೆ ಜನತೆ ಅದನ್ನು ನಂಬಲು ನಿರಾಕರಿಸಿದೆ. ಏಕೆಂದರೆ ನಿಜವಾದ ಜನತೆಯ ರಾಜಕಾರಣದ ಮಹಾ ಪ್ರಯೋಗವೊಂದನ್ನು ಅವರು ತುಂಬು ಕುತೂಹಲದಿಂದ ನೋಡುತ್ತಿದ್ದಾರೆ. ಉದಾಹರಣೆಗೆ, ಅಲ್ಪಸಂಖ್ಯಾತವಾಗಿದ್ದೂ ಸರ್ಕಾರ ರಚಿಸುವ ಒತ್ತಡ ತನ್ನ ಮೇಲೆ ಬಿದ್ದಾಗ ಆಂ ಆದ್ಮಿ ಪಕ್ಷ ಅನುಸರಿಸಿದ ಮಾರ್ಗವಾದರೂ ಯಾವುದು? ಅದು ಗಾಂಧೀಜಿಯ 'ಸ್ವರಾಜ್ಯ' ರಾಜಕಾರಣದ ಮಾದರಿಯಲ್ಲಿ ಜನತಾ ಸಭೆಗಳನ್ನು ನಡೆಸಿ ಅಲ್ಲಿ ಜನಾಭಿಪ್ರಾಯ ಸಂಗ್ರಹಿಸಿತು. ಎಲ್ಲ ಪಕ್ಷಗಳೂ, ವೀಕ್ಷಕರೂ ಸೇರಿದಂತಹ ನಮ್ಮ ಸಾಂಪ್ರದಾಯಿಕ ರಾಜಕೀಯ ವ್ಯವಸ್ಥೆ ಇದನ್ನು ಕಂಡು ಗಾಬರಿ ಬಿದ್ದು ಇನ್ನೂ ಸುಧಾರಿಸಿಕೊಳ್ಳುವ ಸ್ಥಿತಿಯಲ್ಲಿದೆ! ಹಾಗಾಗಿಯೇ ಇದು ಗಾತ್ರದಲ್ಲಿ ಪುಟ್ಟದೇ ಆದರೂ, ಗುಣಾತ್ಮಕವಾಗಿ ಒಂದು ದೊಡ್ಡ ಕ್ರಾಂತಿಯ ನಾಂದಿಯೇ ಹೌದು.

ಕೇಜ್ರಿವಾಲರು ಅಣ್ಣಾ ಹಜಾರೆ ಆಂದೋಲನದ ಭಾಗವಾಗಿ, ಅದರ ಮುಖ್ಯ ವಕ್ತಾರನಾಗಿ ಆ ಆಂದೋಲನ ರೂಪಿಸಿಕೊಟ್ಟಿದ್ದ ಜನಲೋಕಪಾಲ ಕಾನೂನು ಮಾತ್ರ ಭ್ರಷ್ಟರ ವಿರುದ್ಧ ಪರಿಣಾಮಕಾರಿ ಅಸ್ತ್ರವಾಗಬಲ್ಲುದೆಂಬ ತಮ್ಮ ನಂಬಿಕೆಯನುಸಾರ ಸಂಸತ್ತು ಆ ಕಾನೂನನ್ನೇ ಅಂಗೀಕರಿಸಬೇಕೆಂದು ಪಟ್ಟು ಹಿಡಿದರು. ಆಗ ನಮ್ಮ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ವೀಕ್ಷಕರೂ, ವ್ಯಾಖ್ಯಾನಕಾರರೂ ಅವರನ್ನು ಒಂದು ಹಿಡಿ ಮಧ್ಯಮ ವರ್ಗದ ವಕ್ತಾರರು ಮಾತ್ರ ಎಂದು ಜರಿದು, ಇಂತಹವರು ಜನತೆಯ ನಿಜ ಪ್ರತಿನಿಧಿಯಾಗಿರುವ ಸಂಸತ್ತಿನ ಮೇಲೆ ಒತ್ತಡ ಹೇರಿ ಹೀಗೆ ಸವಾರಿ ಮಾಡತೊಡಗುವುದು ಅಪ್ರಜಾಸತ್ತಾತ್ಮಕ ಎಂದು ಟೀಕಿಸಿದರು. ಮಾಹಿತಿ ಹಕ್ಕು ಚಳುವಳಿಕಾರರಾಗಿ, ಸ್ವರಾಜ್ಯ ಆಂದೋಲನದ ಕಾರ್ಯಕರ್ತರಾಗಿ ಜನತೆಯ ನಡುವೆ ಕ್ರಿಯಾಶೀಲರಾಗಿದ್ದ ಕೇಜ್ರಿವಾಲ್ ಜನತೆಯ ನಾಡಿ ಮಿಡಿತ ಅರಿತವರಾಗಿ ತಮ್ಮ ಟೀಕಾಕಾರರ ಈ ಸವಾಲನ್ನು ಸ್ವೀಕರಿಸಿ ತಮ್ಮ 'ಆಂ ಆದ್ಮಿ ಪಕ್ಷ' ಸ್ಥಾಪಿಸಿದರು. ಅವರೀಗ ಅನತಿ ಕಾಲದಲ್ಲೇ ಈ ಸಂಸತ್ತು ಹೇಗೆ ನಮ್ಮ ಪ್ರಜಾಪ್ರಭುತ್ವದ ಅಣಕ

ಮಾತ್ರವಾಗಿದೆ ಎಂಬುದನ್ನು ತಮ್ಮ ಈ ಒಂದು ಮಾದರಿ ಯಶಸ್ವಿ ಪ್ರಯೋಗದ ಮೂಲಕ ಸಾಬೀತುಪಡಿಸಿದ್ದಾರೆ. ಅಷ್ಟೇ ಅಲ್ಲ, ತನ್ನ ನಿಜ ಮತ್ತು ವಿಶ್ವಾಸಾರ್ಹವಾದ ಸಂಘಟಿತ ಧ್ವನಿಯಿಲ್ಲದ ಕಾರಣ ಮಾತ್ರ ಜನತೆ ಈ ಸಂಪ್ರಾದಾಯಿಕ ರಾಜಕೀಯ ಪಕ್ಷಗಳ ಭ್ರಷ್ಟ ರಾಜಕಾರಣವನ್ನು ಸಹಿಸುತ್ತಿತ್ತಷ್ಟೆ ಎಂಬುದೂ ಈಗ ಸಾಬೀತಾಗಿದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿಯೆಂದರೆ, ಈ ಪಕ್ಷಕ್ಕೆ ಸರ್ವ ಜಾತಿ-ವರ್ಗಗಳ ಬೆಂಬಲವೂ ದೊರೆತಿರುವುದು. ಈ ಪಕ್ಷ ೨೮ ಸ್ಥಾನಗಳಲ್ಲಿ ಗೆದ್ದಿದ್ದರೆ, ೨೨ ಸ್ಥಾನಗಳಲ್ಲಿ ಎರಡನೇ ಸ್ಥಾನದಲ್ಲಿದೆಯಲ್ಲದೆ; ೧೨ ಮೀಸಲು ಕ್ಷೇತ್ರಗಳಲ್ಲಿ ಎಂಟನ್ನು ಗೆದ್ದುಕೊಂಡಿದೆ.

ಈ ಇಡೀ ವಿದ್ಯಮಾನದ ಒಂದು ವಿಷಾದಕರ ಸಂಗತಿಯೆಂದರೆ, ಕೇಜ್ರಿವಾಲರ ಈ ಪ್ರಯೋಗದ ಬಗ್ಗೆ ಅಣ್ಣಾ ಹಜಾರೆ ಅಡ್ಡ ಮಾತುಗಳನ್ನೇ ಆಡುತ್ತಿದ್ದುದು. ಇವರ ಆಂದೋಲನದ ಆರಂಭದಿಂದಲೂ ಕಂಡುಬಂದಂತೆ, ಮೂಲತಃ ಪರಿಮಿತ ವ್ಯಕ್ತಿತ್ವದವರಾದ ಅಣ್ಣಾ ಒಂದು ಎಲ್ಲೆಯವರೆಗಿನ ನಡಿಗೆಯ ಗುರಿ ಇಟ್ಟುಕೊಂಡವರು. ಅದರಾಚೆ ಅವರಿಗೆ ಅಪರಿಚಿತ ಸವಾಲುಗಳು ಎದುರಾಗುವ ಆತಂಕ; ರಾಜಕಾರಣದಲ್ಲಿ ಕಳೆದು ಹೋಗುವ ಭಯ. ಆದರೆ ಇಂದಿನ ಸಂಕೀರ್ಣ ರಾಷ್ಟ್ರೀಯ ಸಂದರ್ಭದಲ್ಲಿ ಯಾವುದೇ ಸಮಸ್ಯೆ ಒಂದು ರಾಜಕೀಯ ತಾರ್ಕಿಕ ಅಂತ್ಯ ಕಾಣದೆ ಸಂಪೂರ್ಣ ಪರಿಹಾರವಾಗದು ಮತ್ತು ಜನತೆಯ ರಾಜಕಾರಣದ ಮೂಲಕ ಇದನ್ನು ಸಾಧಿಸಬಹುದು ಎಂಬ ಅರಿವಿಗೆ ತೆರೆದುಕೊಂಡ ಮನಸ್ಸು ಕೇಜ್ರಿವಾಲಾರದ್ದು. ಈ ಸಾಹಸದಲ್ಲಿ ಕೇಜ್ರಿವಾಲ್ ತೋರಿದ ದಿಟ್ಟತನ, ದಕ್ಷತೆ ಮತ್ತು ಸಾಧನೆ ಅಣ್ಣಾ ನಿರೀಕ್ಷೆಗೂ ಮೀರಿದ್ದಾಗಿ ಅವರಿಗೆ ಮುಜುಗರವನ್ನುಂಟು ಮಾಡಿತೆಂದೇ ಕಾಣುತ್ತದೆ. ಹಾಗಾಗಿಯೇ ಅವರು ಲೋಕಪಾಲ ಮಸೂದೆಗಾಗಿ ಇದ್ದಕ್ಕಿದ್ದಂತೆ ಉಪವಾಸ ಕೂತು ಆ ಮುಜುಗರವನ್ನು ಮುಚ್ಚಿಕೊಳ್ಳಲು ಯತ್ನಿಸಿದರು. ಆದರೆ ಮುಖ್ಯವಾಗಿ ಕೇಜ್ರಿವಾಲರ ಚುನಾವಣಾ ಸಾಧನೆಯ ಒತ್ತಡದಿಂದಾಗಿಯೇ ಸರ್ಕಾರಿ ಲೋಕಪಾಲ ಮಸೂದೆ ಸಂಸತ್ತಿನಿಂದ ತರಾತುರಿಯಾಗಿ ಅಂಗೀಕಾರವಾದಾಗ ಅದಕ್ಕಾಗಿ ಅಣ್ಣಾ ಕಾಂಗ್ರೆಸ್ ಮತ್ತು ಬಿಜೆಪಿಗೆ ಕೃತಜ್ಞತೆ ಸಲ್ಲಿಸುವ ಮೂಲಕ ತಾವು ಮುಚ್ಚಿಕೊಂಡ ಈ ಮುಜುಗರವನ್ನು ಕಹಿ ರೂಪದಲ್ಲಿ ಹೊರ ಚೆಲ್ಲಿದರೆಂದೇ ಹೇಳಬೇಕು. ಇದು ಅನಗತ್ಯವಾಗಿತ್ತು.

ಅದೇನೇ ಇರಲಿ, ಕೇಜ್ರಿವಾಲರಿಗೆ ಇದು ಆರಂಭಿಕ ಅಗ್ನಿ ಪರೀಕ್ಷೆಯಷ್ಟೇ. ಸಾಂಪ್ರದಾಯಿಕ ರಾಜಕಾರಣವು ಯಾವುದನ್ನು ಅವಾಸ್ತವಿಕ ಮತ್ತು ಬೊಗಳೆ ಎಂದು ಕರೆಯುತ್ತಿವೆಯೋ ಆ ಆದರ್ಶಗಳನ್ನು ನಂಬಿರುವ ಅವರು ಮತ್ತು ಅವರ ಪಕ್ಷ ಮೈಯೆಲ್ಲ ಕಣ್ಣಾಗಿ ಮುಂದಿನ ಹೆಜ್ಜೆಗಳನ್ನಿಡಬೇಕಿದೆ. ಹಾದಿ ದುರ್ಗಮವಾಗಿದೆ! ಒಂದು ಸಣ್ಣ ತಪ್ಪು ಹೆಜ್ಜೆಯೂ ಅವರು ಈವರೆಗೆ ಕ್ರಮಿಸಿರುವ ದಾರಿಯನ್ನೆಲ್ಲ ಅಳಿಸಿ ಹಾಕಬಲ್ಲುದು. ವಿಶೇಷವಾಗಿ ರಾಷ್ಟ್ರ ರಾಜಕಾರಣ ಮಾಡ ಹೊರಟಾಗ ಅದು ರಾಷ್ಟ್ರದ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ವೈವಿಧ್ಯತೆಗಳನ್ನು ಸೂಕ್ಷ್ಮವಾಗಿ ಗಮನಿಸಿ ತನ್ನ ಆದ್ಯತೆ,

ಪರಿಭಾಷೆ ಮತ್ತು ತಂತ್ರಗಳಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಆ ವಿವೇಕ ಯೋಗೇಂದ್ರ ಯಾದವ್‌ರಂತಹ ಸಮರ್ಥ ತಾತ್ವಿಕ ಸಲಹಾಕಾರರನ್ನು ಪಡೆದ ಆಂ ಆದ್ಮಿ ಪಕ್ಷಕ್ಕಿದೆಯೆಂದು ಭಾವಿಸೋಣ.

'ಆಂ ಆದ್ಮಿ'ಗೆ ಶುಭವಾಗಲಿ!

<u>ಸಮಕಾಲೀನ</u>

ಲೈಂಗಿಕ ದೌರ್ಜನ್ಯಗಳೋ, ದುರಂತಗಳೋ?

ಮೊದಲಿಗೇ ಒಂದು ಮಾತು: ನಾನು ಇಲ್ಲಿ ಲೈಂಗಿಕ ದುರ್ವರ್ತನೆಗಳ ಆರೋಪಕ್ಕೆ ಸಿಕ್ಕಿರುವ ತರುಣ್ ತೇಜ್‌ಪಾಲ್‌ರನ್ನಾಗಲಿ, ನ್ಯಾ. ಗಂಗೂಲಿಯವರನ್ನಾಗಲೀ ಸಮರ್ಥಿಸಲು ಹೊರಟಿಲ್ಲ. ಅವರು ಮಾಡಿರಬಹುದಾದ ತಪ್ಪುಗಳಿಗೆ ಸಂಬಂಧಪಟ್ಟ ಕಾನೂನುಗಳ ಪ್ರಕಾರ ಶಿಕ್ಷೆಯಾಗಲಿ. ಆದರೆ ಈ ಪ್ರಕರಣಗಳು ಕಳೆದ ಒಂದು ತಿಂಗಳಲ್ಲಿ 'ಲೈಂಗಿಕ ದೌರ್ಜನ್ಯ' ಎಂಬ ಹೆಸರಿನಲ್ಲಿ ಪಡೆದಿರುವ ಪ್ರಚಾರದ ಸ್ವರೂಪ ಮತ್ತು ಹಾಗಾಗಿ ಅವು ಹಿಡಿದಿರುವ ದಿಕ್ಕು ದೆಸೆಗಳು ನಮ್ಮ ಸಮಾಜದ ಮಾನವ ಸಂಬಂಧಗಳ ಪಾತಳಿಯಲ್ಲಿ ಒಂದು ನಿರ್ಣಾಯಕ ಪಲ್ಲಟವನ್ನೇ ಉಂಟು ಮಾಡುವ ಆತಂಕವನ್ನು ಸೃಷ್ಟಿ ಮಾಡಿವೆ ಎಂಬುದೇ ನನ್ನ ಆತಂಕ. ಈ ಎರಡೂ ಪ್ರಕರಣಗಳನ್ನು ನಮ್ಮ ಮಾಧ್ಯಮಗಳೂ ಸೇರಿದಂತೆ ಇಂದಿನ ವ್ಯವಸ್ಥೆಯ ಪಟ್ಟಭದ್ರ ಹಿತಾಸಕ್ತಿಗಳು ಈಗಾಗಲೇ ಚರ್ಚಿತವಾಗುತ್ತಿರುವ ತಮ್ಮ ರಾಜಕೀಯ ಉದ್ದೇಶಗಳಿಗಾಗಿಯೋ ಅಥವಾ ಇಂದಿನ ಬದುಕಿನ ಅಗತ್ಯಗಳಲ್ಲಿ ಒಂದಾಗಿಬಿಟ್ಟಿರುವ ರೋಚಕತೆಯ ಸೃಷ್ಟಿಗಾಗಿಯೋ ಔಚಿತ್ಯ ಮೀರಿ ವ್ಯಾಖ್ಯಾನಿಸುತ್ತಿರುವಂತಿದೆ. ಮತ್ತು ಈ ಪ್ರಕರಣಗಳ ಹಿಂದಿರುವ ಬಹು ಆಯಾಮಗಳ ಮೂಲ ಸಮಸ್ಯೆಯನ್ನು ಗಂಡು ಲೈಂಗಿಕತೆಯ ಏಕಾಯಾಮಕ್ಕೆ ಇಳಿಸಿ 'ಮಜಾ' ತೆಗೆದುಕೊಳ್ಳುತ್ತಿರುವಂತಿದೆ. ಈ ರೋಚಕತೆ–ಮಜಾಗಳ ಮಧ್ಯೆ, ಮೊದಲಾಗಿ ಆರೋಪಿಗಳ ಕಡೆಯ ಮಾತು/ವಾದಗಳನ್ನು ಕೇಳಲು ಅವಕಾಶವೇ ಇಲ್ಲದಾಗಿದೆ. ಬರೀ ಉಬ್ಬರದ ಸ್ತ್ರೀವಾದದ ಗಲಾಟೆ ಸುಸ್ತು ಮಾಡುವಂತಿದೆ.

ನಿಜ, ಈ ದಿನಗಳಲ್ಲಿ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರಗಳ ಸಂಖ್ಯೆ ಮತ್ತು ವೈವಿಧ್ಯ ಗಾಬರಿ ಹುಟ್ಟಿಸುವಷ್ಟು ಹೆಚ್ಚಿದೆ. ಆದರೆ ಇದಕ್ಕೆ ಈಗ ಆಪಾದಿಸಲಾಗುತ್ತಿರುವಂತೆ ಅನಿಯಂತ್ರಿತ ಗಂಡು ಲೈಂಗಿಕತೆಯಷ್ಟೇ ಕಾರಣವೇ? ಅಥವಾ ಬೇರೆ ಕಾರಣಗಳೂ ಇವೆಯೆ? ಈ ಬಗ್ಗೆ ಸಾಕಷ್ಟು ಕುತೂಹಲಕಾರಿ ಒಳನೋಟಗಳುಳ್ಳ ಅಧ್ಯಯನಗಳು ನಡೆದಿವೆಯಾದರೂ ಈ ಸುದ್ದಿ ಅಬ್ಬರದಲ್ಲಿ ಅವುಗಳ ಸೂಕ್ಷ್ಮಾವಲೋಕನ ಯಾರಿಗೂ ಬೇಡವಾದಂತಿದೆ. ಗಂಡು–ಹೆಣ್ಣಿನ ನಡುವಣ ಸಮಾನತೆಯ ಪರಿಕಲ್ಪನೆ ಜಾಗತೀಕರಣವೆಂಬ ಹುಚ್ಚು ಹೊಳೆಯಲ್ಲಿ ವಿಕ್ಷಿಪ್ತತೆಯ ತುದಿ ಮುಟ್ಟಿ, ಹೆಣ್ಣೂ ಗಂಡಾಗುವುದರಲ್ಲಿ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತಿದೆಯಲ್ಲವೇ? ಈಗ ಈ

ಎರಡೂ 'ಗಂಡು'ಗಳು ತಮ್ಮ ನಡುವಣ ಮೂಲ ನೈಸರ್ಗಿಕ ಸಮತೋಲನ ಭಂಗಗೊಂಡಿರುವ ಅಶಾಂತಿಯಲ್ಲಿವೆಯಲ್ಲವೆ? ಈ ಹಿನ್ನೆಲೆಯಲ್ಲಿ, ನಿಜ ಮತ್ತು ಮೂಲ ಹೆಣ್ಣಾದ ಭೂಮಿಯ ಮೇಲೆ ನಡೆಸುತ್ತಿರುವ ಅತ್ಯಾಚಾರದ ವಿವಿಧ ಆವೃತ್ತಿಗಳಾಗಿ ಈ ಹೆಚ್ಚುತ್ತಿರುವ ಅತ್ಯಾಚಾರಗಳನ್ನು ನೋಡಬಹುದಲ್ಲವೇ? ಜಾಗತೀಕರಣವನ್ನು ಒಂದು ರಾಜಕೀಯ ವಿದ್ಯಮಾನವನ್ನಾಗಿ ನೋಡುವ ಬೌದ್ಧಿಕ ಉತ್ಸಾಹ ಸಂಭ್ರಮಗಳಲ್ಲಿ ನಾವು ಅದನ್ನು ಮೂಲತಃ ಒಂದು ಅತ್ಯಂತ ಅನಾಹುತಕಾರಿ ಮಾನವ ದುರಂತವಾಗಿ ನೋಡಬೇಕಾದ ಕಣ್ಣನ್ನೇ, ಕ್ಷಮಿಸಿ ಹೃದಯವನ್ನೇ ಕಳೆದುಕೊಂಡಿದ್ದೇವೆಯೇ? ಅದು ಅಕ್ಷರಶಃ ಮನುಷ್ಯನ ದೇಹ ಮತ್ತು ಅದನ್ನು ಕುರಿತ ಅವನ ಪರಿಕಲ್ಪನೆಯ ಮೇಲೆ ಎಂತಹ ರೂಕ್ಷ ದಾಳಿಯನ್ನು ಮಾಡುತ್ತಿದೆ ಎಂಬುದರ ಬಗ್ಗೆ ನಾವು ಅಗತ್ಯ ಗಮನ ಹರಿಸಿದ್ದೇವೆಯೇ? ಅಂದರೆ ಇಂದಿನ ಲೈಂಗಿಕ ಅತ್ಯಾಚಾರಗಳನ್ನು ಜಾಗತೀಕರಣದ ಹೆಸರಿನಲ್ಲಿ ಮನುಷ್ಯನ ಮೈ ಮನಸ್ಸುಗಳ ಮೇಲೆ ನಡೆಯುತ್ತಿರುವ ಅತ್ಯಾಚಾರದ ಭಾಗವಾಗಿ ನೋಡಿದಾಗ ಮಾತ್ರ ನಮಗೆ ಮೂಲ ಸಮಸ್ಯೆಯ ಪರಿಹಾರದ ಹೊಳಹು ಸಿಗುತ್ತದಲ್ಲವೇ?

ಮನುಷ್ಯನ ಹುಚ್ಚು ಗ್ರಾಹಕತನ, ಅದು ಅವನ/ಳಲ್ಲಿ ಕೃತಕವಾಗಿ ಹುಟ್ಟಿಸುವ ಮಹತ್ವಾಕಾಂಕ್ಷೆ ಮತ್ತು ಅದನ್ನು ಪೋಷಿಸಲು ಅದು ಸೃಷ್ಟಿಸುತ್ತಿರುವ ರೂಕ್ಷ ಬೆಡಗು-ಬಿನ್ನಾಣಗಳ ರೂಪಗಳು ಅವನ/ಳ ಮೈ ಮೇಲೆ ಮತ್ತು ಆ ಮೈ ಒಳಗಿರುವ ಕಾಮ ಕೇಂದ್ರದ ಮೇಲೆ ಎಂತಹ ಹೊಸ ಒತ್ತಡಗಳನ್ನು ಹಾಕುತ್ತಿವೆ ಎಂಬುದನ್ನೇ ನಾವು ಗಮನಿಸದೆ; ಹೊಸ 'ಸಂಸ್ಕೃತಿ'ಯ ಮಾನವ ವರ್ತನೆಗಳನ್ನು ಹಳೆಯ ಸಂಸ್ಕೃತಿಯ ನೈತಿಕತೆಯ ಮಾನದಂಡಗಳಿಂದ 'ಮೌಲ್ಯ'ಮಾಪನ ಮಾಡುವ ಆತ್ಮದ್ರೋಹಿತನವನ್ನು ನಾವಿಂದು ಪ್ರದರ್ಶಿಸುತ್ತಿದ್ದೇವಲ್ಲವೇ? ಸದರಿ ಎರಡೂ ಪ್ರಕರಣಗಗಳನ್ನೇ ಗಮನಿಸುವುದಾದರೆ, ಇಬ್ಬರೂ(ನಾಲ್ವರೂ?) ಕುಡಿದ ಅಮಲಿನಲ್ಲಿದ್ದರು ಮತ್ತು ಮೈಮನಸ್ಸುಗಳೆರಡನ್ನೂ ಉನ್ಮಾದಕ್ಕೀಡುಮಾಡುವಂತಹ ಪಂಚತಾರಾ ವಾತಾವರಣದಲ್ಲಿ ಅವರು ಇಬ್ಬಿಬ್ಬರೇ ಇದ್ದರು ಮತ್ತು ಆ ಇರುವಿಕೆ ಅವರದೇ ಆಯ್ಕೆಯಾಗಿತ್ತು ಎಂಬುದನ್ನೂ ನಾವು ಗಮನಿಸಬೇಕಲ್ಲವೇ? ಈ ದೃಷ್ಟಿಯಿಂದ ಈ ಎರಡು ಪ್ರಕರಣಗಳನ್ನೂ ಗಂಡೊಬ್ಬನೇ ನಡೆಸಿದ ಲೈಂಗಿಕ ದೌರ್ಜನ್ಯಗಳಾಗಿರದೆ, ಅವನ್ನು ಲೈಂಗಿಕ ದುರಂತಗಳೆಂದು ಕರೆಯುವುದು ಅವನ್ನು ಬಿಡಿಸಿ ಇತ್ಯರ್ಥಪಡಿಸುವ ದೃಷ್ಟಿಯಿಂದ ಹೆಚ್ಚು ಉಚಿತವೆನಿಸುತ್ತದಲ್ಲವೇ?

ಈ ದೃಷ್ಟಿಯಿಂದ ಈ ಪ್ರಕರಣಗಳನ್ನು ಈಗ ಸಾರ್ವಜನಿಕವಾಗಿ ನಿರ್ವಹಿಸುತ್ತಿರುವ ರೀತಿ ತೀರಾ ಅಗ್ಗ ಮತ್ತು ಜಿಗುಪ್ಸೆಕರ ಎನಿಸುತ್ತಿದೆ. ಇದು ಈ ಜಗತ್ತಿನ ಸೃಷ್ಟಿಶೀಲತೆ, ಮಾಂತ್ರಿಕತೆ ಮತ್ತು ಮಾರ್ದವತೆಗಳಿಗೆ ಮೂಲ ಕಾರಣವಾಗಿರುವ ಗಂಡು-ಹೆಣ್ಣಿನ ಸಂಬಂಧದ ಸಹಜತೆಯನ್ನೇ ಹಾಳುಗೆಡಹಿ ಸಮಾಜವನ್ನು ಲೈಂಗಿಕ ಸೆರೆಮನೆಗಳನ್ನಾಗಿ ಪರಿವರ್ತಿಸಿಬಿಡುವ ಅಪಾಯವಿದೆ. ಗಂಡು ಹೆಣ್ಣಿನ ನಡುವಣ ಸಂಬಂಧ ವೈಯುಕ್ತಿಕ ನೆಲೆಯ ಮತ್ತು ಪರಸ್ಪರ ಜವಾಬ್ದಾರಿಯ ಸಂಬಂಧವನ್ನಾಗಿ ನೋಡಲು ನಿರಾಕರಿಸುವ

ಸಮಾಜಕ್ಕೆ ಸಂಸ್ಕೃತಿಯೂ ಇಲ್ಲ, ನಾಗರೀಕತೆ ಎಂಬುದು ಮೊದಲೇ ಇಲ್ಲ ಎಂದು ಹೇಳಬೇಕಾಗುತ್ತದೆ.–ಸಂ.

ಒಂದು ಶ್ರದ್ಧಾಂಜಲಿ

ಇನ್ನಿಲ್ಲ ನಮ್ಮ ಗೆಳೆಯ ಬಿ. ರಾಜಣ್ಣ

ಭದ್ರಾವತಿ–ಶಿವಮೊಗ್ಗೆ ಸೀಮೆಯ ಎಲ್ಲ ಸಮಾಜವಾದಿಗಳ ಆಪ್ತ ಗೆಳೆಯರಾಗಿದ್ದ ಕಥೆಗಾರ, ಕವಿ. ಬಿ. ರಾಜಣ್ಣ ಇನ್ನಿಲ್ಲವಾಗಿದ್ದಾರೆ. ಅವರು ಬೆಂಗಳೂರಿನ ತಮ್ಮ ಮಕ್ಕಳ ಮನೆಯಲ್ಲಿ ೬೭ನೇ ವಯಸ್ಸಿನಲ್ಲಿ ಹೃದಯಾಘಾತಕ್ಕೆ ಒಳಗಾಗಿ ಕೊನೆಯುಸಿರೆಳೆದಿದ್ದಾರೆ. ಅವರ ದೇಹವೀಗ ಅವರ ತವರೂರಾದ ಮೈಸೂರು ಜಿಲ್ಲೆಯ ಸಾಲಿಗ್ರಾಮದ ಬಳಿಯ ರಾಂಪುರದ ಅವರ ಜಮೀನಿನಲ್ಲಿ ಮಲಗಿ ಬಿಟ್ಟಿದೆ.

ಭದ್ರಾವತಿಯ ಕಬ್ಬಿಣ ಕಾರ್ಖಾನೆಗೆ ಫೋರ್‌ಮನ್ ಆಗಿ ಸೇರಿ ಎಂಜಿನಿಯರ್ ಆಗಿ ಸ್ವಯಂ ನಿವೃತ್ತಿ ಪಡೆದು ಹಸಿರ ಮಧ್ಯೆ ಮಣ್ಣ ಬದುಕು ನಡೆಸಲು ತೊಂಭತ್ತರ ದಶಕದಲ್ಲಿ ತಮ್ಮ ಹಳ್ಳಿ ಸಾಲಿಗ್ರಾಮಕ್ಕೆ ವಾಪಸಾದ ರಾಜಣ್ಣ ಅಲ್ಲಿಯೂ ಶಾಂತಿ ಕಾಣದೆ ಬೆಂಗಳೂರು ಸೇರಿದರು. ಬಾಯಿಯಲ್ಲಿ ಬೀಡಿಯನ್ನೋ ಸಿಗರೇಟನ್ನೋ ಕಚ್ಚಿಕೊಂಡು ಅದರ ಪುಡಿಯನ್ನು ಎಲ್ಲೆಂದರಲ್ಲಿ ಉದುರಿಸುತ್ತಲೋ ಕೆಮ್ಮಿ ಕ್ಯಾಕರಿಸಿ ಉಗುಳಿ ಗಂಟಲು ಸರಿ ಮಾಡಿಕೊಳ್ಳುತ್ತಲೋ ಸದಾ ಅಶಾಂತರಾಗಿ ಓಡಾಡುತ್ತಿದ್ದ ನೇರ ನಡೆ ನುಡಿಯ ರಾಜಣ್ಣ ನೋಡಲು ಮಾತ್ರ ಚಿರ ಯೌವ್ವನಿಗ!

ತಮ್ಮ ಬದುಕಿನ ಬಹು ಭಾಗವನ್ನು ಭದ್ರಾವತಿಯಲ್ಲಿ ಕಾರ್ಮಿಕರು ಮತ್ತು ಸಮಾಜವಾದಿಗಳ ಮಧ್ಯೆ ಕಳೆದ ರಾಜಣ್ಣ ಆ ಊರಿನಲ್ಲಿ ಸಮಾಜವಾದಿ ನೆಲೆಯೊಂದನ್ನು, ನಂತರ ದಲಿತ ಚಳುವಳಿಯ ಭದ್ರಕೋಟೆಯನ್ನು ಸ್ಥಾಪಿಸಲು ಶ್ರಮಿಸಿದವರು. ಆಗ ನಾಗೇಂದ್ರ ರಾವ್, ಬಿ. ಕೃಷ್ಣಪ್ಪ, ಗಿರಿಯಪ್ಪ, ಮುನೀರ್, ನಿಸಾರ್ ಅಹ್ಮದ್ ಎಂ.ಚಂದ್ರಶೇಖರಯ್ಯ, ಟಿ.ಎನ್. ರಂಗೇಗೌಡ ಮುಂತಾದವರು ಅವರ ಒಡನಾಡಿಗಳು.

ಎಲ್ಲ ಸಮಾಜವಾದಿಗಳಂತೆಯೇ, ತೀವ್ರ ಸಾಹಿತ್ಯಿಕ–ಸಾಂಸ್ಕೃತಿಕ ಆಸಕ್ತಿಯಿದ್ದ ರಾಜಣ್ಣ ತಲಾ ಮೂರು ಕವನ ಸಂಕಲನಗಳು ಮತ್ತು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಮೈಸೂರು ಸೀಮೆಯ ದಟ್ಟ ಗ್ರಾಮೀಣ ಸೊಗಡಿನೊಂದಿಗೆ ಮಾತನಾಡುತ್ತಾ, ಬರೆಯುತ್ತಿದ್ದ ಅವರಿಗೆ ತಮ್ಮ ಸಾಹಿತ್ಯ ಗಂಭೀರ ವಿಮರ್ಶೆಗೆ ಒಳಗಾಗಲಿಲ್ಲ ಎಂಬ ನೋವಿತ್ತು. ಅವರ ಕೊನೆಯ ದಿನಗಳಲ್ಲಿ ಜಾನಪದ ವಿಶ್ವವಿದ್ಯಾನಿಲಯವು ಅವರಲ್ಲಿದ್ದ ಸಮೃದ್ಧ ನುಡಿ ಸಂಪತ್ತನ್ನು ಗುರುತಿಸಿ ಅವರ ಸೇವೆಯನ್ನು ಬಳಸಿಕೊಳ್ಳಲಾರಂಭಿಸಿತ್ತು ಎಂಬುದೊಂದು ಸಮಾಧಾನದ ಸಂಗತಿ.

ಅವರನ್ನು ಇದ್ದಕ್ಕಿದಂತೆ ಕಳೆದುಕೊಂಡು ದಿಗ್ಭ್ರಾಂತವಾಗಿರುವ ಅವರ ಗೆಳೆಯರ ಬಳಗ ಅವರ ಆತ್ಮಕ್ಕೆ ಶಾಂತಿ ಕೋರುತ್ತದೆ –ಡಿ.ಎಸ್.ಎನ್.

ಫೆಬ್ರುವರಿ, ೨೦೧೪

ನಮ್ಮ ರಾಜಕೀಯ ನಾಯಕತ್ವದ ಬೌದ್ಧಿಕ ದಾರಿದ್ರ್ಯವೂ ಕೇಜ್ರಿವಾಲರ ಪ್ರಾಯೋಗಿಕ ರಾಜಕಾರಣವೂ

ಪ್ರಿಯ ಓದುಗರೇ,

ಲೋಕಸಭಾ ಚುನಾವಣೆಗಳು ದಿನೇ ದಿನೇ ಹತ್ತಿರ ಬರುತ್ತಿರುವಂತೆ ಪ್ರಮುಖ ಪಕ್ಷಗಳ ನಡುವಿನ ಸ್ಪರ್ಧೆಯ ತುರುಸು ಹೆಚ್ಚುತ್ತಿದೆ. ಬಿಜೆಪಿ ಮತ್ತು ಕಾಂಗ್ರೆಸ್ ರಾಷ್ಟ್ರಾದ್ಯಂತ ದಿನಕ್ಕೊಂದರಂತೆ ಪ್ರಚಾರ ಸಭೆಗಳನ್ನು ಆಯೋಜಿಸುತ್ತಿವೆ. ಭರ್ಜರಿ ಮಾತುಗಾರರೆನಿಸಿರುವ ಮೋದಿ ಒಳ್ಳೆಯ ರಂಗನಟನ ಹಾಗೆ ಆಕರ್ಷಕ ಆಂಗಿಕ ಹಾವಭಾವಗಳು, ಧ್ವನಿಯ ಏರಿಳಿತ ಮತ್ತು ಕುತೂಹಲಕಾರಿ ಮೌನಗಳಿಂದೊಡಗೂಡಿದ ಭರ್ಜರಿ 'ಷೋ'ಗಳನ್ನು ನೀಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ರಾಹುಲ್ ಕೆಲವೇ ದಿನಗಳ ಹಿಂದಿನವರೆಗೆ ಅತಿಥಿ ನಟರಂತೆ ರಾಷ್ಟ್ರ ಜೀವನದಲ್ಲಿ ಆಗಾಗ್ಗೆ ಮಾತ್ರ ಇಣುಕಿ ಮಾಯವಾಗುತ್ತಿದ್ದವರು. ಈಗ ತಾವು ಮೋದಿ ವಿರುದ್ಧ ಪ್ರಧಾನಿ ಅಭ್ಯರ್ಥಿಯಾಗಿ ಸೆಣೆಸಬೇಕಿಲ್ಲ ಎಂಬ ಘೋಷಣೆಯಾಗುತ್ತಿದ್ದಂತೆ ಒಂದು ದೀರ್ಘ ಉಸಿರು ತೆಗೆದುಕೊಂಡವರಂತೆ ಆ ಘೋಷಣೆ ಮಾಡಲಾದ ಎಐಸಿಸಿ ಸಭೆಯಲ್ಲೇ ಒಂದು 'ಭರ್ಜರಿ' ಭಾಷಣ ಬಿಗಿದಿದ್ದಾರೆ. ಆ ಮೂಲಕ ಕುಸಿದೇ ಹೋಗಿದ್ದ ಕಾಂಗ್ರೆಸ್ಸಿಗರ ಚೈತನ್ಯಕ್ಕೆ ಒಂದಿಷ್ಟು ಕಾವು ಒದಗಿಸಿದ್ದಾರೆ.

ಹಾಗೆ ನೋಡಿದರೆ ಈ ಇಬ್ಬರ ಈ 'ಭರ್ಜರಿ' ಭಾಷಣಗಳಲ್ಲಿಯೂ ಭಾರತದ ಸದ್ಯದ ಸಾಮಾಜಿಕ-ಆರ್ಥಿಕ ಚಿತ್ರವನ್ನು ನಿರ್ಣಾಯಕವಾಗಿ ಬದಲಾಯಿಸಬಲ್ಲವೆಂದು ತೋರುವ ಯಾವುದೇ ಹೊಸ ಒಳನೋಟಗಳು ಕಾಣುತ್ತಿಲ್ಲ. ಮೋದಿ ಕಾಂಗ್ರೆಸ್ಸಿಗರ ಭ್ರಷ್ಟಾಚಾರದ ಹಳೆಯ ಬಟ್ಟೆಗಳನ್ನು ಮತ್ತೆ ಮತ್ತೆ ಎತ್ತಿ ಎತ್ತಿ ಒಗೆಯುತ್ತಿದ್ದಾರೆ. ಕಾಂಗ್ರೆಸ್ಸಿಗರೇ ತಮ್ಮ ಭ್ರಷ್ಟಾಚಾರವನ್ನು ಒಪ್ಪಿಕೊಂಡು ಕಿವಿ ಹಿಡಿದು ಬಸ್ಕಿ ಹೊಡೆಯುತ್ತಿರುವಾಗ

ಮೋದಿಯ ಮಾತುಗಳನ್ನು ಕಿವಿಗೆ ಹಾಕಿಕೊಳ್ಳುವರಾರು? ಇನ್ನು ಅವರ ಗುಜರಾತ್ ಮಾದರಿ ಅಭಿವೃದ್ಧಿ ಈಗಾಗಲೇ ಸಾಕಷ್ಟು ಚರ್ಚೆಗೆ ಒಳಗಾಗಿ ಅದು ಮೂಲತಃ 'ಚೇಲಾ ಬಂಡವಾಳಶಾಹಿ'ಯ ಸಂಕೇತವೆನಿಸಿಕೊಂಡುಬಿಟ್ಟಿದೆ. ಅದೇನೇ ಇದ್ದರೂ, ಮೋದಿ ಕುರಿತು ಚರ್ಚೆಯೇ ಆಗದಿರುವ ಒಂದು ಮುಖ್ಯ ಸಂಗತಿಯೆಂದರೆ, ಅವರು ಭಾರತದಂತಹ ಬಹು ಸಂಕೀರ್ಣವಾದ ವಿದ್ಯಮಾನವನ್ನು ಸಹಾನುಭೂತಿಯಿಂದ ಅರಿತು ಅದರ ನಿಜವಾದ ಹಿತಾಸಕ್ತಿಗಳನ್ನು ಗುರುತಿಸಿ, ಅವನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ನಿರ್ವಹಿಸುವ ಕನಿಷ್ಟ ಬೌದ್ಧಿಕ ಸಿದ್ಧತೆ–ಸಾಮರ್ಥ್ಯ ಅವರಲ್ಲಿದೆಯೇ ಎಂಬುದು. ಮಣಿಶಂಕರ್ ಅಯ್ಯರ್ ಎಂಬ ಬಾಯಿಬಡುಕ ಮೋದಿಯನ್ನು 'ಟೀ ಮಾರುವವ' ಎಂದು ಕರೆದಿದ್ದರಲ್ಲಿ ಕೀಳು ಅಭಿರುಚಿಯ ಕುಹಕವಿದ್ದು (ಅದರಿಂದ ಮೋದಿಯವರಿಗೇ ಲಾಭವಾಗಿರುವುದಾದರೂ) ಅದು ಪರೋಕ್ಷವಾಗಿ ಈ ಸತ್ಯವನ್ನು ಸೂಚಿಸುತ್ತಿದೆ ಎಂದು ಹೇಳಬಹುದು. ಕೆಲವು ದಿನಗಳ ಹಿಂದೆ ತಮ್ಮ ಪಕ್ಷದ ಮೂಲ ನಾಯಕರ (ಶ್ಯಾಮಾ ಪ್ರಸಾದ್ ಮುಖರ್ಜಿ) ಚರಿತ್ರೆಯೂ ಸೇರಿದಂತೆ ಭಾರತದ ಚರಿತ್ರೆಯ (ತಕ್ಷಶಿಲೆ ಮತ್ತು ಚಂದ್ರಗುಪ್ತನಿಗೆ ಸಂಬಂಧಿಸಿದಂತೆ) ಪ್ರಾಥಮಿಕ ಪಾಠಗಳನ್ನೂ ಅರಿಯದೆ ಸಲ್ಲದ ಮಾತುಗಳನ್ನಾಡಿ ತಮ್ಮ ಪಕ್ಷಕ್ಕೆ ಮುಜುಗರವನ್ನುಂಟು ಮಾಡಿದ್ದ ಮೋದಿ ಈ ದೇಶದ ಪ್ರಧಾನಮಂತ್ರಿಗೆ ಅಗತ್ಯವೆನಿಸುವ ಕನಿಷ್ಟ ಮಟ್ಟದ ಶೈಕ್ಷಣಿಕ ಹಿನ್ನೆಲೆ ಹಾಗೂ ಬೌದ್ಧಿಕ ಸಾಮರ್ಥ್ಯ ಹೊಂದಿದ್ದಾರೆಯೇ ಎಂಬುದು ನಿಜವಾಗಿ ಯೋಚಿಸಬೇಕಾದ ವಿಚಾರವಲ್ಲವೇ? ಈ ವಿಷಯದಲ್ಲಿ ಅವರದೇ ಪಕ್ಷದ ಅದ್ವಾನಿ, ಜಶವಂತ್ ಸಿಂಗ್, ಯಶವಂತ ಸಿನ್ಹಾ ಅವರುಗಳ ಮುಂದೆ ಇವರು ಕುಬ್ಜರಾಗಿ ಕಾಣುತ್ತಾರೆ. ಆದರೂ ಸದ್ಯಕ್ಕೆ ಸ್ಪರ್ಧೆಯಲ್ಲಿ ಮೋದಿಯೇ ಬಹು ಮುಂದಿದ್ದಂತೆ ಕಾಣುತ್ತಿದೆ.

ಇದಕ್ಕೆ ಮುಖ್ಯ ಕಾರಣ, ಕಾಂಗ್ರೆಸ್ಸಿನ ಅಧೋಗತಿಗಿಳಿದ ರಾಜಕಾರಣ. ಕುಟುಂಬದ ಹಿನ್ನೆಲೆಯ ಹೊರತಾಗಿ ರಾಷ್ಟ್ರೀಯ ನಾಯಕತ್ವದ ಯಾವ ಲಕ್ಷಣ ಅಥವಾ ಸಾಮರ್ಥ್ಯವನ್ನೂ ತೋರದ ರಾಹುಲರನ್ನು ಈ ಪಕ್ಷ ತನ್ನ ಪರಮೋಚ್ಛ ನಾಯಕನೆಂದು ಘೋಷಿಸಿಕೊಂಡಿದೆ ಎಂದರೆ ರಾಜಕೀಯ ಪ್ರಬುದ್ಧತೆಯ ದೃಷ್ಟಿಯಿಂದ ಅದು ಯಾವ ಮಟ್ಟ ಮುಟ್ಟಿದೆ ಎಂಬುದನ್ನು ಸೂಚಿಸುತ್ತದೆ. ಅದರ ಹಿರಿಯ ನಾಯಕರು ಯಾವುದೇ ಆಧಾರಗಳಿಲ್ಲದೇ ಇವರ ಗುಣಗಾನ ಮಾಡುವ ಪರಿ ಯಾವುದೇ ಸಂಬಳದಾರ ವಂದಿಮಾಗಧರನ್ನು ನಾಚಿಸುವಂತಿದೆ. ಈ ನಾಯಕ ಹೊಸ ಜವಾಬ್ದಾರಿಯನ್ನು ವಹಿಸಿಕೊಂಡ ಸಂದರ್ಭದಲ್ಲಿ ಮಾಡಿದ 'ಭರ್ಜರಿ' ಭಾಷಣದಲ್ಲಿ ಜನರ ಮುಂದೆ ಇಟ್ಟಿದ್ದಾದರೂ ಏನು? ಅಡಿಗೆ ಮನೆಗೆ ಮೂರು ಹೆಚ್ಚುವರಿ ಸಿಲಿಂಡರುಗಳ ಮತ್ತು ಜೈನರಿಗೆ ಅಲ್ಪಸಂಖ್ಯಾತರೆಂಬ ವಿಶೇಷ ಸವಲತ್ತುಗಳ ಸ್ಥಾನಮಾನದ ಆಮಿಷಗಳು. ಕಳೆದ ಅರವತ್ತೈದು ವರ್ಷಗಳ ರಾಜಕಾರಣದ ಅದೇ ಹಳೇ ಸರಕು. ಕಾಂಗ್ರೆಸ್ ನಿಜವಾಗಿ ದಿಕ್ಕುಗಾಣದಾಗಿದೆ.

ಇದರ ಸ್ಥಳೀಯ ಪರಿಣಾಮಗಳೇ ನಮ್ಮ ಸಿದ್ಧರಾಮಯ್ಯನವರು ಒಂದಾದರಮೇಲೊಂದು ನಡೆಸುತ್ತಿರುವ ಜಾತಿ ಸಮ್ಮೇಳನಗಳು. ಅರಸು, ಬಂಗಾರಪ್ಪ, ಮೊಯ್ಲಿ, ಧರಂಸಿಂಗ್ ಮತ್ತು ತಮ್ಮಂಥವರು ಮುಖ್ಯಮಂತ್ರಿಗಳಾಗಲು ಕಾಂಗ್ರೆಸ್ಸಿನಲ್ಲಿ ಮಾತ್ರ ಸಾಧ್ಯವೆಂದು ಅವರು ಹೇಳಿದ್ದಾರೆ. ಸಿದ್ಧರಾಮಯ್ಯ ಕಾಂಗ್ರೆಸ್ ಸೇರುವ ಮುನ್ನ ಈ ಮಹನೀಯರುಗಳ ರಾಜಕಾರಣದ ಬಗ್ಗೆ ಅವರು ಆಡುತ್ತಿದ್ದ ಮಾತುಗಳನ್ನು ನೆನಪಿಸಿಕೊಂಡರೆ ಈ ಮಾತುಗಳ ಹಿಂದಿರುವುದು ಸಮಯಸಾಧಕತನ ಮಾತ್ರ ಎಂಬುದು ಅರಿವಾದೀತು. ಸಿದ್ಧರಾಮಯ್ಯ ಮುಖ್ಯಮಂತ್ರಿಯಾದಾಗ ಅವರನ್ನು ಸ್ವಲ್ಪವಾದರೂ ಬಲ್ಲವರಾಗಿದ್ದ ನಮ್ಮಂತವರಿಗೆ ಅವರು ರಾಜ್ಯ ರಾಜಕಾರಣಕ್ಕೆ ಹೊಸ ಘನತೆ ಮತ್ತು ಮರ್ಯಾದೆಯನ್ನು ತಂದಾರು ಎಂಬ ಆಸೆಯಿತ್ತು. ಆದರೆ ಅವರು ಇತ್ತೀಚಿನ ಎರಡು ಲೋಕಸಭಾ ಉಪಚುನಾವಣೆಗಳು ಮತ್ತು ಮೊನ್ನೆಯ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ತಮಗೆ ತಾವೇ ಮೋಸಮಾಡಿಕೊಂಡ ರಾಜಕಾರಣದ ರೀತಿ ಅಂತಹ ಆಸೆಯನ್ನು ಕಮರಿಸಿಬಿಟ್ಟಿದೆ. ಅವರು ಅಪ್ಪಟ ಕಾಂಗ್ರೆಸ್ಸಿಗರಾಗಿಬಿಟ್ಟಿದ್ದಾರೆ. ಹಾಗೆ ಆದಾಗ ಮಾತ್ರ ಮುಖ್ಯಮಂತ್ರಿ ಆಗಲು ಸಾಧ್ಯವೆಂದು ಅವರೇ ಹೇಳಿಕೊಂಡೂಬಿಟ್ಟಿದ್ದಾರಲ್ಲಾ! ಹಾಗಿರುವಾಗ ಅವರು ಆ ಅಧಿಕಾರವನ್ನು ಪಣಕ್ಕೊಡ್ಡಿ ಧೀರ ರಾಜಕಾರಣ ಮಾಡುವ ಗೈರತ್ತಾದರೂ ಅವರಿಗೆ ಎಲ್ಲಿಂದ ಬಂದೀತು?

ಹಾಗೆ ಅಧಿಕಾರವನ್ನು ಪಣಕ್ಕೊಡ್ಡುವ ಧೈರ್ಯವಿರುವುದೆಂದರೆ ಸದ್ಯಕ್ಕೆ ಅರವಿಂದ ಕೇಜ್ರಿವಾಲರಿಗೆ ಮಾತ್ರವೆಂದು ಕಾಣುತ್ತದೆ. ಅದಕ್ಕೆ ಕಾರಣ, ಅವರು ನಂಬಿರುವುದು ಅಧಿಕಾರ ರಾಜಕಾರಣವನ್ನಲ್ಲ. ಬದಲಿಗೆ, ಜನತೆಯ ರಾಜಕಾರಣವನ್ನು. ಹಾಗಾಗಿಯೇ ಅವರು ಜನತೆಯ ಹಿತದೃಷ್ಟಿಯಿಂದ ತಮ್ಮ ರಾಜ್ಯದ ಪೋಲಿಸ್ ವ್ಯವಸ್ಥೆಯಲ್ಲಿ ಆಗಬೇಕಾದ ಬದಲಾವಣೆಗಾಗಿ ಜನತೆಯೊಂದಿಗೆ ಬೀದಿಯಲ್ಲಿ ಅಹೋರಾತ್ರಿ ಧರಣಿ ಕೂತರು. ತಾವು ಮುಖ್ಯಮಂತ್ರಿ ಎಂಬ ಸ್ಥಾನ ಮರ್ಯಾದೆಯ ಪ್ರಶ್ನೆ ಅವರನ್ನು ಕಾಡಲಿಲ್ಲ. ಏಕೆಂದರೆ ಇಂತಹ ಪ್ರಶ್ನೆಗಳೆಲ್ಲ, ಈಗ ಜಾರಿಯಲ್ಲಿದ್ದು ಜನತೆಗೆ ಕಂಟಕಪ್ರಾಯವಾಗಿರುವ ಅಧಿಕಾರ ರಾಜಕಾರಣ ಸೃಷ್ಟಿಸಿರುವ ಪರಿಕಲ್ಪನೆಗಳು. ಇಂತಹುದೇ ಇನ್ನೊಂದು ಜಡವಾದ ಪರಿಕಲ್ಪನೆಯೆಂದರೆ ಕಾನೂನಿನ ಆಳ್ವಿಕೆ. (Rule of Law) ಆದರೆ ಈ ಪರಿಕಲ್ಪನೆ ಅಥವಾ ಬಹಳ ಕುಪ್ರಸಿದ್ಧವಾಗಿರುವ ಕಾನೂನು ತನ್ನ ದಾರಿಯಲ್ಲಿ ನಡೆಯಲು ಬಿಡಬೇಕು ('Let law have its own course') ಎಂಬ 'ನಾಣ್ನುಡಿ'ಗಳು ವಾಸ್ತವದಲ್ಲಿ ಜನತೆಯ ವಿರುದ್ಧವೇ ಕೆಲಸ ಮಾಡುತ್ತಿರುವಾಗ ಅವುಗಳನ್ನು ಪ್ರಶ್ನಿಸದೇ ಅವನ್ನು ಜನತೆಯ ಪರವಾಗಿ ಮರು ವಿನ್ಯಾಸ ಗೊಳಿಸುವುದಾದರೂ ಹೇಗೆ? ಆಗ ಕೆಲವು ಹಳೆಯ 'ಮರ್ಯಾದೆ'ಗಳು ಉಲ್ಲಂಘಿಸಲ್ಪಡುತ್ತವೆ. ಕೆಲವು ರೂಢಿಗಳು ಕುಸಿದು ಬೀಳುತ್ತವೆ.

ಇಲ್ಲಿ ಮುಖ್ಯ ಪ್ರಶ್ನೆ, ಇದನ್ನೆಲ್ಲ ಏಕೆ ಮತ್ತು ಹೇಗೆ ಮಾಡಲಾಗುತ್ತದೆ ಎಂಬುದೇ ಆಗಿದೆ. ಏಕೆ ಮಾಡಲಾಗುತ್ತದೆ ಎಂದರೆ, ಪ್ರಜಾಪ್ರಭುತ್ವ ಎಂದರೆ ಪ್ರತಿನಿಧಿಗಳ, ಅಧಿಕಾರಿಗಳ,

ಪೋಲೀಸರ ಪ್ರಭುತ್ವವಾಗಿ ಹೋಗಿರುವುದನ್ನು ಪ್ರಜೆಗಳದ್ದೇ ಪ್ರಭುತ್ವವನ್ನಾಗಿ ಮಾಡುವ ತುರ್ತು ಅಗತ್ಯವಿದೆ. ತಡ ಮಾಡಿದರೆ ಅನಾಹುತವಾಗುವ ಎಲ್ಲ ಸೂಚನೆಗಳು ಕಾಣುತ್ತಿವೆ. ಇನ್ನು ಹೇಗೆ ಮಾಡಲಾಗುತ್ತಿದೆಯೆಂದರೆ, ಅಹಿಂಸಾತ್ಮಕ ಮತ್ತು ಸವಿನಯ ಕಾನೂನು ಭಂಗದ ಮೂಲಕ. ಹಾಗೆ ಮಾಡಿದಾಗ ತಿಂದ ನೀರು ಅಲ್ಲಾಡದಂತೆ ಕೂತಿದ್ದಂತೆಯೇ ಬದಲಾವಣೆ ಬಯಸುವ ಜನಕ್ಕೆ ಗಾಬರಿಯಾಗುತ್ತದೆ, ಆತಂಕವಾಗುತ್ತದೆ. ಅದೇ ವೇಳೆ ಪ್ರಜೆಗಳ ಹೆಸರಿನಲ್ಲಿ ಪ್ರಭುತ್ವ ನಡೆಸುತ್ತಿರುವ ಸಾಂಪ್ರದಾಯಿಕ ರಾಜಕಾರಣಿಗಳಿಗೆ, ಅವರ ಚೇಲಾ ಅಧಿಕಾರಿ ಮತ್ತು ಪೋಲೀಸರಿಗೂ ಭಯ–ಆತಂಕವಾಗುವುದು ಸಹಜ.

ಈ ದೃಷ್ಟಿಯಿಂದ ಆಂ ಆದ್ಮಿ ಪಕ್ಷ ದೆಹಲಿಯಲ್ಲಿ ನಡೆಸಿದ ಧರಣಿಗೆ ರಾಷ್ಟ್ರಾದ್ಯಂತ ಈ ವರ್ಗಗಳಿಂದ ಬಂದ ಪ್ರತಿಕ್ರಿಯೆ ಯಾರಿಗೂ ಆಶ್ಚರ್ಯವನ್ನುಂಟುಮಾಡದು. ಈ ಶಕ್ತಿಗಳು ಆಂ ಆದ್ಮಿ ಪಕ್ಷಕ್ಕೆ ಸರ್ಕಾರ ನಡೆಸುವುದು ಗೊತ್ತಿಲ್ಲ ಎಂದೆಲ್ಲ ಪ್ರಚಾರ ಮಾಡುತ್ತಿವೆ. ಆದರೆ ಜನತೆಯ ಬಳಿ ಐದು ವರ್ಷಗಳಿಗೊಮ್ಮೆ ಮಾತ್ರ ಹೋಗುವ ಆರಾಮ ರಾಜಕಾರಣದಿಂದ ಉದ್ಭವವಾದ ರೂಢಿ–ಸಂಪ್ರದಾಯ–ವಿಧಾನ ಹಾಗೂ ಅಡಳಿತ ಮೌಲ್ಯಗಳಾಚೆಗೆ ದೃಷ್ಟಿ ಹಾಯಿಸಲಾಗದಷ್ಟು ತಮ್ಮ ಜನದೂರ ಸುಖಗಳಲ್ಲಿ ಜಡವಾಗಿ ಹೋಗಿರುವ ಇವರಿಗೆ ಸರ್ಕಾರ ಕೂಡ ಒಂದು ಜನಾಂದೋಲನದಂತೆ ನಡೆಯಬಲ್ಲುದು ಎಂಬ ಕಲ್ಪನೆಯಾದರೂ ಹೇಗೆ ಸಾಧ್ಯ?

ಈ ಧರಣಿಯಿಂದ ಆಂ ಆದ್ಮಿ ಪಕ್ಷ ಸಾಕಷ್ಟು ಜನಬೆಂಬಲ ಕಳೆದುಕೊಂಡಿದೆ ಎಂದು ಹೇಳಲಾಗುತ್ತಿದೆ. ಹಾಗೆ ಆಗಿದ್ದರೆ ಅದು ಒಳ್ಳೆಯದಕ್ಕೇ ಆಗಿದೆ. ಯಾವುದೇ ಪ್ರಶ್ನೆಗಳನ್ನಾಗಲೀ ಉಲ್ಲಂಘನೆಗಳನ್ನಾಗಲೀ ನಿರೀಕ್ಷಿಸದೆ ಬದಲಾವಣೆಯ ಬಗ್ಗೆ ಭೋಳೆ ಭೋಳೆಯಾಗಿ ಯೋಚಿಸಿ ಈ ಪಕ್ಷವನ್ನು ಬೆಂಬಲಿಸಿದ್ದವರು ಪಕ್ಷದಿಂದ ದೂರವಾಗಿದ್ದಲ್ಲಿ ಪಕ್ಷದ ಸಮರ್ಥ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯದೇ. ಹಾಗೆ ನೋಡಿದರೆ ಪಕ್ಷ ಈಗ ಕೆಲ ಕಾಲದ ತನ್ನ ಸುಲಭ ಜನಪ್ರಿಯತೆಯಲ್ಲಿ ಗಳಿಸಿಕೊಂಡಿದ್ದ ಅನಗತ್ಯ ಚರ್ಬಿಯನ್ನು ಕಳೆದುಕೊಂಡು ಮತ್ತೆ ಆರೋಗ್ಯಕರ ರೂಪ ಮತ್ತು ಮನಸ್ಸನ್ನು ಪಡೆದಂತಾಗಿದೆ. ಈ ಚರ್ಬಿಯಿಂದ ಪಕ್ಷ ಕೆಲ ಕಾಲ ಮೈಮರೆತಿತ್ತೆಂಬುದೂ ನಿಜ. ಸೋಮನಾಥ ಭಾರ್ತಿ ಮತ್ತು ಕುಮಾರ್ ವಿಶ್ವಾಸ್‌ರಂತಹ ನಾಯಕರ ಮಿತಿ ಮೀರಿದ ಉತ್ಸಾಹ ಮತ್ತು ಮಾತುಗಾರಿಕೆ ಒಳ್ಳೆಯ ಸೂಚನೆಗಳಾಗಿರಲಿಲ್ಲ. ದೊಡ್ಡ ಕೆಲಸ ಮಾಡಲು ಹೊರಟಿರುವ ಜನ ದೊಡ್ಡದಾಗಿ ಯೋಚಿಸಬೇಕು. ಸಣ್ಣತನ, ಸಣ್ಣ ಮಾತು ಸಲ್ಲ.

ಮಾರ್ಚ್, ೨೦೧೪

ಆಂ ಆದ್ಮಿ ಪಕ್ಷ ಎತ್ತ ಸಾಗಿದೆ?

ಪ್ರಿಯ ಓದುಗರೇ,

ಲೋಕಸಭಾ ಚುನಾವಣೆಗಳು ಬಹು ಸನಿಹಕ್ಕೇ ಬಂದಿವೆ. ಮುಂದಿನ ಐದು ವರ್ಷಗಳ ಕಾಲ ರಾಷ್ಟ್ರವನ್ನು ಮುನ್ನಡೆಸುವ ಚುಕ್ಕಾಣಿಯನ್ನು ಯಾರ ಕೈಗೆ ಕೊಡಬೇಕು ಎಂಬ ತೀರ್ಮಾನವನ್ನು ನಾವೆಲ್ಲ ಸೇರಿ ಮಾಡಬೇಕಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ನಮ್ಮನ್ನು ಆಳಿವೆ. ಆದರೆ ಅವೆರಡೂ ಒಂದೇ ನಾಣ್ಯದ ಎರಡು ಮುಖಗಳೆಂದು ಈಗ ಸಾಬೀತಾಗಿದೆ. ಎರಡೂ, ಭಾರತದ ಬಡವ-ಶ್ರೀಮಂತರಿಬ್ಬರನ್ನೂ ದುರಾಸೆಯ ಬೆಂಕಿಗೆ ತಳ್ಳಿ ಮತ್ತೆ ಈ ದೇಶವನ್ನು ಜಾಗತೀಕರಣವೆಂಬ ಮಾಯಾ ಕುದುರೆ ಮೇಲೆ ಕುಳ್ಳರಿಸಿ ಪಶ್ಚಿಮದ ನವ ವಸಾಹತುಶಾಹಿಯ ಗುಲಾಮಗಿರಿಗೆ ತಳ್ಳಲು ಸಿದ್ಧವಾಗಿರುವ ಅವಿವೇಕಿ ಪಕ್ಷಗಳೇ ಆಗಿವೆ. ಒಂದು ವ್ಯತ್ಯಾಸವೆಂದರೆ ಒಂದು ಭ್ರಷ್ಟ ಪಕ್ಷವಾದರೆ, ಇನ್ನೊಂದು ದುಷ್ಟ ಪಕ್ಷವಾಗಿದೆ. ಮಿಕ್ಕವು ವ್ಯಕ್ತಿ ಅಥವಾ ಕುಟುಂಬ ಕೇಂದ್ರಿತ ಪಕ್ಷಗಳಿಂದ ಕೂಡಿದ ನಂಬಿಕೆಗೆ ಅರ್ಹವಲ್ಲದ ಅಸ್ಥಿರ ಗುಂಪು. ಹೀಗಾಗಿ ನಮ್ಮ ಆಯ್ಕೆ ಕಷ್ಟವಾಗಿದೆ. ಆಯ್ಕೆ ಇದ್ದರೆ ಇದೊಂದೆ: ಈ ಎಲ್ಲ ರಾಜಕೀಯ ಪಕ್ಷಗಳು ಪ್ರತಿನಿಧಿಸುವ ಜನದೂರವಾದ ರಾಜಕೀಯ ಸಂಸ್ಕೃತಿಗೆ ಪರ್ಯಾಯವಾದ ಒಂದು ರಾಜಕೀಯ ಸಂಸ್ಕೃತಿ ನಿರ್ಮಾಣದ ಸಾಧ್ಯತೆಗಳ ಕಡೆ ಕಣ್ಣು ಹಾಯಿಸುವುದು. ಹಾಗೆ ನೋಡಿದಾಗ ನಮಗೆ ದೂರದಲ್ಲಾದರೂ ಕಾಣುವುದು ಆಂ ಆದ್ಮಿ ಪಕ್ಷ. (ಆಪ್)

ಇಂದು ರಾಷ್ಟ್ರಾದ್ಯಂತ ರಾಜಕೀಯ ವಲಯಗಳಲ್ಲಿ ಅತ್ಯಂತ ಹೆಚ್ಚು ಚರ್ಚಿತವಾಗುತ್ತಿರುವ ವಿಷಯವೆಂದರೆ, ಈ ಆಂ ಆದ್ಮಿ ಪಕ್ಷದ ಭವಿಷ್ಯ. ನಿರ್ದಿಷ್ಟವಾಗಿ ಹೇಳುವುದಾದರೆ, ಅದರ ರಾಜಕೀಯ ಸಾಮರ್ಥ್ಯ ಮತ್ತು ಸಾಧ್ಯತೆಗಳು. ಏಕೆಂದರೆ ಅದೀಗ ದೆಹಲಿ ರಾಜ್ಯದಲ್ಲಿ ಅಧಿಕಾರದ ಪ್ರಯೋಗವನ್ನು, ಅದನ್ನು ಬೆಂಬಲಿಸಿದ್ದಾಗಿ ಹೇಳಿಕೊಳ್ಳುವ

ಹಲವರ ಟೀಕೆಗಳ ಮಧ್ಯೆಯೇ ಅರ್ಧದಲ್ಲೇ ಕೈಬಿಟ್ಟು ರಾಷ್ಟ್ರ ರಾಜಕಾರಣದತ್ತ ತನ್ನ ಗಮನ ಹರಿಸಿದೆ. ಮೂರು ತಿಂಗಳ ಹಿಂದೆಯಷ್ಟೇ ದೆಹಲಿ ವಿಧಾನ ಸಭಾ ಚುನಾವಣೆಗಳಲ್ಲಿ ಎಲ್ಲ ರಾಜಕೀಯ ಪಂಡಿತರ ಮತ್ತು ಭವಿಷ್ಯಕಾರರನ್ನೂ ದಂಗು ಬಡಿಸಿ, ಬಹುಮತವನ್ನಲ್ಲದಿದ್ದರೂ ಅಪಾರ ಮತ್ತು ಅನಿರೀಕ್ಷಿತ ಪ್ರಮಾಣದಲ್ಲಿ ಜನಮನ್ನಣೆ ಗಳಿಸಿ ಜನಮನದಲ್ಲಿ ರಾಜಕಾರಣದ ಬಗ್ಗೆ ಹೊಸ ನಿರೀಕ್ಷೆಗಳನ್ನು ಹುಟ್ಟು ಹಾಕಿತ್ತು. ದೀರ್ಘಕಾಲಿಕ ಪರಿಣಾಮದಲ್ಲಿ ದೇಶದ ಸಮಗ್ರತೆಯನ್ನೇ ಜಖಂಗೊಳಿಸಬಲ್ಲುದಾಗಿದ್ದ ರಾಜಕಾರಣ ಕುರಿತೇ ಜನರಲ್ಲಿ ಬೆಳೆಯತೊಡಗಿದ್ದ ಸಿನಿಕತೆಯನ್ನು ಕರಗಿಸುವ ಆಸೆ ಹುಟ್ಟಿಸಿತ್ತು. ರಾಜಕಾರಣ ಕುರಿತ ಸಾಂಪ್ರದಾಯಿಕ ನಂಬಿಕೆಗಳನ್ನು ಬುಡಮೇಲುಗೊಳಿಸಿ ಜನರಾಜಕಾರಣದ ಭರವಸೆ ನೀಡಿತ್ತು.

ಆದರೆ ಈ ಪಕ್ಷ ದೆಹಲಿಯಲ್ಲಿ ೪೯ ದಿನಗಳ ಆಡಳಿತ ನಡೆಸಿ ರಾಜೀನಾಮೆ ನೀಡಿದ ಸಂದರ್ಭದಲ್ಲಿ ಆ ಪಕ್ಷದ ಬಗ್ಗೆ ಆಶಾಭಾವನೆ ತಾಳಿದ್ದ ಜನಸಾಮಾನ್ಯರಲ್ಲಿ ಹಲವು ಪ್ರಶ್ನೆಗಳನ್ನೂ, ಅನುಮಾನಗಳನ್ನೂ ಹುಟ್ಟುಹಾಕಿದೆ. ರಾಜಕೀಯ ಅಧಿಕಾರವನ್ನು ಹುಡುಗಾಟದ ಮಟ್ಟಕ್ಕೆ ಇಳಿಸಿ ಆಂ ಆದ್ಮಿ ಪಕ್ಷವು ಈ ಬೇಜವಾಬ್ದಾರಿತನದಿಂದಾಗಿ ತನ್ನಲ್ಲಿ ಜನರಿಟ್ಟಿದ್ದ ಭರವಸೆಯನ್ನು ಭಂಗಗೊಳಿಸಿಕೊಂಡಿದೆ ಎಂಬ ಟೀಕೆ ಅವರ ಬೆಂಬಲಿಗರ ಮಧ್ಯದಿಂದಲೇ ಕೇಳಿಬರುತ್ತಿದೆ. ಮುಖ್ಯವಾಗಿ ಇಂದಿನ ರಾಜಕೀಯ ವಾತಾವರಣದಲ್ಲಿ ತನಗೆ ದೊರೆತಿದ್ದ ಅಪರೂಪದ ಅಧಿಕಾರದ ಅವಕಾಶವನ್ನು ಆದಷ್ಟೂ ಹೆಚ್ಚು, ದಿನನಿತ್ಯದ ಜನರ ಸಮಸ್ಯೆಗಳನ್ನು ಪರಿಹರಿಸಲು ಬಳಸಿಕೊಳ್ಳುವ 'ಜಾಣ್ಮೆ' ತೋರದೆ, ತನ್ನೆಲ್ಲ ಭವಿಷ್ಯವನ್ನೂ ಬುಡಮಟ್ಟದ ರಾಜಕೀಯ ಪರಿವರ್ತನೆಯ ಅಸ್ತ್ರ ಎಂದು ಅದು ನಂಬಿರುವ 'ಜನ ಲೋಕಪಾಲ್ ಮಸೂದೆ' ಎಂಬ ಭ್ರಷ್ಟಾಚಾರ ನಿವಾರಣೆಯ ಅಸ್ತ್ರದ ಮೇಲೆ ಹೂಡುವ ರಾಜಕೀಯ ಅಪ್ರಬುದ್ಧತೆಯನ್ನು ಪ್ರದರ್ಶಿಸಿದೆ; ಅದನ್ನು ಕೂಡ ತನ್ನ ರಾಷ್ಟ್ರೀಯ ರಾಜಕಾರಣದ ಹಂಬಲನ್ನು ಪೋಷಿಸಿಕೊಳ್ಳಲು ಬಳಸಿಕೊಂಡಿದೆ ಎಂಬ ಅಭಿಪ್ರಾಯ ಅದರ ಬಿಂಬವನ್ನು ಮಸುಕುಗೊಳಿಸಿದೆ ಎಂಬುದಂತೂ ಸತ್ಯ.

ಆದರೆ ಅದೇ ವೇಳೆಯಲ್ಲಿ ಆಂ ಆದ್ಮಿ ಪಕ್ಷ ಎಲ್ಲ ರಾಜಕೀಯ ಪಕ್ಷಗಳಂತೆ ರಾಜಕೀಯ ಅಧಿಕಾರಕ್ಕೆಂದೇ, ಅದನ್ನೇ ಗುರಿಯಾಗಿಸಿಕೊಂಡು ರಚನೆಯಾದ ಪಕ್ಷವಲ್ಲ. ರಾಜಕೀಯ ಅಧಿಕಾರ ಅದಕ್ಕೆ ಮಾರ್ಗ ಮಾತ್ರ. ಅದು ಪಕ್ಷವನ್ನು ಹಾದಿ ತಪ್ಪಿಸುವಂತಹ ಸಂದರ್ಭ ಸೃಷ್ಟಿಸಿದರೆ ಅದು ಆಗ ವರ್ಜ್ಯವೇ ಸರಿ ಏಕೆಂದರೆ, ಅದು ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಯಾವುದೇ ಸಣ್ಣ ರಾಜಿಯೂ ತನ್ನ ಅಸ್ತಿತ್ವದ ಅರ್ಥಪೂರ್ಣತೆಯನ್ನೂ, ನೈತಿಕತೆಯನ್ನೂ ಒಮ್ಮೆಗೇ ಬುಡಮೇಲುಗೊಳಿಸಬಲ್ಲುದು ಎಂಬ ಎಚ್ಚರದೊಂದಿಗೆ ಮತ್ತು ತಾನು ಮೂಲಭೂತ ಬದಲಾವಣೆಯ ದೀರ್ಘಕಾಲಿಕ ರಾಜಕಾರಣ ಮಾಡುವ ಉದ್ದೇಶದ ಮಹತ್ವಾಕಾಂಕ್ಷೆಯೊಂದಿಗೇ ಸ್ಥಾಪಿತವಾದ ಪಕ್ಷ.

ಹಾಗಾಗಿ ಅದು ಹೇಗೋ ಅಧಿಕಾರಕ್ಕಂಟಿಕೊಂಡು ಸಮಯಕ್ಕೆ ತಕ್ಕ ರಾಜಕೀಯ ವರಸೆಗಳನ್ನು ಅಳವಡಿಸಿಕೊಂಡು ತನ್ನ ಆತ್ಮವನ್ನೇ ನಾಶಪಡಿಸಿಕೊಳ್ಳಲು ಅದು ಬಯಸಲಿಲ್ಲ. ಬದಲಿಗೆ, ತನ್ನ ಮೂಲ ಘೋಷಿತ ಉದ್ದೇಶವಾದ ರಾಷ್ಟ್ರದ ರಾಜಕಾರಣದ ಮೂಲ ಕೊಳಕನ್ನು ತೊಳೆಯಬಲ್ಲುದೆಂದು ತಾನು ನಂಬಿರುವ ಜನ ಲೋಕಪಾಲ್ ಮಸೂದೆ ಮತ್ತು ಅದರ ಮುಂದಿನ ಕ್ರಮವಾಗಿ ಜನರ ಹತ್ತಿರಕ್ಕೇ ನಿರ್ಧಾರಗಳ ಅಧಿಕಾರವನ್ನು ಒಯ್ಯುವ ಉದ್ದೇಶವುಳ್ಳ ಸ್ವರಾಜ್ ಮಸೂದೆಗಳನ್ನು ಸ್ಥಾಪಿತ ರಾಜಕೀಯ ಹಿತಾಸಕ್ತಿಗಳು ತಾಂತ್ರಿಕ ನೆಪಗಳನ್ನೊಡ್ಡಿ ತಡೆಹಿಡಿಯುವುದು ಖಚಿತವಾದಾಗ ಮುಖ್ಯಮಂತ್ರಿ ಕೇಜ್ರಿವಾಲ್ ರಾಜೀನಾಮೆ ನೀಡಿದರು. ಜನಲೋಕಪಾಲ ಮಸೂದೆಗೆ ಒಡ್ಡಿದ ತಡೆಯ ಹಿಂದೆ ಈ ದೇಶದ ರಾಜಕಾರಣವನ್ನು ತನ್ನ ಅಪಾರ ಹಣಬಲದಿಂದ ನಿಯಂತ್ರಿಸುತ್ತಿರುವ ಕಾರ್ಪೊರೇಟ್ ಲೋಕದ ಅತ್ಯುನ್ನತ ಪ್ರತಿನಿಧಿಯಾದ ಮುಖೇಶ್ ಅಂಬಾನಿಯ ವ್ಯವಹಾರಗಳ ವಿರುದ್ಧ ಕೇಜ್ರಿವಾಲ್ ದನಿ ಎತ್ತಿದ್ದರ ಪ್ರತಿಧ್ವನಿ ಅಡಗಿತ್ತು. ಅಲ್ಲದೆ, ಅಂಬಾನಿ ಮತ್ತು ಪ್ರಮುಖ ರಾಜಕೀಯ ಪಕ್ಷಗಳ ನಾಯಕರ ನಡುವಣ 'ಕೊಡು-ಕೊಳು' ವ್ಯವಹಾರದ ಬಗೆಗೆ ದೆಹಲಿ ಮುಖ್ಯಮಂತ್ರಿಯಾಗಿ ಕೇಜ್ರಿವಾಲ್ ತಮಗಿದ್ದ ನ್ಯಾಯಾಂಗ ವ್ಯಾಪ್ತಿಯ ಅಧಿಕಾರವನ್ನು ಬಳಸಿ ತನಿಖೆ ಆದೇಶಿಸಿದೊಡನೆ ಎಚ್ಚೆತ್ತುಕೊಂಡ ಕಾಂಗ್ರೆಸ್ ಮತ್ತು ಬಿಜೆಪಿಗಳು ಒಂದಾಗಿ ದೆಹಲಿ ಸರ್ಕಾರವನ್ನು ಉರುಳಿಸಿಯೇ ತೀರುವ ಸಂಕಲ್ಪ ಮಾಡಿರುವುದರ ಮಾಹಿತಿ ಪಕ್ಷದ ಅರಿವಿಗೆ ಬಂದುದೂ ಸರ್ಕಾರದ ರಾಜೀನಾಮೆಗೆ ಕಾರಣವಾಗಿತ್ತು. ಹಾಗಾಗಿ ಇದನ್ನು ಬೇಜವಾಬ್ದಾರಿ ನಡವಳಿಕೆ ಎಂದು ಕರೆಯಲಾಗದೇನೋ.

ಏಕೆಂದರೆ, ತಾನು ಅಧಿಕಾರದಲ್ಲಿದ್ದ ೪೯ ದಿನಗಳಲ್ಲಿ ಆಂ ಆದ್ಮಿ ಪಕ್ಷದ ಸರ್ಕಾರ ಮಾಡಿದ ಕೆಲಸಗಳೇನೂ ಕಡಿಮೆಯಲ್ಲ. ತಾನು ಆಶ್ವಾಸನೆ ನೀಡಿದಂತೆ, ಒಂದು ನಿರ್ದಿಷ್ಟ ಪ್ರಮಾಣದ ಉಚಿತ ನೀರು ಹಂಚಿಕೆ ಮತ್ತು ವಿದ್ಯುತ್ ದರಗಳ ಕಡಿತ ಮಾಡಿದ್ದಲ್ಲದೆ, ವಿದ್ಯುತ್ ದರಗಳ ಅನುಚಿತ ಏರಿಕೆಗೆ ಕಾರಣವೆಂದು ನಂಬಲಾಗಿರುವ ಖಾಸಗಿ ವಿದ್ಯುತ್ ಕಂಪನಿಗಳ ಲೆಕ್ಕಪರಿಶೋಧನೆಗೆ ಆದೇಶ ನೀಡಿದ್ದು ಸಾಮಾನ್ಯ ಆಡಳಿತ ಕ್ರಮವೇನಲ್ಲ. ಈ ಕಂಪನಿಗಳ ಲೆಕ್ಕ ಪರಿಶೋಧನೆಯ ಬೇಡಿಕೆಯನ್ನು ಬಿಜೆಪಿ ಆಡಳಿತದ ದೆಹಲಿ ನಗರಸಭೆ ಮತ್ತು ಕಾಂಗ್ರೆಸ್ ಆಡಳಿತವಿದ್ದ ದೆಹಲಿ ರಾಜ್ಯ ಸರ್ಕಾರಗಳೆರಡೂ, ಒಂದಲ್ಲ ಒಂದು ನೆಪ ಹೇಳಿ ತಳ್ಳಿಹಾಕುತ್ತಲೇ ಬರುತ್ತಾ ಖಾಸಗಿ ಕಂಪನಿಗಳ ಹಿತಾಸಕ್ತಿಯನ್ನು ರಕ್ಷಿಸುತ್ತಲೇ ಬಂದಿದ್ದವು. ಇನ್ನು ದಕ್ಷ ಲಂಚ ನಿರೋಧಕ ದೂರು ವ್ಯವಸ್ಥೆಯನ್ನು ಕಲ್ಪಿಸಿ ದೆಹಲಿ ಸರ್ಕಾರಿ ಕಛೇರಿಗಳಲ್ಲಿ ಲಂಚದ ಹಾವಳಿಯನ್ನು ಗಣನೀಯವಾಗಿ ಕಡಿಮೆ ಮಾಡಿರುವ ಸಾಧನೆ ಸಣ್ಣದೇನಲ್ಲ. ಇದನ್ನು ಹಲವು ಮಾಧ್ಯಮ ಸಮೀಕ್ಷೆಗಳೇ ಸಾಬೀತುಪಡಿಸಿವೆ. ಹಾಗೇ ಸರ್ಕಾರಿ ಆಸ್ಪತ್ರೆಗಳಲ್ಲಿ ಸದಾ ಔಷಧಿಯ ಲಭ್ಯತೆಯನ್ನು ಖಚಿತಪಡಿಸಿರುವ, ದೀನ ದರಿದ್ರರಿಗೆ ರಾತ್ರಿಹೊತ್ತಿನ ಆಶ್ರಯದಾಣಗಳನ್ನು

ನಿರ್ಮಿಸಿರುವ, ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲು ನಡೆಸಿದ ಸಮೀಕ್ಷೆ ಮತ್ತು ಸಿದ್ಧಪಡಿಸಿದ ಯೋಜನೆಗಳು ಜನರ ಗಮನ ಸೆಳೆದಿವೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಪಕ್ಷ ಈ ದೇಶದಲ್ಲಿನ ಎಲ್ಲ ರೀತಿಯ ಅಸಮಾನತೆಗಳ ವಿರುದ್ಧ ಇತ್ತೀಚೆಗೆ ನಡೆಯುತ್ತಿರುವ ಎಲ್ಲ ಹೋರಾಟ ಮತ್ತು ಕಾರ್ಯಕ್ರಮಗಳು ಹತಾಶಮಯವಾಗಿ ವಿಫಲಗೊಳ್ಳಲು ಕಾರಣವಾಗಿರುವ ಚೇಲಾ ಬಂಡವಾಳಶಾಹಿಯ ಪ್ರತೀಕದಂತಿರುವ ಅಂಬಾನಿಯನ್ನು ಎದುರು ಹಾಕಿಕೊಂಡು ತನ್ನ ರಾಜಕಾರಣವನ್ನು ಕಟ್ಟಿಕೊಳ್ಳಲು ಹೊರಟಿರುವಲ್ಲಿ ತೋರಿರುವ ಹೊಸ ರಾಜಕಾರಣ ಕುರಿತ ಅದರ ತಿಳುವಳಿಕೆಯ ಕ್ರಮ ಮತ್ತು ಬದ್ಧತೆ ಅದನ್ನು ಕುರಿತ ಜನರ ನಂಬಿಕೆ ಇಷ್ಟು ಬೇಗ ಹುಸಿಯಾಗಲು ಬಿಡಲಾರದಂಥವು. ನಿಜ, ಆಪ್‌ನಿಂದ; ಹೇಗೋ ಅಧಿಕಾರ ಉಳಿಸಿಕೊಂಡು ಜನರಿಗೆ ಒಂದಿಷ್ಟು ತತ್ಕಾಲೀನ ಪರಿಹಾರ ಒದಗಿಸುವ ರಾಜಕಾರಣವನ್ನು ನಿರೀಕ್ಷಿಸಿದವರಿಗೆ ನಿರಾಶೆಯಾಗಿದೆ; ಅಂಥವರ ಬೆಂಬಲ ಕರಗಿದೆ. ಅದೇನೇ ಇರಲಿ ಮತ್ತು ಹೊರಗಿನವರು ಏನೇ ಹೇಳಲಿ, ದೆಹಲಿ ಜನ ಕಳೆದ ವಿಧಾನ ಸಭೆ ಚುನಾವಣೆಗಳಿಗಿಂತ ಹೆಚ್ಚಿನ ಬೆಂಬಲವನ್ನು ಆಪ್‌ಗೆ ನೀಡುವ ಸಾಧ್ಯತೆಗಳನ್ನು ಇತ್ತೀಚಿನ ಮಾಧ್ಯಮ ಸಮೀಕ್ಷೆಗಳು ಸೂಚಿಸುತ್ತಿವೆ.

ಹೌದು, ಹಿಂದಿರುಗಿ ನೋಡಿದಾಗ ಆಪ್ ಬಹುಮತವಿಲ್ಲದಿದ್ದರೂ ಸರ್ಕಾರ ರಚಿಸಲು ಮುಂದಾಗಿದ್ದು ತಪ್ಪೇನೋ ಎನಿಸುತ್ತದೆ. ಆದರೆ ಅದು ಈಗ ಹಿಂದಿರುಗಿ ನೋಡಿದಾಗ ಮಾತ್ರ ಅನಿಸುವ ಸಂಗತಿ ಮಾತ್ರ. ಆಗ ಅದು ದೆಹಲಿಯ ಜನತೆಯ ಮೇಲೆ ಇನ್ನೊಂದು ಚುನಾವಣೆ ಹೇರಬಾರದೆಂಬ ಎಲ್ಲ ಪಕ್ಷಗಳ ಅಭಿಮತದ ಅಭಿವ್ಯಕ್ತಿ ಮಾತ್ರವಾಗಿತ್ತು. ಅದರ ಪರಿಣಾಮವಾಗಿ ಆಪ್‌ಗೆ ಆದ ಅನುಭವ ಒಳ್ಳೆಯದಕ್ಕೇ ಆಯಿತು ಎಂದು ಭಾವಿಸಬಹುದು. ಅನುಭವ ಅತ್ತ ಇರಲಿ; ರಾಜಕೀಯ ತರಬೇತಿಯಾಗಲಿ, ಶಿಕ್ಷಣವಾಗಲಿ ಇಲ್ಲದ ಕೇವಲ ಆರು ತಿಂಗಳ ಈ ಪಕ್ಷ ಕೆಲವೊಮ್ಮೆ ಆರಂಭಶೂರತ್ವದ ಅತಿ ಉತ್ಸಾಹದಲ್ಲಿ–ಉದಾ.ಗೆ ಸೋಮನಾಥ್ ಭಾರ್ತಿ ಪ್ರಕರಣದಲ್ಲಿ– ಎಳಸು ಎಳಸಾಗಿ ವರ್ತಿಸಿತು. ವಿದ್ಯುತ್ ದರ ಕಡಿಮೆ ಮಾಡಿದ ಆದೇಶದ ಪೂರ್ವಾನ್ವಯತೆಯನ್ನು ಈ ಸಂಬಂಧ ತಾನು ಈ ಮುನ್ನ ನಡೆಸಿದ ಚಳುವಳಿಗೆ ಬೆಂಬಲ ನೀಡದೆ ಪೂರ್ಣ ವಿದ್ಯುತ್ ಬಿಲ್ ಸಂದಾಯ ಮಾಡಿದವರಿಗೆ ನಿರಾಕರಿಸುವ ಮೂಲಕ ತನ್ನ ರಾಜಕೀಯ ಬಾಲಿಶತನವನ್ನು ಪ್ರದರ್ಶಿಸಿತು ಎಂದೇ ಹೇಳಬೇಕು. ಆದರೆ ಈ ತಪ್ಪುಗಳು ಅನುಭವದ ಮೂಲಕ ಸರಿ ಮಾಡಿಕೊಳ್ಳಬಹುದಾದ ತಪ್ಪುಗಳು. ಮುಖ್ಯ ಸಂಗತಿ ಎಂದರೆ ಈ ಪಕ್ಷ ಭ್ರಷ್ಟಾಚಾರದ ಹತ್ತಿರವೂ ಸುಳಿದಿಲ್ಲ. ಜಾತಿವಾದ, ಸ್ವಜನ ಪಕ್ಷಪಾತದ ಯಾವ ಆರೋಪಗಳಿಗೂ ಸಿಕ್ಕಿಲ್ಲ. ತಾನು ಘೋಷಿಸಿದ ಸರಳ ಜೀವನದ ಮೌಲ್ಯಗಳ ವಿಷಯದಲ್ಲಿ ರಾಜಿ ಮಾಡಿಕೊಂಡಿಲ್ಲ. ಇದೆಲ್ಲದರ ದ್ಯೋತಕವೆಂಬಂತೆ, ಮಾಜಿ ಕಾಂಗ್ರೆಸ್ಸಿಗನಾದ ಶಾಸಕನ ಹೊರತಾಗಿ ಈ ಪಕ್ಷದ ಎಲ್ಲ

೨೭ ಶಾಸಕರೂ ಪಕ್ಷಕ್ಕೆ ನಿಷ್ಠರಾಗಿದ್ದು, ವಿಧಾನ ಸಭೆಯನ್ನು ರಾಜ್ಯಪಾಲರು ವಿಸರ್ಜಿಸದೆ ಅಮಾನತ್ತಿನಲ್ಲಿಟ್ಟು ಹೊಸ ರಾಜಕೀಯ ಸಂಯೋಜನೆಗಳ ಸಾಧ್ಯತೆಗಳ ಪರಿಶೀಲನೆಯ ಹೆಸರಿನಲ್ಲಿ ರಾಜಕೀಯ ವ್ಯಾಪಾರದ ಅಂಗಡಿ ತೆರೆಯಲು ಅವಕಾಶ ಮಾಡಿಕೊಟ್ಟಿದ್ದರೂ ಯಾವ ರಾಜಕೀಯ ಆಮಿಷಕ್ಕೂ ಒಳಗಾಗಿದಿರುವುದು ಪಕ್ಷದ ತಾತ್ವಿಕ ತಳಪಾಯ ಭಾವನಾತ್ಮಕವಾಗಿಯಾದರೂ ಎಷ್ಟು ಭದ್ರವಾಗಿದೆ ಎಂಬುದನ್ನು ಸೂಚಿಸುತ್ತದೆ.

ಈ ಪಕ್ಷದ ಬಗೆಗಿರುವ ಒಂದು ಗಂಭೀರವಾದ ಅಸಮಧಾನವೆಂದರೆ ಇದಿನ್ನೂ ತನ್ನ ರಾಜಕೀಯ ಸೈದ್ಧಾಂತಿಕತೆಯನ್ನು ಸ್ಪಷ್ಟಪಡಿಸಿಲ್ಲ ಎಂಬುದು. ಅಂದರೆ ಕೃಷಿ, ಕೈಗಾರಿಕೆ, ವಿದೇಶೀ ಬಂಡವಾಳ ಕುರಿತ ತನ್ನ ನಿಲುವನ್ನಾಗಲೀ, ವಿದೇಶಾಂಗ ವ್ಯವಹಾರಗಳ ರಾಜಕೀಯ ನೀತಿಯನ್ನಾಗಲಿ ಅಥವಾ ಸಾಮಾಜಿಕ ನ್ಯಾಯ ಪರಿಕಲ್ಪನೆ ಕುರಿತ ತನ್ನ ಅಭಿಪ್ರಾಯವನ್ನಾಗಲಿ ಅದು ಈವರೆಗೆ ಪ್ರಕಟಿಸಿಲ್ಲ. ಯೋಗೇಂದ್ರ ಯಾದವ್, ಪ್ರೊ. ಆನಂದ ಕುಮಾರ್, ಪ್ರೊ. ಚಿನೋಯ್‌ರಂತಹ ರಾಜಕೀಯ ಚಿಂತಕರ ಹಾಗೂ ಮೇಧಾ ಪಾಟ್ಕರ್, ಮಲ್ಲಿಕಾ ಸಾರಾಭಾಯಿರಂತಹ ಸಾಮಾಜಿಕ ಹೋರಾಟಗಾರರ ಬಳಗವುಳ್ಳ ಮತ್ತು ರಾಜಮೋಹನ ಗಾಂಧಿ, ಶಿವ ವಿಶ್ವನಾಥನ್ ಮುಂತಾದ ಬುದ್ಧಿಜೀವಿ ಬಳಗವನ್ನುಳ್ಳ ಆಪ್ ಏಕೆ ತನ್ನ ಸಮಗ್ರ ರಾಜಕೀಯ ನೀತಿಯನ್ನು ಘೋಷಿಸಿಲ್ಲ ಎಂಬುದು ಆಶ್ಚರ್ಯವನ್ನುಂಟು ಮಾಡುವ ಸಂಗತಿ. ಸ್ವತಃ ನಾನು ಕೇಜ್ರಿವಾಲ್‌ರಿಗೆ ಮತ್ತು ಯೋಗೇಂದ್ರ ಯಾದವ್ ಅವರಿಗೆ ಈ ಕುರಿತು ಹಲವು ಈ ಮೇಲ್ ಮತ್ತು ದೂರವಾಣಿ ಸಂದೇಶಗಳನ್ನು ಕಳಿಸಿರುವೆ. ಅಂತಹ ನೀತಿ ನಿರೂಪಣೆಯ ಹೇಳಿಕೆ ಹೊರಬರುವವರೆಗೆ ಪಕ್ಷಕ್ಕೆ ನಿಸ್ಸಂದಿಗ್ಧ ಬೆಂಬಲ ಸೂಚಿಸುವುದು ಕೆಲವರಿಗೆ ಅಸಾಧ್ಯವಾಗಬಹುದು. ಏಕೆಂದರೆ ಈ ಪಕ್ಷ ಎಲ್ಲ ರೀತಿಯ ಜನರಿದ್ದ ಅಣ್ಣಾ ಹಜಾರೆ ಆಂದೋಲನದಿಂದ ಒಡೆದು ಬಂದದ್ದು. ನಿಜ. ಅಂಬಾನಿಯನ್ನು ಎದುರು ಹಾಕಿಕೊಂಡಿರುವುದು, ಮೋದಿಯವರ ರಾಜಕಾರಣಕ್ಕೆ ಸವಾಲೆಸೆದಿರುವುದು ಮತ್ತು ಶಾಂತಿಭೂಷಣ್ ಕಾಶ್ಮೀರದ ಮುಸ್ಲಿಂ ಪ್ರಜೆಗಳ ಬಗೆಗೆ ಮತ್ತು ಬಂಧನದಲ್ಲಿರುವ ಹಲವು ಜನಪರ ಹೋರಾಟಗಾರರ ಮೂಲಭೂತ ಹಕ್ಕುಗಳಿಗಾಗಿ ನ್ಯಾಯಾಲಯಗಳಲ್ಲಿ ನಡೆಸಿರುವ ಕಾನೂನಿನ ಹೋರಾಟಗಳನ್ನು ಗಮನಿಸಿದಾಗ ಅದು ತನ್ನ ರಾಜಕೀಯ ನೀತಿಯ ಬಗ್ಗೆ ಒಂದು ಸ್ಥೂಲ ಸೂಚನೆ ನೀಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ರಾಜಕೀಯ ಭ್ರಷ್ಟತೆಯೇ ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಅವನತಿಗೆ ಮುಖ್ಯ ಕಾರಣವೆಂದು ಗುರುತಿಸಿ, ರಾಜಕೀಯ ಅಧಿಕಾರದ ವಿಕೇಂದ್ರೀಕರಣವನ್ನು ಆಧರಿಸಿದ 'ಸ್ವರಾಜ್'ನ್ನು ತನ್ನ ಗುರಿಯನ್ನಾಗಿರಿಸಿಕೊಂಡಿರುವ ಅದರ ಈ ಎರಡು ಸಾರ್ವಜನಿಕ ನೀತಿ ಬದ್ಧತೆಗಳು ನಮ್ಮಲ್ಲಿ ಯಾವುದೇ ಗಂಭೀರ ಅನುಮಾನಗಳನ್ನು ಸದ್ಯಕ್ಕಾದರೂ ಹುಟ್ಟಿಸಬಾರದು. ಆದರೆ ಮುಖ್ಯ ಪ್ರಶ್ನೆ ಎಂದರೆ ಅದೇಕೆ ಅಂತಹ ನೀತಿ ನಿರೂಪಣೆಯನ್ನು ಸಾರ್ವಜನಿಕವಾಗಿ ಪ್ರಕಟಿಸುತ್ತಿಲ್ಲ ಎಂಬುದು.

ಅದೇನೇ ಇರಲಿ, ಬರೀ ಮಾತಾಡುವ, ನಾನಾಗಲೀ, ನೀವಾಗಲಿ ಮಾಡಲಾಗದ ಕೆಲಸವನ್ನು ಕೇಜ್ರಿವಾಲ್ ಮತ್ತು ಅವರ ಸಂಗಡಿಗರು ಮಾಡಿದ್ದಾರೆ. ಹೊಸ ರಾಜಕೀಯ ಸಂಸ್ಕೃತಿ ಬೆಳೆಸಲು ಸಾಧ್ಯವಾಗುವಂತಹ ಒಂದು ಅಪರೂಪದ ವೇದಿಕೆಯನ್ನು ಅವರು ನಿರ್ಮಿಸಿದ್ದಾರೆ. ಅದನ್ನು ವಿಶ್ವಾಸವಿಟ್ಟು ನೋಡೋಣ. ಅದಕ್ಕೆ ಸ್ಪಷ್ಟ ಮತ್ತು ಅಂತಿಮ ರೂಪ ಕೊಡುವಲ್ಲಿ ನಮ್ಮ ಪಾಲಿನ ಸಾಧ್ಯತೆಗಳನ್ನು ಪರಿಶೀಲಿಸೋಣ. ಅದೇ ಸದ್ಯಕ್ಕೆ ವಿವೇಕದ ಕ್ರಮ ಎನಿಸುವುದಿಲ್ಲವೇ? ಆಂ ಆದ್ಮಿ ಪಕ್ಷ ಕರ್ನಾಟಕದಲ್ಲೂ ತನ್ನ ಸಂಘಟನೆಯನ್ನು ಕಟ್ಟಿಕೊಂಡು ತನ್ನ ಪ್ರಭಾವ ಜಾಲವನ್ನು ವಿಸ್ತರಿಸುತ್ತಿದೆ. ನಾಡಿನ ಹಲವು ಪ್ರಮುಖ ಚಿಂತಕರು, ಹೋರಾಟಗಾರರು ಅದರ ಬಗೆಗೆ ಕುತೂಹಲ ತಾಳಿದ್ದಾರೆ; ಕೆಲವರು ನೇರ ಬೆಂಬಲ ವ್ಯಕ್ತಪಡಿಸಿದ್ದರೆ, ಇನ್ನು ಕೆಲವರು ಸಹಾನುಭೂತಿ ತೋರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪತ್ರಿಕೆ ಇಲ್ಲಿ ಆಂ ಆದ್ಮಿ ಪಕ್ಷ ಕುರಿತು ವಿವಿಧ ಪ್ರದೇಶಗಳ ಮತ್ತು ವಿವಿಧ ಕ್ಷೇತ್ರಗಳ ಜನರು ರೂಪಿಸಿಕೊಂಡಿರುವ ಅಭಿಪ್ರಾಯಗಳನ್ನು ಮತ್ತು ಹುಟ್ಟಿಸಿಕೊಂಡಿರುವ ನಿರೀಕ್ಷೆಗಳನ್ನೂ ಸಂಗ್ರಹಿಸಿ ನೀಡುತ್ತಿದೆ. ಪಕ್ಷದ ನಾಯಕರು ಗಮನಿಸುವರೆಂದು ಆಶಿಸುತ್ತೇವೆ.

ಏಪ್ರಿಲ್, ೨೦೧೪

ಯಾರು ಹಿತವರು ನಿಮಗೆ ಈ ಮೂವರೊಳಗೆ?

ಪ್ರಿಯ ಓದುಗರೇ,

ಇದು ಚುನಾವಣೆಗೆ ಮುನ್ನ ಪ್ರಕಟವಾಗುತ್ತಿರುವ ನಮ್ಮ ಕೊನೆಯ ಸಂಚಿಕೆ. ಮುಂದಿನ ಐದು ವರ್ಷಗಳ ಕಾಲ ನಮ್ಮ ರಾಷ್ಟ್ರವನ್ನಾಳುವ ಸರ್ಕಾರವನ್ನು ನಾವು ಆಯ್ಕೆ ಮಾಡಿಕೊಳ್ಳಬೇಕಿದೆ. ಇಂದು ನಮ್ಮ ಮುಂದೆ ನಾಲ್ಕು ಆಯ್ಕೆಗಳಿವೆ: ಕಾಂಗ್ರೆಸ್ ನೇತೃತ್ವದ ಯುಪಿಎ, ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ಮೂರನೇ ಶಕ್ತಿಯೆಂದು ಕರೆಯಲಾಗುವ ನಾಲ್ಕಾರು ಪ್ರಾದೇಶಿಕ ಮತ್ತು ಎಡಪಕ್ಷಗಳ ಮೈತ್ರಿಕೂಟ ಮತ್ತು ಏಕಾಂಗಿಯಾದ ಆಂ ಆದ್ಮಿ ಪಕ್ಷ.

ಈಗ ಒಂದೊಂದನ್ನಾಗಿ ನೋಡಹೊರಟರೆ, ಕಳೆದ ಹತ್ತು ವರ್ಷಗಳ ಆಡಳಿತದ ವೈಖರಿಯ ಹಿನ್ನೆಲೆಯಲ್ಲಿ ಬುದ್ಧಿ ನೆಟ್ಟಗೆ ಇದ್ದವರು ಕಾಂಗ್ರೆಸ್ಸಿಗೆ ಮತ ಹಾಕಲು ಬಯಸಲಾರರು. ಕೈಹಾಕಿದ್ದಲ್ಲೆಲ್ಲ ಸಾವಿರ ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿರುವ ಈ ಪಕ್ಷದ ನಾಯಕರಿಗೆ ತಾವು ನಡೆಸಿದ ಆಡಳಿತದ ರೀತಿ ನೀತಿಗಳಲ್ಲೇ ಭ್ರಷ್ಟಾಚಾರದ ಬೀಜಗಳು ಅಡಗಿವೆ ಎಂಬುದು ಗೊತ್ತಾಗಿಲ್ಲದಿರುವುದೇ ಈ ಪಕ್ಷದ ದುರಂತ. ನೆಹರೂ ಕುಟುಂಬದ ಸದಸ್ಯರೊಬ್ಬರ ನಾಯಕತ್ವವಿಲ್ಲದೇ ಕುಸಿದೇ ಹೋಗುವಷ್ಟು ಲಡ್ಡಾಗಿ ಹೋಗಿರುವ ಈ ಪಕ್ಷ ಸಹಜವಾಗಿಯೇ ದೇಶದ ಸಾಮಾನ್ಯ ಜನತೆಗೆ ಅಪರಿಚಿತನಾದ ಒಬ್ಬ ವ್ಯಕ್ತಿಯ ಕೈಗೆ ರಾಜಕೀಯ ಆಡಳಿತದ ಸೂತ್ರವನ್ನು ನೀಡುವ ಅನಿವಾರ್ಯತೆಗೆ ಸಿಕ್ಕಿಕೊಂಡಿತು. ಆ ವ್ಯಕ್ತಿಯೋ ವಿಶ್ವ ಬ್ಯಾಂಕಿನ ವಿಸ್ತರಣಾ ಕೌಂಟರ್‌ನಂತೆ ಭಾರತ ಸರ್ಕಾರವನ್ನು ನಡೆಸುತ್ತಾ ಹೊಸ ಮಜಭೂತಾದ ಮಧ್ಯಮ ವರ್ಗವೊಂದನ್ನು ಸೃಷ್ಟಿಸಿ ಅದರ ಶ್ಲಾಘನೆಯ ಸುರಿಮಳೆಯಲ್ಲಿ ತೇಲುತ್ತಾ ಹೋಗಿ ದಾರಿ ತಪ್ಪಿ ಕಕ್ಕಾವಿಕ್ಕಿಯಾಗುವ ವೇಳೆಗೆ ಎಲ್ಲ ಮುಗಿದಿತ್ತು. ಭ್ರಷ್ಟಾಚಾರ ಮುಗಿಲು ಮುಟ್ಟಿತ್ತು. ಅನ್ನಭಿಕ್ಷೆ, ಸಾಲಭಿಕ್ಷೆ ಉದ್ಯೋಗ ಭಿಕ್ಷೆ, ಹೊಸ ಹೊಸ ಮೀಸಲಾತಿ

ಭಿಕ್ಷೆ ಇತ್ಯಾದಿ ಭಿಕ್ಷೆಗಳ ಮೂಲಕ ಅದರ ತೂತುಗಳನ್ನು ಮುಚ್ಚುವ ಪ್ರಯತ್ನ ಆತ್ಮಗೌರವವುಳ್ಳ ಯಾರಲ್ಲೂ ನಂಬಿಕೆ ಹುಟ್ಟಿಸಿಲ್ಲ. ಅದು ಈಗ ಆಯ್ಕೆ ಮಾಡಿಕೊಂಡಿರುವ ವಂಶಾಡಳಿತ ನಾಯಕತ್ವದ ಪರಿಯಂತೂ ಅದನ್ನು ಜನಸಾಮಾನ್ಯರ ಕಣ್ಣಿನಲ್ಲಿ ಮತ್ತಷ್ಟು ಹೀನಾಯಗೊಳಿಸಿದೆ. ಈ ಪಕ್ಷ, ಕಾಲದಲ್ಲಿ ಮರುಹುಟ್ಟು ಪಡೆಯದ ಹೊರತು ಅದಕ್ಕೆ ಭವಿಷ್ಯವಿದ್ದಂತಿಲ್ಲ.ದ

ಇದೆಲ್ಲದರ ಪೂರ್ಣ ಲಾಭ ಪಡೆಯಲು ಸಜ್ಜಾಗಿರುವ ಪಕ್ಷವೆಂದರೆ ಬಿಜೆಪಿ. ಆದರೆ ಬಿಜೆಪಿ ನೋಡಿದರೆ ತನ್ನದು ಪಕ್ಷದ ಸರ್ಕಾರಕ್ಕಿಂತ ಹೆಚ್ಚಾಗಿ ಮೋದಿಯ ಸರ್ಕಾರ ಎಂದು ಘಂಟಾಘೋಷವಾಗಿ ಹೇಳಿಬಿಟ್ಟಿದೆ. ಇಂತಹ ಅನಿವಾರ್ಯತೆ ಬಿಜೆಪಿಗೆ ಏಕೆ ಉಂಟಾಯಿತು? ಯೋಚಿಸಬೇಕಿದೆ. ಮೋದಿ ಮಾತ್ರ ಈ ದೇಶವನ್ನು ಈಗ ಆಳಬಲ್ಲ ಎಂಬ ಸಂದೇಶದ ಹಿಂದೆ ಯಾವ ಮತ್ತು ಎಂತಹ ರಾಜಕಾರಣದ ವಾಸನೆ ಇದೆ ಎಂಬುದನ್ನು ಮೋದಿಯ ಚರಿತ್ರೆಯ ಹಿನ್ನೆಲೆಯಲ್ಲಿ ಆಳವಾಗಿ ಯೋಚಿಸಬೇಕಿದೆ. ಬರಲಿರುವ ಮೋದಿಯ ರಾಜಕಾರಣ ಎಂತಹದಿರಬಹುದು ಎಂಬುದರ ಸೂಚನೆಗಳನ್ನು ಪಕ್ಷ ತನ್ನ ಚುನಾವಣಾ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯ ಪರಿಯಲ್ಲಿಯೇ ಕಾಣಬಹುದಾಗಿದೆ. ಇದನ್ನೇ ಮೋದಿವಾದಿಗಳು ದೃಢನಿಶ್ಚಯದ ಆಡಳಿತ ಎಂದು ಕರೆಯುವುದು ಎಂದು ಕಾಣುತ್ತದೆ. ಇದು ಕೋಮುವಾದಕ್ಕಿಂತ ಹೆಚ್ಚು ಭಯವನ್ನುಂಟುಮಾಡುವಂತಹ ವಿಷಯವಾಗಿದ್ದು ಬಿಜೆಪಿಯ ಸಾಂಪ್ರದಾಯಿಕ ಮತದಾರರೂ ಒಮ್ಮೆ ಯೋಚಿಸಿ ಮತ ಚಲಾಯಿಸುವಂತಹ ಪರಿಸ್ಥಿತಿ ಉಂಟಾಗಿದೆ. ಇನ್ನು ಇತರರ ಆಯ್ಕೆಯ ಪಾಡೇನು? ಇಲ್ಲಿ ಹೇಳಲೇಬೇಕಾದ ಇನ್ನೊಂದು ಮುಖ್ಯ ಸಂಗತಿ ಎಂದರೆ, ಕೆಳಜಾತಿಯೊಂದಕ್ಕೆ ಸೇರಿದ ಮೋದಿಯ ಈ ರಾಜಕಾರಣ, ಜಾತಿ ಪದ್ಧತಿಯನ್ನು ಕುರಿತ ನಮ್ಮ ಈವರೆಗಿನ ಜನಪ್ರಿಯ ಗ್ರಹಿಕೆಯ ನೆಲೆಗಳು ತುರ್ತಾಗಿ ಬದಲಾಗಬೇಕಾಗಿದೆ ಎಂಬುದು.

ಇನ್ನು ಮೂರನೇ ಶಕ್ತಿಯಲ್ಲಿರುವ ಎಡಪಕ್ಷಗಳು ಮತ್ತು ನಿತೀಶ್‌ರ ಸಂಯುಕ್ತ ಜನತಾದಳಗಳ ಹೊರತಾಗಿ ಮಿಕ್ಕ ಪಕ್ಷಗಳ ಚಾಲೂ-ಚಹರೆಗಳನ್ನು ನೋಡಿದರೇ ಭಯ ಉಂಟಾಗುವಂತಿದೆ. ಮಮತಾ, ಜಯಲಲಿತಾ, ಮಾಯಾವತಿ, ಮುಲಾಯಂ ಇವರನ್ನೊಮ್ಮೆ ಪ್ರಧಾನಮಂತ್ರಿಯಾಗಿ ಊಹಿಸಿಕೊಂಡರೇ ಸಾಕು ನನ್ನ ಮಾತು ಅರ್ಥವಾದೀತು. ಕೋಮುವಾದದ ಸೋಂಕೊಂದು ಇಲ್ಲವೆನ್ನುವುದನ್ನು ಬಿಟ್ಟರೆ ಇವರಿಗೂ ಮೋದಿಗೂ ಯಾವ ವ್ಯತ್ಯಾಸಗಳೂ ಇರಲಾರದು.

ಹೀಗಿರುವಾಗ ಯಾವ ಪಕ್ಷದ ಮೇಲೆ, ಭರವಸೆ ಇಟ್ಟು ಮತ ಹಾಕುವುದು? ಆ ಬಗ್ಗೆ ಯೋಚಿಸಲು ತೊಡಗಿದಾಗ ನಮಗೆ ಮೊದಲು ಹೊಳೆಯಬೇಕಾದದ್ದು, ಅವೆಲ್ಲ ಒಂದೇ ಪಡಿಯಚ್ಚಿನಲ್ಲಿ ಬೇರೆ ಬೇರೆ ಮಣ್ಣುಗಳಲ್ಲಿ ಮಾಡಲ್ಪಟ್ಟ ಆಕೃತಿಗಳು ಎಂಬುದು. ಇದನ್ನು ನಾವು ಅರಿಯಬಲ್ಲವರಾದರೆ ನಮ್ಮ ಈ ಅಸಹಾಯಕ ಪರಿಸ್ಥಿತಿಯಿಂದ

ನಾವು ನಿಜವಾಗಿ ಪಾರಾಗಲು ಇಂದು ನಮಗಿರುವುದು ಒಂದೇ ಆಯ್ಕೆ; ಅದು ಆಂ ಆದ್ಮಿ ಪಕ್ಷ ಎಂಬುದು ಗೊತ್ತಾಗುತ್ತದೆ. ಏಕೆಂದರೆ ಅದು ರಾಜಕಾರಣದ ಬಗ್ಗೆ ಹೊಚ್ಚ ಹೊಸ ಪರಿಭಾಷೆಯಲ್ಲಿ ಮಾತನಾಡುತ್ತಿದ. ನಮ್ಮ ಮುಂದೆ ಹೊಚ್ಚ ಹೊಸ ಜನರನ್ನು ಪ್ರಸ್ತುತಪಡಿಸುತ್ತಿದೆ. ಅಷ್ಟೇ ಅಲ್ಲ, ಅದರ ಹಿಂದೆ ನಿಂತಿರುವವರೂ ಈವರೆಗೆ ರಾಜಕಾರಣದಿಂದ ಸಂಕೋಚಪಟ್ಟು ಹೊರಗಿದ್ದ ಹೊಚ್ಚ ಹೊಸ ಜನರೇ.

ಹೌದು ಈ ಪಕ್ಷದ ಅಡಿಪಾಯವೇ ಇನ್ನೂ ಭದ್ರವಾಗಿ ಮೂಡಿಲ್ಲ. ಅದರ ರಾಜಕೀಯ ತಾತ್ವಿಕತೆ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇದರ ಚುನಾವಣಾ ಅಭ್ಯರ್ಥಿಗಳು– ಕನಿಷ್ಟ ಕರ್ನಾಟಕದಲ್ಲಿ–ಜನರಿಗೆ ಸುಪರಿಚಿತವಾದವರಲ್ಲ. ಅವರು ಗೆಲ್ಲುವ ಸಂಭವ ತೀರಾ ಕಡಿಮೆ. ಆದರೆ ಈ ಪಕ್ಷವನ್ನು ನಾವು ಪೋಷಿಸಬೇಕಾದದ್ದು ನಾಳೆಯ ಫಲಗಳಿಗಾಗಿ. ಅದಕ್ಕಾಗಿ ಇಂದಿನಿಂದಲೇ ಅದರ ಬುಡಕ್ಕೆ ನೀರೆರೆಯಲಾರಂಭಿಸಬೇಕು. ಜನರ ಮಧ್ಯದಿಂದಲೇ, ಟೀಕೆ, ವ್ಯಂಗ್ಯ, ಪರಿಹಾಸ್ಯಗಳ ಎದುರಿನಲ್ಲೇ ಚಿಗುರೊಡೆದು ತನ್ನ ಕಚ್ಚಾ ಧೈರ್ಯ ಮತ್ತು ನೈತಿಕತೆಗಳೊಂದಿಗೆ ಹೊಸ ಆಸೆ ಹುಟ್ಟಿಸಿರುವ ಈ ಪಕ್ಷದಿಂದ ಈಗಲೇ ಎಲ್ಲವನ್ನೂ ನಿರೀಕ್ಷಿಸಲಾಗದು ಎಂಬ ಕನಿಷ್ಟ ಸಾಮಾನ್ಯ ಪರಿಜ್ಞಾನದೊಂದಿಗೆ ಮತ್ತು ಅದನ್ನು ಸರಿ ದಾರಿಯಲ್ಲಿ ನಡೆಸಬೇಕಾದ ಹೊಣೆ ನಮ್ಮದೇ ಎಂಬ ಅರಿವಿನೊಂದಿಗೆ ಸಾಧ್ಯವಾದೆಡೆಯಲ್ಲೆಲ್ಲ ನಾವು ಈ ಪಕ್ಷವನ್ನು ಬೆಂಬಲಿಸಬೇಕಿದೆ.

<u>ಸಮಕಾಲೀನ</u>

ಮೋದಿ ಏಕೆ ಪ್ರಧಾನಮಂತ್ರಿಯಾಗಬಾರದು?

ಈಗ ರಾಷ್ಟ್ರಾದ್ಯಂತ ಮೋದಿ ಅಲೆ ಇದೆ; ಲಂಗರು ಕಳೆದುಕೊಂಡು ದಿಕ್ಕೆಟ್ಟಂತಿರುವ ಈ ದೇಶವನ್ನು ಒಂದು ನೆಲೆಗೊಯ್ದು ಬಲಿಷ್ಠ ರಾಷ್ಟ್ರವನ್ನಾಗಿಸುವ ಯೋಗ್ಯತೆ ಇರುವುದು ಮೋದಿಗೆ ಮಾತ್ರ ಎಂಬುದು ಈಗ ರಾಷ್ಟ್ರದ ಅರಿವಿಗೆ ಬಂದಿದೆ ಎಂಬ ಪ್ರಚಾರ ಪ್ರಚಲಿತವಾಗುತ್ತಿರುವ ಈ ಸಂದರ್ಭದಲ್ಲಿ 'ಮೋದಿ ಏಕೆ ಪ್ರಧಾನಮಂತ್ರಿಯಾಗಕೂಡದು?' ಎಂಬ ನಮ್ಮ ಪ್ರಶ್ನೆ ಹಲವರ ಹುಬ್ಬೇರಿಸಬಹುದು. ಇದೊಂದು ಮೋದಿಯವರ ರಾಜಕೀಯ ವಿರೋಧಿಗಳ ಅಪಪ್ರಚಾರದ ಪ್ರಯತ್ನವಾಗಿಯೂ ಕಾಣಬಹುದು. ಆದರೆ, ಈ ಪ್ರಶ್ನೆಯಲ್ಲಡಗಿರುವುದು ಬರೀ ರಾಜಕೀಯ ಪ್ರಶ್ನೆಯಲ್ಲ; ಅದನ್ನೂ ಮೀರಿದ ರಾಷ್ಟ್ರದ ಭವಿಷ್ಯದ ಪ್ರಶ್ನೆ. ನಾವು ಎಂತಹ ರಾಷ್ಟ್ರವನ್ನು ಕಟ್ಟಬಯಸಿದ್ದೇವೆ ಎಂಬ ಪ್ರಶ್ನೆ. ಮೋದಿ ಪ್ರತಿಪಾದಿಸುತ್ತಿರುವ 'ಅಭಿವೃದ್ಧಿಗೊಂಡ ಬಲಿಷ್ಠ ರಾಷ್ಟ್ರ'ವನ್ನು ಹೇಗೆ ಕಟ್ಟಲಾಗುವುದು ಮತ್ತು ಅದರ ಪರಿಣಾಮಗಳೇನು ಎಂಬ ಮುಖ್ಯ ಪ್ರಶ್ನೆ.

ಮೊದಲಾಗಿ ಬಿಜೆಪಿ ಮೋದಿಯವರನ್ನು ತನ್ನ ಪ್ರಧಾನಮಂತ್ರಿ ಅಭ್ಯರ್ಥಿ ಎಂದು ಚುನಾವಣೆಗೆ ಮೊದಲೇ ಘೋಷಿಸಿ, ಈ ಒಕ್ಕೂಟ ರಾಷ್ಟ್ರಕ್ಕೆ ಸೂಕ್ತವೆಂದು ನಮ್ಮ ರಾಷ್ಟ್ರ

ಪಿತೃಗಳು ಆಯ್ಕೆ ಮಾಡಿದ ಸಂಸದೀಯ ಪ್ರಜಾಪ್ರಭುತ್ವದ ಭಾವನೆಗೇ ಪೆಟ್ಟುಕೊಟ್ಟು ಈ ಚುನಾವಣೆಯನ್ನು ಜನರ ಪಾಲಿಗೆ ಪಕ್ಷಕ್ಕಿಂತ ವ್ಯಕ್ತಿಯ ಆಯ್ಕೆಯ ವೇದಿಕೆಯನ್ನಾಗಿ ಮಾರ್ಪಡಿಸಿಬಿಟ್ಟಿದೆ. ಮೋದಿ ಪ್ರಧಾನಿಯಾಗುವುದು ಏಕೆ ಬೇಡ ಎಂಬುದು ವೈಯುಕ್ತಿಕ ನೆಲೆಯ ಪ್ರಶ್ನೆಯಾಗಿ ಯಾರಿಗಾದರೂ ಕಂಡರೆ, ಅದಕ್ಕೆ ಅವರ ಪಕ್ಷವೇ ಕಾರಣವಾಗಿದೆ. ಪಕ್ಷದಿಂದ ಆಯ್ಕೆಯಾಗಬಹುದಾದ ಸದಸ್ಯರ ಆಯ್ಕೆಯ ಹಕ್ಕನ್ನೇ ಅದು ಕಸಿದು ಸಂಸದೀಯ ಪ್ರಜಾಪ್ರಭುತ್ವದ ಅಡಿಪಾಯವನ್ನೇ ಅಲುಗಾಡಿಸಿದೆ. ಇದರ ಹಿಂದೆ ಇರುವ ರಾಜಕಾರಣ ಯಾವುದು? ಮತ್ತು ಯಾರದು? ಇದೇ ಮೋದಿ ಏಕೆ ಪ್ರಧಾನಿಯಾಗಬಾರದು ಎಂಬ ಪ್ರಶ್ನೆ ಏಳಲು ಮೂಲ ಕಾರಣವಾಗಿದೆ.

ಭಾರತ ಜೀವಂತವಾಗಿ ಉಳಿದಿರುವುದೇ ತನ್ನ ಹಲವು ನೆಲೆಗಳ ವೈವಿಧ್ಯದಿಂದ. ಇದನ್ನು ಅರಿಯದ ಮತ್ತು ಒಪ್ಪದ ರಾಷ್ಟ್ರೀಯತೆಯ ಹೆಸರಿನಲ್ಲಿನ ಮತೀಯ ಪಟ್ಟಭದ್ರ ಹಿತಾಸಕ್ತಿಗಳ ಕೂಟವೊಂದು ಕಾಂಗ್ರೆಸ್ ಎಂಬ ಪಕ್ಷ ತನ್ನ ಬೇಜವಾಬ್ದಾರಿ ರಾಜಕಾರಣದಿಂದಾಗಿ ದೇಶವನ್ನು ಅಧ್ವಾನಗೊಳಿಸಿರುವ ಸಂದರ್ಭವನ್ನೇ ಬಳಸಿಕೊಳ್ಳ ಹೊರಟಿದೆ. ಭಾರತವನ್ನು ಒಂದು ಏಕಾಕಾರದ ರಾಷ್ಟ್ರವನ್ನಾಗಿ ಮಾಡಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಭಯಂಕರ ರಾಜಕಾರಣ ಈ ಕೂಟದ್ದು. ಈ ಏಕಾಕಾರವನ್ನು ಸಾಂಸ್ಕೃತಿಕ ರಾಜಕಾರಣದ ಮೂಲಕ ಸಾಧಿಸಲಾಗದ ಈ ಕೂಟ ಈಗ 'ಅಭಿವೃದ್ಧಿ'ಯ ರಾಜಕಾರಣವನ್ನು ಬಳಸಲು ಯತ್ನಿಸುತ್ತಿದೆ. ಹಾಗಾಗಿ ಇದೊಂದು ಮತೀಯ ಹಿತಾಸಕ್ತಿಗಳು ಮತ್ತು ಲಾಭಕೋರ ಉದ್ಯಮಿಗಳ ಮಾರಕ ಕೂಟವಾಗಿದೆ. ಇದರ ಲಾಂಛನ ಇವರ 'ಗುಜರಾತ್ ಪ್ರಯೋಗ'ವನ್ನು ಯಶಸ್ವಿಗೊಳಿಸಿರುವ ನೇತಾರ ಮೋದಿಯಲ್ಲದೆ ಇನ್ನಾರಾದಾರು?.

ಈ ದೇಶದಲ್ಲಿ ಕಳೆದ ೨೫ ವರ್ಷಗಳ ಅಭಿವೃದ್ಧಿಯ ಹೆಸರಿನಲ್ಲಿ ಒಂದಷ್ಟು ಜನ ದುಡ್ಡಿನ ರುಚಿ ನೋಡಿದ್ದನ್ನು ಕಂಡ ಇಡೀ ಜನಸ್ತೋಮ ತನ್ನ ಮತ್ತು ರಾಷ್ಟ್ರದ ವ್ಯಕ್ತಿತ್ವವೂ ಸೇರಿದಂತೆ ಎಲ್ಲವನ್ನೂ ಮರೆತು ದುಡ್ಡಿನ ಹಿಂದೆ, ಅದು ತಂದುಕೊಡುವ ಸುಖಗಳ ಹಿಂದೆ ಬಿದ್ದಿದೆ. ಆದರೆ ಅದು ತಂದೊಡ್ಡುತ್ತಿರುವ ತೆರತೆರನ ಹಿಂಸೆ ಅವರ ಹೃದಯಕ್ಕೆ ತಾಗುತ್ತಲೇ ಇಲ್ಲ. ಜನರ ಈ ದೌರ್ಬಲ್ಯದ ಆಧಾರದ ಮೇಲೇ ಇಂದು ಮೋದಿಯ ಪ್ರತಿಮೆಯನ್ನು ಆಕಾಶದೆತ್ತರಕ್ಕೆ ಕಟ್ಟಲಾಗುತ್ತಿರುವುದು. ಈ ದೇಶದ ಏಕಾಕಾರದಲ್ಲಷ್ಟೇ ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಸಾಧ್ಯವೆಂಬುದನ್ನು ಕಂಡುಕೊಂಡಿರುವ ಈ ದೇಶದ ಸಂಪ್ರದಾಯವಾದಿ ಶಕ್ತಿಗಳು ಇಂದು ಲಾಭಕೋರ ಉದ್ಯಮಿಗಳ ಜೊತೆಗೂಡಿ ಮೋದಿಗೆ 'ಅಭಿವೃದ್ಧಿ'ಯ ಬಣ್ಣದ ಅಂಗಿ ತೊಡಿಸಿ ಜನರನ್ನು ಹುಚ್ಚೆಬ್ಬಿಸುವ ಪ್ರಯತ್ನ ಮಾಡುತ್ತಿವೆ. ಹೀಗೆ ಲಾಭಕೋರ ಉದ್ಯಮಿಗಳು ನಮ್ಮ ನೆಲ-ಜಲ-ಗಾಳಿ-ಖನಿಜಗಳನ್ನಷ್ಟೇ ಅಲ್ಲ, ಮಾನವ ಸಂಪನ್ಮೂಲಗಳನ್ನೂ ಅವನ್ನು ನೈತಿಕವಾಗಿ ದಿವಾಳಿಯೆಬ್ಬಿಸುವ ಮೂಲಕ ಸೂರೆ ಮಾಡಿ ಈ ದೇಶವನ್ನು ಏಕಾಕಾರಕ್ಕೆ

'ಅಭಿವೃದ್ಧಿ'ಗೊಳಿಸುವುದನ್ನೇ ಇವರು ಭಾರತವನ್ನು 'ಜಾಗತಿಕ ಶಕ್ತಿ'ಯನ್ನಾಗಿ ಮಾಡುವುದು ಎಂದು ಕರೆಯುವುದು! ಇಂತಹ ಒಂದು ಪ್ರಯತ್ನ ದೇಶವನ್ನು ಅಂತಿಮವಾಗಿ ಏನು ಮಾಡಿರುತ್ತದೆ, ಎಂತಹ ಭಯಂಕರ ಪೆಡಂಭೂತವೊಂದನ್ನು ಸೃಷ್ಟಿಸಿರುತ್ತದೆ ಎಂಬ ಕಲ್ಪನೆ ಬರೀ ದುಡ್ಡು ಮತ್ತು ಅದು ತರುವ ಸುಖಗಳ ಕಲ್ಪನೆಯೊಳಗೇ ಸಿಕ್ಕಿಹಾಕಿಕೊಂಡಿರುವ ಜನಸ್ತೋಮಕ್ಕೆ ಬರಲಾರದು. ಅದೇ ಇಂದಿನ ನಿಜವಾದ ದುರಂತ: 'ಭ್ರಷ್ಟ ಅಭಿವೃದ್ಧಿ'ಯಿಂದ 'ದುಷ್ಟ ಅಭಿವೃದ್ಧಿ'ಯ ಕಡೆಗೆ ಪಯಣ.

ಮೋದಿ ಗುಜರಾತ್‌ನಲ್ಲಿ ಸ್ವರ್ಗವನ್ನೇ ಸೃಷ್ಟಿಸಿದ್ದಾರಂತೆ. ಅದೆಷ್ಟು ಅಪ್ಪಟ ಸುಳ್ಳು ಎಂಬುದನ್ನು ಅಂಕಿ ಅಂಶಗಳೇ ಸಾರಿ ಹೇಳುತ್ತಿವೆ. ಆದರೆ ಗುಜರಾತ್‌ನಲ್ಲಿ ಲೂಟಿಯ ರುಚಿ ನೋಡಿರುವ ಅಂಬಾನಿ-ಅದಾನಿ ಮುಂತಾದ ಉದ್ಯಮಿಗಳು ಮೋದಿಗಾಗಿ ನೇಮಿಸಿರುವ ಜಗತ್ತಿನ ಅತ್ಯಂತ ದುಬಾರಿ ಸಾರ್ವಜನಿಕ ಸಂಪರ್ಕ ಸಂಸ್ಥೆ ಸುಳ್ಳು ಮತ್ತು ಸತ್ಯಗಳ ನಡುವಣ ಗೆರೆಯನ್ನೇ ಅಳಿಸಿಹಾಕಬಲ್ಲ ಕೌಶಲ್ಯವನ್ನು ಹೊಂದಿದೆ. ಆದರೂ ಏಕೆ ಅಲ್ಲಿನ ಜನ ಅವರನ್ನೇ ಪದೇ ಪದೇ ಆರಿಸುತ್ತಾರೆ? ಮೊನ್ನೆ ಹೆಗ್ಗೋಡಿನಲ್ಲಿ ಚರಕೋತ್ಸವದ ಸಂದರ್ಭದಲ್ಲಿ ಭೇಟಿಯಾದ ಮಹಾತ್ಮ ಗಾಂಧಿಯವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರ ಮೊಮ್ಮಗಳು (ಗುಜರಾತ್ ವಿದ್ಯಾಪೀಠದ ಕುಲಪತಿ ನಾರಾಯಣ ದೇಸಾಯಿಯವರ ಮಗಳು) ಸಂಘಮಿತ್ರ ಗಾಡೇಕರ್ ಅವರ ಪ್ರಕಾರ, ಅಲ್ಲಿ ಕಾಂಗ್ರೆಸ್ ನೈತಿಕವಾಗಿ ಎಷ್ಟು ಕುಸಿದು ಹೋಗಿದೆ ಎಂದರೆ ಅದು ಮೋದಿಯ ಆಕ್ರಮಣಕಾರಿ ತಂತ್ರಗಳ ಎದುರು ಸಾವರಿಸಿಕೊಳ್ಳಲು ಸಾಧ್ಯವಾಗದೆ ನಿಶ್ಚೇಷ್ಟಿತವಾಗಿಬಿಟ್ಟಿದೆ. ಅಷ್ಟಾದರೂ, ಗುಜರಾತ್‌ನಲ್ಲಿ ಮೋದಿ ವಿರೋಧಿ ಮತ ಶೇ. ೪೦ಕ್ಕಿಂತ ಕಡಿಮೆಯಾಗಿಲ್ಲ ಮತ್ತು ಮೋದಿ ಗುಜರಾತನ್ನು ನಂದನವನ್ನೇ ಮಾಡಿದ್ದರೆ, ಅವರಿಗೆ ಇಷ್ಟು ವಿರೋಧ ದಾಖಲಾಗಲು ಕಾರಣವೇ ಇಲ್ಲ. ಮೊನ್ನೆ ಕೇಜ್ರಿವಾಲ್ ಗುಜರಾತ್ ಪ್ರವಾಸ ಮಾಡಿದಾಗ ಅವರಿಗೆ ಸಿಕ್ಕ ಸಂಭ್ರಮದ ಸ್ವಾಗತ ಮತ್ತು ವ್ಯಾಪಕ ಸ್ಪಂದನ ಗುಜರಾತ್ ಬಗ್ಗೆ ತಮ್ಮಲ್ಲಿ ಮತ್ತೆ ಆಸೆ ಹುಟ್ಟಿಸಿದೆ ಎಂದರು ಸಂಘಮಿತ್ರ.

ಈ ರಾಜ್ಯದ ೨೬ ಪೋಲೀಸ್ ಅಧಿಕಾರಿಗಳು ವಿವಿಧ ಆರೋಪಗಳ ಮೇಲೆ ಬಂಧನದಲ್ಲಿದ್ದರೆ, ಮೋದಿಯವರ ಮಾಜಿ ಗೃಹಮಂತ್ರಿ ಕೋಮು ದಂಗೆ ಪ್ರಚೋದಿಸಿದ್ದಕ್ಕಾಗಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದಾರೆ. ಲೋಕಾಯುಕ್ತ ರಚನೆಯನ್ನು ಸತತವಾಗಿ ವಿರೋಧಿಸುತ್ತಾ ಬಂದ ಮೋದಿ ತಮ್ಮ ಸಂಪುಟದಲ್ಲಿ ಭ್ರಷ್ಟಾಚಾರಕ್ಕಾಗಿ ಶಿಕ್ಷೆಗೆ ಒಳಗಾಗಿರುವ ಇಬ್ಬರು ಸಚಿವರನ್ನು ರಕ್ಷಿಸಿಟ್ಟುಕೊಂಡಿದ್ದಾರೆ. ರಾಜ್ಯದ ವಿರೋಧ ಪಕ್ಷಗಳ ನಾಯಕರನ್ನಷ್ಟೇ ಅಲ್ಲ, ತನ್ನ ಪಕ್ಷದಲ್ಲಿನ ಎಲ್ಲ ನಾಯಕರನ್ನೂ ಮುಗಿಸಿ ಈಗ ರಾಷ್ಟ್ರೀಯ ಮಟ್ಟದ ನಾಯಕರನ್ನೂ ಮುಗಿಸತೊಡಗಿರುವ, ಎಂದೂ ವೇದಿಕೆಯಿಂದ ಇಳಿಯದ, ಜನರ ಮಧ್ಯೆ ಬರದ, ಯಾರ ಯಾವ ಪ್ರಶ್ನೆಗೂ ಉತ್ತರಿಸುವ ಗೋಜಿಗೆ ಹೋಗದ, ಒಂದು ಪತ್ರಿಕಾ ಗೋಷ್ಠಿಯನ್ನೂ ಎದುರಿಸದ, ದೇಶದ ಚರಿತ್ರೆಯನ್ನಾಗಲೀ,

ಭೂಗೋಳವನ್ನಾಗಲೀ ಸರಿಯಾಗಿ ಅರಿಯದ, ಸದಾ ತನ್ನದೇ ಸುರಕ್ಷಿತ ಕೋಟೆಯಲ್ಲಿ ಅಡಗಿಕೊಂಡಿರುವ ಈ ಮನುಷ್ಯ ತಾನು ಕಟ್ಟಿಕೊಂಡ ಹೆಂಡತಿಯನ್ನು ತ್ಯಜಿಸಿರುವ ರೀತಿ ಮತ್ತು ಹಿನ್ನೆಲೆಯನ್ನು ಗಮನಿಸಿದಾಗ ಈತ ನಿಜವಾಗಿ ಎಷ್ಟು ಬಲಿಷ್ಠ ಮತ್ತು ವಿವೇಕಿ ಎಂಬ ಪ್ರಶ್ನೆ ಏಳುತ್ತದಲ್ಲವೇ? ಈ ಮನುಷ್ಯನಲ್ಲಿ ಏನೋ ಒಂದು ವಿಕ್ಷಿಪ್ತತೆ ಇದೆ ಅನ್ನಿಸುವುದಿಲ್ಲವೇ? ಇಂತಹ ಮನುಷ್ಯನ ಕೈಗೆ ದೇಶ ಸಿಕ್ಕರೆ ಏನಾಗಬಹುದು? ಕರ್ನಾಟಕದ ವಿವಿಧ ಕ್ಷೇತ್ರಗಳ ಹಿರಿ ಕಿರಿಯರು ಈ ಬಗ್ಗೆಯೆಲ್ಲ ಯೋಚಿಸಿ ಇಲ್ಲಿ ಬರೆದಿದ್ದಾರೆ. ಬಿಜೆಪಿಯ ಹಿತೈಷಿಗಳು ಕೂಡ ಮನ ತೆರೆದು ಇದನ್ನು ಓದಬೇಕು–ಸಂ.

ಮೇ, ೨೦೧೪

ಕಾಂಗ್ರೆಸ್ ಬೆಂಬಲಿಗರ ದ್ವಂದ್ವ ರಾಜಕಾರಣವೂ ಆಂ ಆದ್ಮಿ ಪಕ್ಷದ ಹೊಸ ಅವತಾರವೂ...

ಪ್ರಿಯ ಓದುಗರೇ,

ಚುನಾವಣೆಗಳು ಮುಗಿದಿವೆ. ಕರ್ನಾಟಕದ ಮಟ್ಟಿಗಾದರೂ ದೇಶದ ಬೇರೆ ಭಾಗಗಳಲ್ಲಿ ಇನ್ನೊಂದೆರಡು ಸುತ್ತು ಮತದಾನ ಮುಗಿದ ಮೇಲೆ ಇದೇ ೧೬ರಂದು ಫಲಿತಾಂಶಗಳು ಹೊರಬರಲಿವೆ. ಮುಂದಿನ ಸರ್ಕಾರದ ಸ್ವರೂಪವೇನು ಎಂಬುದು ಗೊತ್ತಾಗಲಿದೆ. ಮಾಧ್ಯಮ ಸಮೀಕ್ಷೆಗಳ ಹಿನ್ನೆಲೆಯಲ್ಲಿ ಮೋದಿ ಈಗಾಗಲೇ ಪ್ರಧಾನಿಯಾಗಿಬಿಟ್ಟಿದ್ದಾರೆ ಎಂಬ ಉಮೇದಿನಲ್ಲೇ ಪ್ರಚಾರ ಕೈಗೊಂಡಿರುವ ಬಿಜೆಪಿ ಮತ್ತು ಹಿಂದಿನ ಎಲ್ಲ ಸಮೀಕ್ಷೆಗಳು ಸುಳ್ಳಾಗಿವೆ ಎಂಬ ಆಶಾಕಿರಣದೊಂದಿಗೆ ಪ್ರಚಾರ ಮಾಡುತ್ತಿರುವ ಕಾಂಗ್ರೆಸ್ ಅಂದು ನಿಜವನ್ನು ಎದುರಿಸಲಿವೆ. ಕೊನೆ ಕೊನೆಯ ದಿನಗಳಲ್ಲಿ ಕಾಂಗ್ರೆಸ್‌ನ ಸ್ಥಿತಿ ಸ್ವಲ್ಪ ಸುಧಾರಿಸಿದಂತಿದೆ ಎಂಬ ಭಾವನೆ ಇದ್ದರೂ, ಅದರ ಅಧಿಕಾರದ ಕೊನೆಯ ಐದು ವರ್ಷಗಳ ಪಾಪದ ಭಾರ ಅದನ್ನು ದಡ ಮುಟ್ಟಿಸಲಾರದೆಂದೇ ಬಹುಜನರ ಭಾವನೆಯಾಗಿದೆ.

ಕಾಂಗ್ರೆಸ್ಸಿನ ದುರಾಡಳಿತದ ಈ ಪಾಪದ ಭಾರ ಎಷ್ಟು ದೊಡ್ಡದೆಂದರೆ, ಮೋದಿ ಎಂಬ ಅರಿಭಯಂಕರನ ಆಗಮನದ ಭಯ ಕೂಡ ವಿವೇಕವಿದ್ದ ಯಾರಲ್ಲೂ ಕಾಂಗ್ರೆಸ್ಸನ್ನು ನೇರವಾಗಿ ಬೆಂಬಲಿಸುವ ಧೈರ್ಯ ಮೂಡಿಸಲಿಲ್ಲ. ರಾಷ್ಟ್ರದ ಬುದ್ಧಿಜೀವಿಗಳು, ಲೇಖಕರು, ಸಾಮಾಜಿಕ ಕಾರ್ಯಕರ್ತರು ಮತ್ತು ಕಲಾವಿದರು ಜಂಟಿಯಾಗಿ ನೀಡಿದ ಹೇಳಿಕೆ ಕೂಡ ಜನತೆಗೆ ಧರ್ಮ ನಿರಪೇಕ್ಷ ಪಕ್ಷಗಳಿಗೆ ಮತ ಹಾಕಿ ಎಂದು ಕೇಳಿಕೊಂಡಿತಷ್ಟೆ. ಪ್ರಗತಿಪರರೆನಿಸಿಕೊಂಡ ಮಿಕ್ಕವರು ಆಂ ಆದ್ಮಿ ಪಕ್ಷದ ಬೆಂಬಲಿಗರೋ ಅಥವಾ ನೇರವಾಗಿ ಅಭ್ಯರ್ಥಿಗಳಾಗಿಯೋ ನಿಲ್ಲುವ ಧೈರ್ಯ ಮತ್ತು ಕರ್ತೃತ್ವ ಶಕ್ತಿ ತೋರಿದರು.

ಆದರೆ ಕರ್ನಾಟಕದ ಕೆಲವು ಬುದ್ಧಿಜೀವಿ–ಲೇಖಕರೆನಿಸಿಕೊಂಡವರು ನೇರವಾಗಿ ಕಾಂಗ್ರೆಸ್ಸಿಗೆ ಬೆಂಬಲ ಘೋಷಿಸಿದರು! ಅದಕ್ಕೆ ಕಾರಣ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ಕುರಿತ ಅವರ ವೈಯುಕ್ತಿಕ ದಾಕ್ಷಿಣ್ಯವೇ ಇರಬಹುದು.

ಈ ದಾಕ್ಷಿಣ್ಯಕ್ಕೆ ಕಾರಣಗಳೇನೇ ಇರಲಿ, ಮೋದಿ ಮುಖದ ಬಿಜೆಪಿ ಇಷ್ಟು 'ಜನಪ್ರಿಯತೆ'ಯ ಹಾಹಾಕಾರದೊಂದಿಗೆ ಬೆಳೆಯಲು ಕಾಂಗ್ರೆಸ್ ಪಕ್ಷದ ಸ್ವರೂಪ ಮತ್ತು ಅದು ಸರ್ಕಾರದ ಮೇಲೆ ಉಂಟು ಮಾಡುತ್ತಿರುವ ದುಷ್ಪರಿಣಾಮಗಳೇ ಕಾರಣ ಎಂದು ಅರಿಯಬಲ್ಲ ಯಾರೂ ಅದನ್ನು ಇಷ್ಟು ನೇರವಾಗಿ ಮತ್ತು ಬೇಷರತ್ತಾಗಿ ಬೆಂಬಲಿಸಲಾರರು. ಕಾಂಗ್ರೆಸ್ ಬುಡಮೇಲಾಗಿ ಬೇರೊಂದು ರೂಪದಲ್ಲಿ ಮರುಹುಟ್ಟು ಪಡೆಯದವರಿಗೆ, ಮೋದಿ ತರಹದ ರಾಜಕೀಯ ವ್ಯಕ್ತಿತ್ವಗಳು ಹುಟ್ಟುತ್ತಲೇ ಇರುತ್ತವೆ ಮತ್ತು ಸಹಜವಾಗಿ ಜನರ ಗಮನ ಸೆಳೆಯುತ್ತಲೇ ಹೋಗುತ್ತವೆ ಎಂಬುದೇಕೆ ಇವರಿಗೆ ಹೊಳೆಯುವುದಿಲ್ಲವೆಂದು ಆಶ್ಚರ್ಯವಾಗುತ್ತದೆ. ಹೋಗಲಿ, ಕಾಂಗ್ರೆಸ್ಸನ್ನು ಚುನಾವಣೆಯ ಸಂದರ್ಭದಲ್ಲಿ ಬೆಂಬಲಿಸುವ ಇವರು ಅದು ದಾರಿ ತಪ್ಪಿದಾಗ, ಅದರ ದುರಾಡಳಿತದ ಸಮಯದಲ್ಲಿ ಒಂದು ಎಚ್ಚರಿಕೆಯ ಮಾತನ್ನಾದರೂ ಆಡಿದರೆ?

ವಿಷಾದದ ಸಂಗತಿ ಎಂದರೆ, ಕಿರಣ್ ಮಜುಂದಾರ್, ನಾರಾಯಣ ಮೂರ್ತಿಯವರೂ ಚುನಾವಣೆಗೆ ನಿಲ್ಲಬೇಕು ಎಂದು ತಮ್ಮ ಜಾತಿ ಬಂಧು ನಿಲೇಕಣಿಗೆ ಬೆಂಬಲ ಸೂಚಿಸುವುದರ ಭಾಗವಾಗಿ ಹೇಳುವ ಗಿರೀಶ್ ಕಾರ್ನಾಡರ ಜೊತೆಗೇ ಅನಂತಮೂರ್ತಿಯವರು ಕೂತು ಕಾಂಗ್ರೆಸ್ಸಿಗೆ ಬೆಂಬಲ ಘೋಷಿಸಿರುವುದು. (ಇವರೊಂದಿಗೆ ಕೂತ ಇನ್ನೊಬ್ಬ ಮಹನೀಯನೆಂದರೆ, ಮೊನ್ನೆ ತಾನೇ ಅಧಿಕಾರ ಉಳಿಸಿಕೊಳ್ಳಲು ಬಿಜೆಪಿಗೆ ರಾಜೀನಾಮೆ ನೀಡಿದ ನಕಲಿಶಾಮ ಮುಖ್ಯಮಂತ್ರಿ ಚಂದ್ರು!) ನಮ್ಮ ಈ ಇಬ್ಬರು ಹೆಮ್ಮೆಯ ಲೇಖಕರು ಕಾಂಗ್ರೆಸ್ಸಿಗೆ ಬೆಂಬಲ ಸೂಚಿಸಲು ನೀಡಿರುವ ಕಾರಣಗಳೆಂದರೆ ಮೋದಿಯ ನಿರಂಕುಶತೆ ಮತ್ತು ನರಹತ್ಯೆಯ ಚರಿತ್ರೆ ಆಯಿತು. ಆದರೆ ಈ ಮೋದಿ ೨೦೦೨ರಲ್ಲಿ ಗುಜರಾತ್‌ನಲ್ಲಿ ನರಹತ್ಯೆ ನಡೆಸುತ್ತಿದ್ದಾಗ ಈ ಇಬ್ಬರು ಮಹನೀಯರು ಎಲ್ಲಿದ್ದರು, ಯಾವ ಸರ್ಕಾರದ ಕೃಪೆಯಡಿಯಲ್ಲಿ ಯಾವ ಪದವಿಗಳನ್ನು ಅಲಂಕರಿಸಿದ್ದರು ಮತ್ತು ಏನು ಮಾತನಾಡಿದರು ಎಂದು ಕೇಳಬಹುದೇ?

ಇನ್ನು ನಮ್ಮ ದೇವನೂರ ಮಹದೇವರನ್ನು ನೋಡಿ. ಅವರು ಏಳು ಕ್ಷೇತ್ರಗಳಲ್ಲಿ ಆಪ್‌ಗೂ, ಉಳಿದವುಗಳಲ್ಲಿ ಕಾಂಗ್ರೆಸ್ಸಿಗೂ ಬೆಂಬಲ ಘೋಷಿಸಿದ್ದಾರೆ. ಈ ವಿಂಗಡಣೆ ಯಾವ ಆಧಾರದ ಮೇಲೋ? ಈ ಏಳು ಕ್ಷೇತ್ರಗಳಲ್ಲಿ ಆಪ್ ಅಭ್ಯರ್ಥಿಗಳು ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್ ಅಭ್ಯರ್ಥಿಗಳಿಗಿಂತ ಹೆಚ್ಚು ಸಮರ್ಥರಾಗಿದ್ದಾರೆ ಎಂದೋ ಅಥವಾ ಅವರೆಲ್ಲ ವೈಯುಕ್ತಿಕ ಗೆಳೆಯರೋ ಅಥವಾ ಪರಿಚಿತರೋ ಆಗಿದ್ದಾರೆ ಎಂದೋ? ಮಹಾದೇವ ಚುನಾವಣಾ ಸಂದರ್ಭದಲ್ಲಿ ಮಾತ್ರ ಕಾಣಿಸಿಕೊಳ್ಳುವ ತಮ್ಮ

ಹೆಮ್ಮೆಯ 'ಸರ್ವೋದಯ ಕರ್ನಾಟಕ' ಪಕ್ಷವನ್ನು ಗಂಭೀರವಾಗಿ ಕಟ್ಟುವಲ್ಲಿ ಕೇಜ್ರಿವಾಲ್ ಮತ್ತು ಅವರ ಗೆಳೆಯರು ಪ್ರದರ್ಶಿಸುತ್ತಿರುವ ಕ್ರಿಯಾಶೀಲತೆಯನ್ನು ತೋರಿದ್ದಲ್ಲಿ ರಾಜ್ಯದ ಜನತೆಯ ಮುಂದೆ ಈ ಹಾಸ್ಯಾಸ್ಪದ ಜಾಣತನವನ್ನು ತೋರುವ ಅಗತ್ಯ ಬೀಳುತ್ತಿರಲಿಲ್ಲ.

ಆಂ ಆದ್ಮಿ ಪಕ್ಷ: ಒಂದು ಚುನಾವಣೋತ್ತರ ನೋಟ:

ಇರಲಿ. ಇವೆಲ್ಲ ಕರ್ನಾಟಕದ ಸಂದರ್ಭದ ನನ್ನ ತತ್ಕಾಲೀನ ಟಿಪ್ಪಣಿಗಳಾದರೆ, ಈ ಸಲದ ನನ್ನ ಮುಖ್ಯ ಟಿಪ್ಪಣಿಗಳು, ಪಕ್ಷ ಸ್ಥಾಪನೆಯಾದ ದಿನದಿಂದಲೂ ಈ ಪತ್ರಿಕೆ ಸಕಾರಣವಾಗಿಯೂ, ಸಾರಾಸಗಟಾಗಿಯೂ ಬೆಂಬಲಿಸುತ್ತಿರುವ ಆಂ ಆದ್ಮಿ ಪಕ್ಷದ ಬಗೆಗಿವೆ. ನಮ್ಮ ಹಲವು ಓದುಗರ ಆಕ್ಷೇಪಣೆ, ಟೀಕೆ, ಪರಿಹಾಸ್ಯಗಳ ನಡುವೆಯೂ ಪತ್ರಿಕೆ ಆಪ್‌ನ್ನು ಬೆಂಬಲಿಸಿದ್ದರೆ ಅದಕ್ಕೆ ಕಾರಣಗಳನ್ನು ನಾನು ಈಗಾಗಲೇ ಸಾಕಷ್ಟು ವಿವರವಾಗಿ ಹಿಂದಿನ ಸಂಚಿಕೆಗಳಲ್ಲಿ ಹೇಳಿರುವೆ. ಈ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲೂ ಪತ್ರಿಕೆಯ ಬೆಂಬಲ ಅದಕ್ಕಿತ್ತು.

ಹಾಗಾಗಿಯೇ ನಾನು ನಮ್ಮ ಶಿವಮೊಗ್ಗ ಲೋಕಸಭಾ ಅಭ್ಯರ್ಥಿಯ ಪರವಾಗಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದೆ. ಅವರ ಪಕ್ಷ ವ್ಯಕ್ತಿಗತವಾಗಿ ನಿಗದಿ ಮಾಡಿದ್ದ ಗರಿಷ್ಠ ಮಿತಿಯನ್ನೂ ಮೀರಿ ಅವರಿಗೆ ದೇಣಿಗೆ ನೀಡಿದೆ. ಗೆಳೆಯರಿಂದ ಕೊಡಿಸಿದೆ. ನನ್ನ ಪತ್ನಿ ಈ ಅಭ್ಯರ್ಥಿಯ ಪರವಾಗಿ ಹಳ್ಳಿಯ ಕಡೆ ಒಂದು ಸುತ್ತು ಮನೆ ಮನೆ ಪ್ರಚಾರಕ್ಕೂ ಹೋಗಿ ಬಂದಳು. ಇವರ ರಾಷ್ಟ್ರೀಯ ನಾಯಕ ಯೋಗೇಂದ್ರ ಯಾದವ್ ಶಿವಮೊಗ್ಗದಲ್ಲಿ ನಡೆಸಿದ 'ರೋಡ್ ಷೋ'ನಲ್ಲಿ ಮೆರವಣಿಗೆ ಮುಂದೆ ಭಿತ್ತಿ ಹಿಡಿದು ಭಾಗವಹಿಸಿದಳು. ಮೊನ್ನೆ ನಾನು ಕೇಜ್ರಿವಾಲ್‌ರ ವಾರಾಣಾಸಿ ಸ್ಪರ್ಧೆಗೆಂದೇ ಪ್ರತ್ಯೇಕ ದೇಣಿಗೆ ಕಳಿಸಿದೆ.

ಈ ಎಲ್ಲ ಪ್ರವರಗಳನ್ನು ನಾನು ನಿಮ್ಮ ಮುಂದಿಡುತ್ತಿರುವುದು ಮುಂದಿನ ನನ್ನ ಟಿಪ್ಪಣಿಗಳನ್ನು ನೀವು ಅಪಾರ್ಥ ಮಾಡಿಕೊಳ್ಳಬಾರದೆಂಬ ಕಾರಣದಿಂದಷ್ಟೇ. ಏಕೆಂದರೆ ಈ ಪಕ್ಷ, ಅದರ ಹಿಂದಿನ ವಿಚಾರ–ಹೋರಾಟ ಎಲ್ಲವೂ ನನ್ನದೇ ಎಂಬ ಭಾವನೆಯಿಂದ ಇದರ ಪಕ್ಷ ರೂಪ ಮತ್ತು ರಾಜಕಾರಣ ಸ್ಪಷ್ಟವಾಗಿ ಮೂಡುವ ಮುಂಚಿನಿಂದಲೂ ನಾನದನ್ನು ಬೆಂಬಲಿಸುತ್ತಿದ್ದೇನೆ. ಆದರೆ ಈಗ ಚುನಾವಣೆ ಮುಗಿದಿದೆ. ಈ ಪಕ್ಷವನ್ನು ಅದು ಎದುರಿಸುತ್ತಿರುವ ಈ ಎರಡನೇ ಚುನಾವಣೆಯ ಪರಿಪ್ರೇಕ್ಷ್ಯದಲ್ಲಿ ಸ್ವಲ್ಪ ಹತ್ತಿರದಿಂದ ನೋಡಿ ಈಗ ಅದರ ಬಗ್ಗೆ ಕೆಲ ಮಾತುಗಳನ್ನು ಆಡಲೇಬೇಕಿದೆ. ಅದೂ ಈ ಮಾತುಗಳಲ್ಲಿ ಕೆಲವನ್ನು ಮೊನ್ನೆ ನನ್ನ ಮನೆಗೆ ಬಂದಿದ್ದ ಗೆಳೆಯ ಯೋಗೇಂದ್ರ ಯಾದವ್‌ರ ಬಳಿ ಆಡಲು ಯತ್ನಿಸಿ ಎದುರಿಸಿದ ಮುಜುಗರದ ನಂತರ ಇದರ ತಹತಹ ನನ್ನಲ್ಲಿ ಹೆಚ್ಚಿದೆ.

ಜನ ಬೆಂಬಲ ತಲೆ ತಿರುಗಿಸಿತೆ?

ಈ ಪಕ್ಷದ ಜನಬೆಂಬಲ ಅದರ ನಾಯಕರೇ ಒಪ್ಪಿಕೊಳ್ಳುತ್ತಿರುವಂತೆ ಈಗ ಗಣನೀಯವಾಗಿ ಕಡಿಮೆಯಾಗಲು ಕಾರಣವಾಗಿರುವ ದೆಹಲಿ ಗದ್ದುಗೆಗೆ ರಾಜೀನಾಮೆ ನೀಡುವ ನಿರ್ಧಾರಕ್ಕೆ ಏಕೆ ಬರಲಾಯಿತು? ತಮ್ಮ ಮುಖ್ಯ ಕಾರ್ಯಕ್ರಮವಾದ ಜನಲೋಕಪಾಲ್ ಮಸೂದೆಗೆ ಬೆಂಬಲ ಸಿಗಲಿಲ್ಲ ಎಂಬ ಕಾರಣದಿಂದ ರಾಜೀನಾಮೆ ನೀಡಬೇಕಾಯಿತೆಂದು ಹೇಳುವ ಇವರು ಕಾಂಗ್ರೆಸ್ ಬೆಂಬಲ ಪಡೆಯುವಾಗ ಅದರಿಂದ ಆ ವಾಗ್ದಾನ ಪಡೆದಿದ್ದರೇ? ಹಾಗಿದ್ದರೆ ಅದನ್ನೇಕೆ ಹೇಳುತ್ತಿಲ್ಲ? ಅಥವಾ ಜನ ಲೋಕಪಾಲ್ ಮಸೂದೆಯ ಹೊರತಾಗಿ ತಾನು ಜನತೆಗೆ ನೀಡಿದ್ದ ವಚನಗಳನ್ನು ಜಾರಿ ಮಾಡುವ ಮೂಲಕ ಜನರ ಮನಸ್ಸನ್ನು ಇನ್ನಷ್ಟು ಗೆದ್ದು ಆನಂತರ ಜನಲೋಕಪಾಲ್ ಮಸೂದೆ ಜಾರಿಗೆ ಯತ್ನಿಸಿದ್ದರೆ ವಿರೋಧ ಪಕ್ಷಗಳ ಮೇಲೂ ಒತ್ತಡ ಹೆಚ್ಚುತ್ತಿತ್ತು ಮತ್ತು ಆಗ ಸೋತಿದ್ದರೆ ಜನರ ಸಹಾನುಭೂತಿ ತಮ್ಮ ಪಾಲಾಗುತ್ತಿತ್ತಲ್ಲವೇ? ಈ ಸಾಮಾನ್ಯ ಪರಿಜ್ಞಾನವೂ ಇದರ ನಾಯಕರಿಗೇಕೆ ಇಲ್ಲವಾಯಿತು? ಹಾಗೇ, ಸರ್ಕಾರ ರಚಿಸಲು ಜನಾಭಿಪ್ರಾಯ ಕೇಳಲು ಮುಂದಾದ ಇವರಿಗೆ ಅದನ್ನು ತ್ಯಜಿಸಲೂ ಜನರ ಅಭಿಪ್ರಾಯ ಕೇಳಬೇಕೆಂಬ ಪರಿವೆ ಏಕೆ ಇರದೇ ಹೋಯಿತು? ಒಮ್ಮೆಗೇ ಕೇಂದ್ರ ಸರ್ಕಾರದ ಮೇಲೆ ಕಣ್ಣು ಬಿದ್ದಿತು? ಲೋಕಸಭಾ ಚುನಾವಣೆಗಳಿಗೆ ದೊಡ್ಡ ರೀತಿಯಲ್ಲಿ ಸ್ಪರ್ಧಿಸುವ ದುರಾಸೆಯೇಕೆ ಮೊಳೆತಿತು?

ಇದಕ್ಕೊಂದೇ ಉತ್ತರ: ದೆಹಲಿ ಚುನಾವಣೆಯಲ್ಲಿ ಕಂಡ ಅನಿರೀಕ್ಷಿತ ಬೆಂಬಲ ಇವರ ತಲೆ ತಿರುಗಿಸಿತ್ತು. ಬಂಗಲೆ ಕಾರುಗಳ ವಿಷಯದಲ್ಲಿ ಇವರು ನಡೆದುಕೊಂಡ ರೀತಿ ನನ್ನಲ್ಲಿ ಅಚ್ಚರಿ, ವಿಷಾದಗಳೆರಡನ್ನೂ ಹುಟ್ಟಿಸಿತ್ತು. ನಾನು ಯಾದವ್‌ರಿಗೆ ಆಗಲೇ ಈ ಬಗ್ಗೆ ನನ್ನ ಆತಂಕ ವ್ಯಕ್ತಪಡಿಸಿ ಒಂದು ತುರ್ತು ಸಂದೇಶ ಕಳಿಸಿದ್ದೆ. ಈಗಲೂ ಯಾವುದಾವುದೋ ವಿವರಣೆಗಳನ್ನು ನೀಡುತ್ತಾ ಕೇಜ್ರಿವಾಲ್‌ರು ಮಾಸಿಕ ಎಂಭತ್ತೈದು ಸಾವಿರ ರೂಪಾಯಿಗಳ ಬಾಡಿಗೆಯ 'ಬಂಗ್ಲೆ'ಯಲ್ಲೇ ವಾಸವಾಗಿರುವುದನ್ನು ನಾನಂತೂ ಒಪ್ಪಲಾರೆ. ಆರಂಭಿಕ ಹಂತದಲ್ಲೇ ಇವರಿಗೆ ಇಂತಹ ಅನಾಹುತಕಾರಿ ತಪ್ಪು ಮಾಡುವಷ್ಟು, ಮೈ ಮರೆಯುವಷ್ಟು ತಲೆ ತಿರುಗಿದರೆ ಗತಿಯೇನು?

ಆರ್ಥಿಕ ನೀತಿಯ ಸ್ಪಷ್ಟನೆಗೆ ಹಿಂಜರಿಕೆ ಏಕೆ?

ಮುಖ್ಯವಾಗಿ, ರಾಜಕೀಯ ಪಕ್ಷವೊಂದು ಹುಟ್ಟುವಾಗಲೇ ತನ್ನ ತತ್ವ ಪ್ರಣಾಲಿಯನ್ನು ಘೋಷಿಸಿಕೊಳ್ಳಬೇಕೆಂಬ ವಿಷಯ. ಹಾಗೆ ಘೋಷಿಸಿಕೊಳ್ಳದಿದ್ದರೆ, ಪಕ್ಷದ ಸ್ವರೂಪ ಜನಕ್ಕೆ ಗೊತ್ತಾಗುವುದಾದರೂ ಹೇಗೆ? ಇವರ ಭ್ರಷ್ಟಾಚಾರ ವಿರೋಧಿ ಕಾರ್ಯಕ್ರಮವೊಂದೇ ದೇಶದ ಸಮಸ್ಯೆಗಳನ್ನೆಲ್ಲ ಪರಿಹರಿಸಬಲ್ಲುದೆ? ಹಾಗೆ ಇವರು ನಂಬಿದ್ದರೆ ಇವರದ್ದು ಕೇವಲ ಮೇಲ್ಮೈ ರಾಜಕೀಯ ತಿಳುವಳಿಕೆಯಷ್ಟೆ ಎಂದು ಹೇಳಬೇಕಿದೆ. ಇವರ 'ಸ್ವರಾಜ್' ತತ್ವ ಪ್ರಣಾಳಿಯು ಒಂದು ರಾಜಕೀಯ ದಿಕ್ಕನ್ನು ನಿರ್ದೇಶಿಸುವುದಾದರೂ, ಅದು

ಪರಿಣಾಮಕಾರಿಯಾಗಿ ಜಾರಿಯಾಗಲು ಅದಕ್ಕೆ ಬೆನ್ನೆಲುಬಾಗಿ ಕೆಲಸ ಮಾಡಬೇಕಾದ ಆರ್ಥಿಕ ತತ್ವ ಪ್ರಣಾಲಿ ಸ್ಪಷ್ಟವಾಗದೇ ಹೋದರೆ, ಇವರು ಈ ದೇಶದ ಸಮಸ್ಯೆಗಳ ಚರಿತ್ರೆಯನ್ನು ಹೇಗೆ ವಿಶ್ಲೇಷಿಸುವರು ಹಾಗೂ ಅವನ್ನು ಹೇಗೆ ಪರಿಹರಿಸುವರು ಎಂಬುದರ ಹೊಳಹಾದರೂ ಜನಕ್ಕೆ ಹೇಗೆ ದೊರಕೀತು? ಇಂತಹ ತತ್ವ ಪ್ರಣಾಲಿಯ ಬಗ್ಗೆ ಕೇಜ್ರಿವಾಲ್ ಉಡಾಫೆಯ ಮಾತುಗಳನ್ನೇ ಆಡುತ್ತಾ ಹೋದರು. ನಾವು ಸಮಸ್ಯೆ ಎದುರಾದಂತೆ ಅವುಗಳ ಸ್ವರೂಪ ನೋಡಿ ಬಗೆಹರಿಸುತ್ತಾ ಹೋಗುತ್ತೇವೆ ಎಂದರು. ಅವುಗಳ ಸ್ವರೂಪವನ್ನು ನೀವು ನೋಡಲು ಬಳಸುವ ಪರಿಕರಗಳಾದರೂ ಯಾವುವು? ಅವನ್ನಾದರೂ ನೀವು ಹೇಳಬೇಕಲ್ಲವೇ? ಮೊದಲಾಗಿ ದೇಶದ ಇಂದಿನ ಸಮಸ್ಯೆಗಳನ್ನು ಬಿಡಿಬಿಡಿಯಾಗಿ ನೋಡಬಹುದು ಎಂಬ ಮಾತೇ ಅಪ್ರಬುದ್ಧವಾದದ್ದು. ವಿವಿಧ ಆರ್ಥಿಕ ತಾತ್ವಿಕತೆಯ ಹಿನ್ನೆಲೆಗಳುಳ್ಳ–ಮೀರಾ ಸನ್ಯಾಲ್‌ರಿಂದ ಮೇಧಾ ಪಾಟ್ಕರ್‌ವರೆಗೆ,– ಜನವಿರಬಹುದಾದ ಸರ್ಕಾರದಲ್ಲಿ ಇದು ಸೃಷ್ಟಿಸುವ ಗೊಂದಲದ ಅರಿವಾದರೂ ಇವರಿಗಿದೆಯೇ?

ಮುಕ್ತ ಬಂಡವಾಳಶಾಹಿ ಮತ್ತು ಭ್ರಷ್ಟಾಚಾರ

ಮತ್ತೂ ಮುಖ್ಯವಾಗಿ, ಭ್ರಷ್ಟಾಚಾರ ಒಂದು ಮುಖ್ಯ ಚುನಾವಣಾ ವಿಷಯವಾಗುವಷ್ಟು ಬೃಹದಾಕಾರವಾಗಿ ಬೆಳೆಯಲು ಕಾರಣವೇನು ಎಂಬುದನ್ನು ಇವರು ಅರಿಯದವರೇನಲ್ಲ. ಭ್ರಷ್ಟಾಚಾರದ ಬೀಜಗಳು ನಾವು ಒಪ್ಪಿಕೊಂಡಿರುವ ರಾಷ್ಟ್ರ ವ್ಯವಸ್ಥೆಯಲ್ಲೇ ಅಂತರ್ಗತವಾಗಿವೆ. ಈ ವ್ಯವಸ್ಥೆಯ ಏಕಾತ್ಮಕ ರಾಷ್ಟ್ರ ಸಂವಿಧಾನದಲ್ಲೇ ಅವಿವೆ. ಆದರೆ ಹಿಂದೆ ಸಣ್ಣ ಪುಟ್ಟ ಗಿಡಗಳಾಗಿ ಅಲ್ಲಲ್ಲಿ ಕಾಣುತ್ತಿದ್ದ ಭ್ರಷ್ಟಾಚಾರದ ಈ ಬೀಜಗಳು ಬೃಹದಾಕಾರವಾಗಿ ಬೆಳೆಯಲು ಮತ್ತು ಆ ಮೂಲಕ ನಮಗೆ ಗೊತ್ತಾಗುವ ಮೊದಲೇ ನಮ್ಮ ಸಾಂಸ್ಕೃತಿಕ ನೆಲಗಟ್ಟನ್ನೇ ಬುಡಮೇಲುಗೊಳಿಸಿ ನಮ್ಮನ್ನು ನಮ್ಮ ಅಸ್ಮಿತೆಯ ದ್ವಂದ್ವಕ್ಕೆ ದೂಡಲು ಅನುಕೂಲ ಮಾಡಿಕೊಟ್ಟದ್ದು ಮುಕ್ತ ಮಾರುಕಟ್ಟೆ ಆರ್ಥಿಕ ನೀತಿ. ಅದು ತನ್ನ ಈ ಮುಕ್ತ ನೀತಿಗನುಸಾರವಾಗಿ 'ಅಭಿವೃದ್ಧಿ'ಯ ಹೆಸರಿನಲ್ಲಿ ಹೊರಗಿಂದ ಎಗ್ಗಿಲ್ಲದೆ ತಂದು ಸುರಿಯತೊಡಗಿದ ರಾಶಿ ರಾಶಿ ಹಣ.

ಮೊನ್ನೆ ಅರ್ಥಶಾಸ್ತ್ರಜ್ಞ ಶಂಕರ ಅಯ್ಯರ್ ಟಿವಿ ಕಾರ್ಯಕ್ರಮವೊಂದರಲ್ಲಿ ನೀಡಿದ ಅಂಕಿ ಅಂಶದ ಪ್ರಕಾರ ಮನಮೋಹನ ಸಿಂಗ್ ಎರಡನೇ ಬಾರಿಗೆ ಅಧಿಕಾರ ಸ್ವೀಕಾರ ಮಾಡಿದಾಗ ರಾಷ್ಟ್ರ ದಿನಕ್ಕೆ ೨೨ ಕೋಟಿ ರೂಪಾಯಿಗಳ ಸಾಲ ಮಾಡುತ್ತಿತ್ತು. ಅದೀಗ ತಾಸಿಗೆ ೬೩ ಕೋಟಿ ರೂಪಾಯಿಗಳನ್ನು ತಲುಪಿದೆಯಂತೆ! ಇದು ನಮ್ಮ ರಾಷ್ಟ್ರದಲ್ಲಿ ಆಗುತ್ತಿರುವ ಬೃಹತ್ ಅಭಿವೃದ್ಧಿಯ ಮಾದರಿ! ಮೋದಿ ಬಂದರೆ ಈ 'ಅಭಿವೃದ್ಧಿ' ಇನ್ನಷ್ಟು ತೀವ್ರಗೊಳ್ಳಲಿದೆಯಷ್ಟೆ. ಅದರ ಜೊತೆಗೆ ಇನ್ನಷ್ಟು ದ್ವಂದ್ವಗಳು! ಈ ಬೃಹತ್ ಪ್ರಮಾಣದ ಹಣದ ವಹಿವಾಟು ನಡೆಯುತ್ತಿರುವಾಗ ಈ ವಹಿವಾಟಿನ ಕಾಡಿನಲ್ಲಿ ಮತ್ತು ಇದರೊಂದಿಗೆ ಬೆಸೆದುಕೊಂಡ ನಮ್ಮ ಕಾನೂನುಗಳ ದಟ್ಟಡವಿಯಲ್ಲಿ ಯಾರು ಹೇಗೆ ಎಷ್ಟು ದೋಚುವರೋ ಅದನ್ನು ಪತ್ತೆ ಮಾಡುವುದು ಅಷ್ಟು ಸುಲಭದ

ಕೆಲಸವಾಗಲಾರದು. ಹಾಗಾಗಿಯೇ ಇಂತಹ (ಮುಕ್ತ ಬಂಡವಾಳಶಾಹಿಯ ಬೃಹತ್ ಹಣ ವ್ಯವಹಾರದ ಕೇಂದ್ರೀಯ ರಾಷ್ಟ್ರ) ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಸಹಜ, ಸ್ವೀಕಾರಾರ್ಹ ಅಥವಾ ಕ್ಷಮ್ಯ ಎಂಬ ಅರ್ಥಶಾಸ್ತ್ರೀಯ ಪಾಠವನ್ನು ಬಹುಶಃ ಬಂಡವಾಳಶಾಹಿ ಅರ್ಥಶಾಸ್ತ್ರದ ಒಂದು ಉಪ ಪ್ರಮೇಯವಾಗಿ ಕಲಿತಿದ್ದರಿಂದಲೇ 'ಶುದ್ಧ' ವ್ಯಕ್ತಿತ್ವದ ಮನಮೋಹನ ಸಿಂಗ್ ಅದರ ಬಗ್ಗೆ ಅಷ್ಟು ಗಮನ ಕೊಡಲಿಲ್ಲವೆಂದು ಕಾಣುತ್ತದೆ. ಮೋದಿ ಬಂದರೂ ಬಂಡವಾಳಶಾಹಿಯ ಈ ಆನುಷಂಗಿಕ ತರ್ಕ ಬದಲಾಗುವುದಿಲ್ಲ. ಹೆಚ್ಚೆಂದರೆ ಮೋದಿ ಇದನ್ನು ತಮ್ಮ ಬಲಿಷ್ಠ ಆಡಳಿತ ಶೈಲಿಯನ್ನು ಬಳಸಿ ಮುಚ್ಚಿಹಾಕಿಯಾರು. ಅದೇನೇ ಇರಲಿ, ಈ ಬಗ್ಗೆಯೂ ನಾನು ಆಂ ಆದ್ಮಿ ಪಕ್ಷಕ್ಕೆ ಬರೆದೆ, ತುರ್ತು ಸಂದೇಶಗಳನ್ನು ಕಳಿಸಿದೆ. ಪ್ರಯೋಜನವಾಗಲಿಲ್ಲ.

ಕೆಟ್ಟ ಜಾಣತನ–ಸಿನಿಕ ಮಾತು

ಆದರೆ ಕೇಜ್ರಿವಾಲ್‌ರಿಗಾಗಲೀ ಅಥವಾ ಅವರ ಸಹಚರರಿಗಾಗಲೀ ಇದೆಲ್ಲ ಅರ್ಥವಾಗಿಲ್ಲ ಎಂದು ಹೇಳಲಾಗದು. ಅವರೊಂದಿಗೆ, ಯೋಗೇಂದ್ರರಿಂದ ಹಿಡಿದು ದೇಶದ ಪ್ರಜ್ವಲ ಬುದ್ಧಿಮತ್ತೆಯ ಒಂದು ದೊಡ್ಡ ಸೈನ್ಯವೇ ಇದೆ! ಆದರೂ ಅವರೇಕೆ ತಮ್ಮ ಆರ್ಥಿಕ ನೀತಿಯನ್ನು ಸ್ಪಷ್ಟಪಡಿಸುತ್ತಿಲ್ಲ ಎಂದು ಯೋಚಿಸಿದಾಗ ನನ್ನ ಕಣ್ಮುಂದೆ ಬಂದದ್ದು ಅದೇ ಕಾರಣ: ರಾಷ್ಟ್ರ ರಾಜಕಾರಣದಲ್ಲಿ ಪಾತ್ರ ವಹಿಸುವ ಮಹತ್ವಾಕಾಂಕ್ಷೆ ಸೃಷ್ಟಿಸಿದ ಕುರುಡು. ಭ್ರಷ್ಟಾಚಾರದ ವಿರುದ್ಧದ ಕೂಗಿನಿಂದ ತಮ್ಮ ಹಿಂದೆ ಯಾರೆಲ್ಲ ಬಂದಿದ್ದಾರೋ, ಅವರಲ್ಲಿ ಯಾರೊಬ್ಬರ ಬೆಂಬಲವನ್ನೂ ಸದ್ಯಕ್ಕೆ ಕಳೆದುಕೊಳ್ಳಬಾರದೆಂಬ ಹುಂಬ ನಿಲುವಿದು. 'ಸ್ವರಾಜ್' (ಸಂಪೂರ್ಣ ರಾಜಕೀಯ ಮತ್ತು ಆಡಳಿತ ವಿಕೇಂದ್ರೀಕರಣ) ನೀತಿ ಜಾರಿಗೆ ಸಹಜ ಅಗತ್ಯವಾದ ಆರ್ಥಿಕ ನೀತಿಯನ್ನು ಮುಖ್ಯವಾಗಿ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯ ವಿರೋಧವನ್ನು ಘೋಷಿಸಿದರೆ ಇವರಲ್ಲಿ ಅರ್ಧ ಜನ ತಮ್ಮನ್ನು ಬಿಟ್ಟುಹೋಗುವರೆಂಬ ಭಯದ ಪರಿಣಾಮ ಇದು. ಇದು ಕೆಟ್ಟ ಜಾಣತನವಲ್ಲದೆ ಮತ್ತೇನಲ್ಲ. ಹಾಗಾಗಿ, ಮುಂದೊಂದು ದಿನ ಅಧಿಕಾರ ವಹಿಸಿಕೊಳ್ಳಬಯಸುವ ಜನ ಪಕ್ಷವನ್ನು ಕಟ್ಟುವ ರೀತಿ ಇದಲ್ಲ ಎಂದು ಹೇಳಲೇಬೇಕಿದೆ.

ಇದನ್ನು ನಾನು ಯೋಗೇಂದ್ರ ಯಾದವ್ ಮೊನ್ನೆ ನಮ್ಮ ಮನೆಗೆ ಬಂದಿದ್ದಾಗ ನೇರವಾಗಿ ಹೇಳಿದೆ. ನನ್ನಿಂದ ಈ ನೇರ ಮಾತನ್ನು ನಿರೀಕ್ಷಿಸದಿದ್ದ ಅವರು ಸ್ವಲ್ಪ ವ್ಯಗ್ರರಾಗಿಯೇ, ನಿಮ್ಮಂತಹ ಓದು ಬರಹಗಳ ಮತ್ತು ಪತ್ರಿಕೆ ಮಾಡುವ ವ್ಯಕ್ತಿ ನಮ್ಮ ಪ್ರಣಾಳಿಕೆಯನ್ನು ನೋಡದೆ ಇಷ್ಟು ಬೇಜವಾಬ್ದಾರಿಯಿಂದ ಮಾತಾಡಬಾರದು ಎಂದರು. ಅವರ ಚುನಾವಣಾ ಪ್ರಣಾಳಿಕೆಯ ಬಗ್ಗೆ ಪತ್ರಿಕೆಯಲ್ಲಿ ಓದಿ ಅದರಲ್ಲಿ ಅವರ ಆರ್ಥಿಕ ನೀತಿಯ ಪ್ರಸ್ತಾಪವಿಲ್ಲದಿದ್ದುದನ್ನೂ ಗಮನಿಸಿದ್ದ ನಾನು ಇವರ ಮಾತಿನಿಂದ ಸ್ವಲ್ಪ ವಿಚಲಿತನಾಗಿಯೇ 'ಅಲ್ಲೇನೂ ಆ ತರದ್ದು ಕಾಣಲಿಲ್ಲ' ಎಂದೆ. ಅದಕ್ಕವರು, ನೀವು ಅಂತರ್ಜಾಲ ತೆರೆದು ನಮ್ಮ ಪ್ರಣಾಳಿಕೆ ನೋಡಿ, ನಮ್ಮ ಆರ್ಥಿಕ ನೀತಿ ಅದರಲ್ಲಿದೆ

ಎನ್ನುತ್ತಾ ಆರ್ಥಿಕ ನೀತಿ ಇದೆಲ್ಲ ನಮ್ಮ ಬುದ್ಧಿಜೀವಿಗಳು ಕೇಳುವ ಪ್ರಶ್ನೆಯಷ್ಟೆ ಎಂದು ಗೊಣಗಿದರು. ಇಂತಹ ಸಿನಿಕ ಮಾತನ್ನು ಯೋಗೇಂದ್ರರಿಂದ ನಿರೀಕ್ಷಿಸದಿದ್ದ ನಾನು, "ನೀವೂ ಬಿಜೆಪಿಯವರಂತೆಯೇ ಬುದ್ಧಿಜೀವಿಗಳನ್ನು ವ್ಯಂಗ್ಯ ಮಾಡಹೊರಟಿರಾ! ನೀವು ಯಾವ ಬುದ್ಧಿಜೀವಿಗಳ ಬಗ್ಗೆ ಮಾತಾಡುತ್ತಿದ್ದೀರೋ ತಿಳಿಯದು. ಆದರೆ ನಿಮಗೆ ಗೊತ್ತಿರಬೇಕು, ನಿಜವಾದ ಬುದ್ಧಿಜೀವಿ ಜನಸಾಮಾನ್ಯರ ಪರವಾಗಿ ಪ್ರಶ್ನೆ ಎತ್ತುತ್ತಿರುತ್ತಾನೆ. ನೀವು ಅಂತರ್ಜಾಲದ ಪಕ್ಷವಾಗಿ ಹೋದಿರಾ!!" ಎಂದೆ. ಯಾದವ್‌ಗೆ ಇದರಿಂದ ಕಸಿವಿಸಿಯಾದಂತಾಗಿ, 'ನಿಮ್ಮ ಮನಸ್ಸು ಇಂದು ಏಕೋ ಸರಿಯಾಗಿದ್ದಂತಿಲ್ಲ. ಈಗ ಮಾತು ಮುಂದುವರೆಸುವುದು ಬೇಡ. ದಯವಿಟ್ಟು ನಿಮ್ಮ ಬೆಂಬಲ ಸದಾ ನಮಗಿರಲಿ' ಎಂದು ವಂದಿಸಿ ಹೊರಟರು.

ನಾನು ಕೂಡಲೇ ನನ್ನ ಗಣಕದಲ್ಲಿ ಅಂತರ್ಜಾಲ ತೆರೆದು ಆಂ ಆದ್ಮಿ ಪಕ್ಷದ ಪ್ರಣಾಳಿಕೆ ನೋಡಿದೆ. ಆರ್ಥಿಕ ನೀತಿಗಾಗಿ ಹುಡುಕಿದೆ. ನಿಜ, ಅದರ ಪ್ರಣಾಳಿಕೆಯಲ್ಲಿ ಆರ್ಥಿಕತೆ ಕುರಿತ ಪ್ರತ್ಯೇಕ ಅಧ್ಯಾಯವಿದೆ. ಆದರೆ ತನ್ನದೆನ್ನುವ ಆರ್ಥಿಕ ನೀತಿ ಎಂಬುದು ನಿರ್ದಿಷ್ಟವಾಗಿ ಅಲ್ಲಿ ನಿರೂಪಿತವಾಗಿಲ್ಲ. ಎಲ್ಲ ಪಕ್ಷಗಳಂತೆ ಇದೂ ಎಲ್ಲರ ಸಮಾನ ಆರ್ಥಿಕ ಪಾಲಿನ, ಪರಿಸರ ಸಮತೋಲನದ ಸುಸ್ಥಿರ ಅಭಿವೃದ್ಧಿಯ ಬಗ್ಗೆ ದುಂಡು ದುಂಡಾಗಿ ಮಾತನಾಡುತ್ತದೆ. ಇತರ ಪಕ್ಷಗಳಿಗೆ ಒಂದು ಆರ್ಥಿಕ ನೀತಿಯಿಲ್ಲ ಎಂದು ಇಲ್ಲಿ ಜರಿಯುವ ಈ ಪಕ್ಷ ತನ್ನ ಆರ್ಥಿಕ ನೀತಿಯನ್ನು ಮಾತ್ರ ಮುಂದೆ ಅನುಭವಗಳ ಆಧಾರದ ಮೇಲೆ ಕಲಿತು ರೂಪಿಸಿಕೊಳ್ಳುವುದಾಗಿ ಹೇಳುತ್ತದೆ! ಭ್ರಷ್ಟಾಚಾರವೂ ಸೇರಿದಂತೆ ಇಂದಿನ ಎಲ್ಲ ರಾಜಕೀಯ ಮತ್ತು ಸಾಮಾಜಿಕ ಅನೈತಿಕತೆಗಳ ಮೂಲದಲ್ಲಿರುವ ಪ್ರಚಲಿತ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯ ಬಗ್ಗೆ ಇಲ್ಲಿ ಒಂದು ಮಾತಿಲ್ಲ! ತಾನು ಇತರ ಪಕ್ಷಗಳಂತೆ ಎಡ ಅಥವಾ ಬಲದ ಪಕ್ಷ ಎಂದು ಕರೆದುಕೊಳ್ಳ ಬಯಸುವುದಿಲ್ಲ ಎಂದು ಇಲ್ಲಿ ಹೇಳುವ ಈ ಪಕ್ಷವನ್ನು ಯಾರೂ ತನ್ನನ್ನು ಹಾಗೆ ವರ್ಗೀಕರಿಸಿಕೊಳ್ಳಬೇಕೆಂದು ಕೇಳುತ್ತಿಲ್ಲ; ಬದಲಾಗಿ ಚರಿತ್ರೆಯ ನಿನ್ನ ಓದು ಏನು? ಆ ಆಧಾರದ ಮೇಲೆ ನೀನು ನಡೆಯಬೇಕಾದ ದಿಕ್ಕು ಯಾವುದೆಂದು ಯೋಚಿಸಿದ್ದೀಯೆ ಎಂಬ ಪ್ರಶ್ನೆ ಇದು. ಇದಕ್ಕೆ ಇಲ್ಲಿ ಉತ್ತರವಿಲ್ಲ. ಇತರೆ ಪಕ್ಷಗಳಂತೆಯೇ ಹಲವು ಜನ ಕೋಟ್ಯಾಧಿಪತಿಗಳಿಗೆ ಟಿಕೆಟ್ ನೀಡಿರುವ ಪಕ್ಷ ಎದುರಿಸಬೇಕಾದ ಕೆಟ್ಟ ಸಂದಿಗ್ಧವಿದು.!

ಶ್ರೀಮಂತ ಭೋಜನ ಕೂಟ: 'ಆಂ ಆದ್ಮಿ'ಯ ಅರ್ಥ ಪಲ್ಲಟ!

ಈ ಪಕ್ಷ ಓರ್ವ ದೊಡ್ಡ ಕೋಟ್ಯಾಧಿಪತಿಗೆ ಬೆಂಗಳೂರಿನಲ್ಲಿ ಟಿಕೆಟ್ ನೀಡಿದ ಒಂದು ಪರಿಣಾಮವನ್ನು ನೀವು ಗಮನಿಸಿರಬೇಕು. ಕೇಜ್ರಿವಾಲರು ಬೆಂಗಳೂರಿಗೆ ಬಂದಾಗ ಪಕ್ಷದ ದೇಣಿಗೆ ಸಂಗ್ರಹಿಸಲು ವೈಭವೋಪೇತ ಹೋಟೆಲ್‌ವೊಂದರಲ್ಲಿ ಅವರೊಂದಿಗೆ ಊಟವೊಂದಕ್ಕೆ ತಲಾ ಇಪ್ಪತ್ತು ಸಾವಿರ ರೂಪಾಯಿಗಳ ದರದ ಭೋಜನಕೂಟವೊಂದರ ಕಲ್ಪನೆಯನ್ನು ಈ ಕೋಟ್ಯಾಧಿಪತಿ ನೀಡಿದರು! ಗುರಿಯ

ನೈತಿಕತೆ ಮಾರ್ಗದ ನೈತಿಕತೆಯ ವಿಸ್ತರಣೆ ಮಾತ್ರ ಎಂದರಿಯದ ರೂಕ್ಷ ಮನಸ್ಸು ಮಾತ್ರ ಇಂತಹ ರೀತಿಯ ಪಕ್ಷ ಸಂಘಟನೆಯನ್ನು ಒಪ್ಪಿಕೊಳ್ಳಬಲ್ಲುದು. ಈ ಭೋಜನಕೂಟಕ್ಕೆ ಕಾಶ್ಮೀರದಿಂದ, ಮುಂಬೈ-ಪುಣೆ-ಊಟಿಗಳಿಂದ ಜನ ಬಂದಿದ್ದರಂತೆ! ಈ ಭೋಜನ ಕೂಟವನ್ನು ಏರ್ಪಡಿಸಿದ್ದ ಸರ್ಜನ್‌ರೆಂದು ಟಿವಿಯಲ್ಲಿ ಪರಿಚಯಿಸಿಕೊಂಡ ಓರ್ವ ಮಹನೀಯರು ಇದನ್ನು ಎಂತಹ ನೈತಿಕ ಪರಿಶುದ್ಧತೆಯ ದುರಹಂಕಾರದ ಮಾತುಗಳಿಂದ ಸಮರ್ಥಿಸಿಕೊಂಡರೆಂದರೆ, ಅವರ ಮಾತುಗಳಲ್ಲಿ ಬೇಡವೆಂದರೂ ಮೋದಿ ಇಣುಕಿ ನೋಡುತ್ತಿದ್ದರು. ಇವರು ಆಂ ಆದ್ಮಿ ಎಂಬ ಶಬ್ದಕ್ಕೆ ಹೊಸ ವ್ಯಾಖ್ಯಾನವನ್ನೇ ನೀಡಿದರು: ಈ ವ್ಯವಸ್ಥೆಯ ಭ್ರಷ್ಟಾಚಾರದಿಂದ ಯಾರ್‍ಯಾರು ತೊಂದರೆಗೊಳಗಾಗಿದ್ದಾರೋ ಅವರೆಲ್ಲ ಆಂ ಆದ್ಮಿಗಳೇ!

ಅಂದರೆ ಇವರು ಮತ್ತು ಇವರ ಗೆಣೆಕಾರರು ಸದರಿ ಅಭಿವೃದ್ಧಿ ಮಾದರಿಯಲ್ಲಿ ತಮ್ಮ ಚಟುವಟಿಕೆಗಳ ಮೂಲಕ ಕೋಟಿ ಕೋಟಿ ಸಂಪಾದಿಸಲು ಭ್ರಷ್ಟಾಚಾರ ಮುಕ್ತ ವ್ಯವಸ್ಥೆಯೊಂದನ್ನು ಆಂ ಆದ್ಮಿ ಪಕ್ಷ ನಿರ್ಮಿಸಿಕೊಡಬೇಕು! ಇವರ ಪ್ರಕಾರ ಕೋಟಿ ಕೋಟಿ ಸಂಪಾದಿಸಿ ಕೂಡಿಟ್ಟುಕೊಳ್ಳುವುದು ಭ್ರಷ್ಟಾಚಾರವಲ್ಲ! ಇದು ಇಂದು ಇವರು ಭ್ರಷ್ಟಾಚಾರಕ್ಕೆ ಒದಗಿಸಿರುವ ಅರ್ಥ! ಕಾನೂನು ಪಾಲಿಸಿ ಎಷ್ಟಾದರೂ ಸಂಪಾದಿಸಬಹುದು ಎಂಬ ಮಾತಿನಲ್ಲೇ ನಮ್ಮ ಕಾನೂನುಗಳು ಮತ್ತು ಅವು ಕೂಡಿ ಕಟ್ಟಿರುವ ನಮ್ಮ ಪ್ರಭುತ್ವ ಎಂಬುದು ಎಷ್ಟು ಅನೈತಿಕವೂ, ದುಷ್ಟವೂ ಆಗಿದೆ ಎಂಬ ಸತ್ಯ ಅಡಗಿದೆ. ಈ ಮಾತಿನ ವಿಲೋಮ ನೋಡಿ: ಈ ಕಾನೂನುಗಳ ಕೃಪೆಯಡಿ ನಮ್ಮ ಬಹುಸಂಖ್ಯಾತ ಜನರು ವರ್ಷಾನುಗಟ್ಟಲೆ ದುಡಿದರೂ ಕಡುಬಡವರಾಗಿಯೇ ಉಳಿದು ಪ್ರಭುತ್ವದ ಅನ್ನ ಭಿಕ್ಷೆ, ಉದ್ಯೋಗ ಭಿಕ್ಷೆ, ಸಾಲ ಭಿಕ್ಷೆ, ಶಾದಿ ಭಿಕ್ಷೆ ಇತ್ಯಾದಿ ದಾನ ಧರ್ಮಗಳ ಕಕ್ಷೆಯಲ್ಲಿಯೇ ಬದುಕುವ ಅವಕಾಶವನ್ನೂ ಕಲ್ಪಿಸಿಕೊಡಲಾಗಿದೆ!

ಕೆಲವರ ಕೋಟಿ ಕೋಟಿ ಸಂಪಾದನೆಗೂ, ಹಲವರ ಇಂದಿನ ಈ ಭಿಕ್ಷಾಂದೇಹಿ ಸ್ಥಿತಿಗೂ ನೇರ ಸಂಬಂಧವಿದೆ. ಈ ಸಂಬಂಧವನ್ನು ಕಲ್ಪಿಸಿರುವುದು ನಮ್ಮ ಕಾನೂನುಗಳು ಮತ್ತು ಅದರ ಹಿಂದಿನ ರಾಜಕೀಯ ಮನಸ್ಸು ಕಟ್ಟಿರುವ ವ್ಯವಸ್ಥೆಯೇ ಆಗಿದೆ. ಈ ಗುಟ್ಟನ್ನು ಯಾವ ರಾಜಕೀಯ ಪಕ್ಷವೂ ಭೇದಿಸುವುದಿರಲಿ, ಬಿಟ್ಟುಕೊಡುತ್ತಲೂ ಇಲ್ಲ. ಒಬ್ಬನಿಗೆ ಒಂದು ಬಹುರಾಷ್ಟ್ರೀಯ ಸಂಸ್ಥೆ ವರ್ಷಕ್ಕೆ ೧೧೨ ಕೋಟಿ ರೂಪಾಯಿಗಳ ಸಂಬಳ ಕೊಡುತ್ತದೆ ಎಂಬ ಸುದ್ದಿ ಆ ಸಂಬಳ ಪಡೆಯುವವನು ಒಬ್ಬ ಭಾರತೀಯ ಎಂಬುದರಿಂದಾಗಿ ಬಹುಜನರಲ್ಲಿ ರೋಮಾಂಚನ ಉಂಟಾಗುವಂತಹ ವಿಕ್ಷಿಪ್ತ ಮನಸ್ಸಿನ ದೇಶವನ್ನು ಇಂದು ಕಟ್ಟಲಾಗಿದೆ. ಯಾವನೇ ಎಷ್ಟೇ ಬುದ್ಧಿವಂತನಾದರೂ, ಎಷ್ಟೇ ಕಷ್ಟಪಟ್ಟರೂ ಇಷ್ಟು ಪ್ರತಿಫಲ ಅವನಿಗೆ ದಕ್ಕುವುದು ಎಷ್ಟು ಸಾಧು, ನ್ಯಾಯ; ಇದರ ಪರಿಣಾಮಗಳೇನು ಮತ್ತು ಇಂತಹ ಅನ್ಯಾಯವನ್ನು ಸೃಷ್ಟಿಸಿ ಅದನ್ನು ಜಿಗುಪ್ಸೆಯ ಬದಲಾಗಿ ರೋಮಾಂಚನದ ಸಂಗತಿಯನ್ನಾಗಿ ಮಾಡಿರುವ ನಮ್ಮ ಆರ್ಥಿಕ ವ್ಯವಸ್ಥೆ

ಮೂಲತಃ ಒಟ್ಟಿಗೇ ಎಷ್ಟು ವಿಕ್ಷಿಪ್ತವಾಗಿ ಹೋಗಿದೆ ಎಂಬ ಆಲೋಚನೆಯೂ ಜನಸಾಮಾನ್ಯನ ಹತ್ತಿರ ಸುಳಿಯದಂತಹ ಆಸೆಬುರುಕ ಸಮಾಜವನ್ನು ಈ ಪ್ರಭುತ್ವ ಸೃಷ್ಟಿಸಿದೆ. ಆದರೆ ಈ ದೇಶದ ದುರಂತವೆಂದರೆ ಇಂದು ಸ್ವತಃ ಆ 'ಜನಸಾಮಾನ್ಯ'ನ ಹೆಸರಿನಲ್ಲಿ ಸ್ಥಾಪಿತವಾದ ಪಕ್ಷವೇ ನಿಧಾನವಾಗಿ ಆ ಶಬ್ದದ ಅರ್ಥವನ್ನೇ ಪಲ್ಲಟಗೊಳಿಸ ಹೊರಟಿರುವುದು.

ದೆಹಲಿಯ ಬೀದಿಗಳಲ್ಲಿ ಕಂಡಿದ್ದ ಲೋಹಿಯಾ

ಕೇಜ್ರಿವಾಲರನ್ನು ಅಣ್ಣಾ ಆಂದೋಲನದ ಆರಂಭದ ದಿನಗಳಿಂದಲೂ ಅವರ ಮಾತು-ವಿಚಾರ-ವರ್ತನೆಗಳ ನೆಲೆಯಲ್ಲಿ ಸೂಕ್ಷ್ಮವಾಗಿ ಗಮನಿಸುತ್ತಾ ಬಂದಿದ್ದೇನೆ. ಅವರು ದೆಹಲಿಯ ಮುಖ್ಯಮಂತ್ರಿಯಾಗಿ ದೆಹಲಿ ಪೋಲೀಸರ ಸಮಸ್ಯೆ ಸಂಬಂಧವಾಗಿ ದೆಹಲಿ ಜನರೊಂದಿಗೆ ಬೀದಿಗಿಳಿದು ಅಹೋರಾತ್ರಿ ಉಪವಾಸ ಕೂತಾಗ ಅವರಲ್ಲಿ ನಾನು ನನ್ನ ಪ್ರಿಯ ನಾಯಕ ಲೋಹಿಯಾರನ್ನು ಕಂಡಿದ್ದೆ. ಅವರ ಮಾತು, ವರ್ತನೆಗಳಲ್ಲಿ ಲೋಹಿಯಾ ಅನುರಣಿಸುತ್ತಿದ್ದರು. ಆಗ ಅವರಿಗೆ 'ಲೋಹಿಯಾ ಜೀವಂತವಾಗಿದ್ದಾರೆ; ದೆಹಲಿಯ ಬೀದಿಗಳಲ್ಲಿ ಅವರು ಮಿಡುಕುತ್ತಿದ್ದಾರೆ' ಎಂದು ಸಂದೇಶ ಕಳಿಸಿದ್ದೆ. ಆದರೀಗ ಅತಿ ಉತ್ಸಾಹದಲ್ಲಿ ದಾರಿ ತಪ್ಪಿರುವ ಅವರು ಸಲ್ಲದ ಅವಸರದಲ್ಲಿ ತಪ್ಪು ನಿರ್ಧಾರಗಳನ್ನೂ ತೆಗೆದುಕೊಳ್ಳತೊಡಗಿದ್ದಾರೆ. ತಪ್ಪು ಮಾತುಗಳನ್ನು ಆಡತೊಡಗಿದ್ದಾರೆ. ಮೂರೇ ತಿಂಗಳುಗಳಲ್ಲಿ ಆಂ ಆದ್ಮಿ ಪಕ್ಷ ಸ್ಥಾಪನೆಯ ಎಲ್ಲ ಉದ್ದೇಶಗಳನ್ನೂ ಸಾಕ್ಷಾತ್ಕರಿಸಿಕೊಂಡು ಬಿಡಬೇಕೆಂಬ ಹುಂಬ ಹಂಬಲವಿದು. ಸ್ವಲ್ಪ ಕಟುವಾಗಿಯೇ ಹೇಳಬೇಕಾದರೆ ಇದು ಮಹಾ ಅವಿವೇಕ.

ಇಲ್ಲದಿದ್ದರೆ ಇವರು ಈ ಲೋಕಸಭಾ ಚುನಾವಣೆಗಳಿಗಾಗಿ ರಾಷ್ಟ್ರಾದ್ಯಂತ ನಾಲ್ಕು ನೂರಕ್ಕೂ ಹೆಚ್ಚು ಉಮೇದುವಾರರನ್ನು ನಿಲ್ಲಿಸುವುದೆಂದರೇನು? ಹಾಗೆ ನಿಲ್ಲಿಸುವ ಅವಸರದಲ್ಲಿ ತಮ್ಮ ಪಕ್ಷದ ಮೂಲ ಬದ್ಧತೆ ಮತ್ತು ತತ್ವಗಳನ್ನೇ ನಿರ್ಲಕ್ಷಿಸಿ ಯಾರೆಂದರವರಿಗೆ ಟಿಕೆಟ್ ನೀಡುವುದೆಂದರೇನು? ಹೀಗೆ ಮಾಡಿ, ಹಣದ ಕೊರತೆ ಉಂಟಾಗಿದೆ; ದೇಣಿಗೆ ಬೇಕು ಎಂದು ಕರೆ ಕೊಡುವುದೆಂದರೇನು? ಇವರು ಪ್ರತಿಪಾದಿಸುವ ಸುಸ್ಥಿರ ಅಭಿವೃದ್ಧಿಗೆ ಒಂದು ಸುಸ್ಥಿರ ರಾಜಕಾರಣವೂ ಅಗತ್ಯವಲ್ಲವೇ? ಅದಕ್ಕೊಂದು ಸುಸ್ಥಿರ ಪಕ್ಷ ಸಂಘಟನೆಯೂ ಅಗತ್ಯವಲ್ಲವೇ?

ಕರ್ನಾಟಕದ ಅವಾಂತರಗಳು

ಕರ್ನಾಟಕದಲ್ಲಿನ ಈ ಪಕ್ಷದ ಸಂಘಟನೆಯ ಬಗ್ಗೆ ಎಷ್ಟು ಜನಕ್ಕೆ ಗೊತ್ತು? ಇಲ್ಲಿ ಇದರ ನಾಯಕರೆಂದೂ, ರಾಷ್ಟ್ರೀಯ ವಕ್ತಾರರೆಂದೂ ಘೋಷಿಸಲಾಗಿರುವವರ ಹಿನ್ನೆಲೆ, ಪರಿಚಯ ಈ ರಾಜ್ಯದಲ್ಲಿರುವ ನನ್ನಂತಹ ಆಂ ಆದ್ಮಿ ಪಕ್ಷದ ಬೆಂಬಲಿಗರಲ್ಲಿ ಎಷ್ಟು

ಜನರಿಗೆ ತಿಳಿದಿದೆ? ದೆಹಲಿ ಕೇಂದ್ರದಿಂದ ಬೆಂಗಳೂರು ಕೇಂದ್ರಕ್ಕೆ ವಿಸ್ತರಿಸಲ್ಪಟ್ಟ ಈ ಪಕ್ಷದ ಅಧಿಕಾರ ಹಸ್ತವಷ್ಟೇ ರಾಜ್ಯದಲ್ಲಿ ಈ ಪಕ್ಷವನ್ನು ಸೃಷ್ಟಿಸಿದಂತಿದೆ. ಜನರಲ್ಲ. ಹಾಗಾಗಿ ಒಂದು ವಿಚಾರವಾಗಿ ಆಂ ಆದ್ಮಿ ಪಕ್ಷ ಈ ರಾಜ್ಯದ ಆಂ ಆದ್ಮಿಗಳಿಗೆ ಎಷ್ಟು ಸುಪರಿಚಿತವೋ ಅಷ್ಟೇ ಅಪರಿಚಿತವಾಗಿದೆ ಈ ಪಕ್ಷ ಮತ್ತು ಅದರ ನಾಯಕರು. ಯಾದವ್ ಆರ್ಥಿಕ ನೀತಿಯ ಬಗ್ಗೆ ನನಗೆ ಹೇಳಿದಂತೆ ಇವರ ಪರಿಚಯಕ್ಕಾಗಿ ನಮ್ಮಂತಹವರು ಅಂತರ್ಜಾಲದ ಫೇಸ್ ಬುಕ್ ಪುಟಗಳಲ್ಲಿ ತಡಕಾಡಬೇಕೆಂದು ಕಾಣುತ್ತದೆ! ಹೇಗೂ ಇವರೀಗ ಆಂ ಆದ್ಮಿ ಎಂಬುದರ ಅರ್ಥವನ್ನೇ ಬದಲಾಯಿಸಿ ವ್ಯಾಖ್ಯಾನ ಮಾಡಿರುವರಲ್ಲ?

ಇದು ನನಗೆ ಆಘಾತಕಾರಿಯಾಗಿ ಅನುಭವಕ್ಕೆ ಬಂದದ್ದು, ಶಿವಮೊಗ್ಗ ಕ್ಷೇತ್ರದ ಅಭ್ಯರ್ಥಿಯನ್ನು ಆಯ್ಕೆ ಮಾಡಿದ ರೀತಿ ನೀತಿಗಳನ್ನು ಗಮನಿಸಿದಾಗ. ಎರಡು ತಿಂಗಳುಗಳ ಹಿಂದೆ ಸಾಗರ ಮತ್ತು ತೀರ್ಥಹಳ್ಳಿಗಳಲ್ಲಿ ನಾಲ್ಕಾರು ಜನ ಟೋಪಿವಾಲಾಗಳನ್ನು ನೋಡಿದ್ದನ್ನು ಬಿಟ್ಟರೆ ಆಂ ಆದ್ಮಿ ಪಕ್ಷದ ಸಂಘಟನೆಯ ಸುಳಿವೇ ಇಲ್ಲದ ಶಿವಮೊಗ್ಗ ಜಿಲ್ಲೆಯಲ್ಲಿ ಅಭ್ಯರ್ಥಿಯನ್ನು ಹಾಕುವ ಪ್ರಸ್ತಾಪವನ್ನು ಬೆಂಗಳೂರಿನ ನಾಯಕರೊಬ್ಬರು ನನ್ನೊಂದಿಗೆ ದೂರವಾಣಿಯಲ್ಲಿ ಪ್ರಸ್ತಾಪ ಮಾಡಿದಾಗ ನಾನು ಬೆಚ್ಚಿಬಿದ್ದೆ. ಆದರೆ ಅವರು ಅಭ್ಯರ್ಥಿಯನ್ನು ಹಾಕಲೇಬೇಕಾಗಿದೆ ಎಂದಾಗ ಇಲ್ಲಿನ ಹಿರಿಯ ಮತ್ತು ಜನಪ್ರಿಯ ರೈತ ನಾಯಕರೊಬ್ಬರ ಹೆಸರು ಸೂಚಿಸಿದೆ. ಆದರೆ ಅಂತಿಮ ಆಯ್ಕೆಯೇನಿದ್ದರೂ ಜಿಲ್ಲೆಯಲ್ಲಿನ ಪಕ್ಷದ ಎಲ್ಲ ಹಿತೈಷಿಗಳನ್ನೊಳಗೂಡಿಕೊಂಡ ಒಂದು ಸಂಘಟಿತ ಪ್ರಕ್ರಿಯೆಯಾಗಿ ನಡೆಯುವುದು ಎಂದು ನಾನು ಭಾವಿಸಿದ್ದೆ. ಆದರೆ ನನಗೆ ಕೆಲವೇ ದಿನಗಳಲ್ಲಿ ಗೊತ್ತಾದದ್ದು, ಬೇರೊಬ್ಬರು ಜಿಲ್ಲೆಯ ಸಾಮಾನ್ಯ ಜನತೆಗೆ ಅಷ್ಟೇನೂ ಪರಿಚಿತರಲ್ಲದ ಅದರ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆಂದು! ಇದು ಹೇಗಾಯಿತೆಂದು ಕುತೂಹಲಕ್ಕಾಗಿ ವಿಚಾರಿಸಿದಾಗ ನನಗೆ ತಿಳಿದು ಬಂದದ್ದು, ಬೆಂಗಳೂರು ಕೇಂದ್ರದೊಡನೆ ಸಂಪರ್ಕ ಹೊಂದಿದ್ದ ಒಂದು ಸಣ್ಣ ಗುಂಪು ಈ ರೈತ ನಾಯಕರ ಸಹಜ ಸಂಕೋಚವನ್ನೇ ನೆಪಮಾಡಿಕೊಂಡು ತನ್ನ ಪೂರ್ವಯೋಜನೆಯಂತೆ ಇದನ್ನು ಸಾಧಿಸಿತೆಂದು. ದೊಡ್ಡ ವ್ಯಕ್ತಿಯಾದ ಆ ರೈತ ನಾಯಕರು ಈ ಅಭ್ಯರ್ಥಿಯ ಪರವಾಗಿ ಮನಃಪೂರ್ವಕವಾಗಿ ಕೆಲಸ ಮಾಡಿದರೆಂಬುದು ಬೇರೆ ವಿಷಯ. ಪಕ್ಷದ ಸಂಘಟನೆಯ ಕಥೆ ಇದು. ಅಂತರ್ಜಾಲ ಮತ್ತು ಫೇಸ್ ಬುಕ್‌ವಾಲಾಗಳದ್ದೇ ಇಲ್ಲಿ ದರ್ಬಾರು.

ಇನ್ನು ಸಂಘಟನೆಯ ಒಂದು ಹಿನ್ನೆಲೆಯಿರುವ ಬೆಂಗಳೂರು ನಗರದ ಅಭ್ಯರ್ಥಿಗಳನ್ನೇ ನೋಡಿ. ಆ ಮೂವರೂ ಕನ್ನಡೇತರರು. ಇವರಲ್ಲಿ ಕನ್ನಡದವರೇ ಎಂದು ಭಾವಿಸಬಹುದಾದ ಒಬ್ಬ ಕೊಂಕಣಿಯಮ್ಮ ತಾನು ಸಾರ್ವಜನಿಕವಾಗಿ ಕನ್ನಡಕ್ಕೆ ಬದಲಾಗಿ ಕೊಂಕಣಿಯಲ್ಲಿ ಮಾತಾಡುವುದಾಗಿ ಬೆದರಿಸಬಲ್ಲವರು! ಇದೆಲ್ಲ ಹೇಗಾಯಿತು? ಇದರ

ಅರ್ಥವೇನು? ಪಕ್ಷದ ಸೌಭಾಗ್ಯ, ಈ ಸಂಗತಿ ನಮ್ಮ ಕನ್ನಡ ಚಳುವಳಿಕಾರರಿಗೆ ಗೊತ್ತಾಗಿಲ್ಲ. ಇತರೆಡೆ ಅದೃಷ್ಟವಶಾತ್ ಪಕ್ಷದ ಸಂಘಟನೆ ಇಲ್ಲದಿದ್ದುದರಿಂದ ಪಕ್ಷ ಅಲ್ಲೆಲ್ಲ ಇಂತಹ ಅನೇಕ ಪ್ರಶ್ನೆಗಳಿಂದ ಪಾರಾಗಿದೆ!

ಹೀಗಾಗಿ ಸದ್ಯಕ್ಕೆ ಆಂ ಆದ್ಮಿ ಒಂದು ಪಕ್ಷವಾಗಿ ಕನ್ನಡ ನಾಡಿನ ನಿಜವಾದ ಆಂ ಆದ್ಮಿಗಳಿಗೆ ದೆಹಲಿ ಕಛೇರಿಯಿಂದ ನಿಯಂತ್ರಿತವಾದ ಅಪರಿಚಿತ ಮುಖಗಳ ಒಂದು ದಂಡೇ ಆಗಿಬಿಟ್ಟಿದೆ. ಇದಕ್ಕೊಂದು ಸಣ್ಣ ಉದಾಹರಣೆ: ನಮ್ಮ ಪತ್ರಿಕೆಯ ಮಾರ್ಚ್ ಸಂಚಿಕೆ ಆಪ್ ಕುರಿತಾಗಿದ್ದರಿಂದ ಬೆಂಗಳೂರಿನ ಈ ಪಕ್ಷದ ಪರಿಚಿತ ನಾಯಕರೊಬ್ಬರಿಗೆ ನಾನು ಕರೆ ಮಾಡಿ ನಿಮ್ಮ ಕಾರ್ಯಕರ್ತರಿಗೆಂದು ಒಂದಷ್ಟು ಸಂಚಿಕೆಗಳನ್ನು ಕಳಿಸಲೇ ಎಂದು ಕೇಳಿದ್ದಕ್ಕೆ ಆ ಕಡೆಯಿಂದ ಬಂದ ಉತ್ತರವೇನು ಗೊತ್ತೆ? 'ಬೇಡ ಸರ್. ನಮ್ಮ ಪಕ್ಷದಲ್ಲಿ ಕನ್ನಡ ಪತ್ರಿಕೆ ಓದುವವರು ಯಾರೂ ಇಲ್ಲ!' ಇದು ಕರ್ನಾಟಕದ ಆಂ ಆದ್ಮಿ ಪಕ್ಷ!

ನಾವು ಕಾಯುತ್ತೇವೆ, ನೀವು ವಾರಾಣಾಸಿ ಗೆದ್ದು ಬನ್ನಿ!

ಇದಕ್ಕೆಲ್ಲ ಕಿರೀಟವಿಟ್ಟಂತೆ ಮೊನ್ನೆ ತಾನೇ ಕೇಜ್ರಿವಾಲ್ ಹೇಳಿಬಿಟ್ಟರು: 'ಈಗ ಪಕ್ಷ ಮುಖ್ಯವಲ್ಲ. ಆಂದೋಲನ ಮುಖ್ಯ. ಅಮೇಥಿಯಲ್ಲಿ ರಾಹುಲ್‌ರನ್ನು, ವಾರಣಾಸಿಯಲ್ಲಿ ಮೋದಿಯನ್ನು ಸೋಲಿಸಲು ನೀವೆಲ್ಲ ಅಲ್ಲಿಗೆ ಬನ್ನಿ!' ಖಂಡಿತ ನಮಗೆ ರಾಹುಲ್ ಮತ್ತು ಮೋದಿ ಸೋಲಬೇಕೆಂಬ ಬಯಕೆ ಇದೆ. ಆದರೆ ಮುಂದೇನು? ಸುಸ್ಥಿರ ಪಕ್ಷವಿಲ್ಲದೆ, ಸಂಘಟನೆ ಇಲ್ಲದೆ ನೀವು ಮುಂದೆ ಏನು ಮಾಡಬಲ್ಲಿರಿ? ಅದು, ವಾರಣಾಸಿಯಲ್ಲಿ ಮಾಧ್ಯಮಗಳೆದುರು ಗಂಗಾ ಸ್ನಾನ ಮಾಡಿ ವಿಭೂತಿ ಬಳಿದುಕೊಂಡಷ್ಟು ಅಥವಾ ಸಾರ್ವಜನಿಕ ಸಭೆಗಳಲ್ಲಿ ಗಂಟಲು ಹರಿಯುವಂತೆ 'ಹರಹರ ಮಹಾದೇವ್' ಎಂದು ಘೋಷಣೆ ಕೂಗುವಷ್ಟು ರೋಚಕ, ಅಸಂಬದ್ಧವಾದ ಸುಲಭ ಕೆಲಸವಲ್ಲ. ನಿಮಗಿದು ತಿಳಿದಿರಲಿ: ದೆಹಲಿ ಜನರನ್ನು ನಡುನೀರಿನಲ್ಲಿ ಕೈಬಿಟ್ಟು ಹೋದಂತೆಯೇ ದೇಶದ ಜನರನ್ನು ನಡುನೀರಿನಲ್ಲಿ ಕೈಬಿಟ್ಟು ಹೋದರೆ ಅವರು ನಿಮ್ಮನ್ನು ಕ್ಷಮಿಸುವುದಿರಲಿ, ಮರ್ಯಾದೆಯಿಂದ ಬಾಳಲೂ ಬಿಡಲಾರರು.

ಇದನ್ನು ನನ್ನ ಮನೆಯಲ್ಲಿ ಮೊನ್ನೆ ಯೋಗೇಂದ್ರ ಯಾದವ್‌ರಿಗೆ ಹೇಳಿದೆ. ಅವರು ಗಂಭೀರರಾದರು. ನನ್ನ ಮಾತುಗಳು ಅವರ ಮನ ಹೊಕ್ಕಿದೆ ಎಂದು ಭಾವಿಸುವೆ. ಈ ನನ್ನ ಭಾವನೆ ಹುಸಿ ಆಗದಿರುವವರೆಗೆ ಮತ್ತು ನೈತಿಕವಾಗಿ ಈ ಪಕ್ಷ ಮೊದಲನೇ ತಪ್ಪು ಎಸಗುವವರೆಗೆ ಅದಕ್ಕೆ ನಮ್ಮ ಮತ್ತು ನನ್ನ ಸಮಾನ ಮನಸ್ಕರ ಬೆಂಬಲ ಇದ್ದೇ ಇರುತ್ತದೆ. ಏಕೆಂದರೆ ನಮಗೀಗ ಏಕೈಕ ಪರ್ಯಾಯವಾಗಿ ಕಾಣುತ್ತಿರುವುದು ಇದೇ ಪಕ್ಷ. ಕೇಜ್ರಿವಾಲ್ ನಿಮಗೆ ಶುಭವಾಗಲಿ! ವಾರಣಾಸಿಯನ್ನು ಗೆದ್ದು ಬನ್ನಿ. ನಿಮ್ಮೊಡನೆ ಮಾತಾಡುವುದು ಇನ್ನೂ ಬಹಳವಿದೆ.

ಸಮಕಾಲೀನ

ಪರಿಸರ ಮತ್ತು ಅಭಿವೃದ್ಧಿ

ಹವಾಮಾನ ಬದಲಾವಣೆ ಕುರಿತ ಅಂತರ್‌ಸರ್ಕಾರ ಸಮಿತಿಯ ವರದಿ ಇದೇ ಏಪ್ರಿಲ್ ೧೩ರಂದು ಬಿಡುಗಡೆಯಾಗಿದೆ. ವಾತಾವರಣಕ್ಕೆ ಇಂಗಾಲವನ್ನು ವಿಸರ್ಜಿಸುವುದನ್ನು ಕುರಿತ ಜಾಗತಿಕ ಒಪ್ಪಂದ ಎಲ್ಲ ವಿವಾದಗಳನ್ನು ಪರಿಹರಿಸಿಕೊಂಡು ಸಮರ್ಪಕವಾಗಿ ಜಾರಿಯಾಗದ ಹೊರತು ಹತ್ತಿರದಲ್ಲೇ ಅನಾಹುತ ಖಚಿತ ಎಂದು ಅದು ಪುನರುಚ್ಚರಿಸಿದೆ. ಈ ವರದಿಯ ಬಗ್ಗೆ ಅಭಿವೃದ್ಧಿಗೊಂಡ ರಾಷ್ಟ್ರಗಳ ವಕ್ತಾರನಾಗಿ ಅಮೇರಿಕಾದ ಉಪಾಧ್ಯಕ್ಷರು ಇನ್ನು ಕಾಯುವುದು ಅನಾಹುತವನ್ನು ಆಹ್ವಾನಿಸಿದಂತೆಯೇ ಎಂದು ಎಚ್ಚರಿಸಿದ್ದರೆ, ಭಾರತವೂ ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳ ಅಧಿಕೃತ ವಕ್ತಾರರು ಇದು ತಮ್ಮ ಅಭಿವೃದ್ಧಿಯನ್ನು ತಡೆಯುವ ಇನ್ನೊಂದು ಬೆದರಿಕೆಯಾಗಿದೆ ಎಂದಿದ್ದಾರೆ. ಅವರಲ್ಲಿ ಕೆಲವರು ಬಡ ರಾಷ್ಟ್ರಗಳ ಜನತೆಗೆ ಮೊದಲು ಅನ್ನ-ಬಟ್ಟೆ-ವಸತಿ ಮೊದಲಾದ ಮೂಲ ಅಗತ್ಯಗಳು ದೊರೆಯುವಂತಾಗಲಿ; ಆಮೇಲೆ ಬೇಕಾದರೆ ಭೂಮಿಗೆ ಮುಂದೆಂದೋ ಒಂದು ದಿನ ಒದಗಬಹುದಾದ ಅಪಾಯವನ್ನು ತಡೆಯುವತ್ತ ಗಮನ ಹರಿಸೋಣ ಎಂದು ವ್ಯಂಗ್ಯವಾಡಿದ್ದಾರೆ.

ಈ ಸೃಷ್ಟಿಯನ್ನು ಕುರಿತ ಮಾನವ ಕೇಂದ್ರಿತ ದೃಷ್ಟಿ ಎಂದೋ ಬದಲಾಗಿ ಮಾನವ ತನ್ನ ಸುತ್ತಲಿನ ಪರಿಸರದೊಂದಿಗೆ ಸಾವಯವವಾಗಿ ಬದುಕಲು ಕಲಿತರೆ ಮಾತ್ರ ಅವನ ಬದುಕಿನ ಗುಣಮಟ್ಟ ಸುಧಾರಿಸಬಲ್ಲುದೆಂಬ ಸತ್ಯ ಗೊತ್ತಾಗಿರುವ ಕಾಲವಿದು. ಆದರೂ ಕೆಲವರು ಅದೂ ಜವಾಬ್ದಾರಿಯುತ ಸ್ಥಾನದಲ್ಲಿರುವ ಆಡಳಿತಗಾರರು-ಪರಿಸರದ ಪ್ರಶ್ನೆಯನ್ನು ಜನಪ್ರಿಯ ರಾಜಕಾರಣದ, ವಾಗ್ವಿಲಾಸದ ವಸ್ತುವಾಗಿರಿಸಿಕೊಂಡಿರುವುದು ಇಂದಿನ ವಿಪರ್ಯಾಸವಾಗಿದೆ. ಇದಕ್ಕೆ ಮುಖ್ಯ ಕಾರಣ, ಅಭಿವೃದ್ಧಿಶೀಲ ದೇಶಗಳಲ್ಲಿ ಮೂಲ ಅಗತ್ಯಗಳ ಹೆಸರಿನಲ್ಲಿ ನಡೆದಿರುವ ಅಭಿವೃದ್ಧಿ ರಾಜಕಾರಣದ ವರಸೆ. ಈ ದೇಶಗಳ ಜನತೆಗೆ ಪಶ್ಚಿಮದ ದೇಶಗಳ ಜೀವನ ಗುಣಮಟ್ಟದ ಆದರ್ಶವೊಂದನ್ನು ಕಟ್ಟಿಕೊಟ್ಟು, ಅವರಲ್ಲಿ ಎಂದೂ ನೀಗಲಾಗದ ಬಡತನದ ಮಾನಸಿಕತೆಯನ್ನು ಬಿತ್ತಿಬಿಟ್ಟಿರುವುದು.

ಇದು ಅಗತ್ಯಗಳ ನಿರಂತರ ಸೃಷ್ಟಿಯ ರಾಜಕಾರಣ. ಇದನ್ನು ಅಭಿವೃದ್ಧಿಯೆಂದು ಕರೆಯುತ್ತಾ ಅದರ ಸುತ್ತ ರಾಜಕಾರಣ ಮಾಡುವ ಒಂದು ಪಟ್ಟಭದ್ರ ವರ್ಗವೇ ಭಾರತವೂ ಸೇರಿದಂತೆ ಈ ಅಭಿವೃದ್ಧಿಶೀಲ ಎಂದು ಕರೆಯಲಾಗುವ ದೇಶಗಳಲ್ಲಿ ಬಹಳ ವರ್ಷಗಳಿಂದ ನೆಲೆಯೂರಿಬಿಟ್ಟಿದೆ. (ಹಾಗೆ ನೋಡಿದರೆ ಈ ಅಭಿವೃದ್ಧಿಶೀಲ ಎಂಬ ಶಬ್ದವೇ ಈ ಅಭಿವೃದ್ಧಿ ರಾಜಕಾರಣದ ವಹಿವಾಟಿನ ಮೂಲ ನಾಣ್ಯ!) ಈ ಪಟ್ಟಭದ್ರ ವರ್ಗದಲ್ಲಿ ರಾಜಕಾರಣಿಗಳು ಕೇಂದ್ರದಲ್ಲಿದ್ದರೆ ಅವರ ಸುತ್ತ

ಕೈಗಾರಿಕೋದ್ಯಮಿಗಳು, ವಿಜ್ಞಾನಿ–ತಂತ್ರಜ್ಞಾನಿಗಳು, ಕೃಷಿ ತಜ್ಞರು, ಅರ್ಥಶಾಸ್ತ್ರಜ್ಞರು ಎಲ್ಲರೂ ಇದ್ದಾರೆ. ಅಭಿವೃದ್ಧಿ ಎನ್ನುವ ಶಬ್ದ ಇಂದು ತನ್ನ ಸಾರ್ವತ್ರಿಕ ಅರ್ಥವನ್ನೆಲ್ಲ ಕಳೆದುಕೊಂಡು ಸಂಪತ್ತಿನ ಒಡೆತನ ಎಂಬ ಸಂಕುಚಿತ ಅರ್ಥಕ್ಕಷ್ಟೇ ಸೀಮಿತವಾಗಿಬಿಟ್ಟಿದೆ. ಇದರಿಂದಾಗಿ ನಾವು ಈ ಎಲ್ಲ ಶಬ್ದಗಳನ್ನು ಯಾವುದರ ನಿರ್ಮಾಣಕ್ಕಾಗಿ ಸೃಷ್ಟಿಸಿಕೊಂಡಿದ್ದೇವೋ ಆ ಬದುಕಿನ ಗುಣಮಟ್ಟ ಮತ್ತು ಸಾರ್ಥಕತೆಯ ಅರ್ಥಗಳ ಕಡೆ ನಮ್ಮ ಗಮನವೇ ಹೋಗದಂತಾಗಿಬಿಟ್ಟಿದೆ.

ಈ ದೇಶದ ಹಸಿದವರ, ದರಿದ್ರರ ಮೂಲ ಅಗತ್ಯಗಳನ್ನು ಪೂರೈಸಲು ಇಂದು ಈ ಅಭಿವೃದ್ಧಿ ನಡೆದಿದೆಯೇ ಎಂಬುದನ್ನು ಯಾರಾದರೂ ನೇರವಾಗಿ ನೋಡಿ ಹೇಳಿದರೆ ಸಾಕು ಈ ಅಭಿವೃದ್ಧಿ ರಾಜಕಾರಣದ ಗುಟ್ಟು ಬಯಲಾಗುವುದು. ಆದರೆ ಹಾಗೆ ನೋಡಿ ಹೇಳಬಲ್ಲವರೆಲ್ಲರೂ ಈ ಅಭಿವೃದ್ಧಿಯ ಫಲಾನುಭವಿಗಳೇ ಆಗಿರುವುದರಿಂದ ಈ ಗುಟ್ಟು ಬಯಲಾಗಿಲ್ಲ. ಹಾಗಾಗಿಯೇ, ಇತ್ತೀಚಿನ ಪರಿಸರ ವರದಿ ಇಂಗಾಲ ವಿಸರ್ಜನೆಯ ಯೋಜಿತ ನಿಯಂತ್ರಣ ದಾರಿ ತಪ್ಪಿರುವುದರಿಂದ ಸದ್ಯದಲ್ಲೇ ಒದಗಲಿರುವ ವಿಪತ್ತುಗಳಲ್ಲಿ ಭಾರತಕ್ಕೆ ಮುಖ್ಯವಾದ್ದು ಎಂದಿದೆ. ಅಂದರೆ ಈ ದೇಶದ ಜನತೆಯ ಆಹಾರ ಭದ್ರತೆಗೆ ಧಕ್ಕೆಯಾಗಲಿದೆ ಎಂದು ಹೇಳುತ್ತಿದೆ. ಆದರೂ ಅತ್ತ ಕಡೆ ಯಾರ ಗಮನವೂ ಇಲ್ಲ. ಬದಲಿಗೆ ಆಹಾರ ಭದ್ರತೆಯ ಕಾನೂನನ್ನು ಪಾಸು ಮಾಡಿಕೊಂಡು ಸಂಭ್ರಮ ಪಡುತ್ತಿದ್ದೇವೆ. ಮೂಲ ಅಗತ್ಯಗಳ ಪೂರೈಕೆಗೆ ಅಭಿವೃದ್ಧಿ ಎನ್ನುತ್ತಾ ಅದು ನಮ್ಮ ಆಹಾರ ಭದ್ರತೆಗೆ ಧಕ್ಕೆ ತರುತ್ತಿದೆ ಎಂದರೂ ನಮಗೆ ಎಚ್ಚರವಿಲ್ಲ. ಹಾಗೇ ೨೦೧೨ರಲ್ಲಿ ವಾಯು ಮಾಲಿನ್ಯವೊಂದರಿಂದಲೇ ಜಗತ್ತಿನಲ್ಲಿ ೭೦ ಲಕ್ಷ ಜನ ಸತ್ತಿದ್ದು ಇದರಲ್ಲಿ ಬಹುಪಾಲು ಏಷ್ಯಾದ ಜನರು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳುತ್ತಿದೆ. ಆದರೂ ನಮ್ಮ ಅಭಿವೃದ್ಧಿಯ ಹಪಾಹಪಿ ಮತ್ತು ಅದರ ಜನಪ್ರಿಯ ರಾಜಕಾರಣಕ್ಕೆ ಕಡಿವಾಣ ಹಾಕಲು ನಾವು ಸಿದ್ಧರಿಲ್ಲ. ಈ ದೇಶಕ್ಕೆ ಮೋದಿ ಕನಸು ಬಿದ್ದಿರುವುದರ ರಹಸ್ಯ ಬಹುಶಃ ಇದೇ ಇರಬಹುದು!.

ಈ ಹಿನ್ನೆಲೆಯಲ್ಲಿ, ದೇಶಾದ್ಯಂತ ಇಂದು ಹಬ್ಬಿರುವ ರೋಚಕವಾದ ಚುನಾವಣಾ ರಾಜಕಾರಣದ ಬಿಸಿ ವಾತಾವರಣದ ನಡುವೆಯೂ ಪತ್ರಿಕೆ ಈ ಸಂಚಿಕೆಯಲ್ಲಿ ಪರಿಸರದ ಪ್ರಶ್ನೆಯ ಬಗ್ಗೆ ಚರ್ಚೆ ನಡೆಸಿದೆ. ಅದರ ಕೆಲವು ಮೂಲ ಸಂಗತಿಗಳನ್ನು ಮತ್ತು ಅದರ ಅನ್ವಯದ ಸಾಧ್ಯತೆಗಳನ್ನೂ ಅನುಕ್ರಮವಾಗಿ ಇಲ್ಲಿನ ಎರಡು ಲೇಖನಗಳಲ್ಲಿ ಪ್ರಸ್ತುತಪಡಿಸಿದೆ.–ಸಂ.

ಜೂನ್, ೨೦೧೪

ಮೋದಿ ಬಂದರು ದಾರಿ ಬಿಡಿ!

ಪ್ರಿಯ ಓದುಗರೇ,

ಅಂತೂ ಚುನಾವಣೆಗಳು ಮುಗಿದಿವೆ. ಹೊಸ ಸರ್ಕಾರವೂ ಅಸ್ತಿತ್ವಕ್ಕೆ ಬಂದಿದೆ. ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ನೂತನ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್.ಡಿ.ಎ) ಸಚಿವ ಸಂಪುಟದ ವಿವರ ಮತ್ತು ಸ್ವರೂಪಗಳು ಗೊತ್ತಾಗಿರುತ್ತದೆ. ನಿರೀಕ್ಷೆಯಂತೆಯೇ, ಸಮೀಕ್ಷೆಗಳು ಸೂಚಿಸುತ್ತಿದ್ದಂತೆಯೇ ೬೪ ವರ್ಷ ವಯಸ್ಸಿನ ನರೇಂದ್ರ ದಾಮೋದರ ದಾಸ್ ಮೋದಿಯವರು ರಾಷ್ಟ್ರದ ಹದಿನೈದನೆಯ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಆದರೆ ನಿರೀಕ್ಷಿತವಲ್ಲದ್ದು ಏನೆಂದರೆ ಅವರ ಪಕ್ಷ ಮತ್ತು ಅದರ ನೇತೃತ್ವದ ಮೈತ್ರಿಕೂಟ ಪಡೆದ ಭಾರಿ ಬಹುಮತ.

ಮೋದಿ ವಿರುದ್ಧ ಏನೆಲ್ಲ ವಾದ ಮಂಡನೆಗಳಾದರೂ, ಏನೆಲ್ಲ ಮಾಹಿತಿ ಒಟ್ಟಲಾಯಿತಾದರೂ, ಏನೆಲ್ಲ ಪ್ರತಿಕೂಲ ಪ್ರಚಾರ ನಡೆಸಲಾಯಿತಾದರೂ, ಮತದಾರ ಅದನ್ನೆಲ್ಲ ನಿರ್ಲಕ್ಷಿಸಿ ಮೋದಿಯವರಿಗೆ ಅಧಿಕಾರ ದಂಡ ನೀಡಿದ್ದಾರೆ. ಸುಮಾರು ಎರಡು ತಿಂಗಳುಗಳ ಕಾಲ ದೇಶಾದ್ಯಂತ ಸಾವಿರಾರು ಕಿ.ಮೀ. ಸುತ್ತಿ ನೂರಾರು ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿ, ಚುನಾವಣಾ ಪ್ರಚಾರದ ವಿಷಯದಲ್ಲಿ ಒಂದು ರಾಷ್ಟ್ರೀಯ ದಾಖಲೆಯನ್ನೇ ನಿರ್ಮಿಸಿರುವ ಅವರ ಪರಿಶ್ರಮಕ್ಕೆ ಜನ ತಕ್ಕ ಪ್ರತಿಫಲ ನೀಡಿದ್ದಾರೆ. ಮೋದಿಯವರಿಗೂ ಸಹಜವಾಗಿಯೇ ಖುಷಿಯಾಗಿ ಜನಕ್ಕೆ 'ಅಚ್ಛೇ ದಿನ್' ಅಂದರೆ ಒಳ್ಳೆಯ ದಿನಗಳು ಬರಲಿವೆ ಎಂದು ಭರವಸೆ ನೀಡಿದ್ದಾರೆ.

ಈ ಒಳ್ಳೆಯ ದಿನಗಳಿಗಾಗಿ ಇನ್ನು ನಿಜವಾದ ಜನಹಿತದ, ರಾಷ್ಟ್ರ ನಿರ್ಮಾಣದ ಕೆಲಸಗಳನ್ನು ಅವರು ಆರಂಭಿಸಬೇಕಿದೆ. ಇದನ್ನು ಅವರು ಹೇಗೆ ಮಾಡಬಲ್ಲರೋ ಕುತೂಹಲದಿಂದ ಕಾದು ನೋಡಬೇಕಿದೆ. ಏಕೆಂದರೆ, ಯಾವುದನ್ನು ಈಗ ಜನ ಅತೀವ

ಸಿಟ್ಟಿನಿಂದ ತಿರಸ್ಕರಿಸಿದ್ದಾರೋ ಆ ಕಾಂಗ್ರೆಸ್ ಪಕ್ಷದ ಆರ್ಥಿಕ ನೀತಿಗೂ, ಇವರ ಆರ್ಥಿಕ ನೀತಿಗೂ ಒಂದೆರಡು ಸಣ್ಣ ವಿವರಗಳ ಹೊರತಾಗಿ ಉದಾ: ಚಿಲ್ಲರೆ ಮಾರಾಟ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಅಂತಹ ವ್ಯತ್ಯಾಸಗಳೇನೂ ಇಲ್ಲ. ಸ್ವಜನ ಪಕ್ಷಪಾತ, ಭ್ರಷ್ಟಾಚಾರಗಳಿಗೆ ಅವಕಾಶವಿಲ್ಲದ ದಕ್ಷ ಮತ್ತು ಕಟ್ಟುನಿಟ್ಟಿನ ಆಡಳಿತ ನಡೆಸಿದರೂ ಅದೇ ಆರ್ಥಿಕ ನೀತಿಯ ಮುಂದುವರಿಕೆ ಎಷ್ಟು ಜನಹಿತ ಪರಿಣಾಮಗಳನ್ನು ಉಂಟು ಮಾಡುವವೋ ಕಾದು ನೋಡಬೇಕು. ಏಕೆಂದರೆ, ಆಡಳಿತ ಪ್ರಜಾಸತ್ತಾತ್ಮಕವೂ, ಪಾರದರ್ಶಕವೂ ಆಗಿರಬೇಕಾಗಿದ್ದು, ಈ ವಿಷಯದಲ್ಲಿ ಮೋದಿಯವರ ದಾಖಲೆ ಅಷ್ಟೇನೂ ಪ್ರೋತ್ಸಾಹಕರವಾಗಿಲ್ಲ. ಅಲ್ಲದೆ, ಗುಜರಾತ್‌ನಲ್ಲಿ ಅವರು ನಡೆಸಬಹುದಾಗಿದ್ದ 'ಕಬ್ಬಿಣದ ಕೈ'ಗಳ ಆಡಳಿತ ಹಲವು ಕಾರಣಗಳಿಂದಾಗಿ ಅಖಿಲ ಭಾರತ ಮಟ್ಟದಲ್ಲಿ ಅಷ್ಟು ಸುಲಭವಲ್ಲ. ಜೊತೆಗೆ ಕಾಂಗ್ರೆಸ್ ಸರ್ಕಾರ ತನ್ನ ದುರಾಡಳಿತದ ದೋಷಗಳನ್ನು ಮುಚ್ಚಿಕೊಳ್ಳಲು ಜಾರಿಗೆ ತಂದ 'ಸಹಾಯಧನ' ಆಧಾರಿತ ಬೃಹತ್ ಜನಪ್ರಿಯ ಸಾಮಾಜಿಕ ಕಾರ್ಯಕ್ರಮಗಳನ್ನು ಕೈಬಿಡದೆ ಅಥವಾ ಸೀಮಿತಗೊಳಿಸದೆ, ಯಾವುದಕ್ಕಾಗಿ ಕಾಂಗ್ರೆಸ್ಸನ್ನು ದೂಷಿಸಲಾಗುತ್ತಿತ್ತೋ ಆ ಹಣಕಾಸು ಅವ್ಯವಸ್ಥೆಯನ್ನು ಸರಿಪಡಿಸಲಾದಿತೋ? ಹಾಗೆ ಕೈಬಿಟ್ಟಲ್ಲಿ ಅಥವಾ ಮೊಟಕುಗೊಳಿಸಿದಲ್ಲಿ ಜನತೆಯ ಆಕ್ರೋಶವನ್ನು ನಿಭಾಯಿಸುವ ಬಗೆಗಳು ಯಾವುವು? ಈ ಎಲ್ಲ ಸಂಗತಿಗಳು ಮುಂದಿನ ದಿನಗಳಲ್ಲಿ ಅವರು ಅನುಸರಿಸುವ ರಾಜಕಾರಣವನ್ನು ಕುತೂಹಲದಿಂದ ನೋಡುವಂತಾಗಿದೆ. ಆದರೆ ಅವರ ಪ್ರಮಾಣ ವಚನ ಸಮಾರಂಭಕ್ಕಾಗಿ ನಡೆದಿರುವ ವ್ಯಾಪಕ ಸಿದ್ಧತೆ, ಅದರ ಅದ್ದೂರಿತನ, ಅದಕ್ಕಾಗಿ ಉದ್ದೇಶಿಸಿರುವ ಸರ್ಪಗಾವಲಿಗಾಗಿ ಯುದ್ಧೋಪಾದಿಯಲ್ಲಿ ನಡೆದಿರುವ ಭದ್ರತಾ ಕ್ರಮಗಳನ್ನು ನೋಡಿದರೆ ಕೊಂಚ ಆತಂಕವೂ ಆಗುತ್ತಿದೆ ಎಂಬುದನ್ನೂ ಇಲ್ಲಿ ಹೇಳಿಬಿಡಬೇಕು.

ಅದೇನೇ ಇರಲಿ, ಮೋದಿಯವರ ಬಗ್ಗೆ ನಿಸ್ಸಂದೇಹವಾಗಿ ಹೆಮ್ಮೆಯಿಂದ ಹೇಳಬಹುದಾದ ಒಂದು ಸಂಗತಿ ಎಂದರೆ, ಅವರು ಇಂಗ್ಲಿಷ್ ಮಾತನಾಡಲಾಗದ ಮತ್ತು ಆ ಬಗ್ಗೆ ಯಾವ ಕೀಳರಿಮೆಯೂ ಇದ್ದಂತಿಲ್ಲದ ಭಾರತದ ಮೊದಲ ಪ್ರಧಾನ ಮಂತ್ರಿ. ಆದರೂ ಅವರು ದೇಶವನ್ನು ಹಿಂದೆಂದೂ ಕಾಣದಂತಹ ಪ್ರಗತಿಯೆಡೆಗೆ ಕೊಂಡೊಯ್ಯುವರು ಎಂಬ ಭರವಸೆಯೊಂದಿಗೆ ಭಾರತ ಅವರನ್ನು ತನ್ನ ನಾಯಕನ್ನಾಗಿ ಆಯ್ಕೆ ಮಾಡಿಕೊಂಡಿದೆ. ಮೋದಿಯವರಿಗೆ ನಮ್ಮ ಶುಭಾಶಯಗಳು!

ಮನಮೋಹನ ಸಿಂಗ್‌ರಿಗೆ ವಿದಾಯ!

ಇನ್ನು ನೆಹರೂ ನಂತರ ೧೦ ವರ್ಷಗಳ ನಿರಂತರವಾಗಿ ದೇಶದ ಪ್ರಧಾನಮಂತ್ರಿಯಾಗಿದ್ದರೆಂಬ ಹೆಗ್ಗಳಿಕೆ ಗಳಿಸಿದ ಮನಮೋಹನ ಸಿಂಗ್ ಅವರು ತಮ್ಮ ಪಕ್ಷದ ತುಂಬ ಅವಮಾನಕರ ಸೋಲಿನ ಬೆನ್ನಲ್ಲಿ ಅಧಿಕಾರ ತ್ಯಜಿಸಬೇಕಾಗಿಬಂದಿರುವುದು ತೀರಾ ವಿಷಾದದ ಸಂಗತಿಯೇ ಆಗಿದೆ. ಹಾಗೆ ನೋಡಿದರೆ

ಕಾಂಗ್ರೆಸ್ ಈ ಬಾರಿ ವಿರೋಧ ಪಕ್ಷದ ಸ್ಥಾನಮಾನಕ್ಕೂ ಅರ್ಹವಾಗದಷ್ಟು ಹೀನಾಯ ಸೋಲು ಅನುಭವಿಸಲು ಒಂದು ಕಾರಣ ಈ ಮನಮೋಹನ ಸಿಂಗ್ ಎಂದೂ ಹೇಳಬಹುದು. ಈತ ಜನತೆಯ ನೇರ ಆದೇಶವಿಲ್ಲದೆಯೇ ರಾಜ್ಯ ಸಭೆಯ ಸದಸ್ಯರಾಗಿ ಹತ್ತು ವರ್ಷ ದೇಶವನ್ನು ಆಳಿದ್ದು, ಸಾಂವಿಧಾನಿಕವಾಗಿ ಸಕ್ರಮವೇ ಆದರೂ ಪ್ರಜಾಪ್ರಭುತ್ವದ ಭಾವನೆಯ ದೃಷ್ಟಿಯಿಂದ ಅಕ್ರಮವೆಂದೇ ಹೇಳಬೇಕು. ಅದೂ ಇವರು ಮೊದಲ ಬಾರಿಗೆ ಸಂಸತ್ತನ್ನು ಪ್ರವೇಶಿಸಿದ್ದೂ, ತಾನು ಅಸ್ಸಾಂ ರಾಜ್ಯದ ಪ್ರಜೆ ಎಂಬ ಅನುಮಾನಾಸ್ಪದ ಅಫಿಡಿವಿಟ್ ಸಲ್ಲಿಸುವ ಮೂಲಕ. ಇವರನ್ನು ಪಿ.ವಿ. ನರಸಿಂಹರಾವ್ ಎಂಬ ಚಾಣಾಕ್ಷ ರಾಜಕಾರಣಿ ನಮ್ಮ ದೇಶದ ಮೇಲೆ ಆರ್ಥಿಕ ಮಂತ್ರಿಯಾಗಿ 'ನಿಯೋಜಿಸಿ' ನಂತರ ಪ್ರಧಾನಿಯಾಗಲು ಅವಕಾಶ ಮಾಡಿಕೊಟ್ಟಿದ್ದರ ಹಿಂದೆ ಒಂದು ಅಂತಾರಾಷ್ಟ್ರೀಯ ಯೋಜನೆಯೇ ಇತ್ತೆಂಬ ಮಾತೂ ಇದೆ. ಅದೇನೇ ಇದ್ದರೂ, ಜನನಾಯಕನಲ್ಲದವರೊಬ್ಬರನ್ನು ದೇಶದ ಪ್ರಧಾನಮಂತ್ರಿಯಾಗಿ ಮಾಡಿ ಅವರ ಮೂಲಕ ರಾಜಕಾರಣ ಮಾಡಹೊರಟ ಕಾಂಗ್ರೆಸ್ ಪಕ್ಷ ಆತ್ಯಂತಿಕವಾಗಿ ಮಾರಣಾಂತಿಕ ಪೆಟ್ಟು ತಿಂದಿರುವುದು ಪ್ರಜಾಪ್ರಭುತ್ವದ ದೃಷ್ಟಿಯಿಂದ ನ್ಯಾಯಬದ್ಧವಾಗಿಯೇ ಇದೆ.

ಹಾಗೆ ನೋಡಿದರೆ, ಕಾಂಗ್ರೆಸ್ ೧೯೯೦ರ ದಶಕದಲ್ಲಿ ಮುಳುಗುವ ಸ್ಥಿತಿಯಲ್ಲಿದ್ದಾಗ ಎಲ್ಲಿಂದಲೋ ಇಳಿದು ಬಂದಂತೆ ಈ ದೇಶದ ಅರ್ಥಮಂತ್ರಿಯಾಗಿ ತನ್ನೊಡನೆ ತಂದಿದ್ದ ವಿಶ್ವ ಬ್ಯಾಂಕಿನ 'ಆರ್ಥಿಕ ಚೀಲ'ದಿಂದ ದೇಶದ ಮುಂದೆ ತೆಗೆದಿಟ್ಟ ಹಣಕಾಸು 'ಪ್ಯಾಕೇಜು'ಗಳೆಂಬ ಮಿಠಾಯಿಗಳ ವ್ಯಾಪಾರ ವ್ಯವಹಾರ ಒಪ್ಪಂದಗಳ ಮೂಲಕ ಆ ಪಕ್ಷಕ್ಕೆ ತತ್ಕಾಲೀನ ಮರುಜೀವ ನೀಡಿದ್ದು ಮನಮೋಹನ ಸಿಂಗ್‌ರೇ. ಆದರೆ ಈ ವ್ಯವಹಾರ ಭಾರತದಂತಹ ಕೃಷಿಮೂಲ ಗ್ರಾಮ ಸಂಸ್ಕೃತಿಯ ದೇಶದಲ್ಲಿ ಒಂದು ರಾಜಕೀಯ ಕಾರ್ಯಚರಣೆಯಾಗಿ ಬಹುಕಾಲ ಲಾಭದಾಯಕವಾಗಿ ನಡೆಯಲಾಗದ್ದು. ಅದನ್ನರಿತ ಅವರು ದೇಶವನ್ನೇ ವ್ಯಾಪಾರಾಧಾರಿತ ಆರ್ಥಿಕತೆಯ ನಗರೀಕರಣಕ್ಕೆ ಒಳಪಡಿಸಲೆತ್ನಿಸಿದಾಗ ಅದು ಸೃಷ್ಟಿಸಿದ ಅಧಿಕಾರ ವ್ಯವಸ್ಥೆಯಲ್ಲಿನ ಹಲವು ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳುವ ಶಕ್ತಿಯ ಕೊರತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇತ್ಯಾದಿ ಸಮಸ್ಯೆಗಳಲ್ಲಿ ಸಿಕ್ಕಿ ಹಾಕಿಕೊಂಡು ಅವರು ಬಸವಳಿದು ಹೋದರು. ದುರಂತವೆಂದರೆ ಅವರು ತಮ್ಮ ಈ ರಾಜಕಾರಣದ ಆರಂಭದ ದಿನಗಳಲ್ಲಿ ಈ ದೇಶದ ಮಧ್ಯಮ ವರ್ಗಕ್ಕೆ ಹತ್ತಿಸಿದ 'ಸುಲಭ ಸುಖ'ದ ರುಚಿ ಈಗ ಅವರನ್ನೇ ಆಹುತಿ ತೆಗೆದುಕೊಂಡಿದೆ. ಮನಮೋಹನ ಸಿಂಗ್ ಈಗ ನಮ್ಮ ನವ ಮಧ್ಯಮ ವರ್ಗವನ್ನು ಅತ್ಯಂತ ಕೃತಘ್ನ ವರ್ಗವೆಂದು ದೂಷಿಸುತ್ತಿದ್ದಲ್ಲಿ ಅದು ಸರಿ ಮತ್ತು ಸಹಜವೇ ಆಗಿದೆ. ಆದರೆ ಇದೆಲ್ಲದರ ಅತ್ಯಂತ ಕೆಟ್ಟ ಪರಿಣಾಮವೆಂದರೆ, ಜಗತ್ಪ್ರಸಿದ್ಧ ಅರ್ಥಶಾಸ್ತ್ರಜ್ಞ ಎಂದು ಹೇಳಲಾಗುವ ಮನಮೋಹನ ಸಿಂಗ್ ಎಂಬ ಈ ಮನುಷ್ಯ ಕೊನೆಗೆ ಅಪ್ಪಟ ಮುದ್ದುಮಣಿಯಂತಿರುವ ರಾಹುಲ್ ಗಾಂಧಿಯ ಕೈಕೆಳಗೆ ಕೆಲಸ ಮಾಡಲು ತಾನು ಸಿದ್ಧ ಎಂದು ಹೇಳುವ ಸ್ಥಿತಿ ತಲುಪಿದ್ದು. ಇಂತಹ ಪರಿಸ್ಥಿತಿಯಲ್ಲಿ ಈಗ ಈ ಮನುಷ್ಯನ ಬಗೆಗಾದರೂ, ಆತನ

ಪಕ್ಷದ ಬಗೆಗಾದರೂ ಹೇಳಲು ಏನು ಉಳಿದಿದೆ? ಪಕ್ಷವಂತೂ ಮುಟ್ಟಬೇಕಾದ ಗತಿಯನ್ನೇ ಮುಟ್ಟಿದೆ.

ಆದರೆ ಈ ದೇಶಕ್ಕೆ ಕಾಂಗ್ರೆಸ್ ಬೇಕು. ಅದಕ್ಕೊಂದು ಪರಂಪರೆ ಇದೆ. ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಹುಟ್ಟಿದ ಈ ಪಕ್ಷ ಭಾರತದ ಸಾಮಾನ್ಯ ಜನತೆಯೊಂದಿಗೆ ಸಹಜವಾಗಿ ಗುರುತಿಸಿಕೊಳ್ಳಬಲ್ಲ ಗುಣವನ್ನು ಇತ್ತೀಚಿನವರೆಗೂ ಮುಕ್ತ ಮಾರುಕಟ್ಟೆ ನೀತಿಗೆ ವಿಮರ್ಶಾತೀತವಾಗಿ ತನ್ನನ್ನು ಒಪ್ಪಿಸಿಕೊಳ್ಳುವವರೆಗೆ ಆಂತರಿಕವಾಗಿ ಹೊಂದಿದ್ದ ಪಕ್ಷ. ಇಂದಿರಾ ಗಾಂಧಿಯವರ ಆಡಳಿತದ ಒಂದು ಸಣ್ಣ ಕೆಟ್ಟ ಅವಧಿಯ ಹೊರತಾಗಿ ಉದಾರ ಪ್ರಜಾಪ್ರಭುತ್ವಕ್ಕೆ ಬದ್ಧವಾದ ಪಕ್ಷವಿದು. ಅದು ಈಗ ಅಷ್ಟೇನೂ ಪ್ರತಿಭಾಶಾಲಿಯೂ, ಸೃಜನಶೀಲವಾಗಿಯೂ ಇರದ ಕುಟುಂಬ ರಾಜಕಾರಣದ ಹೊರೆಯನ್ನು ಇಳಿಸಿಕೊಂಡು ತನ್ನ ಸ್ವಂತ ಕಾಲುಗಳ ಮೇಲೆ ನಿಲ್ಲಬಲ್ಲ ಸ್ವಾಭಿಮಾನವನ್ನೂ, ಪರಿಶ್ರಮವನ್ನೂ, ಜಾಣತನವನ್ನೂ, ಸಂಘಟನಾ ಸಾಮರ್ಥ್ಯವನ್ನೂ ತೋರಿಸಬಲ್ಲುದಾದರೆ, ಜನತೆ ಬಹುಬೇಗ ಅದರತ್ತ ಮತ್ತೆ ನೋಡುವುದರಲ್ಲಿ ಸಂಶಯವಿಲ್ಲ. ಈ ವಿಷಯಗಳಲ್ಲಿ ಅದು ಬಿಜೆಪಿಯಿಂದ ಕಲಿಯಬೇಕಾದ್ದು ಸಾಕಷ್ಟಿದೆ. ಕಾಂಗ್ರೆಸ್ಸಿಗೆ ನೆನಪಿರಲಿ: ಈ ಚುನಾವಣೆಗಳಲ್ಲಿ ಮೇಲ್ನೋಟಕ್ಕೆ ಬಿಜೆಪಿಯ ಬಿರುಗಾಳಿ ಬೀಸಿದಂತೆ ಕಂಡಿದ್ದರೂ, ಅದಕ್ಕೆ ಬಿದ್ದಿರುವ ಮತ ಶೇ ೩೧ಕ್ಕೂ ಕಡಿಮೆ!

ಸಿದ್ದರಾಮಯ್ಯನವರಿಗೆ ಎಚ್ಚರಿಕೆಯ ಘಂಟೆ!

ಇನ್ನು ನಮ್ಮ ಸಿದ್ಧರಾಮಯ್ಯನವರ ಸ್ಥಿತಿ ನೋಡಿ. ೨೮ರಲ್ಲಿ ಕನಿಷ್ಟ ೧೮-೨೦ ಸ್ಥಾನಗಳನ್ನು ಗೆಲ್ಲುವ ಭರವಸೆ ಹೊಂದಿದ್ದ ಅವರು ಕೇವಲ ಒಂಭತ್ತನ್ನು ಗೆದ್ದು ಚುನಾವಣಾ ಪೂರ್ವ ಪರಿಸ್ಥಿತಿಗೇ ಹಿಂದಿರುಗಿದ್ದಾರೆ! ಅವರ ಅನ್ನ ಭಾಗ್ಯ, ಕ್ಷೀರಭಾಗ್ಯ, ಅಹಿಂದ ಕಲ್ಯಾಣ ಕಾರ್ಯಕ್ರಮಗಳಾವುವೂ ಅವರ ಕೈಹಿಡಿದಿಲ್ಲ. ಹೀಗೇಕೆ ಎಂದು ಅವರು ಯೋಚಿಸಬೇಕಿದೆ. ಸಿದ್ಧರಾಮಯ್ಯ ಒಂದು ವರ್ಷದ ಹಿಂದೆ ಮುಖ್ಯಮಂತ್ರಿಯಾದಾಗ ನಾವೆಲ್ಲ ಹಿಗ್ಗಿದ್ದೆವು. ಕರ್ನಾಟಕದ ರಾಜಕಾರಣ ಮತ್ತು ಆಡಳಿತದಲ್ಲಿ ಹೊಸ ಶಕೆ ಆರಂಭವಾಗುವುದೆಂದು ಭಾವಿಸಿದ್ದೆವು. ಆದರೆ ಈ ಒಂದು ವರ್ಷದಲ್ಲಿ, ಲೋಹಿಯಾ ರಾಜಕಾರಣದಿಂದ ಸ್ಫೂರ್ತಿ ಪಡೆದಿರುವುದಾಗಿ ಹೇಳಿಕೊಳ್ಳುವ ಈ ಮನುಷ್ಯ ಕೆಟ್ಟ ಅನ್ನಲಾಗದಿದ್ದರೂ, ಕಲ್ಪನಾಶೀಲತೆ ಎಂಬುದಿಂದಷ್ಟೂ ಇಲ್ಲದ ಜಡ ಸರ್ಕಾರವನ್ನಷ್ಟೇ ನೀಡಿ ನಿರಾಶೆ ಉಂಟು ಮಾಡಿದ್ದಾರೆ. ಚುನಾವಣಾ ಫಲಿತಾಂಶ ಅದನ್ನು ಸಾಬೀತುಪಡಿಸಿದೆ.

ಸಿದ್ಧರಾಮಯ್ಯ ತಾನು ಭಿನ್ನ ರಾಜಕಾರಣಿ ಎಂಬುದನ್ನು ಅಲ್ಪಾವಧಿ ಕ್ರಮಗಳ ಮೂಲಕವಾಗಲೀ, ಅಥವಾ ದೀರ್ಘಾವಧಿ ಕ್ರಮಗಳ ಮೂಲಕವಾಗಲೀ, ಈವರೆಗೆ

ತೋರಿಸಲಾಗಿಲ್ಲ. ತಾನು ಜನತೆಯ ಮುಖ್ಯಮಂತ್ರಿ ಎಂಬ ಯಾವ ಸೂಚನೆಯನ್ನೂ ಅವರು ನೀಡಲಾಗಿಲ್ಲ. ಅದೇ ಕಾವಲು ಪಡೆ, ಅದೇ ವಾಹನ ಸಾಲು, ಅದೇ ದರ್ಬಾರು! ಮತ್ತು ಅದೇ ಹಳೇ ತುಕ್ಕು ಹಿಡಿದು ಹೋಗಿರುವ ಸಾಮಾಜಿಕ ನ್ಯಾಯ ರಾಜಕಾರಣದ ಜನಪ್ರಿಯ ಕಾರ್ಯಕ್ರಮಗಳು. ಆದರೆ ಜನಸಾಮಾನ್ಯರು ದಿನನಿತ್ಯ ಸರ್ಕಾರದೊಡನೆ ಸಂಪರ್ಕಕ್ಕೆ ಬರುವ ಸರ್ಕಾರಿ ಕಛೇರಿಗಳು, ಪೋಲಿಸ್ ಠಾಣೆಗಳು ಜನತೆಯ ವೈರಿಗಳಂತೆಯೇ ಉಳಿದಿವೆ. ಸಾಮಾನ್ಯ ಜನವೂ ಇವರ ಅನ್ನಭಾಗ್ಯ, ಇವರ ಪಕ್ಷದ ಉದ್ಯೋಗ ಖಾತರಿ ಯೋಜನೆಗಳ ಬಗ್ಗೆ, ಅವು ದೊಡ್ಡ ಪ್ರಮಾಣದಲ್ಲಿ ದುರುಪಯೋಗವಾಗುತ್ತಿರುವ ಬಗ್ಗೆ ತೀವ್ರ ಅಸಮಧಾನದಿಂದ ಮಾತನಾಡುತ್ತಿದ್ದಾರೆ. ಈ ಬಗ್ಗೆ ಒಂದು ವಸ್ತುನಿಷ್ಠ ವಿಮರ್ಶೆ ತುರ್ತು ಅಗತ್ಯವಾಗಿದೆ. ಹಾಗೇ ಅಕ್ರಮ ಗಣಿಗಾರಿಕೆ, ಭೂಕಬಳಿಕೆ, ಕೆ.ಪಿ.ಎಸ್.ಸಿ. ಮತ್ತು ಕಾಮೆಡ್.ಕೆ ಹಗರಣಗಳ ಬಗ್ಗೆ ನಿಮ್ಮದು ನಿಧಾನ ದ್ರೋಹದ ನೀತಿ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಸಿದ್ಧರಾಮಯ್ಯನವರೇ ಎಚ್ಚರಗೊಳ್ಳಿ!

ಸಿದ್ಧರಾಮಯ್ಯ ಈ ಚುನಾವಣೆಗಳಿಂದ ಕಲಿಯಬೇಕಾದ ಮೊದಲ ಪಾಠವೆಂದರೆ, ಮತದಾರರ ಹಳೆಯ ಸಾಮಾಜಿಕ ವಿಂಗಡಣಾ ಗೆರೆಗಳು ಈಗ ಮಸುಕಾಗುತ್ತಿವೆ, ಅವರ ನಿರೀಕ್ಷೆಗಳು ಬದಲಾಗುತ್ತಿವೆ; ಅದಕ್ಕೆ ತಕ್ಕಂತೆ ಅವರು ತಮ್ಮ ರಾಜಕಾರಣದ ರೀತಿ ನೀತಿಗಳನ್ನು ಬದಲಿಸಿಕೊಳ್ಳಬೇಕಿದೆ ಎಂಬುದು. ಆದರೆ ಸಿದ್ಧರಾಮಯ್ಯನವರ ಸಮಸ್ಯೆಯೆಂದರೆ, ಅವರ ಸುತ್ತ ಯಾವುದೇ ವಿಶೇಷ ಪ್ರತಿಭೆ ತೋರದ ಹೌದಪ್ಪ ಮತ್ತು ಚೇಲಾಗಳೇ ತುಂಬಿಹೋಗಿದ್ದಾರೆ. ಅವರು ತಪ್ಪು ಹೆಜ್ಜೆ ಇಟ್ಟಾಗ ನಿಷ್ಠುರವಾಗಿ ಅದನ್ನು ಹೇಳಿ ಸರಿ ದಾರಿ ಇದಿರಬಹುದು ಎಂದು ಹೇಳಬಲ್ಲ ಛಾತಿ ಮತ್ತು ಪ್ರತಿಭೆ ಇರುವ ಒಬ್ಬ ಪ್ರಾಣಿಯೂ ಅವರ ಸುತ್ತಮುತ್ತ ಕಾಣುತ್ತಿಲ್ಲ. ಆದಷ್ಟು ಬೇಗ ಮುಖ್ಯಮಂತ್ರಿಗಳು ತಮ್ಮ ಔಪಚಾರಿಕ ಮತ್ತು ಅನೌಪಚಾರಿಕ ಸಲಹಾಕಾರರನ್ನು ಬದಲಾಯಿಸಿಕೊಳ್ಳದಿದ್ದರೆ ಅವರ ರಾಜಕೀಯ ಇನ್ನಷ್ಟು ಇಳಿಮುಖವಾಗುತ್ತಾ ಹೋಗುವುದು ಖಚಿತ. ಖಜಾನೆ ಹಣ ಖರ್ಚು ಮಾಡಿ ಎಷ್ಟು ಪತ್ರಿಕಾ ಜಾಹೀರಾತುಗಳನ್ನು ನೀಡಿದರೂ ಯಾವ ಪ್ರಯೋಜನವೂ ಆಗಲಾರದು. ಬದಲಿಗೆ, ಬರಲಿರುವ ವಿಧಾನ ಪರಿಷತ್ ಮತ್ತು ರಾಜ್ಯಸಭಾ ಚುನಾವಣೆಗಳಲ್ಲಿ ಪಕ್ಷ ರಾಜಕೀಯವನ್ನು ಮೀರಿ ಯೋಚಿಸಿ ತಮ್ಮ ಸರ್ಕಾರ ಮತ್ತು ಪಕ್ಷಕ್ಕೆ ಒಂದು ಹೊಸ ಘನತೆಯನ್ನು ತಂದುಕೊಡಬಲ್ಲ ವಿವಿಧ ಕ್ಷೇತ್ರಗಳ ಪ್ರತಿಭೆಗಳನ್ನು ಗುರುತಿಸುವ ಕೆಲಸವನ್ನು ಅವರು ಮಾಡಬೇಕು.

ಸಿದ್ದರಾಮಯ್ಯ ಒಮ್ಮೆ ತಮಿಳ್ನಾಡು, ಒರಿಸ್ಸಾ, ಪಶ್ಚಿಮ ಬಂಗಾಳದತ್ತಲೂ, ಇನ್ನೊಮ್ಮೆ ಉತ್ತರ ಪ್ರದೇಶ, ಬಿಹಾರಗಳತ್ತಲೂ ನೋಡಬೇಕು. ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಜಾತಿ ರಾಜಕಾರಣ ಒಂದು ಸಹನೀಯ ಮಟ್ಟದಲ್ಲಿ ಮತ್ತು ಹಂತದವರೆಗೆ ಮಾತ್ರ

ನಡೆಯಿತು. ಅದರಾಚೆಗೆ ಜನತೆಗೆ ಅರ್ಪಿತವಾದ ಸಮರ್ಥ ನಾಯಕತ್ವವನ್ನೇ ಉಳ
ಆಳುವುದು. ಸಿದ್ಧರಾಮಯ್ಯ ಮುಖ್ಯಮಂತ್ರಿಯಾಗಲು ಅಣಿ ಪಟ್ಟರು. ಅವರೂ ಸು
ಆದರೆ ಅಷ್ಟೇ ಸಾಕೆ? ಅವರು ಯೋಚಿಸಲಿ.

<u>ಸಮಕಾಲೀನ</u>

ಕವಲು ದಾರಿಯಲ್ಲಿರುವ ಭಾರತದ ಮುಸ್ಲಿಮರು...

ಮೊನ್ನೆ ಮುಕ್ತಾಯಗೊಂಡ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ನರೇಂ
ಮೋದಿಯವರನ್ನು ತನ್ನ ಪ್ರಧಾನಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿದಾಗಿನಿ
ಚುನಾವಣಾ ಚರ್ಚೆಗಳಲ್ಲಿ ಮುನ್ನೆಲೆಗೆ ಬಂದ ಪ್ರಮುಖ ವಿಷಯಗಳಲ್ಲಿ ಭಾರತ
ಬಹುತ್ವದ ಪ್ರಶ್ನೆಯೂ ಒಂದು. ಅದರಲ್ಲೂ ಭಾರತೀಯ ಮುಸ್ಲಿಂ ಸಮುದಾಯ
ಹಿತರಕ್ಷಣೆಯ ಪ್ರಶ್ನೆ ವಿಶೇಷವಾಗಿ ಚರ್ಚೆಗೆ ಬಂತು. ಹಾಗೆ ನೋಡಿದರೆ, ದೇ
ವಿಭಜನೆಯ ಹಿನ್ನೆಲೆ ಮತ್ತು ಸಂದರ್ಭದಿಂದಲೂ ರಾಷ್ಟ್ರೀಯ ರಾಜಕಾರಣ
'ಭಾರತೀಯ ಮುಸ್ಲಿಮರು' ಎಂಬುದು ಒಂದು ಬಗೆಹರಿಯಲಾಗದ ಸಮಸ್ಯೆ
ವಿಷಯವಾಗಿಯೇ ಉಳಿದುಬಿಟ್ಟು ಪದೇ ಪದೇ ಅದರ ಬಗ್ಗೆ ಚರ್ಚೆಗಳು ನಡೆ
ಇವೆ. ಇತ್ತೀಚಿನ ವರ್ಷಗಳಲ್ಲಿ ಅಯೋಧ್ಯಾ ಚಳುವಳಿ, ಬಾಬ್ರಿ ಮಸೀದಿ ನಾಶ, ಮುಂ
ಸ್ಫೋಟಗಳು, ಗುಜರಾತ್ ನರಹತ್ಯೆ ಮತ್ತು ಜಾಗತಿಕವಾಗಿ ಇಸ್ಲಾಮೀ ಭಯೋತ್ಪಾ
ಎಂಬ ಶಬ್ದ ಚಾಲ್ತಿಗೆ ಬಂದಾಗಿನಿಂದ ಈ ಪ್ರಶ್ನೆ ಇನ್ನಷ್ಟು ಸಂಕೀರ್ಣಗೊಂಡು ಹಲ
ನೆಲೆಗಳಿಂದ ಉತ್ತರಗಳನ್ನು ಬೇಡುವಂತಾಗಿದೆ. ಕೆಲವರು ಇಸ್ಲಾಂನ ತಾತ್ವಿಕತೆಯ
ಆಧುನಿಕ ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದಂತೆ ಕೆಲವು ತೊಂದರೆಗಳಿವೆ ಎನ್ನುತ್ತಿ
ಇನ್ನು ಕೆಲವರು, ಇಸ್ಲಾಮೀ ಪುರೋಹಿತಶಾಹಿಯ ಸ್ವರೂಪದಲ್ಲಿ ಈ ತೊಂದರೆಗಳ
ಗುರುತಿಸುತ್ತಿದ್ದು, ಮತ್ತೆ ಕೆಲವರು ಈ ಸಮುದಾಯದ ಬಗ್ಗೆಯ ರಾಜಕಾರಣ
ತೊಂದರೆಗಳನ್ನು ಕಾಣುತ್ತಿದ್ದಾರೆ. ಆದರೆ ಇವೆಲ್ಲವುಗಳ ಮಧ್ಯದ ಕಟು ವಾಸ್ತ
ಸಂಗತಿ ಏನೆಂದರೆ, ದೇಶದಲ್ಲಿ ಅತ್ಯಂತ ಕಡುಬಡತನ ಮತ್ತು ನಿರುದ್ಯೋ
ಬಲಿಗಳಾಗಿರುವವರು ಈ ಸಮುದಾಯದವರೇ ಆಗಿದ್ದಾರೆ ಎಂಬುದು.

ಹಾಗಾಗಿಯೇ, ಈ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಗುಜರಾ
ಕೆಲ ಮುಸ್ಲಿಂ ಗಣ್ಯರು, ದೇಶದಲ್ಲಿ ಮುಸ್ಲಿಮರು ಅತ್ಯಂತ ಹೆಚ್ಚು ಸುರಕ್ಷಿತ ಮ
ಸುಖವಾಗಿರುವುದು ತಮ್ಮ ಈ ರಾಜ್ಯದಲ್ಲೇ ಎಂದು ವಾದಿಸುತ್ತಾ, ಹಳೆಯದ
ಮರೆತು ಮುಸ್ಲಿಮರ ರಾಜಕಾರಣ ರಾಷ್ಟ್ರದ ಮುಖ್ಯ ವಾಹಿನಿಯ ರಾಜಕಾರ
ಜೊತೆಗೆ ಹೆಜ್ಜೆ ಹಾಕುತ್ತಾ, ಗುಜರಾತ್ ಮಾದರಿಯಲ್ಲಿ 'ಅಭಿವೃದ್ಧಿ' ಸಾಧಿಸಬೇ
ಎನ್ನತೊಡಗಿದ್ದಾರೆ. ಎಂ.ಜೆ. ಅಕ್ಬರ್‌ರಂತಹ 'ಸೆಕ್ಯುಲರ್' ಮುಸ್ಲಿಂ ಬುದ್ಧಿಜೀವಿ

ಬಿಜೆಪಿ ಸೇರಿ ಮುಸ್ಲಿಂ ರಾಜಕಾರಣದ ಈ ಹೊಸ ಮಾದರಿಗೆ ಬೆಂಬಲ ಸೂಚಿಸಿ ಅಚ್ಚರಿ ಹುಟ್ಟಿಸಿದ್ದಾರೆ. ಇದೆಲ್ಲದರ ಒಟ್ಟು ಪರಿಣಾಮವೆಂಬಂತೆ ದೇಶ ಮೋದಿಯವರನ್ನು ಪ್ರಧಾನಮಂತ್ರಿಯಾಗಿ ಭಾರಿ ಬಹುಮತದಿಂದ ಆಯ್ಕೆಮಾಡಿ ಹಳೆಯ ಸೆಕ್ಯುಲರ್ ರಾಜಕಾರಣದ ಮಾದರಿಗೆ ಒಂದು ಆಘಾತ ಚಿಕಿತ್ಸೆ ನೀಡಿದಂತಿದೆ.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪತ್ರಿಕೆ ಇಲ್ಲಿ ವಿಶ್ಲೇಷಣೆ, ಚರ್ಚೆ ಮತ್ತು ಪ್ರಶ್ನೋತ್ತರಗಳ ಮೂಲಕ ಈ ವಿಷಯದ ಮೇಲೆ ವಿಶೇಷ ಬೆಳಕು ಚೆಲ್ಲುವ ಪ್ರಯತ್ನ ಮಾಡಿದೆ. ಅಂತಹ ಪ್ರಶ್ನೋತ್ತರವೊಂದನ್ನು ಇಲ್ಲಿ ನೀಡಿದೆ:–ಸಂ.

ಒಂದು ಶ್ರದ್ಧಾಂಜಲಿ

ಸಮಾಜವಾದಿ ಗೆಳೆಯ ಸುನೀಲ್‌ಗೆ ಒಂದು ವಿದಾಯ...

ಸಮಾಜವಾದಿ ಗೆಳೆಯ ಸುನೀಲ್(ಗುಪ್ತ) ಇನ್ನಿಲ್ಲ ಎಂದು ಮೊನ್ನೆ ನನ್ನ ಇನ್ನೊಬ್ಬ ಸಮಾಜವಾದಿ ಗೆಳೆಯ ಜಸ್ವೀರ್ ಸಿಂಗ್ ಕರೆ ಮಾಡಿ ಹೇಳಿದಾಗ ನಾನು ದಿಗ್ಭ್ರಾಂತನಾಗಿ ಹೋದೆ. ಅದೂ ಆತ ಮೆದುಳುಸ್ರಾವಕ್ಕೆ ಈಡಾಗಿ ಕೊನೆಯುಸಿರು ಎಳೆಯಬೇಕಾಯಿತು ಎಂದು ಕೇಳಿದಾಗ. ಸುನೀಲ್ ನಾನು ಕಂಡ ಅತ್ಯಂತ ಸಾತ್ವಿಕ ಸಮಾಜವಾದಿ, ತನ್ನ ಗುರು ಕಿಷನ್ ಪಟ್ನಾಯಕ್‌ರಂತೆಯೇ. ಅಂತಹವನಿಗೂ, ಅದೂ ಕಿಳಿರ ವಯಸ್ಸಿಗೇ ಮೆದುಳು ಸ್ರಾವವಾಗುತ್ತದೆಂದರೆ? ನಿಜ, ಈಗ ಸಮಾಜವಾದಿಗಳಿಗೆ ಕಷ್ಟ ಕಾಲ. ವಿಶೇಷವಾಗಿ ಬಡಜನರ ಮಧ್ಯೆ ಅವರ ಹಕ್ಕುಗಳಿಗಾಗಿ ಹೋರಾಟ ನಡೆಸುವ ಸುನೀಲ್‌ನಂತಹ ನಿಜ ಸಮಾಜವಾದಿಗಳಿಗೆ.

೧೯೮೦ರಲ್ಲಿ ಕಿಷನ್ ಪಟ್ನಾಯಕ್‌ರ ಮುಂದಾಳತ್ವದಲ್ಲಿ ನಾವು ಕೆಲವರು ಕಟ್ಟಿ ಹೊರಟ ಸಮತಾ ಸಂಘಟನೆಯೆಂಬ ಹೊಸ ಸಮಾಜವಾದಿ ಪಕ್ಷದ ಸಂಸ್ಥಾಪನಾ ಸಮಾರಂಭಕ್ಕೆ ಬೆಂಗಳೂರಿಗೆ ಯುವ ಸಮಾಜವಾದಿಯಾಗಿ ಬಂದಾಗಿನಿಂದಲೂ ಹಲವು ಬಾರಿ ಸುನೀಲ್ ಕರ್ನಾಟಕಕ್ಕೆ ಬಂದಿದ್ದನಾದರೂ, ಇಲ್ಲಿನ ಸಮಾಜವಾದಿ ಗೆಳೆಯರ ಚಾಲೂ ಚಹರೆಗಳೊಂದಿಗೆ ಆಪ್ತವಾಗಿ ಗುರುತಿಸಿಕೊಳ್ಳಲಾರದೇ ಅವರ ಮಧ್ಯೆ ಅಪರಿಚಿತನಾಗಿ ಉಳಿದುಹೋದ. ಮಧ್ಯಪ್ರದೇಶದ ಹೊಶಂಗಾಬಾದ್ ಬಳಿಯ ಕೇಸ್ಲಾ ಪ್ರದೇಶದಲ್ಲಿ ತನ್ನ ಪತ್ನಿ ಸ್ಮಿತಾರೊಂದಿಗೆ ರೈತರು, ಮಹಿಳೆಯರು, ಆದಿವಾಸಿ ಮೀನುಗಾರರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ಹಲವು ಹೋರಾಟಗಳನ್ನು ನಡೆಸಿದ್ದ ಸುನೀಲ್ ಇದಕ್ಕಾಗಿ ಹಲವು ಬಾರಿ ಸೆರೆಮನೆಗೂ ಹೋಗಿ ಬಂದಿದ್ದ. ಒಮ್ಮೆ ಚುನಾವಣಾ ಕಣಕ್ಕೂ ಇಳಿದು ಸೋತಿದ್ದ.

ಸುನೀಲ್ ನನ್ನ ಗೆಳೆಯನಾದದ್ದು ೧೯೭೦–೮೦ರ ದಶಕಗಳಲ್ಲಿ ನಾನು ದೆಹಲಿಯಲ್ಲಿದ್ದಾಗ. ಆಗ ಆತ ಜವಹರಲಾಲ್ ನೆಹ್ರೂ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ

ಸ್ನಾತಕೋತ್ತರ ಪದವಿಯ ಪ್ರತಿಭಾವಂತ ವಿದ್ಯಾರ್ಥಿ. ತುರ್ತು ಪರಿಸ್ಥಿತಿ ವೇಳೆಯಲ್ಲಿ ಕಿಷನ್ ಪಟ್ನಾಯಕ್‌ರ ಪ್ರಭಾವಕ್ಕೆ ಒಳಗಾದ ಆ ವಿಶ್ವವಿದ್ಯಾಲಯದ ಹಲವು ವಿದ್ಯಾರ್ಥಿಗಳಲ್ಲಿ ಈತನೂ ಒಬ್ಬ. ಈತ ಮತ್ತು ಈತನ ಸಮಾಜವಾದಿ ಗೆಳೆಯರೆಲ್ಲ ಸೇರಿ ಸಮಾಜವಾದಿ ಯುವಜನ ಸಭಾ ಮೂಲಕ ವಿಶ್ವವಿದ್ಯಾಲಯದ ವಿದ್ಯಾರ್ಥಿ ಚುನಾವಣೆಗಳಲ್ಲಿ ಅಲ್ಲಿ ಹಲವು ವರ್ಷಗಳಿಂದ ಅಜೇಯವೆನಿಸಿದ್ದ ಸಿಪಿಎಂ ಪಕ್ಷದ ವಿದ್ಯಾರ್ಥಿ ಶಾಖೆ ಎಸ್.ಎಫ್.ಐ.ನ್ನು ಮಣಿಸಿ ಅಧಿಕಾರ ಹಿಡಿದಿದ್ದರು. ಆ ಸಂದರ್ಭದಲ್ಲಿ ನನಗೆ ಪರಿಚಯವಾದ ಸುನೀಲ್ ನಾನು ದೆಹಲಿಯಲ್ಲಿದ್ದ ನಂತರದ ಐದಾರು ವರ್ಷಗಳ ಕಾಲ ನನ್ನೊಂದಿಗೆ ಸಮಾಜವಾದಿ ಯುವಜನ ಸಭಾದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ನನ್ನ ಆಪ್ತ ಗೆಳೆಯರಲ್ಲೊಬ್ಬನಾದ. ಹಾಗೇ, ಕಿಷನ್ ಪಟ್ನಾಯಕರ ಪಟ್ಟ ಶಿಷ್ಯನಾದ. ಹಾಗಾಗಿಯೇ ಆತ ಪಂಜಾಬ್ ಮತ್ತು ಅಸ್ಸಾಂಗಳು ಕೇಂದ್ರದ ದುರಾಡಳಿತದಿಂದಾಗಿ ತೀವ್ರ ಅಶಾಂತಿಯಲ್ಲಿ ತೊಳಲಾಡುತ್ತಿದ್ದಾಗ ದೆಹಲಿಯಿಂದ ಅಲ್ಲಿಗೆ ಯುವ ಸಮಾಜವಾದಿಗಳ ಸೈಕಲ್ ಶಾಂತಿ ಯಾತ್ರೆಯನ್ನು ಆಯೋಜಿಸಿ ತನ್ನ ಸಂಘಟನಾ ಸಾಮರ್ಥ್ಯವನ್ನು ಮೆರೆದಿದ್ದ.

ತನ್ನ ಸ್ನಾತಕೋತ್ತರ ಪದವಿಯನ್ನು ಮೊದಲ ರ್‍ಯಾಂಕ್ ಗಳಿಸಿ ಮುಗಿಸಿದ ಸುನೀಲ್ ಓರ್ವ ಅಧ್ಯಾಪಕನ ಮಗನಾಗಿ ಅಂತಹ ಆರ್ಥಿಕ ಭದ್ರತೆಯಿಲ್ಲದ ಕುಟುಂಬದಿಂದ ಬಂದಿದ್ದನಾದರೂ, ಎಂದೂ ಉದ್ಯೋಗದ ಯೋಚನೆ ಮಾಡಲಿಲ್ಲ. ಆತ ನೇರವಾಗಿ ಹೋಗಿದ್ದು ತನ್ನೂರು ಹೊಶಂಗಾಬಾದ್ ಬಳಿಯ ಹಳ್ಳಿಗೆ. ಶೋಷಿತರ ಮಧ್ಯೆ ಬದುಕಿ ತನ್ನ ಸಮಾಜವಾದಿ ತತ್ವ ಮತ್ತು ಆದರ್ಶಗಳನ್ನು ಅನುಭವದ ನಿಕಷಕ್ಕೆ ಒಡ್ಡಲು. ಅಲ್ಲಿ ಕೆಲಸ ಮಾಡುತ್ತಿರುವಾಗಲೇ ಸುನೀಲ್ ತಮ್ಮ ಗುರು ಕಿಷನ್ ಪಟ್ನಾಯಕರು ನಿಧನರಾದಾಗ ಅವರು ಸಂಪಾದಿಸುತ್ತಿದ್ದ ಇಂಗ್ಲಿಷ್‌ನ 'ಸಮತಾ ಎರಾ' ಮತ್ತು ಹಿಂದಿಯ 'ಸಾಮಯಿಕ ವಾರ್ತಾ' ಪತ್ರಿಕೆಗಳ ಸಂಪಾದಕನ ಜವಾಬ್ದಾರಿಯನ್ನೂ ವಹಿಸಿಕೊಂಡ. ಅರ್ಥಶಾಸ್ತ್ರದ ವಿದ್ವಾಂಸನಾಗಿದ್ದ ಆತ ಹಲವಾರು ಹಿಂದಿ ಮತ್ತು ಇಂಗ್ಲಿಷ್ ಪತ್ರಿಕೆಗಳಿಗೆ ವಿದ್ವತ್ಪೂರ್ಣ ಲೇಖನಗಳನ್ನು ಬರೆದ. ಇತ್ತೀಚೆಗೆ ಕಿಷನ್ ಪಟ್ನಾಯಕ್ ಕಟ್ಟಿದ್ದ ಸಮಾಜವಾದಿ ಜನ ಪರಿಷದ್‌ನ ರಾಷ್ಟ್ರೀಯ ಕಾರ್ಯದರ್ಶಿಯಾಗಿ ರಾಷ್ಟ್ರವ್ಯಾಪಿ ಸಂಘಟನೆಯಲ್ಲಿ ತೊಡಗಿದ್ದ.

ಈ ಸುನೀಲ್‌ನೊಂದಿಗೆ ನನ್ನ ಸಂಬಂಧಕ್ಕೆ ಒಂದು ವಿಶೇಷ ವೈಯುಕ್ತಿಕ ನೆಲೆಯೂ ಇದೆ. ಗಂಗಾವತಿ ಬಳಿ ನವೋದಯ ಶಾಲೆಯಲ್ಲಿ ಓದುತ್ತಿದ್ದ ಇಬ್ಬರು ದಲಿತ ಬಾಲಕಿಯರು ಆ ಶಾಲೆಯ ಶೈಕ್ಷಣಿಕ ವಿನಿಮಯ ಕಾರ್ಯಕ್ರಮದಡಿ ಹೊಶಂಗಾಬಾದ್ ಬಳಿಯ ನವೋದಯ ಶಾಲೆಗೆ ಹೋದರು. ಅಲ್ಲಿ ಇವರಿಗೆ ಸುನೀಲ್ ಮಕ್ಕಳು ಆಪ್ತ ಸಂಗಾತಿಗಳಾದರು. ಹೀಗೇ ಗೆಳೆತನದ ಮಾತುಕತೆಯಲ್ಲಿ ಈ ದಲಿತ ಬಾಲಕಿಯರು ಕಡುಬಡತನದಿಂದಾಗಿ, ಆಸಕ್ತಿಯಿದ್ದರೂ ಉನ್ನತ ಶಿಕ್ಷಣ ಪಡೆಯಲಾಗದ ತಮ್ಮ ಕಷ್ಟವನ್ನು ಹೇಳಿಕೊಂಡರು. ತಮ್ಮ ತಂದೆಗೆ ಕರ್ನಾಟಕದ ಸಂಪರ್ಕವಿದೆಯೆಂದು ಗೊತ್ತಿದ್ದ ಸುನೀಲ್‌ನ

ಮಕ್ಕಳು ತಮ್ಮ ಈ ಸಂಗಾತಿಗಳಿಗೆ ಸಹಾಯ ಮಾಡಲು ತಂದೆಯನ್ನು ಕೋರಿದರು. ಸುನೀಲ್ ನನಗೂ ಸೇರಿದಂತೆ ಕರ್ನಾಟಕದ ಹಲವು ಸಮಾಜವಾದಿ ಗೆಳೆಯರಿಗೆ ಈ ಕುರಿತು ಪತ್ರ ಬರೆದ. ನನಗೆ ತಿಳಿದಂತೆ ಒಬ್ಬರೋ ಇಬ್ಬರೋ ಹಣಕಾಸಿನ ಸಹಾಯದ ವಾಗ್ದಾನ ಮಾಡಿದರು. ನಾನು, ನಮ್ಮ ಮನೆಗೇ ಆ ಬಾಲಕಿಯರನ್ನು ಕಳಿಸಬಹುದೆಂದು ಸುನೀಲ್‌ಗೆ ಹೇಳಿದೆ.

ಸುನೀಲ್ ಸೂಚನೆ ಮೇರೆಗೆ ಆ ಮಕ್ಕಳು ನಮ್ಮ ಮನೆಗೆ ಬಂದರು. ಇಬ್ಬರೂ ಪಿಯುಸಿ ಮುಗಿಸಿದ್ದರು, ಬುದ್ಧಿವಂತೆಯರು. ಹಿರಿಯಳು ಲಕ್ಷ್ಮಿ. ಅವಳು ಬಿಎಸ್ಸಿ ಸೇರಿದಳು. ಕಿರಿಯಳು ಮಂಜುಳಾ ಅವಳು ಬಿಬಿಎಂಗೆ ಸೇರಿಕೊಂಡಳು. ಲಕ್ಷ್ಮಿ ಮನೆ ಕಡೆಯ ಕಡುಬಡತನದಿಂದಾಗಿ ತನಗೆ ಬೇಗ ಉದ್ಯೋಗ ಸಿಕ್ಕರೆ ಒಳ್ಳೆಯದೆಂದು ಹೇಳಿದಾಗ ನನ್ನ ಪತ್ನಿ ಅವಳಿಗೆ ಗೆಳೆಯ ಬಿ. ಶಿವಕುಮಾರ್‌ರ ಬಳಿ ಬ್ಯಾಂಕಿಂಗ್ ಪರೀಕ್ಷೆಯ ತರಬೇತಿ ಕೊಡಿಸಿದಳು. ಅದೋ, ಲಕ್ಷ್ಮಿ ಮೊದಲ ಬಿಎಸ್ಸಿ ಮುಗಿಸುವ ಹೊತ್ತಿಗೇ ಮೊದಲ ಪ್ರಯತ್ನದಲ್ಲೇ ಲಿಖಿತ ಪರೀಕ್ಷೆ ಮತ್ತು ಸಂದರ್ಶನಗಳೆರಡರಲ್ಲೂ ಉತ್ತೀರ್ಣಳಾಗಿ ಸ್ಟೇಟ್ ಬ್ಯಾಂಕ್ ಇಂಡಿಯಾದಲ್ಲಿ ಒಳ್ಳೆಯ ಉದ್ಯೋಗ ಗಿಟ್ಟಿಸಿಯೇ ಬಿಟ್ಟಳು! ಅವಳೀಗ ನಂತರದ ಕೆಲವು ಬ್ಯಾಂಕ್ ಪರೀಕ್ಷೆಗಳನ್ನು ಪಾಸು ಮಾಡಿ ತನ್ನ ವೃತ್ತಿ ಜೀವನದ ಯಶಸ್ಸಿನ ಹಾದಿಯಲ್ಲಿದ್ದಾಳೆ. ಜೊತೆಗೆ ತನ್ನ ಪದವಿಯನ್ನೂ ಮುಗಿಸಿಕೊಂಡಿದ್ದಾಳೆ. ಇನ್ನು ಮಂಜುಳಾ ಬಿಬಿಎಂನ್ನು ಒಳ್ಳೆಯ ಶ್ರೇಣಿಯಲ್ಲೇ ಮುಗಿಸಿ, ಕುವೆಂಪು ವಿಶ್ವವಿದ್ಯಾಲಯದಲ್ಲಿ ಎಂ.ಕಾಂ.ನ್ನೂ ಕಳೆದ ವರ್ಷವಷ್ಟೇ ಯಶಸ್ವಿಯಾಗಿ ಮುಗಿಸಿ ಈಗ ತನ್ನೂರಿನಲ್ಲಿಯೇ ಉಪನ್ಯಾಸಕಿಯಾಗಿದ್ದಾಳೆ. ಇವರಿಬ್ಬರೂ ಈಗಲೂ ನಮ್ಮ ಕುಟುಂಬದ ಸದಸ್ಯೆಯರಂತೆಯೇ ಇದ್ದು ನಮ್ಮಲ್ಲಿ ಧನ್ಯತೆಯ ಭಾವವನ್ನು ಮೂಡಿಸಿದ್ದಾರೆ. ಇದಕ್ಕಾಗಿ ನಾವು ಕೃತಜ್ಞರಾಗಿರಬೇಕಾದ್ದೂ ಸುನೀಲ್‌ಗೇ.

ಸಮಾಜವಾದಿಗಳೆಂದರೆ ಜನ ಸಿನಿಕತೆಯಿಂದ ನೋಡತೊಡಗಿರುವ ಈ ಕಾಲದಲ್ಲಿ ಸುನೀಲ್‌ನದು ನಾನು ಕಂಡ ಬಹು ಅಪರೂಪದ ಬದುಕು. ಅವನಗೆ ಭಾರವಾದ ಹೃದಯದಿಂದ ವಿದಾಯ ಹೇಳುತ್ತಿರುವೆ.

– ಡಿ.ಎಸ್.ನಾಗಭೂಷಣ

ಜುಲೈ, ೨೦೧೪

ಎರಡು ಮೌಲ್ಯಮಾಪನಗಳು

ಪ್ರಿಯ ಓದುಗರೇ,

ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ಒಂದು ತಿಂಗಳು ಮುಗಿಯಿತು. ಹಾಗೇ ಸಿದ್ಧರಾಮಯ್ಯನವರೂ ರಾಜ್ಯದ ಮುಖ್ಯಮಂತ್ರಿಯಾಗಿ ಈಗ ಒಂದು ವರ್ಷ ಅವಧಿಯನ್ನು ಪೂರ್ಯೈಸಿದ್ದಾರೆ. ಈ ಸಂದರ್ಭದಲ್ಲಿ ರಾಜಕೀಯವಾಗಿ ಪರಸ್ಪರ ವಿರುದ್ಧ ನೆಲೆಗಳಲ್ಲಿರುವ ಇವರಿಬ್ಬರ ಕಾರ್ಯಶೈಲಿಗಳನ್ನೊಮ್ಮೆ ನಿರುಕಿಸುವುದು ಇಲ್ಲಿ ಉಚಿತವಾದೀತು.

ಮೋದಿ ಆರೆಸ್ಸೆಸ್ ಹಿನ್ನೆಲೆಯವರು. ಗುಜರಾತ್ ಮುಖ್ಯಮಂತ್ರಿಯಾಗಿ ೨೦೦೨ರ ಕೋಮು ಹತ್ಯಾಕಾಂಡದಲ್ಲಿನ ಅವರ ಪಾತ್ರ ವಿವಾದಾಸ್ಪದವಾದುದು. ಇನ್ನು ಬಡಜನ ವಿರೋಧಿಯಾದದ್ದೆಂದು ಹೇಳಲಾಗುವ ಅವರ 'ಅಭಿವೃದ್ಧಿ' ಮಾದರಿ ಈಗಾಗಲೇ ಸಾಕಷ್ಟು ಚರ್ಚೆಗೊಳಗಾಗಿದೆ. ಈ ಎಲ್ಲ 'ಚರಿತ್ರೆ'ಯ ಭಾರ ಹೊತ್ತುಕೊಂಡು ಮೋದಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡವರು. ಹೀಗಾಗಿ ಅವರು ಪ್ರಧಾನಿಯಾಗು ಮುನ್ನ ಮತ್ತು ಪ್ರಧಾನಿಯಾದ ಸಂದರ್ಭದಲ್ಲೂ ಹಲವರಲ್ಲಿ ಹಲವು ಆತಂಕಗಳ ಹುಟ್ಟಿದ್ದು ಸಹಜ. ಆದರೆ ಈ ಒಂದು ತಿಂಗಳಲ್ಲಿ ನಾವು ನೋಡುತ್ತಿರುವ ಮೋ ಬೇರೆಯಾಗಿಯೇ ಕಾಣುತ್ತಿದ್ದಾರೆ. ಗುಜರಾತ್ ಮುಖ್ಯಮಂತ್ರಿಯಾಗಿ ಮಾತ್ರವಲ್ಲ, ಇತ್ತೀಚಿ ಚುನಾವಣಾ ಪ್ರಚಾರ ಭಾಷಣಗಳಲ್ಲಿ ನಮಗೆ ಕಂಡ 'ಅನುಮಾನಾಸ್ಪದ' ವ್ಯಕ್ತಿತ್ವ ಚಹರೆಗಳು ಇದ್ದಕ್ಕಿದ್ದಂತೆ ಕಾಣೆಯಾಗಿರುವುದು ಸಹಜವಾಗಿಯೇ ಹಲವು ಟೀಕಾಕಾರರ ಆಶ್ಚರ್ಯವನ್ನು ಹುಟ್ಟಿಸಿದೆ. ಕೆಲವರಲ್ಲಿ ಇನ್ನಷ್ಟು ಅನುಮಾನಗಳನ್ನೂ...

ಒಂದು ಒಳ್ಳೆಯ ಆರಂಭ

ಮೋದಿ ಅಧಿಕಾರದ ಪ್ರತಿಜ್ಞಾ ಸ್ವೀಕಾರದ ಮುನ್ನ ರಾಜ್‌ಘಾಟ್‌ಗೆ ತೆರಳಿ ಮಹಾತ್ಮ ಗಾಂಧಿಯವರ ಸಮಾಧಿಗೆ ಗೌರವ ಸಲ್ಲಿಸಿ ಬಂದರು. ಪ್ರಧಾನಮಂತ್ರಿಯ ಕುರ್ಚಿಯ ಮೇಲೆ ಕೂರುವ ಮುನ್ನ ಗಾಂಧೀಜಿಯ ಚಿತ್ರಕ್ಕೆ ನಮಸ್ಕರಿಸಿ ಹೋದರು. ನಂತರ ತಮ್ಮ ಕಾಲಿಗೆ ಬೀಳಲು ಬಂದ ಜನರಿಗೆ ಹಾಗೆ ಮಾಡದಂತೆ ಸೂಚಿಸಿದರು. ಕೆಲ ಬಾಲಬಡುಕರು ಗುಜರಾತ್‌ನ ಶಾಲಾ ಪಠ್ಯಗಳಲ್ಲಿ ಅವರನ್ನು ಕುರಿತ ಪಾಠಗಳನ್ನು ಸೇರಿಸಲು ಹೋದಾಗ ಖಂಡತುಂಡವಾಗಿ ಬೇಡವೆಂದರು. ಹಿತಮಿತವಾದ ಚೌಕಟ್ಟಿನಲ್ಲಿ (ಆದರೆ ಮೇಲ್ಜಾತಿಗಳೇ ಪ್ರಧಾನವಾದ!) ತಮ್ಮ ಮಂತ್ರಿಮಂಡಲ ರಚಿಸಿ ಮಹಿಳೆಯರಿಗೆ ಎಂದೂ ಇಲ್ಲದಷ್ಟು ಪ್ರಾತಿನಿಧ್ಯ ನೀಡಿದರು. ಹಿಂದಿನ ಸರ್ಕಾರ ನಿರ್ಧಾರಗಳನ್ನು ಮುಂದೂಡಲೆಂದೇ ರಚಿಸಿಕೊಂಡಿದ್ದ ಅಂತರ ಖಾತೆ ಸಮಿತಿಗಳನ್ನು ಮತ್ತು ವಿಶೇಷ ಸಚಿವ ಗುಂಪುಗಳನ್ನು ವಿಸರ್ಜಿಸಿದರು. ಮಂತ್ರಿಗಳು ತಮ್ಮ ಸಂಬಂಧಿಕರಾರನ್ನೂ ತಮ್ಮ ಆಪ್ತ ಸಿಬ್ಬಂದಿಯನ್ನಾಗಿ ನೇಮಿಸಿಕೊಳ್ಳಕೂಡದೆಂದು ಸೂಚಿಸಿದರು. ಸಚಿವರಿಗೆ ಮತ್ತು ಸಚಿವಾಲಯದ ಸಿಬ್ಬಂದಿಗೆ ಕಟ್ಟುನಿಟ್ಟಿನ ಕೆಲಸದ ವೇಳೆಯನ್ನು ನಿಗದಿಪಡಿಸಿ ಎಲ್ಲರಿಗಿಂತ ಮುಂಚೆ ತಾವೇ ಕಛೇರಿಗೆ ಬಂದು ಕೂರಲಾರಂಭಿಸಿದರು. ಕಡತಗಳ ವಿಲೇವಾರಿಗೆ ಗಡುವನ್ನು ನಿರ್ಧರಿಸಿದರು. ಮೊದಲ ಸಚಿವ ಸಂಪುಟದ ಸಭೆಯಲ್ಲೇ ವಿದೇಶಿ ಬ್ಯಾಂಕುಗಳಲ್ಲಿರುವ ಕಪ್ಪು ಹಣವನ್ನು ವಾಪಸ್ ತರಲು ಹಿಂದಿನ ಸರ್ಕಾರ ಎರಡು ವರ್ಷಗಳಿಂದ ರಚಿಸಲು ತಾರಮ್ಮಯ್ಯ ಆಡುತ್ತಿದ್ದ ವಿಶೇಷ ತನಿಖಾ ತಂಡ ರಚಿಸುವ ನಿರ್ಧಾರ ಕೈಗೊಂಡಿತು. ಸಂಸತ್ತಿನ ಮೊದಲ ಅಧಿವೇಶನದಲ್ಲಿ 'ಪ್ರಜಾಪ್ರಭುತ್ವದಲ್ಲಿ ಸರ್ಕಾರ ನಡೆಸುವುದು ಕೇವಲ ಆಡಳಿತ ಪಕ್ಷದ ಹೊಣೆಯಲ್ಲ; ವಿರೋಧ ಪಕ್ಷಗಳೂ ಅದರಲ್ಲಿ ಪಾಲ್ಗೊಳ್ಳಬೇಕು' ಎಂದು ಹೇಳುತ್ತಾ ವಿರೋಧ ಪಕ್ಷಗಳನ್ನು ಬೆಚ್ಚಿ ಬೀಳಿಸಿ, ಅವುಗಳಲ್ಲಿ ವಿಚಿತ್ರ ಪುಳಕವನ್ನುಂಟು ಮಾಡಿದರು.

ಹೀಗೆ ಮೋದಿ ತಮ್ಮ ಟೀಕಾಕಾರರ ನಿರೀಕ್ಷೆಗಳಿಗೆ ವಿರುದ್ಧವಾಗಿ ಓರ್ವ ಹಿರಿಯ ರಾಜಕೀಯ ಮುತ್ಸದ್ದಿಯ ಮತ್ತು ಅದಕ್ಕಿಂತ ಹೆಚ್ಚಾಗಿ, ಅವರ ಮಾತುಗಳಲ್ಲೇ ಹೇಳುವುದಾದರೆ, 'ದಕ್ಷ ದೇಶಸೇವಕ'ನ ಚಿತ್ರವೊಂದನ್ನು ತಮ್ಮ ಬಗ್ಗೆ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಇದಕ್ಕಿಂತ ಒಳ್ಳೆಯ ಆರಂಭವನ್ನು ಹೊಸ ಮತ್ತು ಹಲವು ಆತಂಕಗಳ ಹುಟ್ಟಿಸಿಯೇ ಅಧಿಕಾರ ವಹಿಸಿಕೊಂಡ ಪ್ರಧಾನಮಂತ್ರಿಯಿಂದ ಯಾರೂ ನಿರೀಕ್ಷಿಸಲಾರರು.

ಅನುಮಾನಾಸ್ಪದ ನಡೆ–ನಿರ್ಧಾರಗಳು

ಆದರೆ ಇದು ಒಂದು ತಿಂಗಳ, ಕೇವಲ ಒಂದು ತಿಂಗಳ ಚಿತ್ರ ಮಾತ್ರ. ಇದೆಲ್ಲವನ್ನೂ ಮೋದಿ ತಮ್ಮ ಬಗೆಗಿರುವ ಆತಂಕಗಳನ್ನು ದೂರಮಾಡಲೆಂದೇ ಪ್ರಜ್ಞಾಪೂರ್ವಕವಾಗಿ ಮಾಡಿರಬಹುದೆಂದು ಸಂದೇಹಿಸಲೂ ಅವರ ಚರಿತ್ರೆ ಆಸ್ಪದ ಮಾಡಿಕೊಡುತ್ತದೆ

ಎಂಬುದೂ ನಿಜ. ಅವರು ನಿಜವಾಗಿ 'ಕೆಲಸ' ಮಾಡಲು ಆರಂಭಿಸಿದಾಗ ಅವರ ವ್ಯಕ್ತಿತ್ವದ, 'ಸ್ವಯಂಸೇವಕತ್ವ'ದ ತರಬೇತಿಯ ಅಂತರ್ಗತ ಗುಣಗಳು 'ಕೆಲಸ' ಮಾಡತೊಡಗಿದಾಗ ಅವರ ನಿರ್ಧಾರಗಳು ಹೇಗಿರುತ್ತವೆ ಎಂಬುದನ್ನು ಇನ್ನೂ ಕಾದು ನೋಡಬೇಕಿದೆ. ಈ ಸಂದೇಹಕ್ಕೆ ಪುಷ್ಟಿ ಕೊಡುವಂತಹ ಕೆಲವು ಸೂಚನೆಗಳೂ ಈ ಒಂದು ತಿಂಗಳಲ್ಲಿ ಕಾಣಿಸಿಕೊಂಡಿವೆ. ಅವರು ಅಧಿಕಾರ ವಹಿಸಿಕೊಂಡ ದಿನವೇ ಸರ್ಕಾರಿ ಸಂವಹನಗಳಲ್ಲಿ ಹಿಂದಿ ಭಾಷೆಗೆ ಪ್ರಾಶಸ್ತ್ಯ ನೀಡಬೇಕೆಂಬ ಆದೇಶ ಹೊರಡಿಸಿ ಮತ್ತು ನಂತರದ ಎರಡೇ ದಿನಗಳಲ್ಲಿ ಕಾಶ್ಮೀರದ ಸ್ವಾಯತ್ತತೆಗೆ ಸಂಬಂಧಿಸಿದ ವಿಧಿಯ ಬಗ್ಗೆ ಹುಸಿ ಚರ್ಚೆಗೆ ಇಂಬು ಕೊಟ್ಟು ತಮ್ಮ ಪಕ್ಷದ ರಾಷ್ಟ್ರೀಯತೆಯ ಕಲ್ಪನೆಯ ಸಂಕುಚಿತತೆಯ ಪರಿಚಯ ಮಾಡಿಕೊಟ್ಟಿದ್ದಾರೆ. ಇನ್ನು ಸಚಿವ ಸಂಪುಟದ ಸದಸ್ಯರ ಕಾರ್ಯ ಸ್ವಾಯತ್ತತೆಯನ್ನು ಧಿಕ್ಕರಿಸಿದಂತೆ ವಿವಿಧ ಖಾತೆಗಳ ಕಾರ್ಯದರ್ಶಿಗಳ ಸಭೆ ಕರೆದು ಸರ್ಕಾರದ ನಿರ್ಧಾರಗಳಿಗೆ ಸಂಬಂಧಪಟ್ಟಂತೆ ಅವರೊಂದಿಗೆ ನೇರ ಸಂಪರ್ಕದ ಹಾದಿಯನ್ನು ನಿರ್ಮಿಸಿಕೊಂಡು ಗುಜರಾತ್‌ನಲ್ಲಿ ಪ್ರದರ್ಶಿಸಿದ ಕೇಂದ್ರೀಕೃತ ನಾಯಕತ್ವದ ಅಪಾಯಕಾರಿ ಗುಣದ ಸುಳಿವು ನೀಡಿದ್ದಾರೆ. ಹಾಗೇ, ಅವರ ಅಧಿಕಾರ ಸ್ವೀಕಾರದ ಬೆನ್ನಲ್ಲೇ ಅಪಶಕುನದಂತೆ, ಪುಣೆಯಲ್ಲಿ ಕೆಲ ಹಿಂದೂ ಕೋಮುವಾದಿ ಸಂಘಟನೆಗಳಿಂದ ನಡೆದ ಓರ್ವ ಅಮಾಯಕ ಮುಸ್ಲಿಂ ಯುವಕನ ಹತ್ಯೆಯ ಬಗ್ಗೆ ಒಂದು ಖಂಡನೆಯ ಮಾತನಾಡುವ ತುರ್ತು ಸಾಂದರ್ಭಿಕ ಜವಾಬ್ದಾರಿಯ ಪರಿವೆಯಿಲ್ಲದೆ ರಾಜ್ಯದಿಂದ 'ವರದಿ' ತರಿಸಿಕೊಳ್ಳುವ ಔಪಚಾರಿಕ ಮಾತುಗಳನ್ನಾಡಿ ತಮ್ಮ ಹಿಂದೂ ರಾಷ್ಟ್ರೀಯತ್ವದ ಅಪಾಯಗಳ ಸೂಚನೆ ನೀಡಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ, ಈ ಒಂದು ತಿಂಗಳಲ್ಲಿ ಆತಂಕ ಹುಟ್ಟಿಸಿದ ಮೋದಿ ಸರ್ಕಾರದ ನಡೆಯೆಂದರೆ, ಸರ್ಕಾರೇತರ ಸಂಸ್ಥೆಗಳನ್ನು ಕುರಿತ ಗುಪ್ತಚರ ಇಲಾಖೆಯ 'ವರದಿ'ಯೊಂದರ ಬೇಕಾದ ಭಾಗಗಳನ್ನಷ್ಟೇ ಬೇಕೆಂದೇ ಸೋರಿಕೆ ಮಾಡಿರುವುದು. ಆ ಮೂಲಕ ಪರಿಸರ ಸಂರಕ್ಷಣೆಯ ಆಂದೋಲನದಲ್ಲಿ ತೊಡಗಿರುವ ಸ್ವಯಂಸೇವಾ ಸಂಸ್ಥೆಗಳ ಬಗ್ಗೆ ಸಾರ್ವಜನಿಕರಲ್ಲಿ ಸಂಶಯ ಹುಟ್ಟುವಂತೆ ಮಾಡಿ, ನರ್ಮದಾ ಅಣೆಕಟ್ಟೆಯ ಎತ್ತರವನ್ನು ಹೆಚ್ಚಿಸುವ ನಿರ್ಧಾರವನ್ನು ಪ್ರಕಟಿಸಿರುವುದು. ನಿಜ, ವಿದೇಶಗಳಿಂದ ಅನುದಾನ ಪಡೆಯಲೆಂದೇ ಈ ದೇಶದಲ್ಲಿ ಸಾವಿರಾರು ಸರ್ಕಾರೇತರ ಸಂಸ್ಥೆಗಳು ಹುಟ್ಟಿಕೊಂಡಿವೆ. ಮತ್ತು ಅವುಗಳಲ್ಲಿ ಕೆಲವು ಅಪ್ರಬುದ್ಧ ನಾಯಕತ್ವದೊಂದಿಗೆ ಬೇಜವಾಬ್ದಾರಿತನದಿಂದ ವರ್ತಿಸುತ್ತಿರಬಹುದು. ಆದರೆ ಅವನ್ನು ಕಾನೂನುಬದ್ಧವಾಗಿ ಗುರುತಿಸಿ ಕ್ರಮ ಕೈಗೊಳ್ಳಬೇಕೇ ಹೊರತು, ಗುಪ್ತಚರ ಇಲಾಖೆಯ ವರದಿಯ ಸೋರಿಕೆಯ ಮೂಲಕ ತನ್ನ ಅಭಿವೃದ್ಧಿ ನೀತಿಗೆ ವಿರುದ್ಧವಿರಬಹುದಾದ ಸಂಸ್ಥೆಗಳ ಬಗ್ಗೆ ಅಪಪ್ರಚಾರದ ಕೆಲಸದಲ್ಲಿ ತೊಡಗುವುದು ಕೇವಲ ಕುತ್ಸಿತ ರಾಜಕಾರಣವೆನಿಸಿಕೊಳ್ಳುತ್ತದೆ. ಈಗ ಈ ಸರ್ಕಾರ ಕಲ್ಲಿದ್ದಲು ಗಣಿಗಾರಿಕೆ ಮತ್ತು ಪರಮಾಣು ವಿದ್ಯುತ್ ಉತ್ಪಾದನೆ ಮತ್ತು

ಗುಜರಾತ್‌ನಲ್ಲಿ ಕೈಗಾರಿಕೋದ್ಯಮಿಗಳಿಗಾಗಿ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವ ವಿಧಿ-ವಿಧಾನಗಳ ಬಗ್ಗೆ ಪ್ರಶ್ನೆಗಳನ್ನೆತ್ತಿರುವ ಸಂಸ್ಥೆಗಳನ್ನು ಗುರಿ ಮಾಡಿಕೊಂಡಿರುವುದನ್ನು ನೋಡಿದರೆ ಮತ್ತು ಕೈಗಾರಿಕೋದ್ಯಮಗಳಿಗೆ ಪರಿಸರ ಅನುಮತಿಯನ್ನು ತ್ವರೆ ಮಾಡಿ ನೀಡಬೇಕೆಂಬ ಆದ್ಯತೆಯ ನೀತಿಯನ್ನು ನೋಡಿದರೆ, ಮೋದಿ ಗಾಂಧೀಜಿ ಚಿತ್ರಕ್ಕೆ ನಮನ ಸಲ್ಲಿಸಿದ್ದು ಕೇವಲ ತೋರಿಕೆಯ ಔಪಚಾರಿಕತೆಯೇನೋ ಎಂಬ ಅನುಮಾನ ಹುಟ್ಟುತ್ತದೆ. ಆದರೆ ಸದ್ಯಕ್ಕೆ ಅನುಮಾನ ಮಾತ್ರ. ಮೋದಿ ನಾವೆಲ್ಲ ಎಣಿಸಿದಂತೆ ನಿಜವಾಗಿ ಆಳದಲ್ಲಿ ಬದಲಾಗಿದ್ದರೆಯೇ ಎಂಬುದು ಸ್ಪಷ್ಟವಾಗಿ ಗೊತ್ತಾಗಲು ಬಹುಶಃ ನಾವಿನ್ನೂ ಸ್ವಲ್ಪ ಕಾಲ ಕಾಯಬೇಕಿದೆ.

ಏಕೆಂದರೆ 'ಒಳ್ಳೆಯ ದಿನಗಳು ಬರಲಿವೆ!' ಎಂದಿದ್ದ ಮೋದಿ ಈಗ 'ಕಠಿಣ ಕ್ರಮಗಳಿಗೆ ಸಿದ್ಧವಾಗಿ!' ಎಂದು ದೇಶಕ್ಕೆ ಕರೆ ನೀಡಿ ರಾಗ ಬದಲಿಸಿದ್ದಾರೆ. ಆದರೆ ಇದೇ ಮೋದಿ ಮತ್ತು ಅವರ ಪಕ್ಷ ಚುನಾವಣೆಗೆ ಮುನ್ನ ಮತ್ತು ಚುನಾವಣೆಗಳ ಸಂದರ್ಭದಲ್ಲಿ ಹಿಂದಿನ ಸರ್ಕಾರ ಇವರು ಈಗ ಸೂಚನೆ ಕೊಡುತ್ತಿರುವ ಕಠಿಣ ಕ್ರಮಗಳನ್ನು ಕೈಗೊಳ್ಳಲು ಮುಂದಾದಾಗ ಎಂತಹ ಹುಯಿಲೆಬ್ಬಿಸಿ ತಮ್ಮನ್ನು ಎತ್ತಿಕಟ್ಟುತ್ತಿದ್ದರು ಎಂಬುದನ್ನು ಜನ ಮರೆತಿಲ್ಲ. ಹಿಂದಿನ ಸರ್ಕಾರ ಖಜಾನೆ ಖಾಲಿ ಮಾಡಿ ಹೋಗಿದೆ ಎಂಬ ಮೋದಿಯವರ ಸಬೂಬನ್ನು ಈಗಾಗಲೇ ಮಾಜಿ ಹಣಕಾಸು ಮಂತ್ರಿ ಚಿದಂಬರಂ ಪ್ರಶ್ನಿಸಿದ್ದಾರೆ. ಈ ಹಿಂದಿನ ವಾಜಪೇಯಿ ಸರ್ಕಾರ ಬಿಟ್ಟು ಹೋಗಿದ್ದ ಹಣಕಾಸು ಸ್ಥಿತಿಗಿಂತ ಬಹು ಉತ್ತಮವಾದ ಸ್ಥಿತಿಯಲ್ಲಿ ತಮ್ಮ ಸರ್ಕಾರ ಅಧಿಕಾರ ಹಸ್ತಾಂತರಿಸಿದೆ ಎಂದು ಅಂಕಿ ಅಂಶಗಳೊಂದಿಗೆ ಅವರು ಹೇಳಿದ್ದಾರೆ. ಈಗಾಗಲೇ ರೈಲ್ವೇ ದರಗಳ ಹೆಚ್ಚಳದ ಬರೆ ಜನಸಾಮಾನ್ಯರಿಗೆ ಬಿದ್ದಿದೆ. ಇನ್ನಷ್ಟು ಬರೆಗಳು ಬೀಳಲಿವೆ! ಇನ್ನು ಗೋಪಾಲ ಸುಬ್ರಮಣ್ಯಂರವರನ್ನು ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರನ್ನಾಗಿ ಮಾಡುವ ಪ್ರಕ್ರಿಯೆಯಲ್ಲಿ ಮತ್ತು ದೆಹಲಿ ವಿಶ್ವವಿದ್ಯಾಲಯದ ಶಿಕ್ಷಣ ಕ್ರಮದಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಿ ಕೆಟ್ಟ ಸಂಪ್ರದಾಯಗಳಿಗೆ ನಾಂದಿ ಹಾಡಲಾಗಿದೆ. ಇವೆಲ್ಲ ಶುಭ ಸೂಚನೆಗಳಂತೂ ಅಲ್ಲ.

ಸಿದ್ಧರಾಮಯ್ಯನವರ ಒಂದು ವರ್ಷ

ಇನ್ನು ಇತ್ತ ನಮ್ಮ ಸಿದ್ಧರಾಮಯ್ಯನವರನ್ನು ನೋಡಿ. ಮೋದಿ ಆತಂಕಗಳನ್ನು ಹುಟ್ಟಿಸುತ್ತಾ ಅಧಿಕಾರಕ್ಕೆ ಬಂದರೆ ಇವರು ಆಸೆಗಳನ್ನು ಹುಟ್ಟಿಸಿ ಬಂದರು. ಆದರೆ ಇವರ ಅಧಿಕಾರಾವಧಿಯ ಈ ಒಂದು ವರ್ಷದಲ್ಲಿ ಇವರು ಸಾಧಿಸಿರುವುದೇನು ಎಂದು ನೋಡಿದರೆ, ನಿರಾಶೆಯೇ ಹೆಚ್ಚು. ಅದು ವಿಶೇಷವಾಗಿ ಎದ್ದು ಕಾಣುವುದು ಇವರ ಸಮಾಜವಾದಿ ಕಳಕಳಿಯ ನಾಯಕತ್ವಕ್ಕೆಂದೇ ಜನ ಕಾಂಗ್ರೆಸ್ಸಿಗೆ ಮತ ಹಾಕಿದರು ಎಂಬ ಸಂಗತಿಯ ಹಿನ್ನೆಲೆಯಲ್ಲಿ. ಈಗಲೂ ಸಿದ್ಧರಾಮಯ್ಯ ವೈಯುಕ್ತಿಕವಾಗಿ ಹೆಸರು ಕೆಡಿಸಿಕೊಳ್ಳುವಂತಹ ಕೆಲಸಗಳನ್ನೇನೂ ಮಾಡಿಲ್ಲ. ಆದರೆ ತಮ್ಮ ಸಮಾಜವಾದಿ

ಆದರ್ಶಗಳನ್ನು ತಮ್ಮ ರಾಜಕಾರಣದ ಅನುಕೂಲಕ್ಕೆ ತಕ್ಕಂತೆ ಮಾತ್ರ ವ್ಯಾಖ್ಯಾನ ಮಾಡಿಕೊಂಡು ರಾಜ್ಯಭಾರ ಮಾಡುತ್ತಾ ನಿರಾಶೆ ಹುಟ್ಟಿಸತೊಡಗಿದ್ದಾರೆ. ಸಾರ್ವಜನಿಕ ಸಮಾರಂಭಗಳಲ್ಲಿ ನಿದ್ದೆ ಹೊಡೆಯುವ ಚಿತ್ರ ಅವರ ಆಡಳಿತಕ್ಕೆ ಹಿಡಿದ ಕನ್ನಡಿಯಂತೆಯೇ ಇದೆಯೆಂದರೆ ಅದು ಘೋರವಾದ ಮಾತೇನೂ ಆಗಲಾರದು. ಸಾರ್ವಜನಿಕ ಸಭೆಗಳಲ್ಲಿನ ತಮ್ಮ ಈ ನಿದ್ದೆಗೇಡಿತನ ಜನಕ್ಕೆ ಯಾವ ಸಂದೇಶವನ್ನು ರವಾನಿಸುತ್ತದೆ ಎಂಬ ಪರಿವೆಯೇ ಇಲ್ಲದ ಅವರು ಈವರೆಗೆ ಇದಕ್ಕೊಂದು ಪರಿಹಾರ ಕಂಡುಕೊಳ್ಳದೇ ಇರುವುದು ಅವರು ಜನತೆಯ ಮನೋಸೂಕ್ಷ್ಮಗಳ ಬಗ್ಗೆ ಎಂತಹ ತಿರಸ್ಕಾರ ಭಾವನೆ ಹೊಂದಿದ್ದಾರೆ ಎಂಬುದರ ದ್ಯೋತಕವಾಗಿದೆ.

ಮೊದಲಾಗಿ, ಮೋದಿಯವರಂತೆ ಸಿದ್ದರಾಮಯ್ಯ ತಮ್ಮ ಸಚಿವ ಸಂಪುಟ ರಚನೆಯಾಗಲೀ ತಾನೇಕೆ ಮುಖ್ಯಮಂತ್ರಿಯಾಗಲು ಹಂಬಲಿಸಿದೆ ಎಂಬುದನ್ನು ಜನತೆಗೆ ಹೇಳುವ ರೀತಿಯಲ್ಲಿ ತಮ್ಮ ಮುಖ್ಯಮಂತ್ರಿತ್ವವನ್ನು ಆರಂಭಿಸಲಿಲ್ಲ. ಅವರು ಸಚಿವ ಸಂಪುಟದ ರಚನೆಯಾಗುವ ಮುನ್ನವೇ 'ಅನ್ನ ಭಾಗ್ಯ'ದಂತಹ ಜನಪ್ರಿಯ ಆದರೆ ದುಬಾರಿಯಾದ ಕಾರ್ಯಕ್ರಮವನ್ನು ಘೋಷಿಸಿ ತಮ್ಮ ಮುಖ್ಯಮಂತ್ರಿತ್ವವನ್ನು ತಮ್ಮ ವೈಯುಕ್ತಿಕ ರಾಜಕೀಯ ಹಂಬಲದ ಈಡೇರಿಕೆ ಮಾತ್ರವಾಗಿರುವ ಸೂಚನೆ ನೀಡಿದರು. ಅಂದರೆ, ಸಾಮಾಜಿಕ ರಾಜಕಾರಣ ಮತ್ತು ಸಾರ್ವಜನಿಕ ಸೇವೆ ಈ ವೈಯುಕ್ತಿಕ ಹಂಬಲದ ಈಡೇರಿಕೆಯ ನಂತರದ ಆದ್ಯತೆಗಳಷ್ಟೆ! ಇದು ಈವರೆಗಿನ ಅವರೆಲ್ಲ ಆಡಳಿತ ಕೆಲಸ ಕಾರ್ಯಗಳಲ್ಲೂ ಪ್ರತಿಬಿಂಬಿತವಾಗುತ್ತಿದೆ. ಅವರೆಲ್ಲ ನಡೆಗಳೂ ಮೂಲತಃ ಅವರು ತಮ್ಮ ಕುರ್ಚಿಯಲ್ಲಿ ಉಳಿಯಲು ಕೈಗೊಳ್ಳಲಾಗುತ್ತಿರುವ ಕ್ರಮಗಳಾಗಿ ಕಾಣುತ್ತಿವೆಯೇ ಹೊರತು, ರಾಜ್ಯದ ಜನರ ಕ್ಷೇಮಾಭ್ಯುದಯಕ್ಕಾಗಿ ರೂಪಿಸಿಕೊಂಡಿರುವ ಒಂದು ದೀರ್ಘಕಾಲಿಕ ಕಾರ್ಯಕ್ರಮದ ಭಾಗವಾಗಿ ಅಲ್ಲ.

ಅವರು ವಿಧಾನ ಪರಿಷತ್ತಿಗೆ ನಡೆಸಿದ ನಾಮಕರಣಗಳ ವೈಖರಿ, ಇಬ್ರಾಹಿಂ ಎಂಬ ಒಂದು ಕಡೆಯಿಂದ ನೋಡಿದಾಗ ಮಹಾ ವಿದೂಷಕನಂತೆಯೂ ಇನ್ನೊಂದು ಕಡೆಯಿಂದ ನೋಡಿದಾಗ ಮಹಾ ಅನುಮಾನಾಸ್ಪದ ಆಸಾಮಿಯಾಗಿಯೂ ಕಾಣುವ ವ್ಯಕ್ತಿಯನ್ನು ರಾಜ್ಯದ ಯೋಜನಾ ಆಯೋಗದ ಉಪಾಧ್ಯಕ್ಷನನ್ನಾಗಿ ಮಾಡಿದ ನೇಮಕ ಇದಕ್ಕೆಲ್ಲ ಇತ್ತೀಚಿನ ಉದಾಹರಣೆಗಳಷ್ಟೇ ಅಲ್ಲ. ಅವರ ಈ ಆಡಳಿತ ವೈಖರಿ ಪಾತಾಳ ಮಟ್ಟವನ್ನು ಮುಟ್ಟಿರುವುದರ ಸೂಚನೆಯೂ ಆಗಿದೆ. ಸಿದ್ದರಾಮಯ್ಯ ಈಗ ಕಾಂಗ್ರೆಸಿಗರು ಮಾತ್ರವಲ್ಲ; ಕಟ್ಟಾ ಕಾಂಗ್ರೆಸ್ಸಿಗರೂ ಆಗಿಬಿಟ್ಟಿದ್ದಾರೆ. ಹಾಗಾಗಿಯೇ ಸಿದ್ದರಾಮಯ್ಯ ವಿಧಾನ ಪರಿಷತ್ತು ಮತ್ತು ಯೋಜನಾ ಆಯೋಗಗಳನ್ನು ಹಿಂದೆ ಯಾರೂ ಮಾಡದಷ್ಟು ಪೂರ್ಣವಾಗಿ ಜನರಿಂದ ತಿರಸ್ಕರಿಸಲ್ಪಟ್ಟ ರಾಜಕಾರಣಿಗಳ ಆಶ್ರಯದಾಣವನ್ನಾಗಿ ಪರಿವರ್ತಿಸಿಬಿಟ್ಟಿದ್ದಾರೆ. ಸಾಹಿತ್ಯ-ಸಂಗೀತ-ಲಲಿತ ಕಲೆ, ಶಿಕ್ಷಣ, ವೈದ್ಯಕೀಯ, ಸಾಮಾಜಿಕ ಸೇವೆ ಇತ್ಯಾದಿ ಸಕಲ ಕ್ಷೇತ್ರಗಳ ಪರಿಣತರಿಂದ ಕೂಡಿ, ವಿಧಾನ ಸಭೆ ಕೈಗೊಂಡ ನಿರ್ಣಯಗಳನ್ನು

ಹಿರಿತನದ ಅನುಭವದೊಂದಿಗೆ ಪರಿಶೀಲಿಸುವ ಸಂಸ್ಥೆಯಾಗಿ ನಮ್ಮ ಸಂವಿಧಾನ ಕರ್ತೃಗಳು ರೂಪಿಸಿದ ವಿಧಾನ ಪರಿಷತ್ತಿನ ಗೌರವ ಘನತೆಗಳನ್ನು ನಾಶ ಮಾಡಿದ್ದಾರೆ. ಇದನ್ನು, ಸೃಜನಶೀಲ ರಾಜಕೀಯ ಆಸಕ್ತಿಗಳನ್ನು ಹೊಂದಿರುವವರೆಂದು ನಂಬಲಾದ ಸಮಾಜವಾದಿ ಹಿನ್ನೆಲೆಯ ಸಿದ್ಧರಾಮಯ್ಯನವರಿಂದ ನಿರೀಕ್ಷಿಸಿರಲಿಲ್ಲ. ಇನ್ನು ಸಿದ್ಧರಾಮಯ್ಯ ಸಾಮಾಜಿಕ ನ್ಯಾಯವೆಂದರೆ ಜಾತಿ ಪ್ರಾತಿನಿಧ್ಯವಷ್ಟೇ ಎಂದುಕೊಂಡಿದ್ದಾರೆನಿಸುತ್ತದೆ. ಸಿದ್ಧರಾಮಯ್ಯನವರೇ, ಸಾಮಾಜಿಕ ನ್ಯಾಯವೆನ್ನುವುದು ಇರುವುದು ರಾಜ್ಯಾಡಳಿತಕ್ಕಾಗಿ. ಸಾಮಾಜಿಕ ನ್ಯಾಯಕ್ಕಾಗಿ ರಾಜ್ಯಾಡಳಿತವಲ್ಲ! ಆದ್ದರಿಂದ ಯೋಗ್ಯರನ್ನು, ದಕ್ಷರನ್ನೂ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ನಿರ್ಲಕ್ಷಿಸಬೇಕೆಂದಿಲ್ಲ. ಹಾಗೇ, ಅಹಿಂದ ಎಂದರೆ ಕುರುಬ–ಗೊಲ್ಲ–ನಾಯಕ–ಮುಸ್ಲಿಂ–ದಲಿತ ಮಾತ್ರ ಅಲ್ಲ. ನೂರಾರು ಸಣ್ಣಪುಟ್ಟ ಜಾತಿಗಳೂ ಅದರಲ್ಲಿವೆ ಎಂಬುದೂ ನೆನಪಿರಲಿ.

ಹಾಗೆ ನೋಡಿದರೆ ಸಿದ್ಧರಾಮಯ್ಯನವರು ತಮ್ಮ ಸಚಿವ ಸಂಪುಟವನ್ನು ರಚಿಸಿದಾಗಲೇ, ತಾವು ಸಾರ್ವಜನಿಕ ಸೇವೆಯ ನಿರ್ದಿಷ್ಟ ಕಾರ್ಯಕ್ರಮದೊಡನೆ ಅಧಿಕಾರಕ್ಕೆ ಬಂದಿಲ್ಲ ಎಂಬುದನ್ನು ಸಾರುವಂತೆ, ಪಕ್ಷದ ವರಿಷ್ಠ ಮಂಡಳಿಯ ಸೂಚನೆಗೆ ಸುಲಭವಾಗಿ ಬಗ್ಗಿ ಸಾಮಾಜಿಕ ನ್ಯಾಯದ ಹೆಸರಿನಲ್ಲಿಯೋ ಯಾವುದೋ ಮತ್ತೊಂದು ರಾಜಕೀಯ ತಂತ್ರದ ಹೆಸರಿನಲ್ಲಿಯೋ ಯಾರ್‍ಯಾರನ್ನೋ ತಮ್ಮ ಮಂತ್ರಿಗಳನ್ನಾಗಿ ಮಾಡಿಕೊಂಡರು. ಹಾಗಾಗಿಯೇ ಒಂದು ವರ್ಷದ ನಂತರವೂ ಈ ಮಂತ್ರಿಮಂಡಲದ ಮುಕ್ಕಾಲು ಜನ ಮಂತ್ರಿಗಳ ಹೆಸರುಗಳು ರಾಜ್ಯದ ಜನತೆಗೆ ಅಪರಿಚಿತವಾಗಿಯೇ ಉಳಿದಿವೆ. ಕೆ.ಎಂ. ಜಾರ್ಜ್ ಎನ್ನುವವರು ಈ ರಾಜ್ಯದ ಗೃಹ ಮಂತ್ರಿಯಾಗುವಷ್ಟು ಹಿರಿಯ ರಾಜಕಾರಣಿ ಎಂಬುದು ಜನತೆಗೆ ಗೊತ್ತಿರಲಿಲ್ಲ. ಹಾಗೇ ಸತೀಶ್ ಜಾರಕಿಹೊಳಿ ಸ್ವತಃ ಅಬ್ಕಾರಿ ಉದ್ಯಮಿಯಾಗಿರುವಾಗ ಅವರಿಗೆ ಅಬ್ಕಾರಿ ಖಾತೆ ನೀಡಬಾರದೆಂಬ ಸೂಕ್ಷ್ಮವೂ ಸಿದ್ಧರಾಮಯ್ಯನವರ ಬಳಿ ಸುಳಿಯುವುದಿಲ್ಲ. ಉನ್ನತ ಶಿಕ್ಷಣ ಖಾತೆಯನ್ನು ಹಣದ ಮೂಟೆಗಳ ಮಾಲೀಕರಿಗೆ ಕೊಡಬಾರದೆನ್ನುವುದೂ ಹೊಳೆಯುವುದಿಲ್ಲ. ಇಷ್ಟು ಅಸೂಕ್ಷ್ಮತೆ ಮೈ–ಮನಸ್ಸುಗಳನ್ನು ಆವರಿಸಿದಾಗ ಭ್ರಷ್ಟಾಚಾರದ ಆಪಾದನೆ ಹೊತ್ತವರನ್ನು ರಾಜಕೀಯ ಲಾಭಗಳಿಗಾಗಿ ಮಂತ್ರಿಗಳನ್ನಾಗಿ ಮೇಲಿಂದ ಹೇರಿದಾಗ ಅದನ್ನು ವಿರೋಧಿಸುವ ನೈತಿಕ ಸ್ಥೈರ್ಯವಾದರೂ ಎಲ್ಲಿರುತ್ತದೆ? ಇದರ ಫಲವೇ ಇಂದು ಸಾರ್ವಜನಿಕರ ಟೀಕೆಗಳಿಗೆ ಒಳಗಾಗುತ್ತಿರುವ–ಇತ್ತೀಚಿನ ಉದಾಹರಣೆ: ಅಲ್ಪಸಂಖ್ಯಾತರ ಶಾಲೆಗಳನ್ನು ಕುರಿತ ವ್ಯಾಖ್ಯಾನವನ್ನು ಬದಲಿಸುವ ಆದೇಶ–ಸರ್ಕಾರದ ನಿರ್ಧಾರಗಳು.

ಸಿದ್ಧರಾಮಯ್ಯನವರಿಗೆ ಕಾಲವಿನ್ನೂ ಮಿಂಚಿಲ್ಲ. ಮುಗಿದಿರುವುದು ಒಂದು ವರ್ಷ ಮಾತ್ರ. ಮಲ್ಲಿಕಾರ್ಜುನ ಖರ್ಗೆಯವರು ಲೋಕಸಭೆಯಲ್ಲಿ ಪಕ್ಷದ ನಾಯಕರಾಗಿ ರವಾನೆಯಾದ ಮೇಲೆ ಇವರಿಗೆ ಸವಾಲಾಗಬಲ್ಲ ನಾಯಕರಾರೂ ಕಾಂಗ್ರೆಸ್ಸಿನಲ್ಲಿ ಇಲ್ಲ.

ಜನಪ್ರಿಯ ಮುಖ್ಯವಾಗಿ, ಕಾಂಗ್ರೆಸ್ಸಿನ ವರಿಷ್ಠ ಮಂಡಳಿ ತಾನು ಉಳಿದುಕೊಂಡರೇ ಸಾಕೆಂಬ ಮನಸ್ಥಿತಿಯಲ್ಲಿದೆ. ಹಾಗಾಗಿ ಸಿದ್ದರಾಮಯ್ಯ ಮನಸ್ಸು ಮಾಡಿದರೆ, ಅಧಿಕಾರಸ್ಥತೆಯ ಭಯದಲ್ಲಿ ಅಗ್ಗದ ರಾಜಕೀಯ ತಂತ್ರಗಳನ್ನು ಬಳಸುವುದನ್ನು ನಿಲ್ಲಿಸಿ ಒಳ್ಳೆಯ ಸಮಾಜವಾದಿಯಾಗಿ ತಾವು ಕಲ್ಪಿಸಿಕೊಂಡಿದ್ದಿರಬಹುದಾದ ಆಡಳಿತ ಮಾದರಿಯನ್ನು ಆರಂಭಿಸಲು ಇದು ಸಕಾಲ

<u>ಸಮಕಾಲೀನ</u>

ಲೋಕಸಭಾ ಚುನಾವಣೆಯ ಪಾಠಗಳು

ಹಲವಾರು ಕಾರಣಗಳಿಂದಾಗಿ ಕುತೂಹಲ ಹುಟ್ಟಿಸಿದ್ದ ೨೦೧೪ರ ಲೋಕಸಭಾ ಚುನಾವಣೆಗಳು ಅಂತೂ ಮುಗಿದಿವೆ. ಸುಮಾರು ಒಂದೂವರೆ ತಿಂಗಳುಗಳ ಕಾಲ ಹಲವು ಹಂತಗಳಲ್ಲಿ ನಡೆದ ಮತದಾನ ರಾಜಕೀಯ ಪಕ್ಷಗಳನ್ನೂ, ಅವುಗಳ ಹುರಿಯಾಳುಗಳನ್ನೂ, ಮಾಧ್ಯಮಗಳನ್ನೂ, ಜನರನ್ನೂ, ಕೊನೆಗೆ ಚುನಾವಣಾ ಆಯೋಗವನ್ನೂ ಸುಸ್ತು ಹೊಡೆಸಿ ದೇಶಕ್ಕೆ ಒಂದು ಹೊಸ ಸ್ಥಿರ ಸರ್ಕಾರವನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಪ್ರಥಮ ಬಾರಿಗೆ, ಸಂಸದೀಯ ಪ್ರಜಾಪ್ರಭುತ್ವ ಮಾದರಿಯನ್ನು ಧಿಕ್ಕರಿಸಿ ಅಧ್ಯಕ್ಷೀಯ ಮಾದರಿಯಲ್ಲಿ ಒಬ್ಬ ನಿರ್ದಿಷ್ಟ ಅಭ್ಯರ್ಥಿಯ ಪರ ಮತ್ತು ವಿರುದ್ಧ ಎಂಬ ವೈಖರಿಯಲ್ಲಿ ನಡೆದ ಈ ಚುನಾವಣೆಯಲ್ಲಿ ಜನ ಆ ನಿರ್ದಿಷ್ಟ ಅಭ್ಯರ್ಥಿಯ ಪರವಾಗಿ ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿದೆ. ಬಹಳ ವರ್ಷಗಳ ಕಾಲ ಕಾಣದಿದ್ದ ಒಂದು ಅಸಂದಿಗ್ಧ ರಾಜಕೀಯ ತೀರ್ಪನ್ನು ಜನತೆ ನೀಡಿದೆ. ಈ ಮೋದಿ ದಿಗ್ವಿಜಯದ ಹಿಂದೆ ಭಾರತದ ಚುನಾವಣಾ ಇತಿಹಾಸದಲ್ಲಿ ಕಂಡರಿಯದ ಹಲವಾರು ವಿಶೇಷ ಸಂಗತಿಗಳು ಕೆಲಸ ಮಾಡಿವೆ ಎಂದು ಹೇಳಲಾಗುತ್ತಿದೆ. ಹಾಗೇ ಈ ಚುನಾವಣೆಗಳು ಹಲವು ಹೊಸ ನಿಜಗಳನ್ನೂ ರಾಜಕೀಯ ಚಿಂತಕರ, ವಿಶ್ಲೇಷಕರ ಮುಂದೆ ತೆರೆದಿಟ್ಟಿವೆ. ಈ ಎಲ್ಲ ಸಂಗತಿಗಳೂ ಕೂಡಿ ಈ ಚುನಾವಣೆ ಹಲವು ಕಾರಣಗಳಿಂದಾಗಿ ಭಾರತದ ಪ್ರಜಾಪ್ರಭುತ್ವ ಕುರಿತ ಚರ್ಚೆಗಳ ಸಂದರ್ಭದಲ್ಲಿ ಮಹತ್ವಪೂರ್ಣ ತಿರುವನ್ನು ಸೂಚಿಸುತ್ತಿದೆ ಎಂದೂ ಹೇಳಲಾಗುತ್ತಿದೆ.

ಈ ಚುನಾವಣಾ ಫಲಿತಾಂಶಗಳನ್ನು ನೇರವಾಗಿ ನೋಡುವುದಾದರೆ, ಮೊದಲು ಎದ್ದು ಕಾಣುವ ಸಂಗತಿ ಎಂದರೆ, ಜನ ಈವರೆಗಿನ ಎಲ್ಲ ರಾಜಕೀಯ ತಾತ್ವಿಕ ಚರ್ಚೆಗಳ ಕ್ಲೀಷೆಗಳಿಂದ ರೋಸಿಹೋದಂತೆ, ನೇರ, ಸರಳ ಮಾತುಗಳಿಗೆ-ಅವು ಪ್ರಾಮಾಣಿಕವೋ ಅಲ್ಲವೋ ಅದನ್ನು ಕಾದು ನೋಡಬಯಸಿದಂತೆ- ಜೈ ಎಂದಿದೆ. ಸಂಕೀರ್ಣ ಮಾತು, ವಾದ, ಚರ್ಚೆಗಳಿಗೆ ಬೆನ್ನು ಹಾಕಲು ನಿರಾಕರಿಸಿದೆ. ಸಂಕೀರ್ಣತೆಯ ಚರ್ಚೆಗಳ ಹಿಂದೆ ಇರುವುದು ಬರೀ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತೀಯತೆ,

ಕುಟುಂಬ ರಾಜಕಾರಣ, ಅಗ್ಗದ ಜನಪ್ರಿಯ ಕಾರ್ಯಕ್ರಮಗಳ ದುಂದುಗಾರಿಕೆ ಇತ್ಯಾದಿಗಳನ್ನು ಮರೆಮಾಚಿಕೊಳ್ಳುವ ತಂತ್ರಗಳು ಮಾತ್ರ ಎಂದು ಅದು ತೀರ್ಮಾನಿಸಿದಂತಿದೆ. ಇಲ್ಲದಿದ್ದರೆ, ಈ ತಂತ್ರಗಳಿಗೆ ಪರ್ಯಾಯ ಹೆಸರಿನಂತಿದ್ದ ಕಾಂಗ್ರೆಸ್ ಮತ್ತು ಅದರೊಡನೆ ಡಿ.ಎಂ.ಕೆ., ಬಿ.ಎಸ್ಪಿ., ಆರ್.ಜೆ.ಡಿ., ಸಮಾಜವಾದಿ ಪಕ್ಷಗಳು ಈ ಪ್ರಮಾಣದಲ್ಲೇಕೆ ಧೂಳೀಪಟವಾಗುತ್ತಿದ್ದವು? ಈ ಗೊಂದಲದಲ್ಲಿ ಇವೆಲ್ಲವುಗಳಿಂದ ದೂರವಿದ್ದ ಜೆಡಿಯು ಕೂಡ ಕೊಚ್ಚಿ ಹೋದದ್ದು ಮಾತ್ರ ಒಂದು ವಿಪರ್ಯಾಸವೇ ಸರಿ.

ಮೋದಿಯವರ 'ಗುಜರಾತ್ ಮಾದರಿ' ಕುರಿತ ತಾತ್ವಿಕ ತಕರಾರುಗಳು ಏನೇ ಇರಲಿ, ಅಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತೀಯತೆಗಳಿಲ್ಲ; ಬದಲಿಗೆ ದಕ್ಷ ಆಡಳಿತದ ಪರಿಣಾಮಗಳು ಎದ್ದು ಕಾಣುತ್ತಿವೆ. ಈ ಮಾದರಿಯ ಬಗ್ಗೆ ಎತ್ತಲಾದ ತಾತ್ವಿಕ ತಕರಾರುಗಳು ನಿಜವಿದ್ದರೂ, ಈ ತಕರಾರುಗಳಿಗೆ ಆಸ್ಪದವಿಲ್ಲದಂತಹ ಆದರ್ಶಮಯ ಅಭಿವೃದ್ಧಿ ಮತ್ತು ಆಡಳಿತ ನೀಡುವ ರಾಜಕೀಯ ಪರ್ಯಾಯವಾದರೂ ವಾಸ್ತವವಾಗಿ ಈಗ ಎಲ್ಲಿದೆ? ಹಾಗಾಗಿ, ಜನ ಸದ್ಯಕ್ಕೆ ಗುಜರಾತ್ ಮಾದರಿಯ ಮೌಲ್ಯಗಳಾದರೂ ರಾಷ್ಟ್ರ ಜೀವನದಲ್ಲಿ ಸಾಕಾರವಾಗಲಿ ಎಂದು ಒಂದು ಜಾಣ ವ್ಯಾವಹಾರಿಕ ತೀರ್ಮಾನಕ್ಕೆ ಬಂದಂತಿದೆ. ಮೋದಿ ವಿರುದ್ಧ ವಾದಿಸಿದವರು, ತಾವು ತಮ್ಮ ಪರವಾದ ಒಂದು ಪರ್ಯಾಯವಿಲ್ಲದೆ ಮಾತಾಡುತ್ತಿದ್ದೇವೆ; ಎಡ ಪಕ್ಷಗಳು ತಮ್ಮ ತಾತ್ವಿಕ ಶ್ರೇಷ್ಠತೆಯ ಅಹಂಕಾರ ಮತ್ತು ಹಠಮಾರಿತನಗಳಿಂದ ಹೊರಬರಲಾಗದೆ ಜನರ ವಿಶ್ವಾಸ ಕಳೆದುಕೊಂಡಿವೆ ಮತ್ತು ಪರ್ಯಾಯದಂತೆ ಕಾಣುತ್ತಿದ್ದ ಆಪ್ ಇನ್ನೂ ದೊಡ್ಡ ಸವಾಲಿಗೆ ಸಿದ್ಧವಾಗಿಲ್ಲ ಎಂಬುದನ್ನು ಮರೆತಿದ್ದರು. ರಾಜ್ಯ ಮಟ್ಟದಲ್ಲಿ ವಿಶ್ವಾಸಾರ್ಹ ಪರ್ಯಾಯವಿದ್ದೆಡೆಯಲ್ಲೆಲ್ಲ–ತಮಿಳ್ನಾಡು, ತೆಲಂಗಾಣ, ಒರಿಸ್ಸಾ ಮತ್ತು ಪ. ಬಂಗಾಳ–ಮೋದಿ ಆಟವೇನೂ ನಡೆದಿಲ್ಲ ಎಂಬುದನ್ನೂ, ನಾವು ಗಮನಿಸಬೇಕು.

ಹೀಗಾಗಿ, ಈ ಚುನಾವಣೆಯನ್ನು ಮೋದಿ ವಿಜಯವೆಂದಷ್ಟೇ ಹೇಳಿದರೆ ರಾಷ್ಟ್ರದ ಮತದಾರರ ವಿವೇಕವನ್ನು ಅವಮಾನಿಸಿದಂತೆಯೇ ಸರಿ. ಬದಲಿಗೆ, ಇದು ಒಂದು ಮಿತಿಯಲ್ಲಿ ವಿಶ್ವಾಸಾರ್ಹ ಪರ್ಯಾಯಗಳಿಗೆ ಜನ ನಡೆಸಿದ ಹುಡುಕಾಟದ ವಿಜಯ ಕೂಡ ಹೌದು. ಈ ಹುಡುಕಾಟದ ಇಂತಹ ಯಶಸ್ಸೇ ಅದು, ಸದರಿ ಮೋದಿ ವಿಜಯದೊಂದಿಗೆ ಮುಗಿಯುವಂತಹುದಲ್ಲ ಎಂಬುದನ್ನೂ ಸೂಚಿಸುತ್ತದೆ. ಹಾಗೇ, ಕಾಂಗ್ರೆಸ್ ಈವರೆಗೆ ನಡೆಸಿಕೊಂಡು ಬರುತ್ತಿದ್ದ ಮತ್ತು ಮೋದಿ ಎದುರಿನಲ್ಲಿ ತನ್ನ ಮಹಾ ಪರಾಭವಕ್ಕೆ ಕಾರಣವಾದ ಪ್ರಾದೇಶಿಕ ಬೇರುಗಳಿಲ್ಲದ ರಾಷ್ಟ್ರೀಯ ರಾಜಕಾರಣಕ್ಕೆ ಇನ್ನು ಭವಿಷ್ಯವಿಲ್ಲ ಎಂದೂ ಸೂಚಿಸುತ್ತಿದೆ. ಹಾಗಾಗಿಯೇ ಸ್ವಘೋಷಿತ ಹಿಂದೂ ರಾಷ್ಟ್ರೀಯವಾದಿ ಮೋದಿ ಈಗ ಸಹಕಾರಿ ಒಕ್ಕೂಟ ತತ್ವದ ಮಂತ್ರ ಜಪಿಸುಂತಾಗಿರುವುದು ಅಲ್ಲವೇ?

ಇಂತಹ ಬಹುನೆಲೆಗಳ ರಾಜಕೀಯ ಪಲ್ಲಟಗಳ ಸಂದರ್ಭದಲ್ಲಿ ನಮ್ಮ ರಾಜಕೀಯ ಚಿಂತಕರು ಮತ್ತು ವಿಶ್ಲೇಷಕರು ಪ್ರಜಾಪ್ರಭುತ್ವ, ಜಾತ್ಯತೀತತೆ, ಅಭಿವೃದ್ಧಿ, ಎಡಪಂಥೀಯತೆ, ಬಲಪಂಥೀಯತೆ ಮುಂತಾದ ಪಾರಿಭಾಷಿಕಗಳನ್ನು ಬಳಸುವಾಗ ಈ ಪಲ್ಲಟಗಳಿಂದಾಗಿ ಅವುಗಳಲ್ಲುಂಟಾಗಿರುವ ಅರ್ಥ ಸಂದಿಗ್ಧತೆ ಮತ್ತು ವ್ಯತ್ಯಾಸಗಳನ್ನೂ ಸೂಕ್ಷ್ಮವಾಗಿ ಗಮನಿಸಿ ಈಗ ತಮ್ಮ ಚರ್ಚೆಗಳನ್ನು ಮುಂದುವರೆಸಬೇಕಾಗಿದೆ. ಆಗ ಮಾತ್ರ ಜನರ ಕಣ್ಣಿನಲ್ಲಿ ಅವು ವಿಶ್ವಾಸಾರ್ಹ ಎನಿಸುತ್ತವೆ ಎಂಬುದನ್ನೂ ಅರ್ಥಮಾಡಿಕೊಳ್ಳಬೇಕು. ಒಂದು ಸ್ಥೂಲ ನಿದರ್ಶನ: ಮೋದಿ ಗುಜರಾತ್‌ನಲ್ಲಿ ಆರೆಸ್ಸೆಸ್, ವಿಶ್ವಹಿಂದೂ ಪರಿಷತ್, ಬಜರಂಗ ದಳ ಇತ್ಯಾದಿ ಹಿಂದುತ್ವದ ಸಂಸ್ಥೆಗಳು ಹೆಚ್ಚು ಬಾಲ ಬಿಚ್ಚದಂತೆ ನೋಡಿಕೊಂಡಿದ್ದಾರೆ ಮತ್ತು ಗುಜರಾತ್ ಬಿಜೆಪಿ ಈಗ ಮಾಜಿ ಕಾಂಗ್ರೆಸ್ಸಿಗರಿಂದ ತುಂಬಿ ತುಳುಕುತ್ತಿದೆ; ಹಾಗೇ ಈ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಯಿಂದ ೬೭ ಜನ ಮಾಜಿ ಕಾಂಗ್ರೆಸ್ಸಿಗರಿಗೆ ಟಿಕೆಟ್ ನೀಡಲಾಗಿತ್ತು. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ರಾಮ ವಿಲಾಸ್ ಪಾಸ್ವಾನ್, ರಾಮದಾಸ್ ಅಥವಳೆ, ಉದಿತ್ ರಾಜ್ ಮುಂತಾದ ದಲಿತ ನಾಯಕರು ಮತ್ತು ಎಂ.ಜೆ. ಅಕ್ಬರ್‌ರಂತಹ 'ಜಾತ್ಯತೀತ' ಮುಸ್ಲಿಂ ಚಿಂತಕರು ಬಿಜೆಪಿ ಪರಿವಾರಕ್ಕೆ ಸೇರಿದ್ದಾರೆ. ಇದೆಲ್ಲವೂ ಸುಲಭ ಅವಕಾಶವಾದಿ ರಾಜಕಾರಣ ಎಂಬ ವರ್ಣನೆಗೂ ಮೀರಿದ ಯಾವುದೋ ವಿಶಿಷ್ಟ ಬೆಳವಣಿಗೆಯನ್ನು ಸೂಚಿಸುತ್ತದೆಯಲ್ಲವೇ? ನಮ್ಮ ಪರಿಭಾಷೆಯ ವಾಕ್ಯರಚನಾ ವಿಧಾನವನ್ನಾದರೂ ಈಗ ನಾವು ಬದಲಿಸಿಕೊಳ್ಳಬೇಕಲ್ಲವೇ?

ನಿಜ, ಮೋದಿಯ ಹಿಂದೆ ಹಲವಾರು ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡಿವೆ. ಬಹುಶಃ ಈವರೆಗೆ ಇಂತಹ ಅತ್ಯಂತ ದುಬಾರಿ ಮತ್ತು ಆಧುನಿಕ ತಂತ್ರಜ್ಞಾನ ಮತ್ತು ನಿರ್ವಹಣಾ ತಂತ್ರಗಳನ್ನು ಹೊರಗುತ್ತಿಗೆ ರೂಪದಲ್ಲಿ ಬಳಸಿ ಯಾವ ಪಕ್ಷವೂ ಚುನಾವಣೆ ನಡೆಸಿರಲಿಲ್ಲ. ಮೋದಿಯ ಉಡುಪು, ಅದರ ಬಣ್ಣ, ವಿನ್ಯಾಸ, ಯಾವ ಜಾಗಕ್ಕೆ ಯಾವ ವಿನ್ಯಾಸದ ಉಡುಪು, ಯಾವ ವಿಷಯದ ಪ್ರಸ್ತಾಪ, ಯಾವ ಘೋಷಣೆಯ ಚಲಾವಣೆ, ಚುನಾವಣಾ ಚಿಹ್ನೆ ಮತ್ತು ಪ್ರಚಾರ ಭಿತ್ತಿ ಪತ್ರಗಳ ಗಾತ್ರ, ಬಣ್ಣ, ಇತ್ಯಾದಿಗಳನ್ನು ಕೂಡಾ ಜನಸಂಪರ್ಕ ಮತ್ತು ಸಂವಹನ ಶಾಸ್ತ್ರಗಳ ಪಂಡಿತರ ಮೂಲಕ ನಿರ್ಧರಿಸುತ್ತಾ ಬಹು ಮಾಧ್ಯಮಗಳ ಮೂಲಕ ನಡೆಸಿದ ಅತ್ಯಂತ ವ್ಯವಸ್ಥಿತವಾದ ಈ ಪ್ರಚಾರ ಕಾರ್ಯಕ್ರಮಕ್ಕೆ ಐದು ಸಾವಿರ ಕೋಟಿ ರೂ. ಖರ್ಚಾಗಿದೆಯೆಂದು ಹೇಳಲಾಗುತ್ತಿದೆ. ಇಷ್ಟು ಹಣ ಎಲ್ಲಿಂದ ಬಂತು? ಮೋದಿಯವರ ಮುಂದಿನ ಆಡಳಿತ ಶೈಲಿಯೇ ಇದನ್ನು ಹೇಳಬಲ್ಲುದು;ಹಾಗೇ ಅದೇ ಅವರ ಆಡಳಿತದ ಅಂತ್ಯವನ್ನೂ ಹಾಡಬಹುದು, ಯಾರಿಗೆ ಗೊತ್ತು?

ಹೀಗಾಗಿ ಈ ಚುನಾವಣೆಗಳಿಂದ ಕಲಿಯಬೇಕಾದ ಹಲವು ಪಾಠಗಳಿವೆ, ನಾವು, ನೀವು, ಅವರು, ಇವರು, ಎಲ್ಲರೂ!–ಸಂ.

ಶ್ರದ್ಧಾಂಜಲಿ

ಅಗಲಿದ ಜೋಗಿ ಕೆ.ಎಂ. ಶಂಕರಪ್ಪನವರನ್ನು ನೆನೆಯುತ್ತಾ...

ಜೂನ್ ಐದರಂದು ಬೆಂಗಳೂರಿನಲ್ಲಿ ಸಂಭವಿಸಿದ ಕೆ.ಎಂ. ಶಂಕರಪ್ಪನವರ ಸಾವು ನಾನೂ ಸೇರಿದಂತೆ ಅವರ ಆಪ್ತ ಶಿಷ್ಯ ಬಳಗದ ಪಾಲಿಗೆ ನಮ್ಮೆಲ್ಲರ ಬದುಕಿನ ಒಂದು ಮುಖ್ಯ ಮತ್ತು ಸ್ಪಂದನಶೀಲ ಅಧ್ಯಾಯ ಮುಗಿಸಿದೆ ಎಂದೇ ಹೇಳಬೇಕು. ಅವರು ನಮ್ಮೆಲ್ಲರ ಪ್ರಜ್ಞೆಯ ಒಂದು ಅವಿಭಾಜ್ಯ ಅಂಗವೇ ಆಗಿ ಹೋಗಿದ್ದರು. ಹಾಗಾಗಿ ಅವರ ಸಾವು ನಮ್ಮ ಜೀವದ ಒಂದಂಶವನ್ನೇ ಕಳೆದುಬಿಟ್ಟಿದೆ. ಕರ್ನಾಟಕದ ಬಹು ದೊಡ್ಡ ಸೃಜನಶೀಲ ಮನಸ್ಸುಗಳಲ್ಲಿ ಒಂದಾಗಿದ್ದ ಶಂಕರಪ್ಪ ಕನ್ನಡದ ಹಲವು ಬಹು ಮುಖ್ಯ ಚಿಂತಕ-ಲೇಖಕರನ್ನು ರೂಪಿಸಿದವರು ಎಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಏಕೆಂದರೆ ಅವರು ಎಂದೂ ಪ್ರಸಿದ್ಧಿಗೆ, ಮಾನ್ಯತೆಗಳಿಗೆ, ಪುರಸ್ಕಾರಗಳಿಗೆ ಹಾತೊರೆದವರಲ್ಲ. ಎಲೆ ಮರೆಯ ಕಾಯಿಯಂತೆಯೇ ಇದ್ದು ಕರ್ನಾಟಕದಲ್ಲಿನ ಬಹು ಮುಖ್ಯ ಸಾಹಿತ್ಯಿಕ-ಸಾಂಸ್ಕೃತಿಕ ಸಂಚಲನೆಗಳಿಗೆ ಇಂಬು ನೀಡಿದವರು ಅವರು.

ಅರವತ್ತರ ದಶಕದ ಹೊತ್ತಿಗೇ, ಪುಣೆಯ ಚಲಚಿತ್ರ ತರಬೇತಿ ಸಂಸ್ಥೆಯಿಂದ ಖ್ಯಾತ ನಿರ್ದೇಶಕ ಋತ್ವಿಕ್ ಘಟಕ್ ಅವರ ಶಿಷ್ಯರಾಗಿ ಪದವಿ ಪಡೆದ ಮೊದಲ ಕನ್ನಡಿಗರ ಪೈಕಿ ಒಬ್ಬರಾದ ಶಂಕರಪ್ಪ, ಮೂಲತಃ ಮಧುಗಿರಿಯ ಬಯಲು ಸೀಮೆಯ ಕಾರಮರಡಿ ಎಂಬ ಕುಗ್ರಾಮದ ಸಾಧಾರಣ ರೈತ ಕುಟುಂಬಕ್ಕೆ ಸೇರಿದವರು. ಪುಣೆಯ ಆ ಸಂಸ್ಥೆಯ ವಿದ್ಯಾರ್ಥಿಯಾಗಿ ಕನ್ನಡದ ಖ್ಯಾತ ಕಥೆಗಾರ ದಿ. ಕೆ. ಸದಾಶಿವ ಅವರ 'ನಲ್ಲಿಯಲ್ಲಿ ನೀರು ಬಂತು' ಕಥೆಯನ್ನಾಧರಿಸಿ ನಿರ್ಮಿಸಿದ ಕಿರುಚಿತ್ರ 'Water in the tap' ತನ್ನ ಹೊಸತನದಿಂದಾಗಿ ಆ ಕಾಲಕ್ಕೆ ರಾಷ್ಟ್ರಾದಂತ ಹೆಸರು ಮಾಡಿತ್ತು. ನಂತರ ಅವರು ನಿರ್ದೇಶಿಸಿದ ಏಕೈಕ ಕನ್ನಡ ಕಥಾಚಿತ್ರ ಬಸವರಾಜ ಕಟ್ಟೀಮನಿ ಅವರ ಕಾದಂಬರಿ ಆಧಾರಿತ 'ಮಾಡಿ ಮಾಡಿದವರು' ಬಹುಶಃ ಭಾರತದ ಮೊಟ್ಟ ಮೊದಲ ಅರೆ ಸಾಕ್ಷ್ಯ ಕಥಾಚಿತ್ರ(Quasi documentary). ಅದು ತನ್ನ ಕಾಲಕ್ಕಿಂತ ಮೊದಲೇ ಬಂದ ಕಾರಣಕ್ಕೋ ಏನೋ (ಜಗದ್ವಿಖ್ಯಾತ ಚಲಚಿತ್ರ ವಿಮರ್ಶಕಿ ಮೇರಿ ಸೇಟನ್ ಈ ಚಿತ್ರ ನೋಡಿ 'ಇದೊಂದು ಜಾಗತಿಕ ಚಿತ್ರ' ಎಂದಿದ್ದರಂತೆ.) ರಾಜ್ಯಮಟ್ಟದಲ್ಲಿ ಪ್ರಶಸ್ತಿ ಪಡೆಯಿತಾದರೂ ಜನ ಮನ್ನಣೆ ಗಳಿಸಲಿಲ್ಲ. ಈ ಹಿನ್ನೆಲೆಯಿಂದಾಗಿ, ಆನಂತರ ಕಥಾಚಿತ್ರ ನಿರ್ಮಿಸುವ ಅವರ ಹಲವು ಪ್ರಯತ್ನಗಳು-ಕೆಲವು ಅವರ ತೀವ್ರ ಅನ್ಯ ಮನಸ್ಕತೆಯಿಂದಾಗಿಯೇ-ಕೈಗೂಡಲಿಲ್ಲವಾದರೂ, ಕರ್ನಾಟಕ ಸರ್ಕಾರದ ವಾರ್ತಾ ವಿಭಾಗಕ್ಕಾಗಿ ಅವರು ನಿರ್ಮಿಸಿದ ಹಲವು ಸಾಕ್ಷ್ಯಚಿತ್ರಗಳು ಈಗಲೂ (ಅವನ್ನು ಸಂರಕ್ಷಿಸಿಡಲಾಗಿದ್ದಲ್ಲಿ)-ವಿಶೇಷವಾಗಿ ಖೆಡ್ಡಾ, ಜೇನು ಕುರುಬರು, ರೇಷ್ಮೆ ಕೃಷಿ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಕುರಿತವು- ಅವರ ವಿಶಿಷ್ಟ ಕಣ್ಣೋಟಕ್ಕೆ ಸಾಕ್ಷಿಯಂತಿವೆ.

ಚಿತ್ರರಂಗವೆಂಬ ವ್ಯಾಪಾರಿ ಚಕ್ರವ್ಯೂಹವನ್ನು ಭೇಧಿಸಲಾರದೇ ಹೋದ ಶಂಕರಪ್ಪ ಓರ್ವ ವಿಶಿಷ್ಟ ಸಂಸ್ಕೃತಿ ಚಿಂತಕರಾಗಿ ಕನ್ನಡ ಮನಸ್ಸನ್ನು ಕಟ್ಟುವಲ್ಲಿ ತೊಡಗಿಸಿಕೊಂಡ ರೀತಿ ಅನನ್ಯವಾದದ್ದು. ಬೌದ್ಧ ಧರ್ಮದ ಮಹಾಯಾನ ಮತ್ತು ವಜ್ರಯಾನಗಳನ್ನು ಆಳವಾಗಿ ಅಧ್ಯಯನ ಮಾಡಿ, ಒಂದು ಮಟ್ಟದಲ್ಲಿ ಅವುಗಳ ಉಪಾಸಕರೂ ಆಗಿ ಸಾಧನೆ ಮಾಡಿದ್ದ ಅವರು ತಮ್ಮ ಸಂಪರ್ಕಕ್ಕೆ ಬಂದ ಹಲವು ಲೇಖಕ-ಲೇಖಕಿಯರಿಗೆ ಬೌದ್ಧ ಧರ್ಮದ 'ಸಾಹಿತ್ಯಿಕ' ದೀಕ್ಷೆ ನೀಡಿದರು. ಕನ್ನಡ ಸಾಹಿತ್ಯ ಪರಂಪರೆಯಲ್ಲಿನ ಬೌದ್ಧ ಅರುಹು-ಕುರುಹುಗಳನ್ನು ಹೆಕ್ಕಿ ತೋರಿಸುತ್ತಾ ಈ ಲೇಖಕ-ಲೇಖಕಿಯರ ಚಿಂತನಾ ಕ್ರಮವನ್ನು ನಿರ್ಣಾಯಕವಾಗಿ ಬದಲಾಯಿಸಿದರು.

೧೯೭೦ರ ದಶಕದಲ್ಲಿ ಆಧುನಿಕ ಕನ್ನಡ ಸಾಹಿತ್ಯದ ನೋಟಕ್ರಮದಲ್ಲಿನ ನಿರ್ಣಾಯಕ ತಿರುವಿಗೆ ಕಾರಣವಾದ ಅಖಿಲ ಕರ್ನಾಟಕ ಕಲಾವಿದರ ಮತ್ತು ಬರಹಗಾರರ ಒಕ್ಕೂಟದ ಸಮ್ಮೇಳನದ ನಿಯೋಜನೆಗೆ ಪೂರ್ಣಚಂದ್ರ ತೇಜಸ್ವಿ, ಎಂ..ಡಿ. ನಂಜುಂಡಸ್ವಾಮಿ, ಲಂಕೇಶ್, ಚಂಪಾ, ಶ್ರೀಕೃಷ್ಣ ಆಲನಹಳ್ಳಿ, ಕಲ್ಲೆ ಶಿವೋತ್ತಮ ರಾವ್, ವಿಶುಕುಮಾರ್ ಮುಂತಾದವರೊಂದಿಗೆ ಶ್ರಮಿಸಿದ ಪ್ರಮುಖರಲ್ಲಿ ಒಬ್ಬರಾದ ಶಂಕರಪ್ಪ, ಅದರ ತಾತ್ವಿಕತೆಯನ್ನು ರೂಪಿಸಿದವರಲ್ಲೂ ಪ್ರಮುಖರು. ಈ ಒಕ್ಕೂಟ ನಿಷ್ಕ್ರಿಯವಾದ ನಂತರ, ಯಾವುದೇ ಸಾಂಸ್ಥಿಕ ಪ್ರಯತ್ನಗಳಲ್ಲಿ ನಂಬಿಕೆ ಇರಿಸಲೊಲ್ಲದ ಅವರು, ತಮ್ಮದೇ ಅನೌಪಚಾರಿಕ ರೀತಿಗಳಲ್ಲಿ ಆ ತಾತ್ವಿಕತೆಯನ್ನು ವಿಷದೀಕರಿಸುತ್ತಾ, ವಿಸ್ತರಿಸುತ್ತಾ, ಅದನ್ನು ತಮ್ಮ ಕಿರಿಯ ಒಡನಾಡಿಗಳಲ್ಲಿ ಬಿತ್ತಿ ಬೆಳೆಸುವಲ್ಲಿ ತೊಡಗಿಕೊಂಡರು.

ಭಾರತದ ಧಾರ್ಮಿಕ-ಸಾಂಸ್ಕೃತಿಕ ಚರಿತ್ರೆಯನ್ನು ಅವೈದಿಕ ಪರಂಪರೆಯ ನೆಲೆಯಲ್ಲಿ ಮುರಿದು ಕಟ್ಟುವ ಅಗತ್ಯವನ್ನು ಗುರುತಿಸಿದ್ದ ಮೊದಲಿಗರಲ್ಲಿ ಒಬ್ಬರಾಗಿದ್ದ ಶಂಕರಪ್ಪ ಅದನ್ನು ಇತ್ತೀಚಿನ ವರ್ಷಗಳಲ್ಲಿ ತಮ್ಮ ಆಧುನಿಕ ಅವಧೂತ ಜೀವನ ಕ್ರಮದ ಹಲವು ರೂಪಗಳ ಮೂಲಕ ಕಾರ್ಯಗತಗೊಳಿಸುವಲ್ಲಿ ನಿರತರಾಗಿದ್ದರು. ಅವರೊಂದಿಗೆ ಆಪ್ತವಾಗಿ ಒಡನಾಡಿದವರನ್ನು ಅವರು ಕಲೆ, ಧರ್ಮ, ಸಂಸ್ಕೃತಿಗಳಷ್ಟೇ ಅಲ್ಲ, ವಿವಿಧ ಲೌಕಿಕ ಜ್ಞಾನ ಕ್ಷೇತ್ರಗಳಲ್ಲಿನ ತಮ್ಮ ಸೀಮೋಲ್ಲಂಘನೆಗಳ ಮೂಲಕ ಬೆಚ್ಚಿಬೀಳಿಸುತ್ತಿದ್ದ ರೀತಿ ನಿಜವಾಗಿಯೂ ಅಮೋಘವಾದದ್ದಾಗಿತ್ತು. ಅವರು ನಮ್ಮಗಳ ಮನೆಗೆ ಬಂದರೆಂದರೆ ಮನೆ ಮಂದಿಯಲ್ಲೆಲ್ಲ ಹುಟ್ಟಿಸುತ್ತಿದ್ದ ಸಂಭ್ರಮವನ್ನು ನೆನೆದರೆ ಈಗ ನಮ್ಮ ಕಣ್ಣುಗಳು ಹನಿಗೂಡುತ್ತವೆ. ಅವರು ನನ್ನನ್ನೂ, ನನ್ನ ಪತ್ನಿಯನ್ನೂ (ಕೆ.ಜಿ. ಸಿದ್ದಯ್ಯನೊಂದಿಗೆ) ತುಮಕೂರು ಬಳಿಯ ಸಿದ್ಧರ ಬೆಟ್ಟ ಹತ್ತಿಸಿದ ಅನುಭವ ಅಂದು ನನ್ನ ಇಡೀ ಒಳಗನ್ನೇ ಅಲ್ಲಾಡಿಸಿಬಿಟ್ಟಿತೆಂದು ಹೇಳಿದರೆ ಏನೂ ಹೇಳಿದಂತಾಗಲಾರದೇನೋ! ಶಂಕರಪ್ಪನವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹಾರೈಸುವಂತಿಲ್ಲ. ಏಕೆಂದರೆ ಅವರು ಅಪ್ಪಟ ಅನಾತ್ಮವಾದಿ!

ಆಗಸ್ಟ್, ೨೦೧೪

ಪತ್ರಿಕೆ ಹೇಳುವ ಸಮಾಜವಾದ ಕುರಿತಂತೆ...

ಪ್ರಿಯ ಓದುಗರೇ,

ಮೂರು ವರ್ಷಗಳ ಹಿಂದೆ ಪತ್ರಿಕೆಯನ್ನು ಆರಂಭಿಸಿದಾಗ, ಪತ್ರಿಕೆ ಒಂದು ವರ್ಷವನ್ನಾದರೂ ಯಶಸ್ವಿಯಾಗಿ ದಾಟುವ ನಂಬಿಕೆ ನನಗೇ ಇರಲಿಲ್ಲ ಎಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಅದಕ್ಕೆ ಕಾರಣ, ನನ್ನಲ್ಲಿನ ಆತ್ಮ ವಿಶ್ವಾಸದ ಕೊರತೆಯಾಗಿರಲಿಲ್ಲ. ಅದು ಓದುಗ ಗೆಳೆಯರ ಹಣಕಾಸಿನ ಬೆಂಬಲದ ಬಗೆಗಿನ ಅಪನಂಬಿಕೆಯೂ ಅಲ್ಲ. ನನ್ನ ಅಪನಂಬಿಕೆ, ಪತ್ರಿಕೆಯನ್ನು ಸಮಾಜವಾದಿ ಮಾಸಿಕ ಎಂದು ಕರೆದು ಅದನ್ನು ಸಮಾಜವಾದಕ್ಕೆ ಬದ್ಧವನ್ನಾಗಿ ಮಾಡಿದ್ದಕ್ಕೆ ಸಂಬಂಧಿಸಿದ್ದು. ಏಕೆಂದರೆ ಇದು ಸಮಾಜವಾದದ ಕಾಲವಲ್ಲ; ಸಮಾಜವಾದದ ಆಕರ್ಷಣೆ ಇಳಿಮುಖವಾಗುತ್ತಿರುವ ಕಾಲ ಎಂಬ ಸಾರ್ವತ್ರಿಕ ನಂಬಿಕೆ. ಆದರೆ ಪತ್ರಿಕೆ ಮೂರು ವರ್ಷಗಳ ನಂತರವೂ ಉಳಿದಿದೆ. ಅಷ್ಟೇ ಅಲ್ಲ, ತನ್ನ ಪ್ರಭಾವ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಗಟ್ಟಿ ನೆಲದ ಮೇಲೆ ನಿಲ್ಲುವಂತಾಗಿದೆ. ಇದು ಸೋಜಿಗದ ಸಂಗತಿ ಮಾತ್ರವಲ್ಲದೆ, ತನ್ನದೇ ರೀತಿಯಲ್ಲಿ ಸಮಾಜವಾದದ ಅರ್ಥಪೂರ್ಣತೆ ಮತ್ತು ಪ್ರಸ್ತುತತೆಯ ಪುನರುಚ್ಚಾರವೇ ಆಗಿದೆ ಎಂದು ನಾನು ಭಾವಿಸಿದ್ದೇನೆ.

ಹಾಗೆಂದ ಮಾತ್ರಕ್ಕೆ ನಾವು ಸಾಂಪ್ರದಾಯಿಕವಾಗಿ ಸಮಾಜವೆಂದರೇನು ಎಂದು ನಂಬಿರುವೆವೋ ಅದು ಆ ರೂಪದಲ್ಲೇ, ಆ ಶೈಲಿಯಲ್ಲೇ ಇನ್ನೂ ಜೀವಂತವಿದೆ ಅಥವಾ ಅದು ತನ್ನ ಪ್ರಸ್ತುತತೆ ಕಳೆದುಕೊಂಡಿಲ್ಲ ಎಂದಲ್ಲ. ಬದಲಿಗೆ ಸಮಾಜವಾದ ತನ್ನ ಮೂಲ ಗುರಿಯಾದ ಶೋಷಣಾರಹಿತವಾದ, ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ತಾನು ಈವರೆಗೆ ಸವೆಸಿ ಬಂದ ದಾರಿಯನ್ನು ಹಿಂದೊಮ್ಮೆ ತಿರುಗಿ ನೋಡಿ ಪುನರ್ವಿಮರ್ಶಿಸಿಕೊಳ್ಳುವ ಅನಿವಾರ್ಯತೆಯನ್ನು ಕಂಡುಕೊಂಡಿದೆ. ಇದಕ್ಕಾಗಿ

ಅದು ಶೋಷಣೆ ಮತ್ತು ಸಮಾನತೆಗಳ ಅರ್ಥವನ್ನೂ ತನ್ನ ಅನುಭವಗಳ ಹಿನ್ನೆಲೆಯಲ್ಲಿ ಪುನರ್‌ಶೋಧಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಈ ತಿಳುವಳಿಕೆಯೊಂದಿಗೆ ನಮ್ಮ ಪತ್ರಿಕೆ ತನ್ನ ಹೆಜ್ಜೆಗಳನ್ನು ಹಾಕುತ್ತಿದ್ದು, ನಮ್ಮ ಪತ್ರಿಕೆಯನ್ನು ಇತರ ಎಡಪಂಥೀಯ ಪತ್ರಿಕೆಗಳೊಂದಿಗೆ ಹೋಲಿಸಿ ನೋಡಿದಾಗ ನನ್ನ ಈ ಮಾತುಗಳು ಇನ್ನಷ್ಟು ಸ್ಪಷ್ಟವಾಗಬಹುದು.

ಸಮಾಜವಾದಿ ರಾಜಕಾರಣದ ಅಧ್ಯಾಯದ ಒಂದು ವಿಷಾದದ ಸಂಗತಿ ಎಂದರೆ, ಸಮಾಜವಾದ ವಿಫಲವಾಗಿದೆ ಎನ್ನುತ್ತಿರುವವರಲ್ಲಿ ಸಮಾಜವಾದದ ಲಾಭ ಪಡೆದಿರುವ ಸಮುದಾಯವೂ ಈಗ ಸೇರಿಕೊಂಡಿದೆ ಎಂಬುದು. ಮನಮೋಹನ ಸಿಂಗ್‌ರ ಹೊಸ ಆರ್ಥಿಕತೆಯಿಂದ ಲಾಭ ಮಾಡಿಕೊಂಡವರೇ, ಮತ್ತಷ್ಟು ಲಾಭದಾಸೆಯಲ್ಲಿ ಅವರ ವಿರುದ್ಧ ತಿರುಗಿಬಿದ್ದ ಹಾಗೆ. ಅದೇನೇ ಇರಲಿ, ಸಮಾಜವಾದದ ವೈಫಲ್ಯದ ಬಗ್ಗೆ ಮಾತಾಡುತ್ತಿರುವವರು ಅದು ಸೋಲುತ್ತಿರುವಾಗಲೇ ಅದು ಮಾಡಿದ ಸಾಧನೆಗಳನ್ನು ಗಮನಿಸದೆ ಈ ಮಾತುಗಳನ್ನಾಡುತ್ತಿದ್ದಾರೆ ಎಂದಷ್ಟೇ ನಾನು ಹೇಳುತ್ತಿರುವುದು. ನನ್ನ ಈ ಮಾತಿನಲ್ಲಿ ಯಾರಿಗಾದರೂ ವಿರೋಧಾಭಾಸ ಕಂಡರೆ ಅದಕ್ಕೆ ನಾವು ಸಮಾಜವಾದವನ್ನು ಅರ್ಥೈಸಿಕೊಂಡ ಬಗೆಯೇ ಕಾರಣವಾಗಿದೆ ಎಂದೆನಿಸುತ್ತದೆ. ಹಲವು ಬಗೆಗಳ ಸಮಾಜವಾದಗಳ ಕಾಲವಾಗಿದ್ದ ಕಳೆದ ಶತಮಾನದಲ್ಲಿ ಎಲ್ಲರೂ ಅವುಗಳ ಒಂದೊಂದು ಕಲಸುಮೇಲೋಗರದ ಸಮರ್ಥಕರಾಗಿ ಒಂದಿಷ್ಟು ಸಾಧನೆಗೆ ಕಾರಣವಾದದ್ದರ ಜೊತೆಗೇ, ಅದರ ಬಗೆಗೆ ಸಾಕಷ್ಟು ಗೊಂದಲ ಮತ್ತು ಅಪನಂಬಿಕೆಗಳಿಗೂ ಕಾರಣರಾದರು. ಇದಕ್ಕೆ ಮುಖ್ಯ ಕಾರಣ, ಸಮಾಜವಾದದ ಆಧಾರ ಪರಿಕಲ್ಪನೆಗಳಾದ ಶೋಷಣೆ ಮತ್ತು ಸಮಾನತೆಗಳನ್ನು ಅವುಗಳ ಚಲನಶೀಲ ಅರ್ಥಗಳಲ್ಲಿ ಅರಿಯದೆ ಜಡ ರಾಜಕಾರಣ ಮಾಡಿದ್ದು. ಉದಾಹರಣೆಗೆ ಸಮಾನತೆ ಎಂದರೆ ನಿಜವಾಗಿ ಏನು? ಸಮಾನತೆ ಎಂದರೆ ಯಾರೊಂದಿಗೆ? ಮತ್ತು ಅದರ ತರ್ಕ ನಮ್ಮನ್ನು ಒಂದು ಸಮಾಜವಾಗಿ ಎಲ್ಲಿಗೆ ಕೊಂಡೊಯ್ಯುತ್ತದೆ? ಶೋಷಣೆ ಎಂಬುದರ ಬೇರುಗಳನ್ನು ಕೇವಲ ಚಾರಿತ್ರಿಕವಾಗಿ ನೋಡಿದರೆ ಸಾಕೆ? ಅವುಗಳ ಬಿಳಲುಗಳು ವರ್ತಮಾನದಲ್ಲಿ ಜೋತಾಡುತ್ತಿಲ್ಲವೇ? ಈ ಪ್ರಶ್ನೆಗಳನ್ನು ವಾಸ್ತವ ರಾಜಕಾರಣದೊಳಕ್ಕೆ ಬಿಟ್ಟುಕೊಳ್ಳದಂತಹ ಕುರುಡು ರಾಜಕಾರಣ ಸಮಾಜವಾದದ ಹೆಸರಲ್ಲಿ ನಡೆಯಿತಲ್ಲವೇ? ಪತ್ರಿಕೆ ಆಳದಲ್ಲಿ ಈ ಪ್ರಶ್ನೆಗಳನ್ನು ಕೇಳಿಕೊಂಡು ಮುನ್ನಡೆದಿದೆ. ಹಾಗಾಗಿಯೇ ಅದು ಈ ಕಾಲದಲ್ಲೂ ಸಮಾಜವಾದಿ ಎನಿಸಿಕೊಂಡೂ ಉಳಿದಿದೆ ಮತ್ತು ಮುನ್ನಡೆದಿದೆ.

ಪತ್ರಿಕೆಯ ಈ ಉಳಿವು ಮತ್ತು ಆತ್ಮವಿಶ್ವಾಸದ ಹಿಂದೆ ಹಲವು ರೀತಿಯ ಬೆಂಬಲದ ಕೈಗಳು ಕೆಲಸ ಮಾಡಿವೆ. ಕೆಲವನ್ನಷ್ಟೇ ಹೆಸರಿಸಬಹುದಾದರೆ, ಚಾಮರಾಜನಗರದ ಅಪೂರ್ವ ಡಿ'ಸಿಲ್ವ, ಹಾಸನದ ಬಿ.ಶಿವಕುಮಾರ್, ತುಮಕೂರಿನ ಕೆ.ಪಿ.ನಟರಾಜ್, ದಾವಣಗೆರೆಯ ಡಿ.ಜಿ.ಪುಟ್ಟರಾಜು, ಧಾರವಾಡದ ಜಿ.ವಿ.ಸುರೇಂದ್ರ, ರಾಮದುರ್ಗದ

ಹಸನ್ ನಯೀಂ ಸುರಕೋಡ ಹಾಗೂ ಗೋಕಾಕದ ಅಜ್ಜಪ್ಪ ಬಿರಡಿಯವರನ್ನು ಇಲ್ಲಿ ಹೆಸರಿಸಲೇಬೇಕು. ಹಾಗೇ ನಮ್ಮ ಈ ಸಣ್ಣ ಸಾಹಸದ ಪ್ರಯಾಣದಲ್ಲಿ ಸಾಥ್ ನೀಡುತ್ತಿರುವ ಹಲವು ಲೇಖಕ-ಲೇಖಕಿ ಮತ್ತು ಅನುವಾದಕ-ಅನುವಾದಕಿಯರ ಬೆಂಬಲವನ್ನು; ಜೊತೆಗೆ ಪತ್ರಿಕೆ ತನ್ನ ಕಟ್ಟುನಿಟ್ಟಾದ ಗಡುವಿನಲ್ಲಿ ಮುದ್ರಣವಾಗಿ ಓದುಗರ ಕೈಸೇರುವಂತೆ ನನ್ನೊಂದಿಗೆ ಕೈಜೋಡಿಸುತ್ತಿರುವ ಇಳಾ ಮುದ್ರಣದ ಗುರು ಮತ್ತು ತಮ್ಮ ಸಾಮಾಜಿಕ ಬದ್ಧತೆ ಎಂಬಂತೆ ಇದಕ್ಕೆ ಅನುವು ಮಾಡಿಕೊಟ್ಟಿರುವ ಅವರ ತಾಯಿ ವಿಜಯಮ್ಮನವರನ್ನು ಇಲ್ಲಿ ನೆನೆಯಬೇಕು.

ಈ ಒಂದು ವರ್ಷದಲ್ಲಿ ಪತ್ರಿಕೆಗೆ ಓದುಗ ಗೆಳೆಯರಿಂದ ಹಲವು ಸಲಹೆಗಳು ಬಂದಿವೆ. ಈ ಸಂಚಿಕೆಯಲ್ಲೂ ಅವು ದಾಖಲಾಗಿವೆ. ಅವರ ಪ್ರೀತಿ-ವಿಶ್ವಾಸಗಳಿಗೆ ಪತ್ರಿಕೆ ಋಣಿಯಾಗಿದೆ. ಉದಾಹರಣೆಗೆ ಚಂದಾ ಹೆಚ್ಚಿಸಿ ಪುಟ ಜಾಸ್ತಿ ಮಾಡಿ ಎಂಬುದು ಈ ಸಲಹೆಗಳಲ್ಲಿ ಒಂದಾಗಿದೆ, ಸಂಪಾದಕರಾದ ನೀವು ಹೆಚ್ಚು ಬರೆಯದೆ, ಇತರರಿಂದ ಬರೆಯಿಸಿ ಎಂಬುದು ಇನ್ನೊಂದು. ಈ ಸಂಬಂಧವಾಗಿ ನಾನು ಮೊದಲಿಗೇ ಹೇಳಿಬಿಡಬೇಕಾದ ಮಾತೆಂದರೆ, ನನಗೆ ಮುದ್ರಣ ದಿನಾಂಕದ ಗಡುವು ಬರುತ್ತಿದ್ದಂತೆ ನನ್ನ ಆರೋಗ್ಯ ಏರುಪೇರಾಗತೊಡಗುತ್ತದೆ. ಈಗಿರುವ ೨೦ ಪುಟಗಳನ್ನು (ಎರಡು ಪುಟಗಳ ಜಾಹೀರಾತು ಸೇರಿ) ತುಂಬಿಸುವುದೇ ಹೆಚ್ಚೂ ಕಡಿಮೆ ಪ್ರತಿ ತಿಂಗಳೂ ಒಂದು ಹರಸಾಹಸವಾಗುತ್ತಿದೆ. ಈ ಪತ್ರಿಕೆ ವಾಣಿಜ್ಯೋದ್ದೇಶದ ಒಂದು ಸಾರ್ವತ್ರಿಕ ಪತ್ರಿಕೆಯಲ್ಲ. ಈ ಪತ್ರಿಕೆ ಒಂದು ಚೌಕಟ್ಟಿನಲ್ಲಿ, ಒಂದು ಉದ್ದೇಶದೊಂದಿಗೆ ಮತ್ತು ಆ ಉದ್ದೇಶದ ಬಗ್ಗೆ ಸಿನಿಕತೆಯೇ ಹೆಚ್ಚಾಗಿರುವ ದಿನಗಳಲ್ಲಿ ನಡೆಯಬೇಕಾಗಿದೆ. ಜೊತೆಗೆ ಇದಕ್ಕೊಂದು ಕಾರ್ಯಾಲಯವಾಗಲೀ, ಯಾವುದೇ ಸಿಬ್ಬಂದಿಯಾಗಲೀ ಇಲ್ಲ. ಎಲ್ಲ ನಾನೇ; ಸಂಚಿಕೆಯ ಆಯೋಜನೆ, ಲೇಖನ ಸಂಗ್ರಹ, ಪುಟ ವಿನ್ಯಾಸ, ಚಂದಾ ಆಂದೋಲನ ಮತ್ತು ನವೀಕರಣ, ಕೊನೆಯಲ್ಲಿ ಸಂಚಿಕೆಗಳನ್ನು ಅಂಚೆಗೆ ಸಿದ್ಧಪಡಿಸಿ ಅವನ್ನು ಅಂಚೆ ಕಛೇರಿಗೆ ಒಯ್ಯುವವರೆಗೆ! ಇದರಲ್ಲಿ ನನ್ನ ಪತ್ನಿ ಮತ್ತು ಕೆಲ ಸ್ಥಳೀಯ ಆಪ್ತರು ಸ್ವಲ್ಪ ಮಟ್ಟಿಗೆ ನೆರವಾಗುವುದರ ಹೊರತಾಗಿ. ಇದು ಬಹುಶಃ ಹೀಗೇ ನಡೆಯಬೇಕು ಮತ್ತು ಇದಕ್ಕೊಂದು ಔಪಚಾರಿಕ ಸ್ವರೂಪ ದೊರೆಯತೊಡಗಿದರೆ, ಅದರ ಭಾರಗಳಿಂದಾಗಿ ಪತ್ರಿಕೆ ನಿಂತುಹೋಗುವ ಸಂಭವವೇ ಹೆಚ್ಚೆಂದು ನನ್ನ ಭಾವನೆ. ಅದೇನೇ ಇರಲಿ, ಗೆಳೆಯರಿಗೊಂದು ಪ್ರೀತಿಪೂರ್ವಕ ಆಹ್ವಾನ: ನೀವು ಲೇಖನಗಳನ್ನು ಬರೆದು ಮತ್ತು ಬರೆಯಬೇಕೆಂದು ನೀವು ಬಯಸುವ ಲೇಖಕರಿಂದ ಬರೆಸಿ ಕಳಿಸತೊಡಗಿರಿ. ಹಾಗೇ ನಿಮ್ಮ ಗೆಳೆಯರನ್ನು ಪತ್ರಿಕೆಗೆ ಚಂದಾದಾರರನ್ನೂ ಮಾಡಿ. ಆಗ ಖಂಡಿತ ನಿಮ್ಮ ಸಲಹೆಗಳು ತಂತಾನೇ ಜಾರಿಯಾಗುತ್ತವೆ. ಸಂಪಾದಕರು ಹೆಚ್ಚು ಬರೆಯಬಾರದು ಎಂಬ ಸಲಹೆಯೂ ಸೇರಿದಂತೆ. ಆದರೆ ಒಂದು ಮಾತು; ಪತ್ರಿಕೆ ಒಂದು ಸಾರ್ವತ್ರಿಕ ಪತ್ರಿಕೆಯಾಗಬಯಸುವುದಿಲ್ಲ ಮತ್ತು ಏನೇ ಆದರೂ ತನ್ನ ಒಂದು ಮಟ್ಟದ ಗುಣಾತ್ಮಕತೆಯನ್ನು ಕಾಪಾಡಿಕೊಳ್ಳಬಯಸುತ್ತದೆ.

ಇಲ್ಲೇ ಇನ್ನೊಂದು ಸಂಗತಿಯನ್ನು ಪ್ರಸ್ತಾಪಿಸಬೇಕು. ಇತ್ತೀಚೆಗೆ ಕೆಲ ಗೆಳೆಯರು ನಮ್ಮ ಪತ್ರಿಕೆಯನ್ನು ಲಂಕೇಶ್ ಕಾಲದ 'ಲಂಕೇಶ್ ಪತ್ರಿಕೆ'ಗೆ ಹೋಲಿಸಿ ಪತ್ರಗಳನ್ನು ಬರೆಯುತ್ತಿದ್ದಾರೆ. ಹೋಲಿಸಲು ನೀವು ಸ್ವತಂತ್ರರು. ಆದರೆ ಈ ಪತ್ರಿಕೆಯನ್ನು ನಾನು ವೈಯಕ್ತಿಕ ಸಾಹಸವಾಗಿ (ಮತ್ತು ನನ್ನ ಒಂದು ಬೌದ್ಧಿಕ ಅಗತ್ಯವಾಗಿ ಕೂಡ) ಆರಂಭ ಮಾಡಿದಾಗ ಆ ಪತ್ರಿಕೆ ನನಗೆ ಆದರ್ಶವಾಗಿರಲಿಲ್ಲ. ಲಂಕೇಶರ ಪ್ರತಿಭೆ, ಶೈಲಿ, ಉದ್ದೇಶಗಳು ಬೇರೆ. ನನ್ನವೇ ಬೇರೆ. ಅವರನ್ನು ಓರ್ವ ಲೇಖಕನನ್ನಾಗಿ ನಾನು ಗೌರವಿಸಿದಷ್ಟು ಪತ್ರಕರ್ತನನ್ನಾಗಿ ಗೌರವಿಸಲಾರೆ. ಅವರು ಪತ್ರಕರ್ತರಾಗುತ್ತಾ ಪತ್ರಿಕೋದ್ಯಮಿಯೂ ಆಗಿದ್ದು ಇದಕ್ಕೆ ಒಂದು ಕಾರಣವಿರಲೂಬಹುದು. ಹಿಂದೊಮ್ಮೆ ಹೇಳಿರುವಂತೆ, ನಾನೆಂದೂ–ಅವರ ಪತ್ರಿಕೆಯಲ್ಲಿ ಅವರೊಂದಿಗೆ ಸ್ವಲ್ಪ ಕಾಲ ಕೆಲಸ ಮಾಡಿದ ಹಿನ್ನೆಲೆಯೊಂದಿಗೂ–ಅವರ ರಾಜಕೀಯ ಪತ್ರಿಕಾ ಬರವಣಿಗೆಯನ್ನು ಅದರ ತಿರುಳಿನ ದೃಷ್ಟಿಯಿಂದಾಗಲೀ, ಶೈಲಿಯ ದೃಷ್ಟಿಯಿಂದಾಗಲೀ ಪೂರ್ಣ ಒಪ್ಪಿದವನಲ್ಲ. ಇದಕ್ಕೆ ಕಾರಣ, ರಾಜಕಾರಣದ ವಿಷಯದಲ್ಲಿ ಸಾಹಿತ್ಯಿಕವಾಗಿ ಆಕರ್ಷಕವಾಗಲು ಹವಣಿಸುವ ಬರವಣಿಗೆ ತಂತಾನೇ ಆಳದಲ್ಲಿ ಸತ್ಯದೊಂದಿಗೆ ರಾಜಿ ಮಾಡಿಕೊಳ್ಳತೊಡಗುತ್ತದೆ ಎಂದೇ ನನ್ನ ಭಾವನೆ. ಅದೇನೇ ಇರಲಿ, ನೀವು ಇಷ್ಟಪಡಿ, ಬಿಡಿ, ಇದು 'ಹೊಸ ಮನುಷ್ಯ' ಮಾತ್ರ. ಬೇರೇನೂ ಆಗಬಯಸುವುದಿಲ್ಲ. ಅದು ತನ್ನದೇ ಮಿತಿಗಳಲ್ಲೇ ಇರಬಯಸುತ್ತದೆ. ಹೇಗೂ ನಾನೀಗ ಅರ್ಥ ಮಾಡಿಕೊಂಡಿರುವಂತೆ ಸಮಾಜವಾದದ ಮುಖ್ಯ ಆಶಯ ಈಗ 'ಹಿತ ಮಿತ' ಎಂದಾಗಬೇಕು ಮತ್ತು ಅದರ ಮೂಲಕವೆ ಸಮಾನತೆಯ ಆಶಯದತ್ತ ನಾವು ಸಾಗಬೇಕು.

ಇನ್ನು ಈ ಸಂಚಿಕೆಯ ಬಗ್ಗೆ ಇಲ್ಲಿ ವಿಶೇಷವಾಗಿ ಹೇಳುವುದು ಏನೂ ಇಲ್ಲ. ಎಲ್ಲವನ್ನೂ ಲೇಖನಗಳೇ ಸ್ಪಷ್ಟವಾಗಿ ಹೇಳುತ್ತವೆ ಮತ್ತು ಅವು–ಜಯಂತ ಕಾಯ್ಕಿಣಿಯವರ ಸಣ್ಣ ಕಥೆಯೂ ಸೇರಿದಂತೆ–ಸಮಜವಾದದ ಸತ್ಯಗಳನ್ನೇ ಪುನರುಚ್ಚರಿಸುತ್ತಿರುವುದನ್ನು ಓದುಗರು ಗಮನಿಸಬಹುದು. ವಿಶೇಷ ಗಮನಕ್ಕೆ ಅರ್ಹವಾದ ಲೇಖನವೆಂದರೆ ತಮ್ಮನ್ನು ತಾವು ಅಮೆರಿಕನ್ ಇಂಡಿಯನ್‌ರೆಂದೇ ಕರೆದುಕೊಳ್ಳಲು ಹೆಮ್ಮೆಪಡುವ ರೆಡ್ ಇಂಡಿಯನ್‌ರ (ದಿವಂಗತ) ನಾಯಕ ರಸೆಲ್ ಮೀನ್ಸ್ ಅವರ 'ನಾವು ಉಳಿಯಬೇಕಾದರೆ ಯೂರೋಪ್ ಸಾಯಬೇಕು' ಲೇಖನ. ಇದು ಈ ಸಂಚಿಕೆಯ ಪ್ರಧಾನ ಲೇಖನವೂ ಹೌದು. ವಿಜ್ಞಾನ–ತಂತ್ರಜ್ಞಾನಗಳನ್ನು ಆಧರಿಸಿದ ಆಧುನಿಕ ನಾಗರೀಕತೆಯೆಂದು ಕರೆಯಲಾಗುವ ಪಶ್ಚಿಮದ–ಯೂರೋಪಿನ–ನಾಗರೀಕತೆಯ ಆಧಾರ ನಂಬಿಕೆಗಳನ್ನೇ ಅಲುಗಾಡಿಸುವ ಈ ಕುತೂಹಲಕಾರಿ ಲೇಖನ ಗಾಂಧೀಜಿಯ "ಹಿಂದ್ ಸ್ವರಾಜ್"ನಲ್ಲಿನ ಚಿಂತನೆಗೆ ಬಹು ಹತ್ತಿರವಾದದ್ದು. ಲೋಹಿಯಾ ಸಮಾಜವಾದ ಇಂದಿನ ಸವಾಲುಗಳೆದುರು ತನ್ನನ್ನು ತಾನು ಪುನರನ್ವೇಷಿಸಿಕೊಳ್ಳಲು ಮತ್ತು ಅದು ತಾನು ವಿಮರ್ಶಿಸಲು ಹೊರಟಿದ್ದೇನೆಂದು ಹೇಳಿಕೊಂಡ ಗಾಂಧಿ ಚಿಂತನೆಗೆ ಈಗ ವಿನಯಪೂರ್ವಕವಾಗಿ ಮರಳಬೇಕಾಗಿದೆ. ಇಂದಿನ ಈ ತುರ್ತು ಅಗತ್ಯದ ಹಿನ್ನೆಲೆಯಲ್ಲಿ

ಸಮಾಜವಾದಿ ಗೆಳೆಯರಿಗೆ ಬಹು ಮುಖ್ಯವೆನಿಸಬೇಕಾದ ಲೇಖನ ಕೂಡ ರಸೆಲ್‌ರದ್ದು. ತಂತ್ರಜ್ಞಾನ ಕುರಿತ ಎಸ್. ಮಂಜುನಾಥ ಅವರ ಲೇಖನವನ್ನು ಇದರ ಜೊತೆಯಲ್ಲೇ ಓದಿಕೊಂಡರೆ ಎರಡೂ ಲೇಖನಗಳ ಅರ್ಥಪೂರ್ಣತೆ ಮತ್ತು ಪ್ರಸ್ತುತತೆ ಹೆಚ್ಚು ಮನದಟ್ಟಾಗಬಹುದು. ಇನ್ನು ಹಿರಿಯ ಲೇಖಕ ಯು.ಆರ್. ಅನಂತಮೂರ್ತಿಯವರೊಡನೆಯ ಸಂದರ್ಶನ ನಮ್ಮ ಕಾಲದ ಸಾಹಿತ್ಯ ಚರಿತ್ರೆಯ ಹಲವು ಮುಖ್ಯ ಸತ್ಯಗಳನ್ನು ಹೇಳುತ್ತಾ ಅದನ್ನು ಪುನರ್‌ನಿರೂಪಣೆಗೆ ಒಳಪಡಿಸುವಂತಿರುವುದರಿಂದ ಮುಖ್ಯವೆನಿಸಬಹುದು.

ಈ ಬಾರಿ ರಾಜಕೀಯ ಟಿಪ್ಪಣಿಗಳಿಗೆ ಬಿಡುವು ಕೊಡುವ ಮನಸ್ಸಿದೆಯಾದರೂ, ಕೇಂದ್ರ ಮತ್ತು ರಾಜ್ಯದಲ್ಲಿನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ನಾಲ್ಕು ಮಾತು ಬರೆಯಲೇಬೇಕೆನ್ನಿಸಿದೆ. ನಾವು ಅದನ್ನು ಒಪ್ಪಲಿ ಬಿಡಲಿ, ಮೋದಿ ಗೆದ್ದದ್ದು ಜನರಲ್ಲಿ ಅಭಿವೃದ್ಧಿಯ ಹೊಸ ಕನಸನ್ನು ಬಿತ್ತುವ ಮೂಲಕ. ಆದರೆ ಈಗ ತಾವು ಭರವಸೆ ಕೊಟ್ಟ 'ಅಚ್ಛೇ ದಿನ'ಗಳನ್ನು ಸೃಷ್ಟಿಸಲಾಗದ ಮೋದಿಯವರು ಈವರೆಗೆ ಸಾಂಸ್ಕೃತಿಕ ಸಂಘಟನೆಯ ಮಾರುವೇಷದಲ್ಲಿ ರಾಜಕಾರಣ ಮಾಡುತ್ತಾ ಬಂದಿರುವ ಮತ್ತು ಯಾವುದೇ ಸಾಂವಿಧಾನಿಕ ಮಾನ್ಯತೆ ಇಲ್ಲದೆ ಆರೆಸ್ಸೆಸ್ ಮಾರ್ಗದರ್ಶನದಲ್ಲಿ ಜನರ ಭಾವನೆಗಳನ್ನು ಕೆರಳಿಸುವಂತಹ ರಾಜಕೀಯ ನೀತಿ ನಿರ್ಧಾರಗಳನ್ನು ಕೈಗೊಳ್ಳಹೊರಟಂತಿದೆ. ಸರ್ಕಾರದ ಹಲವು ಮುಖ್ಯ ನೇಮಕಾತಿಗಳಲ್ಲಿ ಅದರ ಪ್ರಭಾವ ನಿಚ್ಚಳವಾಗಿ ಕಾಣತೊಡಗಿದೆ. ಶಿವಸೇನೆ, ಹಿಂದೂ ಸೇನೆ ಮುಂತಾದ ಅತಿವಾದಿ ಸಂಘಟನೆಗಳ ನಾಯಕರ ಅತಿ ವರ್ತನೆಗಳಿಗೆ ಪ್ರಭುತ್ವದ ಮೌನ ಸಮ್ಮತಿ ಇರುವ ಲಕ್ಷಣಗಳೂ ಕಾಣತೊಡಗಿದೆ. ಇದನ್ನು ಜನ ಗಮನಿಸುತ್ತಿದ್ದಾರೆ ಮತ್ತು ಇದರ ವಿರುದ್ಧ ಧ್ವನಿ ಎತ್ತುವ ಕಾಲ ದೂರವಿಲ್ಲ.

ಇನ್ನು ನಮ್ಮ ರಾಜ್ಯ ಲೈಂಗಿಕ ಅತ್ಯಾಚಾರಗಳ ರಾಜ್ಯವಾಗುತ್ತಿದೆ ಎಂದು ಮಾಧ್ಯಮಗಳೂ, ಇದಕ್ಕೆ ಸಿದ್ಧರಾಮಯ್ಯನವರ ಸರ್ಕಾರವೇ ಹೊಣೆಯೆಂದು ವಿರೋಧ ಪಕ್ಷಗಳೂ ಬೊಬ್ಬೆ ಹೊಡೆಯುತ್ತಿರುವುದನ್ನು ನೋಡಿದರೆ ಕರ್ನಾಟಕದ ಜನರ ಬುದ್ಧಿಗೆ ಯಾವ ಗರ ಬಡಿದಿದೆ ಎಂದು ಆಶ್ಚರ್ಯವಾಗುತ್ತದೆ. ಇದು ರೋಗ ಲಕ್ಷಣವೇ ಹೊರತು ರೋಗವಲ್ಲ; ಈ ರೋಗವನ್ನು ನಾವು ಗುರುತಿಸಬೇಕಾಗಿರುವುದು ನಾವು ಕಳೆದ ಇಪ್ಪತ್ತು ವರ್ಷಗಳಲ್ಲಿ ಎರಡಂಕಿಯ ಪ್ರಗತಿಯ ರುಚಿಯ ಹಿಂದೆ ಬಿದ್ದು ಅದಕ್ಕೆ ಬೇಕಾದ 'ಆಧುನಿಕ' ಮನಃಸ್ಥಿತಿಯ ಹೆಸರಿನಲ್ಲಿ ನಮ್ಮ ಮನೆ-ಮನಗಳನ್ನು ಎಷ್ಟು ಭ್ರಷ್ಟಗೊಳಿಸಿಕೊಂಡಿದ್ದೇವೆ ಮತ್ತು ಇದಕ್ಕೂ ಹೆಚ್ಚುತ್ತಿರುವ ಅತ್ಯಾಚಾರಗಳಿಗೂ ಏನಾದರೂ ಸಂಬಂಧವಿದೆಯೇ ಎಂದು ಯೋಚಿಸದೆ ಬೀದಿ ಬೀದಿಗೊಂದು ಮಹಿಳಾ ಪೋಲಿಸ್ ಠಾಣೆಯ, ಮೂಲೆ ಮೂಲೆಗೊಂದು ಸಿ.ಸಿ.ಟಿವಿ ಅಳವಡಿಕೆಯ, ಗೂಂಡಾ ಕಾಯಿದೆ ತಿದ್ದುಪಡಿಯ ಮಾತನಾಡುತ್ತಿರುವುದನ್ನು ನೋಡಿದರೆ ಈ ನಮ್ಮ ಪ್ರಗತಿಪರ ಸಮಾಜ ಪ್ರದರ್ಶಿಸುತ್ತಿರುವ ಆತ್ಮದ್ರೋಹ ಆತಂಕವನ್ನು ಹುಟ್ಟಿಸುತ್ತದೆ. ರಾಜ್ಯದ ರಾಜಧಾನಿ

ಬೆಂಗಳೂರಿನ ಬೀದಿಗಳಲ್ಲಿ ಒಟ್ಟಲ್ಪಡುತ್ತಿರುವ ಕಸದ ನಿರ್ವಹಣೆಯ ಸಮಸ್ಯೆಯು, ಕರ್ನಾಟಕದ ಜನರ ಮನಸ್ಸಿನಲ್ಲಿ ಒಟ್ಟಲ್ಪಟ್ಟಿರುವ ಕಸದ ನಿರ್ವಹಣೆಯ ಸಮಸ್ಯೆಯ ರೂಪಕ ಮಾತ್ರವಾಗಿದೆ ಎಂಬುದನ್ನು ಅರಿಯದಿದ್ದಲ್ಲಿ ಈ ಲೈಂಗಿಕ ವಿಕೃತಿಯನ್ನು ಕಾನೂನು ಮತ್ತು ಶಿಸ್ತಿನ ಸಮಸ್ಯೆಯಂತೆ ಬಹುಕಾಲ ನಿರ್ವಹಿಸಲಾಗದು ಎಂಬುದು ಜನಕ್ಕೆ ಗೊತ್ತಾಗಬೇಕಿದೆ. ಅದು ಗೊತ್ತಾಗುವಷ್ಟು ಮೈಮನಗಳ ಎಚ್ಚರ ರಾಜ್ಯದ ಜನತೆಗೆ ಮತ್ತು ಸರ್ಕಾರಕ್ಕೆ ಇದೆಯೇ? ಕಾದು ನೋಡಬೇಕು.

ಇರಲಿ, ಈ ವಿಶೇಷಾಂಕ ಹೇಗಿದೆ ಎಂದು ಬರೆಯಿರಿ. ಈ ಸಂಚಿಕೆಯ ಸಮೃದ್ಧಿಗೆ ಕಾರಣರಾದವರು ಹಿರಿ-ಕಿರಿಯ ಲೇಖಕ ಗೆಳೆಯರು ಮತ್ತು ಅಭಿಮಾನವಿಟ್ಟು ಜಾಹೀರಾತುಗಳನ್ನು ನೀಡಿದ ಮತ್ತು ಒದಗಿಸಿಕೊಟ್ಟ ಮಿತ್ರರು. ಇವರೆಲ್ಲರಿಗೆ ಧನ್ಯವಾದಗಳು.

ಸಮಕಾಲೀನ

ಆಧುನಿಕ ನಾಗರೀಕತೆಯೂ, ಈ ಭೂಮಿಯೂ...

ಯೂರೋಪಿನಲ್ಲಿ ೧೪ರಿಂದ ೧೭ನೇ ಶತಮಾನದವರೆಗಿನ ಕಾಲಾವಧಿಯಲ್ಲಿ ತೆರೆದುಕೊಂಡಿತೆಂದು ಹೇಳಲಾದ 'ಜ್ಞಾನಯುಗ'ವು (ಪುನರುಜ್ಜೀವನ ಯುಗ - Rennaissance) ಧರ್ಮ, ವಿಜ್ಞಾನ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದು ಮಾನವನ ಬದುಕಿನ ಗುಣಮಟ್ಟವನ್ನು ಬದಲಾಯಿಸಿತೆಂದು ನಾವು ನಂಬಿದ್ದೇವೆ ಅಥವಾ ನಮ್ಮನ್ನು ನಂಬಿಸಲಾಗಿದೆ. ಈ ಬದಲಾವಣೆಗಳೇ ಆಧುನಿಕ ಎಂದು ಹೇಳಲಾಗುತ್ತಿರುವ ನಾಗರೀಕತೆಯ ಆಧಾರ ಸ್ತಂಭಗಳೆಂದೂ ಹೇಳಲಾಗುತ್ತಿದೆ. ಆದರೆ ಇದರ ಪರಿಣಾಮದಲ್ಲಿ ಯೂರೋಪ್ (ಅರ್ಥಾತ್ ಪಶ್ಚಿಮ ಜಗತ್ತು) ಈ ನಾಗರಿಕ ಜಗತ್ತಿನ ಇತರ ದೇಶಗಳನ್ನು, ಅಲ್ಲಿನ ಜನಸಮುದಾಯಗಳನ್ನು ಏನು ಮಾಡಿವೆ? ಅವನ್ನು ಹಿಂದುಳಿದ ದೇಶಗಳೆಂದೂ, ಮೂಢ ಜನಸಮುದಾಯಗಳೆಂದೂ ಕರೆದು ಮತ್ತು ಸ್ವತಃ ಅವೂ ಹಾಗೆಂದು ಭಾವಿಸುವಂತೆ ಮಾಡಿ ಅವುಗಳ ಮೇಲೆ ಸವಾರಿ ಮಾಡಲು ದಾರಿ ಮಾಡಿಕೊಂಡಿತಷ್ಟೆ. ಇಂದು ವೈವಿಧ್ಯಮಯ ಅಧ್ಯಯನಗಳಿಗೆ ವಸ್ತುವಾಗಿರುವ ವಸಾಹತುಶಾಹಿಯ ಬೇರುಗಳು ಆರಂಭವಾಗುವುದು ಇಲ್ಲಿಯೇ. ಹಾಗಾಗಿಯೇ ಗಾಂಧಿ ಒಂದು ಶತಮಾನದ ಹಿಂದೆಯೇ ಆಧುನಿಕ ನಾಗರೀಕತೆ ಎಂದರೆ ಮತ್ತೇನಲ್ಲ, ಅದೊಂದು ವಸಾಹತುಶಾಹಿಯ ಉಪಕರಣ ಎಂದಿದ್ದರು.

ಈ ಉಪಕರಣ ಪರೋಕ್ಷವಾಗಿ ಕೆಲಸ ಮಾಡಿದ ಕ್ಷೇತ್ರವಾದ ಉತ್ತರ ಅಮೆರಿಕಾ ಇಂದು 'ಅಮೆರಿಕಾ ಸಂಯುಕ್ತ ಸಂಸ್ಥಾನ'ವಾಗಿ ಬೆಳೆದು ನಿಂತದ್ದರ ಹಿಂದೆ ಒಂದು ದೊಡ್ಡ ದುರಂತ ಕಥೆಯೇ ಇದೆ. 'ಜ್ಞಾನ ಯುಗ'ದ ವಿಚಾರ ಮತ್ತು ಸಾಧನ-ಸಲಕರಣೆಗಳೊಂದಿಗೆ ಅಲ್ಲಿಗೆ ಹೋದ ಯೂರೋಪಿಯನ್ನರು ಅಲ್ಲಿನ

ಮೂಲನಿವಾಸಿಗಳಾದ ರೆಡ್ ಇಂಡಿಯನ್‌ರನ್ನು (ಅವರು ತಮ್ಮನ್ನು ಅಮೆರಿಕನ್ ಇಂಡಿಯನ್‌ರೆಂದು ಕರೆದುಕೊಳ್ಳುವರು) ಬೇಟೆಯಾಡಿ, ಅಲ್ಲಿನ ನಿಸರ್ಗ ಸಂಪತ್ತನ್ನು ತಮ್ಮ ಸುಖ ಜೀವನ ಕಟ್ಟಿಕೊಳ್ಳುವ ಸಲುವಾಗಿ ಸೂರೆ ಮಾಡಿ 'ಆಧುನಿಕ ಅಮೆರಿಕಾ' ಎಂಬ ಮಾಯಾಜಿಂಕೆಯನ್ನು ಸೃಷ್ಟಿಸಿ ಜಗತ್ತಿನ ಮುಂದೆ ಆಡಬಿಟ್ಟಿದ್ದಾರೆ.

ಇದರ ವಿರುದ್ಧ ನಿಧಾನವಾಗಿ ಎಚ್ಚೆತ್ತುಕೊಂಡಿರುವ ರೆಡ್ ಇಂಡಿಯನ್ ಜನಸಮುದಾಯ ಇತ್ತೀಚಿನ ವರ್ಷಗಳಲ್ಲಿ ಸಂಘಟಿತರಾಗಿ ತನ್ನ ಜೀವನ ದೃಷ್ಟಿ, ಜೀವನ ವಿಧಾನ, ಜೀವನ ಮೌಲ್ಯಗಳು ಹಾಗೂ ಸಾಂಸ್ಕೃತಿಕ ಅಸ್ಮಿತೆಯನ್ನು ಪುನರನ್ವೇಷಿಸಿಕೊಂಡು ಕಾಪಾಡಿಕೊಳ್ಳಲು ಒಂದು ದೊಡ್ಡ ಆಂದೋಲನವನ್ನೇ ನಡೆಸಿದೆ. ಅದರ ಒಬ್ಬ ಮುಂಚೂಣಿ ನಾಯಕನಾಗಿದ್ದವನೇ ರಸಲ್ ಮೀನ್ಸ್. ಈತ ಇಲ್ಲಿ ರೆಡ್ ಇಂಡಿಯನ್ನರ ಪರವಾಗಿ ಮಾತನಾಡುತ್ತಾ, ಹೇಗೆ ವೈಜ್ಞಾನಿಕತೆ ಎಂಬ ಐರೋಪ್ಯ ಲೋಕದೃಷ್ಟಿಯು ಆಧುನಿಕತೆಯ ಹೆಸರಿನಲ್ಲಿ ತಾನು ರೂಪಿಸಿಕೊಂಡ ಸಿದ್ಧಾಂತಗಳ ಮೂಲಕ ಇಡೀ ಜೀವ ಜಗತ್ತಿಗೆ ತಾಯಿ ಸಮಾನವಾಗಿರುವ ನಮ್ಮ ಭೂಮಿಯನ್ನು ನಾಶ ಮಾಡಿ ಮಾನವ ಜನಾಂಗವನ್ನು ಅಸಹಾಯಕತೆ ಮತ್ತು ಅತಂತ್ರಗಳೆಡೆಗೆ ದೂಡುತ್ತಿದೆ ಎಂಬುದನ್ನು ಸವಿವರವಾಗಿ ಹೇಳಿದ್ದಾನೆ. ಆದರೆ ಇದು ರೆಡ್ ಇಂಡಿಯನ್ನರ ಪರವಾಗಿ ಮಾತ್ರ ಆಡಿದ ಮಾತುಗಳಲ್ಲ. ಈ ಭೂಮಿ ತಾಯಿಯ, ಅದರ ಮೇಲಿನ ಜೀವಜಗತ್ತಿನ ನಾಶದ ಬಗ್ಗೆ ಆತಂಕಿತರಾಗಿರುವ ಎಲ್ಲರ ಪರವಾಗಿ ಆಡಲಾಗಿರುವ ಮಾತುಗಳಾಗಿವೆ.

ರಸಲ್‌ನ ಮಾತುಗಳು ಒಂದು ಅತಿಗೆ ಹೋಗಿ ಆಡಿರುವ ಮಾತುಗಳಂತೆ ಕೇಳಿಸಿದರೂ, ಅವು ಈ ಭೂಮಿಯ ಮೇಲೆ ಈಗ ಆಧುನಿಕತೆಯ ಹುಚ್ಚಿನಲ್ಲಿ, ಅಭಿವೃದ್ಧಿಯ ಹೆಸರಿನಲ್ಲಿ ಪ್ರೋತ್ಸಾಹಿಸಲಾಗುತ್ತಿರುವ ಬದುಕಿನ ಶೈಲಿ ಮತ್ತು ಗತಿಗಳಲ್ಲಿ ಏನೋ ಒಂದು ಮೂಲಭೂತ ದೋಷವಿದೆ ಎಂಬುದು ನಮಗೆ ಮನಗಾಣಿಸಬಲ್ಲುವಾಗಿದೆ. ಈತನ ಮಾತುಗಳಲ್ಲಿ ನಮ್ಮ ಬುದ್ಧ–ಗಾಂಧಿ–ಲೋಹಿಯಾರ ವಿಚಾರಗಳು ಅಲ್ಲಲ್ಲಿ ಹಣಕಿರುವುದನ್ನು ನಾವು ಗಮನಿಸಬಹುದು.

೧೯೮೦ರ ಜುಲೈ ತಿಂಗಳ ಬೇಸಿಗೆಯಲ್ಲಿ ದಕ್ಷಿಣ ಡಕೋಟದಲ್ಲಿ ಜಗತ್ತಿನ ಎಲ್ಲ ಕಡೆಗಳಿಂದ ಬಂದು ಸೇರಿದ್ದ ಸಾವಿರಾರು ಜನರ 'ಬ್ಲ್ಯಾಕ್ ಹಿಲ್ಸ್ ಇಂಟರ್‌ನ್ಯಾಷನಲ್ ಸರ್ವೈವಲ್' ಕೂಟದಲ್ಲಿ ರಸಲ್ ಮಾಡಿದ ಭಾಷಣವಿದು. ಸಹಜವಾಗಿಯೇ ಇದು ಈಗ ಯೂರೋಪಿನ ಚಿಂತನಾ ಕ್ರಮದ ವಾರಸುದಾರನಾಗಿರುವ ಅಮೆರಿಕನ್ ಪ್ರಭುತ್ವನ್ನು ಕೆರಳಿಸಿತ್ತು. ಹಲವು ವರ್ಷಗಳ ಕಾಲ ಅಮೆರಿಕನ್ ಇಂಡಿಯನ್ ಚಳುವಳಿಯ ಮುಂಚೂಣಿಯಲ್ಲಿದ್ದ ಈ ರಸಲ್ ಮೀನ್ಸ್ ಒಬ್ಬ ಒಗ್ಲಾಲ ಲಕೋಟ ಬುಡಕಟ್ಟಿನವ. ೧೯೩೯ರಲ್ಲಿ ಹುಟ್ಟಿದ ಈತ ಹೋರಾಗಾರನಷ್ಟೇ ಅಲ್ಲದೆ ನಟ, ಸಂಗೀತಗಾರ ಮತ್ತು ಬರಹಗಾರ ಕೂಡ ಆಗಿದ್ದ.–**ಸಂ.**

ಸೆಪ್ಟಂಬರ್, ೨೦೧೪

ಅನಂತಮೂರ್ತಿಯವರಿಗೆ ವಿದಾಯ; ಎಡ-ಬಲಗಳಾಚೆಯ ನೋಟದ ಇಂದಿನ ಅಗತ್ಯ

ಪ್ರಿಯ ಓದುಗರೇ,

ಪತ್ರಿಕೆ ಮುದ್ರಣಕ್ಕೆ ಹೋಗುವ ಒಂದೆರಡು ದಿನಗಳ ಮುನ್ನ ಅನಂತಮೂರ್ತಿಯವರ ಸಾವಿನ ಸುದ್ದಿ ಬಂದಿದೆ. ಇವರ ಸಾವು ಕನ್ನಡಕ್ಕೆ ದೊಡ್ಡ ನಷ್ಟ ಎಂದು ಈ ಸಂದರ್ಭದಲ್ಲಿ ಹೇಳುವುದು ಕೇವಲ ಸುಲಭದ ಮಾತಾಗಿಬಿಡಬಹುದು. ಏಕೆಂದರೆ ಇವರ ಸಾವು ಒಂದರ್ಥದಲ್ಲಿ ಒಂದು ಯುಗದ ಸಾವು. ಲಂಕೇಶ್, ತೇಜಸ್ವಿ , ಚಿತ್ತಾಲ, ಶಾಂತಿನಾಥ ಮುಂತಾದ ಬಹು ದೊಡ್ಡ ಪತ್ರಿಭೆಗಳು ಸೇರಿ ಕಟ್ಟಿದ ಹೊಸ ಯುಗವೊಂದರ ಕೊನೆಯ ಪ್ರತಿನಿಧಿಯಾಗಿ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅನಂತಮೂರ್ತಿ ತಮ್ಮ ಮೊದಲ ಕಾದಂಬರಿ 'ಸಂಸ್ಕಾರ'ದ ಮೂಲಕ ಕನ್ನಡಕ್ಕೆ ಹೊಸ ಸಂವೇದನೆ ಮತ್ತು ಆ ಮೂಲಕ ಬದುಕನ್ನು ನೋಡುವ ಒಂದು ಹೊಚ್ಚ ಹೊಸ ನೋಟಕ್ರಮವೊಂದನ್ನು ನೀಡಿದವರು. ನಂತರ ಅದರ ಸಾಧುತ್ವ ಚರ್ಚೆಗೀಡಾಯಿತು ಮತ್ತು ಅವರ ಪಾರ್ಥಿವ ಶರೀರದ ಸಂಸ್ಕಾರದ ರೀತಿ ನೀತಿಗಳನ್ನೇ ನೋಡಿ ಹೇಳುವುದಾದರೆ, ಸ್ವತಃ ಅವರಿಂದಲೇ ಪುನರ್‌ವಿಮರ್ಶೆಗೆ ಒಳಗಾಯಿತೆಂದೂ ಹೇಳಬಹುದು. ಅದೇನೇ ಇದ್ದರೂ, ಇದು ಇತ್ತೀಚೆಗೆ ತಾನೇ ಅವರನ್ನು ನಮ್ಮ ವಿಶೇಷಾಂಕಕ್ಕಾಗಿ ಅವರನ್ನು-ಒಳಹೊಕ್ಕು-ಮಾತನಾಡಿಸಿ ಬಂದಿದ್ದ ನನಗೆ ವೈಯುಕ್ತಿಕವಾಗಿ ವಿಚಿತ್ರ ಸಂಕಟವನ್ನುಂಟು ಮಾಡಿರುವ ಸಾವು.

ಯು.ಆರ್. ಅನಂತಮೂರ್ತಿ ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಲೋಕ ಕಂಡ ಒಂದು ಉಜ್ವಲ ಬೌದ್ಧಿಕ ವ್ಯಕ್ತಿತ್ವ. ಈ ಬೌದ್ಧಿಕತೆ ಎಷ್ಟೇ ವಿವಾದಾಸ್ಪದವಾದುದಾದರೂ, ಅದು ಕನ್ನಡಕ್ಕೆ ಒಳ್ಳೆಯದನ್ನೇ ಮಾಡಿದೆ, ಕನ್ನಡ ಮನಸ್ಸು ಜಡಗೊಳ್ಳದೆ ಸದಾ ಕ್ರಿಯಾಶೀಲ

ಮತ್ತು ಸೃಜನಶೀಲವಾಗಿರುವಂತೆ ಮಾಡುವ ಮೂಲಕ. ಅವರ ದೌರ್ಬಲ್ಯಗಳನ್ನು ಹೇಳುವ ಸಂದರ್ಭ ಇದಲ್ಲ. ಹಾಗಾಗಿ ಒಂದೇ ಮಾತಲ್ಲಿ ಹೇಳುವುದಾದರೆ, ಕನಿಷ್ಠ ಅವರ ನಾಲ್ಕು ಕತೆಗಳು, ಮೂರು ಚಿಂತನೆಗಳು, ಎರಡು ಕವಿತೆಗಳು ಮತ್ತು ಒಂದು ಕಾದಂಬರಿ ಅವರನ್ನು ಕನ್ನಡ ಮನಸ್ಸಿನಲ್ಲಿ ಬಹುಕಾಲ ಉಳಿಯುವಂತೆ ಮಾಡಿದೆ. ಇದು ಬಹುಶಃ ಅವರ ಸಮಕಾಲೀನರಲ್ಲಿ ಬಹಳ ಜನಕ್ಕೆ ದೊರಕದ ಸೌಭಾಗ್ಯ. ಮಿಕ್ಕಂತೆ, ಅವರೊಡನೆಯ ಸಂದರ್ಶನದಲ್ಲಿಯೇ ಅವರ ಬಗ್ಗೆ ನಾನು ಹೇಳಬಹುದಾದದ್ದನ್ನೆಲ್ಲ ಸೂಚ್ಯವಾಗಿ ಹೇಳಿರುವುದರಿಂದ ಮತ್ತು ಮುಂದಿನ ಪುಟಗಳಲ್ಲಿ ಗೆಳೆಯ ಜಿ. ರಾಜಶೇಖರ್ ಒಂದು ಶ್ರದ್ಧಾಂಜಲಿ ಟಿಪ್ಪಣಿ ಬರೆದಿರುವುದರಿಂದ ಅವರ ಬಗ್ಗೆ ಇಲ್ಲಿ ಇನ್ನು ಹೆಚ್ಚು ಬರೆಯುವ ಅಗತ್ಯವಿಲ್ಲವೆಂದು ಭಾವಿಸಿರುವೆ.

* * *

ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬೆಕ್ಕಿನಂತೆ ಸದ್ದಿಲ್ಲದ ಕಳ್ಳ ಹೆಜ್ಜೆಗಳನ್ನು ಹಾಕುತ್ತಾ, ಹಲವರಲ್ಲಿ ತೀವ್ರ ಆತಂಕವನ್ನು ಉಂಟು ಮಾಡಿದೆ. ಸ್ವತಃ ಮೋದಿಯವರು ಯು.ಪಿ.ಎ. ಸರ್ಕಾರ ಆರಂಭಿಸಿ ಮುಗಿಸಿದ್ದ ಬೃಹತ್ ರೈಲ್ವೇ ಯೋಜನೆ, ಇಸ್ರೋ ಉಪಗ್ರಹ ಉಡಾವಣೆ, ವಿದ್ಯುತ್ ಯೋಜನೆ, ಅತ್ಯಾಧುನಿಕ ಸಮರ ನೌಕೆ ಇತ್ಯಾದಿಗಳನ್ನೆಲ್ಲ ದೇಶಕ್ಕೆ ಅರ್ಪಿಸುತ್ತಾ, ಆದರೆ ಅದೇ ಹೊತ್ತಿನಲ್ಲಿ ಈವರೆಗೆ ಆದದ್ದೆಲ್ಲ ದೇಶ ಹಾಳು ಮಾಡುವ ಕೆಲಸೆಂದೂ. ಮುಂದೆ 'ಅಚ್ಛೇ' ದಿನಗಳು ಬರಲಿವೆ ಎಂದು ಘೋಷಿಸುತ್ತಾ ತಿರುಗಾಡುತ್ತಿದ್ದಾರೆ. ಜನ ಮಾತ್ರ ತಮ್ಮ ನಿತ್ಯ ಬದುಕಿನಲ್ಲಿ ಆ 'ಅಚ್ಛೇ' ದಿನಗಳ ಯಾವ ಸೂಚನೆಗಳನ್ನು ಕಾಣಲಾಗದೆ ಅದರ ನಿಜವಾದ ಅರ್ಥಕ್ಕಾಗಿ ಸಿಕ್ಕ ಸಿಕ್ಕ ನಿಘಂಟುಗಳ ಹಾಳೆಗಳನ್ನು ತಿರುವಿಹಾಕುವಂತಾಗಿದೆ!

ಮೋದಿ ಸರ್ಕಾರ ಸದ್ದಿಲ್ಲದ ಬೆಕ್ಕಿನ ಕಳ್ಳ ಹೆಜ್ಜೆಗಳನ್ನು ಹಾಕುತ್ತಿದೆ ಎಂದೆ. ಇದರ ಅರ್ಥ ಮತ್ತೇನೂ ಅಲ್ಲ. ಇಂತಹ ಲೌಕಿಕ ಘೋಷಣೆಗಳ ಹಿಂದೆ ಸರ್ಕಾರದ ಮೇಲೆ ನಿಯಂತ್ರಣ ಸಾಧಿಸಲು ಆರ್.ಎಸ್.ಎಸ್. ಸದ್ದಿಲ್ಲದೆ ನಡೆಸುತ್ತಿರುವ ಪ್ರಯತ್ನದ ಪರಿಣಾಮಗಳು. ಬಿಜೆಪಿ ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗಲೆಲ್ಲ ತನ್ನನ್ನು ಸಾಂಸ್ಕೃತಿಕ ಸಂಘಟನೆಯೆಂದು ಕರೆದುಕೊಳ್ಳುತ್ತಾ, ತನಗೂ ರಾಜಕಾರಣಕ್ಕೂ ಸಂಬಂಧವಿಲ್ಲವೆಂದೂ ಹೇಳುತ್ತಾ ಬಿಜೆಪಿ ಅಧಿಕಾರಕ್ಕೆ ಬಂದೊಡನೆ ತನ್ನ ರಾಜಕೀಯ ಕಾರ್ಯಚರಣೆ ಅರಂಭಿಸುವ ಆರೆಸ್ಸೆಸ್ ಈ ಬಾರಿ ಬಿಜೆಪಿ ಪೂರ್ಣ ಅಧಿಕಾರ ಪಡೆದಿರುವ ಸಂದರ್ಭದಲ್ಲಿ ತನ್ನ ರಾಜಕೀಯ ಆಟವನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸಿದಂತಿದೆ. ರಾಮ್ ಮಾಧವ್ ಎಂಬ ಮಹಾ ಚಾಣಾಕ್ಷ್ಯತನದ (ಅಂದರೆ ಬೆಣ್ಣೆಯಲ್ಲಿ ಕೂದಲು ತೆಗೆಯುವಂತಹ ನಾಜೂಕು ಮಾತುಗಾರಿಕೆಯ) ಉನ್ನತ ಸ್ತರದ ಆರೆಸ್ಸೆಸ್ ಪದಾಧಿಕಾರಿಯನ್ನು ಬಿಜೆಪಿಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಮಾಡಿ ಕಳಿಸಿದೆ. ಇನ್ನು ಅನುಮಾನಾಸ್ಪದ ವ್ಯಕ್ತಿ ಎನಿಸಿರುವ ಅಮಿತ್ ಶಾ ನೇತೃತ್ವದಲ್ಲಿ ನಡೆದಿರುವ

ಪಕ್ಷದ ಪುನಾರಚನೆಯಲ್ಲಿ ಆರೆಸ್ಸೆಸ್ ನೇರ ಕೈವಾಡ ಕಾಣುವಂತಿದೆ. ಭಾರತದ ಚರಿತ್ರೆಯಲ್ಲಿನ ಅನೇಕ ಅನಾಹುತಗಳ ಹಿಂದೆ ಇದೆ ಎಂದು ಹೇಳಲಾಗುವ ಹಿಂದೂ ಪುರೋಹಿತಶಾಹಿಯ ಪ್ರತೀಕದಂತಿರುವ ಆರೆಸ್ಸೆಸ್, ತನ್ನನ್ನು ಹಿನ್ನೆಲೆಗೆ ಸರಿಸಿದ ಕಳೆದೊಂದು ಶತಮಾನದ ರಾಜಕಾರಣದ ಮೇಲೆ ಸೇಡು ತೀರಿಸಿಕೊಳ್ಳಹೊರಟಿರುವ ಎಲ್ಲ ಸೂಚನೆಗಳೂ ಈಗ ಕಾಣತೊಡಗಿವೆ. ಇಂತಹ ಅತಿ ದೊಡ್ಡ ಸೂಚನೆಯೆಂದರೆ ಅದು ಭಾರತದ ಚರಿತ್ರೆಯನ್ನು ಪುನಾರಚನೆ ಮಾಡಲು ಹೊರಟಿರುವ ಮಹಾ ಕಾರ್ಯಕ್ರಮ.

ಇಂತಹ ಪ್ರಯತ್ನವೊಂದು ಹಿಂದಿನ ಎನ್.ಡಿ.ಎ. ಸರ್ಕಾರದ ಕಾಲದಲ್ಲೇ ಶಾಲಾ ಕಾಲೇಜುಗಳ ಪಠ್ಯ ಮತ್ತು ಪಠ್ಯಕ್ರಮಗಳಲ್ಲಿ ಮತೀಯ ನೆಲೆಯ ಬದಲಾವಣೆಗಳನ್ನು ಮಾಡುವ ಪ್ರಯತ್ನಗಳು ಆರಂಭವಾಗಿದ್ದವು. ಆದರೆ ಅದು ಸಮ್ಮಿಶ್ರ ಸರ್ಕಾರವಾಗಿದ್ದುದರಿಂದ ಅದು ಪೂರ್ಣಗೊಳ್ಳಲಿಲ್ಲ. ಅದೀಗ ಒಂದು ಮಹಾ ಕಾರ್ಯಕ್ರಮವಾಗಿ, ಅಂದರೆ ಕಳೆದೊಂದು ಶತಮಾನದಲ್ಲಿ ಪುರೋಹಿತಶಾಹಿಯ ಪ್ರಭಾವದಿಂದ ಕಳಚಿಕೊಂಡು ನಾವು ಕಟ್ಟಿಕೊಂಡ ಚರಿತ್ರೆಯ ವಾಸ್ತುವನ್ನೇ ಕೆಡಹುವ ಕಾರ್ಯಕ್ರಮವಾಗಿ ರೂಪುಗೊಳ್ಳುತ್ತಿದೆ. ಇದು ಜನತೆ ನಡೆಸಿದ ರಾಷ್ಟ್ರೀಯ ಆಂದೋಲನ ಕಟ್ಟಿಕೊಟ್ಟ ಆದರ್ಶ-ಆಶಯಗಳನ್ನೇ ಅನುಮಾನಾಸ್ಪದಗೊಳಿಸಿ ನಾಶ ಮಾಡುವ ರಾಜಕೀಯ ಪಿತೂರಿಯೇ ಆಗಿದೆ. ಗಾಂಧಿ-ಗೋಖಲೆ-ವಿವೇಕನಂದ-ಟ್ಯಾಗೋರ್-ಅಂಬೇಡ್ಕರ್-ಲೋಹಿಯಾ-ಜೆಪಿ-ಕುವೆಂಪು ಪೋಷಿಸಿದ ಮೌಲ್ಯಗಳನ್ನು ಆಧರಿಸಿದ ಆಲೋಚನಾ ಲಹರಿಯನ್ನು ಕತ್ತರಿಸಿ ಹಾಕುವ ಕಾರ್ಯಕ್ರಮವಿದು. ಇದು ಈಗಾಗಲೇ ಗುಜರಾತ್‌ನ ಪಠ್ಯಕ್ರಮದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರುವ ಪ್ರಯತ್ನ ನಡೆದಿದೆ. ಇದನ್ನು ಬಿಜೆಪಿಯ ಈಗಿನ ಮಿತ್ರ ಪಕ್ಷಗಳಾದ ಶಿವಸೇನೆ, ಅಕಾಲಿದಳ, ತೆಲುಗುದೇಶಂ, ಎಲ್.ಜೆ.ಪಿ. ಮುಂತಾದವಕ್ಕೆ ಗಂಭೀರವಾಗಿ ಪರಿಗಣಿಸುವ ಒಲವಾಗಲೀ, ಪ್ರಬುದ್ಧತೆಯಾಗಲಿ, ತಾಕತ್ತಾಗಲೀ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ರಾಜಕೀಯ ಅನುಕೂಲ ಪರಿಸ್ಥಿತಿಯಾಗಲೀ ಇಲ್ಲ ಎಂಬುದೂ ಇಲ್ಲಿ ಮುಖ್ಯ.

ನಿಜ, ಎಡಪಂಥೀಯರೆನಿಸಿಕೊಂಡವರೂ ಪ್ರಗತಿಪರತೆ, ಜನಪರತೆಯ ಹೆಸರಿನಲ್ಲಿ ಕಳೆದೊಂದು ಶತಮಾನದಲ್ಲಿ ತಮ್ಮ ಆಟ ಆಡಿದ್ದಾರೆ. ಇತಿಹಾಸವನ್ನು ತಮ್ಮ ಸೈದ್ಧಾಂತಿಕ ಆದ್ಯತೆಗಳ ಪ್ರಕಾರ ಪ್ರಸ್ತುತಪಡಿಸುವ ಪ್ರಯತ್ನ ಮಾಡಿ ಅನೇಕ ಅನಾಹುತಗಳಿಗೂ ಕಾರಣರಾಗಿದ್ದಾರೆ. ಭಾರತದ ಆಧುನಿಕ ಇತಿಹಾಸದಲ್ಲಿ ಗಾಂಧಿ ಚಿತ್ರ ಹಿನ್ನೆಲೆಗೆ ಸರಿಯುವಂತಾಗಿದ್ದು ಇದಕ್ಕೊಂದು ಉದಾಹರಣೆ. ಹಾಗೇ ನೋಡಿದರೆ ಇಂತಹ ಅನಾಹುತಗಳ ಸಂಚಯಿತ ರೂಪವಾಗಿಯೇ ಇಂದು ನಾವು ಮೋದಿ ಸರ್ಕಾರವನ್ನು, ಆರೆಸ್ಸೆಸ್‌ನ ರಾಜಕಾರಣದ ಮೇಲಾಟವನ್ನು ಕಾಣಬೇಕಾಗಿರುವುದು. ಇದರಲ್ಲಿ ಅತಿ ದೊಡ್ಡ ಪಾತ್ರ ವಹಿಸಿರುವುದು ಕಾಂಗ್ರೆಸ್ಸಿನ ಆತ್ಮದ್ರೋಹಿ ರಾಜಕಾರಣವೇ. ಈ ಪಾಪದ ಫಲವಾಗಿಯೇ ಅದು ಈಗ ವಿರೋಧ ಪಕ್ಷದ ಅಧಿಕೃತ ಸ್ಥಾನಮಾನಕ್ಕೂ ಕಂಡಕಂಡವರನ್ನು

ಕಾಡಿಬೇಡುವ ದುಃಸ್ಥಿತಿಗೆ ಈಡಾಗಿದೆ. ಅದೇನೇ ಇರಲಿ, ಎಡಪಂಥೀಯರು ಎಂದೂ ಹಿಂದೂ ಪುರೋಹಿತಶಾಹಿಯೊಂದಿಗೆ ರಾಜಿ ಮಾಡಿಕೊಂಡಿಲ್ಲ. ಅವರ ಲೋಪವೇನಿದ್ದರೂ, ಹಿಂದೂ ಪುರೋಹಿತಶಾಹಿಯನ್ನೆದುರಿಸುವ ಆವೇಶದಲ್ಲಿ ಇತರೆ ಪುರೋಹಿತಶಾಹಿಗಳ (ಆಧುನಿಕತೆಯ ರೂಪದ ಕ್ರಿಶ್ಚಿಯನ್ ಪುರೋಹಿತಶಾಹಿಯೂ ಸೇರಿದಂತೆ) ಅಪಾಯಗಳನ್ನು ಗಮನಿಸಲಿಲ್ಲ ಎಂಬುದು.

ಈ ಎಲ್ಲ ಆತ್ಮದ್ರೋಹ ಮತ್ತು ಎಚ್ಚರದಪ್ಪಿದ ರಾಜಕಾರಣದ ಪ್ರಾಯಶ್ಚಿತ್ತವಾಗಿಯಾದರೂ ಈ ಎಲ್ಲರೂ, ಎಡ–ಬಲಗಳೆಂಬ ತಾತ್ವಿಕ ಅಹಂಕಾರ ರೂಪಗಳನ್ನು ತೊರೆದು, ಮೋದಿ ಸರ್ಕಾರದ ಹಿಂದೂ ಪುರೋಹಿತಶಾಹಿ ರಾಜಕಾರಣವನ್ನು ಎದುರಿಸಲು ಒಗ್ಗಟ್ಟಾಗಬೇಕಿದೆ. ಏಕೆಂದರೆ ಇದು ಮೋದಿಯವರ ಅಭಿವೃದ್ಧಿ ಮಾದರಿ ಪ್ರತಿನಿಧಿಸುವ ರಾಜಕಾರಣಕ್ಕಿಂತ ಮೂಲಭೂತವಾಗಿ ಹೆಚ್ಚು ಅಪಾಯಕಾರಿಯಾದ ರಾಜಕಾರಣ. ಇದನ್ನು ಎದುರಿಸಲು ನಾವು ಮೋದಿಯವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಹಂತವೂ ಬರಬಹುದೆಂಬ ಕಾರಣದಿಂದಲೇ ನಾನು ಎಡ–ಬಲಗಳ ತಾತ್ವಿಕ ಅಹಂಕಾರ ಬೇಡವೆಂದದ್ದು. ಈ ಸೂಕ್ಷ್ಮವನ್ನು ಎಡಪಂಥೀಯರು ಈಗಲೂ ಅರ್ಥ ಮಾಡಿಕೊಳ್ಳದಿದ್ದರೆ, ಅವರ ರಾಜಕಾರಣದ ಶಕ್ತಿಯೆಲ್ಲ ಬೀದಿಗಳಲ್ಲಿ ಮೋದಿ ವಿರುದ್ಧ ಅಸಂಬದ್ಧವಾಗಿ ಅರಚುವುದರಲ್ಲೇ ಕಳೆದುಹೋಗಬಹುದು. ಅಂದರೆ ಮತ್ತೆ ಅದೇ ರಾಜಕೀಯ ಸೈಕಲ್ ಹೊಡೆಯುವ ಕಾರ್ಯಕ್ರಮ. ಹಾಗಾಗಿ ಈಗಲಾದರೂ ಎಡಪಂಥೀಯರೆನಿಸಿಕೊಂಡವರು ತಮ್ಮ ರಾಜಕಾರಣಕ್ಕೆ ಆಳದ ತೀವ್ರತೆಯನ್ನೂ, ಪರಿಣಾಮಶೀಲತೆಯನ್ನೂ ಒದಗಿಸುವ ಸ್ವಲ್ಪ ದೂರದೃಷ್ಟಿಯ, ವ್ಯವಧಾನದ ಮತ್ತು ಸಂಯಮಶೀಲವಾದ ರಾಜಕಾರಣವನ್ನು ಆರಂಭಿಸಬೇಕಿದೆ. ಅದರ ಮುಖ್ಯ ದೃಷ್ಟಿ ಕೇಂದ್ರ ನಮ್ಮ ರಾಷ್ಟ್ರೀಯ ಆಂದೋಲನ ಎರಕ ಮಾಡಿಕೊಟ್ಟ ಮೌಲ್ಯಗಳನ್ನು ಸಂರಕ್ಷಿಸಿಕೊಳ್ಳುವುದೇ ಆಗಿದೆ.

ಇನ್ನು ನಮ್ಮ ಮುಖ್ಯಮಂತ್ರಿ ಹೊಸ ಬುದ್ಧಿ ಪಡೆದುಕೊಂಡಂತೆ ಇತ್ತೀಚೆಗೆ ಎರಡು ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಒಂದು, ಕೆ.ಪಿ.ಎಸ್.ಸಿ.ಯ ೨೦೧೧ರ ಕೆ.ಎ.ಎಸ್. ಅಧಿಕಾರಿಗಳ ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಿರುವುದು. ಇನ್ನೊಂದು ಪ್ರಧಾನಿ ಮೋದಿಯವ ಸರ್ಕಾರಿ ಸಮಾರಂಭಗಳಿಗೆ ಕಾಂಗ್ರೆಸ್ ಮುಖ್ಯಮಂತ್ರಿಗಳು ಹೋಗಬಾರದೆಂಬ ಪಕ್ಷದ ಸೂಚನೆಯನ್ನು ಒಪ್ಪಲಾರೆ ಎಂದಿರುವುದು. ಬಹುಶಃ ಇದನ್ನು ಮಾನ್ಯ ಮಾಡಿಯೇ ಮೊನ್ನೆಯ ಉಪಚುನಾವಣೆಗಳಲ್ಲಿ ಜನತೆ ಸಿದ್ಧರಾಮಯ್ಯನವರ ನಾಯಕತ್ವವನ್ನು ಬೆಂಬಲಿಸಿದಂತಿದೆ. ಸಿದ್ಧರಾಮಯ್ಯ ಮೇಲೆ ವಿವರಿಸಿದಂತಹ ತುರ್ತು ರಾಷ್ಟ್ರೀಯ ರಾಜಕಾರಣದ ದೃಷ್ಟಿಯಿಂದಲಾದರೂ ತುಕ್ಕು ಹಿಡಿದ ತಮ್ಮ ಸಾಮಾಜಿಕ ನ್ಯಾಯವೇ ಎಲ್ಲ ಪ್ರಗತಿಪರ ರಾಜಕಾರಣದ ಆಧಾರ ಎಂಬ ಭ್ರಮೆಯಿಂದ ಹೊರಬಂದು ನಿಜವಾದ ಜನತೆಯ ರಾಜಕಾರಣ ಮಾಡುವಂತಾಗಲಿ ಎಂದು ಈ ನಿರ್ಣಾಯಕ ಸಂದರ್ಭದಲ್ಲಿ ಹಾರೈಸುವೆ.

ಇನ್ನು ನಮ್ಮ ವಿಶೇಷಾಂಕಕ್ಕೆ ನಮ್ಮ ಓದುಗರಿಂದ ತುಂಬು ಹೃದಯದ ಸ್ವಾಗತ ದೊರಕಿದೆ. ನಮ್ಮ ಪರಿಶ್ರಮ ಸಾರ್ಥಕ ಎನ್ನಿಸಿದೆ. ಅವರೆಲ್ಲರ ಪ್ರತಿಕ್ರಿಯೆ-ಪತ್ರಗಳನ್ನು, ಈ ಸಂಚಿಕೆಯನ್ನು ೨೪ ಪುಟಗಳಿಗೆ ವಿಸ್ತರಿಸಿದ್ದರೂ (ಇದು ಮುಂದೆ ನಿಯಮಿತ ಪುಟ ಸಂಖ್ಯೆಯಾಗೇನೂ ಇರುವುದಿಲ್ಲ ಎಂಬುದು ಬೇರೆ ವಿಷಯ) ಪ್ರಕಟಿಸಲು ಸಾಧ್ಯವಾಗುತ್ತಿಲ್ಲ. ಜೊತೆಗೆ, ವಿಶೇಷಾಂಕ ನಮ್ಮ ಓದುಗರಿಗೆ ತಲುಪಿ ಬಹಳ ದಿನಗಳೇನೂ ಆಗಿಲ್ಲವಾದ್ದರಿಂದ, ಇನ್ನೂ ಪತ್ರಗಳು ಬರುತ್ತಿದ್ದು ಅವನ್ನೆಲ್ಲ ಒಟ್ಟಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಪ್ರಯತ್ನಮಾಡಲಾಗುವುದು. ಸದ್ಯಕ್ಕೆ ಬಂದಿರುವ ಕೆಲ ಪತ್ರಗಳನ್ನಷ್ಟೇ ಐದನೇ ಪುಟದಲ್ಲಿ ಪ್ರಕಟಿಸಲಾಗಿದೆ.

ಈ ಮಧ್ಯೆ ವಿಶೇಷಾಂಕದಲ್ಲಿ ಪ್ರಕಟವಾಗಿರುವ ಗಿರೀಶ್ ಕಾಸರವಳ್ಳಿಯವರೊಡನೆಯ ಪ್ರಶ್ನೋತ್ತರದಲ್ಲಿ ಡಬ್ಬಿಂಗ್ ಕುರಿತ ಅವರ ನಿಲುವಿನ ಬಗ್ಗೆ ನಾನು ಕೇಳಿದ್ದ ಉಪ ಪ್ರಶ್ನೆಗೆ ಅವರೀಗ ಉತ್ತರ ಬರೆದು ಕಳಿಸಿದ್ದಾರೆ. ನನ್ನ ಉಪ ಪ್ರಶ್ನೆಗೆ, ತಾವು ಅಡೂರು ಗೋಪಾಲಕೃಷ್ಣನ್ ಕುರಿತ ಸಾಕ್ಷ್ಯ ಚಿತ್ರದ ಚಿತ್ರೀಕರಣದಲ್ಲಿ ತೊಡಗಿದ್ದರಿಂದಾಗಿ ಮತ್ತು ತಮ್ಮ ಬರವಣಿಗೆಯ ವೇಗ ತುಂಬಾ ಕಡಿಮೆ ಇರುವುದರಿಂದಾಗಿಯೂ ತಕ್ಷಣ ಉತ್ತರ ಕೊಡಲಾಗಲಿಲ್ಲವೆಂದೂ ಹೇಳಿದ್ದಾರೆ. ಅವರ ಈ ಸೌಜನ್ಯಕ್ಕೆ ಪತ್ರಿಕೆ ಋಣಿಯಾಗಿದೆ. ಅವರು ತಮ್ಮ ಈ ಉತ್ತರದೊಂದಿಗೆ ಡಬ್ಬಿಂಗ್ ಕುರಿತಂತೆ ಚಿತ್ರೋದ್ಯಮದ ಸಹಮನಸ್ಕರೊಂದಿಗೆ ನೀಡಿದ್ದ ಪತ್ರಿಕಾ ಪ್ರಕಟಣೆಗಳನ್ನು ಕಳಿಸಿರುವರಾದರೂ, ಅದು ದೀರ್ಘವಾಗಿರುವುದರಿಂದ ಅವರ ಉತ್ತರವನ್ನು ಸಂಕ್ಷಿಪ್ತಗೊಳಿಸಿ ಇಲ್ಲಿ ನೀಡುತ್ತಿರುವೆ:

೧. ಕನ್ನಡ ಚಿತ್ರೋದ್ಯಮ ಹಿಂದಿನ ದಿನಗಳಿಗೆ ಹೋಲಿಸಿದರೆ, ಬಂಡವಾಳ ಹೂಡಿಕೆಯ ವಿಷಯದಲ್ಲಿ ಸಾಕಷ್ಟು ಬೆಳೆದಿದೆಯಾದರೂ, ಅದೇ ಅವಧಿಯಲ್ಲಿ ಅದು ಸ್ಪರ್ಧಿಸಬೇಕಾದ ತಮಿಳು-ತೆಲುಗು-ಹಿಂದಿ ಚಿತ್ರೋದ್ಯಮವೂ ಅದಕ್ಕಿಂತ ಹೆಚ್ಚು ಗಾತ್ರದಲ್ಲಿ ಬೆಳೆದಿದೆ. ಜೊತೆಗೆ ಈಗ ಪ್ರಚಾರಕ್ಕೆ ಪ್ರಾಮುಖ್ಯ ದೊರೆತಿರುವುದರಿಂದ ಕನ್ನಡ ಚಿತ್ರಗಳಿಗೆ ಪ್ರಚಾರ ಅವಕಾಶಗಳು-ಕನ್ನಡ ಮಾಧ್ಯಮಗಳ ಸೀಮಿತತೆಯಿಂದಾಗಿ-ಕಡಿಮೆ ಮತ್ತು ಅವುಗಳ ಪ್ರಚಾರ ಬಜೆಟ್ ಕೂಡ ಕಡಿಮೆ.

೨. ಇಂದಿನ ಟಿ.ವಿ. ಧಾರಾವಾಹಿಗಳನ್ನು ಗಮನಿಸಿದರೇ ಗೊತ್ತಾಗುತ್ತದೆ, ರಿಮೇಕ್ ಧಾರಾವಾಹಿಗಳು ಮೂಲ ಕನ್ನಡ ಕಥಾಧಾರಿತ ಧಾರವಾಹಿಗಳನ್ನು ನುಂಗಿ ಹಾಕುತ್ತಿವೆ ಎಂಬುದು.

ಕಾಸರವಳ್ಳಿಯವರ ಈ ಮಾತುಗಳಿಗೆ ನನ್ನದೇನೂ ಪ್ರತಿಕ್ರಿಯೆ ಇಲ್ಲ. ಒಂದು ಮಾತಿನ ಹೊರತಾಗಿ: ತೆಲುಗು-ತಮಿಳು ಚಿತ್ರೋದ್ಯಮಗಳೂ ತನಗಿಂತ ದೊಡ್ಡದಾದ ಚಿತ್ರೋದ್ಯಮಗಳೊಂದಿಗೆ ಸ್ಪರ್ಧೆಯಲ್ಲಿದ್ದೂ ಡಬ್ಬಿಂಗ್‌ನ್ನು ವಿರೋಧಿಸದೇ ಬದುಕುತ್ತಿರುವಾಗ ಕನ್ನಡ ಚಿತ್ರೋದ್ಯಮವೇಕೆ ತನ್ನ ಆತಂಕಗಳಿಗೆ ಈ ವಿರೋಧದ ಹೊರತಾಗಿ ಬೇರೆ ಪರಿಹಾರ ಮಾರ್ಗಗಳನ್ನು ಹುಡುಕಿಕೊಳ್ಳುತ್ತಿಲ್ಲ?

ಇನ್ನು ಕೊನೆಯದಾಗಿ: ಕರ್ನಾಟಕದಲ್ಲಿನ ಭೂಹೋರಾಟಗಳ ಪಿತಾಮಹ ಮತ್ತು ಕಾಗೋಡು ಸತ್ಯಾಗ್ರಹದ ರೂವಾರಿ ಎಂದೇ ಪ್ರಸಿದ್ಧರಾದ ಎಚ್. ಗಣಪತಿಯಪ್ಪ ಅವರಿಗೆ ಈಗ ತೊಂಬತ್ತು ವರ್ಷ.. ಈ ಸಂದರ್ಭದಲ್ಲಿ ಅವರಿಗೆ 'ಹೊಸ ಮನುಷ್ಯ' ಪತ್ರಿಕೆ ಹಾರ್ದಿಕ ಶುಭಾಶಯಗಳನ್ನು ಕೋರುತ್ತದೆ.

ಈಗ ಅವರು ತೀವ್ರ ಅಸ್ವಸ್ಥರಾಗಿ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅವರು ಬೇಗ ಚೇತರಿಸಿಕೊಂಡು ನಮ್ಮೊಡನೆ ಇನ್ನಷ್ಟು ಕಾಲ ಬಾಳಲಿ ಎಂದೂ ಪತ್ರಿಕೆ ಹಾರೈಸುತ್ತದೆ.**–ಸಂ.**

ಸಮಕಾಲೀನ

ಇದು ಲೈಂಗಿಕ ಅತ್ಯಾಚಾರಗಳ ಕಾಲವೇ?

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಮನಸ್ಸನ್ನು ಆಕ್ರಮಿಸಿಕೊಂಡಿರುವ ಒಂದು ದೊಡ್ಡ ಸುದ್ದಿ ಎಂದರೆ 'ಲೈಂಗಿಕ ಅತ್ಯಾಚಾರ'. ಇದನ್ನು ನಾನು ಬೇಕೆಂದೇ 'ಸುದ್ದಿ' ಎಂದು ಕರೆದಿದ್ದೇನೆ. ಏಕೆಂದರೆ ಒಂದು ಅತ್ಯಾಚಾರದ ಸುದ್ದಿ ಪ್ರಕಟವಾಗುತ್ತಿದ್ದಂತೆ ಅದರ ಹಿಂದೆ ಒಮ್ಮೆಗೇ ಹತ್ತಾರು ಅತ್ಯಾಚಾರಗಳ ಸುದ್ದಿ ಪ್ರಕಟವಾಗುತ್ತಿದ್ದು, ದೇಶದಲ್ಲಿ ನಿಜವಾಗಿಯೂ ಈ ಅತ್ಯಾಚಾರಗಳು ನಮ್ಮ ಮಾಧ್ಯಮಗಳು ಬಿಂಬಿಸುತ್ತಿರುವ ಹಾಗೆ ಹೆಚ್ಚುತ್ತಿವೆಯೇ ಎಂಬ ಸಂದೇಹ ಹಲವರಲ್ಲಿ ಉಂಟಾಗಿದೆ. ಮತ್ತೆ ನಾನು 'ಮಾಧ್ಯಮಗಳು ಬಿಂಬಿಸುತ್ತಿರುವ ಹಾಗೆ' ಅಂದೆ. ಅಂದರೆ, ಈ ಬಿಂಬವನ್ನು ಸೃಷ್ಟಿಸಿರುವ ವಾಸ್ತವವನ್ನು ಪೂರ್ಣವಾಗಿ ಗ್ರಹಿಸಬೇಕಾಗಿದೆ ಎಂದಷ್ಟೇ ನಾನು ಹೇಳುತ್ತಿರುವುದು. ಏಕೆಂದರೆ ಈ ವಿಷಯದಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲಿ ಅನಗತ್ಯ ಆವೇಶ, ಆವೇಗ ಮತ್ತು ಆಕ್ರಮಣಗಳೇ ಹೆಚ್ಚಾಗಿ ಕಾಣುತ್ತಿದ್ದು ಪರಿಹಾರದ ಮಾರ್ಗಗಳು ದಾರಿ ತಪ್ಪಿದಂತಿವೆ.

ಈ ಸಂಬಂಧವಾಗಿ ಮೊದಲಿಗೇ ನಾವು ಗಮನಿಸಬೇಕಾದ ಸಂಗತಿಗಳು: ಇತ್ತೀಚಿನ ಅತ್ಯಾಚಾರಗಳ ಪ್ರಕರಣದಲ್ಲೇ ಭೀಕರವೆನಿಸಿ ಅತ್ಯಾಚಾರಗಳ ಬಗ್ಗೆ ವ್ಯಾಪಕ ಚರ್ಚೆಗೆ ಕಾರಣವಾಗಿದ್ದ ಒಂದೇ ಕುಟುಂಬದ ಮೂವರು ಬಾಲಕಿಯರ ಮೇಲೆ ಅತ್ಯಾಚಾರವೆಸಗಿ ಶವಗಳನ್ನು ಮರಕ್ಕೆ ನೇಣು ಹಾಕಲಾಗಿತ್ತೆಂದು ವರದಿಯಾಗಿದ್ದ ಪ್ರಕರಣದಲ್ಲಿ ಇದೀಗ ವೈದ್ಯಕೀಯ ವರದಿ, ಇದಕ್ಕೆ ಲೈಂಗಿಕತೆಯ ಆಯಾಮವಿದ್ದ ಯಾವ ಸಾಕ್ಷ್ಯಗಳೂ ಇಲ್ಲ ಎಂದು ಹೇಳಿದೆ. ಇನ್ನು ನಮ್ಮ ಬೆಂಗಳೂರು ಶಾಲೆಯಲ್ಲಿ ಮಗುವೊಂದರ ಮೇಲೆ ನಡೆಯಿತೆಂದು ವರದಿಯಾದ ಅತ್ಯಾಚಾರದ ಪ್ರಕರಣದ ಅಪರಾಧ ಮತ್ತು ಅಪರಾಧಿಯ ವಿವರಗಳು ದಿನದಿಂದ ದಿನಕ್ಕೆ ಬದಲಾಗುತ್ತಿವೆ. ಮೊನ್ನೆ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯ ಅತ್ಯಾಚಾರದ ಪ್ರಕರಣವೊಂದನ್ನು ಪರಸ್ಪರ ಸಮ್ಮತಿಯಲ್ಲಿ ನಡೆದ ಪ್ರಕರಣವೆಂದು ಹೇಳಿ ಅತ್ಯಾಚಾರದ ಆರೋಪವನ್ನು ತಿರಸ್ಕರಿಸಿದೆ.

ಹಾಗಾದರೆ ಅತ್ಯಾಚಾರಗಳ ವಿದ್ಯಮಾನ ಬರೀ ಮಾಧ್ಯಮಗಳ ಸೃಷ್ಟಿಯೇ? ಆದರೆ ಮಾಧ್ಯಮಗಳು ಹೀಗೆ ಒಟ್ಟಾಗಿ ತಂತಾನೇ ಏನನ್ನಾದರೂ ಸೃಷ್ಟಿಸಲಾರವು. ಅವು ಸಂಗತಿಗಳನ್ನು ತಂತಮ್ಮ ಮಾರುಕಟ್ಟೆ ಅಗತ್ಯಗಳಿಗೆ ತಕ್ಕಂತೆ ರೂಪಾಂತರಗೊಳಿಸಬಲ್ಲವಷ್ಟೆ ಹಾಗಾಗಿ ನಾವಿಂದು ಯೋಚನೆ ಮಾಡಬೇಕಾಗಿರುವುದು ಅತ್ಯಾಚಾರವೆಂಬ ಇವೊತ್ತಿನ ವಿದ್ಯಮಾನದ ಹಿಂದಿರುವ ಒಟ್ಟು ಮಾನಸಿಕತೆಯ ಬಗ್ಗೆ. ಏಕೆಂದರೆ ಅತ್ಯಾಚಾರಗಳು ಅದರ ಅಕ್ಷರಶಃ ಅರ್ಥದಲ್ಲಿ ಎಂದಿನಿಂದಲೂ ನಡೆಯುತ್ತಾ ಬಂದಿವೆ–ವಿವಾಹವೆಂಬುದು ಸಾಂಸ್ಥೀಕರಣಗೊಂಡು, ಅದಕ್ಕೆ 'ಪಾವಿತ್ರ್ಯ'ವೆಂಬುದೊಂದನ್ನು ಪ್ರದಾನ ಮಾಡಿದಾಗಿನಿಂದ. ಈ ಕಟು ವಾಸ್ತವದ ಅರಿವಿನಲ್ಲಿ ನೋಡಿದಾಗ, ಇವೊತ್ತು ಅತ್ಯಾಚಾರಗಳು ಎಂದು ಕರೆಸಿಕೊಳ್ಳುವ ಪ್ರಸಂಗಗಳ ವಿವರಣೆಗಳಲ್ಲಿಯೇ ಅತ್ಯಾಚಾರದ ಹೆಚ್ಚಳದ ಸತ್ಯಾಸತ್ಯತೆಯ ಮರ್ಮವೂ ಅಡಗಿರುವುದನ್ನು ಕಾಣಬಹುದಾಗಿದೆ.

ಸಮಾಜವು ಪ್ರಗತಿಯ ಹೆಸರಿನಲ್ಲಿ ಅತ್ಯಾಧುನಿಕಗೊಳ್ಳುತ್ತಿದ್ದಂತೆ, ಹಳೆಯ ಕಟ್ಟುಪಾಡುಗಳು ಬಂಧನಗಳು ಎಂಬ ಅರ್ಥ ಪಡೆದುಕೊಳ್ಳುತ್ತಿದೆ. ಪಾವಿತ್ರ್ಯಗಳೆಂಬುವು ಅರ್ಥ–ಹೀನವಾಗಿ ಕಾಣತೊಡಗುತ್ತಿವೆ. ಇವೆಲ್ಲವುಗಳ ಪರಿಣಾಮವಾಗಿ ಶೀಲ–ಅಶ್ಲೀಲಗಳ ಪರಿಕಲ್ಪನೆ ಕಾಲ–ದೇಶ ಸಾಪೇಕ್ಷತೆಗಳಿಗೆ ಸಿಕ್ಕಿ ಅಪ್ರಸ್ತುತವಾಗತೊಡಗಿವೆ. ಎಲ್ಲ ಸಂಬಂಧಗಳ ಸ್ವರೂಪವೂ ತಮ್ಮ ಆಧ್ಯಾತ್ಮಿಕತೆಯನ್ನು ಕಳೆದುಕೊಂಡು ದೇಹದ ಮಟ್ಟಕ್ಕೆ, ಆನಂತರ ಸಹಜವಾಗಿಯೇ ಬಳಕೆದಾರಿಕೆಯ (utilitarian) ಮಟ್ಟಕ್ಕೆ ಇಳಿಯುತ್ತಿದ್ದಂತೆ, ಮನುಷ್ಯನೊಳಗಿನ 'ಸುಖ'ದ ಅಗತ್ಯ ಕೇವಲ ಒಂದು ಭೌತಿಕ ಅಗತ್ಯ ಮಾತ್ರವಾಗಿ, ಅಂದರೆ ಆಧುನಿಕತೆ ಪರಿಭಾಷೆಯಲ್ಲಿ ಹೇಳುವುದಾದರೆ ಒಂದು ಹಕ್ಕಾಗಿ ಅಭಿವ್ಯಕ್ತಗೊಂಡು, ಮನುಷ್ಯ ತನಗೆ ಗೊತ್ತಿಲ್ಲದಂತೆಯೇ (ಪ್ರಜ್ಞಾಪೂರ್ವಕತೆಯನ್ನು ಕಳೆದುಕೊಂಡು; ಅಂದರೆ ಇಂತಹ ಹಕ್ಕಿನ ಉದಯ ಸೃಷ್ಟಿಸುವ ಜವಾಬ್ದಾರಿಯ ಮರೆವು) ಅವನು ಮಾಡುವ ಎಲ್ಲ ಕ್ರಿಯೆಗಳೂ ಅತ್ಯಾಚಾರಗಳ (ಅತಿಯಾದ ಆಚರಣೆ–ಕ್ರಿಯೆ ಎನ್ನುವ ಅರ್ಥದಲ್ಲಿ) ಚಹರೆಗಳನ್ನೇ ಪಡೆದುಕೊಳ್ಳತೊಡಗುತ್ತವೆ. ಆಧುನಿಕ ಕಾಲದ–ನಿರ್ದಿಷ್ಟವಾಗಿ ಹೇಳುವುದಾದರೆ ಜಾಗತೀಕರಣ ಕಾಲದ–ಹೆಮ್ಮೆಯ ಲಕ್ಷಣವಾದ ಮಿತಿ ಇಲ್ಲದ ಬಳಕೆದಾರಿಕೆಯ (ಗ್ರಾಹಕವಾದ) ಒಂದು ರೂಕ್ಷವಾದ ಮುಖವೇ ಈ ಲೈಂಗಿಕ ಅತ್ಯಾಚಾರ. ಇಂತಹ ಸಮಾಜ ಈ ಲಕ್ಷಣಗಳನ್ನು ಪ್ರಕಟಪಡಿಸುವುದೇ ತನ್ನ ಬಲಶಾಲಿ ಅಂಗದ ಮೂಲಕ. ಅಂದರೆ ಇಂದಿನ ಸಂದರ್ಭದಲ್ಲಿ ಗಂಡಿನ ಮೂಲಕ. ಆದರೆ ಇಂತಹ ಸಮಾಜವನ್ನು ನಿರ್ಮಿಸುವ ಕೆಲಸದಲ್ಲಿ ಹೆಣ್ಣೂ ವಿಭಿನ್ನ ಮತ್ತು ಸಕ್ರಿಯ ಪಾತ್ರ ವಹಿಸುವುದರಿಂದ ಅವಳು ಇದಕ್ಕೆ ಗಂಡನ್ನೇ ದೂಷಿಸುವುದು ತನ್ನ ಜವಾಬ್ದಾರಿಯನ್ನು ಮರೆಮಾಚಿಕೊಳ್ಳುವ ಕೆಲಸವೇ ಎನ್ನಿಸಿಕೊಳ್ಳುತ್ತದೆ. ಗಂಡು ಇಲ್ಲಿ ಮೊದಲ ಅಪರಾಧಿಯಾಗಿರಬಹುದು ಅಷ್ಟೆ. ಆದರೆ ಹೆಣ್ಣು ತನ್ನ ಎರಡನೇ ಅಪರಾಧಿ ಸ್ಥಾನವನ್ನು ನಿರಾಕರಿಸಲಾರಳಷ್ಟೆ.

ಹಾಗಾಗಿ ಇಂದಿನ ಅತ್ಯಾಚಾರದ ವಿದ್ಯಮಾನವನ್ನು ಕೇವಲ ಗಂಡು-ಹೆಣ್ಣಿನ ಲೈಂಗಿಕ ಸಂಬಂಧದ ಪ್ರಶ್ನೆಯಾಗಿ ಮಾತ್ರ ನೋಡುವುದು, ಸಮಾಜವಾಗಿ ನಮ್ಮನ್ನು ನಾವೇ ಮೋಸಗೊಳಿಸಿಕೊಳ್ಳುವ ಕೆಲಸವಾಗುತ್ತದೆ. ಇದಕ್ಕೆ ಪರಿಹಾರ ಹುಡುಕುವ ಕೆಲಸದಲ್ಲಿ ಇದು ಕೆಲ ಕುರುಡುಗಳನ್ನು ಮಾತ್ರ ಸೃಷ್ಟಿಸಬಲ್ಲುದು. ಇಂದು ಚರ್ಚಿಸಲಾಗುತ್ತಿರುವ ಕಾನೂನುಗಳನ್ನು ಹೆಚ್ಚಾಗಿ ಹೆಣ್ಣಿನ ಪರ ತಿದ್ದುವುದು, ಗೂಂಡಾ ಕಾಯಿದೆ ಬಳಕೆ, ಎಲ್ಲೆಡೆ ಸಿ.ಸಿ. ಟಿವಿ ಅಳವಡಿಕೆ ಇತ್ಯಾದಿ ಕ್ರಮಗಳೆಲ್ಲ ಹೆಚ್ಚೆಂದರೆ ತತ್ಕಾಲೀನವಾಗಿ ಗಂಡನ್ನು ಬೆದರಿಸಿ ಸಮಾಜಕ್ಕೆ ಮಾರಕವಾಗುವ ಹಾಗೆ ಅವನ ಕಸುವನ್ನು ಕುಗ್ಗಿಸುವ ಕ್ರಮಗಳಾದಾವೇ ಹೊರತು ಪರಿಹಾರವಾಗಲಾರವು. ಇಲ್ಲದಿದ್ದಲ್ಲಿ, ಮೂರು ವರ್ಷಗಳ ಹಸುಳೆಯ ಮೇಲೆ, ಎಂಬತ್ತು ವರ್ಷಗಳ ಮುದುಕಿಯ ಮೇಲೆ ನಡೆಯಲಾರಂಭಿಸಿರುವ 'ಲೈಂಗಿಕ' ಅತ್ಯಾಚಾರಗಳನ್ನು ವಿವರಿಸುವುದಾದರೂ ಹೇಗೆ?

ಹಾಗಾಗಿ ಇಂತಹ ಕೇವಲ ಹೆಣ್ಣುಪರವಾದ ತತ್ಕಾಲೀನ ಕ್ರಮಗಳು ಮನುಷ್ಯ ಲೋಕದಲ್ಲಿನ ಗಂಡು-ಹೆಣ್ಣೆಂಬ ಎರಡು ಪ್ರಬೇಧಗಳ ನಡುವಿರುವ ನೈಸರ್ಗಿಕ ಸಂಬಂಧದ ಹದ, ಮಾರ್ದವತೆ ಮತ್ತು ಕಟುಮಧುರವಾದ ಕರ್ಷಣಾನುಭವಗಳಿಗೇ ಧಕ್ಕೆ ತಂದು ಅದರ ಸಮತೋಲನವನ್ನು ಹಾಳುಗೆಡಹಬಲ್ಲುವಷ್ಟೆ. ಇದರ ದೂರಗಾಮಿ ಪರಿಣಾಮ ತುಂಬ ನಿರ್ಣಾಯಕವಾದದ್ದು: ಮನುಷ್ಯ ಲೋಕದ ಸೌಂದರ್ಯಾನುಭೂತಿ ಮತ್ತು ಅದರಿಂದ ಹುಟ್ಟುವ ಅವನ/ಳ ಕ್ರಿಯಾಶೀಲತೆಯ ಮೂಲ ಸೆಲೆಗಳೇ ಬತ್ತಿಹೋಗಿ ಮನುಷ್ಯ ಬದುಕಿನ ಸಾರ್ಥಕತೆಯೇ ಪ್ರಶ್ನಾರ್ಹವಾದೀತು! ಇಂದಿನ ಆರ್ಥಿಕ ಜಾಗತೀಕರಣದ ತಾರ್ಕಿಕ ಅಂತ್ಯದ ಸುಳಿವನ್ನೂ ನಾವು ಇಂತಹ ಸಾಧ್ಯ ಪರಿಣಾಮಗಳಲ್ಲೇ ಕಾಣಬಹುದೇನೋ.

ಅದೇನೇ ಇರಲಿ, ಇದೂ ಈ ಸಮಸ್ಯೆಯ ಪರಿಹಾರಕ್ಕೆ ಬೇಕಿರುವುದು ಹೆಣ್ಣು-ಗಂಡೆಂಬ ಪರಿಗಣನೆಯಿಲ್ಲದ ಒಂದು ಸಾಮಾಜಿಕ ಪರಿಹಾರ. ಅಂದರೆ ಇಂದಿನ ಅತ್ಯಾಚಾರಗಳ ವಿದ್ಯಮಾನವನ್ನು ಒಂದು ರೋಗ ಲಕ್ಷಣವೆಂದು ಮಾತ್ರ ಗುರುತಿಸಿ ಮೂಲ ರೋಗಕ್ಕೆ ಮದ್ದು ಅರೆಯುವ ಕೆಲಸ ಆರಂಭವಾಗಬೇಕಿದೆ. ಖ್ಯಾತ ಚಿಂತಕಿ ವಂದನಾ ಶಿವ ಅವರು ಇದನ್ನು ಹೆಣ್ಣು-ಗಂಡು ಕೂಡಿ ತಮ್ಮ ಮಿತಿಯಿಲ್ಲದ ಸುಖಕ್ಕಾಗಿ ಭೂಮಿಯ ಮೇಲೆ ನಡೆಸಲಾರಂಭಿಸಿರುವ ಅತ್ಯಾಚಾರ ಎಂದು ವಿಶ್ಲೇಷಿಸಿದ್ದರು. ಬಹುಶಃ ಇದಕ್ಕೆ ಪರಿಹಾರದ ಚಿಂತನೆ ಇಲ್ಲಿಂದಲೇ ಆರಂಭವಾಗಬೇಕೆಂದು ಕಾಣುತ್ತದೆ.

-ಇದು ಒಂದು ನೋಟ ಮಾತ್ರ. ಮುಂದಿನ ಪುಟಗಳಲ್ಲಿ ನಮ್ಮ ಓದುಗರ ಬೇರೆ ಬೇರೆ ನೋಟಗಳಿವೆ. ಇದರಲ್ಲಿ ಎರಡು ಗಂಡು ನೋಟಗಳೂ ಇವೆ. ಇವುಗಳ ನಡುವಣ ಸಾದೃಶ್ಯವನ್ನೂ ಗಮನಿಸಿ. ಬರೆಯಿರಿ.-ಸಂ.

ಅಕ್ಟೋಬರ್, ೨೦೧೪

ನಿಧಾನವಾಗಿ ಬಿಚ್ಚಿಕೊಳ್ಳುತ್ತಿರುವ ಮೋದಿತ್ವ...

ಪ್ರಿಯ ಓದುಗರೇ,

ನಮ್ಮ ಪತ್ರಿಕೆ ಪ್ರಧಾನಿ ನರೇಂದ್ರ ಮೋದಿಯವರನ್ನು ಕುರಿತು ಪೂರ್ವ ನಿಶ್ಚಿತ ಅಭಿಪ್ರಾಯಗಳನ್ನು ಹೊಂದಿ ಬರೆಯುತ್ತಿರುವಂತಿದೆ ಎಂಬ ಅಭಿಪ್ರಾಯವನ್ನು ಕೆಲವು ಓದುಗರು ವ್ಯಕ್ತಪಡಿಸಿದ್ದಾರೆ. ಸಮಾಜವಾದದಲ್ಲಿ ನಂಬಿಕೆ ಇರುವ ಪತ್ರಿಕೆಯೊಂದಕ್ಕೆ ಮೋದಿಯವರ ಬಗ್ಗೆ ಕೆಲವು ಪೂರ್ವನಿಶ್ಚಿತ ಅಭಿಪ್ರಾಯಗಳಿರಲು ಅವರ ರಾಜಕೀಯ ಚರಿತ್ರೆಯಲ್ಲೇ ಕಾರಣಗಳಿದ್ದಂತಿವೆ. ಅವರ ಆಡಳಿತ ಶೈಲಿ ಮತ್ತು ಅಭಿವೃದ್ಧಿ ಮಾದರಿಗಳ ಬಗ್ಗೆ ನಮ್ಮ ಭಿನ್ನಾಭಿಪ್ರಾಯಗಳನ್ನು ಈಗಾಗಲೇ ಹಿಂದಿನ ಸಂಚಿಕೆಗಳಲ್ಲಿ ವಿವರಿಸಲಾಗಿದೆ. ನಿಷ್ಕಾರಣವಾಗಿ ಅಥವಾ ಟೀಕಿಸಲೆಂದೇ ಮೋದಿಯವರನ್ನು ಟೀಕಿಸಿದ್ದರೆ ಅದನ್ನು ಈ ಓದುಗರು ವಿವರಿಸಿ ಆಕ್ಷೇಪಿಸುವ ಎಲ್ಲ ಹಕ್ಕುಗಳನ್ನೂ ಹೊಂದಿದ್ದಾರೆ. ಹಾಗೆ ನೋಡಿದರೆ, ಪತ್ರಿಕೆ ಮನಮೋಹನ ಸಿಂಗ್ ಮತ್ತು ಸಿದ್ಧರಾಮಯ್ಯನವರ ಆಡಳಿತ ದೋಷಗಳ ಬಗ್ಗೆಯೂ ವಿಫುಲವಾಗಿ ಬರೆದಿದೆ. ಇರಲಿ, ಮೋದಿ ಅಭಿಮಾನಿಗಳ ಸಂತೋಷಕ್ಕಾಗಿ ಬರೆಯಲು ಈ ಬಾರಿ ಎರಡು ಅವಕಾಶಗಳು ಉಂಟಾಗಿವೆ.

ಒಂದು, ಈ ಹಿಂದೆಯೇ ಬರೆದಿದ್ದಂತೆ, ಮೋದಿ ಇಂಗ್ಲಿಷ್ ಮಾತನಾಡಲಾಗದ ಮತ್ತು ಬಹುಶಃ ಮಾತನಾಡಲಿಚ್ಛಿಸದ ಮೊದಲ ಪ್ರಧಾನಿ. ಈ ಸಂಬಂಧದ ಅವರ ಯಶಸ್ಸು ಭಾರತೀಯ ಭಾಷೆಗಳ ಯಶಸ್ಸೇ ಆಗಿದೆ. ಈ ದೃಷ್ಟಿಯಿಂದ ಈವರೆಗಿನ ಮೋದಿಯವರ ಸಾಧನೆ–ವಿಶೇಷವಾಗಿ ಅಂತಾರಾಷ್ಟ್ರೀಯ ವ್ಯವಹಾರಗಳ ವೇದಿಕೆಗಳಲ್ಲಿ–ಇಂಗ್ಲಿಷ್ ಇಲ್ಲದೆ ಅಂತಾರಾಷ್ಟ್ರೀಯ ವ್ಯವಹಾರಗಳನ್ನು ನಡೆಸಲಾಗದು ಎಂದು ನಂಬಿದ್ದ ಮತ್ತು ದೇಶವನ್ನೂ ನಂಬಿಸಿಬಿಟ್ಟಿದ್ದ ಇಂಗ್ಲಿಷ್‌ವಾದಿಗಳ ಮೌಢ್ಯಕ್ಕೆ ಛೀಮಾರಿ ಹಾಕಿದೆ. ಹಾಗೂ ಇಂಗ್ಲಿಷ್ ಭಾಷೆಯ ಸುತ್ತ ಅದರ ಗುಲಾಮರು ರೂಪಿಸಿದ್ದ 'ಮಿಥ್ಯೆ'ಯನ್ನು ಬಯಲುಗೊಳಿಸಿದ್ದಕ್ಕಾಗಿ ಮೋದಿಯವರಿಗೆ ದೊಡ್ಡ ವಂದನೆಗಳು.

ಎರಡು: ಇತ್ತೀಚಿನ ವರ್ಷಗಳಲ್ಲಿ ಮಿತಿ ಮೀರಿ ಬೆಳೆದು ರಾಜಕಾರಣಿಗಳಿಗಿಂತ ಹೆಚ್ಚು ಭ್ರಷ್ಟ ಹಾಗೂ ವಿಧ್ವಂಸಕ ರಾಜಕಾರಣ ಮಾಡುತ್ತಿದ್ದ ಮಾಧ್ಯಮಗಳನ್ನು (ವಿಶೇಷವಾಗಿ ವಿದ್ಯುನ್ಮಾನ ಮಾಧ್ಯಮಗಳನ್ನು) ನಿಮ್ಮ ಪ್ರಚಾರವೂ ಬೇಡ, ಅಪಪ್ರಚಾರವೂ ಬೇಡವೆನ್ನುವ ರೀತಿಯಲ್ಲಿ ಪ್ರತಿಬಂಧಿಸಿ ಅವನ್ನು ಒಂದು ತಹಬಂದಿಗೆ ತಂದಿರುವುದು. 'ಮಾಧ್ಯಮವೇ ಸಂದೇಶ' ಎಂಬ ಆಧುನಿಕ ಮಾಧ್ಯಮ ಸತ್ಯವನ್ನು ಅಶ್ಲೀಲಗೊಳಿಸುವ ರೀತಿಯಲ್ಲಿ ಇಂದಿನ ಮಾಧ್ಯಮಗಳು ಸುದ್ದಿ ಮತ್ತು ಸತ್ಯಗಳ ನಡುವಣ ಗಡಿರೇಖೆಯೇ ಮಸುಕಾಗುವಂತೆ 'ವಾಸ್ತವ'ಗಳೆಂಬ ಗ್ರಾಹಕ ವಸ್ತುಗಳನ್ನು ಉತ್ಪಾದಿಸುವ ಕಾರ್ಖಾನೆಗಳಂತಾಗಿವೆ. ಇವು ಸೃಷ್ಟಿಸತೊಡಗಿರುವ ಮಿಥ್ಯಾ ವಾಸ್ತವ ಪ್ರಪಂಚವು ನಮ್ಮ ಸಾರ್ವಜನಿಕ ಜೀವನದ ಹೊಸ ಪಟ್ಟಭದ್ರ ಹಿತಾಸಕ್ತಿಗಳ ನೆಲೆವೀಡಾಗಿವೆ. ಈ ಹಿನ್ನೆಲೆಯಲ್ಲಿ ಮೋದಿಯವರು ತಮಗಾಗಿ ಮಾಧ್ಯಮ ಸಲಹಾಗಾರರನ್ನು ನೇಮಿಸಿಕೊಳ್ಳದಿರುವುದು ಅರ್ಥಪೂರ್ಣವೆನಿಸುತ್ತದೆ. ಮತ್ತೆ ಮೋದಿಯವರಿಗೆ ವಂದನೆಗಳು.

ಆದರೆ ಒಂದು ಎಚ್ಚರಿಕೆಯ ಮಾತು. ಎಲ್ಲ ಸಚಿವಾಲಯಗಳಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಿ ಯಾವ ಸಚಿವರೂ, ಅಧಿಕಾರಿಯೂ ಪತ್ರಕರ್ತರೊಂದಿಗೆ ಮಾತನಾಡಕೂಡದೆಂಬ ಆದೇಶ ಹೊರಡಿಸಿದ್ದಾರೆಂಬ ಸುದ್ದಿ ಒಳ್ಳೆಯ ಸುದ್ದಿಯೇನಲ್ಲ. ಇದು ಪತ್ರಕರ್ತರ ಮೇಲಿನ ಅಪನಂಬಿಕೆಗಿಂತ ಹೆಚ್ಚಾಗಿ ಸಚಿವ ಸಹೋದ್ಯೋಗಿಗಳು ಮತ್ತು ಅಧಿಕಾರಿಗಳ ಮೇಲಿನ ಅಪನಂಬಿಕೆಯ ದ್ಯೋತಕವಾಗಿ ಕಾಣುತ್ತಿದ್ದು, ಮೋದಿಯವರ ರಾಜಕೀಯ ಶೈಲಿಗೆ ಸಂಬಂಧಿಸಿದಂತಿರುವ ಏಕವ್ಯಕ್ತಿ ಅಧಿಕಾರ ವ್ಯವಸ್ಥೆಯ ಭಯವನ್ನು ನಿಜಗೊಳಿಸುವಂತಿದೆ. ಮೋದಿಯವರು ಕಳೆದ ನೂರು ದಿನಗಳಲ್ಲಿ ನಡೆಸಿದ ದೀರ್ಘ ವಿದೇಶಾಂಗ ವ್ಯವಹಾರಗಳ ಪ್ರಕ್ರಿಯೆಯಲ್ಲಿ (ಭೂತಾನ, ನೇಪಾಳ, ಜಪಾನ್‌ಗಳ ಅಧಿಕೃತ ಪ್ರವಾಸ ಮತ್ತು ಚೀನಾ ಅಧ್ಯಕ್ಷರ ಭಾರತದ ಭೇಟಿ) ಎದ್ದು ಕಂಡ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್‌ರ ಗೈರುಹಾಜರಿ ಬರಲಿರುವ ದಿನಗಳ ಆಡಳಿತ ಸ್ವರೂಪದ ಬಗ್ಗೆ ಆತಂಕ ಹುಟ್ಟಿಸುವಂತಿದೆ. ಏಕೆಂದರೆ ಮೋದಿಯರ ಇಂತಹ ಬಿಗಿ ಆಡಳಿತ ಒಂದು ದಿನ ಸಾಮಾನ್ಯ ಜನತೆಯ ಕೊರಳ ಸುತ್ತಣ ಬಿಗಿ ಉರುಳಾಗಿಯೂ ಪರಿಣಮಿಸಿ ಅವರ ನಾಗರೀಕ ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸುವ ಎಲ್ಲ ಸಾಧ್ಯತೆಗಳಿವೆ. ಇದು ಮೋದಿ ಸಚಿವ ಸಂಪುಟದ ಸದಸ್ಯರ ಮತ್ತು ಸಚಿವಾಲಯಗಳ ಅಧಿಕಾರಿಗಳ ನಾಗರೀಕ ಸ್ವಾತಂತ್ರ್ಯಗಳ ಮೊಟಕಿನೊಂದಿಗೆ ಆರಂಭವಾಗಿರುವಂತಿದೆ. ಇತ್ತೀಚೆಗೆ ಮೋದಿಯವರ ಹೆಸರೊಂದನ್ನು ಬಿಟ್ಟು ಇನ್ನಾವುದೇ ಸಚಿವರ ಹೆಸರು ಸುದ್ದಿ ಮಾಧ್ಯಮಗಳಲ್ಲಿ ಪ್ರಧಾನವಾಗಿ ಕಾಣಿಸಿಕೊಂಡಿದ್ದನ್ನು ಯಾರಾದರೂ ಗಮನಿಸಿದ್ದೀರಾ?

ಆದರೆ ಬಿಜೆಪಿಯ ಮತ್ತು ಅದರ ಮಿತ್ರ ಪಕ್ಷಗಳಲ್ಲಿನ ಪುಢಾರಿಗಳ ನಾಗರಿಕ ಸ್ವಾತಂತ್ರ್ಯಗಳಿಗೇನೂ ಭಂಗ ಬಂದಂತಿಲ್ಲ. ಈ ಹಿಂದೆ ಶಿವಸೇನೆಯ ಮತ್ತು ಆರೆಸ್ಸೆಸ್

ನಾಯಕರು ನೀಡಿದ ಮತ್ತು ಇತ್ತೀಚಿನ ಉಪಚುನವಣೆಗಳ ಸಂದರ್ಭದಲ್ಲಿ ಆದಿತ್ಯನಾಥ್ ಯೋಗಿ ಮತ್ತು ಸಾಕ್ಷಿ ಮಹಾರಾಜ್ ಎಂಬ ಕಾವಿಧಾರಿ ಬಿಜೆಪಿ ರಾಜಕಾರಣಿಗಳು 'ಲವ್ ಜೆಹಾದ್' ಮತ್ತು ಮದರಾಸಗಳಲ್ಲಿನ ಶಿಕ್ಷಣ ಕ್ರಮಕ್ಕೆ ಸಂಬಂಧಿಸಿದಂತೆ ನೀಡಿದ ಕೋಮುವಾದಿ ಪ್ರಚೋದನೆಯ ಹೇಳಿಕೆಗಳ ಬಗ್ಗೆ ಮೋದಿಯರ ಮೌನವನ್ನು ಏನೆಂದು ಅರ್ಥ ಮಾಡಿಕೊಳ್ಳುವುದು? ಅನುಮಾನ ಬೇಡ. ಜನ ಅದನ್ನು ಸರಿಯಾಗಿಯೇ ಅರ್ಥ ಮಾಡಿಕೊಂಡೇ, ಬಿಹಾರದ ನಂತರ ಈಗ ಬಿಜೆಪಿಯ ಭದ್ರ ಕೋಟೆಗಳೆನಿಸಿದ ಉ.ಪ್ರ., ರಾಜಸ್ಥಾನ ಮತ್ತು ಗುಜರಾತ್‌ಗಳಲ್ಲಿನ ಇತ್ತೀಚಿನ ಉಪಚುನಾವಣೆಗಳಲ್ಲಿ ಬಿಜೆಪಿಗೆ ಆಘಾತಕರವೆನ್ನಿಸುವ ಫಲಿತಾಂಶಗಳನ್ನು ನೀಡಿದ್ದಾರೆ. ಮೋದಿಯವರಿಗೆ ಇದೊಂದು ಎಚ್ಚರಿಕೆ. ಕಳೆದ ಚುನಾವಣೆಗಳಲ್ಲಿ ಜನ ಬಿಜೆಪಿಗೆ ಮತ ಹಾಕಿದ್ದು ಅದರ ಮೇಲಿನ ಪ್ರೀತಿಗಿಂತ ಕಾಂಗ್ರೆಸ್‌ನ ಭ್ರಷ್ಟ ಆಡಳಿತದ ಮೇಲಿನ ಕೋಪದಿಂದಾಗಿ. ಆ ಕೋಪ ಆರತೊಡಗಿ, ಭ್ರಷ್ಟ ಹೋಗಿ ದುಷ್ಟ ಆಡಳಿತ ಆರಂಭವಾಗಿದೆ ಎಂಬ ಸೂಚನೆ ದೊರೆಯತೊಡಗಿದಂತೆ ಆ ಕೋಪ ಬಿಜೆಪಿಯ ಕಡೆಗೂ ತಿರುಗುತ್ತದೆ.

ಇನ್ನು ಇಲ್ಲಿ, ಕರ್ನಾಟಕದ ರಾಜಕಾರಣ ದಿನೇ ದಿನೇ ಹಾಸ್ಯಾಸ್ಪದವೆನಿಸತೊಡಗಿದೆ. ಸಿದ್ದರಾಮಯ್ಯನವರ ಸಚಿವರನೇಕರ ಕಾರ್ಯವೈಖರಿ ನೋಡುತ್ತಿದ್ದರೆ, ಸಚಿವ ಸಂಪುಟ ಪುನಾರಚನೆಯ ಬಗ್ಗೆ ಅವರು ಸೃಷ್ಟಿಸುತ್ತಿರುವ ಗೊಂದಲ ಮತ್ತು ಅನಿಶ್ಚಿತತೆ ಜನವಿರೋಧಿಯಾದದ್ದು ಎಂದೇ ಅನಿಸುತ್ತದೆ. ಅವರ ಸಂಪುಟದ 'ದಂಡಪಿಂಡ'ಗಳು ಜನರ ಕಣ್ಣಿಗೇ ಎದ್ದು ಕಾಣುತ್ತಿರುವಾಗ ಇವರ ಕಣ್ಣಿಗೆ ಕಾಣದಿರಲು ಕಾರಣವೇನು? ಜನ ಇಂದು ಯೋಚಿಸಬಲ್ಲವರಾಗಿದ್ದಾರೆ. ಇನ್ನು ನಿಗಮ ಮಂಡಳಿಗಳ ಅಧಿಕಾರ ಸ್ಥಾನಗಳನ್ನು ತುಂಬುವ ವಿಷಯವನ್ನು ಎಳೆದಾಡುತ್ತಿರುವುದನ್ನು ನೋಡಿದರೆ, ಇದು ಅಗತ್ಯ ಆಡಳಿತಾತ್ಮಕ ಕ್ರಮವೋ ಅಥವಾ ರಾಜ್ಯದ ಜನತೆಯ ಖರ್ಚಿನಲ್ಲಿ ಬೇಕಾದವರಿಗೆ ಬಿಸ್ಕಟ್ ಹಂಚುವ ಕಾರ್ಯಕ್ರಮವೋ ಎಂದು ಅನುಮಾನವಾಗುತ್ತಿದೆ. ಸಿದ್ಧರಾಮಯ್ಯನವರಿಂದ ಘನತೆಯುಳ್ಳ ನೇರ ಮತ್ತು ದಿಟ್ಟ ರಾಜಕಾರಣವನ್ನು ನಿರೀಕ್ಷಿಸಿದ್ದವರಿಗೆಲ್ಲ ನಿರಾಶೆ ಮಡುಗಟ್ಟುತ್ತಿದೆ.

<u>ಸಮಕಾಲೀನ</u>

ಗಾಂಧಿಯ ಯಂತ್ರ ದರ್ಶನ

ಗಾಂಧಿಯ ಪ್ರಸ್ತುತತೆಯ ಬಗ್ಗೆ ಮಾತನಾಡುವುದು ಇಂದು ಕ್ಲೀಷೆಯ ಮಾತಾಗಿಬಿಟ್ಟಿದೆ. ವಿಶೇಷವಾಗಿ ಗಾಂಧಿ ಜಯಂತಿಗಳಂತಹ ಸಂದರ್ಭಗಳಲ್ಲಿ. ಆದರೆ ಅದನ್ನು ಮಾತನಾಡಲಾಗದೇ ಇರಲೂ ಸಾಧ್ಯವಿಲ್ಲದ ಪರಿಸ್ಥಿತಿ ಈಗ ಉಂಟಾಗುತ್ತಿದೆ. ಪಶ್ಚಿಮದ ಆಧುನಿಕ ನಾಗರೀಕತೆಯನ್ನು ನಮ್ಮ ಒಳ್ಳೆಯದಕ್ಕೇ ಎಂದು ಭಾವಿಸಿ ಒಪ್ಪಿಕೊಂಡ ನಾವು ಈಗ–ಜಾಗತೀಕರಣವೆಂಬ ಹೊಸ ಬೆಳವಣಿಗೆಯ ಹಿನ್ನೆಲೆಯಲ್ಲಿ–ಹೊಸ ಹೊಸ

ತೆರನ ಬಿಕ್ಕಟ್ಟುಗಳನ್ನು ಎದುರಿಸಲಾರಂಭಿಸಿದ್ದೇವೆ. ಮನುಷ್ಯನ ಬದುಕನ್ನು ಹೆಚ್ಚು ಸುಖಕರವಾಗಿ ಮಾಡಲು ಈ ಆಧುನಿಕ ನಾಗರೀಕತೆಯ ಹೆಗ್ಗುರುತಾಗಿ ಯಂತ್ರ ಬಂತು. ಅದು ಇಂದು ತಂತ್ರಜ್ಞಾನದ ಹೆಸರಿನಲ್ಲಿ ಮನುಷ್ಯನನ್ನು ಮತ್ತು ಆ ಮೂಲಕ ಅವನ ಸಮಾಜವನ್ನು ಮತ್ತು ಅದರ ಪರಿಣಾಮವಾಗಿ ಒಟ್ಟು ಜೀವ ಪರಿಸರವನ್ನು ಒಡೆದು, ಹರಿದು ಚಿಂದಿಯಾಗಿಸುತ್ತಿರುವ ರೀತಿ ಮತ್ತು ರೂಪಗಳು ಭಯ ಹುಟ್ಟಿಸುವಂತಿವೆ; ಭವಿಷ್ಯದ ಬಗ್ಗೆ ಆತಂಕ ಸೃಷ್ಟಿಸಿವೆ.

ಈ ಆಧುನಿಕ ಯಂತ್ರ ಹುಟ್ಟಿದ ಒಂದು ನೂರು ವರ್ಷಗಳ ಹಿಂದೆ ಗಾಂಧಿ ಇದರ ಸುತ್ತ ಕಟ್ಟಿಕೊಳ್ಳತೊಡಗಿದ್ದ ಜೀವನ ಕ್ರಮವನ್ನು ಯಂತ್ರ ನಾಗರೀಕತೆ ಎಂದು ಕರೆದು ಅದರ ವಿರುದ್ಧ ಮಾತನಾಡಿದ್ದಾಗ ಜಗತ್ತು ಅದನ್ನು 'ಹಾಸ್ಯಾಸ್ಪದ' ಎಂದು ಕರೆದು ನಕ್ಕಿತ್ತು. ಆದರೆ ಅದು ಈಗ ಗಾಂಧೀಜಿಯ ಅಂದಿನ ವಿರೋಧದ ಮಾತುಗಳಲ್ಲಿ ಅಡಗಿದ್ದ 'ಮಾನವತೆಯ' ಭವಿಷ್ಯ ಕುರಿತ ಆಳದ ಒಳನೋಟಗಳನ್ನು ಅರಿತುಕೊಳ್ಳತೊಡಗಿ ಅವರ ದ್ರಷ್ಟಾರತೆಯ ಬಗ್ಗೆ ಬೆರಗಾಗುತ್ತಿದೆ. ಗಾಂಧಿ ಕುರಿತ ಹೊಸ ಕುತೂಹಲ ಮತ್ತು ಅಧ್ಯಯನಗಳು ಜಗತ್ತಿನಾದ್ಯಂತ ಆರಂಭವಾಗಿವೆ.

ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತೆ ಗಾಂಧಿ ಅಕ್ಷರಶಃ ಯಂತ್ರ ವಿರೋಧಿಯಾಗಿರಲಿಲ್ಲ. ಯಂತ್ರಗಳು ಬೇಕು. ಆದರೆ ಅವು ನಮ್ಮ ಬದುಕಿನ ತತ್ವವನ್ನು ನಿರ್ಧರಿಸುವಂತಹ ರಾಕ್ಷಸ ಶಕ್ತಿಯಾಗಬಾರದು. ಯಂತ್ರದ ಹಿಂದಿರುವ ತರ್ಕ ನಮ್ಮ ಬದುಕಿನ ತರ್ಕವಾಗಬಾರದು. ಅವರು ಹೇಳುತ್ತಿದ್ದ ಒಂದು ಮಾತು ಯಂತ್ರ ನಾಗರೀಕತೆಯನ್ನು ಕುರಿತ ಅವರ ಚಿಂತನೆಯ ನೆಲೆಯ ಆಳವನ್ನು ಪರಿಚಯಿಸುವಂತಿದೆ: 'ಈ ದೇಹವೂ ಒಂದು ಯಂತ್ರವೇ. ಅದನ್ನು ನಾನು ನಿರಾಕರಿಸಲಾಗುವುದೇ? ಆದರೆ ನನ್ನ ಮುಕ್ತಿಗೆ ಅದು ಅಡ್ಡಿಯಾಗುವುದಾದರೆ ಅದನ್ನೂ ನಾನು ತ್ಯಜಿಸಿಯೇನು!'

ಅಂದರೆ ಗಾಂಧಿ ಮನುಷ್ಯ ಜನ್ಮದ ಎಲ್ಲ ಕರ್ಮಗಳ ಆತ್ಯಂತಿಕ ಗುರಿ ಮುಕ್ತಿ ಎಂದು ಗುರುತಿಸಿದ್ದರು. ಹಾಗೇ ಆ ಮುಕ್ತಿಗೆ ಮಾಧ್ಯಮ ದೇಹವೆಂದೂ ನಂಬಿದ್ದರು. ಹಾಗಾಗಿಯೇ ಅವರು ದೇಹದ ಸುಸ್ಥಿತಿಯ ಬಗ್ಗೆಯೂ ಹೆಚ್ಚು ಮಾತನಾಡುತ್ತಿದ್ದರು. ಅದರಿಂದ ಗೊತ್ತಾಗುವುದೇನೆಂದರೆ, ಗಾಂಧಿ ಮುಕ್ತಿಯ ಬಗ್ಗೆ ಮಾತನಾಡುತ್ತಿದ್ದಾಗ ಅವರು ಮಾತನಾಡುತ್ತಿದ್ದುದು ಸಾಂಪ್ರದಾಯಿಕ ಧಾರ್ಮಿಕ ಅರ್ಥದ ಮುಕ್ತಿಯನ್ನಲ್ಲ. ಅದು ದೇಹವು ಲೋಕದೊಡನೆಯ ಮುಖಾಮುಖಿಯಲ್ಲಿ ಕಂಡುಕೊಳ್ಳುವ ಆತ್ಯಂತಿಕ ಶಾಂತಿ–ದೇಹಭಾವ ಕರಗಿಹೋದ ಸ್ಥಿತಿ. ಹಾಗಾಗಿಯೇ ಅವರು ಸಾಂಪ್ರದಾಯಿಕ ಧರ್ಮಗಳ ನಂಬಿಕೆಯೆನಿಸಿದ್ದ ದೇವರು ಸತ್ಯ ಎನ್ನುವುದನ್ನು ಸತ್ಯವೇ ದೇವರು ಎಂದು ತಲೆಕೆಳಗು ಮಾಡಿ, ಹೊಸ ನೆಲೆಯ ಅಧ್ಯಾತ್ಮಿಕತೆಯನ್ನು ರೂಪಿಸಿದರು. ಆ ಸತ್ಯವೆಂಬ ದೇವರನ್ನು ಈ ದೇಹದ ಚಟುವಟಿಕೆಗಳ ಮೂಲಕವೇ–ಲೋಕದೊಡನೆಯ ಮುಖಾಮುಖಿಯಲ್ಲೇ–ಸಾಕ್ಷಾತ್ಕರಿಸಿಕೊಳ್ಳಬೇಕು. ಹಾಗಾಗಿ ದೇಹಕ್ಕೂ ಒಂದು ಅಧ್ಯಾತ್ಮಿಕತೆಯ

ಮೌಲ್ಯವಿದೆ. ಅಸ್ಪೃಶ್ಯತೆಯೆಂಬ ದೇಹವನ್ನು ಕುರಿತ ಕೇವಲ ಭೌತಿಕ ವ್ಯಸನದ ಆಚರಣೆ ಈ ಅಧ್ಯಾತ್ಮಿಕತೆಗೆ ವಿರೋಧವಾದದ್ದು ಎಂದು ಅವರು ನಂಬಿದ್ದರು.

ಈ ತಮ್ಮ ಎಲ್ಲ ವಿಚಾರಗಳನ್ನು ಒಟ್ಟಿಗೆ ಹೇಳಲು ಅವರು ಕಂಡುಕೊಂಡ ಸಾಧನ ಎಂದರೆ, ಚರಕ. ಚರಕ ಗಾಂಧಿ ತತ್ವದ ದೇಹವಿದ್ದಂತೆ. ಅದನ್ನು ತಿರುಗಿಸುವವನಲ್ಲಿ ಆತ್ಮ ಜಾಗೃತವಾಗುತ್ತದೆ. ಈ ಚರಕವೂ ಒಂದು ಯಂತ್ರ ಎಂಬುದನ್ನು ನಾವು ಗಮನಿಸಿದರೆ, ಗಾಂಧಿಯ ಯಂತ್ರ ವಿರೋಧ ಯಾವ ನೆಲೆಯದ್ದು ಮತ್ತು ಅದರಲ್ಲಿ ಅವರ ಇಡೀ ಬದುಕಿನ ದರ್ಶನ ಹೇಗೆ ಅಡಕವಾಗಿದೆ ಎಂಬುದು ತಿಳಿಯುತ್ತದೆ.

ನಮ್ಮ ಈ ಸಂಚಿಕೆಯಲ್ಲಿ ಇದನ್ನೆಲ್ಲ ವಿವರಿಸುವಂತಹ ಮೂರು ಲೇಖನಗಳನ್ನು ನೀಡುತ್ತಿದ್ದೇವೆ. ಹಾಗೇ, ಇವುಗಳಿಗೆ ಸಂಬಂಧಿಸಿದಂತೆಯೇ, ನಮ್ಮ ಹೊಸ ಪ್ರಧಾನಿ ಮೋದಿಯವರನ್ನು ಬಹುವಾಗಿ ಆಕರ್ಷಿಸಿರುವ ಮತ್ತು ಈ ಹಿನ್ನೆಲೆಯಲ್ಲಿ ಇತ್ತೀಚಿಗಿನ ಚೀನಾ ಅಧ್ಯಕ್ಷರ ಭಾರತ ಭೇಟಿಯ ಸಂದರ್ಭದಲ್ಲಿ ರಾಷ್ಟ್ರಾದ್ಯಂತ ಹೊಸ ಆಸೆ ಮತ್ತು ಕುತೂಹಲ ಹುಟ್ಟಿಸಿರುವ ಚೀನಾದ ಅಭಿವೃದ್ಧಿ ಮಾದರಿಯನ್ನು ವಿಶ್ಲೇಷಿಸುವ ಒಂದು ಲೇಖನವೂ ಇದೆ. ಗಾಂಧಿಯ ಯಂತ್ರ ದರ್ಶನದ ನಿಜತ್ವವನ್ನೂ ಈ ಲೇಖನದ ಒರೆಗಲ್ಲಿನಲ್ಲಿಯೂ ಓದುಗರು ಪರೀಕ್ಷಿಸಬಹುದು. ದಯವಿಟ್ಟು ಬರೆಯಿರಿ

ಗಾಂಧಿ ಕುರಿತ ಎಲ್ಲ ಚರ್ಚೆಗಳೂ ಕ್ಲೀಷೆ ಎನ್ನಿಸುತ್ತಿರುವುದು, ಇಂತಹ ಎಲ್ಲ ಚರ್ಚೆಗಳು ಓದಿನ ಆನಂದದದಲ್ಲೇ ಕಳೆದುಹೋಗಿ ನಿಜ ಬದುಕಿನ ಒರೆಗಲ್ಲಿನವರೆಗೆ ತಲುಪದೇ ಇರುವುದರಿಂದ ಅಲ್ಲವೇ ಎಂಬ ಪ್ರಶ್ನೆಯನ್ನೂ ಇಲ್ಲಿಡಬಯಸುವೆ.–**ಸಂ.**

ನವೆಂಬರ್, ೨೦೧೪

ಮನಮೋಹನರ ಹಾದಿಯಲ್ಲಿ ಮೋದಿ?

ಪ್ರಿಯ ಓದುಗರೇ,

ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ೧೫೦ ದಿನಗಳು ಕಳೆದಿವೆ. ಈಗ ನಿಂತು ರಾಷ್ಟ್ರಜೀವನವನ್ನೊಮ್ಮೆ ನೋಡಿದರೆ, ಇಡೀ ರಾಷ್ಟ್ರ ಭಿತ್ತಿಯ ಉದ್ದಗಲಗಳನ್ನೂ ಅವರೇ ಏಕಮೇವಾದ್ವಿತೀಯರಾಗಿ ಆವರಿಸಿಕೊಂಡಿರುವುದು ಕಾಣುತ್ತದೆ. ಹೆಸರಿಗೆ ಇನ್ನೊಬ್ಬರ ಸದ್ದಿಲ್ಲ, ಸುಳಿವಿಲ್ಲ. ವಿರೋಧ ಪಕ್ಷಗಳ ನಾಯಕರಿರಲಿ, ಅವರ ಪಕ್ಷದ ಇತರ ನಾಯಕರಿರಲಿ, ರಾಷ್ಟ್ರಪತಿಗಳು ಕೂಡ ಸದ್ದಿಲ್ಲದೆ ತಮ್ಮ ಭವನದಲ್ಲಿ ತಮ್ಮ ಪಾಡಿಗೆ ತಾವಿದ್ದಂತೆ ತೋರುತ್ತಿದೆ. ಚುನಾವಣೆಗಳು ಬಂದು ಹೋಗುತ್ತಿವೆ. ಮೋದಿ ಜ್ವರ ಇಳಿಯದೆ ಇಡೀ ರಾಷ್ಟ್ರ ತದೇಕಚಿತ್ತವಾಗಿ ಹಲವು ನಿರೀಕ್ಷೆಗಳೊಂದಿಗೆ ಮೋದಿಯವರತ್ತ ನೋಡುತ್ತಿರುವಂತಿದೆ. ೧೫೦ ದಿನಗಳ ಹಿಂದೆ ಅವರು ನೀಡಿದ 'ಒಳ್ಳೆಯ ದಿನ'ಗಳ ಭರವಸೆಯ ಈಡೇರಿಕೆಗಾಗಿ ಯಾವುದೇ ಅನುಮಾನವಿಲ್ಲದಂತೆ ಕಾಯುತ್ತಿರುವಂತಿದೆ.

ಜನತೆಗೆ ಮೋದಿ ಬಗ್ಗೆ ನಂಬಿಕೆ ಬೆಳೆದಂತಿದೆ. ಗೋಧ್ರಾ ಘಟನೋತ್ತರ ಹತ್ಯಾಕಾಂಡದ ನೆನಪು ಮಾಸಿಹೋಗಿದೆ. ಏಕೆಂದರೆ ಈ ೧೫೦ ದಿನಗಳಲ್ಲಿ ಯಾವುದೇ ಕಳಂಕ ತಮಗೆ ಅಥವಾ ತಮ್ಮ ಸರ್ಕಾರಕ್ಕೆ ತಾಗದಂತೆ ಅವರು ಎಚ್ಚರಿಕೆ ವಹಿಸಿದ್ದಾರೆ. ಗುಜರಾತ್‌ನಲ್ಲಿ ತಾವೇ ನೇಮಿಸಿದ್ದ ಯುವತಿಯೊಬ್ಬಳ ಮೇಲಿನ ಕಣ್ಗಾವಲು ಪ್ರಕರಣದ ಬಗೆಗಿನ ತನಿಖಾ ಆಯೋಗ ಕೂಡ ರದ್ದಾಗುವಂತೆ ವ್ಯವಸ್ಥೆ ಮಾಡಿದ್ದಾರೆ! ಮೋದಿ, ಸರ್ಕಾರದ ಮೇಲೆ ಪೂರ್ಣ ಹಿಡಿತ ಸಾಧಿಸಿದ್ದಾರೆ. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ, ಸರ್ಕಾರವೆಂದರೆ ಅವರೇ ಆಗಿದ್ದಾರೆ. ಇನ್ನೂ ಮುಂದೆ ಹೋಗಿ ಹೇಳುವುದಾದರೆ, ಭಾರತವೆಂದರೇ ಸದ್ಯಕ್ಕೆ ಅವರೇ ಆಗಿಬಿಟ್ಟಿದ್ದಾರೆ.

ಇದೆಲ್ಲ ಸರಿಯೋ ತಪ್ಪೋ, ಅದು ಒಳ್ಳೆಯದಕ್ಕೋ-ಕೆಟ್ಟದ್ದಕ್ಕೋ ಅದು ಬೇರೆ ಚರ್ಚೆ. ಆ ಚರ್ಚೆಯ ತುರ್ತು ಇನ್ನೂ ಉಂಟಾಗಿಲ್ಲ. ಆದರೆ ಇದನ್ನೆಲ್ಲ ಅವರು

ತಮ್ಮದೇ ಆದ ಕರಾರುವಕ್ಕಾದ ಮತ್ತು ವಿವರವಾದ ಯೋಜನೆಯ ಪ್ರಕಾರ ಸಾಧಿಸಿಕೊಂಡಿದ್ದಾರೆಂಬುದಂತೂ ನಿಜ. ಅವರ ಪ್ರತಿ ಮಾತು, ಪ್ರತಿ ಘೋಷಣೆ, ಪ್ರತಿ ನೋಟ, ಪ್ರತಿ ಭೇಟಿ, ಪ್ರತಿ ಕೈಕುಲುಕು, ಪ್ರತಿ ವೇದಿಕೆಯ ಆರೋಹಣ, ಪ್ರತಿ ದರ್ಶನ, ಹೀಗೆ ಅವರ ಸಾರ್ವಜನಿಕ ಬದುಕಿನ ಪ್ರತಿಯೊಂದು ಹೆಜ್ಜೆಯೂ ವಿವರವಾದ ಪೂರ್ವಸಿದ್ಧತೆಯೊಂದಿಗೇ–ತಮ್ಮದೇ ವಸ್ತ್ರವಿನ್ಯಾಸಕ, ವ್ಯಕ್ತಿತ್ವ ಪ್ರಸ್ತುತಿ ಸಲಹಾಕಾರ, ಶಬ್ದಕೋಶ ಸಲಹಾಕಾರ, ಸಾರ್ವಜನಿಕ ಸಂಪರ್ಕ ಸಲಹಾಕಾರ ಇತ್ಯಾದಿ–'ಮಾರುಕಟ್ಟೆ' ಪರಿಣತರ ತಂಡದ ಮಾರ್ಗದರ್ಶನದಲ್ಲಿ ದಕ್ಷವಾಗಿ ಆಯೋಜಿತವಾಗಿರುತ್ತದೆ. ಪಶ್ಚಿಮದ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಅಧ್ಯಯನ ಶಿಸ್ತುಗಳ ಪಾಠಗಳ ಮೂಲಕ ರಾಷ್ಟ್ರದ ಮುಂದೆ, ಜಗತ್ತಿನ ಮುಂದೆ ಪ್ರಸ್ತುತಗೊಳ್ಳುತ್ತಿರುವ ಅಪ್ಪಟ ಭಾರತೀಯ 'ಉತ್ಪನ್ನ'ವಾಗಿದ್ದಾರೆ ಮೋದಿ. ಇದನ್ನು ಬೇಕಾದರೆ ಅಪ್ಪಟ ವೈಜ್ಞಾನಿಕ ಅಥವಾ ತಂತ್ರಜ್ಞಾನ ಪೋಷಿತ ಹಿಂದುತ್ವದ ಮಾದರಿ ಎಂದು ಕರೆಯಬಹುದು. ಸದ್ಯಕ್ಕೆ ರಾಷ್ಟ್ರಕ್ಕೆ ಇದಕ್ಕಿಂತ'ಹೆಮ್ಮೆ'ಯ ವಸ್ತು ಇನ್ನಾವುದಿದ್ದೀತು? ಮೋದಿ ಹೀಗೇ ಕಾಲಕ್ಕೆ ತಕ್ಕ ನಾಯಕನಾಗಿ ಮೂಡಿರುವುದು. ಇದೇ ಅವರ ಭೂತಾನ, ನೇಪಾಳ, ಜಪಾನ್, ಅಮೆರಿಕಾಗಳ ಭೇಟಿಗಳನ್ನು–ಇವು ನಿಜವಾಗಿ ಈ ಮುಂಚಿನ ಪ್ರಧಾನಿಗಳ ಭೇಟಿಗಳಿಗಿಂತ ಹೆಚ್ಚಿನದೇನನ್ನೂ ಸಾಧಿಸದಿದ್ದರೂ– 'ಅಪೂರ್ವ ದಿಗ್ವಿಜಯ'ಗಳಂತೆ ನಮ್ಮ ಬಾಡಿಗೆ ಮಾಧ್ಯಮಗಳಲ್ಲಿ ಪ್ರತಿಬಿಂಬಿತವಾಗುವಂತೆ ಮಾಡಿರುವುದು.

ಆದರೆ ಮುಖ್ಯ ಪ್ರಶ್ನೆ: ಮೋದಿಯವರು ತಮ್ಮ ಬಿಂಬವನ್ನು ಇಷ್ಟೆಲ್ಲ ತಾಂತ್ರಿಕ ಪರಿಣಿತಿಯೊಂದಿಗೆ ಸಾಧಿಸಿ ರಾಷ್ಟ್ರಕ್ಕೆ ಏನು ಮಾಡಿದ್ದಾರೆ? ಹೇಳಲು ಗಣನೀಯವಾದದ್ದು– ಬಹುಶಃ 'ಜನಧನ್' ಯೋಜನೆಯ ಹೊರತಾಗಿ– ಸದ್ಯಕ್ಕೆ ಏನೂ ಇಲ್ಲ! ದಿನಕ್ಕೊಂದು ಹಗರಣ ಬಯಲಾಗುತ್ತಿದ್ದ ಕಾಂಗ್ರೆಸ್ಸಿನ ಆ ಕೆಟ್ಟ ದಿನಗಳು ಹೋದವು, ನಿಜ. ಆದರೆ ಮೋದಿ ಹೇಳಿದ 'ಅಚ್ಚೇ ದಿನ'ಗಳು ಬಂದಿವೆಯೇ? ಬರಲಿವೆಯೇ? ಮೋದಿ ಸಂಸಾರಸ್ಥರಾಗಿರದೆ ವೈಯಕ್ತಿಕ ಭ್ರಷಾಚಾರಕ್ಕೆ ಎಡೆಯಿಲ್ಲವಾಗಿರುವುದರಿಂದ ಮತ್ತು ಮೋದಿಯವರೇ ಸರ್ಕಾರವೂ ಆಗಿರುವುದರಿಂದ ಸರ್ಕಾರ ಸದ್ಯಕ್ಕೆ ಸ್ವಚ್ಛವಾಗಿ ಕಾಣುತ್ತಿದೆ. ಈ ದೃಷ್ಟಿಯಿಂದ ಮೋದಿ ಹೊಸ ಮಾದರಿಯ ನಾಯಕ. ಇಂದಿಗೆ ರಾಷ್ಟ್ರಕ್ಕೆ ಅನಿವಾರ್ಯವಾಗಿ ಬೇಕಾಗಿದ್ದ ನಾಯಕನಂತೆಯೂ ಕಾಣತೊಡಗಿದ್ದಾರೆ. ಆ ಕಾರಣದಿಂದಲೇ ಜನ ಕೂಡ ಅವರ ಆಡಳಿತದ ಒಳ್ಳೆಯ ಫಲಗಳಿಗಾಗಿ ಅಶಾಂತರಾಗದೆ ಕಾಯುತ್ತಿದ್ದಾರೆ. ಗಲಾಟೆ ಮಾಡಬಹುದಾಗಿದ್ದ ವಿರೋಧ ಪಕ್ಷಗಳು–ನಿರ್ದಿಷ್ಟವಾಗಿ ಕಾಂಗ್ರೆಸ್ ಪಕ್ಷ–ಒಂದಾದರಮೇಲೊಂದರಂತೆ ಚುನಾವಣೆಗಳಲ್ಲಿ ಸೋತು ಸುಣ್ಣವಾಗಿ ನೆಲ ಕಚ್ಚಿವೆ.

ನಮ್ಮ ಪ್ರಜಾಪ್ರಭುತ್ವ ಕಳೆದ ೧೫೦ ದಿನಗಳಲ್ಲಿ, ಸರ್ಕಾರವೇ ಇಲ್ಲದಿದ್ದ ದುಃಸ್ಥಿತಿಯಿಂದ ವಿರೋಧ ಪಕ್ಷವೇ ಇಲ್ಲದ ದುಃಸ್ಥಿತಿಗೆ ತಲುಪಿದೆ! ಆದರೆ ಇದೆಲ್ಲದರಿಂದಾಗಿ ಮೋದಿ ಎಂತಹ ಸುಸ್ಥಿತಿಯಲ್ಲಿದ್ದಾರೆಂದರೆ ಅವರು ಏನು ಮಾಡಿದರೂ ಜನ ಒಪ್ಪುವಂತಾಗಿದೆ.

ಆದರೆ ಮೋದಿ ಈಗ ಏನು ಮಾಡಬಲ್ಲವರಾಗಿದ್ದಾರೆ? ನಿಜವಾಗಿ ಮಾಡಬಲ್ಲುದನ್ನೆಲ್ಲ ಈಗಾಗಲೇ ಮಾಡಿ ಮುಗಿಸಿಯಾಗಿದೆ. ಚುನಾವಣಾ ಸಂದರ್ಭದಲ್ಲಿ ಭ್ರಷ್ಟ ಕಾಂಗ್ರೆಸ್ಸನ್ನು ಜನ ಚಪ್ಪಾಳೆ ತಟ್ಟಿ, ಸಿಳ್ಳು ಹೊಡೆದು ಸುಸ್ತಾಗುವಂತೆ ಅಟ್ಟಾಡಿಸಿಕೊಂಡು ಹೊಡೆದು ಮಲಗಿಸುವಂತಹ ಭಾಷಣ ಪ್ರತಿಭೆಯನ್ನು ಮೆರೆದಿದ್ದಾರೆ. ಆದರೆ ಈಗ ಅಧಿಕಾರದ ಗದ್ದುಗೆ ಏರಿದ ಮೇಲೆ ಅವರಿಗೆ ಗೊತ್ತಾಗುತ್ತಿರುವಂತಿದೆ, ಜಾಗತೀಕರಣದ ಬಿಗಿ ಬಂಧನಗಳಲ್ಲಿ ಭಾರತದಂತಹ ದೇಶಗಳು ಮನಮೋಹನ ಸಿಂಗ್‌ಗಳಂತಹ ನಾಯಕರನ್ನು ಮಾತ್ರ ಸೃಷ್ಟಿಸಬಲ್ಲುವೆಂದು. ಹೆಚ್ಚೆಂದರೆ, ಪಕ್ಷ ನಾಯಕತ್ವದ ದಾಕ್ಷಿಣ್ಯವಿಲ್ಲದೆ ಹೆಚ್ಚು ಸ್ವಾತಂತ್ರ್ಯವಿರುವ ಮತ್ತು ಹಾಗಾಗಿ ಹೆಚ್ಚು ದಕ್ಷ, ಪ್ರಾಮಾಣಿಕ ಮನಮೋಹನ ಸಿಂಗ್‌ಗಳು ಸೃಷ್ಟಿಯಾಗಬಲ್ಲರು. ಅವರು ಗಂಗಾ ಶುದ್ಧೀಕರಣ, ಸ್ವಚ್ಛತಾ ಆಂದೋಲನಗಳಂತಹ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಬಲ್ಲರು. ಅದೂ ಗಾಂಧಿ ಜಯಂತಿಯಂತಹ ಮಹತ್ವದ ಸಂದರ್ಭದ ಮಿಕ್ಕೆಲ್ಲ ಸಂದೇಶಗಳನ್ನೂ ಗುಡಿಸಿಹಾಕುವ ಮೂಲಕ.

ಮೋದಿ ಈ ಅರ್ಥದಲ್ಲಿ ಮನಮೋಹನ ಸಿಂಗ್‌ರಗಿಂತ ಹೆಚ್ಚು ಸ್ವತಂತ್ರರಾದ ಪ್ರಧಾನಮಂತ್ರಿಯೇ. ಹಾಗಾಗಿಯೇ ಅವರಿಂದ ಮನಮೋಹನಸಿಂಗ್‌ರ ಕಾಲದಲ್ಲಿ ಹಿಂದೆ ಬಿದ್ದಿದ್ದ ಜಾಗತೀಕರಣದ ಸೂತ್ರಗಳು–ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್. ಪ್ರಣೀತವಾದ ಮುಂದಿನ ಹಂತಗಳ ಆರ್ಥಿಕ ಮತ್ತು ಮಾರುಕಟ್ಟೆ ಸುಧಾರಣೆಗಳು, ಕಾರ್ಮಿಕ ಕಾಯ್ದೆ ಸುಧಾರಣೆಗಳು ಇತ್ಯಾದಿ ನವ ಉದಾರೀಕರಣದ ಕ್ರಮಗಳು–ಹೆಚ್ಚು ದಕ್ಷವಾಗಿ ಮತ್ತು ಪ್ರಾಮಾಣಿಕವಾಗಿ ಜಾರಿಗೆ ಬರಲಿವೆ. ಅಮೆರಿಕಾದಲ್ಲಿ ಅವರು ಔಷಧ ಉದ್ಯಮಿಗಳೂ ಸೇರಿದಂತೆ ಎಲ್ಲ ತರದ ಉದ್ಯಮಿಗಳೊಂದಿಗೆ ಈ ಸಂಬಂಧ ಫಲಪ್ರದ ಮಾತುಕತೆ ನಡೆಸಿಬಂದಿದ್ದಾರೆ. ಅದರ ಒಟ್ಟು ಸಾರಾಂಶವನ್ನೇ ಅವರು ಮ್ಯಾಡಿಸನ್ ಸಭೆಯಲ್ಲಿ ಹುಚ್ಚೆದ್ದು ಕುಣಿಯುತ್ತಿದ್ದ ಅನಿವಾಸಿ ಭಾರತೀಯ ಸಮೂಹಕ್ಕೆ ಹೇಳಿದ್ದು: 'ನಿಮ್ಮ ಕನಸಿನ ಭಾರತವನ್ನು ನಿರ್ಮಿಸುವುದೇ ನನ್ನ ಗುರಿ!' ಅಮೆರಿಕಾದ ಭಾರತೀಯರ ಕನಸಿನ ಭಾರತವಾದರೂ ಯಾವುದು? ಅದು ಅಮೆರಿಕಾ! ಹಾಗಾಗಿಯೇ ಅಲ್ಲವೇ ಅವರೆಲ್ಲ ಅಲ್ಲಿಗೆ ಹೋದದ್ದು?

ಅವರು ಗುಜರಾತನ್ನು ಅಮೆರಿಕಾ ಮಾಡಿಮುಗಿಸಿ ಈಗ ಭಾರತವನ್ನೆಲ್ಲ ಅಮೆರಿಕಾ ಮಾಡಹೊರಟಿದ್ದಾರೆ. ಇಲ್ಲಿನ ಜನಕ್ಕೂ ಅದೇ ಬೇಕಾದಂತಿದೆ. ಆದರೆ ಯಾವ ಜನಕ್ಕೆ ಎಂಬುದೇ ಮುಖ್ಯ ಪ್ರಶ್ನೆ. ಮನಮೋಹನಸಿಂಗ್‌ರೂ ಇದನ್ನೇ ಮಾಡಲು ಹೊರಟವರಲ್ಲವೇ? ಏನಾಯಿತು? ಅವರು ಹತ್ತು ವರ್ಷಗಳ ಕಾಲವಾದರೂ ಬಾಳಿದರು. ಹೆಚ್ಚು ಸ್ವತಂತ್ರ, ಹೆಚ್ಚು ದಕ್ಷ ಮತ್ತು ಹೆಚ್ಚು 'ಪ್ರಾಮಾಣಿಕ'ರಾದ ಮೋದಿ? ಕಾದು ನೋಡಬೇಕು! ಏಕೆಂದರೆ ಅವರ ಸರ್ಕಾರ ಮತ್ತು ಪಕ್ಷ ತನ್ನ ಒಳ ಅಸ್ತ್ರಗಳನ್ನಿನ್ನೂ ಪೂರ್ಣ ಪ್ರಮಾಣದಲ್ಲಿ ಹೊರ ತೆಗಿದಿಲ್ಲ. ಹೊರತೆಗೆಯಲಿ, ಜನ ಏನು ಮಾಡುತ್ತಾರೆ ನೋಡೋಣ.

ಇನ್ನು ಇತ್ತ ನಮ್ಮ ರಾಜ್ಯದಲ್ಲಿ ಸಿದ್ಧರಾಮಯ್ಯ-ಜನರ ಒತ್ತಡಕ್ಕೆ ಮಣಿದಾದರೂ- ಒಂದು ಒಳ್ಳೆಯ ನಿರ್ಧಾರ ಪ್ರಕಟಿಸಿದ್ದಾರೆ. ಸಾವಿರಾರು ಎಕರೆಗಳ ಸರ್ಕಾರಿ ಭೂ ಒತ್ತುವರಿ ಕುರಿತ ಎ.ಟಿ. ರಾಮಸ್ವಾಮಿ ವರದಿಯ ಮೇಲೆ ಕಟ್ಟುನಿಟ್ಟಿನ ಕ್ರಮಕ್ಕೆ ಆದೇಶ ಹೊರಡಿಸಿದ್ದಾರೆ. ಮಾತ್ರವಲ್ಲ, ಅದಕ್ಕಾಗಿ ಸೂಕ್ತ ಆಡಳಿತಾತ್ಮಕ ಕ್ರಮಗಳನ್ನೂ ಪ್ರಕಟಿಸಿದ್ದಾರೆ. ಇದಕ್ಕಾಗಿ ಸಿದ್ಧರಾಮಯ್ಯನವರ ಸರ್ಕಾರವನ್ನು ಈಗಲೇ ಅಭಿನಂದಿಸುವ ಅಗತ್ಯವಿಲ್ಲ. ಏಕೆಂದರೆ, ಈ ಹಗರಣದಲ್ಲಿ ಎಂತೆಂತಹ ಭಾರಿ ಕುಳಗಳಿದ್ದಾರೆ ಎಂದರೆ ಅವರ ತರಹೇವಾರಿ ಒತ್ತಡಗಳನ್ನು ಎದುರಿಸುವಷ್ಟು ಶೀಲಶಕ್ತಿ ಈ ಸರ್ಕಾರಕ್ಕಿದೆಯೇ ಎಂಬುದನ್ನು ಕಾದು ನೋಡಬೇಕಿದೆ. ಏಕೆಂದರೆ ಇದು ಸರ್ಕಾರದ ರಾಶಿ ರಾಶಿ ಹಣ ತಿಂದು ಅದರಲ್ಲಿ ಒಂದಿಷ್ಟನ್ನು ಒಂದಿಷ್ಟು ಜನರಿಗೆ ತಿನ್ನಿಸಿದರೆ ಸಾಕು, ಅವರನ್ನು ದೇವರಂತೆ ಪೂಜಿಸುವ ದೇಶವಿದು! ಜಯಲಲಿತಾ ಪ್ರಕರಣದಲ್ಲಿ ಕಣ್ತುಂಬಾ ಇದನ್ನು ನೋಡಿದೆವಲ್ಲಾ?

ಗಣಪತಿಯಪ್ಪನವರಿಗೆ ಶ್ರದ್ಧಾಂಜಲಿ:

ಸ್ವತಂತ್ರ ಭಾರತದ ಮೊದಲ ಭೂ ಚಳುವಳಿ ಎಂದೇ ಹೆಸರಾದ ಕಾಗೋಡು ಸತ್ಯಾಗ್ರಹದ ರೂವಾರಿ ಎಚ್. ಗಣಪತಿಯಪ್ಪ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರು ಅಸ್ವಸ್ಥರಾಗಿ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲೇ ಪತ್ರಿಕೆ-ಎರಡು ಸಂಚಿಕೆಗಳ ಹಿಂದೆ-ಅವರ ಬಗ್ಗೆ ಬರೆದಿತ್ತು. 'ಭಾರತ ಬಿಟ್ಟು ತೊಲಗಿ ಚಳುವಳಿ'ಯಲ್ಲಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಬಂಡೆದ್ದು, ಉತ್ತರ ಕನ್ನಡದ ಸಿದ್ಧಾಪುರದಿಂದ 'ಸ್ವತಂತ್ರ' ಮೈಸೂರು ಸಂಸ್ಥಾನದ ಸಾಗರ ತಾಲ್ಲೂಕಿಗೆ ವಲಸೆ ಬಂದ ಗಣಪತಿಯಪ್ಪ ನಿಜವಾದ ಗಾಂಧೀವಾದಿಯಾಗಿ ಅಲ್ಲಿ ದಟ್ಟ ದರಿದ್ರ ಸ್ಥಿತಿಯಲ್ಲಿದ್ದ ದೀವರೇ ಪ್ರಧಾನವಾಗಿದ್ದ ಗೇಣಿದಾರರಿಗೆ ಮೊದಲು ಕಲಿಸಿದ್ದು, ಶುಚಿ ಮತ್ತು ಅಚ್ಚುಕಟ್ಟುಗಳ ಬದುಕಿನ ಪಾಠಗಳನ್ನು. ಅದು ಆನಂತರ ಗೋಪಾಗೌಡರ ನೇತೃತ್ವದ ಸಮಾಜವಾದಿಗಳಿಂದ ಭೂ ಹೋರಾಟವಾಗಿ ಪರಿವರ್ತಿತವಾಯಿತಷ್ಟೆ ಇದರ ಪರಿಣಾಮ ಇಂದು ದೀವ ಸಮುದಾಯ ಮಲೆನಾಡಿನ ರಾಜಕಾರಣವನ್ನು ನಿಯಂತ್ರಿಸುವಷ್ಟು ಪ್ರಬಲವಾಗಿ ಬೆಳೆದಿದೆ. ದೀವ ಕುಲ ಇರುವವರೆಗೂ ಗಣಪತಿಯಪ್ಪನವರ ಹೆಸರು-ಅವರ ಹಲವು ವಿವಾದಗಳು ಮತ್ತು ದೌರ್ಬಲ್ಯಗಳ ಹೊರತಾಗಿಯೂ- ಹಸುರಾಗಿರುತ್ತದೆ.

<u>ಸಮಕಾಲೀನ</u>

ಕಳೆದು ಹೋಗುತ್ತಿರುವ ಕನ್ನಡ

ಬೆಳಗಾವಿ ಬಳಿಯ, ಮರಾಠಿ ಭಾಷಿಕರೇ ಹೆಚ್ಚಿರುವ ಗಡಿಗ್ರಾಮದವರು ತಮ್ಮ ಊರಿನ ನಾಮಫಲಕವನ್ನು ಮರಾಠಿಯಲ್ಲಿ ಹಾಕಿಕೊಂಡಾಗ ನಮ್ಮ ವೀರ ಕನ್ನಡಿಗರ ಕ್ರೋಧ ಉಕ್ಕಿ ಹರಿದು ಅಲ್ಲಿ ರಕ್ತಪಾತವೇ ಆಗಿಹೋಯಿತು. ಆದರೆ ಕರ್ನಾಟಕದೊಳಗೆ

ಕನ್ನಡಿಗರೇ ಇರುವ ಬಹುಪಾಲು ಹಳ್ಳಿಗಳಲ್ಲಿ ಕನ್ನಡ ಶಾಲೆಗಳು ಮುಚ್ಚಿಹೋಗುತ್ತಿವೆ ಅಥವಾ ಆ ಹಂತ ತಲುಪುತ್ತಿವೆ. ಆದರೆ ಈ ವೀರ ಕನ್ನಡಿಗರಿಂದ ಒಂದು ಹನಿ ಕಣ್ಣೀರಿರಲಿ, ಒಂದು ನಿಟ್ಟುಸಿರು ಕೂಡ ಇಲ್ಲ! ಬದಲಿಗೆ ಇದನ್ನು ಪ್ರಗತಿ, ಅಭಿವೃದ್ಧಿ, ವಿಮೋಚನೆ ಎಂದು ಈ ಕನ್ನಡಿಗರು ಬಗೆದು ಸಂತೋಷಪಡುತ್ತಿದ್ದಾರೆ. ಮತ್ತೊಂದು ರಾಜ್ಯೋತ್ಸವದ ಸಂಭ್ರಮಕ್ಕೆ ಸಜ್ಜಾಗುತ್ತಿದ್ದಾರೆ.

ಇದು ಕರ್ನಾಟಕದ ದುರಂತ ಕಥೆ; ಕನ್ನಡಿಗರ ದುರಂತ ಕಥೆ. ತಮ್ಮ ನಿಜವಾದ ಹಿತ, ನಿಜವಾದ ಅಸ್ಮಿತೆ, ನಿಜವಾದ ಶಕ್ತಿ ಎಲ್ಲಿದೆ, ಅದು ಎಲ್ಲಿಂದ ಚಿಮ್ಮುತ್ತದೆ ಎಂದು ಆಲೋಚಿಸಲಾಗದಷ್ಟು ಬದುಕಿನ ಧಾವಂತಕ್ಕೆ ಸಿಕ್ಕಿರುವ ಜನಸಮುದಾಯ ಕನ್ನಡಿಗರದ್ದಾಗಿ ಹೋಗಿದೆ. ಹಾಗೆ ನೋಡಿದರೆ, ಇದು ರಾಷ್ಟ್ರದ ಇಂದಿನ ಎಲ್ಲ ಜನಸಮುದಾಯಗಳ ಕಥೆಯೇ ಅಲ್ಲವೇ ಎಂಬ ಪ್ರಶ್ನೆ ಕೇಳಬಹುದು. ಹೌದು, ಸರಿ ಸುಮಾರಾಗಿ ಇದು ಎಲ್ಲ ಸಮುದಾಯಗಳ ಕಥೆಯೇ. ಆದರೆ, ಹಾಗೆಂದು ನಾವು ಅದನ್ನು ನಿರ್ಲಕ್ಷಿಸಬಹುದೇ? ಇದರ ಮಧ್ಯೆಯೇ ಒಂದು ಸಂಗತಿಯನ್ನು ನಾವು ಮರೆಯುವಂತಿಲ್ಲ. ಕನ್ನಡಿಗರು ಒಂದು ಭಾಷಾ ಸಮುದಾಯವಾಗಿ ಅವರ ಆಧುನಿಕ ಇತಿಹಾಸ ಸ್ವಲ್ಪ ದುರ್ಬಲವಾದದ್ದೇ; ಅದು ಹಲವು ಸಡಿಲ ಕೊಂಡಿಗಳ ಇತಿಹಾಸವೇ ಆಗಿದೆ. ಈ ಬಗ್ಗೆ ಹಿಂದೊಮ್ಮೆ–ಬಹುಶಃ ಕಳೆದ ನವೆಂಬರ್ ಸಂಚಿಕೆಯಲ್ಲಿ–ಇದೇ ಪತ್ರಿಕೆಯಲ್ಲಿ ನಾನು ಬರೆದಿರುವೆ. ಹಾಗಾಗಿಯೇ ಹಿಂದಿ, ಬಂಗಾಳಿ, ಮರಾಠಿ, ತಮಿಳು, ತೆಲುಗು ಇತ್ಯಾದಿ ಭಾಷಿಕರಿಗೆ ಹೋಲಿಸಿದರೆ ಕನ್ನಡಿಗರು ಕನ್ನಡವನ್ನು ಕಳೆದುಕೊಳ್ಳುವ ಆತಂಕ ಹೆಚ್ಚು ತೀವ್ರವೇ ಆಗಿದೆ. ಅನ್ಯ ಭಾಷೆಗಳಲ್ಲಿ ಮಾತಾನಾಡಲು ಕನ್ನಡಿಗರು ಹಾತೊರೆಯುವಷ್ಟು ಇನ್ನಾರಾದರೂ ಹಾತೊರೆಯುವುದನ್ನು ನೀವು ಕಂಡಿದ್ದೀರಾ? ಏಕೆ ಹೀಗೆ? ಅಷ್ಟೇ ಅಲ್ಲ, ಈ ಹಾತೊರಿಕೆ ಒಂದು ಗುಣವೆಂದೂ ನಮ್ಮನ್ನು ನಾವು ನಂಬಿಸಿಕೊಂಡುಬಿಟ್ಟಿದ್ದೇವೆ ಕೂಡ!

ನಾವು ಕನ್ನಡ ಶಾಲೆಗಳನ್ನು ಕಳೆದುಕೊಳ್ಳುವುದು ಎಂದರೆ ಏನು? ಪ್ರಾಥಮಿಕ ಕಲಿಕೆಯ ಮಾಧ್ಯಮವಾಗಿ ನಮ್ಮ ಭಾಷೆಯನ್ನು ಕಳೆದುಕೊಳ್ಳುವುದು ಎಂದರೆ ಏನು? ಅದು ಮೂಲತಃ ಕಲಿಕೆಯ ಮೂಲ ಭಾವಕೋಶವನ್ನೇ, ಮೂಲ ಘಟಕಗಳನ್ನೇ ಕಳೆದುಕೊಂಡಂತೆ. ಹಾಗಾದಾಗ ಕಲಿಕೆ ಎಂಬುದಾದರೂ ಏನು? ಯಾರಿಗಾಗಿ ಆ ಕಲಿಕೆ? ತನಗಾಗಿ ಅಲ್ಲದ ಕಲಿಕೆ ಯಾವಾಗಲೂ ಅಪಾಯಕಾರಿಯೇ! ನಾವಿಂದು ಹೆಚ್ಚೆಚ್ಚು ಕಾಣುತ್ತಿರುವುದು ಅದನ್ನೇ–ತಂದೆ ತಾಯಿಯರಿಂದ ಮಕ್ಕಳನ್ನು ಅಗಲಿಸುವ, ಮಕ್ಕಳನ್ನು ತಮ್ಮೂರುಗಳಿಂದ ಅಗಲಿಸುವ, ಒಟ್ಟಾರೆಯಾಗಿ ನಮ್ಮನ್ನು ನಮ್ಮಿಂದಲೇ ಅಗಲಿಸುವ–ಹಿಂಸೆಯ ಕಲಿಕೆಯೇ ಅಲ್ಲವೇ? ಹಾಗಾಗಿ ಪ್ರಾಥಮಿಕ ಕಲಿಕೆಯ ಭಾಷೆಯಾಗಿ ಒಂದು ಭಾಷೆಯನ್ನು ಕಳೆದುಕೊಳ್ಳುವುದು ಎಂದರೆ ಸಾರತಃ ಒಂದು ಭಾಷೆಯನ್ನೇ ಕಳೆದುಕೊಂಡಂತೆ. ಆದರೆ ಹಾಗೆ ಕಳೆದುಕೊಳ್ಳುವುದು ಒಂದು ಭಾಷೆಯನ್ನು ಮಾತ್ರವಲ್ಲ; ನಮ್ಮ ವ್ಯಕ್ತಿತ್ವದ ನಿಜ ಸೆಲೆಗಳನ್ನು; ಅವುಗಳನ್ನು ಉಕ್ಕಿಸುತ್ತಿರುವ ಆಳಾತಿ ಆಳದ

ನೆನಪುಗಳನ್ನು; ಅವುಗಳ ಪರಿಮಳಗಳನ್ನು. ಆ ಪರಿಮಳಗಳನ್ನು ಆಘ್ರಾಣಿಸಬಲ್ಲ ಶಕ್ತಿ ಬಿಂದುಗಳನ್ನು. ಅಂದರೆ ನಮ್ಮ ಆಳದ ಸುಖ-ಸಂತೋಷ-ಸಂಭ್ರಮಗಳನ್ನು ಆನಂದಿಸಲು ಅನುವು ಮಾಡಿಕೊಡುವ ಒಂದು ಶ್ರೀಮಂತ ಭಾವಕೋಶವನ್ನು. ಅದನ್ನು ಕಳೆದುಕೊಂಡು ನಿಮ್ಮ ಹೊರ (ಇಂಗ್ಲಿಷ್ ಮಾಧ್ಯಮ) ಕಲಿಕೆಯ ವಿಜ್ಞಾನ-ತಂತ್ರಜ್ಞಾನಗಳು ಕಲ್ಪಿಸುವ ಸುಖ-ಸಂತೋಷಗಳನ್ನು ನಿಜವಾಗಿ ಅನುಭವಿಸುವುದಾದರೂ ಹೇಗೆ? ನಮ್ಮ ಶಾಲಾ ಮಕ್ಕಳ ಕುತ್ತಿಗೆಗೆ ಬಿಗಿಯಲಾಗಿರುವ ಟೈ ಬರಿ ಟೈ ಅಲ್ಲ ಅಲ್ಲವೇ?.

ಒಂದು ಜನ ಸಮುದಾಯ ಹೀಗೆ ಒಂದು ಭಾಷೆಯನ್ನು ಕಳೆದುಕೊಳ್ಳತೊಡಗುವುದು ಎಂದರೆ ಮೂಲತಃ ಆ ಜನಸಮುದಾಯ ತನ್ನ ಕಾವ್ಯವನ್ನು ಕಳೆದುಕೊಂಡ ಹಾಗೆ. ತನ್ನ ಕಾವ್ಯವನ್ನು ಕಳೆದುಕೊಂಡ ಜನಸಮುದಾಯವನ್ನು ಒಂದು ಸಮುದಾಯವೆಂದು ಕರೆಯಬಹುದೇ? ಅದೊಂದು ಸಂಸ್ಕೃತಿಯಾಗಿ ಉಳಿಯಬಲ್ಲುದೇ? ಇದನ್ನು ಯಾರಿಗೆ ಹೇಳುವುದು? ಹೇಳಿಕೊಂಡರೂ ಆ ಭಾಷೆಯೇ ಅರ್ಥ ಆಗದಂತಹ ಒಂದು ಆಧುನಿಕ ರಾಷ್ಟ್ರಪ್ರಭುತ್ವವನ್ನು ನಾವೇ ಕಟ್ಟಿಕೊಂಡು ಅದರೊಳಗೆ ಬಂಧಿತರಾಗಿಬಿಟ್ಟಿದ್ದೇವೆ. ಅದೀಗ ನಿಧಾನವಾಗಿ ಕೆಲವರಿಗಾದರೂ ಅರ್ಥವಾಗತೊಡಗಿದೆ. ಏಕೆಂದರೆ ಅಂತಿಮ ನ್ಯಾಯ ಹೇಳುವ ನಮ್ಮ ಈ ರಾಷ್ಟ್ರದ ಸರ್ವೋನ್ನತ ನ್ಯಾಯಾಲಯವೇ ಈಗ ಅಂತಿಮವಾಗಿ ಮತ್ತು ಸ್ಪಷ್ಟವಾಗಿ, 'ನೀವೀಗ ನಾಗರೀಕತೆಯ ಪಥದಲ್ಲಿ ಸಾಗುತ್ತಿದ್ದೀರಿ; ಹಾಗಾಗಿ ನಿಮ್ಮ ನಾಗರೀಕ ಹಕ್ಕುಗಳನ್ನು ಜೋಪಾನವಾಗಿ ಕಾಪಾಡಿಕೊಳ್ಳಬೇಕು-ಈ ಕಾಪಾಡಿಕೊಳ್ಳುವ ಪವಿತ್ರ ಪ್ರಕ್ರಿಯೆಯಲ್ಲಿ ನಿಮ್ಮ ಮಾತೃಭಾಷೆಗಳು ಕಳೆದುಹೋದರೂ ಪರವಾಗಿಲ್ಲ' ಎನ್ನುತ್ತಿದೆ! ಅಂದರೆ ಶಿಕ್ಷಣದ ಹೊಣೆ ನಿಮ್ಮನ್ನು ನಾಗರೀಕರನ್ನಾಗಿ ಮಾಡುವುದೇ ಆದುದರಿಂದ ಮತ್ತು ಮಾತೃ ಭಾಷೆಗೂ ನಾಗರೀಕತೆಗೂ ಯಾವುದೇ ಸಂಬಂಧವಿಲ್ಲದಿರುವುದರಿಂದ, ಶಿಕ್ಷಣಕ್ಕೂ ಮಾತೃಭಾಷೆಗೂ ಯಾವುದೇ ಸಂಬಂಧವಿರಲಾರದೆಂದು ಅದು ತರ್ಕಿಸಿ ಹೇಳಿದೆ!

ಇದೀಗ ಮುಖ್ಯ ಪ್ರಶ್ನೆ: ಮಾತೃಭಾಷೆಗೇ ಸ್ಥಾನವಿಲ್ಲದ ನಾಗರೀಕತೆ ಅದೆಂತಹ ನಾಗರೀಕತೆ? ಇದು ದೊಡ್ಡ ಪ್ರಶ್ನೆ. ದೊಡ್ಡ ಜಾಗೃತಿ ಮತ್ತು ದೊಡ್ಡ ಹೋರಾಟವನ್ನು ಬೇಡುವಂತಹ ಪ್ರಶ್ನೆ. ಆದರೆ ಈ ಹೋರಾಟವನ್ನು-ನಮ್ಮ ಮಟ್ಟಿಗೆ ಕನ್ನಡದ ಹೋರಾಟವನ್ನು- ನಡೆಸುವವರು ಯಾರು? ಈಗ ಹೋರಾಟವೆಂಬುದೂ ಈ ದರಿದ್ರ ನಾಗರೀಕತೆಯ ಪ್ರಭಾವಕ್ಕೆ ಸಿಕ್ಕಿ, ಅಧಿಕಾರದ ಹೋರಾಟವಾಗಿ ಪರಿವರ್ತಿತವಾಗಿದೆ. ಹಾಗಾಗಿಯೇ ಕನ್ನಡದ ಹೋರಾಟವೆಂದರೆ ಈಗ ಕನ್ನಡಕ್ಕೆ ಸಂಬಂಧಪಟ್ಟ ವಿವಿಧ ಅಕಾಡೆಮಿಗಳ, ಪ್ರಾಧಿಕಾರಗಳ ಮತ್ತು ಪರಿಷತ್ತುಗಳ ಅಧ್ಯಕ್ಷಗಿರಿಗಳಿಗೆ, ಪದಾಧಿಕಾರಗಳಿಗೆ, ಸದಸ್ಯತ್ವಗಳಿಗೆ ನಡೆಸುವ ವಶೀಲಿಬಾಜಿ ಮತ್ತು ಚುನಾವಣಾ ಹೋರಾಟಗಳಾಗಿ ಪರಿವರ್ತಿತವಾಗಿಬಿಟ್ಟಿವೆ. ಹಾಗಾಗಿಯೇ, ಅಂದಿನ ಆಲೂರು ವೆಂಕಟರಾಯರ ಹೋರಾಟ ಇಂದಿನ ಟಿ. ನಾರಾಯಣಗೌಡರ ಹೋರಾಟದ ರೂಪ ತಳೆದುಬಿಟ್ಟಿದೆ. ಕನ್ನಡದ

ಹೆಸರಿನ ಕುರ್ಚಿಗಳಿಗಾಗಿ ನಡೆದಿರುವ ಹೋರಾಟದ ಉದ್ವೇಗದಲ್ಲಿ ಈ ರೂಪಾಂತರದ ಅಪಾಯಗಳು ಯಾರಿಗೂ ಕಾಣದಾಗಿವೆಯೋ ಅಥವಾ ಯಾರಿಗೂ ಬೇಕಿಲ್ಲದಾಗಿದೆಯೋ ತಿಳಿಯುದಾಗಿದೆ. ಹಾಗಾಗಿಯೇ ಇಂದು ಕನ್ನಡದ ಹೋರಾಟ ಕೇವಲ ನಾಮಫಲಕಗಳಿಗಾಗಿ–ಅದರೆಲ್ಲ ಅರ್ಥಗಳಲ್ಲಿ– ನಡೆಯುವ ಹೋರಾಟವಾಗಿ ಪರಿವರ್ತಿತವಾಗಿದೆ.

ಮುಖ್ಯವಾಗಿ ನವೆಂಬರ್ ೧ನ್ನು ನಾವು ಏಕೆ ನೆನೆಯಬೇಕು, ಆಚರಿಸಬೇಕು ಎಂಬ ಪ್ರಶ್ನೆಯೇ ಮಸುಕಾಗಿ ರಾಜ್ಯೋತ್ಸವವೆಂಬುದು ಕನ್ನಡಿಗರ ಹುಸಿ ಅಹಂಕಾರದ ಮೆರೆದಾಟಕ್ಕೆ ನೆಪಮಾತ್ರವಾಗಿಬಿಟ್ಟಂತಿದೆ. ಇಲ್ಲ, ಹಾಗೇನೂ ಇಲ್ಲ ಎನ್ನುವಂತಾಗಲು, ಸರ್ಕಾರ ನವೆಂಬರ್ ಒಂದರಂದಾದರೂ, ಕನ್ನಡಿಗರ ಪ್ರಾಣಸಮವಾದ ಕನ್ನಡ ಭಾಷೆಯನ್ನು ಪ್ರಾಥಮಿಕ ಶಿಕ್ಷಣದ ಭಾಷೆಯಾಗಿ ಉಳಿಸಲು ತಾನೆಂತಹ ಪಣ ತೊಟ್ಟಿದ್ದೇನೆಂಬುದನ್ನು ಸ್ಪಷ್ಟವಾಗಿ ಸಾರಿ ಹೇಳಬೇಕಿದೆ.

ಈ ಎಲ್ಲ ಸಂಗತಿಗಳನ್ನು ವಿಷದೀಕರಿಸುವ, ಅವುಗಳ ಮೇಲೆ ಹೊಸ ಬೆಳಕು ಚೆಲ್ಲುವ ಬರಹಗಳನ್ನು ಇಲ್ಲಿ ನೀಡುತ್ತಿದ್ದೇವೆ. ಚಂಪಾ ಕನ್ನಡ ಚಳುವಳಿಯ ಇತಿಹಾಸವನ್ನು ತಮ್ಮದೇ ಹೊಸ ಸಂಯಮ ಮತ್ತು ವ್ಯವಧಾನಗಳಲ್ಲಿ ಚಿತ್ರಿಸಿದ್ದರೆ, ಎಚ್ಚೆಸ್ವಾರ್, ಜನ-ಭಾಷೆ–ಸರ್ಕಾರ–ಸಂಸ್ಕೃತಿಗಳ ಸಂಬಂಧಗಳ ಒಳ ಹೆಣಿಗೆಯನ್ನು ಬಿಡಿಸಿ ಹೇಳುವ ಪ್ರಯತ್ನ ಮಾಡಿದ್ದಾರೆ. ಟಿ. ಅವಿನಾಶ್ ಮತ್ತು ಎಸ್. ಮಂಜುನಾಥ್ ತಮ್ಮ ಕನ್ನಡ ಶಾಲೆಗಳ ಆಪ್ತ ನೆನಪುಗಳಲ್ಲಿ, ನಾವು 'ಅಭಿವೃದ್ಧಿ'ಯ ಹೆಸರಿನಲ್ಲಿ ಏನೆಲ್ಲ ಅಮೂಲ್ಯವಾದುದದನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬುದನ್ನು ಮತ್ತೆ ನಮಗೆ ನೆನಪು ಮಾಡಿಕೊಟ್ಟಿದ್ದಾರೆ. ನಿಮಗೇನನ್ನಿಸಿತು, ಬರೆಯಿರಿ.–**ಸಂ.**

ಡಿಸೆಂಬರ್, ೨೦೧೪

ನೆಹರೂ ಸ್ಮರಣೆಯ ನೆಪದಲ್ಲಿ ಇತಿಹಾಸವನ್ನು ಕೆದಕುತ್ತಾ...

ಪ್ರಿಯ ಓದುಗರೇ,

ಇದು ನಮ್ಮ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹ್ರೂ ಅವರ ೧೨೫ನೇ ಜನ್ಮದಿನಾಚರಣೆಯ ವರ್ಷ. ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕರಲ್ಲೊಬ್ಬರಾಗಿದ್ದ–ಬಹುಶಃ ಮಹಾತ್ಮ ಗಾಂಧಿ ನಂತರ ಅತ್ಯಂತ ಹೆಚ್ಚು ಜನಪ್ರಿಯರಾಗಿದ್ದ–ನೆಹ್ರೂ ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿಯಾಗಿದ್ದು ಸಹಜವೇ ಆಗಿತ್ತು. ಅದಕ್ಕೆ ಜನಸಮ್ಮತಿಯೂ ಇತ್ತು ಎಂಬುದು ಅವರು ಸತತವಾಗಿ ಮೂರು ಮಹಾ ಚುನಾವಣೆಗಳಲ್ಲಿ ತಮ್ಮ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿಕೊಂಡು ೧೭ ವರ್ಷಗಳ ಕಾಲ ಯಾವ ಪ್ರತಿಸ್ಪರ್ಧಿಯೂ ಇಲ್ಲದೆ–ತಮ್ಮ ಕೊನೆಯುಸಿರೆಳೆಯುವವರೆಗೂ–ಪ್ರಧಾನಿಯಾಗಿದ್ದುದೇ ಸಾಕ್ಷಿ. ಸ್ವಾತಂತ್ರ್ಯ ಹೋರಾಟದ ಗಾಂಧಿ ಮೌಲ್ಯಗಳಿಗೆ ಅವರು ಸಾಕ್ಷಿಯಾಗಿದ್ದುದರಿಂದಲೇ ಅವರ ಸರ್ಕಾರ ಹಲವು ಭ್ರಷ್ಟಾಚಾರದ ಹಗರಣಗಳು ಮತ್ತು ಕೆಲವು ತಪ್ಪು ನೀತಿ–ನಿರ್ಧಾರಗಳ ಕಷ್ಟಗಳಿಗೆ ಸಿಕ್ಕಿಹಾಕಿಕೊಂಡರೂ, ಆಚಾರ್ಯ ಕೃಪಲಾನಿ, ಆಚಾರ್ಯ ನರೇಂದ್ರದೇವ, ರಾಜಾಜಿ, ಜಯಪ್ರಕಾಶ್ ನಾರಾಯಣ್, ರಾಮಮನೋಹರ ಲೋಹಿಯಾರಂತಹ ಸ್ವಾತಂತ್ರ್ಯ ಹೋರಾಟದ ಮೂಸೆಯಲ್ಲಿ ರೂಪುಗೊಂಡ ಅತಿರಥ ಮಹಾರಥರ ರಾಜಕೀಯ ದಾಳಿಗಳೆದುರಿನಲ್ಲಿಯೂ ಅವರು ನಾಯಕರಾಗಿ ಉಳಿದರು.

ಹಾಗೆ ನೋಡಿದರೆ, ಯಾವುದು ಅವರ ಮಹಾಶಕ್ತಿಯಾಗಿತ್ತೋ ಮತ್ತು ಯಾವುದರ ಆಧಾರದ ಮೇಲೆ ಅವರು ವಿಶ್ವನಾಯಕರಾಗುವ ಮಹತ್ವಾಕಾಂಕ್ಷೆ ಪ್ರದರ್ಶಿಸಿದ್ದರೋ, ಆ ವಿದೇಶಾಂಗ ವ್ಯವಹಾರಗಳ ಪರಿಣಿತಿಯಲ್ಲಿನ ಒಂದು ಲೋಪವೇ ಅವರ ರಾಜಕೀಯ ವರ್ಚಸ್ಸಿನ ಮತ್ತು ದೈಹಿಕ ಆರೋಗ್ಯದ ಅವನತಿಗೆ ಕಾರಣವಾಯಿತು. ಚೀನಾದೊಡನೆಯ

ಅವರ ವಿದೇಶಾಂಗ ನೀತಿಯು–ಹಲವರ ಎಚ್ಚರಿಕೆಗಳ ನಡುವೆಯೂ– ಭೋಳೆಭೋಳೆಯಾಗುತ್ತಾ ಹೋಗಿ ಕೊನೆಗೆ ಆ ದೇಶದೊಡನೆ ಗಡಿ ವಿವಾದದ ಸಂಬಂಧವಾಗಿ ಯುದ್ಧ ಅನಿವಾರ್ಯವಾಗಿ ಭಾರತ ಅದರಲ್ಲಿ ಹೀನಾಯವಾಗಿ ಸೋಲಬೇಕಾಯಿತು. ಇದು ನೆಹ್ರೂರ ನಾಯಕತ್ವದ ನೈತಿಕ ಸ್ಥೈರ್ಯವನ್ನು ಉಡುಗಿಸಿತು. ಅದು ಅವರ ಪ್ರಾಣವನ್ನೇ ಬಲಿತೆಗೆದುಕೊಂಡಿತು.

ನಿಜ, ನೆಹ್ರೂ ದೊಡ್ಡ ನಾಯಕರು. ಭಾರತ ಇಂದು ಆಧುನಿಕ ಪ್ರಜಾಪ್ರಭುತ್ವವಾಗಿ ಮತ್ತು ಒಂದು ಸ್ಥಿರ ಆರ್ಥಿಕ ವ್ಯವಸ್ಥೆಯಾಗಿ ಉಳಿದಿದ್ದರೆ, ಅದಕ್ಕೆ ಅವರು ತಮ್ಮ ೧೭ ವರ್ಷಗಳ ಅಧಿಕಾರಾವಧಿಯಲ್ಲಿ ಹಾಕಿಕೊಟ್ಟ ಸಾಂಸ್ಥಿಕ ಮತ್ತು ಸಂಪ್ರದಾಯಗಳ ಅಸ್ತಿವಾರಗಳೇ ಕಾರಣ. ಭಾರತದೊಂದಿಗೇ ವಸಾಹತುಶಾಹಿಯಿಂದ ವಿಮೋಚನೆಗೊಂಡ ಹಲವು ದೇಶಗಳು ಇಂದು ಯಾವ ಸ್ಥಿತಿಯಲ್ಲಿವೆ ಎಂದು ನೋಡಿದರೇ ನೆಹ್ರೂ ಅವರ ಕೊಡುಗೆಯ ಐತಿಹಾಸಿಕ ಮಹತ್ವ ಗೊತ್ತಾಗುತ್ತದೆ. ಅದಕ್ಕಾಗಿ ದೇಶ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಬೇಕಿದೆ ಮತ್ತು ಅದರ ಸಂಕೇತವಾಗಿ ಅವರ ೧೨೫ನೇ ಜನ್ಮವರ್ಷವನ್ನು ಸಂಭ್ರಮದಿಂದ ಆಚರಿಸಬೇಕಿದೆ. ಆದರೆ ಈ ಆಚರಣೆ ಈಗ ಹಾಗೆ ಆಗುತ್ತಿಲ್ಲವಾದರೆ–ಇನ್ನೂ ಸರಿಯಾಗಿ ಹೇಳುವುದಿದ್ದರೆ, ಹಾಗೆ ಆಗಲು ಸಾಧ್ಯವಾಗಿರದಿದ್ದರೆ–ಅದಕ್ಕೆ ಕಾರಣ, ಅವರ ರಾಜಕೀಯ ವಾರಸುದಾರಿಕೆಯ ಕಾಂಗ್ರೆಸ್ ಪಕ್ಷ ಅಧಿಕಾರ ಕಳೆದುಕೊಂಡಿದೆ ಎಂಬುದಷ್ಟೇ ಅಲ್ಲ–ಹಲವು ಬಾರಿ ಅದು ಹಾಗೆ ಕಳೆದುಕೊಂಡಿದೆ–ಅದು ಒಂದು ರಾಜಕೀಯ ಪಕ್ಷವಾಗಿ ಹೀನಾಯ ಸ್ಥಿತಿ ತಲುಪಿರುವುದೂ ಆಗಿದೆ. ಇದಕ್ಕೆ ಮತ್ತೆ ಹಲವಾರು ಕಾರಣಗಳನ್ನು ಹುಡುಕಬಹುದಾದರೂ, ಎದ್ದು ಕಾಣುವ ಒಂದು ಮುಖ್ಯ ಕಾರಣವೆಂದರೆ, ಅದು ತನ್ನೆಲ್ಲ ಪ್ರಜಾಸತ್ತಾತ್ಮಕತೆಯನ್ನು ಕಳೆದುಕೊಂಡು ಒಂದು ಕುಟುಂಬದ ಗುಲಾಮಗಿರಿಗೆ ಸಿಕ್ಕಿಹಾಕಿಕೊಂಡಿರುವುದು. ಜೊತೆಗೆ, ಇತಿಹಾಸದಲ್ಲಿನ ಎಲ್ಲ ಮಹಾಕುಟುಂಬಗಳಂತೆ ಕಾಲಕ್ರಮದಲ್ಲಿ ಅದರ ಎಲ್ಲ ಸತ್ವವೂ ನಷ್ಟವಾಗಿದ್ದು, ಸ್ವತಃ ತಾನೇ ವರ್ಚಸ್ವೀ ಅಥವಾ ಸ್ಫೂರ್ತಿಯುತ ಅಥವಾ ಪ್ರತಿಭಾಶಾಲಿ ನಾಯಕತ್ವವನ್ನು ಒದಗಿಸಲೂ ಆಗದೆ, ತನ್ನ ಒಣಪ್ರತಿಷ್ಠೆಯಲ್ಲಿ ಅನ್ಯ ಮೂಲಗಳ ನಾಯಕತ್ವವೂ ಬೆಳೆಯದಂತೆ ತಡೆಯುತ್ತಾ ಪಕ್ಷವನ್ನು ಒಂದುಪಾಳುಬಿದ್ದ ಕೋಟೆಯನ್ನಾಗಿ ಮಾಡಿಬಿಟ್ಟಿರುವುದು.

ಇದಕ್ಕೆ ಕಾರಣಗಳನ್ನು ನೆಹ್ರೂ ಶೈಲಿಯ ರಾಜಕಾರಣದಲ್ಲಿ ಹುಡುಕಬಹುದು. ರಾಷ್ಟ್ರ ನಿರ್ಮಾಣದ ದಿಕ್ಕನ್ನು ಗಾಂಧಿ ಪಥದಿಂದ ಯಾವುದೇ ವಿಷಾದ, ಪಶ್ಚಾತ್ತಾಪ ಅಥವಾ ಸಮಾಲೋಚನೆ–ಸಮರ್ಥನೆ ಇಲ್ಲದೆ ಸಂಪೂರ್ಣ ವಿಮುಖಗೊಳಿಸಿದ ನೆಹ್ರೂ, ನಾಯಕ ಆರಾಧನೆಯ ರಾಜಕೀಯ ಶೈಲಿಯನ್ನು ಬೆಳೆಸಿದ್ದನ್ನು ಕಾಂಗ್ರೆಸ್ಸಿನ ಇತಿಹಾಸ ಬಲ್ಲ ಯಾರೂ ಅಲ್ಲಗೆಳೆಯಲಾರರು. ಸ್ವಾತಂತ್ರ್ಯ ಹೋರಾಟದಲ್ಲಿ ಅವರಿಗೆ ಸರಿಸಮವಾಗಿ ಭಾಗವಹಿಸಿದ್ದ–ಈ ಹಿಂದೆ ತಿಳಿಸಿದ–ಮಹಾನಾಯಕರ ದಂಡೇ ಅವರ ವಿರುದ್ಧ ತಿರುಗಿ ಬೀಳಲು ಇದೇ ಮುಖ್ಯ ಕಾರಣವಾಗಿತ್ತು. ಲೋಹಿಯಾ ನೆಹ್ರೂ ವಿರುದ್ಧ ವೈಯಕ್ತಿಕ

ದಾಳಿ ಮಾಡಲೂ ಇದೇ–ವ್ಯಕ್ತಿ ಕೇಂದ್ರಿತ ರಾಜಕಾರಣವೇ–ಕಾರಣವಾಗಿತ್ತು. ನೆಹ್ರೂ ತಮ್ಮ ತಂದೆ ಮೋತಿಲಾಲ್ ನೆಹ್ರೂ ಸ್ವಾತಂತ್ರ್ಯಪೂರ್ವದಲ್ಲಿ ಪುತ್ರಪ್ರೇಮದಿಂದ ತಮ್ಮನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡುವ ಯಾವ ವಂಶ ರಾಜಕಾರಣವನ್ನು ಮಾಡಿದರೋ ಅದನ್ನು ತಮ್ಮ ಪುತ್ರಿ ಇಂದಿರಾ ಗಾಂಧಿಯವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡುವ ಮೂಲಕ ಮಾಡಿ ಮುಂದುವರೆಸಿದರು. ಇದರ ಮುಂದಿನದೆಲ್ಲವೂ ಇತಿಹಾಸ.

ಈ ರಾಜಕಾರಣದ ಭಾಗವಾಗಿಯೇ, ಅಂದರೆ ಕುಟುಂಬ ರಾಜಕಾರಣವನ್ನು 'ಅಧಿಕೃತ'ಗೊಳಿಸಲೆಂದೇ ಕುಟುಂಬದ ವೈಭವೀಕರಣದ ಯೋಜನೆಯ ಭಾಗವಾಗಿಯೇ, ನೆಹ್ರೂ ಸಮಕಾಲೀನರೇ ಆದ ಎಲ್ಲ ಪ್ರಮುಖ ನಾಯಕರನ್ನು ಹಿನ್ನೆಲೆಗೆ ಸರಿಸಲಾಯಿತು. ಈ ರಾಜಕಾರಣಕ್ಕೆ ಹೇಸಿ ಪಕ್ಷ ಬಿಟ್ಟುಹೋದ ಮೇಲೆ ಪ್ರಸ್ತಾಪಿಸಿದ ಮಹನೀಯರಿರಲಿ, ಪಕ್ಷದ ಪರಂಪರೆಯ ಭಾಗವಾದ ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕ್, ಸರ್ದಾರ್ ಪಟೇಲ್, ಸುಭಾಷ್‌ಚಂದ್ರ ಬೋಸ್, ಮದನಮೋಹನ ಮಾಳವೀಯ, ಗೋವಿಂದ ವಲ್ಲಭ ಪಂತ್ ಮುಂತಾದವರಿಗೆ ಸಾಂಕೇತಿಕ ಮಹತ್ವ ಮಾತ್ರ ನೀಡುವ ಪರಿಪಾಠ ಬೆಳೆಯಿತು. ಇದೇ ಇಂದು ಸುತ್ತಿಕೊಂಡು ಬಂದು ನೆಹ್ರೂ ಸ್ಮರಣೆಯ ಸಂಭ್ರಮದ ಗುಡಾರಗಳನ್ನು ಹಾರಿಸಿಕೊಂಡು ಹೋಗುತ್ತಿರುವುದು.

ಪ್ರಧಾನ ಮಂತ್ರಿ ಮೋದಿ ಔಪಚಾರಿಕತೆಗಾಗಿ ಹಿಂದಿನ ಸರ್ಕಾರ ರಚಿಸಿದ್ದ ನೆಹ್ರೂ ಸ್ಮರಣೆ ಸಮಿತಿಯನ್ನು ತಮ್ಮ ರಾಜಕಾರಣಕ್ಕೆ ತಕ್ಕಂತೆ ಪರಿಷ್ಕರಿಸಿ ಉಳಿಸಿಕೊಂಡಿರುವರಾದರೂ, ಅದು ಕಾಟಾಚಾರದ ಆಚರಣೆಗೆ ಮಾತ್ರ. ಏಕೆಂದರೆ, ಮೋದಿ, ನೆಹ್ರೂ ವಿರುದ್ಧ ಪಟೇಲರನ್ನು ನಿಲ್ಲಿಸಿ ಮಾಡುತ್ತಿರುವ ರಾಜಕಾರಣವನ್ನು ಈಗ ರಾಷ್ಟ್ರ ತಮಾಷೆಯಿಂದ ಗಮನಿಸುತ್ತಿದೆ. ತಮಾಷೆ ಏಕೆಂದರೆ, ರಾಷ್ಟ್ರೀಯತೆಯ ಬಗ್ಗೆ ಯಾವಾಗಲೂ ಉಮ್ಮಳಿಸಿಕೊಂಡೇ ಮಾತಾಡುವ ಬಿಜೆಪಿಗೆ ತನ್ನವರೆಂದು ರಾಷ್ಟ್ರದ ಮುಂದೆ ಇಡಲು ಈಗ ಐತಿಹಾಸಿಕ ನಾಯಕರೇ ಇಲ್ಲವಾಗಿ ಅದು ಪಟೇಲ್, ಸುಭಾಷ್, ಮಾಳವೀಯ, ಪಂತ್, ಜೆಪಿ ಎಂದು ಕಾಂಗ್ರೆಸ್ ಪರಂಪರೆಯ ನಾಯಕರನ್ನೇ ತನ್ನೊಳಕ್ಕೆ ಅನುಸಂಧಾನಿಸಿಕೊಳ್ಳಲು ಪ್ರಯತ್ನ ಮಾಡುತ್ತಿದೆ. ಆದರೆ ಅದೇ ಸಮಯದಲ್ಲಿ ಅದು 'ಕಾಂಗ್ರೆಸ್ ಮುಕ್ತ ಭಾರತ'ದ ಮಾತನ್ನೂ ಆಡುತ್ತಿದೆ. ಆದರೆ ಒಂದು ಮಾತು: ಮಹಾತ್ಯಾಗಗಳ ಓರ್ವ ಬಹುದೊಡ್ಡ ನಾಯಕರಾದ ಸರ್ದಾರ್ ಪಟೇಲರು ನೆಹ್ರೂರಂತೆ ಎಂದೂ ರಾಷ್ಟ್ರದ ಉದ್ದಗಲಕ್ಕೂ ಮಾನ್ಯತೆ ಪಡೆದ ಜನಪ್ರಿಯ ನಾಯಕರಾಗಿರಲಿಲ್ಲ. ಅಷ್ಟೇ ಅಲ್ಲ, ಕಾಂಗ್ರೆಸ್ ಆಂದೋಲನ ಮತ್ತು ಪಕ್ಷದೊಳಗೂ ಅವರು ತಮ್ಮ ಸಂಪ್ರದಾಯವಾದಿ ಮತ್ತು ಜಿಗುಟು ಸ್ವಭಾವದಿಂದಾಗಿ ಸರ್ವಮಾನ್ಯ ನಾಯಕರಾಗಿರಲಿಲ್ಲ. ಅವರ ರಾಜಕಾರಣದ ಒಳಹೊಡೆತಗಳನ್ನು ಸೈರಿಸಲಾರದೆಯೇ ಕಾಂಗ್ರೆಸ್ಸಿನೊಳಗಿನ ಎಡಪಂಥೀಯರು–ನಿರ್ದಿಷ್ಟವಾಗಿ ಕಾಂಗ್ರೆಸ್ ಸಮಾಜವಾದಿ ಗುಂಪು–ಪಕ್ಷ ಬಿಟ್ಟು ಹೊರಬರಬೇಕಾಗಿ ಬಂದು ಪಕ್ಷ ಉದ್ಯಮಪತಿಗಳ ಮತ್ತು ಜಮೀನ್ದಾರರ ಯಥಾಸ್ಥಿತಿವಾದಿ ಪಕ್ಷವೆಂದು ಹೆಸರಾಗಲು ಕಾರಣವಾಯಿತು.

ಬಹುಶಃ ಯಾವುದೇ ಪಕ್ಷ ಕಾಂಗ್ರೆಸ್ಸೀಕರಣ ಎಂಬ ವಿಶಿಷ್ಟತೆಗೆ ಒಳಪಡದೆ ಈ ವಿಶಿಷ್ಟ ರಾಷ್ಟ್ರವನ್ನು ಆಳಲಾಗದೆಂದು ಕಾಣುತ್ತದೆ! ಬಿಜೆಪಿ ಕೂಡ ಈಗ ಪಟೇಲರನ್ನು ತನ್ನ ನಾಯಕ ಪ್ರತೀಕರನ್ನಾಗಿ ಮಾಡಿಕೊಂಡು ಔಪಚಾರಿಕವಾಗಿಯೇ ಈಗ ಕಾಂಗ್ರೆಸ್ಸೀಕರಣದ ಹಾದಿ ತುಳಿದಂತಿದೆ. ಅದರ ಲಕ್ಷಣಗಳು ಒಂದೊಂದಾಗಿ ಹೊರತೋರತೊಡಗಿವೆ: ಅದರೆಲ್ಲ ಭರವಸೆಗಳು ಕಾಂಗ್ರೆಸ್ಸೀಕರಣವಾಗುತ್ತಿವೆ! ವಿದೇಶಗಳಲ್ಲಿರುವ ಕಪ್ಪುಹಣ ವಾಪಸ್ ತರುವ ಭರವಸೆ ಕಾಂಗ್ರೆಸ್ಸಿನಂತಹುದೇ ಕುಂಟುನೆಪದ ಮರೆಯಲ್ಲಿ ಮಸುಕಾಗತೊಡಗಿದೆ. ಅದರ 'ಚಿಕ್ಕ ಸರ್ಕಾರ ಚೊಕ್ಕ ಆಡಳಿತ'ದ ಘೋಷಣೆ ಈಗ ೬೬ ಸಚಿವರ ಸಂಪುಟದ ಭಾರದಲ್ಲಿ ಕುಸಿಯತೊಡಗಿದೆ. ಜೊತೆಗೆ ಅದು ಕಾಂಗ್ರೆಸ್ ಸಂಪುಟದಷ್ಟೇ ಅನುಮಾನಾಸ್ಪದ ವ್ಯಕ್ತಿಗಳಿಗೆ ಆಶ್ರಯದಾಣವಾಗಿದೆ. ಇನ್ನು ಕಾಶ್ಮೀರಕ್ಕೆ ಸಂಬಂಧಿಸಿದ ವಿಧಿ ೩೭೦ರ ರದ್ಧತಿಯ ವೀರಾವೇಶದ ಮಾತುಗಳು ಜಮ್ಮು-ಕಾಶ್ಮೀರ ಚುನಾವಣೆಗಳ ಎದುರಿನಲ್ಲಿ ಕರಗಿ ಹೋಗಿ ಕಾಂಗ್ರೆಸ್ಸಿನಂತೆಯೇ ಪ್ರಜಾಸತ್ತಾತ್ಮಕ ತೀರ್ಮಾನದ ಮಾತುಗಳು ಹೊರಟಿವೆ!

ಆದರೆ ಕಾಂಗ್ರೆಸ್ ಏನು ಮಾಡುತ್ತಿದೆ? ಇಂದು ರಾಷ್ಟ್ರಕ್ಕೆ ಒಂದು ಸಮರ್ಥ ವಿರೋಧ ಪಕ್ಷ ಬೇಕಿದೆ. ರಾಷ್ಟ್ರದ ಜನತೆ ಬಹುದೀರ್ಘಕಾಲ ತನ್ನಲ್ಲಿಟ್ಟಿದ್ದ ನಂಬಿಕೆಯ ಋಣ ತೀರಿಸಲಾದರೂ ಕಾಂಗ್ರೆಸ್ ಮೈಕೊಡವಿ ಎದ್ದು ತನ್ನ ಗುರುತನ್ನು ಪುನರನ್ವೇಷಿಸಿಕೊಂಡು ನವ ಚೈತನ್ಯದೊಂದಿಗೆ ಜನರ ಮುಂದೆ ಮತ್ತು ಮಧ್ಯೆ ಬರಬೇಕಿದೆ. ತನ್ನಿಂದ ಕಸಿಯಲ್ಪಡುತ್ತಿರುವ ಗಾಂಧಿ-ನೆಹರೂ-ಪಟೇಲ್‌ರ ಪರಂಪರೆಗೆ ಮತ್ತೆ ಜೀವ ಕೊಟ್ಟು ಹೊಸ ಇತಿಹಾಸ ನಿರ್ಮಿಸುವ ಸಾಹಸಕ್ಕೆ ಕೈಹಾಕಬೇಕಿದೆ.

ಆದರೆ ಇಂದು ಅದರ ಉಳಿದಿರುವ ಏಕೈಕ ನೆಲೆಯಾದ ಕರ್ನಾಟಕದಲ್ಲಿ ಕಾಂಗ್ರೆಸ್‌ನ ಚಾಲೂ ಚಹರೆಗಳು ಆ ಭರವಸೆಯನ್ನೇ ಹುಟ್ಟಿಸುತ್ತಿಲ್ಲ. ಅದು ಎಂದಿನಂತೆ ಅಧಿಕಾರದ ಕಚ್ಚಾಟಗಳಲ್ಲೇ ತೊಡಗಿಕೊಂಡಿದೆ. ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಗೋ ದಕ್ಕಿರುವ ತಮ್ಮ ಬಹುದಿನದ ಆಸೆಯ ಮುಖ್ಯಮಂತ್ರಿ ಪದವಿಯನ್ನು ಉಳಿಸಿಕೊಳ್ಳುವ ರಾಜಕಾರಣದಲ್ಲೇ ತೊಡಗಿದ್ದಾರೆ. ಆಡಳಿತದಲ್ಲಿ ತನ್ನದೇ ಛಾಪು ಮೂಡಿಸಿ ಪಕ್ಷಕ್ಕೆ ಪುನಃಶ್ಚೇತನ ನೀಡುವ ಐತಿಹಾಸಿಕ ಹೊಣೆ ತನಗಿದೆ ಎಂಬ ಅರಿವೇ ಅವರಿಗಿದ್ದಂತೆ ಕಾಣುತ್ತಿಲ್ಲ. ಅವರು ಒಂದೂ ಧೀರ ನಡೆ ಇಲ್ಲದೆ, ಯಾರಲ್ಲೂ ಸ್ಫೂರ್ತಿ ಹುಟ್ಟಿಸದವರಾಗಿದ್ದಾರೆ. ಒಂದೂವರೆ ವರ್ಷ ಕೊಸರಾಡಿ ನಿಗಮ-ಮಂಡಳಿಗಳ ಪದಾಧಿಕಾರಗಳನ್ನು ಅವರು ಅರ್ಧ ಅವಧಿಗೆ ಹಂಚಿರುವ ಮತ್ತು ರಾಜ್ಯದ ಜನತೆಯ ಕಣ್ಣಿಗೆ ರಾಚುವಂತೆ ಕಾಣುತ್ತಿರುವ ಭ್ರಷ್ಟ ಮತ್ತು ಅದಕ್ಷ ಸಚಿವರನ್ನು ಕೈಬಿಟ್ಟು ಸಂಪುಟ ಪುನಾರಚನೆ ಮಾಡಿ ಸರ್ಕಾರದ ಬಿಂಬವನ್ನು ಸುಧಾರಿಸಲು ಹಿಂಜರಿಯುತ್ತಿರುವ ರೀತಿ-ನೀತಿಗಳನ್ನು ನೋಡಿದರೆ ಯಾವ ಆಸೆಯೂ ಹುಟ್ಟದಂತಾಗಿದೆ. ಆದರೆ, ಇದನ್ನೆಲ್ಲ ಯಾರಿಗೆ ಹೇಳುವುದು? ಅದೇ ಇಂದು ದೊಡ್ಡ ಪ್ರಶ್ನೆಯಾಗಿದೆ.

ಕವಲುದಾರಿಯಲ್ಲಿ ಅಂಬೇಡ್ಕರ್ ಪರಂಪರೆ?

ಡಿಸೆಂಬರ್ ಆರು ಡಾ. ಬಿ.ಆರ್. ಅಂಬೇಡ್ಕರ್ ಅವರು ಕೊನೆಯುಸಿರೆಳೆದ ದಿನ. ಅವರ ಪರಿನಿರ್ವಾಣದ ದಿನ. ಆ ದಿನ ನಮ್ಮ ಇತಿಹಾಸ ಇನ್ನೊಂದು ಘಟನೆಗೂ ಸಾಕ್ಷಿಯಾಗಿದೆ. ಅಂದು ನಮ್ಮ ಹಿಂದೂ ಧರ್ಮ ರಕ್ಷಕರೆಂಬ ಪುಂಡರು ಬಾಬ್ರಿ ಮಸೀದಿಯನ್ನು ಉರುಳಿಸಿದ ದಿನವೂ ಹೌದು. ಅಂದು, ಯಾವುದನ್ನು ನಾವೆಲ್ಲ ಹಿಂದೂ ಧರ್ಮದ ಹೆಮ್ಮೆಯೆಂದು ಹೇಳಿಕೊಳ್ಳುತ್ತಿದ್ದೆವೋ ಆ ಸರ್ವಧರ್ಮ ಸಮಭಾವದ ಪರಿನಿರ್ವಾಣವೂ ಸಂಭವಿಸಿತು. ಈ ಪರಿನಿರ್ವಾಣವನ್ನು ಅಂಬೇಡ್ಕರ್ ಪರಿನಿರ್ವಾಣದ ದಿನದಂದೇ ನಮ್ಮ ಹಿಂದೂ ಧರ್ಮ ರಕ್ಷಕರು ಆರಿಸಿಕೊಂಡದ್ದು ಆಕಸ್ಮಿಕವೇನೂ ಇರಲಾರದು. ಏಕೆಂದರೆ ನಾವು ಯಾವುದನ್ನು ಸ್ಥೂಲವಾಗಿ ಹಿಂದೂ ಧರ್ಮವೆಂದು ಕರೆಯುತ್ತೇವೆಯೋ ಅದರ ದುರಭಿಮಾನಿ ಆವೃತ್ತಿಯ ಎಲ್ಲ ದುಷ್ಟಗುಣಗಳ ಖಂಡನೆ ಮತ್ತು ವಿರೋಧಕ್ಕೆ ಅಂಬೇಡ್ಕರ್ ಪ್ರತೀಕವಾಗಿದ್ದರು. ಅಂದು ನಮ್ಮ ಹಿಂದೂ ಧರ್ಮ ದುರಭಿಮಾನಿಗಳು ಈ ಪ್ರತೀಕದ ಮೇಲೆ ಸೇಡು ತೀರಿಸಿಕೊಂಡ ರೀತಿ ಇದು ಇರಲೂಬಹುದು.

ಅದೇನೇ ಇರಲಿ, ಹಿಂದೂ ಧರ್ಮದ ಈ ದಾರಿ ತಪ್ಪಿದ ಮಕ್ಕಳ ರಾಜಕಾರಣ ಅಲ್ಲಿಗೇ ನಿಲ್ಲಲಿಲ್ಲ. ಈ ರಾಜಕಾರಣದ ಫಲವಾಗಿ ಅಸ್ತಿತ್ವಕ್ಕೆ ಬಂದ ಅವರ ಸರ್ಕಾರ ಈ ರಾಜಕಾರಣದ ಭಾಗವಾಗಿ ನಡೆಸಿದ ಪರಮಾಣು ಸ್ಫೋಟ ಕಾರ್ಯಕ್ರಮಕ್ಕೆ 'ಬುದ್ಧ ನಕ್ಕ' ಎಂದು ಹೆಸರಿಟ್ಟು ಸಂತೋಷ ಪಟ್ಟಿತು. ಬುದ್ಧ, ದಾರಿ ತಪ್ಪಿದ್ದ ಹಿಂದೂ ಧರ್ಮಕ್ಕೆ ಸರಿ ದಾರಿ ತೋರಿದ ಮಹಾತ್ಮ. ಅದರ ಬುಡಕ್ಕೇ ಕೈಹಾಕಿ, ಅದರಲ್ಲಿ ಅಂತರ್ಗತವಾಗಿ ಹೋಗಿದ್ದ ಅಸಮಾನತೆಯನ್ನು ನಿವಾರಿಸಲು ಅನಾತ್ಮವಾದವನ್ನು ಬೋಧಿಸಿದ ಯುಗಪುರುಷ. ಈ ಅಸಮಾನತೆಯ ಅಮಾನುಷ ರೂಪವಾಗಿ ಜಾರಿಗೆ ಬಂದಿದ್ದ ಅಸ್ಪೃಶ್ಯತೆಯ ಬೆಂಕಿಯಲ್ಲಿ ಬೆಂದ ಜನತೆಯ ದನಿಯಾದ ಅಂಬೇಡ್ಕರ್ ಸಹಜವಾಗಿಯೇ ಸಮಾಧಾನ–ಸಾಂತ್ವನಕ್ಕೆ ಆಶ್ರಯಿಸಿದ್ದು ಬುದ್ಧಗುರುವನ್ನು; ಅವನ ಬೌದ್ಧ ಧರ್ಮವನ್ನು. ಹಾಗಾಗಿ ಬುದ್ಧ ಕೂಡ ಆ ಶಠ ಹಿಂದೂವಾದಿಗಳ ಗುರಿಯಾಗಿದ್ದು ಸಹಜವೇ ಆಗಿದೆ.

ಡಿಸೆಂಬರ್ ಆರು ಎಂದರೆ ಇದೆಲ್ಲ ನೆನಪಿಗೆ ಬರುತ್ತದೆ. ಬರಬೇಕು. ವಿಶೇಷವಾಗಿ ಇಂದು. ತನ್ನ ಈ ಎರಡು ದುಷ್ಕೃತ್ಯಗಳಿಗಾಗಿ ಈವರೆಗೆ ಕಿಂಚಿತ್ತೂ ಪಶ್ಚಾತ್ತಾಪ ವ್ಯಕ್ತಪಡಿಸದಿರುವ (ಮತ್ತು ಅದರ ಸಮರ್ಥನೆಯೋ ಎಂಬಂತೆ ೨೦೦೨ರಲ್ಲಿ ಗುಜರಾತ್‌ನಲ್ಲಿ ನಡೆದ ಸಾಮೂಹಿಕ ನರಹತ್ಯೆಯ) ರಾಜಕಾರಣದ ದಿಗ್ವಿಜಯದ ಪ್ರತೀಕವಾಗಿ ನರೇಂದ್ರ ಮೋದಿಯವರು ನಮ್ಮ ಪ್ರಧಾನಮಂತ್ರಿಯಾಗಿ ಎದುರಾಳಿಯೇ ಇಲ್ಲದ ಬಟಾಬಯಲಿನಲ್ಲಿ ಆಡಳಿತ ನಡೆಸಲಾರಂಭಿಸಿರುವ ಹೊತ್ತಿನಲ್ಲಿ, ಇದೆಲ್ಲ

ಹೇಗಾಯಿತು, ಏಕಾಯಿತು ಎಂದು ನಿರ್ಮಮವಾಗಿ ಯೋಚಿಸುವ ಕಾಲವಿದು. ಅಂಬೇಡ್ಕರ್ ನೆಪದಲ್ಲಾದರೂ, ಅಂಬೇಡ್ಕರ್ ಪರಂಪರೆಯನ್ನು ಒರೆಗಲ್ಲಾಗಿ ಇಟ್ಟುಕೊಂಡು.

ಭಾರತ ದೀರ್ಘ ಕಾಲದ ಗುಲಾಮಗಿರಿಯಿಂದ ವಿಮೋಚನೆಗೊಳ್ಳುತ್ತಿದ್ದ ಸಂದರ್ಭದಲ್ಲಿ ಆಧುನಿಕ ಭಾರತದ ಕನಸಿನ ಮೂರು ಎರಕಗಳು ಪ್ರಧಾನವಾಗಿ ರೂಪುಗೊಂಡಿದ್ದವು. ಒಂದು ಗಾಂಧಿಯದ್ದಾದರೆ, ಇನ್ನೊಂದು ಅಂಬೇಡ್ಕರರದ್ದು. ಮತ್ತೊಂದು ಸುಪ್ತವಾಗಿಯೇ ಕ್ರಿಯಾಶೀಲವಾಗಿದ್ದುಕೊಂಡು ಗಾಂಧಿಯ ಜೀವವನ್ನೇ ಬಲಿ ತೆಗೆದುಕೊಂಡ ಸಾವರ್ಕರರದ್ದು.

ಗಾಂಧಿ ಭಾರತದ ವಿಮೋಚನೆಗಾಗಿ ರೂಪಿಸಿದ ರಾಜಕಾರಣದಲ್ಲೇ ಆಧುನಿಕ ಭಾರತದ ಕನಸಿನ ಎರಕವನ್ನೂ ಅಂತರ್ಗತಗೊಳಿಸಿ ('ಹಿಂದ್ ಸ್ವರಾಜ್' ರೂಪದಲ್ಲಿ) ಪ್ರಸ್ತುಪಡಿಸಿದ್ದರು. ಮಿಕ್ಕಿಬ್ಬರೂ ತಂತಮ್ಮದೇ ಸಾಮಾಜಿಕ-ರಾಜಕೀಯ ಕಾರಣಗಳಿಗಾಗಿ ವಿಮೋಚನೆಯ ಪ್ರಕ್ರಿಯೆಯನ್ನೇ ಸಮಸ್ಯಾತ್ಮಕಗೊಳಿಸಿ, ಆ ಸಮಸ್ಯಾತ್ಮಕತೆಯಲ್ಲಿ ಆಧುನಿಕ ಭಾರತದ ಎರಕವನ್ನು ರೂಪಿಸಿದವರು. ಈ ಇಬ್ಬರೂ ಗಾಂಧಿ ದರ್ಶನದ ವಿರೋಧಿಗಳು. ಇಂದು ಸಾವರ್ಕರ್‌ವಾದ ಅಧಿಕಾರದ ಗದ್ದುಗೆ ಏರಿದೆ. ಒಂದು ಸಮಾಧಾನವೆಂದರೆ, ಅದಕ್ಕೆ ಸಾವರ್ಕರ್ ಹೆಸರನ್ನು ಬಹಿರಂಗವಾಗಿ ಹೇಳುವ ಮುಖವಿನ್ನೂ ಮೂಡಿಲ್ಲ. ತನ್ನ ದಿಗ್ವಿಜಯದ ಹಾದಿಯುದ್ದಕ್ಕೂ ಅದು ಬಳಸಿದ್ದು ಸಾರತಃ ಸಾವರ್ಕರ್ ಕನಸಿನ ಬಲಿಷ್ಠ ಹಿಂದೂ ರಾಷ್ಟ್ರದ ಕೇಂದ್ರದಲ್ಲಿದ್ದ ಆಧುನಿಕ ಅಭಿವೃದ್ಧಿಯ ಬೀಜಮಂತ್ರವನ್ನೇ. ಆದರೂ ಇಂದು ಅದು ಗಾಂಧಿ-ಅಂಬೇಡ್ಕರ್ ಪರಂಪರೆಗಳ ಪರಿಭಾಷೆಯಲ್ಲೇ ಮಾತಾಡುವ ಅನಿವಾರ್ಯತೆಗೆ ಸಿಕ್ಕಿದ್ದರೆ ಅದಕ್ಕೆ ಕಾರಣ, ನಮ್ಮ ರಾಷ್ಟ್ರೀಯ ಹೋರಾಟದಲ್ಲಿ ಮೂಡಿದ ಜಾಗೃತ ಪ್ರಜ್ಞೆಯನ್ನು ಅದಕ್ಕೆ ಅಷ್ಟು ಸುಲಭವಾಗಿ ಅಳಿಸಿಹಾಕಲು ಸಾಧ್ಯವಿಲ್ಲದಿರುವುದು. ಈ ಪ್ರಜ್ಞೆಯಲ್ಲಿ ಸಾವರ್ಕರ್ ಮತ್ತವರ ಸೈದ್ಧಾಂತಿಕ ಗೆಳೆಯರಿಗೆ ಸ್ಥಾನವಿಲ್ಲ. ಏಕೆಂದರೆ, ಇವರೆಲ್ಲ ಈ ಹೋರಾಟ ಮುಖ್ಯವಾಹಿನಿಯಿಂದ ಗೈರುಹಾಜರಾಗಿದ್ದವರು.

ಆದರೆ ಈ ಗಾಂಧಿ-ಅಂಬೇಡ್ಕರ್ ಪರಿಭಾಷೆಯ ಮರೆಯಲ್ಲಿ ಇಂದಿನ ಪ್ರಭುತ್ವ ಕೈಗೆತ್ತಿಕೊಳ್ಳುವ ಸೂಚನೆ ನೀಡುತ್ತಿರುವ ಕಾರ್ಯಕ್ರಮಗಳೆಲ್ಲವೂ ಸಾವರ್ಕರ್‌ವಾದದತ್ತಲೇ ಬೊಟ್ಟು ಮಾಡುತ್ತಿವೆ. ತಾತ್ವಿಕ ನೆಲೆಯಲ್ಲಿ ಹೇಳುವುದಾದರೆ, ಸರ್ದಾರ್ ಪಟೇಲರನ್ನು ಗಾಂಧಿ ಪರಂಪರೆಯಿಂದ ಕಿತ್ತು ನೆಹರೂ ವಿರುದ್ಧ ನಿಲ್ಲಿಸಿ ವೈಭವೀಕರಿಸುತ್ತಿರುವ ಪರಿಯನ್ನು ನೋಡಿರಿ. ಇದನ್ನು ಗಾಂಧಿ ತನ್ನ ರಾಜಕೀಯ ಉತ್ತರಾಧಿಕಾರಿಯನ್ನಾಗಿ ಪಟೇಲ್‌ಗೆ ಬದಲಾಗಿ ನೆಹರೂ ಕಡೆಗೇ ಏಕೆ ಹೆಚ್ಚು ಒಲವು ತೋರಿದರು ಎಂಬುದರ ವಿವೇಚನೆಯ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ಇದರೊಂದಿಗೇ, ಈ ಮೊದಲು ಕಾಂಗ್ರೆಸ್ಸಿನೊಳಗೇ ಇದ್ದು ತಮ್ಮ ಪ್ರಾಣಗಳನ್ನೇ ಒತ್ತೆಯಿಟ್ಟ ಪ್ರಾಮಾಣಿಕ ಹೋರಾಟಗಳು ಮತ್ತು ನವೀನ ಚಿಂತನೆಗಳ ಮೂಲಕ ಗಾಂಧಿ ಮನಸ್ಸನ್ನು ಗೆದ್ದು ಅವರನ್ನು ತೀವ್ರವಾಗಿ

ಪ್ರಭಾವಿಸತೊಡಗಿದ್ದ ಆಚಾರ್ಯ ನರೇಂದ್ರ ದೇವ, ಜಯಪ್ರಕಾಶ್ ನಾರಾಯಣ, ರಾಮಮನೋಹರ ಲೋಹಿಯಾ, ಅಚ್ಯುತ ಪಟವರ್ಧನ್ ಮುಂತಾದ ಸಮಾಜವಾದಿಗಳನ್ನು ಬಗ್ಗುಬಡಿದು ಅವರನ್ನು ಕಾಂಗ್ರೆಸ್ಸಿನಿಂದ ಹೊರಹಾಕಲು ಪಟೇಲರು (ಬಾಬು ರಾಜೇಂದ್ರ ಪ್ರಸಾದರೊಂದಿಗೆ ಸೇರಿ) ನಡೆಸಿದ ಪಕ್ಷ ರಾಜಕಾರಣವನ್ನೂ ಗಮನಿಸಬೇಕು. (ಗಾಂಧಿ ವಿರುದ್ಧ ನಿಂತ ಕಾರಣದಿಂದಾಗಿ ಕಾಂಗ್ರೆಸ್ ರಾಜಕಾರಣದೊಳಕ್ಕೆ ಪ್ರವೇಶಿಸದಿದ್ದ ಅಂಬೇಡ್ಕರ್, ಪಟೇಲರಿಂದ ಬಚಾವಾದರೆಂದೇ ಹೇಳಬೇಕು!)

ಹಾಗೇ ಮೋದಿ ಗಾಂಧಿ ಜಯಂತಿಯನ್ನು ಸ್ವಚ್ಛತಾ ದಿನವಾಗಿ ಆಚರಿಸಲು ಕರೆನೀಡಿ ಅವರ ಸಮಗ್ರ ಚಿಂತನೆಗಳ ಪ್ರಸ್ತುತತೆಯನ್ನೇ ಹಿನ್ನೆಲೆಗೆ ಸರಿಸುವ ಪ್ರಯತ್ನ ಮಾಡುತ್ತಿರುವುದನ್ನೂ ನೋಡಿರಿ. ಇತಿಹಾಸವನ್ನು ಪುರಾಣೀಕರಿಸಲು ಅದು ಹಾಕಿಕೊಂಡಿರುವ ಪಠ್ಯಕ್ರಮ ಪರಿಷ್ಕರಣೆಯ ಯೋಜನೆಯನ್ನು ನೋಡಿರಿ. ಒಂದು ನಿರ್ದಿಷ್ಟ ಸಿದ್ಧಾಂತದ ಚಾಣಾಕ್ಷ ಮೆದುಳುಗಳು ಹಿನ್ನೆಲೆಯಲ್ಲೇ ಕೆಲಸ ಮಾಡುವ ಈ ರಾಜಕಾರಣದ ಮಹತ್ವಾಕಾಂಕ್ಷೆ ದೊಡ್ಡದು. ಅದು ತನ್ನದಲ್ಲದ ಇತಿಹಾಸದ ಎಲ್ಲವನ್ನೂ, ಎಲ್ಲರನ್ನೂ–ಗಾಂಧಿ, ನೆಹರೂ, ಪಟೇಲ್, ಜೆಪಿ, ಲೋಹಿಯಾ ಎಲ್ಲರನೂ– ಕಬಳಿಸಿ ತನ್ನದನ್ನಾಗಿ ಮಾಡಿಕೊಂಡಲ್ಲಿ ಆನಂತರ ತನ್ನ ಇತಿಹಾಸದ ವಿಸ್ತರಣೆಯನ್ನು ಸುಲಭವಾಗಿಯೂ ಸುಕ್ಷೇಮವಾಗಿಯೂ ಮಾಡಿಕೊಳ್ಳಬಹುದೆಂದು ಅದಕ್ಕೆ ಗೊತ್ತಿದೆ.

ಇದಕ್ಕೆಲ್ಲ ಗಾಂಧಿ ಪರಂಪರೆ ಭ್ರಷ್ಟಗೊಂಡು ಅವನತಿಗೊಂಡಿದ್ದೇ ಕಾರಣ ಎಂದು ವಾದಿಸಲು ಅವಕಾಶವಿದೆ. ಆದರೆ ಅದರೊಂದಿಗೇ, ಭಾರತದ ಇತಿಹಾಸದ ಕಟು ವಿಮರ್ಶೆ ಮಾಡಿದ ಅಂಬೇಡ್ಕರ್ ಪರಂಪರೆ ಇಂದು ಏನಾಗಿದೆ ಎಂದು ಕೇಳಿಕೊಳ್ಳುವ ಅಗತ್ಯವೂ ಇದೆ. ಅಂಬೇಡ್ಕರ್ ಪ್ರತಿನಿಧಿಸುವ ಸಮುದಾಯಗಳ ಅತ್ಯಂತ ಹೆಚ್ಚು ಜನಪ್ರತಿನಿಧಿಗಳು ಇಂದು ಇರುವುದು ಸಾವರ್ಕರ್‌ವಾದಿ ಬಿಜೆಪಿಯಲ್ಲಿ ಏಕೆ ಎಂದೂ ಕೇಳಿಕೊಳ್ಳಬೇಕಿದೆ. ಅಂಬೇಡ್ಕರ್‌ರ ರಾಜಕೀಯ ಪರಂಪರೆ ಅಧಿಕಾರ ರಾಜಕಾರಣದ ನೆಲೆಯಲ್ಲಿ ಎಂದೂ ಪ್ರಬಲವಾಗಿರಲಿಲ್ಲ ಎಂಬುದನ್ನು (ಏಕೆ ಎಂದು ಕೇಳುತ್ತಲೇ) ಒಪ್ಪಿಕೊಂಡರೂ ಅಂಬೇಡ್ಕರ್ ಪರಂಪರೆಯ ಹೆಚ್ಚೆಚ್ಚು ಅನುಯಾಯಿಗಳು ಏಕೆ–ಅದೂ ತಾತ್ವಿಕ ನೆಲೆಯಲ್ಲಿ ಕಟ್ಟಾವಾದಿಗಳಾಗಿದ್ದವರೇ–ಸುಲಭವಾಗಿ ಸಾವರ್ಕರ್ ಪರಂಪರೆಯತ್ತ ಜಾರುತ್ತಿದ್ದಾರೆ ಎಂದೂ ಇಂದು ಕೇಳಿಕೊಳ್ಳಬೇಕಿದೆ. ಇದಕ್ಕೆ ನಾಮದೇವ ಧಸಾಳ್, ರಾಮದಾಸ್ ಅಥವಳೆ, ಉದಿತ್‌ರಾಜ್, ರಾಂವಿಲಾಸ್ ಪಾಸ್ವಾನ್ ದೊಡ್ಡ ಹೆಸರುಗಳ ನೇರ ಉದಾಹರಣೆಗಳಾದರೆ, (ನಮ್ಮವರೇ ಆದ ದಿ. ಹಾವನೂರ್ ಇದರಲ್ಲಿ ಮೊದಲಿಗರು) ಮಾಯಾವತಿ ರಾಜಕಾರಣ, ಚಂದ್ರಭಾನು ಪ್ರಸಾದ್‌ರ (ತಾತ್ವಿಕ) ವಿಶ್ಲೇಷಣೆಗಳು ಇದಕ್ಕೆ ವಕ್ರ ಉದಾಹರಣೆಗಳು. ಇವಕ್ಕೆ ಹೋಲಿಸಿದರೆ, ಸಮಾಜವಾದಿ ಪರಂಪರೆಯನ್ನೂ ಒಳಗೊಂಡಂತೆ ಗಾಂಧಿ ಪರಂಪರೆಯ ಅನುಯಾಯಿಗಳು–ಅವರೆಷ್ಟೇ ನಿಷ್ಕ್ರಿಯತೆಯ, ಭ್ರಷ್ಟತೆಯ ಆರೋಪ ಹೊತ್ತಿದ್ದರೂ–ಇಂತಹ ಧೃವಾಂತರ ಚಲನೆಗೆ ಸಿಕ್ಕಿಲ್ಲವೆಂದೇ ಹೇಳಬೇಕು. ಇಂದಿನ ಮೋದಿ ಛಾಪಿನ ಸಾವರ್ಕರ್‌ವಾದಿ ರಾಜಕಾರಣಕ್ಕೆ

ಗಂಭೀರ ಪ್ರತಿರೋಧವನ್ನು ಒಡ್ಡುತ್ತಿರುವುದು ಈ ಗಾಂಧಿ ಪರಂಪರೆಯೇ ಎಂಬುದನ್ನು ನಾವು ಗಮನಿಸಬೇಕು.

ಇದು ಗಾಂಧಿ ಚಿಂತನೆ ಸರಿಯೇ, ಅಂಬೇಡ್ಕರ್ ಚಿಂತನೆ ಸರಿಯೇ ಎಂಬ ಸರಳೀಕೃತ ಪ್ರಶ್ನೆಯನ್ನು ಮೀರಿದ ಪ್ರಶ್ನೆ. ಹಾಗಾಗಿ ಮುಖ್ಯ ಪ್ರಶ್ನೆ: ಏಕೆ ಹೀಗಾಯಿತು? ದೇಶ ಗಾಂಧಿ–ಅಂಬೇಡ್ಕರರ ಗೈರುಹಾಜರಿಯನ್ನು ಉದಾಸೀನದಿಂದ ನೋಡುವಂತಹ ಮನೋಭೂಮಿಕೆಯನ್ನು ತಲುಪಲು ಏನು ಕಾರಣ? ಸಾವರ್ಕರ್ ಚಿಂತನೆಗೆ ಸಾಮಾನ್ಯ ವಿರೋಧಿಗಳಾಗಿದ್ದ ಗಾಂಧಿ ಮತ್ತು ಅಂಬೇಡ್ಕರ್ ನಡುವಣ ಅಂತರ್‌ವಿರೋಧಗಳನ್ನು ಸಕ್ಷಮವಾಗಿ ನಿವಾರಿಸಲಾಗದ ಕಳೆದ ೬೦ ವರ್ಷಗಳ ಸೆಕ್ಯುಲರ್ ಮತ್ತು ಎಡಪಂಥೀಯ(ರ್‍ಯಾಡಿಕಲ್ ಎಂಬರ್ಥದಲ್ಲಿ) ರಾಜಕಾರಣದ ವೈಫಲ್ಯವೇ, ಅದರ ಜಡತೆಯೇ, ಅದರ ಪಾರಿಭಾಷಿಕತೆಯ ಗೊಂದಲಗಳೇ ಅಥವಾ ಬರಿಯ ಅಧಿಕಾರ ಮದ ಇದಕ್ಕೆ ಕಾರಣವೇ? ಇಂದು ಅಂಬೇಡ್ಕರ್ ಚಿಂತನೆಯ ಬಗ್ಗೆ ಬೌದ್ಧಿಕ ವಲಯದಲ್ಲಿ ಆಸಕ್ತಿ ಹೆಚ್ಚುತ್ತಿದೆ. ಅದೇ ಸಮಯದಲ್ಲಿ ದಲಿತೇತರ ಜನಸಾಮಾನ್ಯ ವರ್ಗದಲ್ಲಿ ಅನಾದರ–ಅಸಹನೆ ಹೆಚ್ಚುತ್ತಿದೆ. ಇದನ್ನು ಒಪ್ಪದವರು ಅಥವಾ ಇದಕ್ಕೆ ಕಾರಣ ದಲಿತರ ಉನ್ನತಿ ಕುರಿತ ಅಸಹನೆ ಎನ್ನುವವರು ಆತ್ಮವಂಚನೆಯನ್ನಷ್ಟೇ ಮಾಡಿಕೊಳ್ಳುತ್ತಿರುತ್ತಾರೆ. ಇದು ಗಾಂಧಿ ಮತ್ತು ಅಂಬೇಡ್ಕರ್‌ರ ಪರಂಪರೆಗಳಿಗಷ್ಟೇ ಅಲ್ಲ, ಕಳೆದ ೬೦ ವರ್ಷಗಳ ಪ್ರಗತಿಪರ ರಾಜಕಾರಣಕ್ಕೆ ಮಾಡುವ ಅವಮಾನ.

ಆಳದ ಸಾಮಾಜಿಕ ಪ್ರತಿಕ್ರಿಯೆಗಳು ಎಂದೂ ಮೇಲ್ಮೈ ಭಾವನೆಗಳಿಂದ ಹುಟ್ಟುವುದಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಲು ಕಟುನಿಷ್ಠುರ (ಆತ್ಮ)ಶೋಧನೆ ಅಗತ್ಯವಾಗಿರುತ್ತದೆ. ಅಂತಹ ಕಾಲ ಈಗ ಬಂದಿದೆ ಎನಿಸುತ್ತಿದೆ. ಈ ಶೋಧನೆ ಎದುರುಗೊಳ್ಳಬೇಕಾದ ಮುಖ್ಯ ಪ್ರಶ್ನೆ, ಅಂಬೇಡ್ಕರ್‌ರನ್ನು ಗಾಂಧಿಯ ಎರಕದೊಳಕ್ಕೆ ಅಳವಡಿಸಲು ಸಾಧ್ಯವಾಗಿದ್ದರೆ ಈ ದುರಂತ ಸಂಭವಿಸುತ್ತಿತ್ತೇ? ಇದನ್ನು ಅಸಂಬದ್ಧ, ಭೋಳೆ ಎಂದೆಲ್ಲ ಅನ್ನುವರು ಇದ್ದಾರೆಂಬುದು ಗೊತ್ತಿದ್ದರೂ ನಾನು ಈ ಮಾತನ್ನು ಹೇಳುತ್ತಿರುವೆ. ಏಕೆಂದರೆ, ಸಾಮಾಜಿಕ ಕಳಕಳಿಯ ಸಾಮಾನ್ಯ ಉದ್ದೇಶವಿದ್ದ ಸಮಾಜ ವಿಜ್ಞಾನಿಗಳು, ಇತಿಹಾಸ ತಜ್ಞರು ರಾಜಕೀಯ ಚಿಂತಕರು ಮತ್ತು ಚಳುವಳಿಕಾರರು ಒಟ್ಟಿಗೆ ಸೇರಿ ಮಾಡಬಹುದಾದ ಕೆಲಸ ಇದಾಗಿದ್ದು, ಇದು ಸಾಧ್ಯ ಎಂಬ ಬೌದ್ಧಿಕ ವಾತಾವರಣ ಮತ್ತು ಕಲ್ಪನೆಯೇ ಇಲ್ಲದ ಕಾರಣದಿಂದಲೇ ಅದು ಅಸಂಬದ್ಧವಾಗಿ ಕಾಣುವುದು ಎಂದು ನನಗೆ ಅನ್ನಿಸುತ್ತಿದೆ. ಬದಲಿಗೆ ಇಲ್ಲಿ ಆದದ್ದು, ಈ ಎಲ್ಲರೂ ತಂತಮ್ಮ ಹುಲ್ಲುಗಾವಲುಗಳಲ್ಲಿ ತಮ್ಮ ಅನುಕೂಲ ಮತ್ತು ಉದ್ದೇಶಗಳಿಗೆ ತಕ್ಕಂತೆ ಮೇದು ಹೋದದಷ್ಟೆ. ಇವರೆಲ್ಲರನ್ನೂ ಕೂಡಿಸಬಲ್ಲವರಾಗಿದ್ದ ಗಾಂಧಿಯ spirit of union ಕಾಣೆಯಾಗಿ ಅದರ ಜಾಗದಲ್ಲಿ ನೆಹ್ರೂರ spirit of excellence ಬಂದದ್ದೇ ಇದಕ್ಕೆ ಕಾರಣವಿರಬಹುದು.

ಇದರ ಪರಿಣಾಮವೆಂದರೆ, ಇಂದು ಗಾಂಧಿ, ಅಂಬೇಡ್ಕರ್, ಪಟೇಲ್, ನೆಹ್ರೂ ಎಲ್ಲರೂ ಸಾವರ್ಕರ್ ಎರಕದಲ್ಲಿ ಅಳವಡಿಕೆಯಾಗುವ (ಕಣ್ಕಟ್ಟಿನ)ಪರಿಸ್ಥಿತಿಯನ್ನು ಎದುರಿಸಬೇಕಿದೆ.

ಕಾಲಕ್ರಮ / ೩೦೭

ನಾನು ಮಹಾರಾಷ್ಟ್ರದ ದಲಿತ ಚಳುವಳಿಯ ಬಗ್ಗೆ ಅಧಿಕಾರಯುತವಾಗಿ ಮಾತನಾಡಲಾರೆ. ಆದರೆ ಕರ್ನಾಟಕದ ದಲಿತ ಚಳುವಳಿಯೊಂದಿಗೆ ಆರಂಭದ ದಿನಗಳಿಂದಲೂ ಸಾವಯವ ಸಂಪರ್ಕವಿರಿಸಿಕೊಂಡಿದ್ದ ನಾನು ಹೇಳಬಹುದಾದ ಮಾತೆಂದರೆ, ಸಮಾಜವಾದಿ ಚಳುವಳಿಯ ಮೂಸೆಯಲ್ಲಿ ಲೋಹಿಯಾ ಚಿಂತನೆಗಳಿಂದ ಪ್ರಭಾವಿತವಾಗಿ ಹುಟ್ಟಿದ ಕರ್ನಾಟಕದ ದಲಿತ ಚಳುವಳಿ, ಅಂಬೇಡ್ಕರ್-ಲೋಹಿಯಾ ಎಲ್ಲರೂ ಗಾಂಧಿ ಎರಕದಲ್ಲೇ ಹೊಸ ರೂಪ ಪಡೆಯಬೇಕು ಮತ್ತು ಆ ಮೂಲಕ ಗಾಂಧಿ ಕೂಡ ಹೊಸ ರೂಪ ಪಡೆಯುವರು ಎಂಬ ಅರಿವಿನೊಂದಿಗೇ ತನ್ನ ಹೋರಾಟವನ್ನು ಅರಂಭಿಸಿತು. ಆಗ ದಲಿತ ಚಳುವಳಿ ಸಮಾಜದ ಎಲ್ಲ ವರ್ಗಗಳ ಕಣ್ಣಲ್ಲಿ ಗೌರವಾನ್ವಿತವಾಗಿತ್ತು. ಆದರೆ ಅದು ತಾನೇ ಅಧಿಕಾರ ರಾಜಕಾರಣ ಮಾಡುವ ಶಕ್ತಿ ಗಳಿಸುವ ಮುನ್ನವೇ ಅವಸರದಲ್ಲಿ, ಇತರರ ಅಧಿಕಾರ ರಾಜಕಾರಣದ -ಗೊತ್ತಿದ್ದೋ ಗೊತ್ತಿಲ್ಲದೆಯೋ- ದಾಳವಾಗಿ ಬಲಿಯಾಯಿತು. ಇದೇ ನನ್ನ ಪ್ರಕಾರ ಅದು ರೈತ ಮತ್ತು ಇತರ ಸಾಂಸ್ಕೃತಿಕ ಚಳುವಳಿಗಳೊಂದಿಗೆ ಸೇರಿ ತಾನೇ ಒಂದು ಪ್ರಬಲ ರಾಜಕೀಯ ಶಕ್ತಿಯಾಗುವ ಚಿನ್ನದ ಅವಕಾಶವನ್ನು ಕಳೆದುಕೊಳ್ಳಲು ಕಾರಣವಾಯಿತು.

ಅಲ್ಲಿಂದಾಚೆನೆಲ್ಲದವೂ ಇತಿಹಾಸ. ಅದನ್ನು ಬಹುಜನ ಸಮಾಜ ಪಕ್ಷದ ಘಾತುಕ ರಾಜಕಾರಣ ಒಂದು ಕಡೆಯಿಂದ ತಿನ್ನ ತೊಡಗಿದರೆ, ಅಧಿಕಾರ ರಾಜಕಾರಣದೊಡನೆ ನಡೆಸಿದ ಅಲ್ಪಾವಧಿ ಸಖ್ಯದ ರುಚಿ ಹುಟ್ಟಿಸಿದ ಹಪಾಹಪಿ ಇನ್ನೊಂದು ಕಡೆಯಿಂದ ತಿನ್ನತೊಡಗಿ, ದಲಿತ ಚಳುವಳಿ ವಿಶ್ವಾಸಾರ್ಹ ನಾಯಕತ್ವವಿಲ್ಲದೇ ಛಿದ್ರವಾಗಿ ಪ್ರಾದೇಶಿಕ ಪಾಳೇಗಾರರಂತಿರುವ ನಾಯಕಮಣಿಗಳ ಕೈಯೊಳಗಿನ ದೊಡ್ಡ ದಂಧೆಯಾಗಿ ಇಲ್ಲವೇ ಆಟವಾಗಿ ಮಾರ್ಪಾಟಾಯಿತು. ಇಂದು ಈ ನಾಯಕಮಣಿಗಳೆಲ್ಲ ದಲಿತ ಮಂತ್ರಿ ಮಹೋದಯರ ದೊಡ್ಡ ದೇಣಿಗೆಗಳಲ್ಲಿ ಭರ್ಜರಿ ಸಮ್ಮೇಳನಗಳನ್ನು ನಡೆಸಿಕೊಂಡು ತಮಗೆ ತಾವೇ ಪ್ರಶಸ್ತಿಗಳನ್ನು ಕೊಟ್ಟುಕೊಳ್ಳುವ ಸ್ಥಿತಿ ತಲುಪಿದ್ದಾರೆ. ಇನ್ನು, ದಲಿತ ವಿಶಿಷ್ಟ ಸಮಸ್ಯೆಗಳ ಗುರುತಿಸುವಿಕೆ, ಅಧ್ಯಯನ, ಚಳುವಳಿ, ಹಕ್ಕೊತ್ತಾಯಗಳ ಸ್ಪಷ್ಟ ಅರಿವಾದರೂ ಎಲ್ಲಿ ಉಳಿಯಬಲ್ಲುದು? (ಮಹಾರಾಷ್ಟ್ರದ ದಲಿತ ಚಳುವಳಿಯ ಕಥೆ ಇನ್ನೂ ಕೆಟ್ಟದಾಗಿದೆ ಎಂದು ಅಂಬೇಡ್ಕರ್ ವಿದ್ವಾಂಸ ಆನಂದ್ ತೇಲ್ತುಂಬ್ಡೆ ಹೇಳುತ್ತಾರೆ.) ಅಂಬೇಡ್ಕರ್ ವೈಭವೀಕರಣದ ಪುಸ್ತಕಗಳು ದಂಡಿ ದಂಡಿಯಾಗಿ ಬಂದಿದ್ದರೂ ಕರ್ನಾಟಕದಲ್ಲಿ ದಲಿತ ಚಿಂತನೆ ಎಂಬ ಶಬ್ದ ಕೇಳಿ ಎಷ್ಟು ವರ್ಷವಾಯಿತು? ಈ ರೋಗದ ದೊಡ್ಡ ಲಕ್ಷಣವೆಂದರೆ, ಅಂಬೇಡ್ಕರ್ ಚಿಂತನೆಯ ಬಗ್ಗೆ ಯಾರಾದರೂ ಒಂದು ವಿರೋಧದ ಅಥವಾ ಒಂದು ವಿಮರ್ಶೆಯ ಮಾತಾಡಿದರೂ ಅದನ್ನು ಸಹಿಸದಿರುವುದು. (ಅದು ಕೆಲವೆಡೆ ಪುಂಡಾಟಿಕೆಯ ಮೂಲಕವೂ ವ್ಯಕ್ತವಾಗತೊಡಗಿದೆ.) ಇದಕ್ಕಾಗಿ ದಲಿತರನ್ನು ದೂಷಿಸಿ ಫಲವಿಲ್ಲ. ಏಕೆಂದರೆ ಇಂದು ಎಲ್ಲರೂ ಮಾಡುವುದನ್ನೇ ಅವರು ಮಾಡುತ್ತಿದ್ದಾರೆ.

ಇದೇ ನಿಜವಾದ ಸತ್ಯ. ಮುಖ್ಯ ಸತ್ಯ ಕೂಡ : ದಲಿತ ಚಳುವಳಿ ಎಲ್ಲರೂ ಮಾಡುವುದನ್ನೇ ಮಾಡಬೇಕಾದ ಪರಿಸ್ಥಿತಿಗೆ ಸಿಕ್ಕಿದೆ. ತನಗೊಂದು ವಿಶೇಷ ಜವಾಬ್ದಾರಿ ಇದೆ ಎಂಬ ಅರಿವೇ ಏಕೆ ಅದಕ್ಕೆ ಗೊತ್ತಾಗದಾಯಿತು? ಈ ಪ್ರಶ್ನೆ ಅದನ್ನು ಅಧಿಕಾರ ರಾಜಕಾರಣದ ಸಖ್ಯ ಬೆಳೆಸುವಾಗಲೇ ಕಾಡಬೇಕಿತ್ತು. ಕಾಡಲಿಲ್ಲ. ಅದಕ್ಕೆ ಮುಖ್ಯ ಕಾರಣ, ಗಾಂಧಿ–ಅಂಬೇಡ್ಕರ್ ಸಮೀಕರಣ ಒಂದು ಸಮತೋಲನಕ್ಕೆ ಬರುವ ಮುನ್ನವೇ ಇತರ–ಈ ಇಬ್ಬರಿಗೂ ಅನ್ಯವೆನಿಸುವ–ಪ್ರಭಾವಗಳಿಗೆ ಸಿಕ್ಕಿ, ಅದು ನಿಧಾನವಾಗಿ ಅಂಬೇಡ್ಕರ್ ಗಾಂಧಿ ಇಬ್ಬರನ್ನೂ ಕಳೆದುಕೊಳ್ಳಲಾರಂಭಿಸಿದ್ದು. ಅಂಬೇಡ್ಕರ್ ಬರೀ ಲಾಂಛನವಾಗಿ, ಕೂಗುಮಾರಿತನದ ಪ್ರತೀಕವಾಗಿ ಹೋದರೆ, ಗಾಂಧಿ ಈ ಕೂಗುಮಾರಿಗಳ ಸಂತೆಯಲ್ಲಿ ಉಳಿಯದಾದರು. ಅವರಾಗಿ ಅವರೇ ಹಿಂದಕ್ಕೆ ಸರಿದರು.

ಇಲ್ಲಿ ದಲಿತ ಚಳುವಳಿ ಅಂಬೇಡ್ಕರರನ್ನು ಕಳೆದುಕೊಂಡಿದ್ದು ಎಂದರೆ, ಅದು ತನ್ನ ಜಾತಿವಿನಾಶ ಸಿದ್ಧಾಂತ ಮತ್ತು ಕಾರ್ಯಕ್ರಮಗಳನ್ನು ಕೈಬಿಟ್ಟದ್ದು. ಅದು ಹಾಗೆ ಕೈಬಿಡದಿದ್ದರೆ, ಅವರ ಗಾಂಧಿ ಅಂಬೇಡ್ಕರ್ ಪ್ರಣೀತ ಗಾಂಧಿಯಾಗಿ ಮಾರ್ಪಾಡಾಗುತ್ತಿದ್ದರು. ಪ್ರಶ್ನೆ ಈಗ : ದಲಿತ ಚಳುವಳಿ ಜಾತಿ ವಿನಾಶವನ್ನೇಕೆ ಕೈಬಿಟ್ಟಿತು? ಅಧಿಕಾರ ರಾಜಕಾರಣದ ಆತುರ ತಾನು ಏನು? ತಾನೇಕೆ ಹುಟ್ಟಿಕೊಂಡೆ? ಎಂಬ ಪ್ರಶ್ನೆಗಳನ್ನೇ (ಮೈ)ಮರೆಸಿತು. ಈ ವಿಸ್ಮೃತಿಗೆ ಕಾರಣ, ಅಂಬೇಡ್ಕರ್–ಗಾಂಧಿ ಸಮೀಕರಣವನ್ನು, ಆಧುನಿಕತೆ ಮತ್ತು ಅದರ ಆಮಿಷಗಳ ಬಗ್ಗೆ ಗಾಂಧಿ ಮಾಡಿದ್ದ ಟೀಕೆಯಿಂದ ಸಮತೋಲನಗೊಳಿಸದೇ ಹೋದದ್ದು. ಇದಕ್ಕೆ ಮತ್ತೆ ಕಾರಣ, ಅಂಬೇಡ್ಕರ್ ವಸಾಹತುಶಾಹಿ ಆಧುನಿಕತೆಯನ್ನು ತಮ್ಮ ವಿಮೋಚನೆಗೆ ಒದಗಿರುವ ಸಾಧನ ಎಂಬ ಅರಿವಿನಾಚೆಗೆ ನೋಡಲು (ಬಹುಶಃ ಗಾಂಧಿ ವಿರೋಧದ ಉದ್ವೇಗದಲ್ಲಿ) ನಿರಾಕರಿಸಿದ್ದು. ಹೀಗಾಗಿ ಇಂದು ದಲಿತ ಎಂಬ ಶಬ್ದವೇ, ಅಂಬೇಡ್ಕರ್ ಎಂಬ ಹೆಸರೇ ಒಂದು ಪಟ್ಟಭದ್ರ ಹಿತಾಸಕ್ತಿಯಾಗಿ ಸಾಮಾನ್ಯ ಜನರ ಕಣ್ಣಿಗೆ ಕಾಣುವಂತಾಗಿದೆ. ಇದು ನಿಜವಾದ ದುರಂತ. ಹಾಗಾಗಿ ಈ ಕಾಣುವಿಕೆ ನಿಜವಾಗಿ ಸತ್ಯವಲ್ಲ ಎಂಬುದನ್ನು ತಮ್ಮ ಮಾತು ಮತ್ತು ಕೃತಿಗಳ ಮೂಲಕ ಸಾಬೀತು ಮಾಡುವ ಸವಾಲು ಇಂದು ದಲಿತ ನಾಯಕರ ಮುಂದಿದೆ.

ಈ ಎಲ್ಲ ಹಿನ್ನೆಲೆಯೊಂದಿಗೆ ಈ ಸಂಬಂಧವಾದ ಎರಡು ವಿಶೇಷ ಲೇಖನಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಒಂದು ನಮ್ಮ ನಡುವಿನ ಮುಖ್ಯ ಚಿಂತಕರಲ್ಲೊಬ್ಬರಾದ ಡಾ. ರಾಜೇಂದ್ರ ಚೆನ್ನಿಯವರದ್ದು. ಇನ್ನೊಂದು ಮಾಜಿ ಐ.ಎ.ಎಸ್. ಅಧಿಕಾರಿ ಹಾಗೂ ಖ್ಯಾತ ಸಾಮಾಜಿಕ ಕಾರ್ಯಕರ್ತ ಹರ್ಷ ಮಂದರ್ ಅವರದ್ದು. ಈ ಲೇಖನಗಳ ಬಗ್ಗೆ ಒಂದು ಮಾತು ಹೇಳಲೇಬೇಕು. ಈ ಇಬ್ಬರೂ ಗಾಂಧಿ ಕೊನೆವರೆಗೂ ಜಾತಿ ಪದ್ಧತಿಯನ್ನು ಸಮರ್ಥಿಸುತ್ತಿದ್ದರು ಎಂದು ನಂಬಿ ಬರೆದಿದ್ದಾರೆ. ಇದು ಸತ್ಯ ಸಂಗತಿಯಲ್ಲ ಎಂದಷ್ಟೇ ಇಲ್ಲಿ ಹೇಳಿ, ಓದುಗರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇನೆ.–ಸಂ.

ಜನವರಿ, ೨೦೧೫

ಮೋದಿ ರಾಜಕಾರಣದ ನಿಜರೂಪ ದರ್ಶನ?

ಪ್ರಿಯ ಓದುಗರೇ,

ಮೋದಿಯವರ ವಿರೋಧಿಗಳಿರಲಿ, ಅವರ ಅಭಿಮಾನಿಗಳೇ ಈಗ ಸ್ತಂಭೀಭೂತರಾಗಿ ಕೂತಿದ್ದಾರೆ. ಹೊಸ ಸರ್ಕಾರದ ಅಧಿಕಾರಾವಧಿಯ ಆರಂಭದ ದಿನಗಳಲ್ಲಿ ಮೋದಿಯವರು ತಮ್ಮ ಅನುಮಾನಾಸ್ಪದ ಹಿನ್ನೆಲೆಯನ್ನು ಹಿಂದೆ ಬಿಟ್ಟು ಬಂದಿದ್ದಾರೆಂಬ ನಂಬಿಕೆ ಹುಟ್ಟಿಸಿದ್ದ ಅವರ ಆರೋಗ್ಯಕರ ರಾಜಕೀಯ ಭಾವಭಂಗಿಗಳಿಂದ ಇದು ಕನಿಷ್ಠ ಹತ್ತು ವರ್ಷಗಳ ಸರ್ಕಾರ ಎಂದು ಭಾವಿಸಿದ್ದ ಜನತೆ ಈಗ ಇದು ಐದು ವರ್ಷಗಳ ಒಂದು ಅವಧಿಯನ್ನಾದರೂ ಪೂರೈಸಲು ಸಾಧ್ಯವೇ ಎಂದು ಅನುಮಾನಪಡಲಾರಂಭಿಸಿದ್ದಾರೆ. 'ಅಭಿವೃದ್ಧಿ' ಮಂತ್ರದ ಧ್ವನಿ ಕ್ಷೀಣವಾಗತೊಡಗಿದ್ದು, ಬಿಜೆಪಿ ಕೇಂದ್ರವನ್ನು ಗೆದ್ದುಕೊಂಡ ನಂತರ ಒಂದೊಂದೇ ರಾಜ್ಯವನ್ನೂ ಗೆದ್ದುಕೊಳ್ಳುತ್ತಿದ್ದಂತೆ ಹಿಂದುತ್ವದ ಹಳೆಯ ಕೂಗು ಎಲ್ಲೆಲ್ಲೂ ಕೇಳತೊಡಗಿದೆ.

ಅಧಿಕಾರಕ್ಕೆ ಬಂದ ಆರು ತಿಂಗಳುಗಳ ನಂತರ ಪೂರ್ವನಿಯೋಜಿತವಾದಂತೆ ಸಂಘ ಪರಿವಾರದ ಅಂಗಸಂಸ್ಥೆಗಳು ಒಂದಾದರಮೇಲೊಂದರಂತೆ ಆಡುತ್ತಿರುವ ಮಾತುಗಳು ಮತ್ತು ತೋರುತ್ತಿರುವ ವರ್ತನೆಗಳು ನಿಜವಾಗಿಯೂ ಆಘಾತಕಾರಿಯಾಗಿವೆ ಮತ್ತು ಜನರ ನಿದ್ದೆಗೆಡಿಸುವಂತಿವೆ. 'ಎಂಟು ನೂರು ವರ್ಷಗಳ ನಂತರ ಭಾರತದಲ್ಲಿ ಹಿಂದೂಗಳ ಆಡಳಿತ ಬಂದಿದೆ' ಎಂಬ ಈ ಸಂಸ್ಥೆಗಳ ಅಧಿಪತಿಯಂತಿರುವ ಆರೆಸ್ಸೆಸ್ಸಿನ ಪ್ರಮುಖ ಮೋಹನ ಭಾಗವತ್‌ರ ವಿಕೃತ ಮಾತು ಈ ಎಲ್ಲ ಮಾತುಗಳ ಮತ್ತು ವರ್ತನೆಗಳ ಕೇಂದ್ರಬಿಂದುವಿನಂತಿದೆ. ಅತ್ಯಂತ ಪ್ರಚೋದನಕಾರಿಯೂ ವಿಚ್ಛಿದ್ರಕಾರಿಯೂ ಆದ ಈ ಮಾತು ನಮ್ಮ ರಾಷ್ಟ್ರೀಯ ಹೋರಾಟದ ಮೌಲ್ಯಗಳನ್ನು ಆಧರಿಸಿ ನಾವು ರೂಪಿಸಿಕೊಂಡ ಸಂವಿಧಾನದ ಮುಖದ ಮೇಲೇ ಪ್ರಹಾರ ಮಾಡಿದಂತಿದೆ. ನಮ್ಮ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಲು ನಿರಾಕರಿಸಿ ಆಯಕಟ್ಟಿನ ಸಂದರ್ಭಗಳಲ್ಲಿ

ವಸಾಹತು ಸರ್ಕಾರದೊಂದಿಗೆ ಶಾಮೀಲಾಗಿದ್ದ ಹಿಂದೂ ಪುರೋಹಿತಶಾಹಿ ಶಕ್ತಿಗಳ ವಾರಸುದಾರರಾಗಿರುವ ಇವರು, ಇಂತಹ ಮಾತುಗಳ ಮೂಲಕ ರಾಷ್ಟ್ರೀಯ ಹೋರಾಟದ ನೆನಪನ್ನೇ ಅಳಿಸಿ ಹಾಕಲು ಹೊರಟಿರುವುದು ಸಹಜವೇ ಆಗಿದೆ. ಇವರು ಮಹಾತ್ಮ ಗಾಂಧಿ ಜನ್ಮದಿನವನ್ನು ಸ್ವಚ್ಛತಾ ದಿನವನ್ನಾಗಿ ಕುಬ್ಜಗೊಳಿಸಿದಾಗಲೇ, ನೆಹ್ರೂ ಜನ್ಮ ದಿನವನ್ನು ಮಕ್ಕಳ ದಿನಾಚರಣೆಯ ಬದಲಾಗಿ ಗುರುಕುಲ ದಿನವನ್ನಾಗಿ ಆಚರಿಸಲಾರಂಭಿಸಿದಾಗಲೇ ಈ ಅಪಾಯದ ಸೂಚನೆಗಳು ದೊರೆತಿದ್ದವು.

ಈ ದೊಡ್ಡ ಹುನ್ನಾರದೊಂದಿಗೇ, ಈ ಸಂಸ್ಥೆಗಳು, ಹಿಂದೂ ರಾಷ್ಟ್ರ ಕಟ್ಟುವ, ಗೋಡ್ಸೆ ಮಂದಿರ ನಿರ್ಮಿಸುವ, ರಾಮನನ್ನು ನಂಬದವರನ್ನು ಅಸಭ್ಯ ಮಾತಿನ ವರಸೆಯಲ್ಲಿ 'ಅಡ್ಡ ಹುಟ್ಟಿದವರು' ಎಂದು ಕರೆಯುವ, ಅಮಾಯಕ ಮುಸ್ಲಿಂ ಯುವಕನನ್ನು ರಸ್ತೆಯಲ್ಲಿ ಕೊಚ್ಚಿ ಹಾಕಿದ ರಕ್ತಪಿಪಾಸುವನ್ನು 'ಹಿಂದೂ ಶೌರ್ಯ ಪ್ರಶಸ್ತಿ'ಯಿಂದ ಅಲಂಕರಿಸುವ, ತಮ್ಮ ನಾಯಕ ಅಟಲ್ ಬಿಹಾರಿ ವಾಜಪೇಯಿಯವರ ಜನ್ಮದಿನದ ನೆಪ ಮಾಡಿಕೊಂಡು ಕ್ರಿಸ್ಮಸ್ ದಿನದ ರಜೆಯನ್ನು ರದ್ದುಗೊಳಿಸುವ, ಅಮಾಯಕ ಬಡ ಮುಸ್ಲಿಂ ಗುಂಪುಗಳಿಗೆ ಬಿಪಿಎಲ್ ಕಾರ್ಡ್ ಮುಂತಾದ ಸರ್ಕಾರಿ ಆಮಿಷಗಳನ್ನೊಡ್ಡಿ ಅವರನ್ನು 'ಘರ್‌ವಾಪಸಿ' ಹೆಸರಿನಲ್ಲಿ ಮರುಮತಾಂತರಗೊಳಿಸುವ ಮಾತು ಮತ್ತು ವರ್ತನೆಗಳಲ್ಲಿ ತೊಡಗಿದ್ದಾರೆ. ಇದೆಲ್ಲವನ್ನೂ ಸುಬ್ರಮಣ್ಯ ಸ್ವಾಮಿ ಎಂಬ ಕುತ್ಸಿತ ಬುದ್ಧಿಗೆ ಹೆಸರಾದ ಬಿಜೆಪಿ ವಕ್ತಾರ ರಾಷ್ಟ್ರೀಯ ಟಿ.ವಿ. ವಾಹಿನಿಗಳಲ್ಲಿ 'ಈವರೆಗೆ ಹಿಂದೂಗಳು ಸಾಕಷ್ಟು ನೊಂದಿದ್ದಾರೆ. ಆ ನೋವನ್ನೀಗ ಪರಿಹರಿಸಿಕೊಳ್ಳುವ ಕಾಲ ಬಂದಿದೆ' ಎಂಬ ಮಾತುಗಳ ಮೂಲಕ ಹಿಂದೂ ಸಮುದಾಯದಲ್ಲಿ ಹುಸಿ ಹುತಾತ್ಮತೆಯನ್ನು ಪ್ರಚೋದಿಸಿ ಭಾವೋನ್ಮಾದದ ವಾತಾವರಣವನ್ನುಂಟು ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, 'ಮೋದಿ ನೇತೃತ್ವದ ಬಿಜೆಪಿ ಅಭಿವೃದ್ಧಿಯ ಜೊತೆಗೇ ಹಿಂದುತ್ವವನ್ನು ತನ್ನ ಚುನಾವಣಾ ಕಾರ್ಯಕ್ರಮವನ್ನಾಗಿ ಮಂಡಿಸಿತ್ತು ಎಂದು ಈಗ ಘಂಟಾಘೋಷವಾಗಿ ಹೇಳುತ್ತಿದ್ದಾರೆ!

ಇವರೆಲ್ಲ ತಮ್ಮ ಮಾತು ವರ್ತನೆಗಳಲ್ಲಿ ಬಳಸುವ ಭಾರತ, ಹಿಂದೂ ಧರ್ಮ ಎಂಬ ಶಬ್ದಗಳಿಗೆ ಏನರ್ಥ ಎಂಬುದೇ ಗೊತ್ತಾಗದಾಗಿದೆ. ಇವರ ಭಾರತ ಮಧ್ಯಕಾಲೀನ ಭಾರತವೂ, ಇವರ ಹಿಂದೂ ಧರ್ಮ ಆ ಕಾಲದಲ್ಲಿದ್ದ ವೈದಿಕ ಪುರೋಹಿತಶಾಹಿಯೂ ಆಗಿರುವಂತಿದೆ. ಆ ಕಾಲದ ಭಾರತಕ್ಕೂ ಮತ್ತು ಹಿಂದೂ ಧರ್ಮಕ್ಕೂ ಇವರ ಈಗಿನ ಮಾತು–ವರ್ತನೆಗಳಿಗೂ ಸಾಮ್ಯತೆ ಇರುವುದನ್ನು ಗಮನಿಸಿದರೆ ಭಯವಾಗುತ್ತದೆ. ಇವರು ಪದೇ ಪದೇ ಉದ್ಧರಿಸುವ ಹಿಂದುತ್ವ ಕುರಿತ ಸುಪ್ರೀಂ ಕೋರ್ಟಿನ 'ಹಿಂದುತ್ವವೆಂದರೆ ಒಂದು ಜೀವನ ವಿಧಾನ' ಎಂಬ ವ್ಯಾಖ್ಯಾನದಲ್ಲಿ ಅಂತರ್ಗತವಾಗಿರುವ ಸ್ವಾತಂತ್ರ್ಯ ಮತ್ತು ಬಹುತ್ವಗಳಿಗೆ ಇವರು ಪ್ರತಿಪಾದಿಸುವ ಏಕರೂಪದ ಹಿಂದೂ ಧರ್ಮಕ್ಕೆ ತದ್ವಿರುದ್ಧವಾಗಿದೆ. ಅದು ಕಾಲಕ್ರಮದಲ್ಲಿ ಮೈಗೂಡಿಸಿಕೊಂಡು ಬಂದ ಎಲ್ಲ

ಸತ್ವ-ಸಂಪನ್ನತೆಗಳನ್ನೂ ಈಗ ಇಂಗಿಸಿಕೊಂಡು ಅನಾಧ್ಯಾತ್ಮಿಕವಾದ ಒಂದು ಬರಡು ರಾಜಕೀಯ ಅಸ್ತ್ರ ಮಾತ್ರವಾಗಿ ಕಂಡುಬರುತ್ತಿದೆ.

ನಿಜ, ಕಳೆದ ಅರವತ್ತು ವರ್ಷಗಳಲ್ಲಿ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟರು ಎತ್ತಿಹಿಡಿಯುತ್ತಾ ಬಂದ ಸೆಕ್ಯುಲರಿಸಂ ವಕ್ರವಾಗಿತ್ತು. ಅವರು ಅಲ್ಪಸಂಖ್ಯಾತರಿಗೆ, ವಿಶೇಷವಾಗಿ ಮುಸ್ಲಿಮರಿಗೆ ರಚನಾತ್ಮಕವಾಗಿ ಏನನ್ನೂ ಮಾಡದಿದ್ದರೂ, ಅವರ ಮತೀಯ ನಾಯಕರ ಹುಚ್ಚಾಟಗಳನ್ನು ಸಹಿಸುತ್ತಲೇ, ಕೆಲವೊಮ್ಮೆ ಪ್ರೋತ್ಸಾಹಿಸುತ್ತಲೇ ಬರುತ್ತಾ ತಮ್ಮ ಸೆಕ್ಯುಲರಿಸಂ ಕುರಿತ ಬದ್ಧತೆಯನ್ನು ಅನುಮಾನಾಸ್ಪದಗೊಳಿಸಿಕೊಳ್ಳುತ್ತಲೇ ಹೋದರು. ಇಂದು ಜಗತ್ತಿನಲ್ಲಿ ಇಸ್ಲಾಂ ಧರ್ಮದ ಉತ್ಥಾನದ ಹೆಸರಿನಲ್ಲಿ ನಡೆಯುತ್ತಿರುವ ನರಹತ್ಯೆ, ನಿದಿಷ್ಟವಾಗಿ ಮೊನ್ನೆ ಪೆಷಾವರ್‌ನಲ್ಲಿ ನಡೆದ ಭೀಕರ ಸಾಮೂಹಿಕ ಶಿಶು ಹತ್ಯೆ ಇಸ್ಲಾಂ ಧರ್ಮದ ಅಧ್ಯಾತ್ಮಿಕ ಸತ್ವವನ್ನೇ ಪ್ರಶ್ನೆ ಮಾಡುವಂತಾಗಿದೆ. ಈ ಬಗ್ಗೆ ಮುಸ್ಲಿಂ ಧರ್ಮ ಚಿಂತಕರಿಂದಲೇ ಚರ್ಚೆ ಆರಂಭವಾಗಬೇಕಿತ್ತು. ಆದರೆ ನಮ್ಮ ಸೆಕ್ಯುಲರಿಸಂ ಅಂತಹ ವಾತಾವರಣವನ್ನು ನಿರ್ಮಿಸಲು ವಿಫಲವಾಗಿದೆ ಎಂದರೆ ಅದು ಈವರೆಗೆ ರಾಷ್ಟ್ರ ಆಚರಿಸಿಕೊಂಡ ಸೆಕ್ಯುಲರಿಸಂನ ಸೋಲು ಎಂದೇ ಹೇಳಬೇಕಾಗುತ್ತದೆ.

ಅಂದ ಮಾತ್ರಕ್ಕೆ ಹಿಂದೂಗಳೆನಿಸಿಕೊಂಡವರು ಸೆಕ್ಯುಲರಿಸಂನ್ನು ವಿರೋಧಿಸಬೇಕೆಂದೇನೂ ಅಲ್ಲವಲ್ಲ? ಹಾಗೆ ಮಾಡಿದರೆ ಅದು ಅವಕಾಶದ ದುರುಪಯೋಗ ಮಾತ್ರವಾಗುತ್ತದೆ. ಬದಲಿಗೆ, ಬಹುಮತಗಳಿರುವ, ಬಹು ಸಂಸ್ಕೃತಿಗಳಿರುವ ಈ ದೇಶದಲ್ಲಿ ಅದು ಜನಾಭ್ಯುದಯಕಾರಿ ಆಡಳಿತದ ದೃಷ್ಟಿಯಿಂದ ಅತ್ಯಗತ್ಯವಾಗಿದ್ದು, ಅದನ್ನು ಸಮತೋಲಿತಗೊಳಿಸುವ ವಿಧಾಯಕ ಕೆಲಸಕ್ಕೆ ಮುಂದಾಗಬೇಕೇ ಹೊರತು, ಇಸ್ಲಾಂ ಧರ್ಮದ ಮಾದರಿಯನ್ನು ಅನುಕರಿಸ ಹೊರಡುವುದಲ್ಲ; ಹಿಂದೂ ಧರ್ಮವನ್ನು ಒಂದು ಬರಡು ರಾಜಕೀಯ (ಲೌಕಿಕ) ಅಸ್ತ್ರವನ್ನಾಗಿ ಮಾಡುವುದಲ್ಲ. ಅದು ಹಿಂದೂ ಧರ್ಮಕ್ಕೇ ಮಾಡುವ ಅಪಚಾರ.

ಆದರೆ ಇಂದಿನ ನಿಜವಾದ ತೊಂದರೆ, ಭಯ ಎಂದರೆ, ಈ ರಾಜಕೀಯ ಹಿಂದುತ್ವದ ಶಕ್ತಿಗಳ ಕುಚೇಷ್ಟೆಗಳ ಆತಂಕಗಳನ್ನು ನಿವಾರಿಸಿದ ವರಸೆಯಲ್ಲಿ ಜನರಿಗೆ ಸುಖ-ಶಾಂತಿಗಳ ('ಅಚ್ಛೇ ದಿನ್'ಗಳ) ಅಭಿವೃದ್ಧಿಯ ಭರವಸೆ ನೀಡಿ ಅಧಿಕಾರಕ್ಕೆ ಬಂದ ಮೋದಿ ಈಗ ಈ ಶಕ್ತಿಗಳನ್ನು ನಿಯಂತ್ರಿಸುವುದಿರಲಿ, ಏಕೆ ಖಂಡಿಸಲು ಮುಂದಾಗುತ್ತಿಲ್ಲ ಎನ್ನುವುದು. ಇದು ಮೋದಿಯವರೂ ಸೇರಿಕೊಂಡಂತೆ ರಚಿಸಲಾದ ಪೂರ್ವನಿಯೋಜಿತ ನಂಬಿಕೆ ದ್ರೋಹದ ಕಾರ್ಯಕ್ರಮವೇ? ಅಥವಾ ಆರು ತಿಂಗಳ ಆಡಳಿತದ ನಿಷ್ಫಲತೆಯನ್ನು ಮರೆಮಾಚಿಕೊಳ್ಳಲು ಎಬ್ಬಿಸಿರುವ ಸುಂಟರಗಾಳಿಯೇ? ಅರ್ಥವಾಗುತ್ತಿಲ್ಲ.

ಅಥವಾ ನಮ್ಮ ಪ್ರಾಚೀನರು ತಮ್ಮ ಅಪೂರ್ವ ಸೃಜನಶೀಲ ಕಲ್ಪನೆಯೊಂದಿಗೆ ರೂಪಿಸಿದ ಅದ್ಭುತ ಪುರಾಣ ಪ್ರತೀಕವೆನಿಸಿರುವ ಗಣೇಶ ಮೂರ್ತಿಯನ್ನು ನಮ್ಮ ಪುರಾತನ ಭಾರತೀಯ ವೈದ್ಯಶಾಸ್ತ್ರಜ್ಞರ ಪ್ಲಾಸ್ಟಿಕ್ ಸರ್ಜರಿ ಪರಿಣಿತಿಗೆ

ಉದಾಹರಣೆಯೆಂದು-ಅದೂ ನಮ್ಮ ವೈದ್ಯ ವಿಜ್ಞಾನಿಗಳ ಸಭೆಯಲ್ಲಿ-ಹೇಳುವ ಹುಂಬ ಧೈರ್ಯದ ಪ್ರಧಾನಮಂತ್ರಿಯಿಂದ ಇದನ್ನೆಲ್ಲ ನಿರೀಕ್ಷಿಸಲಾಗದೆ? ಮೋದಿ ವಿರೋಧ ಪಕ್ಷಗಳ ಒತ್ತಡಕ್ಕೋ ಅಥವಾ ಜನರ ಒತ್ತಡಕ್ಕೋ ಮಣಿದು ಮುಂದೊಂದು ದಿನ ಇದನ್ನೆಲ್ಲ ಖಂಡಿಸಲೂಬಹುದು. ಆದರೆ ಆ ಹೊತ್ತಿಗೆ ದೇಶಕ್ಕೆ, ಸರ್ಕಾರಕ್ಕೆ ಘಾಸಿಯಂತೂ ಆಗಿರುತ್ತದೆ.

ಇನ್ನು ಈ ಸರ್ಕಾರ ಅಟಲ್ ಬಿಹಾರಿ ವಾಜಪೇಯಿಯವರಿಗೂ, ಮದನಮೋಹನ ಮಾಳವೀಯರಿಗೂ 'ಭಾರತ ರತ್ನ' ಪ್ರಶಸ್ತಿ ನೀಡಿದೆ. ಕಾಂಗ್ರೆಸ್ ಈಗಾಗಲೇ ಈ ಪ್ರಶಸ್ತಿಯನ್ನು ರಾಜಕೀಯವಾಗಿ ದುರಪಯೋಗಪಡಿಸಿಕೊಂಡು ಸಲ್ಲದ ಯಾರ್‍ಯಾರಿಗೋ ನೀಡಿರುವುದರಿಂದ ಈಗ ಈ ಪ್ರಶಸ್ತಿಗಳ ಬಗ್ಗೆ ಹೆಚ್ಚಿಗೇನೂ ಹೇಳಲು ಉಳಿದಿಲ್ಲ. ಈ ಒಂದು ಮಾತಿನ ಹೊರತಾಗಿ: 'ಕಾಂಗ್ರೆಸ್‌ಮುಕ್ತ ಭಾರತ'ದ ಪಣ ತೊಟ್ಟಿರುವ ಇವರೇಕೆ, ಹೀಗೆ ಯಾವ ಮುಜುಗರವೂ ಇಲ್ಲದೆ ಪಟೇಲ್, ಮಾಳವೀಯ, ಪಂತ್ ಮುಂತಾದ ಕಾಂಗ್ರೆಸ್ ನಾಯಕರಿಗೆ ಗಂಟುಬೀಳುವ ಒತ್ತಡಕ್ಕೆ ಒಳಗಾಗಿದ್ದಾರೆ ಎನ್ನುವುದು ಮಾತ್ರ ಅರ್ಥವಾಗುತ್ತಿಲ್ಲ.

ಎರಡು ಪತ್ರಗಳು

ಈ ತಿಂಗಳಲ್ಲಿ ಎರಡು ವಿಶಿಷ್ಟ ಪತ್ರಗಳು ಪತ್ರಿಕೆಗೆ ಬಂದಿವೆ. ಒಂದು, ಹಿರಿಯ ಗೆಳೆಯ ಮಂಗಳೂರಿನ ಎಂ. ಪ್ರಭಾಕರ ಜೋಷಿಯವರದ್ದು. ಅವರು ಕಳೆದ ಸಂಚಿಕೆಯಲ್ಲಿ ಒಂದೆರಡು ಕಡೆ ವ್ಯಕ್ತವಾಗಿದ್ದ ಸಾವರ್ಕರ್ ಕುರಿತ ಪ್ರತಿಕೂಲಕರ ಪ್ರಸ್ತಾಪಗಳಿಂದ ವಿಚಲಿತರಾಗಿ, ಗಾಂಧಿಯನ್ನು ಸಾವರ್ಕರ್‌ಗೆ ಹೋಲಿಸುತ್ತಾ ಹಲವು ಪ್ರಶ್ನೆಗಳನ್ನು ಹಾಕಿದ್ದಾರೆ ಮತ್ತು ಆ ಮೂಲಕ ಸಾವರ್ಕರ್‌ರ ವ್ಯಕ್ತಿತ್ವವನ್ನು ಬೆಳಗಲು ಯತ್ನಿಸಿದ್ದಾರೆ. ಅದಕ್ಕೆ ನಮ್ಮ ಪತ್ರಿಕೆಯಲ್ಲಿ ಅವಕಾಶವಿಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಈ ಮೂಲಕ ತಿಳಿಸಬಯಸುತ್ತೇವೆ. ಏಕೆಂದರೆ ಪತ್ರಿಕೆಗೆ ಸಾವರ್ಕರ್‌ರ ತಾತ್ವಿಕತೆಯ ಬಗ್ಗೆ ಓದಿನ ಆಧಾರದ ಒಂದು ಸ್ಪಷ್ಟ ನಿಲುವಿದೆ ಮತ್ತು ಅವರದ್ದು ಗಾಂಧಿಗೆ ಹೋಲಿಸುವಂತಹ ವ್ಯಕ್ತಿತ್ವವೇ ಅಲ್ಲ ಎಂದು ಖಚಿತವಾಗಿ ನಂಬಿದೆ.

ಎರಡನೆಯ ಪತ್ರ 'ಲಿಂಗಾಯತ ಧರ್ಮ ಮಹಾಸಭಾ'ದ ಧಾರವಾಡ ಜಿಲ್ಲಾ ಅಧ್ಯಕ್ಷ ಸಿ.ಬಿ. ಗೌಡರ ಅವರ ಪತ್ರ. ಅವರಿಗೆ ನಮ್ಮ ಪತ್ರಿಕೆಯ ವಿಚಾರಧಾರೆ ಮೆಚ್ಚುಗೆಯಾಗಿದೆಯೆಂದೂ, ಅದನ್ನು ಹೆಚ್ಚು ವ್ಯಾಪಕವಾಗಿ ಪಸರಿಸಲು ನಾವೊಂದು ದಿನಪತ್ರಿಕೆಯನ್ನು ಆರಂಭಿಸಬೇಕೆಂದೂ, ಅದರ ವಿತರಣೆಯ ಜವಾಬ್ದಾರಿಯನ್ನು ತಮ್ಮ ಸಂಘಟನೆ ವಹಿಸಿಕೊಳ್ಳಲು ಸಿದ್ಧವೆಂದೂ ತಿಳಿಸಿದ್ದಾರೆ. ಅವರ ಅಭಿಮಾನಕ್ಕೆ ಧನ್ಯವಾದ ತಿಳಿಸುತ್ತಾ, ಸದ್ಯಕ್ಕೆ ನಮಗೆ ಅಂತಹ ಯಾವ ಇಚ್ಛೆಯಾಗಲೀ, ಉದ್ದೇಶವಾಗಲೀ ಇಲ್ಲ ಎಂದು ಅವರಿಗೆ ಈ ಮೂಲಕ ತಿಳಿಸಬಹುದಾಗಿದೆ.

ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

ಸಮಕಾಲೀನ

ಅಭಿವೃದ್ಧಿಯ ಅರ್ಥ-ಅಪಾರ್ಥಗಳು

ಈ ದೇಶಕ್ಕೆ 'ಅಭಿವೃದ್ಧಿ'ಯ ಹುಚ್ಚು ಹತ್ತಿದಂತಿದೆ. ಇದನ್ನು ಹತ್ತಿಸಿದವರು ಮೋದಿ ಎಂದು ಹೇಳಿದರೆ ಅದು ತಪ್ಪಾಗುತ್ತದೆ. ಅಷ್ಟೇ ಅಲ್ಲ, ಇದು ಹುಚ್ಚು ಎಂದು ತಿಳಿಯಲು ಮತ್ತು ಅದನ್ನು ನಿವಾರಿಸಿಕೊಳ್ಳಲು ಅಗತ್ಯವಾಗಿರುವ ಅದರ ರಾಜಕಾರಣವನ್ನು ಅರ್ಥ ಮಾಡಿಕೊಳ್ಳುವಲ್ಲಿಯೂ ಇದರಿಂದ ದಾರಿ ತಪ್ಪುವ ಸಂಭವ ಇದೆ. ಮೂರು ನೂರು ವರ್ಷಗಳ ಹಿಂದೆ ವ್ಯಾಪಾರಕ್ಕೆಂದು ಇಲ್ಲಿಗೆ ಬಂದ ಬ್ರಿಟಿಷರು ನಮ್ಮ ಇಡೀ ದೇಶವನ್ನು ವಶಪಡಿಸಿಕೊಳ್ಳಲು ಮತ್ತು ವಶಪಡಿಸಿಕೊಂಡ ನಂತರ ನಮ್ಮನ್ನು ಸುಗಮವಾಗಿ ಆಳಲು ಯಾವತ್ತು ನಮ್ಮದು ಮೂಢ ಮತ್ತು ಹಿಂದುಳಿದ ದೇಶವೆಂದು ನಮ್ಮನ್ನು ನಂಬಿಸಲಾರಂಭಿಸಿದರೋ ಅಂದೇ ಈ 'ಅಭಿವೃದ್ಧಿ' ಎಂಬ ಹುಚ್ಚು ನಮಗೆ ತಗುಲಿತು. ಈ 'ಅಭಿವೃದ್ಧಿ' ಎಂಬುದು ಬ್ರಿಟಿಷರು ನಮ್ಮನ್ನು ಮೌಢ್ಯದಿಂದ ಮತ್ತು ಹಿಂದುಳಿದಿರುವಿಕೆಯಿಂದ ಪಾರು ಮಾಡಿ 'ನಾಗರೀಕ'ರನ್ನಾಗಿ ಮಾಡಲು ನಮಗೆ ರುಚಿ ಹತ್ತಿಸಿದ 'ಆಧುನಿಕ ನಾಗರೀಕತೆ'ಯ ಕೊಡುಗೆ. ಈ ರುಚಿ ಹತ್ತಿಸಿಕೊಳ್ಳಲು ನೆಪವಾಗಿ ನಮ್ಮ ಮೌಢ್ಯ-ಹಿಂದುಳಿದಿರುವಿಕೆಗಳನ್ನು ಸಾಬೀತುಪಡಿಸಲು ನಮ್ಮ ಜಾತಿ ಪದ್ಧತಿ, ಅಸ್ಪೃಶ್ಯತೆ, ಮಾತ-ಮಂತ್ರ, ಸತಿ ಪದ್ಧತಿ ಇತ್ಯಾದಿಗಳು ಹೇಗೂ ಇದ್ದವಲ್ಲ?

ಇರಲಿ. ಈ ಅಭಿವೃದ್ಧಿಯ ಹುಚ್ಚು ಹತ್ತಿಸಿದ ಆಧುನಿಕ ನಾಗರೀಕತೆಯ ಮೂಲ ಮಂತ್ರ: ಮನುಷ್ಯ ಈ ಜಗತ್ತಿನ ರಾಜ. ಅವನು ಈ ಜಗತ್ತಿಗೆ ಬಂದಿರುವುದೇ ಸುಖ ಉಣ್ಣಲು. ಆ ಸುಖಕ್ಕೆ ಮಿತಿ ಎಂಬುದಿಲ್ಲ. ಏಕೆಂದರೆ ಅವನ ಬುದ್ಧಿಗೆ ಮಿತಿ ಎಂಬುದಿಲ್ಲ. ಅದನ್ನು ಸಾಬೀತು ಪಡಿಸಲು ಹೇಗೂ ವಿಜ್ಞಾನ-ತಂತ್ರಜ್ಞಾನಗಳು ಆವಿಷ್ಕಾರವಾಗಿದ್ದವಲ್ಲ?

ಆದರೆ ಇದಕ್ಕೊಂದು ಪ್ರತಿವಾದವೂ ಆಗಲೇ ಹುಟ್ಟಿಕೊಂಡದ್ದು ಸಹಜವೇ. ಮನುಷ್ಯನ ಈ ಮಿತಿ ಇಲ್ಲದ ಸುಖದ ಕನಸು ಗಾಂಧಿಗೆ ಒಂದು ದುಃಸ್ವಪ್ನವಾಗಿ ಕಂಡಿತು. ತಮ್ಮ ಕಣ್ಮುಂದೆಯೇ ಒಂದು ಪುರಾತನ ನಾಗರೀಕತೆಯನ್ನು ಗುಲಾಮಗಿರಿಗೆ ಈಡು ಮಾಡಿದ ಈ ಮಿತಿ ಇಲ್ಲದ ಸುಖದ ಕಲ್ಪನೆ ಇಡೀ ಮಾನವ ಜನಾಂಗವನ್ನು ಎಲ್ಲಿಗೆ ಕೊಂಡೊಯ್ಯಬಹುದು ಎಂದು ಅವರು ಅಂದಾಜು ಮಾಡಿದರು. ಈ ಅಂದಾಜಿನ ಹಿಂದೆ ಭಾರತದ ಪಾರಂಪರಿಕ ಜೀವನ ದೃಷ್ಟಿ, ಮೌಲ್ಯ ಮತ್ತು ಕ್ರಮಗಳ ಮತ್ತು ಇವನ್ನು ರೂಪಿಸಿದ್ದ ಶ್ರೇಯ-ಪ್ರೇಯಗಳ ನಡುವೆ ನಮ್ಮ ಪುರಾತನರು ನಡೆಸಿದ್ದ ಚರ್ಚೆಯ ಅರಿವಿತ್ತು. ಹಾಗಾಗಿಯೇ ಅವರು ಈ ಕನಸನ್ನು ನನಸು ಮಾಡಬಲ್ಲುದೆಂದು ನಂಬಲಾದ ಆಧುನಿಕ ತಂತ್ರಜ್ಞಾನವನ್ನು ವಸಾಹತುಶಾಹಿಯ(ಗುಲಾಮತನದ) ಸಾಧನ ಎಂದು ಕರೆದರು. ಇನ್ನೂ ಮುಂದುವರೆದು ಒಂದು ದೊಡ್ಡ ಜಾಗತಿಕ ಸತ್ಯವನ್ನೂ ಹೇಳಿದರು: ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ. ಅವರ ಈ ಮಾತು ಅದನ್ನಾಡಿದ ಎಷ್ಟೋ ವರ್ಷಗಳ ನಂತರ ಹುಟ್ಟಿಕೊಂಡ

ಪರಿಸರ ವಿಜ್ಞಾನವೆಂಬ ಹೊಸ ಶಾಸ್ತ್ರದ ಆಧಾರ ನಂಬಿಕೆಯಾಯಿತು. ಅವರ ಈ ಮಾತಿನ ಹಿಂದೆ ವಿಜ್ಞಾನವೇ ಮರೆತಿದ್ದ ಒಂದು ವೈಜ್ಞಾನಿಕ ಸತ್ಯವಿತ್ತು. ಅದೆಂದರೆ, ಮನುಷ್ಯನ ಎಲ್ಲ ಸುಖ ಸಂಪತ್ತುಗಳಿಗೂ ಮೂಲ ದ್ರವ್ಯಗಳನ್ನು ಒದಗಿಸಬೇಕಾದ ಈ ಭೂಮಿಗೆ ಒಂದು ಮಿತಿಯಿದೆ; ಅಳತೆ ಇದೆ. ಮಿತಿಯಿರುವುದರಿಂದ ಮಿತಿಯಿಲ್ಲದ್ದನ್ನು ಹುಟ್ಟಿಸಲಾಗುವುದಿಲ್ಲ. ಅದು ಅನಾಹುತಕ್ಕೆ ಕಾರಣವಾದೀತು. ಅಭಿವೃದ್ಧಿ ರಾಜಕಾರಣ ಮಾಡಿರುವ ಒಂದು ದೊಡ್ಡ ಕಣ್ಕಟ್ಟೆಂದರೆ ಗಾಂಧಿ ಹೇಳುವ ಅಗತ್ಯ ಮತ್ತು ಆಸೆಗಳ ನಡುವಣ ವ್ಯತ್ಯಾಸಗಳ ಗೆರೆಗಳನ್ನೇ ಅಳಿಸಿ ಹಾಕಿರುವುದು. ಹಾಗಾಗಿಯೇ ಗಾಂಧಿ ಮುನ್ನೋಡಿದ ಅನಾಹುತಗಳು ನಮ್ಮ ಕಣ್ಮುಂದೆಯೇ ಸಂಭವಿಸುತ್ತಿರುವುದು. ನಾಗಸಾಕಿ, ಚೆರ್ನೋಬೈಲ್ ಮತ್ತು ಭೂಪಾಲ ವಿಷಾನಿಲ ದುರಂತಗಳು ಒಂದು ತೆರನ ಈ ಅನಾಹುತಗಳ ಸೂಚನೆಯಾದರೆ, ನಮ್ಮದೇ ಹೋದ ವರ್ಷದ ಉತ್ತರಾಖಂಡ ಮತ್ತು ಈ ವರ್ಷದ ಜಮ್ಮು-ಕಾಶ್ಮೀರದ ಜಲಪ್ರಳಯ ಇನ್ನೊಂದು ತೆರನ ಅನಾಹುತಗಳ ಸೂಚನೆಗಳು. ಕೋಮುವಾದ, ಮೂಲಭೂತವಾದಗಳ ರೂಪ ತಾಳುತ್ತಿರುವ ಧರ್ಮ ಕುರಿತ ಜನರಲ್ಲಿನ ಹೊಸ ಸೆಳೆತಗಳು ಮತ್ತು ಅವು ಹುಟ್ಟು ಹಾಕುತ್ತಿರುವ ಕೋಮು ಹಿಂಸಾಚಾರ, ಮತೀಯ ಭಯೋತ್ಪಾದನೆಗಳೂ ಈ ಅನಾಹುತಗಳ ಪರೋಕ್ಷ ಪರಿಣಾಮಗಳೇ ಆಗಿವೆ.

ಮನುಷ್ಯ ಜನಾಂಗದ ಹೆಮ್ಮೆ ಎಂದು ಹೇಳಿಕೊಳ್ಳಲಾಗುವ ಕೈಗಾರಿಕಾ ಕ್ರಾಂತಿ ಆರಂಭವಾದಾಗಿನಿಂದ ನಮಗಿಂತ ಬಹುಮುಂಚೆ ಈ ಭೂಮಿಯ ಮೇಲೆ ಕಾಣಿಸಿಕೊಂಡು ನಮ್ಮ ಹುಟ್ಟಿಗೆ, ಬದುಕಿಗೆ ಕಾರಣವಾದ ಎಷ್ಟು ಜೀವ ಪ್ರಬೇಧಗಳು ಯಾವ ಗತಿಯಲ್ಲಿ ನಾಶವಾಗಿವೆ ಮತ್ತು ಏಕೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿದರೆ, ಈ ಅಭಿವೃದ್ಧಿ ಆತ್ಯಂತಿಕವಾಗಿ-ಆದರೆ ಬಹುದೂರದದಲ್ಲೇನಲ್ಲ-ಮನುಷ್ಯ ಪ್ರಬೇಧವನ್ನೂ ಹೇಗೆ ಹಿಂಸಿಸಿ (ಇಂತಹ ಅನೇಕ ಒಳ ಮತ್ತು ಹೊರ ಹಿಂಸೆಗಳು ಈಗಾಗಲೇ ದೃಗ್ಗೋಚರವಾಗಿವೆ) ನಾಶ ಮಾಡಲಿದೆ ಎಂಬುದು ಗೊತ್ತಾದೀತು. ಆದರೆ ಸುಖ-ಸಂಪತ್ತುಗಳ ಹಪಾಹಪಿಯಲ್ಲಿರುವ ಮನುಷ್ಯನಿಗೆ ಆ ವ್ಯವಧಾನವೇ ಇಲ್ಲವಾಗಿದೆ. ಕೋಟ್ಯಂತರ ವರ್ಷಗಳಿಂದ ಈ ಭೂಮಿ ಉಸಿರಾಡಲು, ಆ ಮೂಲಕ ನಾವೂ ಸೇರಿದಂತೆ ಜೀವ ಜಗತ್ತು ಉಸಿರಾಡಲು ಪೋಷಕವಾಗಿರುವ ಪಶ್ಚಿಮ ಘಟ್ಟಗಳನ್ನು ಉಳಿಸಲು ರೂಪಿತವಾದ ಮಾಧವ ಗಾಡ್ಗೀಳ್ ವರದಿಯನ್ನು ತಿರಸ್ಕರಿಸಿದ ಘಾತುಕತನ ಮತ್ತು ಅದರ ಬದಲಿಗೆ ತಯಾರಾದ ಅದರ ದುರ್ಬಲ ರೂಪವೆನಿಸಿದ ಕಸ್ತೂರಿ ರಂಗನ್ ವರದಿಗೂ ವ್ಯಕ್ತವಾಗುತ್ತಿರುವ ವಿರೋಧವನ್ನು ಗಮನಿಸಿದರೇ ಸಾಕು, ಈ ಅಭಿವೃದ್ಧಿಯ ಹುಚ್ಚು ಒಂದು ರೋಗವಾಗಿ ಮಾರ್ಪಾಡಾಗುತ್ತಿರುವ ಎಲ್ಲ ಸೂಚನೆಗಳೂ ದೊರಕುತ್ತವೆ. ನಾವು ಪ್ರಜಾಪ್ರಭುತ್ವದ ಹೆಸರಿನಲ್ಲಿ ನಮ್ಮ ವಿವೇಕವನ್ನು ಎಂತಹ ಅವಿವೇಕಿಗಳ ಕೈಗೆ ಕೊಟ್ಟಿದ್ದೇವೆ ಎಂಬುದು ಗೊತ್ತಾಗುತ್ತದೆ. ಇನ್ನು ಹವಾಮಾನ ವೈಪರೀತ್ಯಗಳ ಕುರಿತ ಮಾತುಕತೆಗಳಲ್ಲಿನ ಚೌಕಾಶಿ ಇದಕ್ಕೊಂದು ಜಾಗತಿಕ ಸಾಕ್ಷಿಯಾಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ರಾಷ್ಟ್ರದಲ್ಲಿ ಇಂದು ತಮ್ಮದು ಗಾಂಧಿ ವಾರಸುದಾರಿಕೆ ಎಂದು ನೆಪಕ್ಕಾದರೂ ಹೇಳಿಕೊಳ್ಳುತ್ತಿದ್ದವರ ಮತ್ತು ಅದನ್ನು ತಾತ್ವಿಕವಾಗಿ ಪ್ರಶ್ನಿಸಿ ವಾದಮಾಡಲು ಸಾಧ್ಯವಿದ್ದ ರಾಜಕಾರಣವೂ ಅಂತ್ಯವಾಗಿದೆ ಎಂಬುದನ್ನೂ ನಾವು ಗಮನಿಸಬೇಕು. ಗಾಂಧಿಗೆ ಮೂಲದಲ್ಲೇ ವಿರುದ್ಧವಾದ ಚಿಂತನಾ ಲಹರಿಗೆ ಸೇರಿದವರ ವಾರಸುದಾರಿಕೆಯ ರಾಜಕಾರಣ ಬಂದಿದೆ. ಹಾಗಾಗಿ ಇಂದಿನ ಮುಖ್ಯ ಪ್ರಶ್ನೆ, ಈ ರಾಜಕಾರಣದೊಂದಿಗೆ ಯಾವ ಪರಿಭಾಷೆಯಲ್ಲಿ ಮಾತನಾಡಬೇಕೆಂಬುದೇ ಆಗಿದೆ. ಇದು ತನ್ನದು ಅಭಿವೃದ್ಧಿ ಕೇಂದ್ರಿತ ಎಂದು ಘಂಟಾಘೋಷವಾಗಿ ಹೇಳಿಕೊಳ್ಳುವ ರಾಜಕಾರಣ ಬೇರೆ! ಜೊತೆಗೆ 'ಬಲಿಷ್ಠ ಭಾರತ'ದ ಘೋಷಣೆಯೂ!! ಹಾಗಾಗಿಯೇ ಈ ಬಲಿಷ್ಠತೆಯೆಂದರೇನು ಎಂದು ಸೂಚಿಸಲೋ ಎಂಬಂತೆ ಅಧಿಕಾರಕ್ಕೆ ಬಂದ ಕೂಡಲೇ, ಅಭಿವೃದ್ಧಿಗೆ ತೊಂದರೆ ಮಾಡುತ್ತಿವೆಯೆಂದು ಪರಿಸರವಾದಿ ಸ್ವಯಂಸೇವಾ ಸಂಸ್ಥೆಗಳ ಮೇಲೆ ನಿಗಾ ಇಡುವ ಪರಿಪಾಠ ಆರಂಭವಾಯಿತು. ಈಗ ತ್ವರಿತ ಉದ್ಯಮೀಕರಣಕ್ಕೆ ಅಡ್ಡಿಯಾಗುತ್ತಿವೆಯೆಂದು ಹೇಳುತ್ತಾ ಪರಿಸರ ಕಾನೂನುಗಳನ್ನು ಪರಿಷ್ಕರಿಸುವ ಕೆಲಸಕ್ಕೆ ಕೈಹಾಕಿ, ಅದರ ವರದಿ-ಶಿಫಾರ್ಸುಗಳನ್ನು ರಹಸ್ಯವಾಗಿ ಇರಿಸಲಾಗಿದೆ. ಏನಿದೆಲ್ಲದರ ಅರ್ಥ? ಅಥವಾ ಇದೆಲ್ಲವೂ ಅಭಿವೃದ್ಧಿ ಎಂಬ ಶಬ್ದದ ಅಪಾರ್ಥಗಳ ಆಟವೋ? ನೆಮ್ಮದಿಯ ಸಾಮೂಹಿಕ ಬದುಕಿನ ಒರೆಗಲ್ಲಿನಲ್ಲಿ ಇಂದು ನಮ್ಮ ಅಗತ್ಯಗಳನ್ನು ಆಸೆಗಳಿಂದ ಬೇರ್ಪಡಿಸಿ ನೋಡಬಲ್ಲ ವಿವೇಕವನ್ನು ಅಂತರ್ಗತಗೊಳಿಸಿಕೊಂಡ ರಾಜಕಾರಣವೇ ಈ ಪ್ರಶ್ನೆಗೆ ಉತ್ತರ ನೀಡೀತು. ಆದರೆ ಅಂತಹ ರಾಜಕಾರಣದ ಸುಳಿವಾದರೂ ಎಲ್ಲಿದೆ?

ಅಂತಹ ರಾಜಕಾರಣದ ರೂಹುಗಳನ್ನಾದರೂ ಕಾಣಲು ನೆರವಾಗುವಂತೆ, ಈ ಅಭಿವೃದ್ಧಿಯ ಅರ್ಥ-ಅಪಾರ್ಥಗಳನ್ನು ವಿವಿಧ ನೆಲೆಗಳಿಂದ ಹುಡುಕುವ ನಾಲ್ಕು ಲೇಖನಗಳನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ. ಓದಿ, ನಿಮಗೇನನ್ನಿಸುತ್ತದೆ ಬರೆಯಿರಿ-**ಸಂ**

ಫೆಬ್ರುವರಿ, ೨೦೧೫

ಇದು ಜನವಿರೋಧಿ ಅಭಿವೃದ್ಧಿ ನೀತಿ

ಪ್ರಿಯ ಓದುಗರೇ,

ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮಾ ನಮ್ಮ ಗಣರಾಜ್ಯೋತ್ಸವ ಸಮಾರಂಭದ ಅತಿಥಿಯಾಗಿ ಬಂದು ಹೋಗಿದ್ದಾರೆ. ಇದನ್ನು ಮೋದಿ ಸರ್ಕಾರ ತನ್ನ ಹೆಗ್ಗಳಿಕೆಯೆಂದು ಹೇಳಿಕೊಳ್ಳುತ್ತಿದೆ. ನಮ್ಮ ವಿದೇಶಾಂಗ ನೀತಿ–ಬಹುಶಃ ಇಂದಿರಾ ಗಾಂಧಿಯವರ ಕಾಲದ ಹೊರತಾಗಿ–ಅಮೆರಿಕಾವನ್ನು ಓಲೈಸಿ ಗೆಲ್ಲುವುದೇ ತನ್ನ ಸಾಧನೆ ಎಂದು ಭಾವಿಸಿರುವುದರಿಂದ ಇದೇನೂ ಅಚ್ಚರಿಯ ಸಂಗತಿಯಲ್ಲ. ಇದೇ ಸಂದರ್ಭದಲ್ಲಿ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ನಾಗರಿಕ ಪರಮಾಣು ಒಪ್ಪಂದ ಅಂತಿಮವಾಗಿ ಇತ್ಯರ್ಥವಾಗಿರುವುದಾಗಿ ಎರಡೂ ದೇಶಗಳು ಘೋಷಿಸಿವೆ. ಜೊತೆಗೆ ರಕ್ಷಣಾ ಸಾಧನ ಸಲಕರಣೆಗಳ ಜಂಟಿ ಉತ್ಪಾದನೆಯ ಒಪ್ಪಂದವೂ ಯಶಸ್ವಿಯಾಗಿ ಇತ್ಯರ್ಥವಾಗಿದೆ ಎಂದೂ ಹೇಳಲಾಗುತ್ತಿದೆ. ಈ ಒಪ್ಪಂದಗಳ ಪರಿಣಾಮಗಳ ಚರ್ಚೆಯನ್ನು ಅತ್ತ ಒತ್ತಟ್ಟಿಗಿರಿಸಿ ಒಂದು ಮಾತು ಹೇಳುವುದಾದರೆ, ಮೋದಿ ದೇಶದ ಜನತೆಗೆ ಭರವಸೆ ನೀಡಿದ್ದ 'ಅಚ್ಛೇ ದಿನ'ಗಳನ್ನು ತರುವಲ್ಲಿ ಸದ್ಯಕ್ಕಂತೂ ಯಶಸ್ವಿಯಾಗಿರದಿದ್ದರೂ, ವಿದೇಶಾಂಗ ವ್ಯವಹಾರಗಳ ವಿಷಯದಲ್ಲಿ ಅವರು ಅನಿರೀಕ್ಷಿತ ಯಶಸ್ಸನ್ನು ಸಾಧಿಸಿದ್ದಾರೆ ಎಂದು ನಿಸ್ಸಂಶಯವಾಗಿ ಹೇಳಬಹುದು.

ಪರಮಾಣು ನಾಗರಿಕ ಒಪ್ಪಂದ ಮೂಲತಃ ಮೋದಿಯವರೇ ಒಪ್ಪಿಕೊಂಡಂತೆ ಮನಮೋಹನ ಸಿಂಗ್‌ರ ಕೊಡುಗೆ. ಆ ಒಪ್ಪಂದದ ಒಂದು ತೊಡಕಾಗಿದ್ದ ಅಣುಸ್ಥಾವರ ಅವಘಡದ ಹಣಕಾಸಿನ ಹೊಣೆಯನ್ನು ಯಾರು, ಎಷ್ಟು ಹೊರಬೇಕೆಂಬ ವಿಷಯವನ್ನು ಈಗ ಒಂದು ವಿಮೆ ವ್ಯವಸ್ಥೆಯ ಮೂಲಕ ಇತ್ಯರ್ಥಪಡಿಸಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಮೂಲ ಪ್ರಶ್ನೆ ಇದ್ದೇ ಇದೆ: ನಮಗೆ ನಿಜವಾಗಿ ಅಣು ಸ್ಥಾವರಗಳು ಬೇಕಾಗಿವೆಯೇ? ಈಗ ಸ್ಥಾಪಿತವಾಗಿರುವ ಸ್ಥಾವರಗಳನ್ನೇ ನಾವು ಸುರಕ್ಷಿತವಾಗಿ ನಿರ್ವಹಿಸಲಾಗದಿರುವಾಗ ಮತ್ತು ಚರ್ನೋಬಿಲ್ ಮತ್ತು ಫುಕುಶಿಮಾಗಳ ಭೀಕರ ದುರಂತಗಳ ನಂತರ ಜಗತ್ತಿನ ಸರಿ ಸುಮಾರು ಎಲ್ಲ ದೇಶಗಳೂ ಅಣುಸ್ಥಾವರಗಳ

ಸ್ಥಾಪನೆಯನ್ನು ನಿಲ್ಲಿಸುವ ಮತ್ತು ಇರುವ ಸ್ಥಾವರಗಳನ್ನು ಸ್ಥಗಿತಗೊಳಿಸುವ ನಿರ್ಧಾರ ಕೈಗೊಳ್ಳುತ್ತಿರುವಾಗ ಇನ್ನಷ್ಟು ಸ್ಥಾವರಗಳನ್ನು ಆಹ್ವಾನಿಸುವ ಈ ಒಪ್ಪಂದ ಯಾರ ಒಳಿತಿಗಾಗಿ? ಮೊನ್ನೆ ತಾನೇ, ರಷ್ಯಾದ ಸಹಯೋಗದಲ್ಲಿ ಮತ್ತು ಜನವಿರೋಧವನ್ನು ಹತ್ತಿಕ್ಕಿ ಸ್ಥಾಪಿತವಾದ ಕೂಡಂಕುಳಂ ಸ್ಥಾವರದ ಒಂದನೇ ಘಟಕದ ಟರ್ಬೈನ್ ಗಂಭೀರ ತೊಂದರೆಗೆ ಸಿಕ್ಕಿರುವ ಮತ್ತು ಅದಕ್ಕೆ ಕಾರಣವಾಗಿರಬಹುದಾದ ಬೇಜವಾಬ್ದಾರಿಯುತ ಮತ್ತು ಅದಕ್ಕಿಂತ ಹೆಚ್ಚಾಗಿ ಪಾರದರ್ಶಕವಾಗಲು ನಿರಾಕರಿಸುವ ನಿರ್ಮಾಣ ವಿಧಾನಗಳ ಬಗ್ಗೆ ಈಗ ಆತಂಕಮಯ ಚರ್ಚೆಗಳು ನಡೆದಿವೆ ಎಂಬುದನ್ನು ನಾವು ಗಮನಿಸಬೇಕು.

ಆದರೆ 'ಅಭಿವೃದ್ಧಿ' ಎಂಬ ಹುಚ್ಚುಹೊಳೆಯ ಪ್ರವಾಹಕ್ಕೆ ನಮ್ಮನ್ನು ತೆತ್ತುಕೊಂಡಿರುವ ನಾವು ಇಂತಹ ಸೂಕ್ಷ್ಮ ವಿಷಯಗಳ ಬಗ್ಗೆ ಯೋಚನೆ ಮಾಡಲಾಗದ ದರಿದ್ರ ಸ್ಥಿತಿಯನ್ನು ತಲುಪಿದ್ದೇವೆ. ನಮ್ಮ ಕಣ್ಮುಂದೆ ನಮ್ಮ ಮಕ್ಕಳಿಗೆ ಹುಚ್ಚು ಹಿಡಿಯುವಷ್ಟು ಸಂಬಳ ಕೊಡುವ ಕೈಗಾರಿಕೆಗಳು, ಉದ್ಯಮಗಳು, ಅವುಗಳ ಉತ್ಪನ್ನಗಳನ್ನು ಬಿಕರಿ ಮಾಡುವ ಬೃಹತ್ ಮಾಲ್‌ಗಳು, ಅವಕ್ಕೆ ತಕ್ಕನಾದ ಸ್ಮಾರ್ಟ್ ಸಿಟಿಗಳು, ಬುಲೆಟ್ ಟ್ರೈನ್‌ಗಳ ಕನಸಿನಲ್ಲಿ ಮುಳುಗಿ ಹೋಗಿದ್ದೇವೆ.

ಹಾಗಾಗಿಯೇ ಈ ಸರ್ಕಾರ ಮೊನ್ನೆ ಅನುಮೋದಿಸಿಕೊಂಡ ಹೊಸ ವಿಮಾ ಮಸೂದೆ ಮತ್ತು ಈಗ ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತರುವ ತರಾತುರಿಯಲ್ಲಿರುವ ಭೂಸ್ವಾಧೀನ ಕಾಯ್ದೆ ತಿದ್ದುಪಡಿ ಮಸೂದೆಗಳ ಬಗ್ಗೆ, ರಾಜಕೀಯ ಹಿತಾಸಕ್ತಿಯ ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ ಪ್ರತಿಭಟನೆಗಳನ್ನು ಬಿಟ್ಟರೆ ಜನರ ಮಧ್ಯೆ ಗಂಭೀರ ಚರ್ಚೆಗಳೇ ಇಲ್ಲವಾಗಿದೆ. ನಮ್ಮ ಸರ್ಕಾರಿ ಸ್ವಾಮ್ಯದ ವಿಮಾ ಸಂಸ್ಥೆಗಳು ಜನರಿಗೆ ಸಮರ್ಪಕ ಸೇವೆ ಒದಗಿಸುತ್ತಾ ಲಾಭದಲ್ಲಿ ನಡೆಯುತ್ತಿರುವಾಗ ಈ ಕ್ಷೇತ್ರಕ್ಕೆ ವಿದೇಶಿ ನೇರ ಬಂಡವಾಳದ ಹರಿವನ್ನು ಹೆಚ್ಚಿಸುವ ಅಗತ್ಯವಾದರೂ ಏನು ಮತ್ತು ಯಾರ ಹಿತಾಸಕ್ತಿಗಾಗಿ ಎಂದು ಯಾರೂ ಕೇಳುತ್ತಿಲ್ಲ. ಇನ್ನು ಹೋದ ವರ್ಷವಷ್ಟೇ ಬಿಜೆಪಿಯ ಒಪ್ಪಿಗೆಯೊಂದಿಗೇ ಕಾನೂನಾಗಿದ್ದ ಭೂಸ್ವಾಧೀನ ಕಾಯ್ದೆಯಲ್ಲಿ ಭೂಸ್ವಾಧೀನಕ್ಕೆ ಕೆಲವು ಸಂದರ್ಭಗಳಲ್ಲಿ ಭೂಒಡೆಯನ(ಅಂದರೆ ರೈತನ) ಒಪ್ಪಿಗೆ ಹಾಗೂ ಪರಿಸರಾತ್ಮಕ ಮತ್ತು ಸಾಮಾಜಿಕ ಪರಿಣಾಮಗಳ ಅಂದಾಜು ಅಗತ್ಯವಿಲ್ಲ ಎಂಬ ತಿದ್ದುಪಡಿ ತರುವ ಸುಗ್ರೀವಾಜ್ಞೆಯ ಹಿಂದಿರುವುದು ರಾಷ್ಟ್ರೀಯ ಹಿತಾಸಕ್ತಿಗಳಿಗಿಂತ ಹೆಚ್ಚಾಗಿ ಬೃಹತ್ ಕೈಗಾರಿಕೋದ್ಯಮಿಗಳ ರಿಯಲ್ ಎಸ್ಟೇಟ್ ಹಿತಾಸಕ್ತಿ ಎಂಬುದರ ಬಗ್ಗೆ ಎಷ್ಟು ಜನ ತಲೆಕಡಿಸಿಕೊಂಡಿದ್ದಾರೆ? 'ಅನ್ನ ತಿನ್ನುವವರೆಲ್ಲರೂ ಈ ಸುಗ್ರೀವಾಜ್ಞೆಯನ್ನು ವಿರೋಧಿಸಬೇಕು' ಎಂಬ ದೇವನೂರ ಮಹಾದೇವ ಅವರ ಮಾತಿನಲ್ಲಿನ 'ಅನ್ನ' ಎಂಬ ಶಬ್ದಕ್ಕೆ ಸಾಮಾನ್ಯಾರ್ಥಕ್ಕಿಂತ ಹೆಚ್ಚಿನ ಅರ್ಥವಿದೆ ಎಂದು ನಾನು ಭಾವಿಸಿದ್ದೇನೆ.

ರಿಯಲ್ ಎಸ್ಟೇಟ್ ಹಿತಾಸಕ್ತಿ ಎಂದೊಡನೆ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುರ್ಚಿಗೇ ಮುಳುವಾಗುತ್ತಿರುವಂತೆ ತೋರುತ್ತಿರುವ ಅರ್ಕಾವತಿ ಡಿನೋಟಿಫಿಕೇಷನ್ ಪ್ರಕರಣ ನೆನಪಿಗೆ ಬಾರದಿರದು. ಸಿದ್ದರಾಮಯ್ಯ ತಮ್ಮ ಸ್ಥಾನದ ಸುಭದ್ರತೆಗಾಗಿ

ಸಮತುಲಿತವಾದ ಜನಪರ ಆಡಳಿತಕ್ಕೆ ಬದಲು ಹೊಸ ಪಟ್ಟಭದ್ರ ಜಾತಿ ಹಿತಾಸಕ್ತಿಗಳನ್ನು ನಂಬಿ ಹೊರಟಿದ್ದೇ ಅವರ ಇಂದಿನ ಈ ಅಸುರಕ್ಷತೆಗೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಸಮಾಜವಾದಿ ಹಿನ್ನೆಲೆಯಿಂದ ಬಂದ ಸಿದ್ದರಾಮಯ್ಯ ಹೀಗೆ ದಾರಿ ತಪ್ಪಲು ಮುಖ್ಯ ಕಾರಣ, ಅವರಲ್ಲಿ ಸಾಮಾಜಿಕ ನ್ಯಾಯ ಎಂದರೆ, ಜಾತಿ ಕೆಟ್ಟದು ಎಂಬ ಕಾರಣಕ್ಕಾಗಿ ಅದನ್ನು ನಿವಾರಿಸಿಕೊಳ್ಳಲು ಅಗತ್ಯವಾದ ರಾಜಕೀಯ ಕಾರ್ಯಕ್ರಮ ಎಂಬ ಅರಿವೇ ಇಲ್ಲದೆ, ಅದನ್ನು ಜಾತಿ ಉದ್ಧಾರದ ಕಾರ್ಯಕ್ರಮವನ್ನಾಗಿ ಸಂಭ್ರಮದಿಂದ ಜಾರಿಗೆ ತರುತ್ತಿರುವುದೇ ಆಗಿದೆ. ಲೋಹಿಯೋತ್ತರ ಸಮಾಜವಾದದ ದುರಂತ ಇದು. ಸಿದ್ಧರಾಮಯ್ಯ ತಮ್ಮ ಅಗ್ಗದ ಜಾತಿ ರಾಜಕಾರಣದಿಂದ ಎಚ್ಚೆತ್ತುಕೊಳ್ಳದಿದ್ದರೆ ಅವರು ಈ ದುರಂತಕ್ಕೆ ಇತ್ತೀಚಿನ ಬಲಿಪಶುವಾದಾರು.

ಇಂತಹ ಎಚ್ಚೆತ್ತುಕೊಳ್ಳುವಿಕೆ ಅವರನ್ನು ಇನ್ನೂ ದೊಡ್ಡ ರಾಜಕೀಯ ಸಾಹಸಕ್ಕೆ ಪ್ರೇರೇಪಿಸೀತು. ಡಿ.ಕೆ.ಶಿವಕುಮಾರ್, ಶಾಮನೂರು, ತಂಗಡಗಿ, ಅಂಬರೀಶ್, ರೋಷನ್ ಬೇಗ್, ಚಿಂಚನಸೂರ್, ಖಮರುಲ್ ಇಸ್ಲಾಂ ಮುಂತಾದ ಭ್ರಷ್ಟರು ಅಥವಾ ನಿಷ್ಪ್ರಯೋಜಕರನ್ನು ತಮ್ಮ ಸಚಿವ ಸಂಪುಟದಲ್ಲಿರಿಸಿಕೊಂಡಿರುವುದರ ಮತ್ತು ಕೆ.ಪಿ.ಎಸ್.ಸಿ. ಮತ್ತು ಇತರ ಸಾಂಸ್ಥಿಕ ಪದಾಧಿಕಾರಗಳಿಗೆ ತಾವು ಮಾಡಿರುವ ನೇಮಕಾತಿಗಳ ಹಿಂದಿರುವ ರಾಜಕೀಯ ನಂಬಿಕೆ ಎಷ್ಟು ಸವಕಲು ಮತ್ತು ಹಾಗಾಗಿ ಜನವಿರೋಧಿ ಎಂಬುದು ಗೊತ್ತಾದೀತು.

ಮೋದಿ ಮತ್ತವರ ರಾಜಕೀಯ ಪರಿವಾರ ಸವಾಲೇ ಇಲ್ಲದೆ ಬೆಳೆಯುತ್ತಿರುವ ಇಂದಿನ ಸಂದರ್ಭದಲ್ಲಿ ಸದ್ಯಕ್ಕೆ ಕಾಂಗ್ರೆಸ್ಸಿನ ನೆಲೆಯಾಗಿ ಉಳಿದಿರುವ ಕರ್ನಾಟಕದ ರಾಜಕಾರಣವನ್ನು ಎಷ್ಟು ವಿವೇಕಯುತವಾಗಿ ಪ್ರಬುದ್ಧವಾಗಿ ನಡೆಸಿಕೊಂಡು ಹೋಗಬೇಕು ಎಂಬ ಅರಿವು ಸಿದ್ಧರಾಮಯ್ಯನವರಿಗೆ ಆದಷ್ಟು ಬೇಗ ಉಂಟಾಗಬೇಕಿದೆ. ಕನಿಷ್ಠ ಅವರು ದೆಹಲಿಯಲ್ಲಿ ಮೋದಿ ಪರಿವಾರದ ಬೆವರಿಳಿಸುತ್ತಿರುವ ಅರವಿಂದ ಕೇಜ್ರಿವಾಲರಿಂದಾದರೂ ಕೆಲವು ರಾಜಕೀಯ ಪಾಠಗಳನ್ನು ಕಲಿಯಬೇಕಿದೆ.

ಕೇಜ್ರಿವಾಲರ ಆಂ ಆದ್ಮಿ ಪಕ್ಷಕ್ಕೆ ನಮ್ಮ ಶುಭಾಶಯಗಳು!

<u>ಸಮಕಾಲೀನ</u>

ನಮ್ಮ ಸಂವಿಧಾನದತ್ತ ಒಂದು ಮರುನೋಟ

ಒಂದು ಸಮಾಜ ಆಧುನಿಕ ಅರ್ಥದಲ್ಲಿ ಒಂದು ರಾಷ್ಟ್ರ ಎನಿಸಿಕೊಳ್ಳುವುದು ಮುಖ್ಯವಾಗಿ ಅದು ಒಂದು ಸಂವಿಧಾನವನ್ನು ಪಡೆದುಕೊಂಡಾಗ. ಸಂವಿಧಾನ ಎಂದರೆ ಒಂದು ಭೂಭಾಗದಲ್ಲಿ ವಾಸಿಸುವ ಜನಸಮುದಾಯವೊಂದು ತಾನು ಜಗತ್ತಿನ ಒಂದು ಭಾಗವಾಗಿ ಬದುಕಿ ಬಾಳಲು ತಾನೇ ರೂಪಿಸಿಕೊಂಡ ಒಂದು ನಾಗರಿಕ ಕಾನೂನು ಸಂಹಿತೆ ಎನ್ನಬಹುದು. ಈ ಅರ್ಥದಲ್ಲಿ ಭಾರತ ಅಧಿಕೃತವಾಗಿ ಒಂದು ರಾಷ್ಟ್ರ ಎನಿಸಿಕೊಂಡದ್ದು

೧೯೫೦ರ ಜನವರಿ ೨೬ರಂದು. ಅಂದು ಅದು ತನ್ನನ್ನು ಒಂದು ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಕರೆದುಕೊಂಡಿತು.

ಹಾಗೆ ನೋಡಿದರೆ ಭಾರತ ಇತಿಹಾಸದಲ್ಲಿ ಹಿಂದೆಂದೂ ರಾಜಕೀಯ ಅರ್ಥದಲ್ಲಿ ಒಂದು ರಾಷ್ಟ್ರವಾಗಿರಲಿಲ್ಲ. ಅದು ಹಲವು ವಿಭಿನ್ನ ರಾಜ್ಯಾಡಳಿತಗಳಿಗೆ ಒಳಪಟ್ಟ ಒಂದು ಭೂಭಾಗವಾಗಿತ್ತು. ಹೆಚ್ಚೆಂದರೆ ಒಂದು 'ದೇಶ'ವಾಗಿತ್ತು. ಅಂದರೆ, ಭಾರತ ಎಂಬುದು ಸಾರತಃ ಒಂದು ಭಾವನಾತ್ಮಕ ಚೌಕಟ್ಟಿನೊಳಗಿನ ಮಾನಸಿಕತೆ ಮಾತ್ರವಾಗಿತ್ತು. ಈ ಮಾನಸಿಕತೆಯಲ್ಲಿ ಇತಿಹಾಸದುದ್ದಕ್ಕೂ ಇಲ್ಲಿ ಬೆರೆತು ಕೂಡಿ ಬಾಳಿದ ಹಲವು ಜನಾಂಗ, ಧರ್ಮ, ಭಾಷೆ, ಸಂಪ್ರದಾಯಗಳು ಕಾಲಕ್ರಮದಲ್ಲಿ ಸೇರಿ ರೂಪಿಸಿಕೊಂಡ ಒಂದು ನೀತಿ ಸಂಹಿತೆ ಅಂತರ್ಗತವಾಗಿತ್ತು. ಅದೇ ಭಾರತವಾಗಿತ್ತು. ಆದರೆ ಈ ಭೂಭಾಗವನ್ನೆಲ್ಲ ಬ್ರಿಟಿಷ್ ವಸಾಹತುಶಾಹಿ ತನ್ನ ಹಿಡಿತಕ್ಕೆ ತೆಗೆದುಕೊಂಡು ಆಳತೊಡಗಿದಾಗ ಭಾರತವೆಂಬುದು ಒಂದು ರಾಜಕೀಯ ಕಲ್ಪನೆಯಾಗಿಯೂ ಹರಳುಗಟ್ಟಿಕೊಳ್ಳತೊಡಗಿತು. ವಸಾಹತುಶಾಹಿ ವಿರುದ್ಧದ ಸ್ವಾತಂತ್ರ್ಯ ಹೋರಾಟ ಪಶ್ಚಿಮದಲ್ಲಿ ರೂಪುಗೊಳ್ಳುತ್ತಿದ್ದ ರಾಷ್ಟ್ರೀಯತೆಯ ಕಲ್ಪನೆಯಿಂದ ಪ್ರಭಾವಿತವಾಗಿ ತನ್ನನ್ನು ತಾನು ರಾಷ್ಟ್ರೀಯ ಹೋರಾಟ ಎಂದು ಕರೆದುಕೊಳ್ಳತೊಡಗಿದಾಗ ರಾಷ್ಟ್ರೀಯತೆ ಎನ್ನುವುದು ಒಂದು ರಾಜಕೀಯ ಭಾವನೆಯಾಗಿಯೂ ಗರಿಗಟ್ಟಿಕೊಳ್ಳತೊಡಗಿತು. ಅದೇ ಸ್ಫೂರ್ತಿಯಲ್ಲಿ ಸಿದ್ಧವಾದ ನಮ್ಮ ಸಂವಿಧಾನ ಭಾರತವನ್ನು ಇಂದಿನ ರೂಪದಲ್ಲಿ ಒಂದು ರಾಷ್ಟ್ರವಾಗಿ ರೂಪಿಸಿ ನಿಲ್ಲಿಸಿದೆ.

ಆದರೆ ಭಾರತದ ಈ ರಾಷ್ಟ್ರ ಕಲ್ಪನೆ ಕಳೆದ ೬೫ ವರ್ಷಗಳ ನಮ್ಮ ಸಂವಿಧಾನದ ಕ್ರಿಯಾಶೀಲತೆಯ ಅನುಭವಗಳ ಹಿನ್ನೆಲೆಯಲ್ಲಿ ಇಲ್ಲಿನ ವಿವಿಧ ಜನಸಮುದಾಯಗಳ ಸ್ಮೃತಿ, ಇತಿಹಾಸ, ಭಾಷೆ, ಸಂಸ್ಕೃತಿಗಳ ಸಂರಕ್ಷಣೆಯ ಕೆಲಸ ಆಗಿದೆಯೇ? ಎಂಬ ಪ್ರಶ್ನೆ ಏಳುತ್ತದೆ. ಜೊತೆಗೇ ಜನತೆಯ ಸಾಮಾನ್ಯ ಜನಜೀವನದಲ್ಲಿ ಉದ್ಭವವಾಗುವ ವಿವಿಧ ನೆಲೆಗಳ ನ್ಯಾಯದ ಪ್ರಶ್ನೆಗಳನ್ನು ನಿರ್ವಹಿಸಿರುವ ರೀತಿ ನೀತಿಗಳನ್ನು ಗಮನಿಸಿದಾಗ ಸಂವಿಧಾನದ ಸ್ವರೂಪದ ಬಗ್ಗೆಯೇ ಹಲವು ಪ್ರಶ್ನೆಗಳೂ ಏಳುತ್ತವೆ. ಇಂತಹ ಈ ಹಿಂದಿನ ಹಲವು ಪ್ರಶ್ನೆಗಳೇ ಸಂವಿಧಾನಕ್ಕೆ ಅದು ಅಂಗೀಕರಿಸಲ್ಪಟ್ಟ ವರ್ಷದಿಂದ ಆರಂಭವಾದಂತೆ ಇತ್ತೀಚಿನ ವರ್ಷದವರೆಗೆ ಹಲವು ತಿದ್ದುಪಡಿಗಳಿಗೆ ಕಾರಣವಾಗಿವೆ. ಅವು ಯಾವುವೂ ನಮ್ಮ ಸಂವಿಧಾನದ ಮೂಲಸ್ವರೂಪಕ್ಕೆ ಧಕ್ಕೆ ತರಬಾರದೆಂಬ ನಮ್ಮ ಸಂವಿಧಾನದ ವ್ಯಾಖ್ಯಾನದ ಪರಮೋಚ್ಛ ಅಧಿಕಾರ ಹೊಂದಿರುವ ನಮ್ಮ ಸರ್ವೋನ್ನತ ನ್ಯಾಯಾಲಯದ ಲಕ್ಷ್ಮಣರೇಖೆಯನ್ನು ದಾಟಿಲ್ಲ, ನಿಜ. ಆದರೆ ಸರ್ವೋನ್ನತ ನ್ಯಾಯಾಲಯವು ಸಂವಿಧಾನದ ಮೂಲಸ್ವರೂಪ ಎಂದರೇನು ಎಂಬುದನ್ನು ಸ್ಪಷ್ಟಪಡಿಸಿಲ್ಲವಾದ್ದರಿಂದ ಈ ೬೫ ವರ್ಷಗಳ ಅನುಭವವು ಸಂವಿಧಾನದ ಮೂಲಸ್ವರೂಪದತ್ತ ತಾತ್ವಿಕವಾಗಿಯಾದರೂ ಈಗ ಒಂದು ಮರುನೋಟ ಬೀರುವುದು ಅನುಚಿತವೇನೂ ಆಗಲಾರದು. ಕನಿಷ್ಠ ಜನಪರತೆಯ ನೈತಿಕ ನೆಲೆಯಲ್ಲಾದರೂ.

ಈ ಮರುನೋಟದ ಮುಖ್ಯ ನೆಲೆಗಳಾಗಬಹುದಾದ ಎರಡು ಸಂಗತಿಗಳೆಂದರೆ, (೧) ನಮ್ಮ ರಾಷ್ಟ್ರೀಯತೆ ಎಂಬುದು ನಮ್ಮ ಸ್ವಾತಂತ್ರ್ಯ ಹೋರಾಟದ ನಿರ್ಣಾಯಕ ಘಟ್ಟದಲ್ಲಿ ಉದ್ಭವಿಸಿದ ಒತ್ತಡಗಳಿಗೆ ಸಿಕ್ಕಿ ರಾಜಕೀಯ ಏಕತೆಯನ್ನು ಸಂಘಟಿಸುವ ಭರದಲ್ಲಿ ತನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಬಹುತ್ವದ ಆಯಾಮಗಳನ್ನು ಕಳೆದುಕೊಂಡಿತಲ್ಲವೇ? ಇದರ ಪರಿಣಾಮವು ನಮ್ಮ ಸಂವಿಧಾನ ರಚನೆಯಲ್ಲೂ ಕೆಲಸ ಮಾಡಿ ಇದನ್ನೊಂದು ನಿಜವಾದ ಒಕ್ಕೂಟ ರಾಷ್ಟ್ರವನ್ನಾಗಿ ಮಾಡಲು ನಿರಾಕರಿಸಿದೆಯೇ? (೨) ಪಾಶ್ಚಾತ್ಯ ನ್ಯಾಯ ಪದ್ಧತಿಯ ಆಕರ್ಷಣೆಗೆ ಸಿಕ್ಕಿ ಈ ಭಾರತವೆಂಬ ಬೃಹತ್ ವಿದ್ಯಮಾನವನ್ನು ಆಳಲು ಒಂದು ಬೃಹತ್ ಮತ್ತು ಹಾಗಾಗಿ ಒಂದು ಜಟಿಲವಾದ ಕಾನೂನು ವ್ಯವಸ್ಥೆಯನ್ನು ನಿರ್ಮಿಸಿ ಜನತೆಗೆ ನ್ಯಾಯ ಎಂಬುದು ಕಾಲ ಮತ್ತು ವೆಚ್ಚ ಈ ಎರಡೂ ವಿಷಯಗಳಲ್ಲಿ ದೂರದ ಕನಸಾಗುವಂತೆ ಮಾಡಲಾಗಿದೆಯೇ?

ಈ ಎರಡೂ ಸಂಗತಿಗಳ ವಿಷದೀಕರಣಕ್ಕೆ ಒಂದೇ ಉದಾಹರಣೆ ನೀಡಬಹುದಾಗಿದೆ ಎಂಬುದೇ ಈ ಎರಡೂ ಸಂಗತಿಗಳ ಮೂಲಬೇರು ಒಂದೇ ಮೂಲದಲ್ಲಿದೆ ಎಂಬುದನ್ನು ಶ್ರುತಪಡಿಸುವಂತಿದೆ. ಈ ಉದಾಹರಣೆ ಎಂದರೆ, ಕರ್ನಾಟಕದಲ್ಲಿ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನಾದರೂ ಮಾತೃಭಾಷೆಯಲ್ಲೇ ನೀಡಬೇಕೆಂಬ ಜಾಗತಿಕ ಶಿಕ್ಷಣ ನೀತಿ ಸಂಹಿತೆಯನುಸಾರವೇ ಕರ್ನಾಟಕದ ಜನತೆಯಿಂದ ಆಯ್ಕೆಯಾದ ಸರ್ಕಾರವೊಂದು ಹೊರಡಿಸಿದ ಆಜ್ಞೆಯನ್ನು ಸರ್ವೋನ್ನತ ನ್ಯಾಯಾಲಯ ಸಂವಿಧಾನಾತ್ಮಕವಲ್ಲವೆಂದು ಅನೂರ್ಜಿತಗೊಳಿಸಿರುವುದು ಮತ್ತು ಈ ತೀರ್ಮಾನಕ್ಕಾಗಿ ಜನತೆ ಸುಮಾರು ೨೩ ವರ್ಷಗಳ ಕಾಲ ಕಾಯಬೇಕಾಗಿ ಬಂದದ್ದು. ಅಂದರೆ ನಮ್ಮ ಸಂವಿಧಾನವನ್ನು ಕಾಪಾಡುವ ಕೆಲಸಕ್ಕೂ ಭಾರತದ ಸಾಂಸ್ಕೃತಿಕ ಬೇರುಗಳನ್ನು ಕಾಪಾಡುವುದಕ್ಕೂ ಏನೂ ಸಂಬಂಧವೇ ಇಲ್ಲ! ಅಥವಾ ನಮ್ಮ ಸಂವಿಧಾನದಲ್ಲಿ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಹೇಗೆ ಸಂಯೋಜಿಸಲಾಗಿದೆ ಎಂದರೆ, ಅವುಗಳಲ್ಲಿ ಅವುಗಳನ್ನು ಕಾಲಕ್ರಮದಲ್ಲಿ ಬಲಪಡಿಸಬಲ್ಲ ಶಿಕ್ಷಣದ ಅರ್ಥಸಾರವಿರಲಿ, ಅವರ ಸಾಂಸ್ಕೃತಿಕ ಅಸ್ಮಿತೆಯ ಸಂರಕ್ಷಣೆಯ ಮುನ್ನೆಚ್ಚರಿಕೆಯ ಸುಳಿವು ಕೂಡ ಇಲ್ಲ!!

ಇದು ನಮ್ಮ ಸಂವಿಧಾನ ರಚನೆಯಲ್ಲಿ ಎಲ್ಲೋ, ಯಾವುದೋ ಒಂದು ಭಾರತಕ್ಕೆ ಅನ್ಯವಾದ ಪ್ರತಿಷ್ಠಿತ ಶಕ್ತಿ ಕೆಲಸ ಮಾಡಿರುವ ಸುಳಿವನ್ನೂ ನೀಡುತ್ತದೆ. ಅದನ್ನು ವಸಾಹತುಶಾಹಿ ಆಧುನಿಕ ಪ್ರಜ್ಞೆ ಎಂದೂ ಗುರುತಿಸಬಹುದೇನೋ! ಈ ವಿಷಯದಲ್ಲಿ ಸಾಕಷ್ಟು ಜಾಗೃತವಾಗಿದ್ದ ಸಮಾಜವಾದಿಗಳ ಗುಂಪು ಸಂವಿಧಾನ ರಚನಾ ಸಭೆಯನ್ನು ಬಹಿಷ್ಕರಿಸದಿದ್ದರೆ ಇದನ್ನು ತಡೆಯಬಹುದಿತ್ತು ಎಂಬ ಮಾತೂ ಇದೆ. ಅದೇನೇ ಇರಲಿ, ನ್ಯಾಯದಾನದ ಅತಿ ವಿಳಂಬದ ಹಿಂದಿರುವ ಅತಿ ಜಟಿಲ ಕಾನೂನು ವಿಧಿ ವಿಧಾನಗಳಿಗೂ ಇದೇ ಕಾರಣವಾಗಿರುವುದು ಎಂದು ಹೇಳಬಹುದು. ರಾಜ್ಯಗಳಿಲ್ಲದೇ

ಭಾರತ ಎಂಬುದಕ್ಕೇನು ಅರ್ಥ? ಆದರೆ ಇಲ್ಲಿ ಎಲ್ಲ ಉಲ್ಟಾ ಆಗಿದೆ! ಹಾಗಾಗಿಯೇ ನ್ಯಾಯಾಲಯಗಳಲ್ಲಿನ ವ್ಯಾಜ್ಯಗಳನ್ನು ಚರ್ಚಿಸುವಾಗ 'ಅದು ಕಾನೂನಾತ್ಮಕವಾಗಿ ಸರಿಯಾಗಿರಬಹುದು. ಆದರೆ ನೈತಿಕವಾಗಿ ಸರಿಯಿಲ್ಲ' ಎಂಬ ಮಾತುಗಳು ಸಾಮಾನ್ಯವಾಗಿ ಕೇಳಿಬರುವುದು. ಇದಕ್ಕಿಂತ ದುರಂತ ಇನ್ನೊಂದಿದೆಯೇ?

ಅಂದರೆ ಆಧುನಿಕ ನ್ಯಾಯಪದ್ಧತಿಯಲ್ಲಿ ನಾವು ನ್ಯಾಯ ಮತ್ತು ನೀತಿಗಳನ್ನು ಅಂತಿಮವಾಗಿ ಒಣತರ್ಕದ ಉತ್ಪನ್ನವನ್ನಾಗಿ ಮಾಡಿ ಕೂರಿಸಿಬಿಟ್ಟಿದ್ದೇವೆ. ಇದರ ಪರಿಣಾಮವೆಂಬಂತೆ ಆತ್ಮಸಾಕ್ಷಿಯ ಪರಿಕಲ್ಪನೆಯನ್ನು ಹಾಸ್ಯಾಸ್ಪದಗೊಳಿಸಿಬಿಟ್ಟಿದ್ದೇವೆ. ಇದಕ್ಕೆ ಮುಖ್ಯ ಕಾರಣ, ನಾವು ಭಾರತವನ್ನು ಒಂದು ಏಕಾತ್ಮಕ ರಾಷ್ಟ್ರವಾಗಿ ರಚಿಸಿಕೊಂಡಿರುವ ರೀತಿ. ಇಲ್ಲಿ ರಾಷ್ಟ್ರಕ್ಕೆ ಏಕ ಆತ್ಮ ಕಲ್ಪಿಸಲು ಹೋಗಿ ಜನರ ಆತ್ಮಗಳನ್ನೇ ವಿಸರ್ಜಿಸಿಬಿಟ್ಟಿದ್ದೇವೆ! ಈ ಏಕಾತ್ಮಕ ರಾಷ್ಟ್ರ ಕಲ್ಪನೆಯನ್ನು ಜತನದಿಂದ ಕಾಪಾಡಲು ಜಟಿಲ ಕಾನೂನು ವ್ಯವಸ್ಥೆಯೇ ಬೇಕು ಮತ್ತು ಈ ಜಟಿಲತೆಯನ್ನು ಸುಸಂಗತಗೊಳಿಸಲು ತರ್ಕದ ಆಶ್ರಯ ಬೇಕು. ಹಾಗಾಗಿ ಇದೊಂದು ವಿಷವ್ಯೂಹವೇ ಆಗಿಬಿಟ್ಟಿದೆ! ಈ ಹಿನ್ನೆಲೆಯಲ್ಲೇ ಗಾಂಧಿ ಹೇಳಿದ್ದು: 'ಇಬ್ಬರು ಸಾರ್ವಜನಿಕವಾಗಿ ವ್ಯಾಜ್ಯ ಮಾಡುವುದೇ ಅಸಭ್ಯತೆ. ಆದರೆ ಅದನ್ನು ಇತ್ಯರ್ಥಪಡಿಸಲು ಅದಕ್ಕೆ ಸಂಬಂಧಪಡದೆ ಇರುವ ಮೂರನೆಯವರನ್ನು (ವಕೀಲ ಮತ್ತು ನ್ಯಾಯಾಧೀಶ) ಆಶ್ರಯಿಸುವ ವ್ಯವಸ್ಥೆ ಇನ್ನೂ ಅಸಭ್ಯವಾದದ್ದು' ಎಂದು. ಆದರೆ 'ವೈಜ್ಞಾನಿಕ ತರ್ಕ' ದೇವತೆಯ ದಾಸಾನುದಾಸರಾಗಿರುವ ನಾವು ಆಧುನಿಕ ನ್ಯಾಯಾಂಗ ಪದ್ಧತಿಗೆ ಪರ್ಯಾಯವೇ ಇಲ್ಲ ಎಂಬ ಕತ್ತಲನ್ನು ಕಣ್ಣಿಗೆ ತುಂಬಿಕೊಂಡುಬಿಟ್ಟಿದ್ದೇವೆ. ಹಾಗಾಗಿ ನಮಗೆ ಗಾಂಧಿಯವರ ಈ ಮಾತಿನ ಮೂಲಭೂತ ಸತ್ಯ ಅರ್ಥವೇ ಆಗಲಾರದು. ಹಾಗೇ, ಇಂತಹ ನ್ಯಾಯಪದ್ಧತಿಯ ಮೇಲೆ ಮಾತ್ರ ನಿಲ್ಲಬಲ್ಲ ಕೇಂದ್ರೀಕೃತ ಜಟಿಲ ರಾಷ್ಟ್ರದ ಕಲ್ಪನೆಯನ್ನು ನಿರಾಕರಿಸುವ ಅವರ 'ಗ್ರಾಮ ಸ್ವರಾಜ್ಯ'ದ ಭಾವನೆಯೂ ಅರ್ಥವಾಗದು.

ಆದರೆ ಭಾರತ ಎಂಬ ಸಂಕೇತದಡಿ ರಾಜಕೀಯವಾಗಿ ಒಗ್ಗೂಡಿರುವ ವಿವಿಧ ನೆಲೆಗಳ ಜನಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಶೋತ್ತರಗಳಿಗೆ ಭಂಗ ಉಂಟಾದಾಗಲೆಲ್ಲ ಭಾರತದ ಸದ್ಯದ ಕಲ್ಪನೆ ಮತ್ತು ಅದನ್ನು ಸಂಯೋಜಿಸಿರುವ ಸಂವಿಧಾನದ ಸ್ವರೂಪದ ಬಗ್ಗೆ ಪ್ರಶ್ನೆಗಳು ಏಳುವುದು ಸಹಜ. ಈಗಾಗಲೇ ಇಂತಹ ಚರ್ಚೆಗಳು ಹಲವು ಬಾರಿ ನಡೆದೂ ಇವೆ. ಮುಖ್ಯವಾಗಿ ನಮ್ಮದು ಒಕ್ಕೂಟವೋ ಏಕಾತ್ಮಕ ರಾಷ್ಟ್ರವೋ? ಈ ಪ್ರಶ್ನೆಗೂ ನಮ್ಮ ನ್ಯಾಯಾಂಗದ ಒಂದು ಅವಿಭಾಜ್ಯ ಭಾಗವೇ ಆಗಿ ಹೋಗಿರುವ ವಿಳಂಬ ನ್ಯಾಯಕ್ಕೂ ಸಂಬಂಧವಿದೆಯೆ? ಹಾಗಿದ್ದಲ್ಲಿ ಇದಕ್ಕೆ ಪರಿಹಾರವೇನು? ಈ ಪ್ರಶ್ನೆಗಳನ್ನಿಟ್ಟುಕೊಂಡು ಇಲ್ಲಿ ಮೂವರು ಸಂವಿಧಾನ ಮತ್ತು ಕಾನೂನು ತಜ್ಞರು ಮೂರು ವಿಭಿನ್ನ ನೋಟಗಳ ವಿಶ್ಲೇಷಣೆ ನೀಡಿದ್ದಾರೆ. ಓದಿ ನಿಮ್ಮ ಅಭಿಪ್ರಾಯ ತಿಳಿಸಿ.–**ಸಂ**

ಮಾರ್ಚ್, ೨೦೧೫

ಆಪ್‌ನ ಅಭೂತಪೂರ್ವ ಜಯ!

ಪ್ರಿಯ ಓದುಗರೇ,

ಈ ಫೆಬ್ರುವರಿಯಲ್ಲಿ ನಾವು ಕೆಲವು ಗೆಳೆಯರು ಮಧ್ಯಪ್ರದೇಶ ಪ್ರವಾಸ ಕೈಗೊಂಡಿದ್ದೆವು. ಅದು ಪ್ರಸಿದ್ಧ ಪ್ರವಾಸಿ ಸಂಸ್ಥೆಯೊಂದು ಆಯೋಜಿಸಿದ್ದ ಪ್ರವಾಸ. ಹಾಗಾಗಿ ಊಟ-ವಸತಿಗಳಿಗೇನೂ ತೊಂದರೆ ಇಲ್ಲದ್ದು. ಆದರೆ ಮಧ್ಯಪ್ರದೇಶ ನಮ್ಮಂತಹ ಹಿರಿಯ ನಾಗರಿಕ ಪ್ರವಾಸಿಗಳಿಗೆ ಅಷ್ಟೇನೂ ಸುಲಭ ಮತ್ತು ಆಕರ್ಷಕವಲ್ಲದ ಜಾಗ. ಯುವಸಾಹಸಿ ಪ್ರವಾಸಿಗರದ್ದು ಬೇರೆ ವಿಷಯ.

ಆದರೆ ನಾವು ಮಧ್ಯಪ್ರದೇಶಕ್ಕೆ ಹೋಗಿ ಎರಡು ಮೂರು ಸ್ಥಳಗಳಿಗೆ ಭೇಟಿ ನೀಡುತ್ತಿದ್ದಂತೆ ನಮ್ಮ ಅಭಿಪ್ರಾಯ ಬದಲಾಯಿತು. ಅವು ನಾವು ನೋಡಿದ ಭಾರತದ ಬೇರೆ ಭಾಗಗಳಿಗಿಂತ ಬಹುಭಿನ್ನವಾಗಿ ನಮ್ಮನ್ನು ಸೆಳೆದವು. ಈ ರಾಜ್ಯ, ಅದರ ಪಶ್ಚಿಮ ಭಾಗ ಬಿಟ್ಟರೆ ಪೂರಾ ಗುಡ್ಡಗಾಡು ಪ್ರದೇಶ. ದೇಶದ ಉತ್ತರ ಮತ್ತು ದಕ್ಷಿಣಗಳನ್ನು ಪುರಾತನ ಕಾಲದಿಂದಲೂ ವಿಭಾಗಿಸಿರುವ (ಸಾಂಸ್ಕೃತಿಕವಾಗಿ ಕೂಡ) ವಿಂಧ್ಯಾಚಲ ಹರಡಿರುವ ಪ್ರದೇಶವಿದು. ಈಗ ರಾಷ್ಟ್ರದ ಅತಿದೊಡ್ಡ ರಾಜ್ಯವಾಗಿರುವ ಮಧ್ಯಪ್ರದೇಶ ಅಷ್ಟೇನೂ ಅಭಿವೃದ್ಧಿ ಕಾಣದ ರಾಜ್ಯ. ಹಾಗಾಗಿಯೇ ಸುಂದರವಾಗಿದೆ. ನರ್ಮದಾ ನದಿ ರಾಜ್ಯವನ್ನು ಅಡ್ಡವಾಗಿ ಸೀಳಿ ಹರಿಯುತ್ತಾ ಭೂಮಿಯನ್ನು ಫಲವತ್ತಾಗಿಸಿದೆ. ಆದರೆ ನಾವು ನರ್ಮದೆಯಲ್ಲಿ ದೋಣಿ ವಿಹಾರ ಮಾಡಿದ ಬೇಡಾಘಾಟ್ ಮಾತ್ರ ಕಲ್ಲು ಪ್ರದೇಶ. ಇಲ್ಲಿ ನರ್ಮದೆ ಬೆಣಚುಕಲ್ಲು ಶಿಖರಗಳ ನಡುವೆ ತನ್ನ ಗುಣಕ್ಕೆ ವಿರುದ್ಧವಾಗಿ ಪ್ರಶಾಂತವಾಗಿ ಹರಿಯುತ್ತಾಳೆ. ಅಕ್ಕಪಕ್ಕದಲ್ಲಿನ ವಿಶಾಲ ಗೋಧಿ ಮತ್ತು ಸಾಸಿವೆ ಹೊಲಗಳು ನಮ್ಮ ಕಣ್ಮನಗಳನ್ನು ಸೆಳೆಯುತ್ತವೆ. ನಾವು ನೋಡಿದಂತೆ ಈ ರಾಜ್ಯದಲ್ಲಿ ಜನನಿಬಿಡತೆ ಕಡಿಮೆ. ಇರುವ ಜನ ಕೂಡ ಇಲ್ಲಿನ ಆದಿವಾಸಿ ಸಂಸ್ಕೃತಿಯಿಂದ ಪ್ರಭಾವಿತರಾದಂತೆ ಸರಳ ಮನಸ್ಸಿನ ಸಾತ್ವಿಕ ಜನರಂತೆ ಕಾಣುತ್ತಾರೆ.

ನಮ್ಮನ್ನು ಸೆಳೆದ ಇನ್ನೊಂದು ಜಾಗ ಮಾಂಡು. ಇಲ್ಲಿಗೆ ಹೋಗುವುದೇ ಒಂದು ಹರ ಸಾಹಸ. ಕೊರಕಲುಗಳು ಮತ್ತು ಬಂಡೆಗಲ್ಲುಗಳ ಮೇಲೆ ನಮ್ಮ ವಾಹನ ಸಾಗುತ್ತಿದ್ದಂತೆ ನಮ್ಮ ದೇಹ ಇಡಿಯಾದದ್ದಲ್ಲ, ಬಿಡಿಭಾಗಗಳಿಂದ ಕೂಡಿದ್ದು ಎಂಬ ಹೊಸ ಅರಿವು ನಮಗೆ ಉಂಟಾಗತೊಡಗುತ್ತದೆ! ಆದರೆ ಅಲ್ಲಿಗೆ ತಲುಪಿದ ಮೇಲೆ ಅಂತಹ ದುರ್ಗಮ ಜಾಗದಲ್ಲಿ ಇತಿಹಾಸ ಪ್ರಸಿದ್ಧ ಭೋಜರಾಜ ಮತ್ತು ಆನಂತರ ಖಿಲ್ಜಿ ದೊರೆಗಳು ಕಟ್ಟಿಸಿದ ಅರಮನೆ–ದೇವಾಲಯ–ಕೊಳ–ಮಸೀದಿಗಳನ್ನು ನೋಡಿದರೆ, ಆಧುನಿಕ ಸಿವಿಲ್‌ಎಂಜಿನಿಯರಿಂಗ್‌ನ ಸಾಧನೆಗಳ ನಮ್ಮ ಹೆಮ್ಮೆ ಬರೀ ಬೊಗಳೆ ಎನ್ನಿಸಿಬಿಡುತ್ತದೆ. ಈ ವಿಶಿಷ್ಟ ಜಾಗದ ಬಗ್ಗೆ ಬೇರೆಲ್ಲಾದರೂ ಬರೆಯಬೇಕು.

ಇನ್ನುಳಿದಂತೆ ಗ್ವಾಲಿಯರ್, ಖಜುರಾಹೋ, ಸಾಂಚಿ, ಭೂಪಾಲ, ಜಬ್ಬಲ್‌ಪುರ, ಇಂದೂರು, ಓಂಕಾರೇಶ್ವರ, ಉಜ್ಜಯಿನಿ ಇತ್ಯಾದಿಗಳೆಲ್ಲ ನಮ್ಮ ಇತರೆ ಪ್ರವಾಸಿ ಕೇಂದ್ರಗಳಂತೆಯೇ ಸಾಂಪ್ರದಾಯಿಕ ಕೋಟೆ, ಅರಮನೆ, ದೇವಾಲಯ, ಮಾರುಕಟ್ಟೆಗಳ ಸ್ಥಳಗಳು. ಆದರೆ ಎರಡು ವಿಷಯ ಹೇಳಬೇಕು. ನಮ್ಮ ರಾಜ್ಯದ ಸ್ಮಾರಕಗಳ ಸಂರಕ್ಷಣೆಗೆ ಹೋಲಿಸಿದರೆ ಇಲ್ಲಿನ ಸ್ಮಾರಕಗಳ ಸಂರಕ್ಷಣೆ ಶ್ರೇಷ್ಠವಾಗಿದೆ; ಪ್ರವಾಸಿ ಸ್ನೇಹಿಯಾಗಿದೆ. ವಿಶೇಷವಾಗಿ ಖಜುರಾಹೋ ದೇವಾಲಯಗಳ ಮತ್ತು ಸಾಂಚಿ ಸ್ತೂಪ ಸಂಕೀರ್ಣಗಳ ಸುತ್ತಣ ತೋಟ ಮತ್ತು ಬಯಲು ಈ ಸ್ಮಾರಕಗಳಿಗೆ ಒಂದು ವಿಶೇಷ ಸೊಬಗನ್ನು ನೀಡುತ್ತವೆ. ಇನ್ನು ಭೂಪಾಲ ರಾಜ್ಯದ ರಾಜಧಾನಿಯಾದರೂ ಜನದಟ್ಟಣೆ ಆಗಲೀ ವಾಹನದಟ್ಟಣೆ ಆಗಲೀ ಇರದ ವಿಶಾಲ ರಸ್ತೆಗಳ ಮತ್ತು ಸರೋವರಗಳ ಸುಂದರ ನಗರ. ಕ್ಷಿಪ್ರಾ ನದಿಯ ದಂಡೆಯಲ್ಲಿರುವ ಹಾಗೂ ವಿಕ್ರಮಾದಿತ್ಯ–ಕಾಳಿದಾಸರ ನಗರ ಉಜ್ಜಯಿನಿ ಅಸಂಖ್ಯ ಗುಡಿಗೋಪುರಗಳ ಮಧ್ಯೆ ಹಾಳು ಸುರಿಯುತ್ತಿದ್ದು, ಸದಾ ಜನ ಮುತ್ತಿರುವ ಜ್ಯೋತಿರ್ಲಿಂಗವಿರುವ ಇಲ್ಲಿನ ಮಹಾಕಾಲೇಶ್ವರ ದೇವಾಲಯದ ಸುತ್ತಣ ಕೊಳಕನ್ನು ಮೋದಿಯವರ ಸ್ವಚ್ಛಭಾರತ ಆಂದೋಲನವಿನ್ನೂ ಮುಟ್ಟಿದ ಹಾಗೆ ತೋರುವುದಿಲ್ಲ.

ಪಂಚಮಢಿ ಮಧ್ಯಪ್ರದೇಶದ ಗಿರಿಧಾಮ. ನಾವು ಅಲ್ಲಿಗೆ ಹೋದಾಗ ಕೊರೆಯುವ ಚಳಿ. ಅದೊಂದು ಗಿರಿ ಕಂದರಗಳ ಕಾಡುಪ್ರದೇಶ. ಆದರೆ ವಿಶೇಷವೆಂದರೆ, ಇಲ್ಲಿ ಹೆಸರಿಗೂ ಒಂದು ಪಕ್ಷಿ ಹಾರಿದ್ದು ಕಾಣಲಿಲ್ಲ. ಕಾರಣ, ಅದು ಕಲ್ಲುಪ್ರದೇಶವಾದ್ದರಿಂದ ಅಲ್ಲಿ ಬೇಸಾಯವಿಲ್ಲದೆ, ಹಕ್ಕಿಗಳಿಗೆ ಬೇಕಾದ ಕಾಳುಕಡ್ಡಿ ಲಭ್ಯವಿಲ್ಲ. ಅಲ್ಲಿ ಸಮೃದ್ಧವಾಗಿರುವ ಪುರಾತನ ಮರಗಿಡಗಳೂ ಹಕ್ಕಿಗಳನ್ನು ಪೋಷಿಸುತ್ತಿಲ್ಲ! ಪಂಚಮಢಿ ಬರೀ ಸರ್ಕಾರಿ ತರಬೇತಿ ಕೇಂದ್ರಗಳಿರುವ; ಹಾಗಾಗಿ ಮನೆಮಠಗಳಿರುವ ಜನರಿಲ್ಲದ ಒಣ ಊರು. ಗೊಂಡ ಮತ್ತು ಭಿಲ್ಲ ಆದಿವಾಸಿಗಳು ಇಲ್ಲಿನ ಗಿರಿ ಕಂದರಗಳ ತುಂಬಾ ತಮ್ಮ ಆರಾಧ್ಯ ದೈವ ಶಿವನನ್ನೇ ಕಂಡಂತೆ ಅಲ್ಲಲ್ಲಿ ಅವನ ಗುಹೆ–ಗುಡಿಗಳನ್ನು ಮಾಡಿಕೊಂಡು ಹೆಂಗಸು–ಮಕ್ಕಳೆನ್ನದೆ ಆ ಕೊರೆಯುವ ಚಳಿಯಲ್ಲೂ ಗುಂಪು ಗುಂಪಾಗಿ ಬಂದು ಅಲ್ಲಿ ಬೀಡುಬಿಡುತ್ತಿದ್ದುದನ್ನು ಕಂಡು ನಾವು ಆಶ್ಚರ್ಯಪಟ್ಟೆವು.

ನಾವು ಶಿವನ ಬೀಡಾದ ಗಿರಿಕಂದರಗಳ ಈ ಪಂಚಮಢಿಯಲ್ಲಿದ್ದಾಗಲೇ ದೆಹಲಿ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಪ್ರಕಟವಾಗತೊಡಗಿದ್ದು. ಅಲ್ಲಿ ಬಹಳಷ್ಟು ಕಡೆ ದೂರವಾಣಿ ಸಂಪರ್ಕ ಲಭ್ಯವಿಲ್ಲದ ಕಾರಣ, ಆಂ ಆದ್ಮಿ ಪಕ್ಷದ ಅಭಿಮಾನಿ ಸಂಘದಂತಿದ್ದ ನಮ್ಮ ಗೆಳೆಯರ ಗುಂಪು ಚಡಪಡಿಸತೊಡಗುತ್ತಿರುವಾಗಲೇ, ದೂರವಾಣಿ ಸಂಪರ್ಕ ಲಭ್ಯವಿರುವ ಸಣ್ಣ ಜಾಗ ಬಂದರೂ ಸಾಕು, ನಾವು ಕರೆ ಮಾಡುವ ಮುನ್ನವೇ ಕರ್ನಾಟಕದಿಂದ ನಮಗೇ ಕರೆಗಳು ಬರತೊಡಗಿದವು. ಹಾಗೆ ಮೊದಲ ಕರೆ ಬಂದದ್ದು ಕಡಿದಾಳು ಶಾಮಣ್ಣನವರ ಮನೆಯಿಂದ, ಅವರ ಪತ್ನಿ ಶ್ರೀದೇವಿಯವರಿಂದ. ಮತ ಎಣಿಕೆಯ ಆರಂಭದ ಒಲವುಗಳಿಂದಲೇ ಅವರಿಗೆ ಖುಷಿಯೋ ಖುಷಿ! ನಮ್ಮೊಂದಿಗೆ ಅದನ್ನು ಹಂಚಿಕೊಳ್ಳುವ ಕಾತರ. 'ನಿಮ್ಮ ಪತ್ರಿಕೆ ಹಾರೈಕೆ ನಿಜವಾಗಿಬಿಟ್ಟಿದೆ ನೋಡಿ' ಎಂದು ನನಗೆ ಅಭಿನಂದನೆ! ಮರುಕ್ಷಣ ಶಿವಮೊಗ್ಗದ ದಿವಾಕರ ಹೆಗಡೆಯವರ ಕರೆ ಮತ್ತು ಶುಭಸುದ್ದಿ. ನಂತರ ಹಾಸನದ ಶಿವಕುಮಾರರದ್ದು! ಹೀಗೆ ಇಡೀ ದಿನ ಅಲ್ಲಿನ ಚಳಿ ಮರೆಸುವಂತಹ ಆಪ್‌ನ ದಿಗ್ವಿಜಯದ ಸಂಭ್ರಮದ ಬಿಸಿಬಿಸಿ ಸುದ್ದಿ ಪ್ರವಾಹ! ಸಂಜೆ ವೇಳೆಗೆ ಆಪ್‌ಗೆ ೭೦ರಲ್ಲಿ ೬೭ ಸ್ಥಾನ ಮತ್ತು ಕಿರಣ್ ಬೇಡಿ ಸೋತರು ಎಂಬ ಸುದ್ದಿ ತಲುಪಿದಾಗ ಬಿಜೆಪಿಯ ಕಟ್ಟಾ ಬೆಂಬಲಿಗರಾಗಿದ್ದ ನಮ್ಮ ಪ್ರವಾಸದ ಮಾರ್ಗದರ್ಶಿಗಳಿಗೆ (ಅವರು ದ.ಕ.ದ ಹುಡುಗರು) ಆಘಾತ! ಅದನ್ನು ಎಲ್ಲ ಬಿಜೆಪಿ ಬೆಂಬಲಿಗರಂತೆ ಮುಚ್ಚಿಟ್ಟದ್ದು, ಇದು ಪಕ್ಷದ ಒಳ್ಳೆಯದಕ್ಕೆಂದೇ ಮೋದಿ-ಅಮಿತ್ ಶಾರ ಜೋಡಿ ಆಯೋಜಿಸಿದ್ದ ಸೋಲು ಎಂಬ ವಾದ ಮಂಡಿಸಿ! ಅವರಿಗೆ ನಮ್ಮ ಸಂತಾಪ ಸೂಚಿಸಿದೆವು! ಇರಲಿ.

ಆಂ ಆದ್ಮಿ ಪಕ್ಷದ ವಿಜಯದ ದಿನ ಭಾರತದ ಚುನಾವಣಾ ಇತಿಹಾಸದಲ್ಲಿ ಒಂದು ಐತಿಹಾಸಿಕ ದಿನ. ಹಲವು ಕಾರಣಗಳಿಗಾಗಿ. ಮುಖ್ಯವಾಗಿ ಅದು ನಮ್ಮ ಪ್ರಜಾಪ್ರಭುತ್ವದ ಭರವಸೆಯ ದಿನ. ಮೋದಿಯವರಿಗೆ ಒಂದು ಐತಿಹಾಸಿಕ ಜಯ ನೀಡಿದ ಒಂಬತ್ತು ತಿಂಗಳಗಳಲ್ಲೇ ಅವರ ಪಕ್ಷವನ್ನು ದೇಶದ ರಾಜಧಾನಿಯ ಜನ ಅಕ್ಷರಶಃ ಮಣ್ಣು ಮುಕ್ಕಿಸಿದ್ದಾರೆ. ಆ ಮೂಲಕ ಮೋದಿ ಸರ್ಕಾರ ತನ್ನ ಜಯದ ಹಮ್ಮಿನಲ್ಲಿ ಆರಂಭಿಸಿದ್ದ ವಿಚ್ಛಿದ್ರಕಾರಿ ಸಾಂಸ್ಕೃತಿಕ ರಾಜಕಾರಣ ಮತ್ತು ಏಕವ್ಯಕ್ತಿ ಆಡಳಿತ ಶೈಲಿಯ ವಿರುದ್ಧ ತಮ್ಮೆಲ್ಲ ಕ್ರೋಧವನ್ನು ದಾಖಲಿಸಿದ್ದಾರೆ. ದೆಹಲಿ ಕೇವಲ ಒಂದು ನಗರ ಎನ್ನುವವವರಿಗೆ ಆ ನಗರ ಕಳೆದ ಲೋಕಸಭಾ ಚುನಾವಣೆಗಳಲ್ಲಿ ಮೋದಿಯವರಿಗೇ ತನ್ನೆಲ್ಲ ಏಳು ಕ್ಷೇತ್ರಗಳನ್ನೂ ಒಪ್ಪಿಸಿತ್ತು ಮತ್ತು ಆ ನಗರ ಒಂದು ಮಿನಿಭಾರತ ಎಂಬುದನ್ನು ನೆನಪಿಸಬೇಕಾಗಿದೆ.

ಈ ಫಲಿತಾಂಶ ಐತಿಹಾಸಿಕ ಎನ್ನುವುದಕ್ಕೆ ಇನ್ನೊಂದು ಮುಖ್ಯ ಕಾರಣವೆಂದರೆ, ಅದು ಕೇಜ್ರಿವಾಲ್‌ರ ತಂಡ ಪ್ರತಿಪಾದಿಸುತ್ತಿದ್ದ ಹಣಬಲ, ತೋಳ್ಬಲ ಮತ್ತು ಜಾತಿ-ಧರ್ಮಗಳ ಬಲಗಳನ್ನಾಧರಿಸಿದ ಸಾಂಪ್ರದಾಯಿಕ ರಾಜಕಾರಣದ ವಿರುದ್ಧ ಜನಶಕ್ತಿಯನ್ನಷ್ಟೇ ಆಧರಿಸಿದ ಪರ್ಯಾಯ ರಾಜಕಾರಣ ಕಾರ್ಯ ಸಾಧ್ಯ ಎಂಬುದೀಗ

ಸಾಬೀತಾಗಿರುವುದು. ಇದಕ್ಕಾಗಿ ಕೇಜ್ರಿವಾಲ್ ಮತ್ತು ಅವರ ಬಳಗವನ್ನು ಎಷ್ಟು ಅಭಿನಂದಿಸಿದರೂ ಸಾಲದು. ಸ್ಪರ್ಧಾತ್ಮಕ ರಾಜಕಾರಣದ ಆವೇಶದಲ್ಲಿ ಈ ಹಿಂದೆ ಮಾಡಿದ ತಪ್ಪುಗಳನ್ನು ಜನತೆಯ ಮುಂದೆ ಪ್ರಾಮಾಣಿಕವಾಗಿ ಒಪ್ಪಿಕೊಂಡು ತನ್ನ ಬಳಗದ ಪರಿಶ್ರಮದ ಮೂಲಕವೇ ಅವರ ಮನಗೆದ್ದ ಕೇಜ್ರಿವಾಲರ ರಾಜಕಾರಣದ ಮಾದರಿ ಈಗ ಹಲವು ರಾಜಕೀಯ ವಿಶ್ಲೇಷಕರ ಕುತೂಹಲ ಮತ್ತು ಗಂಭೀರ ವಿಶ್ಲೇಷಣೆಗಳಿಗೆ ಕಾರಣವಾಗಿರುವುದು ಅಚ್ಚರಿಯೇನಲ್ಲ. ಆದರೆ ನಿಜವಾದ ಕುತೂಹಲವಿರುವುದು, ಅವರು ನೀಡಿದ ಭರವಸೆಗಳನ್ನು ಮನಸಾ ನಂಬಿ, ಕೇಜ್ರಿವಾಲರ ಭಾಷೆಯಲ್ಲೇ ಹೇಳುವುದಾದರೆ, 'ಭಯ ಹುಟ್ಟಿಸುವಂತಹ ಬಹುಮತ' ನೀಡಿರುವ ಜನತೆಯ ನಿರೀಕ್ಷೆಗಳನ್ನು ಅವರ ಸರ್ಕಾರ ಎಷ್ಟರಮಟ್ಟಿಗೆ ಈಡೇರಿಸಿ ತೋರಿಸುತ್ತದೆಂಬುದು. ಈಗ ಎಲ್ಲೆಲ್ಲೂ ಆಂ ಆದ್ಮಿಯ ಡಿಂಡಿಮದ ಕನಸು ಕಾಣುತ್ತಿರುವ ಆಂ ಆದ್ಮಿ ಪಕ್ಷದ ಬೆಂಬಲಿಗರು ನಿಜವಾಗಿ ಎದುರು ನೋಡಬೇಕಾದ ಅಗ್ನಿ ಪರೀಕ್ಷೆ ಇದು. ಈ ಅಗ್ನಿ ಪರೀಕ್ಷೆಯಲ್ಲೂ ಕೇಜ್ರಿವಾಲ ನೇತೃತ್ವದ ತಂಡ ಯಶಸ್ವಿಯಾಗುವುದೆಂದು ಹಾರೈಸುತ್ತಾ ನಿಜವಾದ 'ಅಚ್ಚೇ ದಿನ'ಗಳಿಗಾಗಿ ಕಾಯೋಣ.

ಸಮಕಾಲೀನ

ಲೋಹಿಯಾರ ತಾತ್ತ್ವಿಕ ಪರಂಪರೆ ಈಗಲೂ ಯಾಕೆ ಜೀವಂತವಾಗಿದೆಯೆಂದರೆ...

–ರಜನಿ ಭಕ್ಷಿ

(ಮಾರ್ಚ್, ೨೩ ಲೋಹಿಯಾ ಜನ್ಮ ದಿನ. ಈ ದಿನದ ಸಂದರ್ಭಕ್ಕಾಗಿ ಈ ಲೇಖನ–ಸಂ.)

ದೆಹಲಿಯಲ್ಲಿರುವ ಲೋಹಿಯಾ ಆಸ್ಪತ್ರೆಗೆ ಭೇಟಿ ನೀಡುವ ಬಹಳಷ್ಟು ಜನರಿಗೆ ಬಹುಶಃ ಆ ವೈದ್ಯಕೀಯ ವ್ಯವಸ್ಥೆಗೆ ಇಟ್ಟಿರುವ ಹೆಸರಿನ ವ್ಯಕ್ತಿಯ ಪರಿಚಯವೇ ಇರಲಿಕ್ಕಿಲ್ಲ. ರಾಮ ಮನೋಹರ ಲೋಹಿಯಾ ಎಂದು ಗೂಗಲಿಸಿ ನೋಡಿ. ಮೊದಲಿಗೆ ಕಂಡು ಬರುವ ಮಾಹಿತಿಗಳೆಂದರೆ, ಅವರ ಹೆಸರಿನಲ್ಲಿರುವ ಎರಡು ಆಸ್ಪತ್ರೆಗಳು ಹಾಗೂ ಒಂದು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ವಿವರಗಳು.

ಇದೇನೂ ಆಶ್ಚರ್ಯ ತರುವ ಸಂಗತಿ ಅಲ್ಲ. ಸಮಾಜವಾದವೆಂದರೆ ಒಂದು ಪುರಾತನ ಕಾಲದ ಮತ್ತು ಪ್ರಗತಿಗೆ ವಿರುದ್ಧವಾದ ತತ್ವ ಎಂಬ ನಂಬಿಕೆ ವ್ಯಾಪಕವಾಗಿರುವ ಇಂದಿನ ಕಾಲಘಟ್ಟದಲ್ಲಿ ಲೋಹಿಯಾರ ಬಗೆಗಿನ ನಿರ್ಲಕ್ಷ್ಯ ಪೂರ್ಣ ಸಹಜವೇ ಆಗಿದೆ.

ಲೋಹಿಯಾರ ಹುಟ್ಟುಹಬ್ಬದಂದು (ಮಾರ್ಚ್, ೨೩) ಸಂಸತ್ ಭವನದಲ್ಲಿ ಅವರ ಭಾವಚಿತ್ರಕ್ಕೆ (ಮಾಜಿ) ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಹೂ ಅರ್ಪಿಸಿ ಶ್ರದ್ಧಾಂಜಲಿ ಸಲ್ಲಿಸಿದ್ದು ಲೋಹಿಯಾರ ಉತ್ಸಾಹಿ ಅನುಯಾಯಿಗಳಿಗಾದರೂ ಇರಿಸುಮುರಿಸು ಉಂಟುಮಾಡಿತ್ತು. ಯಾಕೆಂದರೆ ಈ ಪ್ರಧಾನಿಯವರೇ ಅಲ್ಲವೆ ಭಾರತದ ಆರ್ಥಿಕತೆಯಲ್ಲಿ ದೊಡ್ಡ ಪಲ್ಲಟವನ್ನು ಉಂಟು ಮಾಡಿ ಅದನ್ನು ನಿಗಮಶಾಹಿ (ಕಾರ್ಪೋರೇಟ್) ಬಂಡವಾಳವಾದಿ ಆರ್ಥಿಕತೆಯನ್ನಾಗಿ ಪರಿವರ್ತಿಸಿದ ಮಹಾನುಭಾವರು? ಇಂತಹವರ ಕಿವಿಗಳಿಗೆ 'ಆವೃತ (ಎಲ್ಲರನ್ನೂ ಒಳಗೊಳ್ಳುವ) ಬೆಳವಣಿಗೆ' ಮತ್ತು 'ಆವೃತ ಮಾರುಕಟ್ಟೆ' ಪರವಾಗಿ ತಾನು ಕೆಲಸ ಮಾಡುವುದಾಗಿ ಹೇಳುವ ಸರ್ಕಾರದ ಮಾತುಗಳು ಪೊಳ್ಳು ಮಾತುಗಳಾಗಿ ಕೇಳಿಸುವುದು ಸಹಜ.

ಆದರೂ ಇಂತಹ ಮಾತುಗಳು ಲೋಹಿಯಾ ಪ್ರತಿನಿಧಿಸುವ ಐತಿಹಾಸಿಕ ವಾರಸುದಾರಿಕೆಗೆ ದೊರೆತ ಪರೋಕ್ಷ ಗೆಲುವು ಕೂಡ ಹೌದು ಎಂಬುದನ್ನೂ ನಾವು ಗಮನಿಸಬೇಕು. ಹಾಗಾಗಿಯೇ ಇಂದು ಸಮತೆಗೆ ಬದ್ಧರಾಗಿರುವುದು ಒಂದು ರಾಜಕೀಯ ಅವಶ್ಯಕತೆಯಾಗಿಬಿಟ್ಟಿರುವುದು. ದುರ್ಬಲರನ್ನು ನಿರ್ಲಕ್ಷಿಸುವ ಯಾವನೇ ಆಗಲಿ, ಚುನಾವಣಾ ಗೆಲವಿನ ಮಾತಿರಲಿ, ಒಂದು ಔಪಚಾರಿಕ ರಾಜಕೀಯ ಬದುಕನ್ನು ಕಟ್ಟಿಕೊಳ್ಳುವ ಕನಸನ್ನೂ ಕಾಣುವಂತಿಲ್ಲ. ಹಾಗಾಗಿ ಲೋಹಿಯಾರನ್ನು ನೆನಪಿಸಿಕೊಳ್ಳುವ ಈ ಕಾಲ ಪ್ರವಾಹದ ಒಂದು ಅರೆಕ್ಷಣದಲ್ಲಾದರೂ ನಿಂತು, ನಮ್ಮ ವರ್ತಮಾನವು ಅವರು ಪ್ರತಿನಿಧಿಸಿದ ಮೌಲ್ಯಗಳಿಗೆ ಎಷ್ಟು ಋಣಿಯಾಗಿದೆ ಎಂಬುದನ್ನು ಮನನ ಮಾಡಿಕೊಳ್ಳಲು ಸೂಕ್ತ ಸಂದರ್ಭವಾಗಿದೆ. ಇದು ಸಾಧ್ಯವಾಗುವುದು, ನಾವು 'ಸಮಾಜವಾದ' ಮತ್ತು 'ಬಂಡವಾಳಶಾಹಿ' ಎಂಬ ಶಬ್ದಗಳನ್ನು ಹಗುರವಾಗಿ ಅಥವಾ ಕೇವಲ ಚುರುಕು ಮಾತುಗಾರಿಕೆಯ ಭಾಗವಾಗಿ ಬಳಸುವುದನ್ನು ನಿಲ್ಲಿಸಿದಾಗ. ಆಗ ನಾವು ವಾಸ್ತವ ಸತ್ಯವನ್ನು ಹೆಚ್ಚು ನಿರ್ಭಾವುಕವಾಗಿ ಅರಿಯಲು ಹಾಗೂ ಗ್ರಹಿಕೆಯ ಸಾಮಾನ್ಯ ನೆಲೆಗಳನ್ನು ಗುರುತಿಸಲು–ಅವು ತೀವ್ರ ವಾದ ವಿವಾದಗಳ ಸಾಗರದಲ್ಲಿನ ನಡುಗಡ್ಡೆಗಳ ರೂಪದಲ್ಲಿ ಕಾಣಿಸಿಕೊಂಡರೂ ಸಹ–ಸಾಧ್ಯವಾಗಬಹುದು.

೧೯೧೦ರಲ್ಲಿ ಉತ್ತರ ಪ್ರದೇಶದ ಗ್ರಾಮವೊಂದರಲ್ಲಿ ಜನಿಸಿದ ಲೋಹಿಯಾ, ಮಹಾತ್ಮ ಗಾಂಧಿಯವರಿಂದ ತುಂಬ ಆಳವಾಗಿ ಪ್ರಭಾವಿತರಾಗಿದ್ದರು. ಲೋಹಿಯಾ ತಮ್ಮ ಮೊದಲ ಸತ್ಯಾಗ್ರಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗ ಅವರಿಗೆ ಕೇವಲ ಹತ್ತು ವರ್ಷ ವಯಸ್ಸು. ಕಲ್ಕತ್ತಾ ಮತ್ತು ಆನಂತರ ಬರ್ಲಿನ್ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡಿದ ಲೋಹಿಯಾ ತಮ್ಮ ಪಿಎಚ್‌ಡಿ ಮಹಾ ಪ್ರಬಂಧವನ್ನು ಬರೆದದ್ದು ಉಪ್ಪಿನ ಸತ್ಯಾಗ್ರಹದ ಬಗ್ಗೆ.

ಮುಂದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಂಗ ಪಕ್ಷವಾಗಿ ಸಮಾಜವಾದಿ ಕಾಂಗ್ರೆಸ್ ಪಕ್ಷವನ್ನು ಸಂಸ್ಥಾಪಿಸಿದವರಲ್ಲಿ ಲೋಹಿಯಾ ಕೂಡ ಒಬ್ಬರು. ನಂತರ

ಬ್ರಿಟಿಷರ ಜೈಲುಗಳಲ್ಲಿ ಬಹಳಷ್ಟು ಸಮಯ ಕಳೆಯಬೇಕಾಗಿ ಬಂದ ಅವರು ಅಲ್ಲಿ ಸಾಕಷ್ಟು ದೌರ್ಜನ್ಯಕ್ಕೂ ಒಳಗಾದರು. ಎಲ್ಲರೂ ಸುಮ್ಮನಿದ್ದಾಗ ಭಾರತದ ವಿಭಜನೆಯನ್ನು ಕಟುವಾಗಿ ವಿರೋಧಿಸಿದ ಕೆಲವೇ ಕೆಲವರಲ್ಲಿ ಅವರೂ ಒಬ್ಬರು. ನಂತರದ ದಿನಗಳಲ್ಲಿ ಅವರು ಬರೆದ 'The guilty men of India's partition' ('ಭಾರತ ವಿಭಜನೆಯ ತಪ್ಪಿತಸ್ಥರು') ಎನ್ನುವ ಪುಸ್ತಕ ಸಾಕಷ್ಟು ವಿವಾದವನ್ನೆಬ್ಬಿಸಿತು.

ಮಾರ್ಕ್ಸ್‌ವಾದವನ್ನು 'ಏಷ್ಯಾ ವಿರುದ್ಧದ ಯುರೋಪಿನ ಕಟ್ಟಕಡೆಯ ಅಸ್ತ್ರ' ಎಂದು ಲೋಹಿಯಾ ಪರಿಗಣಿಸಿದ್ದರು. ತಾವು ರೂಪಿಸಿದ 'ಸಮಾನ ಅಪ್ರಸ್ತುತತೆಯ ತತ್ತ್ವ'ದ ಪ್ರಕಾರವಾಗಿ ಮಾರ್ಕ್ಸ್‌ವಾದ ಮತ್ತು ಬಂಡವಾಳಶಾಹಿ ಎರಡನ್ನೂ ಅವರು ತಿರಸ್ಕರಿಸಿದ್ದರು. ಯಾಕೆಂದರೆ ಅವೆರಡೂ ಚಿಂತನೆಗಳು ಬೃಹತ್ ಕೈಗಾರಿಕೆ ಹಾಗೂ ಕೇಂದ್ರೀಕೃತ ವ್ಯವಸ್ಥೆಯನ್ನು ಆಧರಿಸಿದವು.

ತಮ್ಮ ಮುಂಗಾಣ್ಕೆಯಿಂದ ಲೋಹಿಯಾ ೧೯೫೦ರ ಸುಮಾರಿನಲ್ಲಿಯೇ ಅಮೆರಿಕನ್ನರನ್ನು ಅವರ ಬದುಕು ಮತ್ತು ಅಮೆರಿಕಾ ಪ್ರಜಾಪ್ರಭುತ್ವವನ್ನು ನಿಗಮಶಾಹಿ ಆವರಿಸಿಕೊಳ್ಳುವುದೆಂದು ಎಚ್ಚರಿಸಿದ್ದರು.

ಲೋಹಿಯಾ, ಸಮಾಜವಾದವೆಂದರೆ ಉತ್ಪಾದನಾ ಸಾಧನಗಳ ಮೇಲೆ ರಾಜ್ಯ ವ್ಯವಸ್ಥೆಯ ನಿಯಂತ್ರಣ ಸಾಧಿಸುವುದು ಎಂದಲ್ಲ; ಬದಲಿಗೆ, ಸಂಪತ್ತಿನ ಉತ್ಪಾದನೆ ಮುಖ್ಯವಾದರೂ, ಅದು ಸಮತೆಯನ್ನು ಸಾಧಿಸುವಂತಹ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಭಾಗವೂ ಆಗಿರಲು ಸಾಧ್ಯವಿರುವಂತಹ ಒಂದು ಮುಕ್ತ ಸಮಾಜದ ನಿರ್ಮಾಣ ಎಂದು ನಂಬಿದ್ದ ಬುದ್ಧಿಜೀವಿಗಳ ಪರಂಪರೆಗೆ ಸೇರಿದ್ದರು.

ಇಂತಹ ಸಮಾಜವಾದ, ಸಹಕಾರಿ ರಚನೆಗಳು ಮತ್ತು ಮಾನವೀಯ ಮೌಲ್ಯಗಳಿಂದ ನಿರ್ದೇಶಿತವಾದ ಮುಕ್ತ ವಿನಿಮಯದ ವ್ಯವಸ್ಥೆಗಳನ್ನು ರೂಪಿಸುವತ್ತ ತುಡಿಯುವಂತಹುದು. ಹಾಗಾಗಿ ಸರ್ಕಾರಗಳಿಗೆ ಹೆಚ್ಚು ಹೆಚ್ಚು ಅಧಿಕಾರ ನೀಡುವ ರಾಜಕೀಯ ನಡೆಗಳನ್ನು ಲೋಹಿಯಾ ವಿರೋಧಿಸಿದರು. ಅವರು ತಮ್ಮ ಬದುಕಿನ ಉಳಿದ ಭಾಗವನ್ನು ನಾಗರಿಕ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಜನತೆಯ ಭಾಗವಹಿಸುವಿಕೆಯನ್ನು–ಶ್ರಮದಾನದ ಮೂಲಕ ಕಾಲುವೆ, ಬಾವಿ, ರಸ್ತೆ ನಿರ್ಮಾಣದಂತಹ ಸಾರ್ವಜನಿಕ ಪ್ರಯತ್ನಗಳನ್ನು–ಪ್ರೇರೇಪಿಸುವುದರಲ್ಲಿ ಕಳೆದರು. ಅಲ್ಲದೆ ದೇಶದ ಮೂಲೆ ಮೂಲೆಗಳಿಂದ ಬಂದ ಜನತೆ ತನ್ನ ದೂರು ದುಮ್ಮಾನಗಳನ್ನು ತಮ್ಮ ಸಂಸತ್ ಸದಸ್ಯ ಮುಂದೆ ಅರುಹಲು ಅನುಕೂಲವಾಗುವಂತಹ 'ಜನವಾಣಿ ದಿನ'ವನ್ನು ಆಯೋಜಿಸುವಲ್ಲಿ ಅವರ ಪಾತ್ರ ಹಿರಿದಾಗಿತ್ತು. ಅರವತ್ತು ವರ್ಷಗಳ ತರುವಾಯ ಸಾಮುದಾಯಿ ಪಾಲ್ಗೊಳ್ಳುವಿಕೆ ಎಂಬುದು ಎಲ್ಲರೂ ಒಪ್ಪಿಕೊಂಡಿರುವ ವಿಚಾರವಾಗಿದೆ– ಅದು ಈ ಎಷ್ಟೇ ಅಸಮರ್ಪಕವಾಗಿದ್ದರೂ.

ಎಲ್ಲಕ್ಕಿಂತ ಮಿಗಿಲಾಗಿ, ಸಮಕಾಲೀನ ಸಮಾಜದ ಜಪಮಂತ್ರವಾಗಿರುವ, ಸರ್ವರಿಗೂ ಸಮಾನ ಅವಕಾಶಗಳಿಗಾಗಿ ಲೋಹಿಯಾ ಹೋರಾಡಿದರು. ಕೆಳ ಜಾತಿಗಳು ಮತ್ತು ಆರ್ಥಿಕವಾಗಿ ದುರ್ಬಲವಾದ ವರ್ಗಗಳು ಐತಿಹಾಸಿಕವಾಗಿ ಪರಿಣಮಿಸಿದ ಅಡ್ಡಿ-ಆತಂಕಗಳನ್ನು ಮೀರಿ ಕೌಶಲ್ಯಗಳು ಮತ್ತು ಸಂಪನ್ಮೂಲಗಳನ್ನು ಗಳಿಸಿಕೊಳ್ಳಲಾಗುವಂತೆ ಅವರಿಗೆ ಸಾಂಸ್ಥಿಕವಾಗಿ ಆದ್ಯತಾ ಅವಕಾಶ ನೀಡಬೇಕೆಂಬ ಅವರ ಆಗ್ರಹ ೧೯೫೦ ಹಾಗೂ ೬೦ರ ದಶಕಗಳಲ್ಲಿ ಒಂದು ಕ್ರಾಂತಿಕಾರಕ ವಿಚಾರವೇ ಆಗಿತ್ತು.

ಇತಿಹಾಸದಲ್ಲಿ ಭಾರತ ಅನುಭವಿಸಿದ ಅನೇಕ ಆಘಾತಗಳಿಗೆ ಜಾತಿ ಪದ್ಧತಿಯನ್ನು ಲೋಹಿಯಾ ದೂಷಿಸಿದರು. ಅವರ ಪ್ರಕಾರ ಅದು ಸಂಕುಚಿತವಾದ ಗುರುತುಗಳನ್ನು ಪೋಷಿಸಿತಲ್ಲದೆ, ಜನ ತಮ್ಮನ್ನು ತಾವು ವಿಸ್ತೃತ ಜವಾಬ್ದಾರಿಗಳನ್ನುಳ್ಳ ಪ್ರಜೆಗಳನ್ನಾಗಿ ಪರಿಭಾವಿಸಿಕೊಳ್ಳಲು ಬಿಡಲಿಲ್ಲ. ಇದಕ್ಕೆ ಪರಿಹಾರ, ಮೇಲ್ಜಾತಿಗಳ ವಿರುದ್ಧ ಯುದ್ಧ ಹೂಡುವುದಲ್ಲ. ಅದರ ಬದಲಿಗೆ ಉಳ್ಳವರು ಸ್ವಪ್ರೇರಣೆಯಿಂದ ಕೆಳಜಾತಿಗಳ ಜನರ ಬದುಕನ್ನು ಹಸನಾಗಿಸಲು ಮುಂದೆ ಬರುವಂತೆ ಮಾಡುವ ನೈತಿಕ ಪ್ರಚಾರಾಂದೋಲನವನ್ನು ಹಮ್ಮಿಕೊಳ್ಳುವುದು. ಇದನ್ನು ಮಾನವೀಯ ದೃಷ್ಟಿಯಿಂದಷ್ಟೇ ಅಲ್ಲ, ಈ ಮಾರ್ಗದಿಂದ ಮಾತ್ರ ದೇಶದಲ್ಲಿ ಪ್ರತಿಭೆ ಮತ್ತು ನವನವೀನ ವಿಚಾರಗಳ ಒಂದು ಹೊಸ ಪ್ರವಾಹವೇ ಹರಿದು ಬರುತ್ತದೆಂಬ ಕಾರಣದಿಂದಲೂ ಕೈಗೆತ್ತಿಕೊಳ್ಳಬೇಕೆಂದು ಲೋಹಿಯಾ ಭಾವಿಸಿದರು.

ಲೋಹಿಯಾ ೧೯೬೭ರಲ್ಲಿ ಸಾವನ್ನಪ್ಪಿದರಾದರೂ ಅವರ ರಾಜಕೀಯ ಹೆಜ್ಜೆಗುರುತುಗಳು ೧೯೭೦ರ ದಶಕದ ಮಧ್ಯಭಾಗದಲ್ಲಿ ಜಯಪ್ರಕಾಶ್ ನಾರಾಯಣ್ ಅವರಿಂದ ಸ್ಫೂರ್ತಿಗೊಂಡ ಯುವಜನ ಆಂದೋಲನದಲ್ಲಿ ಢಾಳಾಗಿ ಕಾಣಬಹುದು. ನೂರಾರು ಯುವಕರು 'ಗಾಂಧಿ, ಲೋಹಿಯಾ, ಜಯಪ್ರಕಾಶರಿಗೆ ಜೈಕಾರ ಹಾಕುತ್ತ ರಾಜಕೀಯವಾಗಿ ಕ್ರಿಯಾಶೀಲರಾದರು. ವಿಪರ್ಯಾಸವೆಂದರೆ, ಈ ಆಂದೋಲನದ ಮೂಸೆಯಲ್ಲಿ ಮೂಡಿಬಂದು ತಮ್ಮನ್ನು ತಾವು ಲೋಹಿಯಾವಾದಿಗಳೆಂದು ಕರೆದುಕೊಂಡ ಮುಖ್ಯವಾಹಿನಿಯ ರಾಜಕೀಯ ನಾಯಕರು-ಇವರಲ್ಲಿ ಗಮನಾರ್ಹರಾದವರೆಂದರೆ, ಮುಲಾಯಂಸಿಂಗ್ ಯಾದವ್, ಲಾಲೂ ಪ್ರಸಾದ್ ಯಾದವ್, ಶರದ್ ಯಾದವ್-ತಮ್ಮ ತಾತ್ವಿಕ ಗುರುವಿಗೆ ನೋವನ್ನುಂಟು ಮಾಡುವ ಹಾಗೆ ಜಾತಿವಾದದ ಆಧಾರದ ಮೇಲೆ ತಮ್ಮ ರಾಜಕೀಯ ಬದುಕನ್ನು ಕಟ್ಟಿಕೊಂಡರು.

ಲೋಹಿಯಾರ ತಾತ್ವಿಕ ಪರಂಪರೆ ಸಮತೆ, ಪಾಲ್ಗೊಳ್ಳುವಿಕೆ, ಪಾರದರ್ಶಕತೆ, ಹೊಣೆಗಾರಿಕೆ ಮುಂತಾದ ಪ್ರಶ್ನಾತೀತವೆನ್ನಿಸಿರುವ ಮೌಲ್ಯಗಳ ರೂಪದಲ್ಲಿ ಇಂದೂ ಜೀವಂತವಾಗಿದೆ. ನಿಜ, ಈ ಮೌಲ್ಯಗಳನ್ನು ಪಾಲಿಸುವುದಕ್ಕಿಂತ ಹೆಚ್ಚಾಗಿ ಉಲ್ಲಂಘಿಸಲಾಗುತ್ತಿದೆ. ಆದರೆ ಈ ಮೌಲ್ಯಗಳನ್ನು ನಿರ್ಣಾಯಕ ಮೌಲ್ಯಗಳೆಂದು ಪರಿಗಣಿಸಿರುವುದು ಸಮಕಾಲೀನ ಬದುಕಿನಲ್ಲಿನ ಒಂದು ಮಹಾ ಪರಿವರ್ತನೆಯ

ಪ್ರತೀಕವೇ ಆಗಿದ್ದು, ಇದರ ಸಾಕ್ಷ್ಯಗಳು ಇಂದಿನ ಸಾರ್ವಜನಿಕ ಜೀವನ ಮತ್ತು ಸಾಹಿತ್ಯಕೃತಿಗಳೆರಡರಲ್ಲೂ–ಉದಾ: ನಂದನ್ ನಿಲೇಕಣಿ ಅವರ Imagining India ಮತ್ತು William Bissels ಅವರ Making India work– ವ್ಯಾಪಿಸಿಕೊಂಡಿರುವುದನ್ನು ನಾವು ಕಾಣಬಹುದು.

ಜನರ ಮಧ್ಯೆ ಈಗಲೂ ಆಸೆಯಿಂದ ಕೆಲಸ ಮಾಡುತ್ತಿರುವ ಲೋಹಿಯಾರಿಂದ ಸ್ಫೂರ್ತಿಗೊಂಡ ಸಮಾಜವಾದಿ ಕಾರ್ಯಕರ್ತರು ಈ ಕೃತಿಗಳು ಮಂಡಿಸುವ ಮಾದರಿಗಳಲ್ಲಿನ ವಿವರಗಳ ಬಗ್ಗೆ ಕಟುವಾದ ಭಿನ್ನಾಭಿಪ್ರಾಯಗಳನ್ನು ಹೊಂದಿರಬಹುದು. ಆದರೆ ಹೆಚ್ಚು ನ್ಯಾಯಯುತವಾದ ಮತ್ತು ಸಮತೆಯ ಸಮಾಜದ ಕನಸಿಗೆ ಬದ್ಧರಾದವರೂ ಮತ್ತು ಈಗಾಗಲೇ ಸಾಕಷ್ಟು ಉಳ್ಳವರಾಗಿರುವವರಿಗೆ ಮತ್ತಷ್ಟು ಸವಲತ್ತುಗಳ ವರದಾನ ಮಾಡುವ 'ಹುಟ್ಟಿನ ಲಾಟರಿ'ಯ ಬಗ್ಗೆ ತೀವ್ರವಾದ ಸಿಟ್ಟಿರುವ ಜನರೂ ಈ ಮಾದರಿಗಳ ಹಿಂದೆ ಇದ್ದಾರೆ. ನಿಜ, ಬದಲಾವಣೆ ಬಯಸುವ ಇವರಲ್ಲಿ ಬಹಳ ಜನಕ್ಕೆ 'ಸಮಾಜವಾದ'ವೆಂದು ಅವರು ಯಾವುದನ್ನು ಗುರುತಿಸುತ್ತಾರೋ ಅದರ ಬಗ್ಗೆ ಅಲರ್ಜಿ ಇದೆ. ಉದಾಹರಣೆಗೆ ಬಹಳ ಪ್ರಭಾವಶಾಲಿ ಅರ್ಥಿಕ ತಜ್ಞರೂ ಹಾಗೂ ನೀತಿ ನಿರೂಪಕರೂ ಅದ (ಮತ್ತು ಈಗ ಭಾರತದ ರಿಸರ್ವ್ ಬ್ಯಾಂಕಿನ ಗವರ್ನರ್‌ರೂ ಆಗಿರುವ) ರಘುರಾಮ್ ರಾಜನ್ ತಮ್ಮ Saving Capitalism from Capitalists ಎಂಬ ಪುಸ್ತಕದಿಂದ ಪ್ರಸಿದ್ಧರಾಗಿದ್ದಾರೆ. ಅವರು ಬಂಡವಾಳಶಾಹಿಯು 'ವಾರಸುದಾರರ, ವಾರಸುದಾರರಿಂದ ಮತ್ತು ವಾರಸುದಾರರಿಗಾಗಿ' ಇರುವ ವ್ಯವಸ್ಥೆಯಾಗಿಬಿಡುವ ಪ್ರವೃತ್ತಿಯನ್ನು ವಿರೋಧಿಸುತ್ತಾರೆ. ಈ ದೃಷ್ಟಿಕೋನವು ಈ ಹಿಂದೆ ಉಲ್ಲೇಖಿಸಲಾದ ಸಾಮಾನ್ಯ ನೆಲೆಗಳ ನಡುಗಡ್ಡೆಗಳಿಗೆ ಒಂದು ಉದಾಹರಣೆಯಷ್ಟೆ. ಮೇಲ್ನೋಟಕ್ಕೆ ವಿರೋಧಿಗಳಾಗಿ ಕಾಣುವ ಇವರು ಕಟು ವಾದ–ವಿವಾದಗಳ ಥಂಡಿ ನೀರಿನ ಹೆಬ್ಬಲೆಗಳನ್ನು ಹಾಯ್ದು ಅಂತಹ ಸಾಮಾನ್ಯ ನೆಲೆಗಳ ನಡುಗಡ್ಡೆಗಳನ್ನು ತಲುಪಿದಲ್ಲಿ ಎಂತಹ ಹೊಸ ಅನುಸಂಧಾನದ ಬಾಗಿಲುಗಳು ತರೆದುಕೊಳ್ಳುವವೋ ಎಂದು ಊಹಿಸುವುದೇ ಒಂದು ರೋಮಾಂಚನಕಾರಿ ಅನುಭವವಾಗಬಲ್ಲುದು!

(ರಜನಿ ಭಕ್ಷಿ ಮುಂಬೈನಲ್ಲಿ ನೆಲೆಸಿರುವ ಪ್ರಗತಿಪರ ರಾಜಕೀಯ–ಆರ್ಥಿಕ ಚಿಂತಕರು, ಲೇಖಕರು ಮತ್ತು ಹಿರಿಯ ಪತ್ರಕರ್ತರು)

(ಕನ್ನಡಕ್ಕೆ: ಡಿಎಸ್ಸೆನ್)

ಏಪ್ರಿಲ್, ೨೦೧೫

ಸಿದ್ಧರಾಮಯ್ಯನವರೇ,
ಇದು ಲೋಹಿಯಾ ಸಮಾಜವಾದವಲ್ಲ!

ಪ್ರಿಯ ಓದುಗರೇ,

ಐ.ಎ.ಎಸ್. ಅಧಿಕಾರಿ ಡಿ.ಕೆ. ರವಿ ಅವರ ಸಾವಿನ ಪ್ರಕರಣ ಕುರಿತಂತೆ ನಮ್ಮ ರಾಜ್ಯ ಸರ್ಕಾರ, ಅವರ ಸಾವಿನ ಸುದ್ದಿ ಬಂದ ಕ್ಷಣದಿಂದಲೂ ವರ್ತಿಸುತ್ತಿರುವ ರೀತಿ ನಿಗೂಢವಾಗಿದೆ. ಯಾವುದೇ ಪ್ರಾಥಮಿಕ ತನಿಖೆಯೂ ಇಲ್ಲದೆ ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ, ಗೃಹಮಂತ್ರಿಗಳಿಬ್ಬರೂ, ಅದೊಂದು ಆತ್ಮಹತ್ಯೆ ಎಂದು ಪ್ರಕಟಿಸುತ್ತಾರೆ ಮತ್ತು ಅದಕ್ಕೆ ಪೂರಕವೆಂದು ತಾವು ನಂಬಿದ ಕೆಲ ಮಾಹಿತಿಯನ್ನು ಬಹಿರಂಗಪಡಿಸುತ್ತಾರೆ. ಹೊರಗೆ ನಗರದ ಪೋಲೀಸ್ ಆಯುಕ್ತ ರೆಡ್ಡಿಯವರು, ಶವ ನೋಡಿ ಬಂದೊಡನೆ ಇದು ಮೇಲ್ನೋಟಕ್ಕೆ ಆತ್ಮಹತ್ಯೆ ಎಂದು ಹೇಳುತ್ತಾರೆ! ಇದು ಯಾರಿಗಾದರೂ ಆಡಳಿತ ಸೂಕ್ಷ್ಮಗಳನ್ನರಿಯದ ಅನನುಭವಿ ಆಡಳಿತಗಾರರು ಮತ್ತು ಅಧಿಕಾರಿಗಳ ವರ್ತನೆಯಂತೆ ಕಂಡಿದ್ದರೆ ಆಶ್ಚರ್ಯವೇನಿಲ್ಲ. ಹಾಗೇ, ಈ ಹಿನ್ನೆಲೆಯಲ್ಲಿ ಡಿ.ಕೆ. ರವಿ ಅವರ ಕುಟುಂಬ ವರ್ಗ ಮತ್ತು ರವಿಯವರು ಕೋಲಾರದ ಜಿಲ್ಲಾಧಿಕಾರಿಯಾಗಿ, ನಂತರ ವಾಣಿಜ್ಯ ತೆರಿಗೆ ಇಲಾಖೆಯ ಹಿರಿಯ ಅಧಿಕಾರಿಯಾಗಿ ಮಾಡಿದ್ದ ದಿಟ್ಟ, ದಕ್ಷ ಮತ್ತು ಅಪರೂಪದ ಪ್ರಾಮಾಣಿಕತೆಯ ಕೆಲಸಗಳನ್ನು ಕಂಡು, ಕೇಳಿ ಮೆಚ್ಚಿದ್ದ ಜನತೆ ಈ ಸಾವು ಆತ್ಮಹತ್ಯೆ ಇರಲಾರದು ಎಂದು ಸಂಶಯಿಸಿ ಸಿ.ಬಿ.ಐ ತನಿಖೆಗೆ ಆಗ್ರಹಿಸಿದ್ದೂ ಆಶ್ಚರ್ಯವೇನಲ್ಲ..

ಆದರೆ ರಾಜ್ಯ ಸರ್ಕಾರ ಯಾವುದೇ ಕಾರಣ ಕೊಡದೆ ಈ ಆಗ್ರಹವನ್ನು ಒಪ್ಪಲು ಹಲವು ದಿನಗಳ ಕಾಲ ನಿರಾಕರಿಸಿ, ಕೊನೆಗೆ ಸರ್ಕಾರಕ್ಕಿಂತ ದೂರದ ಕಾಂಗ್ರೆಸ್ ಹೈಕಮಾಂಡ್ ಜನತೆಯ ಮನಸ್ಸಿನ ಸೂಕ್ಷ್ಮಗಳನ್ನು ಅರಿಯಲು ಸಾಧ್ಯವಾಗಿ ಅದರ ಸೂಚನೆಯಂತೆ ಸಿ.ಬಿ.ಐ. ತನಿಖೆಗೆ ಒಪ್ಪುವಂತಾಗಿರುವುದು ರಾಜ್ಯ ಸರ್ಕಾರದ

ಘನತೆಯನ್ನು ಕುಂದಿಸಿದೆ ಎಂದೇ ಹೇಳಬೇಕು. ಅಷ್ಟೇ ಅಲ್ಲದೆ, ಸಿಬಿ.ಐ. ತನಿಖೆಗೆ ಮುನ್ನ ತನ್ನದೇ ಸಿ.ಐ.ಡಿ ತನಿಖೆಯ ಮಧ್ಯಂತರ ವರದಿಯನ್ನು ಬಹಿರಂಗ ಪಡಿಸಲು ಅದು ಕಾತುರವಾಗಿರುವಲ್ಲಿ ಮತ್ತು ಇದಕ್ಕೆ ನ್ಯಾಯಾಲಯ ಒಡ್ಡಿರುವ ತಡೆಯನ್ನು ಅದು ವಿರೋಧಿಸುತ್ತಿರುವುದರಲ್ಲಿ ತೋರುತ್ತಿರುವ ಹಠ ಈ ಸಾವಿನ ಹಿಂದೆ ಕಾಣದ ಕೈಗಳ ರಾಜಕಾರಣವೂ ಇರಬಹುದೆಂಬ ಸಂಶಯವನ್ನು ಬಲಪಡಿಸುವಂತಿದೆ.

ನಿಜ, ಈ ಪ್ರಕರಣವನ್ನು ಸ್ಪಷ್ಟವಾಗಿ, ನೇರವಾಗಿ ನೋಡಲು ಇದ್ದ ಎಲ್ಲ ಅವಕಾಶಗಳನ್ನೂ ನಮ್ಮ ಟಿವಿ. ಮಾಧ್ಯಮಗಳು ಹಾಳು ಮಾಡಿದವು. ಪ್ರಕರಣದ ಒಂದೇ ಬದಿಯ ವರದಿ ಮತ್ತು ಮಾಹಿತಿಯನ್ನು ಭಾವಾವೇಶಗಳೊಂದಿಗೆ ಪ್ರಸ್ತುತಗೊಳಿಸುವ ಮೂಲಕ ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದವು. ಅದಕ್ಕೆ ಮೇಲೆ ತಿಳಿಸಿದ ರಾಜ್ಯ ಸರ್ಕಾರದ ಅಪ್ರಬುದ್ಧ ವರ್ತನೆಯೂ ಕಾರಣವಾಗಿತ್ತು ಎಂಬುದೂ ನಿಜ. ಆದರೆ ಡಿ.ಕೆ. ರವಿ ಸಾವಿನ ಸುತ್ತ ಹೆಣೆದುಕೊಂಡಿರಬಹುದಾದ ಇತರ ಸುದ್ದಿಗಳು ಹೊರಬರುತ್ತಿದ್ದಂತೆ ಎರಡು ವಿಷಯಗಳಂತೂ ಸ್ಪಷ್ಟವಾದವು. ಒಂದು, ಈಗ ಕೇಳಬರತೊಡಗಿರುವ ಅವರ ಪ್ರೇಮ ಪ್ರಕರಣ ಕುರಿತಾದ ಮತ್ತು ಅವರ ಪ್ರಾಮಾಣಿಕತೆಯನ್ನು ಸಂಶಯಿಸುವಂತಹ ಇತರೆ ಕೆಲವು ಸುದ್ದಿಗಳ ಹಿನ್ನೆಲೆಯಲ್ಲಿ ಆತ್ಮಹತ್ಯೆಯ ಸಾಧ್ಯತೆಯನ್ನು ಸುಲಭವಾಗಿ ತಳ್ಳಿಹಾಕುವಂತಿಲ್ಲ. ಇದು ನಿಷ್ಪಕ್ಷಪಾತವಾದ ಸಿ.ಬಿ.ಐ. ತನಿಖೆಯಿಂದಲೇ ಸಾಬೀತಾಗಬೇಕು. ಎರಡು, ಈ ಬಗ್ಗೆ ಎದ್ದ ಸಾರ್ವಜನಿಕ ಆಕ್ರೋಶದ ಹಿಂದೆ ಜಾತಿ ರಾಜಕಾರಣವೂ ಒಂದು ಪ್ರಧಾನ ಅಂಶವಾಗಿ ಕೆಲಸ ಮಾಡಿದೆ. ಸಿದ್ಧರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರ ಒಕ್ಕಲಿಗ ಹಿತಾಸಕ್ತಿಗಳ ವಿರುದ್ಧವಿದೆ ಎಂಬ ಅಭಿಪ್ರಾಯವನ್ನು ಬಲಗೊಳಿಸಲು ಎಚ್.ಡಿ. ಕುಮಾರಸ್ವಾಮಿಯವರಿಗೆ ಈ ಪ್ರಕರಣವನ್ನು ಸಿದ್ಧರಾಮಯ್ಯ ನಿರ್ವಹಿಸಿದ ರೀತಿ ಸಹಾಯಮಾಡಿತೆಂದೇ ಹೇಳಬೇಕು. ಈ ಹಿಂದೆ ಇನ್ನೋರ್ವ ದಕ್ಷ ಮತ್ತು ಪ್ರಾಮಾಣಿಕ ಐ.ಎ.ಎಸ್. ಅಧಿಕಾರಿ ರಶ್ಮಿ ಮಹೇಶ್ ಅವರನ್ನು ಈ ಸರ್ಕಾರ ನಡೆಸಿಕೊಂಡ ಮತ್ತು ಅವರ ಮೇಲಾದ ಹಲ್ಲೆಯನ್ನು ಈ ಸರ್ಕಾರ ಪರಿಗಣಿಸಿದ ಉಡಾಫೆಯ ರೀತಿ-ನೀತಿಗಳು ಈ ಪ್ರಕರಣದ ಜಾತಿ ಆಯಾಮಕ್ಕೆ ತನ್ನದೇ ವಿಶ್ವಾಸಾರ್ಹತೆಯನ್ನು ಒದಗಿಸಿತು.

ಈ ನಿರ್ದಿಷ್ಟ ಪ್ರಕರಣಗಳ ಜಾತಿ ಆಯಾಮದ ಪ್ರಶ್ನೆ ಏನೇ ಇರಲಿ, ಇಂತಹ ಅಭಿಪ್ರಾಯ ಮೂಡಲು ಸಿದ್ಧರಾಮಯ್ಯನವರ ಸರ್ಕಾರಕ್ಕೆ ಮೂಲಾಧಾರವಾಗಿರುವಂತೆ ತೋರುತ್ತಿರುವ ಅವರ ಸಾಮಾಜಿಕ ನೀತಿಯೇ ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಸಿದ್ಧರಾಮಯ್ಯ 'ಅಹಿಂದ' ಕಲ್ಪನೆಯನ್ನು ಮುಂದೊಡ್ಡಿಕೊಂಡು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ತಮ್ಮ ಸರ್ಕಾರವನ್ನು ಯಾವುದೇ ಎಗ್ಗಿಲ್ಲದೆ ಒಂದು ಜಾತೀಯ ಸರ್ಕಾರವನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ ಎಂಬ ಸಾರ್ವಜನಿಕ ಅಭಿಪ್ರಾಯ ದಿನೇ ದಿನೇ ಬಲಗೊಳ್ಳುತ್ತಿದೆ ಎಂಬುದನ್ನು ಅವರು ಆದಷ್ಟು ಬೇಗ ಅರಿತರೆ ಒಳ್ಳೆಯದು. ಮೊನ್ನೆ ಅವರು ವಿಧಾನಸಭಾಧ್ಯಕ್ಷ ಕಾಗೋಡು ತಿಮ್ಮಪ್ಪನವರಿಗೆ

ಯಾವುದೋ ಖಾಸಗಿ ಸಂಸ್ಥೆಯೊಂದು ಪ್ರಕಟಿಸಿದ ಲೋಹಿಯಾ ಪ್ರಶಸ್ತಿಯನ್ನು ಪ್ರದಾನ ಮಾಡುತ್ತಾ, ತಮ್ಮದು ಲೋಹಿಯಾ ಸಮಾಜವಾದ ನಂಬಿರುವ ಸರ್ಕಾರವೆಂದು ಹೇಳಿದ್ದಾರೆ. ಬಹುಶಃ ಅವರಿಗೆ, ನಮ್ಮ ಬಹಳಷ್ಟು ಲೋಹಿಯಾ ಸಮಾಜವಾದಿಗಳಂತೆ ಲೋಹಿಯಾ ವಿಚಾರಧಾರೆಯೆಂದರೆ, ಕೇವಲ ಅಥವಾ ಮುಖ್ಯವಾಗಿ ಹಿಂದುಳಿದ ಜಾತಿಗಳ ರಾಜಕಾರಣ ಎಂಬ ಕಲ್ಪನೆ ಇದ್ದಂತಿದೆ.

ಇದು ಲೋಹಿಯಾ ವಿಚಾರಧಾರೆಯನ್ನು ಕುಬ್ಜಗೊಳಿಸುವ, ಅಗ್ಗ ಮಾಡಿ ಅಶ್ಲೀಲಗೊಳಿಸುವ ಪ್ರಯತ್ನವೆಂದೇ ಹೇಳಬೇಕಿದೆ. ಲೋಹಿಯಾ ಸಮಾಜವಾದ ಸಾಮಾಜಿಕ ನ್ಯಾಯಕ್ಕೆ ಮಹತ್ವ ನೀಡಿದ್ದು ನಿಜವಾದರೂ, ಅದನ್ನು ಜಾತಿ ರಹಿತ ಸಮಾಜದ ನಿರ್ಮಾಣದೆಡಗಿನ ರಾಜಕಾರಣವಾಗಿ ಗ್ರಹಿಸಿ ಪ್ರತಿಪಾದಿಸಿತ್ತೇ ಹೊರತು, ಈ ಸರ್ಕಾರ ಅನುಸರಿಸುತ್ತಿರುವಂತಹ ಜಾತಿ ಅಸ್ಮಿತೆಗಳನ್ನು ಬಲಪಡಿಸಿ ಸೃಷ್ಟಿಸುತ್ತಿರುವ ಸಾಮಾಜಿಕ ಅಸಮಧಾನಗಳ ಮೂಲಕ ಸಮಾಜವನ್ನು ಒಡೆದಾಳುವಂತಹ ನೀತಿಯನ್ನಲ್ಲ. ಜೊತೆಗೆ ಲೋಹಿಯಾ ಸಮಾಜವಾದದ ಮುಖ್ಯ ಗುರಿ ತನ್ನದೇ ಮಿತಿಗಳುಳ್ಳ ಸರಳ ಸಭ್ಯ ಬದುಕಿನ ಮಾದರಿಯನ್ನು ರೂಪಿಸುವುದಾಗಿತ್ತೇ ಹೊರತು, ಬರೀ 'ಬೇಕು ಬೇಕು'ಗಳ ಹಪಾಹಪಿಯ ಜನಸಮುದಾಯಗಳನ್ನು ನಿರ್ಮಿಸುವುದಾಗಿರಲಿಲ್ಲ. ಸಿದ್ಧರಾಮಯ್ಯನವರು ತಮ್ಮ ಆರ್ಥಿಕ ಕಾರ್ಯಕ್ರಮಗಳ ಮೂಲಕವಲ್ಲದೇ, ವಿವಿಧ ನೇಮಕಾತಿ, ಜಾತಿ ಸಮ್ಮೇಳನಗಳು ಮತ್ತು ಹೊಸ ಹೊಸ ಜಾತಿ ಪುಣ್ಯ ಪುರುಷರ ಜನ್ಮ ದಿನಾಚರಣೆಗಳನ್ನು ಅಧಿಕೃತವಾಗಿ ಪೋಷಿಸುವ ಇಲ್ಲವೇ ಪ್ರೋತ್ಸಾಹಿಸುವ ಮೂಲಕ ಅಪಾಯಕಾರಿ ಆಟದಲ್ಲಿ ತೊಡಗಿದ್ದಾರೆ ಮತ್ತು ಲೋಹಿಯಾ ವಿಚಾರಧಾರೆಗೆ ಅನ್ಯಾಯವೆಸಗುತ್ತಿದ್ದಾರೆ ಎಂದೇ ಹೇಳಬೇಕು. ಸಿದ್ಧರಾಮಯ್ಯ ರಾಜ್ಯದ ಕೇವಲ ರಾಜಕೀಯ ನಾಯಕರಾಗಿ ಬಿಮ್ಮನಿರದೆ, ಆಡಳಿತ ಮುಖ್ಯಸ್ಥರಾಗಿ ತಮ್ಮ ಅಧಿಕಾರಿ ಬಳಗದ ಅತ್ಯುತ್ತಮ ಯುವ ಅಧಿಕಾರಿಗಳನ್ನು ಗುರುತಿಸಿ, ಅವರೊಡನೆ ಹಿರಿಯನಾಗಿ ಆತ್ಮೀಯವಾಗಿ ಬೆರೆತು ಸಕಾಲಿಕ ಬುದ್ಧಿ ಮಾತುಗಳಿಂದ ಕರ್ನಾಟಕದ ಉನ್ನತಿಗಾಗಿ ಒಂದು ಸೇವಾ ತಂಡವನ್ನು ಬೆಳೆಸುವ ಮುನ್ನೋಟವನ್ನೂ ಪ್ರದರ್ಶಿಸಬೇಕಿದೆ. ಅದು ಲೋಹಿಯಾ ಮುನ್ನೋಡಿದ ಹೊಸ ರಾಜಕಾರಣಕ್ಕೂ ಶೋಭೆ ತರಬಲ್ಲುದಾಗಿದೆ.

ಲೋಹಿಯಾ ಮುನ್ನೋಡಿದ ಹೊಸ ರಾಜಕಾರಣ ಎಂದೆ. ಅದನ್ನು ನಾವು ಆಂ ಆದ್ಮಿ ಪಕ್ಷದ ರಾಜಕಾರಣದಲ್ಲಿ ಕಂಡು ಭರವಸೆಯ ಭಾವನೆಯನ್ನು ಹೊಂದಿದ್ದೆವು. ಇದರ ಹಿಂದೆ ಅಲ್ಲಿ ಯೋಗೇಂದ್ರ ಯಾದವ್, ಪ್ರಶಾಂತ್ ಭೂಷಣ್‌ರಂತಹ ಘನತೆವೆತ್ತ ಚಿಂತಕರೂ ಹೋರಾಟಗಾರರೂ ಇದ್ದರೆಂಬ ಕಾರಣವಿತ್ತು. ಈಗ ಆ ಭರವಸೆಯ ಬೆಳಕೂ ಆರಿದೆ. ಆ ಇಬ್ಬರೂ ಪಕ್ಷಕ್ಕೆ ಈಗ ಬೇಡವಾಗಿದ್ದಾರೆ. ದೆಹಲಿ ಚುನಾವಣೆಯಲ್ಲಿ ಐತಿಹಾಸಿಕ ಜಯ ದಾಖಲಿಸಿದ ತದ ನಂತರದಲ್ಲೇ ನಡೆದಿರುವ ಈ ಒಳಜಗಳ ಪರ್ಯಾಯ ರಾಜಕಾರಣದ ಪ್ರಯತ್ನಗಳಿಗೆ ಬಿದ್ದಿರುವ ನಿರ್ಣಾಯಕ ಪೆಟ್ಟೆಂದೇ

ಹೇಳಬೇಕು. ಏಕೆಂದರೆ, ಇದು ಜನಪ್ರಿಯ ರಾಜಕಾರಣ ಮತ್ತು ತಾತ್ವಿಕ ರಾಜಕಾರಣದ ನಡುವಣ ಆಯ್ಕೆಯ ಜಗಳವೇ ಆಗಿದ್ದಂತೆ ತೋರುತ್ತದೆ. ಆಪ್‌ನ ಪ್ರಬಲ ಬೆಂಬಲಿಗನಾಗಿದ್ದ ಈ ಪತ್ರಿಕೆ ಈ ಜಗಳದ ಬಗ್ಗೆ ಅವಸರದಲ್ಲಿ ಏನೂ ಹೇಳಲು ಇಷ್ಟಪಡುವುದಿಲ್ಲ. ಎಲ್ಲ ವಿವರಗಳು ಗೊತ್ತಾದ ಬಳಿಕ ನಮ್ಮ ನೋಟವನ್ನು ದಾಖಲಿಸುವುದು ಒಳಿತೆಂದು ಪತ್ರಿಕೆ ಭಾವಿಸುತ್ತದೆ.

ಇನ್ನು ಮೋದಿ ಸರ್ಕಾರ ತನ್ನ ಬಲಪಂಥೀಯತೆಯನ್ನು ನಿರಾತಂಕವಾಗಿ ಮುಂದುವರೆಸಿಕೊಂಡು ಹೋಗುತ್ತಿದೆ. ಬಲಪಂಥೀಯತೆ ಎಂದರೆ ಸಮಾಜದ ಮೇಲ್ಭಾಗಕ್ಕೆ ದೊರೆತ ಪ್ರಯೋಜನಗಳು ನಿಧಾನವಾಗಿಯಾದರೂ ಅಷ್ಟಿಷ್ಟು ಕೆಳಭಾಗಗಳಿಗೆ ಸೋರಿ ಸಮಾಜದ ಸರ್ವೋನ್ನತ ಅಭಿವೃದ್ಧಿಯಾಗುತ್ತದೆ ಮತ್ತು ಇದೊಂದೇ ಅಭಿವೃದ್ಧಿಯ ಯಶಸ್ವಿ ಮಾರ್ಗ ಎಂಬ ನಂಬಿಕೆ. ಈ ನಂಬಿಕೆಗೆ ತಕ್ಕುನಾಗಿಯೇ ಅದು ತನ್ನೀ ಮೊದಲ ಮುಂಗಡ ಪತ್ರದಲ್ಲಿ ಕಾರ್ಪೋರೇಟ್ ವಲಯಕ್ಕೆ ಮತ್ತು ಚಿನ್ನ-ವಜ್ರ ಕೈಗಾರಿಕೆ ಹಾಗೂ ವ್ಯಾಪಾರ ಕ್ಷೇತ್ರಗಳಿಗೆ ಕೋಟ್ಯಂತರ ರೂಪಾಯಿಗಳ ತೆರಿಗೆ ರಿಯಾಯತಿ ತೋರಿ, ಕೃಷಿ, ಉದ್ಯೋಗ ಖಾತರಿ, ಶಿಕ್ಷಣ ಮತ್ತು ಆರೋಗ್ಯ ವಲಯಗಳ ಅನುದಾನಗಳಿಗೆ ದೊಡ್ಡ ಕತ್ತರಿ ಹಾಕಿದೆ. ಈ ಬಗೆಗಿನ ವಿವರವಾದ ಲೇಖನವೊಂದು ೮ನೇ ಪುಟದಲ್ಲಿದೆ ಗಮನಿಸಿ. ಜೊತೆಗೆ ಅದು ತನ್ನ ಭೂಸ್ವಾಧೀನ ಮಸೂದೆ ಜಾರಿ ಬಗ್ಗೆ ಹಿಡಿದಿರುವ ಹಠ ಅದರ ರಾಜಕಾರಣ ಎಂತಹ ತಾತ್ವಿಕ ಭಂಡತನದಿಂದ ಕೂಡಿದೆ ಎಂಬುದನ್ನು ಸೂಚಿಸುವಂತಿದೆ.

ಇಂತಹ ಸಂಪೂರ್ಣ ಪ್ರತಿಕೂಲ ಪರಿಸ್ಥಿತಿಯಲ್ಲಿ ನಮ್ಮ 'ಚರಕ'ದ ಪ್ರಸನ್ನ ತಮ್ಮ 'ಕೈಮಗ್ಗ ಉಳಿಸಿ' ಆಂದೋಲನದ ಅಪರಿಪೂರ್ಣತೆಯನ್ನು ಮನಗಂಡೋ ಏನೋ ಇದೇ ಏಪ್ರಿಲ್ ೧೯ರಂದು ಮೈಸೂರು ಜಿಲ್ಲೆಯ ಖಾದಿ ಕ್ಷೇತ್ರ ಬದನವಾಳುವಿನಲ್ಲಿ 'ಸುಸ್ಥಿರ ಅಭಿವೃದ್ಧಿ' ಕುರಿತು ಒಂದು ರಾಷ್ಟ್ರೀಯ ಸಮಾವೇಶವನ್ನು ಆಯೋಜಿಸಿದ್ದಾರೆ. ಸುಸ್ಥಿರ ಅಭಿವೃದ್ಧಿ ಎಂದರೆ ಈ ಭೂಮಿ, ಗಾಳಿ ಮತ್ತು ನೀರು ಹಾಳಾಗದಂತೆ, ಸಕಲ ಜೀವಜಗತ್ತಿನೊಂದಿಗೆ ಮನುಷ್ಯ ಸಮರಸವಾಗಿ ಬಾಳುವೆ ಮಾಡಲು ಅನುವು ಮಾಡಿಕೊಡಬಲ್ಲಂತಹ ಬದುಕಿನ ಒಂದು ಮಾದರಿ. ಅದು ಇತ್ತೀಚಿನ ರಾಜಕಾರಣ ಕಟ್ಟಿಕೊಟ್ಟಿರುವ ಬದುಕಿನ ಮಾದರಿಗೆ, ಮೌಲ್ಯಗಳಿಗೆ ವ್ಯತಿರಿಕ್ತವಾದದ್ದು. ಅದು ಹಲವು ತ್ಯಾಗ, ಸಂಕಲ್ಪಗಳನ್ನು ಬೇಡುವ ಮಾದರಿ. ಅದು ಇಂದು ಜನರ ಮನಸ್ಸನ್ನು ಹೊಗುವಂತೆ ಮಾಡಲು ಭಗೀರಥ ಪ್ರಯತ್ನವೇ ಬೇಕಾಗಿದೆ. ಇಂದಿನ ಮನುಷ್ಯನ ಲೋಕದೃಷ್ಟಿಯನ್ನೇ ಬದಲಿಸಬೇಕಾದ ದೊಡ್ಡ ಕೆಲಸವಿದು. ನಮ್ಮ ಪತ್ರಿಕೆಯದೂ ಸೇರಿದಂತೆ, ಆ ದಿಕ್ಕಿನಲ್ಲಿ ನಡೆದಿರುವ ಹಲವು ಪ್ರಯತ್ನಗಳ ಮುಂದುವರಿಕೆಯಾಗಿ ಈ ಸಮ್ಮೇಳನ ನಡೆಯಲಿ, ಎಲ್ಲ ಆಸಕ್ತ ಜನ ಮತ್ತು ಗುಂಪುಗಳ ಭಾಗವಹಿಸುವಿಕೆಯೊಂದಿಗೆ ಒಂದು ಚಳುವಳಿಯಾಗಿ ಬೆಳೆಯಲಿ ಎಂದು ನಾವು ಹಾರೈಸುತ್ತೇವೆ.

ಇಂದಿಗೆ ಬೇಕಾದ ಅಂಬೇಡ್ಕರ್

ಮತ್ತೊಮ್ಮೆ ಏಪ್ರಿಲ್ ೧೪ ಬರುತ್ತಲಿದೆ, ಬಾಬಾ ಸಾಹೇಬರ ಗುಣಗಾನದ ಮತ್ತೊಂದು ಹಬ್ಬ ನಡೆಯಲಿದೆ. ಆದರೆ ಬಾಬಾ ಸಾಹೇಬರನ್ನು ನಾವು ಅರ್ಥ ಮಾಡಿಕೊಳ್ಳುವ, ಇಂದಿಗೆ ಅವರ ಪ್ರಸ್ತುತತೆಯನ್ನು ಕಂಡುಕೊಳ್ಳುವ, ಇಂದಿಗೆ ಬೇಕಾದ ಅಂಬೇಡ್ಕರ್‌ರನ್ನು ಮರು ನಿರೂಪಿಸಿಕೊಳ್ಳುವ ಕೆಲಸ ನಡೆಯುತ್ತಿದೆಯಾ? ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗ ನಿರಾಶೆಯೇ ಹುಟ್ಟುತ್ತದೆ. ನಿಜ, ಎಲ್ಲೆಲ್ಲೂ ಅಂಬೇಡ್ಕರ್ ಅಧ್ಯಯನ ಕೇಂದ್ರಗಳು, ಪೀಠಗಳು ಸ್ಥಾಪನೆಯಾಗಿವೆ. ಕೆಲವೆಡೆ ನಿಜವಾಗಿಯೂ ಗಂಭೀರ ಸಂಶೋಧನೆ–ಅಧ್ಯಯನಗಳು ನಡೆದಿವೆ. ಆದರೆ ಈ ಅಧ್ಯಯನಗಳಿಗೂ ಸಮಕಾಲೀನ ದಲಿತ ರಾಜಕಾರಣಕ್ಕೂ ಯಾವುದೇ ಸಾವಯವ ಸಂಬಂಧವಿಲ್ಲದೇ ಹೋಗಿದೆ. ದಲಿತ ರಾಜಕಾರಣ ಜನಪ್ರಿಯ ಘೋಷಣೆ ಮತ್ತು ಬೇಡಿಕೆಗಳ ಮೇಲೇ ಮುಂದುವರೆದಿದ್ದು, ದಲಿತ ರಾಜಕಾರಣ ಮತ್ತು ಆ ಮೂಲಕ ದಲಿತ ಸಮುದಾಯವನ್ನು ಮುಖ್ಯ ವಾಹಿನಿಯ ರಾಜಕಾರಣ ಮತ್ತು ಚಿಂತನ ಮಾರ್ಗದೊಳಕ್ಕೆ ಲೀನಗೊಳಿಸಿಕೊಳ್ಳುವ ಪ್ರಯತ್ನಗಳೇ ನಡೆದಿಲ್ಲ. ಬದಲಿಗೆ ದಲಿತರು ಮತ್ತು ಅವರ ರಾಜಕಾರಣವನ್ನು ಪ್ರತ್ಯೇಕತೆಯಲ್ಲೇಯೇ ಇಟ್ಟುಕೊಳ್ಳುವ ಪಟ್ಟಭದ್ರ ಹಿತಾಸಕ್ತಿಗಳನ್ನು ಎಲ್ಲೆಲ್ಲೂ ನಾವು ಕಾಣಬಹುದಾಗಿದೆ.

ಇದಕ್ಕೆ ಮುಖ್ಯ ಕಾರಣ, ಹಿಂದೊಮ್ಮೆ ಲೋಹಿಯಾ ಹೇಳಿದ್ದಂತೆ, ಅಂಬೇಡ್ಕರ್ ವ್ಯಕ್ತಿತ್ವದಲ್ಲಿ ಅಂತರ್ಗತವಾದಂತಿದ್ದ ಕಹಿ ಮತ್ತು ಪ್ರತ್ಯೇಕತೆಯ ಭಾವನೆಗಳನ್ನು ದಲಿತ ರಾಜಕಾರಣ ಮತ್ತು ಚಳುವಳಿಗಳು ಮೀರಲಾಗದೆ ಈಗಲೂ ಅವನ್ನು ಅಮೂಲ್ಯ ಆಸ್ತಿಗಳಂತೆ ಕಾಪಾಡಿಕೊಂಡು ಹೋಗುತ್ತಿರುವುದೇ ಆಗಿದೆ. ಇದಕ್ಕೆ ಪ್ರತಿಕ್ರಿಯೆಯೆಂಬಂತೆ ಸಮಕಾಲೀನ ಸಮಾಜವೂ ಅಂಬೇಡ್ಕರ್‌ರನ್ನು ದಲಿತ ನಾಯಕ ಪಟ್ಟದಾಚೆ ನೋಡಲು ನಿರಾಕರಿಸುತ್ತಿರುವುದೂ ಆಗಿದೆ. ಈ ವಿಷವ್ಯೂಹದಿಂದ ಅಂಬೇಡ್ಕರ್‌ರನ್ನು ಬಿಡುಗಡೆಗೊಳಿಸುವ ಏಕೈಕ ಮಾರ್ಗವೆಂದರೆ, ದಲಿತ ರಾಜಕಾರಣದ ಆಚೆಗೂ ವಿಸ್ತರಿಸುವ ಅವರ ರಾಜಕೀಯ ಚರಿತ್ರೆ ಮತ್ತು ಪಾಂಡಿತ್ಯವನ್ನು ಮುಖ್ಯವಾಹಿನಿ ರಾಜಕಾರಣದೊಂದಿಗೆ ಅನುಸಂಧಾನಗೊಳಿಸುವುದು ಮತ್ತು ಅವರ ರಾಜಕಾರಣದ ಕೇಂದ್ರ ಕಾರ್ಯಕ್ರಮವಾಗಿದ್ದ 'ಜಾತಿ ವಿನಾಶ'ವನ್ನು ನಮ್ಮ ಸಂವಿಧಾನದ ಮುಖ್ಯಉದ್ದೇಶಗಳಲ್ಲೊಂದನ್ನಾಗಿ ಮಾಡುವುದು. ಇದಕ್ಕೆ ಮುಖ್ಯವಾಗಿ ಇಂದಿನ ದಲಿತ ರಾಜಕೀಯ ನಾಯಕರು ಮೊದಲ ಹೆಜ್ಜೆ ಇಡಬೇಕಿದೆ. ಆದರೆ ಅದು ಸಾಧ್ಯವೇ? ಈ ಮುಂದಿನ ಪುಟಗಳಲ್ಲಿನ ಬರಹಗಳು ಈ ಪ್ರಶ್ನೆಯ ಸುತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿವೆ. ಓದಿ, ಬರೆಯಿರಿ.–**ಸಂ.**

ಮೇ, ೨೦೧೫

ಜನತೆಯೇ ಈಗ ವಿರೋಧ ಪಕ್ಷವಾಗಬೇಕಾಗಿದೆ...

ಪ್ರಿಯ ಓದುಗರೇ,

ರಾಷ್ಟ್ರ ಈ ವರ್ಷ ಶೇ. ೭.೫ರ ದರದಲ್ಲಿ ಬೆಳವಣಿಗೆ ಸಾಧಿಸಿ ಚೀನಾವನ್ನು ಹಿಂದಿಕ್ಕಲಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್ ಒಕ್ಕೊರಲಿನಿಂದ ಘೋಷಿಸಿ, ಮೋದಿ ನೇತೃತ್ವದ ಸರ್ಕಾರಕ್ಕೆ ಅರ್ಹತಾ ಪತ್ರ ನೀಡುತ್ತಿರುವಂತೆಯೇ, ಮತ್ತೆ ರಾಷ್ಟ್ರಾದ್ಯಂತ-ವಿಶೇಷವಾಗಿ ಮಧ್ಯ ಭಾರತದಲ್ಲಿ-ರೈತರ ಸರಣಿ ಆತ್ಮಹತ್ಯೆಗಳು ಶುರುವಾಗಿವೆ. ಇಂದು ದಿನವೊಂದಕ್ಕೆ ೪೭ ಜನ ರೈತರು ಬೆಳೆನಾಶ ಅಥವಾ ಸಾಲದ ಬಾಧೆಯಿಂದ ಅಸಹಾಯಕರಾಗಿ ಪ್ರಾಣಬಿಡುತ್ತಿದ್ದಾರೆ. ಇದು ಭಾರತ ಕಳೆದ ಇಪ್ಪತ್ತೈದು ವರ್ಷಗಳಿಂದ ಆರ್ಥಿಕ 'ಸುಧಾರಣೆ'ಗಳೆಂಬ ಕಪಟ ಹೆಸರಿನಲ್ಲಿ ಅನುಸರಿಸಿಕೊಂಡು ಬರುತ್ತಿರುವ ಒಂದು ಜನವರ್ಗದ ಗೋರಿಯ ಮೇಲೆ ಇನ್ನೊಂದು ಜನವರ್ಗದ ಅರಮನೆ ಕಟ್ಟುವ ನವ ಉದಾರವಾದಿ ಅಭಿವೃದ್ಧಿ ನೀತಿಯಲ್ಲಿ ಅಡಗಿರುವ ಕ್ರೌರ್ಯವೇ ಆಗಿದೆ. ಈ ಮಧ್ಯೆ ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮಾ ಬೇರೆ ಮೋದಿಯವರ ನಾಯಕತ್ವ ಗುಣವನ್ನು ಶ್ಲಾಘಿಸಿ 'ನ್ಯೂಯಾರ್ಕ್ ಟೈಮ್ಸ್'ನಲ್ಲಿ ಲೇಖನ ಬರೆದಿದ್ದಾರಂತೆ! ಇದಕ್ಕೆ ಪ್ರತಿಕ್ರಿಯಿಸಿರುವ ರಾಹುಲ್ ಗಾಂಧಿ, ಮೋದಿ ನೀತಿಯಿಂದ ಅಮೆರಿಕಾಕ್ಕೆ ಲಾಭವಾಗುತ್ತಿರುವುದರಿಂದಲೇ ಒಬಾಮಾ ಇದನ್ನು ಬರೆದಿರುವುದು ಎಂದು ಹೇಳುವ ಮೂಲಕ ತನ್ನ ತಲೆಯಲ್ಲೂ ಒಂದಿಷ್ಟು ರಾಜಕೀಯ ಬುದ್ಧಿವಂತಿಕೆ ಇದೆಯೆಂಬುದನ್ನು ತೋರ್ಪಡಿಸಿದ್ದಾರೆ. ಅವರಿಗೆ ಮನಮೋಹನ ಸಿಂಗ್-ಜಾರ್ಜ್ ಬುಷ್‌ರ ದುರಂತ ಪ್ರೇಮ ಕಥೆ ನೆನಪಿಗೆ ಬಂದಿರಬೇಕು!

ಮನಮೋಹನ ಸಿಂಗ್ ಸರ್ಕಾರ ಕೈಗೊಳ್ಳುತ್ತಿದ್ದ ನವ ಉದಾರವಾದಿ ನೀತಿಗಳನ್ನೆಲ್ಲ-ಪರಮಾಣು ಸಹಕಾರ ಒಪ್ಪಂದ, ವಿಮಾ ಮಸೂದೆ, ವಿದೇಶಿ ನೇರ ಬಂಡವಾಳ ಹೂಡಿಕೆ ಇತ್ಯಾದಿ-ರಾಷ್ಟ್ರೀಯತೆಯ ಹೆಸರಿನಲ್ಲಿ ವಿರೋಧಿಸಿದ ಬಿಜೆಪಿ ಈಗ ಅವೆಲ್ಲವನ್ನೂ

ತನ್ನ ಅಧಿಕಾರಾವಧಿಯ ಮೊದಲ ವರ್ಷದಲ್ಲೇ ಬಲಿಷ್ಠ ಭಾರತದ ಹೆಸರಿನಲ್ಲಿ ಜಾರಿಗೆ ತಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿದೆ. ಇಂತಹ ಆತ್ಮದ್ರೋಹದ ರಾಜಕಾರಣದ ಭಾಗವಾಗಿಯೇ ಅದು ಈಗ ತನ್ನ ಆರ್ಥಿಕ ಅಭಿವೃದ್ಧಿ ನೀತಿಯ ದಿಕ್ಕನ್ನು ದೇಶದ ನಗರೀಕರಣವೆಂಬ ಏಕೈಕ ಕಾರ್ಯಕ್ರಮದತ್ತ ತಿರುಗಿಸಿ ಗ್ರಾಮೀಣ ಭಾರತಕ್ಕೆ ಔಪಚಾರಿಕ ಗಮನವನ್ನಷ್ಟೇ ನೀಡಿದೆ. ಇದು ಅದರ ಮೊದಲ ಮುಂಗಡ ಪತ್ರದಲ್ಲೇ ಪ್ರತಿಬಿಂಬಿತವಾಗಿದೆ. ಗ್ರಾಮೀಣ ಪ್ರದೇಶದ ಕೃಷಿ, ಮೂಲಭೂತ ಸೌಕರ್ಯಗಳು ಮತ್ತು ಉದ್ಯೋಗ ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದ ಖರ್ಚುಗಳನ್ನು ಗಮನಾರ್ಹವಾಗಿ ಕಡಿತಗೊಳಿಸಿರುವ ಈ ಸರ್ಕಾರ ನಗರ ಮೂಲ ಸೌಕರ್ಯ, ಬೃಹತ್ ಕೈಗಾರಿಕಾ ಸಂಕೀರ್ಣಗಳು ಇತ್ಯಾದಿ ನಗರೀಕರಣ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣವನ್ನು ನಿಗದಿ ಮಾಡಿದೆಯಲ್ಲದೆ, ಬಂಡವಾಳಶಾಹಿ ಉದ್ಯಮಗಳಿಗೆ ವ್ಯಾಪಕ ತೆರಿಗೆ ವಿನಾಯ್ತಿಗಳನ್ನು ಪ್ರಕಟಿಸಿದೆ. ಜೊತೆಗೆ ಈ ರೀತಿಯ ಅಭಿವೃದ್ಧಿಗೆ ಅಡ್ಡಿಯಾಗುತ್ತಿದೆಯೆಂದು ಪರಿಸರ ರಕ್ಷಣೆಯ ಕಾನೂನುಗಳನ್ನು ದುರ್ಬಲಗೊಳಿಸಿದೆ.

ಗ್ರಾಮೀಣ ಭಾರತ ಪೂರ್ಣವಾಗಿ ಹಾಳುಕೊಂಪೆಯಾಗಿ ಪರಿವರ್ತಿತವಾಗಿ ಜನ ನಗರಗಳಿಗೆ ಗುಳೆ ಹೋಗಿ ಬಂಡವಾಳಿಗರ ಕೃಪಾ ಕಟಾಕ್ಷದಲ್ಲಿ ದುಡಿಯುವುದನ್ನು ಅನಿವಾರ್ಯ ಮಾಡುವ ಪ್ರಜ್ಞಾಪೂರ್ವಕ ರಾಜಕೀಯ ಕಾರ್ಯಕ್ರಮವಿದು. ಭಾರತದ ಸನಾತನ ಸಂಸ್ಕೃತಿಯ ಬಗ್ಗೆ ಉಮ್ಮಳಿಸಿಕೊಂಡು ಮಾತನಾಡುವ ಜನರೇ ತುಂಬಿರುವ ಪಕ್ಷದ ಈ ಸರ್ಕಾರ ರಾಷ್ಟ್ರ, ಸಂಸ್ಕೃತಿ, ಅಭಿವೃದ್ಧಿ ಇತ್ಯಾದಿ ಮೂಲ ಸಂಗತಿಗಳ ಅರ್ಥಗಳನ್ನಾಗಲೀ, ಅವುಗಳ ನಡುವಣ ಸಂಬಂಧಗಳ ಸೂಕ್ಷ್ಮಗಳನ್ನಾಗಲೀ ಅರಿಯದೆ, ಈ ದೇಶವನ್ನು ಒಂದು ಆಂತರಿಕ ವಸಾಹತುಶಾಹಿ ವ್ಯವಸ್ಥೆಯನ್ನಾಗಿ ಮಾರ್ಪಡಿಸಲು ಹೊರಟಂತಿದೆ. ಹೇಗೂ ಬಿಜೆಪಿ ತಾತ್ವಿಕವಾಗಿ ವರ್ಣ ವ್ಯವಸ್ಥೆಯ ಹಿಂದಿನ 'ವೈಜ್ಞಾನಿಕ'ತೆಯನ್ನು ಒಪ್ಪಿಕೊಂಡಿರುವ ಪಕ್ಷವೇ ಆಗಿದ್ದು, ಅದೀಗ ವರ್ಣ ವ್ಯವಸ್ಥೆಯ ಆಧುನಿಕ ರೂಪಾಂತರಕ್ಕೆ ಮಧ್ಯವರ್ತಿಯಾಗಲು ಹೊರಟಂತಿದೆ. ರೈತರ ಆತ್ಮಹತ್ಯೆ ಈ ಅಪಾಯಕಾರಿ ರಾಜಕೀಯ ಕಾರ್ಯಕ್ರಮದ ದುರಂತಮಯ ಪರಿಣಾಮಗಳ ಮುನ್ಸೂಚನೆಯೇ ಆಗಿದೆ.

ನಿಜ, ಇದೇನೂ ಬಿಜೆಪಿ ಸರ್ಕಾರಕ್ಕೇ ವಿಶಿಷ್ಟವಾದ ರಾಜಕೀಯ ಕಾರ್ಯಕ್ರಮವೇನಲ್ಲ. ಮನಮೋಹನ ಸಿಂಗ್‌ರ ನೇತೃತ್ವದ ಕಾಂಗ್ರೆಸ್ ಸರ್ಕಾರವಿದ್ದಾಗಲೂ ರೈತರ ಸರಣಿ ಆತ್ಮಹತ್ಯೆಗಳು ನಡೆದಿದ್ದವು. ಅದಕ್ಕೂ ಕಾರಣವಾಗಿದ್ದುದು, ಜಾಗತಿಕ ಹಣಕಾಸು ಸಂಸ್ಥೆಗಳಿಂದ ನಿರ್ದೇಶಿತವಾಗಿದ್ದ ಮನಮೋಹನ ಸಿಂಗ್‌ರ ನಗರೀಕರಣ ನೀತಿಯೇ. ಆದರೆ ಕಾಂಗ್ರೆಸ್‌ನೊಳಗೆ ಮತ್ತು ಹೊರಗೆ ಎರಡೂ ಕಡೆಯಿಂದ ಅದಕ್ಕೆ ವಿರೋಧ ವ್ಯಕ್ತವಾಗಿ ಆ ನೀತಿಯನ್ನು ಕ್ರಮೇಣ ಪರಿಷ್ಕರಿಸಿ ಪರಿಸ್ಥಿತಿಯನ್ನು ತಹಬಂದಿಗೆ ತರಲಾಗಿತ್ತು.

ಈ ಹೊಸ ಸರ್ಕಾರ ಮತ್ತೆ ಅದೇ ನೀತಿಯನ್ನು ಅನುಸರಿಸುತ್ತಿದೆಯೆಂದರೆ ಭಾರತದ ರಾಜಕಾರಣದ ಸೂತ್ರಗಳು ಮೂಲತಃ ಯಾರ ಕೈಯಲ್ಲಿವೆ ಎಂಬುದು ಗೊತ್ತಾಗುತ್ತದೆ. ಸದ್ಯದ ಅಪಾಯವೆಂದರೆ ಬಿಜೆಪಿ ಒಂದು ಸರ್ವಜ್ಞ ಗರ್ವದ ಪಕ್ಷವಾಗಿದ್ದು, ಅದರ ಈಗಿನ ನಾಯಕತ್ವವೂ ಅದಕ್ಕೆ ತಕ್ಕಂತಿದ್ದು, ಅದಕ್ಕೆ ಸಂಸತ್ತಿನಲ್ಲಿ ಗಣನೀಯವೆನ್ನಬಹುದಾದ ವಿರೋಧವೇ ಇಲ್ಲದಾಗಿದೆ. ಈಗ ಏನಿದ್ದರೂ ಜನತೆಯೇ ವಿರೋಧ ಪಕ್ಷವಾಗಿ ಸಂಘಟಿತವಾಗಬೇಕಿದೆ. ಈ ಸರ್ಕಾರದ ಆತ್ಮದ್ರೋಹಿ ರಾಜಕಾರಣದ ಸಂಕೇತದಂತಿರುವ ಭೂಸ್ವಾಧೀನ ಕಾಯಿದೆ ತಿದ್ದುಪಡಿಗೆ ಜನತೆಯ ವಿರೋಧ ಸತತವಾಗಿ ವ್ಯಕ್ತವಾಗುತ್ತಿರುವುದು ಈ ದಿಕ್ಕಿನಲ್ಲಿ ಒಂದು ಶುಭ ಸೂಚನೆಯೇ ಆಗಿದೆ.

ಕಾಂಗ್ರೆಸ್ ಭ್ರಷ್ಟವಾಗಿ ಹೋಗಿ ತನ್ನೆಲ್ಲ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವ ಮತ್ತು ಎಡ ಪಕ್ಷಗಳು ತಾತ್ವಿಕವಾಗಿ ದಿವಾಳಿಯೆದ್ದು ಹೋಗಿರುವ ಇಂದಿನ ಸಂದರ್ಭದಲ್ಲಿ ಬಿಜೆಪಿಯ ನಗ್ನ ಬಂಡವಾಳಶಾಹಿ ರಾಜಕಾರಣವನ್ನು ಎದುರಿಸಬಲ್ಲ ಒಂದು ವಿಶ್ವಾಸಾರ್ಹ ಜನ ಸಂಘಟನೆಯ ಅಗತ್ಯ ಈಗ ಎದ್ದು ಕಾಣುತ್ತಿದೆ. ಜನತಾ ಪರಿವಾರದ ಐಕ್ಯತೆ ಒಂದು ಅವಕಾಶವಾದಿ ರಾಜಕೀಯ ನಡೆಯಂತೆ ಮಾತ್ರ ಸದ್ಯಕ್ಕೆ ಕಾಣುತ್ತಿದ್ದು, ಅದರ ಮುಂದಿನ ಚಾಲೂ-ಚಹರೆಗಳನ್ನು ಕಾದು ನೋಡಬೇಕಿದೆ. ಇನ್ನು ನಮ್ಮ ಭರವಸೆಯ ಬೆಳಕಿನಂತಿದ್ದ ಆಂ ಆದ್ಮಿ ಪಕ್ಷ ಈಗ ಮುಟ್ಟಿರುವ ಅವಸ್ಥೆಯಲ್ಲಿ ಅದು ದೆಹಲಿಯಾಚೆ ಕಾಲಿಡುವ ಮುಖವನ್ನು ಕಳೆದುಕೊಂಡಿದೆ. ನಮ್ಮೆಲ್ಲರ ನಾಯಕನಾಗಿ ಕಂಗೊಳಿಸಿದ್ದ ಕೇಜ್ರಿವಾಲ್ ಎಂಬ ವ್ಯಕ್ತಿ ಬೇರುಮಟ್ಟದ ಪ್ರಜಾಪ್ರಭುತ್ವವೇ ಜೀವಾಳವಾಗಿರುವ ಸ್ವರಾಜ್ಯ ತತ್ವದ ಮುಖವಾಡ ಹೊತ್ತ ಎಂತಹ ನಿರ್ಮಮ ಸರ್ವಾಧಿಕಾರಿ ಎಂದು ಪಕ್ಷದ ಇತ್ತೀಚಿನ ನಡಾವಳಿಗಳಿಂದ ಗೊತ್ತಾಗತೊಡಗಿ ಎಲ್ಲರೂ ತಲ್ಲಣಿಸುವಂತಾಗಿದೆ. ಇದರ ಮುಖ್ಯ ಬಲಿಗಳಾಗಿ ನಮ್ಮ ಸಹಾನುಭೂತಿಗೆ ಪಾತ್ರರಾಗಿರುವ ಯೋಗೇಂದ್ರ ಯಾದವ್ ಮತ್ತು ಪ್ರಶಾಂತ್‌ಭೂಷಣರೂ ಇದಕ್ಕೆ ಕಾರಣವೆಂದು ಹೇಳಬೇಕಿದೆ. ಕೇಜ್ರಿವಾಲ್‌ರ ಬೀದಿ ರಾಜಕಾರಣದ ಜನಪ್ರಿಯತೆಗೆ ಮಾರು ಹೋಗಿ ಆಪ್‌ನ್ನು ಒಂದು ಖಚಿತ ತಾತ್ವಿಕ ರಾಜಕೀಯ ಪಕ್ಷವಾಗಿ ರೂಪಿಸುವಲ್ಲಿ ರಾಜಿ ಮಾಡಿಕೊಂಡಿದ್ದು (ಇದರ ವಿವರವಾದ ಚರ್ಚೆಗಾಗಿ ಈ ಪತ್ರಿಕೆಯ ೨೦೧೪ರ ಮೇ ಸಂಚಿಕೆಯ ಸಂಪಾದಕೀಯವನ್ನು ಗಮನಿಸಿ) ಒಂದು ನಿರ್ಣಾಯಕ ತಪ್ಪೆಂದು ಈಗ ಸಾಬೀತಾಗಿದೆ. ಅದೇನೇ ಇರಲಿ, ಆಪ್‌ನ ಮೂಲಸ್ಫೂರ್ತಿ ಆರದಿರಲಿ. ಯೋಗೇಂದ್ರ-ಪ್ರಶಾಂತ್ ಭೂಷಣ್ ಜೋಡಿಯ ಹೊಸ ಪ್ರಯತ್ನಕ್ಕೆ ನಮ್ಮ ಬೆಂಬಲವನ್ನು ಕಾದಿರಿಸೋಣ.

ಈ ಮಧ್ಯೆ ನಮ್ಮ ಮುಖ್ಯಮಂತ್ರಿಗಳು ಕೇಜ್ರಿವಾಲ್‌ರಿಂದ ಸ್ಫೂರ್ತಿ ಪಡೆದಂತೆ ಬಡವರಿಗಾಗಿ ಅಕ್ಕಿಯನ್ನು ಪುಕ್ಕಟೆ ನೀಡಲು ಹೊರಟಿದ್ದಾರೆ! ಇದು ಜನಪ್ರಿಯ ರಾಜಕಾರಣದ ಅತ್ಯಂತ ಬೇಜವಾಬ್ದಾರಿ ರೂಪವೇ ಸರಿ.

ಹೆದ್ದೂರ ಶೆಟ್ಟರ ಲೋಹಿಯಾ ಅವಹೇಳನದ ಇನ್ನೊಂದು ವರಸೆ!

ಲೋಹಿಯಾ ಅವರ ವ್ಯಕ್ತಿತ್ವ ಮತ್ತು ವಿಚಾರಗಳನ್ನು ಹಲವು ಪರಿಯಲ್ಲಿ ಅವಹೇಳನ ಮಾಡಿ ಅನುಮಾನಾಸ್ಪದಗೊಳಿಸಲೆಂದೇ ಒಂದೆರಡು ವರ್ಷಗಳ ಹಿಂದೆ ಪುಸ್ತಕವೊಂದನ್ನು ಬರೆದ ಬಾಪು ಹೆದ್ದೂರ ಶೆಟ್ಟರು ಅದನ್ನೀಗ ಮರುಮುದ್ರಿಸಿ ಗುರಿ ಇಟ್ಟು ಪುಕ್ಕಟೆ ಹಂಚುತ್ತಿರುವುದರ ಜೊತೆಗೆ, ಈಗ ಸುಮಾರು ಅದೇ ಉದ್ದೇಶದೊಂದಿಗೆ 'ಸಮಾಜವಾದ: ವಾದ-ವಿವಾದ' ಎಂಬ ಇನ್ನೊಂದು ಪುಸ್ತಕವನ್ನು ಪ್ರಕಟಿಸಿದ್ದಾರೆ. ಲೋಹಿಯಾ ಅವಹೇಳನಕ್ಕೆಂದೇ ಬರೆದ ತಮ್ಮ ಮೂಲ ಪುಸ್ತಕದಲ್ಲಿಯೇ ಲೋಹಿಯಾ ಹೇಗೆ ಮೂಲತಃ ಸಮಾಜವಾದಿಯೇ ಅಲ್ಲ, ಅವರೊಬ್ಬ ಅರಾಜಕತಾವಾದಿ (ಒಮ್ಮೊಮ್ಮೆ 'ಅನಧಿಪತ್ಯವಾದಿ'ಯೂ!), ಸುಳ್ಳ, ಕಳ್ಳ, ಕಪಟಿ, ಪಕ್ಷ ವಿಭಜಕ, ಫ್ಯಾಸಿಸ್ಟ್ ಎಂದು 'ಸ್ಪಷ್ಟಪಡಿಸಿ' ಬಿಟ್ಟಿರುವಾಗ ಇವರು ಮತ್ತೆ ಮತ್ತೆ ಏಕೆ ಆ 'ಕೇಡಿ' ಲೋಹಿಯಾ ಬಗ್ಗೆ ಇಷ್ಟೊಂದು ವ್ಯಸನಕ್ಕೊಳಪಟ್ಟವರಂತೆ ಬರೆಯುತ್ತಾರೋ ನನಗೆ ತಿಳಿಯದಾಗಿದೆ! ತಮ್ಮ ಪುಸ್ತಕಗಳಲ್ಲಿ ಸಮಾಜವಾದದ ಐರೋಪ್ಯಮೂಲದ ಚರಿತ್ರೆಯ ಬಗ್ಗೆ ನಿಜವಾಗಿಯೂ ಪಾಂಡಿತ್ಯಪೂರ್ಣವಾಗಿ ಬರೆಯುವ ಹೆದ್ದೂರಶೆಟ್ಟರು, ಭಾರತದಲ್ಲಿ ಸಮಾಜವಾದ ತನ್ನದೇ ಅಸ್ತಿತ್ವ-ಅಸ್ಮಿತೆಗಳನ್ನು ಕಂಡುಕೊಂಡ ಬಗ್ಗೆ ಹೊಂದಿರುವ ಅನುಮಾನ-ಅಸಡ್ಡೆಗಳೇ ಲೋಹಿಯಾ ಕುರಿತ ಇವರ ಈ ಪರಿಯ ಪೂರ್ವಗ್ರಹ, ಕ್ರೋಧ ಮತ್ತು ವ್ಯಸನಕ್ಕೆ ಕಾರಣವಾಗಿವೆಯೆಂದು ಈ ಪುಸ್ತಕವನ್ನೋದಿದಾಗಲೂ ನನಗೆ ಅನ್ನಿಸಿತು.

ಭಾರತದಾದ್ಯಂತ ಸಮಾಜವಾದವೆಂದೊಡನೆ ಯಾರಿಗಾದರೂ ಯಾರ ಹೆಸರು ನೆನಪಿಗೆ ಬರುತ್ತದೆ ಮತ್ತು ಇಂದಿಗೂ ಭಾರತೀಯ ಸಮಾಜವಾದ ಕುರಿತ ಶಾಸ್ತ್ರೀಯ ಮತ್ತು ಜನಪ್ರಿಯ ಚರ್ಚೆಗಳೆರಡರಲ್ಲೂ ಯಾರ ಹೆಸರು ಪದೇ ಪದೇ ಪ್ರಸ್ತಾಪವಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಇಲ್ಲಿ ನಾನು ಈ ಪುಸ್ತಕವನ್ನು ಚರ್ಚಿಸುವ, ಅವರ ವಾದವನ್ನು ಪ್ರಶ್ನಿಸುವ ನಿರರ್ಥಕ ಕೆಲಸಕ್ಕೆ ಮತ್ತೆ ಕೈಹಾಕುವುದಿಲ್ಲ... ಈ ಪುಸ್ತಕದಲ್ಲಿ ಹೆದ್ದೂರಶೆಟ್ಟರು ಹಲವರೊಡನೆ ಎತ್ತಿಕೊಂಡಿರುವ ಪತ್ರ ರೂಪದ 'ಚರ್ಚೆ'ಗಳಲ್ಲಿ ಸೇರಿರುವ ನನ್ನೊಡನೆಯ ಒಂದೆರಡು 'ಚರ್ಚೆ'ಗಳಲ್ಲಿ ನಾನು ಭಾಗವಹಿಸಿ ತಪ್ಪೆಸಗಿದ್ದೇನೆ ಎಂಬ ಅರಿವು ನನಗಾಗಿದೆ. ಹಾಗಾಗಿ ಲೋಹಿಯಾ ಅವರು ಮೂಲ ಸಮಾಜವಾದಿ ಪಕ್ಷವನ್ನು ಬಿಡಲು ಯಾವ ಅನುಕೂಲಸಿಂಧು ಚಿಂತನಾ ಕ್ರಮ ಕಾರಣವಾಯಿತೋ ಆ ಚಿಂತನಾ ಕ್ರಮದ ಪಿತಾಮಹರಾಗಿ ಮಾತ್ರ ಪಕ್ಷವನ್ನು ಗೊಂದಲಕ್ಕೆ ತಳ್ಳಿ ಅಧಿಕಾರಾರೂಢ ಕಾಂಗ್ರೆಸ್ ಪಕ್ಷಕ್ಕೆ ಹಾರಿ, ಕೊನೆಗೆ ಸಂಸ್ಥಾ ಕಾಂಗ್ರೆಸ್ ಎಂಬ ಯಥಾಸ್ಥಿತಿವಾದಿ ಪಕ್ಷದ ಅಧ್ಯಕ್ಷರಾಗಬೇಕಾಗಿ ಬಂದ ಆ ಅಶೋಕ ಮೆಹ್ತಾರೇ ಭಾರತೀಯ ಸಮಾಜವಾದದ ಮುಂಚೂಣಿ ಚಿಂತಕ ಎಂದು ಮತ್ತು ನಮ್ಮ ಎಸ್. ಎಂ. ಕೃಷ್ಣರೇ ಆ 'ಉಜ್ವಲ' ಪರಂಪರೆಯ ವರ್ತಮಾನದ ಪ್ರತೀಕ ಎಂದು ಹೆದ್ದೂರಶೆಟ್ಟಿ ಮತ್ತು ಅವರ ಗೆಳೆಯರು ನಂಬುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಬದನವಾಳು ಸತ್ಯಾಗ್ರಹವೂ, ಸ್ವರಾಜ್ಯವೂ....

ಪ್ರಸನ್ನ ಅವರ 'ಸುಸ್ಥಿರ ಬದುಕು' ಕುರಿತ ರಾಷ್ಟ್ರೀಯ ಸಮಾವೇಶ ಬದನವಾಳುವಿನಲ್ಲಿ ಮುಗಿದಿದೆ. ಯಶಸ್ವಿಯಾಗಿಯೂ ಮುಗಿದಿದೆ ಎಂದು ಪತ್ರಿಕೆಗಳೂ ಹೇಳುತ್ತಿವೆ, ಗೆಳೆಯರೂ ಹೇಳುತ್ತಿದ್ದಾರೆ. ಪ್ರಸನ್ನ ಒಳ್ಳೆಯ ಮಾಧ್ಯಮ ನಿರ್ವಾಹಕರು; ಹಾಗೇ ಬಹು ಒಳ್ಳೆಯ ರಂಗ ನಿರ್ವಾಹಕರೂ ಕೂಡ. ಹಾಗಾಗಿ ಅದು ನಿರ್ವಹಣೆಯ ದೃಷ್ಟಿಯಿಂದ ಯಶಸ್ವಿಯಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಅದಕ್ಕಾಗಿ ಪ್ರಸನ್ನರನ್ನು ಮೊದಲಿಗೆ ಅಭಿನಂದಿಸಬೇಕು.

ಪ್ರಸನ್ನ ಅವರ ಎಂದಿನ ಎಲ್ಲ ಸಾಹಸಗಳಂತೆಯೇ ಇದು ಕೂಡ ರಾಷ್ಟ್ರೀಯ ಸಮಾವೇಶ. ಅದು ಅಂತಾರಾಷ್ಟ್ರೀಯ ಆಗದಿದ್ದುದು ನಮ್ಮ ಪುಣ್ಯ! ಪ್ರಸನ್ನ ತಮ್ಮ ಹಲವು ಜಿಗಿತಗಳ (ಇತ್ತೀಚಿನದು ಗಜೇಂದ್ರಗಡದಿಂದ ಬದನವಾಳುವಿಗೆ!) ಸಾಹಸಮಯ ಬದುಕಿನ ಭಾಗವಾಗಿ ರೂಢಿಸಿಕೊಂಡ ಎಲ್ಲ ಸಂಪರ್ಕಗಳನ್ನೂ ಬಳಸಿ ಬದನವಾಳುವನ್ನು ಕೆಲವು ದಿನಗಳ ಮಟ್ಟಿಗಾದರೂ ಒಂದು ಕುತೂಹಲದ ಕೇಂದ್ರವನ್ನಾಗಿಸಿದರು. ಪತ್ರಿಕೆ ಓದುವ ಎಲ್ಲರೂ 'ಸುಸ್ಥಿರ ಬದುಕು' ಎಂಬ ಪರಿಕಲ್ಪನೆ ಬಗ್ಗೆ ಕುತೂಹಲ ತಾಳಿದರು. ಕುತೂಹಲ ಮಿತಿ ಮೀರಿದವರು ಬದನವಾಳುವಿಗೂ ಹೋದರು. ಇವರ ಜೊತೆಗೆ ಈ ಹಿಂದೆ ಹಲವು ರೀತಿಯ ಚಳುವಳಿಗಳನ್ನು ಮಾಡಿ ಸೋತು ಸುಣ್ಣವಾದವರು, ಇದರಿಂದೇನಾದರೂ ಆಗುತ್ತದೇನೋ ಎಂಬ ಆಸೆಯಿಂದ ಅಲ್ಲಿ ಸೇರಿದರು. ಜೊತೆಗೆ ಜಾಗತೀಕರಣದ ಬದುಕಿನ ಕ್ರಮಗಳಿಂದ ಬೇಸತ್ತು ದಿಕ್ಕುಗಾಣದವರಾಗಿದ್ದ ಸಾಮಾನ್ಯ ಜನರೂ ಅಲ್ಲಿಗೆ ಹೋದರು. ಪ್ರಸನ್ನ, ಅವರಿಗೆಲ್ಲ ಒಂದು ಹೊಸ ಶಬ್ದದ ಮೋಡಿಯಲ್ಲಿ ಕನಸು ಕಟ್ಟಿಕೊಟ್ಟರು. ಆ ಕನಸಲ್ಲಿ ಅಲ್ಲಿ ಸೇರಿದ್ದ ಜನ ಸಂಭ್ರಮಿಸಿದರು.

ಆದರೆ ಪ್ರಶ್ನೆ ಈ ಕನಸು ಅಲ್ಲಿಗೆ ಹೋದವರ, ಅದರ ಬಗ್ಗೆ ಕುತೂಹಲ, ಆಸಕ್ತಿ ತಾಳಿದವರ ಪಾಲಿಗೆ ಕೇವಲ ಒಂದು ದಿನದ ಕನಸಾಗಿ, ಸಂಭ್ರಮದ ನೆನಪಾಗಿ ಉಳಿಯುವುದೋ ಅಥವಾ ಅದು ನನಸಾಗುವ ಸಾಧ್ಯತೆಗಳನ್ನು ತನ್ನ ಒಡಲಿನಲ್ಲಿ ಹೊತ್ತುಕೊಂಡಿದೆಯೋ ಎಂಬುದು. ಏಕೆಂದರೆ ಇಂತಹ ಆಸೆ ಹುಟ್ಟಿಸುವ 'ಈವೆಂಟ್'ಗಳು ಸ್ವಾತಂತ್ರ್ಯ ಹೋರಾಟದ ಕನಸುಗಳು ಭಗ್ನಗೊಳ್ಳಲಾರಂಭಿಸಿದ ಕಳೆದ ಐವತ್ತು ವರ್ಷಗಳಲ್ಲಿ ನಮ್ಮ ಕಣ್ಮುಂದೆಯೇ ಬಹಳ ನಡೆದುಹೋಗಿವೆ; ನಮ್ಮನ್ನು ನಿರಾಶೆ-ಹತಾಶೆಗಳಲ್ಲಿ ಮುಳುಗಿಸಿವೆ. ಇತ್ತೀಚಿನ ಈವೆಂಟ್ ಅಂದರೆ 'ಆಂ ಆದ್ಮಿ ಪಾರ್ಟಿ' ಎಂಬ ಈಗ ಭಗ್ನಗೊಂಡಿರುವ ಕನಸು. ಇದೊಂದನ್ನೇ ಪರಿಶೀಲಿಸಿ ನೋಡಿದರೆ ನಮಗೆ ಗೊತ್ತಾಗುವುದು, ನಮ್ಮ ನಿರಾಶೆ-ಹತಾಶೆಗೆ ಕಾರಣವಾದದ್ದೆಂದರೆ, ಅದು ನಿಜವಾಗಿಯೂ ನಮ್ಮದಾಗದೆ ಅಥವಾ ನಮ್ಮದನ್ನಾಗಿ ಮಾಡಿಕೊಳ್ಳುವ ಪ್ರಯತ್ನವನ್ನೇ ಮಾಡದೆ

ನಮ್ಮದೆಂದು ಭಾವಿಸಿದ್ದು. ಇದು ನಮ್ಮ ಮಧ್ಯಮ ವರ್ಗದ ಸುಲಭ ಕನಸುಗಾರಿಕೆಯ ದುರಂತಗಳಲ್ಲೊಂದು.

ಮೊನ್ನೆ ಸಮಾನ ಮನಸ್ಕರೇ ಆದ ಗೆಳೆಯರೊಬ್ಬರು ಕರೆ ಮಾಡಿ ನನಗೊಂದು ಪ್ರಶ್ನೆ ಕೇಳಿದರು. 'ಈ ಬದನವಾಳು ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ ಪ್ರಸನ್ನ ಅವರ ಸಂದರ್ಶನವೊಂದು ಈ ಭಾನುವಾರದ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದೆಯಲ್ಲಾ, ಅದರ ಜೊತೆಗಿರುವ ಪ್ರಸನ್ನ ಅವರ ಫೋಟೋ ನೋಡಿದಿರಾ? ಅವರ ಆ ಫೋಟೋ, ಆ ಭಂಗಿಗಳನ್ನು ನೋಡಿದರೆ ಇದೊಂದು ನೆಲಬಿಟ್ಟು ಮೇಲೇಳಲಾಗದ ಆಂದೋಲನ ಅಂತ ತಕ್ಷಣ ನಿಮಗೆ ಅನ್ನಿಸಿಬಿಡುವುದಿಲ್ಲವೇ?' ಅವರ ಮಾತುಗಳ ಹಿಂದಿದ್ದ ನೇರ ಪ್ರಶ್ನೆ: ಸುಸ್ಥಿರ ಬದುಕು ಅಂದರೆ, ಹ್ಯಾಪಮೋರೆಯನ್ನು ಸೃಷ್ಟಿಸುವ ವ್ರತನಿಷ್ಠ ಬಡತನದ ಬದುಕೆ? ನಿಜವಾಗಿ ಇವರ ಹಿಂದೆ ಹೋಗಬಯಸುವವರೆಷ್ಟು ಜನ? ಗಾಂಧಿಯಂತಹ ಗಾಂಧಿಯೇ ತಮ್ಮೆಲ್ಲ ಸಂದರ್ಭದ ಚಿತ್ರಗಳಲ್ಲೂ ಸುಖ-ನೆಮ್ಮದಿ-ಸ್ಫೂರ್ತಿಗಳನ್ನು ಸೂಸುತ್ತಿದ್ದರಲ್ಲವೇ? ಏನೇ ಆಗಲಿ, ಇಂದು ನಮಗೆ ಬೇಕಿರುವುದು, ಗಾಂಧಿ ಅಥವಾ ಮರಿ ಗಾಂಧಿಗಳ ಪುನರುತ್ಪಾದನೆಯಲ್ಲ. ಬದಲಿಗೆ, ಇಂದಿಗೆ ಬೇಕಾದ, ಇಂದಿಗೆ ಸಲ್ಲುವ ಗಾಂಧಿಯನ್ನು ಕಂಡುಕೊಳ್ಳುವುದು. ಅಂದರೆ ಮನುಷ್ಯ ಜಾಗದಲ್ಲಷ್ಟೇ ಅಲ್ಲದೆ ಕಾಲದಲ್ಲೂ ಬದುಕುತ್ತಾನೆಂದು ಅರಿತು ಅವನ ಸಾಮಾನ್ಯ ಆಸೆ-ಆಕಾಂಕ್ಷೆಗಳನ್ನು ಮಾನ್ಯ ಮಾಡುವಂತಹ ಒಂದು ಮಧ್ಯಮ ಮಾರ್ಗವನ್ನು ಕಂಡುಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆಂದಷ್ಟೇ ನಾನು ಹೇಳುವುದು.

ಅಂದ ಮಾತ್ರಕ್ಕೇ ನಾಯಕರೊಬ್ಬರ ಒಂದು ಫೋಟೋದಿಂದಲೇ ಅವರು ಎತ್ತಿ ಹಿಡಿಯುವ ಬದುಕಿನ ಮಾದರಿಯನ್ನು ತಿಳಿದುಬಿಡುಬಹುದೆಂದಲ್ಲ. ಆದರೆ ನನ್ನ ಗೆಳೆಯರ ಈ ಮಾತುಗಳು ನಾನು ಈ ಸುಸ್ಥಿರ ಬದುಕು ಎಂಬ ಶಬ್ದದ ಹಿಂದೆ ಬೀಳಲು ಪ್ರೇರೇಪಿಸಿತು. ಸುಸ್ಥಿರ ಅನ್ನುವುದು ಕನ್ನಡ ಜಾಯಮಾನದ ಅಥವಾ ಈ ನೆಲದ ಬದುಕಿನಿಂದ ಚಿಮ್ಮಿದ ಶಬ್ದವಲ್ಲ. ಹಾಗಾಗಿಯೇ ಅದು ನಮ್ಮ ಕಿವಿಗೆ ಬೀಳುವ ಪ್ರಕ್ರಿಯೆಯಲ್ಲೇ ತನ್ನ ಅಸ್ಪಷ್ಟತೆಯನ್ನು ಹುಟ್ಟಿಸಿಕೊಳ್ಳುತ್ತದೆ. ಅದು ಬಂಡವಾಳಶಾಹಿ ಆರ್ಥಿಕತೆಯ ಮೀಟುಗೋಲಾದ 'ಅಭಿವೃದ್ಧಿ'ಯನ್ನು ಸುಶ್ರಾವ್ಯ ಶಬ್ದವಾಗಿ ಕೇಳಿಸುವಂತೆ ಮಾಡಲು ಅದಕ್ಕೆ ಪಕ್ಕವಾದ್ಯದಂತೆ ಜೋಡಿಸಿರುವ ಇಂಗ್ಲಿಷ್‌ನ sustainable ಎಂಬ ಶಬ್ದದ ಸ್ಥೂಲ ಕನ್ನಡಾನುವಾದ! ಆದರೆ 'ಅಭಿವೃದ್ಧಿ'ಗೆ ಜೋಡಿಯಾಗಿ ಚಲಾವಣೆಗೆ ಬಂದ ಈ ಶಬ್ದವನ್ನು ಈಗ ಬದುಕಿಗೂ ಜೋಡಿಸಿ ಸುಸ್ಥಿರ ಬದುಕು ಎಂಬ ಹೊಸ ಜೋಡಿ ಶಬ್ದವನ್ನು ಉತ್ಪಾದಿಸಲಾಗಿದ್ದು, ಅದನ್ನು ವಿವರಿಸಿ ಹೇಳುವ ಏದುಸಿರಿನ ಕೆಲಸ ಈಗ ನಡೆದಿದೆ! ಈ ಏದುಸಿರು ಎದ್ದು ಕಾಣುವುದು, ಅದರ ಯಂತ್ರವಿರೋಧಿ ಮಾತುಗಳ ವರಸೆಯಲ್ಲಿ. ಈ ಮಾತುಗಳನ್ನೆಲ್ಲ ಕೇಳಿದಾಗ ನನ್ನಲ್ಲೆದ್ದ ಪ್ರಶ್ನೆ: ಈ 'ಸುಸ್ಥಿರ ಬದುಕು' ಆಂದೋಲನವನ್ನು ರೂಪಿಸಲಾಗಿರುವುದು, ನಿಜವಾಗಿ ಅನ್ನ ತಿನ್ನುವ ಜನ ಸಾಮಾನ್ಯರಿಗಾಗಿಯೋ ಅಥವಾ ಬರಿ ಕನಸು ಕಾಣುವುದರಲ್ಲೇ ಅರ್ಥ

ಸತ್ತುಹೋಗಿರುವ ಮಧ್ಯಮ ವರ್ಗದ 'ಹೋರಾಟಗಾರ'ರ ಇನ್ನೊಂದು ಕನಸಿನಾಟಕ್ಕಾಗಿಯೋ? ಅಲ್ಲಾ. ರಂಭೆ-ಊರ್ವಶಿಯರು ದಂಡು ದಂಡಾಗಿ ಕಣ್ಣು ಹೊಡೆಯುತ್ತಾ ತಿರುಗಾಡುತ್ತಿರುವ ಸಂತೆಯಲ್ಲಿ ಬ್ರಹ್ಮಚರ್ಯದ ಧರ್ಮೋಪದೇಶ ಮಾಡುವ ಹುಚ್ಚು ಹತ್ತಿಸಿಕೊಂಡವರಿಗೆ ಏನು ಹೇಳುವುದು?

ಜನ ಅದು ತಮ್ಮ ಹಕ್ಕೆಂಬಂತೆ ಸುಖದ ಹುಡುಕಾಟದಲ್ಲಿದ್ದಾರೆ. ಇದು ಸದ್ಯದ ಸತ್ಯ. ಈ ಸತ್ಯವನ್ನು ಮುಖಾಮುಖಿಯಾಗಿಸಿಕೊಳ್ಳದೆ ಯಾವುದೇ ಧರ್ಮೋಪದೇಶದ ಪ್ರಯೋಗವೂ ಕೇವಲ ಒಂದು ಧರ್ಮ ಸಮ್ಮೇಳನವೆಂಬ 'ಸೈಡ್ ಷೋ' ಮಾತ್ರವಾಗಿ ಯಶಸ್ವಿಯೂ ಅನ್ನಿಸಿಕೊಳ್ಳಬಹುದು. ಆದುದರಿಂದ ಇಂದಿನ ಅಗತ್ಯ, ಜನರೇ ತಮ್ಮ ನಿಜ ಧರ್ಮವನ್ನು ಕಂಡುಕೊಳ್ಳುವ ಪಥದೆಡೆಗೆ ಅವರನ್ನು ಸಂಘಟಿಸುವುದು. ಅದು ಸ್ವರಾಜ್ಯದ ಪಥ. ಅದು ಮನುಷ್ಯ ತನ್ನನ್ನು ತಾನೇ ಆಳಿಕೊಳ್ಳುವ ವಿಧಾನಗಳನ್ನು ಕಂಡುಕೊಳ್ಳುವ ರೋಮಾಂಚನಕಾರಿ ಪ್ರಕ್ರಿಯೆ. ಸುಖದ ಹಕ್ಕು ಸ್ಥಾಪನೆಯ ಅಂದಾದುಂದಿಯಲ್ಲಿ ಹೆಚ್ಚಾಗಿ ತನ್ನ ಹೊರಕ್ಕೇ ಹರಿದುಹಂಚಿಹೋಗಿರುವ ಮನುಷ್ಯನನ್ನು ಅವನ ಸಮಗ್ರತೆಯಲ್ಲಿ ಪುನರ್‌ಸಂಘಟಿಸುವ ಕೆಲಸ. ಇದು ಜನ ತಮ್ಮ ಬೇರುಗಳನ್ನು ಹುಡುಕಿಕೊಂಡು ಸಮುದಾಯಗಳ ಒಕ್ಕೂಟವಾಗಿ ತಮ್ಮನ್ನು ಕಂಡುಕೊಂಡು, ತಮ್ಮ ಸಮುದಾಯದ ಭಾಗವಾಗಿ ತಮಗೆ ಯಾವುದು ಒಳ್ಳೆಯದು ಎಂದು ತಾವೇ ನಿರ್ಧರಿಸಿ ಪಡೆದುಕೊಳ್ಳುವ ಸ್ವಾತಂತ್ರ್ಯ ಸುಖದ ರುಚಿ ಹತ್ತಿಸುವ ಸಾವಯವ ಕೆಲಸ. ಇದು ಒಳಗಿಂದ ಮೂಡುವ ತನ್ನದೇ ಆಯ್ಕೆಗಳನ್ನು ಆಧರಿಸಿದ ಸಹಜ ಸುಸ್ಥಿರತೆ. ಅನ್ಯಾಕರ್ಷಣೆಗೆ ಅಥವಾ ಪ್ರಭಾವಕ್ಕೆ ಸಿಕ್ಕಿ ಅಸ್ಥಿರವಾಗುವಂತಹ ಕೃತಕ 'ರಚನೆ'ಯಲ್ಲ.

ನಾನಿನ್ನು ಹೆಚ್ಚು ಮಾತಾಡಿದರೆ ಅದು ಪ್ರಸನ್ನ ಅವರ ಈ ಸಾಹಸಕ್ಕೆ ನನ್ನ ವಿರೋಧವಿದೆ ಎಂಬ ಅರ್ಥ ಪ್ರಾಪ್ತವಾದೀತು. ಆದರೆ ಪ್ರಸನ್ನ ಯಾವ ಉದ್ದೇಶದಿಂದ ಈ ಆಂದೋಲನವನ್ನು ಆರಂಭಿಸಿದ್ದಾರೋ ಆ ಉದ್ದೇಶ ಅವರಿಗೇ ಇನ್ನಷ್ಟು ಸ್ಪಷ್ಟವಾಗಲು ಮತ್ತು ಅದೇ 'ಮೇನ್ ಷೋ' ಆಗಲು ಅದು ಮೊದಲು ಸ್ವರಾಜ್ಯ ಆಂದೋಲನವಾಗಿ ಪರಿವರ್ತಿತವಾಗಬೇಕು ಎಂದಷ್ಟೇ ನಾನು ಹೇಳುವುದು. ಅಂದರೆ ಈ ಸುಸ್ಥಿರ ಆಂದೋಲನ ಸಾವಯವವಾಗಿ ಮೂಡಬೇಕು. ಅದು ರಾಷ್ಟ್ರೀಯ-ಪ್ರಾಷ್ಟ್ರೀಯ ವೇಷಗಳನ್ನೆಲ್ಲ ಬಿಟ್ಟು ಸ್ಥಳೀಯವಾಗಬೇಕು. ಅಂದರೆ ಅದು ನಿಜಾರ್ಥದಲ್ಲಿ ಪ್ರಜಾಪ್ರಭುತ್ವೀಕರಣಕ್ಕೆ ಒಳಗಾಗಿ, ಕನಸುಗಾರಿಕೆಯಲ್ಲಿ ಕಳೆದುಹೋಗದೆ ಜನರ ನಿಜ ಅನುಭವದ ಮೂಸೆಯಲ್ಲಿ ತನ್ನ ಆಕಾರಗಳನ್ನು ಪಡೆಯುತ್ತಾ ವಾಸ್ತವವಾದಿತ್ವವನ್ನು ಸಾಧಿಸಿಕೊಳ್ಳಬೇಕು. ಪ್ರಸನ್ನ, ಗಾಂಧಿ ಗಾಂಧಿ ಎಂದು ಎಷ್ಟೇ ಜಪ ಮಾಡಿದರೂ ಅವರು ತಮ್ಮ ಪೂರ್ವಾಶ್ರಮದ ಮೂಲ ಮಾರ್ಕ್ಸ್‌ವಾದಿ ಮನೋ ಎರಕದಿಂದ ಬಿಡಿಸಿಕೊಳ್ಳಲಾಗಿಲ್ಲ ಎಂದೇ ನನಗನ್ನಿಸುತ್ತಿದೆ.

ಇದೆಲ್ಲವೂ ಸುಸ್ಥಿರ ಬದುಕಿನ ಆಂದೋಲನದ ಸಂಘಟನೆ ಕುರಿತ ನನ್ನ ವೈಯಕ್ತಿಕ ನೋಟದ ಮಾತುಗಳೇ ಹೊರತು, ಅದನ್ನು ಈ ಕಾಲದ ಒಂದು ಮೂಲಸ್ಫೂರ್ತಿಯಾಗಿ ಯಾರೂ ವಿರೋಧಿಸಲಾರರು.-ಸಂ.

ಜೂನ್, ೨೦೧೫

ಸಿದ್ಧರಾಮಯ್ಯನವರಿಗೆ ಕಾಲ ಮಿಂಚಿ ಹೋಗುತ್ತಿದೆ...

ಪ್ರಿಯ ಓದುಗರೇ,

ಕಳೆದ ವಾರ, ಅಂದರೆ ಮೇ ಕೊನೆಯ ವಾರ ರಾಜಕೀಯವಾಗಿ ಜನತೆ ಎರಡು ಮುಖ್ಯ ಕಾಲಘಟ್ಟಗಳನ್ನು ಗಮನಿಸಿತು. ಒಂದು, ಸಿದ್ಧರಾಮಯ್ಯನವರ ಸರ್ಕಾರ ಎರಡು ವರ್ಷಗಳನ್ನು ಪೂರೈಸಿದರೆ, ಕೇಂದ್ರದ ಮೋದಿ ಸರ್ಕಾರ ಒಂದು ವರ್ಷವನ್ನು ಪೂರೈಸಿತು. ಒಂದು ವರ್ಷ ಮೂಲಭೂತ ಬದಲಾವಣೆಗಳ ಆಶ್ವಾಸನೆಗಳ ಮೇಲೆ ಅಧಿಕಾರಕ್ಕೆ ಬಂದ ಮೋದಿ ಸರ್ಕಾರಕ್ಕೆ ಒಂದು ವರ್ಷ ತನ್ನ ಶೀಲವನ್ನು ತೋರಲು ಸಣ್ಣ ಅವಧಿಯಾದುದರಿಂದ ಅದರ ಬಗ್ಗೆ ನಿರ್ಣಾಯಕ ಮಾತುಗಳನ್ನೇನೂ ಆಡಲಾಗದಿದ್ದರೂ, ಸಿದ್ಧರಾಮಯ್ಯನವರ ಸರ್ಕಾರ ತನ್ನ ಜನತಾ ಆದೇಶದ ಹೆಚ್ಚೂ ಕಡಿಮೆ ಅರ್ಧ ಅವಧಿಯನ್ನು ಮುಗಿಸಿರುವುದರಿಂದ ಅದರ ಸಾಧನೆಗಳ ಬಗ್ಗೆ ಇಲ್ಲಿ ವಿವರವಾಗಿಯೇ ಬರೆಯಬಹುದಾಗಿದೆ.

ಸಿದ್ಧರಾಮಯ್ಯನವರ ಸರ್ಕಾರ ರಾಜಕೀಯವಾಗಿ ಒಂದು ಮಿಶ್ರಗುಣದ ಸರ್ಕಾರ. ತಾಂತ್ರಿಕವಾಗಿ ಅದನ್ನು ಕಾಂಗ್ರೆಸ್ ಸರ್ಕಾರವೆಂದು ಕರೆಯಬಹುದೇ ಹೊರತು ಸ್ವತಃ ಸಿದ್ಧರಾಮಯ್ಯನವರನ್ನೇ ಕಾಂಗ್ರೆಸ್ಸಿಗ ಎಂದು ಕರೆಯಲಾಗದೇನೋ! ಏಕೆಂದರೆ ಅವರು ರಾಜಕೀಯ ಜೀವನದ ಬಹುಪಾಲು ಕಾಲವನ್ನು ಕಳೆದಿರುವುದು ಕಾಂಗ್ರೆಸ್ ವಿರೋಧಿ ರಾಜಕಾರಣದಲ್ಲಿ; ಅವರ ರಾಜಕೀಯ ವ್ಯಕ್ತಿತ್ವದ ಎರಕ ರೂಪುಗೊಂಡಿರುವುದು ಇಂತಹ ರಾಜಕಾರಣದಲ್ಲೇ. ಜೊತೆಗೆ ಅವರು ತಮ್ಮನ್ನು ಆಪ್ತ ವಲಯದಲ್ಲಿ ಗುರುತಿಸಿಕೊಳ್ಳುವುದು ಕಾಂಗ್ರೆಸ್ಸೇತರವಾದದ ಪಿತಾಮಹರೆನಿಸಿದ ಸಮಾಜವಾದಿ ನಾಯಕ ಲೋಹಿಯಾರ ಅನುಯಾಯಿಯೆಂದು. ಅವರ ರಾಜಕೀಯ ಆಪ್ತವಲಯವಿರಲಿ, ಅವರ ಸಚಿವ ಸಂಪುಟದ ಗಣನೀಯ ಭಾಗವೂ ಅವರೊಡನೆ ಬಹುಕಾಲ ಕಾಂಗ್ರೆಸ್ಸೇತರ ರಾಜಕಾರಣ ಮಾಡಿದ ಜನತಾ ಪರಿವಾರದ ವಲಯಕ್ಕೆ ಸೇರಿದ್ದೇ ಆಗಿದೆ. ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿದ್ದೇ, ದೇವೇಗೌಡರ ಕುಟುಂಬ ಪರಿವಾರವಾಗಿ ಪರಿವರ್ತಿತವಾಗತೊಡಗಿದ್ದ ಅಳಿದುಳಿದ ಜನತಾ ಪರಿವಾರದಲ್ಲಿ ಉಳಿದರೆ ತಾವು ರಾಜ್ಯದ ಮುಖ್ಯಮಂತ್ರಿಯಾಗುವ

ಕನಸು ನನಸಾಗುವುದಿಲ್ಲ ಎಂಬ ಏಕೈಕ ಕಾರಣಕ್ಕೆ. ಇಲ್ಲದಿದ್ದರೆ ರಾಜ್ಯಕ್ಕೆ ಒಂದ
ಪರ್ಯಾಯ ರಾಜಕೀಯ ವ್ಯವಸ್ಥೆ ನೀಡಬಲ್ಲ ಸಾಮರ್ಥ್ಯವನ್ನು ಅವರು ಆ
ಗಳಿಸಿಕೊಂಡಿದ್ದರು. ಆದರೆ ಆ ರಾಜಕೀಯ ಧೈರ್ಯ ಅವರು ತೋರದಿದ್ದುದಕ
ಅವರ ಈ ಮಹಾತ್ವಾಕಾಂಕ್ಷೆಯೇ ಕಾರಣವಾಗಿತ್ತು.

ಇಂದು ಸಿದ್ಧರಾಮಯ್ಯ ತಮ್ಮೆಲ್ಲ ತಾತ್ವಿಕ ಸಾಮಾಜವಾದಿ ಹಿನ್ನೆಲೆ ಮತ್ತು ವೈಯಕ್ತಿ
ಸದುದ್ದೇಶಗಳ ಹೊರತಾಗಿಯೂ, ರಾಜ್ಯಕ್ಕೆ ಸರಾಸರಿಗಿಂತ ಹೆಚ್ಚಿನ ಮಟ್ಟದ ಆಡಳಿ
ನೀಡಲಾಗದಿದ್ದರೆ ಅದಕ್ಕೆ ಅವರ ಈ ಬೋಳು ಮಹತ್ವಾಕಾಂಕ್ಷೆಯೇ ಕಾರಣವಾಗಿದೆ
ಇದನ್ನು ಬೋಳು ಎಂದು ಏಕೆ ಕರೆಯಬೇಕಾಗಿದೆ ಅಂದರೆ, ಈ ಹಿಂದೆಯೇ ಒಮ
ಬರೆದಿದ್ದಂತೆ, ಅದೊಂದು ರಾಜಕೀಯ ತಾತ್ವಿಕ ಬದ್ಧತೆಯಿಂದ ರೂಪುಗೊಂಡ
ಮಹತ್ವಾಕಾಂಕ್ಷೆಯಾಗಿರದೆ, ಕೇವಲ ವೈಯಕ್ತಿಕ ನೆಲೆಯ ಮಹತ್ವಾಕಾಂಕ್ಷೆಯಾಗಿತ್ತು
ಹಾಗಾಗಿಯೇ ಅವರು ಅಧಿಕಾರ ಕಳೆದುಕೊಳ್ಳುವ ಆತಂಕದಲ್ಲಿ ಹಲವು ರಾಜಿಗಳನ
ಮಾಡಿಕೊಳ್ಳಬೇಕಾಗಿ ಬಂದಿದೆ. ಆ ಮಟ್ಟಿಗೆ ಅವರು ಈಗ ಕಾಂಗ್ರೆಸ್ಸಿಗರೇ ಆಗಿದ್ದಾರೆ
ಉದಾಹರಣೆಗೆ, ತಾವು ಮುಖ್ಯಮಂತ್ರಿಯಾಗಿ ಮಾಡಬೇಕಾದ ಕೆಲಸಕ್ಕೆ ಯೋಗ್ಯವಾದ
ಒಂದು ಸಚಿವ ಸಂಪುಟವನ್ನೂ ಅವರು ಹೊಂದಲಾಗಿಲ್ಲ. ಜಾರ್ಜ್, ಡಿ.ಕೆ.ಶಿ, ಅಂಬರೀಶ್
ಶಾಮನೂರು, ಚಿಂಚನಸೂರು, ಖಮರುಲ್ ಇಸ್ಲಾಂ, ದೇಶಪಾಂಡೆ ಮುಂತಾದವರನ
ಇಟ್ಟುಕೊಂಡು ಎಂತಹ ದಕ್ಷ, ಸ್ವಚ್ಛ ಮತ್ತು ಜನಪರ ಆಡಳಿತ ನೀಡಲು ಸಾಧ್ಯ
ಇಬ್ರಾಹಿಂ ಜೊತೆಗಿರದೆ ಇವರು ರಾಜಕಾರಣ ಮಾಡಲಾರರು ಎಂದರೆ ಏನ
ಹೇಳೋಣ? ಇತ್ತೀಚೆಗೆ ಅವರ ಸರ್ಕಾರವನ್ನು ದಿನವಹಿಯಾಗಿ ಸುತ್ತಿಕೊಳ್ಳುತ್ತಿರು
ಹಗರಣಗಳು, ಆಡಳಿತ ವೈಫಲ್ಯ ಪ್ರಕರಣಗಳು, ತಪ್ಪು ನಿರ್ಧಾರಗಳ ಪ್ರಸಂಗಗಳಿ
ಇದೇ ಕಾರಣವಾಗಿದೆ. ಒಬ್ಬ ಮುಖ್ಯಮಂತ್ರಿ ಯಶಸ್ಸನ್ನು ಕಾಣುವುದು, ಪೋಲೀಸ
ಠಾಣೆ, ಸರ್ಕಾರಿ ಶಾಲೆ, ಆಸ್ಪತ್ರೆಗಳೂ ಸೇರಿದಂತೆ ಸರ್ಕಾರದ ಕಛೇರಿಗಳು ಎಷ್ಟರಮಟ್ಟಿ
ನಿಜವಾಗಿ ಜನತೆಯ ಕಛೇರಿಗಳಾಗಿವೆ ಎಂಬುದರಲ್ಲಿ. ಆದರಿಂದು ಅವೆಲ್ಲ ಹೇಗಿ
ಎಂಬುದು ಸಿದ್ಧರಾಮಯ್ಯನವರಿಗೆ ಗೊತ್ತಿಲ್ಲದಿಲ್ಲ. ಇದಕ್ಕೆಲ್ಲ ಕಾರಣವೆಂಬಂತೆ ಹೇಗು
ಅವರೇ ಹಿಂದೊಮ್ಮೆ ತಾವೇನೂ ರಾಜಕೀಯವಾಗಿ ಪರಿಶುದ್ಧರಲ್ಲ ಎಂದ
ಹೇಳಿಕೊಂಡುಬಿಟ್ಟಿದ್ದಾರಲ್ಲ? ಹಾಗಾಗಿಯೇ ಅವರ ಸಮಾಜವಾದ ಅಹಿಂದವಾ
ಮಾತ್ರವಾಗಿ ಅವನತಿಗೊಂಡಿದೆ. ಇದರ ಫಲವಾಗಿಯೇ, ಸಮಾಜವಾ
ಕಾರ್ಯಕ್ರಮಗಳೆನಿಸಬೇಕಿದ್ದ ಅನ್ನಭಾಗ್ಯ, ಕ್ಷೀರಭಾಗ್ಯ ಮುಂತಾದ ಜನತಾ ಹಕ್ಕುಗ
ಯೋಜನೆಗಳು ಸರಿಯಾದ ಗುರಿಗಾರಿಕೆ ಇಲ್ಲದೆ ದಾನಧರ್ಮದ ಕಾರ್ಯಕ್ರಮಗಳಾ
ಕಾಣುತ್ತಿವೆ.

ಸಿದ್ಧರಾಮಯ್ಯನವರಿಗೆ ತಮ್ಮ ಬದುಕಿನ ಮಹತ್ವಾಕಾಂಕ್ಷೆಯನ್ನು ವೈಯಕ್ತಿಕ ನೆಲೆಯಿಂ
ಸಾರ್ವಜನಿಕ ನೆಲೆಗೆ ತಂದು ಅದನ್ನು ಅರ್ಥಪೂರ್ಣಗೊಳಿಸಿಕೊಳ್ಳಲು ಕಾ
ಮಿಂಚಿಹೋಗುತ್ತಿದೆ. ಕೆಲವು ದಿಟ್ಟ ಹಾಗೂ ನಿಷ್ಠುರ ನಿರ್ಧಾರಗಳನ್ನು ತೆಗೆದುಕೊಳ್ಳ

ಅವರ ಅಧಿಕಾರಾವಧಿಯ ನಿರ್ಣಾಯಕ ಘಟ್ಟವಿದು. ಸಿದ್ಧರಾಮಯ್ಯನವರ ಬಗ್ಗೆ ಇನ್ನೂ ಜನತೆಗೆ ಸಾಕಷ್ಟು ಸದಾಶಯವಿದೆ. ಅದನ್ನು ಸದುಪಯೋಗಪಡಿಸಿಕೊಳ್ಳಲು ಇದು ಕೊನೆಯ ಅವಕಾಶ ಎಂದಷ್ಟೇ ನಾವು ಈ ಸಂದರ್ಭದಲ್ಲಿ ಹೇಳಬಹುದು.

ಇನ್ನು ಮೋದಿ ಸರ್ಕಾರ ಒಂದು ವರ್ಷವನ್ನಷ್ಟೇ ಮುಗಿಸಿರುವುದರಿಂದ ಈವರೆಗಿನ ಸಂಚಿಕೆಗಳಲ್ಲಿ ಅದರ ಬಗ್ಗೆ ಬರೆದಿರುವ ಮಾತುಗಳಿಗೆ ಹೊರತಾದ ವಿಮರ್ಶೆ ಸಲ್ಲದೇನೋ. ಜೊತೆಗೆ ಬಹಳ ವರ್ಷಗಳ ನಂತರ ದೇಶಕ್ಕೊಬ್ಬ ಜನತಾ ಪ್ರತಿನಿಧಿಯೆನಿಸಿದ (ಅವರ ಏಕವ್ಯಕ್ತಿ ಪ್ರದರ್ಶನಪ್ರಿಯತೆಯ ಹೊರತಾಗಿಯೂ) ಪ್ರಧಾನಮಂತ್ರಿಯೊಬ್ಬರು ದೊರೆತಿದ್ದು, ರಾಷ್ಟ್ರಾಡಳಿತಕ್ಕೆ ಒಂದು ರಾಜಕೀಯ ಉತ್ತರದಾಯಿತ್ವ ಮರಳಿರುವುದೂ ಸ್ವಾಗತಾರ್ಹ ಅಂಶವೇ. ಆದರೆ ದೇಶದಲ್ಲಿನ ಕೋಮು ಪರಿಸ್ಥಿತಿ ಸೂಕ್ಷ್ಮವಾಗುತ್ತಿದ್ದು ಅದರ ಹೊಣೆಯನ್ನು ಮೋದಿಯವರೇ ಹೊರಬೇಕಿದೆ. ಇನ್ನು ಮೋದಿಯವರ ಸಮರೋಪಾದಿಯ ವಿದೇಶಾಂಗ ವ್ಯವಹಾರಗಳು ರಚನಾತ್ಮಕ ಫಲಿತಾಂಶಗಳನ್ನೇನೂ ನೀಡದಿದ್ದರೂ, ಕುತೂಹಲಕಾರಿಯಾಗಿಯಂತೂ ಇದೆ!

ಒಟ್ಟು ನೋಟದಲ್ಲಿ ಹೇಳುವುದಾದರೆ ತನ್ನ ಭರವಸೆಗಳ ಭಾರಕ್ಕೆ ತಾನೇ ಏದುಸಿರುಬಿಡುತ್ತಿರುವ ಸರ್ಕಾರವಿದು. ಅದರ ಭಾರಿ ಉದ್ಯಮಪರ, ರೈತ ಮತ್ತು ಶ್ರೀಸಾಮಾನ್ಯ ವಿರೋಧಿಯಾದ ನಿಲುವು ಅದರ ಮೊದಲ ಬಜೆಟ್‌ನಲ್ಲೇ–ತೆರಿಗೆ ರಿಯಾಯ್ತಿಗಳು ಮತ್ತು ಆಹಾರ, ಉದ್ಯೋಗ, ಆರೋಗ್ಯ, ಶಿಕ್ಷಣ ಇತ್ಯಾದಿಗಳಿಗೆ ಸಂಬಂಧಪಟ್ಟ ಸಾಮಾಜಿಕ ಕಾರ್ಯಕ್ರಮಗಳ ಮೇಲಿನ ಖರ್ಚಿನ ಗಣನೀಯ ಕಡಿತಗಳಲ್ಲಿ ಅಧಿಕೃತವಾಗಿ ವ್ಯಕ್ತವಾಗಿದೆ. ಜನಧನ್ ಯೋಜನೆ, ಪ್ರಧಾನಮಂತ್ರಿಯವರ ಅಪಘಾತ ಮತ್ತು ಜೀವ ವಿಮಾ ಯೋಜನೆಗಳು ಇದಕ್ಕೆ ಪರಿಹಾರ ಒದಗಿಸಲಾರವು. ಏಕೆಂದರೆ ಅವು ಈಗ ತಗ್ಗುತ್ತಿರುವ ಉತ್ಪಾದನೆ, ದೇಶೀಯ ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸಲಾರವು ಹಾಗೂ ಹೆಚ್ಚುತ್ತಿರುವ ನಿರುದ್ಯೋಗವನ್ನು ತಹಬಂದಿಗೆ ತರಲಾರವು. ಇನ್ನು ಸರ್ಕಾರ ಹಗರಣ ಮುಕ್ತವಾಗಿದೆ ಎಂಬುದೇ ಅದರ ಹೆಗ್ಗಳಿಕೆಯಾಗದು. ಅದರ ಅಭಿವೃದ್ಧಿ ಮಾದರಿ ಎಷ್ಟು ಅಪಾಯಕಾರಿಯಾಗಿದೆ ಎಂಬುದನ್ನು ಇದೇ ಸಂಚಿಕೆಯ 'ಸಮಕಾಲೀನ' ಅಂಕಣದಲ್ಲಿ ವಿವರಿಸಲಾಗಿರುವುದನ್ನೂ ಓದುಗರು ಗಮನಿಸಬಹುದು.

<u>ಸಮಕಾಲೀನ</u>

ಅಭಿವೃದ್ಧಿಯ ನೆಪದಲ್ಲಿ ಆತ್ಮಹತ್ಯೆ

ಆಧುನಿಕತೆ ನಮಗೆಲ್ಲ ಒಂದು ಕಾಲದಲ್ಲಿ ಬಹು ಪ್ರಿಯವಾದ ಶಬ್ದವಾಗಿತ್ತು. ಏಕೆಂದರೆ ಆಗ ಆಧುನಿಕರಾಗುವುದೆಂದರೆ, ನಮ್ಮನ್ನು ಕಾಲಕ್ಕೆ ಬಂಧಿಸಿ ಸ್ಥಗಿತಗೊಳಿಸಿದ್ದ ಹಲವು ವಿಚಾರಶೂನ್ಯವೆಂದು ಹೇಳಲಾಗುತ್ತಿದ್ದ ಪರಂಪರಾಗತ ಧಾರ್ಮಿಕ, ಸಾಂಸ್ಕೃತಿಕ ಮತ್ತು

ಸಾಮಾಜಿಕ–ನಂಬಿಕೆ–ನಿಷ್ಠೆಗಳಿಂದ ಮುಕ್ತರಾಗುವುದೆಂದೇ ನಂಬಲಾಗಿತ್ತು. ವಿಚಾರಶೀಲತೆ ಅಂದರೆ ಯಾವುದನ್ನಾದರೂ ಪ್ರಶ್ನಿಸುವ ಗುಣ, ಯಾವುದನ್ನಾದರೂ ಒಡೆದು ನೋಡುವ ಬುದ್ಧಿ ಮತ್ತು ಕೌಶಲಗಳೇ–ಇದನ್ನು ಆಧುನಿಕ ವಿಜ್ಞಾನವೆಂದು ಕರೆಯಲಾಯಿತು–ಅದರ ಮುಖ್ಯ ಲಕ್ಷಣಗಳು. ಇದರಿಂದ ಅನೇಕ ಪ್ರಯೋಜನಗಳೂ ಆದವು. ಸುಖವೂ ದೊರೆಯಿತು. ಆದರೆ ಇಂದು ಈ ಆಧುನಿಕತೆಯೇ ಒಂದು ಸ್ಥಗಿತತೆಗೆ ಬಂದಿದ್ದು, ಅದೂ ಒಂದು ನಂಬಿಕೆ ಮಾತ್ರವೆಂಬ ಹೊಸ ಅರಿವು ಜಗತ್ತಿನಾದ್ಯಂತ ಉಂಟಾಗುತ್ತಿದೆ. ಇದನ್ನು ಗಾಂಧಿವಾದಿ ಜರ್ಮನ್ ಅರ್ಥಶಾಸ್ತ್ರಜ್ಞ ಶೂಮಾಕರ್ ಈ ಒಂದು ಪ್ರಶ್ನೆಯ ಮೂಲಕ ನಮಗೆ ಬಹು ಸ್ಫುಟವಾಗಿ ಮಂಡಿಸುತ್ತಾರೆ: 'ನಮ್ಮ ಪುರಾತನರು ಇಂದು ಇಲ್ಲಿಗೆ ಬಂದು ನಮ್ಮ ದಂತ ವೈದ್ಯಕೀಯ ಆಸ್ಪತ್ರೆಗೆ ಭೇಟಿ ನೀಡಿದರೆ ಅವರು ಆಶ್ಚರ್ಯಗೊಳ್ಳುವುದು, ಆಹಾ ನಮ್ಮ ಮಕ್ಕಳು–ಮೊಮ್ಮಕ್ಕಳು ಹಲ್ಲು ಸರಿಮಾಡುವ ಎಂತೆಂತಹ ಆಧುನಿಕ ಉಪಕರಣಗಳನ್ನು ಕಂಡುಹಿಡಿದಿದ್ದಾರೆ ಎಂದೋ ಅಥವಾ ನಮ್ಮ ಮಕ್ಕಳು–ಮೊಮ್ಮಕ್ಕಳ ಹಲ್ಲುಗಳು ಇಷ್ಟೊಂದು ಏಕೆ ಕೆಟ್ಟು ನಾರುತ್ತಿವೆ ಎಂದೋ?'

ಈ ಪ್ರಶ್ನೆ ಆಧುನಿಕತೆ ನಮ್ಮ ಬದುಕಿಗೆ ಕವಿಸಿರುವ ಮಾಯೆ ಎಂತಹುದು ಎಂಬುದನ್ನು ಬಹು ಸ್ಫುಟವಾಗಿ ಹೇಳುತ್ತದೆನಿಸುತ್ತದೆ. ಅದು ವಿಜ್ಞಾನಮೂಲದ (ಅಂದರೆ ತಂತ್ರಜ್ಞಾನವಾಗಿ ಒಡೆದುಕೊಂಡ), ಈ ಭೂಮಿ ಇರುವುದು ಅದನ್ನು ತಿಳಿದು ಅಂದರೆ ಬಗೆದು, ದೇಹಸುಖಕ್ಕಾಗಿ ಗರಿಷ್ಟವಾಗಿ ಬಳಸಿಕೊಳ್ಳಲು ಎಂಬ ಅದರ ಆಧಾರ ಗ್ರಹಿಕೆ. ಅದಕ್ಕೆ ಭೂಮಿ ಮತ್ತು ಅದನ್ನು ಸುತ್ತುವರೆದಿರುವ ವಾತಾವರಣ ನಿರ್ಜೀವವಾದ ಒಂದು ಗ್ರಾಹಕ ವಸ್ತು. ಹಾಗಾಗಿಯೇ ಗಾಂಧಿ ಇದನ್ನು ದೇಹ ಪ್ರಾಧಾನ್ಯತೆಯ ಸೈತಾನಿ ನಾಗರೀಕತೆ ಎಂದು ಕರೆದಿದ್ದರು. ಇನ್ನೂ ಪರಿಸರ ಶಾಸ್ತ್ರ ಅಥವಾ ವಿಜ್ಞಾನವೆಂಬುದರ ಅರಿವೇ ಇಲ್ಲದಾಗ ಅವರು ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಆಶೆಗಳನ್ನಲ್ಲ ಎಂಬ ಹೊಸ ಯುಗ ಸತ್ಯವನ್ನೆ ಹೇಳಿದ್ದರು. ಇದು ಯುಗಪುರುಷನೊಬ್ಬ ತನ್ನ ಕಾಲದ ನಾಗರೀಕತೆಯ ಬಗ್ಗೆ ಮತ್ತು ಆ ಮೂಲಕ ಅದರ ಸತ್ವವೆನಿಸಿದ ಆಧುನಿಕ ವಿಜ್ಞಾನ–ತಂತ್ರಜ್ಞಾನಗಳ ಬಗ್ಗೆ ಮಾಡಿದ ಒಂದು ಬುಡಮಟ್ಟದ ವ್ಯಾಖ್ಯಾನ ಹಾಗೂ ಹಾಕಿದ ಸೀಮಾರೇಖೆ. ಇಂದು ಪರಿಸರ ತಜ್ಞರ ಅಧ್ಯಯನಗಳು ಮಾತ್ರವಲ್ಲ, ನಮ್ಮ ಕಣ್ಣೆದುರಿಗೇ ಎಡಬಿಡದೇ ನಡೆಯುತ್ತಿರುವ ಮಾನವ ಮತ್ತು ನೈಸರ್ಗಿಕ ಅನಾಹುತಗಳೂ ಹೇಳುತ್ತಿರುವುದೂ ಇದನ್ನೇ.

ಆದರೆ ಜಗತ್ತಿಗಿರಲಿ, ಈ ದೇಶಕ್ಕೇ ಈಗ ಗಾಂಧಿ ಮರೆತು ಹೋಗಿದ್ದಾರೆ. ಈ ಮರೆವಿನ ಆತ್ಯಂತಿಕ ಪರಿಣಾಮವೆಂಬಂತೆ ನಮ್ಮ ದೇಶಕ್ಕೆ ಈಗ ನರೇಂದ್ರಮೋದಿ ರಾಷ್ಟ್ರನಾಯಕರಾಗಿ ಮೂಡಿದ್ದಾರೆ. ವಿಪರ್ಯಾಸವೆಂದರೆ ಭಾರತೀಯ ಪ್ರಾಚೀನ ಪರಂಪರೆಯ ಮೂಲಸತ್ವವನ್ನು ಪ್ರತಿನಿಧಿಸುವುದಾಗಿ ಹೇಳಿಕೊಳ್ಳುವ ಪರಿವಾರದಲ್ಲಿ ಬೆಳೆದ ಮೋದಿ, ಬಲಿಷ್ಠ ಭಾರತ ಎಂಬ ವಿಕ್ಷಿಪ್ತ ದೇಶಭಕ್ತಿಯ ಹುಚ್ಚುಹೊಳೆಗೆ ಸಿಕ್ಕು (ಮಾತೃ) ಭೂಮಿಯನ್ನು ಎಗ್ಗಿಲ್ಲದೆ ಬಾಚಿಕೊಳ್ಳುವ, ಬಗೆಯುವ, ಸೂರೆ ಮಾಡುವ

ಅಭಿವೃದ್ಧಿ ರಾಜಕಾರಣದ ಘೋಷಣೆಗಳನ್ನು ಕೂಗುತ್ತಾ, ಕಾರ್ಯಕ್ರಮಗಳನ್ನು ರೂಪಿಸುತ್ತಾ, ಗುರಿಗಳನ್ನು ನಿಗದಿ ಮಾಡುತ್ತಾ ಜನರನ್ನೂ ಹುಚ್ಚೆಬ್ಬಿಸುತ್ತಿದ್ದಾರೆ.

ನಿಜ, ಇದು ಮೋದಿಯವರಿಂದ ಆರಂಭವಾದ ರಾಜಕಾರಣವೇನಲ್ಲ. ನೆಹ್ರೂ ಕಾಲದಲ್ಲೇ ಇದರ ಅಡಿಪಾಯ ಹಾಕಲಾಗಿತ್ತು. ಆದರೆ ಆಗ ಇದರ ಅನಾಹುತಗಳ ಪರಿವೆ ಯಾರಿಗೂ ಇರಲಿಲ್ಲ. ಆದರೆ ಅದು ಒಂದು ರಾಜಕಾರಣವಾಗಿ-ಜಾಗತಿಕ ಪಿತೂರಿಯಾಗಿ-ನಮ್ಮ ದೇಶಕ್ಕೆ ಬಂದದ್ದು ನರಸಿಂಹರಾವ್ ಮತ್ತು ಮನಮೋಹನಸಿಂಗ್‌ರ ಕಾಲದಲ್ಲಿ. ಆದರೆ ಅವರ ಪಕ್ಷಕ್ಕೆ ಒಂದು ರಾಷ್ಟ್ರೀಯ ಹೋರಾಟದ, ಅದರ ಗಾಂಧಿವಾದಿ ಮೌಲ್ಯಗಳ ನೆನಪು ಮಸುಕಾಗಿಯಾದರೂ ಇದ್ದು, ಅದು ಆಳದ ಆತ್ಮಸಾಕ್ಷಿಯಾಗಿ ಕೆಲಸ ಮಾಡುತ್ತಾ ಇಂತಹ ಅಭಿವೃದ್ಧಿ ಮಾದರಿಗೆ ಪರಿಸರ ರಕ್ಷಣೆಯ ಕಾನೂನುಗಳ ಮೂಲಕ ಕಡಿವಾಣ ಹಾಕುವ ಕೆಲಸವೂ ನಡೆಯಿತು. ಆದರೆ ಮೋದಿಯವರ ಪಕ್ಷಕ್ಕೆ ಆ ಹಿನ್ನೆಲೆಯೇ ಇಲ್ಲವಾದ್ದರಿಂದಲೋ ಏನೋ ಅದು ಈಗ ಆ ಕಾನೂನುಗಳ ಪ್ರಾಣವನ್ನೇ ತೆಗೆಯುವ ದುಸ್ಸಾಹಸಕ್ಕೆ ಕೈಹಾಕಿದೆ: ಯಾರ ಸುಖ-ಸಂಪತ್ತು ಸಂತೋಷಗಳಿಗಾಗಿ ಈ ಅಭಿವೃದ್ಧಿಯ ಹಪಾಹಪಿಯನ್ನು ಸೃಷ್ಟಿಸಲಾಗಿದೆಯೋ ಆ ಮನುಷ್ಯ ಜೀವಿಯು, ಯಾವ ಪ್ರಕೃತಿಯ ಮೇಲೆ ಈಗ ಎಗ್ಗಿಲ್ಲದೆ ಪ್ರಹಾರ ಮಾಡಲು ಹೊರಡಲಾಗಿದೆಯೋ ಅದರ ವಿಕಾಸದಲ್ಲಿ ಮೂಡಿದ ಅತ್ಯಂತ ಶ್ರೇಷ್ಠ ತಳಿ; ಹಾಗಾಗಿ ಇದು ತಾನು ಕೂತಿರುವ ಮರದ ಬುಡವನ್ನೇ ಕಡಿಯ ಹೊರಡುವ ಮೂರ್ಖತನ ಎಂಬ ಅರಿವೇ ಕಾಣದ ರಾಜಕಾರಣವಿದು. ದುರಂತವೆಂದರೆ-ಇದನ್ನು ದುಷ್ಟತನವೆಂದೇ ಕರೆಯಬೇಕು-ಈ ಅರಿವನ್ನು ಮೂಡಿಸಲು ಯತ್ನಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳ ಮೇಲೂ ಈ ಸರ್ಕಾರ ಗಧಾಪ್ರಹಾರ ಮಾಡಹೊರಟಿದೆ.

ಇನ್ನು ಮೋದಿ ರಾಜಕಾರಣಕ್ಕೆ ಪ್ರತಿ ರಾಜಕಾರಣ ಮಾಡಹೊರಟಂತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರ ಭಾರತದ ಬಹುಭಾಗದ ಪರಿಸರ ಸಮತೋಲನವನ್ನು ಕಾಯುವ ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಜಾಗತಿಕ ಪ್ರಯತ್ನವನ್ನು ನಿಷ್ಫಲಗೊಳಿಸಹೊರಟಿರುವ ದುರಂತವನ್ನೂ ನಾವು ಇಂದು ನೋಡುತ್ತಿದ್ದೇವೆ. ಮೊದಲು ಮಾಧವ ಗಾಡ್ಗೀಳ್ ವರದಿಯನ್ನು, ಈಗ ಕಸ್ತೂರಿ ರಂಗನ್ ವರದಿಯನ್ನೂ ತಿರಸ್ಕರಿಸಹೊರಟಿರುವ ಸಿದ್ಧರಾಮಯ್ಯನವರ ಕಾಂಗ್ರೆಸ್ ಸರ್ಕಾರಕ್ಕೆ ತನ್ನ ಪರಂಪರೆಯ ಕಿಂಚಿತ್ತೂ ಪ್ರಜ್ಞೆ ಇಲ್ಲವೆಂದು ತೋರುತ್ತದೆ. ಸಿದ್ಧರಾಮಯ್ಯ ಆಗೀಗಲಾದರೂ ಗಾಂಧಿ ಟೋಪಿ ಹಾಕುತ್ತಾರೆ. ಅದನ್ನು ಈಗ ನಿಲ್ಲಿಸುವುದು ಒಳ್ಳೆಯದು.

ನಮ್ಮ ಈ ಆಧುನಿಕ ಅಭಿವೃದ್ಧಿ ಸಂಕಥನದ ಈ ಮೂರೂ ದುರಂತ ಕಥೆಗಳ ಜೊತೆಗೇ ಬದನವಾಳು ಸತ್ಯಾಗ್ರಹವನ್ನೂ ಇಲ್ಲಿ ಚರ್ಚಿಸಿದ್ದೇವೆ. ಬರೆಯಿರಿ-ಸಂ.

ಜುಲೈ, ೨೦೧೫

ಮೋದಿ ಸರ್ಕಾರಕ್ಕೆ ಎದುರಾಗಿರುವ ನೈತಿಕ ಸಂಕಟ

ಪ್ರಿಯ ಓದುಗರೇ,

ಮೋದಿ ಸರ್ಕಾರ ಬಹು ದೊಡ್ಡ ಸಂಕಟಕ್ಕೆ ಸಿಕ್ಕಿಕೊಂಡಂತಿದೆ. ಅದು ಪಕ್ಷ ಮತ್ತು ಸರ್ಕಾರಗಳೆರಡರ ಮೂಲ ಪ್ರಾಮಾಣಿಕತೆಯನ್ನೇ ಜನ ಅನುಮಾನಿಸುವಂತಾಗಿರುವ ಸಂಕಟ. ಈ ಸಂಚಿಕೆ ನಿಮ್ಮ ಕೈಸೇರುವ ಹೊತ್ತಿಗೆ ಈ ಸಂಕಟ ಯಾವ ರೂಪ ತಾಳಿರುವುದೋ ಹೇಳಲಾಗದಿದ್ದರೂ, ಅದು ಮೋದಿಯವರು ಪಕ್ಷ ಮತ್ತು ಸರ್ಕಾರಗಳೆರಡರ ಮೇಲೂ ನಿಯಂತ್ರಣ ಸಾಧಿಸಿ ಅವು ಹಾದಿ ತಪ್ಪದಂತೆ ನಿಗಾ ಇಟ್ಟಿದ್ದಾರೆ ಎಂಬ ಜನರ ನಂಬಿಕೆಯನ್ನಂತೂ ಹುಸಿಗೊಳಿಸಿದೆ. ಅವರ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಆರ್ಥಿಕ ಅಪರಾಧಗಳನ್ನು ಗೈದು ವಿಚಾರಣೆಯನ್ನು ತಪ್ಪಿಸಿಕೊಳ್ಳಲು ದೇಶ ಬಿಟ್ಟು ಪಲಾಯನ ಮಾಡಿ ಲಂಡನ್‌ನಲ್ಲಿ ನೆಲೆಯೂರಿರುವ ಲಲಿತ್ ಮೋದಿ ಎಂಬ ಕೇಡಿಯೊಂದಿಗೆ ಕೌಟುಂಬಿಕ ಮತ್ತು ಆತ್ಮೀಯ ವಾಣಿಜ್ಯ ಸಂಬಂಧವಿರಿಸಿಕೊಂಡಿರುವುದಲ್ಲದೆ, ತನ್ನ ಅಧಿಕಾರದ ದುರ್ಬಳಕೆ ಮಾಡಿ ಆತ ಈಗ ನಿರ್ಬಂಧದಲ್ಲಿರುವ ಇಂಗ್ಲೆಂಡ್‌ನಿಂದ ಹೊರಹೋಗಲು ಸಹಾಯ ಮಾಡಿದ್ದಾರೆ ಎಂಬುದು ಬಯಲಾಗಿದೆ. ಇನ್ನು ಈ ಪಕ್ಷದ ಹಿರಿಯ ನಾಯಕಿಯೂ ಮತ್ತು ರಾಜಸ್ತಾನದ ಮುಖ್ಯಮಂತ್ರಿಯೂ ಆದ ವಸುಂಧರಾರಾಜೇ ಸಿಂಧ್ಯಾ ಇದೇ ಅಪರಾಧಿ ಲಂಡನ್‌ನಲ್ಲಿ ಸುರಕ್ಷಿತವಾಗಿರಲು ಅನುಕೂಲವಾಗುವಂತೆ ಬ್ರಿಟಿಷ್ ವಲಸೆ ಅಧಿಕಾರಿಗಳಿಗೆ ಆತನ ಪರವಾಗಿ ಶಿಫಾರ್ಸು ಪತ್ರ ನೀಡಿರುವುದೂ ಈಗ ಬೆಳಕಿಗೆ ಬಂದಿದೆ. ಈ ಮಧ್ಯೆ ಮೋದಿ ಸಂಪುಟದ ಇನ್ನೋರ್ವ ಸಚಿವೆ ಸ್ಮೃತಿ ಇರಾನಿ ತಮ್ಮ ಶೈಕ್ಷಣಿಕ ಅರ್ಹತೆಗಳ ಬಗ್ಗೆ ಚುನಾವಣಾ ದಾಖಲೆಗಳಲ್ಲಿ ಸುಳ್ಳು ಹೇಳಿದ್ದಾರೆಂಬ ಸಂಗತಿ ವಿಚಾರಣೆಗೆ ಅರ್ಹವೆಂದು ದೆಹಲಿ ನ್ಯಾಯಾಲಯವೊಂದು ತೀರ್ಪು ನೀಡಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದಂತಾಗಿದೆ!

ಈ ಹಗರಣಗಳು ಸಾಮಾನ್ಯ ಜನರ ಕಣ್ಣಿಗೆ ಮೇಲ್ನೋಟಕ್ಕೆ ಸಾಬೀತಾಗಿರುವಂತಿದ್ದು, ಹಲವು ದೊಡ್ಡ ನೈತಿಕ ಪ್ರಶ್ನೆಗಳನ್ನೆತ್ತುತ್ತವೆ ಮತ್ತು ಈ ಮೂವರ ರಾಜೀನಾಮೆಗಳನ್ನೂ ಬೇಡುತ್ತವೆ. ಆದರೆ ಈ ಸಾಲುಗಳನ್ನು ಬರೆಯುವ ಹೊತ್ತಿನವರೆಗೂ ಅವರುಗಳು ರಾಜೀನಾಮೆ ನೀಡುವುದಿರಲಿ, ಜವಾಬ್ದಾರಿ ಸ್ಥಾನಗಳಲ್ಲಿರುವವರಾಗಿ ಈ ಪ್ರಕರಣಗಳ ಬಗ್ಗೆ ಒಂದು ಸ್ಪಷ್ಟೀಕರಣದ ಮಾತನ್ನೂ ಆಡಿಲ್ಲದಿರುವುದು ಈ ಪಕ್ಷ ಮತ್ತು ಸರ್ಕಾರ ನೈತಿಕವಾಗಿ ಎಷ್ಟು ದಿವಾಳಿಯೆದ್ದಿದೆ ಎಂಬುದನ್ನು ತೋರುವಂತಿದೆ. ಅದಕ್ಕಿಂದ ಆತಂಕದ ಸಂಗತಿ ಎಂದರೆ, ರಾಷ್ಟ್ರಭಕ್ತಿ, ರಾಜಕೀಯ ಸರಿತನ ಮತ್ತು ನೈತಿಕತೆಗಳೇ ಮೂರ್ತಿವೆತ್ತಂತೆ ಮಾತನಾಡುವ ಪ್ರಧಾನಿ ಮೋದಿಯವರು ಕೂಡ ತಮ್ಮ ಸಚಿವರುಗಳ ರಾಜೀನಾಮೆಗಳಿಗೆ ಸೂಚಿಸುವುದಿರಲಿ, ಆ ಬಗ್ಗೆ ಈವರೆಗೆ ಬಾಯಿಯೇ ಬಿಚ್ಚಿಲ್ಲದಿರುವುದು. ಇನ್ನು ಪಕ್ಷದ ಅಧ್ಯಕ್ಷ ಅಮಿತ್ ಶಾ ಎಲ್ಲೋ ತಲೆ ತಪ್ಪಿಸಿಕೊಂಡಿರುವಂತಿದೆ! ಬಹುಶಃ ಈ ಎಲ್ಲರೂ ಸೇರಿ ಕಾಂಗ್ರೆಸ್ ಸರ್ಕಾರ ಮತ್ತು ಅದರ ಸಚಿವರುಗಳ ಇಂತಹುದೇ ಘೋರ ಅಪರಾಧಗಳಿಗಾಗಿ ದಾಖಲೆಗಳ ತಪಾಸಣೆಯಲ್ಲಿದ್ದಾರೆಂದು ಕಾಣುತ್ತದೆ.

ಆದರೆ ಈ ಸರ್ಕಾರ ಇಂತಹ ತಂತ್ರಗಳ ಮೂಲಕ ಕಾಂಗ್ರೆಸ್ ನಾಯಕರ ಬಾಯಿ ಮುಚ್ಚಿಸಬಹುದು. ಆದರೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ದುರಾಚಾರಗಳನ್ನು ಸಹಿಸಲಾರದೆ ಈ ಪಕ್ಷವನ್ನು ಆಡಳಿತಕ್ಕೆ ತಂದ ಜನರ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ಏಕೆಂದರೆ, ಇಬ್ಬರು ಕೇಂದ್ರ ಸಚಿವರಿಗೆ ಸಂಬಂಧಿಸಿದ ಹಗರಣದ ಕೇಂದ್ರದಲ್ಲಿರುವಾತ ವರಮಾನ ತೆರಿಗೆ ಮೋಸ, ಹಣದ ಕಳ್ಳಸಾಗಣೆಯಂತಹ ಗುರುತರ ಆಪಾದನೆಗಳಿಗೆ ಗುರಿಯಾಗಿ ದೇಶಭ್ರಷ್ಟನಾಗಿರುವ ಭ್ರಷ್ಟ ಉದ್ಯಮಿ. ಆತನನ್ನು ದೇಶಕ್ಕೆ ಎಳೆತಂದು ವಿಚಾರಣೆಗೆ ಒಳಪಡಿಸುವ ಸಾಂವಿಧಾನಿಕ ಕರ್ತವ್ಯ ನಿರ್ವಹಿಸಬೇಕಾದ ಸರ್ಕಾರಗಳ ಸದಸ್ಯರು ಗುಪ್ತವಾಗಿ ಅವನ ಹಿತರಕ್ಷಣೆಗೆ ಧಾವಿಸಿರುವರೆಂದರೆ, ಈ ಸರ್ಕಾರ ದೇಶದ ಹಿತರಕ್ಷಣೆ ಮಾಡಬಲ್ಲುದೆಂದು ಹೇಗೆ ನಂಬುವುದು? ಪಕ್ಷ ಮತ್ತು ಸರ್ಕಾರಗಳ ದೇಶನಿಷ್ಠೆ, ಕಾನೂನು ನಿಷ್ಠೆ ಮತ್ತು ಪ್ರಾಮಾಣಿಕತೆಗಳೇ ಈಗ ಪ್ರಶ್ನಾರ್ಹವಾಗಿವೆ. ಹಾಗೇ, ಈ ಅಪರಾಧಿಯ ಪಾಸ್‌ಪೋರ್ಟನ್ನು ರದ್ದುಗೊಳಿಸಬೇಕೆಂಬ ಈ ಹಿಂದಿನ ಸರ್ಕಾರದ ಮನವಿಯನ್ನು ತಾಂತ್ರಿಕ ಕಾರಣಗಳ ಮೇಲೆ ತಿರಸ್ಕರಿಸಿದ್ದ ನ್ಯಾಯಾಲಯವೊಂದರ ತೀರ್ಪಿನ ವಿರುದ್ಧ ಒಂದು ವರ್ಷವಾದರೂ ಈ ಸರ್ಕಾರ ಮೇಲ್ಮನವಿ ಸಲ್ಲಿಸದೇ ಇರುವ ಮರ್ಮವಾದರೂ ಏನು ಎಂಬ ಮುಖ್ಯ ಪ್ರಶ್ನೆಯೂ ಇದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಒಂದು ರಾಜಕೀಯ ಪಕ್ಷವಾಗಿ ಒಂದು ಆಂತರಿಕ ತಳಮಳಕ್ಕೆ ಸಿಕ್ಕಿದ್ದು, ಅದರ ಹಿರಿಯ ನಾಯಕ ಅಡ್ವಾಣಿಯವರು ೪೦ ವರ್ಷಗಳ ಹಿಂದಿನ ತುರ್ತುಪರಿಸ್ಥಿತಿಯನ್ನು ನೆನೆಯುವ ನೆಪದಲ್ಲಿ ಅಂತಹ ಸರ್ವಾಧಿಕಾರದ ಕಾಲ ಮುಗಿಯಿತು ಎಂದು ಭಾವಿಸಬೇಕಿಲ್ಲ ಎಂದಿರುವುದು ಧ್ವನಿಪೂರ್ಣವಾಗಿದೆ.

ಈ ಲಲಿತ್ ಮೋದಿ ದೇಶಬಿಟ್ಟು ಪಲಾಯನ ಮಾಡಿ ಆರು ವರ್ಷಗಳಾಗುತ್ತಾ ಬಂದಿದ್ದರೂ, ಆತನನ್ನು ಇಲ್ಲಿಗೆ ಕರೆತರಲಾಗಿಲ್ಲ ಎಂಬ ಸಂಗತಿ ನಮ್ಮ ಇಡೀ ರಾಜಕಾರಣ

ಪಕ್ಷಾತೀತವಾಗಿ ಹೇಗೆ ಭ್ರಷ್ಟ ವಾಣಿಜ್ಯೋದ್ಯಮಿಗಳ ಹಿಡಿತದಲ್ಲಿ ಸಿಕ್ಕಿಕೊಂಡಿದೆ ಎಂಬುದನ್ನು ಸೂಚಿಸುತ್ತದೆ. ಈ ಹಿಂದಿನ ಯುಪಿಎ ಸರ್ಕಾರದ ಸಚಿವರಾಗಿದ್ದ ಶರದ್ ಪವಾರ್, ಪ್ರಫುಲ್ಲ ಪಟೇಲ್, ರಾಜೀವ್ ಶುಕ್ಲಾ ಸೇರಿದಂತೆ ಹೆಚ್ಚೂ ಕಡಿಮೆ ಸರ್ವ ಪಕ್ಷಗಳ ಅನೇಕ ನಾಯಕರು ಲಲಿತ್ ಮೋದಿಯ ಗೆಣೆಕಾರರಾಗಿದ್ದು ಆತನಿಂದ ಹಲವು ರೀತಿಯ ಅನುಕೂಲಗಳನ್ನು ಪಡೆದಿದ್ದರು ಮತ್ತು ಪಡೆಯುತ್ತಿದ್ದಾರೆಂಬುದು ಜನಜನಿತ ಸಂಗತಿಯಾಗಿದೆ. ಹಾಗೆ ನೋಡಿದರೆ ಲಲಿತ್ ಮೋದಿ ಕಂಡುಹಿಡಿದು ನಡೆಸಿದ ಐ.ಪಿ.ಎಲ್ ಎಂಬ ಕ್ರಿಕೆಟ್ ವ್ಯೂಹವು ರಾಜಕಾರಣಿಗಳೂ ಸೇರಿದಂತೆ ಹಲವು ಭಾರಿ ಕುಳಗಳ ಕಪ್ಪುಹಣದ ದುರ್ವ್ಯವಹಾರಗಳು ಮತ್ತು ಸಂಬಂಧಿತ ಲಫಡಾಗಳ ವಿಷವ್ಯೂಹವೇ ಆಗಿದೆ. ವಿವಿಧ ರಾಜ್ಯಗಳ ಕ್ರಿಕೆಟ್ ಸಂಸ್ಥೆಗಳ ಪದಾಧಿಕಾರಿಗಳಾಗಿರುವ ರಾಜಕಾರಣಿಗಳು ಪಕ್ಷಾತೀತವಾಗಿ ಅದರ ಈವರೆಗಿನ ವ್ಯವಹಾರಗಳ ರಕ್ಷಣೆಗೆ ನಿಂತಿರುವುದರಿಂದಾಗಿಯೇ ಲಲಿತ್ ಮೋದಿ ವಿಶ್ವವಿಹಾರ ನಡೆಸಿಕೊಂಡು ಆರಾಮವಾಗಿದ್ದಾನೆ. ಹಾಗಾಗಿ ಮೊದಲು, ಹಲವು ದುರಾಚಾರಗಳ ಮೂಲವಾದ ಈ ಐಪಿಎಲ್ ಎಂಬ ವಿಷವ್ಯೂಹವನ್ನು ಒಡೆದು ನಮ್ಮ ಕ್ರಿಕೆಟ್ ಸಂಸ್ಥೆಗಳನ್ನು ಶುದ್ಧಗೊಳಿಸಿ ವೃತ್ತಿಪರ ಮಾಡಿದರೆ, ಮುಕ್ತ ಮಾರುಕಟ್ಟೆ ನೀತಿ ಹುಟ್ಟುಹಾಕಿರುವ ಐಪಿಎಲ್‌ನಂತಹ ಹಲವು ಪಾಪದ ಕೂಸುಗಳು ಕಣ್ಮುಚ್ಚುವಂತಾಗಿ ಸಾರ್ವಜನಿಕ ಜೀವನ ಒಂದಿಷ್ಟು ಸ್ವಚ್ಛವಾದಂತಾಗುತ್ತದೆ. ಮೋದಿ ಅದನ್ನು ಬಿಟ್ಟು ಎಂತಹುದೇ ತರಾವರಿ ಯೋಗಾಸನಗಳನ್ನು ಮಾಡಿದರೂ ಅವರ, ಅವರ ಪಕ್ಷದ ಮತ್ತು ಸರ್ಕಾರದ ಬಿಂಬ ರಿಪೇರಿಯಾಗದು.

ಇತ್ತ ನಮ್ಮ ರಾಜ್ಯದಲ್ಲಿ ರೈತರು ಸಾಲಬಾಧೆಯಿಂದ ಒಬ್ಬರಾದಮೇಲೊಬ್ಬರಂತೆ ವಿಷ ಕುಡಿದೋ, ಬೆಂಕಿ ಹಚ್ಚಿಕೊಂಡೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ ನಮ್ಮ ಮುಖ್ಯಮಂತ್ರಿಗಳು ಅದಕ್ಕೆ ಕಾರಣರಾದ ಮಹನೀಯರು ತಮ್ಮ ಮಂತ್ರಿಮಂಡಲದಲ್ಲೇ ಇದ್ದರೂ ಅವರ ಮೇಲೆ ಚಾಟಿ ಬೀಸದೆ ಸುಮ್ಮನೆ ಹುಸಿಬೆದರಿಕೆಯ ಮಾತುಗಳನ್ನಾಡುತ್ತಿರುವುದು ಸೋಜಿಗವೆನ್ನಿಸುತ್ತಿದೆ.

ಸಮಕಾಲೀನ–೧

'ಅನ್ನ ಭಾಗ್ಯ': ಇದು ಯಾರ ಭಾಗ್ಯ?

ಉಚಿತ ಅಕ್ಕಿ ಯೋಜನೆ ಎಂದೇ ಪ್ರಸಿದ್ಧವಾಗಿರುವ ರಾಜ್ಯ ಸರ್ಕಾರದ 'ಅನ್ನಭಾಗ್ಯ' ಕಾರ್ಯಕ್ರಮದ ಬಗ್ಗೆ ಕಳೆದ ಮೇ ಸಂಚಿಕೆಯ 'ಸಂಪಾದಕರ ಟಿಪ್ಪಣಿ'ಯಲ್ಲಿ ನಾನು ಇದೊಂದು ಅಗ್ಗದ ಜನಪ್ರಿಯತೆಯ ಬೇಜವಾಬ್ದಾರಿ ಯೋಜನೆ ಎಂದು ಒಂದು ಸಾಲು ಬರೆದಿದ್ದೆ. ಈ ಬಗ್ಗೆ ನನ್ನ ಒಂದಿಬ್ಬರು ಆಪ್ತ ಸ್ನೇಹಿತರು ಕರೆ ಮಾಡಿ ಆಕ್ಷೇಪಣೆ ವ್ಯಕ್ತಪಡಿಸಿದರು. ಈ ಯೋಜನೆ ಇಷ್ಟು ಸರಳ ಮತ್ತು ಸುಲಭವಾಗಿ ತಳ್ಳಿಹಾಕುವಂತಹದಲ್ಲವೆಂದೂ, ಕಡುಬಡವರು ಗಣನೀಯ ಸಂಖ್ಯೆಯಲ್ಲಿರುವ

ರಾಜ್ಯವೊಂದರಲ್ಲಿ ಸರ್ಕಾರ ತನ್ನ ಕರ್ತವ್ಯದಂತೆ ಕೈಗೊಳ್ಳಬೇಕಾದ ಕ್ರಮ ಇದೆಂದೂ ವಿವರಿಸಿದರು. ಆದರೆ ನಾನು ಆ ವಾಕ್ಯ ಬರೆದಾಗ ಇದೆಲ್ಲವನ್ನೂ ಯೋಚಿಸಿರಲಿಲ್ಲವೆಂದಲ್ಲ. ಈ ಯೋಜನೆಯನ್ನು ಆರಂಭ ಮಾಡಿದಾಗ ಮುಖ್ಯಮಂತ್ರಿಗಳೇ ಇದನ್ನೆಲ್ಲ ವಿವರಿಸಿದ್ದರು. ಆದರೆ ನನ್ನ ಆಲೋಚನೆ ಬೇರೇ ಸ್ತರದ್ದೇ ಆಗಿತ್ತು. ಆದರೂ ಈ ಬಗ್ಗೆ ಇನ್ನಷ್ಟು ಅಭಿಪ್ರಾಯಗಳನ್ನು ಪಡೆದು ನನ್ನ ಆಲೋಚನೆಯೇನಾದರೂ ತಪ್ಪು ದಿಕ್ಕಿನಲ್ಲಿ ಸಾಗಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಲು ಸಮಾಜದ ವಿವಿಧ ಸ್ತರಗಳಿಗೆ ಸೇರಿದ ನನ್ನ ಕೆಲ ಗೆಳೆಯರನ್ನು ಅಭಿಪ್ರಾಯ ಬರೆದು ಕಳಿಸಲು ಕೇಳಿದೆ. ಆ ಅಭಿಪ್ರಾಯಗಳು ಇಲ್ಲಿವೆ.

ಅನ್ನಭಾಗ್ಯವನ್ನು ಸಮರ್ಥಿಸುವವರು ಮುಖ್ಯವಾಗಿ, ಇದಕ್ಕಾಗಿ ಖರ್ಚು ಮಾಡುತ್ತಿರುವ ಹಣ ಪ್ರಮಾಣದಲ್ಲಿ ಮತ್ತು ಶ್ರೀಮಂತರು ಮತ್ತು ಮಧ್ಯಮ ವರ್ಗದವರು ಸರ್ಕಾರದಿಂದ ವಿವಿಧ ರೀತಿಗಳಲ್ಲಿ ಪಡೆಯುತ್ತಿರುವ ರಿಯಾಯ್ತಿಗಳಿಗೆ ಹೋಲಿಸಿದರೆ ನಗಣ್ಯವೆಂದೂ ವಾದಿಸಿದ್ದಾರೆ. ಆದರೆ ಪತ್ರಿಕೆ, ಈ ರಿಯಾಯ್ತಿಗಳನ್ನೂ ಕಟುವಾಗಿ ಟೀಕಿಸಿದೆ ಎಂಬುದನ್ನು ಮತ್ತು ಒಂದು ತಪ್ಪು ಇನ್ನೊಂದು ತಪ್ಪಿನ ಸಮರ್ಥನೆಯಾಗಲಾರದು ಎಂಬುದನ್ನು ಮರೆತಿದ್ದಾರೆ. ಹಾಗೇ, ಮೊನ್ನೆ ಲೇಖಕ ಎಸ್.ಎಲ್. ಭೈರಪ್ಪನವರು–ಅವರ ಕಾದಂಬರಿಗಳ ಬಗ್ಗೆ ನಮ್ಮ ಅಭಿಪ್ರಾಯಗಳು ಏನೇ ಇರಲಿ–'ಅನ್ನಭಾಗ್ಯ'ವನ್ನು ಟೀಕಿಸಿದಾಗ, ಅವರಿಗೆ ಹಸಿವಿನ ಸಂಕಟವೇನು ಗೊತ್ತು ಎಂದು ನಮ್ಮ ಮುಖ್ಯಮಂತ್ರಿಗಳೂ ಸೇರಿದಂತೆ ಬಹಳ ಜನ ಅವರ ಮೇಲೆ ಹರಿಹಾಯ್ದರು. ಆದರೆ ಹೀಗೆ ಹರಿಹಾಯ್ದವರಿಗಿಂತ ಹೆಚ್ಚಿನ ಹಸಿವಿನ ಸಂಕಟವನ್ನು ಭೈರಪ್ಪ ಅನುಭವಿಸಿದವರು ಎಂಬುದು ಇವರಿಗೆ ಗೊತ್ತಿರಲಾರದು. 'ಅನ್ನ ಭಾಗ್ಯ'ದ ಸಮರ್ಥನೆಯ ಹಿಂದೆ ಬಹುಪಾಲು ಇಂತಹುದೇ ಸುಲಭ ಜನಪರತೆಯ ಆವೇಶವಿದೆ ಎಂದು ನನ್ನ ಸಂದೇಹ.

ಮನುಷ್ಯತ್ವ ಇರುವ ಯಾರೂ, ಹಸಿವಿನಿಂದ ನರಳುತ್ತಿರುವವರಿಗೆ ಅನ್ನ ಕೊಡುವುದು ತಪ್ಪೆಂದು ಹೇಳಲಾರರು. ಹಾಗೇ, ನೋಡಿಕೊಳ್ಳಲು ಯಾರೂ ಇಲ್ಲದ ಅನಾಥ ವೃದ್ಧರಿಗೆ ಸರ್ಕಾರ ಅನ್ನ–ಸೂರು ಕೊಡಬಾರದೆಂದೂ ಯಾರೂ ಹೇಳಲಾರರು. ಆದರೆ ಅನುಮಾನಾಸ್ಪದ ರೀತಿಯಲ್ಲಿ ವಿತರಣೆಯಾಗಿರುವ ಬಿಪಿಎಲ್ ಕಾರ್ಡುಗಳ ಆಧಾರದ ಮೇಲೆ ರಾಜ್ಯಮಟ್ಟದಲ್ಲಿ ಸಾರಾ ಸಗಟಾಗಿ ಮುಖ್ಯಮಂತ್ರಿಗಳ ಕರುಣೆಯ ಕಾರ್ಯಕ್ರಮದಂತೆ ಈ ಯೋಜನೆ ಜಾರಿಯಾಗಿರುವುದರ ಬಗ್ಗೆ ನಾವು ಜನಪರತೆ ಎಂಬ ರೂಢಿಗತ ಭಾವಾವೇಶದ ಮಾನಸಿಕತೆಯಲ್ಲಿ ಯೋಚಿಸಬಾರದೆಂದೇ ನನ್ನ ಅಭಿಪ್ರಾಯ. ಜೊತೆಗೆ ರಾಜಕಾರಣವೆಂಬುದು ಕೇವಲ ಆರ್ಥಿಕ ಆಯಾಮವುಳ್ಳ ವಿದ್ಯಮಾನವಲ್ಲ. ಅದು ಒಂದು ಜನಸಮುದಾಯದ ಶೀಲವನ್ನು ಕಟ್ಟುವ ಜವಾಬ್ದಾರಿಯುತ ಕಾಯಕ ಕೂಡ. ಹಾಗೆ ಯೋಚಿಸಿದಾಗ ಈ ಸಾರಾ ಸಗಟು ಯೋಜನೆಯಿಂದ ಆಗುತ್ತಿರುವ ಹಲವು ನೆಲೆಗಳ ಅನಾಹುತಗಳು ನಮಗೆ ಗೋಚರವಾಗಬಲ್ಲವು.

ಸಂಸತ್ತಿನಲ್ಲಿ ಕೇಂದ್ರದ ಮುಂಗಡ ಪತ್ರದ ಬಗೆಗಿನ ಚರ್ಚೆಯ ಮಧ್ಯೆ, ಕಾಂಗ್ರೆಸ್ ಪಕ್ಷದವರು 'ಉದ್ಯೋಗ ಭರವಸೆ ಯೋಜನೆ'ಯನ್ನು ಹಾಳು ಮಾಡಲಾಗುತ್ತಿದೆ ಎಂಬ

ಕೂಗೆಬ್ಬಿಸಿದಾಗ ಪ್ರಧಾನಿ ಮೋದಿ ಹೇಳಿದರು: 'ಇಲ್ಲ, ಅದನ್ನು ರದ್ದು ಮಾಡುವುದಿಲ್ಲ. ಅರವತ್ತು ವರ್ಷಗಳ ಕಾಂಗ್ರೆಸ್ ಸರ್ಕಾರದ ಕಾರ್ಯದಕ್ಷತೆಯ ಸ್ಮಾರಕವಾಗಿಯಾದರೂ ಅದನ್ನು ಉಳಿಸುತ್ತೇನೆ'. ಮೋದಿಯವರ ಆರ್ಥಿಕ ನೀತಿ ಬಗ್ಗೆ ನಮ್ಮ ಮೂಲಭೂತ ಆಕ್ಷೇಪಣೆಗಳ ಹೊರತಾಗಿಯೂ ಅವರ ಈ ಮಾತಿನ ಮರ್ಮವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಈ ಅರವತ್ತು ವರ್ಷಗಳಲ್ಲಿ ನಮ್ಮ ರಾಜಕಾರಣ ಜನರ ಕನಿಷ್ಟ ಅಗತ್ಯಗಳನ್ನು ಪೂರೈಸಬಲ್ಲ ಒಂದು ವಿಶ್ವಾಸಾರ್ಹ ಉದ್ಯೋಗ ವ್ಯವಸ್ಥೆಯ ಆರ್ಥಿಕತೆಯನ್ನೂ ಕಟ್ಟಲಾಗಿಲ್ಲ. ಜನ ಈಗಲೂ ದಿನವಹಿ ಆಧಾರದ ಮೇಲೆ ಬದುಕಿನ ಭರವಸೆ ಕಾಣಬೇಕಾಗಿದೆ! ನಾವು ಯೋಚಿಸಬೇಕಿದೆ.

ಹಾಗಾಗಿ, ನಮ್ಮ ಅನ್ನಭಾಗ್ಯ ಯೋಜನೆ ನನಗೆ ಬಂಡವಾಳಶಾಹಿ ಆರ್ಥಿಕತೆಯೊಂದರ ಐನಾತಿ ಉಪಾಯ ಕಾರ್ಯಕ್ರಮವಾಗಿಯೇ ಕಾಣುತ್ತದೆ. ಬಂಡವಾಳಶಾಹಿಗಳ ಭರ್ಜರಿ ಊಟಗಳಿಗೆ ಬಡಜನರಿಂದ ಧಕ್ಕೆಯಾಗದಂತೆ ಅವರಿಗೆ ಒಂದಿಲ್ಲ ಒಂದು ರೂಪದ ಭಿಕ್ಷೆ ಎಸೆದು ಸುಮ್ಮನಿರಿಸುವ ರಾಜಕೀಯ ಉಪಾಯವಾಗಿ ಇದು ನನಗೆ ಕಾಣುತ್ತದೆ. ಇದು ಸಮಾಜವಾದವಲ್ಲ; ಬದಲಿಗೆ ಸಮಾಜವಾದದಿಂದ ಪಲಾಯನ ಎಂದೇ ನಾನು ಭಾವಿಸುತ್ತೇನೆ. ಸಮಾಜವಾದ ಶೋಷಣೆಯ ವಿರುದ್ಧ ರಕ್ಷಣೆಯ ರಾಜಕಾರಣವಲ್ಲ. ಬದಲಿಗೆ ಪರ್ಯಾಯ ನೈತಿಕತೆಯ ಆಧಾರದ ದುಡಿಮೆ ಮತ್ತು ಬದುಕಿನ ಮಾದರಿಗಳ ನಿರ್ಮಾಣದ ರಾಜಕಾರಣ ಎಂದು ನಾನು ಭಾವಿಸಿದ್ದೇನೆ.

ದುಡಿಯುವ ಶಕ್ತಿ ಇಲ್ಲದ ಅಸಹಾಯಕರನ್ನು ಸ್ಥಳೀಯವಾಗಿ ಗುರುತಿಸುವ ವ್ಯವಸ್ಥೆಯಾಗಲಿ. ಅವರಿಗೆ ಅನ್ನಾಹಾರಗಳು ಮಾತ್ರವಲ್ಲ; ಬದುಕಲು ಅಗತ್ಯವಾದ ಎಲ್ಲ ಕನಿಷ್ಟ ಅಗತ್ಯಗಳನ್ನೂ ಪೂರೈಸಲಿ. ಆದರೆ ರಾಜರ ಕಾಲದ ಈ ಬಾಜಾ ಭಜಂತ್ರಿ ಪ್ರಚಾರ ವೈಭವದ ದಾನಧರ್ಮದ ಕಾರ್ಯಕ್ರಮ ಬೇಡ ಎಂದೇ ಪತ್ರಿಕೆಯ ಅಭಿಪ್ರಾಯ.

ಪತ್ರಿಕೆಯ ಈ ಅಭಿಪ್ರಾಯವನ್ನು ಈ ಮುಂದಿನ ಹಲವರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಓದುಗರು ಪರಿಶೀಲಿಸಿ ತಮ್ಮದೇ ತೀರ್ಮಾನಗಳಿಗೆ ಬರಬಹುದು.–ಸಂ

ಸಮಕಾಲೀನ–೨

ಸ್ವರಾಜ್ಯಕ್ಕಾಗಿ ಒಂದು 'ಸಂವಾದ'

ಕೇಜ್ರಿವಾಲ್‌ರ 'ಸ್ವರಾಜ್ ಆಂದೋಲನ'ದ ನಂತರ ಈಗ ಅವರಿಂದ, ಅವರೊಂದಿಗೆ ಸೇರಿ ತಾವೇ ಕಟ್ಟಿದ ಆಪ್‌ನಿಂದ ಹೊರದೂಡಲ್ಪಟ್ಟಿರುವ ಯೋಗೇಂದ್ರ ಯಾದವ್ ಮತ್ತವರ ಗೆಳೆಯರು ಈಗ ಮತ್ತೊಂದು ಸ್ವರಾಜ್ ಅಭಿಯಾನ ಶುರು ಮಾಡಿದ್ದಾರೆ. ಯೋಗೇಂದ್ರ ಅವರೀಗ ರಾಷ್ಟ್ರದ ಬೇರೆ ಭಾಗಗಳಲ್ಲಿ, ಊರುಗಳಲ್ಲಿ ತಮ್ಮ ಸ್ವರಾಜ್ ಅಭಿಯಾನದ ಭಾಗವಾಗಿ ಸ್ವರಾಜ್ ಸಂವಾದಗಳನ್ನು ನಡೆಸುತ್ತಿದ್ದಾರೆ. ಅಂತಹುದೊಂದು 'ಸಂವಾದ' ಕಳೆದ ಏಪ್ರಿಲ್ ೨೯ರಂದು ಬೆಂಗಳೂರಿನಲ್ಲಿ ಏರ್ಪಾಡಾಗಿತ್ತು.. ಕೇಜ್ರಿವಾಲ್ ನೇತೃತ್ವದ ಸ್ವರಾಜ್

ಆಂದೋಲನ ಮುಟ್ಟಿದ ಜಿಗುಪ್ಸೆಕರ ಹಂತದಿಂದ ಈಗಾಗಲೇ ಸಾವರಿಸಿಕೊಂಡಂತಿರುವ ನಮ್ಮ ಹಲವು ಗೆಳೆಯರು ಅದರಲ್ಲಿ ಭಾಗವಹಿಸಿದ್ದರು. ನನಗೂ ಆಹ್ವಾನ ಬಂದಿತ್ತಾದರೂ ನಾನು ಹೋಗಲಿಲ್ಲ. ಅದಕ್ಕೆ ಕೆಲವು ವೈಯಕ್ತಿಕವೂ, ಕೆಲವು ತಾತ್ವಿಕವೂ ಆದ ಕಾರಣಗಳಿದ್ದವು. ನನಗೆ ಆಹ್ವಾನ ನೀಡಿದ ಶ್ರೀಮತಿ ಚುಕ್ಕಿ ನಂಜುಂಡಸ್ವಾಮಿಯವರಿಗೆ, ನಾನು ಬರಲಾಗುತ್ತಿಲ್ಲವೆಂದು ಕಳಿಸಿದ ಈ–ಮೇಲ್ ಪತ್ರವನ್ನು–ಅದು ಈ ಚರ್ಚೆಗೆ ಪೀಠಿಕೆಯಾಗಬಹುದೆಂಬ ಕಾರಣದ ಮೇಲೆ–ಇಲ್ಲಿ ನೀಡುತ್ತಿದ್ದೇನೆ:

ಪ್ರಿಯ ಶ್ರೀಮತಿ ಚುಕ್ಕಿ ಅವರೇ,

ನಿಮ್ಮ ಆಹ್ವಾನಕ್ಕಾಗಿ ಧನ್ಯವಾದಗಳು. ನಿಮಗೆ ಈಗಾಗಲೇ ತಿಳಿಸಿದಂತೆ ಈ ಸಂವಾದಕ್ಕೆ ನಾನು ಬರುವುದು ಕಷ್ಟ. ಇಂದು ಬೆಳಿಗ್ಗೆ ತಾನೇ ಬೆಂಗಳೂರಿನಿಂದ ಶಿವಮೊಗ್ಗಕ್ಕೆ ವಾಪಸಾದೆ. ನಾಳೆ ಮತ್ತೆ ಅಲ್ಲಿಗೆ ಹೊರಡುವುದು ಕಷ್ಟ. ನಮ್ಮ ಪತ್ರಿಕೆಯ ತುರ್ತು ಕೆಲಸಗಳಿವೆ. ಗೆಳೆಯ ಯೋಗೇಂದ್ರ ಯಾದವ್ ಅವರಿಗೆ ಇದನ್ನು ತಿಳಿಸಿ. ಹಾಗೇ, ಅವರಿಗೆ ತಿಳಿಸಬೇಕಾದ ಇನ್ನೊಂದೆರಡು ವಿಷಯಗಳೆಂದರೆ–

೧. ಸಂವಾದದ ದಿನಾಂಕವನ್ನು ಸಂವಾದದಲ್ಲಿ ಯಾರೆಲ್ಲ (ಮುಖ್ಯವಾಗಿ ಅಥವಾ ಪ್ರಾತಿನಿಧಿಕವಾಗಿ) ಭಾಗವಹಿಸಬೇಕೆಂದು ಬಯಸಲಾಗುವುದೋ, ಅವರೊಂದಿಗೆ ಸಮಾಲೋಚಿಸಿ ನಿಗದಿ ಪಡಿಸುವುದು ಸ್ವರಾಜ್ಯ ಕಲ್ಪನೆಯ ಮೊದಲ ಪಾಠ. ಇದು ವಾಸ್ತವವಾಗಿ ಅಸಾಧ್ಯವಾದ ಸಂದರ್ಭದಲ್ಲಿ ಸಾಕಷ್ಟು ಮುಂಚಿತವಾಗಿ ದಿನವನ್ನು ಪ್ರಕಟಿಸುವುದೊಳಿತು. ನಾಳೆ ಬನ್ನಿ ಎಂದು ಇಂದು ಕರೆಯುವುದು ಸೂಕ್ತವಲ್ಲ.

೨. ಸಂವಾದದ ಮುಖ್ಯ ಆಶಯವನ್ನು ಸಂವಾದದಲ್ಲಿ ಭಾಗವಹಿಸುವ ಸಮೂಹಕ್ಕೆ ಸಮೂಹದ ಪ್ರಧಾನ ಭಾಷೆಯಲ್ಲಿ (ಇಂಗ್ಲಿಷ್, ಹಿಂದಿಗಳಲ್ಲಿ ಅಲ್ಲ) ತಿಳಿಸಬೇಕು. ಇಲ್ಲದಿದ್ದರೆ ಇದು ಪರ್ಯಾಯ ರಾಜಕಾರಣದ ಪ್ರಯತ್ನವೂ ಆಗುವುದಿಲ್ಲ ಮತ್ತು ಇದು ಸ್ವರಾಜ್ ಆಂದೋಲನದ ಹೆಸರಿನಲ್ಲಿ ನಡೆಸಲಾಗುವ/ಮುಂದುವರೆಸಲಾಗುವ ದೆಹಲಿ/ಬೆಂಗಳೂರು ನಿಯಂತ್ರಿತ ಸಾಂಪ್ರದಾಯಿಕ ರಾಜಕೀಯ ವರಸೆಯೇ ಆಗುತ್ತದೆ.

ನಾನು ಸಂವಾದಕ್ಕೆ ಬಂದಿದ್ದರೆ, ಯೋಗೇಂದ್ರರಿಗೆ ಹೇಳಬೇಕಿದ್ದ ಒಂದು ಮುಖ್ಯ ಅಂಶವೆಂದರೆ:

ಆಂ ಆದ್ಮಿ ಪಕ್ಷದ ದುರಂತಕ್ಕೆ ಯೋಗೇಂದ್ರ ಯಾದವ್ ಮತ್ತು ಅವರ ಗೆಳೆಯರೂ ಜವಾಬ್ದಾರರಾಗಿದ್ದಾರೆ. ಮೊದಲಾಗಿ ಅದನ್ನು ದೆಹಲಿ ಕೇಂದ್ರಿತ ಮತ್ತು ಕೇಜ್ರಿವಾಲ್ ದಂಡನಾಯಕತ್ವದ 'ಪಕ್ಷ'ವಾಗಿ ಕಟ್ಟಲಾಯಿತು. ಕೇಜ್ರಿವಾಲರ ಬೀದಿ ರಾಜಕಾರಣದ ಜನಪ್ರಿಯತೆಗೆ ಮಾರು ಹೋಗಿ, ಪರ್ಯಾಯ ರಾಜಕಾರಣದ ಎಲ್ಲ ತತ್ವಗಳನ್ನೂ ನಿರ್ಲಕ್ಷಿಸಿ ಒಂದು 'ವಾಸ್ತವವಾದಿ' ಎಂದು ಹೇಳಲಾಗುವ ರಾಜಕಾರಣವನ್ನು ಮಾಡ ಹೊರಟಿದ್ದರಲ್ಲಿ ಯೋಗೇಂದ್ರರೂ ಭಾಗೀದಾರರು. 'ಖಾಪ್' ಪಂಚಾಯ್ತ್‌ಗಳನ್ನು

ಸಮರ್ಥಿಸಿದ ಮತ್ತು ಪಕ್ಷದ ಪ್ರಣಾಳಿಕೆಯ ಪ್ರಧಾನ ಲೇಖಕರರಾಗಿ ಅವರು ಅದರಲ್ಲಿ ಪಕ್ಷದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳನ್ನು ಎಲ್ಲರಿಗೆ ಎಲ್ಲವೂ ಎಂಬಂತೆ ನಿರೂಪಿಸಿದ ಜಾಣತನ ಇದಕ್ಕೆ ಉದಾಹರಣೆಗಳು. (ಇದರ ವಿವರಣೆಗಾಗಿ ಪತ್ರಿಕೆಯ ೨೦೧೪ರ ಮೇ ಸಂಚಿಕೆಯನ್ನು ಗಮನಿಸಿ)

ವಂದನೆಗಳೊಂದಿಗೆ,

ಡಿ.ಎಸ್. ನಾಗಭೂಷಣ

*** *** ***

ಗಾಂಧಿ ಹೆಸರಿನಲ್ಲಿ, ಸ್ವರಾಜ್ಯದ ಹೆಸರಿನಲ್ಲಿ ಜನರಲ್ಲಿ ಹೊಸ ಆಶೆಗಳನ್ನು ಹುಟ್ಟಿಸಿ ಚುನಾವಣೆ ಗೆದ್ದ ಕೇಜ್ರಿವಾಲ್ ಈಗ ಏನಾಗಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಆತನ ಆಂದೋಲನ ಮತ್ತು ಪಕ್ಷಕ್ಕೆ ರಾಷ್ಟ್ರ ಮಟ್ಟದಲ್ಲಿ ಘನತೆ–ಗೌರವಗಳನ್ನು ಒದಗಿಸಿದ ಯೋಗೇಂದ್ರ ಯಾದವ್, ಪ್ರಶಾಂತ್‌ಭೂಷಣ್ ಮತ್ತಿತರನ್ನು ಆತ ಯಾವುದೇ ಪ್ರಜಾಸತ್ತಾತ್ಮಕ ಮಾನ–ಮರ್ಯಾದೆಗಳನ್ನೂ ಲೆಕ್ಕಿಸದೆ ಹೊರಹಾಕಿದ ರೀತಿ–ನೀತಿಗಳು ನಾವು ಜನಾಂದೋಲನಗಳೆಂದು ಭಾವಿಸಿದ ವಿದ್ಯಮಾನಗಳು ಎಷ್ಟು ಹುಸಿಯಾಗಿರಬಲ್ಲವು ಎಂಬುದನ್ನು ನಮ್ಮ ಕಣ್ಮುಂದೆಯೇ ಸಾಬೀತುಪಡಿಸಿವೆ. ಇದಕ್ಕಿಂತ ಹೆಚ್ಚು ತಲ್ಲಣಗೊಳಿಸುವ ಸಂಗತಿಯೆಂದರೆ ಇದನ್ನೆಲ್ಲ ಆಪ್ ಒಂದು ಪಕ್ಷವಾಗಿ ಕಮಕ್ ಕಿಮಕ್ ಎನ್ನದೆ ಒಪ್ಪಿ/ ಸಹಿಸಿಕೊಂಡು ಯೋಗೇಂದ್ರ ಮತ್ತವರ ಗೆಳೆಯರನ್ನು ನಡುನೀರಿನಲ್ಲಿ ಕೈಬಿಟ್ಟಿರುವುದು.

ಈ ಬಗ್ಗೆ ಆಂ ಆದ್ಮಿ ಪಕ್ಷವನ್ನು ಆರಂಭದಿಂದಲೂ ವಿರೋಧಿಸುತ್ತಿದ್ದ ನಮ್ಮ ಕೆಲ ಗೆಳೆಯರು ತಮ್ಮ ರಾಜಕೀಯ ವಿವೇಕ ಗೆದ್ದಿತೆಂದು ಹೆಮ್ಮೆ ಪಡಬೇಕಿಲ್ಲ. ಏಕೆಂದರೆ ಅವರ ವಿರೋಧವಿದ್ದುದು ತಮ್ಮದೇ ಅನ್ಯ ರಾಜಕೀಯ ಬದ್ಧತೆಗಳ ಕಾರಣದ ಮೇಲೆ. ಈ ಮಾತನ್ನು ನಾನು ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ, ನನ್ನ ಈ ಮೇಲಿನ ಮಾತುಗಳೆಲ್ಲ ಓದುಗರಿಗೆ ಜನಾಂದೋಲನಗಳ ವಿರುದ್ಧದ ಸಾರಾಸಗಟಾದ ಮಾತುಗಳಾಗಿ ಕೇಳಿಸಬಾರದೆಂದು.

ಜನಾಂದೋಲನಗಳು ಒಂದು ಪ್ರಜಾಪ್ರಭುತ್ವದ, ನಾಗರೀಕ ಸಮಾಜದ ಜೀವಾಳ. ಆದರೆ ಅವು ನಮ್ಮನ್ನು ಇಡಿಯಾಗಿ ಒಳಗೊಂಡ ಜನಾಂದೋಲನಗಳಾಗಿರಬೇಕು. ಅಂದರೆ ನಾವು ಸಾವಯವವಾಗಿ ಬೆರೆಯಬಲ್ಲ ಆಂದೋಲನವಾಗಿರಬೇಕು. ಅಂದರೆ ದೂರದ ಯಾರೋ ನಮಗೆಂದು ಆರಂಭಿಸಿ ನಡೆಸುವ ಮತ್ತು ನಾವು ಅಭಿಮಾನದಿಂದ ದೂರದಲ್ಲಿ ನಿಂತು ನೋಡಿ ಬೆರಗಾಗಿ ಬೆಂಬಲಿಸಬೇಕಾದ ರೀತಿಯ ಆಂದೋಲನವಾಗಿರಬಾರದು. ದೂರವಿದ್ದರೂ ನಂಬಿ ಬೆಂಬಲಿಸಬಹುದಾದ–ಸ್ವಾತಂತ್ರ್ಯ ಆಂದೋಲನದ ಮೂಸೆಯಲ್ಲಿ ಮೂಡಿದ ವ್ಯಕ್ತಿತ್ವಗಳ ನೇತೃತ್ವದ ಜನಾಂದೋಲನಗಳು– ಬಹುಶಃ ಜೆಪಿ ಆಂದೋಲನದ ಕಾಲಕ್ಕೇ ಮುಗಿಯಿತೆಂದು ಕಾಣುತ್ತದೆ. ಹಾಗೇ ನೋಡಿದರೆ ಅಂತಹ ಆ ಆಂದೋಲನವೇ ನಮ್ಮನ್ನು ನಿರಾಶೆಗೊಳಿಸಿತ್ತು. ಹಾಗಾಗಿ ಇಂದು

ವಿಶ್ವಾಸಾರ್ಹವೆನಿಸಬಲ್ಲವು ಸ್ಥಳೀಯವಾಗಿರುವ ಆಂದೋಲನಗಳು ಮಾತ್ರ. ಅಂದರೆ, ಭೌತಿಕ ಮತ್ತು ಮಾನಸಿಕ ದೂರಗಳು ಸೃಷ್ಟಿಸುವ ಅಸ್ಪಷ್ಟತೆ, ಅನುಮಾನ, ಸ್ಥೂಲತೆಗಳಿಗೆ ಅವಕಾಶವಿಲ್ಲದ ಜನಾಂದೋಲನಗಳು. ಯಾವುದರಲ್ಲಿ ನಮ್ಮ ಮಾತನ್ನು ನಮ್ಮ ನುಡಿಗಟ್ಟಿನಲ್ಲಿ ಆಡಲು ಸೌಕರ್ಯಗಳಿರುವುದೋ ಮತ್ತು ಅಂತಹ ಮಾತುಗಳಿಂದಲೇ ಆಂದೋಲನವೊಂದು ರೂಪ ಮತ್ತು ಮರುರೂಪ ಪಡೆಯಲು ಸಾಧ್ಯವೋ ಅಂತಹ ಜನಾಂದೋಲನಗಳು ಮಾತ್ರ ನಮ್ಮವೆನಿಸಬಲ್ಲವು ಮತ್ತು ಅವು ಮಾತ್ರ ಅವುಗಳ ಉದ್ದೇಶಗಳ ನೆಲೆಯಲ್ಲಿ ಸಾರ್ಥಕತೆಯನ್ನು ಮುಟ್ಟಬಲ್ಲವುಗಳು.

ನಿಜವಾಗಿ ಇದೇ–ಈ ಸ್ಥಳೀಯತೆಯೇ–ಗಾಂಧಿಯು ಹೇಳಿದ ಸ್ವರಾಜ್ಯ ಆಂದೋಲನದ ಮೂಲಾಧಾರ. ರಾಜ್ಯತ್ವ ಅಥವಾ ಆಡಳಿತವೆನ್ನುವುದು ಮನಸ್ಸಿಗೆ ಮಾತ್ರವಲ್ಲ ನಮ್ಮ ದೇಹಕ್ಕೂ ಹತ್ತಿರ ತಂದು ರಾಜ್ಯವನ್ನು 'ಸ್ವ' ಮಾಡಿಕೊಳ್ಳುವ ಆಂದೋಲನವದು. ಗಾಂಧಿ ಪ್ರಕಾರ ಮನಸ್ಸು–ದೇಹಗಳು ಅವಿಭಾಜ್ಯ. ಹಾಗಾಗಿ ರಾಜ್ಯವೆನ್ನುವುದು ದೇಹಕ್ಕೂ ಹತ್ತಿರವಾಗಿರಬೇಕು. ಆಗಲೇ ಆ ದೇಹವನ್ನು ಧರಿಸಿರುವ ಮನಸ್ಸಿಗೂ ಅದು ನಿಜವಾಗಿ ಹತ್ತಿರವಾಗಿರಬಲ್ಲುದು. ಆದರೆ ನಾವಿಂದು ಕಟ್ಟಿಕೊಂಡಿರುವ ರಾಜ್ಯತ್ವ ಅಂದರೆ ರಾಷ್ಟ್ರ ಸ್ವರೂಪವು ಇದಕ್ಕೆ ತದ್ವಿರುದ್ಧವಾದದ್ದು. ನಮಗೆ ಸಂಬಂಧಿಸಿದ ಯಾವುದೂ ನಮ್ಮ ಹತೋಟಿಯಲ್ಲಿಲ್ಲದಂತೆ ನಿಯಮ, ಕಾನೂನು, ಸಂಸ್ಥೆ–ಸಂವಿಧಾನಗಳ ಹೆಸರಿನಲ್ಲಿ ನಮ್ಮಿಂದ ಮನೋದೈಹಿಕ ದೂರದಲ್ಲಿರುವವರ ಕೈಗೆ ಕೊಡಲಾಗಿದೆ. ಹಾಗಾಗಿಯೇ ನಮ್ಮ ಸರ್ಕಾರಿ ಕಛೇರಿಗಳು ನಮ್ಮದಲ್ಲವೆನ್ನಿಸುವುದು. ಅಲ್ಲಿಗೆ ಹೋದೊಡನೆ ಉಸಿರು ಕಟ್ಟಿದಂತಾಗುವುದು. ಅವುಗಳಲ್ಲಿ ಕೂತ ಅಧಿಕಾರಿ–ಗುಮಾಸ್ತ–ಜವಾನರಾದಿಯಾಗಿ ಎಲ್ಲರೂ ನಮಗೆ ಅಪರಿಚಿತರಂತೆ–ಬಹಳ ಸಲ ಶತ್ರುಗಳಂತೆಯೂ ಕಾಣುವುದು. ಅಲ್ಲಿಯೇ ಲಂಚ, ಸ್ವಜನಪಕ್ಷಪಾತ, ಅದಕ್ಷತೆ ಇತ್ಯಾದಿ ಭ್ರಷ್ಟಾಚಾರಗಳು ಈ ಅನ್ಯತೆ–ಶತ್ರುತ್ವಗಳನ್ನು ಮಸುಕಾಗಿಸುವ ಸಾಧನವಾಗಿ ಹುಟ್ಟುವುದು.

ಈ ವ್ಯವಸ್ಥೆಯನ್ನು ರಾಷ್ಟ್ರ ಎಂದು ಭವ್ಯವಾಗಿ ಕರೆಯಲಾಗಿದ್ದು, ಇದನ್ನು ಕಾಪಾಡಿಕೊಳ್ಳಲು ಇದರ ಫಲಾನುಭವಿಗಳು–ರಾಜಕಾರಣಿಗಳು, ವಾಣಿಜ್ಯೋದ್ಯಮಿಗಳು ಮತ್ತು ಧರ್ಮಲಂಡರು–ಅದಕ್ಕೆ ರಾಷ್ಟ್ರೀಯತೆ ಎಂಬ ಅಂಥ ಆರಾಧನಾ ಮಾರ್ಗವೊಂದನ್ನು ಸೃಷ್ಟಿಸಿ ಪ್ರಜೆಗಳನ್ನು ಅದರ ಅಮಲಿನಲ್ಲಿ ಮಲಗಿಸಿಬಿಟ್ಟಿದ್ದಾರೆ. ಒಟ್ಟಿನಲ್ಲಿ ಇದು ನಮ್ಮ ಮೇಲೆ ನಾವೇ ನಡೆಸಿಕೊಂಡಿರುವ ಆಧುನಿಕ ರಾಷ್ಟ್ರತ್ವವೆಂಬ ಅತ್ಯಾಚಾರ. ಹಾಗಾಗಿಯೇ ನಾವು ನಮ್ಮ ಉಸಿರಾಟ ಸರಾಗವಾಗಿರಲು ಅವಶ್ಯಕವಾದ ಸಣ್ಣಪುಟ್ಟ ನ್ಯಾಯದಾನದ ವಿಧಿಗಳೂ ಇಲ್ಲಿ ವರ್ಷಗಟ್ಟಲೇ ತೆಗೆದುಕೊಂಡರೂ–ಇತ್ತೀಚಿನ ಉದಾ: ಒಬ್ಬ ವ್ಯಕ್ತಿ ಜನಗಳ ಮೇಲೆ ವಾಹನ ಹತ್ತಿಸಿದನೋ ಇಲ್ಲವೋ ಎಂಬುದನ್ನು ತೀರ್ಮಾನಿಸಿ ಶಿಕ್ಷೆ ವಿಧಿಸಲು ೧೩ ವರ್ಷ ಬೇಕು–ಮತ್ತು ಅಷ್ಟು ವರ್ಷಗಳ ನಂತರವೂ ನ್ಯಾಯ ಅನುಮಾನಾಸ್ಪದವೆನಿಸಿದರೂ ಏನೂ ಮಾಡಲಾಗದೆ ಅಸಹಾಯಕರಾಗಿರುವಂತಾಗಿರುವುದು. ಇದು ನಮ್ಮ ಸ್ಥಿತಿಯ ಬಗ್ಗೆ ಗಾಬರಿ

ಹುಟ್ಟಿಸುವುದಿಲ್ಲವೆಂದರೆ, ಆಳವಾದ ಯೋಚನೆಗೆ, ಕ್ರಿಯಾತ್ಮಕವಾದ ಸಿಟ್ಟಿಗೆ ಪ್ರೇರೇಪಿಸುವುದಿಲ್ಲ ಎಂದರೆ ನಾವು ಸರ್ಕಾರಿ ಕಛೇರಿಗಳಿಗೆ, ನ್ಯಾಯಾಲಯಗಳಿಗೆ ತಿಂಗಳುಗಟ್ಟಲೆ, ವರ್ಷಗಟ್ಟಲೆ ಅಲೆಯಲು ಅರ್ಹರಾದ ಪ್ಯಾದೆಗಳೇ ಸರಿ ಎಂದು ತೀರ್ಮಾನಿಸಬೇಕಾಗುತ್ತದೆ.

ಹಾಗೆಂದೇ ಗಾಂಧಿ ಹಿಂದ್ ಸ್ವರಾಜ್‌ನಲ್ಲಿ 'ರಾಷ್ಟ್ರಕ್ಕೆ ನಿಮ್ಮ ಸಂದೇಶವೇನು?' ಎಂಬ ಪ್ರಶ್ನೆಗೆ 'ರಾಷ್ಟ್ರ? ಅದು ಏನು?' ಎಂಬ ಮರುಪ್ರಶ್ನೆಯ ರೂಪದಲ್ಲಿ ಉತ್ತರಕೊಟ್ಟಿರುವುದು. ಅಂದರೆ ಅವರರ್ಥದಲ್ಲಿ ರಾಷ್ಟ್ರವೆಂಬುದು ಇರುವುದಾದರೆ ಅದು ಸಾಮಾನ್ಯ ಪ್ರಜೆಗಳಿಗೆ ಅನ್ಯವೆನಿಸದ–ಆತನಿಗೆ ದೂರವೆನಿಸದ– ರೂಪದಲ್ಲಿರಬೇಕು. ಅದು ಮನೋದೈಹಿಕ ಸಾಮೀಪ್ಯವಿರುವ ಸಮೂಹಗಳ ಒಕ್ಕೂಟವಾಗಿರಬೇಕು. ಹಾಗಾಗಿ ಯಾವುದೇ ಸ್ವರಾಜ್ಯ ಆಂದೋಲನ ಈ ಆಧುನಿಕ ರಾಷ್ಟ್ರತ್ವದ ಬಂಧನದ ಬಿಗಿಯನ್ನು ಗಾಂಧಿಯ ಸ್ವರಾಜ್ಯದ ಕಾಣ್ಕೆಯಲ್ಲಿ ಕ್ರಮೇಣ ಸಡಿಲಿಸಬಲ್ಲ ಸ್ಥಳೀಯತೆಯ ಸ್ಪರ್ಶ–ಪರಿಮಳ–ಆಶೋತ್ತರಗಳನ್ನು ಹೊಂದಿರಬೇಕು. ಯಾರೋ ಎಲ್ಲಿಂದಲೋ ಬಂದು ತಮ್ಮ ರಾಜಕೀಯ ಆಶೋತ್ತರಗಳು, ಒತ್ತಡಗಳು ಮತ್ತು ಅಗತ್ಯಗಳಿಗೆ ಅನುಗುಣವಾಗಿ ಅವರ ನುಡಿಗಟ್ಟಿನಲ್ಲಿ ನಮ್ಮನ್ನು ಸಂಘಟಿಸುವ, ನಿಯಂತ್ರಿಸುವ ಮತ್ತೊಂದು ರಾಷ್ಟ್ರೀಯ ರಾಜಕೀಯ ಆಟ ಆಗಬಾರದು. ಯೋಗೇಂದ್ರ ಯಾದವ್‌ರಂತಹ ಪ್ರಾಜ್ಞರು ಇಲ್ಲಿಗೆ ಬರಲಿ; ಆದರೆ ಸ್ಥಳೀಯ ಚಳುವಳಿಗಳ ರಾಷ್ಟ್ರೀಯ ಸಮನ್ವಯಕಾರರಾಗಿ–ಈ ಹಿಂದೆ ಕಿಷನ್ ಪಟ್ನಾಯಕ್ ಮಾಡುತ್ತಿದ್ದಂತೆ–ಬಂದು ತಮ್ಮ ಅನುಭವ ಹಂಚಿಕೊಳ್ಳಲಿ.

ಈ ಹಿನ್ನೆಲೆಯಲ್ಲಿ ಈ ಪುಟಗಳಲ್ಲಿ ಯೋಗೇಂದ್ರರ ಸ್ವರಾಜ್ಯ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಇಬ್ಬರನ್ನು ಮಾತಾಡಿಸಿದ್ದೇವೆ. ಒಬ್ಬರು ದೇವನೂರ ಮಹಾದೇವ. ಇವರನ್ನು ಯೋಗೇಂದ್ರರ ಸಂವಾದದಲ್ಲಿ ಗಾಂಧಿ ಅರ್ಥದಲ್ಲಿನ ಸ್ವರಾಜ್ಯದ ಸುಳಿವುಗಳನ್ನು ಎಲ್ಲಿಯಾದರೂ ಕಂಡಿರಾ ಎಂದು ಕೇಳಿದರೆ, ತಮಗೆ ಪಳೆಯುಳಿಕೆಗಳಲ್ಲಿ ನಂಬಿಕೆ ಇಲ್ಲ ಎಂದಿದ್ದಾರೆ. ಅವರು ಚೈತನ್ಯ ಕಂಡ ಕಡೆ ಹೋಗುತ್ತಾರಂತೆ! ಹಾಗೆ ಅವರು ಹತ್ತು–ಹನ್ನೆರಡು ವರ್ಷಗಳ ಹಿಂದೆ ತಾವು ಕಂಡ ಚೈತನ್ಯದ ಹಿಂದೆ ಬಿದ್ದು ಸ್ಥಾಪಿಸಿದ 'ಸರ್ವೋದಯ ಕರ್ನಾಟಕ' ಇಂದು ಕರ್ನಾಟಕದ ಪರ್ಯಾಯ ರಾಜಕಾರಣದ ಎಂತಹ ನಗೆಪಾಟಲಿನ ಪಳೆಯುಳಿಕೆಯಾಗಿದೆ ಎಂಬುದು ಅವರ ಅರಿವಿಗಿನ್ನೂ ಬಂದಂತೆ ಕಾಣುವುದಿಲ್ಲ! ನಾವೆಲ್ಲ ಬಹು ಗೌರವಿಸುವ, ನಿರೀಕ್ಷೆಗಳನ್ನಿಟ್ಟುಕೊಂಡಿರುವ ಮಹಾದೇವ ಈಗಲಾದರೂ ಇಂತಹ ಜಾಣ ಮಾತುಗಳನ್ನಾಡುವುದನ್ನು ನಿಲ್ಲಿಸಿ ನಿಜವನ್ನರಸಿ ಆ ನಿಜವನ್ನೇ ನುಡಿಯುವ ಎಚ್ಚರಕ್ಕೆ ಬರಲಿ ಎಂದು ಇಲ್ಲಿ ಹಾರೈಸುತ್ತೇನೆ.

ಇನ್ನು ಎರಡನೆಯವರು, ಗೆಳೆಯ ರಾಜಾರಾಂ ತೋಳ್ಪಾಡಿ. ಯೋಗೇಂದ್ರರ ಬೆಂಗಳೂರಿನ ಸಂವಾದಕ್ಕೆ ಮಂಗಳೂರಿನಿಂದ ಬಂದು ನಿರಾಶರಾಗಿ ಹೋದ ಪರಿಯನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಓದಿ, ಬರೆಯಿರಿ.–ಸಂ.

ಆಗಸ್ಟ್ ೨೦೧೫

ಇಂತಹ ಪೋಪ್ ಹೇಗೆ ಬಂದರು? ಏಕೆ ಬಂದರು?

ಪ್ರಿಯ ಓದುಗರೇ,

ಈ ಮೂಲಕ 'ಹೊಸ ಮನುಷ್ಯ'ದ ನಾಲ್ಕನೇ ವಾರ್ಷಿಕ ವಿಶೇಷ ಸಂಚಿಕೆಯನ್ನು ನಿಮ್ಮ ಕೈಗಿಡಲು ಹೆಮ್ಮೆಯೆನಿಸುತ್ತಿದೆ. ಕಾರಣ, ಪತ್ರಿಕೆ ನಾಲ್ಕು ವರ್ಷಗಳನ್ನು ಪೂರೈಸಿ ಐದನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಪತ್ರಿಕೆಯನ್ನು ಆರಂಭಿಸಿದಾಗ ಈ ನನ್ನ ಸಾಹಸ ಇಷ್ಟು ಯಶಸ್ವಿಯಾಗುತ್ತದೆಯೆಂದು ನಾನು ಕನಸು ಮನಸಿನಲ್ಲಿಯೂ ನಂಬಿರಲಿಲ್ಲ. ಹಾಗಿತ್ತು ಅಂದಿನ ಪರಿಸ್ಥಿತಿ. ನಾನು ಪತ್ರಿಕೆಯ ಆರಂಭದ ಸುದ್ದಿ ತಿಳಿಸಿದಾಗ ನನ್ನ ಕೆಲ ಗೆಳೆಯರು ಸುಮ್ಮನೆ ನಕ್ಕರೆ, ಇನ್ನು ಕೆಲವರು ಹಾಸ್ಯಾಸ್ಪದ ವೈಫಲ್ಯವನ್ನು ಆಹ್ವಾನಿಸುತ್ತಿದ್ದೀರಾ ಎಂದು ಬುದ್ಧಿ ಹೇಳಿದರು. ಅವರು ಹಾಗೆ ಪ್ರತಿಕ್ರಿಯಿಸಲು ಕಾರಣವೂ ಇತ್ತು. ಅಳಿದುಳಿದ ಹಳೆಯ ತಲೆಮಾರಿನ ಕೆಲವರ ಹೊರತಾಗಿ ಸಮಕಾಲೀನ ತಲೆಮಾರಿನ ಬಹುತೇಕ ಜನ ಹೆಸರೇ ಕೇಳಿರದ ಅಥವಾ ಕೇಳಿರುವವರೂ ಬಹು ಹಿಂದೆಯೇ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವ ಒಂದು ರಾಜಕೀಯ ಅವಶೇಷದಂತೆ ಮಾತ್ರ ಪರಿಗಣಿಸುವ ಸಮಾಜವಾದದ ಹೆಸರಿನಲ್ಲಿ ನಾನು ಪತ್ರಿಕೆ ಮಾಡಹೊರಟಿದ್ದೆ. ಇದು ನನ್ನ ಪಾಲಿಗೆ ಅಕ್ಷರಶಃ ಹುಚ್ಚೇ ಆಗಿತ್ತು. ಕೆಲವರ ಪ್ರಕಾರ ವೈಯುಕ್ತಿಕ ತೆವಲು!

ಹುಚ್ಚು? ಹೌದು ಅದು ಹುಚ್ಚೇ ಆಗಿತ್ತು. ಏಕೆಂದರೆ ಕಳೆದ ನಲವತ್ತು ವರ್ಷಗಳ ಕಾಲದಿಂದ ನಾನು ಒಂದು ಜ್ಞಾನ ಶಿಸ್ತಾಗಿ ಅಧ್ಯಯನ ಮಾಡುತ್ತಾ ಮತ್ತು ಒಂದು ಜೀವನ ಕ್ರಮವಾಗಿ ಸಾಧ್ಯವಾದಷ್ಟೂ ಪರಿಪಾಲಿಸುತ್ತಾ ಬಂದ ಸಮಾಜವಾದ ನನ್ನ ಪ್ರಕಾರ ಅದು ಸೋತಿದೆಯೆಂದು ಹೇಳಲಾದ ದಿನದಿಂದಲೂ ತನ್ನ ಪ್ರಸ್ತುತತೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಬಂದಿದೆ. ಉದಾಹರಣೆಗೆ, ಯಾವ ಆರ್ಥಿಕ ಉದಾರೀಕರಣ ಕ್ರಮಗಳು ಸಮಾಜವಾದದ ಸಾವನ್ನು ಘೋಷಿಸಿದವೋ ಅವು ಅನಾವರಣ ಮಾಡಿದ ಹೊಸ ಸಮೃದ್ಧಿಯ ಸ್ವರೂಪ, ವ್ಯಾಪ್ತಿ ಮತ್ತು ಅದು ಸೃಷ್ಟಿಸಿದ ಹೊಸ ಸಾಮಾಜಿಕ ವಿನ್ಯಾಸಗಳ ಒಡಲಲ್ಲೇ ಹೊಸ ಸಮಾಜವಾದದ ಬೀಜಗಳು ಅಡಗಿದ್ದುದನ್ನು ನಾನು

ಗಮನಿಸಿದ್ದೆ. ಅದಕ್ಕೆ ಮತ್ತೆ ನಾನು ಅರಿತುಕೊಂಡ ಸಮಾಜವಾದವೇ ಕಾರಣವಾಗಿತ್ತು. ಅಥವಾ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ನಾನು ಸಮಾಜವಾದವನ್ನು ಅರಿತುಕೊಂಡ ಬಗೆಯೇ ಕಾರಣವಾಗಿತ್ತು. ಅದು ಆಧುನಿಕ ಪರಿಭಾಷೆಯ ನೆಲೆಯಲ್ಲಿ ಒಂದು ರಾಜಕೀಯ ಪರಿಕಲ್ಪನೆಯೇ ಆಗಿದ್ದರೂ, ಅದರಲ್ಲಿ ಅದನ್ನು ಮೀರಿದ ದೊಡ್ಡ ಅರ್ಥ ನನಗೆ ಕಂಡಿತ್ತು. ಸಾಂಪ್ರದಾಯಿಕ ಧರ್ಮಗಳು ಸಂದೇಹಾಸ್ಪದವೆನಿಸತೊಡಗಿದ್ದ ಆಧುನಿಕ ಕಾಲದಲ್ಲಿ ಅದೊಂದು ಹೊಸ ಲೋಕದೃಷ್ಟಿಯನ್ನು ಪ್ರತಿನಿಧಿಸುವ ಹೊಸ ಧರ್ಮವೇ ಆಗಿತ್ತು. ಇವೊತ್ತು ಹೊಸ ಪೋಪ್‌ರು ಆಡುತ್ತಿರುವ ಮಾತುಗಳು ನನ್ನ ಮಾತನ್ನು ಸಮರ್ಥಿಸುವಂತಿವೆ.

ಪೋಪ್ ಅವರ ಮಾತುಗಳಿಗೆ ನಂತರ ಬರೋಣ. ಅದಕ್ಕೆ ಮೊದಲು ನನ್ನ ಈ ಮೇಲಿನ ಮಾತುಗಳನ್ನು ಸ್ವಲ್ಪ ವಿವರಿಸಬೇಕು. ನಾವು ಸಮಾಜವಾದವನ್ನು ಕೈಗಾರಿಕಾ ಯುಗದ ಉತ್ಪನ್ನವೆಂದು, ಆಧುನಿಕ ಯೂರೋಪ್‌ನಿಂದ ಬಂದ ಒಂದು ರಾಜಕೀಯ ತತ್ವಜ್ಞಾನವೆಂದು ಪರಿಭಾವಿಸಿದ್ದೇವೆ. ಆದರೆ ಈ ಸಮಾಜವಾದದ ಯೌವ್ವನದ ದಿನಗಳಲ್ಲೇ ಅದರ ಅವತಾರಗಳನ್ನು ಕಂಡಿದ್ದ ಗಾಂಧಿ ಸಮಕಾಲೀನ ಸಮಾಜವಾದಿಗಳ ಆಟಾಟೋಪಕ್ಕೆ 'ನೀವು ಕಲಿತ ಸಮಾಜವಾದಿಗಳಾಗಿದ್ದರೆ, ನಾನು ಹುಟ್ಟು ಸಮಾಜವಾದಿ' ಎಂದು ಸವಾಲೆಸೆದಿದ್ದರು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಹಾಗೇ, ಗಾಂಧಿ ತಮ್ಮ ಕೊನೆಯ ದಿನಗಳ ಹೊತ್ತಿಗೆ ತಮ್ಮ ರಾಜಕೀಯ ಉತ್ತರಾಧಿಕಾರಿಗಳ ರಾಜಕಾರಣದಿಂದ ಎಷ್ಟು ರೋಸಿಹೋಗಿದ್ದರೆಂದರೆ, ಅವರು ತಮ್ಮ ರಾಜಕೀಯ ಪರಂಪರೆಯ ನಿರಂತರತೆಯನ್ನು ಸಮಾಜವಾದಿಗಳಲ್ಲಿ ಕಂಡುಕೊಂಡಿದ್ದರೆಂಬ ಸೂಚನೆಗಳು ನಮಗೆ ದೊರೆಯುತ್ತವೆ. ನಿರ್ದಿಷ್ಟವಾಗಿ, ತರುಣ ಲೋಹಿಯಾರತ್ತ ಅವರ ವಿಶೇಷ ದೃಷ್ಟಿ ಬಿದ್ದಿತ್ತು. (ಈ ಸಂಚಿಕೆಯಲ್ಲಿನ ಎಸ್.ಆರ್. ನೆನೆಯವರ ಲೇಖನ ನೋಡಿ) ಇಲ್ಲಿ ಮುಖ್ಯ ಸಂಗತಿ ಎಂದರೆ, ಆ ಹೊತ್ತಿಗೆ ತಮ್ಮೊಂದಿಗೆ ಸದಾ ವೈಚಾರಿಕ ಘರ್ಷಣೆಯಲ್ಲಿರುತ್ತಿದ್ದ ಸಮಾಜವಾದಿಗಳೊಡನೆಯ ಸಂವಾದಗಳಿಂದ ಗಾಂಧೀಜಿಯ ಆಲೋಚನೆಗಳು ಎಷ್ಟು ಪ್ರಭಾವಿತವಾಗಿದ್ದವೋ ಅಷ್ಟೇ ಪ್ರಭಾವವನ್ನು ಅವರು ಸಮಾಜವಾದಿಗಳ ಮೇಲೂ ಬೀರಿದ್ದರು. ಇದರ ಪರಿಣಾಮವೆಂದರೆ, ಭಾರತದ ಸಮಾಜವಾದ ತನ್ನೆಲ್ಲ ಐರೋಪ್ಯ ಚಹರೆಗಳನ್ನು, ಆ ಮೂಲಕ ಪರಿಭಾಷೆಯನ್ನೂ ಕಳೆದುಕೊಂಡು ಹೆಚ್ಚೂ ಕಡಿಮೆ ಒಂದು ಭಾರತೀಯ ಪರಿಕಲ್ಪನೆಯೇ ಆಗಿತ್ತು. ಹಾಗಾಗಿ ಯಾವುದೇ ಭಾರತೀಯ ಅಥವಾ ಪೌರ್ವಾತ್ಯ ಪರಿಕಲ್ಪನೆಯಂತೆ ಈ ಸಮಾಜವಾದವೂ ಏಕಾಯಾಮದ ವಿದ್ಯಮಾನವಾಗಿರಲು ನಿರಾಕರಿಸಿ ತನ್ನ ರಾಜಕೀಯ ಚಹರೆಗಳನ್ನೂ ಮೀರಿ ಒಂದು ಸಮಗ್ರ ಲೋಕದೃಷ್ಟಿಯ ರೂಪ ಪಡೆಯಿತು. ಹೀಗಾಗಿ ನಾನು ಅವಧೂತ ಸಮಾಜವಾದಿ ಎಂದು ಕರೆಯುವ ಲೋಹಿಯಾ ತಮ್ಮ ಸಮಾಜವಾದಿ ವೈಚಾರಿಕತೆಯುದ್ದಕ್ಕೂ ಹೇಳಿದ್ದು, ಅದು ಸಮಾಜವಾದವೇ ಆಗಲಿ, ಬಂಡವಾಳಶಾಹಿಯೇ ಆಗಿರಲಿ, ಅವುಗಳ ಮೂಲಕ ಹೊಮ್ಮುವ ಸಾಮಾನ್ಯ ಐರೋಪ್ಯ ಲೋಕದೃಷ್ಟಿಯಾದ ಒಂದು ಮಿತಿಯ ಕಲ್ಪನೆಯೇ ಇಲ್ಲದ ಸದಾ ಏರುತ್ತಾ ಹೋಗುವ ಜೀವನ ಮಟ್ಟದ

ಕುಡಿತವು ಜಗತ್ತಿನಲ್ಲಿ ಯುದ್ಧ, ಅಭದ್ರತೆ ಮತ್ತು ಅಶಾಂತಿಗಳನ್ನು ನಿರಂತರಗೊಳಿಸುವುದು ಎಂಬುದು. ಜಗತ್ತು ಈ ಐರೋಪ್ಯ ಲೋಕದೃಷ್ಟಿಗೆ ಒಳಗಾದ ದಿನದಿಂದಲೂ ನಾವು ಕಾಣುತ್ತಿರುವುದು ಇದನ್ನೇ ಅಲ್ಲವೆ? ಸಮಾಜವಾದ ಎಂದರೆ ಆಧುನಿಕ ಮಾನವನ ಅಂತರಂಗದಲ್ಲಿ ಸದಾ ಮಾರ್ದನಿಸಬೇಕಾದ ಈ ಎಚ್ಚರಿಕೆಯ ಗಂಟೆ.

ಸಮಾಜವಾದ ಎಂದರೆ ಸಮಾನತೆಯ ರಾಜಕೀಯ ಮೀಮಾಂಸೆ ಎಂದು ನಂಬಿ ಅದನ್ನು ಸಾಧಿಸಲು ಮತ್ತೆ ಅದೇ ಆಧುನಿಕ ಯೂರೋಪ್‌ನ ಲೋಕದೃಷ್ಟಿಯ ತಂತ್ರ-ಸಾಧನೆಗಳನ್ನು ಬಳಸುವ ಮೂಲಕ ನಾವು ನಮಗೆ ಗೊತ್ತಿಲ್ಲದೇ ಮತ್ತೆ ಅದೇ ಲೋಕದೃಷ್ಟಿಯ ದಾಸರಾಗುವ-ಅಂದರೆ ನವವಸಾಹತುಶಾಹಿಗೆ ಬಲಿಯಾಗುವ-ಅಪಾಯವಿದ್ದೇ ಇರುತ್ತದೆ. ಇದನ್ನರಿಯದೆ ಸಮಾಜವಾದ ಸಮಾನತೆಯನ್ನು ಒಂದು ರಾಜಕೀಯ ಗುರಿಯಾಗಿ ಮಾತ್ರ ಬೆನ್ನತ್ತಿ ಹೋದದ್ದೇ ಅದರ ಸೋಲಿಗೆ, ವಿಶ್ವಾಸಾರ್ಹತೆಯ ನಷ್ಟಕ್ಕೆ (ಮತ್ತು ಜಾಗತೀಕರಣದ ಆಗಮನಕ್ಕೆ) ಕಾರಣವಾಯಿತೆಂದು ನನ್ನ ಭಾವನೆ. ಸಮಾನತೆ ಸಮೃದ್ಧಿಯ ಅಥವಾ ಶ್ರೀಮಂತಿಕೆ ಸೃಷ್ಟಿಯ ಹತಾರಗಳಿಂದ ಸಾಧಿತವಾಗುವಂತಹದುಲ್ಲ. ಹೆಚ್ಚೆಂದರೆ ಅದು ಎಂದೂ ತಣಿಯದ ಸಮಾನತೆಯ ದಾಹವನ್ನು ಹೆಚ್ಚಿಸುತ್ತಾ ಮನುಷ್ಯನನ್ನು ಸದಾ ಅಶಾಂತಿಯಲ್ಲೇ ಇಟ್ಟಿರುತ್ತದೆ. (ಈ ಹಿನ್ನೆಲೆಯಲ್ಲಿಯೇ ಈ ಹಿಂದೆ ನಾನು ಇಂದು ಬಡತನ ನಿವಾರಣೆಯ ನಿಜವಾದ ಮಾರ್ಗವೆಂದರೆ ಶ್ರೀಮಂತಿಕೆಯ ನಿವಾರಣೆಯ ಮಾರ್ಗ ಎಂದಿದ್ದುದು.) ಹಾಗಾಗಿಯೇ ಲೋಹಿಯಾ ಸಮಾನತೆ ಎಂಬ ಶಬ್ದವನ್ನು ಕೈಬಿಟ್ಟು ಸಮಾಜವಾದದ ಆಶಯವನ್ನು ಸಮತೆ ಎಂದು ಪುನರ್‌ನಿರೂಪಿಸಿದ್ದರು. ಈ ಅರ್ಥದಲ್ಲಿ ಸಮಾನತೆ ಎಂದರೆ ಆಂತರಿಕ ಪ್ರಶಾಂತಿ ಮತ್ತು ಬಾಹ್ಯ ಬಂಧುತ್ವ, ಒಮ್ಮೆಗೇ ವೈಯುಕ್ತಿಕವೂ, ಸಾಮಾಜಿಕವೂ ಆಗಿರುವ ಒಂದು ಸಮತೋಲನವದು. ಅದಕ್ಕಾಗಿ ಅವರು ಗಾಂಧಿ ಪರಂಪರೆಯಿಂದ ಪಡೆದ ಬೇರೆಯೇ ಹತಾರಗಳನ್ನು ಪ್ರತಿಪಾದಿಸಿದರು. ಒಂದೇ ಮಾತಲ್ಲಿ ಹೇಳುವುದಾದರೆ ಅದು ವಿಕೇಂದ್ರೀಕೃತ ಉತ್ಪಾದನೆ ಮತ್ತು ಆಡಳಿತ. ಇಂದಿನ ಜಾಗತೀಕರಣವೆಂದರೆ ಇದಕ್ಕೆ ತದ್ವಿರುದ್ಧವಾದ ರಾಜಕಾರಣ.

ಹಾಗಾಗಿ ಜಾಗತೀರಣ, ಉದಾರೀಕರಣ, ಮುಕ್ತ ಮಾರುಕಟ್ಟೆ ಇತ್ಯಾದಿ ಮಾಯಾವಿ ಹೆಸರುಗಳಲ್ಲಿ ನಮ್ಮನ್ನು ಆವರಿಸಿರುವ ಹೊಸ ಆರ್ಥಿಕತೆ ನಮ್ಮ ಸಮಾಜದಲ್ಲಿ ಉಂಟುಮಾಡಿರುವ ಹಲವು ವಕ್ರತೆ ಮತ್ತು ವಿಕ್ಷಿಪ್ತತೆಗಳು ಹಾಗೂ ಅವು ಸೃಷ್ಟಿಸಿರುವ ಬಗೆ ಬಗೆಯ ಹೊಸ ಹಿಂಸಾಚಾರಗಳು ನಿಧಾನವಾಗಿಯಾದರೂ ನಮ್ಮನ್ನೀಗ ತಾಕತೊಡಗಿವೆಯೆಂದು ತೋರುತ್ತದೆ. ರೈತರ ನಿರಂತರ ಆತ್ಮಹತ್ಯೆಗಳಂತಹ ಸ್ಥೂಲ ಉದಾಹರಣೆಗಳು ಕಣ್ಣಿಗೆ ಕಾಣುವಂತೆಯೇ ಇದ್ದು, ಒಂದು ಸೂಕ್ಷ್ಮ ಉದಾಹರಣೆಯಾಗಿ, ಇಂದು ನಮ್ಮ ಹೊಸ ತಲೆಮಾರಿನವರು ಬದುಕಿಗಾಗಿ ನಡೆಸಲಾಗುತ್ತಿರುವ ದುಡಿಮೆ ಅಥವಾ ವೃತ್ತಿಯು ಅವರ ದಿನ ನಿತ್ಯದ ಬದುಕನ್ನೇ ಎಷ್ಟು ಘಾಸಿಗೊಳಿಸಿ, ಅವರ ಒಟ್ಟು ಬದುಕಿನ ಅರ್ಥವನ್ನೇ ಅವರಿಂದ ಹೇಗೆ ಕಸಿದುಕೊಂಡಿದೆ ಎಂಬುದನ್ನು

ಗಮನಿಸಿ. ಹಾಗಾಗಿಯೇ 'ಹೊಸ ಮನುಷ್ಯ'ದಂತಹ ಪತ್ರಿಕೆ ನಮ್ಮ ಸಮಾಜದ ಒಂದು ಸಣ್ಣ ವರ್ಗಕ್ಕಾದರೂ ಇಂದು ಹೆಚ್ಚೆಚ್ಚು ಅಗತ್ಯವೆಂಬಂತೆ ಕಂಡುಬರುತ್ತಿದೆ. ಇದರರ್ಥ ಪತ್ರಿಕೆಯ ಓದುಗರು ಹೆಚ್ಚಾಗುತ್ತಿದ್ದಾರೆಂದಲ್ಲ. ಅದು ಸಾಧ್ಯವೂ ಅಲ್ಲ; ಪತ್ರಿಕೆಯ ಉದ್ದೇಶಕ್ಕನುಗುಣವಾಗಿಯೇ ನಾನದನ್ನು ನಿರೀಕ್ಷಿಸುವುದೂ ಇಲ್ಲ. ಸಮಕಾಲೀನ ಬದುಕಿನ ಹಲವು ಮುಖ್ಯ ಮತ್ತು ಸೂಕ್ಷ್ಮ ಸಂಗತಿಗಳನ್ನು ರೂಢಿಗೆ ವಿರುದ್ಧವಾಗಿ ನೋಡಿ ಚರ್ಚಿಸುವ ಪತ್ರಿಕೆಯ ಪ್ರಯತ್ನದಲ್ಲಿ ಸಾಮಾನ್ಯ ಓದುಗರ ಕುತೂಹಲ ಮತ್ತು ಭಾಗೀದಾರಿಕೆ ಹೆಚ್ಚಾಗತೊಡಗಿದೆ. ಈ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿರುವ ಪತ್ರಗಳು ಈ ಎಲ್ಲವನ್ನೂ ಹೇಳುವಂತಿವೆ. ಅಲ್ಲದೆ ಈ ಸಂಚಿಕೆಯ ಪ್ರಕಟಣೆಗೆ ಸಿಕ್ಕ ಪ್ರೋತ್ಸಾಹ ಮತ್ತು ಸದಾಶಯ ಪತ್ರಿಕೆಯನ್ನು ಹಲವು ವೈಯುಕ್ತಿಕ ಕಾರಣಗಳಿಂದಾಗಿ ಈ ವರ್ಷಕ್ಕೆ ಸಾಕುಮಾಡಬೇಕೆಂದಿದ್ದ ನನ್ನಲ್ಲಿ ಇನ್ನೂ ಒಂದು ವರ್ಷ ಮುಂದುವರೆಸುವ ಚೈತನ್ಯ ತುಂಬಿದೆ. ಪತ್ರಿಕೆಯನ್ನು ಆರಂಭಿಸಿದ್ದು ಅದು ನನ್ನ ವೈಯುಕ್ತಿಕ ತೆವಲೇ ಆಗಿದ್ದಿರಬಹುದು. ಆದರೆ ನಾಲ್ಕು ವರ್ಷಗಳ ನಂತರ ಆ ತೆವಲು ಬರೀ ನನ್ನದಾಗಿರದೆ ಹಲವರದ್ದಾಗಿಹೋಗಿದೆ!

ಈಗ ಪೋಪ್‌ರ ಮಾತುಗಳಿಗೆ ಬರೋಣ. ಇಡೀ ಜಗತ್ತಿನ ಕ್ರಿಶ್ಚಿಯನ್ ಮತಾನುಯಾಯಿಗಳ ಧರ್ಮಗುರುಗಳಾದ ಪೋಪ್‌ರು ಕೇವಲ ಧರ್ಮಗುರುಗಳಲ್ಲ. ಅವರು ಪಶ್ಚಿಮದ ಲೋಕದೃಷ್ಟಿಯ ಮತ್ತು ಅದು ಕಟ್ಟಿರುವ ರಾಜಕಾರಣದ ಪರೋಕ್ಷ ವಕ್ತಾರರೂ ಎಂದು ಹೇಳಬಹುದಾಗಿದೆ. ಈ ಹಿಂದಿನ ಪೋಪ್‌ಗಳ ವರ್ತನೆಯೂ ಹೆಚ್ಚೂ ಕಡಿಮೆ ಹಾಗೇ ಇತ್ತು. ಆದರೆ ಪಶ್ಚಿಮದಲ್ಲೇ ನಿರ್ಲಕ್ಷಿತವಾಗಿದ್ದ ಅಥವಾ ಭಿನ್ನಮತೀಯವಾಗಿದ್ದ ಲ್ಯಾಟಿನ್ ಅಮೆರಿಕಾದಿಂದ(ಅರ್ಜೆಂಟೈನಾದಿಂದ) ಬಂದಿರುವ ಈ ಹೊಸ ಪೋಪ್ ಈಗ ಆಡಲಾರಂಭಿಸಿರುವ ಮಾತುಗಳನ್ನು ಈ ದೃಷ್ಟಿಯಿಂದ ಗಮನಿಸಿದಾಗ ಅವು ಪಶ್ಚಿಮದ ಪಶ್ಚಾತ್ತಾಪದ ಮಾತುಗಳಾಗಿ ಕೇಳಿಸುತ್ತವೆ. ಅವರು ಬಡವನಾದ ಜೀಸಸ್‌ನನ್ನು ನೆನೆಸಿಕೊಂಡಿದ್ದಾರೆ. ಹಣದ ದುಷ್ಟ ಶಕ್ತಿಯ ಬಗ್ಗೆ, ಮಾರುಕಟ್ಟೆ ಬಂಡವಾಳಶಾಹಿಯ ಬಗ್ಗೆ, ಅದು ಜಗತ್ತಿನಾದ್ಯಂತ ಸೃಷ್ಟಿಸುತ್ತಿರುವ ಮನುಷ್ಯನ ಹೆಚ್ಚೆಚ್ಚು ಸುಖಸಾಧನಗಳ ದಾಹದ ಬಗ್ಗೆ, ಅದರ ಪರಿಣಾಮವಾಗಿ ಹೆಚ್ಚುತ್ತಿರುವ ಮನುಷ್ಯರ ಹೃದಯಹೀನತೆಯ ಬಗ್ಗೆ, ಜಾಗತಿಕ ಬಡತನದ ಬಗ್ಗೆ, ಹೆಚ್ಚುತ್ತಿರುವ ಈ ಭೂಮಿಯ ಅನಾರೋಗ್ಯದ ಬಗ್ಗೆ ಮಾತನಾಡುತ್ತಿದ್ದಾರೆ. ಪೋಪ್ ಫ್ರಾನ್ಸಿಸ್ ಅವರು ಕ್ರಾಂತಿಕಾರಿ ಚೆಗೆವಾರಾನ ಬೊಲಿವಿಯಾಗೆ ಹೋಗಿ ಬಂದರು. ಅಷ್ಟೇ ಅಲ್ಲ, ಒಂದು ಜಾಗತಿಕ ಐತಿಹಾಸಿಕ ಬೆಳವಣಿಗೆ ಎನಿಸಿರುವ ಕ್ಯೂಬಾ ಮತ್ತು ಅಮೆರಿಕಾಗಳು ಗೆಳೆಯರಾಗಲು ಅನುವು ಮಾಡಬಹುದಾದ ಕ್ಯೂಬಾದ ಅಧ್ಯಕ್ಷ ರೌಲ್ ಕ್ಯಾಸ್ಟ್ರೋ ಮತ್ತು ಒಬಾಮಾರ ನಡುವಣ ಭೇಟಿಯ ಹಿಂದೆ ಈ ಪೋಪ್‌ರ ಮಧ್ಯಸ್ಥಿಕೆ ಇದೆ ಎಂದೂ ಹೇಳಲಾಗುತ್ತಿದೆ. ಇವರ ಇನ್ನೂ ಒಂದು ದೊಡ್ಡ ಕೊಡುಗೆಯೆಂದರೆ, ಇಸ್ಲಾಂನ್ನು ಶಾಂತಿಯ ಧರ್ಮವೆಂದು ಕರೆದು ಇಸ್ಲಾಂನ್ನು ವಿಪತ್ಕಾರಕವೆಂದು ನೋಡುವ ಪಶ್ಚಿಮದ ನಿಲುವನ್ನು ಸಮ್ಮತಿಸದಿರುವುದು. ವ್ಯಾಟಿಕನ್ 'ರಾಜ್ಯ'ದ ಪ್ರಭುವೇ ಆದ ಈ ಪೋಪ್ ಎಲ್ಲ ರಾಜ

ವೈಭೋಗಗಳನ್ನೂ ತೊರೆದು ಕನಿಷ್ಟ ಅಗತ್ಯಗಳ ಸರಳ ಬದುಕನ್ನು ನಡೆಸಲು ತೀರ್ಮಾನಿಸಿದ್ದಾರೆ.

ಇಂತಹ ಪೋಪ್ ಹೇಗೆ ಬಂದರು? ಏಕೆ ಬಂದರು? ಜಗತ್ತಿನಲ್ಲಿ ಸಮಾಜವಾದ ಜೀವಂತವಾಗಿರುವುದು ಹೀಗೆ. ಮಾರುಕಟ್ಟೆ ಆರ್ಥಿಕತೆಯ ಅನಾಹುತಗಳ ವಿರುದ್ಧವಾಗಿ ಸಮಾಜವಾದ ಒಂದು ಜಾಗತಿಕ ಮಟ್ಟದ ಧರ್ಮವಾಗಿ ಎದ್ದು ನಿಲ್ಲುವುದು ಹೀಗೆ. ಸಮಾಜವಾದ ಹೀಗೆ ಒಂದು ಧರ್ಮವಾಗಿ ವ್ಯಕ್ತವಾದಾಗಲೇ ಅದು ಒಂದು ಸಮಾಜವಾದಿ ರಾಜಕಾರಣವಾಗಿ ಕೂಡ ಮೈ ಪಡೆಯುವುದು. ಆದರೆ ಅದು ಭಾರತದಲ್ಲಿ ಸಂಭವಿಸಲೇ ಇಲ್ಲ. ಗಾಂಧಿ ಇನ್ನೂ ಒಂದಷ್ಟು ಕಾಲ ಬದುಕಿದ್ದರೆ ಅದು ಲೋಹಿಯಾ ಮತ್ತವರ ಸಹವರ್ತಿಗಳ ಮೂಲಕ ಸಂಭವಿಸಬಹುದಿತ್ತೋ ಏನೋ! ಆದರೆ ಭಾರತದಲ್ಲಿ ಸೋತದ್ದು ಇಂತಹ ಸಮಾಜವಾದವಲ್ಲ. ಬದಲಿಗೆ, ಐರೋಪ್ಯ ಮೂಲ ಮಾದರಿಯ 'ಪ್ರಗತಿಪರತೆ–ಅಭಿವೃದ್ಧಿ'ಯ ಭಾಷೆಯ ಸಮಾಜವಾದ. ಅದು ನೆಹರೂ ಸಮಾಜವಾದ.

ಆದರೆ ಭಾರತದಲ್ಲಿ ಇಂದು ಧರ್ಮವಾದಿಗಳೆಂದು ಹೇಳಲಾಗುವ ರಾಜಕಾರಣವೇ ವಿಜೃಂಭಿಸುತ್ತಿದ್ದರೂ ಸಮಾಜವಾದಕ್ಕೆ ಇಲ್ಲಿ ಜಾಗವಿಲ್ಲ. ಬದಲಿಗೆ ಈ ಧರ್ಮವಾದಿಗಳು ಸಮಾಜವಾದದ ಕಟ್ಟಾ ವಿರೋಧಿಗಳು. ಕಾರಣ, ಇವರ ಧರ್ಮ ಕೂಡ ಆಧುನಿಕ ಐರೋಪ್ಯ ಧರ್ಮದ ಸ್ಫೂರ್ತಿಯಲ್ಲೇ ಪುನರ್‌ರೂಪಿತವಾಗಿರುವುದು. ಇವರ ತಾತ್ವಿಕ ಗುರು ಸಾವರ್ಕರ್ 'ಹಿಂದೂ' ಧರ್ಮವನ್ನು ಅದರ ಪೌರ್ವಾತ್ಯ ಬೇರುಗಳಿಂದ (ಬಹು ಸಂಸ್ಕೃತಿ ತತ್ವದಿಂದ) ಬೇರ್ಪಡಿಸಿ ಆಧುನಿಕ (ವೈಜ್ಞಾನಿಕ?) ಕ್ರಿಶ್ಚಿಯನ್ ಧರ್ಮದ ಏಕೀಕೃತ ಮಾದರಿಯಲ್ಲಿ ಮಂಡಿಸಿದ್ದನ್ನೂ, ಅವರ 'ಬಲಿಷ್ಠ ಭಾರತ' ಕಲ್ಪನೆಗೆ ಆಧಾರವಾದ ಅವರ 'ಅಭಿವೃದ್ಧಿ'ವಾದವನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಆದರೆ ಇವರ ಇಂತಹ ಆಧುನಿಕತೆಯ ಪರಿಣಾಮಗಳ ವಿರುದ್ಧ ಆ ಪರಂಪರೆಯ ಇಂದಿನ ಉತ್ತರಾಧಿಕಾರಿಯೆನಿಸಿದ ಪೋಪ್‌ರೇ ಮಾತನಾಡತೊಡಗಿರುವುದನ್ನು ಭಾರತದ ಈ ಧರ್ಮವಾದಿಗಳು ಗಮನಿಸುವ ಗೋಜಿಗೆ ಹೋಗಿಲ್ಲ. ಗಮನಿಸುವಂತಾಗಿದ್ದರೆ ಇವರ 'ಹಿಂದೂ' ಧರ್ಮದ ಕಲ್ಪನೆಯೇ ಬದಲಾಗುವ ಸಾಧ್ಯತೆ ಇತ್ತು. ಬಹುಶಃ ಇದಕ್ಕೆ ಕಾರಣ, ಇವರ ಧರ್ಮಕ್ಕೆ ಜೀಸಸ್‌ನಂತಹ ಬಡ ನಾಯಕನಿಲ್ಲ. ಏನಿದ್ದರೂ ಧನುರ್ಧಾರಿ, ಚಕ್ರಧಾರಿ ಅಥವಾ ತ್ರಿಶೂಲಧಾರಿಗಳೇ ಇವರ ನಾಯಕರು. ಹಾಗಾಗಿಯೇ ಇವರು ಆಧುನಿಕ 'ಬಲಿಷ್ಠ ಭಾರತ'ವನ್ನು ಕಟ್ಟಹೊರಟಿದ್ದಾರೆ. ಇಲ್ಲಿ ಸನಾತನ ಧರ್ಮವನ್ನು ದಟ್ಟವಾಗಿ ಪ್ರಭಾವಿಸಿ ಅದನ್ನು 'ಹಿಂದೂ'ವಾಗಿಸಿದ ಬುದ್ಧನಿಗೆ ಜಾಗವಿಲ್ಲ. ಹಾಗಾಗಿಯೇ ಇವರ ಬಳಿ ಸಮಾಜವಾದ ಸುಳಿಯಲಾರದು.

ಹೀಗಾಗಿ ಇವರು ಕಟ್ಟ ಹೊರಟಿರುವ ಬಲಿಷ್ಠ ಭಾರತದಲ್ಲಿ ಬಲಿಷ್ಠರಲ್ಲದವರಿಗೆ ಮತ್ತು ಬಲಿಷ್ಠರಾಗಲೊಲ್ಲದವರಿಗೆ ಬಹಳ ಕಷ್ಟದ ದಿನಗಳು ಎದುರಾಗುವ ಎಲ್ಲ ಸೂಚನೆಗಳೂ ಈಗಾಗಲೇ ಕಾಣತೊಡಗಿವೆ ಎಂದಷ್ಟೇ ಸದ್ಯಕ್ಕೆ ಹೇಳಿದರೆ ಸಾಕೆಂದು ಕಾಣುತ್ತದೆ. ವಿವರಣೆ ಅಗತ್ಯವಿಲ್ಲದಷ್ಟು ಅವು ರಾಷ್ಟ್ರ ಜೀವನದ ಹಲವು ಸ್ತರಗಳಲ್ಲಿ

ಎದ್ದು ಕಾಣತೊಡಗಿವೆ. ದುರಂತವೆಂದರೆ, ಇದಕ್ಕೆ ನಿಜವಾಗಿ ಸವಾಲೆಸೆಯುವಂತಹ ಛಾತಿ ಇರುವ ರಾಜಕೀಯ ಶಕ್ತಿಯೇ ಇವೊತ್ತು–ಆಪ್ ಎಂಬ ದುಃಸ್ವಪ್ನದ ನಂತರವಂತೂ–ಭಾರತದಲ್ಲಿ ಕಾಣೆಯಾಗಿದೆ. ಹೇಗೂ ಮೋದಿಯವರು ಭರವಸೆ ನೀಡಿದ ಆ 'ಅಚ್ಛೇ ದಿನ'ಗಳು ಬರಲು ಇನ್ನೂ ೨೫ ವರ್ಷಗಳು ಬೇಕು ಎಂದು ಅವರ ಪಕ್ಷದ ಅಧ್ಯಕ್ಷ ಅಮಿತ್‌ಶಾ ಅವರೇ ಹೇಳಿದ್ದಾರಲ್ಲಾ? ಅಲ್ಲಿಯವರೆಗೆ ನಮಗೆ ಕಾಲಾವಕಾಶವಿದೆಯೇನೋ!

ಸಮಕಾಲೀನ

ರೈತರ ಸರಣಿ ಆತ್ಮಹತ್ಯೆ : ಏಕೆ?

ನಗರೀಕರಣವೇ ನಿಜವಾದ ಅಭಿವೃದ್ಧಿಯೆಂದು ನಂಬಿದ ಈ ಆರ್ಥಿಕತೆ ಹುಟ್ಟಿಸುತ್ತಿರುವ ಜೀವನ ಆಶೋತ್ತರಗಳಿಗೆ, ಜೀವನ ಕ್ರಮಗಳಿಗೆ, ಜೀವನಮೌಲ್ಯಗಳಿಗೆ ರೈತರೂ ತಮ್ಮನ್ನು ಒಪ್ಪಿಸಿಕೊಂಡುಬಿಟ್ಟಿದ್ದಾರೆ. ಹೊರಗಿನ 'ಅಭಿವೃದ್ಧಿ'ಯ ವಾತಾವರಣದ ಒತ್ತಡ ಅಷ್ಟು ದಟ್ಟವಾಗಿದೆ. ಇಲ್ಲದಿದ್ದರೆ ಇಂದಿನ ಹಳ್ಳಿಗಳು ಈಗ ಕಾಣತೊಡಗುತ್ತಿರುವಂತೆ ನಮ್ಮ ನಗರಗಳ ಬಡ ಅಣಕುಗಳಂತೆ ಕಾಣತೊಡಗುತ್ತಿರಲಿಲ್ಲ. ರೈತರ ಮನೆಗಳು, ಆಚರಣೆಗಳು, ಖರ್ಚುಗಳು ಈ ಪರಿ–ಕೃಷಿ ಸಂಸ್ಕೃತಿಯ ಪರಿಧಿಗಳಾಚೆಗೆ–ಬದಲಾಗುತ್ತಿರಲಿಲ್ಲ. ಸರ್ಕಾರ ಕೃಷಿಯನ್ನು ಇನ್ನೂ ಕೈಗಾರಿಕೆಯೆಂದು ಘೋಷಿಸಿಲ್ಲವಾದರೂ ನಮ್ಮ ಹಳ್ಳಿಗಳ ವ್ಯವಹಾರಗಳೆಲ್ಲ ಕೈಗಾರಿಕಾ ಸಮಾಜದ ವ್ಯವಹಾರಗಳಂತಾಗಿ ಅವು ಕುರೂಪಿ ಕೈಗಾರಿಕಾ ಕಾಲೋನಿಗಳಂತೆ ಕಾಣತೊಡಗಿವೆ.

ಈ ಸಾಲುಗಳನ್ನು ಬರೆಯುತ್ತಿರುವ ಹೊತ್ತಿನಲ್ಲಿ (ಜುಲೈ ೨೫, ೨೦೧೫) ಕಳೆದ ವಾರವೊಂದರಲ್ಲೇ ರಾಜ್ಯದಲ್ಲಿ ನೂರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಂದು ತಿಂಗಳ ಹಿಂದೆ ಅಲ್ಲೊಂದು ಇಲ್ಲೊಂದೆಂಬಂತೆ ವರದಿಯಾಗುತ್ತಿದ್ದ ಈ ಆತ್ಮಹತ್ಯೆ ಈಗ ಸಾಂಕ್ರಾಮಿಕ ರೋಗದಂತೆ–ನಮ್ಮ ಸರ್ಕಾರ, ವಿರೋಧ ಪಕ್ಷಗಳು, ವಿವಿಧ ರೈತಸಂಘಗಳು ಕೈಮುಗಿದು ಬೇಡಿಕೊಳ್ಳುತ್ತಿದ್ದರೂ ಲೆಕ್ಕಿಸದೆ–ಹರಡಿದೆ. ಸರ್ಕಾರ ಬ್ಯಾಂಕುಗಳಿಗೆ ಸಾಲ ವಸೂಲಾತಿಗೆ ಒತ್ತಡ ಹೇರದಂತೆ ಸೂಚಿಸುತ್ತಿದೆ, ಮೀಟರ್ ಬಡ್ಡಿ ದಂಧೆಕೋರರನ್ನು ಬಂಧಿಸುತ್ತಿದೆ, ವಿರೋಧ ಪಕ್ಷವೊಂದು ಸಹಾಯವಾಣಿ ತೆರೆದಿದೆ, ರೈತಸಂಘಗಳು ಸಾಂತ್ವನ ಮತ್ತು ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಆದರೆ ಇವಾವುವೂ ರೈತರ ಆತ್ಮಹತ್ಯೆ ಸರಣಿಯನ್ನು ಸದ್ಯಕ್ಕಂತೂ ತುಂಡರಿಸಲು ಸಾಧ್ಯವಾಗುತ್ತಿಲ್ಲ. ಇಡೀ ನಾಡು ಏನೂ ತೋಚದಂತೆ ಅಸಹಾಯಕವಾಗಿ, ಗಾಬರಿಯಾಗಿ ಕೂತುಬಿಟ್ಟಿದೆ. ರೈತ ಬಂಧುಗಳಿಗೆ ಆತ್ಮಹತ್ಯೆಯೇ ತಮ್ಮ ಕಷ್ಟ ಪರಂಪರೆಯನ್ನು ಕೊನೆಗಾಣಿಸುವ ಏಕೈಕ ಮಾರ್ಗವೆನ್ನಿಸಿಬಿಟ್ಟಿದೆಯಲ್ಲಾ, ಏಕೆ?

ಈ ಆತ್ಮಹತ್ಯೆ ಒಂದು ದಿನ ನಿಲ್ಲುವುದು; ನಿಲ್ಲಲೇಬೇಕು. ಏಕೆಂದರೆ ಅದು ಯಾವುದಕ್ಕೂ ಸಹಜ ಮಾರ್ಗವಲ್ಲ. ಜೊತೆಗೆ ಅದೇನೂ ಸುಲಭ, ನಿರಾಳ ಮಾರ್ಗವೇನೂ ಅಲ್ಲ.

ಏಕೆಂದರೆ ತನ್ನ ಮತ್ತು ತನ್ನ ಕುಟುಂಬದ ಸುಖ-ನೆಮ್ಮದಿಗಾಗಿ ಬದುಕು ಕಟ್ಟಿಕೊಂಡವರು ಅದನ್ನೇ ಇಷ್ಟು ಸುಲಭವಾಗಿ ಮುಗಿಸಿ ಹೊರಡಲಾರರು. ಯಾರಿಗೂ ಅದು ಬದುಕುವ ಎಲ್ಲ ಮಾರ್ಗಗಳೂ ಮುಚ್ಚಿಹೋದ ನಂತರದ ಕೊಟ್ಟಕೊನೆಯ ಆಯ್ಕೆ. ಆದರೂ ನಮ್ಮ ರೈತರೇಕೆ ಈ ಮಾರ್ಗ ಹಿಡಿದಿದ್ದಾರೆ? ಇದು ಮೊದಲಬಾರಿಗೆ ಏನೂ ಅಲ್ಲ, ಇದ್ದಕ್ಕಿದ್ದಂತೆ ಆಗುತ್ತಿರುವುದೂ ಅಲ್ಲ. ಆದರೆ ರಾಜ್ಯದ ರೈತರೆಂದೂ ಈ ಪರಿಯಲ್ಲಿ ಹೀಗೆ ಇದ್ದಕ್ಕಿದ್ದಂತೆ ಇಷ್ಟು ನಿಷ್ಠುರವಾಗಿ ಈ ಕೊಟ್ಟಕೊನೆಯ ಆಯ್ಕೆಗೆ ಮುಗಿಬೀಳುತ್ತಿದ್ದಾರೆ? ಇದಕ್ಕೆ ಏನು ಕಾರಣ? ನಿಜವಾಗಿ ಅವರಿಗೆ ಬದುಕುವ ಎಲ್ಲ ಮಾರ್ಗಗಳೂ ಮುಚ್ಚಿಹೋಗುತ್ತಿವೆಯೇ?

ಒಬ್ಬೊಬ್ಬರು ಒಂದೊಂದು ಕಾರಣ ಹೇಳುತ್ತಿದ್ದಾರೆ. ಒಬ್ಬರು ಬೆಳೆನಾಶ ಅವನನ್ನು ಕಂಗಾಲಾಗಿಸಿದೆ ಎಂದರೆ, ಇನ್ನೊಬ್ಬರು ಸಾಲಬಾಧೆಯಿಂದ ಸುಸ್ತಾಗಿದ್ದಾನೆ ಎನ್ನುತ್ತಾರೆ. ಮತ್ತೊಬ್ಬರು ರೈತರು ಬದುಕುವ ಕಲೆಯನ್ನೇ ಮರೆತಿದ್ದಾರೆ ಎನ್ನುತ್ತಿದ್ದಾರೆ. ಆದರೆ ಪ್ರಶ್ನೆ ಇವು ಇಂದಿನ ಹೊಸ ಸಂಗತಿಗಳೇ ಎಂಬುದು. ಈ ಬುಡದ ಪ್ರಶ್ನೆಯನ್ನು ಹಾಕಿಕೊಳ್ಳಲು ನಿರಾಕರಿಸುತ್ತಿರುವ ನಮ್ಮ ಸರ್ಕಾರಗಳು, ವಿರೋಧ ಪಕ್ಷಗಳು, ರೈತಸಂಘಗಳು ಮತ್ತೆ ಅದೇ ತತ್ಕಾಲೀನ ಪರಿಹಾರಗಳ ಮಾತುಗಳನ್ನಾಡುತ್ತಿವೆ: ಬೆಳೆ ಪರಿಹಾರದ, ಕುಟುಂಬ ಸಹಾಯದ, ಸಾಲ ಮನ್ನಾದ, ವೈಜ್ಞಾನಿಕ ಬೆಲೆಗಳ ಮಾತು. ಇದಕ್ಕೆ ಕಾರಣ ಎಲ್ಲರೂ ಇಂದಿನ ಆರ್ಥಿಕತೆಯ ಸ್ವರೂಪವನ್ನು ಒಪ್ಪಿಕೊಂಡುಬಿಟ್ಟಿದ್ದಾರೆ. ಈ ಉದಾರ, ಮುಕ್ತ ಮಾರುಕಟ್ಟೆ ನೀತಿ ನಮ್ಮ ಕೃಷಿ ಚಟುವಟಿಕೆಗಳ ಕೇಂದ್ರಗಳಾದ ಹಳ್ಳಿಗಾಡನ್ನು, ಅದರ ಆರ್ಥಿಕತೆಯನ್ನು ಹೇಗೆ ವಾರೆಗಣ್ಣಲ್ಲಷ್ಟೇ ನೋಡುತ್ತಿದೆ ಎಂಬುದನ್ನು ಇವರಾರೂ ಗಂಭೀರವಾಗಿ ಪರಿಶೀಲಿಸುತ್ತಿಲ್ಲ. ನಗರೀಕರಣವೇ ನಿಜವಾದ ಅಭಿವೃದ್ಧಿಯೆಂದು ನಂಬಿದ ಈ ಆರ್ಥಿಕತೆ ಹುಟ್ಟಿಸುತ್ತಿರುವ ಜೀವನ ಆಶೋತ್ತರಗಳಿಗೆ, ಜೀವನ ಕ್ರಮಗಳಿಗೆ, ಜೀವನಮೌಲ್ಯಗಳಿಗೆ ರೈತರೂ ಒಪ್ಪಿಕೊಂಡುಬಿಟ್ಟಿದ್ದಾರೆ. ಹೊರಗಿನ 'ಅಭಿವೃದ್ಧಿ'ಯ ವಾತಾವರಣದ ಒತ್ತಡ ಅಷ್ಟು ದಟ್ಟವಾಗಿದೆ. ಇಲ್ಲದಿದ್ದರೆ ಇಂದಿನ ಹಳ್ಳಿಗಳು ಈಗ ಕಾಣತೊಡಗುತ್ತಿರುವಂತೆ ನಮ್ಮ ನಗರಗಳ ಬಡ ಅಣಕುಗಳಂತೆ ಕಾಣತೊಡಗುತ್ತಿರಲಿಲ್ಲ. ರೈತರ ಮನೆಗಳು, ಆಚರಣೆಗಳು, ಖರ್ಚುಗಳು ಈ ಪರಿ-ಕೃಷಿ ಸಂಸ್ಕೃತಿಯ ಪರಿಧಿಗಳಾಚೆಗೆ-ಬದಲಾಗುತ್ತಿರಲಿಲ್ಲ. ಸರ್ಕಾರ ಕೃಷಿಯನ್ನು ಇನ್ನೂ ಕೈಗಾರಿಕೆಯೆಂದು ಘೋಷಿಸಿಲ್ಲವಾದರೂ ನಮ್ಮ ಹಳ್ಳಿಗಳ ವ್ಯವಹಾರಗಳೆಲ್ಲ ಕೈಗಾರಿಕಾ ಸಮಾಜದ ವ್ಯವಹಾರಗಳಂತಾಗಿ ಅವು ಕುರೂಪಿ ಕೈಗಾರಿಕಾ ಕಾಲೋನಿಗಳಂತೆ ಕಾಣತೊಡಗಿವೆ. ಸಾಲ ಮನ್ನಾಗಳನ್ನು ಆಗ್ರಹಿಸುವ ಜನ ಈ ಸಾಲಗಳ ನಿಜವಾದ ಸ್ವರೂಪದ-ಪಡೆದದ್ದು ಯಾಕೆ, ಖರ್ಚು ಮಾಡಿದ್ದು ಯಾವುದಕ್ಕೆ, ಹೇಗೆ-ಅಧ್ಯಯನ ಮಾಡಿದಂತಿಲ್ಲ. ಸಾಲದ ದುರುಪಯೋಗದ ಬಗ್ಗೆ ನಾನು ಮಾತನಾಡುತ್ತಿಲ್ಲ.(ಅದು ಎಲ್ಲ ವಲಯಗಳ ಸಾಮಾನ್ಯ ಲಕ್ಷಣ) ಆದರೆ ಆ ಸೌಲಭ್ಯವನ್ನು ಬಳಸುವಲ್ಲಿನ ವಿವೇಕ ಯಾವ ತೆರನದ್ದು ಎಂಬುದನ್ನು ಪರಿಶೀಲಿಸಬೇಕಿದೆ. ಈ ದಿಸೆಯಲ್ಲಿ ಮಾರ್ಗದರ್ಶನ

ಮಾಡಬಹುದಾಗಿದ್ದ ಕೃಷಿ ಇಲಾಖೆ ಮತ್ತು ನಮ್ಮ ವಿಶ್ವವಿದ್ಯಾಲಯಗಳೂ ರೈತರಿಗಿಂತ ಬಹು ಮುನ್ನವೇ ಹೊಸ ಆರ್ಥಿಕತೆಯ ಏಜೆಂಟರುಗಳಾಗಿ ಪರಿವರ್ತಿತವಾಗಿಬಿಟ್ಟಿವೆ.

ಹೊಸ ಆರ್ಥಿಕತೆಯಿಂದ ಆಕರ್ಷಿತನಾಗಿರುವ ರೈತ ಅದು ಹುಟ್ಟು ಹಾಕಿರುವ ಜೀವನಕ್ರಮ ಮತ್ತು ಗುರಿಗಳೊಳಕ್ಕೆ ಪ್ರವೇಶಿಸುವ ಯತ್ನ ಮಾಡುತ್ತಾ ಅದರೊಳಗೆ ಸಿಕ್ಕಿಹಾಕಿಕೊಂಡು ಈಚೆಗೆ ಬರದವನಾಗುತ್ತಿದ್ದಾನೆ. ಕಾರಣ ಈ ಆರ್ಥಿಕತೆಯೇ ಹಳ್ಳಿಯ ನಾಶಕ್ಕೆ ಬದ್ಧವಾಗಿದೆ. ಹಾಗಾಗಿ ರೈತ ಪರೋಕ್ಷವಾಗಿ–ದೂರದ ಪರಿಣಾಮವಾಗಿ–ತಾನು ನಿಂತ ನೆಲವನ್ನೇ–ಅಕ್ಷರಶಃ–ಬುಡಮೇಲು ಮಾಡುವ ಕೆಲಸದಲ್ಲಿ ತೊಡಗಿದ್ದಾನೆ. ಇದನ್ನು ಹೇಳಿದರೆ ನಮ್ಮ ಕೆಲ ರೈತನಾಯಕರು–ನಮ್ಮ ಕೆಲ ದಲಿತ ನಾಯಕರಂತೆಯೇ–ಏಕೆ, ರೈತರು ಮುಂದುವರೆಯಬಾರದೇ? ಒಳ್ಳೆಯ ಬದುಕು ನಡೆಸಬಾರದೇ? ಅವರ ಮಕ್ಕಳು ವಿದೇಶಗಳಿಗೆ ಹೋಗಬಾರದೆ? ಎಂದೆಲ್ಲ ಪ್ರಶ್ನೆಗಳನ್ನು ಹಾರಿಸುತ್ತಾರೆ. ಆದರೆ ಒಳ್ಳೆಯ ಬದುಕು ಎಂದರೇನು ಎಂಬ ಪ್ರಜ್ಞೆಯನ್ನೇ ನಾಶ ಮಾಡಲಾಗುತ್ತಿರುವ ಕಾರ್ಯಕ್ರಮದೊಳಕ್ಕೆ ಅವರೂ ಪ್ರವೇಶಿಸಿಬಿಟ್ಟಿದ್ದಾರೆ. ಇದೇ ಮತ್ತೆ ಮರುಕಳಿಸುತ್ತಿರುವ ಮತ್ತು ಮರುಕಳಿಸಲಿರುವ ರೈತರ ಸರಣಿ ಆತ್ಮಹತ್ಯೆಯ ಹಿಂದಿನ ನಿಜವಾದ ದುರಂತ. ಇದನ್ನು ನಮ್ಮ ರೈತ ಸಂಘಗಳೂ ಅರ್ಥ ಮಾಡಿಕೊಳ್ಳದಿರುವುದು ಇನ್ನೂ ದೊಡ್ಡ ದುರಂತ. ಅವು ಮೊದಲಿಂದಲೂ ಹೋರಾಟದ ಹೆಸರಿನಲ್ಲಿ ಬರೀ ಘೋಷಣೆ, ಆಗ್ರಹ, ಆರೋಪ, ಬೇಡಿಕೆಗಳ ರಾಜಕಾರಣವನ್ನೇ ಮಾಡುತ್ತಾ ಬಂದಿವೆ. ಹಾಗಾಗಿಯೇ ಇಂದು ಕೂಡ ಅವುಗಳ ಸಾಂತ್ವನದ, ಶಿಕ್ಷಣದ ಮಾತುಗಳು ರೈತರ ಮನಕ್ಕೆ ಬೀಳುತ್ತಿಲ್ಲ. ಹಾಗೆ ನೋಡಿದರೆ, ಇಂದು ಶಿಕ್ಷಣ ಬೇಕಾಗಿರುವುದು ಈ ರೈತಸಂಘಗಳಿಗೇ, ಈ ರೈತ ನಾಯಕರಿಗೇ. ಅವರ ಒಡಕು, ದುಡುಕು, ದ್ವೇಷ, ಪುಡಾರಿತನಗಳನ್ನು ನೋಡಿದರೇ ಇದು ಸಾಬೀತಾಗುವಂತಿದೆ.

ಈ ಎಲ್ಲ ಹಿನ್ನೆಲೆಯಲ್ಲಿ, ಸದ್ಯದ ರೈತರ ಆತ್ಮಹತ್ಯೆ ಬಗ್ಗೆ ಪತ್ರಿಕೆ ಹಿರಿಯ ಸಮಾಜವಾದಿಯೂ, ಸ್ವತಃ ರೈತರೂ ಮತ್ತು ಸ್ವಲ್ಪ ಸ್ವತಂತ್ರವಾಗಿ ಯೋಚಿಸುವ ರೈತ ಮುಖಂಡರೂ ಆದ ಕಡಿದಾಳು ಶಾಮಣ್ಣನವರನ್ನು ಮಾತನಾಡಿಸಿತು. ಆರಂಭದಲ್ಲಿ ಇವರೂ ಆ ಹಳೆಯ ವರಸೆಯಲ್ಲೇ– ಹವಾಮಾನ ವೈಪರೀತ್ಯ, ಬೆಳೆ ನಾಶ, ಕಾರ್ಖಾನೆಗಳಿಂದ ಕಬ್ಬು ಹಣ ಪಾವತಿಯ ವಿಳಂಬ, ಸಕ್ಕರೆ ಹರಾಜೆಂಬ ಸರ್ಕಾರದ ನಾಟಕ, ವೈಜ್ಞಾನಿಕ ಬೆಲೆ, ಸಾಲಬಾಧೆ–ಮಾತನಾಡತೊಡಗಿದರು. ಪತ್ರಿಕೆಗೆ ತಲೆ ಕೆಟ್ಟಂತಾಗಿ, ಸರ್ಕಾರವನ್ನೇ ಬೈದುಕೊಂಡು ಎಷ್ಟು ವರ್ಷ ಕೂತಿರುತ್ತೀರಿ. ಹಾಗಾದರೆ ಬೇಸಾಯವನ್ನು ಸರ್ಕಾರಕ್ಕೆ ಒತ್ತೆ ಇಟ್ಟುಬಿಟ್ಟಿದ್ದೀರಾ? ಹಾಗಾದರೆ ನೀವೇಕೆ ಆತ್ಮಹತ್ಯೆ ಮಾಡಿಕೊಂಡಿಲ್ಲ?' ಎಂದು ಕೇಳಿದೊಡನೆ ಶಾಮಣ್ಣ ಸ್ವಲ್ಪ ತಬ್ಬಿಬ್ಬಾಗಿ ಎಚ್ಚೆತ್ತುಕೊಂಡವರಂತೆ, ಆಲೋಚಿಸಿ ಮಾತನಾಡತೊಡಗಿದರು:

'ನಾನೇಕೆ ಆತ್ಮಹತ್ಯೆಯ ಆಲೋಚನೆ ಎಂದೂ ಮಾಡಿಲ್ಲ ಅಂದ್ರೆ, ನಾನೆಂದೂ ಸಾಲ

ಮಾಡಲು ಹೋಗಿಲ್ಲ. ಕಾರಣ, ನಾನೆಂದೂ ನನ್ನ ಮಿತಿ ಅರಿತೇ ಬೇಸಾಯ ಮಾಡಿದ್ದೇನೆ, ಬದುಕು ನಡೆಸಿದ್ದೇನೆ. ನಾನು ರೈತನೆಂಬ, ಹಳ್ಳಿಗನೆಂಬ ಹೆಮ್ಮೆ ಇದೆ.'

'ಹಾಗೆಂದರೆ?' ಪತ್ರಿಕೆ ಪ್ರಶ್ನೆ.

'ನಾನು ಗೊಬ್ಬರ, ಕೀಟನಾಶಕ, ಟಿಲ್ಲರ್, ಟ್ರ್ಯಾಕ್ಟರ್ ಎಂದು ಹೋಗಲಿಲ್ಲ. ಅಧಿಕ ಇಳುವರಿಯ ಬೆನ್ನು ಹತ್ತಲಿಲ್ಲ. ನನಗೆ ಬೇಕಾದುದನ್ನೆಲ್ಲ ನಾನೇ ಬೆಳೆದುಕೊಂಡು, ಮಿಕ್ಕದ್ದನ್ನು ಮಾರಿ ಬದುಕುತ್ತಿದ್ದೇನೆ. ನನ್ನದು ಅಡಕೆ ಬೆಳೆಯೂ ಸೇರಿ ಸಾವಯವ ಕೃಷಿ. ಎರಡು ಕುಟುಂಬಗಳ ಸಹಾಯ ಪಡೆದು ನಾವೂ ಅವರೊಂದಿಗೆ ದುಡಿಯುತ್ತಾ ಅವರ ಕುಟುಂಬಗಳನ್ನೂ ಸಾಕುತ್ತಾ, ಪ್ರಕೃತಿಯ ಮಧ್ಯೆ ಯಾವ ತರಲೆ-ತಾಪತ್ರಯಗಳೂ ಇಲ್ಲದೆ ಆರಾಮವಾಗಿ, ನೆಮ್ಮದಿಯಿಂದ ಬದುಕುತ್ತಿದ್ದೇವೆ. ನಗರದ ಯಾವ ಆಕರ್ಷಣೆಯೂ ನಮಗಿಲ್ಲ'

'ತರಲೆ ತಾಪತ್ರಯಗಳು ಅಂದರೆ?'

ಅದೇ ಮದುವೆ-ಮುಂಜಿ-ಹಬ್ಬ- ಹರಿದಿನ-ದೇವರು-ದಿಂಡಿರು-ಜಾತ್ರೆ-ವಾಸ್ತು-ಹರಕೆ ಇತ್ಯಾದಿಗಳ ಹೆಸರಿನಲ್ಲಿ ಹುಡಿ ಹಾರಿಸಿ ಸಾಲಕ್ಕೆ ಸಿಕ್ಕಿ ಹಾಕಿಕೊಳ್ಳುವುದು'

'ಈ ಬಗ್ಗೆಯೆಲ್ಲಾ ನಿಮ್ಮ ರೈತ ಸಂಘ ಶಿಕ್ಷಣ ನೀಡಲಿಲ್ವಾ? ಬಹಳ ಅಧ್ಯಯನ ಶಿಬಿರಗಳು ನಡೆದವಲ್ಲಾ ಆಗ?'

'ಸಾಕಷ್ಟು ನಾವು ಕೆಲವರು ಹೇಳಿದ್ದೇವೆ. ಕೇಳುವವರು ಕೇಳಿದ್ದಾರೆ. ಅಳವಡಿಸಿಕೊಂಡವರು ಕಡಿಮೆ. ಬೆಳೆ ಬೆಲೆಯದ್ದೇ ಗಲಾಟೆ ಹೆಚ್ಚಾಯಿತೇನೋ!'

'ಹೋಗಲಿ ಅದನ್ನಾದರೂ ಸರಿಯಾಗಿ ಮಾಡಿದಿರಾ? ಇಷ್ಟು ಹೊತ್ತಿಗೆ ನೀವು ಹೋಬಳಿ, ತಾಲ್ಲೂಕು ಜಿಲ್ಲಾ ಮಟ್ಟಗಳ ರೈತರ ಸಹಕಾರಿ ಜಾಲ ಮಾಡಿಕೊಂಡು, ಕೃಷಿಯನ್ನು ನೀವೇ ಸಾಕಷ್ಟು -ಯಾವುದನ್ನು ಯಾರು ಎಲ್ಲಿ ಎಷ್ಟು ಬೆಳೆಯಬೇಕೆಂದು ತೀರ್ಮಾನಿಸಿಕೊಂಡು- ಒಂದು ಯೋಜಿತ ವ್ಯವಸ್ಥೆ ಮಾಡಿಕೊಂಡು, ಮಧ್ಯವರ್ತಿಗಳ ಕಾಟವಿಲ್ಲದೆ ನೇರವಾಗಿ ನಿಮ್ಮ ಬೆಳೆಯನ್ನು ಗ್ರಾಹಕರಿಗೆ ಒದಗಿಸುವ ಮೂಲಕ ಸರ್ಕಾರಕ್ಕೇ ಸೆಡ್ಡು ಹೊಡೆಯಬಹುದಿತ್ತು. ಅಂತಹ ಸಂಘಟನೆ ಇತ್ತು ನಿಮ್ಮ ಹತ್ರ. ರಾಷ್ಟ್ರದಲ್ಲೇ ಬಲಿಷ್ಠವಾದ ಚಳುವಳಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು ನಿಮ್ಮ ರೈತಸಂಘ...'

ಶಾಮಣ್ಣ ಏನೋ ತಮಗೆ ತಾವೇ ಗೊಣಗಿಕೊಂಡರು. ಅವರು ರೈತ ಸಂಘದ ವರ್ತನೆ ಬಗ್ಗೆ ಹಿಂದೊಮ್ಮೆ ಇದೇ ಸಂದರ್ಶಕನ ಬಳಿ ಮುಕ್ತವಾಗಿ ಮಾತನಾಡಿ ರೈತಸಂಘದಿಂದಲೇ ಹೊರಹಾಕಲ್ಪಟ್ಟಿದ್ದರು. ಅದನ್ನು ನೆನೆದು ಪತ್ರಿಕೆ ಮಾತು ಮುಂದುವರೆಸಲಿಲ್ಲ. ಬದಲಿಗೆ ಕೆಲವು ಪ್ರಶ್ನೆಗಳನ್ನು ಬರೆದು ಉತ್ತರಿಸಲು ಹೇಳಿತು. ಆ ಪ್ರಶ್ನೋತ್ತರದ ಸಂಕ್ಷಿಪ್ತ ರೂಪ ಇಲ್ಲಿದೆ.-ಸಂಪಾದಕ

ಕಡಿದಾಳು ಶಾಮಣ್ಣನವರೊಂದಿಗೆ ಒಂದು ಪ್ರಶ್ನೋತ್ತರ

೧. ರಾಜ್ಯದಲ್ಲಿ ಹಿಂದೆಂದೂ ಇಲ್ಲದಷ್ಟು ನಿರಂತರತೆಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಇದನ್ನು ಗಮನಿಸಿದಾಗ ನಿಮಗೆ ಏನನ್ನಿಸುತ್ತದೆ? ಈ ಆತ್ಮಹತ್ಯೆಗಳಿಗೆ ನಿಜವಾದ ಕಾರಣಗಳೇನಿರಬಹುದು?

ಸರಳವಾಗಿ ಹೇಳಬೇಕೆಂದರೆ ಇವತ್ತಿನ ಜೀವನಶೈಲಿಯೇ ಅದಕ್ಕೆ ಕಾರಣವಾಗಿರಬಹುದು. ಅಂದರೆ ಸಾವಯವ ಕೃಷಿ ಪದ್ಧತಿಯಿಂದ ವ್ಯವಸಾಯ ಮಾಡಿ ಸೀಮೆಗೊಬ್ಬರ, ಕಳೆನಾಶಕವನ್ನು ಬಳಸದೆ ಖರ್ಚು ಕಡಿಮೆಯಿಂದ ಸಾಲ ಇಲ್ಲದಂತೆ ಸರಳ ಜೀವನ ನಡೆಸುತ್ತಿದ್ದ ರೈತರು ಕೃಷಿ ಇಲಾಖೆಯವರು ಹೇಳಿದರೆಂದು ಅಧಿಕ ಇಳುವರಿ ತೆಗೆದು ಪ್ರಗತಿಪರ ರೈತನಾಗುವ ಉಮೇದುಗಾರಿಕೆಯಿಂದ ತನಗಿರುವ ಜಮೀನನ್ನು ಸಾಗುವಳಿ ಮಾಡಲು ಟಿಲ್ಲರ್, ಟ್ರ್ಯಾಕ್ಟರ್ ಬೇಕೋ ಬೇಡವೋ ಎಂದು ಪರಿಶೀಲಿಸದೆ, ಪಕ್ಕದ ಮನೆಯವರೆಲ್ಲ ಬಳಸಿದಂತೆ ದುಬಾರಿ ವಾಹನಗಳನ್ನು ಕೊಳ್ಳುವುದು. ಪ್ರತೀ ವಾರದ ಸಂತೆಯಿಂದ ತರಕಾರಿ, ಹಣ್ಣು ಹಂಪಲು ಮುಂತಾದ ಆಹಾರ ಪದಾರ್ಥ ಕೊಂಡು ತಂದು ದುಂದುವೆಚ್ಚ ಮಾಡಿ ಸಾಲಗಾರರಾಗಿದ್ದವರು ಆ ಸಾಲ ತೀರಿಸಲಿಕ್ಕಾಗದೆ ಮಾನ, ಮರ್ಯಾದೆಗೆ ಅಂಜಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರ ಸಂಖ್ಯೆಯೇ ಜಾಸ್ತಿಯಾಗಿದೆ ಎಂದನ್ನಿಸುತ್ತದೆ. ರೈತರಿಗೆ ಸಾಲ ಸಿಗುವ ವ್ಯವಸ್ಥೆ ಜಾಸ್ತಿಯಾಗಿದ್ದೂ ಒಂದು ಕಾರಣ. ಅನಾವಶ್ಯಕವಾಗಿ ದುಬಾರಿ ಮನೆ ಕಟ್ಟಿಸುವುದು, ದುಬಾರಿ ಮದುವೆ ಮಾಡುವುದೂ ರೈತರ ಸಾಲಕ್ಕೆ ಕಾರಣವಾಗುತ್ತಿದೆ. ಈ ವಿಚಾರಗಳನ್ನು ರೈತರು ಅರಿತುಕೊಂಡರೆ ಉತ್ತಮ.

ರೈತರ ಅನುಮತಿಯಿಲ್ಲದೆ ರೈತರ ಜಮೀನನ್ನು ಸರ್ಕಾರ ಯಾವಾಗ ಬೇಕಾದರೂ ವಶಪಡಿಸಿಕೊಳ್ಳಬಹುದೆಂಬ ಮೋದಿ ಸರ್ಕಾರದ ಭೂಸ್ವಾಧೀನ ಮಸೂದೆಯೂ ಸಹ ರೈತರ ಆತ್ಮಹತ್ಯೆಗೆ ಕಾರಣವಾಗಿದೆ.

ಗೋಮಾಳಗಳು ಕಾಣೆಯಾಗುತ್ತಿರುವುದೂ ಮತ್ತೊಂದು ಕಾರಣ. ಏಕೆಂದ್ರೆ ಹಿಂದಿನಂತೆ ತಾನೇ ಜಾನುವಾರು ಸಾಕಿ ಕೊಟ್ಟಿಗೆ ಗೊಬ್ಬರವನ್ನು ತನ್ನ ಜಮೀನಿಗೆ ಹಾಕಿ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲವಾದ್ದರಿಂದ.

೨. ಸಾಲ ಬಾಧೆಯ ವಿಷಯಕ್ಕೆ ಬಂದರೆ ರೈತ ಸರ್ಕಾರವನ್ನು ನಂಬಿಯೇ ವ್ಯವಸಾಯವನ್ನು ಮಾಡುತ್ತಾನೆಯೇ?

ಈಗ ರೈತರು ಸರ್ಕಾರದ ಅಥವಾ ಬೇರಾವುದೋ ಮೂಲದ ಸಾಲವನ್ನೇ ನಂಬಿ ವ್ಯವಸಾಯ ಮಾಡಲು ಪ್ರಾರಂಭಿಸಿದ್ದಾರೆ. ಉದಾಹರಣೆಗೆ, ಹೂವಿನ ಕೃಷಿ, ಹಣ್ಣುಗಳ ಕೃಷಿ, ಕೋಳಿ, ಹಂದಿ ಫಾರಂಗಳು, ಪಾಲಿ ಹೌಸ್ ಮುಂತಾದವು.. ಈ ಗ್ರೀನ್ ಹೌಸ್, ಪಾಲಿ ಹೌಸ್‌ಗಳು ಲಕ್ಷಗಟ್ಟಲೆ ಬಂಡವಾಳವನ್ನು ರೈತನಿಂದ ಖರ್ಚು ಮಾಡಿಸುತ್ತದೆ. ಇಂತವುಗಳನ್ನು ಸಣ್ಣ ಸಣ್ಣ ರೈತರುಗಳೂ ಮಾಡುತ್ತಿದ್ದಾರೆ. ಇದರಿಂದ ಬರುವ ಹೂವು,

ಹಣ್ಣು, ಸೀಗಡಿ ಮುಂತಾದವನ್ನು ಖರೀದಿಸಿ ಮಾರುಕಟ್ಟೆಗೆ ತರುವವರು ತಮ್ಮ ಲಾಭಕ್ಕೆ ಅನುಗುಣವಾಗಿ ಉತ್ಪಾದಿಸುವ ರೈತನಿಗೆ ಸಾಲವನ್ನು ಕೊಡುತ್ತಾರೆ ಅಥವಾ ತಾವು ಜಾಮೀನಾಗಿ ನಿಂತು ಸಾಲ ಕೊಡಿಸುತ್ತಾರೆ. ಈ ರೀತಿಯ ಕೃಷಿ ಮಾಡುವವರಲ್ಲಿ ಶೇಕಡಾ ೯೦% ರೈತರು ಸಾಲ ಕೊಡಿಸಿದ ಜವಾಬ್ದಾರಕರ ಮುಷ್ಟಿಯಲ್ಲಿ ಸಿಕ್ಕಿಕೊಂಡಿರುತ್ತಾರೆ. ಇಂತಹ ರೈತರು ನನಗೆ ತುಂಬಾ ಜನ ಪರಿಚಿತರಿದ್ದಾರೆ. ಮಧ್ಯವರ್ತಿಗಳ ಅಂಗೈಯಲ್ಲೇ ರೈತರ ಭವಿಷ್ಯ ನಿಂತಿರುತ್ತದೆ. ವಸೂಲಿಗೆ ಗೂಂಡಾಗಳನ್ನಿಟ್ಟು ರೈತನಿಂದ ವಸೂಲು ಮಾಡಿಸುವುದರಿಂದ ಮಾನ ಮರ್ಯಾದೆಗೆ ಅಂಜಿ ರೈತ ನೇಣಿಗೆ ಒಳಗಾಗುತ್ತಿದ್ದಾನೆ. ಉತ್ಪಾದನಾ ವೆಚ್ಚಗಳಿಗನುಗುಣವಾಗಿ ಬೆಲೆ ನಿಗದಿಯಾಗುವ ಪದ್ಧತಿ ಬರುವವರೆಗೂ ರೈತರ ಆತ್ಮಹತ್ಯೆ ನಿಲ್ಲುವುದಿಲ್ಲ.

ಇನ್ನು ಹಳ್ಳಿಗಳಲ್ಲಿ ಸ್ತ್ರೀಶಕ್ತಿ ಸಂಘದ ಅವ್ಯವಹಾರದಿಂದಲೂ ಸಾವುಗಳು ಸಂಭವಿಸಲು ಪ್ರಾರಂಭವಾಗಿದೆ. ವಾರದ ಹಿಂದೆ ದಾವಣಗೆರೆಯಲ್ಲಿ ರಾಜ್ಯ ರೈತ ಸಂಘದ ಸ್ಟೇಟ್ ಕಮಿಟಿ ಸದಸ್ಯರುಗಳ ಸಮಾವೇಶ ನಡೆಯುತ್ತಿದ್ದಾಗ ಆಗತಾನೆ ಸ್ತ್ರೀಶಕ್ತಿ ಸಂಘದಲ್ಲಿ ಆತ್ಮಹತ್ಯೆ ನಡೆದ ಸುದ್ದಿಗಳು ಬಂದಿದ್ದವು.

೩. ಕರ್ನಾಟಕದ ರೈತ ಚಳುವಳಿ ನಮ್ಮ ರಾಷ್ಟ್ರದಲ್ಲೇ ಹೆಸರು ಮಾಡಿದ ಚಳುವಳಿ. ಆದರೂ ಕರ್ನಾಟಕದ ರೈತ ಅತ್ಯಂತ ಅಸಹಾಯಕನಾಗಿ ಕಾಣುತ್ತಿದ್ದಾನೆ. ಇದು ರೈತ ಸಂಘದ ವೈಫಲ್ಯ ಅಲ್ಲವೇ?

ನೀವು ಹೇಳುತ್ತಿರುವುದು ನಿಜ. ರೈತ ಸಂಘ ಎರಡು ಮೂರು ಹೋಳುಗಳಾದ ನಂತರದಲ್ಲಿ ತನ್ನ ಮೊದಲಿನ ಶಕ್ತಿ ಕಳೆದುಕೊಂಡಿದೆ. ಈಗಲೂ ರೈತ ಸಂಘಗಳು ಒಂದಾಗಿ ಕೆಲ್ಸ ಮಾಡಿದರೆ ಮೊದಲಿನ ಶಕ್ತಿ ಪಡೆಯುವುದು ಕಷ್ಟವೇನಲ್ಲ.

೪. ಈಗ ನಡೆಯುತ್ತಿರುವ ರೈತರ ಆತ್ಮಹತ್ಯೆಗಳಾದರೂ ಒಡೆದು ಹೋದ ರೈತ ಸಂಘಟನೆಗಳ ಪುನರ್ ಸಂಘಟನೆಗೆ ಕಾರಣವಾಗಬೇಕಲ್ಲವೇ?

ಈ ಪ್ರಶ್ನೆ ಸರಿಯಾಗಿದೆ. ಆತ್ಮಹತ್ಯೆ ಮಾಡಿಕೊಳ್ಳುವ ರೈತರು, ಯಾವಾಗ ಕರ್ನಾಟಕದಲ್ಲಿ ರೈತಸಂಘಟನೆಗಳು ಒಗ್ಗಟ್ಟು ಕಳೆದುಕೊಳ್ಳುತ್ತಿದ್ದಾರೋ ಅದನ್ನು ನೋಡಿ, ಆತ್ಮವಿಶ್ವಾಸವನ್ನೇ ಕಳೆದುಕೊಂಡು ಯಾರೂ ತಮ್ಮ ಕಷ್ಟಕ್ಕೆ ಬರುವವರಿಲ್ಲ ಎಂದು ಭಾವಿಸಿ ಈ ಲೋಕವನ್ನೇ ಬಿಡುವುದೊಂದೇ ದಾರಿ ಎಂದು ತೀರ್ಮಾನಿಸುತ್ತಿದ್ದಾರೆ. ಈಗಲೂ ರೈತರೆಲ್ಲರೂ ನಾವು ಒಂದೇ ಕುಲದವರೆಂದು ಭಾವಿಸಿ ಈಗ ಅವರಿಗೆ, ನಾಳೆ ನಮಗೂ ಈ ಸ್ಥಿತಿ ಕಾದಿದೆ ಎಂದು ಅರಿತುಕೊಂಡು ಒಡೆದು ಹೋಗಿರುವ ರೈತರೆಲ್ಲ ಒಂದೇ ಸಂಘಟನೆಯಡಿ ಬರುವ ದೃಢವಾದ ತೀರ್ಮಾನ ಮಾಡಿದರೆ ರೈತ ಸಂಘಕ್ಕೂ ಶಕ್ತಿ ಬರುತ್ತದೆ. ರೈತ ಸಂಘಟನೆಗಳು ಇದೇ ರೀತಿ ನಾವು ಬೇರೆ ನಾವು ಬೇರೆ ಎಂದು ಭಾವಿಸಿಕೊಂಡರೆ ಸಾವಿಗೆ ಆಹುತಿಯಾಗುವವರ ಸಂಖ್ಯೆಯೂ ಜಾಸ್ತಿಯಾಗುತ್ತದೆ. ಇದನ್ನು ರೈತ ಮುಖಂಡರುಗಳು ಅರ್ಥಮಾಡಿಕೊಳ್ಳಲೇಬೇಕಾಗಿದೆ.

ಸೆಪ್ಟೆಂಬರ್, ೨೦೧೫

ಭಂಡ ಸರ್ಕಾರವೂ, ಭಂಡ ವಿರೋಧ ಪಕ್ಷವೂ...

ಪ್ರಿಯ ಓದುಗರೇ,

[illegible]

ಆದರೆ, ಸಮಾಜವಾದ ಎಂದರೇ, ರಾಜಕಾರಣ ಎಂದರೇ ಸಂಕೋಚ ಪಡುವ ಜನ ಇಷ್ಟಪಡಬಹುದಾದ ಪತ್ರಿಕೆ ನಮ್ಮದೆಂದು ನಾನು ಹೇಳಲಾರೆ. ಹಾಗೇ ನಾವು ಬಹುವಾಗಿ ಗೌರವಿಸುವ ಸಮಾಜವಾದಿ ಚಳುವಳಿಯ ನಾಯಕರನ್ನು ವ್ಯಕ್ತಿಗತವಾಗಿ ಅವಹೇಳನ ಮಾಡುವುದನ್ನೇ ಒಂದು ಉದ್ಯೋಗ ಮಾಡಿಕೊಂಡಿರುವವರಿಂದಲೂ ನಮ್ಮ ಪತ್ರಿಕೆ ದೂರವಿರಬಯಸುತ್ತದೆ. ನೀವು ಮಾರ್ಕ್ಸ್ ಬಗ್ಗೆ ಬರೆಯುವುದಿಲ್ಲ; ಮಾವೋ ಬಗ್ಗೆ ಬರೆಯುವುದಿಲ್ಲ; ಲೆನಿನ್ ಬಗ್ಗೆ ಬರೆಯುವುದಿಲ್ಲ; ಕ್ಯೂಬಾದ ಬಗ್ಗೆ ಬರೆಯುವುದಿಲ್ಲ; ನಮ್ಮ ತ್ರಿಪುರ ಮುಖ್ಯಮಂತ್ರಿ ಬಗ್ಗೆ ಬರೆಯುವುದಿಲ್ಲ; ಲ್ಯಾಟಿನ್ ಅಮೆರಿಕಾದಲ್ಲಿ, ಆಫ್ರಿಕಾದಲ್ಲಿ ನಡೆದಿರುವ ಮಾರ್ಕ್ಸ್‌ವಾದಿ ಹೋರಾಟಗಳ ಬಗ್ಗೆ ಬರೆಯುವುದಿಲ್ಲ ಎಂದು ನನ್ನೊಬ್ಬ ಗೆಳೆಯರು ಮೊನ್ನೆ ದೂರಿದರು. ನಾನು ಹೇಳಿದೆ: ಅವಕ್ಕೆಲ್ಲ ನಿಮ್ಮದೇ ಆದ ಪತ್ರಿಕೆಗಳಿವೆಯಲ್ಲ! ನಾವು ನಮಗೆ ನಂಬಿಕೆ ಇರುವ, ನಮ್ಮ ತಾತ್ವಿಕ ಗ್ರಹಿಕೆಯ ತೆಕ್ಕೆಗೆ ಒಗ್ಗುವ ವಿಷಯಗಳಿಗಷ್ಟೇ ಸೀಮಿತ. ಹಾಗೆಂದು ನಾವು ಈ ವಿಷಯಗಳ ಬಗ್ಗೆ ಬರೆಯದೇ ಇಲ್ಲ. ಸಾಂದರ್ಭಿಕವಾಗಿ ಬರೆದೇ ಇದ್ದೇವೆ.

ಇರಲಿ. ಈ ನಮ್ಮ ಮನೆಯ ಮಾತು ಮುಗಿಸುವ ಮುನ್ನ, ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾದ ಹಲವರಿದ್ದಾರೆ. ದಕ್ಷಿಣದ ಚಾಮರಾಜನಗರದ ಅಪೂರ್ವ ಡಿ'ಸಿಲ್ವರಿಂದ ಹಿಡಿದು ಬೆಂಗಳೂರಿನ ಪ್ರೊ. ಜಿ.ಬಿ. ಶಿವರಾಜು ಮತ್ತು ರುದ್ರಪ್ಪ ಹನಗವಾಡಿ, ತಿಪಟೂರಿನ ಕ್ಯಾ. ಹರಿಪ್ರಸಾದ್, ಹಾಸನದ ಬಿ. ಶಿವಕುಮಾರ್, ದಾವಣಗೆರೆಯ ಡಿ.ಜಿ.ಪುಟ್ಟರಾಜು, ಹೆಗ್ಗೋಡಿನ ಎಸ್.ಎಂ. ಕುಲಕರ್ಣಿ, ಧಾರವಾಡದ ಬಿ.ಪಿ. ಸುರೇಂದ್ರ ಮತ್ತು ಉತ್ತರದ ರಾಮದುರ್ಗದ ಹಸನ್ ನಯೀಂ ಸುರಕೋಡರವರೆಗೆ– ಇವರೆಲ್ಲ, ಇದು ತಮ್ಮದೇ ಪತ್ರಿಕೆ ಎಂಬಂತೆ ಚಂದಾದಾರರನ್ನು ಒಗ್ಗೂಡಿಸಿ ಕೊಡುತ್ತಿದ್ದಾರೆ; ಜಾಹೀರಾತು ಕ್ರೋಢೀಕರಿಸಿ ನೀಡಿದ್ದಾರೆ. ಇವರನ್ನು ಪತ್ರಿಕೆ ಕೃತಜ್ಞತೆಯಿಂದ ನೆನೆಯುತ್ತದೆ. ಇವರಲ್ಲದೆ, ಶಿವಮೊಗ್ಗದಲ್ಲಿ ನಮ್ಮ ಬಳಗ ಒಂದಿದೆ. ನನ್ನ ಪತ್ನಿ ಸವಿತಾ ಅಲ್ಲದೆ, ಗೆಳೆಯರಾದ ಎಂ. ರಾಜು, ಟಿ.ಎಲ್.ರೇಖಾಂಬ, ನಿಸಾರ್ ಅಹಮದ್ ಮತ್ತು ಶೇಖರ್ ಗೌಳೇರ್‌ರನ್ನೊಳಗೊಂಡ ಈ ಬಳಗ ಪ್ರತಿ ತಿಂಗಳು ಪತ್ರಿಕೆ ಬಂದೊಡನೆ ಅವುಗಳಿಗೆ ವಿಳಾಸ ಪಟ್ಟಿ–ಅಂಚೆ ಚೀಟಿ ಅಂಟಿಸಿ, ಪಿನ್ ಮಾಡಿ ಅಂಚೆಗೆ ಹೋಗುವವರೆಗೆ ನಮ್ಮೊಡನೆ ಸಹಕರಿಸುತ್ತಾರೆ. ಈ ನಮ್ಮ ಬಳಗವನ್ನೂ ಇಲ್ಲಿ ನೆನೆಯಬೇಕು!

ಈ ಸಂದರ್ಭದಲ್ಲಿ ಹಂಚಿಕೊಳ್ಳಬಹುದಾದ ಇನ್ನೊಂದು ಖುಷಿಯ ಸಂಗತಿ ಎಂದರೆ, ಹೋದ ವರ್ಷದಂತೆ ಈ ವರ್ಷವೂ ನಮ್ಮ ವಿಶೇಷಾಂಕದ ಲೇಖಕರೆಲ್ಲರಿಗೂ ಯಥಾಶಕ್ತಿ ಗೌರವಧನ ನೀಡಿದ್ದೇವೆ. ಹೀಗೆ ನಾವು ನೀಡಿರುವ ಗೌರವ ಧನ ಸುಮಾರು ಐವತ್ತು ಸಾವಿರ ರೂಪಾಯಿಗಳು. ಇದೊಂದು ನಮಗೆ ಹೆಮ್ಮೆಯ ವಿಚಾರ. ಇದು ಸಾಧ್ಯಮಾಡಿರುವವರು ನಮ್ಮ ವಿಶೇಷಾಂಕಕ್ಕೆ ಉದಾರವಾಗಿ ಜಾಹೀರಾತು ನೀಡಿದ

ಮಿತ್ರರು ಮತ್ತು ಅವನ್ನು ಒದಗಿಸಿಕೊಟ್ಟ ಪತ್ರಿಕೆಯ ಅಭಿಮಾನಿ ಓದುಗರು. ಅವರಿಗೆಲ್ಲ ನಮ್ಮ ನಿಮ್ಮೆಲ್ಲರ ಕೃತಜ್ಞತೆಗಳು ಸಲ್ಲಬೇಕು.

*** *** ***

ಮೋದಿಯವರ 'ಅಚ್ಛೇ ದಿನ'ಗಳು ಈ ಬಾರಿಯ ಮುಂಗಾರಿನ ಮೋಡಗಳಂತೆಯೇ ನಮ್ಮಿಂದ ದೂರವಾಗಿಯೇ ಉಳಿದುಬಿಟ್ಟಿವೆ. ರೈತರು ಸಾಯುತ್ತಿದ್ದಾರೆ, ಬೆಲೆಗಳು ಏರುತ್ತಿವೆ, ಅವರ ಮಂತ್ರಿ-ಮುಖ್ಯಮಂತ್ರಿಗಳು ವಿವಿಧ ಹಗರಣಗಳಲ್ಲಿ ಸಿಕ್ಕಿಕೊಂಡುದನ್ನು ಕಂಡು ಜನ ಛೀ ಎನ್ನುತ್ತಿದ್ದಾರೆ. ಆದರೆ ನಮ್ಮ ಧೀರ ಪ್ರಧಾನಮಂತ್ರಿಯವರು ಇದರ ಯಾವುದೇ ನೆದರಿಲ್ಲದೆ ಒಂದಾದರಮೇಲೊಂದರಂತೆ ವಿದೇಶ ಯಾತ್ರೆಗಳಲ್ಲೇ ಮುಳುಗಿ ಹೋಗಿದ್ದಾರೆ. ಆಗಾಗ ದೇಶದೊಳಕ್ಕೂ ಬಂದು, ಸಾರ್ವಜನಿಕ ಭಾಷಣಗಳೆಂಬ ಅರಚಾಟಗಳಲ್ಲಿ ತೊಡಗುತ್ತಾರೆ. ಇದನ್ನು ನಮ್ಮ ಮಾಧ್ಯಮಗಳು ಅಪ್ರತಿಮ ಸಾರ್ವಜನಿಕ ವಾಕ್ಚಾತುರ್ಯ ಎಂದು ಬಣ್ಣಿಸುತ್ತಾರೆ. ಸದ್ಯಕ್ಕೆ ಸರ್ಕಾರ ತನ್ನದೇ ಸರ್ವಜ್ಞ ಗರ್ವದಲ್ಲಿ ಮುಳುಗಿದ ಭಂಡ ಸರ್ಕಾರವೆನಿಸುತ್ತದೆ. ಇಲ್ಲದಿದ್ದರೆ, ಲಲಿತ್ ಮೋದಿ ದುರ್ವ್ಯವಹಾರಗಳಿಗೆ ಸಂಬಂಧಿಸಿದಂತೆ ಇವರ ಸುಷ್ಮಾ, ವಸುಂಧರಾ ರಾಜೇ ಮತ್ತು ಬೃಹತ್ ಭ್ರಷ್ಟಾಚಾರ ಮತ್ತು ಹತ್ಯೆಗಳನ್ನೊಳಗೊಂಡ ವ್ಯಾಪಂ ಹಗರಣದ ಶಿವರಾಜ್ ಚೌಹಾಣ್‌ರನ್ನು ಯಾವತ್ತೋ ಮನೆಗೆ ಕಳಿಸಬೇಕಿತ್ತು. ಬಿಹಾರ ಚುನಾವಣೆಯ ಕಾರಣದಿಂದ-ತಮ್ಮದು ಕಳಂಕರಹಿತ ಸರ್ಕಾರ ಎಂದು ಹೇಳಿಕೊಳ್ಳಲು ಅನುವಾಗುವಂತೆ-ಇದನ್ನು ತಡೆಹಿಡಿಯಲಾಗಿದೆಯಂತೆ! ಇವರು ಜನರನ್ನು ಏನೆಂದು ತಿಳಿದುಕೊಂಡಿದ್ದಾರೋ ತಿಳಿಯದು!

ಪ್ರಧಾನಿ ಮೋದಿಯವರನ್ನು ನೋಡಿ; ಸರ್ಕಾರದ ಮುಖ್ಯಸ್ಥನಾಗಿ ಇಡೀ ಸಂಸತ್ ಕಲಾಪದಲ್ಲಿ ಕಾಣೆಯಾಗಿದ್ದ ಇವರು, ಬಿಹಾರ ಚುನಾವಣಾ ಪ್ರಚಾರ ಸಭೆಯಲ್ಲಿ ದಿಢೀರನೆ ಕಾಣಿಸಿಕೊಂಡಿದ್ದಾರೆ. ಅದೂ ಹೇಗೆ? ಒಬ್ಬ ಹರಾಜು ಕೂಗುವ ಮನುಷ್ಯನಂತೆ. ಮೊನ್ನೆ ಅವರು ಯಾವುದೇ ಎಗ್ಗಿಲ್ಲದೆ-ತಾನು ದೇಶದ ಪ್ರಧಾನಿ ಎಂಬುದನ್ನೂ ಮರೆತಂತೆ-ಇಷ್ಟು ದಿನ ಮೀನ ಮೇಷ ಎಣಿಸಿ ಈಗ ಚುನಾವಣಾ ಸಭೆಯೊಂದರಲ್ಲಿ ಬಿಹಾರಕ್ಕೆ ವಿಶೇಷ ಪ್ಯಾಕೇಜೊಂದನ್ನು, 'ಎಷ್ಟು ಹೇಳಿ? ಹತ್ತು ಸಾವಿರ ಕೋಟಿ? ಇಪ್ಪತ್ತು ಸಾವಿರ ಕೋಟಿ? ಐವತ್ತು ಸಾವಿರ ಕೋಟಿ? ಒಂದು ಲಕ್ಷ ಕೋಟಿ?' ಎಂದು ಜನರನ್ನು ಕೇಳುತ್ತಾ, ಅವರ ಕುತೂಹಲ ಕೆರಳಿಸುತ್ತಾ, 'ಅಲ್ಲಲ್ಲ ಒಂದೂ ಕಾಲು ಲಕ್ಷ ಕೋಟಿ ರೂಪಾಯಿಗಳ ಪ್ಯಾಕೇಜ್!' ಎಂದು ಕೂಗಿ ಹೇಳಿ ಜನರ ಚಪ್ಪಾಳೆ ಗಿಟ್ಟಿಸಿದ್ದಾರೆ. ಇದೇನು ಮೋದಿಯವರು ತಮ್ಮ ಸಂಪಾದನೆಯಿಂದ ಕೊಡುತ್ತಿರುವ ಪ್ಯಾಕೇಜೇ? ಪ್ರಧಾನ ಮಂತ್ರಿಯೊಬ್ಬರು ಈ ಮಟ್ಟಕ್ಕೆ ಇಳಿಯಬಾರದು. ಬಿಹಾರದ ಜನ ಇವಕ್ಕೆಲ್ಲ ಹೇಗೆ ಉತ್ತರ ಕೊಡುತ್ತಾರೋ ಕಾದು ನೋಡಬೇಕು.

ಇನ್ನು ಲೋಕಸಭೆಯಲ್ಲಿ ಸುಷ್ಮಾ ಸ್ವರಾಜ್ ಇಳಿದ ಮಟ್ಟ ನೋಡಿ. ಅವರು ಲಲಿತ್ ಮೋದಿ ಪ್ರಕರಣದಲ್ಲಿ ತಮ್ಮ ಹಸ್ತಕ್ಷೇಪವನ್ನು ಸಮರ್ಥಿಸಿಕೊಳ್ಳಲು ರಾಹುಲ್ ಗಾಂಧಿಗೆ ಕೇಳಿದ ಪ್ರಶ್ನೆಗಳನ್ನು ಗಮನಿಸಿ: ಭೂಪಾಲ್ ವಿಷಾನಿಲ ದುರಂತದ ಅಪರಾಧಿ ಆಂಡರ್ಸನ್ನನ್ನು ಭಾರತದಿಂದ ತಪ್ಪಿಸಿಕೊಂಡು ಹೋಗಲು ಸಹಾಯ ಮಾಡಿದವರು ನಿಮ್ಮ ತಂದೆ ರಾಜೀವ್ ಗಾಂಧಿ ಅಲ್ಲವೆ? ಬೋಫರ್ಸ್ ಹಗರಣದಲ್ಲಿ ಕ್ವಟ್ರೋಚಿ ತಪ್ಪಿಸಿಕೊಳ್ಳಲು ಆತ ನಿಮ್ಮಮ್ಮನಿಗೆ ಎಷ್ಟು ಹಣ ನೀಡಿದ ಎಂದು ಕೇಳಿ ನೋಡು! ಅವರ ಇನ್ನೊಂದು ಕುಟುಕು: ಈ ದೇಶದ ಎಲ್ಲರೂ ಗಾಂಧಿ ಕುಟುಂಬದವರಂತೆ ಸುಮ್ಮನೆ ಕೂತು ಉಣ್ಣುವವರಲ್ಲ! ಆಶ್ಚರ್ಯವೆಂದರೆ, ರಾಹುಲರಾಗಲೀ ಅಥವಾ ಆತನ ತಾಯಿಯಾಗಲೀ ಇದಕ್ಕೆಲ್ಲ ತುಟಿಕ್‌ಪಿಟಿಕ್ ಎನ್ನದೇ ಕೂತದ್ದು! ಇದೆಲ್ಲ ಏನನ್ನು ಸೂಚಿಸುತ್ತದೆ? ದೇಶವೀಗ ಒಂದು ಭಂಡ ಸರ್ಕಾರ ಮತ್ತು ಒಂದು ಭಂಡ ವಿರೋಧ ಪಕ್ಷದ ನಡುವೆ ಸಿಲುಕಿಕೊಂಡುಬಿಟ್ಟಿದೆ! ಇದರಿಂದ ದೇಶ ಪಾರಾಗುವುದಾದರೂ ಹೇಗೆ? ಭರವಸೆಯ ನಿತೀಶ್ ಕುಮಾರ್ ಬೇರೆ ಮೋದಿ ಬಲವನ್ನು ಎದುರಿಸಲು ಮತ್ತೆ ಲಾಲೂ ಜೊತೆ ಕೈಜೋಡಿಸಿದ್ದಾರೆ. ಪಕ್ಕದಲ್ಲಿ ಅಪಾಯಕಾರಿ ಮುಲಾಯಂ ಕೂಡ ಇದ್ದಾರೆ! ನಿಜವಾಗಿಯೂ ಭಯವಾಗುತ್ತದೆ.

ಈ ಭಯ ಹೆಚ್ಚಾಗುತ್ತಾ ಹೋಗುವುದು ಮೋದಿ ಸರ್ಕಾರ ಜನತೆಯ ಹಕ್ಕುಗಳನ್ನು ದಮನಗೊಳಿಸಲು ಯತ್ನಿಸುತ್ತಿರುವ ಪರಿಯನ್ನು ನೋಡಿದಾಗ. ಹುಸಿ ಎನ್‌ಕೌಂಟರ್ ಪ್ರಕರಣದಲ್ಲಿ ಸಿಬಿಐ ವಾದವನ್ನು ದುರ್ಬಲವಾಗುವಂತೆ ನೋಡಿಕೊಂಡು ಬಿಜೆಪಿ ಅಧ್ಯಕ್ಷ ಅಮಿತ್ ಶಾರನ್ನು ಪಾರು ಮಾಡಿದ ಸರ್ಕಾರ, ಸಿ.ಬಿ.ಐ.ಗೆ ಈಗ ಮೋದಿ ಕಾಲದ ಗುಜರಾತ್ ಪೋಲೀಸ್ ಅಧಿಕಾರಿಗಳನ್ನು ತುಂಬತೊಡಗಿದೆ ಎಂಬ ಸುದ್ದಿ ಇದೆ. ಗುಜರಾತ್ ಹತ್ಯಾಕಾಂಡದ ವಿರುದ್ಧ ಯಶಸ್ವಿಯಾಗಿ ಹೋರಾಟ ನಡೆಸಿರುವ ತೀಸ್ತಾ ಸೆಟ್ಲ್‌ವಾಡ್‌ರ ವಿರುದ್ಧ ಸಿಬಿಐನ್ನು ಛೂಬಿಟ್ಟು ಇವರ ಬಂಧನಕ್ಕೆ ಹರಸಾಹಸ ನಡೆಸಿದೆ. ರಾಷ್ಟ್ರದ ವಿವಿಧ ಉನ್ನತ ಅಧ್ಯಯನ ಮತ್ತು ವೃತ್ತಿ ತರಬೇತಿ ಸಂಸ್ಥೆಗಳಿಗೆ ಆರೆಸ್ಸೆಸ್ ಹಿನ್ನೆಲೆಯುಳ್ಳ ಜನರನ್ನು ತುಂಬತೊಡಗಿ ಅವನ್ನು ರಾಜಕೀಯಗೊಳಿಸುತ್ತಿರುವುದಲ್ಲದೆ, ಅವುಗಳ ಗುಣಮಟ್ಟವನ್ನೂ ಹಾಳುಮಾಡತೊಡಗಿದೆ. ಪುಣೆ ಚಲನಚಿತ್ರ ಸಂಸ್ಥೆಯಲ್ಲಿ ಎರಡು ತಿಂಗಳುಗಳಿಂದ ನಡೆದಿರುವ ಪ್ರತಿಭಟನೆಯೇ ಇದಕ್ಕೆ ಸಾಕ್ಷಿ. ಇನ್ನು ಮುಂಬೈ ಬಾಂಬ್ ಸ್ಫೋಟಗಳ ಅಪರಾಧಿಗಳಲ್ಲೊಬ್ಬರಾದ ಯಾಕೂಬ್ ಮೆಮೊನ್‌ನನ್ನು ಗಲ್ಲಿಗೇರಿಸಿದ ಸಂದರ್ಭದಲ್ಲಿನ ಚರ್ಚೆಗಳು 'ಮಿತಿ' ಮೀರಿದ್ದವೆಂದು ಎರಡು ಮೂರು ಟಿವಿ ವಾಹಿನಿಗಳಿಗೆ ನೋಟೀಸ್ ನೀಡಲಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ರಕ್ಷಣೆಯ ಕಾನೂನುಗಳನ್ನು ದುರ್ಬಲಗೊಳಿಸಿ ಪರಿಸರ ಸಂರಕ್ಷಣಾ ಸಂಸ್ಥೆಗಳನ್ನು ರಾಷ್ಟ್ರವಿರೋಧಿ ಎಂದು ಕರೆದು ಅವುಗಳಿಗೆ ಕಿರುಕುಳ ನೀಡಲಾಗುತ್ತಿದೆ. ಇವೆಲ್ಲಕ್ಕೆ ಕಳಸವಿಟ್ಟಂತೆ ಈ ಸರ್ಕಾರದ ಅಡ್ವೋಕೇಟ್

ಜನರಲ್ ಸರ್ವೋಚ್ಚ ನ್ಯಾಯಾಲಯದ ಮುಂದೆ ಈ ದೇಶದ ಪ್ರಜೆಗಳಿಗೆ ಯಾವುದೇ ಖಾಸಗಿತನದ ಹಕ್ಕಿಲ್ಲ ಎಂದು ಘೋಷಿಸಿಬಿಟ್ಟಿದ್ದಾರೆ. ಈ ಗಾಯದ ಮೇಲೆ ಉಪ್ಪು ಸುರಿದಂತೆ ಸರ್ಕಾರ ಲೋಕಸಭೆಯಲ್ಲಿ ಪ್ರಜೆಗಳ ವಂಶವಾಹಿನಿ(ಡಿಎನ್ಎ) ಮಾಹಿತಿಯನ್ನು ತನ್ನ ಹಕ್ಕಿನ ಆಸ್ತಿ ಮಾಡಿಕೊಳ್ಳುವ ಮಸೂದೆಯೊಂದನ್ನು ಮಂಡಿಸಿದೆ! ಇದರರ್ಥ ಏನು ಗೊತ್ತೆ? ನಾವೆಲ್ಲ–ನಮ್ಮ ಅಧ್ಯಾತ್ಮಿಕ ಅಸ್ತಿತ್ವವೂ ಸೇರಿದಂತೆ–ಸರ್ಕಾರದ ಆಸ್ತಿ. ಸರ್ಕಾರದ ಪೋಲೀಸ್‌ಗಿರಿಯಡಿಯಲ್ಲಿಯೇ ಸದಾ ಬದುಕಬೇಕಾಗುತ್ತದೆ. ರಾಷ್ಟ್ರ-ರಾಷ್ಟ್ರೀಯತೆಗಳೆಂಬುವವು ಇದಕ್ಕಿಂತ ಹೆಚ್ಚು ರಾಕ್ಷಸೀಯವಾಗಲಾರವು.

ಆದರೆ ಹೀಗೆ ರಾಕ್ಷಸೀಯವಾಗಿ ಬೆಳೆಯುತ್ತಿರುವ ರಾಷ್ಟ್ರ ಪ್ರಭುತ್ವವನ್ನು ನಿಯಂತ್ರಿಸಬಲ್ಲ ನೈತಿಕ ಶಕ್ತಿಯಾಗಲೀ, ರಾಜಕೀಯ ಶಕ್ತಿಯಾಗಲೀ ಇರುವ ರಾಜಕೀಯ ಪಕ್ಷವೇ ನಮ್ಮಲ್ಲೀಗ ಇಲ್ಲದಾಗಿದೆ. ಸಿದ್ಧರಾಮಯ್ಯನವರು ಈಗ ದೇವರಾಜ್ ಅರಸರ ಜನ್ಮಶತಾಬ್ಧಿ ಆಚರಿಸಿ ಸಾಮಾಜಿಕ ನ್ಯಾಯದ ಇನ್ನಷ್ಟು ಪಾಠಗಳನ್ನು ಕಲಿತು ಇನ್ನಷ್ಟು ಮಹಾನಗರಪಾಲಿಕೆ ಚುನಾವಣೆಗಳನ್ನು ಸೋಲಲಿದ್ದಾರೆ. (ಅರಸ್ ರಾಜಕಾರಣದಿಂದ ಕಲಿಯಬೇಕಾದ ಧೀರ ಮತ್ತು ಘನತೆಯ ರಾಜಕೀಯ ಪಾಠಗಳು ಬೇರೆಯೂ ಇವೆ ಎಂಬುದನ್ನು ಅವರಿಗೆ ಯಾರಾದರೂ ಹೇಳಬೇಕಿದೆ.)

ಇನ್ನು ನಮ್ಮ ಗೆಳೆಯರ ಪರ್ಯಾಯ ರಾಜಕಾರಣದ ಪ್ರಯತ್ನಗಳೆಲ್ಲ ಮಕ್ಕಳ ಆಟದ ಮಟ್ಟಕ್ಕೆ ಇಳಿದು ಹಾಸ್ಯಾಸ್ಪದವಾಗುತ್ತಿವೆ. ತಮ್ಮ ಜಾಣ ಮಾತುಗಳು ಯಾರನ್ನೂ ಏನನ್ನೂ ಒಗ್ಗೂಡಿಸಲಾರವು ಎಂದು ಈ ಹಳೆಯ ಗಿರಾಕಿಗಳಿಗೆ ಇನ್ನೂ ಅರ್ಥವಾಗದಿರುವುದು ಆಶ್ಚರ್ಯ. ಈಗ ನಾವು ಎತ್ತನೋಡಬೇಕೆಂಬುದೇ ಗೊತ್ತಾಗದಾಗಿದೆ! ನಿಮಗೇನಾದರೂ ತೋಚುತ್ತಿದ್ದರೆ ಹೇಳಿ.

<u>ಸಮಕಾಲೀನ</u>

ನಮ್ಮ ಕಾಲೇಜು ಶಿಕ್ಷಣ ಎತ್ತ ಸಾಗಿದೆ?

ನಮ್ಮ ಕಾಲೇಜು ಶಿಕ್ಷಣವನ್ನು ಉತ್ತಮಪಡಿಸಲು ಮಾಡಲಾಗುತ್ತಿರುವ ಪ್ರಯತ್ನಗಳೆಲ್ಲವೂ ಅದನ್ನು ಮತ್ತಷ್ಟು ಹದಗೆಡಿಸುತ್ತಿದೆಯೆಂಬುದು ಈ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಕೊಂಡಿರುವವರಿಂದ ಆಗಾಗ್ಗೆ ಕೇಳಿಬರುತ್ತಿರುವ ಮಾತು. ೧೯೮೬ರಲ್ಲಿ ಪ್ರಕಟಗೊಂಡ ಶಿಕ್ಷಣ ನೀತಿಯೇ ನಮ್ಮ ಸರ್ಕಾರದ ಕೊನೆಯ ಶಿಕ್ಷಣ ನೀತಿಯಾಗಿದ್ದು, ೧೯೯೭ರಲ್ಲಿ ಪ್ರಕಟಿಸಿದ ಉನ್ನತ ಶಿಕ್ಷಣ ಕುರಿತ ನೀತಿಯೇ ಅದರ ಕೊನೆಯ ನೀತಿ ನಿರೂಪಣೆಯಾಗಿದೆ ಎಂಬುದೇ ಶಿಕ್ಷಣವನ್ನು ಕುರಿತ ನಮ್ಮ ಸರ್ಕಾರ ತಳೆದಿರುವ ನಿಲುವಿನ ಬಗ್ಗೆ ಎಲ್ಲವನ್ನೂ ಹೇಳುತ್ತವೆ. ೧೧ನೇ ಪಂಚವಾರ್ಷಿಕ ಯೋಜನೆಯಲ್ಲಿ (೨೦೦೭–೧೧) ಜಾಗತೀಕರಣದ ಪ್ರಭಾವದಲ್ಲಿ ಖಾಸಗಿ ಕಂಪನಿಗಳ ಒತ್ತಡಕ್ಕೆ ಸಿಕ್ಕಿದ

ಸರ್ಕಾರ ಅಂದಿನ 'ಆರ್ಥಿಕ ಸುಧಾರಣೆ'ಗಳಿಗೆ ಪೂರಕವಾದ 'ಶೈಕ್ಷಣಿಕ ಸುಧಾರಣೆ'ಗಳಿಗೆ ಕೈಹಾಕಿತಾದರೂ, ಅದರಲ್ಲಿ ನೀತಿಯ ಪ್ರಶ್ನೆಯೇ ಇಲ್ಲದೆ ಎಲ್ಲವೂ ವ್ಯಾವಹಾರಿಕತೆಯ ಪ್ರಶ್ನೆಯೇ ಆಗಿದ್ದುದರಿಂದ ಅದು ಶಿಕಣವನ್ನು ಈಗ ಅಧಿಕೃತವಾಗಿಯೇ ಸಂಪೂರ್ಣವಾಗಿ ವ್ಯಾಪಾರೀಕರಿಸಿತೆಂದೇ ಹೇಳಬೇಕು. ಸರ್ಕಾರ ನೇರವಾಗಿಯೇ ಶಿಕ್ಷಣ ಕುರಿತ ಚರ್ಚೆಯನ್ನು ಬೌದ್ಧಿಕ ನೆಲೆಯಿಂದ ವ್ಯಾವಹಾರಿಕ ನೆಲೆಗೆ ಇಳಿಸಿ, ಹೊಸ ಆರ್ಥಿಕ ಸುಧಾರಣೆಗಳು ಸೃಷ್ಟಿಸುತ್ತಿರುವ ವೃತ್ತಿ ಮಾರುಕಟ್ಟೆಗೆ ತಕ್ಕ ಉತ್ಪನ್ನಗಳನ್ನು ಉತ್ಪಾದಿಸಿಕೊಡುವುದೇ ಕಾಲೇಜು ಶಿಕ್ಷಣದ ಉದ್ದೇಶವಾಗಿರಬೇಕೆಂದು ಸಾರಿತು. ಅಲ್ಲಿಗೆ ಅಧಿಕೃತ ನೆಲೆಯಲ್ಲಿ ಶಿಕ್ಷಣ ಎನ್ನುವುದು ತನ್ನ ಸ್ವಾಯತ್ತತೆಯನ್ನೇ ಕಳೆದುಕೊಂಡಿತು. ನಿಜವಾದ ದುರಂತವೆಂದರೆ ಇದನ್ನು ಸಂಘಟಿತವಾಗಿ ಪ್ರತಿಭಟಿಸಬೇಕಿದ್ದ ವಿಶ್ವವಿದ್ಯಾಲಯಗಳ ಅಧ್ಯಾಪಕರು, ವಿದ್ವಾಂಸರು, ತಮ್ಮ ಸಂಬಳ-ಭತ್ಯೆ-ಸೌಲಭ್ಯಗಳ ಹೆಚ್ಚಳದ ಆಕರ್ಷಣೆಗೆ ಸಿಕ್ಕಿ ನಿಷ್ಕ್ರಿಯರಾದರು.

ಅದೇನೇ ಇರಲಿ, ಈ ಸುಧಾರಣೆಗಳ ಭಾಗವಾಗಿ ಜಾರಿಗೆ ಬಂದ ಸೆಮಿಸ್ಟರ್ ಪದ್ಧತಿ, ಬದಲಾದ ಪಠ್ಯಕ್ರಮದ ಸ್ವರೂಪ, ಕಾಲೇಜುಗಳ ಮೌಲ್ಯಮಾಪನ ಪದ್ಧತಿ, ಅಧ್ಯಾಪಕರುಗಳ ವಿಪರೀತ ವೇತನ ಏರಿಕೆ ಇವೆಲ್ಲವೂ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿವೆ ಎಂದೇ ಹೇಳಬೇಕು. ಏಕೆಂದರೆ ಇವೆಲ್ಲವೂ ನಮ್ಮ ಶಿಕ್ಷಣ ಕ್ಷೇತ್ರದ ಒಡಲಲ್ಲಿ ಮಂಥನವಾಗಿ ಮೂಡಿದ ಕ್ರಮಗಳಾಗಿರದೆ, ಹೊರಗಿಂದ, ಮೇಲಿಂದ, ದೂರದಿಂದ ಜಾರಿಗೆ ತಂದ ಕ್ರಮಗಳಾಗಿವೆ. ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳು ಕೆಲವೆಡೆ ಸುಧಾರಿಸಿರಬಹುದು; ಹೊಸ ವ್ಯಾಸಂಗ ಕ್ರಮಗಳು ಆರಂಭವಾಗಿರಬಹುದು. ಕಾಲೇಜುಗಳ ಸಂಖ್ಯೆ ಜಾಸ್ತಿಯಾಗಿರಬಹುದು. ಸ್ವಾಯತ್ತ, ಸ್ವಯಂ ಹಣಕಾಸಿನ, ಖಾಸಗಿ ವಿಶ್ವವಿದ್ಯಾಲಯಗಳು ತಲೆ ಎತ್ತಿರಬಹುದು. ಇವೆಲ್ಲವನ್ನು ಕಾಲೇಜು ಶಿಕ್ಷಣದ ಉನ್ನತೀಕರಣ ಲಕ್ಷಣಗಳಾಗಿರದೆ ಅವನತಿಯ ಲಕ್ಷಣಗಳಾಗಿವೆ ಎಂದು ಇದರೊಳಗಿನ ಧ್ವನಿಗಳೇ ಹೇಳುತ್ತಿವೆ. ಸಾಮಾಜಿಕ ಸಮಾನತೆಯನ್ನು ಸಾಧಿಸಬೇಕಾದ ಶಿಕ್ಷಣ ಈ ಮೇಲಿನ ಸುಧಾರಣೆಗಳಿಂದಾಗಿ ತಾನೇ ಅಸಮಾನತೆಯ ಪ್ರತೀಕವಾಗುತ್ತಿದ್ದು, ಸಮಾಜದ ಕೆಳವರ್ಗಗಳನ್ನು ದೂರವಿಡಲಾರಂಭಿಸಿದೆ ಎಂಬುದು ಒಂದು ಸಂಗತಿಯಾದರೆ, ಕಾಲೇಜು ಶಿಕ್ಷಣವನ್ನು ನಿಯಂತ್ರಿಸುವ ವಿಶ್ವವಿದ್ಯಾಲಯ ಧನ ಸಹಾಯ ಆಯೋಗಕ್ಕೂ, ಬಹಳಷ್ಟು ವಿಶ್ವವಿದ್ಯಾಲಯಗಳನ್ನು ನಿಯಂತ್ರಿಸುವ ರಾಜ್ಯ ಸರ್ಕಾರಗಳಿಗೂ ನೀತಿ ನಿರೂಪಣೆ-ಆಡಳಿತಗಳ ವಿಷಯದಲ್ಲಿ ಯಾವುದೇ ಸಮನ್ವಯ ಇಲ್ಲದೆ ಪರಸ್ಪರ ಮಾರಕವೆನಿಸುವ ಕೆಲಸಗಳನ್ನು ಮಾಡುತ್ತಿರುವುದು ಇನ್ನೊಂದು ಮುಖ್ಯ ಸಂಗತಿಯಾಗಿದೆ. ರಾಜ್ಯ ಸರ್ಕಾರ ಹೊಸ ಹೊಸ ವಿಶ್ವವಿದ್ಯಾಲಯಗಳನ್ನು ತೆರೆಯುತ್ತಿರುವ ರೀತಿ, ಅವುಗಳಿಗೆ ಕೋಟಾ ಪದ್ಧತಿಯಲ್ಲಿ ಕುಲಪತಿಗಳನ್ನು, ರಿಜಿಸ್ಟ್ರಾರುಗಳನ್ನು, ಸಿಂಡಿಕೇಟ್ ಸದಸ್ಯರುಗಳನ್ನು ನೇಮಕ

ಮಾಡುತ್ತಿರುವ ರೀತಿ ಹಾಗೂ ಅಧ್ಯಾಪಕರ ನೇಮಕಾತಿಗಳಲ್ಲಿ ನಡೆಯುವ ಭ್ರಷ್ಟಾಚಾರ ಇನ್ನೊಂದು ಇಂತಹ ಸಂಗತಿಯಾಗಿದೆ. ಇಂದು ನಮ್ಮ ಬಹಳಷ್ಟು ವಿಶ್ವವಿದ್ಯಾಲಯಗಳು ಪರಮ ಭ್ರಷ್ಟಾಚಾರದ, ಜಾತೀಯತೆಯ, ಸಾಂಸ್ಕೃತಿಕ ಪುಢಾರಿಗಿರಿಯ, ನಿರ್ಲಜ್ಜ ವಿದ್ವತ್ ಚೌರ್ಯಗಳ ಗೂಡುಗಳಾಗಿವೆ ಎಂಬುದು ಎದ್ದು ಕಾಣುತ್ತಿರುವ ಸತ್ಯವಾಗಿದೆ. ಅಲ್ಲಿ ಅಧ್ಯಯನಶೀಲತೆ, ಸಂಶೋಧನೆ, ವಿದ್ವತ್ತು, ಮುಕ್ತ ಚಿಂತನೆ, ಅನ್ಯಾಯಗಳ ವಿರುದ್ಧ ಪ್ರತಿಭಟನೆ ಬತ್ತಿ ಹೋಗಿದೆ. ಅಧ್ಯಾಪಕ ಸಂಘಗಳು ಕಾರ್ಮಿಕ ಸಂಘಗಳಂತಾಗಿದ್ದು, ಶೈಕ್ಷಣಿಕ ಸಮಸ್ಯೆಗಳ ಗೊಡವೆ ಯಾರಿಗೂ ಬೇಡವಾಗಿದೆ.

ಪದವಿಪೂರ್ವ, ಪದವಿ ಮತ್ತು ಸ್ನಾತಕೋತ್ತರ ಹಂತದ ಶಿಕ್ಷಣ ಈ ಮೂರು ಹಂತಗಳಲ್ಲಿನ ಈ ಅವನತಿಯ ಮತ್ತು ಅದರ ಹಿಂದಿನ ಕಾರಣಗಳ ಚಿತ್ರವೊಂದನ್ನು ಈ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾಗಿರುವವರ ಮೂಲಕವೇ ಈ ಪುಟಗಳಲ್ಲಿ ಓದುಗರ ಚಿಂತನೆಗಾಗಿ ನೀಡುತ್ತಿದ್ದೇವೆ– **ಸಂ.**

ಅಕ್ಟೋಬರ್, ೨೦೧೫

ಸರ್ಕಾರದ ಮೇಲೆ ಆರೆಸ್ಸೆಸ್ ಸವಾರಿ

ಪ್ರಿಯ ಓದುಗರೇ,

ದೇಶದಲ್ಲಿ ಎಲ್ಲ ಈಗ ಎಂದಿನಂತೆ ತಣ್ಣಗೆ ನಡೆದಂತೆ ಕಾಣುತ್ತಿದೆ. ಆದರೆ ತೆರೆಮರೆಯಲ್ಲಿ ನಡೆಯುತ್ತಿರುವ ದೊಡ್ಡ ರಾಜಕಾರಣ ಅಷ್ಟಾಗಿ ದೇಶದ ಗಮನ ಸೆಳೆದಂತಿಲ್ಲ. ಅದು ಈಗ ಆಳ್ವಿಕೆಗೆ ಬಂದಿರುವ ರಾಜಕೀಯ ಪಕ್ಷ ದೇಶದ ಚರಿತ್ರೆಯನ್ನು ತನ್ನ ರಾಜಕೀಯ ಅನುಕೂಲಕ್ಕೆ ತಕ್ಕಂತೆ–ಅಂದರೆ ತನ್ನ ರಾಜಕೀಯ ಹಿಡಿತವನ್ನು ಸುಭದ್ರಗೊಳಿಸಿಕೊಳ್ಳಲು–ಮರುನಿರೂಪಿಸಲು ನಡೆಸಿರುವ ವ್ಯವಸ್ಥಿತ; ಆದರೆ ಗುಪ್ತ ಪ್ರಯತ್ನ. ಅದು ದೆಹಲಿಯ ಔರಂಗಜೇಬ್ ರಸ್ತೆಯ ಹೆಸರನ್ನು ಬದಲಾಯಿಸುವ ಅಥವಾ ಇಂದಿರಾ–ರಾಜೀವ್ ಗಾಂಧಿ ಚಿತ್ರಗಳಿರುವ ಅಂಚೆ ಚೀಟಿಗಳನ್ನು ಹಿಂತೆಗೆದುಕೊಳ್ಳುವಂತಹ, ಮೇಲ್ನೋಟಕ್ಕೆ ಸಮರ್ಥನೀಯವಾಗಿಯೇ ಕಾಣುವ ಚಿಲ್ಲರೆ ಪ್ರಯತ್ನಗಳ ಹಿಂದೆ ಮರೆಮಾಚುವಂತಹ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಿದು. ಆಡಳಿತ, ಶಿಕ್ಷಣ, ಸಂಸ್ಕೃತಿ, ಸಂಶೋಧನೆ, ಮಾಧ್ಯಮ, ಕೈಗಾರಿಕೋದ್ಯಮ, ಕಾರ್ಮಿಕ ವಲಯ, ಸೈನ್ಯ ಹೀಗೆ ಎಲ್ಲ ಕ್ಷೇತ್ರಗಳ ಸಾಂವಿಧಾನಿಕ ಅಧಿಕಾರ ಸ್ಥಾನಗಳಲ್ಲೂ ತನ್ನ ರಾಜಕೀಯ ಚೇಲಾಗಳನ್ನು ತುಂಬಿ ರಾಷ್ಟ್ರ ಜೀವನದ ಎಲ್ಲ ಚಟುವಟಿಕೆಗಳನ್ನೂ ತನ್ನ ರಾಜಕೀಯ ದೃಷ್ಟಿಕೋನಕ್ಕೆ ಒಗ್ಗಿಸಿಕೊಳ್ಳುವ ಪೂರ್ವನಿಯೋಜಿತ ಪ್ರಯತ್ನವಿದು.

ಇಂತಹ ಪ್ರಯತ್ನಗಳೂ ಅಧಿಕಾರಕ್ಕೆ ಬಂದ ಎಲ್ಲ ರಾಜಕೀಯ ಪಕ್ಷಗಳೂ ಮಾಡಬಯಸುವಂತಹವೇ. ಅಧಿಕಾರ ರಾಜಕಾರಣವೆಂದರೆ ಅದೇ ತಾನೇ? ಆದರೆ ಸದ್ಯದ ಭಾರತೀಯ ಜನತಾ ಪಕ್ಷದ ಸರ್ಕಾರದ ಇಂತಹ ಪ್ರಯತ್ನ ಆತಂಕ ಹುಟ್ಟಿಸಿರುವುದು, ಈ ಸಾಂವಿಧಾನಿಕ ರಾಜಕೀಯ ಪಕ್ಷದ ಹಿಂದೆ ಇರುವ ಆರೆಸ್ಸೆಸ್ ಎಂಬ ಸಂವಿಧಾನಕ್ಕೆ ಬದ್ಧವಾಗಿಲ್ಲದ; ಸಾಂಸ್ಕೃತಿಕವೆಂದು ಹೇಳಿಕೊಳ್ಳುವ ಸಂಘಟನೆ ಸ್ಫೂರ್ತಿಯಾಗಿ ಕೆಲಸ ಮಾಡುತ್ತಿರುವುದು. ವಸಾಹತು ವಿರೋಧಿ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ

ಅದಕ್ಕೆ ಸಮಾನಂತರವಾಗಿ ಹುಟ್ಟಿಕೊಂಡ ಈ ಸಂಘಟನೆ ತನ್ನ ಹುಟ್ಟಿನಲ್ಲೇ ರಾಷ್ಟ್ರೀಯ ಹೋರಾಟ ರೂಪಿಸಿದ ಉದಾರವಾದಿ ಸಾಂಸ್ಕೃತಿಕ ಬಹುತ್ವದ ಮೌಲ್ಯಗಳನ್ನು ವಿರೋಧಿಸಿಕೊಂಡು, ಚರಿತ್ರೆಯ ಪಾಠಗಳನ್ನು ಒಪ್ಪಲು ನಿರಾಕರಿಸಿಕೊಂಡು, ಒಂದು ನಿರ್ದಿಷ್ಟ ಮಾದರಿಯ ಧರ್ಮವನ್ನು ಕುರಿತ ವೀರ ನಿಷ್ಠೆಯನ್ನು ಆಧರಿಸಿದ ಸಂಕುಚಿತ ರಾಷ್ಟ್ರ ಕಲ್ಪನೆಯನ್ನು ಪ್ರತಿಪಾದಿಸುತ್ತಾ ಈವರೆಗೆ ರಾಷ್ಟ್ರಜೀವನದುದ್ದಕ್ಕೂ ಅನುಮಾನಾಸ್ಪದವೆನಿಸುತ್ತಲೇ ಬಂದಿದೆ. ಎರಡು ಬಾರಿ–ಒಮ್ಮೆ ರಾಷ್ಟ್ರಪಿತನ ಹತ್ಯೆಯ ಹಿನ್ನೆಲೆಯಲ್ಲಿ–ಈ ಸಂಘಟನೆಯನ್ನು ಭಾರತ ಸರ್ಕಾರ ನಿಷೇಧಿಸಬೇಕಾಗಿ ಬಂದಿತ್ತು ಎಂಬುದೂ ಇಲ್ಲಿ ಗಮನಾರ್ಹ.

ಜಗತ್ತಿನ ಅತಿ ದೊಡ್ಡ ಸ್ವಯಂಸೇವಾ ಸಂಸ್ಥೆ ಎನಿಸಿರುವ ಈ ಸಂಘಟನೆ ತನ್ನ ನಂಬಿಕೆಗಳಿಗೆ ಅನುಸಾರವಾಗಿ ತನ್ನ ೯೦ ವರ್ಷಗಳ ಬಾಳ್ವೆಯುದ್ದಕ್ಕೂ ತನ್ನ ಕಲ್ಪನೆಯ ರಾಷ್ಟ್ರವನ್ನು ಕಟ್ಟಲು ಅಗತ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ. ಜನರ ಬದುಕಿನ ಸರ್ವಕ್ಷೇತ್ರಗಳಲ್ಲೂ ಕ್ರಿಯಾಶೀಲವಾಗಿ ಸ್ವಯಂಸೇವಕರ ಮತ್ತು ವಿವಿಧ ಹಂತಗಳ ಕಾರ್ಯಕರ್ತರ ಹಾಗೂ ನಾಯಕರ ಬೃಹತ್ ಪಡೆಯನ್ನೇ ಇದು ಹೊಂದಿದೆ. ಅಂದರೆ ಇದು, ಜನಸಮುದಾಯದ ಒಂದು ಗಣನೀಯ ಭಾಗದ ವಿಶ್ವಾಸವನ್ನು ಗಳಿಸುತ್ತಲೇ ಬೆಳೆದಿದೆ. ಆದರೆ ಅದರ ತೊಂದರೆ ಎಂದರೆ, ಅದರ ಆತ್ಯಂತಿಕ ಗುರಿ ರಾಜಕೀಯವೇ ಆಗಿದ್ದರೂ ಅದು ಆ ಕ್ಷೇತ್ರವನ್ನು ನೇರವಾಗಿ ಪ್ರವೇಶಿಸದೆ, ಸಾಂಸ್ಕೃತಿಕ ಮುಖವಾಡ ತೊಟ್ಟು ಆ ಗುರಿಯ ಈಡೇರಿಕೆಗಾಗಿ ಅದು ಬೇರೆಯೇ ಅಂಗವನ್ನು ರೂಪಿಸಿ ಕ್ರಿಯಾಶೀಲಗೊಳಿಸಿರುವುದು. ಮುಖ್ಯವಾಗಿ ಆರೆಸ್ಸೆಸ್‌ನ ಈ ದ್ವಿಪಾತ್ರವೇ ಅದನ್ನು ಅನುಮಾನಾಸ್ಪದಗೊಳಿಸಿರುವುದು ಮತ್ತು ಅದು ತನ್ನನ್ನು ತಾನು ಚಾರಿತ್ರ್ಯ ನಿರ್ಮಾಣದ ಸಾಂಸ್ಕೃತಿಕ ಸಂಘಟನೆ ಎಂದು ಕರೆದುಕೊಳ್ಳುವುದನ್ನು ಪ್ರಶ್ನಾರ್ಹಗೊಳಿಸಿರುವುದು. ಚಾರಿತ್ರ್ಯದ ಮೂಲ ಆಧಾರ ನೇರ ನಡೆನುಡಿ ಅಲ್ಲವೆ?

ಆದರೆ ಆರೆಸ್ಸೆಸ್ ಈಗ ಹೆಚ್ಚು ನೇರ ಕಾರ್ಯಾಚರಣೆಗೇ ಸಿದ್ಧವಾದಂತಿದೆ. ಏಕೆಂದರೆ ತನ್ನ ೯೦ ವರ್ಷಗಳ ಕನಸು ನನಸಾಗುವ ಕಾಲ ಸನ್ನಿಹಿತವಾಗಿದೆ ಎಂದು ಅದು ಭಾವಿಸಲು ಸೂಕ್ತವಾದ ರಾಜಕೀಯ ವಾತಾವರಣ ರಾಷ್ಟ್ರದಲ್ಲೀಗ ನಿರ್ಮಾಣವಾಗಿದೆ. ಆರೆಸ್ಸೆಸ್ ಯಾವ ರಾಷ್ಟ್ರ ಕಲ್ಪನೆಯನ್ನು ವಿರೋಧಿಸಿತೋ, ಆ ರಾಷ್ಟ್ರ ಕಲ್ಪನೆಯ ಮುಖ್ಯ ವಾರಸುದಾರ ಪಕ್ಷವಾದ ಕಾಂಗ್ರೆಸ್ ತನ್ನ ಭ್ರಷ್ಟತೆ ಮತ್ತು ದುರಾಡಳಿತದ ಫಲವಾಗಿ ತನ್ನೆಲ್ಲ ರಾಜಕೀಯ ವಿಶ್ವಾಸಾರ್ಹತೆಯನ್ನು ಕಳೆದುಕೊಂಡು ಮೂಲೆ ಸೇರಿದೆ. ಇದರ ಪರಿಣಾಮವಾಗಿ ಆರೆಸ್ಸೆಸ್‌ನ ೯೦ ವರ್ಷಗಳ ಸತತ ಶ್ರಮ, ಶ್ರದ್ಧೆ ಮತ್ತು ಸಹನೆಗಳ ಸಾಕಾರ ರೂಪವಾಗಿ ಭಾರತೀಯ ಜನತಾ ಪಕ್ಷವೆಂಬ ಅದರ ರಾಜಕೀಯ ಮುಖವಾಡ ಭಾರತದ ರಾಜಕೀಯ ಅಧಿಕಾರದ ಚುಕ್ಕಾಣಿ ಹಿಡಿದಿದೆ. ನರೇಂದ್ರ ಮೋದಿ ಎಂಬ ಅದರ ನಿಷ್ಠಾವಂತ ಸ್ವಯಂಸೇವಕನೊಬ್ಬ ಇಂದು ರಾಷ್ಟ್ರದ ಪ್ರಧಾನಿಯಾಗಿದ್ದಾರೆ. ಇನ್ನೇಕೆ ತಡ? ಸರ್ಕಾರ ಒಂದು ವರ್ಷದ ಅಧಿಕಾರವಧಿ

ಮುಗಿಸುತ್ತಿದ್ದಂತೆಯೇ ಅದು ಸರ್ಕಾರದ ಸಾಧನೆಯ ಪರಾಮರ್ಶೆಗೆ ಮುಂದಾಗಿದೆ! ಪ್ರಧಾನಿಯೂ ಸೇರಿದಂತೆ ಇಡೀ ಸಚಿವ ಸಂಪುಟ ಆರೆಸ್ಸೆಸ್ ನಾಯಕರ ಸಭೆ ಮುಂದೆ ಹಾಜರಾಗಿ ಅಗತ್ಯ ಮಾಹಿತಿ ಒದಗಿಸಿದೆ!

ಆರೆಸ್ಸೆಸ್ ಮತ್ತು ಬಿಜೆಪಿ ವಕ್ತಾರರಿಬ್ಬರೂ ಸಹಜವಾಗಿಯೇ ಇದನ್ನು ಸಮರ್ಥಿಸಿಕೊಂಡಿದ್ದಾರೆ. ಆರೆಸ್ಸೆಸ್‌ನ ವಕ್ತಾರರು ಇದನ್ನು ಕೈಗಾರಿಕೋದ್ಯಮಿಗಳೊಂದಿಗೆ ಯಾವುದೇ ಸರ್ಕಾರ ನಡೆಸುವ ಸಭೆಗೆ ಹೋಲಿಸಿದ್ದಾರೆ. ಆದರೆ ಅದು ಇಷ್ಟು ಸರಳ ಸಂಗತಿಯಲ್ಲ. ಏಕೆಂದರೆ, ಪ್ರಜೆಗಳ ಯಾವುದೇ ಸಾಂವಿಧಾನಿಕ ರೀತಿಯ ಒಪ್ಪಿಗೆಯೇ ಇಲ್ಲದೆ, ನಮ್ಮ ರಾಷ್ಟ್ರಜೀವನದ ಸ್ವರೂಪ–ಗುರಿಗಳನ್ನೇ ನಿರ್ಣಾಯಕವಾಗಿ ಬದಲಿಸಬಲ್ಲ–ಸದ್ದಿಲ್ಲದೆ ಒಳಗಿಂದಲೇ ಬುಡಮೇಲುಗೊಳಿಸುವ–ಪ್ರಯತ್ನದ ನಾಂದಿ ಘಟನೆಯನ್ನಾಗಿಯೂ ಇದನ್ನು ನೋಡಲು ಕಾರಣಗಳಿವೆ. ಒಂದು ಕಾರಣವೆಂದರೆ, ಈ ಸಭೆಯ ಕಾರ್ಯಕಲಾಪಗಳ ವರದಿಯನ್ನು ಸರ್ಕಾರದ ವಕ್ತಾರರು ನೀಡದೆ, ಇದನ್ನು ಖಾಸಗಿ ಗುಪ್ತ ಸಭೆಯಂತೆ ನಡೆಸಿರುವುದು. ಇದಕ್ಕಿಂತ ಬಹುಮುಖ್ಯ ಕಾರಣವೆಂದರೆ, ಸಂವಿಧಾನಬದ್ಧವಾಗಿ ಆಯ್ಕೆಯಾಗಿರುವ ಸರ್ಕಾರವೊಂದು (ಪಕ್ಷವಲ್ಲ) ಸಂವಿಧಾನಕ್ಕೆ ಯಾವುದೇ ರೀತಿಯಲ್ಲೂ ಬದ್ಧವಿಲ್ಲದ; ವಾಸ್ತವವಾಗಿ ಸಾಂವಿಧಾನಿಕ ಮೌಲ್ಯಗಳನ್ನು ಬುಡಮೇಲು ಮಾಡಲು ಬದ್ಧವಾದ ಸಂಘಟನೆಯೊಂದರೊಂದಿಗೆ ಸಭೆ ನಡೆಸಿರುವುದು. ಇದು ನಂಬಿದ ಜನತೆಗೆ ಬಗೆಯಲಾಗಿರುವ ದ್ರೋಹವಲ್ಲವೆ?

ಈ ಬಹು ಮುಖ್ಯ ಸಂದರ್ಭದಲ್ಲಿ ಈ ಬಹುಮುಖ್ಯ ಪ್ರಶ್ನೆಯನ್ನು ಕೇಳುವವರಾದರೂ ಯಾರು? ದೇಶವನ್ನು ಈ ಸ್ಥಿತಿಗೆ ತಳ್ಳಿದ ಕಾಂಗ್ರೆಸ್ ಪಕ್ಷ ಎಲ್ಲಿದೆ? ಏನು ಮಾಡುತ್ತಿದೆ? ಅದು ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಗಳಲ್ಲಿ ಹೀನಾಯವಾಗಿ ಸೋತ ಮೇಲೂ ಅಧಿಕಾರ ಹಿಡಿಯುವ ಕ್ಷುದ್ರ ಮತ್ತು ನಿರ್ಲಜ್ಜ ರಾಜಕಾರಣ ಮಾಡಿ ಹೇಗೋ ಬದುಕುಳಿದುಕೊಳ್ಳುವ ಕರುಣಾಜನಕ ಸ್ಥಿತಿಯಲ್ಲಿದೆ!

ನಮ್ಮ ದುರದೃಷ್ಟವೆಂದರೆ, ಸದ್ಯಕ್ಕೆ ಕಾಣುತ್ತಿರುವ ಒಂದೇ ಆಶಾಕಿರಣ: ಬಿಹಾರ ಚುನಾವಣೆಗಳು ಎನ್ನುವುದು! ಅದನ್ನೂ ಕಾದು ನೋಡೋಣ!!

<u>ಸಮಕಾಲೀನ</u>

ಗಾಂಧಿಯ ಭಾರತದ ಅಂತ್ಯ ಸನ್ನಿಹಿತವಾಗುತ್ತಿದೆಯೇ?

ಮಹಾತ್ಮ ಗಾಂಧಿ ನಡೆದಾಡಿದ ಹಿಂದೂಸ್ತಾನದ ಈ ನೆಲ ಈಗ ಅಲುಗಾಡತೊಡಗಿದೆ. ತನ್ನ ಯಾವ ವಾರಸುದಾರಿಕೆಯೂ ಇಲ್ಲದ ರಾಷ್ಟ್ರೀಯ ಹೋರಾಟದ ಎಲ್ಲ ಕುರುಹುಗಳನ್ನೂ ಮೋದಿ ಸರ್ಕಾರ ಅಳಿಸಿಹಾಕುವ ಕಾರ್ಯಕ್ರಮವೊಂದನ್ನು ಅದು ಹಾಕಿಕೊಂಡಂತಿದೆ. ಇದು ಸುಲಭವಾಗಿರುವುದು, ಈ ಕುರುಹುಗಳು ಜನಪ್ರಿಯ ನೆಲೆಯಲ್ಲಿ ನೆಹ್ರೂ ಪರಂಪರೆಯ ಭಾಗವಾಗಿ ಗುರುತಿಸಲ್ಪಟ್ಟಿದ್ದು, ಜನತೆಯಲ್ಲಿ ನೆಹರೂ

ಪರಂಪರೆಯ ರಾಜಕೀಯ ಮೌಲ್ಯಗಳ ಬಗ್ಗೆ ತಿರಸ್ಕಾರ ಬೆಳೆದಿರುವುದೇ ಆಗಿದೆ. ಆದರೆ ಗಾಂಧಿ-ನೆಹ್ರೂ ಸಂಬಂಧ ಈ ಜನಪ್ರಿಯ ನೆಲೆಯಲ್ಲಿನ ಗ್ರಹಿಕೆಯಷ್ಟು ಸರಳವಾಗಿಲ್ಲದಿದ್ದು, ಇದನ್ನು ಮೋದಿ ರಾಜಕಾರಣ ತನ್ನ ಮೂಲನೆಲೆಗಳನ್ನೇ ಪ್ರಶ್ನೆ ಮಾಡುವ ಗಾಂಧಿ ಪರಂಪರೆಯ ಮೌಲ್ಯಗಳನ್ನು ನಾಶ ಮಾಡಲು ಬಳಸಿಕೊಳ್ಳುತ್ತಿದ್ದು ಇದನ್ನು ಅಳಿದುಳಿದಿರುವ ಕೆಲ ಗಾಂಧಿವಾದಿಗಳಾದರೂ ಪ್ರಬಲವಾಗಿ ವಿರೋಧಿಸುವ ಕಾಲವೀಗ ಬಂದಿದೆ ಎನಿಸುತ್ತದೆ.

ನೆಹರೂಗೆ ಗಾಂಧೀಜಿಯ ಬಗ್ಗೆ ವೈಯಕ್ತಿಕ ನೆಲೆಯಲ್ಲಿ ಅಪಾರ ಗೌರವವಿತ್ತಾದರೂ, ಅವರ ರಾಜಕೀಯ ವಿಚಾರಧಾರೆಯ ಬಗೆಗೆ-ವಿಶೇಷವಾಗಿ ರಾಷ್ಟ್ರ ಅನುಸರಿಸಬೇಕಾದ ಪ್ರಗತಿಯ ಮಾದರಿ ಬಗ್ಗೆ-ಪ್ರಬಲವಾದ ಭಿನ್ನಮತವಿತ್ತು. ಇದರ ಪರೋಕ್ಷ ಪರಿಣಾಮಗಳಿಂದಾಗಿ ಗಾಂಧಿವಾದಿಯಾಗಿದ್ದ ಆಚಾರ್ಯ ಕೃಪಲಾನಿಯವರು ೧೯೪೭ರ ನವೆಂಬರ್‌ನಲ್ಲಿ ಕಾಂಗ್ರೆಸ್ ಅಧ್ಯಕ್ಷತೆಗೆ ರಾಜೀನಾಮೆ ನೀಡಿದಾಗ, ಗಾಂಧೀಜಿ ಕಾಂಗ್ರೆಸ್ ಸರ್ಕಾರವನ್ನು ಹಳಿ ಮೇಲೆ ತರಲು ಆ ಜಾಗಕ್ಕೆ ಸಮಾಜವಾದಿ ನಾಯಕ ಆಚಾರ್ಯ ನರೇಂದ್ರ ದೇವ ಅವರ ಹೆಸರನ್ನು ಸೂಚಿಸಿದರು. ನೆಹರೂ ತಮ್ಮ ರಾಜಕೀಯ ಚಾಣಾಕ್ಷತೆಗೆ ತಕ್ಕಂತೆ ಅದನ್ನು ತಕ್ಷಣ ಸ್ವಾಗತಿಸಿದರಾದರೂ, ಅವರ ಅಂತಿಮ ಆಯ್ಕೆ ಎಲ್ಲರ ರಾಜಿ ಅಭ್ಯರ್ಥಿ ಡಾ. ರಾಜೇಂದ್ರ ಪ್ರಸಾದರದ್ದಾಗಿತ್ತು. 'ಗಾಂಧಿ ಜೀವನ ಚರಿತ್ರೆ'ಕಾರ ಲೂಯಿ ಫಿಶರ್ ಪ್ರಕಾರ ಕಾಂಗ್ರೆಸ್ ಯಂತ್ರ ಮತ್ತು ಸರ್ಕಾರದೊಳಗಿನ ಕಾಂಗ್ರೆಸ್ ನಾಯಕತ್ವ ಗಾಂಧಿಯವರನ್ನು ಅಂತಿಮವಾಗಿ ಸೋಲಿಸಿತ್ತು.

ಗಾಂಧಿ ಕಾಂಗ್ರೆಸ್ ಪಕ್ಷದ ವಿಸರ್ಜನೆಯ ಮಾತಾಡಿದ್ದನ್ನು ನಾವು ಈ ಹಿನ್ನೆಲೆಯಲ್ಲೇ ಅರ್ಥ ಮಾಡಿಕೊಳ್ಳಬೇಕು. ಈ ಆಲೋಚನೆಯ ಭಾಗವಾಗಿಯೇ ಅವರು ಕಾಂಗ್ರೆಸ್ ರಾಜಕಾರಣಕ್ಕೆ ಒಂದು ಪ್ರತಿಶಕ್ತಿಯಾಗಿ ರಚನಾತ್ಮಕ ಕೆಲಸಗಳ ದಳವೊಂದನ್ನು ರೂಪಿಸಲು ತಮ್ಮ ಸಾವಿನ ದಿನದವರೆಗೂ ಪ್ರಯತ್ನಪಟ್ಟರು. ತಮ್ಮ ಕೊನೆಯ ದಿನಗಳಲ್ಲಿ ಲೋಹಿಯಾರೊಂದಿಗೆ ಅವರು ಆರಂಭಿಸಿದ್ದ ಮಾತುಕತೆಗೂ ಇದೇ ಉದ್ದೇಶವಿದ್ದಿತೆಂದು ನಾವು ಊಹಿಸಬಹುದಾಗಿದೆ. ಏಕೆಂದರೆ ಗಾಂಧಿ ದೃಷ್ಟಿಯಲ್ಲಿ ಮನುಷ್ಯನು ರಾಜಕಾರಣದ ಸಾಧನ ಹೇಗೋ ಹಾಗೇ ಗುರಿಯೂ ಆಗಿದ್ದ. ಅಂದರೆ, ನೀವು ಎಂತಹುದೇ ರಾಜಕಾರಣ ಮಾಡಿ, ಅದರ ಪರಿಣಾಮವಾಗಿ ಮನುಷ್ಯ ಏನಾಗುತ್ತಾನೆ ಎಂಬುದೇ ಗಾಂಧಿಯ ಆತ್ಯಂತಿಕ ಕಾಳಜಿಯಾಗಿತ್ತು. ಆದರೆ ಕಾಂಗ್ರೆಸ್ ರಾಜಕಾರಣ ಇದರ ವಿರುದ್ಧ ದಿಕ್ಕಿನಲ್ಲಿ ಸಾಗಿತ್ತು.

ಅದೇನೇ ಇರಲಿ, ಇದರಿಂದ ತೀರ್ಮಾನಿಸಬಹುದಾದ ಒಂದು ಸಂಗತಿ ಎಂದರೆ ಗಾಂಧಿ ಪರಂಪರೆಯ ಅಂತ್ಯ ನಿಜಾರ್ಥದಲ್ಲಿ ನೆಹ್ರೂರಿಂದಲೇ ಆರಂಭವಾಯಿತು ಎಂಬುದು. ಅದು ಮನುಷ್ಯ ಆಕಾಶಕ್ಕೆ ಏಣಿ ಹಾಕಿಕೊಳ್ಳುವ ಪಶ್ಚಿಮದ ಆಧುನಿಕ ಅಭಿವೃದ್ಧಿ ಮಾದರಿ ಕುರಿತ ಮೋಹಕ್ಕೆ ಸಂಬಂಧಿಸಿದ್ದಾಗಿತ್ತು. ಅದನ್ನು ನೆಹರೂ

ಸಮಾಜವಾದದ ಹೆಸರಲ್ಲಿ ನಂಬಿದ್ದರಷ್ಟೆ. ಅದು ೮೦ರ ದಶಕದ ಹೊತ್ತಿಗೆ ದೇಶವನ್ನು ಆರ್ಥಿಕ ವಿನಾಶದ ಅಂಚಿಗೆ ಕೊಂಡಯ್ದಿದ್ದಾಗ, ನೆಹ್ರೂ ಪರಂಪರೆಯ ಈ ಸಹಜ ಅವನತಿಯ ವಿಕಟ ಪ್ರತಿನಿಧಿಯಂತಿದ್ದ ಪಿ.ವಿ. ನರಸಿಂಹರಾವ್ 'ಸಮಾಜವಾದಿ' ನೀತಿಯನ್ನು ಉಲ್ಟಾ ಮಾಡಿ ದೇಶವನ್ನು ಜಾಗತೀಕರಣದ ರಾಜಕಾರಣಕ್ಕೆ ಒಪ್ಪಿಸಿದರು. ಈ ಅವಸ್ಥಾಂತರ ಎಷ್ಟು ಸುಗಮವಾಗಿತ್ತೆಂದರೆ, ನೆಹರೂ ರಾಜಕಾರಣದ ತರ್ಕ ತನಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಜಾಗತೀಕರಣದ ರಾಜಕಾರಣದಲ್ಲೇ ಅಂತ್ಯಗೊಂಡಿದ್ದು ಸಹಜವೇ ಎನ್ನಿಸಿತ್ತು! ಆದರೆ ಈ ಮಧ್ಯೆ ಈ ಜಾಗತೀಕರಣದ ರಾಜಕಾರಣ ಮೂಲತಃ ಗಾಂಧಿ ವಿರೋಧಿಸಿದ್ದ ಪಶ್ಚಿಮದ ದುರಾಸೆಯ ರಾಜಕಾರಣವೇ ಆಗಿರುವುದರಿಂದ, ಅದು ಮನಮೋಹನ ಸಿಂಗ್‌ರ ಅವಧಿಯಲ್ಲಿ ಹಲವು ಸಂಕಷ್ಟಗಳಿಗೆ ಸಿಕ್ಕಿಹಾಕಿಕೊಂಡು ಅನುಮಾನಾಸ್ಪದವೆನಿಸಿದಾಗ ಜನ ಅದರ ಸಮರ್ಥ ಉತ್ತರಾಧಿಕಾರಿಯಾಗಿ ಈಗ ನರೇಂದ್ರ ಮೋದಿಯವರನ್ನು ಆಯ್ದಿದ್ದಾರೆ. ಅವರು ಮನಮೋಹನ ಸಿಂಗ್ ಅನುಭವಿಸಿದ ಸಂಕಷ್ಟಗಳಿಗೆ ನೆಹ್ರೂ ಪರಂಪರೆಯ ನೆನಪುಗಳೇ ಕಾರಣವೆಂದು ಹೇಳುತ್ತಾ ಅವನ್ನು ನಾಶ ಮಾಡುವ ಕೆಲಸದಲ್ಲೀಗ ತೊಡಗಿದ್ದಾರೆ. ಆದರೆ ಇದೆಲ್ಲದರ ಮೂಲ ಗುರಿ ಗಾಂಧಿ ಎಂದು ಅವರ ವ್ಯಕ್ತಿತ್ವವನ್ನು ಕಟ್ಟಿರುವ ರಾಜಕಾರಣಕ್ಕೆ ಗೊತ್ತಿಲ್ಲದಿಲ್ಲ. ಹೇಗೋ ಗಾಂಧಿಯ ನೆನಪನ್ನು ಅಳಿಸಿದರೆ ದುರಾಸೆಯನ್ನೂ ಒಂದು ಮೌಲ್ಯವಾಗಿ ಸ್ಥಾಪಿಸಬಹುದೆಂದು ಅವರ ರಾಜಕಾರಣಕ್ಕೆ ಗೊತ್ತು. ಮೋದಿ ರಾಜಕಾರಣದ ತರ್ಕದ ಪ್ರಕಾರ ದುರಾಸೆಯೇ ಬಲಿಷ್ಠತೆಗೆ ಆಧಾರ. ಹಾಗಾಗಿಯೇ ದುರಾಸೆ ರಾಷ್ಟ್ರದ ಇಂದಿನ ಅಗತ್ಯವಾಗಿ ಬಿಟ್ಟಿದೆ...

ಇದಕ್ಕೆ ಕಾರಣ ಮೋದಿ ರಾಜಕಾರಣಕ್ಕೆ ರಾಷ್ಟ್ರವೊಂದೇ ಮುಖ್ಯವಾಗಿರುವುದು; ವ್ಯಕ್ತಿ ರಾಷ್ಟದ ಉತ್ಪನ್ನ ಎಂದು ಅದು ನಂಬಿರುವುದು. ಆದರೆ ಎಲ್ಲ ರಚನೆಗಳ ಮೂಲದ್ರವ್ಯ ವ್ಯಕ್ತಿ; ಅವನಂತೆ ಸಮಾಜ, ರಾಷ್ಟ್ರ, ಜಗತ್ತು ಎಂಬ ಗಾಂಧಿ ಕಂಡುಕೊಂಡಿದ್ದ ಆಧ್ಯಾತ್ಮಿಕ ಸತ್ಯಕ್ಕೆ ಈ ರಾಜಕಾರಣ ಎರವಾಗಿರುವುದು. ಹಾಗಾಗಿಯೇ ಮೋದಿ ರಾಜಕಾರಣ ನಂಬುವ ಧರ್ಮಕ್ಕೆ ಆಧ್ಯಾತ್ಮಿಕತೆ ಎಂಬುದೇ ಇಲ್ಲ. ಧರ್ಮ ಇಡಿಯಾಗಿ, ಸಗಟಾಗಿ ರಾಷ್ಟ್ರಕ್ಕೆ ಸಂಬಂಧಿಸಿದ್ದಾಗಿದೆ. ಹಾಗಾಗಿ ಧರ್ಮವೂ ಇಲ್ಲಿ ರಾಜಕಾರಣವಾಗಿದೆ. ಇಂತಹ ರಾಜಕಾರಣ ವ್ಯಕ್ತಿಗಳನ್ನು ಏನನ್ನು ಮಾಡುತ್ತದೆ ಎಂಬ ಪರಿವೆಯೇ ಅದಕ್ಕಿದ್ದಂತಿಲ್ಲ. ಇದು ರಾಜಕಾರಣವೇ ಧರ್ಮವಾಗುವ ಗಾಂಧಿ ಪರಂಪರೆಗೆ ವಿರುದ್ಧವಾದದ್ದು. ಇದರ ದುರಂತಗಳನ್ನು ನಾವು ಮುಂದೆ ನೋಡಬೇಕಾಗಬಹುದು. ಇದನ್ನೆಲ್ಲ ವಿವರಿಸುವ ಮೂರು ಬರಹಗಳನ್ನು ಇಲ್ಲಿ ನೀಡುತ್ತಿದ್ದೇವೆ.–ಸಂ

ನವೆಂಬರ್, ೨೦೧೫

ಹಿಂದೂಗಳೂ, ಹಿಂದೂವಾದಿಗಳೂ...

ಪ್ರಿಯ ಓದುಗರೇ,

ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದೇಶಾದ್ಯಂತ ಹದಗೆಡುತ್ತಾ ಬಂದ ಕೋಮು ಪರಿಸ್ಥಿತಿ ಇತ್ತೀಚಿನ ದಾದ್ರಿ ಘಟನೆಯಿಂದ ತನ್ನ ನಿರ್ಣಾಯಕ ಘಟ್ಟವನ್ನು ಮುಟ್ಟಿದೆ ಎಂದು ಹೇಳಬೇಕು. ಮುಸ್ಲಿಂ ವ್ಯಕ್ತಿಯೊಬ್ಬ ತನ್ನ ಮನೆಯಲ್ಲಿ ಗೋಮಾಂಸವನ್ನು ಬಚ್ಚಿಟ್ಟುಕೊಂಡಿದ್ದಾನೆ ಎಂಬ ವದಂತಿಯ ಆಧಾರದ ಮೇಲೆ, ಆತನ ಕುಟುಂಬದ ಸದಸ್ಯರ ಮುಂದೆಯೇ ಆತನನ್ನು ಹೊಡೆದು ಕೊಲ್ಲಲಾಗಿದೆ. ಊರಿನ ಗುಡಿಯೊಂದರ ಧ್ವನಿವರ್ಧಕದ ಮೂಲಕ ಈ ವದಂತಿಯನ್ನು ಹಬ್ಬಿಸಿ ಜನರನ್ನು ಪ್ರಚೋದಿಸಿ ಈ ಕೊಲೆಯನ್ನು ವ್ಯವಸ್ಥಿತವಾಗಿಯೇ ಮಾಡಲಾಗಿದೆ. ನಮ್ಮ ಜನ ಏಕೆ ಇಷ್ಟು ಅಮಾನುಷವಾಗಿ ಮತಾಂಧರಾಗಿದ್ದಾರೆ ಎಂಬುದು ತಿಳಿಯದಾಗಿದೆ. ಗೋವಿನ ಹೆಸರಿನಲ್ಲಿ ಮನುಷ್ಯರನ್ನು ಕೊಲ್ಲುವುದೇ? ಆತ ತನ್ನ ಮನೆಯಲ್ಲಿ ಗೋಮಾಂಸ ಇಟ್ಟುಕೊಂಡಿದ್ದನೆಂದರೂ ಈ ಕೊಲೆ ಅನಾಗರಿಕ, ಅಕ್ಷಮ್ಯವೇ. ಈ ಸಂಬಂಧ ಯಾರನ್ನಾದರೂ ದಿಗಿಲುಗೊಳಿಸುವ ಇನ್ನೊಂದು ಅಂಶವೆಂದರೆ, ಒಂದು ಸಮೀಕ್ಷೆಯ ಪ್ರಕಾರ (ಔಟ್‌ಲುಕ್ ಅಕ್ಟೋ. ೧೯) ಈ ದೇಶದ ಬಹುತೇಕ ಜನ ಈ ಅಭಿಪ್ರಾಯವನ್ನು ಒಪ್ಪುವರಾದರೂ ಶೇ.೧೭.೫ ಜನ ಈ ಹತ್ಯೆ ಸರಿ ಎನ್ನುತ್ತಾರೆ ಎಂಬುದು. ಇದೇನೂ ಕಡಿಮೆ ಗಾತ್ರದ ಜನಾಭಿಪ್ರಾಯವಲ್ಲ. ಇದೇ ಬಿಜೆಪಿ ಮತ್ತು ಅದರ ಪರಿವಾರ ಈ ದೇಶದಲ್ಲಿ ಕೂಡಿಟ್ಟಿರುವ ಅಪಾಯಕಾರಿ ರಾಜಕೀಯ ಬಂಡವಾಳ. ಇದರ ಸುತ್ತಲೇ ಹಿಂದೂವಾದಿ ರಾಜಕಾರಣದ ಎಲ್ಲ ವ್ಯವಹಾರಗಳೂ ನಡೆಯುತ್ತಿರುವುದು ಮತ್ತು ಬೆಳೆಯುತ್ತಿರುವುದು.

ಈ ಹಿಂದೂವಾದಿಗಳಿಗೆ, ಗೋರಕ್ಷಕ ಸಂಘದವರು ಸಹಾಯ ಬೇಡಿ ವಿವೇಕಾನಂದರ ಬಳಿ ಬಂದಾಗ ಅವರಿಗೆ ವಿವೇಕಾನಂದರು ಏನು ಹೇಳಿದರೆಂಬುದನ್ನು ಯಾರಾದರೂ ನೆನಪಿಸಬೇಕಿದೆ. ನಿಜ ಸಂಗತಿ ಎಂದರೆ ಇವರು ಹಿಂದೂಗಳಲ್ಲ; ಹಿಂದೂವಾದಿಗಳಷ್ಟೆ. ಹಾಗಾಗಿಯೇ ಇವರ್‍ಯಾರಿಗೂ ಆಧುನಿಕ ಕಾಲದ ಸವಾಲುಗಳೆದುರು ಸನಾತನ ಸತ್ಯದ ಬೆಳಕಿನಲ್ಲಿ ಹಿಂದೂ ಧರ್ಮವನ್ನು ಪುನರ್‌ವ್ಯಾಖ್ಯಾನಿಸಿದ ಪರಮಹಂಸ, ವಿವೇಕಾನಂದ,

ದಯಾನಂದ ಸರಸ್ವತಿ, ರಮಣ ಮಹರ್ಷಿಗಳ ಅನುಭಾವಿ ಪರಂಪರೆಯ ವಾಸನೆಯೂ ಇದ್ದಂತಿಲ್ಲ. ಇವರ ನಾಯಕರೇನಿದ್ದರೂ ಆಧುನಿಕತೆಯ ಭಯವನ್ನೆದುರಿಸಲು ಹಿಂದೂ ಧರ್ಮವನ್ನು ಕ್ರಿಶ್ಚಿಯನ್ ಮತದ ಪ್ರತಿಬಿಂಬದಂತೆ ಮರುನಿರ್ಮಾಣ ಮಾಡಲೆಳಸಿದ ಸಾವರ್ಕರ್, ಹೆಡಗೆವಾರ್, ಗುರೂಜಿ ಮುಂತಾದ ಘರ್ಷಣಾತ್ಮಕ ರಾಜಕಾರಣದ ನೇತಾರರು.

ಅಮಾಯಕ ಮುಸ್ಲಿಮನೊಬ್ಬನ ದಾರುಣ ಹತ್ಯೆ ದಾದ್ರಿ ಘಟನೆಯ ಅರ್ಧ ದುರಂತವಾದರೆ, ಅಷ್ಟೇ ದಾರುಣವಾದ ಇನ್ನರ್ಧ ದುರಂತವೆಂದರೆ, ಆಳುವ ಸರ್ಕಾರ, ವಿಶೇಷವಾಗಿ ನಮ್ಮ ವಾಕ್ಪಟು ಪ್ರಧಾನಿ ಮೋದಿಯವರು ಈ ಬಗ್ಗೆ ಒಂದೂ ಮಾತಾಡದೆ ಇದ್ದುದು, ರಾಷ್ಟ್ರಪತಿಗಳು ಅನಿವಾರ್ಯವಾಗಿ ಮಾತಾಡಬೇಕಾಗಿ ಬಂದ ನಂತರ ಇದನ್ನು 'ದುರದೃಷ್ಟಕರ ಘಟನೆ' ಎಂದಷ್ಟೇ ಕರೆದು, ಇದರಲ್ಲಿ ಕೇಂದ್ರದ ಪಾತ್ರವೇನೂ ಇಲ್ಲವೆಂದು ಹೇಳಿ ಕೈತೊಳೆದುಕೊಂಡದ್ದು. ಅಂದರೆ ಮೋದಿಯವರಿಗೆ ಇದೊಂದು, ದಾದ್ರಿ ಇರುವ ಉ.ಪ್ರ.ದ ಸರ್ಕಾರ ನಿಭಾಯಿಸಬೇಕಾದ ಕಾನೂನು ಮತ್ತು ಶಿಸ್ತಿನ ಪ್ರಕರಣ ಮಾತ್ರ! ಈ ಸಂದರ್ಭದಲ್ಲಿ ದೇಶದ ಪ್ರಧಾನ ಮಂತ್ರಿಯೊಬ್ಬರ ಬಾಯಿಂದ ಇದಕ್ಕಿಂತ ಹೆಚ್ಚಿನ ಆತ್ಮದ್ರೋಹದ ಮಾತು ಹೊರಬರಲಾರದೇನೋ. ತಮ್ಮ ಪಕ್ಷದ ಮತ್ತು ಅದರ ಸೋದರ ಸಂಘಟನೆಗಳು ಒಂದೇ ಸಮನೆ ತಮ್ಮ ಪ್ರಚೋದನಾತ್ಮಕ ಹೇಳಿಕೆಗಳಿಂದ ಎಬ್ಬಿಸುತ್ತಿರುವ ಅನ್ಯಧರ್ಮ ಅಸಹಿಷ್ಣುತೆಯ ವಾತಾವರಣದ ಪರಿಣಾಮ ಈ ಘಟನೆ ಎಂಬುದು ಗೊತ್ತಾಗದಷ್ಟು ಅಮಾಯಕರೇ ನಮ್ಮ ಪ್ರಧಾನಮಂತ್ರಿಗಳು? ಹಾಗಿಲ್ಲದಿದ್ದಲ್ಲಿ ಅವರ ಪರೋಕ್ಷ ಒಪ್ಪಿಗೆಯಿಂದಲೇ ಇಂತಹ ಘಟನೆಗಳು ಯಾವುದೇ ತಡೆಯಿಲ್ಲದೆ ಒಂದಾದ ಮೇಲೊಂದರಂತೆ ನಡೆಯುತ್ತಿವೆ ಎಂದೇ ದೇಶ ಭಾವಿಸಬೇಕಾಗುತ್ತದೆ. ಕನಿಷ್ಠ ಅವರ ಬೆಂಬಲಿಗರು ಹಾಗೆ ಭಾವಿಸಿದಂತಿದೆ. ಇದು ರಾಷ್ಟ್ರೀಯ ದುರಂತ. ಪಾಕಿಸ್ತಾನದ ಕವಿಯೊಬ್ಬ ಇತ್ತೀಚೆಗೆ, 'ಅಯ್ಯೋ ಭಾರತವೇ, ನೀನೂ ನನ್ನ ದೇಶದಂತೆಯೇ ಆಗಿಬಿಟ್ಟೆಯಾ!' ಎಂದೊಂದು ಕವಿತೆ ಬರೆದು ದುಃಖಿಸಿದ್ದಾನಂತೆ. ಆದರೆ ನಮ್ಮ ಹಿಂದುತ್ವವಾದಿಗಳಿಗೆ ಇದು ಸಂಭ್ರಮದ ಸಂಗತಿಯಾಗಿದೆ. ದಾದ್ರಿ ಘಟನೆಯ ಜೊತೆಗೇ ದೇಶದ ವಿವಿಧ ಭಾಗಗಳಿಂದ ನಿರಂತರವಾಗಿ ವರದಿಯಾಗುತ್ತಿರುವ ವಿವಿಧ ಕಾರಣಗಳ ಮೇಲೆ ದಲಿತರ ಮೇಲಿನ ಹಲ್ಲೆ, ಕೊಲೆ, ಸಜೀವ ದಹನದಂತಹ ಬರ್ಬರ ಪ್ರಕರಣಗಳು ಹಿಂದೂವಾದದ ಅರ್ಥವೇನೆಂಬುದನ್ನು ಸಾರಿ ಹೇಳತೊಡಗಿವೆ.

ಇದು ಘನತೆ-ಗೌರವಗಳುಳ್ಳ ಹಲವು ನಾಯಕರನ್ನೊಳಗೊಂಡ ಬಿಜೆಪಿಯ ದುರಂತವೂ ಹೌದು. ಇದು, ಇದರ ಪಿತಾಮಹ ಆರೆಸ್ಸೆಸ್ ಎಂಬತ್ತರ ದಶಕದಲ್ಲಿ ತನ್ನ ಘನಗಂಭೀರ ಪ್ರತಿಪಾದನೆಗಳ ಮೂಲಕ ದೇಶದ ಗಮನ ಸೆಳೆಯಲಾಗುವುದಿಲ್ಲವೆಂದು ತೀರ್ಮಾನಿಸಿ, ಮಲಗಿದ್ದ ವಿಶ್ವ ಹಿಂದೂ ಪರಿಷತ್ತನ್ನು ಬಡಿದೆಬ್ಬಿಸುವುದರ ಜೊತೆಗೇ ಬಜರಂಗದಳದಂತಹ ಪಡ್ಡೆಗಳ ಪಡೆಯೊಂದನ್ನು ಹುಟ್ಟುಹಾಕಿ ತನ್ನ ಬಲವನ್ನು

ಪರೋಕ್ಷವಾಗಿ ಹೆಚ್ಚಿಸಿಕೊಳ್ಳಲು ಮಾಡಿದ ಪ್ರಯತ್ನದ ಫಲವೇ ಆಗಿದೆ. ಇದು ಹಿಂದೂ ಯುವ ಸೇನೆ, ಶ್ರೀರಾಮ ಸೇನೆ, ಹಿಂದೂ ಜಾಗರಣ ವೇದಿಕೆ ಇತ್ಯಾದಿಗಳ ಹೆಸರಿನ ಮತ್ತಷ್ಟು ಉಪ ಸಂಘಟನೆಗಳನ್ನು ಹುಟ್ಟು ಹಾಕಿ, ಬಿಜೆಪಿ ಇರಲಿ, ಆರೆಸ್ಸೆಸ್ಸಿಗೂ ಇವುಗಳ ಚೇಷ್ಟೆಗಳನ್ನು ನಿಯಂತ್ರಿಸುವುದು ಕಷ್ಟವಾಗಿದೆ. ಈ ಗೊಂದಲದಲ್ಲಿ ಇವುಗಳ ಕೆಲ ಸದಸ್ಯರು ಬಿಜೆಪಿ ಸೇರಿಕೊಂಡು ಮಂತ್ರಿಗಳೂ ಆಗಿದ್ದಾರೆ. ಇವರೇ ಈಗ ದಾದ್ರಿಯಂತಹ ಘಟನೆಗಳಿಗೆ ಕಾರಣವಾಗಿ, ಅವುಗಳನ್ನು ಆಕಸ್ಮಿಕ, ಯಃಕಶ್ಚಿತ್ ಘಟನೆಗಳೆಂದು ಕರೆಯುತ್ತಿರುವುದು. ಇದು ಹೀಗೇ ಮುಂದುವರೆದರೆ, ದೇಶವನ್ನು ತನ್ನ ಕಲ್ಪನೆಯ ಹಿಂದೂ ರಾಷ್ಟ್ರವನ್ನಾಗಿ ಮಾಡುವ ಆರೆಸ್ಸೆಸ್ಸಿನ ಯೋಜನೆ ರಾಷ್ಟ್ರದ ವಿಘಟನೆಯಲ್ಲಿ ಮಾತ್ರ ಅಂತ್ಯವಾದೀತು, ಎಚ್ಚರ! ಹಾಗೇ, ಸುಮ್ಮನೆ ದೇಶ ವಿದೇಶ ತಿರುಗುವ ನಮ್ಮ ಪ್ರಧಾನ ಮಂತ್ರಿಗಳೂ ಒಂದಷ್ಟು ಕಾಲ ದೇಶದಲ್ಲೇ ನೆಲೆಸಿ ಭಾರತ ಅಂದರೆ ಗುಜರಾತ್ ಅಲ್ಲ ಎಂದು ತಿಳಿಯುವುದೂ ಒಳ್ಳೆಯದು!

ಬಿಜೆಪಿಗೆ ಸದ್ಯಕ್ಕೆ ಎದುರಾಗಿರುವ ಇನ್ನೊಂದು ರಾಜಕೀಯ ಸಂಕಟವೆಂದರೆ, ಅದರ ಮಿತ್ರಪಕ್ಷ ಶಿವಸೇನೆಯು ಬಿಜೆಪಿಯ ಹಿಂದೂವಾದದ ಎದುರು ತನ್ನ ಹಿಂದೂವಾದ ಕಳೆಗುಂದುತ್ತಾ ತನ್ನ ರಾಜಕೀಯ ಪ್ರಾಬಲ್ಯ ಕಡಿಮೆಯಾಗುತ್ತಿರುವ ಆತಂಕದಲ್ಲಿ ಅದು ಸ್ಪರ್ಧಾತ್ಮಕ ಹಿಂದೂ ಕೋಮುವಾದಿ ರಾಜಕಾರಣಕ್ಕೆ ಇಳಿದಿರುವುದು. ಇದು ಮೋದಿ ಸರ್ಕಾರ ಬಂದ ಮೇಲೆ ಹಳಿತಪ್ಪಿಹೋಗಿರುವ ಭಾರತ–ಪಾಕಿಸ್ತಾನ ಸಂಬಂಧಗಳು ಇನ್ನಷ್ಟು ರೂಕ್ಷ ರೂಪ ತಾಳಿ, ಅವನ್ನು ಒಂದು ಹದಕ್ಕೆ ತರಬಹುದಾದ ಎರಡೂ ದೇಶಗಳ ಜನರ ನಡುವಣ ಸಾಹಿತ್ಯ–ಸಂಗೀತ–ಕಲೆ–ಕ್ರೀಡಾ ಸಂಬಂಧಗಳ ಪ್ರಯತ್ನಗಳನ್ನು ಶಿವಸೇನೆಯ ಗೂಂಡಾಗಿರಿ ವಿಫಲಗೊಳಿಸುತ್ತಿರುವುದು. ಪಾಕಿಸ್ತಾನದ ಸೂಫಿ ಗಾಯಕರ ಸಂಗೀತ ಕಾರ್ಯಕ್ರಮಕ್ಕೆ ತಡೆಯೊಡ್ಡಿದ, ಪಾಕಿಸ್ತಾನದ ಮಾಜಿ ವಿದೇಶಾಂಗ ಮಂತ್ರಿ ಕಸೂರಿಯವರ ಪುಸ್ತಕವೊಂದರ ಬಿಡುಗಡೆಯನ್ನು ಆಯೋಜಿಸಿದ್ದ ಅಡ್ವಾಣಿಯವರ ಆಪ್ತರಲ್ಲೊಬ್ಬರಾದ ಸುಧೀಂದ್ರ ಕುಲಕರ್ಣಿಯವರ ಮುಖಕ್ಕೆ ಮಸಿ ಬಳಿದ ಹಾಗೂ ಪಾಕಿಸ್ತಾನದ ಕ್ರಿಕೆಟ್ ಮಂಡಳಿಯ ಮುಖ್ಯಸ್ಥರು ಮತ್ತು ಭಾರತದ ಕ್ರಿಕೆಟ್ ಮಂಡಳಿಯ ಮುಖ್ಯಸ್ಥರನ್ನು ಭೇಟಿಯಾಗದಂತೆ ಹಿಂಸಾತ್ಮಕವಾಗಿ ತಡೆದ ಘಟನೆಗಳು ಮತ್ತು ಇವುಗಳಲ್ಲಿ ಎದ್ದು ಕಂಡ ಪೋಲೀಸರ (ಅಂದರೆ ಆಡಳಿತದ) ನಿಷ್ಕ್ರಿಯತೆ, ಬಿಜೆಪಿ ಎಂತಹ ಸ್ವಯಂಕೃತ ಇಕ್ಕಟ್ಟಿಗೆ ಸಿಕ್ಕಿದೆ ಎಂಬುದನ್ನು ಸೂಚಿಸುತ್ತದೆ. ಕಾನೂನು ಪ್ರಕಾರ ಆಡಳಿತ ನಡೆಸಬಲ್ಲ ರಾಜಕೀಯ ಪ್ರಬುದ್ಧತೆಯನ್ನು ಸಾಧಿಸಿದೆ ಎಂದು ನಂಬಿ ಜನತೆ ನೀಡಿರುವ ಜನಾದೇಶದ ಹಿಂದಿರುವ ಜವಾಬ್ದಾರಿಯನ್ನು ರಾಷ್ಟ್ರೀಯ ಪಕ್ಷವಾದ ಬಿಜೆಪಿ ಮರೆಯಲಾಗದು. ದೇಶದ ರಾಜಕಾರಣ ಎರಡು ಧೃವೀಕೃತ ರಾಜಕೀಯ ನಿಲುವುಗಳ ಬಂಧಿಯಾಗದೆ, ವಿರೋಧಿಗೂ ಒಂದಿಷ್ಟು ಜಾಗ ಇರುವಂತಹ ಆಡಳಿತ ನೀತಿಯನ್ನು ರೂಪಿಸಿಕೊಳ್ಳಬೇಕಾದ ಅಗತ್ಯವನ್ನು ಬಿಜೆಪಿ ಆದಷ್ಟು ಬೇಗ ಮನಗಾಣಬೇಕಿದೆ. ಶಿವಸೇನೆ ಮತ್ತಿತರ (ಉದಾ: ಗೋಡ್ಸೆ ಹುಟ್ಟುಹಬ್ಬ ಆಚರಿಸಹೊರಟಿರುವ) ಕುಚೇಷ್ಟೆಯ

ಸಂಘಟನೆಗಳನ್ನು ಕಟುನಿಟ್ಟಾದ ಕ್ರಮಗಳ ಮೂಲಕ (ಮಾತುಗಳ ಮೂಲಕ ಅಲ್ಲ) ಹದ್ದುಬಸ್ತಿನಲ್ಲಿಡಬೇಕಿದೆ.

ಈ ದುರಂತಮಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ರಾಜಕಾರಣವನ್ನು ನೋಡಿದರೆ ನಿಜವಾಗಿಯೂ ಆತಂಕವಾಗುತ್ತದೆ. ನಮ್ಮ ಸಿದ್ಧರಾಮಯ್ಯನವರ ತುಕ್ಕು ಹಿಡಿದ ಅಹಿಂದ ರಾಜಕಾರಣವನ್ನೇ ನೋಡಿ. ಮೊನ್ನೆ ಮೊಗವೀರ ಸಮಾವೇಶದಲ್ಲಿ ಇವರು 'ಜಾತಿಭೂತ ಹೋಗುವವರೆಗೆ ಮೀಸಲಾತಿ ಹೋಗುವುದಿಲ್ಲ' ಎಂದು ಘೋಷಿಸಿದ್ದಾರೆ. ಆಯಿತು. ಹಾಗಾದರೆ ಜಾತಿಭೂತವನ್ನು ಓಡಿಸುವವರಾರು? ಹೇಗೆ? ಅದನ್ನು ಓಡಿಸಲೆಂದೇ ಮೀಸಲಾತಿ ವ್ಯವಸ್ಥೆಯನ್ನು ತಂದಿದ್ದಲ್ಲವೆ? ಅದು ಈವರೆಗೆ ಜಾತಿಭೂತವನ್ನು ಎಷ್ಟು ದೂರದವರೆಗೆ ಓಡಿಸಿದೆ? ಸಿದ್ಧರಾಮಯ್ಯನವರು ಲೆಕ್ಕಹಾಕಿ ಹೇಳಬಲ್ಲರೆ? ಒಂದು ಕಡೆ ಜಾತಿ ಸಮಾವೇಶಗಳಲ್ಲಿ ಭಾಗವಹಿಸಿ ಜಾತಿಭೂತವನ್ನು ಬಡಿದೆಬ್ಬಿಸುತ್ತಾ, ಇನ್ನೊಂದು ಕಡೆ ಅಧಿಕಾರ ಸ್ವೀಕರಿಸಿದೊಡನೆ ಅದರ ಭದ್ರತೆಗಾಗಿ ತಮ್ಮ ಅಧಿಕೃತ ಕಛೇರಿಯಲ್ಲಿ ಬ್ರಾಹ್ಮಣ ಪುರೋಹಿತನೊಬ್ಬನಿಂದ ಪೂಜೆ ಮಾಡಿಸಿ ತೀರ್ಥಪ್ರಸಾದ ಸ್ವೀಕರಿಸಿ ಜಾತಿ ಪದ್ಧತಿಗೆ ಸಾರ್ವಜನಿಕವಾಗಿ ಅಧಿಕೃತ ಮುದ್ರೆ ಒತ್ತುವ ಸಿದ್ಧರಾಮಯ್ಯ ಸಾಮಾಜಿಕ ನ್ಯಾಯ ಕಲ್ಪನೆಯನ್ನೇ ಅಶ್ಲೀಲಗೊಳಿಸಿಬಿಟ್ಟಿದ್ದಾರೆ. ಇದು ಅವರ ಚೇಲಾಗಳನ್ನು ಬಿಟ್ಟು, ಅಹಿಂದ ಜಾತಿಗಳೂ ಸೇರಿದಂತೆ ಸಮಾಜದ ಎಲ್ಲ ವಿವೇಕವಂತರಿಗೂ ಈಗ ಮನದಟ್ಟಾಗಿದೆ. ಆದರೆ ಜಾತಿ ರಾಜಕಾರಣವನ್ನು ಬಿಟ್ಟು ಇನ್ನೆಲ್ಲ ರಾಜಕಾರಣವನ್ನೂ ಮರೆತಂತಿರುವ ಸಿದ್ಧರಾಮಯ್ಯ ತಮ್ಮ ಜೊತೆಗೆ ಕಾಂಗ್ರೆಸ್ಸನ್ನೂ ವಿನಾಶದ ಅಂಚಿಗೆ ಒಯ್ಯುತ್ತಿರುವಂತೆ ಕಾಣುತ್ತಿದೆ.

ಸಿದ್ಧರಾಮಯ್ಯನವರ ಸರ್ಕಾರ ರೈತರ ಆತ್ಮಹತ್ಯೆ ಸಮಸ್ಯೆಯನ್ನು ಮುಖಾಮುಖಿಯಾದ ರೀತಿಯನ್ನೇ ನೋಡಿ. ನಮ್ಮ ಮಾಧ್ಯಮಗಳು ಅಗ್ಗದ ಜನಪ್ರಿಯತೆಗಾಗಿ ರೈತನನ್ನು 'ಅನ್ನದಾತ' ಎಂದು ಕರೆದ ಸರಳೀಕೃತ ಅಭಿದಾನದ ಒತ್ತಡಗಳಿಗೆ ಸಿಕ್ಕಂತೆ ಕಂಡ ಸರ್ಕಾರ, ರೈತರ ಆತ್ಮಹತ್ಯೆಗಳ ಮೂಲದಲ್ಲಿರುವ ಸಮಸ್ಯೆಯ ತಾತ್ವಿಕತೆಯನ್ನು ಗುರುತಿಸುವ ಪ್ರಯತ್ನವನ್ನೇ ಮಾಡದೆ, ಸಾರಾಸಗಟಾಗಿ ಸಾಲಬಡ್ಡಿ ಮನ್ನಾ, ಪರಿಹಾರ ಮೊತ್ತದ ಏರಿಕೆ ಹಾಗೂ ಕುಟುಂಬ ಮಾಸಾಶನಗಳಂತಹ ಹಣಕಾಸಿನ ಪರಿಹಾರವನ್ನು ಘೋಷಿಸಿರುವುದು ಅದರ ಬೌದ್ಧಿಕ ದಾರಿದ್ರ್ಯವನ್ನಷ್ಟೇ ಸೂಚಿಸುತ್ತದೆ. ರೈತರ ಆತ್ಮಹತ್ಯೆ ಒಂದು ಸಂಕೀರ್ಣ ಸಮಸ್ಯೆಯಾಗಿದ್ದು, ಅವರ ಸಾಲದ ಹಿಂದೆ ತತ್ಕಾಲೀನ ಹಣಕಾಸಿನ ನೆರವು ಪರಿಹರಿಸಬಹುದಾದ ಅಂಶಗಳಿಗೆ ಹೊರತಾದ ಹಲವು ಅಂಶಗಳಿವೆ ಎಂಬುದನ್ನು ಸರ್ಕಾರ ಗಮನಿಸದೇ ಹೋಗಿದೆ. ಇದು ರೋಗ ಲಕ್ಷಣವನ್ನೇ ರೋಗವೆಂದು ತೀರ್ಮಾನಿಸಿ ಕೊಡುವ ಅಡ್ಡನಾಡಿ ವೈದ್ಯನೊಬ್ಬನ ಔಷಧಿ ಅನತಿ ಕಾಲದಲ್ಲೇ ರೋಗಿಯನ್ನು ಕೊಲ್ಲುವಂತೆ ಸರ್ಕಾರದ ಈ ಸುಲಭ ಪರಿಹಾರ ನಮ್ಮ ಕೃಷಿ ಸಮುದಾಯ–ಸಂಸ್ಕೃತಿಯನ್ನೇ ಕೊಲ್ಲಬಲ್ಲುದಾಗಿದೆ.

ಈ ಸಂದರ್ಭದಲ್ಲಿ ಸರ್ಕಾರ ಹಾಕಿಕೊಳ್ಳಬೇಕಿದ್ದ ಮುಖ್ಯ ಪ್ರಶ್ನೆ ಇದಾಗಿತ್ತು: ಇಂದಿನ ರೈತನನ್ನು ರೈತ ಎಂಬ ಶಬ್ದದ ಸಾಂಪ್ರದಾಯಿಕ ಅರ್ಥದಲ್ಲಿ ಮಾತ್ರ ನೋಡಲು ಸಾಧ್ಯವೇ? ಜೊತೆಗೆ ಈ ಪ್ರಶ್ನೆಗಳನ್ನೂ: ಆತನ ಕೃಷಿಯೇತರ 'ಹವ್ಯಾಸ'ಗಳಿಗೆ ಅವನು ಹಕ್ಕುದಾರನಾದರೂ, ಅವುಗಳಿಗೆ ಸರ್ಕಾರ ಹೊಣೆಯಾಗಬೇಕೆ? ರೈತನೇಕೆ ತನ್ನ ಜಮೀನಿನ, ತನ್ನ ಕೃಷಿಯ ಇತಿ-ಮಿತಿಗಳನ್ನು ಮೀರಿದ ಹಣಕಾಸಿನ ಬಲೆಗೆ ಬೀಳುತ್ತಿದ್ದಾನೆ? ಇಂತಹ ಬೆಳವಣಿಗೆಗಳ ಹಿಂದೆ ಇರುವ ಸಾಮಾಜಿಕ, ಸಾಂಸ್ಕೃತಿಕ ಒತ್ತಡಗಳಾದರೂ ಎಂತಹವು? ಇದಕ್ಕೆ ಪ್ರಸಕ್ತ ಶೈಲಿಯ ರಾಜಕಾರಣ ಎಷ್ಟು ಕಾರಣ?

ಸರಣಿ ಆತ್ಮಹತ್ಯೆಗಳಂತಹ ಗಂಭೀರ ಪರಿಸ್ಥಿತಿಯ ಸಂದರ್ಭದಲ್ಲೂ ಇಂತಹ ಒಂದು ಸಣ್ಣ (ಮಾದರಿ) ಪ್ರಮಾಣದದ್ದಾದರೂ ಅಧ್ಯಯನಕ್ಕೂ ಮುಂದಾಗದೆ ಇಂತಹ ಸುಲಭ ಪರಿಹಾರಕ್ಕೆ ಮುಂದಾಗುವ (ಅದೂ ರಾಹುಲ್ ಗಾಂಧಿಯವರ ಪ್ರೇರಣೆ ಎಂಬ ಜೀಹುಜೂರ್ ರಾಜಕಾರಣದ ಹೆಸರಿನಲ್ಲಿ) ರಾಜಕಾರಣ ಅತ್ಯಂತ ಬೇಜವಾಬ್ದಾರಿತನದ್ದೇ ಎಂದು ಹೇಳಬೇಕು. ಸಿದ್ಧರಾಮಯ್ಯನವರು ರಚಿಸಿಕೊಂಡಿರುವ ಸಂಪುಟ ಮತ್ತು ಅದನ್ನು ಅಷ್ಟು ಸುಲಭವಾಗಿ ನಿವಾರಿಸಿಕೊಳ್ಳಲಾಗದಂತೆ ಅವರು ಸಿಕ್ಕಿಬಿದ್ದಿರುವ ರಾಜಕಾರಣ ಕರ್ನಾಟಕದ ಪಾಲಿನ ಒಂದು ದೊಡ್ಡ ದೌರ್ಭಾಗ್ಯವೇ ಆಗಿದೆ.

<u>ಸಮಕಾಲೀನ</u>

ಕನ್ನಡ ಭಾಷೆ-ಸಾಹಿತ್ಯ-ಸಮಾಜ: ಒಂದು ಹಿನ್ನೋಟ

ಒಂದು ಭಾಷೆಯ ಶಕ್ತಿ-ಅದರ ಉಳಿದು ಬೆಳೆಯುವ ಶಕ್ತಿ-ಅದು ಸೃಷ್ಟಿಸಬಲ್ಲ ಸಾಹಿತ್ಯ ಸಮೃದ್ಧಿಯನ್ನು ಅವಲಂಬಿಸಿರುತ್ತದೆ ಎಂಬೊಂದು ಮಾತಿದೆ. ಜಗತ್ತಿನಲ್ಲಿ ಕೆಲವೇ ಕೆಲವು ಜನರು ಆಡುವ ಭಾಷೆಗಳು ಈಗಲೂ ಉಳಿದುಕೊಂಡಿರಲು (ಉದಾ: ಇದ್ದಿಶ್) ಅವುಗಳ ಸಾಹಿತ್ಯ ಶಕ್ತಿಯೇ ಕಾರಣವೆಂದು ಹೇಳಲಾಗುತ್ತದೆ. ಏಕೆಂದರೆ ಒಂದು ಭಾಷೆಯಲ್ಲಿನ ಸಾಹಿತ್ಯ ಆ ಭಾಷೆಯನ್ನಾಡುವ ಸಮುದಾಯದ-ಸಮಾಜದ-ಸೃಷ್ಟಿಶಕ್ತಿಯ-ಪ್ರತೀಕವೇ ಆಗಿರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಕನ್ನಡ ಭಾಷೆ ಜಗತ್ತಿನ ಅತ್ಯಂತ ಹಿರಿಯ ಭಾಷೆಗಳಲ್ಲೊಂದಾಗಿದ್ದು, ಜಗತ್ತಿನ ಯಾವುದೇ ಭಾಷಾ ಸಾಹಿತ್ಯದೊಂದಿಗೆ ಹೆಗಲೆಣೆಯಾಗಿ ನಿಲ್ಲುವ ಸಾಹಿತ್ಯ ಚರಿತ್ರೆಯನ್ನು ಹೊಂದಿದೆ. ಆದರೂ ಇತ್ತೀಚಿನ ದಿನಗಳಲ್ಲಿ ಕನ್ನಡಕ್ಕೆ ಕುತ್ತು ಬಂದಿದೆ ಎಂಬ ಆತಂಕ ಎಲ್ಲೆಡೆಯಿಂದ ಕೇಳಿಬರುತ್ತಿದೆ. ಇದಕ್ಕೆ ಕಣ್ಣಿಗೆ ಕಾಣುವ ಆಧಾರಗಳೂ ಉಂಟು. ಕನ್ನಡದ ಜನಕ್ಕೆ ಕನ್ನಡ ಭಾಷೆ ಹೊಸ ಬದುಕಿನ ಪ್ರೇರಕವಾಗಲೀ ಅಥವಾ ವಾಹಕವಾಗಲೀ ಆಗಿರುವ ಶಕ್ತಿಯ ಬಗ್ಗೆ ನಂಬಿಕೆ ಕಡಿಮೆಯಾಗುತ್ತಿರುವಂತಿದೆ. ಹೊಸ ಬದುಕಿನ ಆಧಾರವಾಗಿರುವ

ಹೊಸ ಶಿಕ್ಷಣಕ್ಕೆ ಕನ್ನಡ ಮಾಧ್ಯಮವಾಗಲಾರದೆಂಬ ಈ ಅಪನಂಬಿಕೆಯ ಪ್ರತೀಕವೇ ಕನ್ನಡ ಶಾಲೆಗಳು ಇಂದು ಸಾಮೂಹಿಕವಾಗಿ ಮುಚ್ಚುತ್ತಿರುವ ಪರಿಸ್ಥಿತಿಗೆ ಕಾರಣವಾಗಿದೆ. ಅಂದರೆ ಕನ್ನಡ ಭಾಷೆಯ ನಿಯೋಗ ಶಕ್ತಿ (ಅಂದರೆ ಬಳಕೆಯ ಸಾಧ್ಯತೆಗಳು) ಕಡಿಮೆಯಾಗುತ್ತಿದೆ ಎಂದೇ ಅರ್ಥ.

ಆದರೆ ಇದು ನಿಜವೇ? ಇದು ಕನ್ನಡದ ದೌರ್ಬಲ್ಯವೋ ಅಥವಾ ಕನ್ನಡ ಜನರ ದೌರ್ಬಲ್ಯವೋ? ಈ ಪ್ರಶ್ನೆ ಉದ್ಭವವಾಗಿರುವುದು ಈ ಆಧುನಿಕ ದಿನಮಾನಗಳಲ್ಲಿ. ಅದು ತನ್ನ ನಿರ್ಣಾಯಕ ಘಟ್ಟವನ್ನು ಮುಟ್ಟಿರುವುದು ಇಂದಿನ ಜಾಗತೀಕರಣದ ದಿನಗಳಲ್ಲಿ. ಹಾಗಾಗಿ ಆಧುನಿಕ ಕಾಲದ ಕನ್ನಡ ಸಾಹಿತ್ಯ ಕಟ್ಟಿಕೊಟ್ಟ ಅನುಭವಲೋಕದ ಸ್ವರೂಪ ಮತ್ತು ಅದರ ಅಭಿವ್ಯಕ್ತಿ ಮೀಮಾಂಸೆ ಕುರಿತ ಚರ್ಚೆಗಳು ಈ ಮೇಲಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಕೆಲವು ಹೊಳಹುಗಳನ್ನಾದರೂ ನೀಡಬಲ್ಲವು. ಭಾಷೆಗೂ–ಸಾಹಿತ್ಯಕ್ಕೂ–ಜನರಿಗೂ ಇರುವ ಪರಸ್ಪರ ಸಂಬಂಧಗಳ ವಿನ್ಯಾಸಗಳು ಆ ಭಾಷಾ ಸಮಾಜ ಕಂಡುಕೊಳ್ಳಲೆಣಿಸುವ ಹೊಸ ಬದುಕಿನ ಸುಳಿವುಗಳನ್ನೂ, ಇಂತಹ ಹೊಸ ಹೊರಳಿನ ಸಂಕ್ರಮಣದ ಕಾಲದಲ್ಲಿ ಭಾಷೆಗೊದಗಬಹುದಾದ ಬಿಕ್ಕಟ್ಟಿನ ಮೂಲಗಳನ್ನೂ ಇಂತಹ ಚರ್ಚೆಗಳ ಸಾಲುಗಳ ಮಧ್ಯೆ ಗುರುತಿಸಬಹುದೇನೋ.

ಕನ್ನಡ ಭಾಷೆಯನ್ನಾಡುವ ಜನರ ಭಾವನಾತ್ಮಕ ಐಕ್ಯತೆಯ ಪ್ರತೀಕದ ಆಚರಣೆಯಾಗಿರುವ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಪತ್ರಿಕೆ, ಕನ್ನಡ ಸಾಹಿತ್ಯ ಚರ್ಚೆಯ ಮೂರು ಮುಖ್ಯ ಮಜಲುಗಳನ್ನು ಇಲ್ಲಿ ಮಂಡಿಸುತ್ತಿದೆ. ಜೊತೆಗೆ ಇಂದಿನ ಸಾಹಿತ್ಯ ಕುರಿತ ಎರಡು–ಮೂರು ಟಿಪ್ಪಣಿಗಳನ್ನೂ. ಇವುಗಳ ಓದಿನ ಸಂದರ್ಭದಲ್ಲಿ ಓದುಗರಿಗೇನಾದರೂ ಕನ್ನಡದ ಆತಂಕಕಾರಿಯೆನಿಸುವ ಭವಿಷ್ಯದ ಸುಳಿವುಗಳು ಅಲ್ಲಿ ದೊರೆತವಾದರೆ, ಅದು ಈ ಲೇಖನ ಗುಚ್ಛದ ಪರೋಕ್ಷ ಫಲಗಳಷ್ಟೆ. ನಮ್ಮ ಉದ್ದೇಶ ಇಲ್ಲಿ ಮೂಲತಃ ಸಾಹಿತ್ಯಿಕವಲ್ಲವಾದ್ದರಿಂದ ಇದು ಕನ್ನಡ ಸಾಹಿತ್ಯ ವಿಮರ್ಶೆಯ ಶಿಸ್ತುಬದ್ಧ ಪ್ರಯತ್ನವಲ್ಲ. ಬದಲಿಗೆ, ನಮ್ಮ ವಿಮರ್ಶೆ ನಮ್ಮ ಸಾಹಿತ್ಯವನ್ನು ಅಂದಂದಿಗೆ ಗ್ರಹಿಸಿ ಮಂಡಿಸಿದ ನೋಟಗಳನ್ನು ಇಂದು ಹಿನ್ನೋಡಿ ಪಡೆಯಬಹುದಾದ ಹೊಸ ಸಾಮಾಜಿಕ ಒಳನೋಟಗಳ ಒಂದು ಪ್ರಯತ್ನ. ಕನ್ನಡ ನವೋದಯವು ತನ್ನ ಸಾಹಿತ್ಯದ ಅವಿಭಾಜ್ಯ ಭಾಗವಾಗಿ ಕನ್ನಡ ಜನರ ಬದುಕಿನಲ್ಲಿ ಕನ್ನಡ ಭಾಷೆಯ ಪ್ರಾಥಮಿಕತೆಯನ್ನು ಹಲವು ನೆಲೆಗಳಲ್ಲಿ ಎತ್ತಿಹಿಡಿದುದರಿಂದ ಇಲ್ಲಿ ನವೋದಯ ಸಾಹಿತ್ಯದ ಚರ್ಚೆಯಿಲ್ಲ. ಮುಖ್ಯವಾಗಿ ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ, ಪುತಿನರನ್ನೊಳಗೊಂಡ ಕನ್ನಡ ನವೋದಯ ಆಧುನಿಕ ಕಾಲದ ಕನ್ನಡ ಭಾಷೆಯ, ಜನರ, ಬದುಕಿನ ದೇಸಿ ಆಳಗಳಿಂದ ಸೃಷ್ಟಿಯಾದ ಸಾಹಿತ್ಯವೆಂಬುದು ಸರ್ವಸಾಮಾನ್ಯ ಅಭಿಪ್ರಾಯವಾಗಿರುವುದೇ ಇದಕ್ಕೆ ಕಾರಣ. ಈ ಪರಂಪರೆಗೆ ವಂದಿಸಿಯೇ ಈ ಲೇಖನ ಗುಚ್ಛದ ಲೇಖಕರು ತಮ್ಮ ಈ ಬರಹಗಳನ್ನು ಬರೆದಿದ್ದಾರೆ.–ಸಂ.

ಡಿಸೆಂಬರ್, ೨೦೧೫

ಮತ್ತೆ ನಿತೀಶ್‌ಕುಮಾರ್!

ಪ್ರಿಯ ಓದುಗರೇ,

ಅಂತೂ ಬಿಹಾರದಲ್ಲಿ ಚುನಾವಣೆಯೆಂಬ ಒಂದೂವರೆ ತಿಂಗಳ ಗಜಪ್ರಸವ ಸುಗಮವಾಗಿ ಮುಗಿದಿದೆ. ಹೊಸ ಸರ್ಕಾರವೂ ರಚಿತವಾಗಿದೆ. ನಿತೀಶ್ ಕುಮಾರ್ ಅವರ ಎರಡು ಅವಧಿಗಳ ಆಡಳಿತವನ್ನು ಜನ ಮೆಚ್ಚಿದ್ದರ ಪ್ರತೀಕವಾಗಿ ಅವರು ಮೂರನೇ ಅವಧಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಸಂಘ ಪರಿವಾರದ ಕೆಲ ಶಕ್ತಿಗಳ ಮತೀಯ ಧೃವೀಕರಣದ ಹಲವು ತೆರನ ದುಷ್ಟ ಹುನ್ನಾರಗಳ ಹಿಮ್ಮೇಳದಲ್ಲಿ ನಡೆದ ಮೋದಿಯವರ 'ಅಭಿವೃದ್ಧಿ'ಯ ಹಾಹಾಕಾರಕ್ಕೆ ಕಿವಿಗೊಡದ ಬಿಹಾರದ ಜನತೆ ನಿತೀಶ್ ನೇತೃತ್ವದ ಮಹಾಮೈತ್ರಿ ಕೂಟಕ್ಕೆ ಅಭೂತಪೂರ್ವ ಬೆಂಬಲವನ್ನು ಸಾರಿ ಹೇಳಿದೆ. ಉಸಿರು ಬಿಗಿಹಿಡಿದು ಈ ಚುನಾವಣೆಗಳನ್ನು ದಿಟ್ಟಿಸುತ್ತಿದ್ದ ದೇಶದ ಶಾಂತಿಪ್ರಿಯ ಪ್ರಜಾಸತ್ತಾತ್ಮಕ ಜನತೆ ಭಾರಿ ನಿಟ್ಟಿಸಿರುಬಿಟ್ಟಿದೆ. ೨೦೧೪ರ ಲೋಕಸಭಾ ಚುನಾವಣೆಗಳಲ್ಲಿ ಧೂಳೆಬ್ಬಿಸುತ್ತಾ ಹೊರಟ ಮೋದಿಯವರ ದಿಗ್ವಿಜಯ ಯಾತ್ರೆಯನ್ನು–ದೆಹಲಿಯಲ್ಲಿ ಒಮ್ಮೆ ಮುಗ್ಗರಿಸಿತ್ತಾದರೂ–ನಿರ್ಣಾಯಕವಾಗಿ ತಡೆ ಹಿಡಿಯಲಾಗಿದೆ. ಕೇವಲ ಒಂದೂವರೆ ವರ್ಷದ ಹಿಂದೆ ಅಭೇಧ್ಯವೆನಿಸಿದ್ದ ಬಿಜೆಪಿ ಕೋಟೆಯಲ್ಲಿ ಈಗ ಬಿರುಕುಗಳು ಕಾಣಲಾರಂಭಿಸಿವೆ.

ಇದಕ್ಕೆ ನಿತೀಶ್‌ರ ಒಂದು ದಶಕದ ಜನಪರ ಆಡಳಿತ ಎಷ್ಟು ಕಾರಣವೋ ಮೋದಿ ಸರ್ಕಾರದ ಈವರೆಗಿನ ನಿರಾಶಾದಾಯಕ ಆಡಳಿತವೂ ಅಷ್ಟೇ ಕಾರಣವಾಗಿದೆ. ಭರವಸೆ ನೀಡಿದ್ದ 'ಅಚ್ಛೇ ದಿನ'ಗಳ ಬದಲಿಗೆ, ದೇಶದಾದ್ಯಂತ ಅವರ ಹಲವು ಮಂತ್ರಿಗಳೂ ಸೇರಿದಂತೆ ಅವರ ಪಕ್ಷದ ಪುಂಡು ಪಡೆಗಳು ಹಚ್ಚಿದ ವೈವಿಧ್ಯಮಯ ಮತೀಯ ಕಿಚ್ಚಿನ ಪರಿಣಾಮಗಳನ್ನು ಅರ್ಥಮಾಡಿಕೊಂಡ ಬಿಹಾರದ ಜನತೆ ತನ್ನೀ ತೀರ್ಪು ನೀಡಿದೆ. ನಿವಾಸಿ ಭಾರತೀಯರಿಂದ ಆಯ್ಕೆಯಾಗಿರುವ ಅನಿವಾಸಿ ಭಾರತೀಯ

ಪ್ರಧಾನಮಂತ್ರಿಯಂತೆ ಕಾಣತೊಡಗಿರುವ ಮೋದಿಯವರು ತಮ್ಮ ನಿರಂತರ ವಿದೇಶ ಪ್ರವಾಸಗಳ ಮಧ್ಯೆಯೇ ತಮ್ಮ ಜನಪ್ರಿಯತೆ ಮತ್ತು ಆಡಳಿತ ದಕ್ಷತೆಯನ್ನು ಪಣಕ್ಕೊಡ್ಡಿ ನಡೆಸಿದ ಬಿರುಸಿನ ಚುನಾವಣಾ ಪ್ರಚಾರ–ಕೊನೆಯ ಘಟ್ಟಗಳಲ್ಲಿ ಸೋಲಿನ ಸೂಚನೆಯ ಆತಂಕದಿಂದಾಗಿಯೋ ಏನೋ–ದೇಶದ ಪ್ರಧಾನಮಂತ್ರಿಯೊಬ್ಬರ ರಾಜಕೀಯ ಘನತೆಗೇ ಕುಂದು ತರುವ ಮಟ್ಟಕ್ಕೆ ಇಳಿದುಬಿಟ್ಟಿತ್ತು.

ವಿರೋಧಿ ಮೈತ್ರಿಕೂಟವನ್ನು ಜಾತಿ ಶಕ್ತಿಗಳ ಕೂಟವೆಂದು ಟೀಕಿಸುತ್ತಲೇ, ತಮ್ಮನ್ನು ಹಿಂದುಳಿದ ಜಾತಿಗೆ ಸೇರಿದ ನಾಯಕನೆಂದು ಪ್ರತಿಬಿಂಬಿಸಿಕೊಳ್ಳಲು ಮುಂದಾದ ಅವರು ಮುಸ್ಲಿಮರಿಗೆ ಮೀಸಲಾತಿ ನೀಡಿದರೆ ಹಿಂದುಳಿದ ಜಾತಿಗಳ ಮೀಸಲಾತಿಗೆ ಕುತ್ತೊದಗುತ್ತದೆ ಎಂಬ ಹುಸಿ ಬೆದರಿಕೆಯ ಅಸ್ತ್ರವನ್ನೂ ಬಳಸಿದರು. ಇದೇ ಬಿಹಾರದ ಜನತೆ ಒಂದೂವರೆ ವರ್ಷಗಳ ಹಿಂದಷ್ಟೇ ರಾಷ್ಟ್ರದ ನಾಯಕತ್ವಕ್ಕಾಗಿ ನಿಸ್ಸಂದಿಗ್ಧವಾಗಿ ತನ್ನನ್ನು ಬೆಂಬಲಿಸಿತ್ತು ಎಂಬುದನ್ನೇ ಮರೆತಂತೆ ತೋರಿದ ಮೋದಿಯವರು ಇಲ್ಲಿ ತಮ್ಮ ಪಕ್ಷದ ಅಧ್ಯಕ್ಷ ಅಮಿತ್ ಷಾ ಎಂಬ ರೂಕ್ಷ ರಾಜಕಾರಣಿಯ ವಶಕ್ಕೆ ಒಳಗಾದವರಂತೆ ತೋರಿ ನಿರಾಶೆ ಹುಟ್ಟಿಸಿದರು. ಅದರ ಫಲವನ್ನು ಅವರು ಉಂಡಿದ್ದಾರೆ.

ಇನ್ನು ನಿತೀಶ್ ಕುಮಾರ್ ನೇತೃತ್ವದ ಮಹಾಮೈತ್ರಿ ಕೂಟದ ಪರವಾದ ಫಲಿತಾಂಶಗಳು ಕಣ್ಣಿಗೆ ಹೊಡೆಯುವಂತಿದ್ದರೂ, ಅದರೊಳಗೇ ಅಪಾಯದ ಬೀಜಗಳೂ ಎದ್ದುಕಾಣುತ್ತಿವೆ. ಮೊದಲಾಗಿ ಕಾಂಗ್ರೆಸ್ಸಿನ ಮೈತ್ರಿ ಅದರ ಇತಿಹಾಸವೇ ಸೂಚಿಸುವಂತೆ ಯಾವಾಗಲೂ ಸಂಶಯಾಸ್ಪದವೇ. ಅದಕ್ಕಿಂತ ದೊಡ್ಡ ಅಪಾಯವೆಂದರೆ, ನಿತೀಶ್‌ಗೆ ಅನಿವಾರ್ಯ ಮಿತ್ರನಾಗಿ ಪರಿಣಮಿಸಿದ ಲಾಲೂಪ್ರಸಾದ್ ಯಾದವ್ ಅವರ ರಾಷ್ಟ್ರೀಯ ಜನತಾದಳ ಚುನಾವಣೆಗಳಲ್ಲಿ ನಿತೀಶರ ಸಂಯುಕ್ತ ಜನತಾದಳಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಗಳಿಸಿ ಸರ್ಕಾರದ ಮೇಲೆ ಆಂತರಿಕ ಹಿಡಿತ ಸಾಧಿಸುವ ಸಾಧ್ಯತೆ ಇರುವುದು. ಮುಖ್ಯಮಂತ್ರಿಯಾಗಿ ತನ್ನ ಈ ಹಿಂದಿನ ಮೂರು ಅವಧಿಗಳ ದುರಾಡಳಿತದ ಫಲವಾಗಿ ಸತತವಾಗಿ ಎರಡು ಚುನಾವಣೆಗಳಲ್ಲಿ ಸೋತು ಮತ್ತು ಮೇವಿನ ಹಗರಣದಲ್ಲಿ ಸಿಕ್ಕಿಕೊಂಡು ಸೆರೆಮನೆಗೂ ಹೋಗಿ ಚುನಾವಣೆಗಳಿಂದ ಹತ್ತು ವರ್ಷ ಬಹಿಷ್ಕೃತನಾಗಿ ಬುದ್ಧಿ ಕಲಿತಿರಬೇಕೆಂದು ಭಾವಿಸಿದ್ದ ಜನತೆಯ ಭಾವನೆಗೆ ವಿರುದ್ಧವಾಗಿ ಲಾಲೂ ತನ್ನ ಇಬ್ಬರು ಅನನುಭವಿ ಮಕ್ಕಳನ್ನು ಈ ಸರ್ಕಾರದಲ್ಲಿ ಮಂತ್ರಿಗಳನ್ನಾಗಿ ಮಾಡಿರುವುದಲ್ಲದೆ ಅವರಲ್ಲಿ ಒಬ್ಬನನ್ನು ಉಪ ಮುಖ್ಯಮಂತ್ರಿ ಸ್ಥಾನದಲ್ಲೂ ಕೂರಿಸಿದ್ದಾರೆ.

ನಿತೀಶ್ ಮತ್ತು ಲಾಲೂ ಇಬ್ಬರೂ ಲೋಹಿಯಾರ ಸಮಾಜವಾದಿ ಮತ್ತು ಜಯಪ್ರಕಾಶರ ಸರ್ವೋದಯ ವಿಚಾರಗಳಿಂದ ಪ್ರಭಾವಿತರಾಗಿ ರಾಜಕಾರಣ ಪ್ರವೇಶಿಸಿದವರಾದರೂ, ವ್ಯತ್ಯಾಸಗಳು ಇರುವುದು ಇಲ್ಲೇ. ಲೋಹಿಯಾ ಅವರ ಜಾತಿ ನೀತಿ ಹಿಂದುಳಿದ ಜಾತಿಗಳ ಪರವಾಗಿದ್ದಂತೆ ತೋರಿದರೂ ಅದರ ಆತ್ಯಂತಿಕ ಉದ್ದೇಶ ಜಾತಿಮುಕ್ತ ಸಮಾಜವೇ ಆಗಿದೆ. ಲಾಲೂ, ಮುಲಾಯಂ ಅಂತಹವರು ಈ ಜಾತಿ

ನೀತಿಯನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡು ಸಮಾಜವಾದ ಎಂದರೆ ಹಿಂದುಳಿದ ಜಾತಿವಾದವಲ್ಲದೆ ಮತ್ತೇನೂ ಅಲ್ಲವೆಂಬಂತೆ ಬಿಂಬಿಸುತ್ತಾ ತಮ್ಮ ಕುಟುಂಬ ರಾಜಕಾರಣವನ್ನು ಪೋಷಿಸಿಕೊಂಡು ಸಮಾಜವಾದಕ್ಕೇ ಕೆಟ್ಟ ಹೆಸರು ತಂದಿದ್ದಾರೆ. ಆದರೆ ಹಿಂದುಳಿದ ಜಾತಿಯೊಂದಕ್ಕೆ-ಅದೂ ಅತಿ ಕಡಿಮೆ ಜನಸಂಖ್ಯೆಯದು-ಸೇರಿದ್ದರೂ ಸಮಾಜವಾದದ ಜಾತಿ ನೀತಿಯ ಅಂತಿಮ ಗುರಿ ಮಹಿಳೆ ಮತ್ತು ಮುಸ್ಲಿಮರೂ ಸೇರಿದಂತೆ ಎಲ್ಲ ದಮನಿತ ಜಾತಿಗಳ ಮತ್ತು ಬಡ ವರ್ಗಗಳ ಪರವಾದ ಸಮಗ್ರ ಸಾಮಾಜಿಕ ನ್ಯಾಯವೇ ಆಗಿದೆ ಎಂಬ ತಿಳುವಳಿಕೆಯೊಂದಿಗೆ ಎಲ್ಲ ಜಾತಿ-ವರ್ಗಗಳ ವಿಶ್ವಾಸ ಪಡೆದು ಜನಪ್ರಿಯ ನಾಯಕರಾಗಿ ಮೂಡಿದ ನಿತೀಶ್, ಆ ಕಾರಣದಿಂದಲೇ ತಮ್ಮ ಮುಖ್ಯಮಂತ್ರಿತ್ವದ ಎರಡೂ ಅವಧಿಗಳಲ್ಲಿ ರಾಷ್ಟ್ರದಲ್ಲೇ ದಾಖಲೆಯ ಪ್ರಗತಿದರವನ್ನು ಸಾಧಿಸಲು ಸಾಧ್ಯವಾಯಿತು. ಈ ಸಾಧ್ಯತೆಯೇ ಅವರನ್ನು ಈಗಲೂ ಲಾಲೂ ಒಡ್ಡಬಹುದಾದ ಅಪಾಯದಿಂದ ಪಾರುಮಾಡಬಲ್ಲುದು ಎಂದು ಆಶಿಸಬಹುದಾಗಿದೆ. ನಿತೀಶ್‌ಗೆ ನಮ್ಮ ಶುಭಾಶಯಗಳು!!

ಇನ್ನು ಇದೇ ಸಮಾಜವಾದದ ಹಿನ್ನೆಲೆಯ ಹೆಮ್ಮೆಯನ್ನು ಹೇಳಿಕೊಳ್ಳುವ ನಮ್ಮ ರಾಜ್ಯದ ಮುಖ್ಯಮಂತ್ರಿಗಳನ್ನು ನೋಡಿ. ತಮ್ಮ ಸರ್ಕಾರದ ಎಲ್ಲ ನೇಮಕಾತಿಗಳನ್ನೂ – ಅವು ಕೆಪಿಎಸ್ಸಿ ಸದಸ್ಯರದ್ದೇ ಆಗಿರಲಿ, ಹೊಸ ಅಡ್ವೋಕೇಟ್ ಜನರಲ್ಲದ್ದೇ ಆಗಿರಲಿ ಅಥವಾ ಸರ್ಕಾರದ ಹೊಸ ದಂಡಪಿಂಡಗಳೆನಿಸಿರುವ ಹತ್ತು ಜನ ಹೊಸ ಸಂಸದೀಯ ಕಾರ್ಯದರ್ಶಿಗಳ ದಂಡಿನದ್ದೇ ಆಗಿರಲಿ-ಅವರ ಜಾತಿ-ಉಪಜಾತಿಗಳ ಸೂಚನೆಗಳೊಂದಿಗೇ ಪ್ರಕಟಿಸುತ್ತಾ ಈ ಸಿದ್ಧರಾಮಯ್ಯನವರ ಸರ್ಕಾರ, ಸಂಪೂರ್ಣ ಜಾತಿಮಯ ಸರ್ಕಾರವೆನಿಸಿಕೊಂಡಿದೆ. ಇದರ ಪರಿಣಾಮವಾಗಿಯೇ ಅದು ಮೊನ್ನೆ ಟಿಪ್ಪು ಜಯಂತಿ ಸಂದರ್ಭದಲ್ಲಿ ಕನ್ನಡದಲ್ಲಿ ಬರೆಯುವ 'ಇಂಗ್ಲಿಷ್' ಲೇಖಕರಾದ ಗಿರೀಶ್ ಕಾರ್ನಾಡರು ಸಹಜವಾಗಿಯೇ ಆಡಿದ ಅವಿವೇಕದ ಮಾತುಗಳ ವಿರುದ್ಧ ಒಂದು ನಿರ್ದಿಷ್ಟ ಜಾತಿ ಸಮುದಾಯ ಸಂಘಟಿತ ದಾಳಿಯನ್ನು ಎದುರಿಸಬೇಕಾಯಿತು. ಮೊದಲಾಗಿ ಈ ಟಿಪ್ಪು ಜಯಂತಿಯ ಅಧಿಕೃತ ಆಚರಣೆಯೇ ಒಂದು ಅವಿವೇಕದ ನಿರ್ಧಾರ. ಈ ಸಂದರ್ಭದಲ್ಲಿ ಟಿಪ್ಪು ಬಗ್ಗೆ ನಡೆದಿರುವ ವಿದ್ವತ್ ಚರ್ಚೆಯೇ ಅಂತಿಮವಾಗಿ ಸೂಚಿಸುವಂತೆ ಆತನ ಚರಿತ್ರೆ ಏನೇ ಇರಲಿ, ಸ್ವಾತಂತ್ರ್ಯಪೂರ್ವ ರಾಜರ ಹುಟ್ಟುಹಬ್ಬವನ್ನು ಪ್ರಜಾಸರ್ಕಾರವೊಂದು ಆಚರಿಸುವುದಕ್ಕೆ, ಚುನಾವಣಾ ಉದ್ದೇಶಗಳ ಹೊರತಾಗಿ ಮತ್ತಾವ ಕಾರಣವೂ ಇರಲು ಸಾಧ್ಯವಿಲ್ಲ. ಕಾಂಗ್ರೆಸ್ಸಿನ ಈ ರಾಜಕಾರಣ ಬಿಜೆಪಿಯನ್ನು ಬಲಪಡಿಸಿದೆಯೇ ಹೊರತು ಕಾಂಗ್ರೆಸ್ಸಿಗೆ ಇದರಿಂದ ಕಿಂಚಿತ್ತೂ ಲಾಭವಾಗಿಲ್ಲ. ಹಾಗಾಗಿಯೂ ಇದು ಮೂರ್ಖ ನಿರ್ಧಾರ.

ಮೂರ್ಖ ಮಾತ್ರವಲ್ಲ, ಅಪಾಯಕಾರಿ ಅನುಮಾನಾಸ್ಪದತೆಗೆ ಎಡೆ ಮಾಡಿಕೊಟ್ಟಿರುವ ರಾಜ್ಯ ಸರ್ಕಾರದ ಇನ್ನೊಂದು ನಡೆಯೆಂದರೆ, ಕಾಂಗ್ರೆಸ್ ಪಕ್ಷದ ವತಿಯಿಂದ

ಆರಂಭವಾಗಿರುವ ಲೋಕಾಯುಕ್ತ ಸಂಸ್ಥೆಯನ್ನೇ ಮುಗಿಸುವ ಪ್ರಯತ್ನ. ಪರಮ ಭ್ರಷ್ಟತೆಯ ಪ್ರತೀಕವಾಗಿರುವ ಸದ್ಯದ ಲೋಕಾಯುಕ್ತರನ್ನು ಪದಚ್ಯುತಗೊಳಿಸುವ ಪ್ರಯತ್ನಕ್ಕೆ ಪದೇ ಪದೇ ಅಡ್ಡಿ ಮಾಡುತ್ತಾ ಬಂದ ಈ ಸರ್ಕಾರ, ವಿರೋಧ ಪಕ್ಷಗಳು ಆ ಪ್ರಕ್ರಿಯೆಯನ್ನು ಆರಂಭಿಸುತ್ತಿದ್ದಂತೆ, ಅದಕ್ಕೆ ಪೂರಕವಾಗಿ ಕೆಲಸ ಮಾಡುವ ಬದಲು ಆ ಸಂಸ್ಥೆಯ ಸದ್ಯದ ಏಕಮಾತ್ರ ದಾತರಾದ ಉಪಲೋಕಾಯುಕ್ತರನ್ನೂ ಪದಚ್ಯುತಗೊಳಿಸಲು ಮುಂದಾಗಿದ್ದು ಸಾರ್ವಜನಿಕರಲ್ಲಿ ಸರ್ಕಾರದ ಬಗ್ಗೆ ಹಲವು ಸಂದೇಹಗಳಿಗೆ ಕಾರಣವಾಗಿದೆ. ಆದರೆ 'ಬಿಗ್ ಬಾಸ್' ಎಂಬ ಅಭಾಸವನ್ನೂ ಮತ್ತು ಹುಚ್ಚ ವೆಂಕಟೇಶ ಎಂಬ ವಿಕ್ಷಿಪ್ತನ ವಕ್ರ ವರ್ತನೆಗಳನ್ನು ಮುಗಿಬಿದ್ದು ಪ್ರದರ್ಶಿಸುವ ಮಾಧ್ಯಮಗಳು ಮತ್ತು ಅದನ್ನು ಮುಗಿಬಿದ್ದು ನೋಡುವ ಅಧೋಗತಿ ತಲುಪಿರುವ ಈ ರಾಜ್ಯದ ಜನ ತಮ್ಮನ್ನಾಳುತ್ತಿರುವ ಸರ್ಕಾರದ ನೀತಿಗಳ ಬಗ್ಗೆ ತಮ್ಮ ಭವಿಷ್ಯದ ಬಗ್ಗೆ ಸಾಮೂಹಿಕವಾಗಿ ಗಂಭೀರ ಆಲೋಚನೆ ಮಾಡಬಲ್ಲ ಶಕ್ತಿಯನ್ನು ಉಳಿಸಿಕೊಂಡಿದ್ದಾರೆಯೇ ಎಂಬುದೇ ಇದನ್ನೂ ಮೀರಿದ ದೊಡ್ಡ ಸಂದೇಹವಾಗಿದೆ.

ಹಾಗೆ ನೋಡಿದರೆ, ಯಾಕೋ ಇಡೀ ಜಗತ್ತೇ ವಿಕ್ಷಿಪ್ತತೆಯ ಕಡೆ ಜಾರುತ್ತಿರುವಂತೆ ತೋರುತ್ತಿದೆ. ಪ್ಯಾರಿಸ್‌ನಲ್ಲಿ ಐಸಿಎಸ್‌ನವರು ನಡೆಸಿದ ನರಮೇಧ ಯಾರ ನರಮಂಡಲವನ್ನಾದರೂ ಆಘಾತಗೊಳಿಸುವಂತಹದ್ದು. ಧಾರ್ಮಿಕ ಘೋಷಣೆಗಳನ್ನು ಕೂಗುತ್ತಾ ನಡೆದ ಈ ಘೋರ ಹಿಂಸಾಚಾರದ ಹಿಂದೆ ಈಗ -ಕೆಲವರು ಮಾಡುತ್ತಿರುವಂತೆ-ತೈಲ ರಾಜಕಾರಣದ ಬೇರುಗಳನ್ನು ಹುಡುಕುತ್ತಾ ಕೂರುವುದೆಂದರೆ ಇಂತಹ ರಾಕ್ಷಸೀಯತೆಯನ್ನು ಸಮರ್ಥಿಸಿದಂತೆಯೇ ಆದೀತು. ಏಕೆಂದರೆ ಅಂತಹ ಪ್ರಯತ್ನ ಇಂತಹ ಹೀನಕೃತ್ಯಗಳನ್ನು ಕ್ಷಮಾರ್ಹಗೊಳಿಸಿಬಿಟ್ಟು ಇವುಗಳ ಪುನರಾವರ್ತನೆಗೆ ಕುಮ್ಮಕ್ಕು ನೀಡುತ್ತವೆ. ಇದನ್ನೆಲ್ಲ ಬೆಂಬಲಿಸದಿದ್ದರೂ ಮೌನವಾಗಿ ನೋಡುತ್ತಿರುವ ಜಗತ್ತಿನ ಮುಸ್ಲಿಂ ಜನತೆ; ಅಂದರೆ ಅದರ ಬೌದ್ಧಿಕ ಮತ್ತು ಧಾರ್ಮಿಕ ನಾಯಕತ್ವ ಜಾಗತಿಕವಾಗಿಯೂ, ಸ್ಥಳೀಯವಾಗಿಯೂ ದಿಟ್ಟವಾಗಿ, ಸ್ಪಷ್ಟವಾಗಿ ಮಾತಾಡುವ ಸಂದರ್ಭ ಈಗ ಬಂದಿದೆ ಎನ್ನಿಸುತ್ತದೆ. ನಂತರವಷ್ಟೇ ತೈಲ ರಾಜಕಾರಣದ ಚರ್ಚೆ.

ಸಮಕಾಲೀನ

ವಿಜ್ಞಾನ-ತಂತ್ರಜ್ಞಾನ: ಇದು ಜ್ಞಾನವೋ ಅ-ಜ್ಞಾನವೋ?

ಇದು ಆಧುನಿಕ ಯುಗ. ವೈಜ್ಞಾನಿಕತೆಯೇ ಇದರ ಅಡಿಗಲ್ಲು ಎಂದು ಹೇಳಲಾಗುತ್ತದೆ. ಅಂದರೆ ಇದರ ರುಚಿ-ಅಭಿರುಚಿ, ಸರಿ-ತಪ್ಪುಗಳೆಲ್ಲ ವಿಜ್ಞಾನದ ಒರೆಗಲ್ಲಿನಲ್ಲೇ ನಿರ್ಣಯವಾಗುವುದು. ನಮ್ಮ ಬುದ್ಧಿಜೀವಿಗಳ ಸಾಮಾಜಿಕ ಆಲೋಚನೆಗಳಿಂದ ಹಿಡಿದು ನಮ್ಮ ರೈತರು ತಮ್ಮ ಉತ್ಪನ್ನಗಳಿಗೆ ಕೇಳುವ ಬೆಲೆಗಳವರೆಗೆ ಎಲ್ಲವೂ ವೈಜ್ಞಾನಿಕವಾಗಿದ್ದರೇ

ಅದು ನ್ಯಾಯವೆನ್ನಿಸುವುದು. ಅಷ್ಟರಮಟ್ಟಿಗೆ ವಿಜ್ಞಾನ ಈ ಯುಗದ ಮಹಾಜ್ಞಾನವಾಗಿ (ನಮ್ಮ ಎಲ್ಲ ಸಮಸ್ಯೆಗಳಿಗೂ ಇಲ್ಲಿ ಉತ್ತರವಿದೆ ಎಂಬರ್ಥದಲ್ಲಿ), ಅಂತಿಮ (ಆತ್ಯಂತಿಕ ಎಂಬರ್ಥದಲ್ಲಿ) ಜ್ಞಾನವಾಗಿ ನಮ್ಮನ್ನು ಆಳುತ್ತಿದೆ. ಹಾಗೆ ನೋಡಿದರೆ, ದೇವರು-ಧರ್ಮಗಳ ಹೆಸರಿನಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಬಂಧಿಸಿಟ್ಟಿದ್ದ ಜನಸಾಮಾನ್ಯರನ್ನು ಮೂಢ ನಂಬಿಕೆಗಳ ಸೆರೆಯಿಂದ ಬಿಡುಗಡೆಗೊಳಿಸಿ ಅವರ ಬದುಕಿನಲ್ಲಿ ಮಾನವ ಘನತೆಯ ಹೊಸ ಮೌಲ್ಯಗಳನ್ನು ಬಿತ್ತಿದ್ದೇ ವಿಜ್ಞಾನ ಬಿಚ್ಚಿಟ್ಟ ಅನೇಕ ಸೃಷ್ಟಿ ರಹಸ್ಯಗಳೇ ಅಲ್ಲವೇ? ಹಾಗೇ ಮನುಷ್ಯನ ಬದುಕಿಗೆ ಹೊಸ ಅನುಕೂಲ ಮತ್ತು ಸುಖಗಳ ಅಸಂಖ್ಯ ಮತ್ತು ಅಸೀಮ ಸೌಲಭ್ಯಗಳನ್ನು ಒದಗಿಸಿದ್ದೂ, ಒದಗಿಸುತ್ತಿರುವುದೂ ತಂತ್ರಜ್ಞಾನವೆಂಬ ಈ ವಿಜ್ಞಾನದ ಅನ್ವಯಗಳೇ ಅಲ್ಲವೇ?

ಆದರೆ ಈ ವಿಜ್ಞಾನ ನಿಜವಾಗಿಯೂ ಮಹಾ ಅಥವಾ ಅಂತಿಮ ಜ್ಞಾನವೇ? ಇದಕ್ಕೆ ಇತಿಮಿತಿಗಳೇ ಇಲ್ಲವೇ? ಇಂದು ಅದು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ? ಒಂದು ಕಡೆ ಸ್ವತಃ ವಿಜ್ಞಾನದ ಉನ್ನತ ಸಂಶೋಧನೆಗಳೇ ವಿಜ್ಞಾನ ತಲುಪಿರುವ ತಾತ್ವಿಕ ಬಿಕ್ಕಟ್ಟುಗಳ ಕಡೆ, ಅದರ ಅಂತಿಮ ಸೀಮೆಗಳ ಕಡೆ ಬೊಟ್ಟು ಮಾಡುತ್ತಿದೆ. ಇನ್ನೊಂದು ಕಡೆ ಅದರ ಅನ್ವಯಶಾಸ್ತ್ರವಾದ ತಂತ್ರಜ್ಞಾನ ತನ್ನ ನಾಗಾಲೋಟದಲ್ಲಿ ಮಾಡಿದ ಅನಾಹುತಗಳ ಆತಂಕಗಳಲ್ಲಿ ಹುಟ್ಟಿಕೊಂಡದ್ದು, ಪರಿಸರ ವಿಜ್ಞಾನವೆಂಬ ಹೊಸ ಜ್ಞಾನಶಿಸ್ತು. ಅದು ತಂತ್ರಜ್ಞಾನದಲ್ಲಿ ಅಂತರ್ಗತವಾಗಿರುವ ಮಾನವನ ಸ್ವಯಂವಿನಾಶದ ಅಪಾಯದ ಬೀಜದ ಕಡೆ ಬೊಟ್ಟು ಮಾಡುತ್ತಿದೆ.

ಹೀಗಾಗಿ ಇಂದು ವಿಜ್ಞಾನವನ್ನು ಮಹಾಜ್ಞಾನವೆಂದಾಗಲೀ, ಆತ್ಯಂತಿಕ ಜ್ಞಾನವೆಂದಾಗಲೀ ನೋಡುವ ಕ್ರಮವೇ ಪ್ರಶ್ನಾರ್ಹವೆನ್ನಿಸಿದೆ. ನಿಜವಾಗಿ ನಾವು ವಿಜ್ಞಾನವೆಂದು ಏನನ್ನು ಕರೆಯುತ್ತೀವೋ ಅದು ಕೇವಲ ಜಡವಸ್ತು ವಿಜ್ಞಾನ ಮತ್ತು ಅಳತೆಗೆ ಸಿಗುವ ವಸ್ತುಗಳ ವಿಜ್ಞಾನ ಮಾತ್ರ. ಆದರೆ ಸೃಷ್ಟಿ ಕೇವಲ ಅಳತೆಗಳಿಗೆ ಸಿಗಬಲ್ಲ ಜಡವಸ್ತುಗಳ ಸಂಯೋಜನೆಯಲ್ಲ. ಅದು ಒಂದು ಆದಿಮ ಮತ್ತು ಅಖಂಡ ವಿದ್ಯಮಾನ. ಅಷ್ಟೇ ಅಲ್ಲ, ಅದು ತನ್ನದೇ ಲಯದಲ್ಲಿ ಉಸಿರಾಡುತ್ತಿದೆ, ಜೀವಂತವಾಗಿದೆ ಎಂಬ ಅರಿವು ಈಗ ವಿಜ್ಞಾನದ ಮೀರಲಾಗದ ಎಲ್ಲೆಗಳಲ್ಲಿ ನಮ್ಮ ಅರಿವಿಗೆ ಬರುತ್ತಿದೆ. ನಾವು ಹೆಮ್ಮೆಪಟ್ಟುಕೊಂಡ ವಿಜ್ಞಾನ ಏನಿದ್ದರೂ ವಿ-ಜ್ಞಾನ; ಅಂದರೆ ವಿಗ್ರಹ ಜ್ಞಾನ; ಅಂದರೆ ಎಲ್ಲವನ್ನೂ ಒಡೆದು ನೋಡುವ-ವಿಶ್ಲೇಷಿಸಿ ನೋಡುವ-ಒಂದು ಜ್ಞಾನಶಿಸ್ತೇ ಹೊರತು, ಒಂದು ವಸ್ತು ಅಥವಾ ವಿದ್ಯಮಾನವನ್ನು ಅದು ಇರುವ ಅಖಂಡ ಸ್ಥಿತಿಯಲ್ಲಿ ಅರಿಯಲಾಗದ ಜ್ಞಾನ; ಹಾಗಾಗಿ ಅದು ಅಪೂರ್ಣ ಜ್ಞಾನ ಮತ್ತು ಒಂದರ್ಥದಲ್ಲಿ ಅ-ಜ್ಞಾನವೇ ಸರಿ ಎಂಬ ಸಮಗ್ರ ಜ್ಞಾನ (ಇದನ್ನು ಬೌದ್ಧರು ಸಮ್ಯಕ್ ಜ್ಞಾನ ಎನ್ನುತ್ತಾರೆ) ಇಂದು ಉಂಟಾಗಿದೆ.

ಇಂತಹ ಅ–ಜ್ಞಾನದಿಂದಾಗಿಯೇ ನಾವು ಮೇರೆವರಿಯದ ತಂತ್ರಜ್ಞಾನದ ಹಿಂದೆ ಬಿದ್ದು ಅದರ ದಾಸರಾಗಿ ಮನುಷ್ಯಲೋಕವನ್ನು ಅನಾತ್ಮಿಕ(ಸಂವೇದನಾಹೀನ) ವಾಗಿಸುತ್ತಿದ್ದೇವೆ. ಸುಖ–ಮಿತಿ ಇಲ್ಲದ ಸುಖ–ನಮ್ಮ ಹಕ್ಕು ಎಂದು ನಂಬಿ ನಾವು ಯಾವುದರ ಸೃಷ್ಟಿಯೋ ಆ ಸೃಷ್ಟಿಯ ಆಧಾರ ಶಕ್ತಿಗಳನ್ನೇ ನಾಶ ಮಾಡುತ್ತಿದ್ದೇವೆ. ಹೌದು, ಅವು ಶಕ್ತಿಗಳು, ವಸ್ತುಗಳಲ್ಲ. ನಾವು ಹೆಮ್ಮೆ ಪಡುತ್ತಾ ಬೆಳೆಸುತ್ತಾ ಬಂದ ಭೌತ (ಅಥವಾ ಜಡ ಅಥವಾ ಪದಾರ್ಥ) ವಿಜ್ಞಾನ ಈ ಶಕ್ತಿಗಳನ್ನು ಗುರುತಿಸಿದ್ದು ಜಡವಸ್ತುವಿನ ಭಾಷೆಯಲ್ಲೇ. ಹಾಗಾಗಿಯೇ ಅದು ಪ್ರಜ್ಞಾಶೂನ್ಯವಾಗಿ ಇಂದು ಸೃಷ್ಟಿಯನ್ನು ಸಂಪೂರ್ಣ ಮಲಿನಗೊಳಿಸಿ ಅದನ್ನು ನಾಶ ಮಾಡಲು ಹೊರಟಿರುವುದು.

ಇದನ್ನು ಎಷ್ಟು ಹೇಳಿದರೂ, ಹೇಗೆ ಹೇಳಿದರೂ ಮನುಷ್ಯರಿಗೆ ಅರ್ಥವಾಗುತ್ತಿಲ್ಲ. ಶಾಪಮಾನದ ಹೆಚ್ಚಳ, ಹಿಮ ಯುಗ, ಜೀವ ತಳಿಗಳ ನಾಶದ ಪರಿಣಾಮಗಳು, ಪ್ರಾಕೃತಿಕ ಸಂಪನ್ಮೂಲಗಳ ಬರಿದು–ಇವಾವುವೂ ಇಂದು ಮನುಷ್ಯ ಹಂದಿಯ (ಅಂದರೆ ತೃಪ್ತಿಯೇ ಇಲ್ಲದ ಏಕಾಗ್ರ ಕಬಳಿಕೆಯ)–ಆಧುನಿಕ– ಬಾಳನ್ನು ನಿಲ್ಲಿಸಲು ಪ್ರೇರೇಪಿಸುತ್ತಿಲ್ಲ. ವೈವಿಧ್ಯಮಯ ಹಿಂಸೆ, ಅತ್ಯಾಚಾರ, ಯುದ್ಧ, ಭಯೋತ್ಪಾದನೆಗಳೂ ಅವನ್ನು ಎಚ್ಚರಿಸುತ್ತಿರುವಂತೆ ಕಾಣುತ್ತಿಲ್ಲ. ಭಯೋತ್ಪಾದನೆಗೆ, ಒಂದು ನಿರ್ದಿಷ್ಟ ಧರ್ಮದಲ್ಲೋ ತೈಲ ರಾಜಕಾರಣದಲ್ಲೋ ಅವನು ಕಾರಣಗಳನ್ನು ಹುಡುಕುತ್ತಾ ಮೈಮರೆತಿದ್ದಾನೆ. ಈ ಎಲ್ಲ ಹಿಂಸೆ–ಅಶಾಂತಿಗೆ ಬೆನ್ನೆಲುಬಾಗಿರುವುದು ಸಾಮಾಜಿಕ ಮಾಧ್ಯಮಗಳೂ ಸೇರಿದಂತೆ ಆಧುನಿಕ ತಂತ್ರಜ್ಞಾನವೆಂಬುದು ಅವನ ಸದ್ಯದ ಹಂದಿ–ಅರಿವಿಗೆ ತಾಕುತ್ತಿಲ್ಲ. ಹಾಗಾಗಿ 'ಕೊಡಲಿ ಮತ್ತು ಕಂಪ್ಯೂಟರ್' ಎಂಬ ಈ ಒಂದು ಉಪಕಥೆ:

೧೯೪೫ರಲ್ಲಿ ನಾಗಸಾಕಿಯ ಮೇಲೆ ಅಣುಬಾಂಬ್ ಹಾಕಿ ಸಾವಿರಾರು ಜನ ಕ್ಷಣಾರ್ಧದಲ್ಲಿ ಸತ್ತು ಇನ್ನಷ್ಟು ಸಾವಿರಾರು ಜನ ನೋವು–ಸಂಕಟ–ರೋಗ–ರುಜಿನಗಳಿಗೆ ಸಿಕ್ಕಿ ಸಾಯುವಂತೆ ಮಾಡಿದ ವಿಮಾನ ಚಾಲಕ ನಂತರ 'thou shall not kill'('ನೀನು ಕೊಲ್ಲಬಾರದು') ಎಂಬ ಕ್ರಿಶ್ಚಿಯನ್ ಧಾರ್ಮಿಕ ಪ್ರಜ್ಞೆಗೆ ಸಿಲುಕಿ ಒದ್ದಾಡಿ ಹುಚ್ಚನಾಗಿ ಹೋಗಿ ಸತ್ತ. ಆದರೆ ಕೆಲವೇ ವರ್ಷಗಳ ನಂತರ ವಿಯಟ್ನಾಂ ಯುದ್ಧದಲ್ಲಿ ರಾಸಾಯನಿಕ ಬಾಂಬ್ ಹಾಕಿ ಹೆಂಗಸರು ಮಕ್ಕಳೂ ಸೇರಿದಂತೆ ಅಷ್ಟೇ ಸಾವಿರಾರು ಜನರನ್ನು ಕೊಂದ ವೈಮಾನಿಕನನ್ನು ಯಾವುದೇ ಪಾಪಪ್ರಜ್ಞೆ ಅಥವಾ ಧಾರ್ಮಿಕ ಪ್ರಜ್ಞೆ ಬಾಧಿಸದೆ ಅವನು ಸಂತೋಷದ ಬದುಕನ್ನೇ ಬದುಕಿದ. ಅವನನ್ನೊಮ್ಮೆ ಸಾಮಾಜಿಕ ತಜ್ಞರು ಒಂದು ಸಂದರ್ಶನದಲ್ಲಿ, ನಿನ್ನ ಕೈಗೆ ಒಂದು ಕೊಡಲಿ ಕೊಟ್ಟು ಎದುರಿನ ಬೀದಿಯಲ್ಲಿ ಹೋಗುತ್ತಿರುವ ಮುದುಕಿಯನ್ನು ಕೊಂದು ಬರುತ್ತೀಯಾ? ಎಂದು ಕೇಳಿದಾಗ ಅವನು ಗಾಬರಿ ಬಿದ್ದು 'ಹಾಗೇಕೆ ನನಗೆ ಹೇಳುತ್ತೀರಿ, ಅದು ಭಯಾನಕ! ನಾನೊಬ್ಬ ಕ್ರಿಶ್ಚಿಯನ್ನನಾಗಿ ಮನುಷ್ಯನನ್ನು ಕೊಲ್ಲುವುದು ಮಹಾಪಾಪ!!' ಎಂದನಂತೆ. ಅದಕ್ಕೆ ಆ ಸಂಶೋಧಕರು ಮತ್ತೆ 'ನೀನು ವಿಯಟ್ನಾಂನಲ್ಲಿ ಬಾಂಬ್ ಹಾಕಿ ಸಾವಿರಾರು ಜನರನ್ನು

ಕೊಂದೆಯಲ್ಲ? ಏಕೆ, ನಿನ್ನನ್ನು ಆ ಕ್ರಿಶ್ಚಿಯನ್ ಪ್ರಜ್ಞೆ ಬಾಧಿಸಲಿಲ್ಲವೆ?' ಎಂದು ಕೇಳಿದಾಗ ಅವನು ಹೇಳಿದನಂತೆ, 'ಬಾಂಬ್ ಹಾಕಿದ್ದು ನಾನಲ್ಲ; ವಿಮಾನಕ್ಕೆ ಅಳವಡಿಸಿದ್ದ ಕಂಪ್ಯೂಟರ್!'

ಇದು ತಂತ್ರಜ್ಞಾನದ ಮಹಿಮೆ! ಅವನ ಪ್ರಜ್ಞೆಯನ್ನೇ ಒಡೆದು, ಮನುಷ್ಯನನ್ನು ಮನುಷ್ಯನನ್ನಾಗಿಸಿರುವ ಅವನಲ್ಲಿನ ಪಾಪಪ್ರಜ್ಞೆಯಿಂದಲೇ ಅವನನ್ನು ಚ್ಯುತಗೊಳಿಸಿ ಅವನನ್ನು ಅಮಾನವೀಕರಣಕ್ಕೊಳಪಡಿಸುವ ಶಕ್ತಿಯೇ ಇಂದಿನ ತಂತ್ರಜ್ಞಾನ! ಮನುಷ್ಯನ ಕೈಕಾಲುಗಳನ್ನೇ ಅಪ್ರಸ್ತುತಗೊಳಿಸಿರುವ ಯಂತ್ರ ನಾಗರೀಕತೆ ಮನುಷ್ಯನನ್ನು ರಾಕ್ಷಸನನ್ನಾಗಿ ಮಾಡಿರುವ ಆಧುನಿಕತೆಯ ಪ್ರತೀಕವೇ ಆಗಿದೆ. ದುಡಿಮೆಯ ಸಂಕಷ್ಟಗಳಿಂದ ಪಾರು ಮಾಡಿ ಮನುಷ್ಯನಿಗೆ ಒಂದಿಷ್ಟು ಬಿಡುವು ಒದಗಿಸುವುದಾಗಿ ಸಾರುತ್ತಾ ಬಂದ ತಂತ್ರಜ್ಞಾನ ಇಂದು ಅವನನ್ನು ಸ್ಪರ್ಧಾತ್ಮಕ ಸುಖಗಳ ದುರಾಸೆಗೆ ಬೀಳಿಸಿ ಅವನನ್ನು ಬಿಡುವಿಲ್ಲದ ದುಡಿಮೆಗೆ ಹಚ್ಚುವ ಅನಾಗರಿಕ-ಸಂಸ್ಕೃತಿಹೀನ ಬದುಕಿನ ಮಾದರಿಗೆ ದಾರಿ ಮಾಡಿಕೊಟ್ಟಿದೆ. ದೇಹಾತ್ಮನಾದ ಮನುಷ್ಯನನ್ನು ಬರೀ ದೇಹದ ಮಟ್ಟಕ್ಕೆ ಇಳಿಸಿದೆ. ಭೂಮಿಯನ್ನೇ ಕೊಲ್ಲಬಲ್ಲ ಹವಾಮಾನ ವೈಪರೀತ್ಯ ಕುರಿತು ಮುವ್ವತ್ತು ಸಭೆಗಳು ನಡೆದರೂ ನಾವು ಒಂದು ಇತ್ಯರ್ಥಕ್ಕೆ ಬರಲಾಗಿಲ್ಲ! ಪಶ್ಚಿಮಘಟ್ಟಗಳ ಅಳಿವು-ಉಳಿವಿನ ಪ್ರಶ್ನೆ ಕುರಿತು ಅತ್ಯಂತ ಸಮಗ್ರವಾಗಿದ್ದ ಗಾಡ್ಗೀಳ್ ವರದಿಯನ್ನು ಸಾರಾಸಗಟಾಗಿ ತಿರಸ್ಕರಿಸಿದ ನಾವು ನಂತರದ ಅಸಮಗ್ರ ಕಸ್ತೂರಿ ರಂಗನ್ ವರದಿಯನ್ನೂ ತಿರಸ್ಕರಿಸಲು ಸಿದ್ಧರಾಗುತ್ತಿದ್ದೇವೆ! ಕಾರಣ: ತೀರದ ನಮ್ಮ 'ಅಭಿವೃದ್ಧಿ'ಯ ದಾಹ.!

ಕೆಲವರಿಗೆ ಇದು ಉತ್ಪ್ರೇಕ್ಷೆಯ, ಹುಚ್ಚುತನದ ಮಾತೆನ್ನಿಸಬಹುದು. ಆದರೆ ಆಧುನಿಕ ಜಗತ್ತಿನ ಋಷಿಗಳೆನಿಸಿದ ರಾಜಕೀಯ ದಾರ್ಶನಿಕ ಗಾಂಧಿ, ಅಧ್ಯಾತ್ಮಿಕ ವಿಜ್ಞಾನಿ ಐನ್‌ಸ್ಟೀನ್, ಮಾನವ ಅರ್ಥಶಾಸ್ತ್ರಜ್ಞ ಶೂಮಾಕರ್ ಮತ್ತು ಕೃಷಿ ಸಂತ ಫುಕುವೋಕಾಗಳೂ ಹುಚ್ಚರಾಗಿದ್ದರೆ ನಾವೂ ಹುಚ್ಚರಾಗುವುದೇ ಲೇಸು ಎಂದು ನನ್ನ ಸಮಾಜವಾದಿ ಪ್ರಜ್ಞೆ ಹೇಳುತ್ತಿದೆ. ಏಕೆಂದರೆ, ಸಮಾಜವಾದ ಎಂದರೆ ಆತ್ಯಂತಿಕವಾಗಿ ಮಿತಿಗಳುಳ್ಳ ಬದುಕಿನ ಅರಿವಿನ ಅನಾವರಣವೇ ಆಗಿದೆ. ಮುಂದಿನ ನಾಲ್ಕು ಲೇಖನಗಳು ಇದನ್ನು ಇನ್ನಷ್ಟು ವಿವರವಾಗಿ ತಿಳಿಸುತ್ತದೆ. ಓದಿ, ಬರೆಯಿರಿ.-ಸಂ.

ಜನವರಿ, ೨೦೧೬

ಇದು ನಾವು ಆಸೆಪಟ್ಟು ಪಡೆದ ಸರ್ಕಾರವಲ್ಲ

ಪ್ರಿಯ ಓದುಗರೇ,

ಕೆಲ ದಿನಗಳ ಹಿಂದೆ ನನ್ನ ಹಿರಿಯ ಸಮಾಜವಾದಿ ಗೆಳೆಯರೊಬ್ಬರು ಕರೆ ಮಾಡಿ, ನಿಮ್ಮ ಪತ್ರಿಕೆಯಲ್ಲಿ ಎಲ್ಲ ಸರಿ; ಆದರೆ ಸಿದ್ಧರಾಮಯ್ಯನವರ ಸರ್ಕಾರವನ್ನೇಕೆ ಅಷ್ಟೊಂದು ಟೀಕಿಸುತ್ತೀರಿ? ಎಂದು ಕೇಳಿದರು. ನಾನು ಅವರಿಗೆ, ಎಲ್ಲಿಯಾದರೂ ಪತ್ರಿಕೆ ರಾಜ್ಯ ಸರ್ಕಾರವನ್ನು ನಿಷ್ಕಾರಣವಾಗಿ ಟೀಕಿಸಿದೆಯೇ ದಯವಿಟ್ಟು ತಿಳಿಸಿ ಎಂದೆ. ಅದಕ್ಕೆ ಅವರು ದೇಶಾವರಿ ನಗೆ ನಕ್ಕು, ಅಲ್ಲಾ ರಾಜ್ಯದಲ್ಲಿ ಬಿಜೆಪಿ ಬಲಿಷ್ಠವಾಗುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ಸನ್ನು ಟೀಕಿಸುವುದು ಬಿಜೆಪಿಗೆ ಮತ್ತಷ್ಟು ಅನುಕೂಲ ಮಾಡಿಕೊಟ್ಟಂತಲ್ಲವೇ ಎಂದರು. ನಾನು ನಿಮ್ಮ ಪ್ರಶ್ನೆಯಲ್ಲೇ ಉತ್ತರ ಅಡಗಿದೆ, ಯೋಚಿಸಿ ಎಂದೆ. ನಂತರ ಅದನ್ನು ನಾನೇ ಅವರಿಗೆ ವಿವರಿಸಿ ಹೇಳಬೇಕಾಯಿತು. ಅವರೇ ಹೇಳುವಂತೆ ಬಿಜೆಪಿ ಬಲಿಷ್ಠವಾಗುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತವಿದ್ದರೂ ಹೀಗಾಗಲು ಕಾರಣವೇನು? ಬಿಜೆಪಿಯವರು ತಿಪ್ಪರಲಾಗ ಹಾಕಿದರೂ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲವೆಂದು ಸಿದ್ಧರಾಮಯ್ಯನವರು ಗುಟುರು ಹಾಕಿದಾಕ್ಷಣ ಆ ಪಕ್ಷ ಬಲಿಷ್ಠವಾಗುವುದನ್ನು ತಡೆಯಲು ಸಾಧ್ಯವಿಲ್ಲ. ಬದಲಿಗೆ ರಾಜ್ಯದ ಜನತೆಗೆ ಚುರುಕಾದ, ದಕ್ಷ ಆಡಳಿತ ನೀಡಬೇಕು. ಆದರೆ ಸದ್ಯಕ್ಕೆ ಈ ಸರ್ಕಾರದ ಸಾರ್ವಜನಿಕ ಬಿಂಬ ಅಷ್ಟೇನೂ ಉತ್ತೇಜನಕಾರಿಯಾಗಿಲ್ಲ ಎಂಬುದು ಸಾರ್ವತ್ರಿಕ ಅಭಿಪ್ರಾಯ. ಇದೊಂದು ನಿಧಾನ (ದ್ರೋಹದ) ಸರ್ಕಾರ ಎಂಬ ಅಭಿಪ್ರಾಯ ಬಲಗೊಳ್ಳುತ್ತಿದೆ. ಕಾರಣ, ದುಷ್ಟ, ಭ್ರಷ್ಟ ಮತ್ತು ನಿಷ್ಕ್ರಿಯ ಸಚಿವರನ್ನು ಕೈಬಿಡುವ ಪ್ರಕ್ರಿಯೆಯನ್ನು ನೆಪಗಳನ್ನು ಹುಡುಕುತ್ತಾ ಮುಖ್ಯಮಂತ್ರಿಗಳು ಮುಂದೂಡುತ್ತಲೇ ಇರುವುದರ ರಹಸ್ಯವಾದರೂ ಏನು? ಅವರು ಜನರನ್ನು ಈ ರಹಸ್ಯವನ್ನು ಅರಿಯಲಾರದ ಬುದ್ಧಿಗೇಡಿಗಳೆಂದೇನಾದರೂ ತಿಳಿದಿದ್ದಾರೆಯೇ?

ನಿಜ, ಸಿದ್ಧರಾಮಯ್ಯ ನಮ್ಮ ಮುಖ್ಯಮಂತ್ರಿಯಾಗಬೇಕೆಂಬುದು ನಾನೂ ಸೇರಿದಂತೆ ಬಹಳ ಜನರ ಆಸೆಯಾಗಿತ್ತು. ಆದರೆ ಆ ಆಸೆ ಅವರು ಮುಖ್ಯಮಂತ್ರಿ ಸ್ಥಾನದಲ್ಲಿ ಕೂರುವುದನ್ನು ಕಣ್ತುಂಬ ನೋಡಿ ಸಂತೋಷಪಡುವಂತಹ ಅರ್ಥದ್ದಾಗಿರಲಿಲ್ಲ. ಇಂದು ಈ ಸರ್ಕಾರದೊಳಗೆ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸುತ್ತಾ ಹೋದರೆ ಮತ್ತು ಗೆಳೆಯರು ಹೇಳುವುದನ್ನು ಕೇಳುತ್ತಾ ಹೋದರೆ ಇದು ನಾವು ಆಸೆ ಪಟ್ಟು ಪಡೆದ ಸರ್ಕಾರ ಎಂದು ಹೇಳಿಕೊಳ್ಳಲು ನಾಚಿಕೆಯಾಗುತ್ತದೆ. ಸಣ್ಣ ಉದಾಹರಣೆ ಹೇಳುವುದಾದರೆ, ಕುವೆಂಪು ಅವರ ಬಗ್ಗೆ ಅಂಚೆ ಚೀಟಿ ಹೊರಡಿಸುವ ಪ್ರಸ್ತಾಪಕ್ಕೆ ಸಂಬಂಧಿಸಿದ ಪತ್ರವೊಂದನ್ನು ಮುಖ್ಯಮಂತ್ರಿಗಳ ಕಛೇರಿಗೆ ನೀಡಿ ಒಂದು ವರ್ಷವಾದರೂ ಅದು ಇತ್ತೀಚಿನವರೆಗೆ ಅಲ್ಲಿಂದ ಚಲಿಸಿರಲಿಲ್ಲ! ಆದರೆ ಆ ಪತ್ರದ ಪ್ರತಿಯೊಂದನ್ನು ರಾಜ್ಯದ ಕೇಂದ್ರ ಸಚಿವರೊಬ್ಬರಿಗೆ ನೀಡಿದ ಒಂದೇ ದಿನದಲ್ಲಿ ಅದು ಸಂಪರ್ಕ ಸಚಿವರ ಕಛೇರಿ ತಲುಪಿ ಅಗತ್ಯ ಪ್ರಕ್ರಿಯೆಗೆ ಚಾಲನೆ ಸಿಕ್ಕಿತು. ಸಿದ್ಧರಾಮಯ್ಯ ತಮ್ಮ ತಾತ್ವಿಕ ಹಿನ್ನೆಲೆ ಬಗ್ಗೆ ಏನೇ ಹೇಳಿಕೊಳ್ಳಲಿ, ಅವರ ಸರ್ಕಾರ ಒಂದು ಜಡ ಕಾಂಗ್ರೆಸ್ ಸರ್ಕಾರ. ಮೊನ್ನೆ ರಮೇಶ್‌ಕುಮಾರ್ ಸಮಿತಿಯ ಬಹುತೇಕ ಶಿಫಾರ್ಸುಗಳನ್ನು ಒಪ್ಪಿ ಪಂಚಾಯತ್‌ರಾಜ್ ಸಂಸ್ಥೆಗಳನ್ನು ತಕ್ಕಮಟ್ಟಿಗೆ ಬಲಪಡಿಸುವ ಶಾಸನವೊಂದನ್ನು ಪಾಸು ಮಾಡಿದ್ದರ ಹೊರತಾಗಿ ಇತ್ತೀಚೆಗೆ ಅದು ಜನ ಮೆಚ್ಚುವಂತಹ ಕೆಲಸ ಮಾಡಿದ್ದಾದರೂ ಯಾವುದು? ಉಪಲೋಕಾಯುಕ್ತ ಸುಭಾಷ್ ಅಡಿ ಅವರ ದುರುದ್ದೇಶಪೂರ್ವಕ ಪದಚ್ಯುತಿಗೆ ಕೈಹಾಕಿ ಕೈಸುಟ್ಟುಕೊಳ್ಳುತ್ತಿರುವ ಪ್ರಕರಣ ಸರ್ಕಾರ ನಡೆಯುತ್ತಿರುವ ರೀತಿ–ನೀತಿಗಳ ಬಗ್ಗೆ ಎಲ್ಲವನ್ನೂ ಹೇಳುತ್ತದೆ.

ಸಿದ್ಧರಾಮಯ್ಯನವರಿಗೆ ನೆನಪಿರಲಿ: ಈ ಹಿಂದಿನ ಬಿಜೆಪಿ ರಾಜ್ಯ ಸರ್ಕಾರ ಎಷ್ಟೇ ದುಷ್ಟ ಮತ್ತು ಭ್ರಷ್ಟ ಆಗಿದ್ದರೂ ಕೂಡ, ರಾಜ್ಯ ಬಿಜೆಪಿ ವಿಭಜನೆಯಾಗಿರದಿದ್ದಲ್ಲಿ, ಸಿದ್ಧರಾಮಯ್ಯನವರ ನುಡಿಗಟ್ಟನ್ನೇ ಬಳಸಿ ಹೇಳುವುದಾದರೆ, ತಿಪ್ಪರಲಾಗ ಹಾಕಿದ್ದರೂ, ಕಳೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿರಲಿಲ್ಲ. ಅಷ್ಟರಮಟ್ಟಿಗೆ ಕಾಂಗ್ರೆಸ್ ರಾಜ್ಯದಲ್ಲಿ (ಮತ್ತು ರಾಷ್ಟ್ರದಲ್ಲಿ ಕೂಡ) ತನ್ನ ವಿಶ್ವಾಸಾರ್ಹತೆ ಕಳೆದುಕೊಂಡಿದೆ. ಅದಕ್ಕೆ ತನ್ನ ಈ ಹಿಂದಿನ ತಪ್ಪುಗಳ ಬಗ್ಗೆ ವಿಷಾದವೂ ಇಲ್ಲ, ಪಶ್ಚಾತ್ತಾಪವೂ ಇಲ್ಲ. ಸಿದ್ಧರಾಮಯ್ಯನವವರ ಸರ್ಕಾರ ಇದಕ್ಕೊಂದು ಜೀವಂತ ನಿದರ್ಶನ.

ಜನಕ್ಕೆ ನಮ್ಮ ತುಕ್ಕು ಹಿಡಿದ ಸಮಾಜವಾದಿ ಮತ್ತು ಜಾತ್ಯತೀತ ಗೆಳೆಯರಿಗಿದ್ದಂತೆ ಬಿಜೆಪಿ ವಿರೋಧದ ವ್ಯಸನವಿಲ್ಲ. ಈ ಗೆಳೆಯರಿಗೆ ಸದ್ಯಕ್ಕೆ ಬಿಜೆಪಿ ವಿರೋಧದ ಹೊರತಾಗಿ ಯಾವುದೇ ಸ್ವತಂತ್ರ ರಾಜಕೀಯ ದೃಷ್ಟಿಕೋನವಿದ್ದಂತೆ ಕಾಣುತ್ತಿಲ್ಲ. ಹಾಗಾಗಿಯೇ ಇವರು ಕುರುಡಾಗಿ ಕಾಂಗ್ರೆಸ್‌ನ ರಾಜಕೀಯ ಸಮರವನ್ನು ತಾವೇ ಕೈಗೆತ್ತಿಕೊಂಡಂತಿದೆ. ಇದು ನಿಜವಾದ ಅಪಾಯ. ಏಕೆಂದರೆ, ರಾಹುಲ್‌ಗಾಂಧಿಯಂತಹ 'ಪೆದ್ದಗುಂಡ'ನನ್ನು ತನ್ನ ಅಗ್ರ ನಾಯಕನನ್ನಾಗಿ ಮಾಡಿಕೊಂಡಿದ್ದಲ್ಲದೆ ಆತನನ್ನು ರಾಷ್ಟ್ರದ ಮೇಲೂ ಹೇರಲು ಹೊರಟಿರುವ ಕಾಂಗ್ರೆಸ್ ಸಂಪೂರ್ಣ ಮತಿಗೆಟ್ಟ ಪಕ್ಷವಾಗಿದೆ.

ಅದು ಇಡಿಯಾಗಿ ನ್ಯಾಷನಲ್ ಹೆರಾಲ್ಡ್ ಪ್ರಕರಣವನ್ನು ಸಮರ್ಥಿಸಿಕೊಳ್ಳುತ್ತಿರುವ ಮತ್ತು ಅದನ್ನೇ ಮುಂದಿಟ್ಟುಕೊಂಡು ಲೋಕಸಭೆಯ ಇಡೀ ಚಳಿಗಾಲದ ಅಧಿವೇಶನವನ್ನು ಅಸ್ತವ್ಯಸ್ತಗೊಳಿಸಿದ ಪರಿ ನೋಡಿ. ಹಾಗಾಗಿ ಅದರ ಭವಿಷ್ಯದ ಬಗ್ಗೆ ಸದ್ಯಕ್ಕೆ ಹೆಚ್ಚು ಆಶೆ ಇಟ್ಟುಕೊಳ್ಳುವಂತಿಲ್ಲ. ಹಾಗಾಗಿ, ವಿಶ್ವಾಸಾರ್ಹ ಮೂರನೇ ಶಕ್ತಿಯ ಗೈರುಹಾಜರಿಯಲ್ಲಿ ಅಂತಿಮ ಜಯಘೋಷ ಸಲ್ಲುವುದಾದರೂ ಯಾರಿಗೆ? ಈ ಗೆಳೆಯರು ಯೋಚನೆ ಮಾಡಬೇಕು. ಕಾಂಗ್ರೆಸ್‌ಗೆ ಛೀಮಾರಿ ಹಾಕಿ ಅದನ್ನು ಪುನರ್ರೂಪಿಸುವ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಲೇ, ಬಿಜೆಪಿಗೊಂದು ಜನತೆ ನಂಬುವಂತಹ ಪರ್ಯಾಯ ಕಟ್ಟುವ ಪ್ರಯತ್ನಗಳನ್ನೂ ಮಾಡಬೇಕು, ಪತ್ರಿಕೆ ಸದ್ಯಕ್ಕೆ ವಿಚಾರಗಳ ಮಟ್ಟದಲ್ಲಾದರೂ ತನ್ನ ಮಿತಿಯಲ್ಲಿ ಅದನ್ನು ಮಾಡುತ್ತಿದೆ.

ಇಲ್ಲಿ ಇನ್ನೊಂದು ವಿಷಯವನ್ನೂ ಪ್ರಸ್ತಾಪಿಸಬೇಕು. ಈ ಜಾತ್ಯತೀತ ಎಡಪಂಥೀಯ ಗೆಳೆಯರು ತಮ್ಮ ಬಿಜೆಪಿ ವಿರೋಧಿ ವ್ಯಸನದಲ್ಲಿ; ಯಾವುದೋ ಕಾಲದಲ್ಲಿ ಯಾವುದೋ ಸಂದರ್ಭದಲ್ಲಿ ಲೋಹಿಯಾ (೫೦ ವರ್ಷಗಳ ಹಿಂದೆ) ಮತ್ತು ಜೆಪಿ(೪೦ ವರ್ಷಗಳ ಹಿಂದೆ) ಬಿಜೆಪಿಯ ಈ ಹಿಂದಿನ ಆವೃತ್ತಿಯಾದ ಜನಸಂಘದೊಂದಿಗೆ ಮೈತ್ರಿ ಮಾಡಿಕೊಂಡದ್ದೇ ಮತ್ತು ಈ ಇಬ್ಬರ ಕಾಂಗ್ರೆಸ್ ವಿರೋಧವೇ ಬಿಜೆಪಿ ಇಷ್ಟು ದೊಡ್ಡದಾಗಿ ಬೆಳೆಯಲು ಕಾರಣವೆಂಬ ಪ್ರಚಾರ ಕೈಗೆತ್ತಿಕೊಂಡಿದ್ದಾರೆ. ರಾಜಕಾರಣದ ಚಲನಶೀಲತೆಯ ಅರಿವೇ ಇಲ್ಲದಂತೆ ಮಾತಾಡುವ ಈ ಗೆಳೆಯರು, ಅಂದು ಲೋಹಿಯಾ, ಜೆಪಿಯ ಜೊತೆಗಿದ್ದ ಬಹುತೇಕ ನಾಯಕರು ಇಂದು ಕಾಂಗ್ರೆಸ್‌ನೊಳಗೆ ಅಥವಾ ಜೊತೆಗಿದ್ದು, ಅವರೇ ರಾಷ್ಟ್ರ ರಾಜಕಾರಣದಲ್ಲಿ ಬಿಜೆಪಿ ವಿರುದ್ಧದ ಹೋರಾಟದ ಮುಂಚೂಣಿಯಲ್ಲಿ ಇರುವುದರ ಮರ್ಮವಾದರೂ ಏನು ಎಂದು ಯೋಚಿಸುವ ಶಕ್ತಿಯನ್ನೇ ಕಳೆದುಕೊಂಡಿರುವುದು ವಿಷಾದನೀಯ ಸಂಗತಿಯಾಗಿದೆ.

ಚೆನ್ನೈನ ಮಹಾಮಳೆ ಹೇಳುತ್ತಿರುವುದೇನು?

ಇನ್ನು ಈ ಟಿಪ್ಪಣಿಗಳಲ್ಲಿ ಪ್ರಸ್ತಾಪಿಸಲೇಬೇಕಾದ ಇನ್ನೊಂದು ಸಂಗತಿಯೆಂದರೆ, ಕಳೆದ ತಿಂಗಳು ಚೆನ್ನೈ ನಗರವನ್ನು ಮುಳುಗಿಸಿಯೇಬಿಟ್ಟಿದ್ದ ರಾಕ್ಷಸ ಮಳೆ. ಅದು ಒಂದೇ ದಿನದಲ್ಲಿ ೫೪ ಸೆ.ಮೀ.ನಷ್ಟು ಬಿದ್ದ ಶತಮಾನದ ಮಳೆ. ಲಕ್ಷಾಂತರ ಜನ ಮನೆಮಠ–ಆಸ್ತಿಪಾಸ್ತಿ–ನಿತ್ಯಜೀವನದ ಅವಶ್ಯಕ ಸಾಧನ–ಸಲಕರಣೆಗಳನ್ನು ಕಳೆದುಕೊಂಡ ಈ ಬೃಹತ್ ವಿಪತ್ತಿನ ಸಂದರ್ಭದಲ್ಲಿ ನಮ್ಮ ಸೇನೆ ಆಪತ್ ನಿರ್ವಹಣಾ ವ್ಯವಸ್ಥೆಗಳೊಂದಿಗೆ ನಡೆಸಿದ ರಕ್ಷಣಾ ಮತ್ತು ಪುನರ್ವಸತಿ ಕಾರ್ಯಾಚರಣೆಯನ್ನೂ ಮತ್ತು ಈ ಸಂದರ್ಭದಲ್ಲಿ ಚೆನ್ನೈನ ಜನತೆ ತೋರಿದ ನೈತಿಕ ಸ್ಥೈರ್ಯವನ್ನೂ ಮೆಚ್ಚಬೇಕಿದೆ. ಅದೇ ಹೊತ್ತಿನಲ್ಲಿ, ಇತ್ತೀಚಿನ ದಿನಗಳಲ್ಲಿ ಇಂತಹ ವಿಪತ್ತುಗಳನ್ನು ನಾವು ಪದೇ ಪದೇ (ಉತ್ತರಾಖಂಡ, ಶ್ರೀನಗರ) ಏಕೆ ಎದುರಿಸುವಂತಾಗಿದೆ ಎಂಬುದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡುತ್ತಿಲ್ಲವೇಕೆ ಎಂದೂ ಕೇಳಿಕೊಳ್ಳಬೇಕಿದೆ. ಚೆನ್ನೈ ನಗರ ಜಾಗತೀಕರಣದ ಗರಿಷ್ಠ

ಲಾಭ ಪಡೆದು ವಾಣಿಜ್ಯ ನಗರವಾಗಿ ಅವಸರದಲ್ಲಿ ಬೆಳೆಯುವ ಹುಮ್ಮಸ್ಸಿನಲ್ಲಿ ತನ್ನ ವಿವೇಕವನ್ನೇ ಕಳೆದುಕೊಂಡು ಅಸ್ತವ್ಯಸ್ತವಾಗಿ ಬೆಳೆದದ್ದೇ ಇದಕ್ಕೆ ಕಾರಣವೆಂದು ಈಗ ವಿಶ್ಲೇಷಿಸಲಾಗುತ್ತಿದೆ.

ಇನ್ನು ರಾಜಧಾನಿ ದೆಹಲಿಯನ್ನು ನೋಡಿ. ಅಲ್ಲಿನ ಗಾಳಿ ಎಷ್ಟು ಕೆಟ್ಟಿದೆ ಎಂದರೆ ಅಲ್ಲಿ ಜನ ಉಸಿರಾಡುವುದೂ ಕಷ್ಟವಾಗಿ ಅಲ್ಲಿನ ಸರ್ಕಾರ ವಾಹನ ಸಂಚಾರದ ಮೇಲೆ ಅನಿವಾರ್ಯವಾಗಿ ಒಂದಿಷ್ಟು ನಿರ್ಬಂಧ ಹೇರಲು ಮುಂದಾಗಿದೆ. ಆದರೆ ಅದರ ಬಗ್ಗೆಯೂ ವಿವಾದಗಳ ಮೇಲೆ ವಿವಾದ! ಮತ್ತೆ ಅದೇ ಮಾತನ್ನು ಹೇಳಬೇಕಿದೆ: ನಮ್ಮ ಆಸೆಬುರುಕತನ ಮಿತಿ ಮೀರಿದೆ; ಇದ್ದುದನ್ನು ಹಂಚಿತಿನ್ನುವ ವಿವೇಕ ಕಳೆದುಹೋಗಿದೆ.

ಮೊನ್ನೆ ಇತ್ಯರ್ಥಗೊಂಡ ಹವಾಮಾನ ವೈಪರೀತ್ಯ ಕುರಿತ ಪ್ಯಾರಿಸ್ ಸಮ್ಮೇಳನದ ಒಪ್ಪಂದವೇನಾದರೂ ಈ ವಿವೇಕವನ್ನು ಮರಳಿ ತಂದೀತೇ? ಮುಂದಿನ ಸಂಚಿಕೆಯಲ್ಲಿ ಈ ಬಗ್ಗೆ ಚರ್ಚಿಸೋಣ.

ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

ಒಂದು ಟಿಪ್ಪಣಿ

ಬಾಲಗಂಗಾಧರ ಎಂಬ ಆಧುನಿಕ ವಸಿಷ್ಠ

ಎಸ್.ಎನ್. ಬಾಲಗಂಗಾಧರ ಮತ್ತೆ ಸುದ್ದಿಯಲ್ಲಿದ್ದಾರೆ! ಭಾರತದಲ್ಲಿ ನಿಜವಾದ ಸಮಾಜಶಾಸ್ತ್ರ ಅಧ್ಯಯನಗಳೆಂಬುವು ನಡೆದೇ ಇಲ್ಲ ಮತ್ತು ಜಾತಿ ವ್ಯವಸ್ಥೆ ಕುರಿತ ಈವರೆಗಿನ ಟೀಕೆಗಳಿಗೆ ವಸಾಹತುಶಾಹಿ ಮನಸ್ಸೇ ಕಾರಣ ಎಂದೆಲ್ಲ ವಾದಿಸಿ ಈ ದೇಶದಲ್ಲಿ ಒಂದು ಗಣನೀಯ ಶಿಷ್ಯವರ್ಗವನ್ನೇ ಸಂಪಾದಿಸಿಕೊಂಡಿರುವ ಮೂಲತಃ ಕನ್ನಡಿಗನೂ ಮತ್ತು ಈಗ ಬೆಲ್ಜಿಯಂ ದೇಶದ ಘೆಂಟ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕನೂ ಆಗಿರುವ ಈ ಬಾಲಗಂಗಾಧರ, ಇತ್ತೀಚಿನ ತನ್ನ ಭಾಷಣವೊಂದರ ಮೂಲಕ ಮತ್ತು ಅದನ್ನು ಸಮರ್ಥಿಸಲು ಬರೆದಿರುವ ಲೇಖನವೊಂದರ ಮೂಲಕ ದೊಡ್ಡ ವಿವಾದಕ್ಕೆ ಕಾರಣರಾಗಿದ್ದಾರೆ. ಕಳೆದ ನವೆಂಬರ್‌ನಲ್ಲಿ ಹೈದರಾಬಾದ್‌ನ ಇಂಗ್ಲಿಷ್ ಮತ್ತು ವಿದೇಶೀ ಭಾಷೆಗಳ ವಿಶ್ವವಿದ್ಯಾಲಯದಲ್ಲಿ ಕಾನೂನುಶಾಸ್ತ್ರ ಕುರಿತ ವಿಚಾರ ಸಂಕಿರಣಕ್ಕೆ ಆಹ್ವಾನಿತರಾಗಿ ಬಂದಿದ್ದ ಇವರು ತಮ್ಮ ಭಾಷಣದಲ್ಲಿ ಅಂಬೇಡ್ಕರ್‌ರನ್ನು ಶತಮೂರ್ಖ (ಈಡಿಯಟ್) ಎಂದು ಕರೆದಿದ್ದಲ್ಲದೆ, ಅವರಿಗೆ ಕೊಲಂಬಿಯಾ ವಿಶ್ವವಿದ್ಯಾಲಯ ಹೇಗೆ ಡಾಕ್ಟೊರೇಟ್ ನೀಡಿತೋ ಎಂದು ಆಶ್ಚರ್ಯಪಟ್ಟಿದ್ದಾರೆ. ಅಲ್ಲದೆ, ಜಾತಿ ಮೀಸಲಾತಿಯಡಿ ಆಯ್ಕೆಯಾಗಿರುವ ಆ ವಿಶ್ವವಿದ್ಯಾಲಯದ ಅಧ್ಯಾಪಕರನ್ನು 'ಜಾತಿ ಪ್ರಮಾಣ ಪತ್ರ ಕಟ್ಟಿಕೊಂಡಿರುವ ಕತ್ತೆ'ಗಳು ಎಂದು ಕರೆದು ಅವರ ಪಾಠ-ಪ್ರವಚನಗಳ ವಿರುದ್ಧ ಎಚ್ಚರಿಕೆಯಿಂದಿರಬೇಕೆಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟು ಹೋಗಿದ್ದಾರೆ.

ಆಶ್ಚರ್ಯವೆಂದರೆ ಈ ಬಾಲಗಂಗಾಧರ ಇಷ್ಟೆಲ್ಲ ತಲೆಹರಟೆ ಮಾತುಗಳನ್ನಾಡಿದಾಗ ಸುಮ್ಮನಿದ್ದಂತೆ ತೋರುವ 'ನೊಂದ' ಅಧ್ಯಾಪಕರು ನಂತರದಲ್ಲಷ್ಟೇ ತಮ್ಮ ಕುಲಪತಿಗಳಿಗೆ (ಹಾಗೂ ರಾಷ್ಟ್ರಪತಿಗಳಿಂದ ಹಿಡಿದು ರಾಜ್ಯಪಾಲರವರೆಗೆ) ಒಂದು ಮನವಿ ಸಲ್ಲಿಸಿ ಬಾಲಗಂಗಾಧರರ ಸಮುದಾಯಗಳ ನಡುವೆ ದ್ವೇಷ ಹುಟ್ಟಿಸುವ ಮಾತುಗಳಿಗಾಗಿ ಅವರ ವಿರುದ್ಧ ಕ್ರಮಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ಆದರೆ ಇದೆಲ್ಲ ಈಗ ಸುದ್ದಿಯಾಗುತ್ತಿರುವುದು, ಈ ಮನವಿಯಿಂದ ವಿಚಲಿತರಾಗಿರುವಂತೆ ತೋರಿರುವ ಬಾಲಗಂಗಾಧರ, ಭಾರತದಲ್ಲಿ ಈಗ ನಡೆದಿರುವ 'ಅಸಹಿಷ್ಣುತೆ' ಕುರಿತ ಚರ್ಚೆ ಹೇಗೆ ಅಸಂಬದ್ಧವಾಗಿದೆ ಎಂದು ವಿವರಿಸುವ ಲೇಖನವೊಂದನ್ನು ಬರೆದು ಅದರ ಭಾಗವಾಗಿ ತಮ್ಮ ಮೇಲಿನ ಈ ಆಪಾದನೆಯನ್ನು ನಿರಾಕರಿಸಲು ಮಾಡಿರುವ ಪ್ರಯತ್ನದ ಮೂಲಕ. ಈ ಲೇಖನ ಈ ಮನುಷ್ಯನ ಮನಸ್ಸಿನೊಳಗಿನ ಮತ್ತಷ್ಟು ರಾಡಿಯನ್ನು ಹೊರಚೆಲ್ಲಿದ್ದು, ಇನ್ನಷ್ಟು ವಿವಾದಕ್ಕೆ ಕಾರಣವಾಗಿ, ಅಲ್ಲಲ್ಲಿ ಖಂಡನೆ ಮತ್ತು ಪ್ರತಿಭಟನೆಗಳಿಗೆ ಕಾರಣವಾಗಿದೆ.

ತಮ್ಮ ವಿರುದ್ಧದ ಆರೋಪದ ತೀವ್ರತೆಯನ್ನು ಅರಿತೋ ಏನೋ ಬಾಲಗಂಗಾಧರ ಅಂಬೇಡ್ಕರ್ ಬಗ್ಗೆ ಬಳಸಿದ 'ಈಡಿಯಟ್' ಶಬ್ದ ಅನುಚಿತವಾದದ್ದು ಎಂದು ಒಪ್ಪಿಕೊಂಡು ಅದಕ್ಕಾಗಿ ವಿಷಾದವನ್ನೂ ವ್ಯಕ್ತಪಡಿಸಿದ್ದಾರೆ. ಅಷ್ಟರಮಟ್ಟಿಗೆ ಅವರನ್ನು ತಾಂತ್ರಿಕವಾಗಿ ಕ್ಷಮಿಸಬಹುದು. ಅವರಿಂದ ಆ ಮಾತನ್ನಾಡಿಸಿದ ಅವರ ಮೂಲ ಹೀನ ಮನಃಸ್ಥಿತಿ ಕ್ಷಮಾರ್ಹವಾಗದಾದರೂ. ಏಕೆಂದರೆ, ಇದರ ಜೊತೆಗೇ ಅಂಬೇಡ್ಕರ್‌ರ ಬುದ್ಧಿಮತ್ತೆಯನ್ನು, ಈ ದಿನಗಳಲ್ಲಿ ಮಹಾಪೆದ್ದುತನದ ಪ್ರತೀಕವೆನಿಸಿರುವ ಅಲಿಯಾ ಭಟ್‌ಳ ಬುದ್ಧಿಮತ್ತೆಗೆ ಹೋಲಿಸುವ ವ್ಯಂಗ್ಯದಾಟಕ್ಕೆ ಇಳಿದಿದ್ದಾರೆ. ಅಂಬೇಡ್ಕರ್‌ರನ್ನು ಯಾಕೆ ಟೀಕಿಸಬಾರದು ಎಂಬುದು ಅವರ ಪ್ರಶ್ನೆ. ಇಲ್ಲಿ ಹುಚ್ಚ ವೆಂಕಟ್ ಅಂಬೇಡ್ಕರ್ ಬಗ್ಗೆ ಆಡಿದ ಮಾತಿಗೆ ಕರ್ನಾಟಕದಲ್ಲಿ ಕಂಡುಬಂದ ಪ್ರತಿಭಟನೆಯನ್ನು ಇವರು ಅಂಬೇಡ್ಕರ್‌ವಾದಿಗಳ ಅಸಹಿಷ್ಣುತೆ ಎಂದು ಉದಾಹರಿಸುತ್ತಾ ಈಗ ಭಾರತದಲ್ಲಿನ ನಿಜವಾದ ಅಸಹಿಷ್ಣುಗಳು ಅಂಬೇಡ್ಕರ್‌ವಾದಿಗಳು ಎನ್ನುತ್ತಾರೆ. ಇಂದಿರಾ ಗಾಂಧಿ ಕಾಲದಿಂದಲೂ ಮತಬ್ಯಾಂಕ್ ರಾಜಕಾರಣಕ್ಕಾಗಿ ರಾಷ್ಟ್ರಜೀವನದಲ್ಲಿ ಅಂಬೇಡ್ಕರ್‌ರನ್ನು ಅನಗತ್ಯವಾಗಿ ಮೇಲೇರಿಸಿ ಕೂರಿಸಲಾಗಿದೆ ಎಂದೆನ್ನುವ ಇವರ ವಾದ ಗೊತ್ತಿಲ್ಲದಂತೆ ಇವರಿಗೇ ಸುತ್ತಿಕೊಂಡು, ಇವರ ಮೂಲಸ್ಫೂರ್ತಿ ಯಾರೆಂಬುದನ್ನು ಇವರ ಬಾಯಿಯಿಂದಲೇ ಹೇಳಿಸುತ್ತದೆ. ಇವರ ಪ್ರಕಾರ ಪ್ರಧಾನಿ ಮೋದಿ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ಫಡ್ನವಿಸ್ ಅಂಬೇಡ್ಕರ್‌ರನ್ನು ಹೊಗಳುತ್ತಿರುವುದು ಈ ಅಂಬೇಡ್ಕರ್‌ವಾದಿಗಳ ಅಸಹಿಷ್ಣುತಾ ವರ್ತನೆಗೆ ಹೆದರಿಯಂತೆ! ಇದಕ್ಕೆ ಮೋದಿ ಅಂಡ್ ಕಂ. ಏನು ಹೇಳುತ್ತದೆಯೋ?

ಇನ್ನು ಅಂಬೇಡ್ಕರ್ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಡಾಕ್ಟರೇಟ್ ಪ್ರಬಂಧ ಕಳಪೆ ಮತ್ತು ಅವರ ಬುದ್ಧಿಮತ್ತೆ ಸಾಧಾರಣ ಎಂದು ಭಾವಿಸಲು ಬಾಲಗಂಗಾಧರರಿಗೆ ಎಲ್ಲ ಹಕ್ಕೂ ಇದೆ. ಆದರೆ ಇದಕ್ಕೆ ವಿದ್ವಾಂಸರು ಒಪ್ಪುವಂತಹ

ಸಾಕ್ಷ್ಯಗಳನ್ನು ಒದಗಿಸದೆ ಇಂತಹ ಮಾತುಗಳನ್ನಾಡಲು ಜಾತಿ ಕೊಳಕಿನಿಂದ ತುಂಬಿದ ಮನಸ್ಸಿನ ಹೊರತಾಗಿ ಬೇರೇನೂ ಕಾರಣ ಹೊಳೆಯುವುದಿಲ್ಲ. ಹಾಗೇ, ಜಾತಿ ಮೀಸಲಾತಿಯಡಿಯಲ್ಲಿ ಆಯ್ಕೆಯಾಗಿರುವ ಅಧ್ಯಾಪಕರನ್ನು ಕುರಿತ ಅವರ ಮಾತು ಸಹ. ನಿಜ, ನಮ್ಮ ವಿಶ್ವವಿದ್ಯಾಲಯಗಳನ್ನು ನೋಡಿದರೆ ನಮಗೇ ಒಮ್ಮೊಮ್ಮೆ ಇವರ ಮಾತು ನಿಜವೆನ್ನಿಸುತ್ತದೆ. ಆದರೆ ಇಂತಹ ಮಾತನ್ನು ಸಾರಾಸಗಟಾಗಿ ಹೇಳಲಾಗದೆಂಬ ಎಚ್ಚರವೂ ನಮಗಿರಬೇಕು. ಮೀಸಲಾತಿಯಡಿಯ ಆಯ್ಕೆಗಳು ಕಳಪೆಯಾಗಿರಲು ಈ ಮೀಸಲಾತಿ ಒಂದು ವಿದ್ವದ್ ಚಟುವಟಿಕೆಯಾಗಿರದೆ, ಶುದ್ಧ ಜಾತಿ ರಾಜಕಾರಣ ಮತ್ತು ಹಣ ಸಂಬಂಧಿ ಚಟುವಟಿಕೆಯಾಗಿರುವುದೇ ಕಾರಣವಾಗಿದೆ. ಈ ಪ್ರಕ್ರಿಯೆ ವಿಶ್ವವಿದ್ಯಾಲಯಗಳ ಕುಲಪತಿಗಳ ಆಯ್ಕೆಯಿಂದಲೇ ಆರಂಭವಾಗುತ್ತಿರುವುದನ್ನು ನಾವು ನಿಚ್ಚಳವಾಗಿ ಕಾಣಬಹುದಾಗಿದೆ.

ಅದೇನೇ ಇರಲಿ, ಈ ಬಾಲಗಂಗಾಧರರ ಮನಸ್ಸಿನ ಕೊಳಕು ನಿಜವಾಗಿ ಮತ್ತು ನೇರವಾಗಿ ಬಯಲಾಗುವುದು ಈತ ಕಲ್ಬುರ್ಗಿ ಮತ್ತು ದಾದ್ರಿ ಹತ್ಯೆಗಳನ್ನು ಹೆಚ್ಚೂಕಡಿಮೆ ನೇರವಾಗಿ ಸಮರ್ಥಿಸುವ ರೀತಿ ನೀತಿಗಳನ್ನು ಗಮನಿಸಿದಾಗ. ಕಲ್ಬುರ್ಗಿ ಮೂರ್ತಿಪೂಜೆ ವಿರೋಧಿಯಾಗಿದ್ದುದು ಇವರ ಪ್ರಕಾರ ಕಡಿಮೆ ತೀವ್ರತೆಯ ಅಪರಾಧವಲ್ಲವಂತೆ. ಅವರು ಕನ್ನಡದ ಪತ್ರಿಕೆಯೊಂದರಲ್ಲಿ ವೀರಶೈವ ಧರ್ಮದ ಪುನರ್‌ವ್ಯಾಖ್ಯಾನ ಲೇಖನ ಮಾಲಿಕೆಯನ್ನು ಸಂಪಾದಕರ ಮೇಲೆ ಒತ್ತಡ ಹೇರಿ ನಿಲ್ಲಿಸಿದರಂತೆ. ಇನ್ನೂ ಮುಖ್ಯವೆಂದರೆ, ಕುವೆಂಪು ವಿಶ್ವವಿದ್ಯಾಲಯದಲ್ಲಿ ತಮ್ಮ ವಿಚಾರಗಳನ್ನು ಕುರಿತ ಸಂಶೋಧನೆಗಳಿಗಾಗಿ ಸ್ಥಾಪಿಸಿದ್ದ ಕೇಂದ್ರವನ್ನು ಮುಚ್ಚಿಸಲೂ ಕಲ್ಬುರ್ಗಿಯವರೇ ಕಾರಣರಂತೆ. ಅಷ್ಟೇ ಅಲ್ಲ, ಅವರನ್ನು ಛೋಟಾ ರಾಜನ್‌ಗೆ ಹೋಲಿಸುತ್ತಾ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಕಾಲದಿಂದಲೂ ಅವರ ಶೀಲ ಮತ್ತು ನೈತಿಕತೆ ಪ್ರಶ್ನಾರ್ಹವೇ ಆಗಿತ್ತೆನ್ನುತ್ತಾರೆ. ಹೀಗೆ ನಮ್ಮ ಪೋಲೀಸರಿಗಿಂತ ಹೆಚ್ಚು ಗುಪ್ತ ಮಾಹಿತಿಯನ್ನು ಸಂಗ್ರಹಿಸಿರುವಂತೆ ತೋರುವ ಈ ನಿರ್ಲಜ್ಜ ಭಂಡತನದ ಮನುಷ್ಯ ಕಲ್ಬುರ್ಗಿಯಂತಹವರ ಹತ್ಯೆ ಅಸಹಿಷ್ಣುತೆಯ ಸೂಚಕ ಎನ್ನುವವರು ಸಹಿಷ್ಣುಗಳನ್ನು ಕೊಲ್ಲಬೇಕೆಂದು ಸೂಚಿಸುತ್ತಾರೆಯೇ ಎಂದು ಕೇಳುವ ಮೂಲಕ ಏನು ಹೇಳುತ್ತಿದ್ದಾರೆ? ರಾಜ್ಯದ ಪೋಲೀಸರು ಕಲ್ಬುರ್ಗಿಯವರ ಕೊಲೆಗಾರರಿಗಾಗಿ ಇವರನ್ನೊಮ್ಮೆ 'ವಿಚಾರಿಸುವುದು' ಒಳ್ಳೆಯದು.

ಇನ್ನು ದಾದ್ರಿ ಘಟನೆಗೆ, ಈವರೆಗೆ ಕೇಳದ ಕತೆಯೊಂದನ್ನು ಈ ಬಾಲಗಂಗಾಧರ ಜೋಡಿಸುತ್ತಾರೆ. ಇವರ ಪ್ರಕಾರ ಹತ್ಯೆಗೀಡಾದ ಮುಸ್ಲಿಂ ವ್ಯಕ್ತಿ ಹಿಂದೂಗಳೊಬ್ಬರ ಮನೆಯಿಂದ ಹಸುವೊಂದನ್ನು ಕದ್ದಿದ್ದರಂತೆ! ಇಂತಹ ಘೋರ ಅಪರಾಧಕ್ಕೆ ಹಿಂದೆ ಅಮೆರಿಕಾ, ಬ್ರಿಟನ್‌ಗಳಲ್ಲೂ ಆತನನ್ನು ಬಡಿದುಕೊಲ್ಲುವ ಶಿಕ್ಷೆ ಜಾರಿಯಲ್ಲಿತ್ತಂತೆ! ಈಗ ಆಧುನಿಕ ಕಾನೂನುಗಳ ಪ್ರಕಾರ ಇಂತಹ ಹತ್ಯೆ ಅಪರಾಧವಾಗಿದೆ ಎಂದಾಕ್ಷಣ ಇದನ್ನು

ಅಸಹಿಷ್ಣುತೆಯ ಸಂಕೇತವೆಂದು ಕರೆಯುವುದು ಮಾನವ ಚರಿತ್ರೆ ಕುರಿತ ಅಜ್ಞಾನ ಮಾತ್ರವೆನಿಸಿಕೊಳ್ಳುತ್ತದೆ ಎಂಬ ತೀರ್ಪು ನೀಡುತ್ತಾರೆ!

ಈಗ ಹೇಳಿರಿ, ನಿಜವಾಗಿ ಈ ಬಾಲಗಂಗಾಧರನೆಂಬಾತ ಮನುಷ್ಯನೇ? ಕುವೆಂಪು ವಿಶ್ವವಿದ್ಯಾಲಯದಲ್ಲಿದ್ದ ಈತನ ಶಿಷ್ಯರ ಸಂಶೋಧನಾ ಕೇಂದ್ರವನ್ನು ಮುಚ್ಚಿಸಲಾಯಿತು ಎಂದು ಈ ಹಿಂದೆ ಕೇಳಿದಾಗ, ಇದೊಂದು ಅಬೌದ್ಧಿಕ ಕ್ರಮ ಎಂದು ನನಗೆ ಬೇಸರವಾಗಿತ್ತು. ಆದರೆ ಅದನ್ನು ಮುಚ್ಚದಿದ್ದರೆ, ಅದೊಂದು ನರಹಂತಕ ಸಿದ್ಧಾಂತಗಳ ನಿರ್ಮಾಣ ಕೇಂದ್ರವಾಗಿ ಬೆಳೆಯುತ್ತಿತ್ತೇನೋ ಎಂಬ ಅನುಮಾನ ನನ್ನನ್ನೀಗ ಕಾಡಹತ್ತಿದೆ. ಈ ಬಾಲಗಂಗಾಧರ ಎಂಬ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಎಷ್ಟು ವ್ಯಾವಹಾರಿಕವೋ ನನಗೆ ತಿಳಿಯದು. ಕನಿಷ್ಠ ಇಷ್ಟಕ್ಕಾಗಿಯಾದರೂ ನಾವೀಗ ಆಗ್ರಹಿಸಬೇಕು: ಈತ ಭಾರತಕ್ಕೆ ಮತ್ತೆ ಕಾಲಿಡದಂತೆ ಕ್ರಮ ಕೈಗೊಳ್ಳಬೇಕು ಮತ್ತು ಈ ದೇಶದಲ್ಲಿರುವ ಈತನ ದುಷ್ಟ ಜಾಲದ ಚಟುವಟಿಕೆಗಳ ಮೇಲೆ ತೀವ್ರ ನಿಗಾ ಇಡಬೇಕು.

ಲೋಹಿಯಾ ಹೇಳುತ್ತಿದ್ದ, ವರ್ಣಧರ್ಮ ವಿರೋಧಿಗಳಿಗೆ ರಾಜಪುರೋಹಿತರಾಗಿ ಶಿರಚ್ಛೇದನ ಶಿಕ್ಷೆಯನ್ನು ಸೂಚಿಸುತ್ತಿದ್ದ ವಸಿಷ್ಠ ಪರಂಪರೆ ಎಂದರೆ ಇದೇ ಏನೋ! ಅಥವಾ ಮೋದಿಯವರ ಜೊತೆಗೆ ಬರುತ್ತದೆಂದು ಹೆದರಿಸಲಾಗುತ್ತಿದ್ದ ಫ್ಯಾಸಿಸಂ ಅಂದರೂ ಇದೇ ಇರಬಹುದೆ?

–ಡಿಎಸ್ನೆ

<u>ಸಮಕಾಲೀನ</u>

ಸಾಮಾಜಿಕ ನ್ಯಾಯ ರಾಜಕಾರಣ ಎತ್ತಸಾಗಿದೆ?

ನಮ್ಮ ದೇಶ ವಸಾಹತುಶಾಹಿಯಿಂದ ಬಿಡುಗಡೆಗೊಂಡು ಪ್ರಜಾಪ್ರಭುತ್ವ ರಾಷ್ಟ್ರವಾಗಲು ಕಾರಣವಾದ ರಾಷ್ಟ್ರೀಯ ಹೋರಾಟ ಅನೇಕ ಕ್ರಾಂತಿಕಾರಿ ಆಲೋಚನೆಗಳಿಗೆ, ಜನರ ವೈವಿಧ್ಯಮಯ ಆಶೋತ್ತರಗಳಿಗೆ ಕಾರಣವಾಯಿತು. ಅವೆಲ್ಲವೂ ರಾಷ್ಟ್ರೀಯ ಹೋರಾಟದ ಸಮಷ್ಟಿ ಮನಸ್ಸಿನಲ್ಲಿ ಪರಿಷ್ಕಾರಗೊಂಡು ನಮ್ಮ ಸಂವಿಧಾನವಾಗಿ ಹರಳುಗಟ್ಟಿದೆ. ಹಾಗೇ ಮೂಡಿಬಂದದ್ದು ಸಾಮಾಜಿಕ ನ್ಯಾಯದ ಕಲ್ಪನೆ. ಪ್ರಜಾಪ್ರಭುತ್ವವೆಂದ ಮೇಲೆ ಆ ಪ್ರಭುತ್ವದಲ್ಲಿ ಪ್ರಜಾ ವರ್ಗದ ಸಕಲ ಸಮುದಾಯಗಳೂ ಪಾಲ್ಗೊಳ್ಳುವಂತಾಗಬೇಕು. ಅದಕ್ಕಾಗಿ, ಐತಿಹಾಸಿಕ ಕಾರಣಗಳಿಂದಾಗಿ (ಮುಖ್ಯವಾಗಿ ಜಾತಿ ವ್ಯವಸ್ಥೆಯ ಕಾರಣದಿಂದಾಗಿ) ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದ ಸಮುದಾಯಗಳಿಗೆ ರಾಷ್ಟ್ರಜೀವನದ ಎಲ್ಲ ಕ್ಷೇತ್ರಗಳಲ್ಲಿ ನ್ಯಾಯಬದ್ಧ ಪ್ರಾತಿನಿಧ್ಯವನ್ನು ಖಚಿತಗೊಳಿಸಿಕೊಳ್ಳಬೇಕು. ಈ ನ್ಯಾಯಸಾಧನೆಗೆ ಪರಿಣಾಮಕಾರಿ ಸಾಧನವಾಗಿ ಜಾರಿಗೆ ಬಂದದ್ದೇ ಮೀಸಲಾತಿ. ಅದನ್ನು ರಾಷ್ಟ್ರೀಯ ಹೋರಾಟದ ಉದಾತ್ತ ಮೌಲ್ಯಗಳಿಂದ

ಸ್ಫೂರ್ತಿಗೊಂಡಿದ್ದ ರಾಷ್ಟ್ರ, ಪಶ್ಚಾತ್ತಾಪಪೂರ್ವಕವಾಗಿ ಮತ್ತು ಸೋದರತೆಯ ಪ್ರತೀಕವಾಗಿ ಒಪ್ಪಿಕೊಂಡಿತೆಂದೇ ಹೇಳಬೇಕು.

ಈಗ ಈ ಮೀಸಲಾತಿ ಕೆಲ ಸಮುದಾಯಗಳಿಗೆ ಜಾರಿಗೆ ಬಂದು ೬೦ ವರ್ಷಗಳಾಗಿದ್ದರೆ, ಇನ್ನು ಕೆಲವು ಸಮುದಾಯಗಳಿಗೆ ನಮ್ಮ ರಾಜ್ಯದಲ್ಲಿ ಜಾರಿಗೆ ಬಂದು ನಲವತ್ತು ವರ್ಷಗಳಾಗಿವೆ. ಇದರ ಪರಿಣಾಮಗಳಾದರೂ ಏನು? ಸಾಮಾಜಿಕ ಅಸಮಾನತೆಯ ಸಮೀಕರಣಗಳು ಈ ಅವಧಿಯಲ್ಲಿ ಬದಲೇ ಆಗಿಲ್ಲವೇ? ಇತ್ತೀಚಿನ ದಿನಗಳಲ್ಲಿ ಏಕೆ ರಾಷ್ಟ್ರದ ಅಲ್ಲಲ್ಲಿ ಆಗಾಗ್ಗೆ ಮೀಸಲಾತಿ ವಿರೋಧಿ ಆಂದೋಲನಗಳು ಚಿಮ್ಮುತ್ತವೆ? ಮೀಸಲಾತಿಯಿಂದ ಹೊರಗಿಟ್ಟ ಸಮುದಾಯಗಳು ಮೀಸಲಾತಿ ವ್ಯಾಪ್ತಿಗೆ ಸೇರಲು ಹೋರಾಟ ನಡೆಸಲಾರಂಭಿಸಿವೆ ಏಕೆ? ಯಾರಾದರೂ ಮೀಸಲಾತಿ ನೀತಿಯ ಪರಿಷ್ಕರಣೆಯ (ರದ್ದತಿಯ ಅಲ್ಲ) ಮಾತಾಡಿದ ಕೂಡಲೇ ಮೀಸಲಾತಿ ಫಲಾನುಭವಿ ಸಮುದಾಯಗಳು ಹಾಹಾಕಾರ ಮಾಡುತ್ತವೆ ಏಕೆ? ಹಾಗಾದರೆ ಮೀಸಲಾತಿ ಒಂದು ಶಾಶ್ವತ ವ್ಯವಸ್ಥೆಯಾಗಬೇಕೆ? ಅಂದರೆ, ಸಾಮಾಜಿಕ ಅಸಮಾನತೆ ಪರಿಹಾರವಾಗದ ಸಮಸ್ಯೆಯೆ? ಅಂದರೆ ಮೀಸಲಾತಿ ತನ್ನ ಉದ್ದೇಶದಲ್ಲಿ ವಿಫಲವಾಗಿದೆಯೇ? ಈ ಕಾರಣದಿಂದಲಾದರೂ ಅದರ ಪುನರಾವಲೋಕನ ಅಗತ್ಯವಿದೆಯಲ್ಲವೆ?

ಉದಾಹರಣೆಗೆ, ಮೀಸಲಾತಿಯ ತಾತ್ವಿಕತೆಗೆ ಕಾರಣವಾದ ಜಾತಿ ವ್ಯವಸ್ಥೆಯನ್ನು ನಾವು ಅರ್ಥ ಮಾಡಿಕೊಂಡ ರೀತಿಯೇ ದೋಷಪೂರ್ಣವಾಗಿದೆಯೇ? ಮೀಸಲಾತಿಯ ಮಗ್ಗುಲಲ್ಲೇ ನಡೆದ ನಮ್ಮ ಜಾತಿ ವಿರೋಧಿ ಆಂದೋಲನಗಳು (ಉದಾ: ಸಮಾಜವಾದಿ ಮತ್ತು ದಲಿತ ಚಳುವಳಿಗಳು) ದಾರಿ ತಪ್ಪಿದ ಕಾರಣದಿಂದಾಗಿ ಮೀಸಲಾತಿ ಎಂಬುದು ಒಂದು ಪಟ್ಟಭದ್ರ ಹಿತಾಸಕ್ತಿಯಾಗಿ ಪರಿವರ್ತಿತವಾಗಿ ಜಾತಿ ವ್ಯವಸ್ಥೆಯನ್ನು ಇನ್ನೊಂದು ರೂಪದಲ್ಲಿ ಪುನರುತ್ಪಾದಿಸತೊಡಗಿದೆಯೇ? ಹಾಗಿದ್ದಲ್ಲಿ ಮೀಸಲಾತಿಯ ಬದಲಾಗಿ ಸಾಮಾಜಿಕ ಸಮಾನತೆಗಾಗಿ ಬೇರೊಂದು ಸಾಧನವನ್ನು ರೂಪಿಸುವ ಬಗ್ಗೆ ಯೋಚನೆ ಮಾಡುವುದು ಲೇಸಲ್ಲವೆ? ಅಥವಾ ಮೀಸಲಾತಿಯಿಂದ ಸಾಮಾಜಿಕ ಸಮಾನತೆ ಎಷ್ಟು ಸಾಧಿತವಾಗಿದೆಯೋ ಅಷ್ಟರಮಟ್ಟಿಗಾದರೂ ಮೀಸಲಾತಿ ಕಾರ್ಯಕ್ರಮವನ್ನು ಪುರ್ನವಿನ್ಯಾಸಗೊಳಿಸಬೇಕಲ್ಲವೆ? ಜಾತಿ ವ್ಯವಸ್ಥೆ ಮೇಲ್ಜಾತಿಗಳವರಿಂದ ಮಾತ್ರ ಉಳಿದಿದೆಯೇ? ಕೆಳಜಾತಿಗಳಿಗೆ ತಮ್ಮ ಜಾತಿಕಟ್ಟಳೆ–ನಂಬಿಕೆ–ಆಚರಣೆಗಳಲ್ಲಿ ನಂಬಿಕೆಯಿಲ್ಲವೆ? ಸಾಮಾಜಿಕ ನ್ಯಾಯ ಕೇವಲ ಮೀಸಲಾತಿಯ ಜಾತಿಗಳಿಗೆ ಮಾತ್ರ ಸಂಬಂಧಿಸಿದ ವಿಷಯವೇ? ಈಗ ಜಾರಿಯಲ್ಲಿರುವ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳ ಪರಿಣಾಮ ಇಡೀ ಸಮಾಜದ ಮೇಲೆ ಯಾವ ರೀತಿ ಆಗಿದೆ ಎಂಬುದರ ಬಗ್ಗೆ ಯಾರೇ ಆದರೂ ಯೋಚಿಸಬಹುದಲ್ಲವೆ? ಒಬ್ಬ ಅಂತಾರಾಷ್ಟ್ರೀಯ ಮಟ್ಟದ ಭಾರತೀಯ ಸಮಾಜಶಾಸ್ತ್ರಜ್ಞನಿಗೆ ಒಂದು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅಂಬೇಡ್ಕರ್‌ರನ್ನು ಮೂರ್ಖನೆಂದೂ, ಮೀಸಲಾತಿ ಪಡೆದು ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರಾದವರನ್ನು

ಕತ್ತೆಗಳು ಎಂದು ಕರೆಯುವಷ್ಟು ಧೈರ್ಯ ಇಂದು ಏಕೆ ಬಂದಿದೆ? ಕೇವಲ ಈತನನ್ನು ಶಪಿಸುವ ಮೂಲಕ ಈ ಪ್ರಶ್ನೆಗೆ ಉತ್ತರ ದೊರೆಯಲಾರದು.

ದಲಿತ ಚಳುವಳಿಯ ಮುಖ್ಯ ಚಿಂತಕರೂ, ನಾಯಕರೂ ಆಗಿರುವ ದೇವನೂರ ಮಹಾದೇವ ಕೆಲ ಕಾಲದ ಹಿಂದೆ ಜಾತಿ ವಿರೋಧಿ ಹೋರಾಟದ ಬಗ್ಗೆ ಒಂದು ಹಿನ್ನೋಟ ಬೀರುತ್ತಾ, ಈ ಹೋರಾಟ ಜಾತಿಯನ್ನು ಗಟ್ಟಿಕೊಳಿಸಿರಬಹುದೇ ಎಂಬ ಅನುಮಾನದಲ್ಲಿ ಹೇಳಿದ ಈ ಮಾತುಗಳು ಇಲ್ಲಿ ನೆನಪಾಗುತ್ತಿವೆ. ಜಾತಿ ವಿರುದ್ಧದ ಕಾರ್ಯಕ್ರಮಗಳಲ್ಲಿ ಒಂದು ಕಾಲನ್ನು ಜಾತಿಯ ಒಳಗೂ, ಇನ್ನೊಂದು ಕಾಲನ್ನು ಜಾತಿಯ ಹೊರಗೂ ಇಡುವ ಎಚ್ಚರ ನಮಗಿರಬೇಕಿತ್ತು ಎಂದವರು ಹೇಳಿದ್ದರು. ಇದನ್ನು ನಮ್ಮ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳಲ್ಲಿ, ಮುಖ್ಯವಾಗಿ ಮೀಸಲಾತಿ ಜಾರಿಯಲ್ಲಿ ಅಳವಡಿಸಿಕೊಳ್ಳುವ ಕಾರ್ಯವಿಧಾನವಾವುದು? ಈ ಬಗ್ಗೆ ವ್ಯಾಪಕ ಮತ್ತು ಮುಕ್ತ ಚರ್ಚೆ ನಡೆಯಬೇಕಿದೆ.

ಇಂದು ನಮ್ಮ ಮುಂದಿರುವ ಈ ಎಲ್ಲ ಪ್ರಶ್ನೆಗಳ ಹಿನ್ನೆಲೆಯಲ್ಲಿ ನಾವು ಈ ಸಮಕಾಲೀನ ಪುಟಗಳನ್ನು ಆಯೋಜಿಸಿದ್ದೇವೆ. ಸಾಮಾಜಿಕ ನ್ಯಾಯ, ನಿರ್ದಿಷ್ಟವಾಗಿ ಮೀಸಲಾತಿ ಕುರಿತಂತೆ ನಮ್ಮ ಜನಪ್ರಿಯ ಮತಬ್ಯಾಂಕ್ ರಾಜಕಾರಣ ಮತ್ತು ಜಾತಿಲೋಭದ ಜಾತೀಯವಾದಿ ಗುಂಪುಗಳು ಒಂದು ತೀವ್ರ ಭಾವನಾತ್ಮಕ ವಾತಾವರಣವನ್ನು ನಿರ್ಮಿಸಿವೆ. ಇಂತಹ ವಾತಾವರಣದಲ್ಲಿ ಜಾತಿ ವ್ಯವಸ್ಥೆ ಮತ್ತು ಅದರ ಪರಿಣಾಮವಾದ ಸಾಮಾಜಿಕ ನ್ಯಾಯ ಕುರಿತಂತೆ ಒಂದು ಶಾಸ್ತ್ರೀಯ, ವಸ್ತುನಿಷ್ಠ ಚರ್ಚೆ ಸ್ವಲ್ಪ ದುಸ್ಸಾಹಸದ ಕೆಲಸವೇ. ಆದರೂ ಅದನ್ನು ಕರ್ತವ್ಯವೆಂಬಂತೆ ಪತ್ರಿಕೆ ಮಾಡಿದೆ. ಇಲ್ಲಿನ ಎರಡು ಮುಖ್ಯ ಲೇಖನಗಳನ್ನೂ, ನಂತರದ ಹಲವರ ಅಭಿಪ್ರಾಯ ಮಾಲೆಯನ್ನೂ ಗಮನಿಸಿ ಓದುಗರು ಪ್ರತಿಕ್ರಿಯಿಸಬಹುದಾಗಿದೆ–**ಸಂ.**

ಫೆಬ್ರುವರಿ, ೨೦೧೬

ಉಲ್ಟಾ ಹೊಡೆಯುತ್ತಿರುವ ಮೋದಿಯವರ ಪಾಕಿಸ್ತಾನ ನೀತಿ

ಪ್ರಿಯ ಓದುಗರೇ,

ಒಂದು ತಿಂಗಳಿಂದ ರಾಷ್ಟ್ರ ರಾಜಕಾರಣ ದೆಹಲಿಯ ಚಳಿಯಂತೆ ತಣ್ಣಗೇ ಉಳಿದಿದೆ ತಿಂಗಳ ಆರಂಭದಲ್ಲಿ ಪಠಾಣ್‌ಕೋಟ್ ಎಂಬ ಒಂದು ದೊಡ್ಡ ಬಾಂಬು ಮತ್ತು ತಿಂಗಳ ಮಧ್ಯದಲ್ಲಿ ರೋಹಿತ್ ವೇಮುಲನ ಆತ್ಮಹತ್ಯೆ ಎಂಬ ಸಣ್ಣ ಬಾಂಬು ಸಿಡಿಯಿತಾದರೂ ಪ್ರಧಾನಿ ಮೋದಿ ಇದರಿಂದೆಲ್ಲ ಬಹಿರಂಗವಾಗಿ ತಲೆಕೆಡಿಸಿಕೊಳ್ಳುವ ಮತ್ತು ದೇಶದ ತಲೆಕೆಡಿಸುವ ರಾಜಕಾರಣ ಪ್ರದರ್ಶಿಸಿಲ್ಲ. ಬದಲಿಗೆ ತಮ್ಮ ಪಾಡಿಗೆ ತಾವು 'ಸ್ಟಾರ್ಟ್ ಅಪ್'ಗಳೆಂಬ ಹೊಸ ಉದ್ಯಮಿಗಳ ವರ್ಗವೊಂದನ್ನು ಗುರುತಿಸಿ ಅದಕ್ಕೆ ಕರ ರಿಯಾಯ್ತಿ ಇತ್ಯಾದಿ ಪ್ರೋತ್ಸಾಹ ಕ್ರಮಗಳನ್ನು ಪ್ರಕಟಿಸುತ್ತಾ ತಮ್ಮ ಅಭಿಮಾನಿ ವರ್ಗದಿಂದ ಚಪ್ಪಾಳೆ ಗಿಟ್ಟಿಸಿಕೊಳ್ಳುವುದರಲ್ಲಿ ಮುಳುಗಿಹೋಗಿದ್ದಾರೆ. ಇದು ನಿಜವಾಗಿಯೂ ಜಾಣ ರಾಷ್ಟ್ರ ರಾಜಕಾರಣ! ಹಿಂದಿನ ಪ್ರಧಾನಿ ಮನಮೋಹನ ಸಿಂಗ್ ಅವರು ಯಾವುದರ ಬಗ್ಗೆಯೂ ಪ್ರತಿಕ್ರಿಯೆ ನೀಡದೆ ತಮ್ಮ ಪಾಡಿಗೆ ತಮ್ಮದೇ ಶೈಲಿಯಲ್ಲಿ ಆಡಳಿತ ನಡೆಸುತ್ತಿದ್ದಾಗ ಅವರನ್ನು 'ಮನ-ಮೌನ ಸಿಂಗ್' ಎಂದು ಟೀಕಿಸುತ್ತಿದ್ದ ಮೋದಿ ಮಹಾಶಯರು ಈಗ ಅದೇ ಶೈಲಿಯ ರಾಜಕಾರಣವನ್ನು ಅನುಸರಿಸುತ್ತಿರುವುದು ವಿಚಿತ್ರ ಮತ್ತು ವಿಪರ್ಯಾಸಕರ!

ಪಠಾಣ್‌ಕೋಟ್ ದಾಳಿಯಂತಹ ಗಂಭೀರ ಭದ್ರತೆಯ ವಿಷಯವಾಗಲಿ ಅಥವಾ ದಲಿತ ವಿದ್ಯಾರ್ಥಿ ರೋಹಿತನ ದಾರುಣ ಸಾವಿನ ಹಿಂದೆ ಇದ್ದಂತೆ ತೋರುವ ರಾಜಕಾರಣವಾಗಲಿ, ರಾಷ್ಟ್ರಾಡಳಿತದ ಮುಖ್ಯ ನೆಲೆಗಳಿಗೆ ಸಂಬಂಧಿಸಿದ ವಿದ್ಯಮಾನಗಳೇ ಆಗಿವೆ. ಹಿಂದಿನ ಸರ್ಕಾರದ ನೀತಿಗಳನ್ನು ಕಟುವಾಗಿ ವಿರೋಧಿಸಿ ಅಧಿಕಾರಕ್ಕೆ ಬಂದಿರುವ

ಈ ಸರ್ಕಾರದ ಏಕೈಕ ನಾಯಕರಾಗಿ ವಿಜೃಂಭಿಸುತ್ತಿರುವ ಪ್ರಧಾನಿ ಮೋದಿ, ಸರ್ಕಾರ ಕಷ್ಟಕ್ಕೆ ಸಿಕ್ಕಿಕೊಂಡಾಗಲೆಲ್ಲ ಮೌನವಹಿಸುವುದು ಮಾತ್ರ ಜಾಣತನಕ್ಕಿಂತ ಹೆಚ್ಚಾಗಿ ರಕ್ಷಣಾತ್ಮಕ ಪಲಾಯನವಾದವಾಗಿ ಕಾಣುತ್ತದೆ. ಸುಷ್ಮಾ ಸ್ವರಾಜ್, ವಸುಂಧರಾ ರಾಜೇ ಪ್ರಕರಣಗಳಿಂದ ಹಿಡಿದು ಪಠಾಣ್‌ಕೋಟ್ ದಾಳಿ-ರೋಹಿತ್ ಸಾವಿನ ಪ್ರಕರಣಗಳವರೆಗೆ ಅವರು ಒಂದೇ ಒಂದು ಮಾತು ಆಡಿಲ್ಲ. ಅವರ ನೆಚ್ಚಿನ 'ಮನ್ ಕಿ ಬಾತ್'ನಲ್ಲೂ. ಆದರೆ ವಿದೇಶ ಪ್ರವಾಸಗಳ ಸಮಯದಲ್ಲಿ ಮಾತ್ರ ಅವರ ವಾಚಾಳಿತನ ಮೇರೆ ಮೀರಿ ಹರಿಯುತ್ತದೆ. ಏಕೆ?

ಮೋದಿಯವರ ಬಹು ಪ್ರಶಂಸಿತ ಸರಣಿ ವಿದೇಶ ಪ್ರವಾಸಗಳ ಪರಿಣಾಮವಾದರೂ ಏನು? ಈ ಮೂಲಕ ಆರಂಭಿಸಿದ ಅವರ ವಿದೇಶಾಂಗ ನೀತಿ ಎಲ್ಲಿಗೆ ಬಂದು ಮುಟ್ಟಿದೆ? ವ್ಯಾಪಾರ ಲಾಭ ಉದ್ದೇಶಗಳುಳ್ಳ ಪಶ್ಚಿಮ ರಾಷ್ಟ್ರಗಳ ಉತ್ಸಾಹ ಅರ್ಥವಾಗುವಂತಹುದು. ಮಿಕ್ಕಂತೆ ಮೋದಿ ಧಾಂಧೂಂನೊಂದಿಗೆ ಆರಂಭಿಸಿದ ಚೀನಾದೊಡನೆಯ ಹೊಸ ಗೆಳೆತನ ಆ ದೇಶದ ಆರ್ಥಿಕ ಕುಸಿತದೊಂದಿಗೆ ನೆಲಕಚ್ಚಿದೆ. ನೇಪಾಳದ ಸಂವಿಧಾನ ರಚನೆಯ ಸಂದರ್ಭದಲ್ಲಿ ಅದನ್ನು ಹಿಂದೂ ರಾಷ್ಟ್ರ ಮಾಡಲು ನಡೆಸಲಾಯಿತೆಂದು ಹೇಳಲಾದ ಗಲಭೆಯ ರಾಜಕಾರಣ ಆ ದೇಶವನ್ನು ಚೀನಾದ ಇನ್ನಷ್ಟು ಸನಿಹಕ್ಕೆ ತಳ್ಳಿದೆ. ಮಿಕ್ಕಂತೆ ಯಾವ ನೆರೆಹೊರೆಯ ದೇಶವೂ ಭಾರತದ ಬಗ್ಗೆ ವಿಶೇಷ ಒಲವು ಬೆಳೆಸಿಕೊಂಡಂತೆ ತೋರುತ್ತಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, ಯುಪಿಎ ಸರ್ಕಾರ ಪಾಕಿಸ್ತಾನದೊಡನೆ ಮಾತುಕತೆಯಾಡುವುದನ್ನು ಒಂದಲ್ಲ ಒಂದು ಕಾರಣದ ಮೇಲೆ ಸದಾ ವಿರೋಧಿಸುತ್ತಿದ್ದ ಬಿಜೆಪಿ ಈಗ ಮೋದಿ ನೇತೃತ್ವದಲ್ಲಿ ಯಾವ ಎಗ್ಗೂ ಇಲ್ಲದೆ ಮಾತುಕತೆಗಳನ್ನು ಆರಂಭಿಸಿ ಪಠಾಣ್‌ಕೋಟ್ ದಾಳಿಯಿಂದ ತತ್ತರಿಸಿದೆ.

ನೆರೆಮನೆಯವ ಮಾಡಿದರೆ ವ್ಯಭಿಚಾರ; ಅದನ್ನೇ ತಾನು ಮಾಡಿದರೆ ರಸಿಕತೆ ಎನ್ನುವಂತೆ ಪಾಕಿಸ್ತಾನದೊಡನೆಯ ಸಂಬಂಧ ಸ್ಥಾಪನೆಯ ವಿಷಯವನ್ನು ವ್ಯಾಖ್ಯಾನಿಸುತ್ತಿರುವ ಮೋದಿ, ಪಠಾಣ್‌ಕೋಟ್ ದಾಳಿಯ ರೂಪದಲ್ಲಿ ಮುಖಭಂಗ ಅನುಭವಿಸಿರುವುದು ಸಹಜವೇ ಆಗಿದೆ. ವಿದೇಶಾಂಗ ವ್ಯವಹಾರಗಳ ಅನುಭವವೇ ಇಲ್ಲದ ಇವರು, ತಮ್ಮ ಅಧಿಕೃತ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್‌ರನ್ನು ಕೇವಲ ರಾಜದೂತತ್ವದ ಕೆಲಸಕ್ಕೆ ಸೀಮಿತಗೊಳಿಸಿ ತಮ್ಮ ಅತ್ಯುತ್ಸಾಹಿ ಭದ್ರತಾ ಸಲಹಾಗಾರ ದೋವಲ್ ನೇತೃತ್ವದ ವಿದೇಶ ವ್ಯವಹಾರ ಪಡೆಯೊಂದಿಗೆ ರಹಸ್ಯವಾಗಿ ರೂಪಿಸಿದ ಪಾಕಿಸ್ತಾನ ನೀತಿ ಅವರ ಮುಖಕ್ಕೇ ಸಿಡಿದಿದೆ. ಪಾಕಿಸ್ತಾನದ ಸಂಕೀರ್ಣ ಆಂತರಿಕ ರಾಜಕಾರಣವನ್ನು ನಿರ್ಲಕ್ಷಿಸಿ ಭಾರತ-ಪಾಕಿಸ್ತಾನ ಸಂಬಂಧಗಳಲ್ಲಿ ಕ್ರಾಂತಿಕಾರಕ ಬದಲಾವಣೆ ತಂದು ವಿಶ್ವಭಾಜನರಾಗುವ (ನೋಬೆಲ್ ಶಾಂತಿ ಪುರಸ್ಕಾರದ ಬಯಕೆ?) ಆತುರದಲ್ಲಿ ಮೋದಿ ಇದ್ದಕ್ಕಿದ್ದಂತೆ ಲಾಹೋರ್‌ಗೆ ನಾಟಕೀಯ ಭೇಟಿ ನೀಡಿ ಪಾಕಿಸ್ತಾನದ ಪ್ರಧಾನಿ ನವಾಜ್ ಶರೀಫರ ಹುಟ್ಟು ಹಬ್ಬದ ಚಹಾ ಕೂಟಕ್ಕೆ ಹಾಜರಾಗಿ ತಮ್ಮ

ಅಭಿಮಾನಿ ಬಳಗದಿಂದ ರಿವರ್ಸ್ ಗೇರ್‌ನಲ್ಲಿ ಉಘೇ ಉಘೇ ಎನ್ನಿಕೊಳ್ಳುತ್ತಿದ್ದಾಗಲೇ ಗಡಿ ಬಳಿಯ ನಮ್ಮ ಆಯಕಟ್ಟಿನ ವಾಯುನೆಲೆಯನ್ನು ಪಾಕಿಸ್ತಾನಿ ಉಗ್ರರು ಪ್ರವೇಶಿಸಿ ನಮ್ಮ ಸೈನಿಕರ, ಸೇನಾಧಿಕಾರಿಗಳ ಸಾವಿಗೆ ಕಾರಣರಾಗಿ ದೇಶಕ್ಕೆ ಮುಜುಗರ ಉಂಟು ಮಾಡಿದ್ದಾರೆ. ಈ ಸಂಬಂಧ ಭದ್ರತಾ ಲೋಪಗಳ ಬಗ್ಗೆ ದೇಶಕ್ಕೆ ವಿವರಣೆ ನೀಡಬೇಕಾದ ಮೋದಿ ಬಾಯಿಯನ್ನೇ ಬಿಡುತ್ತಿಲ್ಲ. ಅವರ ರಕ್ಷಣಾ ಸಚಿವರು ಬರೀ ವೀರಾವೇಶದ ಮಾತನ್ನಾಡುತ್ತಿದ್ದಾರೆ. ಮೋದಿ ಸರ್ಕಾರ ವಿದೇಶಾಂಗ ವ್ಯವಹಾರಗಳ ವಿಷಯದಲ್ಲಿ ಕಾಂಗ್ರೆಸ್‌ನಿಂದ ಕಲಿಯಬೇಕಾದದ್ದು ಸಾಕಷ್ಟಿದೆ ಎನಿಸುತ್ತದೆ.

ಇನ್ನು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ರೋಹಿತನ ಆತ್ಮಹತ್ಯೆ ಆತ ದಲಿತನೇ ಅಲ್ಲವೇ ಎಂಬ ವಿವಾದವನ್ನು ಮೀರಿದ ರಾಜಕೀಯ ಪ್ರಕರಣವಾಗಿದೆ. ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ತನ್ನ ಪುರಾತನ ನಂಬಿಕೆಗಳ ಹಿನ್ನೆಲೆಯಲ್ಲಿ ಅತಿ ಸಂಕುಚಿತಗೊಳಿಸುತ್ತಿರುವ ಸಂಘ ಪರಿವಾರದ ರಾಜಕಾರಣದ ಫಲವಿದು. ಅಂಬೇಡ್ಕರ್ ಹೆಸರಲ್ಲಿ ವಿದ್ಯಾರ್ಥಿ ಸಂಘವನ್ನು ರಚಿಸಿಕೊಂಡಿರುವುದೇ ಮೊದಲಾಗಿ ಅದಕ್ಕೆ ಅಸಹನೀಯವಾಗಿ ಕಂಡಿದೆ. ನಂತರ ಅದರ ಸದಸ್ಯರಾದ ರೋಹಿತ್ ಮತ್ತು ಆತನ ಸ್ನೇಹಿತರು ಮೆಮೊನ್‌ನನ್ನು ಗಲ್ಲಿಗೇರಿಸಿದ್ದನ್ನು ಪ್ರತಿಭಟಿಸಿದ್ದಂತೂ ಅದಕ್ಕೆ ರಾಷ್ಟ್ರದ್ರೋಹವಾಗಿ ಕಂಡಿದೆ. ಬಂಡಾರು ದತ್ತಾತ್ರೇಯ ಮತ್ತು ಸ್ಮೃತಿ ಇರಾನಿ ಜೋಡಿಗೆ ಆ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದಿಂದ ಹೊರಹಾಕುವಂತೆ ಕುಲಪತಿಯ ಮೇಲೆ ಒತ್ತಡ ಹೇರಲು ಇಷ್ಟೇ ಸಾಕಾಗಿದೆ. ಆ ಕುಲಪತಿಗೂ ಈ ವಿದ್ಯಾರ್ಥಿ ರಾಜಕಾರಣದಿಂದ ತಲೆ ರೋಸಿಹೋಗಿತ್ತೆಂದು ಕಾಣುತ್ತದೆ. ಇವೆರಡರ ಪರಿಣಾಮ ರೋಹಿತ್ ಎಂಬ ಸೂಕ್ಷ್ಮ ಮನಸ್ಸಿನ ಹುಡುಗನ ಅಂತ್ಯಕ್ಕೆ ಕಾರಣವಾಗಿದ್ದಂತೆ ತೋರುತ್ತದೆ. ಎಡಪಂಥೀರೂ ಸಹ ಬಹುಸೂಕ್ಷ್ಮ ಮನಸ್ಸಿನ ಈ ಹುಡುಗನ ಮೃತ್ಯು ಪತ್ರವನ್ನು ರಾಜಕೀಯವಾಗಿ ಬಳಸಿಕೊಳ್ಳುವ ರೂಕ್ಷ ರಾಜಕಾರಣದಲ್ಲಿ ತೊಡಗಿದ್ದರೆಯೇ ಹೊರತು ಆ ಪತ್ರದಲ್ಲ ಆ ಹುಡುಗ ಬರೆದಿರುವ ಅಧ್ಯಾತ್ಮಿಕವೆನ್ನಿಸುವ ರಾಜಕೀಯೇತರ ಸಾಲುಗಳ ಕಡೆ ಗಮನವನ್ನೇ ಹರಿಸಿಲ್ಲ. ಮೋದಿಯವರು ಒಂದು ಆಧುನಿಕ ರಾಷ್ಟ್ರದ ಜವಾಬ್ದಾರಿ ನಾಯಕರಾಗಿ ಎಚ್ಚೆತ್ತುಕೊಳ್ಳಲು, ನಿಷ್ಠುರವಾಗಿ ಮಾತಾಡಲು, ದೇಶಭಕ್ತಿ, ರಾಷ್ಟ್ರೀಯತೆಗಳ ಹೆಸರಿನಲ್ಲಿ ತಮ್ಮ ಪರಿವಾರ ನಡೆಸಿಕೊಂಡು ಬರುತ್ತಿರುವ ಸಂಕುಚಿತ ಮತ್ತು ಕುಟಿಲ ರಾಜಕಾರಣಕ್ಕೆ ಇನ್ನೆಷ್ಟು ನರಬಲಿಗಳು ಬೇಕೋ ತಿಳಿಯದಾಗಿದೆ.

ಈ ಮಧ್ಯೆ ದೇಶದ ಆರ್ಥಿಕ ಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ ಎಂಬ ವರದಿಗಳು ಪ್ರಕಟವಾಗುತ್ತಿವೆ. ರಫ್ತು ಕುಸಿದಿದೆ. ಇದರಿಂದಾಗಿ ವಿದೇಶಿ ವಿನಿಮಯ ಸಂಗ್ರಹವೂ ಕುಸಿದಿದೆ. ಇದರ ಹಿಂದಿನ ಕಾರಣಗಳೆಂದರೆ, ಬಹುಪಾಲು ಕ್ಷೇತ್ರಗಳಲ್ಲಿ ದೇಶಿ ಉತ್ಪಾದನೆ ಕುಸಿದಿರುವುದು ಎಂದು ಹೇಳಲಾಗುತ್ತಿದೆ. ಈ ವರ್ಷದ ಜಿಡಿಪಿ ಹೆಮ್ಮೆಯಿಂದ ಮುನ್ನೋಡಿದಂತೆ ಶೇ. ಏಳರ ಹತ್ತಿರವೂ ಬರಲಾರದೆಂಬ ಶಂಕೆ ಇದೆ. ಇದಕ್ಕೆ

ಕಾರಣ, ಜಾಗತಿಕ ಆರ್ಥಿಕ ಕುಸಿತವಂತೆ; ಮುಖ್ಯವಾಗಿ ಚೀನಾದ ಮಾರುಕಟ್ಟೆ ಕುಸಿತವಂತೆ. ಕೆಲವೇ ತಿಂಗಳುಗಳ ಹಿಂದೆ ಜಗತ್ತಿನ ಎಲ್ಲ ದೇಶಗಳ ಕಣ್ಣುರಿಸುತ್ತಾ ನಾಗಾಲೋಟದಲ್ಲಿ ಸಾಗುತ್ತಿದೆ ಎಂದು ಹೇಳಲಾಗುತ್ತಿದ್ದ ಚೀನಾದ ಆರ್ಥಿಕತೆ ಹೀಗೆ ದಿಢೀರನೆ ಕುಸಿಯಲು ಕಾರಣವೇನು? ಅರ್ಥಶಾಸ್ತ್ರಜ್ಞರ ಪ್ರಕಾರ ಜಗತ್ತಿನ ಆರ್ಥಿಕತೆಯಲ್ಲಿ ಇಂತಹ ಕುಸಿತ ಸಹಜವಂತೆ! ಇವರ ಮಾತೇ ಯಾರಿಗೂ ಅರ್ಥವಾಗುವುದಿಲ್ಲ. ಕಾರಣ ಇವರ ಅರ್ಥಶಾಸ್ತ್ರ ಜನತೆಗಾಗಿ, ದೇಶಕ್ಕಾಗಿ ಇರುವ ಅರ್ಥಶಾಸ್ತ್ರವಲ್ಲ. ಅದು ಅರ್ಥಶಾಸ್ತ್ರಕ್ಕಾಗಿ, ಅರ್ಥಶಾಸ್ತ್ರಜ್ಞರಿಗಾಗಿ ಇರುವ ಅರ್ಥಶಾಸ್ತ್ರ!! ಒಂದು ಸಮಾಜದ ಅಗತ್ಯಗಳು ಮತ್ತು ಪೂರೈಕೆಯ ನಡುವೆ ಒಂದು ಸತಾರ್ಕಿಕ ಸಂಬಂಧವಿದ್ದರೆ ಯಾವ ಆರ್ಥಿಕತೆಯಾದರೂ ಏಕೆ ಕುಸಿಯಬೇಕು? ಸಮಸ್ಯೆ ಇರುವುದು ಇದು ಅಗತ್ಯ-ಪೂರೈಕೆಗಳ ಅರ್ಥಶಾಸ್ತ್ರವಲ್ಲ ಎಂಬುದು. ಆಸೆಗಳ ಉತ್ಪಾದನೆ ಮತ್ತು ಅವುಗಳ ಈಡೇರಿಕೆಯ ಅರ್ಥಶಾಸ್ತ್ರವಿದು. ಇದು ಸರಕಿನ ಅರ್ಥಶಾಸ್ತ್ರ. ಗಾಂಧಿ ಇದನ್ನು ಮಾನವತೆಯ ಅರ್ಥಶಾಸ್ತ್ರವಾಗಿ ಪರಿವರ್ತಿಸಬೇಕೆಂದಿದ್ದರು. ಅದೇ ಶಾಂತಿ-ಸೌಹಾರ್ದಗಳ ಹೊಸ ಜಗತ್ತಿನ ಅಡಿಗಲ್ಲು ಎಂದಿದ್ದರು. ಆದರೆ ಯಾರಿಗೆ ಬೇಕು ಶಾಂತಿ-ಸೌಹಾರ್ದ? ಅದರಲ್ಲಿ ಏನಿದೆ ಮಜಾ?

ಆದರೆ ನಮ್ಮ ಲೇಖಕ ಭೈರಪ್ಪನವರಿಗೆ ಗಾಂಧಿ ಆಡಿದ್ದೆಲ್ಲವೂ, ಮಾಡಿದ್ದೆಲ್ಲವೂ ಕುತಂತ್ರವಾಗಿ ಕಾಣುತ್ತದೆ. ಏಕೆಂದರೆ ಗಾಂಧಿಯವರ ನಡೆನುಡಿಗಳು ಭೈರಪ್ಪನವರ ಬಹುಪಾಲು ಕಾದಂಬರಿಗಳಂತೆ ಅಗ್ಗದ ಮಜಾ ಕೊಡುವುದಿಲ್ಲ. ನೆಹ್ರೂ ಬದಲಾಗಿ ಪಟೇಲರು ಪ್ರಧಾನಿಯಾಗಿದ್ದರೆ ದೇಶ ತಮ್ಮ ಕಾದಂಬರಿಗಳಂತೆಯೇ ಬೆಳೆದು ತಮಗೆ ಮತ್ತು ತಮ್ಮ ಅಭಿಮಾನಿಗಳಿಗೆ ಸಖತ್ ಮಜಾ ನೀಡುತ್ತಿತ್ತು ಎಂಬುದು ಭೈರಪ್ಪನವರ 'ಮನ್ ಕಿ ಬಾತ್' ಎಂದು ಕಾಣುತ್ತದೆ!

<u>ಸಮಕಾಲೀನ</u>

ಆಕಾಶವಾಣಿ: ಒಂದು ಮಾಧ್ಯಮದ ಸಾವು?

ಕೆಲ ದಿನಗಳ ಹಿಂದೆ ನನ್ನ ತರುಣ ಮಿತ್ರರೊಬ್ಬರು ನನ್ನ ಬಗ್ಗೆ ಕುತೂಹಲದಿಂದ 'ನೀವು ಎಲ್ಲಿ ಸೇವೆ ಸಲ್ಲಿಸುತ್ತಿದ್ದಿರಿ?' ಎಂದು ಕೇಳಿದರು. ನಾನು 'ಆಕಾಶವಾಣಿಗೆ ಮುವ್ವತ್ತು ವರ್ಷ ಮಣ್ಣು ಹೊತ್ತಿದ್ದೇನೆ' ಎಂದೆ. ಆತ 'ಪರವಾ ಇಲ್ಲ ಸರ್, ಟೆಲಿಫೋನ್ ಇಲಾಖೆಯಲ್ಲಿದ್ದೂ ಇಷ್ಟೊಂದು ಸಾಂಸ್ಕೃತಿಕ ಆಸಕ್ತಿ ಬೆಳೆಸಿಕೊಂಡಿದ್ದೀರಲ್ಲ!' ಎಂದು ಆಶ್ಚರ್ಯ ವ್ಯಕ್ತಪಡಿಸಿದಾಗ ಇಮ್ಮಡಿ ಆಶ್ಚರ್ಯಕ್ಕೆ ಒಳಗಾದವನು ನಾನು. ಆತ ಆಕಾಶವಾಣಿ ಎಂದರೆ ದೂರವಾಣಿ ಎಂದು ಅರ್ಥ ಮಾಡಿಕೊಂಡಿದ್ದ. ಆತನಿಗೆ ನಾನು ಆಕಾಶವಾಣಿ ಎಂದರೆ ರೇಡಿಯೋ ಸ್ಟೇಷನ್ ಎಂದು ಅರ್ಥ ಮಾಡಿಸಲು ಯತ್ನಿಸಿದೆ. ಆಗ ಆತನಿಗೆ ಸ್ವಲ್ಪ ಜ್ಞಾನೋದಯವಾದಂತಾಗಿ, 'ಓ ಅದಾ! ಹಿಂದೆ ನಮ್ಮಪ್ಪ ಒಬ್ಬರೇ ಕೂತು

ಕಿವಿಗಿಟ್ಟುಕೊಂಡು ಕೇಳುತ್ತಿದ್ದರು!' ಎಂದು ನನ್ನನ್ನು ಯಾವುದೋ ಪುರಾತನ ಕಾಲದ ವ್ಯಕ್ತಿಯೆಂಬಂತೆ ನೋಡುತ್ತಾ, ಈಗ ತಮ್ಮ ಮನೆಯಲ್ಲಿ ಆ ಸಲಕರಣೆ ಇಲ್ಲವೆಂದೂ, ಬೆಂಗಳೂರಿಗೆ ಹೋದಾಗ ಮೊಬೈಲ್‌ನಲ್ಲಿ ಎಫ್.ಎಂ. ಕೇಳುವುದಾಗಿಯೂ ಹೇಳಿದ. ನಾನು ಆಕಾಶವಾಣಿ ಎಂಬ ಮಹಾಸಂಸ್ಥೆಗೆ ಮುವ್ವತ್ತು ವರ್ಷ ಹೊತ್ತದ್ದು ಮಣ್ಣೇ ಇರಬಹುದೆಂಬ ಅನುಮಾನ ನನ್ನನ್ನು ಕಾಡತೊಡಗಿತು.

ಈ ಅನುಮಾನ ನನ್ನಲ್ಲಿ ಮೂಡಿದ್ದು ಇದೇ ಮೊದಲಲ್ಲ. ತೊಂಬತ್ತರ ದಶಕದಲ್ಲಿಯೇ, ದೂರದರ್ಶನ ಕೇಂದ್ರಗಳು ಎಲ್ಲೆಡೆ ಸ್ಥಾಪಿತವಾಗುತ್ತಾ, ಅಲ್ಲಲ್ಲಿ ಉಪಗ್ರಹ ಟಿವಿ ವಾಹಿನಿಗಳು ಕೆಲ ಪ್ರತಿಷ್ಠಿತರ ಮನೆಗಳನ್ನು ಪ್ರವೇಶಿಸತೊಡಗಿದಾಗಲೇ ಆಕಾಶವಾಣಿ ಇನ್ನೇನು ಸಾವು ಕಾಣಲಿರುವ ಮಾಧ್ಯಮ ಎಂದು ನನಗನ್ನಿಸತೊಡಗಿತ್ತು. ಹಾಗೆ ನನಗನ್ನಿಸಿದ್ದು, ನಾನು ಪ್ರೀತಿ ಇಟ್ಟು ಸೇರಿ ನನ್ನ ಸೃಜನಶೀಲ ಶಕ್ತಿಯನ್ನೆಲ್ಲ ಅದಕ್ಕೇ ಬಹುಪಾಲು ಧಾರೆ ಎರೆದು ಆವರೆಗೆ ವೃತ್ತಿ ಸಾರ್ಥಕತೆಯನ್ನು ಅನುಭವಿಸಿದ್ದ ಅಭಿಮಾನದ ಹಿನ್ನೆಲೆಯಲ್ಲಿ. ಮುವ್ವತ್ತು ವರ್ಷಗಳ ಈ ಅವಧಿಯಲ್ಲಿ ವೃತ್ತಿ ಸಂಬಂಧಿಯಾದ ಹಲವು ತಾತ್ವಿಕ ಘರ್ಷಣೆಗಳಲ್ಲಿ ತೊಡಗಿ, ಅರ್ಹ ಅವಕಾಶಗಳನ್ನೂ ಕಳೆದುಕೊಂಡೆ ಎಂಬುದು ಬೇರೆ ವಿಷಯ. ಎಂಬತ್ತರ ದಶಕದಲ್ಲಿ ದೇಶಾದ್ಯಂತ ಬೀಸಿದ ಹಲವು ಕ್ಷೇತ್ರಗಳಲ್ಲಿನ ಬದಲಾವಣೆಯ ಗಾಳಿಗೆ ಸ್ಪಂದಿಸಲಾಗದಷ್ಟು ಸಿದ್ಧ ಎರಕಗಳ ಮಾಧ್ಯಮ ಮಾದರಿಗಳಲ್ಲಿಯೇ ಹೂತು ಹೋಗಿದ್ದ ಆಕಾಶವಾಣಿ (ಅಂದರೆ ಅದರ ಯಜಮಾನರುಗಳು ಮತ್ತು ಸಿಬ್ಬಂದಿ) ದೂರದರ್ಶನ ಮತ್ತು ಉಪಗ್ರಹ ಟಿವಿ ಮುಂತಾದ ಹೊಸಕಾಲದ ಸಮೂಹ ಮಾಧ್ಯಮಗಳ ಆಗಮನ ಒಡ್ಡಬಹುದಾದ ಸವಾಲುಗಳ ಕಲ್ಪನೆಯೇ ಇಲ್ಲದೆ ತನ್ನ ಹಮ್ಮಿನಲ್ಲಿ ತಾನುಳಿಯಿತು. ಆಗ ನಾನು ಕಿರಿಯ ಅಧಿಕಾರಿಯಾಗಿದ್ದರೂ, ನನ್ನ ಹುಚ್ಚು ಧೈರ್ಯದಲ್ಲಿ ಈ ಕಣ್ಣ ಮುಂದಿನ ಸತ್ಯಗಳನ್ನು ಮತ್ತು ನನ್ನ ಅನಿಸಿಕೆಗಳನ್ನು ದಾಖಲಿಸಿ ಪತ್ರವೊಂದನ್ನು ನಮ್ಮ ಮಹಾನಿರ್ದೇಶನಾಲಯಕ್ಕೆ ಬರೆದಿದ್ದೆ. ಅದನ್ನು ಯಾರೂ ಮೂಸಿ ಸಹ ನೋಡಿರಲಾರರು!

ಆಶ್ಚರ್ಯವೆಂದರೆ, ಹೊಸ ಮಾಧ್ಯಮಗಳನ್ನು ಸಾರ್ವಜನಿಕವಾಗಿ ಪರಿಚಯಿಸತೊಡಗಿದ್ದ ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಖಾತೆಯ (ನಂತರದ 'ಪ್ರಸಾರ ಭಾರತಿ ಮಂಡಳಿ'ಯ) ಚಿಂತಕರ ಚಾವಡಿ ಕೂಡ ತನ್ನೀ ಹೊಸ ಪರಿಚಯಗಳಿಂದಾಗಿ ಈಗಾಗಲೇ ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳ ಹೂಡಿರುವ ಆಕಾಶವಾಣಿ ಎಂಬ ಸಂಸ್ಥೆಯ ಪಾಡೇನಾಗಬಹುದು, ಅದನ್ನು ಹೇಗೆ ಈ ಹೊಸ ಮಾಧ್ಯಮಗಳೆದುರು ಸ್ಪರ್ಧಾತ್ಮಕ ಮಾಡಬಹುದು ಎಂಬ ಬಗ್ಗೆ ಒಂದು ಸಣ್ಣ ಯೋಚನೆ ಮಾಡಿದ ಸೂಚನೆಯೂ ಇಲ್ಲ. ಹಾಗೆ ನೋಡಿದರೆ ಅಲ್ಲಿ ಚಿಂತಕರ ಚಾವಡಿ ಎಂಬುದೇ ಇರಲಿಲ್ಲ! ಆ ಹೊತ್ತಿಗೆ ಆಕಾಶವಾಣಿ ಪೂರ್ಣವಾಗಿ ತಂತ್ರಜ್ಞರ ಲಾಬಿಯ ಕೈವಶವಾಗಿತ್ತು. ಆಕಾಶವಾಣಿ ಕೇಂದ್ರಗಳ ಮುಖ್ಯಸ್ಥರು–ಅದೃಷ್ಟವಶಾತ್ ರಾಜ್ಯಗಳ ರಾಜಧಾನಿ ಕೇಂದ್ರಗಳ ಹೊರತಾಗಿ–ಕಾರ್ಯಕ್ರಮ ರೂಪಿಸುವ ಸಮೂಹದಿಂದ

ಬಂದ ನಿರ್ದೇಶಕರೇ ಆಗಬೇಕಿಲ್ಲ; ಇಂಜಿನಿಯರ್‌ಗಳೂ ಆಗಬಹುದೆಂಬ ಆಡಳಿತಾತ್ಮಕ ತೀರ್ಮಾನವನ್ನು ಸರ್ಕಾರ ಕೈಗೊಂಡಿತ್ತು. ಇದು ಆಕಾಶವಾಣಿಯ ಕಾರ್ಯನಿರ್ವಹಣಾ ಶೈಲಿಯನ್ನೇ ನಿರ್ಣಾಯಕವಾಗಿ ಬದಲಿಸಿತೆಂದು ಹೇಳಬೇಕು. ಆಕಾಶವಾಣಿ ಎಂದರೆ ಮೂಲತಃ ಒಂದು ಸಾಂಸ್ಕೃತಿಕ ಸಂಸ್ಥೆ ಎಂಬ ಕಲ್ಪನೆಗೆ ಬದಲಾಗಿ ಅದೊಂದು ತಾಂತ್ರಿಕ ಸಂಸ್ಥಾಪನೆ ಎಂಬ ಭಾವನೆ ಸರ್ಕಾರದ ವಲಯಗಳಲ್ಲೇ ಬೆಳೆದಿತ್ತು.

ಇದಕ್ಕೆ ಬರೀ ಸರ್ಕಾರ ಅಥವಾ ಉನ್ನತ ತಾಂತ್ರಿಕ ಸಿಬ್ಬಂದಿಯ ಲಾಬಿಯೊಂದೇ ಕಾರಣವಲ್ಲ. ಆಕಾಶವಾಣಿ ಕೇಂದ್ರಗಳ ಸಂಖ್ಯೆ ಹೆಚ್ಚಿದಂತೆಯೂ, ಅದರ ಜೊತೆಗೆ ಕಾರ್ಯಕ್ರಮ ಸಿಬ್ಬಂದಿಯ ಆಯ್ಕೆಯಲ್ಲಿನ ವೃತ್ತಿಪರತೆ ಕಡಿಮೆಯಾಗುತ್ತಿದ್ದಂತೆಯೂ ಕಾರ್ಯಕ್ರಮ ಸಿಬ್ಬಂದಿಯ ಗುಣಾತ್ಮಕತೆಯೂ ಕುಸಿದುಬಿದ್ದಿತ್ತು. ಆ ಹೊತ್ತಿಗೆ ಬಹಳಷ್ಟು ನಿರ್ದೇಶಕರುಗಳು ಯಾವುದೇ ಸಾಂಸ್ಕೃತಿಕ ಅಸ್ಮಿತೆಗಳಿಲ್ಲದ ಮತ್ತು ಮಾಧ್ಯಮ ಸೂಕ್ಷ್ಮಗಳ ಅರಿವಿಲ್ಲದ ಮಹಾ ಗುಮಾಸ್ತರುಗಳಂತೆ ಕಾಣತೊಡಗಿದ್ದರು. ಇವರೇ ಮುಂದೆ ಬಡ್ತಿ ಪಡೆದು ಮೇಲಮೇಲಕ್ಕೆ ಹೋದವರೇ ಆಕಾಶವಾಣಿಯ ಕಾಲಾನುಕಾಲದ ನೀತಿನಿರೂಪಣೆಗೆ ಪ್ರಸ್ತಾವನೆ ಸಿದ್ಧಪಡಿಸುವ ಮಹಾನಿರ್ದೇಶನಾಲಯದ ಸಾರಥ್ಯ ವಹಿಸುತ್ತಿದ್ದರಾದ್ದರಿಂದ, ಪ್ರಸಾರ ಖಾತೆಯ ಹಿರಿಯ ಅಧಿಕಾರಿಗಳಿಗೆ ಮತ್ತು ಸಚಿವರುಗಳಿಗೆ ಈ ಬೆಪ್ಪು ಗುಮಾಸ್ತರುಗಳಿಗಿಂತ ಇಂಜಿನಿಯರ್‌ಗಳೇ ಹೆಚ್ಚು ಭರವಸೆಯ ಬೆಳಕುಗಳಾಗಿ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ. ಹಾಗಾಗಿಯೇ ಆಕಾಶವಾಣಿ ಹೊಸ ಕಾಲದ ಕರೆಗಳಿಗೆ ಓಗೊಡುವುದೆಂದರೆ ಕಾರ್ಯಕ್ರಮ ಸ್ವರೂಪದಲ್ಲಿ ಮೂಲಭೂತ ಬದಲಾವಣೆ ಮಾಡುವುದು ಎಂದಾಗದೆ, ಹೊಸ ಹೊಸ ತಂತ್ರಜ್ಞಾನಗಳ ಅತ್ಯಾಧುನಿಕ ಪ್ರಸಾರಕಗಳ ಮತ್ತು ಸಾಧನ-ಸಲಕರಣೆಗಳ ಅಳವಡಿಕೆ ಎಂದೇ ಆಯಿತು.

ಈ ತಾಂತ್ರಿಕ ಆಧುನೀಕರಣ ನೂರಾರು ಕೋಟಿ ರೂಪಾಯಿಗಳ ವ್ಯವಹಾರವೂ ಆದ್ದರಿಂದ ಇದಕ್ಕೆ ಯಾವ ಅಡತಡೆಯೂ ಉಂಟಾಗದೆ ಲಗುಬಗೆಯಿಂದ ಈ ಕೆಲಸ ನಡೆಯಿತು. ಇದರ ಒಂದು ಭಾಗವೇ ಎಲ್ಲಡೆ ಸ್ಥಾಪಿತವಾದ ಎಫ್.ಎಂ. ಕೇಂದ್ರಗಳು! ಈ ಲಗುಬಗೆಯ ಅನಾಹುತವೆಂದರೆ ಹಲವೆಡೆ ಈ ಹೊಸ ಪ್ರಸಾರಕಗಳನ್ನು ಯಾವುದೇ ಅಧ್ಯಯನ ಇಲ್ಲದೆ ಮತ್ತು ರಾಜಕೀಯ ವಶೀಲಿಬಾಜಿಯಿಂದಾಗಿ ಸ್ಥಾಪಿಸಿದ್ದರಿಂದ ಅದಕ್ಕೆ ಸಂಬಂಧಪಟ್ಟ ಹಲವು ಆಕಾಶವಾಣಿ ಕೇಂದ್ರಗಳ ಪ್ರಸಾರವ್ಯಾಪ್ತಿಗಳೇ ಊನಗೊಂಡಿವೆ. (ಉದಾ: ನಮ್ಮ ರಾಜ್ಯದ ಚಿತ್ರದುರ್ಗ, ಕಾರವಾರ ಇತ್ಯಾದಿ) ಇನ್ನು ಈ ಸಾಹಸದಲ್ಲಿ ಕಾರ್ಯಕ್ರಮ ವಿಭಾಗದ ಒಂದು ಪಾಲೂ ಇರಲಿ ಎಂಬ ಔಪಚಾರಿಕತೆಗಾಗಿ ಇವುಗಳಲ್ಲಿ ಕೆಲವನ್ನು 'ಸ್ಥಳೀಯ ಕೇಂದ್ರ'ಗಳೆಂದು ಕರೆಯುವ ಪ್ರಹಸನವೂ ನಡೆಯಿತು. ಇದು ಪ್ರಹಸನ ಏಕೆಂದರೆ, ಸ್ಥಳೀಯ ಕೇಂದ್ರ ಎಂದರೇನು ಎಂಬ ನಿರ್ದಿಷ್ಟ ಕಲ್ಪನೆ ಇಲ್ಲದೆ, ಅವುಗಳಿಗೆ ಬೇಕಾದ ಮೂಲಸೌಲಭ್ಯ ಮತ್ತು ವಿಶೇಷ ತರಬೇತಾದ ಸಿಬ್ಬಂದಿ ಇಲ್ಲದೆ ಯಾವನೋ ಸಚಿವ ಅಥವಾ ಹಿರಿಯ ಅಧಿಕಾರಿ ತನ್ನ

ಸರ್ಕಾರಿ ವಿದೇಶಿ ಪ್ರವಾಸದ ಸಮಯದಲ್ಲಿ ಕೇಳಿದ 'ಸ್ಥಳೀಯ ಬಾನುಲಿ' ಎಂಬ ಶಬ್ದದ ಸಾಕಾರ ರೂಪ ಮಾತ್ರ ಇವಾಗಿದ್ದವು. ಜೊತೆಗೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಎಫ್.ಎಂ. ರೇಡಿಯೋ ಸೆಟ್ಟುಗಳ ಸಾಂದ್ರತೆ ಎಷ್ಟು, ಅದನ್ನು ಹೆಚ್ಚಿಸಲು ಕ್ರಮ ಕೈಗೊಳ್ಳದೆ ಈ ಹೊಸ ಸಾಹಸಗಳು ವ್ಯರ್ಥವಾಗಬಲ್ಲವು ಎಂಬ ಯಾವ ಪರಿವೆಯೂ ಯಾರಿಗೂ ಇದ್ದಂತಿರಲಿಲ್ಲ.

ಹಾಗೆ ನೋಡಿದರೆ ಆಕಾಶವಾಣಿಯ ಆಧುನೀಕರಣ ಎಂಬ ಯೋಜನೆಯೇ, ಪರಿವೆಯೆಂಬುದರ ಸುಳಿವೇ ಇಲ್ಲದ ಬರೀ ವ್ಯವಹಾರದ ವಿದ್ಯಮಾನವಾಗಿತ್ತು. ಈಗಲೂ ಅದು ಸಾವಿರಾರು ರೂಪಾಯಿಗಳ ದುಬಾರಿ ಸೆಟ್‌ಗಳ ಮೂಲಕ ಮಾತ್ರ ಕೇಳಬಲ್ಲ ಮೂರು ನೂರು ಡಿಜಿಟಲ್ ರೇಡಿಯೋ ಕೇಂದ್ರಗಳನ್ನು ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಸ್ಥಾಪಿಸುವ ಸನ್ನಾಹ ನಡೆದಿದೆಯಂತೆ! ಆದರೆ ಇವುಗಳಿಗೆ ಜನ ಕೇಳಬಲ್ಲ ಕಾರ್ಯಕ್ರಮಗಳನ್ನು ಒದಗಿಸಬೇಕಾದ ಕಾರ್ಯಕ್ರಮ ಸಿಬ್ಬಂದಿ ಕೆಲ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡದಲ್ಲಿ ಅಧಿಕಾರಶಾಹಿ ಕೈಗೊಂಡ ಕೆಲ ತಪ್ಪು ಆಡಳಿತಾತ್ಮಕ ನಿರ್ಧಾರಗಳಿಂದಾಗಿ ವರ್ಷಗಟ್ಟಲೆ ಬಡ್ತಿ ಇಲ್ಲದೆ ಸೊರಗಿ ಸುಸ್ತಾಗಿ ಕೂತಿದೆ. ಜೊತೆಗೆ ಇದು ಯಾರೂ ಕೇಳದ ಮಾಧ್ಯಮವೆಂಬ ಸಿನಿಕತೆ ಮನೆ ಮಾಡಿದೆ. ಕಾರ್ಯಕ್ರಮ ಆಡಳಿತದಲ್ಲಿ ಅರಾಜಕತೆ ತಾಂಡವವಾಡುತ್ತಿದೆ. ಇಂತಹ ಸಿಬ್ಬಂದಿಯಿಂದ ಆಕಾಶವಾಣಿಗೆ ಹೊಸ ಚೇತನ ನೀಡುವ ಹೊಸ ಕಲ್ಪನಾಶೀಲತೆಯಾದರೂ ಎಲ್ಲಿಂದ, ಹೇಗೆ ಬಂದೀತು? ಬಂದರೂ ಅದಕ್ಕೆ ಸ್ಪಂದಿಸುವವರಾದರೂ ಯಾರು? ಎಂಬತ್ತು ವರ್ಷಗಳಷ್ಟು ಹಿರಿದಾದ ಈ ಸಮೂಹ ಮಾಧ್ಯಮ ಸಂಸ್ಥೆಯ ಯಾವ ಹಿರಿಯರಿಗೂ ಇದಕ್ಕೊಂದು ಕಾರ್ಯಕ್ರಮ ಸಂಶೋಧನಾ ಘಟಕವೊಂದರ ಅಗತ್ಯವಿದೆ ಎಂದೆನಿಸಿಲ್ಲ ಎಂಬುದೇ ಇದರ ನಿಜವಾದ ದುರಂತವಾಗಿದೆ.

ಸಂಸ್ಥೆ ಹೀಗೆ ಆಧುನೀಕರಣವೆಂದರೆ ಹೊಸ ತಂತ್ರಜ್ಞಾನಗಳ ಅಳವಡಿಕೆ ಎಂದೇ (ಸುಳ್ಳಾಗಿ) ನಂಬಿ ತನ್ನ ಕಾರ್ಯಕ್ರಮ ಘಟಕವನ್ನು ಸಂಪೂರ್ಣ ನಿರ್ಲಕ್ಷಿಸುತ್ತಾ ಹೋದ ಪರಿಣಾಮವಾಗಿ ಅದೀಗ ಒಂದು ಬೃಹತ್ ಜಡ ಆಸ್ತಿಯಾಗಿ ಬೆಳೆದಿದೆ. ಒಂದು ಕಾಲದಲ್ಲಿ ನಾಡಿನ ಸಾಹಿತ್ಯ, ಸಂಗೀತಗಳ ಪರಂಪರೆಯ ಸಂರಕ್ಷಣೆ ಮತ್ತು ಪೋಷಣೆಯ ಜವಾಬ್ದಾರಿ ಹೊತ್ತು ಒಂದು ರಾಷ್ಟ್ರೀಯ ಸಾಂಸ್ಕೃತಿಕ ಸಂಪತ್ತೆನಿಸಿದ್ದಲ್ಲದೆ, ರಾಷ್ಟ್ರದ ಅಭಿವೃದ್ಧಿಗೆ ಹಲವು ವಿಸ್ತರಣಾ ಸೌಲಭ್ಯಗಳನ್ನು ಒದಗಿಸಿ ಜನಸಮುದಾಯದ ಎಲ್ಲ ವರ್ಗಗಳ ಮಾಹಿತಿ, ಮನರಂಜನೆ ಮತ್ತು ಶಿಕ್ಷಣದ ಅಗತ್ಯಗಳನ್ನು ಪೂರೈಸಿ ರಾಷ್ಟ್ರಜೀವನದ ಅವಿಭಾಜ್ಯ ಅಂಗವಾಗಿ ಮನೆ ಮಾತಾಗಿದ್ದ ಆಕಾಶವಾಣಿ ಈಗ ಸಾವಿನ ಹಂತ ತಲುಪಿದೆ.

ಈ ಮಾತನ್ನು ಈಗ ಈ ಮಾಧ್ಯಮದಲ್ಲಿರುವ ಬಹಳಷ್ಟು ಜನ ಸಹಜವಾಗಿಯೇ ಒಪ್ಪಲಾರರು. ಅದು ಅವರ ವೃತ್ತಿಜೀವನದ ಸಾರ್ವಜನಿಕ ಸ್ವಾಭಿಮಾನದ ಪ್ರಶ್ನೆ. ಅವರು ತಮ್ಮ ಶ್ರೋತೃ ಸಂಶೋಧನಾ ವಿಭಾಗಗಳ ಸಮೀಕ್ಷೆಗಳ ವರದಿಗಳನ್ನು ತೋರಿಸಿ

ಇಷ್ಟು ಲಕ್ಷ ಜನ ಇಷ್ಟು ಹೊತ್ತಿನಲ್ಲಿ ನಮ್ಮ ಕಾರ್ಯಕ್ರಮಗಳನ್ನು ಕೇಳುತ್ತಾರೆ ನೋಡಿ ಎನ್ನಲೂಬಹುದು. ಎಲ್ಲರಿಗೂ ಗೊತ್ತಿದೆ, ನಮ್ಮ ಎಲ್ಲ ಸಮೀಕ್ಷೆಗಳೂ/ವರದಿಗಳೂ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ತಯಾರಾಗುತ್ತವೆ ಎಂದು. ಈ ಸತ್ಯ ಅವನ್ನು ತಯಾರಿಸುವ ಅಧಿಕಾರಿಗಿಂತ ಹೆಚ್ಚು ಯಾರಿಗೆ ಗೊತ್ತಿರಬಲ್ಲುದು! ಹಾಗಾಗಿಯೇ ನನ್ನ ಸಹೋದ್ಯೋಗಿಯಾಗಿದ್ದ ಹಿರಿಯ ಶ್ರೋತೃ ಸಂಶೋಧನಾ ಅಧಿಕಾರಿಯೊಬ್ಬರು ತಮ್ಮ ನಿವೃತ್ತಿಯ ಮುನ್ನ ಅಸಹಾಯಕ ಪೇಚಿನೊಂದಿಗೆ ಹೀಗೆ ಹೇಳಿದರು: 'ಆಕಾಶವಾಣಿಯ ಜನಪ್ರಿಯತೆಯ ಬಗ್ಗೆ ನನ್ನ ಸಮೀಕ್ಷೆ/ವರದಿಗಳಲ್ಲಿ ಎಷ್ಟೊಂದು ಸುಳ್ಳು ಅಂಕಿ ಅಂಶಗಳನ್ನು ಸೃಷ್ಟಿಸಬೇಕಾಯಿತೆಂದರೆ ನಾನು ನರಕಕ್ಕೇ ಹೋಗುವುದು ನನಗೆ ಗ್ಯಾರಂಟಿಯಾಗಿದೆ!'

ಅದೇನೇ ಇರಲಿ, ಆಕಾಶವಾಣಿಯು ತನ್ನ ಪುರಾತನ ಕಾಲದ ಮಾಧ್ಯಮ ಗುತ್ತೇದಾರಿಕೆಯ ಮಾನಸಿಕತೆಯಿಂದ ಮತ್ತು ತುಕ್ಕು ಹಿಡಿದ ಕಾರ್ಯಕ್ರಮಗಳ ಮಾದರಿಗಳಿಂದ ಹೊರಬಂದು ಹೊಸ ಕಾಲದ ಜನರ ಮಾಹಿತಿ-ಮನರಂಜನೆ-ಶಿಕ್ಷಣದ ಅಗತ್ಯಗಳನ್ನು ಅಭ್ಯಸಿಸಿ ಅದಕ್ಕೆ ತಕ್ಕ ಕಾರ್ಯಕ್ರಮಗಳ ಹೊಸ ರೂಪಗಳನ್ನು ಸಿದ್ಧಪಡಿಸುವ ಹೊಸ ಯೌವ್ವನದ ಹುರುಪು ಪಡೆಯುವುದಾದರೆ ಮಾತ್ರ ಅದಕ್ಕೆ ಉಳಿಗಾಲವಿದ್ದಂತೆ ಕಾಣುತ್ತದೆ.

ಆಕಾಶವಾಣಿಯ ಮಾಜಿ ಮತ್ತು ಹಾಲಿ ಆಡಳಿತಗಾರರು ಹಾಗೂ ಕೇಳುಗರೂ ಈ ಪುಟಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಓದಿ, ಬರೆಯಿರಿ.-ಸಂ.

ಮಾರ್ಚ್, ೨೦೧೬

ಸಂಕುಚಿತ ರಾಷ್ಟ್ರೀಯತೆಯ ಅನಾಹುತಗಳು

ಪ್ರಿಯ ಓದುಗರೇ,

ಹೈದರಾಬಾದ್‌ನ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ರೋಹಿತ್ ವೇಮುಲನ ಆತ್ಮಹತ್ಯೆ ಸೃಷ್ಟಿಸಿದ ರಾಷ್ಟ್ರೀಯ ಕೋಲಾಹಲ ಇನ್ನೂ ಮುಗಿದಿಲ್ಲ. ಅದು ಜವಾಹರಲಾಲ್ ನೆಹ್ರೂ ವಿಶ್ವವಿದ್ಯಾಲಯ (ಜೆಎನ್‌ಯು)ದಲ್ಲಿ ಮುಂದುವರೆದಂತೆ ತೋರುತ್ತಿದೆ. ರೋಹಿತನ ಆತ್ಮಹತ್ಯೆಯ ಕಳಂಕವನ್ನು ತೊಡೆದುಕೊಳ್ಳಲು ಸರ್ಕಾರ ಜೆಎನ್‌ಯುದಲ್ಲಿ ಗೊಂದಲ ಎಬ್ಬಿಸಿ ಈಗ ಇನ್ನಷ್ಟು ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಂತಿದೆ. ಕೋಮು ತಂಟೆಗಳ ಆರೋಪ, ಆರ್ಥಿಕ ಹಿಂಜರಿತ ಮತ್ತು ಪಠಾಣ್‌ಕೋಟೆ ದಾಳಿ ಸೃಷ್ಟಿಸಿದ ಮುಜುಗರಗಳ ಮಧ್ಯೆ ಈ ವಿವಾದ ಬಿಜೆಪಿ ಸರ್ಕಾರಕ್ಕೆ ಬೇಕಿರಲಿಲ್ಲ. ಆದರೆ ಏನು ಮಾಡಲಾಗುವುದು? ಸಂಘ ಪರಿವಾರದ ಹುಟ್ಟುಗುಣವೇ ಹಾಗೆ. ಅದೂ, ತನ್ನ ಆಯ್ಕೆಯ ವ್ಯಕ್ತಿಯೇ ದೇಶದ ಸೂತ್ರದಾರನಾಗಿರುವಾಗ ಅದು ಸುಮ್ಮನಿರಲು ಸಾಧ್ಯವೆ?! ಅದೀಗ ರಾಷ್ಟ್ರೀಯತೆಯ ಹೆಸರಿನಲ್ಲಿ ತನ್ನ ತಾತ್ವಿಕತೆಯನ್ನು ದೇಶಾದ್ಯಂತ ಬೇರೂರಿಸಲು ಹೊರಟಿದೆ.

ಅದರ ತಾತ್ವಿಕತೆ ಎಂದರೆ ಅದೇ ನಿರೂಪಿಸಿರುವ ಹಿಂದುತ್ವ. ಅದು ಮಾತೃಭೂಮಿಯ ಹೆಸರಿನಲ್ಲಿ ಏನೇ ಘೋಷಣೆಗಳನ್ನು ಕೂಗಲಿ, ಅದರ ಹಿಂದುತ್ವ ನಿಂತಿರುವುದು ಅದರ 'ಗುರೂಜಿ' ರಚಿಸಿಕೊಟ್ಟಿರುವ 'ಪಿತೃಭೂಮಿ'ಯ ಕಲ್ಪನೆಯ ಮೇಲೇ. ಹಾಗಾಗಿಯೇ ಅದು ಪೂರ್ಣ ಗಂಡು ತಾತ್ವಿಕತೆ. ಅದರ 'ಬಲಿಷ್ಠ ಭಾರತ'ದ ಕೂಗು ಹೊಮ್ಮಿರುವುದೂ ಅಲ್ಲಿಂದಲೇ. ಆದರೆ ಸಮಸ್ಯೆ ಎಂದರೆ ಈ ದೇಶದ ಜನಸಮೂಹದ ಪಾರಂಪರಿಕ ವಿವೇಕ ಈ ಗಂಡು ಹಿಂದುತ್ವವನ್ನು ಧಿಕ್ಕರಿಸುತ್ತಲೇ ಬಂದಿದೆ. ತಾಯ್ತನದ ಹೆಣ್ಣು ಹಿಂದುತ್ವದ ಧಾರೆಯೊಂದು ಇಂತಹ ಬಿಕ್ಕಟ್ಟುಗಳಲ್ಲೆಲ್ಲ ಈ ದೇಶವನ್ನು ಉಳಿಸುತ್ತಾ

ಬಂದಿದೆ. ಅದರ ಅಭಿವ್ಯಕ್ತಿ ನಮ್ಮ ಸಂತ ಪರಂಪರೆಯುದ್ದಕ್ಕೂ ಹರಿದು ಬಂದಿದೆ. ನಮ್ಮ ದೇಶದ ಸೂಫಿ ಪರಂಪರೆಯೂ ಸೇರಿದಂತೆ. ಇದನ್ನು 'ಶ್ರಮಣ ಪರಂಪರೆ' ಎಂದೂ ಕರೆಯಬಹುದು. ಅದು ಮುಖ್ಯವಾಗಿ ವೇದ ಪ್ರಾಮಾಣ್ಯವನ್ನೂ, ವರ್ಣಾಶ್ರಮ ಧರ್ಮವನ್ನೂ ನಿರಾಕರಿಸುತ್ತಾ ಬಂದಿದೆ. ಜೊತೆಗೆ ಆ ಗಂಡು ಪರಂಪರೆಗೂ ಒಂದಿಷ್ಟು ಹಾಲೂಡುತ್ತಾ ಅದನ್ನು ಪಳಗಿಸಲು ಯತ್ನಿಸುತ್ತಾ ಬಂದಿದೆ. ಧರ್ಮ ನಿರಪೇಕ್ಷತೆ ಎಂಬುದು ಆಧುನಿಕತೆಯ ಒಂದು ಸಂಕೇತವಾಗುತ್ತಿದ್ದ ಕಾಲದಲ್ಲೂ ತಾನೊಬ್ಬ ಹೆಮ್ಮೆಯ ಸನಾತನ ಹಿಂದೂ ಎಂದು ಘೋಷಿಸಿಕೊಳ್ಳಲು ಹಿಂಜರಿಯದ ಗಾಂಧಿ ಈ ಪರಂಪರೆಯ ಇತ್ತೀಚಿನ ಕೊಂಡಿ.

ಈ ಕೊಂಡಿಯನ್ನು ಕಳಚುವುದೇ ಸಂಘ ಪರಿವಾರದ ಜೀವನೋದ್ದೇಶವಾಗಿದೆ. ಈ ಪರಿವಾರದ ಪಿತೃ ಸಂಸ್ಥೆ ಹುಟ್ಟಿದ್ದೇ ಆ ಕಾರಣಕ್ಕಾಗಿ ಎಂಬುದು ಇತಿಹಾಸ ಬಲ್ಲವರೆಲ್ಲರಿಗೂ ಗೊತ್ತು. ಏಕೆಂದರೆ, ಇವರ ಹಿಂದುತ್ವ ಸನಾತನತೆಯನ್ನು ಒಪ್ಪುವುದಿಲ್ಲ. ಅದು ಪಶ್ಚಿಮದ ಅತ್ಯಂತ ವಿನಾಶಕಾರಿ ರಾಜಕೀಯ ಆವಿಷ್ಕಾರವೆಂದು ಗುರುತಿಸಲಾಗುವ 'ರಾಷ್ಟ್ರೀಯತೆ'ಯಲ್ಲಿ ತನ್ನನ್ನು ತಾನು ಪುನರಾವಿಷ್ಕರಿಸಿಕೊಂಡದ್ದು. ಅದು ಸನಾತನತೆಯನ್ನು ಧಿಕ್ಕರಿಸಿ ಆಧುನಿಕ ನಾಗರೀಕತೆಯ ಮೌಲ್ಯಗಳಲ್ಲಿ ಹದಗೊಂಡ ಹಿಂದುತ್ವ, ಹಾಗಾಗಿಯೇ ಅದು ಗಂಡು ಹಿಂದುತ್ವ, ನಾಸ್ತಿಕ ಸಾವರ್ಕರ್ ಪ್ರತಿಪಾದಿಸಿದ ಹಿಂದುತ್ವ. ಈ ಹಿಂದುತ್ವ ತನ್ನ ದೈವವನ್ನು ಕಂಡುಕೊಂಡದ್ದು 'ಭಾರತ ಮಾತೆ'ಯ ಕಲ್ಪನೆಯಲ್ಲಿ. ಹಾಗಾಗಿಯೇ ಅವರಿಗೆ ಮಿಕ್ಕೆಲ್ಲ ಘೋಷಣೆಗಳಿಗಿಂತ 'ಭಾರತ್ ಮಾತಾಕಿ ಜೈ' ಹೆಚ್ಚು ಪ್ರಿಯ.

ಆದರೆ ಗಾಂಧಿ ನೋಡಿ. ಅವರು ಯಾವಾಗಲೂ ಭಗವಂತನ ಸ್ಮರಣೆಯಲ್ಲೇ ಇರುತ್ತಿದ್ದರು. ಪ್ರಾರ್ಥನೆ ಅವರ ಶಕ್ತಿ ಸಂಚಯದ ಸಾಧನವಾಗಿತ್ತು. ಎಂದೂ ಪೂಜೆ ಮಾಡಿದವರಲ್ಲ; ಪೂಜಾ ಸ್ಥಳಗಳಿಗೆ ಹೋದವರಲ್ಲ. 'ನನಗೆ ಎಂದಾದರೂ ಧರ್ಮ ಮತ್ತು ನೈತಿಕತೆಗಳ ನಡುವೆ ಆಯ್ಕೆ ಮಾಡಿಕೊಳ್ಳಲೇಬೇಕಾಗಿ ಬಂದರೆ ನಾನು ನೈತಿಕತೆಯನ್ನೇ ಆಯ್ಕೆ ಮಾಡಿಕೊಂಡೇನು' ಎಂದು ಧರ್ಮ ಪಂಡಿತರಿಗೆ ಹೇಳಿದ ಧೀಮಂತ. ಗಾಂಧಿ ಪ್ರಕಾರ ನೈತಿಕತೆ ಎಂದರೆ ನೆರೆಹೊರೆಯನ್ನು ಕುರಿತ ತನ್ನ ಕರ್ತವ್ಯ. ಹಾಗಾಗಿಯೇ ಅವರು ಅಸ್ಪೃಶ್ಯತೆಯನ್ನು 'ಪಾಪ' ಎಂದು ಕರೆದರು. ನಮ್ಮ ಧರ್ಮ ಶಾಸ್ತ್ರಗಳಲ್ಲಿ ಅಸ್ಪೃಶ್ಯತೆಗೆ ಮಾನ್ಯತೆ ಇದ್ದರೆ ಆ ಧರ್ಮಶಾಸ್ತ್ರಗಳ ಗೊಡವೆಯೇ ನನಗೆ ಬೇಡ ಎಂದು ಘೋಷಿಸಿದರು. ಮೊದಮೊದಲು ಜಾತಿ ಪದ್ಧತಿಯನ್ನು, ಅದು ಕಸಬುಗಳ ಕುಶಲತೆಗಳನ್ನು ರಕ್ಷಿಸುತ್ತದೆ ಎಂಬ ನಂಬಿಕೆಯಲ್ಲಿ ಮಾನ್ಯ ಮಾಡುತ್ತಿದ್ದರಾದರೂ, ಅದರಲ್ಲಿ ಅಂತರ್ಗತವಾಗಿದ್ದ ಶ್ರೇಣೀಕರಣವನ್ನು ಮನಗಾಣುತ್ತಿರುವಂತೆಯೇ ಅವರು ಅದರಲ್ಲಿನ ನಂಬಿಕೆಯನ್ನು ಕೈಬಿಟ್ಟರು. ಆದರೆ ನೋಡಿ, ಇಂದು ಸಂಘ ಪರಿವಾರದ ಹಿಂಸೆಗೆ ಗುರಿಯಾಗುತ್ತಿರುವವರಾದರೂ ಯಾರು? ಅಲ್ಪ ಸಂಖ್ಯಾತರು, ದಲಿತರು, ಕೆಳ ಜಾತಿಗಳ ವಿದ್ಯಾರ್ಥಿಗಳು. ಇದೇನೂ ಆಕಸ್ಮಿಕವಿರಲಾರದು. ಅದೇನೇ ಇರಲಿ,

ಇದೆಲ್ಲದರ ಮಧ್ಯೆ ಮುಖ್ಯವಾಗಿ ನಾವು ಗಮನಿಸಬೇಕಾದದ್ದು, ಆಧುನಿಕ ನಾಗರೀಕತೆಯನ್ನು ಅದರೆಲ್ಲ ಆಳಗಳಲ್ಲಿ ಚರ್ಚಿಸುವ ಅವರ ಬೀಜ ಕೃತಿ 'ಹಿಂದ್ ಸ್ವರಾಜ್'ನ ಕೊನೆಯಲ್ಲಿ ಪ್ರಶ್ನೆಕಾರ 'ಈಗ ರಾಷ್ಟ್ರಕ್ಕೆ ನೀವೇನು ಹೇಳಬಯಸುವಿರಿ?' ಎಂದು ಕೇಳಿದಾಗ ಗಾಂಧಿ ಕೇಳಿದ ಮರುಪ್ರಶ್ನೆ : 'ರಾಷ್ಟ್ರ? ಹಾಗೆಂದರೇನು?'

ಗಾಂಧಿಗೆ ಆಧುನಿಕ ನಾಗರೀಕತೆಯ ತವರಾದ ಯೂರೋಪ್‌ನಲ್ಲಿ 'ರಾಷ್ಟ್ರ ಪ್ರಭುತ್ವ' ಮತ್ತು ಅದನ್ನು ಪೋಷಿಸುವ 'ರಾಷ್ಟ್ರೀಯತೆ' ಎಂಬ ಕಲ್ಪನೆ ಮಾಡಿದ ಅನಾಹುತಗಳು, ಹುಟ್ಟಿಸಿದ ಯುದ್ಧಗಳು ಹರಿಸಿದ ರಕ್ತದ ಕೋಡಿಯ ಅರಿವಿತ್ತು. ಹಾಗಾಗಿ ಅವರ ಮನಸ್ಸಿನಲ್ಲಿದ್ದುದು ಭಾರತವೆಂಬ ಜಟಿಲ ಆಡಳಿತ ಜಾಲದಲ್ಲಿ ಪ್ರಜೆಯೇ ಕಳೆದುಹೋಗುವ 'ರಾಷ್ಟ್ರ'ವಲ್ಲ; ಬದಲಿಗೆ ಪ್ರತಿ ಪ್ರಜೆಯೂ ತನ್ನನ್ನು ತಾನೇ ಆಳಿಕೊಳ್ಳಲು ಸಾಧ್ಯವಿರುವ ಸಣ್ಣ ಆಡಳಿತ ಘಟಕಗಳ ಒಕ್ಕೂಟ ರೂಪದ 'ಸ್ವ–ರಾಜ್ಯ'. ಅಲ್ಲಿ ಪ್ರಜೆತನದ ಬಂಧನಗಳು ಕಡಿಮೆ. ಅವನ ಮನುಷ್ಯತನದ ಸಹಜ ಹುಟ್ಟು ಹಕ್ಕುಗಳಿಗೆ ಹೆಚ್ಚು ಮಾನ್ಯತೆ. ಆದರೆ ಗಾಂಧಿಯನ್ನು ಸನಾತನಿಯೆಂದು ಕರೆದ ಆಧುನಿಕತೆಯ ಸೇನಾನಿಗಳು ಅವರನ್ನು ನಿರ್ಲಕ್ಷಿಸಿ ಆಧುನಿಕ 'ರಾಷ್ಟ್ರ'ವನ್ನೇ ಕಟ್ಟಿದರು. ಆದರೂ ಗಾಂಧಿಯನ್ನು ಪೂರ್ಣ ನಿರ್ಲಕ್ಷಿಸಲಾಗದೆ ಉದಾರವಾದಿ ರಾಜ್ಯಾಂಗದ ಮೂಲಕ ರಾಷ್ಟ್ರ ಕಲ್ಪನೆಯ ಅಂತರ್ಗತ ಅಪಾಯಗಳಿಂದ ಅದನ್ನು ರಕ್ಷಿಸಿದರು.

ಅಂದರೆ ರಾಷ್ಟ್ರವೆಂಬುದು ನಾವು ನಮ್ಮ ಅನುಕೂಲಕ್ಕಾಗಿ ಮಾಡಿಕೊಳ್ಳುತ್ತಿರುವ ರಚನೆ ಮಾತ್ರವಲ್ಲ; ಅದೊಂದು ಪ್ರಕ್ರಿಯೆ ಎಂಬ ಅರಿವು ಇದು. ಅಂದರೆ ರಾಷ್ಟ್ರ ಉಸಿರುಗಟ್ಟಿಸುವಂತಾದಾಗ ಅದನ್ನು ಪ್ರತಿಭಟಿಸುವ, ಅದನ್ನು ಪರಾಮರ್ಶಿಸುವ, ಚರ್ಚೆಯ ಮೂಲಕ ಅದನ್ನು ಪರಿಹರಿಸಿಕೊಳ್ಳುವ ಹಕ್ಕು ಪ್ರಜೆಗೆ ಇದ್ದೇ ಇರುತ್ತದೆ. ಅದು ಪ್ರಸ್ತುತ ರಾಷ್ಟ್ರ ರಚನೆಯ–ನ್ಯಾಯಾಂಗವೂ ಸೇರಿದಂತೆ ಅದರ ವಿವಿಧ ಅಂಗಗಳ ಕಾರ್ಯಶೈಲಿಗಳೂ ಸೇರಿದಂತೆ–ಸ್ವರೂಪವನ್ನು ಪ್ರಶ್ನಿಸಿದರೂ ಕೂಡ. ಅದು ಕಾಶ್ಮೀರಕ್ಕೆ ಸಂಬಂಧಿಸಿದ್ದಾಗಿರಬಹುದು; ಛತ್ತೀಸ್‌ಘಡದ ಆದಿವಾಸಿಗಳಿಗೇ ಸಂಬಂಧಿಸಿರಬಹುದು; ಕರ್ನಾಟಕಕ್ಕೇ ಸಂಬಂಧಿಸಿದ್ದೇ ಆಗಿರಬಹುದು. ಆದರೆ ಈ ಪ್ರಶ್ನೆ–ಪರಾಮರ್ಶೆ–ಚರ್ಚೆ ಹಿಂಸೆಗೆ ನೇರ ಪ್ರಚೋದನೆ ನೀಡುವಂತಿರಬಾರದಷ್ಟೆ ಇಲ್ಲದೇ ಹೋದಲ್ಲಿ ಪರಪ್ರಭುತ್ವದಿಂದ ಸ್ವಾತಂತ್ರ್ಯ ಪಡೆದುದರ ಅರ್ಥವಾದರೂ ಏನು? ಆದರೆ ಇದೆಲ್ಲ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದ ಸಂಘ ಪರಿವಾರಕ್ಕೆ ಅರ್ಥವಾಗಲಾರದು. ವಾಸ್ತವದ ಸಂಗತಿ ಎಂದರೆ, ಅದರ ಸದ್ಯದ ಉದ್ದೇಶವೇ ಸ್ವಾತಂತ್ರ್ಯ ಹೋರಾಟದ ನೆನಪುಗಳನ್ನು ಮತ್ತು ಅದು ಕಟ್ಟಿಕೊಟ್ಟ ಮೌಲ್ಯಗಳನ್ನು, ಗುಡಿಸಿ ಹಾಕುವುದೇ ಆಗಿದೆ. ಮೊನ್ನೆ ಸಂಘ ಪರಿವಾರದ ಬೆಂಬಲಿಗ ಉದ್ಯಮಿಯೊಬ್ಬರು ಟಿವಿಯಲ್ಲಿ ನಾಥೂರಾಂ ಗೋಡ್ಸೆಯ ಜನ್ಮದಿನಾಚರಣೆಯನ್ನು ಸಮರ್ಥಿಸುವಂತೆ ಹೇಳಿದ್ದನ್ನು ನೀವು ಕೇಳಿರಬಹುದು: 'ನಾಥೂರಾಂ ಕೊಲೆಗಾರನಷ್ಟೆ; ದೇಶದ್ರೋಹಿಯಲ್ಲ!'

ಇಂತಹ ವಿಕ್ಷಿಪ್ತ ಮಾನಸಿಕತೆಯ, ದೇಶ ಕಲ್ಪನೆಯ ಜನಕ್ಕೆ ಜೆಎನ್‌ಯುನಲ್ಲಿ ಒಂದು ಸಣ್ಣ ವಿದ್ಯಾರ್ಥಿ ಗುಂಪು ನಡೆಸಿದ; ಆದರೆ ಈವರೆಗೆ ಸ್ಪಷ್ಟ ವಿವರಗಳು ಗೊತ್ತಿಲ್ಲದ ಅಫ್ಜಲ್‌ಗುರು ಸ್ಮರಣೆಯ ಕಾರ್ಯಕ್ರಮದ ನೆಪವೇ ಸಾಕಾಯಿತು; ಈ ಕಾರ್ಯಕ್ರಮಕ್ಕೆ ಸಂಬಂಧವೇ ಇರದ, ಆ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ನಯ್ಯ ಕುಮಾರ್‌ನ ಮೇಲೆ ಒಂದು ನಕಲಿ ವಿಡಿಯೋಸಾಕ್ಷ್ಯದ ಆಧಾರದ ಮೇಲೆ ದೆಹಲಿಯ ತನ್ನ ಚೇಲಾ ಪೋಲೀಸ್ ಅಧಿಕಾರಿಯ ಸಹಕಾರದೊಡನೆ ದೇಶದ್ರೋಹದ ಆರೋಪ ಹೊರಿಸಿ ಜೈಲಿಗೆ ತಳ್ಳಲು; ತಳ್ಳುವ ಮುನ್ನ ದೇಶದ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನೂ ಲೆಕ್ಕಿಸದೆ ವಕೀಲರೆಂಬ ಗೂಂಡಾಗಳಿಂದ ಆತನ ಮತ್ತು ಮಾಧ್ಯಮದವರ ಮೇಲೆ ಪದೇ ಪದೇ ದಾರುಣ ಹಲ್ಲೆ ನಡೆಸಲು. ಇದೆಲ್ಲವನ್ನೂ ವಿಶ್ವವಿದ್ಯಾಯಲದಲ್ಲಿ ರಾಷ್ಟ್ರ ವಿರೋಧಿ ಘೋಷಣೆಗಳನ್ನು ಕೂಗಲಾಯಿತು ಎಂಬ ಇದೇ 'ಪೋಲೀಸ್ ವರದಿ'ಯ ಆಧಾರದ ಮೇಲೇ ಸಮರ್ಥಿಸಿಕೊಳ್ಳುತ್ತಿರುವ ಬಿಜೆಪಿ ಸರ್ಕಾರದ ವಕ್ತಾರರಿಗೆ ದೇಶದಲ್ಲಿ ನ್ಯಾಯಾಂಗ ವ್ಯವಸ್ಥೆ ಎಂಬುದೊಂದಿದೆ ಮತ್ತು ಇಂತಹುದೇ ರಾಷ್ಟ್ರವಿರೋಧಿ ಘೋಷಣೆಗಳನ್ನು ಕೂಗುವ ಕಾರ್ಯಕರ್ತರುಳ್ಳ ಪಕ್ಷವೊಂದರ ಜೊತೆಗೆ ಜಮ್ಮು-ಕಾಶ್ಮೀರದಲ್ಲಿ ತಮ್ಮ ಪಕ್ಷ ತಾನಾಗಿ ಮುಂದಾಗಿ ಸರ್ಕಾರ ರಚಿಸಿಕೊಂಡಿದೆ ಎಂಬ ಪರಿವೆಯೇ ಇದ್ದಂತಿಲ್ಲ. ಇದು ಪರಮ ನಿರ್ಲಜ್ಜ ರಾಷ್ಟ್ರೀಯತೆ.

ಇದರ ಹಿಂದಿರುವ ಮುಖ್ಯ ಉದ್ದೇಶ, ಆ ವಿಶ್ವವಿದ್ಯಾಲಯದಲ್ಲಿ ಇನ್ನೂ ನೆಲೆ ಕಂಡುಕೊಳ್ಳಲಾಗದ ಸಂಘ ಪರಿವಾರದ ವಿದ್ಯಾರ್ಥಿ ಶಾಖೆಯಾದ ಎಬಿವಿಪಿಗೆ ಅಲ್ಲಿ ನೆಲೆ ಒದಗಿಸಿ, ವಿಶ್ವವಿದ್ಯಾಲಯದ ಎಡಪಂಥೀಯ ಸ್ವರೂಪವನ್ನು ನಾಶ ಮಾಡುವುದು. ಹೌದು ಸ್ಪರ್ಧಾತ್ಮಕವಾಗಿ ತಮ್ಮ ತಾತ್ವಿಕತೆಯನ್ನು ಬೆಳೆಸುವ ಹಕ್ಕು ಸಂಘ ಪರಿವಾರಕ್ಕೆ ಇದೆ. ಆದರೆ ರಾಜಕೀಯ ಪಿತೂರಿ ಮತ್ತು ಭಯೋತ್ಪಾದನೆಯ ಮೂಲಕ ಅಲ್ಲ. ಇಂತಹ ತಂತ್ರಗಳನ್ನು ಅದು ಮುಂದುವರೆಸಿದರೆ ಅಂತಿಮವಾಗಿ ಸ್ವತಃ ಅದೇ ರಾಷ್ಟ್ರದ್ರೋಹದ ಆಪಾದನೆಗೆ ಒಳಗಾಗಬೇಕಾಗುತ್ತದೆ.

ಇದನ್ನೆಲ್ಲ ರಾಷ್ಟ್ರಮಟ್ಟದಲ್ಲಿ ಈ ಸಂಘ ಪರಿವಾರದವರಿಗೆ ಪರಿಣಾಮಕಾರಿಯಾಗಿ ಹೇಳುವ ನೈತಿಕ ಸ್ಥೈರ್ಯವಿರುವ ಜೀವಗಳೇ ಇಂದು ಕಾಣೆಯಾಗಿವೆ. ಏಕೆಂದರೆ ಇಂದು ಎಲ್ಲರೂ ಧರ್ಮನಿರಪೇಕ್ಷತೆಯ ದೀಕ್ಷೆ ಪಡೆದವರೇ. ಗಾಂಧಿ ಸಂಕೇತಿಸುತ್ತಿದ್ದ ಹೆಣ್ಣು ಹಿಂದುತ್ವದ ಪರಂಪರೆಗೆ ವಾರಸುದಾರಿಕೆಯೇ ಇಲ್ಲವಾಗಿದೆ. ಗಾಂಧಿಯ ವಾರಸುದಾರಿಕೆಯನ್ನು ಹೇಳಿಕೊಳ್ಳುವ ಕಾಂಗ್ರೆಸ್ ಭ್ರಷ್ಟಗೊಂಡು ಬೇರೆಯೇ ಗಾಂಧಿಗಳ ವಾರಸುದಾರಿಕೆಯನ್ನು ಕಂಡುಕೊಂಡು ತನ್ನ ವಿಶ್ವಾಸಾರ್ಹತೆ ಕಳೆದುಕೊಂಡಿದೆ. ದಾರಿ ಕಷ್ಟವಿದೆ...

ಏಪ್ರಿಲ್, ೨೦೧೬

ಅವರು ಬದಲಾಗಲು, ಮೊದಲು ನಾವು ಬದಲಾಗಬೇಕು

ಪ್ರಿಯ ಓದುಗರೇ,

ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ರಾಷ್ಟ್ರದ ರಾಜಕಾರಣ ಕಾವೇರುತ್ತಿದೆ. ಮೋದಿಯವರು ಪ್ರಧಾನಿ ಆದ ಮೇಲೆ ಈ ಕಾವು ಸದಾ ಇದ್ದೇ ಇದೆಯಾದರೂ ಈಗ ಚುನಾವಣೆಗಳು ಘೋಷಣೆಯಾಗಿರುವ ಐದು ರಾಜ್ಯಗಳಲ್ಲಿ– ಕೇರಳ, ತಮಿಳ್ನಾಡು, ಪುದುಚೇರಿ, ಪ.ಬಂಗಾಲ ಮತ್ತು ಅಸ್ಸಾಂ– ಬಿಜೆಪಿಯ ಬಲ ನಗಣ್ಯವಾಗಿರುವ ಹಿನ್ನೆಲೆಯಲ್ಲಿ ಕಾವು ವಿಶೇಷ ತೀವ್ರತೆ ಪಡೆಯುತ್ತಿದೆ. ಆ ಪಕ್ಷ ನಿಜವಾದ ಅರ್ಥದಲ್ಲಿ–ಒಟ್ಟು ಬಲದಲ್ಲಿ ಮಾತ್ರವಲ್ಲದೆ ಭೌಗಳಿಕವಾಗಿಯೂ–ಅಖಿಲ ಭಾರತ ಸ್ವರೂಪವನ್ನು ಪಡೆಯುವ ಹವಣಿಕೆಯಲ್ಲಿದೆ. ಹಾಗಾಗಿಯೇ ಅದು ಬಲ್ಲವರ ಮತ್ತು ಹಿರಿಯರ ಯಾವ ಮಾತುಗಳನ್ನೂ ಕಿವಿಗೆ ಹಾಕಿಕೊಳ್ಳದೆ 'ರಾಷ್ಟ್ರೀಯತೆ'ಯ ಚರ್ಚೆಯನ್ನು ಒಂದು ವಿವಾದವಾಗಿಯೇ ಜೀವಂತವಿಡುವ ಹಠ ತೊಟ್ಟಂತೆ ಕಾಣುತ್ತದೆ. ಈಗಲೂ, ಯಾವ ವಿಶ್ವಾಸಾರ್ಹ ಸಾಕ್ಷ್ಯವೂ ಇಲ್ಲದೆ ಜೆಎನ್‌ಯುನಲ್ಲಿ ವಿದ್ಯಾರ್ಥಿಗಳು ರಾಷ್ಟ್ರವಿರೋಧಿ ಘೋಷಣೆಗಳನ್ನು ಕೂಗಿದರು ಎಂದು ವಾದಿಸುತ್ತಲೇ ಇದೆ. ಅಂತಹ ಘೋಷಣೆಗಳನ್ನು ಕೂಗಿದವರೆಂದು ಹೇಳಲಾಗುವ ಮುಸುಕುಧಾರಿಗಳನ್ನು ಗುರುತಿಸಲಾಗಿದೆ ಎಂದು ಅದು ಹೇಳುತ್ತಿದೆಯಾದರೂ, ಅವರ ಹಿನ್ನೆಲೆಗಳನ್ನು ಮಾತ್ರ ಬಹಿರಂಗಪಡಿಸುತ್ತಿಲ್ಲ, ಏಕೆ?

ಇದೆಲ್ಲದರ ಜೊತೆಗೆ ಈಗ 'ಭಾರತ್ ಮಾತಾಕಿ ಜೈ' ಘೋಷಣೆಯ ಸುತ್ತ ಒಂದು ವಿವಾದ ಸೃಷ್ಟಿಸಿರುವ ಸಂಘ ಪರಿವಾರವು, ತನ್ನ ನಿರ್ದೇಶನದ ಮೇರೆಗೆ ಆ ಘೋಷಣೆಯನ್ನು ಕೂಗದಿರುವುದನ್ನು ರಾಷ್ಟ್ರವಿರೋಧಿ ಎಂದು ಕರೆದು ಮಾಧ್ಯಮಗಳಲ್ಲಿ

ರಂಪ ಎಬ್ಬಿಸಿದೆ. ರಾಷ್ಟ್ರದ ಜನ ಯಾರ ನಿರ್ದೇಶನವೂ ಇಲ್ಲದೆ, ಅಗತ್ಯ ಸಂದರ್ಭಗಳಲ್ಲಿ ಈ ಘೋಷಣೆಯನ್ನು ಕೂಗುತ್ತಲೇ ಬಂದಿದ್ದಾರೆ. ಆದರೆ ಗುರಿಯಿಟ್ಟು ಕೆಲ ಮುಸ್ಲಿಂ ಶಾಸಕರ ಬಾಯಿಂದ ಈ ಘೋಷಣೆ ಕೂಗಿಸಲು ಯತ್ನಿಸಿ ಅದನ್ನು ಅವರ ರಾಷ್ಟ್ರೀಯತೆಯ ಅಗ್ನಿ ಪರೀಕ್ಷೆ ಎಂಬಂತೆ ಬಿಂಬಿಸಿ ತನ್ನ ಚುನಾವಣಾ ಆಟವನ್ನು ಶುರುವಿಟ್ಟುಕೊಂಡಿದೆ. ಕಾಂಗ್ರೆಸ್ ಕೂಡ ಈ ಅಪಾಯಕಾರಿ ಆಟದಲ್ಲಿ ಬಿಜೆಪಿಯೊಂದಿಗೆ ಸೇರಿಕೊಂಡಿರುವುದು ಇಂದು ಅದರ ನೈತಿಕ ಸ್ಥೈರ್ಯ ಎಷ್ಟು ಕುಗ್ಗಿಹೋಗಿದೆ ಎಂಬುದರ ಸೂಚನೆಯಾಗಿದೆ. ಇನ್ನು ಆ ಕೆಲ ಮುಸ್ಲಿಂ ಶಾಸಕರೋ ಶುದ್ಧ ಮೂರ್ಖರಂತೆ ವರ್ತಿಸುತ್ತಾ, ಸಂಘ ಪರಿವಾರವೆಂಬುದು ಮೂಡುವ ಮುನ್ನವೇ ಹುಟ್ಟಿದ ಈ ಘೋಷಣೆಯ ವಾರಸುದಾರಿಕೆಯನ್ನು ಅದಕ್ಕೆ ನೀಡಿ, ಈ ತಮ್ಮ ಇತಿಹಾಸದ ಅಜ್ಞಾನದ ಆಧಾರದ ಮೇಲೆ ಆ ಘೋಷಣೆಯನ್ನು ಕೂಗಲು ನಿರಾಕರಿಸುತ್ತಿದ್ದಾರೆ. ಇದರಿಂದಾಗಿ ಎಂದೂ ವಿವಾದಾಸ್ಪದವಾಗದಿದ್ದ ನಮ್ಮ ರಾಷ್ಟ್ರೀಯತೆ ಎಂಬುದು ಇಂದು ಮಾಧ್ಯಮಗಳಲ್ಲಿ ದೊಡ್ಡ ವಿವಾದದ ವಿಷಯವಾಗಿ ಪರಿಣಮಿಸಿ ಬಿಡುವಿಲ್ಲದ ಜನರ ಮಧ್ಯೆ ಎಲ್ಲ ರೀತಿಯ ಸುಲಭದ ಚರ್ಚೆಯ ವಸ್ತುವಾಗಿದೆ.

ಸಂಘ ಪರಿವಾರಕ್ಕೆ ಬೇಕಾದುದೂ ಇದೇ. ಮಿಕ್ಕ ಪಕ್ಷಗಳಿಗೆ ಹೋಲಿಸಿದರೆ ಬದ್ಧ ಕಾರ್ಯಕರ್ತರ ಒಂದು ಅಸಾಧಾರಾಣ ಮತ್ತು ಸಂಕೀರ್ಣ ಜಾಲವನ್ನು ಹೊಂದಿರುವ ಅದು ಇಂತಹ ಚರ್ಚೆಯನ್ನು ತನ್ನ ಪರವಾಗಿ ತಿರುಗಿಸಿಕೊಳ್ಳಬಲ್ಲುದಾಗಿದೆ. ಜೆಎನ್‌ಯು ವಿದ್ಯಾರ್ಥಿ ನಾಯಕ ಕನ್ನಯ್ಯಕುಮಾರ್‌ಗೆ ದೆಹಲಿ ಶ್ರೇಷ್ಠ ನ್ಯಾಯಾಲಯದ ಮಹಿಳಾ ನ್ಯಾಯಮೂರ್ತಿಯೊಬ್ಬರು ಷರತ್ತುಬದ್ಧ ಜಾಮೀನು ನೀಡಿದ ತೀರ್ಪಿಗೆ ಹಳೇ ಹಿಂದಿ ಸಿನಿಮಾವೊಂದರ ಜನಪ್ರಿಯ ದೇಶಪ್ರೇಮ ಗೀತೆಯೊಂದು ಸ್ಫೂರ್ತಿಯಾದದ್ದರ ಬಗ್ಗೆ ನಮ್ಮ ಮಾಧ್ಯಮಗಳು ವ್ಯಾಪಕವಾಗಿ ಚರ್ಚಿಸಿದ್ದೂ ಇದೇ ಹಿನ್ನೆಲೆಯಲ್ಲೇ. ವಿಜಯ ಮಲ್ಯನಂತಹ ತಿಮಿಂಗಿಲ ದೇಶಬಿಟ್ಟು ಹೋಗಲು ಅವಕಾಶ ನೀಡಿದ್ದು ರಾಷ್ಟ್ರವಿರೋಧಿಯಾಗದೆ ಒಂದು ಘೋಷಣೆ ಕೂಗದಿರುವುದು ರಾಷ್ಟ್ರವಿರೋಧಿ ಕೃತ್ಯವಾಗಿ ಬಿಂಬಿತವಾಗುವಂತೆ ಮಾಡುತ್ತಿರುವ ಇಂದಿನ ಒಟ್ಟಾರೆ ರಾಜಕೀಯ ಪರಿಸ್ಥಿತಿಯೇ ಜಿಗುಪ್ಸೆ ತರುವಂತಿದೆ.

ಅದೇನೇ ಇರಲಿ, ಇಂದು ಮಾಧ್ಯಮಗಳು ತಮ್ಮ ೨೪X೭ ಚರ್ಚೆಗಳಿಗೆ ವಸ್ತುಗಳ ಕೊರತೆಯನ್ನೆದುರಿಸುತ್ತಾ ಕನ್ನಯ್ಯಕುಮಾರ್‌ನನ್ನು ಓರ್ವ ರಾಷ್ಟ್ರೀಯ ಹೀರೋನನ್ನಾಗಿ ಮಾಡಹೊರಟಿರುವುದು ತಮಾಷೆಯಾಗಿ ಕಾಣುತ್ತಿದೆ. ಮಾಧ್ಯಮಗಳ ಸುದ್ದಿ ಹಸಿವನ್ನು ನೀಗಿಸುವಂತಹ 'ಬೇಡಿಕೆ'ಗಳಿಗೆ ಸೊಪ್ಪುಹಾಕದ ಎನ್.ಡಿ.ಎ. ಸರ್ಕಾರದ ವಿರುದ್ಧ ಸೇಡು ತೀರಿಸಿಕೊಳ್ಳಲೋ ಎಂಬಂತೆ ಈ ಮಾಧ್ಯಮಗಳು ಈ ಕನ್ನಯ್ಯಕುಮಾರ್‌ನನ್ನು ಸರ್ಕಾರದ ವಿರುದ್ಧದ ತನ್ನ ದನಿಯನ್ನಾಗಿ ಮಾಡಿಕೊಳ್ಳಲೆತ್ನಿಸುತ್ತಿರುವಂತಿದೆ. ಮಾತಿನಲ್ಲಿ ರಾಹುಲ್ ಗಾಂಧಿಯವರಿಗಿಂತ ಹೆಚ್ಚು ಪರಿಣಾಮಕಾರಿಯಾಗಿರುವಂತೆ ತೋರುವ ಈ ಯುವಕ ಪಡೆಯುತ್ತಿರುವ ಮಹತ್ವ ನಮ್ಮ ಎಲ್ಲ ವಿರೋಧ ಪಕ್ಷಗಳ ನಾಯಕತ್ವಗಳೂ

ಮುಟ್ಟಿರುವ ಅಧೋಗತಿಯನ್ನು ಸೂಚಿಸುತ್ತಿರುವಂತಿದೆ. ಅಷ್ಟೇ ಅಲ್ಲ, ಇದು ರಾಷ್ಟ್ರೀಯವೆಂದು ಕರೆದುಕೊಳ್ಳುವ ನಮ್ಮ ವಿದ್ಯುನ್ಮಾನ ಮಾಧ್ಯಮಗಳ ಬೌದ್ಧಿಕ ಅಧೋಗತಿಯ ಸೂಚನೆಯೂ ಇರಬಹುದು. ಹಾಗಾಗಿಯೇ ಆತ ಹೋದ ಕಡೆಯಲ್ಲೆಲ್ಲ ಈ ಮಾಧ್ಯಮಗಳು ಹಿಂಬಾಲಿಸುತ್ತಿವೆ.

ಕಮ್ಯುನಿಸ್ಟ್ ರಾಜಕಾರಣದ ದ್ವಂದ್ವಗಳು

ಮುದ್ದುಮುಖದ ಈ ಕನ್ನಯ್ಯಕುಮಾರ್ ಆದರೂ ಯಾರು? ಆತ ದೇಶದಲ್ಲಿರುವ ನೂರಾರು ವಿಶ್ವವಿದ್ಯಾಲಯಗಳ ಪೈಕಿ ಒಂದು ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ನಾಯಕ. ಆದೂ, ರಾಷ್ಟ್ರದಲ್ಲೆಲ್ಲೂ ಅಷ್ಟಾಗಿ ಪ್ರಭಾವವಿಲ್ಲದ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್‌ನ (ಭಾರತದ ಕಮ್ಯೂನಿಸ್ಟ್ ಪಕ್ಷದ ವಿದ್ಯಾರ್ಥಿ ಶಾಖೆ) ಸದಸ್ಯ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ವಿದ್ಯಾರ್ಥಿ ಶಾಖೆಯಾದ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ಪ್ರಬಲ ನೆಲೆಯಾದ ಜೆಎನ್‌ಯುನಲ್ಲಿ ಈತ ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿ ಆಯ್ಕೆಯಾಗಿದ್ದಾನೆಂದರೆ ಅದಕ್ಕೆ ಬಹುಶಃ ಕಾರಣ ಆತ ಚುರುಕಾದ ಮಾತುಗಾರನಾಗಿರುವುದೇ ಆಗಿರಬಹುದು. ಆದರೆ ಈತ ಮಾಧ್ಯಮಗಳನ್ನು ಮೆಚ್ಚಿಸುವ ಎಷ್ಟೇ ಚುರುಕಾದ ಮಾತುಗಳನ್ನಾಡಿದರೂ, ಯಾವಾಗಲೂ ಸತ್ಯವನ್ನೇ ಹೇಳುತ್ತಾನೆಂತಲ್ಲ.

ಮೊದಲಾಗಿ ಫೆಬ್ರುವರಿ ೯ರಂದು ಜೆಎನ್‌ಯುನಲ್ಲಿ ಕೆಲವರು ಸಾಂಸ್ಕೃತಿಕ ಕಾರ್ಯಕ್ರಮವೆಂದು ಅಧಿಕಾರವರ್ಗದ ದಿಕ್ಕು ತಪ್ಪಿಸಿ ನಡೆಸಿದ ಅಫ್ಜಲ್ ಗುರು ಸ್ಮರಣ ದಿನಾಚರಣೆಯಲ್ಲಿನ ಈತನ ಪಾತ್ರವೇನಾಗಿತ್ತು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಹಾಗೇ ಈ ಹುಡುಗ ಸಂಘ ಪರಿವಾರವು ನಮ್ಮ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸದೆ ಬ್ರಿಟಿಷರ ಪರವಾಗಿತ್ತು ಎನ್ನುತ್ತಾ, ತಮ್ಮ ಕಮ್ಯೂನಿಸ್ಟ್ ಪಕ್ಷ ಮಾತ್ರ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿತ್ತು ಎಂದು ಹೇಳುವ ಮಾತನ್ನು ಇತಿಹಾಸ ಬಲ್ಲವರು ಒಪ್ಪುವುದು ಕಷ್ಟ. ರಾಷ್ಟ್ರೀಯ ಹೋರಾಟವನ್ನು ಬೂರ್ಜ್ವಾ ಹೋರಾಟವೆಂದೂ, ಗಾಂಧಿಯೂ ಸೇರಿದಂತೆ ಅದರ ನಾಯಕರನ್ನು ಬಂಡವಾಳಶಾಹಿ ಮತ್ತು ಜಮೀನ್ದಾರಿ ವರ್ಗಗಳ ಪ್ರತಿನಿಧಿಗಳೆಂದೂ ವರ್ಣಿಸಿದ್ದ ಕಮ್ಯೂನಿಸ್ಟ್ ಪಕ್ಷ ಆಗ ವರ್ತಿಸುತ್ತಿದ್ದುದು ತನ್ನ ಜಾಗತಿಕ ನಾಯಕರ ಕೈಗೊಂಬೆಯಾಗಿ. ಒಮ್ಮೆ ರಾಷ್ಟ್ರೀಯ ಹೋರಾಟಕ್ಕೆ ಬೆಂಬಲವಾಗಿಯೂ, ಮತ್ತೊಮ್ಮೆ ಅದಕ್ಕೆ ವಿರುದ್ಧವಾಗಿಯೂ ಕಾರ್ಯಾಚರಣೆ ನಡೆಸುತ್ತಿದ್ದ ಈ ಪಕ್ಷ ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ ಬ್ರಿಟಿಷರ ಏಜೆಂಟರಂತೆ ವರ್ತಿಸುತ್ತಾ ಬ್ರಿಟಿಷ್ ಪ್ರಭುತ್ವದ ವಿರುದ್ಧ ಭೂಗತ ಹೋರಾಟ ನಡೆಸಿದ್ದ ಸ್ವಾತಂತ್ರ್ಯ ಹೋರಾಟಗಾರರ ಬಂಧನಕ್ಕೆ ನೆರವಾದದ್ದು ಮಾತ್ರ ಇತಿಹಾಸ ಸತ್ಯ. ಈ ಪಕ್ಷದ ಈ ಇಬ್ಬಂದಿತನ ಸ್ವಾತಂತ್ರ್ಯಾನಂತರವೂ ಮುಂದುವರೆದು, ೧೯೬೨ರ ಚೀನಾದೊಡನೆಯ ಯುದ್ಧ ಸಂದರ್ಭದಲ್ಲಿ ಪಕ್ಷದ ಒಂದು ಭಾಗ ಚೀನಾ ಬಗ್ಗೆ ಮೃದು ಧೋರಣೆ ತಾಳಿದ ಕಾರಣದಿಂದಲೇ ಅದು ಇಬ್ಭಾಗವಾದದ್ದೂ ಸತ್ಯ.

ಇಂದು ಈ ಮಾರ್ಕ್ಸ್‌ವಾದಿಗಳು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ನಾಗರಿಕ ಹಕ್ಕುಗಳ ಬಗ್ಗೆ ದನಿ ಎತ್ತಿ ಮಾತಾಡುವವರಾದರೂ, ಅವರೇ ಆಡಳಿತಕ್ಕೆ ಬಂದಾಗ ಏನಾಗುವುದು ಎಂಬುದು ಜಗತ್ತಿನ ಇತ್ತೀಚಿನ ಚರಿತ್ರೆಯಲ್ಲಿ ದಾಖಲಾಗಿದೆ. ನಮ್ಮ ಸಿಪಿಎಂ ಮತ್ತು ಸಿಪಿಐ ಪಕ್ಷಗಳು ಸಂಸದೀಯ ಪ್ರಜಾಪ್ರಭುತ್ವವನ್ನು ತಾತ್ವಿಕವಾಗಿ ಒಪ್ಪಿವೆಯಾದರೂ, ಎಲ್ಲ ಮಾರ್ಕ್ಸ್‌ವಾದಿ ಪಕ್ಷಗಳೂ ಒಪ್ಪಿಲ್ಲ ಎಂಬುದನ್ನೂ ನಾವು ಗಮನಿಸದಿರಲಾಗದು. ಒಪ್ಪಿರುವ ಈ ಎರಡು ಪಕ್ಷಗಳು ಆಡಳಿತದಲ್ಲಿದ್ದ ರಾಜ್ಯಗಳಲ್ಲಿನ ಮಾನವ ಹಕ್ಕುಗಳ ದಾಖಲೆಗಳು ಅಷ್ಟೇನೂ ಮೆಚ್ಚುವಂತಿಲ್ಲ ಎಂಬುದನ್ನೂ ಗಮನಿಸಬೇಕಾಗುತ್ತದೆ. ಇಲ್ಲದಿದ್ದರೆ ಇವರೇಕೆ ಮಮತಾ ಬ್ಯಾನರ್ಜಿಯಂತಹ ಕೂಗುಮಾರಿ ರಾಜಕಾರಣಿಗೆ ಕರುಣಾಜನಕವಾಗಿ ಮಣಿದು ನಾಲ್ಕು ದಶಕಗಳ ಅಧಿಕಾರವನ್ನು ಕಳೆದುಕೊಂಡು ಈಗ ಸಂಪೂರ್ಣ ನಿರ್ನಾಮದ ಆತಂಕವನ್ನು ಎದುರಿಸಬೇಕಿತ್ತು? ಕನ್ನಯ್ಯ ಕುಮಾರ್‌ನೆಂಬ ಬಾಲಭಾಷೆಯ ಎಳೆಹುಡುಗನನ್ನು ಈಗ ಭಾರತದ ಈ ಮಾರ್ಕ್ಸ್‌ವಾದ ಮತ್ತು ವಾದಿಗಳು ಮತ್ತೆ ಮೇಲೇಳಲು ಊರುಗೋಲನ್ನಾಗಿ ಮಾಡಿಕೊಳ್ಳಲೆತ್ನಿಸುತ್ತಿರುವುದು ಕರುಣಾಜನಕವಾಗಿ ತೋರುತ್ತದೆ.

ಇದನ್ನೆಲ್ಲ ಇಲ್ಲಿ ಹೇಳುತ್ತಿರುವುದಕ್ಕೆ ಕಾರಣ, ಕನ್ನಯ್ಯನನ್ನಾಗಲೀ, ಮಾರ್ಕ್ಸವಾದಿಗಳನ್ನಾಗಲೀ ಟೀಕಿಸಲೆಂದಲ್ಲ; ಬದಲಿಗೆ, ಸಂಘ ಪರಿವಾರದ ಅತ್ಯಂತ ವ್ಯವಸ್ಥಿತ ಮತ್ತು ದೀರ್ಘ ಗುರಿಯುಳ್ಳ ರಾಜಕಾರಣವನ್ನು ಸ್ವತಃ ನಾವು ಬದಲಾಗದೆ, ನಮ್ಮ ರಾಜಕಾರಣದ ಸುಲಭ ಸೂತ್ರ ಮತ್ತು ಘೋಷಣೆಗಳನ್ನು ಬದಲಾಯಿಸಿಕೊಳ್ಳದೆ, ಜನ ನಂಬುವಂತಹ ಒಂದು ಆತ್ಮಶೋಧನೆಯನ್ನಾಧರಿಸಿದ ಹೊಸ ರಾಜಕಾರಣವನ್ನು ರೂಪಿಸಿಕೊಳ್ಳದೆ ಎದುರಿಸಲು ಸಾಧ್ಯವಿಲ್ಲ ಎಂದು ಸೂಚಿಸಲು ಮಾತ್ರ. ಉದಾಹರಣೆಗೆ, ನಮ್ಮ ರಾಜ್ಯದಲ್ಲಿ ಈ ತಥಾಕಥಿತ ಸಮಾಜವಾದಿ ಸಿದ್ಧರಾಮಯ್ಯನವರನ್ನು ನಂಬಿಕೊಂಡು ಸಂಘ ಪರಿವಾರವನ್ನು ಎದುರಿಸಲಾದೀತೆ? ಪೂರ್ವಾಪರಗಳಿಲ್ಲದ ಲಕ್ಷಾಂತರ ರೂಪಾಯಿಗಳ ಬೆಲೆಯ ವಾಚನ್ನು ವಿಧಾನಸಭಾಧ್ಯಕ್ಷರ ಸುಪರ್ದಿಗೆ ಒಪ್ಪಿಸಿದ ಮಾತ್ರಕ್ಕೆ ಅದನ್ನು ಕಟ್ಟಿಕೊಂಡ ಅಪರಾಧ ಕೊನೆಗೊಂಡಂತಾಯಿತೇ? ಈ ವಾಚು ಪ್ರಕರಣ ಹೊರನೋಟಕ್ಕೆ ಸಣ್ಣದಾಗಿ ತೋರಿದರೂ, ಅದು ಸಿದ್ಧರಾಮಯ್ಯ ಎಷ್ಟು ಎಚ್ಚರದಪ್ಪಿದ್ದಾರೆ ಮತ್ತು ಆ ಎಚ್ಚರದಪ್ಪುವಿಕೆಯ ಹಿಂದೆ ಅವರ ವ್ಯಕ್ತಿತ್ವ ಎಷ್ಟು ನಾಶವಾಗಿದೆ ಎಂಬುದನ್ನೂ ಸೂಚಿಸುವಂತಿದೆ. ಅವರು ಕುಮಾರಸ್ವಾಮಿಯವರನ್ನು ಹೆದರಿಸಿ ಬಾಯಿ ಮುಚ್ಚಿಸಿದಷ್ಟು ಸುಲಭವಾಗಿ ರಾಜ್ಯದ ಪ್ರಜ್ಞಾವಂತ ಜನತೆಯ ಬಾಯಿ ಮುಚ್ಚಿಸಲಾಗುವುದಿಲ್ಲ.

ಅಹಿಂದ ರಾಜಕಾರಣದ ಅವಾಂತರಗಳು

ರಾಜ್ಯದ ಒಂದೊಂದೇ ಸಾರ್ವಜನಿಕ ಸಂಸ್ಥೆಗಳನ್ನು ಅಹಿಂದವಾದವೆಂಬ ಅಪ್ಪಟ ಜಾತಿ ರಾಜಕಾರಣದ ಮೂಲಕ ನಾಶ ಮಾಡುತ್ತಾ ಬಂದಿರುವ ಸಿದ್ಧರಾಮಯ್ಯ ಈಗ ಅಂತಿಮವಾಗಿ ಲೋಕಾಯುಕ್ತವನ್ನೂ ಮುಗಿಸಲು ಹೊರಟಿರುವುದು ಅವರ

ರಾಜಕಾರಣದ ತಾರ್ಕಿಕ ಅಂತ್ಯವೆಂಬಂತಲೇ ಕಾಣುತ್ತಿದೆ. ಮೊನ್ನೆ ದಾವಣಗೆರೆಯಲ್ಲಿನ ದುರುಗಮ್ಮನ ಜಾತ್ರೆಯ ಸಂದರ್ಭದಲ್ಲಿ ನಡೆದ ಮಚ್ಚುಧಾರಿಗಳ ಮೆರವಣಿಗೆ ಮತ್ತು ಅದರ 'ರಕ್ಷಣೆ'ಯಲ್ಲಿ ಜರುಗಿದ ಎಮ್ಮೆ-ಕೋಣಗಳೂ ಸೇರಿದಂತೆ ಸಾವಿರಾರು ಪ್ರಾಣಿಗಳ ವಧೆಯು ಹರಿಸಿದ ರಕ್ತದ ಕೋಡಿ ಇವರ ಅಹಿಂದವಾದ ಯಾರ ಮತ್ತು ಎಂತಹ 'ಅಭಿವೃದ್ಧಿ'ಯನ್ನು ಸಾಧಿಸಿದೆ ಎಂಬುದರ ಸೂಚನೆಯಾಗಿದೆ. ರಾಜ್ಯದ ದುರಂತವೆಂದರೆ, ಇಂತಹ ಸಂದರ್ಭದಲ್ಲಿ ಸಿದ್ಧರಾಮಯ್ಯನವರನ್ನು ಎಚ್ಚರಿಸಬೇಕಿದ್ದ ಮಹನೀಯರೆಲ್ಲ ಅವರ ದರ್ಬಾರಿನಲ್ಲಿ ನಜರು ಒಪ್ಪಿಸುತ್ತಿದ್ದಾರೆ ಅಥವಾ ತಮ್ಮ ಅವಕಾಶಕ್ಕಾಗಿ ಕಾಯುತ್ತಿದ್ದಾರೆ! ಮೋದಿಯವರೇ ಎರಡು ವರ್ಷಗಳಲ್ಲಿ ಸ್ವಲ್ಪ ಬುದ್ಧಿ ಕಲಿತಂತೆ ಒಂದಿಷ್ಟು ಗ್ರಾಮಪರ ಬಜೆಟ್ ಮಂಡಿಸಿರುವಾಗ ಲೋಹಿಯಾ ಸಮಾಜವಾದಿ ಎಂದು ಹೇಳಿಕೊಳ್ಳುವ ಈ ಸಿದ್ಧರಾಮಯ್ಯನವರಿಗೇನಾಗಿದೆ ಎಂಬುದೇ ತಿಳಿಯದಾಗಿದೆ!

<u>ಸಮಕಾಲೀನ</u>

ಅಂಬೇಡ್ಕರ್-ಗಾಂಧಿ ವಾಗ್ವಾದದ ಅರ್ಥ-ಅನರ್ಥಗಳು:

ಈ ಏಪ್ರಿಲ್ ೧೪ರಂದು ಡಾ. ಬಾಬಾಸಾಹೇಬ್ ಭೀಮರಾವ್ ಅಂಬೇಡ್ಕರ್ ಅವರ ೧೨೫ನೇ ಜನ್ಮವರ್ಷಾಚರಣೆಗಳು ಆರಂಭವಾಗಲಿವೆ. ಹಾಗೆ ನೋಡಿದರೆ, ೨೫ ವರ್ಷಗಳ ಹಿಂದೆ ಆರಂಭವಾದ ಅಂಬೇಡ್ಕರ್ ಅವರ ಶತಮಾನೋತ್ಸವದ ಆಚರಣೆಯ ಮುಂದುವರಿಕೆ ಇದೆಂದೂ ಹೇಳಬಹುದು. ಏಕೆಂದರೆ, ತೊಂಬತ್ತರ ದಶಕದಲ್ಲಿ ವಿ.ಪಿ. ಸಿಂಗ್ ಭಾರತದ ರಾಜಕಾರಣಕ್ಕೆ ನೀಡಿದ ಸಾಮಾಜಿಕ ನ್ಯಾಯದ ಹೊಸ ಆಯಾಮದ ಭಾಗವಾಗಿ ಘೋಷಿತವಾದ ಆ ಶತಮಾನೋತ್ಸವದ ಆಚರಣೆಗಳ ಆರಂಭದ ಮುನ್ನ ಅಂಬೇಡ್ಕರ್ ಸಾರ್ವಜನಿಕ ಜೀವನದಲ್ಲಿ ಚರ್ಚೆಗೆ ಬಂದುದು ಬಹು ಕಡಿಮೆ ಎಂದೇ ಹೇಳಬೇಕು. ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿ ಕೂಡ ಆರಂಭದಲ್ಲಿ ಅಂಬೇಡ್ಕರ್‌ಗಿಂತ ಹೆಚ್ಚಾಗಿ ನೆಚ್ಚಿದುದು ಅಮೆರಿಕಾದ ಕಪ್ಪುಜನರ ಚಳುವಳಿಯನ್ನೇ. ಕರ್ನಾಟಕದ ದಲಿತ ಚಳುವಳಿಗೆ ಕೂಡ ಅಂಬೇಡ್ಕರ್ ಏಕೈಕ ಸ್ಫೂರ್ತಿ ಶಕ್ತಿಯಾಗಿರಲಿಲ್ಲ. ಅಲ್ಲಿ ಅಂಬೇಡ್ಕರ್ ಜೊತೆಗೆ ಅಷ್ಟೇ ಪ್ರಾಮುಖ್ಯತೆಯೊಂದಿಗೆ ಗಾಂಧಿ, ಲೋಹಿಯಾ ಮತ್ತು ಮಾರ್ಕ್ಸ್ ಕೂಡ ಇದ್ದರು.

ನಿಜವಾಗಿ ಅಂಬೇಡ್ಕರ್ ಸಾರ್ವಜನಿಕ ಜೀವನದಲ್ಲಿ ದೊಡ್ಡ ವಿಗ್ರಹವಾಗಿ ಮೂಡಿದ್ದು ಕಾನ್ಶೀರಾಂ ಅವರ ಬಹುಜನ ಚಳುವಳಿ ಮತ್ತು ಅದರ ರಾಜಕೀಯ ರೂಪವಾದ ಬಹುಜನ ಸಮಾಜ ಪಕ್ಷದ ಒಂದು ಕಾಲದ ಯಶಸ್ಸಿನ ಪರಿಣಾಮವಾಗಿ. ಆದರೆ ಇಂದು ಅಂಬೇಡ್ಕರ್ ಬಹುಜನ ಸಮಾಜ ಪಕ್ಷದ ರಾಜಕಾರಣವನ್ನು ದಾಟಿ ಸಾರ್ವಜನಿಕ ಜೀವನದ ಹಲವು ಆಸಕ್ತಿಗಳ ಚರ್ಚೆಯ ವಸ್ತುವಾಗಿದ್ದಾರೆ. ವೈವಿಧ್ಯಮಯ ರಾಜಕೀಯ

ಆಸಕ್ತಿಗಳ ಕೇಂದ್ರಬಿಂದುವಾಗಿ ಅವುಗಳಿಗೆ ತಕ್ಕಂತೆ ಹಲವು ರೀತಿಯ, ಹಲವು ನೆಲೆಗಳ ಅಧ್ಯಯನ ಮತ್ತು ವ್ಯಾಖ್ಯಾನಗಳಿಗೆ ಒಳಗಾಗಿದ್ದಾರೆ. ಅವರ ದಲಿತ ಚಿಂತನೆಯನ್ನೂ ಮೀರಿ, ಪ್ರಜಾತಂತ್ರ, ರಾಜಕೀಯ ಅರ್ಥಶಾಸ್ತ್ರ, ನಾಗರೀಕ ಹಕ್ಕುಗಳನ್ನು ಕುರಿತ ಅವರ ಜಿಜ್ಞಾಸೆಗಳ ಬಗ್ಗೆ ಇಂದು ಹೆಚ್ಚಿಗೆ ಚರ್ಚೆಗಳು ನಡೆಯುತ್ತಿವೆ. ಜಾಗತಿಕ ರಾಜಕಾರಣದಲ್ಲಿ ಎಡಪಂಥ ಎನ್ನುವುದು ನಗಣ್ಯ ಸ್ಥಿತಿ ತಲುಪಿ, ಜಗತ್ತಿನ ಅರ್ಧಭಾಗವನ್ನು ಬೌದ್ಧಿಕವಾಗಿ ಆಳಿದ ಅದರ ತಾತ್ವಿಕ ನೆಲೆಗಟ್ಟಾಗಿದ್ದ ಮಾರ್ಕ್ಸ್‌ವಾದ ಒಂದು ರಾಜಕೀಯ ಚಿಂತನೆಯಾಗಿಯಾದರೂ ತನ್ನ ಅಂತ್ಯವನ್ನು ಕಾಣುತ್ತಿರುವಂತೆ ತೋರುತ್ತಿದೆ. ಈ ಹೊತ್ತಿನಲ್ಲಿ ಭಾರತದ ಮಾರ್ಕ್ಸ್‌ವಾದಿಗಳು ಈವರೆಗೆ ತಾವು ಮರೆತೇ ಹೋಗಿದ್ದ ಅಂಬೇಡ್ಕರ್‌ರಲ್ಲಿ ಆಸರೆ ಪಡೆದು ರಾಜಕೀಯ ಪುನರ್‌ವಸತಿಗಾಗಿ ನಡೆಸಿರುವ ಪ್ರಯತ್ನದ ಭಾಗವಾಗಿಯೂ ಈ ಚರ್ಚೆಗಳನ್ನು ಪರಿಗ್ರಹಿಸಬಹುದಾಗಿದೆ.

ಅಂಬೇಡ್ಕರ್ ಅವರ ಆರೆಸ್ಸೆಸ್ ಆವೃತ್ತಿ!

ಆದರೆ ಈ ಚರ್ಚೆಗಳ ನಿಜವಾದ ವಿರೋಧಾಭಾಸವೆಂದರೆ, ಇದೇ ಅಂಬೇಡ್ಕರ್ ಈಗ ಮಾರ್ಕ್ಸ್‌ವಾದವನ್ನು ಜಗತ್ತಿನ ಪರಮಶತ್ರುಗಳಲ್ಲಿ ಒಂದು ಎಂದು ಪರಿಗಣಿಸುವ ಸಂಘ ಪರಿವಾರದ ಆರಾಧ್ಯ ದೈವವಾಗಿಯೂ ಪರಿವರ್ತಿತವಾಗಿದ್ದಾರೆ. ಅಂಬೇಡ್ಕರ್‌ರ ೧೨೫ನೇ ಜಯಂತ್ಯುತ್ಸವದ ಭರ್ಜರಿ ತಯಾರಿ ನಡೆದಿರುವುದು ಈ ಸಂಘ ಪರಿವಾರದ ಸರ್ಕಾರದಿಂದಲೇ. ಪ್ರಧಾನಿ ಮೋದಿಯವರು ಮೊನ್ನೆ ತಾನೇ ತಮಗೆ ಅಂಬೇಡ್ಕರ್ ಅವರ ಆಶೀರ್ವಾದವಿದೆ ಎಂದು ಘೋಷಿಸಿಕೊಂಡು ಅಂಬೇಡ್ಕರ್ ಸ್ಮಾರಕಕ್ಕೆ ಶಂಕುಸ್ಥಾಪನೆ ನೆರವೇರಿಸಿ, ಈ ಕೆಲಸ ಇಷ್ಟು ದಿನಗಳವರೆಗೆ ಏಕೆ ನಡೆಯಲಿಲ್ಲ? ಎಂದು ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ! ಅಷ್ಟೇ ಅಲ್ಲ, ಸಂಘ ಪರಿವಾರದ ಕಾರ್ಮಿಕ ವಿಭಾಗದ ಸಂಸ್ಥಾಪಕ ಮತ್ತು ಪ್ರಮುಖ ಆರೆಸ್ಸೆಸ್ ನಾಯಕರಲ್ಲೊಬ್ಬರಾದ ದತ್ತೋಪಂತ್ ತೇಂಗಡಿಯವರು ಅಂಬೇಡ್ಕರ್ ಬಗ್ಗೆ ಒಂದು ಉದ್ಗ್ರಂಥವನ್ನೇ ಬರೆದು ಅವರನ್ನು ಸಂಘ ಪರಿವಾರದ ಆಸ್ತಿ ಎಂಬಂತೆ ತಮ್ಮ ನೆನಪುಗಳಲ್ಲಿ ಮಂಡಿಸಿದ್ದಾರೆ. ಜೊತೆಗೆ, ೧೯೫೪ರ (ಉಪ)ಚುನಾವಣೆಯಲ್ಲಿ ಅಂಬೇಡ್ಕರ್ ಭಂಡಾರಾ ಕ್ಷೇತ್ರದಿಂದ ಲೋಕಸಭಾ ಚುನಾವಣೆಗೆ ನಿಂತಿದ್ದಾಗ ಆಗಲೇ ಆರೆಸ್ಸೆಸ್ ನಾಯಕರಾಗಿದ್ದ ತೇಂಗಡಿಯವರು ಅವರ ಚುನಾವಣಾ ಏಜೆಂಟರಾಗಿದ್ದರು ಎಂಬುದನ್ನೂ ಸಂಘ ಪರಿವಾರದವರು ಈಗ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ಆರೆಸ್ಸೆಸ್ ಸ್ವಯಂಸೇವಕರು ಭಾರತದ ಐಕ್ಯತೆಯ ಸಂಕೇತವಾಗಿದ್ದಾರೆಂದೂ, ಆರೆಸ್ಸೆಸ್‌ನ ಭಗವಾಧ್ವಜ ರಾಷ್ಟ್ರ ಧ್ವಜವಾಗಬೇಕೆಂದೂ ಸಂಸ್ಕೃತ ರಾಷ್ಟ್ರ ಭಾಷೆಯಾಗಬೇಕೆಂದೂ ಅಂಬೇಡ್ಕರ್ ಹೇಳಿದ್ದರೆಂದು ಆರೆಸ್ಸೆಸ್ ಸರಸಂಘಚಾಲಕ ಮೋಹನ ಭಾಗವತ್‌ರವರು ತೇಂಗಡಿಯವರನ್ನು ಉಲ್ಲೇಖಿಸಿ ಹೇಳುತ್ತಿದ್ದಾರೆ. 'ನಾನು ಹಿಂದೂವಾಗಿ ಮಾತ್ರ ಸಾಯಲಾರೆ' ಎಂದು ಘೋಷಿಸಿ ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಬೌದ್ಧ ಮತ ಸೇರಿದ ಅಂಬೇಡ್ಕರ್‌ರನ್ನು ಇಂದು ಹಿಂದುತ್ವವನ್ನು ಎತ್ತಿಹಿಡಿಯುವ

ಸಂಘ ಪರಿವಾರವು ತಮ್ಮವರು, ತನ್ನ ಸಿದ್ಧಾಂತದ ಪ್ರತೀಕ ಎಂದು ತನ್ನದೇ ಪುರಾವೆಗಳೊಂದಿಗೆ ಹೇಳಿಕೊಳ್ಳುವುದು ಸಾಧ್ಯವಾಗಿದೆ ಎಂದರೆ ಏನು ಹೇಳುವುದು? ಈ ವಿಪರ್ಯಾಸವನ್ನು ಹೇಗೆ ವಿವರಿಸುವುದು? ಹಾಗಾದರೆ ನಿಜವಾದ ಅಂಬೇಡ್ಕರ್ ಯಾರು? ಆ ವ್ಯಕ್ತಿತ್ವದ ಪುನರನ್ವೇಷಣೆಯ ಮಾರ್ಗಕ್ಕೆ ನಿಜ ಒರೆಗಲ್ಲಾದರೂ ಯಾವುದು?

ಇದು ಇಂದಿನ ಬಹುಮುಖ್ಯ ಪ್ರಶ್ನೆಯಾಗಿದೆ. ಇದು ಕೇವಲ ಅಂಬೇಡ್ಕರ್ ವ್ಯಕ್ತಿತ್ವದ ಚಾರಿತ್ರಿಕ ಪುನರನ್ವೇಷಣೆಗೆ ಸಂಬಂಧಿಸಿದ ಪ್ರಶ್ನೆ ಮಾತ್ರವಲ್ಲ. ಇದು, ಭಾರತದ ಇಂದಿನ ರಾಜಕಾರಣ ಪಡೆಯುತ್ತಿರುವ ಹೊಸ ದಿಕ್ಕು ಮತ್ತು ಸ್ವರೂಪ ಹುಟ್ಟಿಸುತ್ತಿರುವ ಆತಂಕಗಳನ್ನು ಎದುರಿಸಲು ನಾವು ಹಿಡಿಯಬೇಕಾದ ಮಾರ್ಗಕ್ಕೆ ಸಂಬಂಧಿಸಿದ ಪ್ರಶ್ನೆ ಕೂಡ. ಈ ದೃಷ್ಟಿಯಿಂದ ಆಲೋಚಿಸಿದಾಗ ನಮಗೆ ಎದ್ದು ಕಾಣುವ ಸಂಗತಿ ಎಂದರೆ, ಅಂಬೇಡ್ಕರ್‌ರ ಪುನರನ್ವೇಷಣೆಯ ಈ ಎರಡೂ ರಾಜಕೀಯ ಪ್ರಯತ್ನಗಳಲ್ಲಿ ಅವರ ಹೋರಾಟದ ಬದುಕಿನ ಎಲ್ಲ ಮುಖ್ಯ ಸಂಚಲನೆಗಳಿಗೆ ಪ್ರಚೋದಕರಾಗಿ, ಅವರ ಸಾರ್ವಜನಿಕ ವ್ಯಕ್ತಿತ್ವದ ನಿರೂಪಣೆಗೆ ಕಾರಣರಾಗಿದ್ದ ಗಾಂಧಿ ಕಾಣೆಯಾಗಿರುವುದು. ಇತಿಹಾಸದಲ್ಲಿ ಗಾಂಧಿ ಇಲ್ಲದೆ ಅಂಬೇಡ್ಕರ್‌ರನ್ನು ಕಲ್ಪಿಸಿಕೊಳ್ಳುವುದು ಸಾಧ್ಯವೇ? ಹಾಗಾಗಿ ಅಂಬೇಡ್ಕರ್‌ರ ಪುನರನ್ವೇಷಣೆಯ ಈ ಎರಡೂ ಪ್ರಯತ್ನಗಳು–ಚರ್ಚೆಗಳು– ಚಾರಿತ್ರಿಕ ಪ್ರಜ್ಞೆಯ ಕೊರತೆಯಿಂದ ನರಳುತ್ತವೆ ಎಂದೇ ಹೇಳಬೇಕು. ಹಾಗಾದರೆ ಈ ಕೊರತೆಯನ್ನು ನೀಗಿಸಲು–ಇಂದಿನ ಸಂದರ್ಭದಲ್ಲಿ ಅಂಬೇಡ್ಕರರನ್ನು ಚಾರಿತ್ರಿಕವಾಗಿ ಗಾಂಧೀಜಿಗೆ ಮುಖಾಮುಖಿಗೊಳಿಸಲು–ಇರುವ ಮುಖ್ಯ ನೆಲೆಗಳಾದರೂ ಯಾವುವು? ಆ ಮುಖ್ಯ ನೆಲೆ, ಹಿಂದೂ ಧರ್ಮ ಕುರಿತ ಅವರಿಬ್ಬರ ನಿಲುವುಗಳು ಎಂದು ಹೇಳುವುದು ಸರಿಯಾದರೂ ಮತ್ತು ಇವರಿಬ್ಬರ ವಾಗ್ವಾದ ಇವುಗಳ ಸುತ್ತಲೇ ನಡೆದುವೆಂದು ಹೇಳಬಹುದಾದರೂ, ಈ ವಾಗ್ವಾದದ ಹಿಂದೆ ಇದ್ದುದು ಆ ಹಿಂದೂ ಧರ್ಮ ಕುರಿತ ಅವರಿಬ್ಬರ ಗ್ರಹಿಕೆ ಮತ್ತು ಅನುಭವಗಳ ವ್ಯತ್ಯಾಸಗಳು ಎಂಬುದನ್ನು ನಾವು ಗಮನಿಸಬೇಕು. ಇಲ್ಲದಿದ್ದರೆ, ಈ ವಾಗ್ವಾದ ಇಂದಿನ ರಾಜಕಾರಣದ ಪರಿಪ್ರೇಕ್ಷ್ಯದಲ್ಲಿ ಯಾವ ಪ್ರಯೋಜನಕ್ಕೂ ಬಾರದಾಗಿರುತ್ತದೆ.

ಹಾಗಾದರೆ, ಅಂಬೇಡ್ಕರ್ ಅಸ್ಪೃಶ್ಯರಾಗಿ ಹುಟ್ಟಿ ಎದುರಿಸಿದ ಅವಮಾನ–ಸಂಕಷ್ಟಗಳು ಹಿಂದೂ ಧರ್ಮ ಕುರಿತ ಅವರ ಗ್ರಹಿಕೆಯನ್ನು ರೂಪಿಸಿದರೆ, ವೈಶ್ಯರಾಗಿ ಹುಟ್ಟಿ ಅಂತಹ ಅವಮಾನ–ಸಂಕಷ್ಟಗಳಿಗೆ ಸಿಕ್ಕದ ಗಾಂಧಿಗೆ ಅಂಬೇಡ್ಕರ್ ಗ್ರಹಿಕೆಯ ಹಿಂದೂ ಧರ್ಮ ಬೇರೆಯಾಗಿದೆ ಎಂದು ತಿಳಿಯಲು ಸಾಧ್ಯವಾಗದೆ ಈ ವಾಗ್ವಾದ ಹುಟ್ಟಿ ಬೆಳೆಯಿತೇ? ಹಾಗೆ ಹೇಳಿದರೆ, ಇಬ್ಬರ ಸಂವೇದನಾಶೀಲತೆಗೂ ಮಾಡುವ ಅವಮಾನ ಮಾತ್ರವಲ್ಲದೆ ಧರ್ಮದ ಅರ್ಥವನ್ನು ಜಾತಿಗೆ ಕುಗ್ಗಿಸುವ ಪ್ರಯತ್ನವಾಗುತ್ತದೆ. ಆದರೆ ಅಂಬೇಡ್ಕರ್ ಹಿಂದೂ ಧರ್ಮವೆಂಬುದು ಜಾತಿ ವ್ಯವಸ್ಥೆಯೆಂಬ ಲೌಕಿಕ ವ್ಯವಸ್ಥೆಯಾಗಿ ಕುಗ್ಗಿಹೋಗಿ ತನ್ನೆಲ್ಲ ಪಾರಮಾರ್ಥಿಕತೆಯನ್ನು ಕಳೆದುಕೊಂಡಿದೆ ಎಂಬ ತೀರ್ಮಾನಕ್ಕೆ

ಬಂದಿದ್ದರು. ಆದರೆ ಗಾಂಧಿ ಹಿಂದೂ ಧರ್ಮ ಜಾತಿ ವ್ಯವಸ್ಥೆಯನ್ನು ಮೀರಿದ್ದು ಮತ್ತು ಅದರ ಮೌಲ್ಯಗಳು ಸನಾತನವಾಗಿದ್ದು, ಅದು ಒಂದು ಪ್ರಾಚೀನ ನಾಗರೀಕತೆಯಾಗಿಯೂ ವಿಕಾಸಗೊಳ್ಳುತ್ತಾ ಅನ್ಯ ಪ್ರಭಾವಗಳನ್ನು ಹೀರಿಕೊಂಡು ಜೀವನದ ಅರ್ಥವನ್ನು ಶೋಧಿಸಲು ಸಾಧ್ಯ ಮಾಡುವ ಒಂದು ಸೃಜನಶೀಲ ಮಾಧ್ಯಮವಾಗಿದೆ ಎಂದು ನಂಬಿದ್ದರು. ಹಾಗಾಗಿಯೇ ಅವರ ಇಡೀ ಬದುಕು ಅದರ ಅರ್ಥ ಕಂಡುಕೊಳ್ಳುವ ನಿಜವಾದ ಧಾರ್ಮಿಕ ಪ್ರಯಾಣವೇ ಆಗಿತ್ತು. 'ಸತ್ಯದೊಡನೆ ಪ್ರಯೋಗ'ವೆಂಬ ಈ ಮಹಾ ಪ್ರಯಾಣದ ಆರಂಭದ ಘಟ್ಟದಲ್ಲೇ -ಅಂಬೇಡ್ಕರ್ ಸಾರ್ವಜನಿಕ ಜೀವನವನ್ನು ಪ್ರವೇಶಿಸುವ ಬಹುಮುನ್ನವೇ-ಅವರು ಅಸ್ಪೃಶ್ಯತೆಯನ್ನು ಒಂದು 'ಮಹಾ ಪಾಪ' ಎಂದು ಪರಿಗಣಿಸಿದ್ದರು ಎಂಬುದು ಇಲ್ಲಿ ಮುಖ್ಯ.

ಅಸ್ಪೃಶ್ಯತೆಯ ಪ್ರಶ್ನೆ: ಗಾಂಧಿ ಚರಿತ್ರೆ

ಇಪ್ಪತ್ತನೇ ಶತಮಾನದ ಮೊದಲ ದಶಕದಲ್ಲೇ, ದ.ಆಫ್ರಿಕಾದಲ್ಲಿ ಭಾರತೀಯರ ಪರವಾಗಿ ನಡೆಸಿದ ಹೋರಾಟದ ಸಂದರ್ಭದಲ್ಲಿ ಗಾಂಧಿ ಅಲ್ಲಿನ ಭಾರತೀಯರಿಗೆ ಕಟುವಾಗಿ ಹೇಳಿದ್ದರು, 'ವರ್ಣಭೇದ ವಿರೋಧಿಸುವವರು ಅಸ್ಪೃಶ್ಯತೆಯನ್ನೂ ಆಚರಿಸಬಾರದು' ಎಂದು. ಅಸ್ಪೃಶ್ಯತೆಯನ್ನು ಅವರು ಆಗಲೇ ಎಂತಹ ಮಹಾಪರಾಧವೆಂದು ಪರಿಗಣಿಸಿದ್ದರೆಂದರೆ, ತಮ್ಮ ಪತ್ನಿ ಅಸ್ಪೃಶ್ಯನೊಬ್ಬನ ಶೌಚವನ್ನು ಸ್ವಚ್ಛಗೊಳಿಸಲು ನಿರಾಕರಿಸಿದಾಗ ಆಕೆಯನ್ನು ಮನೆಯಿಂದಲೇ ಹೊರದೂಡುವ (ಅವಿವೇಕದ) ಪ್ರಯತ್ನ ಮಾಡಿ ನಾಚಿಕೆಪಟ್ಟುಕೊಳ್ಳಬೇಕಾಯಿತು. ದ.ಆಫ್ರಿಕಾದಿಂದ ಹಿಂದಿರುಗಿ ಭಾರತದ ಸ್ವಾತಂತ್ರ್ಯ ಹೋರಾಟದ ವೇದಿಕೆಯನ್ನು ಹತ್ತುವ ಮುನ್ನವೇ ಅವರು 'ಈ ಪವಿತ್ರ ಭೂಮಿಯಲ್ಲಿ ನಾವು ಎದುರಿಸುತ್ತಿರುವ ಎಲ್ಲ ಸಂಕಷ್ಟಗಳಿಗೆ ಅಸ್ಪೃಶ್ಯತೆಯ ಹೆಸರಿನಲ್ಲಿ ನಾವು ನಮ್ಮ ಸೋದರ-ಸೋದರಿಯರ ಮೇಲೆ ಎಸಗುತ್ತಿರುವ ಅನ್ಯಾಯಗಳೇ ಕಾರಣ ಎಂದು ಘೋಷಿಸಿದ್ದರು. (*ಗಾಂಧಿ ಸಮಗ್ರ ಸಾಹಿತ್ಯ:೧೩:೨೩೨*) ಮುಂದುವರೆದು ಅವರು ಹೇಳಿದ್ದರು, 'ನನಗೆ ನಾನೇ ಗುರು... ಮನುಸ್ಮೃತಿ ಮತ್ತಿತರ ಗ್ರಂಥಗಳಿಂದ ಉಲ್ಲೇಖ ಮಾಡಿ ಈ ಪಾಪವನ್ನು ಸಮರ್ಥಿಸಿ ಪ್ರಯೋಜನವಿಲ್ಲ. ಈ ಗ್ರಂಥಗಳ ಹಲವು ಸಾಲುಗಳು ಪ್ರಕ್ಷಿಪ್ತ ಅಥವಾ ಅರ್ಥಹೀನವಾಗಿವೆ' (*ಗಾಂ.ಸ.ಸಾ:೧೪:೭೩*) ಅಷ್ಟೇ ಅಲ್ಲ, ಮುಂದೆ ಅಹಮದಾಬಾದ್‌ನಲ್ಲಿ ತಾವು ಸ್ಥಾಪಿಸಿದ ಸಾಬರ್ಮತಿ ಆಶ್ರಮದಲ್ಲಿ ಅಸ್ಪೃಶ್ಯ ಕುಟುಂಬವೊಂದು ನೆಲೆಸಲು ಅವಕಾಶ ಮಾಡಿಕೊಟ್ಟು ಆ ಕುಟುಂಬದ ಹೆಣ್ಣುಮಗುವೊಂದನ್ನು ದತ್ತುಮಗಳಾಗಿ ಸ್ವೀಕರಿಸಿದರು. ಇದಕ್ಕೆ ಸಾರ್ವಜನಿಕರು ತೀವ್ರ ವಿರೋಧ ವ್ಯಕ್ತಪಡಿಸಿ ಆ ಅಸ್ಪೃಶ್ಯ ಕುಟುಂಬವನ್ನು ಹೊರಹಾಕದ ಹೊರತು ಆಶ್ರಮಕ್ಕೆ ದೇಣಿಗೆ ಕೊಡುವುದನ್ನು ನಿಲ್ಲಿಸುವುದಾಗಿ ಬೆದರಿಸಿದರು. ಈ ಬೆದರಿಕೆಗೆ ಮಣಿಯದ ಗಾಂಧಿ ಆಶ್ರಮವನ್ನು ಮುಚ್ಚುವ ಸ್ಥಿತಿ ಬಂದರೂ ಆ ಕುಟುಂಬವನ್ನು ತಮ್ಮೊಡನೆ ಇರಿಸಿಕೊಂಡರು. ಆ ಹೊತ್ತಿನಲ್ಲಿ ದೈವವೇ ಗಾಂಧಿಯ

ನೆರವಿಗೆ ಬಂದಂತೆ ಅಪರಿಚಿತ ಶ್ರೀಮಂತನೊಬ್ಬ ಬಂದು ಒಂದು ದೊಡ್ಡ ದೇಣಿಗೆ ನೀಡಿ ಆಶ್ರಮ ಮುಚ್ಚದಂತೆ ನೋಡಿಕೊಂಡ ಎಂಬುದು ಬೇರೆ ಮಾತು.

ಇಂತಹ ನುಡಿ–ನಡೆಗಳಿಗಾಗಿ ಗಾಂಧಿ ತಮ್ಮ ಜೀವನದಲ್ಲಿ ಹಲವು ಬಾರಿ ದಾಳಿ ಮತ್ತು ಹತ್ಯೆಯ ಪ್ರಯತ್ನಗಳನ್ನು ಎದುರಿಸಬೇಕಾಗಿ ಬಂದು, ಕೊನೆಗೆ ಈ ಅಸ್ಪೃಶ್ಯತಾ ನಿವಾರಣೆಯ ಜೊತೆಗೇ ತಮ್ಮ ಜೀವನೋದ್ದೇಶಗಳಲ್ಲಿ ಒಂದನ್ನಾಗಿ ಮಾಡಿಕೊಂಡಿದ್ದ ಹಿಂದೂ–ಮುಸ್ಲಿಂ ಐಕ್ಯತೆಯ ಆದರ್ಶಕ್ಕಾಗಿ ತಮ್ಮ ಪ್ರಾಣವನ್ನೇ ತೆರಬೇಕಾಯಿತು. ಇಲ್ಲಿಯೇ ಗಾಂಧಿ ಮತ್ತು ಅಂಬೇಡ್ಕರ್ ನಡುವಣ ಮುಖ್ಯ ವ್ಯತ್ಯಾಸ ಸ್ಪಷ್ಟವಾಗುವುದು. ಇದಕ್ಕೊಂದಿಷ್ಟು ವಿವರಣೆ ಬೇಕು:

ಗಾಂಧಿ ಅಸ್ಪೃಶ್ಯತಾ ನಿವಾರಣೆ, ಹಿಂದೂ ಮುಸ್ಲಿಂ ಐಕ್ಯತೆ ಮತ್ತು ಸ್ವದೇಶಿ –ಈ ಮೂರನ್ನು ಒಂದು ಬಿಟ್ಟು ಇನ್ನೊಂದಿಲ್ಲ ಎಂಬಂತೆ ತಮ್ಮ ಬದುಕಿನ ಹೋರಾಟದ ಪ್ರಾಣ ನೆಲೆಗಳನ್ನಾಗಿ ಮಾಡಿಕೊಂಡಿದ್ದರು. ಅದು ಅವರ ಹಿಂದೂ ಧರ್ಮ. ಪೂನಾ ಒಪ್ಪಂದದ ನಂತರ ಅಂಬೇಡ್ಕರ್, ಗಾಂಧಿ ವ್ಯಕ್ತಿತ್ವದಿಂದ ಎಷ್ಟು ಪ್ರಭಾವಿತರಾಗಿದ್ದರೆಂದರೆ, ಅವರು 'ನೀವು ಅಸ್ಪೃಶ್ಯತಾ ನಿವಾರಣೆಗೇ ನಿಮ್ಮನ್ನು ಅರ್ಪಿಸಿಕೊಳ್ಳುವುದಾದರೆ ನಾನು ನಿಮ್ಮ ಅನುಯಾಯಿಯಾಗುವೆ' ಎಂದು ಹೇಳಿದಾಗ, ಗಾಂಧಿ ವಿರುದ್ಧದ ಆವರೆಗಿನ ಅಂಬೇಡ್ಕರ್ ದಾಳಿಯಿಂದ ವಿಚಲಿತರಾಗಿದ್ದ ಗಾಂಧಿ ಮಿತ್ರ ಆಂಡ್ರ್ಯೂಸ್ ಅಂಬೇಡ್ಕರ್‌ರ ಆಹ್ವಾನವನ್ನು ಒಪ್ಪಿಕೊಳ್ಳಬಾರದೇಕೆ ಎಂದು ಗಾಂಧಿಯನ್ನು ಕೇಳಿದರು. ಆಗ ಗಾಂಧಿ ಆತನಿಗೆ ಬರೆದದ್ದು ಹೀಗೆ: 'ನನ್ನ ಬದುಕೆನ್ನುವುದು ಒಂದು ಅವಿಭಾಜ್ಯ ಅಖಂಡ ಸಂಗತಿ. ಅದನ್ನು ವಿಭಾಗಿಸಲಾಗದು. ಅಸ್ಪೃಶ್ಯತಾ ನಿವಾರಣೆಯ ನನ್ನ ಪ್ರಯತ್ನಗಳು ನಾಗರೀಕ ಅಸಹಕಾರ, ಹಿಂದೂ ಮುಸ್ಲಿಂ ಐಕ್ಯತೆ ಮತ್ತು ಸ್ವದೇಶಿಗಳ ಜೊತೆಗೇ ಇರುವಂತಹದ್ದು. ನನ್ನ ಬದುಕಿನಲ್ಲಿ ಒಮ್ಮೆ ಅದಕ್ಕೆ ಪ್ರಾಧಾನ್ಯತೆ, ಇನ್ನೊಮ್ಮೆ ಇದಕ್ಕೆ ಪ್ರಾಧಾನ್ಯತೆ, ಮತ್ತೊಮ್ಮೆ ಇನ್ನೊಂದಕ್ಕೆ ಪ್ರಾಧಾನ್ಯತೆ ಇರುವುದನ್ನು ನೀನು ಕಾಣಬಹುದು. ಇದೆಲ್ಲ ಪಿಯಾನೋ ಮೇಲಿನ ಸ್ವರಮೇಳದಂತೆ: ಒಂದಕ್ಕೊಂದು ಕೂಡಿಕೊಂಡಿರುವಂತೆಯೇ ಒಮ್ಮೆ ಆ ಸ್ವರಕ್ಕೆ ಒತ್ತು, ಒಮ್ಮೆ ಈ ಸ್ವರಕ್ಕೆ ಒತ್ತು... ಹೀಗೇ...'

ಗಾಂಧಿಯ ಧರ್ಮ

ಗಾಂಧಿಗೆ ಹಿಂದೂ ಧರ್ಮ ಬೇರೆಯಾಗಿರಲಿಲ್ಲ, ಇಸ್ಲಾಂ ಅಥವಾ ಕ್ರಿಶ್ಚಿಯನ್ ಧರ್ಮ ಬೇರೆಯಾಗಿರಲಿಲ್ಲ. ಇಂತಹವು ಎಷ್ಟೋ ಹೇಗೋ ಸೇರಿಯೇ ಬದುಕೆಂಬ ಸ್ವರಮೇಳ ಸೃಷ್ಟಿಯಾಗಿ ಬದುಕು ದಿವ್ಯವೆನಿಸಿಕೊಳ್ಳುವುದು. ಮುಖ್ಯ ಅಂದರೆ ಅಂದಂದಿಗೆ ಆ ಸ್ವರಮೇಳವನ್ನು ಸೃಷ್ಟಿಸಬೇಕಾದವರು ನಾವು. ಜೊತೆಯಾಗಿ. ಏಕೆಂದರೆ, ಬದುಕಿನ ಸ್ವರಮೇಳಕ್ಕೆ ಎಂದೂ ಪೂರ್ವಸಿದ್ಧ ಸ್ವರಪ್ರಸ್ತಾರವಿಲ್ಲ. ಆದರೆ ಅಂಬೇಡ್ಕರ್ ಹಿಂದೂ

ಧರ್ಮವನ್ನು ಅಂತಹ ಒಂದು ಬದುಕಿನ ಪೂರ್ವಸಿದ್ಧ ಅಚ್ಚಿನಲ್ಲಿ ಕಾಣಲು ಹೋಗಿ ನಿರಾಶರಾದರು; ಕ್ರುದ್ಧರಾದರು. ಜೊತೆಗೆ ಆ ಅಚ್ಚಿಗೆ ಪ್ರತಿಕ್ರಿಯೆಯಾಗಿ ತಮ್ಮದೇ ರಾಜಕಾರಣವನ್ನೂ ಕಟ್ಟಿಕೊಂಡಿದ್ದರು. ಆ ಕ್ರುದ್ಧತೆಯಲ್ಲಿ ಮತ್ತು ತಮ್ಮ ಆ ರಾಜಕಾರಣ ಮತ್ತೆ ಮತ್ತೆ ಎದುರಿಸುತ್ತಿದ್ದ ಸೋಲುಗಳ ಹತಾಶೆಯಲ್ಲಿ ಅವರು ಗಾಂಧಿ ವಿರೋಧಿಗಳಾಗಿದ್ದ ಎಲ್ಲರೊಂದಿಗೆ-ಬ್ರಿಟಿಷರೊಂದಿಗೆ, ಹಿಂದೂಗಳೊಂದಿಗೆ, ಮಾರ್ಕ್ಸ್‌ವಾದಿಗಳೊಂದಿಗೆ-ಸಂದರ್ಭಾನುಸಾರ ಒಡನಾಡಿದರು. ಇಂದಿನ ಅಂಬೇಡ್ಕರ್ ವಾರಸುದಾರಿಕೆ ಅಥವಾ ಪುನರನ್ವೇಷಣೆಯಲ್ಲಿ ಎದುರಾಗುವ ಎಲ್ಲ ವಿರೋಧಾಭಾಸಗಳಿಗೆ, ವಿಪರ್ಯಾಸಗಳಿಗೆ ಇದೇ ಕಾರಣವಾಗಿದೆ.

ಹಾಗಾಗಿ ಇಂದು ಅಂಬೇಡ್ಕರ್‌ರನ್ನು ಅವರು ಯಾವ ಉನ್ನತ ಮಾನವೀಯ ಮೌಲ್ಯಗಳಿಗಾಗಿ ಹೋರಾಟ ಮಾಡಿದರೋ-ಆ ಹೋರಾಟ ತನ್ನ ಕ್ರುದ್ಧತೆಯಿಂದಾಗಿ ಹಲವು ಬಾರಿ ದಾರಿ ತಪ್ಪಿದ್ದರೂ-ಆ ಮೌಲ್ಯಗಳನ್ನು ಪುನರ್‌ಸ್ಥಾಪಿಸಬಯಸುವವರು, ಅವರನ್ನು ಪುನರನ್ವೇಷಿಸಬೇಕಾಗಿರುವುದು ಅವರು ಗಾಂಧಿಯೊಂದಿಗೆ ನಡೆಸಿದ ವಾಗ್ವಾದದ ಪರಿಪ್ರೇಕ್ಷ್ಯದಲ್ಲೇ; ಆ ವಾಗ್ವಾದ ಏಕೆ ಮತ್ತು ಎಲ್ಲಿ ಹಳಿ ತಪ್ಪಿತು ಎಂಬುದರ ವಸ್ತುನಿಷ್ಠ ಪರಿಶೀಲನೆಯ ಮೂಲಕವೇ. ಈ ಪರಿಶೀಲನೆಯ ಸಂದರ್ಭದಲ್ಲಿ, ಇಂದಿನ ರಾಜಕಾರಣದ ತುರ್ತು ಅಗತ್ಯಗಳಿಗೆ ಅಂಬೇಡ್ಕರ್ ಒದಗುವಷ್ಟು ಸುಲಭವಾಗಿ ಗಾಂಧಿ ಒದಗುವುದಿಲ್ಲ ಮತ್ತು ಅಂಬೇಡ್ಕರ್ ಬಹುಕಾಲ ಕಾದು ಕೊನೆಗೆ ಬೌದ್ಧ ಧರ್ಮವನ್ನು ಅಪ್ಪಿಕೊಂಡ ರೀತಿ-ನೀತಿ ಕೇವಲ ಸಾಂಕೇತಿಕ ಅರ್ಥ ಪಡೆದಿದ್ದು, ಅದು ಮಾರ್ಕ್ಸ್‌ವಾದಿಗಳ ಭೌತಿಕತೆ ಮತ್ತು ಸಂಘ ಪರಿವಾರದವರ ಆಸ್ತಿಕತೆ ಈ ಎರಡರ ವ್ಯಾಖ್ಯಾನಗಳಿಗೂ ಒದಗಬಲ್ಲುದಾಗಿದೆ ಎಂಬುದನ್ನೂ (ಹಾಗಾಗಿಯೇ ಬಹುಶಃ ಅಂಬೇಡ್ಕರ್ ಬೌದ್ಧ ಧರ್ಮ ಕುರಿತು ಮಾಡಿದ ವ್ಯಾಖ್ಯಾನವನ್ನು ಬಹುತೇಕ ಬೌದ್ಧ ವಿದ್ವಾಂಸರು ಒಪ್ಪಲಿಲ್ಲ ಎಂದು ಹೇಳಲಾಗುತ್ತದೆ.) ನೆನಪಿನಲ್ಲಿಟ್ಟುಕೊಂಡಿರಬೇಕು.

ಇಲ್ಲಿನ 'ಸಮಕಾಲೀನ' ಪುಟಗಳ ಮುಂದಿನ ಬರಹಗಳು ಮೇಲಿನ ಈ ಎಲ್ಲ ಸಂಗತಿಗಳ ಮೇಲೂ ಹೆಚ್ಚಿನ ಬೆಳಕನ್ನು ಚೆಲ್ಲುವಂತಹವಾಗಿದ್ದು, ಗಂಭೀರ ಓದಿಗೆ ಒದಗಬೇಕಾಗಿದೆ. ಓದಿ ಬರೆಯಿರಿ.-**ಸಂ.**

ಮೇ, ೨೦೧೬

ಆತ್ಮಸಾಕ್ಷಿಯನ್ನೇ ಕಳೆದುಕೊಂಡಿರುವ ನವ ಮಧ್ಯಮ ವರ್ಗ

ಪ್ರಿಯ ಓದುಗರೇ,

ಈ ಬಾರಿ ನಾನು ಯಾವುದೇ ಸರ್ಕಾರದ ಬಗ್ಗೆ ಬರೆಯುವುದಿಲ್ಲ. ಜನರ ಬಗ್ಗೆ, ಅಂದರೆ ನಮ್ಮ ಬಗ್ಗೆಯೇ ಬರೆಯುವೆ. ಬರೆಯಲೇಬೇಕೆನಿಸಿದೆ.

ಏಕೆಂಬುದನ್ನು ನನ್ನ ಮುಂದಿನ ಮಾತುಗಳೇ ಹೇಳುತ್ತವೆ.

ಕೆಲ ದಿನಗಳ ಹಿಂದೆ ತೆಲಂಗಾಣಾದ ಒಬ್ಬ ರೈತ ತನ್ನಲ್ಲಿ ಉಳಿದಿದ್ದ ನಲವತ್ತು ರೂಪಾಯಿಗಳನ್ನು ತನ್ನ ಹೆಂಡತಿಗೆ 'ಇಷ್ಟೇ ನನ್ನಲ್ಲಿರುವುದು, ಜೋಪಾನ!' ಎಂದು ಕೊಟ್ಟು ಒಂದು ವರ್ಷದ ಮಗುವಿರುವ ಆಕೆಯನ್ನು ತೊರೆದು ಆತ್ಮಹತ್ಯೆ ಮಾಡಿಕೊಂಡ. ಈ ಸುದ್ದಿಯನ್ನು ಹಿಂದಿನ ರಾತ್ರಿ ಟಿವಿಯಲ್ಲಿ ನೋಡಿ ಸಹಜವಾಗಿಯೇ ತಲ್ಲಣಗೊಂಡಿದ್ದಂತೆ ಕಂಡ ನನ್ನ ಗೆಳೆಯನೊಬ್ಬ ಮಾರನೇ ದಿನದ ಗೆಳೆಯರ ಗೋಷ್ಠಿಯಲ್ಲಿ ಇದನ್ನು ಹೇಳುತ್ತಾ, ತಾನು ನಿಂತಲ್ಲಿಂದಲೇ ಎಗರಿ ಎಗರಿ ಕೂಗಾಡತೊಡಗಿದ್ದ. ಯಾರೋ ವಿಶ್ವವಿದ್ಯಾಲಯದ ಬುದ್ಧಿಜೀವಿ ಪ್ರಾಧ್ಯಾಪಕರೊಬ್ಬರು ದಿನಪತ್ರಿಕೆಯೊಂದರಲ್ಲಿ ಬರೆದಿದ್ದ ಅಂಕಣ ಬರಹವೊಂದರ ಸ್ಫೂರ್ತಿಯಲ್ಲಿ ಈ ಗೆಳೆಯ–ಈತನೂ ಕಾಲೇಜು ಅಧ್ಯಾಪಕನೇ–ಅಮೆರಿಕಾದ ಸಾಮ್ರಾಜ್ಯಶಾಹಿ ತನ್ನ ವಿಶ್ವ ಬ್ಯಾಂಕ್ ರಾಜಕಾರಣದ ಮೂಲಕ ಜಾರಿಗೆ ತಂದ ಆರ್ಥಿಕ ಉದಾರೀಕರಣವೇ ಇಂತಹ ರೈತರ ಆತ್ಮಹತ್ಯೆಗಳಿಗೆ ಕಾರಣ ಎಂದು ಘೋಷಿಸುತ್ತಾ, ಮುಂದಿನ ಅಮೆರಿಕಾದ ಚುನಾವಣೆಗಳಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಟ್ರಂಪ್ ಏನಾದರೂ ಗೆದ್ದುಬಿಟ್ಟರೆ ಭಾರತದ ಕಥೆ ಮುಗಿದಂತೆಯೇ ಎಂದು ಅಂದಿನ ಗೋಷ್ಠಿಗೆ ತನ್ನ ಅಂತಿಮ ಎಚ್ಚರಿಕೆಯನ್ನೂ ನೀಡಿದ. ಆತ ಬಹುಶಃ ಅಂದಿನ ಬೆಳಗಿನ ದಿನಪತ್ರಿಕೆಯೊಂದನ್ನು ಓದಿ ಬಂದಿದ್ದ.

ಟಿವಿ ನೋಡಿ ಪತ್ರಿಕೆಗಳನ್ನು ಓದಿ ಜಗತ್ತಿನ ಬಗ್ಗೆ ಅಂದಿಗೆ ಚರ್ಚೆ ಮಾಡಿ ಮುಗಿಸಿ ಮುಂದಿನ ದಿನ ಮತ್ತೆ ಹಾಗೇ ಮತ್ತೊಂದು ವಿಷಯ ಚರ್ಚೆಗೆ ತೆಗೆದುಕೊಳ್ಳುವ ಈ 'ಪ್ರಗತಿಪರ' ಗೆಳೆಯರಿಗೆ ಇಂತಹ ಚರ್ಚೆಗಳೆಲ್ಲ ಕಾಲಕ್ಷೇಪದ ವಿಷಯಗಳಷ್ಟೇ ಆಗಿರುವುದನ್ನು ಗಮನಿಸಿದ್ದ ನಾನು ಆ ಗೆಳೆಯನನ್ನು ಕೇಳಿದೆ: 'ನೀನು ಪ್ರತಿ ತಿಂಗಳೂ ಝಣ ಝಣ ಎಣಿಸಿಕೊಳ್ಳುತ್ತಿರುವ ಹತ್ತಿರ ಹತ್ತಿರ ಲಕ್ಷ ರೂಪಾಯಿಗಳ ಸಂಬಳ ಕೂಡ ಹೊಸ ಆರ್ಥಿಕ ಉದಾರೀಕರಣ ನೀತಿಯ ಫಲವೇ ಅಲ್ಲವೆ? ಅದನ್ನು ಅನುಭವಿಸುತ್ತಿರುವ ನೀನೂ. ನಿನ್ನ ಕುಟುಂಬವೂ ರೈತರ ಆತ್ಮಹತ್ಯೆಗೆ ಬಾಧ್ಯಸ್ಥರಲ್ಲವೇ?'

ಒಂದು ನಿಮಿಷ ಗೆಳೆಯರ ಗುಂಪಲ್ಲಿ ಮೌನ ಆವರಿಸಿತು. ಆ ಗುಂಪಲ್ಲಿ ಇನ್ನೂ ಒಂದಿಬ್ಬರು ನಿವೃತ್ತ ಅಧ್ಯಾಪಕ ಗೆಳೆಯರಿದ್ದರು. ಅವರು ಆ ಮುನ್ನ ಯುಜಿಸಿ ಶ್ರೇಣಿ ವೇತನ ಜಾರಿ ಸಂಬಂಧ ತಮಗಿನ್ನೂ ಅದೆಷ್ಟೋ ಲಕ್ಷ ರೂಪಾಯಿಗಳ ಬಾಕಿ ಇರಿಸಿಕೊಂಡಿರುವ ಸಿದ್ದರಾಮಯ್ಯನವರ ಸರ್ಕಾರವನ್ನು ಶಪಿಸಿದ್ದರು. ಅವರಿಗೂ ಈಗ ಮುಳ್ಳು ನಾಟಿದಂತಾಗಿ 'ಸರ್ಕಾರದ ತೀರ್ಮಾನ ಇದು. ನಾವೇನು ಮಾಡುವುದು! ಮೊನ್ನೆ ಶಾಸಕರು–ಮಂತ್ರಿಗಳೆಲ್ಲ ತಮ್ಮ ಸಂಬಳ–ಸಾರಿಗೆಗಳನ್ನು ಎರಡು–ಮೂರು ಪಟ್ಟು ಹೆಚ್ಚಿಸಿಕೊಳ್ಳಲಿಲ್ಲವೆ? ಅದರ ಬಗ್ಗೆ ನಿಮ್ಮಂಥವರೇಕೆ ಮಾತಾಡುವುದಿಲ್ಲ?' ಎಂದು ನನ್ನ ಮೇಲೆ ತಿರುಗಿಬಿದ್ದರು!

ನಾನು ಹೇಳಿದೆ, 'ರೈತರ ಆತ್ಮಹತ್ಯೆಗೆ ಮರುಗಿ ಮಾತು ಶುರು ಮಾಡಿದವರು ನೀವು. ಹಾಗೆ ಮರುಕಪಡುವ ನೈತಿಕ ಹಕ್ಕು ನಿಮಗಿಲ್ಲ ಎಂದಷ್ಟೇ ನಾನು ಹೇಳುತ್ತಿರುವುದು.'

ಚರ್ಚೆ ಶುರು ಮಾಡಿದ ಗೆಳೆಯನಿಗೆ ಇದರಿಂದ ರೇಗಿ ಹೋದಂತಾಗಿ, 'ಸ್ವಾಮಿ, ಕಾಲೇಜು ಮೇಷ್ಟ್ರುಗಳಿಗಷ್ಟೇ ಅಲ್ಲ, ಇವೊತ್ತು ಸರ್ಕಾರಿ ನೌಕರರ ಸಂಬಳ ಎಷ್ಟು ಆಗಿದೆ ನೋಡಿ!' ಎಂದು ಹೊಸ ವರಸೆ ಶುರು ಮಾಡಿದ. ಅದಕ್ಕೆ ಇನ್ನೊಬ್ಬ ಗೆಳೆಯ ಸೇರಿಸಿದ: 'ಈಗ ಜೂನಿಯರ್ ಕಾಲೇಜು ಮೇಷ್ಟ್ರುಗಳು ಈಗ ಕೊಡುತ್ತಿರುವುದು ಸಾಲದೆಂದು ಇನ್ನಷ್ಟು ಸಂಬಳ ಕೇಳಿ ಮುಷ್ಕರ ಮಾಡುತ್ತಿದ್ದಾರಲ್ಲ? ಅದಕ್ಕೇನು ಹೇಳುತ್ತೀರಿ?'

'ಅಂತೂ ಎಲ್ಲ ಸೇರಿ ರೈತರ ಕತೆ ಮುಗಿಸುತ್ತಿದ್ದೇವೆ!', ನಾನೆಂದೆ.

'ಅದ್ಯಾಕೆ ಹಾಗೆ ಹೇಳಿ ನಮ್ಮೆಲ್ಲರ ತಲೆ ಮೇಲೆ ಗೂಬೆ ಕೂರಿಸ್ತೀರಿ! ನಾನೂ ರೈತನೇ ಕಣ್ರೀ. ನನಗೂ ಐದೆಕರೆ ಅಡಿಕೆ ತೋಟ ಇದೆ. ನಾನೇನು ಆತ್ಮಹತ್ಯೆ ಮಾಡಿಕೊಂಡಿದ್ದೀನಾ?' ಎಂದು ಸಿಡಿಮಿಡಿಗೊಂಡ, ಅಮೆರಿಕಾವನ್ನು ದೂಷಿಸಿ ಚರ್ಚೆ ಶುರು ಮಾಡಿದ್ದ ಗೆಳೆಯ. ಆತನಿಗೆ ತಾನೇನು ಮಾತನಾಡುತ್ತಿದ್ದೇನೆಂಬ ಪರಿವೆಯೇ ಇದ್ದಂತಿರಲಿಲ್ಲ.

ಈತನಿಗೆ ನೇರವಾಗಿ ನಾನು ಹೇಳಿದೆ, 'ಆಯ್ತು ಎಲ್ಲ ರೈತರಿಗೂ ಒಂದು ಯುಜಿಸಿ ಸ್ಕೇಲ್ ಕೊಡಿಸಿಬಿಡಿ! ಯಾರೂ ಆತ್ಮಹತ್ಯೆ ಮಾಡಿಕೊಳ್ಳಲ್ಲ!'

ಈ ವ್ಯಂಗ್ಯ ಅವನನ್ನು ನಾಟಿದಂತೆ ಕಂಡಿತು. ಆತನಿಗೆ ಏನೂ ತೋಚದೆ, 'ನಿಮಗೆ ನಮ್ಮ ಸಂಬಳಗಳ ಮೇಲೇ ಕಣ್ಣು. ಇದು ಬರೀ ಮತ್ಸರ' ಎಂದ.

'ಇದು ನಿಮ್ಮ ಸಂಬಳಗಳ ಪ್ರಶ್ನೆ ಮಾತ್ರವಲ್ಲ. ನೀವೇ ಹೇಳಿದ ಹಾಗೆ ಸರ್ಕಾರಿ ನೌಕರರ ಸಂಬಳಗಳೆಲ್ಲವೂ ಹೆಚ್ಚೂ ಕಡಿಮೆ ಹಾಗೇ ಇದೆ. ಹಾಗಿರುವಾಗ ಇವೊತ್ತು ಜನ ಯಾಕೆ ಮತ್ಸರ ಪಡಬಾರದು ಹೇಳಿ. ಒಟ್ಟಾರೆ ಯೋಚನೆ ಮಾಡಿದಾಗ ಮತ್ಸರ ಮಾತ್ರವಲ್ಲ, ಸಿಟ್ಟೇ ಬರುತ್ತದೆ. ಎಷ್ಟು ರಾಜ್ಯಗಳಲ್ಲಿ ಕಾಲೇಜು ಮೇಷ್ಟ್ರುಗಳಿಗೆ ಈ ಸಂಬಳ ಇದೆ? ಈ ಸಂಬಳ ಈ ರಾಜ್ಯದಲ್ಲಿ ಏಕೆ, ಹೇಗೆ ಜಾರಿಗೆ ಬಂತು ಎಂಬುದು ಎಲ್ಲರಿಗೂ ಗೊತ್ತಿದೆ... ಇದರಿಂದ ಇಂದು ಕಾಲೇಜು ಶಿಕ್ಷಣ ಏನಾಗಿದೆ ನೋಡಿ. ನಿಮ್ಮ ಸಂಬಳ ಹೆಚ್ಚಾದಷ್ಟೂ ಅದರ ಗುಣಮಟ್ಟ ಕಡಿಮೆಯಾಗ್ತಾ ಇದೆ. ಇಡೀ ಪದವಿ ಶಿಕ್ಷಣ ಇವೊತ್ತು ಸಂಖ್ಯೆಯಲ್ಲಿ ನಿಮಗಿಂತ ನಾಲ್ಕುಪಟ್ಟು ಜಾಸ್ತಿ ಇರುವ ಅತಿಥಿ ಉಪನ್ಯಾಸಕರ ಕೈಗೆ ಹೋಗಿದೆ. ಅವರನ್ನು ನಿಮ್ಮ ಸಂಬಳದ ಹತ್ತನೇ ಒಂದು ಭಾಗ ಕೊಟ್ಟು ದುಡಿಸಿಕೊಳ್ಳಲಾಗುತ್ತಿದೆ. ಇಂತಹ ಗತಿ ಏಕೆ ಬಂದಿದೆ ಗೊತ್ತೆ? ನಿಮಗೆ ಸಂಬಳ ಕೊಟ್ಟು ಕಾಲೇಜು ಶಿಕ್ಷಣ ಇಲಾಖೆಗೆ ಪೂರೈಸಲಾಗುತ್ತಿಲ್ಲ. ಖಾಲಿ ಇರುವ ಕಾಲುಭಾಗ ಹುದ್ದೆಗಳನ್ನು ತುಂಬಲೂ ಅವರಲ್ಲಿ ಹಣವಿಲ್ಲದಾಗಿದೆ!'

'ಅಂತೂ ನಮ್ಮ ವಿರುದ್ಧ ದೊಡ್ಡ ಸಾಕ್ಷ್ಯವನ್ನೇ ಕಲೆ ಹಾಕಿದ್ದೀರಿ. ಸರಿ ಬಿಡಿ' ಎಂದು ಮುಂದೇನೂ ತೋಚದೆ ಮಾತು ಮುಗಿಸಿದ ಗೆಳೆಯ.

ಆದರೆ ನಾನು, ಇಷ್ಟೆಲ್ಲ ಹೇಳಿದರೂ ನನ್ನ ಮಾತುಗಳನ್ನು ಆತ ತನ್ನ ವಿರುದ್ಧದ ಮತ್ಸರ ಎಂದೇ ಭಾವಿಸಿಕೊಳ್ಳಲು ಕಾರಣವೇನು ಎಂದು ಯೋಚಿಸಿದೆ. ಇಂದು ಸರ್ಕಾರಿ ಕಛೇರಿಗಳಲ್ಲಿ ಅರ್ಧಕ್ಕರ್ಧ ಹುದ್ದೆಗಳು ಖಾಲಿ ಇವೆ. ಅವನ್ನು ತುಂಬದೆ ಹಾಗೇ ಬಿಡಲಾಗಿದೆ ಅಥವಾ ಕೆಲವನ್ನು ನೌಕರರಿಗೆ ಕೊಡುವ ಕಾಲುಭಾಗದಷ್ಟು ಸಂಬಳ ಪಡೆಯುವ 'ಗುತ್ತಿಗೆ' ಕೆಲಸಗಾರರಿಂದ ತುಂಬಲಾಗುತ್ತಿದೆ. ಆದುದರಿಂದ ಅಲ್ಲಿ ಅದಕ್ಷತೆ-ಅಶಾಂತಿ ತಾಂಡವವಾಡುತ್ತಿದೆ. ಹೀಗೆ ಇಂದು ಸಾರ್ವಜನಿಕವಾಗಿ ಒಂದೇ ಜವಾಬ್ದಾರಿ ಕೆಲಸಕ್ಕೆ ವಿಪರೀತ ವ್ಯತ್ಯಾಸಗಳಿರುವ ಪ್ರತಿಫಲ ಪಡೆಯುವ ಎರಡು-ಮೂರು ವರ್ಗಗಳು ಸೃಷ್ಟಿಯಾಗಿವೆ. ಇದು ಸರ್ಕಾರ ಮಾಡಿದ ವಿಕೃತಿಯೆಂದೂ ಇದರಲ್ಲಿ ತನ್ನದೇನೂ ಪಾಲಿಲ್ಲವೆಂದೂ ನಮ್ಮ ಈ ನವ ಮಧ್ಯಮ ವರ್ಗದ ಗೆಳೆಯರು ಭಾವಿಸಿದ್ದಾರೆ. ಹಾಗಾಗಿಯೇ ಅವರು ಜಗತ್ತಿನ, ಸಮಾಜದ, ಸಮಕಾಲೀನ ರಾಜಕಾರಣದ ವಿಮರ್ಶೆ ತಮ್ಮ ನೈತಿಕ ಹಕ್ಕು ಎಂದು ಭಾವಿಸಿದ್ದಾರೆ. ಮಾರ್ಕ್ಸ್-ಗಾಂಧಿ-ಅಂಬೇಡ್ಕರ್-ಲೋಹಿಯಾರ ಅಣಿಮುತ್ತುಗಳು ಅವರ ಬಾಯಿಗಳಿಂದ ಅಲ್ಲಲ್ಲಿ ಆಗಾಗ್ಗೆ ಉದುರುತ್ತಲೇ ಇರುತ್ತವೆ.

ಈ ವರ್ಗ ಈ ನಮ್ಮ ಗೆಳೆಯರಿಗೇ ಸೀಮಿತವಾಗದೆ ದೇಶಾದ್ಯಂತ ಹರಡಿದೆ. ಅವರು ಅದಾನಿ-ಅಂಬಾನಿಗಳನ್ನು ಅವರ ನಿರ್ಲಜ್ಜ ಬಂಡವಾಳಶಾಹಿಗಾಗಿ,

ನಾರಾಯಣಮೂರ್ತಿ–ಅಜೀಂ ಪ್ರೇಂಜೀಗಳನ್ನು ಅವರ ಲಾಭಕೋರತನಕ್ಕಾಗಿ ಶಪಿಸುತ್ತಾರೆ. ಸಂಘ ಪರಿವಾರದ ಪ್ರಭಾವ ಬೆಳೆಯುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಮರ್ಯಾದೆಗೇಡು ಹತ್ಯೆಗಳನ್ನು ಖಂಡಿಸುತ್ತಾರೆ. ಸಿಗರನಹಳ್ಳಿಯ ಜಾತೀಯ ಪ್ರಕರಣದ ಬಗ್ಗೆ ಹೌಹಾರುತ್ತಾರೆ. ದೂರದ ಬಸ್ತರ್‌ನ ಆದಿವಾಸಿಗಳ ಹೋರಾಟಕ್ಕೆ ಇಲ್ಲಿಂದಲೇ ಸಹಾನುಭೂತಿ ವ್ಯಕ್ತಪಡಿಸುತ್ತಾರೆ ಬಿಸಿಲು ತಾಳಲಾರದೆ, ಪರಿಸರ ನಾಶವನ್ನಾಧರಿಸಿದ ಅಭಿವೃದ್ಧಿ ಮಾದರಿಯ ಬೌದ್ಧಿಕ ವಿಶ್ಲೇಷಣೆಯನ್ನೂ ಮಾಡುತ್ತಾರೆ. ರಸ್ತೆಯಲ್ಲಿ ಆಕಸ್ಮಿಕಕ್ಕೆ ಸಿಕ್ಕಿ ರಕ್ತ ಸುರಿಸುತ್ತಾ ಬಿದ್ದಿರುವ ಜನರನ್ನು ಯಾರೂ ಎತ್ತಿ ಆಸ್ಪತ್ರೆಗೆ ಸಾಗಿಸದಂತಹ ಅಮಾನವೀಯತೆ ಏಕೆ ಬೆಳೆದಿದೆ ಎಂದೂ ಕೇಳುತ್ತಾರೆ.

ಇವರು ಹೀಗೆ ಎಲ್ಲ ಸರಿಯಾಗಿಯೇ ಯೋಚಿಸುತ್ತಾರೆ, ಆದರೆ ಒಂದು ವಿಷಯ ಬಿಟ್ಟು. ಅದೆಂದರೆ, ಈ ಸಾರ್ವತ್ರಿಕ ಅವನತಿಗೆ ಕಾರಣವಾಗಿರುವ, ಸಮಾಜವನ್ನು ಮೂರು ನಾಲ್ಕು ಸಂಪೂರ್ಣ ಪ್ರತ್ಯೇಕ ವಿಭಾಗಗಳನ್ನಾಗಿ ಒಡೆದು ನಮ್ಮ ಸಂವೇದನಾಶೀಲತೆಯನ್ನೇ ನಾಶ ಮಾಡಿರುವ ಹೊಸ ಆರ್ಥಿಕ ವ್ಯವಸ್ಥೆಯ ಲಾಭ ಪಡೆದಿರುವವರಲ್ಲಿ ನಾವೂ ಸೇರಿದ್ದೇವೆ ಅಲ್ಲವೆ ಎಂಬ ಯೋಚನೆ. ಯಾವ ಅದಾನಿ–ಅಂಬಾನಿಗಳನ್ನು ಪೋಷಿಸುತ್ತಿದೆಯೆಂದು ನಾವು ಹೇಳುತ್ತಿದ್ದೇವೋ ಆ ವ್ಯವಸ್ಥೆಯ ಫಲಾನುಭವಿಗಳು ಮತ್ತು ಪಾಲುದಾರರು ನಾವೂ ಆಗಿದ್ದೇವೆ ಎಂಬ ಅರಿವೇ ನಮ್ಮ ಬಳಿ ಸುಳಿಯದಾಗಿದೆ. ಎಲ್ಲ ಹೊಸ ಸುಖಗಳ ವ್ಯವಸ್ಥೆಗೆ ಮನುಷ್ಯ ಸಹಜ ಹಕ್ಕುದಾರನೇ ಆಗಿದ್ದಾನೆ ಎಂಬ ಹಕ್ಕಿನ ಆಧುನಿಕ ಪ್ರಜ್ಞೆಯೇ ನಮ್ಮ 'ಪ್ರಗತಿಪರ' ಚಿಂತನೆಯ ಜೀವಾಳವಾಗಿಬಿಟ್ಟಿದೆ, ಹಾಗಾಗಿಯೇ ಇವರು ತಮ್ಮನ್ನು ಬಿಟ್ಟು ಇನ್ನೆಲ್ಲರ ಬಗ್ಗೆ ಮಾತಾಡುತ್ತಾರೆ. ಇಂದಿನ ಸಾಮಾಜಿಕ ಅಸ್ವಸ್ಥತೆಗೆ ಯಾವುದೋ ದೂರದ ಅಮೆರಿಕಾದ ಸಾಮ್ರಾಜ್ಯಶಾಹಿಯಲ್ಲಿ ಕಾರಣಗಳನ್ನು ಹುಡುಕಿ ಹೇಳುತ್ತಾ ತಮ್ಮ ಸುಖಗಳಿಗೆ ಕಿಂಚಿತ್ತೂ ಚ್ಯುತಿಯಾಗದಂತೆ ಎಚ್ಚರಿಕೆ ವಹಿಸಿಕೊಂಡಿದ್ದಾರೆ. ಜನ ಸುಮ್ಮನೆ ನೋಡುತ್ತಿದ್ದಾರೆ....

<u>ಸಮಕಾಲೀನ</u>

ಕಳೆದುಹೋಗಿರುವ ಬುದ್ಧನನ್ನು ಅರಸುತ್ತಾ...

ಈ ಮೇಲಿನ ಶೀರ್ಷಿಕೆಯೇ ಕೆಲವರಿಗೆ ಅತಿ ವಿಚಿತ್ರವೋ, ಉದ್ಧಟತನದ್ದೋ ಎನ್ನಿಸಬಹುದು. ಇಡೀ ಜಗತ್ತೇ ಇನ್ನೊಂದು ಬುದ್ಧ ಜಯಂತಿಯನ್ನು ಆಚರಿಸಲು ಸಜ್ಜಾಗುತ್ತಿರುವಾಗ ಬುದ್ಧ ಕಳೆದು ಹೋಗಿದ್ದಾನೆ ಎಂದರೆ ಏನರ್ಥ? ಎಂದು ಕೇಳಬಹುದು. ಇನ್ನೊಂದು ಮತ್ತು ಔಪಚಾರಿಕ ಎಂಬ ಗುಣವಿಶೇಷಣಗಳುಳ್ಳ ಆಚರಣೆಗಳೇ ಹಾಗೆ. ಅವಕ್ಕೆ ಹೆಸರು ಮಾತ್ರ ಮುಖ್ಯವಾಗಿರುತ್ತವೆ. ಆ ಹೆಸರಿನ ಒಂದಿನ ತತ್ವ ಮತ್ತು ಸತ್ವ ಕ್ಲೀಷೆಯ ಮಾತುಗಳಾಗಿಬಿಟ್ಟಿರುತ್ತವೆ. ಆದರೆ ಬುದ್ಧನ

ವಿಷಯದಲ್ಲಿ ಅವನ ತತ್ವ ಮತ್ತು ಸತ್ವ ಕ್ಲೀಷೆಯಾಗಿಲ್ಲ; ಬದಲಿಗೆ ಬಹುರೂಪಗಳನ್ನು ತಳೆದು ಅವುಗಳಲ್ಲಿ ನಿಜವಾದ ಬುದ್ಧನ ತತ್ತ್ವ-ಸತ್ವವನ್ನು ಹುಡುಕುವುದೇ ದುಸ್ತರವೇ ಆಗಿಬಿಟ್ಟಿದೆ.

ಇದು ಬುದ್ಧನನ್ನು ಆಪತ್ಬಂಧು ಎಂದು ಬಹಳ ಜನ ಆತುಕೊಂಡಿರುವ ಆಧುನಿಕ ಕಾಲದ ಸಮಸ್ಯೆಯೇನೂ ಅಲ್ಲ. ಬುದ್ಧ ಪರಿನಿರ್ವಾಣ ಹೊಂದಿದ ಒಂದು ವರ್ಷದಲ್ಲೇ ಬುದ್ಧನ ಮಾತುಗಳು ಅಪವ್ಯಾಖ್ಯಾನಗೊಳ್ಳುತ್ತಿವೆ ಎಂಬ ಸಂದೇಹದ ಆಧಾರದ ಮೇಲೆ ಮೊದಲ ಬೌದ್ಧ ಸಮಾವೇಶ ನಡೆಯಿತು. ಆನಂತರ ಆಶೋಕ, ಕಾನಿಷ್ಕ ಹೀಗೆ ಹಲವರ ರಾಜಾಶ್ರಯಗಳಲ್ಲಿ ಬೌದ್ಧ ಸಮಾವೇಶಗಳು ನಡೆದು, ಬುದ್ಧ ನಿಜವಾಗಿ ಏನು ಹೇಳಿದ್ದ ಎಂಬುದನ್ನು ಹಲವು ಸಾಕ್ಷ್ಯಗಳ ಆಧಾರದ ಮೇಲೆ ದಾಖಲಿಸುವ ಕೆಲಸ ಇತಿಹಾಸದಲ್ಲಿ ನಡೆದಿದೆ. ಲಿಖಿತ ದಾಖಲೆಗಳ (ತ್ರಿಪಿಟಿಕಗಳ) ಸಾಕ್ಷ್ಯದಲ್ಲೇ ಹಲವಾರು ಪುನರ್‌ವ್ಯಾಖ್ಯಾನಗಳೂ ಕಳೆದ ಎರಡೂವರೆ ಸಹಸ್ರಮಾನಗಳಲ್ಲಿ ನಡೆದಿವೆ. ಥೇರವಾದ, ಸರ್ವಾಸ್ತಿವಾದ, ಮಹಾ ಸಾಂಘಿಕರು, ಹೀನಯಾನ, ಮಹಾಯಾನ, ವಜ್ರಯಾನ, ಮಂತ್ರಯಾನ, ತಂತ್ರಯಾನ, ಝೆನ್ ಇತ್ಯಾದಿಯಾಗಿ ಇತಿಹಾಸದಲ್ಲಿ ಬೌದ್ಧ ತತ್ವದ ಅನೇಕ ಆವೃತ್ತಿಗಳು ಜಗತ್ತಿನ ವಿವಿಧ ಭಾಗಗಳ ಜನರಿಗೆ ಬದುಕಿನ ಮಾದರಿ ಹಾಗೂ ಮೌಲ್ಯಗಳನ್ನು ಒದಗಿಸಿವೆ. ಆಧುನಿಕ ಕಾಲದಲ್ಲಂತೂ ಪೂರ್ವದ ಈ ತತ್ವ ಪಶ್ಚಿಮದವರನ್ನೂ ತೀವ್ರವಾಗಿ ಸೆಳೆದು ಇನ್ನಷ್ಟು ವ್ಯಾಖ್ಯಾನಗಳು ಸೃಷ್ಟಿಯಾಗಿವೆ. ಇವುಗಳಿಂದ ನಿಜವಾದ ಬುದ್ಧನನ್ನು ಸಂಸ್ಕರಿಸಿಕೊಳ್ಳುವ ಪ್ರಯತ್ನವಾಗಿ ಕೆಲವರು ಅನುಭಾವಿ ಬೌದ್ಧ ತತ್ವವೆಂಬ ಒಂದು ಪಂಥವನ್ನೂ ರೂಪಿಸಿಕೊಂಡಿದ್ದಾರೆ.

ಹಾಗೆ ನೋಡಿದರೆ ಇತ್ತೀಚಿನ ವರ್ಷಗಳಲ್ಲಿ ಬುದ್ಧನನ್ನು ವ್ಯಾಖ್ಯಾನ ಮಾಡಿದ ನಾಲ್ವರು ಮುಖ್ಯ ವ್ಯಕ್ತಿಗಳೆಂದರೆ, ಬಾಬಾ ಸಾಹೇಬ್ ಅಂಬೇಡ್ಕರ್, ದಲೈಲಾಮಾ, ಜಿಡ್ಡು ಕೃಷ್ಣಮೂರ್ತಿ ಮತ್ತು ಓಷೋ (ಆಚಾರ್ಯ ರಜನೀಶ್) ಎಂದು ಹೇಳಬಹುದು. ಇವರಲ್ಲಿ ಮೊದಲನೆಯವರು ಭಾರತದ ಒಂದು ಸಮುದಾಯವನ್ನು ಪಾರಂಪರಿಕ ಸಂಕಷ್ಟದಿಂದ ಪಾರು ಮಾಡುವ ಒಂದು ನಿರ್ಣಾಯಕ ಮಾರ್ಗವಾಗಿ ಬುದ್ಧನ 'ಆಶ್ರಯ' ಪಡೆದರು. ಮಿಕ್ಕವರು ಆಧುನಿಕ ಮನುಷ್ಯನ ತಳಮಳಗಳ ಶಮನಕ್ಕಾಗಿ ಬುದ್ಧನ ತತ್ವಗಳ ನವೀಕರಣದ ಪ್ರಯತ್ನಗಳನ್ನು ಮಾಡಿದವರು. ಇವರು ಮಾತ್ರವಲ್ಲದೆ, ಸ್ವಸ್ವರೂಪ ದರ್ಶನವೇ ಧರ್ಮ ಎಂದ ರಾಮಕೃಷ್ಣ ಪರಮಹಂಸ-ವಿವೇಕಾನಂದ ಮತ್ತು ರಮಣ ಮಹರ್ಷಿಗಳ ಮಾತುಗಳಲ್ಲಿಯೂ ಮನೋನಾಶದ ಮಾತನಾಡುವ ಬುದ್ಧ ಇಣುಕುವುದನ್ನು ಬುದ್ಧನ ಸತ್ವ ಬಲ್ಲವರು ಗುರುತಿಸಬಲ್ಲರು.

ಆದರೆ ಇಂದಿನ ಸಮಸ್ಯೆ ಎಂದರೆ ಬುದ್ಧ ತತ್ವವನ್ನು ಇನ್ನೊಂದು ತತ್ವದ ವಿರುದ್ಧ ನಿಲ್ಲಿಸಿ ವ್ಯಾಖ್ಯಾನ ಮಾಡಿ ರಾಜಕಾರಣಕ್ಕೆ ಅದನ್ನು ಬಳಸುತ್ತಿರುವುದು. ಉದಾಹರಣೆಗೆ, ಬುದ್ಧ ಹಿಂದೂ ಧರ್ಮದ ಜಾತಿ ವ್ಯವಸ್ಥೆಯ ವಿರುದ್ಧ ಬಂಡಾಯ ಸಾರಿದ ಎನ್ನುವುದು.

ಇದರಿಂದಾಗಿಯೇ ಶಂಕರಾಚಾರ್ಯರ ನೇತೃತ್ವದಲ್ಲಿ ಬೌದ್ಧ ಸ್ಥಳಗಳ ಮೇಲೆ ದಾಳಿ ನಡೆದು ಅವನ್ನು ಹಿಂದೂ ಕ್ಷೇತ್ರಗಳಾಗಿ ಪರಿವರ್ತಿಸಿ ಬೌದ್ಧ ಧರ್ಮವನ್ನು ದೇಶದ ಆಚೆಗೆ ಓಡಿಸಲಾಯಿತು ಎಂದು ಹೇಳುವುದು. ಬುದ್ಧ ಅನಾತ್ಮವಾದಿಯೂ, ಹಾಗಾಗಿ ನಾಸ್ತಿಕನೂ ಆಗಿದ್ದು ಹಿಂದೂ ಧರ್ಮ ಆತ್ಮವಾದಿಯೂ ಆಸ್ತಿಕವೂ ಆಗಿದ್ದು ಎರಡೂ ಪರಸ್ಪರ ವಿರುದ್ಧವಾದವು ಎಂದು ವಾದಿಸುವುದು ಇತ್ಯಾದಿ. ಇವು ಎರಡೂ ಧರ್ಮಗಳ ವಿದ್ವಾಂಸರ ಪ್ರಕಾರ ಎರಡೂ ಧರ್ಮಗಳನ್ನು ತಮ್ಮ ಸ್ವಾರ್ಥ ರಾಜಕಾರಣಕ್ಕನುಸಾರವಾಗಿ ಮಾತ್ರ ಓದಿಕೊಂಡವರು ಸೃಷ್ಟಿಸುತ್ತಿರುವ ಮಿಥ್ಯಗಳು.

ಮೊದಲಾಗಿ ಅರಿಯಬೇಕಾದ ಸಂಗತಿ ಎಂದರೆ, ನಾವು ಬುದ್ಧನ ಬಗ್ಗೆ ಮಾತಾಡುವಾಗ ಎರಡೂವರೆ ಸಾವಿರ ವರ್ಷಗಳ ಹಿಂದಿನ ಇತಿಹಾಸದ ಬಗ್ಗೆ ಮಾತಾಡುತ್ತಿರುತ್ತೇವೆ ಎಂಬುದು. ಒಂದು ಶತಮಾನದ ಹಿಂದಿನ ಇತಿಹಾಸವೇ ನಮಗೆ ಹಲವು ಆವೃತ್ತಿಗಳಲ್ಲಿ ಕಲಸುಮೇಲೋಗರವಾಗಿ ಕಾಣುತ್ತಿರುವಾಗ ೨೫ ಶತಮಾನಗಳ ಹಿಂದಿನ ಇತಿಹಾಸ ಇನ್ನೆಷ್ಟು ಸ್ಪಷ್ಟವಾಗಿ ನಮಗೆ ಕಾಣಿಸಬಹುದು? ಅದರ ಆಧಾರದ ಮೇಲೆ ನಾವು ಕಟ್ಟಿಕೊಳ್ಳಲಾಗುವ ಬುದ್ಧ, ಚರಿತ್ರೆಯ ನಿಜಗಳಿಗೆ ಎಷ್ಟು ಬದ್ಧನಾಗಿರಬಲ್ಲ? ಹಾಗಾಗಿ, ಇಂದು ನಮಗೆ ಬೇಕಾಗಿರುವ ಬುದ್ಧನನ್ನು ಚರಿತ್ರೆಯ ಅವಶೇಷಗಳಿಂದ ಹೆಕ್ಕಿ ರೂಪಿಸಿಕೊಳ್ಳುವುದೇನೋ ಸರಿ. ಆದರೆ ಹೀಗೆ ನಮ್ಮ ಇಂದಿನ ಅಗತ್ಯಗಳಿಗೆ ರೂಪಿಸಿಕೊಂಡ ಬುದ್ಧನನ್ನು ಚರಿತ್ರೆಯನ್ನು ನಿರೂಪಿಸಿಕೊಳ್ಳಲು ಮತ್ತು ಆ ಮೂಲಕ ಇಂದಿನ ರಾಜಕಾರಣ ಮಾಡಲು ಸಾಧನವಾಗಿ ಬಳಸುವುದು ಎಷ್ಟು ಸರಿ ಎಂಬ ಪ್ರಶ್ನೆಯನ್ನೂ ನಾವಿಂದು ಕೇಳಿಕೊಳ್ಳಬೇಕಿದೆ.

ಬುದ್ಧ ಮೂಡಿಬಂದಾಗ ಹಿಂದೂ ಧರ್ಮವೆಂಬುದು ಇರಲಿಲ್ಲ. ಇದ್ದುದು ವೈದಿಕ ಧರ್ಮ. ಅದೂ ವ್ಯವಸ್ಥಿತ ಮತ್ತು ಸರ್ವವ್ಯಾಪಿಯಾಗಿರಲಿಲ್ಲ. ಅಂದರೆ ವೈದಿಕವಲ್ಲದ ಅನೇಕ ಬೇರೆ ಸಮಾಜಗಳೂ ಇದ್ದವು. ಅಷ್ಟೇ ಅಲ್ಲ, ವೈದಿಕ (ಅಂದರೆ ವೇದ ಪ್ರಾಮಾಣ್ಯ ಮತ್ತು ಪಾರಮ್ಯವನ್ನು ಒಪ್ಪುವ) ಧರ್ಮದ ಬಗೆಗೂ ವ್ಯಾಪಕ ಭಿನ್ನಾಭಿಪ್ರಾಯಗಳು ಬೆಳೆದು ಶ್ರಮಣ ಸಂಪ್ರದಾಯವೆಂಬುದೊಂದು ರೂಪುಗೊಂಡಿತ್ತು. ಆಗಲೇ ವೇದಗಳನ್ನು ನಿಷ್ಠುರ ವಿಮರ್ಶೆಗೆ ಗುರಿ ಮಾಡಿದ್ದ ಉಪನಿಷತ್ಕಾರರು ಉದಯವಾಗಿದ್ದರು. ಇದು ಭರತಖಂಡದಲ್ಲಿ ನಿರಂತರವಾಗಿ ನಡೆದಿರುವ ಸೃಷ್ಟಿಯ ನಿಗೂಢ ರಹಸ್ಯಗಳನ್ನು ಅರಿಯುವ ಬೌದ್ಧಿಕ ಜಿಜ್ಞಾಸೆಯ ಒಂದು ಘಟ್ಟವಾಗಿತ್ತು. ಇದರ ಒಂದು ಉತ್ಕೃಷ್ಟ ಫಲವೇ ಬುದ್ಧ. ಈ ಅರ್ಥದಲ್ಲೇ ಬುದ್ಧನನ್ನು ಕೆಲವರು ಒಬ್ಬ ಉಪನಿಷತ್ಕಾರನೆಂದೂ ಗುರುತಿಸುತ್ತಾರೆ. ಅದೇನೇ ಇರಲಿ, ಆಗ ಬುದ್ಧನ ಜ್ಞಾನ ಮೀಮಾಂಸೆಯನ್ನು ಒಪ್ಪಿ ಅವನ ಶಿಷ್ಯರಾದವರಲ್ಲಿ ಶ್ರಮಣರ ಜೊತೆ ವೈದಿಕರೂ ಇದ್ದರು ಎಂಬುದನ್ನು ನಾವು ಮರೆಯಬಾರದು. ನಿಜ, ಬುದ್ಧ ತಾನು ಕಂಡುಕೊಂಡ ಇರಪಿನ ಸತ್ಯದ ಹಿನ್ನೆಲೆಯಲ್ಲಿ ವೇದಗಳ ಅಪೌರುಷೇಯತೆಯನ್ನೂ, ಪ್ರಾಮಾಣ್ಯವನ್ನೂ

ಒಪ್ಪಲಿಲ್ಲ. ಆದರೆ ಅವನ್ನು ಇಡಿಯಾಗಿ ಈಗ ಕೆಲವರು ಹೇಳುವಂತೆ ಜೀವ ವಿರೋಧಿಯೆಂದು ತಿರಸ್ಕರಿಸಿದ ಯಾವ ಸಾಕ್ಷ್ಯಗಳೂ ಇಲ್ಲ. ಆತ ಅದರ ಕರ್ಮಕಾಂಡವನ್ನಷ್ಟೇ–ಪ್ರಾಣಿ ಬಲಿಯ ಯಜ್ಞ–ಯಾಗಾದಿಗಳ ಮೂಲಕ ಸ್ವರ್ಗ ಪಡೆಯಬಹುದೆಂಬ ನಂಬಿಕೆಯ ಆಚಾರ–ತಿರಸ್ಕರಿಸಿದ.

ಬುದ್ಧ ತನ್ನ ಶಿಷ್ಯರಿಗೆ ಬ್ರಾಹ್ಮಣರನ್ನು ಗೌರವಿಸಲು ಹೇಳಿದ್ದ. ಏಕೆಂದರೆ ಅವರು (ಈಗಿನ 'ರೆಡಿಮೇಡ್' ಬ್ರಾಹ್ಮಣರಂತೆ) ಹುಟ್ಟು ಬ್ರಾಹ್ಮಣರಾಗಿರದೆ, ನಿರಂತರ ಜ್ಞಾನ ಜಿಜ್ಞಾಸುಗಳಾಗಿದ್ದುದರಿಂದ ಬ್ರಾಹ್ಮಣರೆನಿಸಿಕೊಂಡಿದ್ದರು. ಹೀಗಾಗಿ, ಇಂದಿನಷ್ಟು ರಾಜಕೀಯಗೊಂಡು ಸಂಕೀರ್ಣವಾಗಿರದಿದ್ದ ಜಾತಿ ಪದ್ಧತಿಯನ್ನು–ಅದರ ಶ್ರೇಣೀಕರಣವನ್ನು–ಬುದ್ಧ ಮಾನ್ಯ ಮಾಡುತ್ತಿರಲಿಲ್ಲ ಎಂಬ ಸಂಗತಿಯನ್ನು ಇಂದಿನ ರೂಕ್ಷ ಜಾತಿ ಮೇಲಾಟದ ರಾಜಕಾರಣಕ್ಕಾಗಿ ಬಳಸಿಕೊಳ್ಳುವುದು ಬುದ್ಧನನ್ನು ವಿಕೃತಗೊಳಿಸುವ ಕೆಲಸವೇ ಸರಿ.

ಇನ್ನು ದೇವರು–ದೇವಾಲಯಗಳ ವಿಷಯ. ಭರತ ಖಂಡದಲ್ಲಿ ವಿಗ್ರಹ ಸಂಸ್ಕೃತಿ ಆರಂಭವಾದದ್ದೇ ಮಹಾಯಾನದ ಬೌದ್ಧ ದೇವತೆಗಳ ಆವಿಷ್ಕಾರದಿಂದಾಗಿ ಎಂಬುದನ್ನು ನಾವು ತಿಳಿದಿರಬೇಕು. ಗಾಂಧಾರ ಕಲೆಯ ಮೂಲಕ ಏಷ್ಯಾದ್ಯಂತ ನಡೆದ ಬುದ್ಧ ಮತ್ತು ಆನಂತರ ವಜ್ರಯಾನದ ಮೂಲಕ ಅಭಿವ್ಯಕ್ತಗೊಂಡ ಬುದ್ಧನ ಇತರ ರೂಪುಗಳು ಹಾಗೂ ಅವುಗಳ ಪೋಷಕ ದೇವತೆಗಳ ಶಿಲ್ಪಗಳು ಮತ್ತು ಅವುಗಳ ಆಶ್ರಯದಾಣಗಳಾಗಿ ಕಟ್ಟಲ್ಪಟ್ಟ ವಿಹಾರ–ಸ್ತೂಪ ಇತ್ಯಾದಿಗಳೇ ಭಾರತದ ಶಿಲ್ಪ ಕಲೆಯ ಅತ್ಯುನ್ನತ ಸಾಧನೆಗಳಿಗೆ ಸ್ಫೂರ್ತಿಯಾದದ್ದು. ಇತ್ತೀಚೆಗೆ ತಾಲಿಬಾನಿಗಳಿಂದ ನಾಶ ಮಾಡಲ್ಪಟ್ಟ ಆಫ್ಘಾನಿಸ್ತಾನದಲ್ಲಿದ್ದ ಬೊಮಿಯಾನ್ ಬುದ್ಧ ಕ್ಷೇತ್ರಗಳು ಮತ್ತು ಭಾರತದಲ್ಲಿನ ಅಜಂತಾ–ಎಲ್ಲೋರಾ ಗುಹಾ ಕೆತ್ತನೆಗಳು ಇದಕ್ಕೆ ಅತ್ಯುತ್ತಮ ಉದಾಹರಣೆಗಳು.

ಇಂತಹ ಬೌದ್ಧ ಧರ್ಮ ತನ್ನ ವಿವಿಧ ರೂಪಗಳಲ್ಲಿ ಭಾರತದಲ್ಲಿ ಒಂದು ಸಾವಿರ ವರ್ಷ ಎಲ್ಲ ಕಾಲಾವಧಿಗಳ ಮುಖ್ಯ ರಾಜರುಗಳ ಆಶ್ರಯ ಪಡೆದು ಪ್ರಧಾನ ಧರ್ಮವಾಗಿ ಮೆರೆಯಿತು ಎಂಬುದನ್ನೂ ನಾವು ಮರೆಯಬಾರದು. ಹಾಗೇ ಒಂದು ಸಾವಿರ ವರ್ಷ ಒಂದು ಜನಸಮುದಾಯವನ್ನು ಆಳಿ ಬಾಳಿದ ಧರ್ಮ ಒಂದು ದಿನ ಶಂಕರನೆಂಬ ಓರ್ವ ಆಚಾರ್ಯನ ಧಾರ್ಮಿಕ ಪಡೆಯ ದಾಳಿಗೆ ಸಿಕ್ಕಿ ದೇಶ ಬಿಟ್ಟು ಓಡಿ ಹೋಗಿ ಇಲ್ಲಿ ನಿಶ್ಶೇಷವಾಯಿತು ಎಂದು ಹೇಳುವವರನ್ನು ಏನೆಂದು ಕರೆಯುವುದು?

ಇತಿಹಾಸ ತಿಳಿಸುವಂತೆ ಬೌದ್ಧ ಧರ್ಮ ಕೂಡ ಕಾಲಾಂತರದಲ್ಲಿ ಹಲವು ತೆರನ ಅನುಯಾಯಿ ಸಮುದಾಯಗಳ ಮನುಷ್ಯ ದೌರ್ಬಲ್ಯಗಳಿಗೆ ಈಡಾಗಿ ಹಲವು ರೂಪಗಳನ್ನು ತಾಳಿತು. ಆಳುವ ಎಲ್ಲ ವಿದ್ಯಮಾನಗಳೂ ಆಗುವಂತೆ ಅದೂ ಭ್ರಷ್ಟವಾಯಿತು. ವಿಶೇಷವಾಗಿ ತಂತ್ರಯಾನ ಸ್ವೇಚ್ಛಾಯಾನವಾಗಿ ಅವನತಿಗೊಂಡು ಸಮಾಜದಲ್ಲಿ

ಅರಾಜಕತೆಯನ್ನು ಸೃಷ್ಟಿಸಲಾರಂಭಿಸಿತ್ತು. ವಿಹಾರಗಳು ಆರಾಮ ಕೇಂದ್ರಗಳಾಗತೊಡಗಿದ್ದವು. ಮೃಚ್ಛಕಟಿಕ, ಮತ್ತ ವಿಲಾಸ ಮತ್ತು ಆ ಕಾಲದ ಇನ್ನಿತರ ಸಂಸ್ಕೃತ ನಾಟಕಗಳನ್ನು ಓದಿದರೆ, (ಬೌದ್ಧ ಧರ್ಮವೆನ್ನುವುದು ಇಂದಿನ ಅತಿ ಹಿಂದುತ್ವದಂತೆಯೇ!) ಹೇಗೆ ಹಲವು ಕಳ್ಳರ–ಸುಳ್ಳರ–ದುಷ್ಟರ–ವ್ಯಭಿಚಾರಿಗಳ–ಜೂಜುಕೋರರ ರಕ್ಷಾಕವಚವಾಗಿತ್ತು ಎಂಬುದು ಗೊತ್ತಾಗುತ್ತದೆ. ಇದರ ಐತಿಹಾಸಿಕ ಪರಿಣಾಮವೇ ಶಂಕರರ ಆಗಮನ ಮತ್ತು ನಂತರದ ಬೆಳವಣಿಗೆಗಳು.

ಹಾಗಾಗಿ ಶಂಕರರು ಬುದ್ಧನನ್ನು ಈ ದೇಶದಿಂದ ಉಚ್ಚಾಟಿಸಿದರೆಂದು ಹೇಳುವುದು ಶುದ್ಧ ಮೂರ್ಖತನ. ಹಾಗೆ ನೋಡಿದರೆ, ಸ್ವತಃ ಶಂಕರರನ್ನೇ ಅವರ ಕಾಲದಲ್ಲೇ ಪ್ರಚ್ಛನ್ನ (ವೇಷ ಮರೆಸಿಕೊಂಡ) ಬುದ್ಧ ಎನ್ನುವವರಿದ್ದರು; ಈಗಲೂ ಇದ್ದಾರೆ. ಅಂದರೆ ಶಂಕರ ಹೇಳಿದ್ದು ಮೂಲ ತತ್ವದಲ್ಲಿ ಬೌದ್ಧ ಧರ್ಮವನ್ನೇ; ಆದರೆ ವೈದಿಕ ಪರಿಭಾಷೆಯಲ್ಲಿ ಎನ್ನಬಹುದೇನೋ! ವೈದಿಕ ಪರಿಭಾಷೆ ಎನ್ನಲು ಮುಖ್ಯ ಕಾರಣ, ಅದು ವರ್ಣ ಧರ್ಮದ ಪ್ರತಿಪಾದನೆ ಮಾಡುತ್ತದೆ ಎನ್ನುವುದಕ್ಕಾಗಿ. ಅಂದರೆ (ಬಹು ಹಂತಗಳ ಮತ್ತು ಹದಗಳ ಅರಿವನ್ನು ಬೇಡುವ) ಅನಾತ್ಮವಾದ ಮತ್ತು ತಂತ್ರವಾದಗಳನ್ನು ಸರಳೀಕರಿಸಿ ಅವನ್ನು ದೈವವಿರೋಧಿ ಮತ್ತು ಸುಲಭ ಮುಕ್ತಿಯ ಪರಿಕಲ್ಪನೆಗಳನ್ನಾಗಿ ಅಗ್ಗಗೊಳಿಸಿದ್ದರಿಂದ ಉಂಟಾಗಿದ್ದ ಸಾಮಾಜಿಕ ಮತ್ತು ಅಧ್ಯಾತ್ಮಿಕ ಅರಾಜಕತೆಯನ್ನು ತಹಬಂದಿಗೆ ತರಲು ಶಂಕರರು ಆ ಹೊತ್ತಿಗೆ ಸಂಪೂರ್ಣ ಅಪ್ರಸ್ತುತಗೊಂಡಿದ್ದ ಜಾತಿ ಪದ್ಧತಿಗೇ ಮೊರೆಹೋದದ್ದೊಂದು ವಿಪರ್ಯಾಸವೇ ಸರಿ. ಇದನ್ನೇ ಕಾಶಿಯಲ್ಲಿ ಚಂಡಾಲನೊಬ್ಬ ಶಂಕರರನ್ನು ಅಡ್ಡಗಟ್ಟಿ ಪ್ರಶ್ನಿಸಿದ್ದು ಮತ್ತು ಆತನಲ್ಲಿ ಶಂಕರರು ಶಿವನನ್ನೇ ಕಂಡ ದಂತಕಥೆ ಹುಟ್ಟಿಕೊಂಡದ್ದು! ಅದೇನೇ ಇರಲಿ, ತಾಂತ್ರಿಕ ವಿದ್ಯಾ ಪರಿಣತರಾಗಿದ್ದ ಅವರು ಅನೇಕ ಬೌದ್ಧ ದೇವತೆಗಳಿಗೆ ಪರ್ಯಾಯವಾದ ದೇವತೆಗಳನ್ನು ಆವಾಹಿಸಿ ಅನೇಕ ಬೌದ್ಧ ಕ್ಷೇತ್ರಗಳನ್ನು ವೈದಿಕ ಕ್ಷೇತ್ರಗಳನ್ನಾಗಿ ಮಾರ್ಪಡಿಸಿದರು. ಇದಕ್ಕೆ ಆ ಕಾಲವೂ ಪಕ್ವವಾಗಿತ್ತು. ಕಾಲಚಕ್ರದ ಉರುಳಲ್ಲಿ ಧರ್ಮ ಪೊರೆ ಕಳಚಿ ಬದಲಾಗುವುದೇ ಹೀಗೆ. ಬೌದ್ಧ ಧರ್ಮ ಮೊದಲು ಸ್ಥಾಪನೆಯಾದದ್ದೂ ಹೀಗೇ ಅಲ್ಲವೆ? ನಿಜ, ಕಾಶಿಯ ಚಂಡಾಲನ ಪ್ರಶ್ನೆ ಹಾಗೇ ಉಳಿದಿದೆ. ಅದನ್ನು ಬಿಡಿಸುವ ಕೆಲಸ ಆಗಿನಿಂದಲೂ ನಡೆದೇ ಇದೆ! ನಮ್ಮ ಭಕ್ತಿ ಕವಿಗಳು, ಸಾಧು–ಸಂತರು ಮತ್ತು ಇತ್ತೀಚೆಗೆ ವಿವೇಕಾನಂದ ಮುಂತಾದವರು ಮಾಡಿದ್ದೂ ಈ ಕೆಲಸವನ್ನೇ. ಅದನ್ನು ನಾವು ಮುಂದುವರೆಸಬೇಕಾಗಿದೆಯಷ್ಟೆ.

ಹಾಗೆ ನೋಡಿದರೆ, ಈ ದೇಶದಿಂದ ಬೌದ್ಧ ಧರ್ಮವನ್ನು ಓಡಿಸಲಾಗಿದೆ ಅಥವಾ ನಾಶ ಮಾಡಲಾಗಿದೆ ಎಂಬುದು ಅರ್ಧ ಸತ್ಯ ಮಾತ್ರ ಎನಿಸುತ್ತದೆ. ಓಡಿ ಹೋಗಿರುವುದು ಹೆಸರುಗಳು ಮಾತ್ರ; ಕುರುಹುಗಳು ಹಾಗೇ ಉಳಿದಿವೆ. ಹಾಗಾಗಿಯೇ ಈಗ ಇಲ್ಲಿರುವುದು ವೇದ ಧರ್ಮವಲ್ಲ; ವೇದ ಧರ್ಮದ ಭಾಷೆ ಮಾತಾಡುವ ಬೌದ್ಧಧರ್ಮ. ಅದುವೇ,

ಸಿಂಧೂ ನದಿಯಾಚೆಯವರು ಗುರುತಿಸಿದ ಹಿಂದೂ ಧರ್ಮ. ಇದರಲ್ಲಿ ಜೈನ ಧರ್ಮವೂ ಸೇರಿದಂತೆ, ಕಳೆದ ಒಂದು ಸಾವಿರ ವರ್ಷಗಳಲ್ಲಿ ಭಾರತದಲ್ಲಿ ಮಂಥನಗೊಂಡ ಎಲ್ಲ ಅಧ್ಯಾತ್ಮಿಕ ಧಾರೆಗಳೂ ಸೇರಿಕೊಂಡಿವೆ ಎಂಬುದೂ ಸತ್ಯ. ಮತ್ತೆ ಹೇಳುವುದಾದರೆ, ಇದರ ದೊಡ್ಡ ಸಮಸ್ಯೆ ಎಂದರೆ ಇದರಲ್ಲಿ ಅಂತರ್ಗತವಾಗಿಹೋಗಿರುವ ಜಾತಿ ಪದ್ಧತಿ. ಹಾಗಾಗಿಯೇ ಸ್ಥೂಲವಾಗಿ ಹೇಳುವುದಾದರೆ, ಯಾವ ಹಿಂದೂ ಪ್ರಜ್ಞಾಪೂರ್ವಕವಾಗಿ (ಕಾಯಾ–ವಾಚಾ–ಮನಸಾ) ಜಾತಿಯನ್ನು ತಿರಸ್ಕರಿಸಿರುವನೋ ಅವನು ಒಂದಲ್ಲ ಒಂದು ಅವಸ್ಥೆಯ ಬೌದ್ಧನೇ ಸರಿ.

ಈ ಹಿನ್ನೆಲೆಯಲ್ಲಿ ನೋಡಿದಾಗ ಅಂಬೇಡ್ಕರ್ ತಮ್ಮ ಬದುಕಿನ ಕೊನೆಯಲ್ಲ ಬೌದ್ಧ ಮತ ಸೇರಲು ಕೈಗೊಂಡ ನಿರ್ಧಾರ ಭಾವನಾತ್ಮಕವಾಗಿ ಸರಿ ಎನಿಸಿದರೂ, ವ್ಯಾವಹಾರಿಕವಾಗಿಯೂ, ತಾತ್ವಿಕವಾಗಿಯೂ ಅಷ್ಟು ಸರಿ ಎನಿಸುವುದಿಲ್ಲ. ಏಕೆಂದರೆ ಅವರೊಂದಿಗೆ ಮತಾಂತರಗೊಂಡ ಅಸ್ಪೃಶ್ಯರು ನವ ಬೌದ್ಧರಾದರೇ ಹೊರತು ಬೌದ್ಧರಾಗಲಿಲ್ಲ. ಅಸ್ಪೃಶ್ಯತೆಯ ಅವಮಾನ–ಸಂಕಟಗಳಿಂದ ಮುಕ್ತಿ ಪಡೆಯಲಿಲ್ಲ. ಅವರ ಪಾಡು ಹಿಂದೂ ಅಸ್ಪೃಶ್ಯರಿಗಿಂತ ಬೇರೆಯಾಗಿಲ್ಲ. ಇದಕ್ಕೆ ಕಾರಣ, ಅಂಬೇಡ್ಕರ್ ತಮ್ಮ 'ಬುದ್ಧ ಮತ್ತು ಅವನ ಧರ್ಮ' ಪುಸ್ತಕದ ಮೂಲಕ ಕಂಡುಕೊಂಡ ಬೌದ್ಧ ಧರ್ಮ ಪೂರ್ತಿಯಾಗಿ ಧರ್ಮದ ಹೊರನೋಟ ಮಾತ್ರವಾಗಿರುವುದು. ಅಲ್ಲಿ ಬೌದ್ಧ ಧರ್ಮದ ಹೃದಯ ಸ್ಥಾನದಲ್ಲಿರುವ ನಾಲ್ಕು ಆರ್ಯ ಸತ್ಯಗಳಿಗೆ ಜಾಗವೇ ಇಲ್ಲದಾಗಿದೆ. ಇದರಿಂದಾಗಿ ಅಸ್ಪೃಶ್ಯತೆಯ ದುಃಖದ ಶೋಧನೆ ಅಪೂರ್ಣವಾಗಿದೆ. ಬೌದ್ಧ ಧರ್ಮ ಮೂಲತಃ ಹೃದಯದಲ್ಲಿ ಅರಳಿ ಬುದ್ಧಿಗೆ ತಾಕಿ ಸಾಮಾಜಿಕವಾಗಬಯಸುವ ಧರ್ಮ. ಆದರೆ ಅಂಬೇಡ್ಕರ್, ಧರ್ಮದ ಈ ದಾರಿಯನ್ನೇ ತಿರುಗು ಮಾಡಿದ್ದಾರೆನಿಸುತ್ತದೆ.

ಹಾಗಾಗಿಯೇ ಸಾಮೂಹಿಕ ಮತಾಂತರವೆಂಬುದು ಬೌದ್ಧ ಧರ್ಮಕ್ಕೆ ಅಸಾಧುವಾದದ್ದೆಂದು ಅವರಿಗೆ ಹೊಳೆದೇ ಇಲ್ಲ. ದಲೈಲಾಮಾ ಸೇರಿದಂತೆ ಬೌದ್ಧ ವಿದ್ವಾಂಸರು ಅಂಬೇಡ್ಕರ್ ಬೌದ್ಧ ಧರ್ಮವನ್ನು ಕಂಡರಿಸಿದ ಪರಿಯನ್ನು ಒಪ್ಪುವುದಿಲ್ಲ. ಕೆಲವರಂತೂ ಅದು ಧರ್ಮವಲ್ಲ, ರಾಜಕಾರಣ ಎಂದಿದ್ದಾರೆ.

ಸಾಮೂಹಿಕ ಮತಾಂತರವಿರಲಿ, ಆಧುನಿಕ ಅರ್ಥದ ಮತಾಂತರವೆಂಬುದೇ ಬೌದ್ಧ ಧರ್ಮಕ್ಕೆ ವಿರುದ್ಧವಾದದ್ದು. ಏಕೆಂದರೆ ಅದು ಮತವಲ್ಲ; ಧರ್ಮ. ದಲೈಲಾಮಾ ಮಾತುಗಳಲ್ಲೇ ಹೇಳುವುದಾದರೆ ಯಾರೂ ಮತಾಂತರ ಹೊಂದಿ ಬೌದ್ಧರಾಗಬೇಕಿಲ್ಲ. ನೀವು ನೀವಿರುವೆಡೆಯಲ್ಲೇ ಬೌದ್ಧರಾಗಿರಬಹುದು ಜೆಕೆಯವರಂತೆ, ಓಷೋರಂತೆ ಅಥವಾ ನಮ್ಮವರೇ ಆದ ಕುವೆಂಪು, ತೇಜಸ್ವಿಯವರಂತೆ; ದೇವನೂರ ಮಹಾದೇವರಂತೆ. ಅಂದ ಹಾಗೆ ಆಧುನಿಕ ಕನ್ನಡದ ಎಲ್ಲ ಮುಖ್ಯ ಲೇಖಕರೂ–ಮಾಸ್ತಿಯವರೂ ಸೇರಿದಂತೆ–ತೀವ್ರವಾಗಿ ಬುದ್ಧನೆಡೆಗೆ ಸೆಳೆಯಲ್ಪಟ್ಟಿರುವ ಮರ್ಮವಾದರೂ ಏನು? ಒಮ್ಮೆ ಯೋಚಿಸಿ ನೋಡಿ!

ಬಹುಶಃ ಅಂಬೇಡ್ಕರ್ ಅವಸರದಲ್ಲಿದ್ದರು. ಒಂದು ಕಾಲದಲ್ಲಿ ಅತಿ ಅಸಹಾಯಕ ಸ್ಥಿತಿಯಲ್ಲಿ ತಾವು ಆಡಿದ 'ಹಿಂದೂ ಆಗಿ ಸಾಯುವುದಿಲ್ಲ' ಎಂಬ ಮಾತಿಗೆ ಬದ್ಧರಾಗಿ ಅವರು ಕಾಷಾಯ ವಸ್ತ್ರ ಧರಿಸಿ ಬೌದ್ಧರಾದರು. ಆದರೆ ತಾವೆಂತಹ ಬೌದ್ಧರು ಎಂಬುದನ್ನು ಕ್ರಿಯಾ ಮೂಲಕ ತೋರಿಸಲು ಅವರು ಹೆಚ್ಚು ಕಾಲ ಬದುಕಲಿಲ್ಲ. ಆದರೆ ಅವರ ಈ ತಲೆಮಾರಿನ ಅನುಯಾಯಿಗಳಿಗೆ ಆ ಅವಕಾಶವಿದೆ. ಕಾದು ನೋಡಬೇಕು ಎನ್ನುವ ಮನಸ್ಸಾದರೂ, ಅವರ ಸದ್ಯದ ಚಾಲೂ-ಚಹರೆಗಳನ್ನು ನೋಡಿದರೆ, ಅವರಿಗೆ ಬುದ್ಧನೂ ಬೇಡ, ಅಂಬೇಡ್ಕರರೂ ಬೇಡ; ಆ ಎರಡು ಹೆಸರುಗಳಷ್ಟೇ ಸಾಕು ಎಂದೆನ್ನುತ್ತಿರುವಂತೆ ತೋರುತ್ತಿದೆ. ಕಷ್ಟ.

ನಾನೊಮ್ಮೆ ಓರ್ವ ಬೌದ್ಧ ವಿದ್ವಾಂಸರನ್ನು ಕೇಳಿದ್ದೆ: 'ಅಷ್ಟು ಒಳ್ಳೆಯ ಹಿಂದೂ ಆಗಿದ್ದ ಗಾಂಧಿ ಕುರಿತು ಅಷ್ಟೊಂದು ಕ್ರೋಧ ಮತ್ತು ತಿರಸ್ಕಾರವಿದ್ದ ಅಂಬೇಡ್ಕರ್ ಬೌದ್ಧರಾಗುವುದಾದರೂ ಹೇಗೆ?' ಅದಕ್ಕೆ ಅವರು ಹೀಗೆ ಉತ್ತರಿಸಿದ್ದರು: 'ಬಹುಶಃ ಅವನ್ನೆಲ್ಲ ತ್ಯಜಿಸಲಿಕ್ಕೇ ಅವರು ಬೌದ್ಧರಾಗಲು ನಿರ್ಧರಿಸಿದರೇನೋ!'

ಇರಬಹುದೆಂದು ನಂಬುವುದೇ ಒಳ್ಳೆಯದು. ಆದರೆ ಕಟ್ಟಾ ಹಿಂದೂವಾದಿಗಳಾದ ಆರೆಸ್ಸೆಸ್‌ನವರು ತಮ್ಮ ಗುರೂಜಿ ಚಿತ್ರದ ಜೊತೆ ಅಂಬೇಡ್ಕರ್ ಚಿತ್ರವನ್ನಿಟ್ಟುಕೊಂಡು ಊರ ತುಂಬ ಮೆರವಣಿಗೆ ಹೊರಟಿರುವಾಗ ಈ ಅಂಬೇಡ್ಕರ್‌ವಾದಿಗಳು ಏಕೆ ಸುಮ್ಮನಿದ್ದಾರೋ ತಿಳಿಯದಾಗಿದೆ. ಕನಿಷ್ಟ ಅವರು, ಈ ಎರಡೂ ಚಿತ್ರಗಳ ಮಧ್ಯೆ ಬುದ್ಧನ ಚಿತ್ರ ಇಡಿ ಎಂದಾದರೂ ಹೇಳಬೇಕು ಅಲ್ಲವೆ?

ಇರಲಿ. ಓದುಗರೇ, ಮುಂದಿನ ಪುಟಗಳಲ್ಲಿರುವುದು ಇದೇ ವಿಚಾರಗಳ ವಿಸ್ತರಣೆ ಮತ್ತು ಚರ್ಚೆಗಳು. ದಯವಿಟ್ಟು ಓದಿ ಬರೆಯಿರಿ.–**ಸಂ.**

ಜೂನ್, ೨೦೧೬

ಕಾಂಗ್ರೆಸ್ + ಗೋವು = ಬಿಜೆಪಿ?

ಪ್ರಿಯ ಓದುಗರೇ,

ಐದು ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶಗಳು ಬಂದಿವೆ. ಇದರ ಬೆನ್ನಲ್ಲೇ ನಮ್ಮ ಪ್ರಧಾನ ಮಂತ್ರಿ ಮೋದಿಯವರು ಮತ್ತು ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರೂ ತಮ್ಮ ಅಧಿಕಾರಾವಧಿಯಲ್ಲಿ ಕ್ರಮವಾಗಿ ಎರಡು ಮತ್ತು ಮೂರು ವರ್ಷಗಳನ್ನು ಪೂರೈಸಿದ್ದಾರೆ. ಮೋದಿ ಮತ್ತು ಅವರ ಬಿಜೆಪಿ ಪಕ್ಷದ ನಾಯಕರೇನೋ ವಿಧಾನಸಭಾ ಚುನಾವಣಾ ಫಲಿತಾಂಶಗಳು ತಮ್ಮ ಪರವಾಗಿವೆ ಎಂದು ಹೇಳಿಕೊಂಡು ಕುಣಿಯುತ್ತಿದ್ದಾರೆ. ಜೊತೆಗೆ ಇದು ತಮ್ಮ 'ಕಾಂಗ್ರೆಸ್ ಮುಕ್ತ ಭಾರತ'ದ ಕನಸು ನನಸಾಗುವ ದಿನ ದೂರವಿಲ್ಲ ಎಂಬುದರ ಸೂಚನೆಯೆಂದೂ ಬೀಗುತ್ತಿದ್ದಾರೆ. ಇನ್ನು ಕಾಂಗ್ರೆಸ್ಸಿಗರು ಕರ್ನಾಟಕದ ಜೊತೆ ಇದ್ದ ಒಂದು ದೊಡ್ಡ ರಾಜ್ಯ ಅಸ್ಸಾಂನ್ನೂ ಈಗ ಕಳೆದುಕೊಂಡು ದಿಕ್ಕು ತೋಚದವರಂತಾಗಿ ತಮ್ಮ ಸೋಲಿಗೆ ನಿಜವಾದ ಕಾರಣಗಳನ್ನು ಬಿಟ್ಟು ಇಲ್ಲಸಲ್ಲದ ಕಾರಣಗಳನ್ನು ಹುಡುಕುತ್ತಾ ಬಾಯಿಗೆ ಬಂದಂತೆ ಬಡಬಡಿಸುತ್ತಿದ್ದಾರೆ.

ಆದರೆ ನಿಜವಾಗಿ ನೋಡಿದರೆ ಈ ಫಲಿತಾಂಶಗಳು ರಾಷ್ಟ್ರೀಯವಾಗಿ ಬಿಜೆಪಿಯ ಮುನ್ನಡೆಯನ್ನೇನನ್ನೂ ಸೂಚಿಸುವುದಿಲ್ಲ. ಈ ರಾಜ್ಯಗಳಲ್ಲಿ ಒಟ್ಟು ೬೬೧ ವಿಧಾನಸಭಾ ಸ್ಥಾನಗಳಿಗೆ ಸ್ಪರ್ಧಿಸಿದ್ದ ಅದು ಗೆದ್ದದ್ದು ೬೪ರಲ್ಲಿ ಮಾತ್ರ. ಹೀಗಿದ್ದೂ ಇದು ತನ್ನ ಜಯ ಎಂದು ಆ ಪಕ್ಷಕ್ಕೆ ಹೇಳಿಕೊಳ್ಳಲು ಇರುವ ಕಾರಣವೆಂದರೆ ಅದು ಅಸ್ಸಾಂನಲ್ಲಿ ಅಧಿಕಾರ ಗದ್ದುಗೆ ಏರಿರುವುದು. ಅದೂ ಪೂರ್ಣ ಸ್ವಂತ ಬಲದ ಮೇಲಲ್ಲ. ಅಸ್ಸಾಂ ಗಣ ಪರಿಷತ್ ಮತ್ತು ಬೋಡೋಗಳ ಒಕ್ಕೂಟದೊಡನೆ. ಇನ್ನೂ ಮುಖ್ಯವೆಂದರೆ, ಅಲ್ಲಿನ ಬಿಜೆಪಿ ಕೂಡ ನಿಜವಾದ ಅಂದರೆ ಸಂಘ ಪರಿವಾರ ಮೂಲವಾದ–ಬಿಜೆಪಿಯಲ್ಲ. ಅದರ ಇಬ್ಬರು ನಾಯಕರಾದ, ಈಗ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ

ಸರ್ಬಾನಂದ ಸೋನೋವಾಲ್ ಕೇವಲ ನಾಲ್ಕು ವರ್ಷಗಳ ಹಿಂದೆ ಅಸ್ಸಾಂ ಗಣ ಪರಿಷತ್ ಪಕ್ಷದಿಂದ ಹತಾಶರಾಗಿ ಮತ್ತು ಈ ಚುನಾವಣೆಗಳ ಉಸ್ತುವಾರಿ ವಹಿಸಿದ್ದ ಇನ್ನೋರ್ವ ನಾಯಕರಾದ ಹಿಮಂತ್ ಬಿಸ್ವಾಸ್ ಶರ್ಮ ನಾಲ್ಕು ತಿಂಗಳ ಹಿಂದಷ್ಟೇ ಕಾಂಗ್ರೆಸ್‌ನಿಂದ ಹತಾಶರಾಗಿ ಬಿಜೆಪಿಗೆ ಬಂದವರು. ಇವರ ಬೆಂಬಲಿಗರೇ ಈಗ ಈ ಪಕ್ಷದಲ್ಲಿ ಕಿಕ್ಕಿರಿದಿದ್ದು ಅವರು ಆರೆಸ್ಸೆಸ್ ಮೂಲದ ಕಾರ್ಯಕರ್ತರೊಂದಿಗೆ ಹೇಗೆ ಏಗುವರೋ ಕಾದು ನೋಡಬೇಕಿದೆ!

ಇನ್ನು ಕಾಂಗ್ರೆಸ್ ಪುದುಚೇರಿಯಂತಹ ಪುಟ್ಟ ನಗರ ರಾಜ್ಯದಲ್ಲಿ ಗೆದ್ದಿರುವುದರ ಹೊರತಾಗಿ ದೇಶಾದ್ಯಂತ ನೆಲ ಕಚ್ಚಿದೆ. ಆತ್ಮಾವಲೋಕನದ ಸಾಮರ್ಥ್ಯವನ್ನೇ ಕಳೆದುಕೊಂಡಿರುವ ಈ ಪಕ್ಷ ಕೇರಳದಲ್ಲಿ ಅಧಿಕಾರ ಕಳೆದುಕೊಂಡಿದ್ದು ತಾನೂ ಸೇರಿದಂತೆ ತನ್ನ ಮೈತ್ರಿಕೂಟದ ಅಂಗಪಕ್ಷಗಳ ಹಲವು ಭ್ರಷ್ಟಾಚಾರದ ಹಗರಣಗಳಿಂದಾಗಿ ಮತ್ತು ಅಸ್ಸಾಂನಲ್ಲಿ ಅಧಿಕಾರ ಕಳೆದುಕೊಂಡದ್ದು ಅಲ್ಲಿ ಹೆಚ್ಚುತ್ತಾ ಹೋದ ಕುಟುಂಬ ರಾಜಕಾರಣದ ಒತ್ತಡಗಳಿಗೆ ಸಿಕ್ಕಿ ಪಕ್ಷ ದಿಕ್ಕು ಕಳೆದುಕೊಂಡಿದ್ದರಿಂದಾಗಿ ಎಂಬ ಸತ್ಯಗಳಿಗೆ ಎರವಾಗಿದೆ. ಈ ಸೋಲುಗಳ ಹೊಣೆಯಿಂದ ತನ್ನ ರಾಷ್ಟ್ರೀಯ ನಾಯಕರನ್ನು ಅಂದರೆ ಸೋನಿಯಾ ಮತ್ತು ರಾಹುಲರನ್ನು ರಕ್ಷಿಸಲು ಇದರ ವಕ್ತಾರರು ಮಾಡುವ ಮಾತುಗಾರಿಕೆಯ ಕಸರತ್ತುಗಳು ಜನತೆಯ ಕಣ್ಣಲ್ಲಿ ಅವರು ಒಮ್ಮೆ ವಿದೂಷಕರಂತೆ, ಮತ್ತೊಮ್ಮೆ ಪಕ್ಕಾ ಕೇಡಿಗಳಂತೆ ಕಾಣುವಂತೆ ಮಾತ್ರ ಮಾಡಿವೆ. ಇದೆಲ್ಲವೂ ಕಾಂಗ್ರೆಸ್ ಒಂದು ಬೌದ್ಧಿಕ ದಾರಿದ್ರ್ಯದ ಪಕ್ಷವಾಗಿ ತಳವಿಲ್ಲದ ಬಾವಿಗೆ ಬೀಳುತ್ತಿರುವ ಪಕ್ಷವಾಗಿ ಕಂಡು ಆತಂಕವಾಗುತ್ತಿದೆ.

ಇನ್ನು ಪ.ಬಂಗಾಳದಲ್ಲಿ ಮಮತಾ ವಿಜಯ ನಮ್ಮ ಕಮ್ಯೂನಿಸ್ಟ್ ಪಕ್ಷಗಳು ಅಲ್ಲಿ ತಮ್ಮ ೩೫ ವರ್ಷಗಳ ಆಡಳಿತದಲ್ಲಿ ಮಾಡಿಹೋಗಿರುವ ಪಾಪದ ಹೊರೆ ಇನ್ನೂ ಕರಗಿಲ್ಲ ಎಂಬುದನ್ನು ಸೂಚಿಸಿದರೆ, ತಮಿಳ್ನಾಡಿನಲ್ಲಿ ಜಯಲಲಿತಾ ಗೆಲುವಿಗೆ ಸ್ವತಃ ಅವರೇ ಕಾರಣ ನೀಡಿದ್ದಾರೆ: ಡಿಎಂಕೆ ಪಕ್ಷದ ನಿರ್ಲಜ್ಜ ಕೌಟುಂಬಿಕ ಮತ್ತು ಭ್ರಷ್ಟ ರಾಜಕಾರಣವನ್ನು ರಾಜ್ಯದ ಜನತೆ ಮರೆತಿಲ್ಲ. ಈ ಚುನಾವಣೆಗಳ ಒಂದು ಸಂತೋಷದ ಫಲಿತಾಂಶವೆಂದರೆ ಕೇರಳದಲ್ಲಿ ಎಡ ರಂಗ ಮತ್ತೆ ಅಧಿಕಾರಕ್ಕೆ ಬಂದಿರುವುದು. ನಿಷ್ಠುರ ನಾಯಕನೆಂದೇ ಹೆಸರಾದ ಪಿಣರಾಯಿ ವಿಜಯನ್ ನೇತೃತ್ವದ ಈ ಹೊಸ ಸರ್ಕಾರ ಈ ಹಿಂದಿನ ಅಧಿಕಾರಾವಧಿಯಲ್ಲಿ ಮಾಡಿದ ತಪ್ಪುಗಳನ್ನು ಮಾಡದೆ ಎಚ್ಚರಿಕೆ ವಹಿಸಲಿ ಎಂಬುದೇ ನಮ್ಮೆಲ್ಲರ ಆಶಯ.

ಈ ಸಂದರ್ಭದ ದೊಡ್ಡ ತಮಾಷೆ ಎಂದರೆ 'ಕಾಂಗ್ರೆಸ್ ಮುಕ್ತ ಭಾರತ'ದ ಮಾತಾಡುತ್ತಿರುವ ಬಿಜೆಪಿಯೇ ಸ್ವತಃ ಇನ್ನೊಂದು ಕಾಂಗ್ರೆಸ್ ಆಗುತ್ತಿರುವುದು. ಮೋದಿಯವರು ಎರಡು ವರ್ಷ ಕಳೆದರೂ ನೂರು ದಿನಗಳಲ್ಲಿ ತರುವುದಾಗಿ ಹೇಳಿದ್ದ ಕಪ್ಪು ಹಣವನ್ನು ತರಲಿಲ್ಲ. ದಾವೂದ್ ಇಬ್ರಾಹಿಂನನ್ನೂ ಅವನ ಅಡಗುದಾಣದಿಂದ

ಎಳೆದು ತರಲಾಗಿಲ್ಲ. ಕಾಶ್ಮೀರದ ೩೭೦ನೇ ವಿಧಿಯನ್ನೂ ರದ್ದು ಮಾಡಲಾಗಿಲ್ಲ. ಬದಲಿಗೆ, ಈ ವಿಧಿಯ ಸುತ್ತಲೇ ತನ್ನ ಪ್ರಣಾಳಿಕೆ ಮಾಡಿಕೊಂಡಿರುವ ಪಿಡಿಪಿ ಪಕ್ಷದೊಂದಿಗೇ ಮೈತ್ರಿ ಸರ್ಕಾರ ರಚಿಸಿಕೊಂಡಿದೆ! ಇನ್ನು ಬೆಲೆಗಳು ಏರುತ್ತಿವೆ; ಅಭಿವೃದ್ಧಿ ಸೂಚ್ಯಂಕಗಳು ಇಳಿಮುಖವಾಗಿವೆ. ಉದ್ಯೋಗ ನಿರ್ಮಾಣ ಶೂನ್ಯವಾಗಿದೆ. ಮೋದಿಯವರ ಬಹುಚರ್ಚಿತ 'ಕ್ರಾಂತಿಕಾರಿ' ವಿದೇಶ ನೀತಿ ಎರಡೇ ವರ್ಷಗಳಲ್ಲಿ ಟೊಳ್ಳಾಗಿ ಕಾಣತೊಡಗಿದ್ದು, ಪಾಕಿಸ್ತಾನವನ್ನು ಅಪ್ಪಿಕೊಂಡಾಗಲೆಲ್ಲ ಮೋದಿಯವರ ಎದೆಗೆ ಮುಳ್ಳು ಚುಚ್ಚತೊಡಗಿದೆ. ನೆರೆಯಲ್ಲಿ ಚೀನಾದ ನಿರ್ಮಾಣ ಚಟುವಟಿಕೆಗಳು ಹೆಚ್ಚುತ್ತಿದ್ದು ಅದು ಪಾಕಿಸ್ತಾನದ ಪರಮಾಣು ಕಾರ್ಯಕ್ರಮಕ್ಕೆ ಬೆಂಬಲವಾಗಿ ನಿಂತು ಭಾರತದ ಪರಮಾಣು ಕಾರ್ಯಕ್ರಮಕ್ಕೆ ಅಡ್ಡಗಾಲು ಹಾಕುತ್ತಿದೆ. ನೇಪಾಳ, ಭಾರತೀಯ ರಾಯಭಾರಿಯನ್ನು ವಾಪಸ್ ಕಳಿಸುವ ಎಚ್ಚರಿಕೆ ನೀಡಿದೆ. ಇನ್ನು ಅರುಣಾಚಾಲ ಮತ್ತು ಉತ್ತರಾಖಂಡಗಳಲ್ಲಿ ಕಾಂಗ್ರೆಸ್ ಸರ್ಕಾರಗಳನ್ನು ಬೀಳಿಸಲು ಹೋಗಿ ಉತ್ತರಾಖಂಡದಲ್ಲಿ ಕೈ ಸುಟ್ಟುಕೊಂಡಿದೆ. ಇದನ್ನೆಲ್ಲ ನೋಡಿ ಬಿಜೆಪಿ ಮಾಜಿ ನಾಯಕ ಅರುಣ್ ಶೌರಿ ಬಿಜೆಪಿ ಎಂದರೆ ಕಾಂಗ್ರೆಸ್ + ಗೋವು ಎಂದು ಕಿಚಾಯಿಸಿದ್ದಾರೆ. ಇವೆಲ್ಲ ಸಮಸ್ಯೆಗಳಿಗೆ ಪರಿಹಾರವೆಂಬಂತೆ ಮೋದಿ ಸುಬ್ರಮಣ್ಯಸ್ವಾಮಿ ಎಂಬ ಬೊಗಳೆ ಬಾಂಬ್‌ನ್ನು ರಾಜ್ಯಸಭೆಯಲ್ಲಿ ತಂದು ನೆಟ್ಟಿದ್ದಾರೆ. ಈ ಹುಚ್ಚು ಬಾಂಬ್ ಮೋದಿಯವರ ಬುಡದಲ್ಲೇ ಸ್ಫೋಟಿಸಿದರೆ ಆಶ್ಚರ್ಯವಿಲ್ಲ. ಮೋದಿಯವರಿಗೆ ಶುಭವಾಗಲಿ!

ಬದಲಾಗಬೇಕಾದ ಸಿದ್ಧರಾಮಯ್ಯ

ಇನ್ನು ತಮ್ಮ ಅಧಿಕಾರಾವಧಿಯ ಅರ್ಧಕ್ಕೂ ಹೆಚ್ಚು ಅವಧಿಯನ್ನು ಪೂರೈಸಿರುವ ನಮ್ಮ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ತಮ್ಮ ಹಳೇ 'ಭಾಗ್ಯ'ಗಳ ದಾನ-ಧರ್ಮಗಳ ಕಾರ್ಯಕ್ರಮಗಳ ಕಹಳೆಯನ್ನೇ ಈಗಲೂ ಮೊಳಗಿಸುತ್ತಿದ್ದಾರೆ. ಸಮುದಾಯಗಳ ಸ್ಥಿತಿಗತಿಗಳ ಮೇಲೆ ದೀರ್ಘಕಾಲಿಕ ಪರಿಣಾಮಗಳನ್ನೇನೂ ಉಂಟು ಮಾಡದ ಈ 'ಭಾಗ್ಯ'ಗಳ ಕೀರ್ತಿ ಅವರು ಲೋಕಾಯುಕ್ತ ಮತ್ತು ಕರ್ನಾಟಕ ಲೋಕಸೇವಾ ಆಯೋಗಗಳನ್ನು ನಾಶ ಮಾಡಿದ ಹಾಗೂ ರಾಜ್ಯದ ಇಡೀ ನೌಕರಶಾಹಿಯನ್ನು ಜಾತಿವಾರು ಒಡೆದು ಕೂರಿಸಿರುವ ಕಳಂಕವನ್ನು ತೊಳೆಯಲಾರದು. ಅವರು ತಮ್ಮ ಸರ್ಕಾರ ಭ್ರಷ್ಟಾಚಾರದ ಯಾವ ಹಗರಣಗಳಲ್ಲೂ ಸಿಕ್ಕಿಹಾಕಿಕೊಂಡಿಲ್ಲ ಎಂದು ಹೇಳುತ್ತಿರುವಾಗಲೇ ದಿನಕ್ಕೊಂದು ಇಲಾಖೆಯಲ್ಲಿನ ಹಗರಣಗಳು ಬಯಲಾಗುತ್ತಿವೆ. ಸರ್ಕಾರಿ ಕಛೇರಿಗಳು ಭ್ರಷ್ಟಾಚಾರದ ಗೂಡುಗಳಾಗಿ ಮುಂದುವರೆದು ಎಲ್ಲ ಕಡೆಯಿಂದಲೂ ನಿರ್ದಿಷ್ಟ ದರದಲ್ಲಿ ಕಮಾಯಿ ವಿವಿಧೆಡೆಗೆ ವಿತರಣೆಗಾಗಿ ವಸೂಲಾಗುತ್ತಿದೆ. ತಮ್ಮ ಕುಪ್ರಸಿದ್ಧ ಸಚಿವ ಸಂಪುಟವನ್ನು ಪುನಾರಚಿಸಲು ಇನ್ನೂ ಸಾಧ್ಯವಾಗದಿರುವುದೇ ಇವರ ನಾಯಕತ್ವದ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಕೆಪಿಎಸ್ಸಿಯನ್ನು ತಾನು ಅಧ್ಯಕ್ಷನಾಗಿದ್ದಾಗ ಪರಮ ಭ್ರಷ್ಟಾಚಾರದಿಂದ ಹಾಳು ಮಾಡಿ ಈಗ ಜೈಲು ಕಂಬಿ ಎಣಿಸುವ ಆತಂಕದಲ್ಲಿರುವ

ವ್ಯಕ್ತಿಯೊಬ್ಬನನ್ನು ಈ ಸಂಪುಟದ ಸದಸ್ಯನೊಬ್ಬ ಆತ ತನ್ನ ಸಮುದಾಯಕ್ಕೆ ಸೇರಿದವನೆಂದು ಆತನ ರಕ್ಷಣೆಗೆ ಬದ್ಧವಿರುವುದಾಗಿ ಬಹಿರಂಗವಾಗಿ ಹೇಳುತ್ತಾನೆ ಎಂದರೆ ಈ ಸಂಪುಟ ಮತ್ತು ಅದರ ನಾಯಕತ್ವದ ಬಗ್ಗೆ ಇನ್ನೇನು ಹೇಳುವುದು?

ಸಿದ್ಧರಾಮಯ್ಯ ಬದಲಾಗಬೇಕು; ಬದಲಾಗಬಲ್ಲರು ಎಂದು ಅವರ ಕೆಲ ಹಿತೈಷಿಗಳು ಹಾರೈಸುತ್ತಿದ್ದಾರೆ. ಆದರೆ ಅವರು ತಮ್ಮ ಅಧಿಕಾರಾವಧಿಯ ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವುದು ಶ್ಯಾಮಭಟ್ ಎಂಬ ಕುಖ್ಯಾತ ಅಧಿಕಾರಿಯನ್ನು ಲೋಕಸೇವಾ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ನೇಮಿಸುವ ನಿರ್ಧಾರದೊಂದಿಗೆ ಎಂಬುದು ಈ ಮನುಷ್ಯ ಬದಲಾಗದಂತಹ ವ್ಯಕ್ತಿಯಾಗಿ ಹೋಗಿದ್ದಾರೆ ಎಂಬುದನ್ನು ಸಾಬೀತುಪಡಿಸುತ್ತಿದೆ. ಅಥವಾ ಈ ವ್ಯಕ್ತಿ ಇದ್ದುದೇ ಹಾಗೆ; ನಾವು ನಮ್ಮ ಭೋಳೆತನದಲ್ಲಿ ತಪ್ಪಾಗಿ ತಿಳಿದಿದ್ದೆವು ಎಂಬ ಅವರ ಆಪ್ತ ಗೆಳೆಯರೊಬ್ಬರ ಮಾತೇ ನಿಜವೋ? ಈ ಸಿದ್ಧರಾಮಯ್ಯನ ದೆಸೆಯಿಂದ ಇನ್ನೆರಡು ವರ್ಷಗಳಲ್ಲಿ ಕರ್ನಾಟಕಕ್ಕೆ ಕಂಟಕ ಕಾದಂತಿದೆ. ಪರಿಹಾರ ಹತ್ತಿರದಲ್ಲಿ ಕಾಣದಾಗಿದೆ.

ಆಸೆ ಹುಟ್ಟಿಸುವ ಎರಡು ಸುದ್ದಿಗಳು:

ದಲಿತ ಹುಡುಗಿಗೆ ಐಎಎಸ್‌ನಲ್ಲಿ ಮೊದಲ ರ್‍ಯಾಂಕ್ ಹಾಗೂ

ಲಂಡನ್ ನಗರಕ್ಕೆ ಮುಸ್ಲಿಂ ಮೇಯರ್!

ಈ ಎಲ್ಲ ಒಡ್ಡ ರಾಜಕಾರಣದಾಚೆಗೆ ಒಂದೆರಡು ಸಂತೋಷದ ಸಂಗತಿಗಳನ್ನೂ ನಮ್ಮ ಓದುಗರೊಂದಿಗೆ ಹಂಚಿಕೊಳ್ಳುವ ಸಂದರ್ಭವಿದು. ಈ ಬಾರಿಯ ಅಖಿಲ ಭಾರತ ನಾಗರಿಕ ಸೇವಾ (ಐಎಎಸ್ ಇತ್ಯಾದಿ) ಪರೀಕ್ಷೆಗಳಲ್ಲಿ ದಲಿತ ಹುಡುಗಿಯೊಬ್ಬಳು ಪ್ರಥಮ ಸ್ಥಾನ ಗಳಿಸಿದ್ದಾಳೆ! ದೆಹಲಿಯ ಟೀನಾ ದಾಬಿ ಎಂಬ ಈ ಹುಡುಗಿ ಇದನ್ನು ಸಾಧಿಸಿರುವುದು ತನ್ನ ಮೊದಲ ಪ್ರಯತ್ನದಲ್ಲೇ! ಇದು ನಮ್ಮ ಸಾಮಾಜಿಕ ನ್ಯಾಯ ನೀತಿಗೆ ದೀರ್ಘಕಾಲಿಕ ಪರಿಣಾಮವಾಗಿ ಸಂದಿರುವ ನಿರ್ಣಾಯಕ ಜಯವೇ ಆಗಿದೆ.

ಇಂತಹುದೇ ಇನ್ನೊಂದು ಸುದ್ದಿಯೆಂದರೆ ಲಂಡನ್ ನಗರ ಈ ಬಾರಿ ಮುಸ್ಲಿಂ ವ್ಯಕ್ತಿಯೊಬ್ಬರನ್ನು ತನ್ನ ಮೇಯರ್‌ರನ್ನಾಗಿ ಆಯ್ಕೆ ಮಾಡಿಕೊಂಡಿದೆ ಎಂಬುದು. ಇತ್ತೀಚಿನ ವರ್ಷಗಳಲ್ಲಿ ಮುಸ್ಲಿಂ ಉಗ್ರಗಾಮಿಗಳಿಂದ ಹಲವು ದಾಳಿಗಳನ್ನು ಎದುರಿಸಿ ತತ್ತರಿಸಿರುವ ಮತ್ತು ಶೇ. ೧೨ರಷ್ಟು ಮಾತ್ರ ಮುಸ್ಲಿಂ ಜನಸಂಖ್ಯೆ ಇರುವ ಈ ನಗರದ ಮತದಾರರು ನೇರ ಚುನಾವಣೆಯಲ್ಲಿ ಮುಸ್ಲಿಂನೊಬ್ಬನನ್ನು ತನ್ನ ರಕ್ಷಕನ್ನಾಗಿ ಆಯ್ಕೆ ಮಾಡಿಕೊಂಡಿರುವುದು ಅವರ ಪ್ರಬುದ್ಧತೆಯನ್ನು ತೋರಿಸುತ್ತದೆ ಎಂದೇ ಹೇಳಬೇಕು. ಜೊತೆಗೇ ಸ್ವತಃ ಸಾದತ್ ಖಾನ್‌ರ ಮತ್ತು ಅವರನ್ನು ತನ್ನ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ ಲೇಬರ್ ಪಕ್ಷದ ಪ್ರಬುದ್ಧತೆಯೂ. ಕೋಮುವಾದಿ ರಾಜಕಾರಣ ತೀವ್ರವಾಗಿ ಹೆಚ್ಚುತ್ತಿರುವ ಭಾರತದ ಜನತೆಗೆ, ರಾಜಕೀಯ ಪಕ್ಷಗಳಿಗೆ ಮತ್ತು ವಿಶೇಷವಾಗಿ ಮುಸ್ಲಿಂ

ನಾಯಕತ್ವಕ್ಕೆ ಇಲ್ಲೊಂದು ಗಾಂಧಿವಾದಿ ಎನ್ನಬಹುದಾದ ಪಾಠವಿದೆ. ಆದರೆ ಅದನ್ನು ಅರ್ಥ ಮಾಡಿಕೊಳ್ಳುವ ವ್ಯವಧಾನ ಈಗ ಯಾರಿಗಿದೆ?

ಒಂದು ಮಾತುಕತೆ

'ಗಾಂಧಿ ವಾಸ್ ಎ ಮ್ಯಾನ್ ಆಫ್ ಗಾಡ್': ಗೌತಮ್‌ಭಾಯಿ ಬಜಾಜ್

ಭೂದಾನ ಚಳುವಳಿಯ ನೇತಾರ ವಿನೋಬಾ ಭಾವೆಯವರು ಮಹಾರಾಷ್ಟ್ರದ ಪೌನಾರ್‌ನಲ್ಲಿ ಸ್ಥಾಪಿಸಿದ ಆಶ್ರಮದ ಮುಖ್ಯ ಕಾರ್ಯಕರ್ತ ಗೌತಮ್ ಭಾಯಿ ಬಜಾಜ್ ಇತ್ತೀಚೆಗೆ ಕರ್ನಾಟಕ ಪ್ರವಾಸ ಕೈಗೊಂಡಿದ್ದರು. ಅವರೊಂದಿಗೆ ಅದೇ ಆಶ್ರಮದ ಬ್ರಹ್ಮ ವಿದ್ಯಾಮಂದಿರದ ಉಷಾ ಬೆನ್ ಮತ್ತು ಅವರ ಸಂಗಾತಿ ಗಂಗಾಲಕ್ಷ್ಮಿಯವರೂ ಬಂದಿದ್ದು, ಗಂಗಾಲಕ್ಷ್ಮಿಯವರ ಊರಾದ ಸೊರಬದ ಬಳಿಯ ಹಳ್ಳಿಯೊಂದಕ್ಕೆ ಹೋಗುವ ಮಾರ್ಗವಾಗಿ ಅವರೆಲ್ಲ ಶಿವಮೊಗ್ಗಕ್ಕೂ ಬಂದಿದ್ದರು. ಶಿವಮೊಗ್ಗದ ಕರ್ನಾಟಕ ಸಂಘ ಈ ಮೂವರನ್ನೂ ಆಹ್ವಾನಿಸಿ ಏಪ್ರಿಲ್ 26ರಂದು ಒಂದು ಕಾರ್ಯಕ್ರಮ ಏರ್ಪಡಿಸಿತ್ತು. ಬೆಂಗಳೂರಿನ ಗಾಂಧಿ ಭವನದ ಗೆಳೆಯ ಜಿ.ಬಿ. ಶಿವರಾಜ್ ಅವರ ಸಲಹೆಯ ಮೇರೆಗೆ ನಾನು ಈ ಕಾರ್ಯಕ್ರಮದ ನಂತರ ಗೌತಮ್‌ಜಿ ಅವರನ್ನು ಭೇಟಿ ಮಾಡಿ ಇಪ್ಪತ್ತು ನಿಮಿಷಗಳ ಕಾಲ ಲೋಹಿಯಾ-ಗಾಂಧಿ-ವಿನೋಬಾ ಕುರಿತು ಮಾತನಾಡಿದೆ. ಇದಕ್ಕೆ ಅನುವು ಮಾಡಿಕೊಟ್ಟವರು ಗೌತಮ್‌ಜಿ ಅವರ ಪ್ರಯಾಣದ ಉಸ್ತುವಾರಿ ವಹಿಸಿದ್ದ ಅಬೀದಾ ಬೇಗಂ ಅವರು.-ಸಂ.

ಆರಡಿ ಎತ್ತರದ 78 ವರ್ಷ ವಯಸ್ಸಿನ ಗೌತಮ್‌ಜಿಯವರು ಗಾಂಧಿ-ವಿನೋಬಾರ ಅನುಯಾಯಿ. ಉದ್ಯಮಿಯಾಗಿದ್ದ ಜಮನ್‌ಲಾಲ್ ಬಜಾಜ್ ಕುಟುಂಬಕ್ಕೆ ಸೇರಿದವರು. ಬಾಲ್ಯದಲ್ಲೇ ಗಾಂಧಿ ಪ್ರಭಾವಕ್ಕೆ ಒಳಗಾಗಿ ಆಗರ್ಭ ಶ್ರೀಮಂತಿಕೆಯ ಸಕಲ ಸೌಲಭ್ಯಗಳನ್ನೂ ತೊರೆದು ಸರಳ ಜೀವನವನ್ನು ಆರಿಸಿಕೊಂಡವರು. ಗಾಂಧಿ ಸಾವಿನ ನಂತರ ತಮ್ಮ 13ನೇ ವಯಸ್ಸಿನಲ್ಲಿ ವಿನೋಬಾ ಹಿಂದೆ ಭೂದಾನ ಯಾತ್ರೆ ಹೊರಟವರು. ಅವರೊಂದಿಗೆ 4500 ದಿನಗಳ ಕಾಲ ದೇಶದ ಉದ್ದಗಲಕ್ಕೂ 7500 ಕಿಮೀ ನಡೆದು 40 ಲಕ್ಷ ಎಕರೆ ಭೂಮಿಯನ್ನು ದಾನವಾಗಿ ಪಡೆದ ವಿನೋಬಾರ ವಿರಾಟ್ ಕಾರ್ಯಕ್ರಮದ ಯಶಸ್ಸಿನಲ್ಲಿ ಎಳವೆಯಲ್ಲೇ ಪಾಲ್ಗೊಂಡವರು. ವಿನೋಬಾರ ಸಮಗ್ರ ಸಾಹಿತ್ಯವನ್ನು ತಲಾ 700 ಪುಟಗಳ 21 ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿರುವ ಗೌತಮ್‌ಭಾಯಿ ವಿನೋಬಾರ ನಿಧನದ ನಂತರ ಪೌನಾರ್ ಆಶ್ರಮದ ಉಸ್ತುವಾರಿ ವಹಿಸಿಕೊಂಡು ಯುವಜನರಿಗೆ ಅಧ್ಯಾತ್ಮಿಕತೆಯ ಪಾಠಗಳೊಂದಿಗೆ ಮಾನವ ಶ್ರಮದ ಮೌಲ್ಯಗಳ ತರಬೇತಿ ನೀಡುವ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ.

ನಾನು ಸಮಾಜವಾದಿ ಹಿನ್ನೆಲೆಯವನು, ಲೋಹಿಯಾ ವಿಚಾರಗಳ ಅಭಿಮಾನಿ ಎಂದು ತಿಳಿದುಕೊಂಡ ಅವರು 'ನಿಮ್ಮ ನಾಯಕ ಲೋಹಿಯಾರನ್ನು ಬಾಲ್ಯದಿಂದಲೂ ಬಲ್ಲೆ. ಅವರು ಬಜಾಜ್‌ರ ಮನೆಗೆ ಬರುತ್ತಿದ್ದರು' ಎಂದು ಮಾತು ಆರಂಭಿಸಿದರು. ಮುಂದಿನ ನಮ್ಮ ಮಾತುಕತೆ ಸರಾಗವಾಗಿ ಮುಂದುವರೆದದ್ದು ಹೀಗೆ:

ನಿಮ್ಮ ಪ್ರಕಾರ ಈ ಲೋಹಿಯಾ ಎಂತಹ ಮನುಷ್ಯ?

ಆತ ಒಬ್ಬ ಉಜ್ವಲ ಪ್ರತಿಭೆಯ ವ್ಯಕ್ತಿ. ಆದರೆ ಅತಿವಾದಿ ಮತ್ತು ತಿಕ್ಕಲ.

ಅತಿವಾದಿ, ತಿಕ್ಕಲ ಎಂದು ನಿಮಗನ್ನಿಸಲು ಕಾರಣವೇನು ಗೌತಮ್‌ಜಿ?

ಒಂದು ಕಾಲದಲ್ಲಿ ನೆಹ್ರೂ ಅವರ ಪಿ.ಎ. ಆಗಿದ್ದ ಮನುಷ್ಯ ಅವರ ವಿರುದ್ಧ ಹಾಗೆ ತಿರುಗಿಬಿದ್ದರೆ ಇನ್ನೇನೆಂದು ಹೇಳುವುದು?

ಇದಕ್ಕೆ ನೆಹ್ರೂ ಅವರೂ ಕಾರಣರಲ್ಲವೆ? ಪ್ರಧಾನಿಯಾಗುವ ಆತುರದಲ್ಲಿ ಕಾಂಗ್ರೆಸ್‌ನಲ್ಲಿನ ಸಮಾಜವಾದಿಗಳ ಹಿತ ಕಾಯದೇ ಹೋದ ಅವರು ಪ್ರಧಾನಿಯಾದ ನಂತರ ಗಾಂಧಿಯನ್ನೇ ಮರೆತು ದೊಡ್ಡ ತಪ್ಪು ಮಾಡಲಿಲ್ಲವೆ? ನೀವು ಸ್ವಲ್ಪ ನೆಹ್ರೂ ಅಭಿಮಾನಿಯಾಗಿರುವಂತೆ ಕಾಣುತ್ತದೆ...

ಇಲ್ಲ, ಇಲ್ಲ, ನನಗೂ ರಾಜಕಾರಣಕ್ಕೂ ಸಂಬಂಧವಿಲ್ಲ. ನಾವು ರಾಜನೀತಿಯ ಮಿತಿಗಳನ್ನು ಅರಿತು ಲೋಕನೀತಿಯಲ್ಲಿ ನಂಬಿಕೆ ಇಟ್ಟವರು. ನಾವು ಯಾರ ಪರವೂ ಅಲ್ಲ, ವಿರೋಧವೂ ಅಲ್ಲ

ಗಾಂಧಿಗೆ ತಮ್ಮ ಕೊನೆಯ ದಿನಗಳಲ್ಲಿ ನೆಹ್ರೂ ಸೇರಿದಂತೆ ಕಾಂಗ್ರೆಸ್ಸಿನ ಹಿರಿಯ ನಾಯಕರ ಬಗ್ಗೆ ಭ್ರಮನಿರಸನವಾಗಿತ್ತಲ್ಲವೇ? ಹಾಗೇ ಆಗ ಅವರಿಗೆ ಲೋಹಿಯಾ ಬಹು ಪ್ರಿಯರಾಗಿದ್ದರಲ್ಲವೆ?

ನಾನು ರಾಜಕೀಯ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ. ಆದರೆ ಒಂದು ಮಾತು. ಕೇವಲ ಲೋಹಿಯಾ ಮಾತ್ರವಲ್ಲ, ತಮ್ಮ ಹತ್ತಿರ ಬಂದ ಪ್ರತಿಯೊಬ್ಬರೂ ಗಾಂಧಿಗೆ ಪ್ರಿಯರಾಗಿದ್ದರು. ಅವರೆಲ್ಲರ ಯೋಗಕ್ಷೇಮದ ಬಗ್ಗೆ ಅವರು ನಿರಂತರ ಗಮನ ಇಟ್ಟಿರುತ್ತಿದ್ದರು ಮತ್ತು ಅವರಿಂದ ದೇಶಕ್ಕೆ ಏನು ಸೇವೆ ಪಡೆಯಬಹುದೆಂದು ಯೋಚಿಸುತ್ತಿದ್ದರು.

ಗಾಂಧೀಜಿಗೆ ಅಂಬೇಡ್ಕರ್‌ರೂ ಪ್ರಿಯ ವ್ಯಕ್ತಿಯಾಗಿದ್ದರೆ?

ಖಂಡಿತ. ಆದರೆ ಅಂಬೇಡ್ಕರ್‌ಗೆ ಗಾಂಧಿ ಪ್ರಿಯವಾಗದಿರಬಹುದು ಅಷ್ಟೆ. ಆದರೂ ಗಾಂಧಿ, ಅವರಿಂದ ರಾಷ್ಟ್ರಕ್ಕೆ ಪಡೆಯಬಹುದಾದ ಸೇವೆಯನ್ನು ಪಡೆದೇ ತೀರಿದರಲ್ಲ? ಗಾಂಧಿ ಬಳಿ ಎಂತೆಂತಹ ಜನ ಬರುತ್ತಿದ್ದರು! ಸಾಮಾನ್ಯ ಜನರಲ್ಲದೆ ರೋಗಿಗಳು, ಹುಚ್ಚರು, ಕೂಗಾಡಿ ಹಿಂಸಾತ್ಮಕವೂ ಆಗುತ್ತಿದ್ದ ವಿರೋಧಿಗಳು ಹೀಗೆ ಎಲ್ಲ ತರದ ಜನ ಬರುತ್ತಿದ್ದರು. ನೋಡಿದವರಿಗೆ ಗಾಬರಿಯಾಗುತ್ತಿತ್ತು! ಇದನ್ನು ಆಗ ಪತ್ರಕರ್ತರು 'ಗಾಂಧಿ ಸರ್ಕಸ್' ಎಂದು ಕರೆಯುತ್ತಿದ್ದರು.

ಗಾಂಧಿ ಇವರನ್ನೆಲ್ಲ ಹೇಗೆ ಸಂಭಾಳಿಸುತ್ತಿದ್ದರು?

ಗಾಂಧಿ ಎಲ್ಲರೊಂದಿಗೂ ಮಾತಾಡಿ ಸಮಾಧಾನಪಡಿಸುತ್ತಿದ್ದರು. Oh! He was a man of God! ಈ ಮಾತು ಎಲ್ಲರಿಗೂ ಅರ್ಥವಾಗುವುದು ಕಷ್ಟ

ಇನ್ನು ವಿನೋಬಾ ಅವರ ವಿಷಯಕ್ಕೆ ಬಂದರೆ, ಅವರನ್ನು ಗಾಂಧಿ ತಮ್ಮ ಅಧ್ಯಾತ್ಮಿಕ ಉತ್ತರಾಧಿಕಾರಿ ಎಂದು ಕರೆದರು ಎನ್ನುತ್ತಾರೆ. ಆದರೆ ವಿನೋಬಾ ಸಾಬರ್ಮತಿ ಆಶ್ರಮದ ಕಾರ್ಯಕರ್ತರಾಗಿದ್ದರು ಮತ್ತು ಗಾಂಧೀಜಿ 1940ರ ವೈಯುಕ್ತಿಕ ಸತ್ಯಾಗ್ರಹಕ್ಕೆ ಅವರನ್ನು ಆಯ್ಕೆ ಮಾಡಿದರು ಎಂಬುದರ ಹೊರತಾಗಿ ಯಾವ ಗಾಂಧಿ ಕಥನದಲ್ಲೂ ಗಾಂಧಿ-ವಿನೋಬಾ ಸಂವಾದದ ಸುಳಿವಿಲ್ಲ ಏಕೆ?

ವಿನೋಬಾ ಪೂರ್ತಿ ಅಧ್ಯಾತ್ಮಿಕ ಮನುಷ್ಯ. ವೇದಶಾಸ್ತ್ರಗಳ ಪರಿಣತರು. ಬ್ರಹ್ಮವಿದ್ಯೆ ಅವರ ಆಸಕ್ತಿ. ಆ ಸಂಬಂಧ ಏನಾದರೂ ಸಂದೇಹ ಬಂದರೆ ಗಾಂಧಿ ವಿನೋಬಾರೊಂದಿಗೆ ಸಮಾಲೋಚಿಸುತ್ತಿದ್ದರಷ್ಟೆ.

ಹಾಗಿದ್ದಲ್ಲಿ ವಿನೋಬಾ ಭೂದಾನ ಚಳುವಳಿಯಂತಹ ಲೌಕಿಕ ಚಟುವಟಿಕೆಗೆ ಏಕೆ ಇಳಿದರು? ಅದು ತೆಲಂಗಾಣದಲ್ಲಿನ ಕಮ್ಯೂನಿಸ್ಟ್ ಬಂಡಾಯದಿಂದ ನೆಹ್ರೂರನ್ನು ರಕ್ಷಿಸಲು ಎಂಬ ಟೀಕೆಯೂ ಇದೆ!

ಇಲ್ಲ! ಅದನ್ನು ಹಾಗೆ ನೋಡಬಾರದು. ರಾಜನೀತಿ ವಿಫಲವಾದಾಗ ಲೋಕನೀತಿಯ ಪ್ರಯೋಗವದು. ಜನ ಬಿಟ್ಟು ಬ್ರಹ್ಮವಿದ್ಯೆಯೂ ಇಲ್ಲ; ಅಧ್ಯಾತ್ಮವೂ ಇಲ್ಲ!

ವಿನೋಬಾ ಮತ್ತು ನಿಮ್ಮ ಕೆಲಸಗಳ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೂ, ಏಕೋ ನಿಮ್ಮ ರಾಜನೀತಿ-ಲೋಕನೀತಿ ಮಾತುಗಳಲ್ಲಿ ಒಂದು ಒಡಕು ಕಾಣುತ್ತಿದೆ... ಜೆಪಿ ಚಳುವಳಿಯ ಸೋಲೂ ಇದೇ ದ್ವಂದ್ವದಿಂದ ಆದದ್ದೇನೋ!

ತೀರ್ಮಾನಗಳು ಸುಲಭ. ಕೆಲಸ ಮಾಡುವುದು ಕಷ್ಟ!

ಹೌದು, ನಿಮ್ಮ ಮಾತು ನಿಜ. ಆದರೆ ಮಾಡಿದ ಕೆಲಸ ಸಾರ್ಥಕವೂ ಆಗಬೇಕಲ್ಲವೆ? ಅಂದಹಾಗೆ, ದೇಶಾದ್ಯಂತ ಗಾಂಧಿ ಅನುಯಾಯಿಗಳು ಅಲ್ಲಲ್ಲಿಯಾದರೂ ಕಾಣುತ್ತಾರೆ. ಆದರೆ ವಿನೋಬಾ ಅನುಯಾಯಿಗಳು ಕಾಣುವುದೇ ಇಲ್ಲವಲ್ಲ ಏಕೆ?

ಗೌತಮ್‌ಜಿ ನಗುತ್ತಾ ಎದ್ದು ನನ್ನನ್ನು ಆಲಂಗಿಸಿಕೊಂಡು ಹಾಗಿದ್ದರೆ ನೀವೇ ಏಕೆ ವಿನೋಬಾ ಅನುಯಾಯಿಯಾಗಬಾರದು? ಒಮ್ಮೆ ಪೌನಾರ್‌ಗೆ ಬನ್ನಿ ಎಂದು ಆಹ್ವಾನಿಸುತ್ತಾ ಮಾತು ಮುಗಿಸುವ ಸೂಚನೆ ನೀಡಿದರು.

ಹೌದು ಆಗಲೇ ರಾತ್ರಿ ಹೊತ್ತಾಗಿತ್ತು. ಅವರಿನ್ನೂ ಕಾಡಿನಲ್ಲಿ ನೂರು ಕಿ.ಮಿ.ಗೂ ಹೆಚ್ಚು ದೂರ ಪ್ರಯಾಣ ಮಾಡಬೇಕಿತ್ತು. ನಾನು ಅವರಿಗೆಲ್ಲ ನಮಸ್ಕರಿಸಿ ಬೀಳ್ಕೊಟ್ಟೆ.

-ಡಿ.ಎಸ್. ನಾಗಭೂಷಣ

ಸಮಕಾಲೀನ

ಬರ ಬಂದಿದೆ ದೇಶಕ್ಕೆ! ಆದರೆ ಎಂಥ ಬರ?

ಭೂಮಿಯ ಮೇಲಿನ ವಾತಾವರಣ ಕಲುಷಿತಗೊಳ್ಳುತ್ತಿದೆ. ಭೂಮಿಯ ತಾಪಮಾನ ತ್ವರಿತಗತಿಯಲ್ಲಿ ಏರುತ್ತಾ ಇದ್ದು, ನಿರ್ಣಾಯಕ ಹವಾಮಾನ ವೈಪರೀತ್ಯಗಳು ಕಾಣತೊಡಗಿವೆ. ಭೂಮಿಯ ಮೇಲಿನ ಜೀವಜಗತ್ತಿಗೆ ಇದು ಮಾರಕವಾಗಿ ಪರಿಣಮಿಸುತ್ತಿದೆ ಎಂಬ ಮಾತುಗಳೆಲ್ಲ ಈಗ ಸವಕಲು ಮಾತುಗಳಾಗಿ ಹೋಗಿಬಿಟ್ಟಿವೆ. ಆದರೆ ಕಳೆದ ಏಪ್ರಿಲ್ ತಿಂಗಳ ಬಿಸಿಲು ಈ ಮಾತುಗಳಿಗೆ ಒಂದಿಷ್ಟಾದರೂ ಜೀವ ನೀಡಿ ಜನ ಯೋಚಿಸುವಂತೆ ಮಾಡಿರಬಹುದು. ಜಗತ್ತಿನ ಹಲವೆಡೆ ೪೦ ಡಿಗ್ರಿಗೂ– ಕೆಲವೆಡೆ ೫೦ಕ್ಕೂ– ಹೆಚ್ಚು ತಾಪಮಾನವನ್ನು ದಾಖಲಿಸಿ ಶತಮಾನದ ಅತ್ಯಂತ ಹೆಚ್ಚಿನ ಬಿಸಿಲಿನ ತಿಂಗಳು ಎನ್ನಿಸಿಕೊಂಡ ಈ ಏಪ್ರಿಲ್‌ನಲ್ಲಿ ಜಗತ್ತಿನಾದ್ಯಂತ ಸಾವಿರಾರು ಜನ ಈ ಬಿಸಿಲಿನ ಝಳ ತಾಳಲಾರದೆ ಪ್ರಾಣ ಕಳೆದುಕೊಂಡಿದ್ದಾರೆ.. ಎಂದೂ ಬಿಸಿಲಿನಿಂದ ಸತ್ತ ಸುದ್ದಿಯಿಲ್ಲದ ಕರ್ನಾಟಕದಲ್ಲೂ ಇಂತಹ ಸಾವಿನ ಪ್ರಕರಣಗಳು ದಾಖಲಾದವು.

ಈ ಎಲ್ಲ ಮಾಹಿತಿ–ಸುದ್ದಿಗಳಾದರೂ ನಮ್ಮನ್ನು ನಮ್ಮ ಸುತ್ತ ಏನಾಗುತ್ತಿದೆ, ಅದಕ್ಕೆ ನಾವೆಷ್ಟು ಕಾರಣ ಎಂದು ಯೋಚಿಸಲು ಪ್ರೇರೇಪಿಸಬೇಕು. ನಮ್ಮ ದೇಶವನ್ನು ಸತತವಾಗಿ ಎರಡನೇ ವರ್ಷ ಬರ ಕಾಡುತ್ತಿದೆ. ಸದಾ ಬರಕ್ಕೆ ತುತ್ತಾಗುವ ದೇಶವೆಂದು ಹೆಸರಾದ ಭಾರತ ಈ ಬಾರಿ ಕಳೆದ ನಲವತ್ತೈದು ವರ್ಷಗಳಿಂದ ಕಾಣದಂತಹ ಭೀಕರ ಬರಕ್ಕೆ ತುತ್ತಾಗಿದೆ ಎಂದು ಹೇಳಲಾಗುತ್ತಿದೆ. ಜಮ್ಮು ಮತ್ತು ಕಾಶ್ಮೀರದಂತಹ ಸದಾ ತೇವವಿರುವ ರಾಜ್ಯದಲ್ಲಿ ಈಗ ಕುಡಿಯುವ ನೀರಿನ ಅಭಾವ ಉಂಟಾಗಿದೆ ಎಂದರೆ ಪರಿಸ್ಥಿತಿ ಸಾಕಷ್ಟು ಭೀಕರವಾಗಿದೆ ಎಂದೇ ಅರ್ಥ. ಸರ್ಕಾರ ೧೧೦೦ ಹಳ್ಳಿ ಪಟ್ಟಣಗಳಿಗೆ ಟ್ಯಾಂಕರ್‌ಗಳು ಮತ್ತು ರೈಲುಗಳ ಮೂಲಕ ಕುಡಿಯುವ ನೀರನ್ನು ಪೂರೈಸಬೇಕಾಗಿದೆ. ಇದು ಕೂಡ ಕನಿಷ್ಠ ಅಗತ್ಯಗಳಿಗೆ ಮಾತ್ರ. ಹಲವೆಡೆ ಹೆಚ್ಚುವರಿ ನೀರಿಗೆ ದುಬಾರಿ ಹಣಕೊಟ್ಟು ಕೊಳ್ಳಬೇಕಿದೆ.

ಕೊಳವೆ ಬಾವಿಗಳಲ್ಲಿ ಬಹುಪಾಲು ನೀರು ಬತ್ತಿ ಹೋಗಿದೆ. ೧೫೦೦–೨೦೦೦ ಅಡಿ ಕೊರೆದರೂ ನೀರಿನ ಪಸೆ ಕಾಣದಾಗಿದೆ. ಅತಿಯಾದ ಹಿಂಗಾರು ಮಳೆಯ (ಚೆನ್ನೈ ಪ್ರವಾಹ ನೆನಪಿಸಿಕೊಳ್ಳಿ) ಲಾಭ ಪಡೆದ ಮತ್ತು ಮಲೆನಾಡ ನದಿ ತೀರದ ಕೆಲ ಪ್ರದೇಶಗಳ ಹೊರತಾಗಿ ನಮ್ಮ ಕೆರೆ–ಕಟ್ಟೆಗಳು ಬರಿದಾಗಿವೆ. ಆಧುನಿಕ ಜಲಾಶಯಗಳಲ್ಲಿ ನೀರಿನ ಸಂಗ್ರಹ ದಾಖಲೆಯ ಮಟ್ಟಕ್ಕೆ ಕುಸಿದಿದ್ದು ರೈತರು ಕಂಗಾಲಾಗಿದ್ದಾರೆ. ಬೆಳೆ ಬೆಳೆಯಲಾಗದ ಮತ್ತು ಬೆಳೆ ನಾಶದ ಕಾರಣಗಳಿಂದಾಗಿ ರೈತರು ನೂರಾರು ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಸಣ್ಣ ಪುಟ್ಟ ರೈತರು ಮತ್ತು ಕೃಷಿ ಕೂಲಿಕಾರರು ಗುಳೆ ಎದ್ದು ಹೊರಟಿದ್ದಾರೆ. ಅವರ ಕುಟುಂಬಗಳು ನೆಲೆ ಕಳೆದುಕೊಂಡು ಅನಾಥ ಸ್ಥಿತಿಗೆ ತಲುಪಿವೆ.

ಅಧಿಕೃತ ಮಾಹಿತಿಯ ಪ್ರಕಾರ ರಾಷ್ಟ್ರದ ೧೧ ರಾಜ್ಯಗಳ ಸುಮಾರು ೨೫೬ ಜಿಲ್ಲೆಗಳಲ್ಲಿ ಈಗ ಬರ ಕಾಣಿಸಿಕೊಂಡಿದೆ. ಇದರಿಂದಾಗಿ ಸುಮಾರು ೩೩ ಕೋಟಿ ಜನರ ಬದುಕು ದುಸ್ತರವಾಗಿದೆ. ಕರ್ನಾಟಕದ ಬಗ್ಗೆ ಹೇಳುವುದಾದರೆ ರಾಜ್ಯದ ೧೭೬ ತಾಲ್ಲೂಕುಗಳ ಪೈಕಿ ೧೩೭ರಲ್ಲಿ–ವಿಶೇಷವಾಗಿ ಉತ್ತರ ಕರ್ನಾಟಕದ ತಾಲ್ಲೂಕುಗಳಲ್ಲಿ–ಬರ ಕಾಣಿಸಿಕೊಂಡಿದೆ. ಇದರಿಂದಾಗಿ ಆಗಿರುವ ಬೆಳೆನಷ್ಟದ ಮೌಲ್ಯ ೧೩೨೦೦ ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿದೆ.

ಇಲ್ಲಿನ ವಿಷಾದದ ಸಂಗತಿ ಎಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂತಹ ಘೋರ ಬರದ ಬಗ್ಗೆ ನಿಜವಾಗಿ ಎಚ್ಚೆತ್ತುಕೊಂಡದ್ದು ನಮ್ಮ ಸರ್ವೋಚ್ಚ ನ್ಯಾಯಾಲಯ ಸರ್ಕಾರಗಳ ಕಡು ನಿಷ್ಕ್ರಿಯತೆಯ ಬಗ್ಗೆ ಚಾಟಿ ಬೀಸಿ, ಬರವನ್ನು ರಾಷ್ಟ್ರೀಯ ವಿಪತ್ತೆಂದು ಪರಿಗಣಿಸಿ ಪರಿಹಾರ ಕಾರ್ಯಕ್ರಮಗಳಿಗಾಗಿ ತುರ್ತಾಗಿ ಹಣ ಬಿಡುಗಡೆ ಮಾಡಲು ಸೂಚಿಸಿದಾಗಲೇ. ನಂತರ ಸರ್ಕಾರಗಳೇನೋ ಉದ್ಯೋಗ ಖಾತರಿ ಯೋಜನೆ, ಕೆರೆಕಟ್ಟೆಗಳ ಸ್ವಚ್ಛತೆ, ಬೆಳೆ ವಿಮೆ, ಬೆಳೆ ನಾಶ ಪರಿಹಾರ ಇತ್ಯಾದಿಗಳಿಗಾಗಿ ಲಭ್ಯಾನುಸಾರ ವಿಶೇಷ ಮೊತ್ತಗಳನ್ನು ಬಿಡುಗಡೆ ಮಾಡಿವೆ. ನಮ್ಮ ಮುಖ್ಯಮಂತ್ರಿಗಳು ಬರ ಪ್ರದೇಶಗಳ ಪ್ರವಾಸ ಮಾಡಿ ಪರಿಹಾರ ಕ್ರಮಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಿದಂತಿದೆ. ಪ್ರಧಾನಿಯವರೂ ಈ ಸಂಬಂಧ ಮುಖ್ಯಮಂತ್ರಿಗಳ ಸಭೆ ಕರೆದು ಸಮಾಲೋಚನೆಗಳನ್ನು ಮಾಡಿದ್ದಾರೆ.

ಆದರೆ ಈ ಸಂದರ್ಭದಲ್ಲಿ ಮುಖ್ಯ ಪ್ರಶ್ನೆ, ಪ್ರವಾಸ–ಪರಿಹಾರಗಳದ್ದಲ್ಲ. ಅವೇನಿದ್ದರೂ ತಾತ್ಕಾಲಿಕ ಕ್ರಮಗಳು. ಈಗ ಕೇಳಿಕೊಳ್ಳಬೇಕಾಗಿರುವ ಮುಖ್ಯ ಪ್ರಶ್ನೆಗಳೆಂದರೆ, ಬರ ಎಂದರೆ ಏನು ಎಂಬ ಮೂಲಭೂತ ಪ್ರಶ್ನೆಯನ್ನು ನಾವು ಕೇಳಿಕೊಂಡಿದ್ದೇವೆಯೇ? ಮತ್ತು ಈ ಪ್ರಶ್ನೆಗೆ ದೊರೆತ ಉತ್ತರದ ಆಧಾರದ ಮೇಲೆ ನಮ್ಮ ನಾಡನ್ನು ಆದಷ್ಟೂ ಬರಮುಕ್ತ ನಾಡನ್ನಾಗಿ ಮಾಡುವ ಪ್ರಯತ್ನ ಮಾಡಿದ್ದೇವೆಯೇ? ಇದಕ್ಕಾಗಿ ನಮಗೆ ಲಭ್ಯವಿರುವ ವಿಜ್ಞಾನ–ತಂತ್ರಜ್ಞಾನಗಳ ತಿಳುವಳಿಕೆಯನ್ನು ಸಮರ್ಥವಾಗಿ ಬಳಸಿಕೊಂಡಿದ್ದೇವೆಯೇ? ಎಂಬುದಾಗಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಸರಾಸರಿ ವಾರ್ಷಿಕ ಮಳೆಯ ಪ್ರಮಾಣ ಗಣನೀಯವಾಗಿ ಕುಸಿದಿದೆ ಮತ್ತು ಕಳೆದ ಮೇ ನಲ್ಲಿಯೇ ಈ ಬಾರಿಯ ಮುಂಗಾರು ಶೇ. ೧೭ರಷ್ಟು ಕಡಿಮೆಯಾಗಲಿದೆ ಎಂದು ಹವಾಮಾನ ತಜ್ಞರು ಎಚ್ಚರಿಸಿದ್ದರು. ಆದರೆ ಏನು ಫಲ? ಬರ ಎಂದರೇನು? ಸರಳವಾಗಿ ಹೇಳುವುದಾದರೆ ನೀರಿನ ಅಭಾವ. ಈ ಅಭಾವ ಏಕೆ ಉಂಟಾಗುತ್ತದೆ? ಇದಕ್ಕೆ ಸರಳ ಉತ್ತರ: ಮಳೆಯ ಕೊರತೆ. ಈ ಉತ್ತರ ಮುಂದೆ ಎರಡು ಪ್ರಶ್ನೆಗಳಿಗೆ ಕಾರಣವಾದರೆ ಮಾತ್ರ ನಾವು ಬರವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಆ ಎರಡು ಪ್ರಶ್ನೆಗಳೆಂದರೆ, ಮಳೆಯ ಕೊರತೆ ಏಕೆ ಸಂಭವಿಸುತ್ತದೆ ಎಂಬುದು ಒಂದಾದರೆ, ಕಾಲಕಾಲಕ್ಕೆ ಬಿದ್ದ ಮಳೆಯನ್ನು ನಮ್ಮ ಬದುಕಿಗೆ ಹಲವು ರೂಪಗಳ

ಉಳಿತಾಯಗಳ ಮೂಲಕ ಭದ್ರತೆ ಮಾಡಿಕೊಂಡಂತೆ ನಾವು ಉಳಿತಾಯ ಮಾಡಿಕೊಳ್ಳುತ್ತಿದ್ದೇವೆಯೇ ಎಂಬುದು ಎರಡನೆಯದು.

ಇಲ್ಲಿನ ಮೊದಲ ಪ್ರಶ್ನೆ ಬಹುಚರ್ಚಿತ ಪ್ರಶ್ನೆ. ಅದರ ಚರ್ಚೆ ಇಲ್ಲಿ ಬೇಡ. ಎರಡನೆಯ ಪ್ರಶ್ನೆಯನ್ನು ತೆಗೆದುಕೊಂಡರೆ, ಬಹಳ ಜನ ಜಲತಜ್ಞರ ಅಭಿಪ್ರಾಯದ ಪ್ರಕಾರ ಭಾರತದಲ್ಲಿ ಬಹುಬಾರಿ ಕಾಣಿಸಿಕೊಳ್ಳುತ್ತಿರುವುದು ಮಳೆ ಕೊರತೆ ಮೂಲವಾದ ಬರವಲ್ಲ; ಬದಲಿಗೆ ಮಾನವ ನಿರ್ಮಿತ ಬರ. ಎಲ್ಲಕ್ಕೂ ಬಜೆಟ್ ಮಾಡುತ್ತಾ ಬಂದಿರುವ ನಾವು ಜನರಿಗೆ ಮೂಲ ಅಗತ್ಯವಾದ ಜೀವದಾಯಿ ನೀರಿಗೆ ಮಾತ್ರ ಬಜೆಟ್ ಮಾಡುತ್ತಿಲ್ಲ. ನೀರಿನ ವೈಜ್ಞಾನಿಕ ಸಂಗ್ರಹ, ಅವಶ್ಯಕತೆಗಳನ್ನನುಸರಿಸಿ ನೀರಿನ ಮರುವಿತರಣೆ, ನಗರಗಳಲ್ಲಿನ ನೀರಿನ ದುಂದು ಬಳಕೆ, ನಮ್ಮ ಕೃಷಿ ಪದ್ಧತಿಗಳಲ್ಲಿ ಮಾಡಬೇಕಾದ ಮಾರ್ಪಾಡು ಇತ್ಯಾದಿಗಳ ಬಗ್ಗೆ ಬರೀ ಮಾತು-ಚರ್ಚೆ ಕೇಳಿ ಬರುತ್ತಿದೆಯೇ ಹೊರತು ಕಾರ್ಯ ಯೋಜನೆಯ ಸುದ್ದಿಯಿಲ್ಲ. ಇದಕ್ಕೆ ಸರ್ಕಾರಗಳ ಒಳಗೂ, ಹೊರಗೂ ಇರುವ ಪಟ್ಟಭದ್ರ ಹಿತಾಸಕ್ತಿಗಳೇ ಕಾರಣ. ಉದಾಹರಣೆಗೆ ನದಿ ಜೋಡಣೆ, ನದಿ ತಿರುವು, ಬೃಹತ್ ಅಣೆಕಟ್ಟುಗಳ ರಾಜಕಾರಣಿ-ಕಂಟ್ರಾಕ್ಟರುಗಳ ಜೋಡಿ ರಾಜ್ಯ ಸರ್ಕಾರಗಳ ಒಳಗೆ ಕೆಲಸ ಮಾಡುತ್ತಿದ್ದರೆ, ಹೊರಗೆ ಜಲಕ್ರೀಡೆ, ತಂಪುಪಾನೀಯಗಳ ಉದ್ಯಮ ಮತ್ತು ಕ್ರಿಕೆಟ್ ಉದ್ಯಮಗಳಂತಹ ಲಾಬಿಗಳು ಕೆಲಸ ಮಾಡುತ್ತಿರುತ್ತವೆ. ಉದಾಹರಣೆಗೆ, ಕುಡಿಯಲು ನೀರಿಲ್ಲದೆ ತತ್ತರಿಸುತ್ತಿರುವ ಮಹಾರಾಷ್ಟ್ರದಲ್ಲಿ ಮುಂದಿನ ಮೂರು ಕ್ರಿಕೆಟ್ ಮೈದಾನಗಳನ್ನು ನಿರ್ವಹಿಸಲು ೬೦ ಲಕ್ಷ ಲೀಟರ್ ನೀರು ಅಗತ್ಯವೆಂದು ಹೇಳಿಕೊಂಡ ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಸರ್ವೋಚ್ಚ ನ್ಯಾಯಾಲಯ ಛೀಮಾರಿ ಹಾಕಿ ಪಂದ್ಯಗಳನ್ನು ರಾಜ್ಯದ ಹೊರಗೆ ನಡೆಸುವಂತೆ ಆದೇಶಿಸಿದೆ. ಬರ ಪರಿಶೀಲನೆಗೆ ಬಂದ ಮಂತ್ರಿಯ ಹೆಲಿಕಾಪ್ಟರ್ ಇಳಿಯಲು ಹೆಲಿಪ್ಯಾಡನ್ನು ಸಜ್ಜುಗೊಳಿಸಲು ಸಾವಿರಾರು ಲೀಟರ್ ಖರ್ಚು ಮಾಡುವ ಭಂಡ ಸರ್ಕಾರಿ ವ್ಯವಸ್ಥೆಯನ್ನು ಹೊಂದಿರುವ ನಾವು ಸಾಗಬೇಕಾದ ದಾರಿ ದೂರವಿದೆ.

ಮುಂದಿನ ಪುಟಗಳಲ್ಲಿ ಲೇಖನಗಳು ಈ ವಿಷಯವನ್ನೇ ಹಲವು ದಿಕ್ಕುಗಳಿಂದ ಚರ್ಚಿಸುವ ಪ್ರಯತ್ನ ಮಾಡಿವೆ. ಓದಿ, ಬರೆಯಿರಿ-ಸಂ.

ಜುಲೈ, ೨೦೧೬

ಇದು ನಮ್ಮ ೬೦ನೆಯ ಸಂಚಿಕೆ; ಆದರೆ...

ಪ್ರಿಯ ಓದುಗರೇ,

ಈ ಸಂಚಿಕೆಯೊಂದಿಗೆ ನಿಮ್ಮ ಪತ್ರಿಕೆ ಐದು ವರ್ಷಗಳನ್ನು ಪೂರೈಸುತ್ತಿದೆ. ಹಾಗಾಗಿ ಇದು ಪತ್ರಿಕೆಯ ಅರವತ್ತನೇ ಸಂಚಿಕೆ. ಪತ್ರಿಕೆಯನ್ನು ಐದು ವರ್ಷಗಳ ಹಿಂದೆ ಆರಂಭಿಸಿದಾಗ, ಇದನ್ನು ಆದಷ್ಟೂ ದೀರ್ಘ ಕಾಲ ನಡೆಸಿಕೊಂಡು ಹೋಗಬೇಕೆಂಬ ಹಠವಿತ್ತಾದರೂ, ಮನದೊಳಗೆ ಒಂದು ವರ್ಷವಾದರೂ ದಾಟೀತೆ ಎಂಬ ಅನುಮಾನ ಇದ್ದೇ ಇತ್ತು. ಏಕೆಂದರೆ ಇದನ್ನು ಸಮಾಜವಾದಿ ಪತ್ರಿಕೆ ಎಂದು ಆರಂಭಿಸಿದ್ದೆ. ಸಮಾಜವಾದಿ ಏರುಗಾಲದಲ್ಲೇ ಸಮಾಜವಾದಿ ಪತ್ರಿಕೆಗಳು ಬಹುಕಾಲ ನಡೆಯಲಿಲ್ಲ. 'ಜನತಾ' ಎಂಬ ಇಂಗ್ಲಿಷ್ ವಾರಪತ್ರಿಕೆ ಹಾಗೂ ಹೀಗೂ ೭೧ ವರ್ಷಗಳ ಕಾಲ ಉಳಿದು ಬಂದಿದೆ. ಅದು ಇಂಗ್ಲಿಷ್ ಪತ್ರಿಕೆಯಾಗಿ ಅಖಿಲ ಭಾರತ ವ್ಯಾಪ್ತಿ ಪಡೆದಿರುವುದೂ ಕಾರಣವಿರಬಹುದು. ಆದರೆ ಸಮಾಜವಾದದ ಕಾಲ ಮುಗಿಯಿತು ಎಂಬ ಸಾರ್ವಜನಿಕ ಅಭಿಪ್ರಾಯ ಸೃಷ್ಟಿಯಾಗುತ್ತಿರುವ ಈ ಜಾಗತೀಕರಣದ ಕಾಲದಲ್ಲಿ ಸಮಾಜವಾದದ ಹೆಸರಿನಲ್ಲಿ ಅದೂ ಕನ್ನಡದ ಸೀಮಿತ ಭಾಷಾ ವಲಯದಲ್ಲಿ ಪತ್ರಿಕೆ ಮಾಡುವುದು ಹುಚ್ಚು ಸಾಹಸವೆಂದೇ ನನ್ನ ಹಲವು ಗೆಳೆಯರು ಹೇಳಿದ್ದರು. ಆದರೆ ಸಮಾಜವಾದದಿಂದ. ವಿಶೇಷವಾಗಿ ಲೋಹಿಯಾ ವಿಚಾರಗಳಿಂದ ನನ್ನ ಬದುಕಿನ ಹಲವು ಚೆಲುವುಗಳನ್ನು ಕಂಡುಕೊಂಡಿದ್ದ ನಾನು ಆ ಋಣ ತೀರಿಸಲೆಂಬಂತೆ ಪತ್ರಿಕೆ ಆರಂಭಿಸಿದೆ. ಸಮಾಜವಾದ ಎನ್ನುವುದು ಇನ್ನೂ ತನ್ನ ಸೃಜನಶೀಲತೆಯನ್ನು ಕಳೆದುಕೊಂಡಿಲ್ಲ ಮತ್ತು ಹೀಗೆ ಯೋಚಿಸುವ ಸಾಕಷ್ಟು ಗೆಳೆಯರಿದ್ದಾರೆ ಎಂಬ ನಂಬಿಕೆಯೂ ನನ್ನ ಜೊತೆಗಿತ್ತು. ಆದರೆ ಈ ಪತ್ರಿಕೆಯನ್ನೀಗ ನಿಲ್ಲಿಸುವ ನಿರ್ಧಾರಕ್ಕೆ ಬಂದಿರುವೆ. ಇದಕ್ಕೆ ವಿವರವಾದ ಕಾರಣಗಳನ್ನೂ ಹೋದ ಸಂಚಿಕೆಯಲ್ಲಿ ನೀಡಿರುವೆ.

ಪತ್ರಿಕೆ ನಿಲ್ಲಿಸುವ ನನ್ನ ಈ ನಿರ್ಧಾರದ ಬಗ್ಗೆ ಓದುಗರಿಂದ ವ್ಯಾಪಕವಾದ ಪ್ರತಿಕ್ರಿಯೆಗಳು ಬಂದಿವೆ. ಅವನ್ನೆಲ್ಲ ನೀವು ಈ ಸಂಚಿಕೆಯ ೫ ಮತ್ತು ೬ನೇ ಪುಟಗಳಲ್ಲಿ ನೋಡಬಹುದು. ಪತ್ರಿಕೆ ನಿಲ್ಲಬಾರದೆಂಬುದು ಬಹುಜನರ ಅಪೇಕ್ಷೆ. ಅದಕ್ಕೆ ಅವರು ತಮ್ಮದೇ ಕಾರಣಗಳನ್ನು ನೀಡಿದ್ದಾರಲ್ಲದೆ, ಪರ್ಯಾಯ ವ್ಯವಸ್ಥೆಗಾಗಿ ಸಲಹೆ-ಸೂಚನೆಗಳನ್ನೂ ನೀಡಿದ್ದಾರೆ. ಮತ್ತೆ ಕೆಲವರು ತಮ್ಮದೇ ರೀತಿಯಲ್ಲಿ ಸಹಾಯ ಹಸ್ತ ಚಾಚಿದ್ದಾರೆ. ಇನ್ನು ಹಲವರದ್ದು ಸಂಪಾದಕರ ಆರೋಗ್ಯದ ಕಾರಣವೇ ನಿಜವಾಗಿದ್ದರೆ ಅದನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗಿದೆ ಎಂದಿದ್ದಾರೆ. ಒಬ್ಬರು ಮಾತ್ರ ಪತ್ರಿಕೆ ನಿಲ್ಲುತ್ತಿರುವುದು ಸಂತೋಷ ಎಂದಿದ್ದರೆ, ಪತ್ರಿಕೆಯ ಅಭಿಮಾನಿಯೇ ಆದ ಗೆಳೆಯ ಜಯಂತ ಕಾಯ್ಕಿಣಿ ನನ್ನ ಮೇಲಿನ ಪ್ರೀತಿಯಿಂದಾಗಿಯೇ ಈ ನಿರ್ಧಾರವನ್ನು ಯಾವುದೇ ಕಾರಣಕ್ಕೂ ಹಿಂತೆಗೆದುಕೊಳ್ಳಬೇಡಿ ಎಂದು ಎಚ್ಚರಿಸಿದ್ದಾರೆ. ಪತ್ರಿಕೆಯನ್ನು ಕುರಿತ ಮತ್ತು ನನ್ನನ್ನು ಕುರಿತ ಇವರೆಲ್ಲರ ಪ್ರೀತಿ-ಅಭಿಮಾನಗಳಿಂದ ಬೆರಗಾಗಿದ್ದೇನೆ.

ಮೊದಲೇ ಹೇಳಿಬಿಡುತ್ತೇನೆ. ಪತ್ರಿಕೆಗೆ ಅಂತಹ ಹಣಕಾಸಿನ ತೊಂದರೆ ಇಲ್ಲ. ಹತ್ತಿರ ಹತ್ತಿರ ಸಾವಿರ ಚಂದಾದಾರರಿದ್ದಾರೆ. ಆದರೆ ನಾನು ಪತ್ರಿಕೆಯನ್ನು, ಓರ್ವ ಹಿರಿಯರು ತಮ್ಮ ಪತ್ರದಲ್ಲಿ ತಿಳಿಸಿರುವಂತೆ, ನಾಳೆಯೇ ಕ್ರಾಂತಿಯಾಗಿಬಿಡುತ್ತದೆ ಎಂಬ ನಿರೀಕ್ಷೆಯಿಂದೇನೂ ಆರಂಭಿಸಲಿಲ್ಲ. ಬದಲಿಗೆ, ಇದು ಕೆಟ್ಟ ಜಾಗತೀಕರಣದಿಂದಾಗಿ ನನ್ನ ಸುತ್ತಮುತ್ತಲ ಸಮಾಜ ತನ್ನ ಮೂಲ ಸ್ವಭಾವವನ್ನೇ ಕಳೆದುಕೊಂಡು ಮಿತಿ ಇಲ್ಲದ ಸುಖದಾಸೆಗಳ ಹಿಂದೆ ಬಿದ್ದು ಹೆಚ್ಚೆಚ್ಚು ಹಿಂಸಾತ್ಮಕವಾಗುತ್ತಾ ತನ್ನ ಆತ್ಮವನ್ನು ನಾಶಪಡಿಸಿಕೊಳ್ಳುತ್ತಿರುವಂತೆ ತೋರುತ್ತಿರುವ ಸಂದರ್ಭ. ಇದನ್ನು ಮುನ್ನೋಡಿ ಎಚ್ಚರಿಸಿದ್ದ ನಮ್ಮ ಮಹಾನ್ ಚಿಂತಕರ ಆಲೋಚನೆಗಳ ಸ್ಫೂರ್ತಿಯಲ್ಲಿ ಇದರ ವಿರುದ್ಧ ಒಂದು ಪರ್ಯಾಯ ಆಲೋಚನಾ ಕ್ರಮವನ್ನು ಸಂಘಟಿಸಲು ಸಾಧ್ಯವೇ ಎಂಬ ಪ್ರಯತ್ನವಾಗಿ ಈ ಪತ್ರಿಕೆ ಮಾಡಿದೆ. ಪತ್ರಿಕೆ ಹೀಗೆ ಆಲೋಚಿಸುವವರ ಒಂದು ಕೂಟವನ್ನು ತಾನೇ ತಾನಾಗಿ ನಿರ್ಮಿಸಿಕೊಂಡು ಕ್ರಿಯಾಶೀಲವಾಗುತ್ತದೆ ಎಂದೂ ಭಾವಿಸಿದ್ದೆ.

ಆದರೆ ಇಂತಹ ಯಾವ ಸೂಚನೆಯೂ ನನಗೆ ದೊರಕುತ್ತಿಲ್ಲ. ನಿಜ, ಅದೇ ನಾಲ್ಕಾರು ಜನ ಪ್ರತಿಕ್ರಿಯೆಗಳನ್ನು ಬರೆಯುತ್ತಾರೆ. ಅಲ್ಲಿಗೆ ಮುಗಿಯಿತು ಸಮಾಜವಾದಿ ಸಂವಾದ. ನಮ್ಮ ಬಹಳಷ್ಟು ಓದುಗರು ಪತ್ರಿಕೆಯನ್ನು ಓದಿನ ಸುಖಕ್ಕಾಗಿ ಮಾತ್ರ ಓದುತ್ತಾರೆ ಎಂದು ನನಗನಿಸಿದೆ. ಮುಂದಿನ ಹೆಜ್ಜೆಯೇ ಇಲ್ಲ. ನಾನು ಬಲ್ಲ ಹತ್ತಿರದ ಓದುಗ ಗೆಳೆಯರನ್ನೇ ನೋಡುತ್ತಿದ್ದೇನೆ. ಜಾಗತೀಕರಣದ ಆರ್ಥಿಕ ಫಲಾನುಭವಿಗಳಾದ ಇವರಿಗೆ ತಮ್ಮ ಹೊಸ ಜೀವನಶೈಲಿಯ ಬಗ್ಗೆ ಯಾವ ಎಗ್ಗೂ ಇಲ್ಲ. ಅದರ ಅಪಾಯಗಳು ಎದುರಿಗೇ ಕಾಣುತ್ತಿದ್ದರೂ, ಅದು ನಮ್ಮ ಮನೆ ಬಾಗಿಲಿಗೆ ಬರುವವರೆಗೂ ಚಿಂತಿಸುವ ಅಗತ್ಯವಿಲ್ಲ ಎಂದು ಭಾವಿಸಿದ್ದಾರೆ. ಎರಡೂ ಮೂರು ಸೈಟು, ಮನೆಗಳು! ಜೊತೆಗೆ ತೋಟ-ಗದ್ದೆಗಳು! ಅವರು ತಮ್ಮ ಮಕ್ಕಳ ಮದುವೆ ಮಾಡುವ ರೀತಿ ನೀತಿಗಳೇನು,

ಅದರ ಅಶ್ಲೀಲ ವೈಭವವೇನು, ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಹುಡುಕುವ ಶಾಲೆ-ಕಾಲೇಜುಗಳ ಶ್ರೇಷ್ಠತೆಯ ಕಲ್ಪನೆಗಳೇನು, ತಮ್ಮ ಮಕ್ಕಳು ಮುಂದೆ ತಮಗಿಂತಲೂ ಸುಖವಾಗಿರಬೇಕೆಂದು ಬಯಸಿ ಅವರನ್ನು ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ಕಳಿಸಲು ಪಡುವ ಪಾಡೇನು, ಮಾಲ್‌ಗಳಿಗೆ ಹೋಗಿ ಅವರು ಪಡುವ ಖುಷಿಗಳೇನು!! ಸಿಕ್ಕಾಗ ಮಾತ್ರ ಪತ್ರಿಕೆಯ ಬರಹಗಳನ್ನು ಹೊಗಳಿದ್ದೂ ಹೊಗಳಿದ್ದೇ! ಇದನ್ನು ಕೇಳಿದಾಗ ನನಗಂತೂ ಇವರು ನನ್ನ ಪತ್ರಿಕೆಯ ಮೇಲೆ ಉಗುಳಿದಂತಾಗುತ್ತದೆ.

ಇವರಲ್ಲಿ ಹೆಚ್ಚಿನವರು ಬೇರೆ ಯಾರೂ ಅಲ್ಲ, ಒಂದು ಕಾಲದಲ್ಲಿ ಸಮಾಜವಾದಿಗಳೆಂದು ಕರೆದುಕೊಂಡವರೇ. ಈಗಲೂ ಸಮಾಜವಾದಿ ಎಂದು ಗುರುತಿಸಿಕೊಂಡರೆ ಏನಾದರೂ ಲಾಭ ಸಿಗುವುದಾದರೆ ಅದನ್ನು ಗಿಟ್ಟಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನೂ ಮಾಡುವಂಥವರೇ! ಸಮಾಜವಾದಿ ಚಳುವಳಿಯ ಪ್ರಭಾವದಲ್ಲಿ ಬೆಳೆದವರೇ ಹೀಗಿರುವಾಗ ಹೊಸ ತಲೆಮಾರಿನವರ ಬಗ್ಗೆ ಏನು ಹೇಳುವುದು? ಒಮ್ಮೊಮ್ಮೆ ಅವರೇ ಆಶಾಕಿರಣಗಳಂತೆ ಕಾಣುವುದೂ ಉಂಟು. ಆದರೆ ಅವರು ಕೂಡ ಎಲ್ಲರಂತೆ ಪತ್ರಿಕೆಯ ಓದಿನ ಸುಖವನ್ನು ಮಾತ್ರ ಅನುಭವಿಸುತ್ತಾ ಸುಮ್ಮನಿದ್ದುಬಿಟ್ಟಿದ್ದಾರೆನಿಸುತ್ತದೆ. ಪರಿಸ್ಥಿತಿ ಹೀಗಿರುವಾಗ ಪತ್ರಿಕೆಯ ಮೂಲ ಉದ್ದೇಶವಾದ 'ಹೊಸ ಮನುಷ್ಯ'ನ ಹೊಳಹನ್ನಾದರೂ ಎಲ್ಲಿ ಕಾಣುವುದು?

ಇದಕ್ಕೆಲ್ಲ ಮೂಲ ಕಾರಣ ಹಳೆಯ ಸಮಾಜವಾದದಲ್ಲೇ ಇದೆ ಎಂದು ನನಗನ್ನಿಸುತ್ತದೆ. ಅದರ ಮೂಲ ದೌರ್ಬಲ್ಯವೆಂದರೆ ಅದು ಮೂಲತಃ ಪಶ್ಚಿಮದ ನಾಗರೀಕತೆಯ ರಖಮ್ಮಾಗಿರುವುದು. ಕರ್ತವ್ಯಗಳಿಗಿಂತ ಹಕ್ಕುಗಳ ಬಗ್ಗೆ ಅದರ ಒತ್ತು. ಈ ಹಕ್ಕುಗಳಲ್ಲಿ ಸುಖದ ಹಕ್ಕು ಎಲ್ಲಕ್ಕಿಂತ ದೊಡ್ಡದು. ಆ ಹಕ್ಕೇ ಇತರೆಲ್ಲ ಹಕ್ಕುಗಳಿಗೆ ಪ್ರೇರಣೆ! ದೇಹ ಹೊತ್ತು ಬಂದಿರುವ ಮನುಷ್ಯನಿಗೆ ಆ ದೇಹವನ್ನು ಸಂರಕ್ಷಿಸಿಕೊಳ್ಳಲು ಒಂದು ಮಟ್ಟದ ಸುಖ ಬೇಡವೆಂದು ಯಾರೂ ಹೇಳುವುದಿಲ್ಲ. ಆದರೆ ಸುಖವೇ ಮನುಷ್ಯನ ಪರಮೋದ್ದೇಶವಾದರೆ? ಅದಕ್ಕೊಂದು ಮಿತಿಯೇ ಬೇಡವೆಂದರೆ? ಮನುಷ್ಯ ಗುರಿಯಷ್ಟೇ ಅಲ್ಲ, ಮಾರ್ಗ ಕೂಡ ಎಂಬ ಅರಿವೇ ಇಂತಹ ಆಲೋಚನಾ ಕ್ರಮಕ್ಕಿರುವಂತಿಲ್ಲ. ಅಂದರೆ ಮನುಷ್ಯ ಸುಖಗಳನ್ನು ಅರಸುತ್ತಾ, ಅನುಭವಿಸುತ್ತಾ ಏನಾಗುತ್ತಾ ಹೋಗುತ್ತಾನೆ ಎಂಬ ಪ್ರಶ್ನೆಯೇ ಇದನ್ನು ಇಂದು ಕಾಡುತ್ತಿರುವಂತೆ ತೋರುತ್ತಿಲ್ಲ. ಬಡತನ ನಿವಾರಣೆ ಈ ದೇಶಕ್ಕೆ ಒಂದು ವ್ಯಸನವಾಗಿ ಹೋಗಿದೆ. ಅದರ ಹೆಸರಲ್ಲೇ ನಡೆಯುತ್ತಿರುವುದು ಈ ಕಾಲ ತಳಗಿನ ನೆಲವನ್ನೇ ಅಲುಗಾಡಿಸುತ್ತಿರುವ ಅಭಿವೃದ್ಧಿ ಎಂಬ ಹುಚ್ಚಾಟ. ಸಮಾಜವಾದ ಮತ್ತು ಬಂಡವಾಳಶಾಹಿಗಳಿಗಿರುವ ಏಕೈಕ ವ್ಯತ್ಯಾಸವೆಂದರೆ ಇಂತಹ ಅಭಿವೃದ್ಧಿಯನ್ನು ಸಾಧಿಸುವ ಮಾರ್ಗದ ಬಗ್ಗೆ ಅಷ್ಟೆ.

ಈ ಕುರಿತ ಕಥನ-ಸಂಕಥನಗಳನ್ನೇ ಈ ಐದು ವರ್ಷಗಳಲ್ಲಿ ಈ ಪತ್ರಿಕೆ ಹೇಳುತ್ತಾ, ಸಮಾಜವಾದದ ಹೊಸ ದರ್ಶನದ ಹೊಳಹುಗಳಿಗಾಗಿ ಹುಡುಕಾಡಿದ್ದು. ಆದರೆ ನಮ್ಮ ಹೆಚ್ಚಿನ ಓದುಗರು ರಸ್ತೆ ಅಪಘಾತದಲ್ಲಿ ಅರೆಜೀವವಾಗಿ ಬಿದ್ದಿರುವ ಜನರನ್ನು,

ಬಹುಶಃ ವೇದನೆಯಿಂದಲೇ ನೋಡಿದರೂ ಕೆಲಸಗಳಿಗೆ ಧಾವಿಸುವ ಒತ್ತಡದಲ್ಲಿ, ಅಲ್ಲಿ ತಮ್ಮ ಪಾತ್ರವೇನೂ ಇಲ್ಲವೆಂಬ ಭಾವನೆಯ ಸಮಾಧಾನದೊಂದಿಗೆ ತಂತಮ್ಮ ದುಡಿಮೆಯ ತಾಣಗಳತ್ತ ಧಾವಿಸಿ ಸಂಜೆ ಆ ಭಯಾನಕ ದೃಶ್ಯವನ್ನು ತಮ್ಮ ಗೆಳೆಯರೊಂದಿಗೆ ಲೊಚ್ ಪಚ್ ಎಂದು ಹಂಚಿಕೊಳ್ಳುತ್ತಾ ತಮ್ಮ ಮಾನವ ಧರ್ಮ ಪಾಲನೆ ಮಾಡುವಂತೆ ಪತ್ರಿಕೆಗೆ ಉದಾರವಾಗಿ ಚಂದಾ ಕೊಟ್ಟು, ಓದಿ ಮೆಚ್ಚಿ ತಮ್ಮ ಧರ್ಮ ಪಾಲನೆ ಮಾಡಿದ್ದಾರೆ. ನಾನು ಬೇಕೆಂದೇ ಈ ಉಪಮೆಯಲ್ಲಿ ರಸ್ತೆ ಅಪಘಾತ, ಅರೆಜೀವಗಳು, ಮೂಲ ಮಾನವೀಯತೆಯನ್ನೂ ಅದುಮಿಡುವಂತಹ ಕೆಲಸಗಳಿಗೆ ಹೋಗುವ ಧಾವಂತ ಸೃಷ್ಟಿಸುವ ಇಂದಿನ ದುಡಿಮೆಯ ಸ್ವರೂಪ, ಮತ್ತು ಸಂಜೆಯ ಧರ್ಮ ಪಾಲನೆಯ ರೀತಿಯನ್ನು ಸೂಚಿಸಿರುವೆ. ಇವೆಲ್ಲ ಯಾವುದರ ಪರಿಣಾಮಗಳು?

ಇದನ್ನೆಲ್ಲ ಹೇಳಿದರೆ ನನ್ನ ಗೆಳೆಯರು ನಿಮಗೆ ಯಾವ ಕಾಲದಲ್ಲಿ ಯಾವ ಪುರಾಣ ಹೇಳಬೇಕೆಂಬ ಪರಿವೆಯೇ ಇದ್ದಂತಿಲ್ಲ ಎನ್ನುವರು. ಹಾಗಾದರೆ ನಾನು ನನ್ನ ಆರೋಗ್ಯವನ್ನೂ ಲೆಕ್ಕಿಸದೆ ಇವರಿಗೆ ಈ ಪುರಾಣ ಹೇಳಲು ಏಕೆ ನನ್ನ ಕಾಲ ಮತ್ತು ಶಕ್ತಿಯನ್ನು ವ್ಯಯ ಮಾಡಿಕೊಳ್ಳಬೇಕು? ನೀವೇ ಹೇಳಿ, ಪತ್ರಿಕೆ ನಿಲ್ಲಬಾರದೆಂದು ಹೇಳುತ್ತಿರುವ ಓದುಗರೇ! ದಯವಿಟ್ಟು ಕ್ಷಮಿಸಿ.

ಸಿದ್ಧರಾಮಯ್ಯನವರ ಸಂಪುಟ ಪುನಾರಚನೆ ಎಂಬ ಕಸರತ್ತು

ನಮ್ಮ ಮುಖ್ಯಮಂತ್ರಿ ಸಿದ್ಧರಾಮಯ್ಯ ಕುಲಗೆಟ್ಟು ಹೋಗಿರುವ ರಾಜ್ಯ ಸಭೆಗೆ ನಡೆದ ಚುನಾವಣೆಗಳಲ್ಲಿ ಅದನ್ನು ಮತ್ತಷ್ಟು ಕುಲಗೆಡಿಸುವಂತಹ ರಾಜಕಾರಣ ಮಾಡಿ ಒಬ್ಬ ಹೆಚ್ಚುವರಿ ಕಾಂಗ್ರೆಸ್ ಸದಸ್ಯನನ್ನು ಅಲ್ಲಿಗೆ ಕಳಿಸಿದ್ದನ್ನು ಮೆಚ್ಚಿಯೇ ಏನೋ ಸೋನಿಯಾ ಗಾಂಧಿಯವರು ಅವರಿಗೆ ಸಂಪುಟ ಪುನಾರಚನೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದೇ ಕಾರಣವಾಗಿ ಅವರೀಗ ಸಂಕಷ್ಟಕ್ಕೆ ಸಿಕ್ಕಿದಂತಿದೆ. ನಿಜ, ಈ ಪುನಾರಚನೆ ಸಿದ್ಧರಾಮಯ್ಯನವರು ಇತ್ತೀಚೆಗೆ ಅಪರೂಪಕ್ಕೆ ಮಾಡಿರುವ ಒಳ್ಳೆಯ ಕೆಲಸ. ಭ್ರಷ್ಟ ಮತ್ತು ಅದಕ್ಷರನ್ನು ಸಂಪುಟದಿಂದ ಹೊರಹಾಕಿದ್ದಾರೆ. ಆದರೆ ಅದೇ ಅವರ ಸಂಕಷ್ಟಕ್ಕೆ ಕಾರಣವಾಗಿದೆ. ಕಾಂಗ್ರೆಸ್ ಎಂದರೆ ಇದೇ! ಭ್ರಷ್ಟರು ಮತ್ತು ಅದಕ್ಷರು ಇದ್ದರೇನೇ ಕಾಂಗ್ರೆಸ್ ನೆಮ್ಮದಿಯಿಂದ ಇರಬಲ್ಲುದು! ಅಂದ ಮಾತ್ರಕ್ಕೆ ಪುನಾರಚನೆ ಪರಿಪೂರ್ಣವೆಂದೇನೂ ಅಲ್ಲ. ದೇಶಪಾಂಡೆ ಮತ್ತು ಮಹದೇವಪ್ಪನವರನ್ನು ಕೈಬಿಡಲು ಎಲ್ಲ ಕಾರಣಗಳೂ ಇದ್ದವು. ಹಾಗೇ ಪ್ರಿಯಾಂಕ್ ಖರ್ಗೆ ಮತ್ತು ಎಸ್.ಎಸ್. ಮಲ್ಲಿಕಾರ್ಜುನರನ್ನು ಸೇರಿಸಿಕೊಳ್ಳಲು ಯಾವ ಒಳ್ಳೆಯ ಕಾರಣಗಳೂ ಇರಲಿಲ್ಲ. ಕಾಂಗ್ರೆಸ್ ರಾಜಕಾರಣಕ್ಕೇ ವಿಶಿಷ್ಟವಾದ ಕಾರಣಗಳನ್ನು ಬಿಟ್ಟು! ಇದೇ ಮಾತನ್ನು ಡಿಕೆಶಿ ಮತ್ತು ರೋಷನ್ ಬೇಗ್ ಸಂಪುಟದಲ್ಲಿ ಉಳಿದುಕೊಂಡಿರುವುದಕ್ಕೂ ಅನ್ವಯಿಸಿ ಹೇಳಬಹುದು. ಅದೇನೇ ಇದ್ದರೂ ಮೊನ್ನೆಯ ವಿಧಾನ ಪರಿಷತ್ ಚುನಾವಣಾ ಫಲಿತಾಂಶಗಳನ್ನು ನೋಡಿದರೆ, ಇಂತಹ ಯಾವ ಅರೆಬರೆ ಕಸರತ್ತೂ ಕಾಂಗ್ರೆಸ್ಸನ್ನು

ಉಳಿಸುವಂತೆ ಕಾಣುವುದಿಲ್ಲ. ಇದನ್ನು ಮೀರಿದ ಜನ ಮೆಚ್ಚುವಂತಹ ಕೆಲಸಗಳನ್ನು ಮುಖ್ಯಮಂತ್ರಿಗಳು ಕ್ಷಿಪ್ರವಾಗಿ ಕೈಗೆತ್ತಿಕೊಳ್ಳಬೇಕಿದೆ.

<u>ಸಮಕಾಲೀನ</u>

ಮೋದಿ ಸರ್ಕಾರದ ಎರಡು ವರ್ಷ: ನಿಮಗೇನೆನ್ನಿಸುತ್ತಿದೆ?

ನರೇಂದ್ರ ಮೋದಿಯವರು ಎರಡು ವರ್ಷಗಳ ಹಿಂದೆ ಈ ದೇಶದ ಪ್ರಧಾನಮಂತ್ರಿಯಾಗುವ ಸೂಚನೆಗಳು ರಾಷ್ಟ್ರ ರಾಜಕಾರಣದಲ್ಲಿ ವ್ಯಕ್ತವಾಗತೊಡಗಿದಂತೆ ಒಂದು ಕಡೆ ಅಮಿತವಾದ ಉತ್ಸಾಹ ಕಂಡು ಬಂದರೆ ಮತ್ತೊಂದು ಕಡೆ ಅಷ್ಟೇ ಆತಂಕ ಕಂಡುಬಂದಿತು. ಮೋದಿ ಗುಜರಾತ್‌ನ ಮುಖ್ಯಮಂತ್ರಿಯಾಗಿ ಆ ರಾಜ್ಯವನ್ನು 'ಅಭಿವೃದ್ಧಿ'ಪಡಿಸಿದ ರೀತಿ, ಅದರ ಹಿಂದಿನ ಅವರ ದಕ್ಷತೆ ಉತ್ಸಾಹಗಳಿಗೆ ಕಾರಣರಾದರೆ, ಅವರು ಅಲ್ಲಿ ಮುಖ್ಯಮಂತ್ರಿ ಆಗಿದ್ದಾಗಲೆ ನಡೆದ ಮುಸ್ಲಿಮರ ಸಾಮೂಹಿಕ ಹತ್ಯೆ ಮತ್ತು ಅವರ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಅಂತರ್ಗತವಾಗಿದ್ದ ಆಡಳಿತ ಶೈಲಿ ಹಲವರಲ್ಲಿ ಆತಂಕಗಳಿಗೆ ಕಾರಣವಾಗಿತ್ತು. ಆಗ ಬದುಕಿದ್ದ ಲೇಖಕ ಯು.ಆರ್. ಅನಂತಮೂರ್ತಿಯವರು 'ಮೋದಿ ಪ್ರಧಾನಿಯಾದರೆ ನಾನು ಈ ದೇಶದಲ್ಲಿ ಇರಲಾರೆ' ಎಂದು ಹೇಳುವಷ್ಟು ಆ ಆತಂಕ ಹೆಪ್ಪುಗಟ್ಟಿತ್ತು.

ಈ ಹಿನ್ನೆಲೆಯಲ್ಲಿ ನಮ್ಮ ಪತ್ರಿಕೆ ೨೦೧೪ರ ಏಪ್ರಿಲ್ ಸಂಚಿಕೆಯ 'ಸಮಕಾಲೀನ' ಪುಟಗಳನ್ನು 'ಮೋದಿ ಏಕೆ ಪ್ರಧಾನಿಯಾಗಬಾರದು?' ಎಂಬ ಪ್ರಶ್ನೆಗೆ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳಿಂದ ಬಂದ ಉತ್ತರಗಳಿಗೆ ಮೀಸಲಿರಿಸಿತ್ತು. ಆಶ್ಚರ್ಯವೆಂದರೆ, ಇವರೆಲ್ಲರೂ ಒಂದೇ ರಾಜಕೀಯ ಅಭಿಪ್ರಾಯದ ಬಣಕ್ಕೆ ಸೇರಿರದಿದ್ದರೂ, ಎಲ್ಲರೂ ತಮ್ಮದೇ ಒಂದೊಂದು ಕಾರಣ ನೀಡಿ, ಮೋದಿ ಪ್ರಧಾನಿ ಆಗುವುದು ಆತಂಕಕಾರಿಯೇ ಹೌದು ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಇವರೆಲ್ಲರ ಆತಂಕವನ್ನು ಮತದಾರ ಲೆಕ್ಕಕ್ಕೇ ತೆಗೆದುಕೊಳ್ಳದಂತೆ ಮೋದಿಯವರನ್ನು ಪ್ರಧಾನಮಂತ್ರಿ ಸ್ಥಾನಕ್ಕೆ ಭಾರಿ ಬಹುಮತದಿಂದ ಏರಿಸಿಯೇಬಿಟ್ಟರು. ಈ ದಿಗ್ವಿಜಯದ ಹಿಂದೆ ಆಗ ಅಧಿಕಾರಾರೂಢವಾಗಿದ್ದ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರದ ಜಡತೆ ಮತ್ತು ಭ್ರಷ್ಟಾಚಾರದ ಹಗರಣಗಳಿದ್ದವು, ನಿಜ. ಆದರೆ ಇದಕ್ಕಿಂತ ಮುಖ್ಯವಾಗಿ ಮೋದಿಯವರ ವಿಜಯಕ್ಕೆ ಅವರು ಹುಟ್ಟಿಸಿದ್ದ ನಿರೀಕ್ಷೆಗಳು ಮತ್ತು ನೀಡಿದ ಆಶ್ವಾಸನೆಗಳು ಕಾರಣವಾಗಿದ್ದವು.

ಈಗ ಮೋದಿ ಸರ್ಕಾರದ ಎರಡು ವರ್ಷಗಳ ಅಧಿಕಾರಾವಧಿ ಪೂರ್ಣಗೊಂಡಿದೆ. ಮೋದಿ ಈಗತಾನೇ ಅಮೆರಿಕಾದ ಕಾಂಗ್ರೆಸ್‌ನ ಮನ ಗೆದ್ದು ಬಂದು ಭಾರತ ಒಂದು ಜಾಗತಿಕ ಶಕ್ತಿಯಾಗಿ ಹೊರಹೊಮ್ಮುವ ಬಾಗಿಲನ್ನು ತೆರೆದು ಬಂದಿದ್ದಾರೆ ಎಂದೂ ಸಂಭ್ರಮಿಸಲಾಗುತ್ತಿದೆ. ಇರಲಿ, ಮೋದಿಯವರ ಬಗ್ಗೆ ವ್ಯಕ್ತವಾಗಿದ್ದ ಆತಂಕಗಳು

ನಿಜವಾಗಿವೆಯೇ? ಅವರು ಹುಟ್ಟಿಸಿದ ಸಾಧನೆಯ ನಿರೀಕ್ಷೆಗಳು ಈಡೇರುವ ಲಕ್ಷಣಗಳು ಕಾಣುತ್ತಿವೆಯೇ? ಅವರ ರಾಜಕಾರಣ ಸರಿಯಾದ ದಾರಿಯಲ್ಲಿ ಸಾಗಿದೆಯೇ? ಎಂಬುದರ ಬಗ್ಗೆ ನಮ್ಮದೇ ಮಿತಿಗಳಲ್ಲಿ ಒಂದು ಸಮೀಕ್ಷೆಯ ಪ್ರಯತ್ನವಾಗಿ ಈಗ ನಾವು ಮೂರು ಪ್ರಶ್ನೆಗಳನ್ನು ನಮ್ಮ ಆಯ್ದ ಕೆಲವು ಓದುಗರಿಗೆ ಕೇಳಿದೆವು. ಅವರು ಕೊಟ್ಟ ಉತ್ತರಗಳನ್ನು ಮುಂದೆ ಕೊಡಲಾಗಿದೆ. ನಾವು ಕೇಳಿದ ಪ್ರಶ್ನೆಗಳು ಹೀಗಿದ್ದವು:

೧. ಮೋದಿಯವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ ನಿಮಗಿದ್ದ ಆತಂಕಗಳು ಯಾವುವು? ಅವು ಈಗ ಏನಾದರೂ ದೂರವಾಗಿವೆಯಾ?
೨. ಮೋದಿ ಸರ್ಕಾರದ ಈ ಎರಡು ವರ್ಷಗಳ ಸಾಧನೆಗಳೇನೆಂದು ನೀವು ಗುರುತಿಸುತ್ತೀರಿ?
೩. ಮೋದಿ ಸರ್ಕಾರದ 'ಕಾಂಗ್ರೆಸ್‌ಮುಕ್ತ ಭಾರತ' ಎಂಬ ರಾಜಕೀಯ ಘೋಷಣೆಯನ್ನು ನೀವು ಹೇಗೆ ಅರ್ಥ ಮಾಡಿಕೊಳ್ಳುತ್ತೀರಿ? (ಅದರ ಉದ್ದೇಶ, ಪರಿಣಾಮಗಳಾದರೂ ಏನೆಂದು ನೀವು ಭಾವಿಸುವಿರಿ?)

ಓದಿ, ಬರೆಯಿರಿ–ಸಂ.

ಆಗಸ್ಟ್, ೨೦೧೬

ಕಾಗದದ, ಕಛೇರಿಗಳ ರಾಷ್ಟ್ರವಾಗುತ್ತಿರುವ ನಮ್ಮ ಭಾರತ

ಪ್ರಿಯ ಓದುಗರೇ,

ಪತ್ರಿಕೆ ಪ್ರತಿ ವರ್ಷದಂತೆ ಈ ಬಾರಿಯೂ ಹೊಸ ಸಂಪುಟದ ಆರಂಭ ಸಂಚಿಕೆಯನ್ನು ವಿಶೇಷ ಸಂಚಿಕೆಯನ್ನಾಗಿ ರೂಪಿಸಿ ನಿಮ್ಮ ಮುಂದಿಡುತ್ತಿದೆ. ಈ ವಿಶೇಷ ಸಂಚಿಕೆ ಪ್ರತಿ ಸಂಚಿಕೆಯ ಸ್ಥಿರ ಶೀರ್ಷಿಕೆಗಳ ಲೇಖನಗಳ ಜೊತೆಗೆ, ಪತ್ರಿಕೆಯ ಉದ್ದೇಶಗಳ ವಿಶಾಲ ಚೌಕಟ್ಟಿಗೆ ಹೊಂದುವ ಹಲವು ವಿಶೇಷ ಲೇಖನಗಳು, ಸಂದರ್ಶನ ಮತ್ತು ಕಥೆ-ಕಾವ್ಯ-ಲಲಿತ ಪ್ರಬಂಧ-ಸಿನಿಮಾ ಲೋಕಗಳನ್ನೊಳಗೊಂಡ ವಿಶೇಷ ಪುಟಗಳನ್ನೂ ನೀಡಿದೆ. ಈ ವಿಶೇಷ ಸಂಚಿಕೆಯ ದೃಷ್ಟಿ ಕೇಂದ್ರ, ಪತ್ರಿಕೆ ತನ್ನ ಹೊಸ ಸಮಾಜವಾದದ ಹೊಳಹುಗಳ ಹುಡುಕಾಟದಲ್ಲಿ ಪದೇ ಪದೇ ಸವಾಲಾಗಿಯೂ, ಪ್ರೇರಣೆಯೂ ಆಗಿ ಎದುರಾಗುವ ಗಾಂಧಿ ವ್ಯಕ್ತಿತ್ವವೇ ಆಗಿದೆ.

ಭಾರತ ಪಶ್ಚಿಮದ ಆಧುನಿಕತೆಯ ಚೌಕಟ್ಟಿಗೆ ಹೆಚ್ಚೆಚ್ಚು ಒಳಗಾಗುತ್ತಾ, ಈ ದೇಶದ ಆಡಳಿತಗಾರರು ಹೆಚ್ಚೆಚ್ಚು ವಿಶ್ವಾಸದಿಂದ ಹೇಳುತ್ತಿರುವಂತೆ ಹೆಚ್ಚೆಚ್ಚು 'ಸಂಪದ್ಭರಿತ'ವೂ, 'ಬಲಿಷ್ಠ'ವೂ ಆಗುತ್ತಿರುವಾಗ ರಾಷ್ಟ್ರಪಿತನೆಂದು ಘೋಷಿತವಾಗಿರುವ ಗಾಂಧಿಯ ವ್ಯಕ್ತಿತ್ವ ಹೆಚ್ಚೆಚ್ಚು ಮಸುಕಾಗುತ್ತಾ, ಅಪ್ರಸ್ತುತತೆಯ ಮಾತುಗಳಿಗೆ ಒಳಗಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಈ ಸಂಪದ್ಭರಿತತೆ ಮತ್ತು ಬಲಿಷ್ಠತೆಗಳ ಮಾದರಿಗಳಲ್ಲಿ ಅಡಗಿರುವ ವಿಕಾರಗಳು ಒಂದೊಂದಾಗಿ ನಮ್ಮ ಮುಂದೆ ಕಾಣಿಸಿಕೊಳ್ಳುತ್ತಿದ್ದಂತೆ ಮತ್ತೆ ಮತ್ತೆ ಗಾಂಧಿಯತ್ತ ನೋಡುವ ಒತ್ತಾಯವೂ ನಮ್ಮಲ್ಲಿ ಉಂಟಾಗುತ್ತಿದೆ.

ವಿಕಾರ ಎಂದೆ. ಅದನ್ನು ನಾನು ಮತ್ತೆ ಇಲ್ಲಿ ವಿವರಿಸುವ ಅಗತ್ಯವಿಲ್ಲ. ಕಳೆದ ಐದು ವರ್ಷಗಳ ಪ್ರತಿ ಸಂಚಿಕೆಯೂ ಹಲವಾರು ನೆಲೆಯ ಈ ವಿಕಾರಗಳನ್ನು ಗುರುತಿಸುತ್ತಾ,

ವಿಶ್ಲೇಷಿಸುತ್ತಾ ಬಂದಿದೆ. ಸ್ವತಂತ್ರ ಭಾರತದ ಪ್ರಧಾನ ಲಹರಿಯ ರಾಜಕಾರಣದ ಎರಡು ಆತ್ಯಂತಿಕ ಮಾದರಿಗಳಂತೆ ಹೊಮ್ಮಿರುವ ನರೇಂದ್ರ ಮೋದಿ ಮತ್ತು ಸಿದ್ಧರಾಮಯ್ಯನವರ ಆಡಳಿತಗಳನ್ನು ಕುರಿತ ಪತ್ರಿಕೆಯ ಟೀಕೆ-ಟಿಪ್ಪಣಿಗಳೂ ಇದನ್ನೇ ಮಾಡುತ್ತಾ ಬಂದಿವೆ ಎಂದು ನಾನು ಭಾವಿಸಿದ್ದೇನೆ.

ಮೋದಿ ಮತ್ತು ಸಿದ್ಧರಾಮಯ್ಯ: ಅದೇ ಅಭಿವೃದ್ಧಿ ಮೀಮಾಂಸೆ

ಈ ಇಬ್ಬರೂ ಹೇಳುವುದು ಅಭಿವೃದ್ಧಿಯನ್ನೇ, ಸಮಾನತೆಯನ್ನೇ. ಆದರೆ ಈ ಕುರಿತ ಇವರ ರಾಜಕಾರಣ ತಮ್ಮದೇ ಎರಡು ರೀತಿಗಳಲ್ಲಿ ಸೃಷ್ಟಿಸುತ್ತಿರುವ ರಾಜಕೀಯ, ಆರ್ಥಿಕ ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳು ಒಂದೇ ತೆರನಾಗಿವೆ. ಹೆಚ್ಚುತ್ತಿರುವ ಹಿಂಸೆ ಮತ್ತು ಅಶಾಂತಿಗಳ ವೈವಿಧ್ಯತೆ ಹಾಗೂ ಜನಸಮುದಾಯದ ವಿವಿಧ ವರ್ಗಗಳ ಜನ ಆತ್ಮಹತ್ಯೆಗಳಿಗೆ ಕಂಡುಕೊಳ್ಳುತ್ತಿರುವ ಕಾರಣಗಳ ಹಿಂದೆ ಇರುವುದು ಇವರ ಎರಡು ರಾಜಕೀಯ ಮಾದರಿಗಳೇ. ಇವರು ಆಡುವ ರಾಜಕೀಯ ಪರಿಭಾಷೆ ಭಿನ್ನವಾಗಿ ತೋರುವುದಾದರೂ, ಇವರ ರಾಜಕೀಯ ಮಾದರಿಗಳನ್ನು ನಿಯಂತ್ರಿಸುತ್ತಿರುವುದು ಅದೇ ನವ ಉದಾರವಾದಿ ಆರ್ಥಿಕ ನೀತಿಯೇ. ಈ ನೀತಿಯ ಪರಿಣಾಮವಾಗಿ ಕಷ್ಟಕ್ಕೆ ಸಿಕ್ಕಿಕೊಂಡ ಜನವರ್ಗಗಳ ಸಿಟ್ಟು ಸ್ಫೋಟಗೊಂಡಾಗಲೆಲ್ಲ ಇವರು ತಮ್ಮದೇ ರೀತಿಯ ಕೆಲ ತತ್ಕಾಲೀನ ರಿಯಾಯ್ತಿಗಳನ್ನು ಪ್ರಕಟಿಸಿ ಜನರ ಸಿಟ್ಟನ್ನು ಶಮನಗೊಳಿಸುತ್ತಾರೆ. ಜನ ಕೂಡ ಸುಮ್ಮನಾಗುತ್ತಾರೆ, ಇನ್ನೊಂದು ರೀತಿಯ ಕಷ್ಟ ಎದುರಾಗುವವರೆಗೆ. ಜನ ಕೂಡ ಒಂದು ಕ್ಷಣ ನಿಂತು ಪದೇ ಪದೇ ಸ್ಫೋಟಗೊಳ್ಳುವ ಹಿಂಸೆ-ಆತ್ಮಹತ್ಯೆಗಳ ಮೂಲಕ ವ್ಯಕ್ತವಾಗುವ ಸಾಮಾಜಿಕ ಅಶಾಂತಿಯ ಹಿಂದೆ ವ್ಯವಸ್ಥೆಯ ಯಾವುದೋ ಮೂಲದೋಷವಿರಬೇಕು ಎಂದು ಚಿಂತಿಸಲಾರದಾಗಿದೆ. ಏಕೆಂದರೆ ಅವರ ಮುಂದೆ 'ನವ ಶ್ರೀಮಂತಿಕೆ'ಯ ನವ ಮಧ್ಯಮ ವರ್ಗವೊಂದನ್ನು ನಿರ್ಮಿಸಿ, ಆ ವರ್ಗದೊಳಕ್ಕೆ ಅವರೂ ಪ್ರವೇಶಿಸಬಹುದೆಂಬ ಕನಸನ್ನು ಕಟ್ಟಿಕೊಡಲಾಗಿದೆ. ಆದರೆ ಈ ನವ ಶ್ರೀಮಂತ ವರ್ಗದ ಉದಯಕ್ಕೂ ಈ ಹೊಸ ಹೊಸ ಹಿಂಸೆ-ಅನಾಚಾರ-ಆತ್ಮಹತ್ಯೆಗಳ ಗಾಥೆಗೂ ಸಂಬಂಧವಿದೆ ಎಂಬುದು ಅವರು ಈ ನವ ಶ್ರೀಮಂತಿಕೆಗಾಗಿ ತೊಡಗಿರುವ ಸ್ಪರ್ಧೆಯ ತೀವ್ರತೆಯಲ್ಲಿ ಅವರ ಗಮನಕ್ಕೇ ಬಾರದಾಗಿದೆ. ಇದೊಂದು ವಿಷಚಕ್ರ. ಈ ಮಾತನ್ನು ನಾನು ಈ ನವ ಶ್ರೀಮಂತ ವರ್ಗದ ಪ್ರತಿ ಕುಟುಂಬವೂ ಈಗ ಒಂದಲ್ಲ ಒಂದು ರೀತಿಯ ದುರಂತವನ್ನು ಎದುರಿಸುತ್ತಿರುವುದನ್ನು ಗಮನಿಸಿಯೇ ಆಡುತ್ತಿದ್ದೇನೆ.

ಅಮೆರಿಕಾದಲ್ಲೊಬ್ಬ ಸಮಾಜವಾದಿ

ಹೌದು ಕಳೆದ ಇಪ್ಪತ್ತು-ಇಪ್ಪತ್ತೈದು ವರ್ಷಗಳಲ್ಲಿ ದೇಶದ ಸಂಪತ್ತು ಹೆಚ್ಚಾದಂತೆ ತೋರುತ್ತಿದೆ. ಅದೆಷ್ಟೋ ಕೋಟಿ ಜನರನ್ನು ಬಡತನ ರೇಖೆಯಿಂದ ಮೇಲೆತ್ತಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಈ ಬೆಳವಣಿಗೆ ಎಷ್ಟು ಭದ್ರವಾದ ನೆಲೆಯ ಮೇಲೆ

ನಿಂತಿದೆ? ಚೀನಾವೂ ಸೇರಿದಂತೆ ಈ ಉದಾರ ಆರ್ಥಿಕ ನೀತಿಯನ್ನು ಅನುಸರಿಸಿದ ಎಲ್ಲ ದೇಶಗಳೂ ಆರ್ಥಿಕ ಅಸ್ತವ್ಯಸ್ತತೆಗೆ ಸಿಕ್ಕಿ ವಿವಿಧ ರೀತಿಯ ಸಾಮಾಜಿಕ ಅಶಾಂತಿಯನ್ನು ಎದುರಿಸುತ್ತಿವೆ. ಗ್ರೀಸ್‌ನಂತಹ ದೇಶ ಪಾಪರ್‌ಚೀಟಿ ಪಡೆಯುವ ಹಂತ ತಲುಪಿದೆ. ಈ ನೀತಿಯ ಹರಿಕಾರರಾದ ಅಮೆರಿಕಾವೂ ಸೇರಿದಂತೆ ಪಶ್ಚಿಮದ ದೇಶಗಳು ಈ ಆರ್ಥಿಕ ನೀತಿಯ ಬಗ್ಗೆ ಪುನರಾಲೋಚನೆಗೆ ತೊಡಗಿವೆ ಬ್ರಿಟನ್ ಇರಲಿ, ಅಮೆರಿಕಾದಂತಹ ಅಮೆರಿಕಾದಲ್ಲೂ ಸಮಾಜವಾದಿ ಎಂದು ಬಹಿರಂಗವಾಗಿ ಘೋಷಿಸಿಕೊಂಡ ಬೆರ್ನಿ ಸ್ಯಾಂಡರ್ಸ್ ಎಂಬ ಜನಪ್ರಿಯ ನಾಯಕನೊಬ್ಬ ಅಲ್ಲಿ ಸೃಷ್ಟಿಯಾಗಿದ್ದಾನೆ. ಭಾರತ ಮಾತ್ರ ಸಮಾಜವಾದ ಎಂಬುದು ಕಳೆದು ಹೋದ ದುಃಸ್ವಪ್ನವೆಂದೇ ಭಾವಿಸಿದಂತಿದೆ. ಹಾಗಾಗಿಯೇ ಅದು ಅಂತಹುದೇ ನಂಬಿಕೆಯ ಬಿಜೆಪಿ ಎಂಬ ರಾಜಕೀಯ ಪಕ್ಷವೊಂದನ್ನು ಇಂದು ಅಧಿಕಾರಕ್ಕೆ ತಂದಿದೆ. ಇದಕ್ಕೆ, ತನ್ನ ರಾಜಕೀಯ ಪ್ರಣಾಳಿಕೆಯೇ ಸಮಾಜವಾದ ಎಂದು ಹೇಳಿಕೊಳ್ಳುತ್ತಿದ್ದ; ಆದರೆ ಥಟ್ಟನೆ ಒಂದು ದಿನ ಅದಕ್ಕೆ ಅಂತಿಮ ವಿದಾಯ ಹೇಳಿದ (ಇದರ ಹಿಂದೆ ಇರುವ ಅಂತಾರಾಷ್ಟ್ರೀಯ ರಾಜಕಾರಣದ್ದೇ ಬೇರೆ ಕಥೆ ಇದೆ.) ಕಾಂಗ್ರೆಸ್‌ನ ದುರಾಡಳಿತವೂ ಕಾರಣವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಆದರೆ ನಮ್ಮ ದೇಶ ಗ್ರೀಸ್‌ನ ಹಾದಿ ಹಿಡಿಯದಂತೆ ತಡೆದು, ಮೋದಿಯವರು ಈಗ ತಮ್ಮ ಕಾಶ್ಮೀರ, ಪಾಕಿಸ್ತಾನ ನೀತಿಗಳ ಟೊಳ್ಳುತನ, ಎನ್.ಎಸ್.ಜಿ.(Nuclear Suppliers Group) ಮುಖಭಂಗ ಇತ್ಯಾದಿಗಳ ಮೂಲಕ ವ್ಯಕ್ತವಾಗುತ್ತಿರುವ ತಮ್ಮೆಲ್ಲ ರಾಜಕೀಯ ವೈಫಲ್ಯಗಳ ನಡುವೆಯೂ ಒಂದಿಷ್ಟು ಆರ್ಥಿಕ ಸ್ಥಿರತೆಯೊಂದಿಗೆ ಆಡಳಿತ ನಡೆಸುವಂತಾಗಿದ್ದರೆ ಅದಕ್ಕೆ ಕಾರಣ, ಸಮಾಜವಾದಿ ನಂಬಿಕೆಯ ನಮ್ಮ ಎಡ ಪಕ್ಷಗಳು ಮನಮೋಹನ ಸಿಂಗ್ ಅವರು ನಮ್ಮ ದೇಶೀಯ ಬ್ಯಾಂಕುಗಳನ್ನು ಜಾಗತೀಕರಿಸಲು ಹೊರಟಾಗ ಅದನ್ನು ಸಂಸತ್ತಿನಲ್ಲಿ ಶತಾಯ ಗತಾಯ ವಿರೋಧಿಸಿ ತಡೆದದ್ದು ಎಂಬುದನ್ನು ನೆನಪಿಟ್ಟರೆ ಒಳ್ಳೆಯದು.

ಎರಡು ವರ್ಷಗಳ ಹಿಂದೆ ಭರ್ಜರಿ ಧಾಂ-ಧೂಂನೊಂದಿಗೆ ಅಧಿಕಾರಕ್ಕೆ ಬಂದ ಮೋದಿ ಈಗ ಗಾಳಿ ಕಳೆದುಕೊಂಡ ನಾಯಕನಂತೆ ಕಾಣಿಸತೊಡಗಿದ್ದಾರೆ. ಹಾಗೇ ಮೂರು ವರ್ಷಗಳ ಹಿಂದೆ ಸಮಾಜವಾದಿ ಆಶಯಗಳ ಆಸೆ ಹುಟ್ಟಿಸಿ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಸಿದ್ಧರಾಮಯ್ಯನವರ ರಾಜಕಾರಣದಲ್ಲಿ 'ಅಹಿಂದ'ವೆಂಬ ಅಸ್ತ್ರದ ಹೊರತಾಗಿ ಇನ್ನಾವ ಹೊಸ ಅಸ್ತ್ರವೂ ಇರಲಿಲ್ಲವೆಂಬುದು ಅವರ ಆಡಳಿತ ಇಂದು ಯಾವ ಭ್ರಷ್ಟ ಮತ್ತು ದುಷ್ಟ ಮಟ್ಟ ಮುಟ್ಟಿದೆ ಎಂಬುದರಿಂದ ಗೊತ್ತಾಗುತ್ತಿದೆ. ಹಾಗಾಗಿಯೇ ಅವರ ಯಾವ ಮಾತಿಗೂ, ಅವರ ಆಡಳಿತದ ಯಾವ ಹಂತದಲ್ಲೂ ಮೂರು ಕಾಸಿನ ಕಿಮ್ಮತ್ತಿಲ್ಲವಾಗಿದೆ. ನಿರ್ದಿಷ್ಟವಾಗಿ, ಮೊದಲೇ ಅಧೋಗತಿಗೆ ಇಳಿದಿದ್ದ ನಮ್ಮ ಗೃಹಾಡಳಿತ ಮತ್ತು ವಿಶ್ವವಿದ್ಯಾಲಯಗಳ ಗುಣಮಟ್ಟ ಇಂದು ಪಾತಾಳ ತಲುಪಿವೆ.

ಕಾಗದ-ಕಛೇರಿಗಳ ರಾಷ್ಟ್ರ

ಈ ಸಂದರ್ಭದಲ್ಲಿ ಬಹಳ ದಿನಗಳಿಂದ ನನಗೆ ತೀವ್ರವಾಗಿ ಅನ್ನಿಸುತ್ತಿರುವ ಒಂದು ಮಾತನ್ನು ಇಲ್ಲಿ ಹೇಳಿಬಿಡಬೇಕು. ಕಳೆದ ಏಳು ದಶಕಗಳಲ್ಲಿ ಸ್ವತಂತ್ರ ಭಾರತದಲ್ಲಿ ನಾವೆಲ್ಲ ಒಪ್ಪಬಹುದಾದ ಸಂಸದೀಯ ಪ್ರಜಾಪ್ರಭುತ್ವದ ಎಲ್ಲ ರೀತಿಯ ಆಂದೋಲನಗಳೂ, ರಾಜಕೀಯ ಪ್ರಯೋಗಗಳೂ ನಡೆದು ಹೋಗಿವೆ. ಜನ ಸುಸ್ತಾಗಿದ್ದಾರೆ. ಅಂದರೆ ಇದರರ್ಥ, ಈ ದೇಶವನ್ನು ಈಗಿರುವ ಸ್ವರೂಪದಲ್ಲಿ ಇನ್ನೂ ಚೆನ್ನಾಗಿ ಆಳಲು ಸಾಧ್ಯವಿಲ್ಲ. ಈ ವಾಸ್ತವ ಸತ್ಯದ ಆಳ ಹೊಕ್ಕು ನೋಡಿದಾಗ ನನಗನ್ನಿಸಿದ್ದು, ಈ ಎಲ್ಲ ಮಾದರಿಗಳ ವೈಫಲ್ಯಗಳ ಹಿಂದೆ ಇರುವುದು ನಮ್ಮ ದೇಶವನ್ನು ಒಂದು ರಾಷ್ಟ್ರವಾಗಿ ನಾವು ರಚಿಸಿಕೊಂಡಿರುವ ರೀತಿಯಲ್ಲಿ, ಆ ರಚನೆಯ ರಕ್ಷಣೆಯ ಹೊಣೆ ಹೊತ್ತಿರುವ ನಮ್ಮ ಸಂವಿಧಾನದ ಸ್ವರೂಪದಲ್ಲಿ ಮತ್ತು ಅದರ ಕಾವಲು ನಾಯಿಯಂತಿರುವ ನಮ್ಮ ನ್ಯಾಯಾಂಗದ ವಿಧಿ-ವಿಧಾನಗಳಲ್ಲಿ. ಈ ದೇಶದಲ್ಲಿ ಒಂದು ಕೊಲೆ, ಒಂದು ಸಾವು, ಒಂದು ಅತ್ಯಾಚಾರ, ಒಂದು ವಂಚನೆ, ಒಂದು ಭ್ರಷ್ಟಾಚಾರ ಹಗರಣ, ಒಂದು ಭಾಷಾ, ನದಿ, ಅಥವಾ ಗಡಿ ವಿವಾದವನ್ನು ಇತ್ಯರ್ಥಪಡಿಸಲು ನಮ್ಮ ನ್ಯಾಯಾಂಗ ತೆಗೆದುಕೊಳ್ಳುತ್ತಿರುವ ಅವಧಿಗಳನ್ನು ನೋಡಿದರೆ, 'ನ್ಯಾಯ ವಿಳಂಬವೆಂದರೆ ನ್ಯಾಯ ನಿರಾಕರಣೆಯೇ' ಎಂಬ ನಾಣ್ನುಡಿ ಇಲ್ಲಿ ಸತ್ಯಸ್ಯ ಸತ್ಯವಾಗಿ ತೋರುತ್ತಿದೆ. ಈ ಸತ್ಯವೇ ಎಲ್ಲ ದುಷ್ಟ ಶಕ್ತಿಗಳ ರಕ್ಷಣಾ ತಾಣವಾಗಿ ಪರಿಣಮಿಸಿ, ಒಂದು ರಾಷ್ಟ್ರ ಸ್ಥಿರವಾಗಿ ಉಳಿಯಲು ಅಗತ್ಯವಾದ ನ್ಯಾಯದಾನ ಇಲ್ಲಿ ಇದ್ದೂ ಇಲ್ಲದಂತಾಗಿ ರಾಷ್ಟದ ಕಲ್ಪನೆಯೇ ಜನಸಾಮಾನ್ಯರಿಗೆ ಕೆಲಸಕ್ಕೆ ಬಾರದಂತಾಗಿದೆ. ಹಾಗಾಗಿಯೇ ಇಂದು ರಾಷ್ಟ್ರಭಕ್ತಿ ಉದ್ದೀಪಿಸಲೆಂದೇ ಒಂದು ಪಡೆ ಸಿದ್ಧವಾಗುವ ಪರಿಸ್ಥಿತಿ ಉಂಟಾಗಿದೆ!

ಇದೆಲ್ಲವನ್ನೂ ಒಟ್ಟಾಗಿ ಒಂದು ವಾಕ್ಯದಲ್ಲಿ ಹೇಳುವುದಾದರೆ-ಹಿಂದೊಮ್ಮೆಯೂ ಹೇಳಿದ್ದಂತೆ-ಇದೊಂದು ಕಾಗದದ, ಕಛೇರಿಗಳ ರಾಷ್ಟ್ರವಾಗಿದೆ. ಇಲ್ಲಿ ಪ್ರತಿಯೊಂದು ಅನ್ಯಾಯವೂ ದನಿ ಕಳೆದುಕೊಂಡು ಕಾಗದವಾಗಿ-ಅರ್ಜಿಗಳಾಗಿ ಪರಿವರ್ತಿತವಾಗುತ್ತದೆ. ನಮ್ಮ ಕಾನೂನುಗಳು ಇರುವುದೂ ಈ ಕಾಗದಗಳ ವಿಲೆವಾರಿಯ ರೀತಿ ನೀತಿಗಳನ್ನು ನೋಡಿಕೊಳ್ಳಲು ಮಾತ್ರ. ಹೀಗಾಗಿ ಇಲ್ಲಿನ ಆಡಳಿತದಲ್ಲಿ ಜೀವದ ಪಸೆ ಕಡಿಮೆ. ಕಡಿಮೆಯೇನು, ಬಹಳಷ್ಟು ಸಂದರ್ಭಗಳಲ್ಲಿ ಜೀವ ಇಲ್ಲದಂತೇ ಆಗಲು ಕಾರಣ ಪ್ರಜೆಗೂ ಆಡಳಿತಗಾರನಿಗೂ ಪರಸ್ಪರ ಮಾನವ ಸಂವೇದನೆಯ ಸಂಬಂಧವೇ ಇಲ್ಲದೆ ಸಂಪೂರ್ಣ ಅಪರಿಚಿತರಾಗಿರುವುದು. ಹಾಗಾಗಿ ಇಲ್ಲಿ ಜನರನ್ನು ಅರ್ಜಿಯಾಗಿ, ಕಾಗದವಾಗಿ ಮಾತ್ರ ನೋಡಲು ಸಾಧ್ಯ.

'ದೂರ'ಗಳ ರಾಜಕಾರಣ

ಈ ದುರಂತದ ಮೂಲ ಇರುವುದು, ಜನ ಮತ್ತು ಆಡಳಿತದ ನಡುವೆ ಇರುವ 'ದೂರ'ದಲ್ಲಿ. ನೀವು ಹೇಳಿ, ನಿಮ್ಮೂರಲ್ಲಾದ ಒಂದು ಕೊಲೆ ಅಥವಾ ಒಂದು ಅತ್ಯಾಚಾರ ಅಥವಾ ಒಂದು ಆಡಳಿತಾತ್ಮಕ ವಂಚನೆಯನ್ನು ಅಥವಾ ನಿಮ್ಮ ಒಂದು ಅಹವಾಲನ್ನು ಇತ್ಯರ್ಥಪಡಿಸಲು ನಿಜವಾಗಿ ವರ್ಷಗಟ್ಟಲೆ ಬೇಕೆ? ವರ್ಷಗಳನ್ನು ಅಗತ್ಯವಾಗಿಸಿರುವುದು ಇಂತಹ ದೂರಗಳು ಸೃಷ್ಟಿಸಿರುವ ಪರಸ್ಪರ ಅನಾಮಿಕತೆ ಮತ್ತು ಅದು ಸೃಷ್ಟಿಸಿರುವ ಅಪನಂಬಿಕೆಗಳ ನಿವಾರಣೆಗಾಗಿ ಸೃಷ್ಟಿಸಲಾಗಿರುವ ಸಾರ್ವತ್ರಿಕವಾದ ವಿಧಿ-ವಿಧಾನಗಳ ಸರಮಾಲೆ! ಅನ್ಯಾಯ ನಡೆದ ಪರಿಸರಕ್ಕೆ ಸೇರದ; ಹಾಗಾಗಿ ಅನ್ಯಾಯದ ಪರಿಣಾಮಗಳ ತಾಪ ತಾಗದಷ್ಟು 'ದೂರ'ದ ಯಾರೋ ಓರ್ವ ಗುಮಾಸ್ತ, ಒಬ್ಬ ಪೋಲೀಸು, ಒಬ್ಬ ತಹಶೀಲ್ದಾರ ಅಥವಾ ನ್ಯಾಯಾಧೀಶ ನಿಮ್ಮ ಅಥವಾ ನಿಮ್ಮ ಊರಿನ ಪ್ರಕರಣವನ್ನು ಅರ್ಥ ಮಾಡಿಕೊಳ್ಳಲು ಇರುವ ಪರಿಕರಗಳಾದರೂ ಯಾವುವು? ನಿರ್ಜೀವ ಕಾಗದ ಪತ್ರಗಳು ಮತ್ತು ಅದರ ಭವ್ಯ ಆಡಳಿತ ವಿಧಾನಗಳು! ನ್ಯಾಯ ಹುಟ್ಟುವುದು sense of belongingನಲ್ಲಿ; ಬರಡು ಕಾನೂನುಗಳಿಂದ ಅಲ್ಲ. ಏಕೆಂದರೆ ಕಾನೂನು ಎಂಬುದು ಸ್ಪರ್ಧಾತ್ಮಕ ಮಾತುಗಾರಿಕೆಯಲ್ಲಿ ಅರ್ಥ ಪಡೆಯುವ ವಕೀಲರ ಮಾರುಕಟ್ಟೆಯ ವಸ್ತುವೇ ಆಗಿದೆ!

ನಮಗೆ ಗಾಂಧಿ ನೆನಪಿಗೆ ಬರುವುದು, ಮುಖ್ಯವೆನ್ನಿಸುವುದು ಇಲ್ಲಿಯೇ. ಅವರು ದೂರ ಸೃಷ್ಟಿಸುವ ಅನಾಹುತಗಳನ್ನು ಮನಗಂಡಿದ್ದರು. ಆಧುನಿಕ ರಾಷ್ಟ್ರಗಳನ್ನು ಸೃಷ್ಟಿಸಿದ ನಾಗರೀಕತೆಯ ಎಲ್ಲ ಆವಿಷ್ಕಾರಗಳು ಬೆಳೆದಿರುವುದೇ ಇಂತಹ ದೂರಗಳ ಆಧಾರದ ಮೇಲೆ ಎಂಬುದನ್ನು ಅವರು ಅರಿತಿದ್ದರು. ಹಾಗಾಗಿಯೇ ಅವರು ಪ್ರತಿ ಮನುಷ್ಯನ ಲೌಕಿಕ ಚಟುವಟಿಕೆಗಳ ಲೋಕ ಅವನ ಗ್ರಾಮಕ್ಕೆ ಸೀಮಿತವಾಗಿರಬೇಕು ಎಂದು ನಂಬಿದ್ದರು. ಭಾರತ ಒಂದು 'ಗ್ರಾಮ ಸ್ವರಾಜ್ಯ'ವಾಗಿ ರೂಪುಗೊಳ್ಳದ ಹೊರತು ಅದಕ್ಕೆ ನೆಮ್ಮದಿಯಿಲ್ಲ ಎಂದಿದ್ದರು. ಇಲ್ಲಿ ಗ್ರಾಮ ಎಂದರೆ ಅಂದಿನ ಅಥವಾ ಇಂದಿನ ಹಳ್ಳಿ ಎಂದು ಅರ್ಥ ಮಾಡಿಕೊಳ್ಳುವುದು ಗಾಂಧಿಯ ಜಡ ಓದಿನ ಪರಿಣಾಮವಷ್ಟೆ. ಗಾಂಧಿ ಈ ಕಲ್ಪನೆಯನ್ನು ಮೊದಲ ಬಾರಿಗೆ ವ್ಯಾಪಕವಾಗಿ ಚರ್ಚಿಸಿದ ಅವರ ಮೂಲ ಪುಸ್ತಕ 'ಹಿಂದ್ ಸ್ವರಾಜ್'ನಲ್ಲಿ ಗ್ರಾಮದ ಬಗ್ಗೆ ಹೇಳಿದಾಗಲೂ ಇದೇ ಅಪಾರ್ಥ ಕಲ್ಪಿಸಲಾಯಿತು. ಆದರೆ 'ಗ್ರಾಮ' ಕಲ್ಪನೆಯ ಮೂಲಕ ಗಾಂಧಿ ಹೇಳುತ್ತಿದ್ದುದು ಆಡಳಿತವನ್ನು ಕಾಗದ ಮಾಡುವ ದೂರವನ್ನು ನಿಷ್ಕ್ರಿಯಗೊಳಿಸಿ ಒಂದು ಸಮುದಾಯ ತನ್ನ ನ್ಯಾಯವನ್ನು 'ಅನ್ಯ'ರ ಉಸಾಬರಿ ಇಲ್ಲದೆ ತಾನೇ ಕೂತು ತೀರ್ಮಾನಿಸಿಕೊಳ್ಳಲು ಸಾಧ್ಯವಿರುವ ಸಣ್ಣ ಸಾಮುದಾಯಿಕ ಆಡಳಿತ ಘಟಕಗಳ ರಚನೆಯ ಬಗ್ಗೆ. ಹಾಗಾಗಿ ಭಾರತವೆಂಬುದು ಜನರ ನೇರ ('ಸ್ವ' ದ) ಭಾಗವಹಿಸುವಿಕೆ ಸಾಧ್ಯವಿರುವ ಸಣ್ಣ ಸ್ವಯಮಾಡಳಿತ ಘಟಕಗಳ ಒಂದು ಒಕ್ಕೂಟವಾಗಿ ನಿಜವಾದ ಅರ್ಥದ 'ಸ್ವ-ರಾಜ್ಯ' ರೂಪುಗೊಳ್ಳಬೇಕು ಎಂದು ಅವರು ಪ್ರತಿಪಾದಿಸಿದರು.

ಆದರೆ ಇಂದು ಈಗಿರುವಂತಹ ಭಾರತದಲ್ಲಿ ಆಗುತ್ತಿರುವುದೇನು? ಭಾರಿ ದೂರಗಳೇ ರಾಷ್ಟ್ರವಾದಂತಿರುವ ಈ ದೇಶದಲ್ಲಿ ಅದನ್ನು ಹಾಗೇ ರಕ್ಷಿಸಿಕೊಳ್ಳಲು ಬೇಕಾದ ಕಾನೂನುಗಳ ಜಟಿಲ ಜಾಲವೊಂದನ್ನು ನಿರ್ಮಿಸಿಕೊಂಡು ನಾವೆಲ್ಲ ಅದರಲ್ಲಿ ಬಂಧಿತರಾಗಿದ್ದು, ಅದಕ್ಷತೆ, ಭ್ರಷ್ಟಾಚಾರಗಳಿಂದ ಪರಿಹಾರ ಪಡೆಯುವುದೇ ದುಸ್ಸಾಧ್ಯವಾಗಿಬಿಟ್ಟಿದೆ. ಅದಕ್ಕೆ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಜಾತೀಯತೆಯನ್ನೂ ಧಾರ್ಮಿಕತೆಯ ಹೆಸರಿನಲ್ಲಿ ಕೋಮುವಾದವನ್ನೂ ತಾತ್ಕಾಲಿಕ ಪರಿಹಾರ ರೂಪಗಳಾಗಿ ಕಂಡುಕೊಂಡು ಹಿಂಸೆ ಮತ್ತು ಆತ್ಮಹತ್ಯೆಗಳ ಸಂಕೀರ್ಣ ಸಮಾಜವೊಂದನ್ನು ನಿರ್ಮಿಸಿಕೊಂಡಿದ್ದೇವೆ. ಸಾಮಾಜಿಕ ಮತ್ತು ನೈಸರ್ಗಿಕ ಪರಿಣಾಮಗಳ ಪರಿವೇ ಇಲ್ಲದೆ, ಎಲ್ಲರೂ ಸಮಾನ ಶ್ರೀಮಂತರಾಗಿ ಸಮಾನತೆಯನ್ನು ಸಾಧಿಸುವ ವಿಕ್ಷಿಪ್ತ ಕನಸು ನನಸಾಗುವ ದಿನಕ್ಕಾಗಿ ಕಾಯುತ್ತಿದ್ದೇವೆ. ಎಲ್ಲ ರೀತಿಯ –ಆಂತರಿಕ ಮತ್ತು ಬಾಹ್ಯ–ಲೂಟಿಕೋರರಿಗೆ ಇದು ಹೇಳಿ ಮಾಡಿಸಿದಂತಹ ಸಂದರ್ಭವೇ ಆಗಿದೆ.

ಸಮಾನತೆಗೆ ಬದಲು ಸಮತ್ವ

ಗಾಂಧೀಜಿಯ ಶಿಷ್ಯರಾಗಿದ್ದ ಸಮಾಜವಾದಿ ನಾಯಕ ರಾಮಮನೋಹರ ಲೋಹಿಯಾ ಸಮಾಜವಾದದ ಕೇಂದ್ರ ತತ್ವವಾದ ಸಮಾನತೆ ಎಂಬ ಶಬ್ದದ ಇಂತಹ ರೂಕ್ಷತೆಯನ್ನು ಮನಗಂಡು ಸಮಾನತೆಗೆ ಬದಲಾಗಿ ಸಮತ್ವ ಎಂಬ ಪರಿಕಲ್ಪನೆಯನ್ನು ನಮ್ಮ ಮುಂದಿಟಿದ್ದರು. ಅದನ್ನು 'ಆಂತರಿಕ ಪ್ರಶಾಂತಿ ಮತ್ತು ಬಾಹ್ಯ ಬಂಧುತ್ವ'ದ ಸ್ಥಿತಿ ಎಂದು ವ್ಯಾಖ್ಯಾನಿಸಿದ್ದರು. ಆ ಮೂಲಕ ಅವರು ಪಶ್ಚಿಮದ ಸಮಾಜವಾದದ ಪ್ರಭಾವಕ್ಕೆ ಸಿಕ್ಕಿಯೋ ಏನೋ ಗಾಂಧಿಯನ್ನು ವಿಮರ್ಶಿಸುತ್ತಾ ಅವರಿಂದ ಕೊಂಚ ದೂರ ಸಾಗಿದ್ದವರು ಮತ್ತೆ ಅವರ ಹತ್ತಿರಕ್ಕೇ ಬಂದಿದ್ದರು.

ನಾವಿಂದು ಅಭಿವೃದ್ಧಿ ಮತ್ತು ಸಮಾನತೆಗಳ ಹಪಾಹಪಿಯಲ್ಲಿ ಕಳೆದುಕೊಂಡಿರುವ ನಮ್ಮ ಮೂಲ ಸಮತ್ವವನ್ನು ಪಡೆದುಕೊಳ್ಳಲು ಗಾಂಧಿಯ ಮೊರೆ ಹೋಗಬೇಕಿದೆ. ಅದಕ್ಕಾಗಿ ಇಂದು ನಮಗೆ ಬೇಕಾದ ಗಾಂಧಿಯನ್ನು ನಾವು ಕಂಡುಕೊಳ್ಳಬೇಕಿದೆ. ಅದಕ್ಕಾಗಿ, ಇತ್ತೀಚಿನ ವರ್ಷಗಳಲ್ಲಿ ಗಾಂಧಿ ಕುರಿತು ಪಶ್ಚಿಮದ ಆಧುನಿಕತೆಯ ವಕ್ತಾರರು ಹುಟ್ಟಿಹಾಕಿರುವ ಅಪಕಲ್ಪನೆಗಳನ್ನು ಪರಿಹರಿಸಿಕೊಳ್ಳಬೇಕಿದೆ. ಅಂತಹ ಎರಡು ಪುಟ್ಟ ಪ್ರಯತ್ನಗಳನ್ನು ಈ ಸಂಚಿಕೆಯಲ್ಲಿ ಮಾಡಲಾಗಿದೆ. ಓದಿ, ಬರೆಯಿರಿ.

ಅಂದಹಾಗೆ, ಈ ಸಂಚಿಕೆ ನಮ್ಮ ಕೊನೆಯ ಸಂಚಿಕೆಯಲ್ಲ. ಒಂದಿಷ್ಟು ಹಣ ಉಳಿದಿರುವುದರಿಂದ ಸೆಪ್ಟಂಬರ್ ಸಂಚಿಕೆ ನಮ್ಮ ವಿದಾಯ ಸಂಚಿಕೆಯಾಗಿರುತ್ತದೆ. ಇದಕ್ಕೆ ಅನುವು ಮಾಡಿಕೊಟ್ಟ ಪ್ರಸ್ತುತ ಸಂಚಿಕೆಯ ಲೇಖಕರು, ಕಲಾವಿದರು ಮತ್ತು ಜಾಹೀರಾತುದಾರರಿಗೆ ನಮ್ಮ ವಂದನೆಗಳು.

ರಾಜಕೀಯ ಪರ್ಯಾಯದ ಹುಡುಕಾಟದಲ್ಲಿರುವ ಎಸ್.ಆರ್.ಹಿರೇಮಠ್

ಕರ್ನಾಟಕದಲ್ಲಿ ಸಾಮಾಜಿಕ ಹೋರಾಟಗಳಿಗೆ ಇನ್ನೊಂದು ಹೆಸರಾಗಿ ಪ್ರಸಿದ್ಧರಾಗಿರುವವರು ಎಸ್.ಆರ್.(ಸಂಗಯ್ಯ ರಾಚಯ್ಯ) ಹಿರೇಮಠರು. ಕಡುಬಡತನದಲ್ಲಿ ಬಾಲ್ಯವನ್ನು ಕಳೆದು, ತಮ್ಮ ಪ್ರತಿಭೆಯ ಮೂಲಕ ಉನ್ನತ ವಿದ್ಯಾಭ್ಯಾಸ ಮುಗಿಸಿ, ಅಮೆರಿಕಾಗೆ ಹೋಗಿ ಅಲ್ಲಿ ಮತ್ತಷ್ಟು ಉನ್ನತ ಶಿಕ್ಷಣ ಪಡೆದುದಲ್ಲದೆ, ಅಲ್ಲಿ ವಿವಿಧ ಕ್ಷೇತ್ರಗಳ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡಿದವರು. ಆದರೆ ಅವರು ಯಾವುದೇ ಹುದ್ದೆಯಲ್ಲಿರಲಿ, ಅವರ ಮನಸ್ಸಿನಲ್ಲಿ ಇದ್ದುದು ತಮ್ಮ ತವರು ದೇಶವಾದ ಭಾರತವೇ; ಅಲ್ಲಿನ ಕಷ್ಟ-ಸುಖಗಳೇ. ತನ್ನ ದೇಶಕ್ಕೆ ಏನಾದರೂ ಒಳ್ಳೆಯದನ್ನು ಮಾಡುವ ತುಡಿತವೇ. ಅದಕ್ಕಾಗಿ ಅಲ್ಲಿನ ಸಮಾನ ಮನಸ್ಕರ ಜೊತೆ ಚರ್ಚೆ, ಅಭ್ಯಾಸ ಮತ್ತು ಅಲ್ಲಿನ ನಾಗರಿಕ ಹಕ್ಕುಗಳ ಹೋರಾಟಗಳಲ್ಲಿ ಅನುಭವ. ಇದೆಲ್ಲದರ ಫಲವಾಗಿ ಒಂದು ದಿನ ಅವರು ಅಮೆರಿಕಾ ಬಿಟ್ಟು ಭಾರತಕ್ಕೆ, ಕರ್ನಾಟಕಕ್ಕೆ ವಾಪಸಾಗಲು ಪ್ರೇರೇಪಿತರಾದರು.

೧೯೭೯ರಲ್ಲಿ ಭಾರತಕ್ಕೆ ಮರಳಿದ ಹಿರೇಮಠರು ಹಾವೇರಿ ಜಿಲ್ಲೆ ರಾಣೆಬೆನ್ನೂರು ಬಳಿಯ ಮೆಡ್ಲೇರಿ ಗ್ರಾಮದಲ್ಲಿ ತಮ್ಮ ಕುಟುಂಬದೊಂದಿಗೆ ನೆಲೆನಿಂತರು. ಅದೇ ವರ್ಷ ಧಾರವಾಡದಲ್ಲಿ 'ಭಾರತ ಅಭಿವೃದ್ಧಿ ಸೇವಾ ಸಂಸ್ಥೆ'(ಅಂತಾರಾಷ್ಟ್ರೀಯ) ಎಂಬ ಸರ್ಕಾರೇತರ ಸೇವಾ ಸಂಸ್ಥೆಯನ್ನು ಸ್ಥಾಪಿಸಿ ತಮ್ಮ ಊರಿನ ಸುತ್ತಮುತ್ತಲಿನ ಆಯ್ದ ಹಳ್ಳಿಗಳಲ್ಲಿ ನೈರ್ಮಲ್ಯೀಕರಣ ಮತ್ತು ಸ್ವಯಂಉದ್ಯೋಗ ತರಬೇತಿ ಕಾರ್ಯಕ್ರಮಗಳನ್ನು ಆರಂಭಿಸಿದರು. ಮೂರು ವರ್ಷಗಳಲ್ಲಿ ಈ ಸಂಸ್ಥೆ ಈ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಗಾಗಿ ನೆದರ್‌ಲ್ಯಾಂಡ್‌ನ ಜ್ಯಾವ್‌ವ್ಯಾನ್ ಪ್ರಾಗ್ ಪ್ರಶಸ್ತಿ ದೊರಕಿತು.

ಹರಿಹರದ ಪಾಲಿಫೈಬರ್ ಕಾರ್ಖಾನೆ ತನ್ನ ತ್ಯಾಜ್ಯಗಳ ಮೂಲಕ ತುಂಗಭದ್ರಾ ನದಿಯನ್ನು ಕಲುಷಿತಗೊಳಿಸಿ ನದಿಗುಂಟದ ಹಳ್ಳಿ-ಪಟ್ಟಣಗಳ ಜನರ ಆರೋಗ್ಯವನ್ನು ಹದಗೆಡಿಸುತ್ತಿದ್ದುದರ ವಿರುದ್ಧ ಸಾಮುದಾಯಿಕ ಹೋರಾಟ ಆರಂಭಿಸಿದ ಹಿರೇಮಠರು, ಈ ಹೋರಾಟದ ಸವಾಲುಗಳಿಗೆದುರಾಗಿ; 'ಸಮಾಜ ಪರಿವರ್ತನಾ ಸಮುದಾಯ'ವೆಂಬ ಜನಸೇವಾ ಸಂಸ್ಥೆಯನ್ನು ಸ್ಥಾಪಿಸಿದರು. ಈ ಹೋರಾಟದ ಸಿಹಿ-ಕಹಿ ಅನುಭವಗಳೇ ಅವರನ್ನು ತಮ್ಮ ಹೋರಾಟವನ್ನು ಇನ್ನಷ್ಟು ವ್ಯಾಪಕ ಮತ್ತು ಸಾರ್ವತ್ರಿಕಗೊಳಿಸಲು ಪ್ರೇರೇಪಿಸಿತು. ಇದರ ಪರಿಣಾಮವೇ ಹಿರೇಮಠರನ್ನು ರಾಜ್ಯಾದ್ಯಂತ ಮನೆಮಾತನ್ನಾಗಿಸಿದ ಅಕ್ರಮ ಗಣಿ ವಿರೋಧಿ ಹೋರಾಟಕ್ಕೆ ದೂಡಿದ್ದು. ಜನಪರವಾದ ನೀತಿ ಮತ್ತು ಶಾಸನಗಳ ನಿರೂಪಣೆ, ನೈಸರ್ಗಿಕ ಸಂಪತ್ತಿನ ಮೇಲೆ ಆದಿವಾಸಿ ಮತ್ತು ಗ್ರಾಮೀಣರ ಅಧಿಕಾರ, ಪರಿಸರ ಸಂರಕ್ಷಣೆ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಬಲೀಕರಣ

ಇವನ್ನು ತನ್ನ ಧ್ಯೇಯಗಳನ್ನಾಗಿ ಹೊಂದಿರುವ ಈ ಸಂಸ್ಥೆ, ಇದಕ್ಕಾಗಿ ಹಿರೇಮಠರು ಸಮಾನ ಮನಸ್ಕರೊಡಗೂಡಿ ಜನಸಂಗ್ರಾಮ ಪರಿಷತ್ ಎಂಬ ವೇದಿಕೆ ರಚಿಸಿಕೊಂಡು ರಾಜ್ಯದಲ್ಲಿ ಭ್ರಷ್ಟಾಚಾರ ಪ್ರಕರಣಗಳ ವಿರುದ್ಧ ಪ್ರಬಲ ಹೋರಾಟಗಳನ್ನೂ ನಡೆಸುತ್ತಾ, ಅಗತ್ಯ ಬಿದ್ದಾಗ ನ್ಯಾಯಾಧೀಶರನ್ನೂ ತರಾಟೆಗೆ ತೆಗೆದುಕೊಳ್ಳುವ ಧೀಮಂತಿಕೆ ಮತ್ತು ನಿರ್ಭೀತಿಗಳನ್ನು ಪ್ರದರ್ಶಿಸಿದ್ದಾರೆ. ರಾಜ್ಯ ಕುಪ್ರಸಿದ್ಧವಾಗಿದ್ದ ಅಕ್ರಮ ಗಣಿಗಾರಿಕೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಲೂಟಿ ಸದ್ಯದಲ್ಲಿ ನಿಯಂತ್ರಣದಲ್ಲಿದ್ದರೆ ಅದರ ಕೀರ್ತಿ ಹಿರೇಮಠರಿಗೇ ಸಲ್ಲಬೇಕು.

ಇಂತಹ ಧೀಮಂತ ಹೋರಾಟಗಾರ ಈಗ ಒಂದು ರಾಜಕೀಯ ಪರ್ಯಾಯ ರೂಪಿಸುವ ಚಿಂತನೆ ನಡೆಸಿದ್ದಾರೆ. ಅದಕ್ಕಾಗಿ ರಾಜ್ಯದ ಇತರ ಜನಪರ ಹೋರಾಟಗಳ ನಾಯಕರೊಂದಿಗೆ ಜನ ಸಂಗ್ರಾಮ ಪರಿಷತ್ ಒಂದು ಮಾತುಕತೆಗೆ ತೊಡಗಿದೆ. ಅದಕ್ಕಾಗಿ ಇತ್ತೀಚೆಗೆ ಧಾರವಾಡದಲ್ಲಿ ನಡೆದ ಸಭೆಯ ಸಂದರ್ಭದಲ್ಲಿ ನಮ್ಮ ಪತ್ರಿಕೆಗಾಗಿ ಸರ್ಜಾಶಂಕರ ಹರಳಿಮಠ, ಅವರನ್ನು ಸಂದರ್ಶಿಸಿದ್ದಾರೆ. ಈ ಸಂದರ್ಶನ ಮುಖ್ಯವಾಗಿ ಹಿರೇಮಠರ ವ್ಯಕ್ತಿತ್ವವನ್ನು ರೂಪಿಸಿದ ವ್ಯಕ್ತಿ ಮತ್ತು ಶಕ್ತಿಗಳಾರು, ಅವರು ನಡೆದುಬಂದ ಹಾದಿಯ ಸ್ವರೂಪವೇನು, ಅವರ ಮುಂದಿನ ಹಾದಿ ಯಾವುದು ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುವಂತಿದೆ–ಸಂ.

<u>ಸಮಕಾಲೀನ–೨</u>

ಗಾಂಧಿ v/s ಅರುಂಧತಿ ರಾಯ್: ಗಾಂಧಿ ದರ್ಶನದ ಎರಡು ನೋಟಗಳು

'ದ ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಎಂಬ ಗಮನಾರ್ಹ ಕಾದಂಬರಿಗಾಗಿ ಬೂಕರ್ ಪ್ರಶಸ್ತಿ ಪಡೆದು ಹೆಸರಾದ ಅರುಂಧತಿ ರಾಯ್ ನಂತರದ ದಿನಗಳಲ್ಲಿ ಸೃಜನಶೀಲ ಬರವಣಿಗೆಯನ್ನೇ ನಿಲ್ಲಿಸಿ ಎಡಪಂಥೀಯ ಚಿಂತನೆಗಳ ಸಾಮಾಜಿಕ–ರಾಜಕೀಯ ಲೇಖನಗಳನ್ನು ಬರೆಯತೊಡಗಿದಾಗಿನಿಂದ ದೇಶದ ಪ್ರಗತಿಪರವೆನ್ನಲಾಗುವ ಜನರ ತೀವ್ರ ಗಮನ ಸೆಳೆದಿದ್ದಾರೆ. ವಿಶೇಷವಾಗಿ ಬಸ್ತರ್‌ನ ಅಮೂಲ್ಯ ಖನಿಜ ಸಂಪತ್ತನ್ನು ದೋಚುತ್ತಿರುವ ಬಹುರಾಷ್ಟ್ರೀಯ ಕಂಪೆನಿಗಳ ವಿರುದ್ಧದ ಆಕೆಯ ಬರಹಗಳು, ಅವು ಅಲ್ಲಿನ ಆದಿವಾಸಿಗಳು ಮತ್ತು ನಕ್ಸಲೀಯ ಆಂದೋಲನ ಕುರಿತ ಜೀವಂತ ಕಥನಗಳ ಹಿನ್ನೆಲೆಯಲ್ಲಿ ಈ ಲೇಖಕಿಯನ್ನು ಅಂತಾರಾಷ್ಟ್ರೀಯ ರಾಜಕೀಯ ವ್ಯಾಖ್ಯಾನಕಾರ್ತಿಯ ಪಟ್ಟಕ್ಕೇರಿಸಿವೆ. ಈ ಪಟ್ಟದ ವಿಶ್ವಾಸದೊಂದಿಗೆ ಅರುಂಧತಿ ರಾಯ್ ಅಂಬೇಡ್ಕರ್ ಅವರ 'Annihilation of caste' ಕೃತಿಯನ್ನು ವ್ಯಾಖ್ಯಾನಿಸಿ 'The Doctor and the Saint' ಎಂಬ ಆ ಕೃತಿಯ ಹೊಸ ಆವೃತ್ತಿಯನ್ನು ಹೊರತಂದಿದ್ದಾರೆ. ಅದರಲ್ಲಿ

ಗಾಂಧಿ ಕುರಿತು ಅವರು ಮಾಡಿರುವ ಟೀಕೆ-ಟಿಪ್ಪಣಿಗಳು ದೊಡ್ಡ ವಿವಾದದ ಧೂಳನ್ನೇ ಎಬ್ಬಿಸಿವೆ. ಈ ಸಂಬಂಧವಾಗಿ ಆಕೆ ನೀಡಿರುವ ಹಲವು ಟಿವಿ ಸಂದರ್ಶನಗಳೂ ವಿವಾದಕ್ಕೀಡಾಗಿವೆ.

ಗಾಂಧಿ ಬಗ್ಗೆ ಅರುಂಧತಿ ಮಾಡಿರುವ ಟೀಕೆ-ಟಿಪ್ಪಣಿಗಳು ಗಾಂಧಿಯನ್ನು ಸಮಗ್ರವಾಗಿ ನೋಡಲಾಗದ ಎಡಪಂಥೀಯ ಕುರುಡುಗಣ್ಣಿಗೆ ಸಾಕ್ಷಿಗಳಾಗಿವೆ ಎಂಬ ಅಭಿಪ್ರಾಯಗಳು ವ್ಯಕ್ತವಾಗತೊಡಗಿದ್ದು, ಗಾಂಧಿಯನ್ನು ನೋಡಬೇಕಾದ ಇಂದಿನ ಕ್ರಮಗಳ ಬಗ್ಗೆ ದೊಡ್ಡ ಚರ್ಚೆಯನ್ನೇ ಹುಟ್ಟು ಹಾಕಿವೆ. ಇಂತಹ ಚರ್ಚೆ ಮಾಡುವ ಎರಡು ಬರಹಗಳ ಆಯ್ದ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಮೊದಲನೆಯದು ಅಮೆರಿಕನ್ ಮಹಿಳೆಯಾದ ಬಿ.ಕೆ.(ಕಮಲಾ) ವಿಲೆಯವರು ಆರುಂಧತಿ ರಾಯ್‌ಗೆ ಬರೆದ ಒಂದು ಬಹಿರಂಗ ಪತ್ರ. ಕಮಲಾ ಆಂಟಿಯೆಂದೇ ತನ್ನ ಸಹಚರರಿಂದ ಕರೆಯಲ್ಪಡಲು ಇಚ್ಛಿಸುವ ಪಿ.ಕೆ.(ಕಮಲಾ) ವಿಲೆ ಮೂಲತಃ ಅಮೆರಿಕಾದ ಕೊನೆಕ್ಟಿಕಟ್ ರಾಜ್ಯದ ಚಾಪ್ಲಿನ್ ನಗರದವರಾಗಿದ್ದು ಭಾರತಕ್ಕೆ ಅನೇಕ ಬಾರಿ ಭೇಟಿ ನೀಡಿ ೧೨ ವರ್ಷಗಳ ಕಾಲ 'ಅಮ್ಮ'ನ ಆಶ್ರಮದಲ್ಲಿ ನೆಲೆಸಿ ಭಾರತದ ಅಂತಃಕರಣವನ್ನು ಬಲ್ಲವರಾಗಿದ್ದಾರೆ. ಭೂ ಸಂಹಿತೆ ಅವರ ಕೇಂದ್ರ ಕಳಕಳಿಯಾಗಿದ್ದು, ತಾಯಿಯಾಗಿ, ಗೃಹಿಣಿಯಾಗಿ, ಚಿತ್ರ ಕಲಾವಿದೆಯಾಗಿ, ಶಿಲ್ಪಿಯಾಗಿ ಶಿಕ್ಷಕಿಯಾಗಿ, ತೋಟಗಾರ್ತಿಯಾಗಿ, ಸಂಗೀತ ಸಂಯೋಜಕಿಯಾಗಿ, ಸ್ವಚ್ಛತಾ ಕಾರ್ಯಕರ್ತೆಯಾಗಿ, ಪ್ರಾಣಿ ಮತ್ತು ಪರಿಸರ ಕಾರ್ಯಕರ್ತೆಯಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಈ ಕ್ಷೇತ್ರಗಳನ್ನು ಕುರಿತ ಪುಸ್ತಕಗಳು ಮತ್ತು ಬರಹಗಳ ಮೂಲಕ ತಮ್ಮ ಬಹುಮುಖ ಪ್ರತಿಭೆಯನ್ನು ಮೆರೆದಿದ್ದಾರೆ.

ಎರಡನೆಯದು ಗಾಂಧಿಯವರ ಮೊಮ್ಮಗ ರಾಜ್‌ಮೋಹನ್ ಗಾಂಧಿ ಅವರು ಅರುಂಧತಿ ರಾಯ್ ಅವರ ಟೀಕೆಗಳ ಬಗ್ಗೆ ಬರೆದಿರುವ 'Independence and Social Justice: Understanding the Amsedkar-Gandhi debate' ಎಂಬ ಕಿರುಪುಸ್ತಕದಿಂದ ಆಯ್ದ ಭಾಗಗಳ ಕನ್ನಡ ಅನುವಾದ. ಓದಿ, ಬರೆಯಿರಿ-ಸಂ.

ಸೆಪ್ಟಂಬರ್, ೨೦೧೬

ಅಗ್ಗದ ದೇಶಭಕ್ತಿಯ ಹುಚ್ಚುಹೊಳೆ!

ಪ್ರಿಯ ಓದುಗರೇ,

ಇಂದು ದೇಶಾದ್ಯಂತ ಹೆಚ್ಚಾಗುತ್ತಿರುವ ಅಂಡ-ಭಂಡ ದೇಶಭಕ್ತರು ಹುಚ್ಚೆದ್ದು ಕುಣಿಯುವಂತಹ ಸುದ್ದಿಯೊಂದು ಪ್ರಕಟವಾಗಿರುವುದನ್ನು ನೀವೆಲ್ಲ ಗಮನಿಸಿರಬಹುದು. ಆ ಸುದ್ದಿಯೆಂದರೆ, ನಮ್ಮ ದೇಶವೀಗ ಜಗತ್ತಿನ ಹತ್ತು ಶ್ರೀಮಂತ ದೇಶಗಳಲ್ಲಿ ಏಳನೇ ಸ್ಥಾನ ಪಡೆದಿದೆ ಎಂಬುದು. ಅದು ಇಟಲಿ, ಕೆನಡಾ ಮತ್ತು ಆಸ್ಟ್ರೇಲಿಯಾಗಳನ್ನೂ ಹಿಂದಿಕ್ಕಿ ಶ್ರೀಮಂತಿಕೆಯಲ್ಲಿ ದಾಪುಗಾಲುಗಳನ್ನಿಟ್ಟಿದೆ. ಈ ಪಟ್ಟಿ ಮಾಡುವಾಗ ಈ ದೇಶಗಳು ತಲೆ ಮೇಲೆ ಹೊತ್ತಿರುವ ಸಾಲದ ಹೊರೆಯನ್ನು ಸೇರಿಸಲಾಗಿಲ್ಲ ಎಂದೂ ಮೆಲ್ಲಗೆ ಹೇಳಲಾಗಿದೆ! ಅದೇನೇ ಇದ್ದರೂ ಈ ಸುದ್ದಿಯನ್ನು ಮೋದಿ ಸರ್ಕಾರದ ಸಾಧನೆ ಎಂದು ಹೇಳಿಕೊಂಡು ಕುಣಿಯಬಯಸುವವರ ಸಂಖ್ಯೆ ಇಂದು ಕಡಿಮೆ ಏನಲ್ಲ. ಏಕೆಂದರೆ ಇದು ದೇಶಭಕ್ತರ ಹುಚ್ಚು ಆವೇಶದ ಕುಣಿತದ ಕಾಲವಾಗಿದೆ.

ಆದರೆ ಈ ಸುದ್ದಿಯನ್ನು ಒಳಹೊಕ್ಕು ನೋಡಿದರೆ, ಈ ಸುದ್ದಿಯ ಒಡಲಲ್ಲಿನ ಭಾರತದ ಅಭಿವೃದ್ಧಿಯ ಇನ್ನೊಂದು-ಕುರೂಪಿ-ಮುಖ ಎದ್ದು ಕಾಣುತ್ತದೆ. ಅತ್ಯಂತ ಹೆಚ್ಚು ಬಡವರನ್ನು ಹೊಂದಿರುವ, ತೀವ್ರ ಅಪೌಷ್ಟಿಕತೆಯಿಂದ ನರಳುವ ಅತ್ಯಂತ ಹೆಚ್ಚು ಮಕ್ಕಳನ್ನು ಹೊಂದಿರುವ, ಬಹುಜನರಿಗೆ ಕನಿಷ್ಟ ವೈದ್ಯಕೀಯ ಸೌಲಭ್ಯವಾಗಲೀ, ಸ್ವಚ್ಛ ಕುಡಿಯುವ ನೀರಾಗಲೀ ಇನ್ನೂ ಒದಗದ ಸ್ಥಿತಿಯಲ್ಲಿರುವ ಮತ್ತು ಒಲಂಪಿಕ್ಸ್‌ನಲ್ಲಿ ಒಂದೆರಡು ಪದಕಗಳನ್ನು ಗೆಲ್ಲುವಲ್ಲೇ ಏದುಸಿರು ಬಿಡುವಂತಾಗುವ ಈ ದೇಶ ಜಗತ್ತಿನ ಹತ್ತು ಶ್ರೀಮಂತ ದೇಶಗಳಲ್ಲಿ ಒಂದು ಎಂದರೆ ನಿಜವಾಗಿಯೂ ಏನರ್ಥ? ಅಥವಾ ಜಗತ್ತಿನ ದೇಶಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳ ಪಟ್ಟಿಯಲ್ಲಿ ಅತ್ಯಂತ ಕೆಳಗಿನ ಸ್ಥಾನದಲ್ಲಿರುವ ದೇಶವೊಂದು ಅತಿ ಶ್ರೀಮಂತ ದೇಶಗಳಲ್ಲೊಂದು ಎಂದು ಹೆಸರಿಸಲ್ಪಡುವ ವಿಪರ್ಯಾಸದ ಗುಟ್ಟಾದರೂ ಏನು?

ಈ ಗುಟ್ಟು ಏನೆಂದರೆ ಈ ದೇಶದ ಅಭಿವೃದ್ಧಿಯ ಲಾಭಗಳನ್ನೆಲ್ಲ ಕೆಲವೇ ಕೆಲವರು ತಮ್ಮದಾನ್ನಾಗಿಸಿಕೊಂಡು ದೇಶದ ಸಂಪತ್ತಿನ ಒಟ್ಟು ಮೊತ್ತವನ್ನು ಹೆಚ್ಚಿಸಿದ್ದಾರಷ್ಟೆ! ಈವರೆಗಿನ ಸರ್ಕಾರಗಳು–ಅದು ಯುಪಿಎದ್ದೇ ಆಗಿರಲಿ ಅಥವಾ ಎನ್‌ಡಿಎದ್ದೇ ಆಗಿರಲಿ– ಬಡವರ, ವಂಚಿತರ ಪರ ಎಷ್ಟೇ ಸಹಾನುಭೂತಿಯ ಮಾತಾಡಿದರೂ ಅದರ ಈ ಕಾರ್ಯಕ್ರಮಗಳು–ನಮ್ಮ ಸಿದ್ಧರಾಮಯ್ಯನವರ 'ಭಾಗ್ಯಾತಿ ಭಾಗ್ಯ'ಗಳ ಕಾರ್ಯಕ್ರಮಗಳೂ ಸೇರಿದಂತೆ–ತಕ್ಷಣಕ್ಕೆ ಕಣ್ಣೊರೆಸುವ ತತ್ಕಾಲೀನ ಕಾರ್ಯಕ್ರಮಗಳಷ್ಟೇ ಆಗಿವೆ. ಅಭಿವೃದ್ಧಿಯ ಹೂರಣವೆಲ್ಲ ಬಂಡವಾಳಿಗರ ಪಾಲಾಗಿದೆ. ಇಲ್ಲಿ ಮುಖ್ಯ ಪ್ರಶ್ನೆ, ಇದನ್ನು ಅಭಿವೃದ್ಧಿ ಎಂದು ಕರೆಯಬಹುದೇ ಎಂಬುದಾಗಿದೆ. ಅಭಿವೃದ್ಧಿ ಎಂದೇ ಆದರೆ, ಯಾರ ಮತ್ತು ಎಂತಹ ಅಭಿವೃದ್ಧಿ ಎಂದು ಕೇಳಬೇಕಾಗುತ್ತದೆ. ಇದರ ಹಿಂದಿರುವ ಆರ್ಥಿಕ ಮತ್ತು ಸಾಮಾಜಿಕ–ರಾಜಕೀಯ ನೀತಿಗಳನ್ನು ಪ್ರಶ್ನಿಸಬೇಕಾಗುತ್ತದೆ. ಅಭಿವೃದ್ಧಿಯ ಫಲಗಳ ಸಮಾನ ಹಂಚಿಕೆಯಾಗುವಂತಹ ರಾಜಕಾರಣಕ್ಕಾಗಿ ಆಗ್ರಹಿಸಬೇಕಾಗುತ್ತದೆ.

ಆದರೆ ಇಂದು ಜನಸಾಮಾನ್ಯರ ಲೌಕಿಕ ಹಿತಾಸಕ್ತಿಗಳ ಪ್ರಶ್ನೆಗಳನ್ನೇ ಕೇಳಲಾಗದಂತಹ ಭಾವಾವೇಶದ ರಾಜಕೀಯ ವಾತಾವರಣವನ್ನು ಸೃಷ್ಟಿಸಲಾಗಿದೆ. ಇದ್ದಕ್ಕಿದ್ದಂತೆ ಈ ದೇಶದಲ್ಲಿ ಜನರಿಗೆ ಸಂಬಂಧಪಟ್ಟ ಎಲ್ಲ ಮುಖ್ಯಪ್ರಶ್ನೆಗಳನ್ನೂ ಕೊಚ್ಚಿಕೊಂಡು ಹೋಗುವಂತಹ ಅಗ್ಗದ ದೇಶಭಕ್ತಿಯ ಹುಚ್ಚುಹೊಳೆ ಹರಿದಿದೆ. ಗೋರಕ್ಷಣೆಯ ಹೆಸರಿನಲ್ಲಿ ನಡೆದಿರುವ ಹಿಂಸಾಚಾರ ಮತ್ತು ಅನಾಚಾರಗಳನ್ನು ನೋಡಿ. ಈ ಬಗ್ಗೆ ಹಿಂದುತ್ವದ ಸರದಾರರೆನಿಸಿದ ಪ್ರಧಾನಿ ಮೋದಿಯವರಿಗೇ ಆತಂಕವುಂಟಾಗಿ ಗೋರಕ್ಷಣೆ ಎಂಬುದು ಧಾರ್ಮಿಕ ಎಲ್ಲೆಗಳನ್ನು ಮೀರಿ ಹೋಗಿರುವ ಒಂದು ದೊಡ್ಡ ದಂಧೆಯಾಗಿದೆ ಎಂದು ಹೇಳಬೇಕಾಗಿ ಬಂದಿದೆ. ಹಾಗೆ ಅವರು ಆತಂಕಿತರಾಗಿ ಹೇಳಿದ್ದು, ಗೋರಕ್ಷಣೆಯ ಹೆಸರಿನಲ್ಲಿ ದಲಿತರ ಮೇಲೆ ದಾಳಿಗಳು ಶುರುವಾಗಿ ಬಿಜೆಪಿ ಮತ ಬ್ಯಾಂಕ್ ಅಲ್ಲಾಡತೊಡಗಿದೆ ಎನಿಸಿದಾಗಲೇ ಹೊರತು ಮುಸ್ಲಿಮರ ಮೇಲೆ ದಾಳಿ ನಡೆದಾಗ ಅಲ್ಲ ಎಂಬುದು ಬೇರೆ ಮಾತು! (ಹಾಗೆ ನೋಡಿದರೆ ಮೋದಿ ಸರ್ಕಾರದ ಅವಧಿಯಲ್ಲೇ ಭಾರತದ ಗೋಮಾಂಸದ ರಫ್ತು ಪ್ರಮಾಣ ದುಪ್ಪಟ್ಟಾಗಿದೆ ಎಂದು ಹೇಳಲಾಗುತ್ತದೆ.) ಇನ್ನು ಮಾಜಿ ಸಂಸದೆ ರಮ್ಯಾ ಪಾಕಿಸ್ತಾನದ ತಮ್ಮ ಪ್ರವಾಸದ ಅನುಭವವನ್ನು ಹಂಚಿಕೊಳ್ಳುತ್ತಾ ಹೇಳಿದ ಮಾತನ್ನು ದೇಶದ್ರೋಹ ಎಂದು ಪ್ರತಿಬಿಂಬಿಸಿ ಹಬ್ಬಿಸುತ್ತಿರುವ ರಂಪ ಮತ್ತು 'ಅಮ್ನೆಸ್ಟಿ ಇಂಟರ್‌ನ್ಯಾಷನಲ್'ನ ಸಭೆಯೊಂದರಲ್ಲಿ ಭಾರತೀಯ ಸೇನೆಯ ವಿರುದ್ಧ ಘೋಷಣೆಗಳನ್ನು ಕೂಗಲಾಯಿತೆಂದು ಹೇಳಿ ಹರಡುತ್ತಿರುವ ಅಶಾಂತಿಯ ಹಿಂದೆ ಇರುವುದು ಖಂಡಿತ ದೇಶಭಕ್ತಿಯಲ್ಲ. ಬದಲಿಗೆ ದೇಶಭಕ್ತಿ ಎಂಬ ಭಾವನೆಯ ರಾಜಕೀಯ ದುರುಪಯೋಗ.

ಪಾಕಿಸ್ತಾನದ ಜನತೆ ರಮ್ಯಾಗೆ ಸ್ನೇಹ ತೋರಿ ಉಪಚರಿಸಿದ್ದರೆ ಅದನ್ನು ಹೇಳಿಕೊಳ್ಳಲು ಅವರಿಗೆ ಸ್ವಾತಂತ್ರ್ಯವಿಲ್ಲವೆ? ಹಾಗಾದರೆ ಪಾಕಿಸ್ತಾನದ ಪ್ರಧಾನಿಯ ಹುಟ್ಟುಹಬ್ಬಕ್ಕೆ

ಹೋಗಿ ಶುಭಾಶಯ ಹೇಳಿಬಂದ ನಮ್ಮ ಪ್ರಧಾನಿ ಮೋದಿಯವರ ವರ್ತನೆಯನ್ನು ಇವರು ಏನೆಂದು ಕರೆಯುವರು? ಕಾಶ್ಮೀರದಲ್ಲಿ ಭಾರತದ ಸೇನೆ ದೌರ್ಜನ್ಯವೆಸಗಿದ್ದರೆ ಅಲ್ಲಿನ ಪ್ರಜೆಗಳು ಅದನ್ನು ಪ್ರತಿಭಟಿಸಬಾರದೆಂದ ಮೇಲೆ ಕಾಶ್ಮೀರವನ್ನು ನಾವು ಒಂದು ವಸಾಹತು ಎಂದೇ ಪರಿಗಣಿಸಿದ್ದೇವೆ ಎನ್ನಬೇಕಾಗುತ್ತದೆ. 'ಅಮ್ನೆಸ್ಟಿ ಇಂಟರ್‌ನ್ಯಾಷನಲ್' ಅಥವಾ ಅದು ನಡೆಸಿದ ಸಭೆ ಭಾರತದ ವಿರುದ್ಧ ಘೋಷಣೆ ಕೂಗಿ ಈ ದೇಶದ ವಿರುದ್ಧ ಪಿತೂರಿ ನಡೆಸಿದ ಸಾಕ್ಷಿ ಇದ್ದರೆ ಅದು ಬೇರೆ ಮಾತು. ನನಗನ್ನಿಸುವಂತೆ ಇದೆಲ್ಲವೂ ನಡೆದಿರುವುದು ಮೋದಿ ಸರ್ಕಾರದ ಯಾವುದೇ ಸಾಧನೆ ಇಲ್ಲದ ಈವರೆಗಿನ ನಿರಾಶಾದಾಯಕ ಆಡಳಿತ, ವಿಶೇಷವಾಗಿ ಕಾಶ್ಮೀರದಲ್ಲಿ ಅದು ತನ್ನ ರಾಜಕೀಯ ಘಾತುಕತನದಿಂದಾಗಿ ಮಾಡಿಕೊಂಡಿರುವ ಗಂಭೀರ ಎಡವಟ್ಟುಗಳನ್ನು ಮುಚ್ಚಿಕೊಳ್ಳಲು ನಡೆಸಿರುವ ಅಬ್ಬರದ ರಾಜಕಾರಣವಷ್ಟೆ.

ತನ್ನನ್ನು ತಾನೇ ತಿಂದುಕೊಳ್ಳುತ್ತಿರುವ ಹಿಂದುತ್ವದ ರಾಜಕಾರಣ

ಹಾಗೆ ನೋಡಿದರೆ ಇದೆಲ್ಲದರಿಂದ ಒಂದು ರೀತಿಯಲ್ಲಿ ಒಳ್ಳೆಯದೇ ಆಗಿದೆ. ಕರ್ನಾಟಕದಲ್ಲಿ ಸಂಘ ಪರಿವಾರದ ಸಂಘಟನೆಗಳು ಇತ್ತೀಚೆಗೆ ಹಿಂದುತ್ವದ ರಾಜಕಾರಣದ ಹೆಸರಿನಲ್ಲಿ ಕೊಲೆ, ಅಪಹರಣ, ಹಫ್ತಾ ವಸೂಲಿ ಇತ್ಯಾದಿ ಆರೋಪಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡು ಜನರ ಮನಸ್ಸಿನಲ್ಲಿ ಅವುಗಳ ಬಿಂಬ ವಿರೂಪಗೊಳ್ಳುತ್ತಿರುವ ಪರಿಯನ್ನೇ ಗಮನಿಸಿ. ಹಿಂದುತ್ವದ ರಾಜಕಾರಣ ತನ್ನನ್ನು ತಾನೇ ತಿಂದುಕೊಳ್ಳುವ ಹಂತ ಮುಟ್ಟಿದಂತಿದೆ. ಆದರೆ ಇಂತಹ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿ ಸಿದ್ಧರಾಮಯ್ಯನವರಾದರೂ ಏನು ಮಾಡುತ್ತಿದ್ದಾರೆ? ಹಠ ತೊಟ್ಟಂತೆ ಕೆಪಿಎಸ್‌ಸಿಗೆ ಶ್ಯಾಂಭಟ್‌ರನ್ನೇ ನೇಮಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅದರ ಮುಂದುವರಿಕೆಯಾಗಿ ಪ್ರೊಬೇಷನರಿ ಅಧಿಕಾರಿಗಳನ್ನು ಸಂದರ್ಶನಕ್ಕೆ ಕರೆಯುವ ಅನುಪಾತವನ್ನು ೧:೩ರಿಂದ ೧:೫ಕ್ಕೆ ಹೆಚ್ಚಿಸಲು ಹೊರಟಿದ್ದಾರೆ. ಇದು ಹಿಂದುಳಿದ ಮತ್ತು ದಲಿತ ಅಭ್ಯರ್ಥಿಗಳಿಗೆ ಅನುಕೂಲವಾಗುತ್ತದೆ ಎಂಬ ಬೂಸಿ ಬೇರೆ ಬಿಟ್ಟಿದ್ದಾರೆ. ಈ ವರ್ಗಗಳಿಗೆ ಮೀಸಲಾತಿ ಇಷ್ಟಿಷ್ಟೆಂದು ನಿಗದಿಯಾಗಿರುವಾಗ ಅನುಪಾತ ಹೆಚ್ಚಿಸುವುದರಿಂದ ಇವರಿಗೆ ಹೆಚ್ಚಿನ ಅನುಕೂಲವಾಗುವುದಾರೂ ಹೇಗೆ? ಒಟ್ಟಿನಲ್ಲಿ ಸಿದ್ಧರಾಮಯ್ಯನವರು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಕರ್ನಾಟಕದ ಸಮಾಜವನ್ನೇ ಹಿಂದೆಂದೂ ಇಲ್ಲದಷ್ಟು ಅಪಾಯಕಾರಿಯಾಗಿ ಜಾತಿವಾರು ಒಡೆದಿಟ್ಟಿದ್ದಾರೆ. ಇದು ಸಾಲದೆಂಬಂತೆ ಪ್ರಗತಿಪರ ಚಿಂತಕರೆಂಬ ಸೋಗಿನಲ್ಲಿ ಇವರ ಕೆಲ ಚೇಲಾಗಳು 'ಯುವ ಅಹಿಂದ'ವೆಂಬ ಹೊಸ ಸಂಘಟನೆ ಕಟ್ಟಲು ಹೊರಟಿದ್ದಾರೆ. ಇವರಿಗೆ ಕೋಮುವಾದಿ ರಾಜಕಾರಣಕ್ಕೆ ಭ್ರಷ್ಟ ಕಾಂಗ್ರೆಸ್‌ವೊಂದೇ ಪರ್ಯಾಯದಂತೆ ಕಾಣುತ್ತಿರುವುದು, ತಮ್ಮ ನಾಯಕ ಸಿದ್ಧರಾಮಯ್ಯನವರಂತೆಯೇ ಇವರು ಮುಟ್ಟಿರುವ ರಾಜಕೀಯ ಅಧೋಗತಿಯ ದ್ಯೋತಕವಾಗಿದೆ.

ಕೆಲ ವಿದಾಯದ ಮಾತುಗಳು

ಇದು ಪತ್ರಿಕೆಯ ಸದ್ಯಕ್ಕಾದರೂ ಕೊನೆಯ ಸಂಚಿಕೆ. ಈ ಸಂದರ್ಭದಲ್ಲಿ ಪತ್ರಿಕೆ ಈ ಐದು ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ಐದು ವಿಶೇಷ ಸಂಚಿಕೆಗಳೂ ಸೇರಿದಂತೆ ಒಟ್ಟು ೬೨ ಮೌಲಿಕ ಸಂಚಿಕೆಗಳನ್ನು ನೀಡಿದೆ ಎಂದು ಹೇಳಲು ಹೆಮ್ಮೆಯೆನಿಸುತ್ತದೆ. ಇದರ ಬಹುಪಾಲು ಕೀರ್ತಿ ನಾನು ಪ್ರತಿ ಸಂಚಿಕೆಯ ನನ್ನ ಯೋಜನೆಯಂತೆ ಕೋರಿದಾಗಲೆಲ್ಲ ಲೇಖನಗಳನ್ನು ಬರೆದು ಅಥವಾ ಅನುವಾದಿಸಿ ಕೊಟ್ಟ ಗೆಳೆಯರಿಗೆ ಮತ್ತು ಅವನ್ನು ಮೆಚ್ಚಿ ಪ್ರತಿಕ್ರಿಯಿಸಿದ ಪ್ರಜ್ಞಾವಂತ ಓದುಗರಿಗೆ ಸಲ್ಲುತ್ತದೆ. ನಿರ್ದಿಷ್ಟವಾಗಿ, ನಾನು ಕೋರಿದಾಗಲೆಲ್ಲ ಲೇಖನಗಳನ್ನು ಬಹು ಅಚ್ಚುಕಟ್ಟಾಗಿ ಕನ್ನಡಕ್ಕೆ ಅನುಪಾದಿಸಿಕೊಟ್ಟ ಎಂ ರಾಜು ಮತ್ತು ಟಿ.ಎಲ್ ರೇಖಾಂಬ (ಪ್ರತಿ ಸಂಚಿಕೆಯ ಕರಡು ತಿದ್ದಿದವರು ಇವರೇ) ಅವರಿಗೆ ನನ್ನ ವಿಶೇಷ ನೆನಕೆಗಳನ್ನು ಹೇಳಲೇಬೇಕು. ಪತ್ರಿಕೆಗೆ ಚಂದಾದಾರರ ಭದ್ರ ಬುನಾದಿ ಹಾಕಿಕೊಟ್ಟಿದ್ದ ಗೆಳೆಯರಾದ ಜಿ.ಬಿ.ಶಿವರಾಜು, ಬಿ.ವಿ.ಸುರೇಂದ್ರ, ಅಪೂರ್ವ ಡಿ'ಸಿಲ್ವ, ಬಿ.ಶಿವಕುಮಾರ್, ಅಜ್ಜಪ್ಪ ಬಿರಡಿ, ಹಸನ್ ನಯೀಂ ಸುರಕೋಡ, ಡಿ.ಜಿ. ಪುಟ್ಟರಾಜು, ಎನ್.ಎಂ. ಕುಲಕರ್ಣಿ, ಕೆ.ಪಿ. ನಟರಾಜ್ ಮುಂತಾದ ಗೆಳೆಯರನ್ನೂ ಇಲ್ಲಿ ಸ್ಮರಿಸಬಯಸುತ್ತೇನೆ. ಹಾಗೇ ಪತ್ರಿಕೆ ಸುಮಾರು ಸಾವಿರ ಚಂದಾದಾರರಿಗೆ ಪ್ರತಿ ತಿಂಗಳೂ ಸಕಾಲದಲ್ಲಿ ಅಂಚೆಗೆ ಹೋಗುವಲ್ಲಿ ನನಗೆ ನೆರವಾದ ಗೆಳೆಯರಾದ ನಿಸಾರ್ ಅಹಮದ್, ಎಂ. ರಾಜು, ಶೇಖರ್ ಗೌಳೇರ್, ಟಿ.ಎಲ್ ರೇಖಾಂಬ ಮತ್ತು ಸವಿತಾ ನಾಗಭೂಷಣ ಅವರನ್ನೂ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಪತ್ರಿಕೆಯನ್ನು ನನ್ನ ಗಡಿಬಿಡಿಗಳ ನಡುವೆಯೂ ಅಂದವಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಇಳಾ ಮುದ್ರಣಾಲಯ ಮತ್ತು ರಿಪ್ಲಿಕಾ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲಿಕ-ಸಿಬ್ಬಂದಿಯವರನ್ನೂ ಇಲ್ಲಿ ನೆನೆಯಬಯಸುತ್ತೇನೆ.

ಇನ್ನು ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಎರಡು ಲೇಖನ ಮಾಲೆಗಳ ಬಗ್ಗೆ ಎರಡು ಮಾತು. 'ನಮ್ಮ ಸಮಾಜವಾದಿಗಳು' ಶೀರ್ಷಿಕೆಯಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅರವತ್ತಕ್ಕೂ ಹೆಚ್ಚು ಸಮಾಜವಾದಿ ನಾಯಕರನ್ನು ಪರಿಚಯಿಸಲಾಗಿದೆ. ಇನ್ನೂ ಹತ್ತಾರು ಇಂತಹ ವ್ಯಕ್ತಿತ್ವಗಳ ಪರಿಚಯ ಮಾಡಿಕೊಡಬೇಕಾಗಿದ್ದಾಗಲೇ ಪತ್ರಿಕೆ ನಿಲ್ಲುತ್ತಿರುವ ಬಗ್ಗೆ ನನಗೆ ವಿಷಾದವಿದೆ. ಮತ್ತಾರಾದರೂ ಬೇರೆ ವೇದಿಕೆಗಳಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿಯಾರು ಎಂದು ನಂಬಿದ್ದೇನೆ.

ಇನ್ನು 'ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ' ಈ ಸಂಚಿಕೆಯೊಂದಿಗೆ ಅವಸರದಲ್ಲಾದರೂ ಪೂರ್ಣಗೊಂಡಿದೆ. ೪೭ ದೀರ್ಘ ಕಂತುಗಳಲ್ಲಿ ತಮ್ಮ ಪತಿ ಕೃಷ್ಣಪ್ಪನವರ ಹೋರಾಟದ ಬದುಕನ್ನು ತಾವು ಕಂಡಂತೆ ಕಟ್ಟಿಕೊಟ್ಟ ಶ್ರೀಮತಿ ಇಂದಿರಾ ಕೃಷ್ಣಪ್ಪನವರನ್ನು ಇಲ್ಲಿ ಅಭಿನಂದಿಸಬಯಸುತ್ತೇನೆ. ಕೃಷ್ಣಪ್ಪನವರ ಕುಟುಂಬದ ಆಪ್ತ ಗೆಳೆಯನೇ ಆಗಿದ್ದುಕೊಂಡು ಕೃಷ್ಣಪ್ಪನವರ ಹೋರಾಟದ ಬದ್ಧತೆ ಮತ್ತು ಸಂಘಟನಾ ಶಕ್ತಿಯನ್ನು ಹತ್ತಿರದಿಂದ

ನೋಡಿದ್ದ ನನಗೆ ಈ ಪತ್ರಿಕೆಯಲ್ಲಿ ಈ ಲೇಖನ ಮಾಲೆಯನ್ನು ಪ್ರಕಟಿಸುವುದು ನನ್ನ ಧರ್ಮವೇ ಆಗಿತ್ತು.

ನಿಜ, ಕೃಷ್ಣಪ್ಪನವರ ಚಿಂತನೆ ಮತ್ತು ಸಂಘಟನೆಯ ರೀತಿ ನೀತಿಗಳ ಬಗ್ಗೆ ನನ್ನ ಕೆಲವು ಭಿನ್ನಾಭಿಪ್ರಾಯಗಳಿದ್ದವು. ಅಲ್ಲಿ ಅನೇಕ ವೈರುಧ್ಯಗಳನ್ನೂ ಗಮನಿಸಿದ್ದ ನಾನು ಆ ಬಗ್ಗೆ ಅವರೊಂದಿಗೆ ಹಲವು ಬಾರಿ ಜಗಳ ಕೂಡ ಆಡಿದ್ದೆ; ಅವರು ಬಿಎಸ್‌ಪಿ ಸೇರಿದಾಗ ಸ್ವಲ್ಪ ಕಾಲ ದೂರವೂ ಆಗಿದ್ದೆ. ಆದರೆ ಇವಾವುವೂ ನಮ್ಮ ನಡುವಣ ಪರಸ್ಪರ ಗೌರವ ಮತ್ತು ವೈಯಕ್ತಿಕ ಗೆಳೆತನಕ್ಕೆ ಅಡ್ಡಿ ಬರಲಿಲ್ಲ. ಇದಕ್ಕೆ ಪೂರಕ ಪಾತ್ರ ವಹಿಸಿದವರು, ಅವರಷ್ಟೇ ನನಗೆ ಮತ್ತು ನನ್ನ ಪತ್ನಿಗೆ ಆಪ್ತರಾಗಿದ್ದ ಅವರ ಪತ್ನಿ ಇಂದಿರಾ ಮತ್ತು ಮಕ್ಕಳಾದ ಶಾಲು ಮತ್ತು ಸೀಮಾ. ಇಂದಿರಾ ಅವರಂತೂ ಕೃಷ್ಣಪ್ಪನವರ ಬಾಳನ್ನು ಬೆಳಗಿದರಲ್ಲದೆ ಅವರ ಹೋರಾಟದ ಬದುಕಿನ ಸಕಲ ದಾಖಲೆಗಳನ್ನೂ ಜತನದಿಂದ ಕಾಪಿಟ್ಟುಕೊಂಡು ಬಂದು ಈ ಲೇಖನ ಮಾಲೆಗೊಂದು ಅಧಿಕೃತತೆ ಒದಗಿಸಿದ್ದಾರೆ. ಅವರ ಬರಹ ತನ್ನ ಪತಿಯ ಬಗೆಗಿನ ಪ್ರೀತಿ–ಅಭಿಮಾನಗಳನ್ನೂ ಮೀರಿ ಇನ್ನಷ್ಟು ವಸ್ತುನಿಷ್ಠ ಮತ್ತು ವಿಮರ್ಶಾತ್ಮಕವಾಗಿದ್ದರೆ ಚೆನ್ನಿತ್ತು ಅನಿಸಿದರೂ, ಸದ್ಯಕ್ಕೆ ಇಷ್ಟಾದರೂ ದಾಖಲಾಯಿತಲ್ಲಾ ಎಂಬ ಸಮಾಧಾನ ನನ್ನದು. ಇಂದಿರಾ ಅವರಿಗೆ ಮತ್ತೊಮ್ಮೆ ಧನ್ಯವಾದಗಳು.

ಕೊನೆಯ ಮಾತುಗಳು: ವಿಶೇಷಾಂಕದ ಜಾಹೀರಾತುಗಳಿಂದ ಬಂದಿರುವ ಮತ್ತು ಬರಬೇಕಿರುವ ಆದಾಯದ ಬಹುಪಾಲನ್ನು–ಸುಮಾರು ನಲವತ್ತು ಸಾವಿರ ರೂ.ಗಳನ್ನು–ವಿಶೇಷಾಂಕದ ಲೇಖಕರಿಗೆ ಸಂಭಾವನೆಯಾಗಿ ನೀಡಿದ್ದೇವೆ. ಹೆಚ್ಚುವರಿ ಚಂದಾ ಹಣ ನೀಡಿರುವ ಒಂದೆರಡು ಸಂಸ್ಥೆಗಳು ಮತ್ತು ಮೂರ್ನಾಲ್ಕು ಜನ ವ್ಯಕ್ತಿಗಳಿಗೆ ಆ ಹಣವನ್ನು ವಾಪಸು ಮಾಡಲಾಗುತ್ತಿದೆ. ಮುದ್ರಣ ವೆಚ್ಚ ತೀರಿದ ನಂತರ ಉಳಿಯಬಹುದಾದ ಹಣವನ್ನು ನಮ್ಮದೇ ಆದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನಕ್ಕೆ ನೀಡಲಾಗುವುದು. ಅಂದಹಾಗೆ ನಮ್ಮ ಈ ಪ್ರತಿಷ್ಠಾನದ ಈ ವರ್ಷದ ಸಮಾಜವಾದಿ ಅಧ್ಯಯನ ಶಿಬಿರ 'ಪರ್ಯಾಯ ಅಭಿವೃದ್ಧಿ ಮತ್ತು ರಾಜಕೀಯ ಮಾದರಿ'ಗಳನ್ನು ಕುರಿತಾಗಿದ್ದು ಅದು ಬರುವ ಅಕ್ಟೋಬರ್ ೧೫ ಹಾಗೂ ೧೬ರಂದು ಕುಪ್ಪಳ್ಳಿಯಲ್ಲಿ ನಡೆಯುವುದು. ಆಸಕ್ತರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು:೯೪೪೮೨೩೮೬೩೮, ೯೫೩೫೬೫೧೫೫೩ ಮತ್ತು ೯೪೮೦೧೪೯೯೮೪

ಸಾಧ್ಯವಾದಾಗ ಮತ್ತೆ ಮುಖಾಮುಖಿಯಾಗೋಣ ನಮಸ್ಕಾರ.

ಅಕ್ಟೋ.,-ಡಿಸೆಂ., ೨೦೧೬

ನೋಟು ರದ್ದತಿಯ ರಾಜಕಾರಣದ ಸುತ್ತಮುತ್ತ

ಪ್ರಿಯ ಓದುಗರೇ,

ನಿಮ್ಮಲ್ಲಿನ ಹಲವು ಜನರ ಪ್ರೀತಿಪೂರ್ವಕ ಒತ್ತಾಯಕ್ಕೆ ಮಣಿದು ಪತ್ರಿಕೆಯನ್ನು ಎರಡು ತಿಂಗಳ ವಿರಾಮದ ನಂತರ ನಿರಂತರತೆಗೆ ಭಂಗವಾಗದಂತೆ ಮತ್ತೆ ಆರಂಭಿಸುತ್ತಿದ್ದೇವೆ. ಆದರೆ ಈಗ ತ್ರೈಮಾಸಿಕವಾಗಿ. ಸಮಾಜವಾದಿ ದೃಷ್ಟಿಕೋನವನ್ನು ಕೈಬಿಡದೆ ಪತ್ರಿಕೆಯ ವಿಷಯ ವ್ಯಾಪ್ತಿಯನ್ನು ಹಿಗ್ಗಿಸಲಾಗಿದೆ. ಹಾಗಾಗಿ ಈ ಸಂಚಿಕೆಯಲ್ಲಿ ರಾಜಕೀಯ ಲೇಖನಗಳ ಜೊತೆ ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮಗಳೂ ಗಣನೀಯ ಪಾಲು ಪಡೆದು ಪತ್ರಿಕೆಯ ದೃಷ್ಟಿ ವಿಸ್ತಾರ ಈಗ ಹೆಚ್ಚು ಸಮಗ್ರಗೊಂಡಿದೆ ಎಂದು ನಾವು ಭಾವಿಸಿದ್ದೇವೆ. ಇದೊಂದು ಪ್ರಯೋಗ ಮಾತ್ರ. ಹಾಗಾಗಿಯೇ ಓದುಗರಿಂದ ಸದ್ಯಕ್ಕೆ ಎರಡು ಸಂಚಿಕೆಗಳ ಚಂದಾ ನೂರು ರೂಪಾಯಿಗಳನ್ನು ಮಾತ್ರ ಕೋರುತ್ತಿದ್ದೇವೆ. ದಯವಿಟ್ಟು ಕಳಿಸಿಕೊಡಿ. ನಮ್ಮ ಮುಂದಿನ ಯೋಜನೆಯನ್ನು ಬರಲಿರುವ ಮಾರ್ಚ್ ಸಂಚಿಕೆಯಲ್ಲಿ ತಿಳಿಸುವೆವು.

ಈ ದಿನಗಳಲ್ಲಿ ಇತರೆಲ್ಲ ಸಂಗತಿಗಳನ್ನೂ ಮೀರಿ ರಾಷ್ಟ್ರ ಜೀವನದ ಮನಸ್ಸನ್ನು ಆವರಿಸುವ ವಿದ್ಯಮಾನವೆಂದರೆ, ಕೆಲ ನೋಟುಗಳ ರದ್ದತಿ. ಇದನ್ನು ಮೋದಿಯವರು ಕಪ್ಪು ಹಣದ ಮೇಲಿನ ನಿರ್ದಿಷ್ಟ ದಾಳಿ ಎಂದು ವರ್ಣಿಸಿರುವರಾದರೂ, ಇದು ನಿಜವಾಗಿ ಪರಿಣಮಿಸಿರುವುದು ವಿರೋಧ ಪಕ್ಷಗಳ ಮೇಲಿನ ನಿರ್ದಿಷ್ಟ ದಾಳಿಯಾಗಿ! ಏಕೆಂದರೆ, ಮೋದಿಯವರ ಈ ದಿಢೀರ್ ಅಸ್ತ್ರ ಸರ್ಕಾರದ ಮೇಲೆ ಆವರೆಗೆ-ಅದರ ವಿವಿಧ ನೀತಿ ಮತ್ತು ಕಾರ್ಯಕ್ರಮಗಳ ವೈಫಲ್ಯಗಳಿಗಾಗಿ-ನಡೆದಿದ್ದ ವಿರೋಧ ಪಕ್ಷಗಳ ದಾಳಿ ಈಗ ಹೆಚ್ಚೂಕಡಿಮೆ ಸ್ತಬ್ಧಗೊಂಡು, ಅವು ಮೋದಿಯವರ ಈ ಅಸ್ತ್ರವನ್ನು ಎದುರಿಸುವ ದಾರಿಗಾಣದೆ ಕಂಗಾಲಾದಂತಿವೆ. ನೋಟುಗಳ ರದ್ದತಿ ಸರಳ ನೋಟಕ್ಕೆ ಜನಸಾಮಾನ್ಯರಿಗೆ ತಮ್ಮನ್ನು ಈವರೆಗೆ ದೋಚಿದ್ದ ದುಷ್ಟರ ಮೇಲೆ ಹೂಡಲಾಗಿರುವ

ರಾಮ ಬಾಣದಂತೆ ಕಾಣುತ್ತಿರುವುದರಿಂದ ಅದನ್ನು ಇವು ಅತ್ತ ಸಾರಾಸಗಟಾಗಿ ಖಂಡಿಸಲೂ ಆಗದೆ, ಇತ್ತ ಅದರ ಆರ್ಥಿಕ ಪ್ರತಿಕೂಲಗಳನ್ನು ಜನರ ಮನಹೋಗುವಂತೆ ವಿವರಿಸಲೂ ಆಗದೆ ಸುಮ್ಮನೆ ಕೂಗಾಡುತ್ತಿರುವಂತೆ ತೋರುತ್ತಿದೆ.

ನೋಟು ರದ್ದತಿಯಿಂದ ಫಲಾಫಲಗಳು ಇನ್ನೂ ಸ್ಪಷ್ಟವಾಗಿ ತಿಳಿಯಬೇಕಿದೆ. ಆದರೂ ಜನಸಾಮಾನ್ಯರ ದಿನ ನಿತ್ಯದ ಬದುಕನ್ನು ಸಂಕಷ್ಟಕ್ಕೆ ದೂಡಿರುವ ಈ ಇಡೀ ಕಸರತ್ತು ನಿರೀಕ್ಷಿತ ಫಲ ನೀಡಿಲ್ಲ ಎಂಬ ಸೂಚನೆಗಳು ಬರತೊಡಗಿವೆ. ಜೊತೆಗೆ, ಈ ಕಸರತ್ತು ರಾಷ್ಟ್ರದ ಒಟ್ಟಾರೆ ಆರ್ಥಿಕತೆಯ ಮೇಲೆ ಮಾರಕ ಪರಿಣಾಮಗಳನ್ನುಂಟು ಮಾಡಲಿವೆ ಎಂದು ತಜ್ಞರೂ ಹೇಳುತ್ತಿದ್ದಾರೆ. ಆದುದರಿಂದ ವಿರೋಧ ಪಕ್ಷಗಳು ಒಂದಿಷ್ಟು ಸಂಯಮದಿಂದ ಕಾಯ್ದು ತಮ್ಮ ರಾಜಕೀಯ ತಂತ್ರಗಳನ್ನು ನಿರ್ಧರಿಸುವುದು ವಿವೇಕದ ನಡೆಯಾದೀತು. ಏಕೆಂದರೆ ಜನ ಸಂಕಷ್ಟಗಳ ನಡುವೆಯೂ, ಸರ್ಕಾರದ ಕ್ರಮ ಸದುದ್ದೇಶದಿಂದ ಕೂಡಿದ್ದು ಎಂದು ನಂಬಿ, ಶಾಂತಿಯಿಂದ ಇದ್ದಾರೆ. ಮತ್ತು ಮೋದಿ ನೋಟು ರದ್ದತಿ ಕಾರ್ಯಕ್ರಮದ ಮುಂದುವರಿಕೆಯಾಗಿ ವ್ಯವಸ್ಥೆಯ ಶುದ್ಧೀಕರಣದ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳುವರು ಎಂಬ ನಿರೀಕ್ಷೆಯಲ್ಲಿದ್ದಾರೆ.

ಹಾಗಾಗಿ ವಿರೋಧ ಪಕ್ಷಗಳು, ನೋಟು ರದ್ದತಿಯ ಬಗೆಗಿನ ತಮ್ಮ ಒಣ ಕೂಗಾಟವನ್ನು ಸದ್ಯಕ್ಕೆ ನಿಲ್ಲಿಸಿ, ಮೋದಿಯವರ ಈ ಅಸ್ತ್ರಕ್ಕೆ ರಾಜಕೀಯ ಉದ್ದೇಶಗಳೇನಾದರೂ ಇವೆಯೇ ಎಂಬುದರ ಬಗ್ಗೆ ಯೋಚಿಸಿ ಆ ದಿಸೆಯಲ್ಲಿ ತನ್ನ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಬರಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಉತ್ತರ ಪ್ರದೇಶವನ್ನು ಬಿಜೆಪಿ ಗೆದ್ದುಕೊಂಡರೆ, ಅಲ್ಲಿಗೆ ರಾಷ್ಟ್ರದಲ್ಲಿ ಅದರ ಪ್ರಾಬಲ್ಯ ಹೆಚ್ಚೂ ಕಡಿಮೆ ಸಂಪೂರ್ಣಗೊಂಡಂತೆ. ಮೋದಿಯವರ ಇತ್ತೀಚಿನ ಚುನಾವಣಾ ಭಾಷಣಗಳನ್ನು ಕೇಳಿದರೆ, ನೋಟು ರದ್ದತಿ ಅಸ್ತ್ರ ಮುಖ್ಯವಾಗಿ ಈ ಉದ್ದೇಶದಿಂದಲೇ ಹೂಡಲ್ಪಟ್ಟಿತೋ ಏನೋ ಎಂಬ ಅನುಮಾನ ಉಂಟಾಗುತ್ತದೆ. ಹಾಗಾಗಿ ವಿರೋಧ ಪಕ್ಷಗಳ ಸದ್ಯದ ಆದ್ಯತೆ ಉ.ಪ್ರ. ಬಿಜೆಪಿಯ ಪಾಲಾಗದಂತೆ ತಡೆಯುವುದೇ ಆಗಬೇಕು. ಅವುಗಳ ನೋಟು ರದ್ದತಿ ವಿರೋಧ ಕೂಡ ಈ ದೃಷ್ಟಿಕೋನದೊಂದಿಗೇ ವಿನ್ಯಾಸಗೊಳ್ಳಬೇಕು.

ಮೋದಿ ತಮ್ಮ ಸರ್ಕಾರದ ದಕ್ಷತೆ ಮತ್ತು ಪರಿಶುದ್ಧತೆಗಳ ಬಗ್ಗೆ ಏನೇ ಹೇಳಲಿ, ರಾಷ್ಟ್ರಾದ್ಯಂತ ಬಯಲಾಗುತ್ತಿರುವ ಕಪ್ಪು ಹಣವನ್ನು ಬಿಳಿ ಮಾಡಲಾಗುತ್ತಿರುವ ಬೃಹತ್ ಪ್ರಮಾಣದ ದಂಧೆ ಮೋದಿ ಸರ್ಕಾರದ ಅಡಿಯಲ್ಲಿ ವ್ಯವಸ್ಥೆಯ ಮೇಲಿನ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತ ಅಬಾಧಿತವಾಗಿ ಮುಂದುವರೆದಿರುವ ಸೂಚನೆಯಾಗಿರುವುದನ್ನು ವಿರೋಧ ಪಕ್ಷಗಳು ರಾಜಕೀಯವಾಗಿ ಬಳಸಿಕೊಳ್ಳಬೇಕಿದೆ. ಜೊತೆಗೆ ಯಾವ ಭರವಸೆಗಳ ಆಕರ್ಷಣೆಯನ್ನೊಡ್ಡಿ ಜನತೆಯ ಬೃಹತ್ ಆದೇಶ ಪಡೆದು ಮೋದಿ ಅಧಿಕಾರಕ್ಕೆ ಬಂದರೋ ಆ ಭರವಸೆಗಳು ಏನಾಗಿವೆ ಎಂಬುದರ ವಸ್ತುನಿಷ್ಠ ಶೋಧನೆಯನ್ನು

ವಿರೋಧ ಪಕ್ಷಗಳು ಮಾಡಿ ಜನರಿಗೆ ತಿಳಿಸಬೇಕಿದೆ. ಅದು ಆರ್ಥಿಕ ಚೇತರಿಕೆಯ ವಿಷಯವಾಗಿರಬಹುದು. ನಿರುದ್ಯೋಗದ ಹೆಚ್ಚಳದ ಸಮಸ್ಯೆ ಇರಬಹುದು, ಅಥವಾ ಭ್ರಷ್ಟಾಚಾರ ನಿವಾರಣೆಯ ಸಮಸ್ಯೆ ಇರಬಹುದು ಅಥವಾ ಮೋದಿಯವರು ತುಂಬಾ ಯಶಸ್ವಿಯಾಗಿ ಬಳಸಿದ ಭಯೋತ್ಪಾದನೆ ಮತ್ತು ಕಾಶ್ಮೀರದ ಸಮಸ್ಯೆ ಇರಬಹುದು. ಇವೆಲ್ಲವುಗಳ ವಿಷಯದಲ್ಲಿ ಮೋದಿ ಸರ್ಕಾರದ ದಾಖಲೆ ನಿರಾಶಾದಾಯಕವಾಗಿರುವುದನ್ನು ಅವು ಜನರ ಮುಂದೆ ರಾಜಕೀಯ ಅರಚಾಟವಿಲ್ಲದೆ ಬಿಚ್ಚಿಡಬೇಕು. ಇಲ್ಲದಿದ್ದಲ್ಲಿ ಮೋದಿಯವರ ನಿರಂಕುಶ ವ್ಯಕ್ತಿತ್ವಕ್ಕೆ ಇನ್ನಷ್ಟು ಕುಮ್ಮಕ್ಕು ಸಿಕ್ಕಿ ದೇಶ ಈಗಾಗಲೇ ಅಲುಗಾಡುತ್ತಿರುವ ತನ್ನ ಪ್ರಜಾಪ್ರಭುತ್ವದ ಲಂಗರುಗಳನ್ನು ನಿಧಾನವಾಗಿ ಕಳೆದುಕೊಳ್ಳುವ ಅಪಾಯವಿದೆ. ಮೋದಿ ತಮ್ಮ ನೋಟು ರದ್ದತಿಯ ಕ್ರಮದ ದಿಢೀರ್ ಜನಪ್ರಿಯತೆಯ ರೋಚಕತೆಯಿಂದ ಉನ್ಮತ್ತರಾದಂತೆ ಸಂಸತ್‌ನ ಕಾರ್ಯಕಲಾಪಗಳ ಬಗ್ಗೆ ತೋರಿಸುತ್ತಿರುವ ನಿರ್ಲಕ್ಷ್ಯ ಮತ್ತು ಅನಾದರಗಳು ಯಾರಿಗಾದರೂ ಗಾಬರಿ ಹುಟ್ಟಿಸುವಂತಿದೆ.

ಆದರೆ ಒಮ್ಮೊಮ್ಮೆ, ಇದನ್ನೆಲ್ಲ ಯಾರಿಗೇ ಯಾಕೆ ಹೇಳುತ್ತಿದ್ದೇನೆ ಎಂದು ಆಶ್ಚರ್ಯವೂ ಆಗುತ್ತದೆ. ವಿಶೇಷವಾಗಿ, ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್‌ನ ಆಡಳಿತವಿರುವ ಕರ್ನಾಟಕ ಸರ್ಕಾರದ ಅಧ್ವಾನ-ಅನಾಚಾರಗಳನ್ನು ನೋಡಿದಾಗ. ಈಗ ರಾಷ್ಟ್ರಾದ್ಯಂತ ನಡೆಯುತ್ತಿರುವ ವರಮಾನ ತೆರಿಗೆ ಇಲಾಖೆಯ ದಾಳಿಗಳಲ್ಲಿ ಅತ್ಯಂತ ಹೆಚ್ಚು ಅಕ್ರಮ ಸಂಪತ್ತು ಬಯಲಾಗಿರುವುದು ಕರ್ನಾಟಕದಲ್ಲಿ ಎಂಬ ಸಂಗತಿ ಈ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಇದಕ್ಕೆ ಸದ್ಯದ ಕಾಂಗ್ರೆಸ್ ಸರ್ಕಾರವೊಂದನ್ನೇ ಹೊಣೆ ಮಾಡಲಾಗದಾದರೂ ಈ ಸರ್ಕಾರವೂ ದುಷ್ಟರನ್ನೂ ಭ್ರಷ್ಟರನ್ನೂ ರಕ್ಷಿಸುವ ದಂಧೆಯನ್ನು ನಿರ್ಲಜ್ಜವಾಗಿ ಮುಂದುವರೆಸಿದೆ ಎಂಬುದು ಸ್ಪಷ್ಟ.

ಸರ್ಕಾರದ ಸಂಪನ್ಮೂಲಗಳನ್ನು ಲೂಟಿ ಹೊಡೆದವನೆಂದು ತಾನೇ ಚಳುವಳಿ ಮಾಡಿ, ಅಧಿಕಾರಕ್ಕೆ ಬಂದ ನಂತರ ಯಾರ ವಿರುದ್ಧ ತಾನೇ ವಿಚಾರಣೆಗೆ ಆಜ್ಞಾಪಿಸಿತೋ ಆ ಜನಾರ್ದನ ರೆಡ್ಡಿ ತನ್ನ ಅಕ್ರಮ ಸಂಪತ್ತಿನ ಅಶ್ಲೀಲ ಪ್ರದರ್ಶನವಾಗಿ ಏರ್ಪಡಿಸಿದ್ದ ಮಗಳ ಮದುವೆಗೆ ಗೃಹ ಮಂತ್ರಿಯೂ ಸೇರಿದಂತೆ ಈ ಸರ್ಕಾರದ ಇಬ್ಬರು ಮೂವರು ಮಂತ್ರಿಗಳು ಹೋಗಿ ಅದನ್ನು ರಾಜಾರೋಷವಾಗಿ ಸಮರ್ಥಿಸಿಕೊಂಡೂ ಸಚಿವ ಸಂಪುಟದಲ್ಲಿ ಉಳಿಯುತ್ತಾರೆಂದರೆ ಈ ಸರ್ಕಾರ ನೈತಿಕವಾಗಿ ಎಷ್ಟು ಅಧಃಪತನಕ್ಕೆ ಈಡಾಗಿದೆ ಎಂಬುದನ್ನು ಸೂಚಿಸುತ್ತದೆ. ಇನ್ನೀಗ ಸಿಕ್ಕಿಬಿದ್ದಿರುವ ಚಿಕ್ಕರಾಯಪ್ಪ-ಜಯಚಂದ್ರ ಎಂಬ ಕಪ್ಪು ಹಣದ ಖದೀಮ ಜೋಡಿ ಯಾರ ಮತ್ತು ಎಂತಹ ಕೃಪಾಶ್ರಯದಲ್ಲಿ ಕ್ರಿಯಾಶೀಲವಾಗಿತ್ತು ಎಂಬುದರ ವಿವರ ಬಯಲಾದಾಗ ಈ ಸರ್ಕಾರದ ಅಳಿದುಳಿದಿರುವ ಮಾನವೂ ಹೇಗೆ ಹರಾಜಾಗುವುದು ಎಂಬುದನ್ನು ಕಾದು ನೋಡಬೇಕಿದೆ. ಮೇಟಿಯ ಪ್ರಕರಣ ಅದರ ಲೈಂಗಿಕ ವಿವರಗಳ ಹೊರತಾಗಿಯೂ ಈ ಸರ್ಕಾರ ಸರ್ವ ಕ್ಷೇತ್ರಗಳಿಗೂ

ವ್ಯಾಪಿಸಿದಂತಿರುವ ಎಂತಹ ದುಷ್ಟ ದಂಧೆಕೋರರ ಜಾಲವನ್ನು ಸೃಷ್ಟಿಸಿಕೊಂಡು ಜೀವಿಸುತ್ತಿದೆ ಎಂಬುದನ್ನು ಸೂಚಿಸುವಂತಿದೆ. ಇದನ್ನೆಲ್ಲ ಮುಖ್ಯಮಂತ್ರಿ ಸಿದ್ಧರಾಮಯ್ಯ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಮತ್ತು ಜಾತಿ ಜನಸಂಖ್ಯಾಧಾರಿತ ಮೀಸಲಾತಿ ಜಾರಿಗೆ ತರುವ ಅಗ್ಗದ ಜಾತಿ ರಾಜಕಾರಣದ ಘೋಷಣೆಗಳ ಮೂಲಕ ಮುಚ್ಚಿಕೊಳ್ಳಲು ಯತ್ನಿಸುತ್ತಿರುವ ದೃಶ್ಯ ಕರುಣಾಜನಕವಾಗಿದೆ.

ಕರ್ನಾಟಕವನ್ನು ರಕ್ಷಿಸಲು ಈಗ ಯಾರೂ ಗತಿಯಿಲ್ಲದಂತಾಗಿದೆ. ಪರ್ಯಾಯ ರಾಜಕಾರಣ ಕಟ್ಟುವ ಆಸೆ ಹುಟ್ಟಿಸಿ 'ಜನಾಂದೋಲನಗಳ ಮಹಾಮೈತ್ರಿ'ಯನ್ನು ರಚಿಸಿಕೊಂಡ ಎಸ್.ಆರ್. ಹಿರೇಮಠ–ದೇವನೂರ ಮಹಾದೇವ ಮತ್ತವರ ಗೆಳೆಯರ ಪ್ರಯತ್ನ ತನ್ನಲ್ಲಿ ತನಗೇ ನಂಬಿಕೆ ಇಲ್ಲದಂತೆ ಈಗ 'ಜನಪ್ರಿಯ' ವಾಗುತ್ತಿರುವ 'ಮಧ್ಯಮ ಮಾರ್ಗ'ವೆಂಬ ಎಡಬಿಡಂಗಿತನಕ್ಕೆ ಮೊರೆ ಹೋದಂತಿದೆ. ಈ ಮಹಾಮೈತ್ರಿ ಸಿದ್ಧಪಡಿಸಿರುವ 'ಗುರಿ ಮತ್ತು ಕಾರ್ಯಕ್ರಮಗಳ ಕಾರ್ಯ ಯೋಜನೆ' ಎಂಬ ದಸ್ತಾವೇಜು ಗಾಬರಿ ಹುಟ್ಟಿಸುವಷ್ಟು ನಿರಾಶಾದಾಯಕವಾಗಿದೆ. ಈ ದಸ್ತಾವೇಜಿನ ಬಗ್ಗೆ ಸಂಘಟಕರಿಗೆ ನಾನು ಬರೆದ ಪ್ರತಿಕ್ರಿಯೆಯನ್ನು ಈ ಮುಂದೆ ನಿಮ್ಮ ಅವಗಾಹನೆಗಾಗಿ ನೀಡುತ್ತಿರುವೆ.

–ಸಂಪಾದಕ

ಜನವರಿ–ಮಾರ್ಚ್, ೨೦೧೭

ಹೆಚ್ಚುತ್ತಿರುವ ಮೋದಿ ವರ್ಚಸ್ಸು, ಬುದ್ಧಿ ಕಲಿಯದ ಸಿದ್ಧರಾಮಯ್ಯ

ಪ್ರಿಯ ಓದುಗರೇ,

ರಾಷ್ಟ್ರ ಮಟ್ಟದಲ್ಲಿ ನರೇಂದ್ರ ಮೋದಿಯವರು ಹತ್ತಿರದ ಪ್ರತಿಸ್ಪರ್ಧಿ ಎಂಬುವವರೇ ಇಲ್ಲದೆ ತಮ್ಮ ನಿಜ ಗಾತ್ರಕ್ಕಿಂತ ಬಹುಪಟ್ಟು ಹೆಚ್ಚು ಗಾತ್ರದೊಂದಿಗೆ ರಾಷ್ಟ್ರೀಯ ನಾಯಕರಾಗಿ ಬೆಳೆಯುತ್ತಿದ್ದಾರೆ. ಮಧ್ಯಮ ವರ್ಗದ ಜನರ ಕಣ್ಣಿಗೆ ನಾಯಕತ್ವದ ಅತ್ಯುತ್ತಮ ಮಾನದಂಡವೆನಿಸಿರುವ ಭ್ರಷ್ಟಾಚಾರರಹಿತ ಆಡಳಿತವೇ ಅವರ ನಾಯಕತ್ವದ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡು ಬಂದಿದೆ ಎಂದೂ ಹೇಳಬಹುದು. ಅವರು ಅಧಿಕಾರಕ್ಕೆ ಬಂದುದೇ, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಬೃಹತ್ ಪ್ರಮಾಣದ ಹಲವು ಹಗರಣಗಳನ್ನು ಜನರ ಮುಂದಿರಿಸಿ ತಮ್ಮ ಸರ್ಕಾರ 'ತಿನ್ನುವುದೂ ಇಲ್ಲ, ತಿನ್ನಲು ಬಿಡುವುದೂ ಇಲ್ಲ' ಎಂಬ ಆಶ್ವಾಸನೆಯ ಮೇಲೇ ತಾನೆ? ಈ ಬಿಂಬವನ್ನು ಒಡೆಯಲು ರಾಹುಲ್ ಗಾಂಧಿ ಎಂಬ ಎಳಸು ನಾಯಕ, ಮೋದಿ ಗುಜರಾತ್ ಮುಖ್ಯ ಮಂತ್ರಿಯಾಗಿದ್ದಾಗ ಸಹಾರಾ ಕಂಪನಿಯಿಂದ ಕೋಟ್ಯಾಂತರ ರೂಪಾಯಿಗಳ ಲಂಚ ಪಡೆದಿದ್ದಾರೆಂಬುದನ್ನು ಸೂಚಿಸುವ 'ಸಹಾರಾ ಡೈರಿ ಹಗರಣದ ಬಗ್ಗೆ ಬರೀ ಬಾಯಿ ಮಾತಿನ ಬಾಂಬ್ ಹಾಕಿ ಈಗ ಈ ಹಗರಣ ವಿಚಾರಣೆಗೂ ಅರ್ಹವಲ್ಲವೆಂದು ಸುಪ್ರೀಂ ಕೋರ್ಟ್ ಹೇಳಿರುವುದರಿಂದ ಹಾಸ್ಯಾಸ್ಪದರಾಗಿದ್ದೂ ಮೋದಿಯವರ ವರ್ಚಸ್ಸು ಮತ್ತಷ್ಟು ಹೆಚ್ಚಲು ಕಾರಣವಾಯಿತೆಂದೂ ಹೇಳಬಹುದು.

ಹಾಗಾಗಿಯೇ ಮೋದಿ ಮೊನ್ನೆ ಲೋಕಸಭೆಯಲ್ಲಿ ತಮ್ಮ ನೋಟ್‌ಬಂದಿ ಕಾರ್ಯಕ್ರಮವನ್ನು ಜನರ ಲೂಟಿ, ದರೋಡೆಯೆಂದು ಟೀಕಿಸಿದ್ದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ರನ್ನು 'ಈ ಡಾಕ್ಟರ್ ಸಾಹೇಬರಿಗೆ ರೈನ್‌ಕೋಟ್ ಹಾಕಿಕೊಂಡು ಸ್ನಾನ ಮಾಡುವ ಕಲೆ ಕರಗತವಾಗಿದೆ' ಎಂದು ಕಿಚಾಯಿಸಿದಾಗ ದೇಶದ ಜನರಿರಲಿ,

ಕಾಂಗ್ರೆಸ್ ಹೊರಾತಾಗಿ ಇನ್ನಾವ ವಿರೋಧ ಪಕ್ಷವೂ ಸೊಲ್ಲೆತ್ತಲಿಲ್ಲ. ಹೀಗೆ ಮೋದಿಯವರು ಸವಾಲಿಲ್ಲದ ಸರದಾರನಾಗಿ ದೇಶವನ್ನು ಆಳಲು ಸಾಧ್ಯವಾಗಿದೆ.

ಆದರೆ ಈ ಆಳ್ವಿಕೆ, ಅವರು ಚುನಾವಣೆಗಳಿಗೆ ಮುನ್ನ ಮತ್ತು ಆನಂತರ ಹುಟ್ಟಿಸಿದ್ದ ಯಾವ ನಿರೀಕ್ಷೆಗಳ ಹತ್ತಿರವೂ ಬರದೆ ನೀರಸವಾಗಿ ಸಾಗಿದೆ. ಅವರ ಅಧಿಕಾರದ ಅರ್ಧ ಅವಧಿ ಮುಗಿದರೂ ಅವರು ಬರಲಿರವವು ಎಂದು ಹೇಳಿದ 'ಅಚ್ಛೇ ದಿನ'ಗಳ ಯಾವ ಸುಳಿವೂ ಕಾಣುತ್ತಿಲ್ಲ! ಮೋದಿ ಸರ್ಕಾರ ಈ ಅವಧಿಯಲ್ಲಿ ಮಾಡಿದ ಏಕೈಕ ಸಾಧನೆ ಎಂದರೆ ರಾಷ್ಟ್ರದ ಆಡಳಿತ ವ್ಯವಸ್ಥೆಯ ಸಕಲ ಅಂಗಸಂಸ್ಥೆಗಳನ್ನೂ-ಧರ್ಮ ನಿರಪೇಕ್ಷ ನಾಗರಿಕ ಸಮಾಜದ ನಾಯಕರು ಮತ್ತು ರಾಜಕೀಯ ಪಕ್ಷಗಳ ವಿರೋಧ-ಪ್ರತಿಭಟನೆಗಳ ನಡುವೆಯೂ-ಪಕ್ಷಪಾತೀಯ ನೇಮಕಾತಿಗಳ ಮೂಲಕ ಕೇಸರೀಕರಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿರುವುದು. ಇದೇನೂ ಕಡಿಮೆ ಮಹತ್ವದ ಅಥವಾ ನಿರ್ಣಾಯಕತ್ವದ ಬೆಳವಣಿಗೆಯಲ್ಲ. ದೇಶದ ಮನಸ್ಸನ್ನೇ, ಅದು ಮೋದಿಯವರು ಇಂದು ಆಳುತ್ತಿರುವ ಭಾರತವೆಂಬ ಈ ರಾಷ್ಟ್ರ ನಿರ್ಮಾಣಕ್ಕೆ ಕಾರಣವಾದ ರಾಷ್ಟ್ರೀಯ ಹೋರಾಟ ಕಟ್ಟಿಕೊಟ್ಟಿದ್ದ ಎಲ್ಲ ಉದಾರ ಮತ್ತು ಉದಾತ್ತ ಮೌಲ್ಯಗಳನ್ನೇ ನಾಶ ಮಾಡುವ ಪ್ರಯತ್ನವಿದು. ಬಿಜೆಪಿ ಎಂಬ ಪಕ್ಷ ತನ್ನ ನಿಜ ಸ್ವರೂಪದೊಂದಿಗೆ ಮತ್ತು ನಿಜ ಗುರಿಗಳೊಂದಿಗೆ ಆಡಳಿತ ನಡೆಸಲು, ಅದನ್ನು ನಿರಂತರಗೊಳಿಸಲು ಈ ನೆಲಗಟ್ಟು ಸಿದ್ಧತೆ ಅಗತ್ಯವಾಗಿತ್ತು. ಇನ್ನರ್ಧ ಅಧಿಕಾರಾವಧಿಯಲ್ಲಿ ಮಾಡಬೇಕಾದ್ದು ಇನ್ನೂ ಇದೆಯಾದರೂ.

ಇತಿಹಾಸದ ವ್ಯಂಗ್ಯ ಎಂದರೆ ಇದು. ಮೋದಿಯವರ ಈ ಕೇಸರೀಕರಣ ಕಾರ್ಯಕ್ರಮ ಯಶಸ್ವಿಯಾಗುತ್ತಿರುವುದು ಮನಮೋಹನ ಸಿಂಗ್‌ರ ಅಭಿವೃದ್ಧಿ ಆಡಳಿತದ ಪರೋಕ್ಷ ಫಲವಾಗಿ ಎಂದರೆ ಆಶ್ಚರ್ಯವಾಗಬಹುದು. ಅವರೇ ಅಲ್ಲವೆ, ತಮ್ಮ ಹೊಸ ಸುಖ ಸಂಪತ್ತುಗಳಿಗೆ ಧಕ್ಕೆ ತರಬಹುದೆಂಬ ಆತಂಕದಿಂದ ರಾಜಕೀಯ ಭ್ರಷ್ಟಾಚಾರವನ್ನು ಒಂದು ಅಖಂಡ ನೈತಿಕ ಪ್ರಶ್ನೆಯಾಗಿ ಪರಿವರ್ತಿಸಿಕೊಂಡು, ರಾಷ್ಟ್ರಾಡಳಿತದ ಇನ್ನಾವುದೇ ವಿಷಯದ ಬಗ್ಗೆಯೂ ಸೂಕ್ಷ್ಮತೆ ಬೆಳೆಸಿಕೊಳ್ಳಲಾಗದಷ್ಟು ಸುಖಸ್ಥೂಲತೆಯ ನವ ಮಧ್ಯಮ ವರ್ಗವನ್ನು ಸೃಷ್ಟಿಸಿದ್ದು? ಅವರ ಈ ಮುದ್ದು ಮಧ್ಯಮ ವರ್ಗವೇ ಅಲ್ಲವೇ ಮೋದಿಯವರನ್ನು ಸೃಷ್ಟಿಸಿದ್ದು ಮತ್ತು ಈಗ ಭ್ರಷಾಚಾರವಿಲ್ಲವೆಂಬ ಒಂದೇ ಕಾರಣದಿಂದ ಮೋದಿಯನ್ನು ಆದರ್ಶ ನಾಯಕನೆಂದು ಬಿಂಬಿಸುವ ಸಂಘಟಿತ ಪ್ರಯತ್ನ ಮಾಡುತ್ತಿರುವುದು? ಈ ಸ್ವಾರ್ಥಪರ ನವ ಮಧ್ಯಮ ವರ್ಗಕ್ಕೆ ತನ್ನ ಸಂಬಳ ಸಾರಿಗೆ, ವ್ಯಾಪಾರ, ಉದ್ಯಮ ಇತ್ಯಾದಿಗಳಿಗೆ ಧಕ್ಕೆಯಾಗದಂತೆ ಆಡಳಿತ ನಡೆದರೆ ಸಾಕು, ಅದು ಒಳ್ಳೆಯ ಆಡಳಿತ. ರಾಷ್ಟ್ರ ನಿರ್ಮಾಣವೆಂಬುದು ತಲೆಮಾರುಗಳ ಸಾತತ್ಯವನ್ನೂ, ಸಮುದಾಯಗಳ ಸೌಹಾರ್ದವನ್ನೂ ಸಾಧಿಸುತ್ತಾ, ರಾಷ್ಟ್ರದ ಕಟ್ಟ ಕಡೆಯ ವ್ಯಕ್ತಿಯೂ ತನ್ನದೇ ಘನತೆ-ಗೌರವಗಳಿಂದ ಬಾಳುವಂತೆ ಮಾಡುವಂತಹ ಆದರ್ಶಗಳನ್ನೂ, ಮೌಲ್ಯಗಳನ್ನೂ ಬಿತ್ತಿ ಬೆಳೆಯುವ ಜವಾಬ್ದಾರಿಯುತ ರಾಜಕಾರಣ ಎಂಬ ಅರಿವಿಗೇ ಎರವಾದ ವರ್ಗವಿದು.

ಇದು ನಿಜವಾಗಿಯೂ ಕಾಂಗ್ರೆಸ್ಸಿನ ಸ್ವಯಂಕೃತ ಅಪರಾಧವೇ ಸರಿ. ತಾನು ಗಾಂಧಿ ವಾರಸುದಾರಿಕೆಯ ಪಕ್ಷವೆಂಬ ನೆದರೇ ಇಲ್ಲದೆ ಅದು ಎಂಭತ್ತರ ದಶಕದಲ್ಲಿ ಹಿಡಿದ ರಾಷ್ಟ್ರದ ಅಭಿವೃದ್ಧಿ ಎಂದರೆ ಆರ್ಥಿಕ ಅಭಿವೃದ್ಧಿ ಎಂಬ (ಅಂತಿಮವಾಗಿ, ಮನಮೋಹನ ಸಿಂಗ್‌ರಿಗೆ ರೈನ್‌ಕೋಟ್ ಹಾಕಿಕೊಂಡು ಸ್ನಾನ ಮಾಡುವ ಕಲೆಯನ್ನು ಕರಗತ ಮಾಡಿಸಿದ) ವಿಕ್ಷಿಪ್ತ ಹಾದಿ ಈಗ ಆ ಪಕ್ಷದ ಮೂಲೋತ್ಪಾಟನೆಗೇ ಕಾರಣವಾಗುತ್ತಿರುವಂತಿದೆ. ಅದು ಆತ್ಮಾವಲೋಕನವನ್ನು ಬಾಯುಪಚಾರಕ್ಕೆ ಹೇಳದೆ ಇದು ತನ್ನ ಅಳಿವು ಉಳಿವಿನ ಪ್ರಶ್ನೆಯೆಂದು ಪ್ರಾಮಾಣಿಕ ಪ್ರಯತ್ನ ಮಾಡದಿದ್ದರೆ.

ಇದೆಲ್ಲದರ ಮಧ್ಯೆ ಜನರ ನಿರೀಕ್ಷೆ ಮತ್ತು ತಮ್ಮ ಆಶ್ವಾಸನೆಗಳಿಗೆ ವಿರುದ್ಧವಾದ ಮೋದಿಯವರ ನಿರಾಶಾದಾಯಕ ಆಡಳಿತದ ಬಗ್ಗೆ ಅಸಮಧಾನದ, ಆಕ್ರೋಶದ ದನಿಗಳು ಅಲ್ಲಲ್ಲಿ ಕೇಳಿಬರದೇ ಇಲ್ಲ. ಹಾಗೆ ನೋಡಿದರೆ ಸ್ವತಃ ಮೋದಿಯವರಿಗೆ ತಮ್ಮ ಆಡಳಿತದ ನೀರಸತೆಯ ಬಗ್ಗೆ ಹತಾಶೆಯಾದಂತಿದೆ. ಕಪ್ಪು ಹಣ ವಾಪಸ್ ತರಲಾಗದ, ಉಗ್ರರ ಉಪಟಳವನ್ನು ತಡೆದು ಕಾಶ್ಮೀರದಲ್ಲಿ ಶಾಂತಿ ನೆಲಸುವಂತೆ ಮಾಡಲಾಗದ, ಉದ್ಯೋಗ ನಿರ್ಮಾಣವಿಲ್ಲದ 'ಅಭಿವೃದ್ಧಿ' ನೀತಿಯನ್ನು ರಿಪೇರಿ ಮಾಡಲಾಗದ, ನಕ್ಸಲರ ಪ್ರಭಾವವನ್ನು ತಗ್ಗಿಸಲಾಗದ ತಮ್ಮ ಆಡಳಿತದ ಮಹಾ ವೈಫಲ್ಯವನ್ನು ಮುಚ್ಚಿಕೊಳ್ಳಲೋ ಎಂಬಂತೆ ಅವರು ದಿಢೀರನೆ ಜಾರಿಗೆ ತಂದ 'ನೋಟುಬಂದಿ' ಕಾರ್ಯಕ್ರಮವೇ ಈಗ ಅವರ ರಾಜಕಾರಣದ ಪ್ರಧಾನ ಭಿತ್ತಿಯಾದಂತಿದೆ. ಇದು ತಾವು ಪರಿಹರಿಸಿ ತೋರಿಸುವೆ ಎಂದು ಜನರಿಗೆ ವಾಗ್ದಾನ ಮಾಡಿದ್ದ ಈ ಎಲ್ಲ ಸಮಸ್ಯೆಗಳಿಗೆ ಸಗಟು ಪರಿಹಾರವೆಂಬಂತೆ ಅವರು ಬಿಂಬಿಸುತ್ತಿರುವ ಈ ಕಾರ್ಯಕ್ರಮದ ಯಶಸ್ಸಿನ ಬಗ್ಗೆ ಸ್ವತಃ ಅವರಿಗೇ ವಿಶ್ವಾಸವಿದ್ದಂತಿಲ್ಲ. ಹಾಗಾಗಿಯೇ ಈ ಕಾರ್ಯಕ್ರಮದ ಆರ್ಥಿಕ ಫಲಗಳೇನು ಎಂಬುದರ ಅಂಕಿ ಅಂಶ ರೂಪದ ಮಾಹಿತಿಯನ್ನು ರಿಸರ್ವ್ ಬ್ಯಾಂಕ್ ಆಗಲೀ, ಸರ್ಕಾರವಾಗಲೀ ಇನ್ನೂ ಬಿಡುಗಡೆ ಮಾಡಿಲ್ಲ.

ಯಾವ ಕಪ್ಪು ಹಣವನ್ನು ಪತ್ತೆ ಹಚ್ಚಲು ಈ 'ನೋಟ್‌ಬಂದಿ' ಕಾರ್ಯಕ್ರಮವನ್ನು ಜಾರಿಗೆ ತರಲಾಯಿತೋ ಆ ಕಪ್ಪುಹಣದ ಸ್ವಲ್ಪ ಭಾಗದ ಹೊರತಾಗಿ ಮಿಕ್ಕೆಲ್ಲವೂ ಬಿಳಿಯಾಗಿ ಬ್ಯಾಂಕುಗಳಿಗೆ ವಿವಿಧ ಮೂಲಗಳಿಂದ ಹರಿದು ಬಂದಿದೆ ಎಂಬ ಗುಮಾನಿ ಇದೆ! ಅಷ್ಟೇ ಅಲ್ಲ, ರದ್ದಾದ ಹಳೆ ನೋಟುಗಳ ಬದಲಾಗಿ ಚಲಾವಣೆಗೆ ಬಂದ ಹೊಸ ಮೌಲ್ಯದ ನೋಟುಗಳ ನಕಲಿ ನೋಟುಗಳೂ ಈಗಾಗಲೇ ರಾಷ್ಟ್ರದ ಹಲವು ಕಡೆ ದೊಡ್ಡ ಪ್ರಮಾಣದಲ್ಲಿಯೇ ಚಲಾವಣೆಗೆ ಬಂದಿರುವ ಸುದ್ದಿಗಳು ಬರುತ್ತಿವೆ. ಇದು ಏನನ್ನು ಸೂಚಿಸುತ್ತದೆ? ಮೋದಿ ತಮ್ಮ ಕಟು ನಿಷ್ಠುರ ಸ್ವಚ್ಛ ಆಡಳಿತ ನೀತಿಯ ಎಚ್ಚರಿಕೆಗಳ ಹೊರತಾಗಿಯೂ ಭ್ರಷ್ಟರು ಯಾವುದೇ ಹೆದರಿಕೆ ಇಲ್ಲದೆ ಕಾರ್ಯನಿರತರಾಗಿದ್ದಾರೆ! ನನಗನಿಸುವ ಹಾಗೆ ಇದು ಮೋದಿ ಸರ್ಕಾರದ ನಿರ್ಣಾಯಕ ವೈಫಲ್ಯ. ಇದಕ್ಕೆ ಕಾರಣ, ಮೋದಿಯವರು ಆಡಳಿತ ಸ್ವಚ್ಛತೆಯ ಬಗ್ಗೆ ಮಾತಾಡಿದಾಗ

ಒಬ್ಬೊಬ್ಬರಿಗೆ ಒಂದೊಂದು ಅರ್ಥದಲ್ಲಿ ಕೇಳಿಸುತ್ತಿರುವುದು! ಈ ದಿಸೆಯಲ್ಲಿ ಮೊದಲು ಅವರ ಪಕ್ಷ ಸ್ವಚ್ಛವಾಗಬೇಕಿದೆ, ಎಲ್ಲ ಅರ್ಥಗಳಲ್ಲೂ.

ಈ 'ನೋಟು ಬಂದಿ'ಯಿಂದ ಏನಾಗದಿದ್ದರೂ, ಬಡವ–ಶ್ರೀಮಂತರೆನ್ನದೆ ನಮ್ಮ ಜನರ ನೈತಿಕತೆಯಂತೂ ಬಯಲಾಗಿದೆ. ಎರಡಂಕಿ ದಾಟದ ಠೇವಣಿಗಳ ಲಕ್ಷಾಂತರ ಬ್ಯಾಂಕ್ ಖಾತೆಗಳಲ್ಲಿ ಈಗ ಹಣ ತುಂಬಿ ತುಳುಕುತ್ತಿದೆ! ಈ ದೇಶ ಯಾರ ಮತ್ತು ಯಾವ ಬಡತನದ ನಿವಾರಣೆಗೆ ಹೊರಟಿದೆಯೋ ಎಂದು ಆಶ್ಚರ್ಯವಾಗುತ್ತಿದೆ. ಅಥವಾ ಇದು ಎಲ್ಲ ಸರ್ಕಾರಗಳ ವಿವಿಧ ರೀತಿಗಳ ಬಡತನ ನಿವಾರಣೆಯ ಪ್ರಯತ್ನಗಳಿಗೆ ಜನ ತೋರಿಸಿರುವ ಪ್ರತಿಕ್ರಿಯೆಯೋ ಎಂದು ಯೋಚಿಸುವಂತಾಗುತ್ತದೆ. ಮೋದಿ ದೇಶಕ್ಕೆ ಹೊಸ ದಿಕ್ಕು ತೋರಿಸಿದ್ದಾರೆ ಎಂಬ ಅವರ ಸಮರ್ಥಕರ ಮಾತು ಎಷ್ಟು ಸುಳ್ಳು; ಹಾಗಾಗಿ ಅವರ ಆಡಳಿತ ಜನರಲ್ಲಿ ಯಾವ ಹೊಸ ನಿರೀಕ್ಷೆಯನ್ನೂ ನಿಜವಾಗಿ ಹುಟ್ಟಿಸಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಹೊಸ ಕ್ಯಾಲೆಂಡರ್ ಮೇಲೆ ಚರಕದ ಮುಂದೆ ಗಾಂಧಿ ಜಾಗದಲ್ಲಿ ಮೋದಿ ಕುಳಿತ ಚಿತ್ರ ಹಾಕಿಕೊಂಡು ಸರ್ಕಾರ ಹಾಸ್ಯಾಸ್ಪದತೆಯಲ್ಲಿಯೂ ತನ್ನ ಉನ್ನತ ಸಾಧನೆಯನ್ನು ಮೆರೆದಂತಾಗಿದೆ.

ಆಶ್ಚರ್ಯವೆಂದರೆ, ಈ ನೋಟ್‌ಬಂದಿ ಕಾರ್ಯಕ್ರಮವನ್ನೇ ಮುಂದಿಟ್ಟುಕೊಂಡು ಮೋದಿವರು ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳನ್ನು ಎದುರಿಸಲು ಹೊರಟಂತಿದೆ. ಮುಖ್ಯವಾಗಿ ರಾಷ್ಟ್ರದ ಮುಂದಿನ ವರ್ಷಗಳ ರಾಜಕಾರಣದ ಸೂಚನೆಗಳನ್ನು ನೀಡಬಲ್ಲ ಉತ್ತರ ಪ್ರದೇಶದ ಚುನಾವಣಾ ಫಲಿತಾಂಶಗಳನ್ನು ರಾಜಕೀಯ ವೀಕ್ಷಕರು ಕುತೂಹಲದಿಂದ ಎದುರು ನೋಡುತ್ತಿದ್ದಾರೆ. ಒಂದು ಸಂತೋಷದ ಸಂಗತಿ ಎಂದರೆ. ಪರಮ ಜಾತೀಯತೆಯ, ವಂಶ ಪಾರಂಪರ್ಯತೆಯ ಮತ್ತು ಪುಂಡು ಆಡಳಿತಕ್ಕೆ ಇನ್ನೊಂದು ಹೆಸರಿನಂತಿದ್ದ ಮತ್ತು ಸಮಾಜವಾದ ಎಂಬ ಶಬ್ದಕ್ಕೇ ಕಳಂಕ ತರುವಂತಿದ್ದ ಅಲ್ಲಿನ ರಾಜಕಾರಣದಲ್ಲಿ ಒಂದು ದೊಡ್ಡ ಸ್ಥಿತ್ಯಂತರವಾಗಿ ಮುಲಾಯಂ ಸಿಂಗ್ ಯಾದವ್‌ರ ಯಜಮಾನಿಕೆಯ ವಿರುದ್ಧ ಬಂಡೆದ್ದಿರುವ ಅವರ ಮಗ ಅಖಿಲೇಶ್, ರಾಹುಲ್ ಗಾಂಧಿಯವರ ಜೊತೆ ಸೇರಿ ಮೋದಿಗೆ ನಿಜವಾದ ಸವಾಲು ಎಸೆದಿದ್ದಾರೆ ಎಂಬ ಸುದ್ದಿ ಇದೆ. ಅಖಿಲೇಶರ ಈ ಬಂಡಾಯ ಸ್ವಲ್ಪವಾದರೂ ತಾತ್ವಿಕವಾದದ್ದೋ ಅಥವಾ ಕೇವಲ ವ್ಯಾವಹಾರಿಕವಾದದ್ದೋ ಎಂಬುದನ್ನು ಅವರ ರಾಜಕಾರಣವನ್ನು ಬಲ್ಲ ಅಲ್ಲಿನ ಜನತೆ ತೀರ್ಮಾನಿಸಲಿದೆ. ಈ ಬಂಡಾಯ ಪ್ರಮಾಣಿಕವಾದದ್ದು ಎಂದು ಜನಾದೇಶದ ಮೂಲಕ ತೀರ್ಮಾನವಾದರೆ, ಮೋದಿಯವರು ತಮ್ಮ ರಾಜಕಾರಣದ ಹಾದಿಯನ್ನು ಬದಲಿಸಿಕೊಳ್ಳಲು ಒಂದು ಅವಕಾಶ ಒದಗುತ್ತದೆ. ಹಾಗೇ ರಾಷ್ಟ್ರದ ಜನತೆ ವಿಶ್ವಾದ್ಯಂತ ಸಾಂಕ್ರಾಮಿಕ ರೋಗದಂತೆ ಹಬ್ಬುತ್ತಿರುವ ಬಲಪಂಥೀಯ ಸರ್ವಾಧಿಕಾರಿ ರಾಜಕಾರಣದ ಆತಂಕದಿಂದ ತಾತ್ಕಾಲಿಕವಾಗಿಯಾದರೂ ನಿಟ್ಟುಸಿರು

ಬಿಡುವಂತಾಗುತ್ತದೆ. ಮತ ಎಣಿಕೆಯ ದಿನವಾದ ಮಾರ್ಚ್ ೧೧ಕ್ಕಾಗಿ ರಾಷ್ಟ್ರ ಕುತೂಹಲದಿಂದ ಕಾಯುತ್ತಿದೆ.

ಇನ್ನು ನಮ್ಮ ಸಿದ್ಧರಾಮಯ್ಯನವರ ಸ್ಥಿತಿ ಚಿಂತಾಜನಕವಾಗಿಯೇ ಮುಂದುವರೆದಿದೆ. ಅವರ ಆಪ್ತ ಅಧಿಕಾರಿಗಳು, ಸಚಿವರು, ಶಾಸಕರ ಮನೆಗಳ ಮೇಲೆ ವರಮಾನ ತೆರಿಗೆ ಇಲಾಖೆಯ ನಿರಂತರ ದಾಳಿ ನಡೆದಿದ್ದು ಅವರ ಮನೆಗಳಲ್ಲಿ ಹೊಸ ನೋಟುಗಳ ರೂಪದಲ್ಲಿರುವ ಕೋಟ್ಯಾಂತರ ರೂಪಾಯಿಗಳ ಕಳ್ಳ ಹಣ, ಅಕ್ರಮ ಆಸ್ತಿ ಪತ್ರಗಳು, ಕೇಜಿಗಟ್ಟಲೆ ಚಿನ್ನ ಬೆಳ್ಳಿ ಪತ್ತೆಯಾಗಿ ಅವರು ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಾ ಇದೆಲ್ಲದಕ್ಕೂ ತಮಗೂ ಸಂಬಂಧವಿಲ್ಲ ಎನ್ನುತ್ತಿದ್ದಾರೆ. ರಾಜ್ಯದ ಆಡಳಿತ ಜವಾಬ್ದಾರಿಯನ್ನು ಹೊತ್ತ ಮುಖ್ಯಮಂತ್ರಿಯವರ ಈ ಅಮಾಯಕ ಮಾತನ್ನು ಜನ ಮುಖಬೆಲೆಯಲ್ಲಿ ಸ್ವೀಕರಿಸಲಾರರು. ಬಹುಶಃ ಆ ಅತಂಕದಲ್ಲೇ ಅವರು ವಿರೋಧ ಪಕ್ಷಗಳ–ಮುಖ್ಯವಾಗಿ ಜೆಡಿಎಸ್‌ನೊಂದಿಗೆ–ಮುಂದಿನ ಚುನಾವಣೆಗಳನ್ನೂ ಗಮನದಲ್ಲಿಟ್ಟುಕೊಂಡು ರಾಜಿಯಾಗುವ ಸನ್ನಾಹದ ಭಾಗವಾಗಿಯೇ ೨೦೧೧ರ ಕೆಪಿಎಸ್‌ಸಿ ಹಗರಣವನ್ನು ತೆರೆಯ ಹಿಂದಕ್ಕೆ ಸರಿಸಿ ಹಗರಣದಲ್ಲಿ ಭಾಗಿಯಾದವರೆಂದು ಆಪಾದಿತರಾದ ಅಭ್ಯರ್ಥಿಗಳೂ, ಆಯೋಗದ ಅಧ್ಯಕ್ಷ ಮತ್ತು ಸದಸ್ಯರನ್ನೂ ಕ್ಷಮಿಸಿಬಿಡುವ ತೀರ್ಮಾನ ಕೈಗೊಂಡಂತೆ ಕಾಣುತ್ತದೆ. ಎಂತಹ ದುಷ್ಟ ಜಾತಿ ಸಂಯೋಜನೆಗಳ ರಾಜಕಾರಣ ಮಾಡಿದರೂ, ಈ ಜನದ್ರೋಹವನ್ನು ಜನ ಕ್ಷಮಿಸಲಾರರು.

ಕೆಲವು ಪತ್ರಗಳು

('ಹೊಸ ಮನುಷ್ಯ' ಪತ್ರಿಕೆಯನ್ನು ಸದ್ಯಕ್ಕಾದರೂ ನಿಲ್ಲಿಸುವುದಾಗಿ ಪತ್ರಿಕೆಯ ಜೂನ್ ಸಂಚಿಕೆಯಲ್ಲಿ ಪ್ರಕಟಿಸಿದಾಗ, ಅದಕ್ಕೆ ಪ್ರತಿಕ್ರಿಯೆಯಾಗಿ ಬಂದ ಪತ್ರಗಳಿಂದ ಆಯ್ದ ಭಾಗಗಳಿವು. ಇವು ಪತ್ರಿಕೆಯ ಜುಲೈ ಸಂಚಿಕೆಯಲ್ಲಿ ಪ್ರಕಟವಾಗಿವೆ–ಸಂ.)

ಪ್ರಿಯ ಸಂಪಾದಕರೆ,

ಜೂನ್ ಸಂಚಿಕೆ ಕೈಸೇರಿತು. ಅದರಲ್ಲಿನ ಪತ್ರಿಕೆ ನಿಲ್ಲಿಸುವ ನಿಮ್ಮ ಪ್ರಕಟಣೆ ಮತ್ತು ಅದಕ್ಕೆ ನೀಡಿರುವ ವಿವರಣೆ ಓದಿ ಆಘಾತವಾಯಿತು.

'ಲಂಕೇಶ್ ಪತ್ರಿಕೆ'ಯ ನಂತರ ಹೊಸ ಚಿಂತನೆಗಳಿಗೆ, ಆಲೋಚನೆಗಳಿಗೆ, ಆಯಾಮಗಳಿಗೆ ತೆರೆದುಕೊಂಡಿರುವ 'ಹೊಸ ಮನುಷ್ಯ' ಅದಕ್ಕಿಂತ ಹೆಚ್ಚು ಪ್ರಭಾವಶಾಲಿ, ಬದುಕಿನ ತುಲನಾತ್ಮಕ ನೋಟ ನೀಡುತ್ತಿದ್ದ ರೀತಿಯಲ್ಲಿ ಎಂದು ನನ್ನ ಅನಿಸಿಕೆ. ಯಾವುದೇ ವಿಷಯದ ಬಗೆಗೆ ಅದರ ಎಲ್ಲ ಮಗ್ಗುಲುಗಳನ್ನೂ ಪರಿಶೀಲಿಸುವ ನಿಮ್ಮ ಪತ್ರಿಕೆಯ ರೀತಿ ಅಮೋಘವೆಂದರೆ ಉತ್ಪ್ರೇಕ್ಷೆಯಲ್ಲ. ಹಾಗೆಯೇ ಓದುಗನನ್ನು ಮರುಚಿಂತನೆಗೆ ಹಚ್ಚುವ, ಪುನರ್‌ಮನನ ಮಾಡುವ, ಮನಸ್ಸನ್ನು ನೇರ್ಪುಗೊಳಿಸುವ ಕಲೆ ಮಾಯವಾಗುತ್ತಿದೆಯಲ್ಲಾ ಎನ್ನುವ ಆತಂಕ, ನೋವು ನನ್ನದು. 'ಲಂಕೇಶ್ ಪತ್ರಿಕೆ'ಯನ್ನು ಕಳೆದುಕೊಂಡಿದ್ದ ನೋವನ್ನು ಶಮನಗೊಳಿಸಿದ್ದ 'ಹೊಸ ಮನುಷ್ಯ'ನೂ ವಿದಾಯ ಹೇಳುತ್ತಿರುವ ಸುದ್ದಿ ಸಂಕಟಕಾರಿ.

ನಿಜ, ನೀವು ಪತ್ರಿಕೆ ನಿಲ್ಲಿಸಲು ನೀಡಿರುವ ಕಾರಣಗಳನ್ನು ಪ್ರಶ್ನಿಸುವ ದುಸ್ಸಾಹಸಗಳನ್ನು ನಾನು ಮಾಡಲಾರೆ. ಆದರೆ ನಿಮ್ಮಿಂದ ಬೌದ್ಧಿಕ ಲಾಭ ಪಡೆಯುತ್ತಿರುವ ನಾವು ನಿಮಗೆ ಸೂಕ್ತ ರೀತಿಯಲ್ಲಿ 'ಸಾಥ್' ನೀಡಲಾಗುತ್ತಿಲ್ಲ ಎಂಬ ಒಂದು ಸತ್ಯವನ್ನು ಮುಚ್ಚಿಡಲಾರೆ: ದಯವಿಟ್ಟು ನಿಮ್ಮ ತೀರ್ಮಾನವನ್ನು ಮುಂದೂಡಲಾರಿರಾ?

–ನ್ಯಾ. ಎ.ಜೆ. ಸದಾಶಿವ, ಬೆಂಗಳೂರು

ಯಾವತ್ತೂ ತಿಂಗಳ ಕೊನೆಯಲ್ಲಿ ಸಂತೋಷ ಕೊಡುತ್ತಿದ್ದ 'ಹೊಸ ಮನುಷ್ಯ'ದ ಪ್ರಕಟಣೆ ಸದ್ಯಕ್ಕಂತೂ ಕೊನೆಯಾಗುತ್ತಿದೆ ಎನ್ನುವುದು ನನಗಂತೂ ನಿರಾಶೆಯ ಸುದ್ದಿ. ಆದರೂ. ಈ ನಿರ್ಧಾರದಿಂದ ನಿಮ್ಮ ಸ್ವಂತ ಓದು ಬರೆಹಗಳಿಗೆ ಸಹಾಯವಾಗುತ್ತದೆ ಎಂದಾದರೆ, ನಿಮ್ಮ ಚಿಂತನೆ ಮತ್ತು ಬರೆಹಗಳ ಲಾಭ ಪರೋಕ್ಷವಾಗಿಯಾದರೂ ನಮಗೂ ದೊರಕೀತು. ಕನ್ನಡ ಪತ್ರಿಕೋದ್ಯಮ ಇತಿಹಾಸ ಸಂದರ್ಭದಲ್ಲಿ 'ಹೊಸ ಮನುಷ್ಯ' ಸದಾ ನೆನಪಿನಲ್ಲಿ ಇರುತ್ತದೆ ಎನ್ನುವ ನನ್ನ ಆಶಯವನ್ನು ವ್ಯಕ್ತಪಡಿಸುತ್ತಾ, ಇಂತಹ ಒಂದು ತಾತ್ವಿಕ ಮಹತ್ವ ಹೊಂದಿದ್ದ ಪತ್ರಿಕೆಯನ್ನು ಸತತವಾಗಿ ಐದು ವರ್ಷಗಳ ಕಾಲ ನಡೆಸಿಕೊಂಡು ಬಂದ ನಿಮ್ಮ ಸಾಮರ್ಥ್ಯ ಮತ್ತು ಶ್ರಮಗಳನ್ನು ಅಭಿನಂದಿಸುತ್ತೇನೆ.

–ಡಾ. ಎಚ್.ಎಸ್. ಈಶ್ವರ, ಬೆಂಗಳೂರು

ಪತ್ರಿಕೆ ನಡೆಸುತ್ತಿರುವುದರಿಂದ ಏನಾದರೂ ಉಪಯೋಗವಾಗುತ್ತಿದೆಯೇ ಎಂಬ ಬಗ್ಗೆ ನಿಮಗೆ ಅನುಮಾನ ಬೇಡ. 'ಹೊಸ ಮನುಷ್ಯ'ದಲ್ಲಿ ಈವರೆಗೆ ಬಂದಿರುವ ಅನೇಕ ಪ್ರತಿಭಾವಂತ ಲೇಖಕರ ಶ್ರೇಷ್ಠ ಲೇಖನಗಳು ನನ್ನ ಮನಸ್ಸಿನಲ್ಲಂತೂ ತುಂಬಾ ಉಪಯುಕ್ತವಾದ ಪರಿಣಾಮಗಳನ್ನುಂಟು ಮಾಡಿವೆ. ಪತ್ರಿಕೆ ನಿಂತುಹೋದರೆ ಅದರ ಸಹೃದಯ ಓದುಗರ ಗುಂಪಿನ ಆತ್ಮೀಯ ಸಂಸಾರವೇ ಒಡೆದಂತಾಗುತ್ತದೆ.

–ಡಾ. ಎ.ಎನ್. ನಾಗರಾಜ್, ಭೀಮನಕಟ್ಟೆ (ತೀರ್ಥಹಳ್ಳಿ)

.....ಇವರಿಗೆಲ್ಲ ಸಮಾಜವಾದಿ ಆಂದೋಲನವು ಅವರ ರಾಜಕೀಯ ಏಳಿಗೆಗೆ ಮೆಟ್ಟಿಲಾಗಿತ್ತಲ್ಲವೆ? ಇಂಥವರೆಲ್ಲಾ ತಮ್ಮನ್ನು ಏರಿಸಿಟ್ಟ ಏಣಿಯನ್ನೇ ತೊಡೆದು ಬಿಟ್ಟಿದ್ದಾರಲ್ಲ? ಈ ಹಳೆಯ ನೆನಪುಗಳು ನಮಗೆಲ್ಲ ನೋವು ಮಾಡುವಂಥವು.

ಇಂತಹ ವಾತಾವರಣದಲ್ಲೇ ಶ್ರೀ ಡಿ.ಎಸ್.ನಾಗಭೂಷಣ ಸಮಾಜವಾದಿ ಮಾಸಿಕವನ್ನು ಹುಟ್ಟುಹಾಕಿ ನಾಡಿನ ಎಲ್ಲೆಡೆಯ ಸಮಾಜವಾದಿಗಳಿಗೆ 'ನಾವಿದ್ದೇವೆ, ನಾವಿದ್ದೇವೆ' ಎಂದು ಹೇಳುವಂತೆ ಮಾಡಿದ್ದರು. ಸಮಾಜವಾದಿಗಳ ಧ್ವನಿ ಹೊಸ ಮನುಷ್ಯನ ಮೂಲಕ ನಿರಂತರವಾಗಿ ಮೊಳಗುತ್ತಿರಲಿ ಎಂದು ಆಶಿಸುತ್ತಿದ್ದ ನಮಗೆಲ್ಲ ಅದರ ಹಠಾತ್ ನಿಲುಗಡೆಯಿಂದ ದುಃಖವಾಗಿದೆ. ನನ್ನ ಮೂಲಕ ಪತ್ರಿಕೆಯ ಚಂದಾದಾರರಾಗಿದ್ದ ಗೆಳೆಯರು ಮಾಸಿಕದ ಜುಲೈ ಸಂಚಿಕೆಯನ್ನು ಓದಿ ತಮಗುಂಟಾದ ಆಘಾತವನ್ನು ಫೋನಾಯಿಸಿ ಹೇಳಿದರು. ಅವರೆಲ್ಲರ ಧ್ವನಿ 'ಇಂಥ ಒಂದು ಪತ್ರಿಕೆ ಬೇಕಾಗಿತ್ತು; ಯಾರಾದರೂ ಮುಂದುವರೆಸಬಹುದೆ?' ಎಂಬಂತೆ ಇತ್ತು.

–ಅಮ್ಮೆಂಬಳ ಆನಂದ, ಮಣಿಪಾಲ

ನಮ್ಮೊಳಗನ್ನು ಎಚ್ಚರವಾಗಿಟ್ಟುಕೊಳ್ಳಲು, ಹಾದಿ ತಪ್ಪದಂತೆ ನಮ್ಮನ್ನು ನಾವು ಕಾಯ್ದುಕೊಳ್ಳಲು, ಹಾದಿ ತಪ್ಪಿದ ನಮ್ಮವರನ್ನು ತಿವಿದೆಚ್ಚರಿಸಲು 'ಹೊಸ ಮನುಷ್ಯ'ದಂತ ಪ್ರಯತ್ನ ಜಾರಿಯಲ್ಲಿರಬೇಕಿತ್ತು. ಈಗಿನ ರೂಪದಲಲ್ಲದಿದ್ದರೂ, ಯಾವುದಾದರೊಂದು ಬಗೆಯಲ್ಲಿ ನಿರಂತರವಾಗಿ ಈ ಎಚ್ಚರದ ನಡೆ–ನುಡಿಗಳು ಮೊಳಗುತ್ತಿರಲಿ. ವಿವೇಕ ಅರಳುತ್ತಿರಲಿ ಎನ್ನುವುದು ನನ್ನ ಕೋರಿಕೆ.

–ಎನ್. ಆರ್. ಸ್ನೇಹಾ, ಮೈಸೂರು

ಪತ್ರಿಕೆ ನಿಲ್ಲಿಸುವ ಸುದ್ದಿ ವೈಯಕ್ತಿಕವಾಗಿ ಬೇಸರದ ವಿಷಯವಾದರೂ ಇದಕ್ಕೆ ನೀವು ನೀಡಿರುವ ಕಾರಣಗಳು ಸರಿಯಾಗಿವೇ ಇವೆ. ಹತ್ತು ವರ್ಷಗಳ ಕಾಲ ನೀರಿನ ಕುರಿತಾದ ತ್ರೈಮಾಸಿಕ ಪ್ರಕಟಿಸಿ ಅನುಭವವಿರುವ ನಾನು ಆ ಕಷ್ಟಗಳನ್ನು ಅರ್ಥ ಮಾಡಿಕೊಳ್ಳಬಲ್ಲೆ. ವಿಶ್ರಾಂತ ಬದುಕಿನ ಹಂತದಲ್ಲಿರುವ ನಿಮಗೆ ಇದು ತ್ರಾಸದಾಯಕವೇ. ಆದರೆ ನೀವು ಪತ್ರಿಕೆ ಮೂಲಕ ನೀಡುತ್ತಿದ್ದ ಅದ್ಭುತ ಒಳನೋಟಗಳನ್ನು 'ಮಿಸ್' ಮಾಡಿಕೊಳ್ಳುತ್ತೇನೆ. ನಿಮ್ಮ ಸಂಪಾದಕೀಯ, ಟಿಪ್ಪಣಿಗಳು, ಸಮಕಾಲೀನ ವಿಚಾರಗಳ ಚರ್ಚಾ ರೂಪದ ಲೇಖನಗಳು ಸದಾ ಹೊಸತನದಿಂದ ಕೂಡಿರುತ್ತಿದ್ದವು.

–ಮಲ್ಲಿಕಾರ್ಜುನ ಹೊಸಪಾಳ್ಯ, ತುಮಕೂರು

'ಹೊಸ ಮನುಷ್ಯ' ನಿಲ್ಲಿಸಬೇಕಾದ ಅನಿವಾರ್ಯತೆ ದುಗುಡ ತರಿಸಿತು. ನಿಮ್ಮ ಹೊರೆಯನ್ನು ತಮ್ಮ ತಮ್ಮ ಮಿತಿಯಲ್ಲಿ ಕನ್ನಡದ ಲೇಖಕರು ಕಡಿಮೆ ಮಾಡಬಲ್ಲರಾದರೆ 'ಹೊಸ ಮನುಷ್ಯ' ಚೈತನ್ಯ ಪಡೆದು ಮುಂದುವರೆಯಬಹುದು. ಇಷ್ಟು ಸಮಯ ಪತ್ರಿಕೆ ನಮ್ಮ ಸಣ್ಣಪುಟ್ಟ ತಕರಾರುಗಳೊಂದಿಗೇ, ನಮ್ಮನ್ನು ನಿರಂತರ ಆತ್ಮವಿಮರ್ಶೆಗೆ, ಚಿಂತನೆಗೆ ಹಚ್ಚಿತ್ತು ಎನ್ನುವುದನ್ನು ಮರೆಯಲಾಗದು.

–ಸರ್ಜಾಶಂಕರ ಹರಳೀಮಠ, ಶಿವಮೊಗ್ಗ

ಏನಪ್ಪಾ ಇದು ಬಾಂಬ್! ಪ್ರತಿ ತಿಂಗಳೂ ನಿಮ್ಮ ವಿವೇಕಪೂರ್ಣವಾದ ಸಂಪಾದಕೀಯ ಓದುವುದೇ ಒಂದು ಆನಂದ. ಇತ್ತೀಚಿನ ದಿನಗಳಲ್ಲಿ ಇಂತಹ ಮನೋಭಾವ ಮತ್ತು ಬರವಣಿಗೆ ಅಪರೂಪ. ಪತ್ರಿಕೆಯನ್ನು ತ್ರೈಮಾಸಿಕವಾಗಿಯಾದರೂ ತರಬಹುದೇ ಯೋಚಿಸಿ. ನಿಲ್ಲಿಸಿಬಿಡುವುದು ಒಳ್ಳೆಯದಲ್ಲ.

–ಡಾ. ಡಿ.ಬಿ. ರಾಮಚಂದ್ರಾಚಾರ್, ಮೈಸೂರು

ಪತ್ರಿಕೆ ನಿಲ್ಲಿಸುವ ನಿಮ್ಮ ನಿರ್ಧಾರ ವಿಷಾದನೀಯ. ನಿಮ್ಮ ನಿರ್ಧಾರಕ್ಕೆ ನೀವು ಕೊಟ್ಟಿರುವ ಮೊದಲೆರಡು ಕಾರಣಗಳು ಒಪ್ಪತಕ್ಕವೇ. ಆದರೆ ಈ ಪತ್ರಿಕೆಯ ಓದುಗನಾಗಿ ನನಗೆ ಖಂಡಿತ ಲಾಭವಾಗಿದೆ. ಸಮಕಾಲೀನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಗುಹೋಗುಗಳ ಬಗ್ಗೆ ಈ ಪತ್ರಿಕೆ ಇತರ ಪ್ರಕಟಣೆಗಳಿಗಿಂತ ಭಿನ್ನವಾದ ನೋಟಗಳನ್ನು ಒದಗಿಸುತ್ತಾ ಬಂದಿದೆ. ನಿಮ್ಮ ವಿಚಾರ ವಿಶ್ಲೇಷಣೆಗಳಲ್ಲಿ ಹಾಸುಹೊಕ್ಕಾಗಿರುವ ನವಿರಾದ ಹಾಸ್ಯ, ವ್ಯಂಗ್ಯ, ಸ್ವವಿಮರ್ಶೆಯನ್ನು ಇತರ ಭಯಂಕರ ವಿಚಾರವಾದಿಗಳ ಬರಹಗಳಲ್ಲಿ ಕಂಡಿಲ್ಲ. ಮುಂದಿನ ನಿಮ್ಮ ಲೇಖನ–ಪುಸ್ತಕಗಳಲ್ಲಿ ನಿಮ್ಮ ಇಂತಹ ವಿಚಾರಗಳನ್ನು ಓದುವ ಅವಕಾಶಗಳು ನಮಗೆ ಸಿಗಲಿ ಎಂದು ಹಾರೈಸುತ್ತೇನೆ.

–ಗಿರೀಶ್ ವಿ. ವಾಘ್, ಬೆಂಗಳೂರು

ವಿಪರೀತ ಪರಿಸ್ಥಿತಿಯಲ್ಲಿ ನಿಮ್ಮ ಅಕ್ಕಪಕ್ಕದವರಿಗೆ ಆಮ್ಲಜನಕದ ಕವಚ ತೊಡಿಸುವ ಮುನ್ನ ನೀವು ಹಾಕಿಕೊಳ್ಳಿ ಎಂದು ವಿಮಾನದಲ್ಲಿ ಹೇಳುತ್ತಾರೆ. ನಿಮ್ಮ ನಿರ್ಧಾರ ಸರಿಯಾಗಿದೆ. ಈವರೆಗೆ ಪತ್ರಿಕೆಯನ್ನು ಕಾಪಾಡಿಕೊಂಡು ಬಂದುದಕ್ಕಾಗಿ ನಿಮಗೆ ಅಭಿನಂದನೆಗಳು.

–ಜಯಂತ ಕಾಯ್ಕಿಣಿ, ಬೆಂಗಳೂರು

ನಿಮ್ಮ ಕಷ್ಟ ಅರ್ಥವಾಗುತ್ತದೆ. ಆದರೆ ಪತ್ರಿಕೆ ಇಂದಿನ ಸಂದರ್ಭದ ಒಂದು ಕೊರತೆಯನ್ನು ತುಂಬಿದೆ. ಹಾಗೂ ಅದರ ಅವಶ್ಯಕತೆ ಈಗ ಇದೆ.

ಯೋಚಿಸಿ. ಯಾವುದೇ ಸಹಾಯಕ್ಕೂ ನಮ್ಮ ಮಿತಿಯಲ್ಲಿ ತಯಾರು.

–ಟಿ.ಎಸ್. ವೇಣುಗೋಪಾಲ್, ಮೈಸೂರು

ಆಘಾತಕರ ಸುದ್ದಿ ನೀಡಿದ್ದೀರಿ. ಇಲ್ಲ, ನಿಮಗೆ ಅಪಾರ ಶಕ್ತಿ ಇದೆ, ನಡೆಸಬಹುದು. ಯೋಚಿಸಿ. ಆರೋಗ್ಯದ ಕಡೆಯೂ ಗಮನವಿರಲಿ.

–**ಪ್ರೊ. ಜಿ.ಕೆ. ಗೋವಿಂದರಾವ್**, ಬೆಂಗಳೂರು

ಪತ್ರಿಕೆ ನಿಲ್ಲಿಸುವ ಬಗ್ಗೆ ಓದಿ ಬಹಳ ಬೇಸರವಾಯ್ತು. ಅದಕ್ಕೆ ನಿಮ್ಮ ಆರೋಗ್ಯವೇ ಕಾರಣವಾದರೆ, ನೀವು ತೆಗೆದುಕೊಂಡ ನಿರ್ಧಾರ ಸರಿಯಾಗಿಯೇ ಇದೆ.

–**ವೈದೇಹಿ**, ಮಣಿಪಾಲ

ಪತ್ರಿಕೆಯನ್ನು ನಿಲ್ಲಿಸುವುದು ಬೇಡ. ನಿಮ್ಮ ಸಂಪಾದಕೀಯ ಬರಹಗಳು ಇಂದಿಗೆ ಅಗತ್ಯವಾಗಿವೆ. ನಿಮ್ಮ ಸಂಪಾದಕತ್ವದಲ್ಲಿ ಬೇರೆಯವರು ಇತರೆಲ್ಲ ಕೆಲಸಗಳನ್ನು ನೋಡಿಕೊಳ್ಳುವ ವ್ಯವಸ್ಥೆ ಸಾಧ್ಯವೇ ನೋಡಿ.

–**ಲಕ್ಷ್ಮೀಶ ತೋಳ್ಪಾಡಿ**, ಶಾಂತಿಗೋಡು(ಪುತ್ತೂರು)

ಪ್ರತಿ ವರ್ಷ ಇನ್ನೂರು ಚಂದಾದಾರರನ್ನು ಮಾಡಿಸಿಕೊಡುವುದು ನನ್ನ ಜವಾಬ್ದಾರಿ. ದಯವಿಟ್ಟು ಪತ್ರಿಕೆ ನಿಲ್ಲಿಸಬೇಡಿ. ಇಂತಹ ಪತ್ರಿಕೆ ಇಂದು ಅತ್ಯವಶ್ಯ.

–**ಪ್ರೊ. ಜಿ.ಬಿ. ಶಿವರಾಜು**, ಬೆಂಗಳೂರು

ಪತ್ರಿಕೆ ನಿಲ್ಲಿಸುವ ಪ್ರಕಟಣೆ ಕಂಡು ದುಃಖವಾಯಿತು. ಇದೊಂದು ಕೆಟ್ಟ ಸುದ್ದಿ. ನನ್ನ ಜೀವನದಲ್ಲಿ ಇಂತಹ ಸುದ್ದಿಗಳನ್ನೇ ಕಾಣಬೇಕಿದೆ. ಏಕೆ ಹೀಗೆ?

–**ಡಾ. ವಿಜಯಾ**, ಬೆಂಗಳೂರು

ಪತ್ರಿಕೆ ನಿಲ್ಲಿಸುವ ಕುರಿತು ಬರೆದಿದ್ದೀರಿ. ಓದಿ ಅನಾಥ ಭಾವ ಮೂಡಿತು.... ನಿಮ್ಮ ಸಂಪಾದಕೀಯಗಳನ್ನು ಓದಿ ಹೀಗೂ ಯೋಚಿಸಬಹುದು ಎಂದು ಕಲಿತಿದ್ದೇನೆ. ದಯವಿಟ್ಟು ಪತ್ರಿಕೆ ನಿಲ್ಲಿಸಬೇಡಿ ಸರ್.

–**ಸುಜಾತಾ ತಳವಾರ್**, ಹಾಸನ

ಕಳೆದ ಐದು ವರ್ಷಗಳಿಂದ ಒಂದು ತಿಂಗಳೂ ತಪ್ಪದೆ ತಿಂಗಳ ಕೊನೆಯ ದಿನ ನಮ್ಮನ್ನು ತಲುಪುತ್ತಿದ್ದ ಪತ್ರಿಕೆ ಇನ್ನು ಬರುವುದಿಲ್ಲ ಎಂಬುದು ಬೇಸರದ ಸಂಗತಿ. ಆದರೆ ನಮಗೆ ನಿಮ್ಮ ಆರೋಗ್ಯವೂ ಮುಖ್ಯವಾದುದರಿಂದ ಈ ಬೇಸರವನ್ನು ನುಂಗಿಕೊಳ್ಳಬೇಕಿದೆ.

–**ಶ್ರೀದೇವಿ ಶಾಮಣ್ಣ**, ಭಗವತಿಕೆರೆ

ನನ್ನ ನೆಚ್ಚಿನ ಪತ್ರಿಕೆ ನಿಲ್ಲುತ್ತಿರುವುದು ದುಃಖದ ಸಂಗತಿ. ಆದರೆ ನಮಗೆ ನಿಮ್ಮ ಆರೋಗ್ಯವೂ ಮುಖ್ಯ. ಆದರೂ ಯೋಚಿಸಿ ನಿರ್ಧಾರ ಕೈಗೊಳ್ಳಿ.

–**ಎಚ್.ಎಸ್. ರಾಮನಗೌಡ**, ಕೊಂಡಿಕೊಪ್ಪ (ನವಲಗುಂದ)

ಪತ್ರಿಕೆ ನಿಲ್ಲಿಸುವ ಸುದ್ದಿ ನನ್ನ ಪಾಲಿಗೆ ಕೆಟ್ಟ ಸುದ್ದಿ. ಇದೊಂದು ಕನ್ನಡದ ಅಮೂಲ್ಯ ಪತ್ರಿಕೆ. ನೀವು ಈ ನಿರ್ಧಾರ ಕೈಗೊಳ್ಳಬಾರದಿತ್ತು. ಮತ್ತೆ ಯೋಚಿಸಿ.

–ಆರ್. ನರಸಿಂಹಮೂರ್ತಿ, ಮಂಗಳೂರು

ಇನ್ನು ಚಂದಾ ಕಳಿಸ ಬೇಡಿ ಎಂಬ ನಿಮ್ಮ ವಿನಂತಿ ಕಂಡು ಬೇಸರವಾಯಿತು. 'ಹೊಸ ಮನುಷ್ಯ' ಸೀಮಿತ ಓದುಗವರ್ಗವನ್ನು ಹೊಂದಿದ್ದರೂ ತನ್ನ ಮಿತಿಯಲ್ಲಿಯೇ ಓದುಗರನ್ನು ನಿರಂತರ ಎಚ್ಚರದಲ್ಲಿರಿಸಿದೆ. ನಿಮ್ಮ ಶ್ರಮ ವ್ಯರ್ಥವಾಗುತ್ತಿಲ್ಲ ಎಂಬುದು ನನ್ನ ಖಚಿತ ಅಭಿಪ್ರಾಯ. ದಯವಿಟ್ಟು ಪತ್ರಿಕೆಯನ್ನು ನಿಲ್ಲಿಸದಿರಿ.

–ರೋಹಿತ್, ಕೆ., ಆಲೂರು

ದಯವಿಟ್ಟು ಪತ್ರಿಕೆ ನಿಲ್ಲಿಸಬೇಡಿ. ಪ್ರತಿ ತಿಂಗಳ ಕೊನೆಯ ದಿನ ಪತ್ರಿಕೆಗಾಗಿ ಕುತೂಹಲದಿಂದ ಕಾಯುತ್ತಿದ್ದ ನಾನು ಪತ್ರಿಕೆ ಓದಿ ಪುಳಕಿತನಾಗುತ್ತಿದ್ದೆ. ಇತ್ತೀಚಿನ ದಿನಗಳಲ್ಲಿ ನಮ್ಮಂತವರ ಆಲೋಚನಾ ಕ್ರಮವನ್ನು ರೂಪಿಸುತ್ತಿದ್ದ 'ಹೊಸ ಮನುಷ್ಯ' ಯಾವುದೇ ಕಾರಣಕ್ಕೆ ನಿಲ್ಲಬಾರದು.

–ಜಿ.ಸಿ. ಜಗದೀಶ್, ಮಾಚೇನಹಳ್ಳಿ

ಜೂನ್ ಸಂಚಿಕೆಯಲ್ಲಿನ ಬರ ಕುರಿತ ನಿಮ್ಮ ಮತ್ತು ಇತರರ ಲೇಖನಗಳು ಮನನೀಯವಾಗಿದ್ದು, ಇದರ ಮಧ್ಯೆ ನೀವು ಪತ್ರಿಕೆ ನಿಲ್ಲಿಸುವ ಪ್ರಕಟಣೆ ಓದಿ ನಿರಾಶೆಯಾಯಿತು. ಇನ್ನೊಮ್ಮೆ ಯೋಚಿಸಿ ಸರ್.

–ಬಿ.ಶಿವಕುಮಾರ್, ಹಾಸನ

ಬಾಂಬ್ ಹಾಕೇ ಬಿಟ್ಟಿದ್ದೀರಲ್ಲಾ! ನಿಮ್ಮ ಆರೋಗ್ಯಾನುಸಾರ ಪತ್ರಿಕೆಯನ್ನು ತ್ರೈಮಾಸಿಕವಾಗಿ ಅಥವಾ ಕನಿಷ್ಠ ವಾರ್ಷಿಕ ಸಂಪುಟವಾಗಿಯಾದರೂ ಹೊರತನ್ನಿ.

–ಸಿ.ಯು. ಬೆಳ್ಳಕ್ಕಿ, ಧಾರವಾಡ

ನಾನಿನ್ನೂ ನಿಮ್ಮ ಪತ್ರಿಕೆಯ ಸರಿಯಾದ ಓದುಗಳೇ ಆಗಿಲ್ಲ. ಆಗಲೇ ನೀವು ಪತ್ರಿಕೆ ನಿಲ್ಲಿಸಹೊರಟಿರುವುದು ಬೇಸರ ತರಿಸಿತು. ನೀವಂದುಕೊಂಡಂತೆ ಪತ್ರಿಕೆಗೆ ಆಸಕ್ತ ಓದುಗರಿಲ್ಲ ಎಂಬುದು ನಿಜವಲ್ಲ. ನಮ್ಮಂತಹ ಆಸಕ್ತ ಓದುಗರು ಪತ್ರ ಬರೆಯುವಷ್ಟು ಪ್ರಾಜ್ಞರಲ್ಲ, ಅಷ್ಟೇ.. ದಯವಿಟ್ಟು ಇನ್ನೊಮ್ಮೆ ಯೋಚಿಸಿ.

–ಪೂರ್ಣಿಮಾ, ಲಿಂಗದಹಳ್ಳಿ

ಪತ್ರಿಕೆ ನಿಲ್ಲಿಸುವುದು ನಿಮ್ಮ ಅಂತಿಮ ನಿರ್ಧಾರವಲ್ಲವೆಂದು ಭಾವಿಸುತ್ತೇನೆ. ನಿಮ್ಮ ಸಂಪಾದಕೀಯ ಟಿಪ್ಪಣಿಗಳು ನಮಗೆ ತಿಳುವಳಿಕೆಯ ಹೊಸ ದಾರಿ ತೆರೆಯುತ್ತಿದ್ದವು.

–ಜ.ನಾ. ತೇಜಶ್ರೀ, ಹಾಸನ

ನನಗೆ ನಿಮ್ಮ ಪತ್ರಿಕೆಯಲ್ಲಿ ತುಂಬ ಇಷ್ಟವಾದದ್ದು ನಿಮ್ಮ ವಿಮರ್ಶಾತ್ಮಕವಾದ ಪ್ರಬುದ್ಧ ಸಂಪಾದಕೀಯಗಳು. ಒಂದು ಪತ್ರಿಕೆಯನ್ನು ನಿರ್ದಿಷ್ಟ ಉದ್ದೇಶದಿಂದ ಹೇಗೆ ಚೆನ್ನಾಗಿ ಪ್ರಕಟಿಸಬಹುದು ಎಂಬುದಕ್ಕೆ ಈ ಪತ್ರಿಕೆ ಒಳ್ಳೆಯ ಮಾದರಿಯಾಗಿದೆ. ಪುಟಗಳನ್ನು ಅನಗತ್ಯವಾಗಿ ವ್ಯರ್ಥಮಾಡದೆ ಸಾರ್ಥಕವಾಗಿ ಬಳಸಿಕೊಂಡಿದ್ದೀರಿ. ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳ ಬಗ್ಗೆ ವೈಚಾರಿಕ ಭಿನ್ನಾಭಿಪ್ರಾಯಗಳಿರಲು ಸಾಧ್ಯ. ನನಗೂ ಕೆಲವು ಭಿನ್ನಾಭಿಪ್ರಾಯಗಳಿವೆ. ಅವುಗಳ ಬಗ್ಗೆ ಚರ್ಚಿಸಬಹುದು. ಒಂದು ಪತ್ರಿಕೆಯನ್ನು ನಿರಂತರವಾಗಿ, ಸಕಾಲದಲ್ಲಿ ಪ್ರಕಟಿಸುವುದು ಕಷ್ಟದ ಕೆಲಸ. ಆದರೂ ಕಳೆದ ಐದು ವರ್ಷಗಳಿಂದ ಪತ್ರಿಕೆ ಪ್ರಕಟಿಸಿರುವುದು ಒಂದು ಸಾಧನೆ. ಯಾರ ಪ್ರಲೋಭನೆಗೂ ಒಳಗಾಗದೆ, ಒತ್ತಡದ ಕಾರಣದಿಂದ ರಾಜಿ ಮಾಡಿಕೊಳ್ಳದೆ ದಿಟ್ಟತನದಿಂದ ಕಾರ್ಯನಿರ್ವಹಿಸಿದ್ದೀರಿ. ಇದಕ್ಕಾಗಿ ನಿಮಗೆ, ಹಾಗೂ ನಿಮ್ಮ ಪತ್ರಿಕಾ ಬಳಗದ ಎಲ್ಲರಿಗೂ ನನ್ನ ಹಾರ್ದಿಕ ಅಭಿನಂದನೆಗಳು.

–ಡಾ. ತೀ.ನಂ. ಶಂಕರನಾರಾಯಣ, ಶಿವಮೊಗ್ಗ

ಪತ್ರಿಕೆ ನಿಲ್ಲುತ್ತಿರುವದು ಬೇಸರದ ಸಂಗತಿ. ದ್ವೈಮಾಸಿಕವಾಗಿ ಬಂದಿದ್ದರೂ ಆಗುತ್ತಿತ್ತು. ಹೊಸ ಓದುವ ವರ್ಗ ಬೆಳೆಯುತ್ತಿಲ್ಲ. ಓದದೇ ಯುವ ಪೀಳಿಗೆಗೆ ಸಮಾಜವಾದ ಅಥವಾ ಇತರೆ ತಾಕಲಾಟಗಳು ಅರ್ಥವಾಗುವದಿಲ್ಲ. ನಮ್ಮ ತಲೆಮಾರು ಜಡಗೊಂಡು ಸಿನಿಕ್ ಆಗಿದೆ. ನೀವು ಸಾಕಷ್ಟು ಶ್ರಮಿಸಿದ್ದೀರಿ. ಪತ್ರಿಕೆ ಬಿತ್ತಿದ ವಿಚಾರಗಳು ಓದುಗರಲ್ಲಿ ಉಳಿದೇ ಉಳಿಯುತ್ತವೆ.

–ವೆಂಕಟೇಶ ಮಾಚಕನೂರ, ಧಾರವಾಡ

ನೀವು ಪತ್ರಿಕೆ ನಿಲ್ಲಿಸುವ ನಿರ್ಧಾರ ಕೈಗೊಳ್ಳುವುದು ಬೇಡ. 'ಹೊಸ ಮನುಷ್ಯ' ಇಂದಿನ ಸಂದರ್ಭಕ್ಕೆ ತೀರಾ ಅಗತ್ಯ.. ನಿಮಗೆ ನೆರವಾಗುವಂತಹ ವ್ಯವಸ್ಥೆಯ ಬಗ್ಗೆ ಚರ್ಚಿಸಲು ನಾನು ನನ್ನ ಕೆಲ ಗೆಳೆಯರೊಂದಿಗೆ ನಿಮ್ಮಲ್ಲಿಗೆ ಬರಬಯಸುತ್ತೇನೆ.

–ಪ್ರೊ. ಎಂ.ಜಿ. ಚಂದ್ರಶೇಖರಯ್ಯ, ದೊಡ್ಡಬಳ್ಳಾಪುರ

ಯಾವುದೇ ಕಾರಣಕ್ಕೂ ಇಂತಹ ಪತ್ರಿಕೆ ನಿಲ್ಲಬಾರದು. ನಮಗೆ ಬೇಸರವಾಗಿದೆ. ಗೆಳೆಯರೊಂದಿಗೆ ಮಾತಾಡುವೆ. ಅಂತಿಮ ತೀರ್ಮಾನ ಸದ್ಯಕ್ಕೆ ಬೇಡ ಸರ್.

–ಬಸವರಾಜ ಕುಂಬಾರ, ಬಾಗಲಕೋಟೆ

ಇದೇ ಲೇಖಕರ ಇತರ ಕೃತಿಗಳು

ಗಮನ (ಸಾಹಿತ್ಯ ವಿಮರ್ಶೆ–ವಿಚಾರ)
ಅನೇಕ (ಸಾಹಿತ್ಯ ವಿಮರ್ಶೆ–ವಿಚಾರ)
ಈ ಭೂಮಿಯಿಂದ ಆ ಆಕಾಶದವರೆಗೆ (ಸಾಹಿತ್ಯ ವಿಮರ್ಶೆ–ವಿಚಾರ)
ರೂಪರೂಪಗಳನು ದಾಟಿ (ಈವರೆಗಿನ ಸಾಹಿತ್ಯ ವಿಮರ್ಶೆಗಳ ಸಂಗ್ರಹ)
ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ವ್ಯಕ್ತಿ ಹಾಗೂ ಸಾಹಿತ್ಯ ಪರಿಚಯ)
ಸಮತೆಯ ಸಾಕಾರಮೂರ್ತಿ ರಮಣ ಮಹರ್ಷಿ (ಶ್ರೀರಮಣ ದರ್ಶಿಕೆ)
ಲೋಹಿಯಾ ಸಮಾಜವಾದ ದರ್ಶನ (ಸಮಾಜವಾದ ಪರಿಚಯ, ವಿಶ್ಲೇಷಣೆ)
ಮರಳಿ ಬರಲಿದೆ ಸಮಾಜವಾದ! (ಸಮಾಜವಾದಿ ವಿಚಾರ ವೈವಿಧ್ಯ)
ಬೇರು ಬಿಳಲು (ಸಮಾಜವಾದಿ ಸಂಕಥನಗಳು–೧)
ಇದು ಭಾರತ! ಇದು ಭಾರತ!! (ಸಮಾಜವಾದಿ ಸಂಕಥನಗಳು–೨)
ವಸಿಷ್ಠರು ಮತ್ತು ವಾಲ್ಮೀಕಿಯರು (ಸಮಾಜವಾದಿ ಸಂಕಥನಗಳು–೩)
ಇಲ್ಲಿ ಯಾವುದೂ ಅಮುಖ್ಯವಲ್ಲ (ಸಮಾಜವಾದಿ ಸಂಕಥನಗಳು–೪)
ಕಂಡದ್ದು ಕಾಡಿದ್ದು (ಸಮಾಜವಾದಿ ಸಂಕಥನಗಳು–೫)
ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು (ಆಯ್ದ ಸಮಾಜವಾದಿ ಬರಹಗಳು)
ಕನ್ನಡ ಮನಸ್ಸು ಮತ್ತು ಇತರ ಲೇಖನಗಳು (ಸಂಕೀರ್ಣ)
ಲೋಹಿಯಾ ಜೊತೆಯಲ್ಲಿ (ಲೋಹಿಯಾ–ಗಾಂಧಿ–ಅಂಬೇಡ್ಕರ್–ಮಾರ್ಕ್ಸ್ ಚಿಂತನೆಗಳು)
ಕನ್ನಡ–ಕರ್ನಾಟಕ: ಸಂಕಥನಗಳು (ಕನ್ನಡ ನಾಡು ನುಡಿ ಚಿಂತನೆಗಳು)
ರೈತ ಭಾರತ: ಅವಸಾನದ ಅಂಚಿನಲ್ಲಿ (ರೈತರ ಆತ್ಮಹತ್ಯೆ ವಿಶ್ಲೇಷಣೆ)
ಒಂದನೇ ತರಗತಿಯಿಂದ ಇಂಗ್ಲಿಷ್ ಏಕೆ ಬೇಡ? (ಭಾಷಾ ನೀತಿ ಜಿಜ್ಞಾಸೆ)
ಲೋಹಿಯಾ ಕೈಪಿಡಿ
ಲೋಹಿಯಾ ವಾಣಿ
ಜೆಪಿ ಕೈಪಿಡಿ

ಸಂಪಾದನೆ : **ಲೋಹಿಯಾ:** (ವ್ಯಕ್ತಿ–ವಿಚಾರ–ವಿಮರ್ಶೆ)
ಕುವೆಂಪು: ಒಂದು ಪುನರನ್ವೇಷಣೆ (ಶತಮಾನೋತ್ಸವ ಸಂಪುಟ)
ಆ ಗಣರಾಜ್ಯ ಈ ಕರ್ನಾಟಕ (ಸುವರ್ಣ ಕರ್ನಾಟಕ ಸಂಪುಟ)
ಒಲವು (ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ)
ಹೊಸ ಮನುಷ್ಯ ಮಾಸಿಕ (ಸಮಾಜವಾದಿ ಚಿಂತನೆಯ ನಿಯತಕಾಲಿಕ)

ಸಹ ಸಂಪಾದನೆ : **ಕಾಡಿನ ಹುಡುಗ ಕೃಷ್ಣ** (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)
ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಶತಮಾನೋತ್ಸವ ಸಂಪುಟ)
ಹಣತೆ (ಡಾ. ಜಿ. ಎಸ್ ಶಿವರುದ್ರಪ್ಪ ಅಭಿನಂದನ ಗ್ರಂಥ)
ಉರಿದ ಪಂಜು (ಕೆ. ರಾಮದಾಸ್ (ಸ್ಮರಣ ಸಂಪುಟ)
ನಮ್ಮ ಶಾಮಣ್ಣ (ಕಡಿದಾಳು ಶಾಮಣ್ಣ ಗೌರವ ಗ್ರಂಥ)
ಸಾಹಿತ್ಯ ಸಂವಾದ (ಸಾಹಿತ್ಯ ದ್ವೈಮಾಸಿಕ)

ಅನುವಾದ : **ಜೆಪಿ ಸೆರೆಮನೆ ದಿನಚರಿ**

ಸಮಕಾಲೀನ ರಾಜಕೀಯದ ಎಲ್ಲ ಗೊಂದಲಗಳಲ್ಲಿ ಸಮಾಜವಾದ–ಗಿಮಾಜವಾದ ಎಲ್ಲಿವೆ ಅಂತ ಹುಡುಕಬೇಕಾಗಿದೆ. ನಮ್ಮ ಸೈನ್ಯ ತುಕಡಿ ತುಕಡಿಯಾಗಿ ಎಲ್ಲ ಕಡೆ ಹರಿದು ಹಂಚಿಹೋಗಿದೆ. ಆದರೆ ಚಿಂತನೆಯ ಗುಪ್ತಗಾಮಿನಿ ಇದ್ದೇ ಇದೆ. ಆ ಧಾರೆಗೆ ಒಂದು ಸ್ಪಷ್ಟ ವೇದಿಕೆ ಒದಗಿಸಿರುವುದು 'ಹೊಸ ಮನುಷ್ಯ'. ತನ್ನ ಪರಿಮಿತ ಚೌಕಟ್ಟಿನಲ್ಲಿಯೇ ಅನೇಕ ವಿಷಯಗಳನ್ನು ಅಡಕ ಮಾಡಿಕೊಂಡು ಸಾಧ್ಯವಾದಷ್ಟು ವಸ್ತುನಿಷ್ಠ ಬಗೆಯಲ್ಲಿ ವಾದ ಮಂಡಿಸುತ್ತಾ ಗಂಭೀರ ಚರ್ಚೆಗೆ ಅನುವು ಮಾಡಿಕೊಡುತ್ತಿರುವ ಪತ್ರಿಕೆಯ ನೀತಿ ಅನನ್ಯ. ಡಿ.ಎಸ್.ಎನ್ ಅವರ 'ಸಂಪಾದಕೀಯ ಟಿಪ್ಪಣಿಗಳು' ಮುಖ್ಯ ಆಕರ್ಷಣೆ.

-ಪ್ರೊ. ಚಂದ್ರಶೇಖರ ಪಾಟೀಲ

'ಹೊಸ ಮನುಷ್ಯ'ದಂತಹ ಪತ್ರಿಕೆ ಸಮಾಜವಾದದ ಜೊತೆ ಪ್ರಜಾಪ್ರಭುತ್ವವನ್ನೂ ಕಾಪಾಡುತ್ತವೆ. ಏಕೆಂದರೆ ಇವು ಒಂದನ್ನು ಬಿಟ್ಟು ಇನ್ನೊಂದು ಇರಲಾರದು. ಇಂತಹ ಇನ್ನೊಂದು ಪತ್ರಿಕೆ ಕನ್ನಡದಲ್ಲಂತೂ ಇಲ್ಲ.

-ಜಿ. ರಾಜಶೇಖರ

ನಿಸ್ಸಂದೇಹವಾಗಿ 'ಹೊಸ ಮನುಷ್ಯ' ಇಂದು ಉಳಿದಿರುವ ಒಂದೇ ಒಂದು ಪ್ರಾಮಾಣಿಕ, ಮೌಲಿಕ ಪತ್ರಿಕೆ.

-ಡಾ. ಎಚ್.ಎಸ್. ರಾಘವೇಂದ್ರ ರಾವ್

'ಹೊಸ ಮನುಷ್ಯ' ಪತ್ರಿಕೆಯ ನಿರಾಡಂಬರ ಸಹಜತೆಯೆ ಅದರ ನಿಜವಾದ ಶಕ್ತಿಯಾಗಿದೆ. ಪತ್ರಿಕೆಗಳು ತಮ್ಮ ಸಂಖ್ಯಾಬಲದ ಅನೈತಿಕ ಅಧಿಕಾರದಿಂದಾಗಿ ಭ್ರಷ್ಟವಾಗುತ್ತ ಹೋಗುವ ಕಾಲದಲ್ಲಿ ಈ ಪತ್ರಿಕೆ ತನ್ನ ಐಚ್ಛಿಕ ಸರಳತೆಯನ್ನು ಉಳಿಸಿಕೊಂಡಿದೆ. ಒಂದು ಕಡೆಗೆ ಜನಪ್ರಿಯತೆಯ ವಾಂಛೆ ಇನ್ನೊಂದು ಕಡೆಗೆ ಪಾಂಡಿತ್ಯದ ಜಡತೆ–ಇವೆರಡನ್ನೂ ಸಮಾನ ದೂರದಲ್ಲಿಟ್ಟು ಸಶಕ್ತವಾದ ಬರವಣಿಗೆಯನ್ನು ಪ್ರೋತ್ಸಾಹಿಸಿದೆ. ಇದೆಲ್ಲದರಷ್ಟೇ ಮುಖ್ಯವೆಂದರೆ ನೈಜವಾದ ಸಮಕಾಲೀನತೆಗೆ ಮಿಡಿಯುವ ಅದರ ಗುಣ. ನನಗೆ ಸಾಂಸ್ಕೃತಿಕವಾಗಿ ಮುಖ್ಯವಾಗಿ ಕಾಣುವುದೆಂದರೆ ಸಣ್ಣ ಪತ್ರಿಕೆಗಳು, ಸೂಕ್ಷ್ಮ ಚಿಂತನೆ, ಸಂವಾದ ಇವೆಲ್ಲವುಗಳು ಇಂದಿನ ಕಾಲದಲ್ಲಿ ಅಪ್ರಸ್ತುತವಾಗಿಬಿಟ್ಟಿದೆ ಎನ್ನುವ ಸಿನಿಕತನದ ತೀರ್ಮಾನಗಳು ಹುಸಿ ಎನ್ನುವ ಹಾಗೆ 'ಹೊಸ ಮನುಷ್ಯ' ಕನ್ನಡ ಸಮುದಾಯದ ಆಳದಲ್ಲಿರುವ ಸಾಂಸ್ಕೃತಿಕ ಅಗತ್ಯದ ಪ್ರತಿಫಲನವೂ ಆಗಿದೆ.

-ಡಾ. ರಾಜೇಂದ್ರ ಚೆನ್ನಿ

'ಹೊಸ ಮನುಷ್ಯ'ಕ್ಕೆ ಕೈಬರಹದ ಪತ್ರಿಕೆಯ ಗುಣ ಇದೆ. ಅಂದರೆ ಏನಂತ ಹೇಳಲು ಬರುತ್ತಿಲ್ಲ... ಆದರೆ ಅದು ನನಗೆ ಇಷ್ಟ...

-ಜಯಂತ ಕಾಯ್ಕಿಣಿ

ಪತ್ರಿಕೆಯನ್ನು ಉದ್ದಕ್ಕೂ ಓದುತ್ತಾ ಬಂದಿರುವ ನನಗೆ, ಅದರಲ್ಲಿ ನೀವು ಬರೆದ ಹಲವು ಲೇಖನಗಳೂ, ಸಂಪಾಕೀಯಗಳೂ ತುಂಬ ಹೊಸದಾಗಿ ಯೋಚನೆ ಮಾಡುವ ಮಾರ್ಗವನ್ನು ಕಾಣಿಸಿ ಉತ್ಸಾಹ ಹುಟ್ಟಿಸಿದ್ದಿದೆ.

-ಕೆ.ವಿ. ಅಕ್ಷರ

ರೂಪ ಪ್ರಕಾಶನ
ಮೈಸೂರು

ISBN 978-93-81885-46-8